START

START

START

START

ROLL NO: 164.

MICROFILMED BY

KARNATAKA STATE

ARCHIVES

1983

MICROFILMED BY
KARNATAKA STATE
ARCHIVES
1983

KODAGU Weekly

News paper :-

File No : ARS19 APP83

KODAGU Weekly

News paper :-

File No : ARS19 APP 83

From 15-7-1938

- Contd -

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ಮಹಾಖಾನೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆಶೂಲೆಗಳಿಗೂ ಅಮೃತ. ಬೆಲೆ 0-4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು. ಜ್ವರಗಳಿಗೆ ಬೆಲೆ 0-4-0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ.

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ. ಬೆಲೆ 0-8-0, 0-4-0.

ಸುಕುಮಾರತೈಲ

14

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ತಿರುಗುವಿಕೆ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ. ಬೆಲೆ 1-0-0

ಪ್ರೊಪ್ರೈಟರ್-ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತ್.

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ	ರೂ. 150.	ರೂ. 55.	ರೂ. 35.	ರೂ. 22.
6 ತಿಂಗಳಿಗೆ—	,, 100.	,, 35.	,, 22.	,, 13.
3 ತಿಂಗಳಿಗೆ -	,, 60.	,, 20.	,, 13.	,, 8.
1 ತಿಂಗಳಿಗೆ—	,, 25.	,, 10.	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು ಉದಾತ್ತವಾದ ಲೇಖನಗಳು— ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವುದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲರ್ಹನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮೆ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಎಲ್. ಎಫ್. ಸಿ. ವಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

ಮೆ. ಬಿ. ಶೇಷಾದ್ರಿ, ಅ. ಇನ್ಸ್‌ಪೆಕ್ಟರು, ಶಿವಮೊಗ್ಗಾ.

63-27

Printed & Published by P. I. Belliappa, at 'Kodagu' Press Mercara for 'Kodagu' Ltd.

Reg. No. M. 1[illegible]

ಕೊಡಗು

ನಿಮ್ಮ
ಮುದ್ರಣ ಕೆಲಸಗಳನ್ನು
“ ಕೊಡಗು ”
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:— ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩–೮–೦

ತಾ. ೧೫—೭—೧೯೩೮.

ಸಂಪುಟ ೧೮] [ಸಂಚಿಕೆ ೭.

Travancore National & Quilon Bank, Ltd.

(INCORPORATED IN TRAVANCORE—1912.)

(Liability of Members limited,)

Central Office: MADRAS.

With a country wide net work of seventy eight offices make service promt and efficient.

Working Capital over FOUR CRORES.

Open HOME SAVING account and resolve to save something and invest a lot every year in 3 YEAR 4% CASH CERTIFICATES

SAVINGS BANK:—accounts opened for sums above Rs. 1/- and interest allowed on daily balances Withdrawals by cheques-Maximum amount withdrawable per week-Rs. 250/-

FIXED DEPOSITS:—accepted for periods from 6 to 24 months at rates which may be ascertained on application.

CURRENT ACCOUNTS:—opened for sums above Rs. 100/- and interest allowed on daily credit balances from Rs. 100/- to Rs. 20,000/-

All other kinds of Banking business transacted.

For terms please apply to the central Office or to any of the branches.

K. S. Ramanujam, *General Manager.*

52-41

K. M. Eapen, *Joint Managing Director.*

C. P. Mathen, *Managing Director.*

THE CANARA BANKING CORPORATION, UDIPI, Ltd.

(Incorporated in British India.)

Estd. 1906.

BRANCHES:

1. Byndoor,
2. Coondapoor.
3. Erode,
4. Madras,
5. Mangalore, Car Street,
6. Mangalore, Bunder,
7. Malpe,
8. Mercara,
9. Mettupalayam,
10. Mysore,
11. Sagar,
12. Saklaspur,
13. Salem,
14. Shimoga,
15. Shirva,
16. Tellicherry,
17. Thirthahalli,
18. Virarajendrapet,
19. Vellore,
20. Udipi.

TOTAL RESOURCES EXCEED Rs. 62 LAKHS.

Udipi,
20th June 1938.

52-32

V. R. Kamath, B. A., LL. B.,
Ag. Manager.

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆಶೀಳುಗಳಿಗೂ ಅಮೃತ. ಬೆಲೆ 0-4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಬೇಧಿ, ಅಜೀರ್ಣ, ವಾಯು. ಜ್ವರಗಳಿಗೆ ಬೆಲೆ 0-4-0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ.

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ. ಬೆಲೆ 0-8-0, 0-4-0.

ಸುಕುಮಾರತೈಲ

14

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ತಿರುಗುವಿಕೆ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ. ಬೆಲೆ 1-0-0

ಪ್ರೊಪ್ರೈಟರ್-ಭಿಷಗ್ರತ್ನ ಆಯುರ್ವೇದ ವಿದ್ವಾನ್, ಟಿ. ವಿ. ಪಂಡಿತ್.

ಉತ್ತಮ ಪ್ರಚಾರ! ಜ್ಞಾನಭಂಡಾರ![1]

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ	ರೂ. 180.	ರೂ. 55.	ರೂ. 35.	ರೂ. 22.
6 ತಿಂಗಳಿಗೆ—	„ 100.	„ 35.	„ 22.	„ 13.
3 ತಿಂಗಳಿಗೆ —	„ 60.	„ 20.	„ 13.	„ 8.
1 ತಿಂಗಳಿಗೆ—	„ 25.	„ 10.	„ 6.	„ 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು ಉದಾತ್ತವಾದ ಲೇಖನಗಳು—

ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮಿ. ಯಂ. ಹೆಚ್. ಕೃಷ್ಣಮೂರ್ತಿ, (ಇನ್ಸ್‌ಪೆಕ್ಟರ್, ಮೈಸೂರು.)

ಮಿ. ಎಲ್. ಎಫ್. ಸಿ. ದಾಸ್, (ಇನ್ಸ್‌ಪೆಕ್ಟರ್, ಮಡಿಕೇರಿ.)

63-27

ಮಿ. ಡಿ. ಶೇಷಾದ್ರಿ, ಅ. ಇನ್ಸ್‌ಪೆಕ್ಟರು, ಶಿವಮೊಗ್ಗಾ.

Printed & Published by P. I. Belliappa, at 'Kodagu' Press Mercara for 'Kodagu' Ltd.

Reg. No. M. 1

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:— ೩. ಬೆಳ್ಯಪ್ಪ.

ತಾ. ೧೫—೭—೧೯೩೮.

ವಾರ್ಷಿಕ ಚಂದಾ ರೂ. ೩—೮—೦

ಸಂಪುಟ ೧೮] [ಸಂಖ್ಯೆ ೭.

ನಿಮ್ಮ ಮುದ್ರಣ ಕೆಲಸಗಳನ್ನು "ಕೊಡಗು" ಪ್ರೆಸ್ಸಿನಲ್ಲೇ ಮುದ್ರಿಸಿರಿ.

Tr[vancore National & Quilon Bank, Ltd.

(INCORPORATED IN TRAVANCORE—1912.)

(Liability of Members limited,)

Central Office: MADRAS.

With a country wide net work of seventy eight offices make service promt and efficient.

Working Capital over FOUR CRORES.

Op[e]n a HOME SAVING account and resolve to save [so]mething and invest a lot every year in 3 YEA[R 4]1% CASH CERTIFICATES

SAV[IN]GS BANK:—accounts opened for sums above R[s. 5]/- and interest allowed on daily balances Withdra[wal]s by cheques-Maximum amount withdrawable [p]er week-Rs. 250/-

FIXED DEPOSITS:—accepted for periods from 6 to 24 months at rates which may be ascertained on application.

CURRENT ACCOUNTS:—opened for sums above Rs. 100/- and interest allowed on daily credit balances from Rs. 100/- to Rs. 20,000/-

All other kinds of Banking business transacted.

For terms please apply to the central Office or to any of the branches.

K. S. [R]amanujam, *Gener[al] Manager.*

52-41

K. M. Eapen, *Joint Managing Director.*

C. P. Mathen, *Managing Director.*

TH[E] CANARA BANKING CORPORATION, UDIPI, Ltd.

(Incorporated in British India.)

Estd. 1906.

BRANCHES:

1. Byndoor,
2. Coondapoor.
3. Erode,
4. Madras
5. Mangalore, Car Street,
6. Mangalore, Bunder,
7. Malpe,
8. **Mercara,**
9. **Mettupalayam,**
10. **Mysore,**
11. Sagar,
12. Saklaspur,
13. Salem,
14. Shimoga,
15. Shirva,
16. Tellicherry,
17. Thirthahalli,
18. Virarajendrapet,
19. Vellore,
20. Udipi.

TOTAL RESOURCES EXCEED Rs. 62 LAKHS.

Udipi, 20th June 1938.

52-32

Y. R. Kamath, B. A., LL. B., Ag. Manager.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಅ.	ಪೈ
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,740	0	0
ಜಮೂಬಂದ ಠೇವಣಾತಿ	–	2,56,747	11	4
ವಸೂಲಾದ ಕ್ಷೇಮನಿಧಿ	–	1,35,875	9	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	31,017	12	11
ತ್ರಿಫ್ಟ್ ಡಿಪಾಜಿಟ್ಟು	–	37,936	13	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ-ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿದೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937 ರಿಂದ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟ್:-ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ
ಟ್ರೆಜರರ್:—ಚೌರೀರ ಎ. ಮಂದಣ್ಣನವರು ಬಿ. ಎ., ಬಿ. ಎಲ್.
ಸೆಕ್ರೆಟರಿ:—ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ., ಎಲ್. ಟಿ.

ತಾ 1-7-1938

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—"ಲಕ್ಷ್ಮೀನಿವಾಸ್" ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! ಇಚ್ಛಿಸಿದಾಗ ಹಣ ಹಿಂದಕ್ಕೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ. ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ಠೇವಣಿಯನ್ನಿಡುವ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-7 The Agricultural & Industrial Bank Ltd

"ZANDU"

ಝಂಡೂರವರ	ಝಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.'	**ಕೇಸರಿ ಜೀವನ್** 'ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝಂಡೂ ಆಯೋಡೈಸ್ಡ ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟಿನ್.

ಇದು ನ್ಯುಮೋನಿಯಾ, ಶೋಫ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು

ಕೆಟಲಾಗಿಗೆ ಬರೆಯಿರಿ. ಮುಫ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟಾಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎಂ. ಎಸ್
(52-49) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು-ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ಫೆಲ್ಸಾಲ್

(OINTMENT FOR EXTERNAL USE)

... ವ್ಯಾಧಿಗೆ (ಹೊರಗೂ ಒಳಗೂ) ದಿವ್ಯೌಷಧಿ.

ಆಪರೇಷನ್ ಇಲ್ಲದೆ ಗುಣವಾಗುತ್ತೆ. ಬ್ರಿಟಿಷ್ ಗವರ್ನಮೆಂಟಿನವರಿಂದ ಇಂಡಿಯಾದಲ್ಲಿಯೂ, ಪರದೇಶದಲ್ಲಿಯೂ ರಿಜಿಸ್ಟರ್ ಮಾಡಲ್ಪಟ್ಟಿದೆ.

ರಕ್ತ ಕೀವು ಬಿದ್ದರೂ ಅತಿ ಶೀಘ್ರವಾಗಿ ಗುಣವಾಗುತ್ತದೆ.

ಫೆಲ್‌ಸಾಲ್ ತಣ್ಣಗಿರುತ್ತದೆ ... ನರಗಳು ಯಥಾಸ್ಥಾನಕ್ಕೆ ಬರುತ್ತವೆ. ... ಅನೇಕ ಡಾಕ್ಟರುಗಳಿಂದ ಕೀರ್ತಿಯ ಹೆಸರು ಪಡೆದಿದೆ. ... ಆಕ್ರಮವಾಗುವುದನ್ನು ಫೆಲ್‌ಸಾಲ್ ಗುಣ ...

ಯೋಗ್ಯತಾ ಪತ್ರಗಳು ನಾನಾ ದೇಶಗಳಿಂದ ನಮಗೆ ಬಂದಿರುತ್ತವೆ.

ಈಗಿನ ಒಂದು ಸರ್ಟಿಫಿಕೇಟು

ನಾಪೋಕ್ಲು,

ಅಯ್ಯಾ,

ನಿಮ್ಮ ಫೆಲ್‌ಸಾಲ್ ನನ್ನೊಬ್ಬ ರೋಗಿಗೆ ಬಹಳಾ ಸಹಾಯಮಾಡಿದೆ. ಆದ್ದರಿಂದ ದಯವಿಟ್ಟು ಪಡಸ ಮತ್ತೊಂದು ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿಕೊಡಿ ಮತ್ತೊಬ್ಬನಿಗೆ ಇದರ ಪ್ರಯೋಗವನ್ನು ಮಾಡಬೇಕಾಗಿದೆ.

(Sd) ಎನ್. ಯಂ. ದೇವಯ್ಯ,
ಸಬ್ ಅಸಿಸ್ಟೆಂಟ್ ಸರ್ಜನ್,
ನಾಪೋಕ್ಲು, ಕೊಡಗು.

23

ಉಪಯೋಗಿಸುವ ವಿಧಾನ ಔಷಧದ ಜೊತೆಯಲ್ಲಿ ಕಳುಹಿಸಲಾಗುತ್ತೆ.

ಕ್ರಯ:—1 ಔನ್ಸಿಗೆ ರೂ. 5-0-0. ½ ಔನ್ಸಿಗೆ ರೂ. 2-12-0. ಪೋಸ್ಟೇಜು ಪ್ರತ್ಯೇಕ.

ಬೇಕಾದವರು ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಕ್ಯಾರಾಲ್ ಲೇಬೋರೇಟರಿ (ರಿಜಿಸ್ಟರ್ಡ್), ಬೆಂಗಳೂರು ಸಿಟಿ.

ವಿ ವಿ ಧ ವಿ ಚಾ ರ.

ಕಸ ಮಾರಿ ಕಸವರ!

ಇಂಗ್ಲೆಂಡಿನಲ್ಲಿ ಸೌತ್‌ಗೇಟ್ ಎಂಬಲ್ಲಿ ಪೌರ ಸಭೆಯವರು ಊರಲ್ಲಿ ಬೀದಿ ಕಸ-ಕಿಸ್ಸೆಗೆ ಹಾಕಿದ ಕಾಗದ, ಗಾಜು, ಹಳೇ ಟಿನ್ನಿನ ಚೂರುಗಳು ಇತ್ಯಾದಿಗಳನ್ನು ಮಾರಿ 4134 ಪೌಂಡು ಲಾಭ ಪಡೆದರು.

ಈ ಕಸಗೂಡಿಸಿದ 50 ಜನರಿಗೆ ಈ ಲಾಭದಲ್ಲಿ ಪಾಲುಬಂದ ತಲಾ 15 ಪೌಂಡು 17 ಷಿಲಿಂಗ್‌ನಂತೆ.

ಹೀಗೆ ಕಸದಿಂದಲೂ ಕಸವರ (ಚಿನ್ನ) ಸಂಪಾದಿಸಬಹುದು. ಈ ಪ್ರಪಂಚದಲ್ಲಿ ಅಪ್ರಯೋಜಕವಾದ ವಸ್ತು ಇಲ್ಲವೇ ಇಲ್ಲವೆನ್ನಬಹುದು. ಆದರೆ ಕಸವನ್ನೂ ಕಸವರಮಾಡುವ ಬುದ್ಧಿ ಮಾತ್ರ ಇರಬೇಕು ಅಷ್ಟೆ!

—೦0೦—

12 ತಾಸಿನಲ್ಲಿ ಇಬ್ಬರನ್ನು ವರಿಸಿದ ಮಹಿಳಾಮಣಿ.

ವೆಡಲೋನ ಫೋಯೆಟ್ ಎಂಬ 22 ವರ್ಷದ ತರುಣಿಯು ಒಂದೇ ದಿನ ಇಬ್ಬರನ್ನು ವರಿಸಿದಳು. ಒಬ್ಬನ ಹೆಸರು ಹೆನ್ರಿ, ಇನ್ನೊಬ್ಬನ ಹೆಸರು ಜೇಕ್ಸ್. ಇಬ್ಬರನ್ನು ಸಮಾನವಾಗಿ ಪ್ರೀತಿಸುತ್ತಿದ್ದಳು. ಮೊದಲು ಜೇಕ್ಸನನ್ನು ಲಗ್ನವಾದಳು. ನಂತರ ಹೆನ್ರಿಯು ಬೇಡಿದ-ಕಾಡಿದ ಅವನನ್ನು ಲಗ್ನವಾದಳು. ಜಡ್ಜರು ಇವೆರಡೂ ಲಗ್ನವನ್ನು ರದ್ದು ಮಾಡಿ ಆಕೆಯನ್ನು ಒಂದು ಮಹಿಳಾಶ್ರಮದಲ್ಲಿ ಬಂಧಿಯಾಗಿ ಇರಿಸಿದ್ದಾರೆ. ಯಾರ ಮೇಲೆ ಅವಳ ಪ್ರೇಮವು ಅಧಿಕವಿರುವದೆಂದು ನಿರ್ಧರಿಸಿ ಮುಂದೆ ಇಬ್ಬರಲ್ಲಿ ಒಬ್ಬನನ್ನು ವರಿಸೆಂದು ಜಡ್ಜರ ತೀರ್ಮಾನ.

—೦0೦—

ಮರದ ಮೇಲೆ ಮಂಚ.

ಅಲ್ಪ ಕಾರಣಗಳಿಗಾಗಿ ವಿವಾಹ ವಿಚ್ಛೇದ ಮಾಡಲು ಪ್ರಯತ್ನಿಸಿ ವಿಫಲರಾದವರ ಕತೆಗಳು ಇವೆ. ಆದರೆ ಅತಿ ವಿಚಿತ್ರ ಕಾರಣಕ್ಕಾಗಿ ವಿವಾಹ ವಿಚ್ಛೇದ ಪಡೆದವರೂ ಉಂಟು. ಮಾಂಟ್‌ಕ್ಲೇರ್ (ನ್ಯೂಜರ್ಸಿ ಪ್ರಾಂತ್ಯ)ದಲ್ಲಿ ವಾಸವಾಗಿದ್ದ ಒಬ್ಬನಿಗೆ ಒಂದು ವಿಚಿತ್ರ ಅಭ್ಯಾಸವಿತ್ತು. ಮನೆಯೊಳಗೆ ಮಲಗುವುದೆಂದರೆ ಅವನಿಗೆ ಸರಿಬೀಳುತ್ತಿರಲಿಲ್ಲ. ಮನೆಯ ಆವರಣದಲ್ಲಿದ್ದ ಮರವೊಂದರ ಮೇಲೆ ಅಟ್ಟ (ಮಂಚದ) ಕಟ್ಟಿಸಿಕೊಂಡು ಅದರ ಮೇಲೆ ಮಲಗದಲ್ಲದೆ ಅವನಿಗೆ ನಿದ್ರೆ ಬರುತ್ತಿದ್ದಿಲ್ಲ. ಅವನು ಎಲ್ಲಾದರೂ ಮಲಗಲಿ, ಆ ಮಾತು ಬೇರೆ-ತನ್ನ ಹೆಂಡತಿ ಕೂಡ ಮರದ ಮೇಲೆ ಮಲಗಬೇಕೆಂದು ಅವನು ಒತ್ತಾಯ ಮಾಡಿದ! ದಿನಾ ಮರ ಹತ್ತಿ ಇಳಿದು ಮರದ ತುದಿಯಲ್ಲಿದ್ದ ಮಂಚದ ಮೇಲೆ ಮಲಗುವುದು ಅವಳಿಗೆ ಸರಿಬೀಳಲಿಲ್ಲ. ಆದ್ದರಿಂದ ಈ ಕಷ್ಟವನ್ನೇ ಕಾರಣಮಾಡಿಕೊಂಡು ವಿವಾಹ ವಿಚ್ಛೇದಕ್ಕೆ ಅರ್ಜಿ ಹಾಕಿದಳು. ದಿನಾ ಮರದ ಮೇಲೆ ಹತ್ತಿ ಅಲ್ಲಿ ಮಲಗುತ್ತಾ ಕೋತಿಗಳಂತೆ ಜೀವನ ನಡೆಸುವುದು ಕಷ್ಟತರವಾದ ಕೆಲಸವೆಂದು ನ್ಯಾಯಾಧೀಶರು ಒಪ್ಪಿ ಅವಳ ಅರ್ಜಿಯಂತೆ, ವಿವಾಹ ವಿಚ್ಛೇದಕ್ಕೆ ಅನುಮತಿ ಕೊಟ್ಟು ಅವಳನ್ನು ಕೋತಿ ಜೀವನದಿಂದ ಪಾರು ಮಾಡಿಸಿದರು!

—೦0೦—

ಯಾರು ಹೆಚ್ಚು ಜಾಣರು?

ಮನುಷ್ಯನೋ ಮೂಷಿಕವೋ?

ಇಲಿಗೆ ಅಂಜುವಂಥ ಮನುಷ್ಯರನ್ನು ಅತಿ ಪುಕ್ಕರೆಂದು ನಾವು ಅನ್ನುತ್ತೇವಷ್ಟೆ. ಆದರೆ ಹಿಂದುಸ್ಥಾನದಲ್ಲಿಯ ಇಲಿಗಳು ಆಧುನಿಕ ಯುದ್ಧೋಪಕರಣಗಳಿಗೆ ಸೊಪ್ಪು ಹಾಕದೆ ತಮ್ಮ ರಾಜ್ಯವನ್ನು ಸ್ಥಾಪಿಸಿದವೆಂಬುದನ್ನು ಕೇಳಿದರೆ ಆಶ್ಚರ್ಯವಾಗದೆ?

ಕರಾಚಿಯಿಂದ 100 ಮೈಲಿ ದೂರದಲ್ಲಿ ಮಾಮುಲಾಫ್‌ಮ್ ಎಂಬ ವಿಮಾನ ನಿಲ್ದಾಣವಿದೆ. ಅಲ್ಲಿ ಸಾವಿರಾರು ಇಲಿಗಳು ಒಳಗೇ ಹಳ್ಳ ತೋಡಿ ವಿಮಾನಗಳು ಇಳಿದರೆ ಒಳಕ್ಕೆ ಹೂತುಕೊಳ್ಳುವಂತೆ ಮಾಡಿಬಿಟ್ಟಿದ್ದವು!

ಆ ಇಲಿಗಳನ್ನು ಕೊಲ್ಲುವದಕ್ಕಾಗಿ ವಿಷವಾಯುವನ್ನು ಬಿಡಲಾಯಿತು. ಇಲಿಗಳೇನೂ ಮಣಿಯಲಿಲ್ಲ. ಬಲೆ ಹಾಕಿದರು. ಅಲ್ಲಲ್ಲಿ ಬೆಂಕಿ ಹಾಕಲಾಯಿತು. ಆದರೂ ಇಲಿಗಳು ತಮ್ಮ ರಾಜ್ಯವನ್ನು ಬಿಟ್ಟುಕೊಡಲಿಲ್ಲ. ಕೊನೆಗೆ ವೈಮಾನಿಕ ಅಧಿಕಾರಿಗಳು ಹತಾಶರಾಗಿ ಆ ಕ್ಷೇತ್ರವನ್ನೇ ಬಿಟ್ಟು ಬಿಟ್ಟರು! ಈಗ ಅಲ್ಲಿ ಇಲಿಗಳ ರಾಜ್ಯ!

—೦0೦—

ಹತ್ತು ವರ್ಷ ಟಿಕೆಟಿಲ್ಲದೆ ಪ್ರಯಾಣ.

ಜಾರ್ಜೆಸ್ ಸೀಬರ್ತ್ ಎಂಬಾತನು ಫ್ರೆಂಚ್ ರೈಲ್ವೆ ಗಾಡಿಗಳಲ್ಲಿ ಹತ್ತು ವರ್ಷಗಳ ಕಾಲ ಇದ್ದುಕೊಂಡು ಜೀವನ ಮಾಡಿದ. ರೈಲ್ವೇ ನೌಕರನಾಗಿ ಅಲ್ಲ. ಆದರೆ?-

ರೈಲಿನಲ್ಲಿ ಪ್ರಯಾಣ ಮಾಡುವುದು ಅವನ ನೋಕರಿ. ಟಿಕೆಟ್ಟನ್ನು ಮಾಡಿಕೊಂಡು ತಿರುಗಾಡುತ್ತಿದ್ದ. ರೈಲಿನಲ್ಲೇ ಸ್ನಾನ ಊಟ, ನಿದ್ದೆ! ಇವನಲ್ಲಿ ಸ್ವಂತ ಮೋಟಾ ಟಿಕೆಟ್ಟುಗಳೇ.

ಅವನ ಬಳಿ ಬೀಗದ ಕೈಗಳ ಗೊಂಚಲಿದ್ದುದರಿಂದ ಎಲ್ಲಿಗೆ ಬೇಕಾದರೂ ಹೋಗಿ ಬರಲು ಅನುಕೂಲವಾಗಿತ್ತು.

ಒಮ್ಮೆ, ಯಾರೋ ಒಬ್ಬಳು ಹುಡುಗಿ ಟಿಕೆಟ್ ಇಲ್ಲದೆ ಪ್ಲಾಟ್‌ಫಾರ್ಮ್ ಮೇಲೆ ನಿಂತು ಯೋಚಿಸುತ್ತಿದ್ದಳು. ಇವನು ಅವಳ ಬಳಿ ಹೋಗಿ, ಅಳಬೇಡ, ಟಿಕೆಟ್ ಕೊಡುತ್ತೇನೆ ಅಂತ ಸಂತೈಸಿ ಮೋಟಾ ಟಿಕೆಟ್ ತಂದುಕೊಟ್ಟ.

ಅವಳು ಟಿಕೆಟ್ ನೋಡಿ, ಗುಮಾನಿಪಟ್ಟು ಪೋಲೀಸರಿಗೆ ತಿಳಿಸಿದಳು.

ಸರಿ, ಈಗಲೂ ಅವನಿಗೆ ಕಾಸಿಲ್ಲದೆ ಸ್ನಾನ ಊಟ ನಿದ್ದೆ ಸಿಗುತ್ತಿವೆ; ಆದರೆ ಇವೆಲ್ಲ ಸೆರೆಮನೆಯ ಕಾಣಿಕೆಗಳು.

—೦0೦—

ಭಿಕ್ಷೆಯನ್ನು ತೆಗೆದುಕೊಂಡಿದ್ದಕ್ಕೆ ಶಿಕ್ಷೆ.

ಸೇಲಂ ಪಟ್ಟಣದಲ್ಲಿ ಮೂರು ಜನ ಪ್ರೌಢರು ನೊಂದ ಮಾನವರನ್ನು ವಸೂಲು ಮಾಡಿದರೆಂದು ಆಪಾದನೆಯ ಮೇಲೆ ಒಬ್ಬೊಬ್ಬರಿಗೆ ರೂ. 50 ರಂತೆ ಜುಲ್ಮಾನೆಯು ವಿಧಿಸಲ್ಪಟ್ಟಿದೆ. ಪೊಲೀಸ ಪ್ರಕಟನೆಯಲ್ಲಿ ಪಂಚಾಯ್ತನು ಪ್ರಭುತ್ವದವರು ಪೊಲೀಸರು ಭಿಕ್ಷೆಯನ್ನು ವಸೂಲ್ಮಾಡುವುದು, ಬಸ್ಸುಗಳಲ್ಲಿ ಪಯಣ ಇಲ್ಲದೆ ಪ್ರಯಾಣಮಾಡುವುದು ಇತ್ಯಾದಿಗಳನ್ನು ಜರಗಿಸಿದರೆ ಬೇರೆ ಜಿಲ್ಲೆಗಳ ಪೊಲೀಸು ಅಧಿಕಾರಿಗಳು ಇಂಥಾ ಕೃತ್ಯಗಳಿಗೆ ಜವಾಬ್ದಾರರಾಗುವರೆಂದು ಎಚ್ಚರಿಸಿರುವರು.

—೦0೦—

ಕೋತಿಯ ಕ್ರೌರ್ಯ.

ಶಾಜಹಾನಪುರದೊಂದಲ್ಲಿ ಒಂದು ಕೋತಿಯು, ಕೆಲ ತಿಂಗಳ ಹಿಂದೆ ಒಂದು ಮನೆಯನ್ನು ಹೊಕ್ಕಿತು. ಅದಕ್ಕೆ, ಆ ಮನೆಯವರು ಆಹಾರವಿಟ್ಟರು. ಅಂದಿನಿಂದ ಅದು ಊಟದ ಸಮಯವನ್ನು ಸಾಧಿಸಿ ಬರುತ್ತಿತ್ತು; ಅದಕ್ಕೆ ಮನೆಯವರು ಊಟ ಹಾಕುತ್ತಿದ್ದರು. ಒಂದು ದಿನ ಗೃಹಿಣಿಯು ಕೋತಿಗೆ ಅನ್ನ ಹಾಕಲು ಮರೆತಳು. ಕೋಪಗೊಂಡ ಕೋತಿ, ತೊಟ್ಟಿಲಲ್ಲಿದ್ದ ಮಗುವನ್ನು ಹಿಡಿದುಕೊಂಡು ಒಂದು ಮರವನ್ನೇರಿ ಕುಳಿತಿತು. ಯಾರು ಎಷ್ಟು ಪ್ರಯತ್ನಿಸಿದರೂ ಮಗುವನ್ನು ಕೆಳಗೆ ತರಲಾಗಲಿಲ್ಲ. ಕೊನೆಗೆ ಒಂದು ಬಟ್ಟಲಲ್ಲಿ ಅನ್ನವನ್ನು ಕೈಯಲ್ಲಿ ತೋರಿಸಲಾಯಿತು. ಅನ್ನವನ್ನು ನೋಡಿ ಅದು ಮಗುವನ್ನು ಮೇಲಿಂದ ಕೆಳಗೆ ಬಿಸುಟುಬಿಟ್ಟಿತು! ಮಗುವು ಕೂಡಲೇ ಬಿದ್ದು ಸತ್ತುಹೋಯಿತು.

—೦0೦—

ಮೋಟಾರಿಗೆ ನಿಶ್ಶಬ್ದ 'ಹಾರನ್'ಗಳು.

ಜರ್ಮನಿಯಲ್ಲಿ ಬಸ್ಸು ಲಾರಿ ಮೋಟಾರುಗಳಿಗೆ ನಿಶ್ಶಬ್ದ ಹಾರನ್‌ಗಳನ್ನು ಉಪಯೋಗಿಸಲಾಗಿದೆ. ಒಂದು ಮೋಟಾರಿನವನು ಇನ್ನೊಂದು ಮೋಟಾರಿನವನಿಗೆ ತಾನು ಮುಂದೆ ಹೋಗುವ ಸೂಚನೆ ಕೊಡಬೇಕಾದರೆ ತನ್ನ ಮೋಟಾರಿನಲ್ಲಿರುವ ಒಂದು ಗುಂಡಿಯನ್ನು ಒತ್ತುತ್ತಾನೆ. ಈ ಗುಂಡಿಯನ್ನು ಒತ್ತುವುದರಿಂದ ಉಂಟಾದ 'ನಿಶ್ಶಬ್ದ ಶಬ್ದವು' ಮುಂದಿನ ಮೋಟಾರಿನವನ ಹತ್ತಿರವಿರುವ 'ಮೈಕ್ರೊಫೋನ'ನಲ್ಲಿ ಒಂದು ತರದ ಶಬ್ದವನ್ನುಂಟುಮಾಡುತ್ತದೆ. ಈ ಶಬ್ದವನ್ನು ಕೇಳಿದ ಸಾರಥಿಯು ತನ್ನ ಮೋಟಾರಿನ ಹಿಂದಿರುವ ಕೆಂಪು ದೀಪವನ್ನು ಹಚ್ಚಿ, ತನಗೆ ಕೇಳಿಸಿದುದ್ದಾಗಿ ಸೂಚಿಸುತ್ತಾನೆ. ಅನಂತರ ಮುಂದಿರುವ ಮೋಟಾರಿನ ಸಾರಥಿಯು ಹಿಂದಿರುವ ಗಾಡಿಯನ್ನು ಮುಂದೆ ಹೋಗುವಂತೆ ತಿಳಿಸಬೇಕಾದರೆ ಹಸರು ದೀಪವನ್ನು ಹಚ್ಚುತ್ತಾನೆ.

—೦0೦—

ಇಂಗ್ಲೆಂಡು ಕೆಳಗೆ ಹೋಗುತ್ತಿದೆ.

ಇಂಗ್ಲೆಂಡಿನ ಕರಾವಳಿಯ ಅನೇಕ ಕಡೆಗಳಲ್ಲಿ ಜನರು ತಮ್ಮ ಮನೆಗಳು ಸಮುದ್ರಪಾಲಾಗದಂತೆ ಹಗಲಿರುಳು ದುಡಿಯುತಿದ್ದಾರೆ. ಅನೇಕ ವರ್ಷಗಳಿಂದ ಅವರು ಈ ರೀತಿ ದಣಿಯುತಿದ್ದಾರೆ. ಕೆಲವೊಂದು ಬಾರಿ ಅವರು ಸಮುದ್ರದೊಡನೆ ಸೋತದುಂಟು.

ಈ ಹೋರಾಟವು ಇನ್ನೂ ಬಲವಂತರವಾಗಿ ನಡೆಯಬೇಕಾದೀತು. ಸಮುದ್ರವು ಒಂದು ಮಹಾಜಯವನ್ನು ಪಡೆಯುವ ಸಂಭವಗಳು ಉಂಟಾಗಬಹುದು.

ಇಂಗ್ಲೆಂಡಿನ ಮುಖದ ಮೇಲೆ ಅನೇಕ ಬದಲಾವಣೆಗಳಾಗುವದೆಂದು ವಿಜ್ಞಾನಿಗಳೊಬ್ಬರು ಭವಿಷ್ಯವಾಗಿ ನುಡಿದಿರುವರು. ಇಂಗ್ಲೆಂಡು ಕೆಳಗೆ ಹೋಗುತ್ತಿದೆ. ಕಳೆದ 5000 ವರ್ಷಗಳಿಂದ ಅದು ಕೆಳಕ್ಕೆ ಹೋಗುತ್ತಿದೆ ಎಂದು ಅವರ ಅಂಬೋಣ.

—೦0೦—

'ಹುಟ್ಟನ್ನು ಹಲ್ಲು ಹೇಳುವುದು.'

ನಮ್ಮಲ್ಲಿ 'ಕುಲವನ್ನು ನಾಲಿಗೆ ಹೇಳುವುದು' ಎಂದೊಂದು ಗಾದೆ ಇದೆ. ಮಾತು ನೋಡಿ ಇವನು ಒಳ್ಳೆಯ ಕುಲಕ್ಕೆ ಸೇರಿದವನು, ಅಥವಾ ಹೀನ ಕುಲದವನು ಎಂದು ಗೊತ್ತು ಮಾಡುತ್ತಿದ್ದರು ಹಿಂದೆ. ಈಗಲೂ ಈ ಗಾದೆಯು ತಕ್ಕ ಸತ್ಯವಾಗಿಯೇ ಇದೆ!

ಅಮೇರಿಕದಲ್ಲಿ ಹೀಗೆ, ಉಚ್ಚಾರಣೆಯನ್ನು ಕೇಳಿ ಇವನು ಯಾವ ಪ್ರದೇಶದಲ್ಲಿ ಹುಟ್ಟಿದವನು ಎಂಬುದನ್ನು ನಿರ್ಧರಿಸುತ್ತಿದ್ದರು.

ಈಗ ಹಲ್ಲನ್ನು ನೋಡಿ ಅದರಿಂದ ಅವನ ಹುಟ್ಟಿನ ಸ್ಥಳವನ್ನು ಗೊತ್ತುಮಾಡುತ್ತಾರೆ! ಆಧುನಿಕ ಅಥವಾ ಇನ್ನೂ ನಿರ್ದಿಷ್ಟವಾಗಿ ಹೇಳಬೇಕೆಂದರೆ ಈ ಕ್ಷಣದಲ್ಲಿ ರೂಢಿಯಲ್ಲಿರುವ ಸಂಪ್ರದಾಯ.

ಒಬ್ಬ ಸರಕಾರಿ ದಂತವೈದ್ಯನು 1000 ಜನರ ಹಲ್ಲು ಪರೀಕ್ಷೆ ಮಾಡಿ 'ಹಲ್ಲು ಹುಟ್ಟನ್ನು ತಿಳಿಸುತ್ತದೆ' ಎಂಬ ಸಿದ್ಧಾಂತಕ್ಕೆ ಬಂದ.

ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಸಮುದ್ರತೀರದಲ್ಲಿರುವವರ ಹಲ್ಲುಗಳು ನಿರಂತರ ನೂರು ಪಾಲು ಕೆಟ್ಟು ಹೋಗಿರುತ್ತವೆ. ಇದರ ಕಾರಣ [illegible] ಆಹಾರ, ಒಳ್ಳೆ ಗಾಳಿಯ ಅಭಾವ, ಮತ್ತು ವ್ಯಾಯಾಮವಿಲ್ಲದಿರೋಣ.

ತೆಂಕಲಲ್ಲಿರುವವರು ಹೊಲಗಳಲ್ಲಿ ಬೆವರು ಹರಿಯೆ ದುಡಿದು ಕಾಯಕಷ್ಟ ಮಾಡುವುದರಿಂದ, ನಿಗಸಾದ ಗಾಳಿ ಹಾಗೂ ನಿರ್ಮಲವಾದ ನೀರನ್ನು ಸೇವಿಸುವುದರಿಂದ ಅವರ ಹಲ್ಲುಗಳು ದೃಢವಾಗಿರುತ್ತವೆ.

ಬೆಟ್ಟಗುಡ್ಡಗಳಲ್ಲಿ ವಾಸಿಸುವವರು ಬೇಕಾದಷ್ಟು ಖನಿಜ ಸಂಪತ್ತುಳ್ಳ [illegible]ರನ್ನು, ಅದರಲ್ಲೂ ಕ್ಯಾಲ್ಸಿಯಂ ಇರುವ ಆಹಾರವನ್ನು ತಿನ್ನುವುದರಿಂದ, ಅವರ ಹಲ್ಲುಗಳು ಅತ್ಯಂತ ಆರೋಗ್ಯವಾಗಿರುತ್ತವೆ. ಇದು ದಂತವೈದ್ಯನ ತೀರ್ಮಾನ.

—೦0೦—

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನ್ನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 13 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಸೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಾಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

3 ಸಿ. ಬೆಟ್. ರಾಮುಣ್ಣಿ ವೈದ್ಯರ್.

ADVERTISE
IN
"KODAGU"
The OLDEST WEEKLY of COORG.

[ಟ್ರೇಡ್ ಮಾರ್ಕ್] **ವೇಪ್ರಿನ್** [ರಿಜಿಸ್ಟರ್ಡ್]

ಚರ್ಮವ್ಯಾಧಿಗಳ ವೈರಿ—ಪ್ರತಿ ಒಬ್ಬರ ಸ್ನೇಹಿತ—ಸ್ವದೇಶಿ ವಸ್ತು.

ಇದರ ಲೇಪನದಿಂದ ಕಜ್ಜಿ, ಘಾಯ, ವ್ರಣ, ಇಸಬು, ನಾರುಹುಣ್ಣು, ಮೂಲವ್ಯಾಧಿ, ಸುಟ್ಟಿದ ಘಾಯ, ಮುದ್ದಣ(Pimples ಸುಟ್ಟ ಘಾಯ, ಕತ್ತಿ ಘಾಯ, ತೊಡಸಾಳಿ, ಗಣಕರ್ಣ ಇವು ಮಾಯವಾಗುವವು. ಇದು ಸುರಿಯುತ್ತಿರುವ ರಕ್ತವನ್ನು ನಿಲ್ಲಿಸಿ ನೋವನ್ನು ನಿವಾರಿಸುವುದು. ಅಲ್ಲದೆ ಇಂದ್ರಜಾಲಮೋಸಾದಿಯಲ್ಲಿ ಚೇಳಿನ ವಿಷವನ್ನು ಬಹಿರ್ಗತಪಡಿಸುವುದು. ನಿಮ್ಮಲ್ಲಿ ಒಂದು ಬಾಟ್ಲು ಇದ್ದಲ್ಲಿ ಒಬ್ಬ ಡಾಕ್ಟರೇ ಇದ್ದಂತಾಗುವುದು. ಕ್ರಯ ಬಹಳ ಸುಲಭ. ½ ಔನ್ಸ್ ಬಾಟ್ಲು 1ಕ್ಕೆ ಆಣೆ 0-8-0. ¼ ಔನ್ಸ್ ಬಾಟ್ಲು 1ಕ್ಕೆ ಆಣೆ 0-4-0.

ವಿ. ಸೂ:—ಪೆಟ್ಟು ತಾಗಿದ ಸ್ಥಳದಲ್ಲಿ ವೇಪ್ರಿನ್ ಚೆನ್ನಾಗಿ ತಿಕ್ಕುವದು. ಇಲ್ಲವೇ ಬಟ್ಟೆಯ ಮೇಲೆ ಸವರಿ ಅಂಟಿಸುವುದು. ನಂತರ ಸಾಬೂನಿನಿಂದ ಕೈ ತೊಳೆಯುವುದು. ಇದಲ್ಲದೆ ಇನ್ನೂ ಅನೇಕ ತರಹದ ಔಷಧಿಗಳು ನಮ್ಮಲ್ಲಿವೆ.

ಲಕ್ಷ್ಮೀ ಮ್ಯಾನಿಫ್ಯಾಕ್ಚರಿಂಗ್ ಕಂಪೆನಿ,
ಬಿ. ಪೊ. ಬೆಂಗಳೂರು ಸಿಟಿ.

52 40 **ಸೋಲ್ ಏಜೆಂಟ್:—ಹರಿದಾಸ್ ನಂಜುಂಡ ಗುಪ್ತ,**
ಮಡಿಕೇರಿ, (ಕೊಡಗು).

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಮದ್ರಾಸು.

ಟ್ರಾವಂಕೂರು ನೇಶನಲ್ ಮತ್ತು ಕ್ವಿಲಾನ್ ಬ್ಯಾಂಕ್—ಇದು ತನ್ನ ವಹಿವಾಟುಗಳನ್ನು ನಿಲ್ಲಿಸಿದ್ದರಿಂದ ಈ ಕಂಪೆನಿಗೆ ಏನಾದರೂ ಹಾನಿ ತಟ್ಟಿದೆಯೇ, ತಟ್ಟಿದ್ದಪಕ್ಷ ಎಷ್ಟರ ಮಟ್ಟಿಗೆ ಎಂಬೀ ವಿಷಯವಾಗಿ ನಮ್ಮ ಪೋಲಿಸಿದಾರರೂ, ಪಾಲುಗಾರರೂ ಕಂಪೆನಿಗೆ ಸಂಬಂಧಪಟ್ಟ ಇತರರೂ ತಿಳಿಯಲಪೇಕ್ಷಿಸಿ ಪ್ರಶ್ನಿಸುತ್ತಿರುವರು.

ಇದಕ್ಕೆ ಉತ್ತರವಾಗಿ ನಾವು ಆಶ್ವಾಸನಾರೂಪವಾಗಿ ಹೀಗೆ ತಿಳಿಸಲಪೇಕ್ಷಿಸುವೆವು. ಬ್ಯಾಂಕಿನ ವಹಿವಾಟುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದರಿಂದ ಕಂಪೆನಿಯ ಸ್ಥಿತಿಯ ಮೇಲೆ ಏನೂ ಪರಿಣಾಮವಾಗುವಂತಿಲ್ಲ. ಈ ಕಂಪೆನಿಯು ಅವಶ್ಯವಿರುವ ಮತ್ತು ಕಾಯಿದೆಗನುಗುಣವಾಗಿರುವ ಠೇವಣಾತಿಯನ್ನು ಕಂಟ್ರೋಲರ್ ಕರೆನ್ಸಿ (ಸರಕಾರಿ)ಯವರಲ್ಲಿ ಭದ್ರತೆಯಾಗಿಟ್ಟಿದೆ. ಈ ಮೇಲಿನ ಠೇವಣಾತಿಯಲ್ಲದೆ ಕಂಪೆನಿಗೆ ಸರಕಾರಿ ಪತ್ರಿಕೆಗಳ ರೂಪದಲ್ಲಿ ಇತರ ಹಣದ ಆಸರೆಗಳೂ ಇವೆ. ಅಲ್ಲದೆ ಕಂಪೆನಿಯು ವಹಿವಾಟುಗಳನ್ನು ಸುಗಮವಾಗಿ ನಡೆಸಲು ಇತರ ಬ್ಯಾಂಕುಗಳಲ್ಲಿಯೂ ಠೇವಣಾತಿಗಳಿವೆ.

ಆ ಬ್ಯಾಂಕು ತನ್ನ ವಹಿವಾಟನ್ನು ನಿಲ್ಲಿಸುವ ದಿನದಲ್ಲಿ ಅವರಿಂದ ಈ ಬ್ಯಾಂಕಿಗೆ ಸಲ್ಲತಕ್ಕದಿದ್ದ ರೂ. 20,437-10-8 ಎಂದು ಹೇಳಬಯಸುತ್ತೇವೆ. ಈ ಹಣವನ್ನು ನಾವು ಪೂರ್ಣ ಹಿಂತಿರುಗಿ ಹೊಂದುವೆವೆಂಬ ಭರವಸೆ ಪಡಲು ಕಾರಣಗಳಿವೆ. ಹೀಗಿರುವದರಿಂದ 'ಗಾರ್ಡಿಯನ್ ಇನ್ಶೂರೆನ್ಸ್ ಕಂಪೆನಿಯು ತನ್ನ ಹಣವನ್ನೆಲ್ಲಾ ಟ್ರಾವಂಕೂರು ಬ್ಯಾಂಕಿನಲ್ಲೆ ಇಟ್ಟಿದೆ. ಅದ್ದರಿಂದ ಅದರ ಸ್ಥಿತಿಯು ದೃಢವಾಗಿಲ್ಲ' ಎಂದು ಹೇಳುವದೆಲ್ಲಾ ಸುಳ್ಳಿನ ಕಂತೆಗಳೇ ಆಗಿವೆ.

ಈ ಮೊದಲೇ ಸ್ಪಷ್ಟೀಕರಿಸಿದಂತೆ ಈ ಕಂಪೆನಿಯ ಇಷ್ಟು ಹಣವು ಆ ಬ್ಯಾಂಕಿನಲ್ಲಿ ಠೇವಣಾತಿಯಾಗಿ ನಿಂತಿರುವುದರಿಂದ ಈ ಕಂಪೆನಿಯ ದೃಢತೆ ಯಾ ಭದ್ರತೆಯಲ್ಲಿ ಯಾವ ವಿಧದ ಕೊರತೆಯೂ ಇಲ್ಲ.

ಈ. ಎ. ಪ್ಯಾಸ್, ಎಸ್ಕ್ವೈಯರ್,
ಬಿ. ಎಸ್. ಸಿ.,
12 5 ಬ್ರಾಂಚ್ ಮೇನೇಜರ್,
ಮಂಗಳೂರು.

ಯುನಾನಿ ಫಾರ್ಮಸಿಯ ಉತ್ತಮ ಔಷಧಿಗಳು.

ಉಬ್ಬಸ ಸಂಹಾರಿ (Asthma cure) ಕೆಲವು ದಿನಗಳ ಸೇವನೆಯಿಂದ ಉಬ್ಬಸವನ್ನು ಪೂರ್ತಿಯಾಗಿ ಗುಣಪಡಿಸುತ್ತದೆ. 40 ದಿನದ ಔಷಧಿಗೆ ಕ್ರಯ ರೂ. 5—12—0.

ಅಂಬರ್ ಕೂದಲೆಣ್ಣೆ, ಸುಗಂಧಯುಕ್ತ ಆಮ್ಲಕೇಶ ತೈಲ ಅಲ್ಲದೆ ಎಲ್ಲಾ ರೋಗಗಳಿಗೂ ರಾಮಬಾಣದಂತಿರುವ ಮಾತ್ರೆಗಳೂ, ಚೂರ್ಣಗಳೂ, ಲೇಹಗಳೂ, ತೈಲಗಳೂ ಮತ್ತು ಕೇಶ ತೈಲಗಳೂ ಸಹ ತಯಾರಿರುವುವು.

ಬೇಗನೆ ಬರೆಯಿರಿ:—

ಯಂ. ಯಂ. ಸಿದ್ದೀಕ್,
20 ಪ್ರೊಪ್ರೈಟರ್,
ಯುನಾನಿ ಔಷಧಶಾಲಾ, ಮಡಿಕೇರಿ, ಕೊಡಗು.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಅರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಪೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮ ಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
ಕೊಡಗು ಲಿಮಿಟೆಡ್, ಮಡಿಕೇರಿ.

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಬಡ್ಜೆಟ್ ಮೀಟಿಂಗು.

ಹೊಸ ಡಿಸ್ಟ್ರಿಕ್ಟ್ ಬೋರ್ಡಿನ ಪ್ರಥಮ ಬಡ್ಜೆಟ್ ಮೀಟಿಂಗು ಈ ತಿ. 8 ಮತ್ತು 9 ರಲ್ಲಿ ಕೌನ್ಸಿಲ್ ಹಾಲಿನಲ್ಲಿ ನಡೆಯಿತು. ಬೋರ್ಡಿನ ಪ್ರೆಸಿಡೆಂಟರಾದ ಮೆ. ಪಿ. ಐ. ಬೆಳ್ಯಪ್ಪನವರು ಅಧ್ಯಕ್ಷರಾಗಿದ್ದರು. ಯುರೋಪಿಯನ್ ಪ್ಲಾಂಟರು ಮೆಂಬರುಗಳಾದ ಮೆ. ಮೂರಿಸ್‌ರವರು ಮತ್ತು ಮೆ. ಬ್ರಮ್ಹಾಲ್‌ರವರೂ, ನೇಮಿತ ಮೆಂಬರಾದ ಮೆ. ಅಬ್ದುಲ್ ರಹಮಾನ್‌ರವರೂ ಗೈರುಹಾಜರಾಗಿದ್ದರು. ಉಳಿದ 16 ಮೆಂಬರುಗಳು ಹಾಜರಿದ್ದರು. ಅನೇಕ ಪ್ರೇಕ್ಷಕರೂ ನೆರೆದಿದ್ದರು.

ತಾ. 8 ರ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಮೀಟಿಂಗು ಪ್ರಾರಂಭವಾಯಿತು. ಪ್ರಾರಂಭದಲ್ಲಿ 'ವಂದೇ ಮಾತರಂ' ರಾಷ್ಟ್ರಗೀತೆಯು ಹಾಡಲ್ಪಟ್ಟಿತು. ಮೆಂಬರುಗಳೂ, ಪ್ರೇಕ್ಷಕರೂ-ಎಲ್ಲರೂ ಎದ್ದು ಮೌನವಾಗಿ ನಿಂತಿದ್ದರು.

ಪ್ರಥಮದಲ್ಲಿ ಕಳೆದ ಎರಡು ಮೀಟಿಂಗುಗಳ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು. ನಂತರ ಬಡ್ಜೆಟ್ಟಿನ ಚರ್ಚೆಯು ಪ್ರಾರಂಭವಾಯಿತು. ಈ ಮೊದಲೆ ಪ್ರಿಂಟು ಮಾಡಿ ಮೆಂಬರುಗಳಿಗೆ ಕಳುಹಿಸಲ್ಪಟ್ಟಿದ್ದ ಅಂದಾಜು ಬಡ್ಜೆಟ್ಟಿನ ಪ್ರತಿಯೊಂದು ವಿಷಯವೂ ಅಧ್ಯಕ್ಷರಿಂದ ಓದಲ್ಪಟ್ಟು ಬೋರ್ಡಿನವರ ಅಭಿಪ್ರಾಯ ತೆಗೆಯಲ್ಪಟ್ಟಿತು. ಆದಾಯದಲ್ಲಿ-ಕಂದಾಯ ಮಾಫಿ ಬಿಟ್ಟಲ್ಲಿ ಸೆಸ್ಸನ್ನೂ ದಾಮಾಶಾಯಿ ಮೇರೆ ಮಾಫಿ ಬಿಟ್ಟ ಕಾರಣ ಸೆಸ್ಸಿನ ಉತ್ಪತ್ತಿಯಲ್ಲಿ ರೂ. 5,600 ಕಡಿಮೆ ಅಂದಾಜು ಮಾಡಲಾಯಿತು.

ಖರ್ಚಿನ ಬಾಬುಗಳಲ್ಲಿ-ಬೋರ್ಡಿನ ನೌಕರರಿಗೆ ಮನೆಕಟ್ಟಲು ಅಡ್ವಾನ್ಸಿಗಾಗಿ ಇಟ್ಟಿದ್ದ ರೂ. 2000 ವಜ ಮಾಡಲಾಯಿತು. ಸ್ಟೇಶನರಿ ಮತ್ತು ಪ್ರಿಂಟಿಂಗಿನ ವೆಚ್ಚದಲ್ಲಿ ರೂ. 200, ಮಿಸಲೇನಿಯಸ್ ಪಬ್ಲಿಕ್ ಇಂಪ್ರೂವ್‌ಮೆಂಟ್ಸಿನ ವೆಚ್ಚದಲ್ಲಿ ರೂ. 500, ಪಿ. ಡಬ್ಲ್ಯು. ಇಲಾಖೆಯ ಚಾರ್ಜಿನಲ್ಲಿರುವ ಕೆಲಸಗಳ ವೆಚ್ಚದಲ್ಲಿ ರೂ. 1700 ಮತ್ತು ವಿದ್ಯಾ ಇಲಾಖೆಯ ಸಾಮಾನುಗಳ ಕ್ರಯ ಮತ್ತು ರಿಪೇರಿ ಖರ್ಚಿನಿಂದ ರೂ. 300 ಕಡಿಮೆ ಮಾಡಲಾಯಿತು. ಗ್ರಾಮಾಂತರ ರಸ್ತೆಗಳ ರಿಪೇರಿಯ ಖರ್ಚಿನಲ್ಲಿ ರೂ. 1000, ಪ್ರಯಾಣದ ಭತ್ಯದಲ್ಲಿ (ಕಳೆದ ವರ್ಷದ ಮೆಂಬರುಗಳ ಭತ್ಯವನ್ನೂ, ಚುನಾವಣೆ ಸಂಬಂಧ ಉದ್ಯೋಗಸ್ಥರ ಭತ್ಯವನ್ನೂ ಈ ವರ್ಷ ಕೊಡಬೇಕಾದ ಕಾರಣ) ರೂ. 500 ಹೆಚ್ಚಿಸಲಾಯಿತು.

ಮೆ. ಯಸ್. ಯನ್. ರಾಮಶೆಟ್ಟಿಯವರು ಸರ್ವ ಸಮ್ಮತದಿಂದ ಬೋರ್ಡಿನ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು.

ಮೆ. ಹೆಚ್. ಯಂ. ಪುಟ್ಟಣ್ಣನವರು ಎಕ್ಸ್‌ಟೆನ್‌ಷನ್ ಎಡ್ವೈಸರಿ ಬೋರ್ಡಿಗೆ ಡಿ. ಬೋರ್ಡಿನ ಒಬ್ಬ ಪ್ರತಿನಿಧಿಯಾಗಿ ಏಕೋಭವಿಸಿ ಆರಿಸಲ್ಪಟ್ಟರು.

ಸರ್ಕಾರದಿಂದ ವಂತಿಗೆ ಹೆಚ್ಚಿಸಲು ಕೋರಿಕೆ.

ಚೈನಾ ಅಂಬ್ಯುಲೆನ್ಸ್ ಫಂಡಿಗೆ ಧನ ಸಹಾಯ.

ಮಂಜೂರಾದ ಬಡ್ಜೆಟ್ ಠರಾವುಗಳು:

1. ಇನ್ನು ಮುಂದೆ ಬೋರ್ಡಿನ ಸರ್ವಿಸಿಗೆ ನೇಮಿಸಲ್ಪಡುವ ಆಯುರ್ವೇದ ಡಾಕ್ಟರುಗಳಿಗೆ ಮದ್ರಾಸಿನಲ್ಲಿರುವಂತೆ ರೂ. 40-3 2-70 ದರದ ಸಂಬಳವನ್ನು ಇಡಬೇಕು.

2. ಬೋರ್ಡಿನ ಪರವಾಗಿ ಶಾಲಾ ಡೆಪ್ಯುಟಿ ಇನ್ಸ್‌ಪೆಕ್ಟರವರ ಆಫೀಸಿನಲ್ಲಿಯ (ಇನ್ನು ಮುಂದೆ ನೇಮಿಸಲ್ಪಡುವ) ಗುಮಾಸ್ತನಿಗೆ ಸರ್ಕಾರದಲ್ಲಿರುವಂತೆ ರೂಪಾಯಿ 30-2 2.50 ದರದ ಸಂಬಳವಿಡಬೇಕು.

3. ಬೋರ್ಡಿನ ಮೀಟಿಂಗಿನಲ್ಲಿ ಯಾವದಾದರೂ ಒಂದೇ ತರಹದ ಕೆಲಸಗಳಿಗೆ ಮೊತ್ತವಾಗಿ ಇಡುವ ಮೊಬಲಗನ್ನು ಪ್ರತಿಯೊಂದು ಕೆಲಸಕ್ಕೆ ಪ್ರತ್ಯೇಕವಾಗಿ ಮಂಜೂರು ಮಾಡುವ ಅಧಿಕಾರ ಅಧ್ಯಕ್ಷರಿಗೆ ಇರಬೇಕು ಎಂಬ ಮದ್ರಾಸಿನ ಎಕೌಂಟೆಂಟ್ ಜನರಲರವರ ಸಲಹೆಯನ್ನು ಒಪ್ಪಲಾಯಿತು.

4. ಮೆ. ಹೆಚ್. ಯಂ. ಪುಟ್ಟಣ್ಣನವರ ಸೂಚನೆ ಮೇರೆ ಶನಿವಾರಸಂತೆ ಆಸ್ಪತ್ರೆಗೆ ಮಾಹೆಯಾನ 20 ರೂ. ತಲಬು ಮತ್ತು 3 ರೂ. ಮನೆಬಾಡಿಗೆ ಎಲೋವನ್ಸಿನಲ್ಲಿ ಒಬ್ಬ ಪ್ರೊಬೇಷನರಿ ನರ್ಸನ್ನು ನೇಮಿಸುವಂತೆ ತೀರ್ಮಾನಿಸಲಾಯಿತು.

5. ಮೆ. ಪುಟ್ಟಣ್ಣನವರ ಸೂಚನೆ ಮೇರೆ ಬೆಟ್ಟದಳ್ಳಿಯಿಂದ ಮರಗಳ್ಳಿಗೆ ರಸ್ತೆ ಮಾಡಿಸಲು ರೂ. 50 ಮಂಜೂರಾಯಿತು.

6. ಮೆ. ಅಜ್ಜಿಕುಟ್ಟಿರ ಪೊನ್ನಪ್ಪನವರ ಸೂಚನೆ ಮೇರೆ ಬಿಗೂರಿನ ಶಾಲೆಗೆ ಈ ಜುಲೈ 1 ರಿಂದ ತಿಂಗಳಿಗೆ 10 ರೂಪಾಯಿ ಹೆಚ್ಚಿನ ಗ್ರಾಂಟು ಕೊಡುವಂತೆ ತೀರ್ಮಾನಿಸಲಾಯಿತು.

7. ಮೆ. ರಾಮಶೆಟ್ಟಿಯವರ ಸೂಚನೆ ಮೇರೆ-ಹೆಬ್ಬಾಲೆ ಗ್ರಾಮದಲ್ಲಿ ಹೊಳೆಯಿಂದ ಗ್ರಾಮಕ್ಕೆ ಕುಡಿಯಲು ನೀರು ತರಲಿಕ್ಕೆ ಗ್ರಾಮಾಭಿವೃದ್ಧಿ ಫಂಡಿನ ವಂತಿಗೆಯಿಂದ ನಡಿಸುವ ಕೆಲಸಕ್ಕೆ ಬೋರ್ಡಿನಿಂದ ರೂ. 1,400 ಕೊಡುವಂತೆ ಮಂಜೂರಾಯಿತು.

8. ಮೆ. ಸಿಂಗೂರು ಮಾದಪ್ಪನವರ ಸೂಚನೆ ಮೇರೆ-ಕೂಡಿ ರಸ್ತೆಯನ್ನು ಮೈಸೂರು ಗಡಿಯ ವರೆಗೆ ಮುಂದುವರಿಸಲು ರೂ. 125 ಕೊಡುವಂತೆ ತೀರ್ಮಾನಿಸಲಾಯಿತು.

9. ಮೆ. ಸಿಂಗೂರು ಮಾದಪ್ಪನವರ ಸೂಚನೆ ಮೇರೆ ಶನಿವಾರಸಂತೆ ನೇಯಿಗೆ ಶಾಲೆಯಲ್ಲಿ ಚರ್ಕಾದಿಂದ ನೂಲುವ ತರಗತಿಯೊಂದನ್ನು ತೆರೆಯಲು 150 ರೂಪಾಯಿ ಮಂಜೂರಾಯಿತು.

10. ಮೆ. ಪಿ. ಐ. ಬೆಳ್ಯಪ್ಪನವರು ಈ ಮೊದಲು ಕಳುಹಿಸಿದ್ದ ಠರಾವು ಮೇರೆ ಅಮ್ಮತ್ತಿ-ಕೊಂಡಗೇರಿ ರಸ್ತೆಯ ಒಂಟಿಯಂಗಡಿಯಿಂದ ವೀರಾಜಪೇಟೆ-ಸಿದ್ದಾಪುರ ರಸ್ತೆಯು ಇಂಜಲಿಗೆರೆ ಬಳಿ ಸಂಯೋಜಿಸುವ 2 ಮೈಲು ದೂರದ ರಸ್ತೆಯನ್ನು ರಿಪೇರಿ ಮಾಡಲು 50 ರೂ. ಕೊಡಲು ತೀರ್ಮಾನವಾಯಿತು.

11. ಮೆ. ಪಿ. ಐ. ಬೆಳ್ಯಪ್ಪನವರು ಈ ಮೊದಲು ಕಳುಹಿಸಿದ ಠರಾವಿನ ಮೇರೆ ಭಾಗಮಂಡಲದ ಚಾಡಗ ಗ್ರಾಮದ ಶಾಲೆಯನ್ನು ಡಿ. ಬೋರ್ಡಿಗೆ ತೆಗೆದುಕೊಳ್ಳಬೇಕೆಂಬ ವಿಚಾರ ಶಾಲಾ ಇನ್ಸ್‌ಪೆಕ್ಟರವರ ತನಿಖೆಗೆ ಬಿಡಲಾಯಿತು.

12. ಮೆ. ಮುಂಡೇಪಂಡ ಸೋಮಯ್ಯನವರ ಸೂಚನೆ ಮೇರೆ ಕೆದಮುಳ್ಳೂರು ಶಾಲೆಗೆ ತಾರೀಕು 1-7-38 ರಿಂದ ತಿಂಗಳಿಗೆ 10 ರೂ. ಗ್ರಾಂಟು ಕೊಡಲು ತೀರ್ಮಾನವಾಯಿತು.

13. ಮೆ. ಮುಂಡೇಪಂಡ ಸೋಮಯ್ಯನವರ ಸೂಚನೆ ಮೇರೆ ಬಿಟ್ಟಂಗಾಲ ಶಾಲೆಗೆ ತಾರೀಕು 1-7-38 ರಿಂದ ತಿಂಗಳಿಗೆ 10 ರೂ. ಗ್ರಾಂಟು ಕೊಡುವಂತೆ ತೀರ್ಮಾನವಾಯಿತು.

14. ಮೆ. ಮುಂಡೇಪಂಡ ಸೋಮಯ್ಯನವರ ಸೂಚನೆ ಮೇರೆ ಆರಮೇರಿ ಹರಿಜನ ಶಾಲಾ ಕಟ್ಟಡಕ್ಕಾಗಿ ರೂ. 260 ಮಂಜೂರ್ಮಾಡಲಾಯಿತು.

15. ಮೆ. ಬೆಟ್ಟೋಳಂಡ ಮಾದಯ್ಯನವರ ಸೂಚನೆ ಮೇರೆ ಬಲ್ಲಮಾವಟಿ ನಾಪೋಕ್ಲು ರಸ್ತೆಯನ್ನು ಎರಡು ಮೈಲು ಮುಂದರಿಸಲು 60 ರೂಪಾಯಿ ಮಂಜೂರ್ಮಾಡಲಾಯಿತು.

16. ಮೆ. ಬೆಟ್ಟೋಳಂಡ ಮಾದಯ್ಯನವರ ಸೂಚನೆ ಮೇರೆ ನೆಲಜಿ ಶಾಲೆಗೆ ಒಂದು ವೆರಾಂಡ ಕಟ್ಟಿಸಲಿಕ್ಕಾಗಿ ರೂ. 139-2-0 ಮಂಜೂರ್ಮಾಡಲಾಯಿತು.

17. ಮೆ. ಬೆಟ್ಟೋಳಂಡ ಮಾದಯ್ಯನವರ ಸೂಚನೆ ಮೇರೆ ಬೈಯ್ಯಂಡಾಣೆ ಶಾಲೆಯಲ್ಲಿ 6 ನೇ ತರಗತಿಯನ್ನು ತೆರೆಯುವಂತೆಯೂ, ಅಲ್ಲಿಗೆ ಒಬ್ಬ ವಾಲಂಟಿಯರ್ ಟೀಚರನ್ನು ನೇಮಕ ಮಾಡುವಂತೆಯೂ ತೀರ್ಮಾನವಾಯಿತು.

18. ಮೆ. ಎಸ್. ಎನ್. ರಾಮಶೆಟ್ಟಿಯವರ ಸೂಚನೆಯಂತೆ ಗ್ರಾಮಾಭಿವೃದ್ಧಿ ಫಂಡಿನಿಂದ ತ್ಯಾಗತ್ತೂರು ಗ್ರಾಮದಲ್ಲಿ ತೆಗೆಯುವ ಬಾವಿಗೆ, ಗ್ರಾಮಸ್ಥರು ಕೆಲಸದ ರೂಪದಲ್ಲಿ 50 ರೂಪಾಯಿ ಸಲ್ಲಿಸಿದರೆ ಬೋರ್ಡಿನಿಂದ 50 ರೂಪಾಯಿ ಕೊಡಲು ತೀರ್ಮಾನಿಸಲಾಯಿತು.

19. ಚೀಫ್ ಕಮಿಷನರವರು ತಾ. 28-12-37 ರ ತಮ್ಮ ಪತ್ರದಲ್ಲಿ ಸಲಹೆ ಕೊಟ್ಟ ಮೇರೆ ಸರಕಾರಿ ನೌಕರಿಗೆ ಇಟ್ಟ ವಿದ್ಯಾಯೋಗ್ಯತೆಯನ್ನೇ ಡಿಸ್ಟ್ರಿಕ್ಟ್ ಬೋರ್ಡಿನ ನೌಕರಿಗೂ ಅಂಗೀಕರಿಸಲಾಯಿತು.

20. ತಾಕೇರಿ ಶಾಲೆಯನ್ನು ಕಟ್ಟಿಸಿದ ಮೆ. ಗಳಾದ ಬೈರಪ್ಪ ಮತ್ತು ಪುಟ್ಟಯ್ಯನವರ ಹೆಸರಿನಲ್ಲಿ ಶಿಲಾಶಾಸನವನ್ನು ಇಡಲು 26 ರೂಪಾಯಿಗಳನ್ನು ಮಂಜೂರ್ಮಾಡಬೇಕೆಂಬ ಶಾಲಾ ಡಿಸ್ಟ್ರಿ ಇನ್ಸ್‌ಪೆಕ್ಟರರವರ ಕೋರಿಕೆಯನ್ನು ಸಲ್ಲಿಸುವಂತೆ ತೀರ್ಮಾನವಾಯಿತು.

21. ಮಡಿಕೇರಿ ನಾಡಿನ ಅರೆಕಾಡು ಸ್ಕೂಲಿಗೆ ಗ್ರಾಂಟು ಕೊಡಬೇಕೆಂಬ ಪತ್ರದ ಮೇರೆ ತಾ. 1-7-38 ರಿಂದ ತಿಂಗಳಿಗೆ 10 ಕೊಡುವಂತೆ ತೀರ್ಮಾನಿಸಲಾಯಿತು.

22. ಮೆ. ಕಾಕಮಾಡ ಗಣಪತಯ್ಯನವರ ಸೂಚನೆ ಮೇರೆ, ನೆಮ್ಮಲೆ ಗ್ರಾಮಸ್ಥರಿಗೆ ಒಂದು ಬಾವಿ ತೆಗೆಯಲು ಗ್ರಾಮಸ್ಥರು 150 ರೂಪಾಯಿ ಸಂಗ್ರಹಿಸಿದರೆ ಬೋರ್ಡಿನಿಂದ ರೂ. 150 ಕೊಡಲು ತೀರ್ಮಾನವಾಯಿತು.

23. ಮೆ. ಪಿ. ಐ. ಬೆಳ್ಯಪ್ಪನವರು ಈ ಮೊದಲು ಕಳುಹಿಸಿದ ಠರಾವು ಮೇರೆ ವೀರಾಜಪೇಟೆ-ಗೋಣಿಕೊಪ್ಪಲು ರಸ್ತೆಯ 8 ನೇ ಮೈಲು 4 ಫರ್ಲಾಂಗಿನಿಂದ ಕೈಕೇರಿ ಮಾರ್ಗವಾಗಿ ಕಳತುಮಾಡಿಗೆ ಹೋಗುವ ರಸ್ತೆಯ ರಿಪೇರಿಗಾಗಿ ರೂ. 100 ಮಂಜೂರ್ಮಾಡಲಾಯಿತು.

24. ಮೆ. ಅಜ್ಜಿಕುಟ್ಟಿರ ಪೊನ್ನಪ್ಪನವರ ಸೂಚನೆ ಮೇರೆ ಅರಮನೆಬಾಣೆಯಿಂದ ಲಕ್ಷ್ಮಣ ತೀರ್ಥ ಹೊಳೆ ದಾಟಿ ನಿಟ್ಟೂರಿಗೆ ಹೋಗುವ ರಸ್ತೆಯ ರಿಪೇರಿಗೆ 50 ಕೊಡಲು ತೀರ್ಮಾನವಾಯಿತು.

25. ಮೆ. ಅಜ್ಜಿಕುಟ್ಟಿರ ಪೊನ್ನಪ್ಪನವರ ಸೂಚನೆ ಮೇರೆ ಗೋಣಿಕೊಪ್ಪ-ತಿತಿಮತಿ ರಸ್ತೆಯಲ್ಲಿ ಅಮ್ಮೂರಿನಲ್ಲಿ ಸಿಕ್ಕುವ ಹೊಳೆಗೆ ಒಂದು ಪಾಲ ಹಾಕಲು ರೂ. 10 ಮಂಜೂರಾಯಿತು.

26. ಮೆ. ಯಸ್. ಎನ್. ರಾಮಶೆಟ್ಟಿಯವರ ಸೂಚನೆ ಮೇರೆ ತ್ಯಾಗತ್ತೂರು ರಸ್ತೆಯ ರಿಪೇರಿಗಾಗಿ ರೂ. 10 ಮಂಜೂರ್ಮಾಡಲಾಯಿತು.

27. ಬೋರ್ಡಿನ ಮೀಟಿಂಗಿನ ಕಾರ್ಯಕಲಾಪಗಳು ಇಂಗ್ಲಿಷಿನಲ್ಲಿ ನಡೆಯಬೇಕೆಂದೂ, ಇಂಗ್ಲಿಷ್ ಭಾಷಾಪರಿಜ್ಞಾನವಿಲ್ಲದವರು ಅಧ್ಯಕ್ಷರ ಅನುಮತಿ ಮೇರೆ ಕನ್ನಡದಲ್ಲಿ ಮಾತಾಡಬಹುದೆಂದೂ, ಅಧ್ಯಕ್ಷರು ಉಪಾಧ್ಯಕ್ಷರನ್ನಾಗಲೀ, ಬೇರೆ ಯಾವ ಮೆಂಬರನ್ನಾಗಲೀ ಅದನ್ನು ಸಭೆಗೆ ತಿಳಿಯುವ ಭಾಷೆಯಲ್ಲಿ ಭಾಷಾಂತರಿಸಲು ಕರೆಯಬಹುದೆಂದೂ ಡಿಸ್ಟ್ರಿಕ್ಟ್ ಫಂಡ್ ಮ್ಯಾನ್ಯುವಲಿನ ರೂಲ್ 9 ಕ್ಕೆ ಚೀಫ್ ಕಮಿಷನರವರು ಸೂಚಿಸಿದ ತಿದ್ದುಪಡಿಯನ್ನು 'ಬೇರೆ ಯಾವ ಮೆಂಬರನ್ನಾಗಲೀ' ಆದ ನಂತರ 'ಅಥವಾ ಕ್ಲಾರ್ಕರನ್ನಾಗಲೀ' ಎಂಬ ಶಬ್ದವನ್ನು ಸೇರಿಸಿ ಅಂಗೀಕರಿಸಲಾಯಿತು.

28. 1938-39 ನೇ ವರ್ಷದಲ್ಲಿ ಕೊಡಗಿನ ಟೋಲ್‌ಗೇಟುಗಳ ಹರಾಜಿನ ಆದಾಯ ರೂ. 10965ನ್ನು ಮಂಜೂರು ಮಾಡಲಾಯಿತು.

(ಆನೇ ಪುಟಕ್ಕೆ ನೋಡಿ.)

ಕೊಡಗು

ಜುಲೈ ತಾರೀಕು ೧೫ನೇ ಶುಕ್ರವಾರ ೧೯೩೮.

ಸಂಯುಕ್ತ ರಾಜ್ಯಾಂಗ ಘಟನೆ.

ಕಾಂಗ್ರೆಸು ಪಾರ್ಟಿಯವರು ಪ್ರಾಂತೀಕ ಸರ್ಕಾರಗಳಲ್ಲಿ ಅಧಿಕಾರ ಸ್ವೀಕಾರ ಮಾಡಿ ಒಂದು ವರ್ಷವಾಯಿತು. ಈ ಒಂದು ವರ್ಷ ಕಾಲದಲ್ಲಿ ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬಂದ ಏಳು ಪ್ರಾಂತ್ಯಗಳಲ್ಲಿ ಜನರಿಗೆ ಪ್ರಯೋಜನಕರವಾದ ಹಲವು ಕೆಲಸ ಕಾರ್ಯಗಳು ಮಾಡಲ್ಪಟ್ಟವೆಯೆಂಬುದರಲ್ಲಿ ಸಂಶಯವಿಲ್ಲ. ರಾಜಕೀಯ ಕೈದಿಗಳ ಬಿಡುಗಡೆಯ ವಿಷಯದಲ್ಲಿ ಕುಂಟಾ ಮುಂದುವರಿದಿದೆ. ಇದರ ಪರಿಣಾಮವಾಗಿ ಕಾಂಗ್ರೇಸೇತರ ಮಂತ್ರಿಮಂಡಳಿಗಳಿರುವ ಪ್ರಾಂತ್ಯಗಳಲ್ಲೂ ಕೂಡ ರಾಜಕೀಯ ಕೈದಿಗಳ ಬಿಡುಗಡೆಯು ನಿರೀಕ್ಷಣೆ ಮಾಡಿದ್ದಕ್ಕಿಂತ ಹೆಚ್ಚು ಸರಾಗವಾಗಿ ನಡೆಯುತ್ತಿದೆ. ಕಾಂಗ್ರೆಸು ಮಂತ್ರಿ ಮಂಡಳಿಗಳು ಮಾಡಿದ ರಚನಾತ್ಮಕ ಕಾರ್ಯಗಳಿಂದ ದೇಶದಲ್ಲಿ ಮುಖ್ಯವಾಗಿ ಗ್ರಾಮಾಂತರಗಳಲ್ಲಿ ಕಾಂಗ್ರೆಸ್ಸಿನ ಶಕ್ತಿಯು ಹೆಚ್ಚುತ್ತಲಿದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಈಗ ಕಾಂಗ್ರೆಸು ಸಂಸ್ಥೆಯ ಮುಂದೆ ನಿಂತಿರುವ ಪ್ರಾಮುಖ್ಯವಾದ ಪ್ರಶ್ನೆಯೆಂದರೆ-ಫೆಡರೇಶನ್ ಅಂದರೆ ಸಂಯುಕ್ತ ರಾಜ್ಯಘಟನೆಯ ಹೋರಾಟವಾಗಿದೆ. ಇದಕ್ಕಾಗಿ ಕಾಂಗ್ರೆಸಿನ ಹಾಗೂ ದೇಶದ ಶಕ್ತಿ ಸಾಹಸಗಳನ್ನೆಲ್ಲಾ ಕೇಂದ್ರೀಕರಿಸಬೇಕಾದದ್ದು ಅತ್ಯವಶ್ಯ.

ಈ ವಿಚಾರದಲ್ಲಿ ಕಾಂಗ್ರೆಸ್ಸಿನವರೊಳಗೆ ಸ್ವಲ್ಪ ಭಿನ್ನಾಭಿಪ್ರಾಯ ಹುಟ್ಟುವ ಚಿನ್ಹೆಗಳು ತೋರುತ್ತಿವೆ. ಆದರೆ ಇದಕ್ಕೆ ಹೆಚ್ಚಿನ ಅವಕಾಶ ಕೊಡುವುದು ಯುಕ್ತವಲ್ಲ ಮತ್ತು ಅದಕ್ಕೆ ಕಾರಣವೂ ಇಲ್ಲ. ಕಳೆದ ಹರಿಪುರ ಕಾಂಗ್ರೆಸು ಮಹಾ ಸಭೆಯಲ್ಲಿ ಫೆಡರೇಶನಿನ ಸಂಬಂಧ ಕಾಂಗ್ರೆಸ್ಸಿನ ಧೋರಣೆಯು ಬಹು ಸ್ಪಷ್ಟ ಮಾಡಲ್ಪಟ್ಟಿದೆ. ಅಲ್ಲಿ ಪಾಸಾದ ಠರಾವಿನ ಮೇರೆ ಕಾಂಗ್ರೆಸು ಫೆಡರೇಶನಿನ ಅಭಿಪ್ರಾಯವನ್ನೇ ತಿರಸ್ಕರಿಸುವುದಿಲ್ಲ; ಆದರೆ ಇಂಡಿಯಾ ಸರ್ಕಾರದ 1935 ನೇ ಆಕ್ಟಿನಲ್ಲಿ ಸೂಚಿಸಿರುವ ಫೆಡರೇಶನನ್ನು ತಿರಸ್ಕರಿಸುತ್ತದೆ. ಅದಕ್ಕೆ ಮುಖ್ಯ ಕಾರಣಗಳಾದರೂ ಇವಾಗಿವೆ. ಈ ಸಂಯುಕ್ತ ರಾಜ್ಯಘಟನೆಯು ಪರದೇಶೀಯರಿಂದ ನಮ್ಮ ಮೇಲೆ ಹೊರಿಸಲ್ಪಡುವದಾಗಿದೆ. ದೇಶದ ರಕ್ಷಣೆ, ಪರರಾಷ್ಟ್ರಗಳ ಸಂಬಂಧ ಮುಂತಾದ ಪ್ರಾಮುಖ್ಯ ವಿಷಯಗಳ ಜವಾಬ್ದಾರಿಯು ಆ ಫೆಡರಲ್ ಸರ್ಕಾರಕ್ಕೆ ಇರುವುದಿಲ್ಲ. ಇದು ಸಂಸ್ಥಾನಗಳಲ್ಲಿಯ ನಿರಂಕುಶ ಪ್ರಭುತ್ವವನ್ನು ಬ್ರಿಟಿಷ್ ಇಂಡಿಯಾದ ಪ್ರಜಾಪ್ರತಿನಿಧಿತ್ವದೊಂದಿಗೆ ಜೋಡಿಗೂಡಿಸಲು ಯತ್ನಿಸುತ್ತದೆ; ಅಂದರೆ ಫೆಡರಲ್ ಎಸೆಂಬ್ಲಿಗೆ ಬ್ರಿಟಿಷ್ ಪ್ರಾಂತ್ಯಗಳಿಂದ ಚುನಾಯಿತ ಪ್ರತಿನಿಧಿಗಳು ಕಳುಹಿಸಲ್ಪಡುವಾಗ್ಯೆ ಅಶ್ರಿತ ಅರಸರುಗಳು ತಮ್ಮ ಸಂಸ್ಥಾನಗಳ ಪರವಾಗಿ ಪ್ರತಿನಿಧಿಗಳನ್ನು ನೇಮಿಸುವರು. ಈ ಕೊರತೆಗಳಿರುವ ವರೆಗೆ ಕಾಂಗ್ರೆಸು ಫೆಡರಲ್ ರಚನೆಯನ್ನು ಎಂದಿಗೂ ಒಪ್ಪಿಕೊಳ್ಳಲಾರದು. ಬದಲು, ಬ್ರಿಟಿಷ್ ಸರ್ಕಾರದವರು ಈ ಕೊರತೆಗಳನ್ನು ನೀಗಿದರೆ ಫೆಡರೇಶನನ್ನು ಕಾಂಗ್ರೆಸು ತಿರಸ್ಕರಿಸಲು ಕಾರಣವಿರುವುದಿಲ್ಲ.

ಈ ಸಂಬಂಧವಾಗಿಯೇ ವೈಸರಾಯರಾದ ಲಾರ್ಡ್ ಲಿನ್‌ಲಿತ್ ಗೌರವರು ಈಗ ಇಂಗ್ಲೆಂಡಿಗೆ ಹೋಗಿರುವುದಾಗಿದೆ. ಇದನ್ನು ಕುರಿತು ಬರೆಯುವಾಗ್ಯೆ ಇಂಗ್ಲೆಂಡಿನ ಪ್ರಾಮುಖ್ಯ ಪತ್ರಿಕೆಯೊಂದು-'ಈ ರಚನೆಯನ್ನು ಇಂಡಿಯಾದ ಮೇಲೆ ಬಲತ್ಕಾರದಿಂದ ಹೊರಿಸುವುದರ ಬದಲು ರಾಜಿ ಮಾತುಗಳಿಂದ ಹಿಂದೀಯರ ಸಮ್ಮತಿಯನ್ನು ಪಡೆಯುವುದು ಉತ್ತಮ' ವೆಂದು ಸೂಚಿಸಿದೆ. ಇದು ಅಲ್ಲಿಯ ಸರ್ಕಾರದ ನಿಜವಾದ ಅಭಿಪ್ರಾಯವಾಗಿದ್ದರೆ ಫೆಡರೇಶನನ್ನು ಹಿಂದೀಯರಿಗೆ ಒಪ್ಪುವಂತೆ ಮಾಡುವುದು ಬ್ರಿಟಿಷ್ ಸರ್ಕಾರಕ್ಕೆ ಅಸಾಧ್ಯವಾದ ವಿಷಯವೇನೂ ಅಲ್ಲ. ಆದರೆ ರಾಜಿ ಒಪ್ಪಂದದಿಂದ ಸಮ್ಮತಿಯನ್ನು ಪಡೆಯಲಿಕ್ಕಾಗಿ ದುಂಡು ಮೇಜು ಪರಿಷತ್ತುಗಳ ಕಾಲ ತಳ್ಳುವಂಥ ವಿಧಾನವನ್ನು ತ್ಯಜಿಸಬೇಕು. ಶೀಘ್ರದಲ್ಲೇ ಹಿಂದೀಯ ಮುಖಂಡರೊಡನೆ ಮಾತುಕತೆ ನಡಿಸಿ, ಜನರಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ಬದಲಾವಣೆಗಳನ್ನು ಮಾಡಬೇಕು. ಈಗ ಸೂಚಿಸಿರುವ ರಚನೆಯನ್ನು ಸ್ವಲ್ಪ ಕಾಲ ಜಾರಿಗೆ ತಂದ ವಿನಹ ಅದರಲ್ಲಿ ಬದಲಾವಣೆ ಮಾಡಲಾಗುವುದಿಲ್ಲವೆಂದು ಬ್ರಿಟಿಷ್ ಪಾರ್ಲಿಮೆಂಟಿನವರು ವಾದಿಸುವುದರಿಂದ ಪ್ರಯೋಜನವಿಲ್ಲ. ಹಿಂದೂಸ್ಥಾನದಲ್ಲಿ ಅನಾವಶ್ಯದ ಚಳವಳಿಕ್ಕೆ ಎಡೆ ಕೊಡದೆ, ಇಂಡಿಯಾದ ಸ್ನೇಹವನ್ನು ಉಳಿಸಿಕೊಳ್ಳುವ ಇಚ್ಛೆಯು ಬ್ರಿಟನಿಗಿದ್ದರೆ ಹೆಚ್ಚಿನ ತೊಂದರೆ ಇಲ್ಲದೆ ಪಾರ್ಲಿಮೆಂಟಿನಲ್ಲಿ ಹೊಸ ಆಕ್ಟಿನಲ್ಲಿ ಬೇಕಾದ ಬದಲಾವಣೆಗಳನ್ನು ಮಾಡಿಕೊಳ್ಳಬಹುದು.

ಈ ಮಧ್ಯೆ ಕಾಂಗ್ರೆಸ್ಸಿನವರೊಳಗೂ ರಾಷ್ಟ್ರೀಯ ಪಕ್ಷದವರೊಳಗೂ "ಭಿನ್ನಾಭಿಪ್ರಾಯಕ್ಕೆ ಎಡೆ ಕೊಡದೆ ಒಗ್ಗಟ್ಟನ್ನು ಸಾಧಿಸಿಕೊಳ್ಳಬೇಕಾಗಿದೆ. ಈ ಸಂಗತಿಯು ಬೇಗನೆ ವಾರ್ಧಾದಲ್ಲಿ ನಡೆಯಲಿಕ್ಕಿರುವ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಚರ್ಚಿಸಲ್ಪಡುವುದರಿಂದ ಈ ಸಂಬಂಧ ಕಾಂಗ್ರೆಸ್ಸಿನವರೊಳಗೆ ತಲೆದೋರುತ್ತಿರುವ ಭಿನ್ನಾಭಿಪ್ರಾಯವು ಹೋಗಲಾಡಿಸಲ್ಪಡುವುದರಲ್ಲಿ ಸಂಶಯವಿಲ್ಲ.

ಟ್ರಾವಂಕೋರಿನಲ್ಲಿ ಭೀಕರ ಅತ್ಯಾಚಾರ.

ಟ್ರಾವಂಕೋರ್ ಸಂಸ್ಥಾನದ ಕಾಂಗ್ರೆಸ್ ಮಹಾ ಸಭೆಯು ಕಳೆದ ಶನಿವಾರ ಚೆಂಗಾನಚೇರಿಯಲ್ಲಿ ನಡೆಯುತ್ತಿದ್ದಾಗ ಪೋಲೀಸರು ಭಯಂಕರವಾಗಿ ಲಾಠೀ ಹಲ್ಲೆ ನಡೆಸಿ, ಸಭೆಯನ್ನು ಚದರಿಸಿದರು.

ಈ ಕುರಿತು ಪತ್ರಿಕಾ ಪ್ರತಿನಿಧಿಯು ಸಂಸ್ಥಾನೀ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಾದ ಶ್ರೀ. ಮಾಧವರಾಯರನ್ನು ಬೆಟ್ಟಿಯಾಗಿ ವಿಚಾರಿಸಲು ಅವರು ಹೀಗೆಂದರು:-

ಚೆಂಗಾನಚೇರಿಯಲ್ಲಿ ನನ್ನ ಅಧ್ಯಕ್ಷತೆಯಲ್ಲಿ ಮಹಾ ಸಭೆಯು ಸೇರಲು ಏರ್ಪಾಡುಗಳಾಗಿದ್ದವು. ಆದರೆ ಸಭೆ ಸೇರುವ ಮೊದಲೇ ಪೋಲೀಸರು ಬಂದು ಕೂಡಿದ್ದ ಜನಗಳ ಮೇಲೆ ವಿಶೇಷವಾಗಿ ಲಾಠೀ ಚಾರ್ಜು ಮಾಡಿ ಸಭೆಯನ್ನು ಸೇರಗೊಡಲಿಲ್ಲ.

ಕಾಂಗ್ರೆಸ್ ಮುಖಂಡರು ಭಾಷಣ ಮಾಡಲು ವೇದಿಕೆಯನ್ನೇರುತ್ತಲೇ ಕೆಲವು ಜನ ಪುಂಡರು ಗದ್ದಲ ಮಾಡಿದರು. ಕೂಡಲೇ ಪೋಲೀಸ್ ಇನಸ್ಪೆಕ್ಟರರು ಮುಂದೆ ಬಂದು ಶಾಂತಿ ಭಂಗವಾಗುವದೆಂಬ ಶಂಕೆ ಇರುವದರಿಂದ ಸಭೆಯನ್ನು ಅಷ್ಟಕ್ಕೆ ನಿಲ್ಲಿಸಲು ಆಜ್ಞೆ ಮಾಡಿದರು. ಜನರು ಶಾಂತತೆಯಿಂದ ಇರಬೇಕೆಂದು ಕಾಂಗ್ರೆಸು ಮುಖಂಡರು ವಿನಂತಿ ಮಾಡಿಕೊಂಡರು.

ಅಷ್ಟರಲ್ಲಿಯೇ ಆಯುಧಪಾಣಿಗಳಾದ 30-40 ಮಂದಿ ಪೋಲೀಸರು ಬಂದು ಭಾಷಣ ವೇದಿಕೆಯನ್ನು ಸುತ್ತುವರಿದು ವೇದಿಕೆಯ ಮೇಲಿದ್ದ ಮುಖಂಡರ ಮೇಲೆ ಬಲವಾದ ಲಾಠೀ ಪ್ರಯೋಗ ಮಾಡಿದರು. ಕೆಲವರನ್ನು ಕೂತಲ್ಲಿಂದ ಎಳೆದರು. ಆದರೂ ಮುಖಂಡರು ಕದಲದೇ ಇರಲಾಗಿ ಅವರ ಮೇಲೆ ಕಲ್ಲುಗಳನ್ನೆಸೆಯಲಾಯಿತು. 25 ಮಿನಿಟುಗಳ ವರೆಗೆ ಕಲ್ಲಿನ ಸುರಿಮಳೆ ಸಾಗಿತು.

ಇಷ್ಟರಲ್ಲೇ ವೇದಿಕೆಗೆ ಸ್ವಲ್ಪ ದೂರದಲ್ಲೇ ಕುಳಿತಿದ್ದ ಜನ ಸಮೂಹವು ಎದ್ದು ನಿಂತು ವೇದಿಕೆಯ ಕಡೆಗೆ ಬರಲು ಸಿದ್ಧವಾಯಿತು. ಪೋಲೀಸರು ಈ ಜನವೃಂದದ ಮೇಲೆ ಯಥೇಚ್ಛವಾಗಿ ಲಾಠೀ ಚಾರ್ಜು ಮಾಡಿದರು. ಕೆಲವು ಪುಂಡರು ಒಂದೇ ಸವನೆ ಕಲ್ಲೆಸೆಯಲಾರಂಭಿಸಿದ್ದರಿಂದ ಹಲವರಿಗೆ ಗಾಯ ಆಯಿತು.

ಶಾಂತಿ ಭಂಗವಾಗುವದೆಂದು ಬೆದರಿ, ಜನರು ತಮ್ಮ ತಮ್ಮ ಮನೆಗೆ ಹೋಗಬೇಕೆಂದು ಮುಖಂಡರು ಪ್ರಾರ್ಥಿಸಿಕೊಂಡರು. ಪೋಲೀಸರಲ್ಲಿ 2-3 ಜನರಿಗೆ ಕಲ್ಲಿನ ಏಟುಗಳು ಬಿದ್ದವೆ. ಲಾಠೀ ಚಾರ್ಜಿನಿಂದ 500 ಜನರು ಗಾಯಗೊಂಡು ನೆಲಕ್ಕುರುಳಿದರು.

ಗುಂಪು ಗೂಡಿದ್ದ ಪುಂಡರನ್ನು ಕೈದು ಮಾಡಿ ಸಭ್ಯ ನಾಗರಿಕರಿಂದ ಸಾವಿರಾರು ಜನರು ಈ ಸಭೆಯನ್ನು ಶಾಂತವಾಗಿ ನಡೆಯಗೊಡಬೇಕಾದದ್ದು ಪೋಲೀಸರ ಹಾಗೂ ಸರಕಾರದ ಕರ್ತವ್ಯವಾಗಿದ್ದಿತು. ಆದರೆ ಸರಕಾರವು ಹಾಗೆ ಮಾಡಲಿಲ್ಲ. ಜನತೆಯಲ್ಲುಂಟಾದ ಈ ಭೀಕರ ಕಳವಳದಿಂದ ಟ್ರಾವಂಕೋರದಲ್ಲಿ ಬೇಗನೆ ಉಗ್ರ ಸ್ವರೂಪದ ದಿನಗಳು ಪ್ರಾಪ್ತವಾಗಲಿವೆ ಎನ್ನಬಹುದು.

ಒಳದೇಶ.

ಈ ತಾ. 8 ರಿಂದ ತಾ. 15 ರ ವರೆಗೆ ಮಡಿಕೇರಿಯಲ್ಲಿ 5 ಇಂಚು 18 ಸೆಂಟು ಮಳೆಯಾಗಿದೆ.

ಮೆ. ಯಸ್. ಯನ್. ರಾಮಶೆಟ್ಟಿಯವರು ಡಿಸ್ಟ್ರಿಕ್ಟ್ ಬೋರ್ಡಿನ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ಈ ವಾರ ವೀರಾಜಪೇಟೆಯಲ್ಲಿ ಭತ್ತ ಗಾಡಿಯೊಂದಕ್ಕೆ 45 ರೂಪಾಯಿ ವರೆಗೆ ಕ್ರಯವಿತ್ತೆಂದು ತಿಳಿಯಬರುತ್ತದೆ.

ಚಕ್ರವರ್ತಿಯವರ ಕ್ಷಯನಿವಾರಣೆ ಫಂಡಿಗೆ ಕೊಡಗಿನಲ್ಲಿ ರೂ. 2,417-9-4 ಜಮೆಯಾಗಿದೆಯೆಂದು ತಿಳಿಯಬರುತ್ತದೆ.

ಮಡಿಕೇರಿ ಹೈಸ್ಕೂಲು ಮಳೆಗಾಲದ ರಜಕ್ಕಾಗಿ ಈ ತಾ. 22 ರಿಂದ 2 ವಾರಗಳ ರಜೆಯಲ್ಲಿ ಮುಚ್ಚಲ್ಪಡುವದೆಂದು ತಿಳಿಯಬರುತ್ತೆ.

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಬಜೆಟ್ ಮೀಟಿಂಗು ಈ ತಾ. 8 ಮತ್ತು 9 ರಲ್ಲಿ ಮಡಿಕೇರಿ ಕೌನ್ಸಿಲ್ ಹಾಲ್‌ನಲ್ಲಿ ನಡೆಯಿತು.

ಈ ತಾ. 14 ರಲ್ಲಿ ಫ್ರೇಜರ್‌ಪೇಟೆ ಕ್ಯಾಂಪಿಗೆ ಹೋಗಿರುವ ಕಮಿಷನರವರು ತಾ. 21 ರಲ್ಲಿ ವಾಪಸು ಮಡಿಕೇರಿಗೆ ಬರುವರೆಂದು ತಿಳಿಯಬರುತ್ತದೆ.

ರೆಡ್ ಕ್ರಾಸ್ ಸಂಘದ ಕೊಡಗು ಲೋಕಲ್ ಸೆಂಟರಿನ ಕಮಿಟಿ ಮೀಟಿಂಗೊಂದು ಈ ತಾ. 9 ರಲ್ಲಿ ಮಡಿಕೇರಿಯಲ್ಲಿ ಕಮಿಷನರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೂರು ವಾರ ರಜೆಯಲ್ಲಿ ಇಂಗ್ಲೆಂಡಿಗೆ ಹೋಗಿದ್ದ ಕೊಡಗಿನ ಸಿವಿಲ್ ಸರ್ಜನರವರು ತಮ್ಮ ರಜೆಯನ್ನು ಒಂದು ವಾರ ಹೆಚ್ಚಿಸಿಕೊಂಡಿರುವರೆಂದು ತಿಳಿಯಬರುತ್ತದೆ.

ಉತ್ತರ ಕೊಡಗು ಎಡವನಾಡು ರೇಂಜಿನಲ್ಲಿ ತೊಂದರೆ ಕೊಡುತ್ತಿದ್ದ 'ಯಲನೂಂ ರೋಗ್' ಎಂಬ ಪುಂಡಾನೆಯನ್ನು ತಾ. 2-7-38 ರಲ್ಲಿ ಮೆ. ಬಿ. ಸಿದ್ದಣ್ಣನವರು ಮತ್ತು ಮೆ. ದಾಸಪ್ಪನವರು ಗುಂಡುಹೊಡೆದು ಕೊಂದಿರುವರಾಗಿ ತಿಳಿಯಬರುತ್ತೆ.

ಕೊಡಗು ಜಿಲ್ಲಾ ಕಾಂಗ್ರೆಸು ಕಮಿಟಿಯ ಮೀಟಿಂಗೊಂದು ಈ ತಾ. 13 ರಲ್ಲಿ ವೀರಾಜಪೇಟೆಯಲ್ಲಿ ಕಮಿಟಿಯ ಪ್ರೆಸಿಡೆಂಟರಾದ ಮೆ. ಐನಂಡ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಇದರ ವಿವರವು ಬರುವ ವಾರ ಪ್ರಕಟಿಸಲಾಗುವುದು.

ವೀರಾಜಪೇಟೆ ಆಸ್ಪತ್ರೆಯ ಅಸಿಸ್ಟೆಂಟ್ ಸರ್ಜನರಾದ ಡಾ. ಕೋದಂಡ ಕಾರ್ಯಪ್ಪನವರು ಈ ತಾ. 7 ರಲ್ಲಿ ತಮ್ಮ ಹುದ್ದೆಯ ಚಾರ್ಜನ್ನು ಡಾ. ಯಂ. ಬಿ. ನಾಯುಡುರವರಿಗೆ ಕೊಟ್ಟು, ಯಂ. ಡಿ. ಬಿ. ಯಸ್. ಪರೀಕ್ಷೆಗೆ ಓದಲಿಕ್ಕಾಗಿ ಮದ್ರಾಸಿಗೆ ಹೋಗಿರುವರಾಗಿ ತಿಳಿಯುತ್ತೇವೆ.

ಈ ತಾ. 8 ರಲ್ಲಿ ಶಾನಾಡಿ ಗ್ರಾಮದ ಮೆ. ಕುಂಞಾಯಂಡ ಚಂಗಪ್ಪನವರೂ,

ಕಳೆದ ವಾರ ಕಡಂಗಮರೂರು ಗ್ರಾಮದ ಮೆ. ಬಾಚೆಟ್ಟಿರ ಕಾರ್ಯಪ್ಪನವರೂ ಮತ್ತು ಈ ತಾ. 13 ರಲ್ಲಿ ಮೆ. ಪುಟ್ಟಿಚಂಡ ನೊಣ್ಣಪ್ಪನವರ ಪತ್ನಿಯವರೂ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೆ. ಪಿ. ಎ. ಬೆಳ್ಯಪ್ಪನವರು ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಕ್ಷರಾಗಿ ಆರಿಸಲ್ಪಟ್ಟ ಕಾರಣ, ಅಮ್ಮತ್ತಿನಾಡಿನವರು ಈ ತಾ. 2 ರಲ್ಲಿ ಅಮ್ಮತ್ತಿ ಶಾಲೆಯಲ್ಲಿ ಸೇರಿ ಅವರಿಗೊಂದು ಬಿನ್ನಹ ಪತ್ರವನ್ನು ಅರ್ಪಿಸಿ, ಟೀ ಪಾರ್ಟಿಯನ್ನು ಕೊಟ್ಟರೆಂದೂ, ತಾ. 6 ರಲ್ಲಿ ಹೆಬ್ಬಾಲೆ ಗ್ರಾಮಸ್ಥರು ಅವರಿಗಾಗಿ ಒಂದು ಸತ್ಕಾರ ಕೂಟವನ್ನು ನಡಿಸಿದರೆಂದೂ ತಿಳಿಯಬರುತ್ತದೆ.

ಅಸಿಸ್ಟೆಂಟ್ ಕಮಿಷನರವರ ಆಫೀಸಿನಲ್ಲಿ ಶಿರಸ್ತೆದಾರರಾದ ಮೆ. ಪಳಂಗಂಡ ಅಪ್ಪಯ್ಯನವರು ತಮ್ಮ ರಜವನ್ನು 2 ತಿಂಗಳು ಮುಂದುವರಿಸಿದ್ದರಿಂದ ಆ ಸ್ಥಳಕ್ಕೆ ಜ್ಯುಡಿಶಿಯಲ್ ಶಿರಸ್ತೆದಾರರಾಗಿದ್ದ ಮೆ. ಗುಂಡುರಾವ್‌ರವರನ್ನೂ, ವೀರಾಜಪೇಟೆ ಅಬ್ಕಾರಿ ಸಬ್ ಇನ್ಸ್‌ಪೆಕ್ಟರಾಗಿದ್ದ ಶ್ರೀ ಚೇಂದ್ರಿಮಾಡ ಗಣಪತಿಯವರನ್ನು ಜ್ಯುಡಿಶಿಯಲ್ ಶಿರಸ್ತೆದಾರರಾಗಿಯೂ, ಮೆ. ಆಲ್ಬರ್ಟ್‌ರವರನ್ನು ವೀರಾಜಪೇಟೆ ಅಬ್ಕಾರಿ ಸಬ್ ಇನ್ಸ್‌ಪೆಕ್ಟರಾಗಿಯೂ ನೇಮಿಸಿರುವರಾಗಿ ತಿಳಿಯಬರುತ್ತೆ.

ಮದ್ರಾಸು ಸರ್ಕಾರದ ಸ್ಥಳೀಯ ಸ್ವರಾಜ್ಯ ಸಂಸ್ಥೆಗಳ ಇಲಾಖೆಯ ಮಂತ್ರಿಯವರಾದ ಶ್ರೀಮಾನ್ ಬಿ. ಗೋಪಾಲರೆಡ್ಡಿಯವರು ಈ ತಾ. 19 ರಲ್ಲಿ ಕಣ್ಣನೂರಿನಿಂದ ವೀರಾಜಪೇಟೆ ಮಡಿಕೇರಿ ಮಾರ್ಗವಾಗಿ ಮಂಗಳೂರಿಗೆ ಹೋಗುವರೆಂಬ ವರ್ತಮಾನವಿತ್ತು. ಆದರೆ ತುರಿತ ಕೆಲಸ ಸಂಬಂಧ ಅವರು ತಮ್ಮ ಮಲಬಾರು ಮತ್ತು ದಕ್ಷಿಣ ಕನ್ನಡ ಪ್ರವಾಸವನ್ನು ತತ್ಕಾಲ ವಜ ಮಾಡಿರುವ ಕಾರಣ ತಾ. 19 ರಲ್ಲಿ ಕೊಡಗಿಗೆ ಬರುವುದಿಲ್ಲವೆಂದು ತಿಳಿಯಬರುತ್ತದೆ.

ನಾಲ್ಕು ಕರ ಹಾಕಿದ ಹಸು!

ಪೊನ್ನಂಪೇಟೆನಾಡು ಮಾಯಮುಡಿ ಗ್ರಾಮದ ಮೆ. ಅಪಟ್ಟೀರ ಬಿದ್ದಪ್ಪನವರ ಹಸುವೊಂದು ಈ ತಾ. 8 ರ ರಾತ್ರಿ ನಾಲ್ಕು ಕರಗಳನ್ನು ಹಾಕಿದ ವಿಶೇಷ ವಾರ್ತೆ ಬಂದಿದೆ. ಆ ಹಸುವು ಆ ದಿನ ಸಾಯಂಕಾಲ ಒಂದು ಹೆಣ್ಣು, ಒಂದು ಗಂಡು-ಹೀಗೆ ಎರಡು ಕರಗಳನ್ನು ಹಾಕಿದ್ದನ್ನು ಕೊಟ್ಟಿಗೆಯಲ್ಲಿ ಕೂಡಿದ್ದರು. ಮರು ದಿನ ಬೆಳಗ್ಗೆ ನೋಡುವಾಗ್ಗೆ ಪುನಹ ಒಂದು ಹೆಣ್ಣು, ಮತ್ತೊಂದು ಗಂಡು ಕರವನ್ನು ಹಾಕಿದ್ದಿತು; ಆದರೆ 2 ಹೆಣ್ಣು ಕರಗಳು ಸತ್ತು ಹೋದವು. ಉಳಿದ 2 ಗಂಡು ಕರಗಳು ಚೆನ್ನಾಗಿವೆ. ಚಿಕ್ಕ ಗಾತ್ರದ ಇದೇ ಹಸು ಮೂರು ವರ್ಷಗಳ ಹಿಂದೆ 2 ಕರಗಳನ್ನೂ, 1½ ವರ್ಷದ ಹಿಂದೆ ಒಂದು ಕರವನ್ನೂ ಹಾಕಿದ್ದಿತೆಂದು ತಿಳಿಯಬರುತ್ತದೆ.

ಹಿಂದೂದೇಶ.

ಈ ತಿಂಗಳಲ್ಲಿ ಬಂಗಾಳದ ಸರ್ಕಾರದವರು 111 ಡೆಟೆನ್ಯೂಗಳನ್ನು ಬಿಡುಗಡೆ ಮಾಡಿರುವರು.

ಚೀನಾ ದೇಶಕ್ಕೆ ಔಷಧ ಸಹಾಯ ಕಳುಹಿಸಲೆಂದು ತೆರೆಯಲಾದ ಚೈನಾ ಫಂಡಿಗೆ, ಇದಾಗಲೇ ರೂ. 11,153 ಸಂಗ್ರಹಿಸಲಾಗಿದೆ.

ಮದ್ರಾಸಿನಲ್ಲಿ ಇನ್ನು ಮುಂದೆ ಸ್ತ್ರೀ ಕೈದಿಗಳನ್ನು ಕರೆದುಕೊಂಡು ಹೋಗಲು ಸ್ತ್ರೀ ಕಾನ್‌ಸ್ಟೇಬಲುಗಳನ್ನು ನಿಯಮಿಸಬೇಕೆಂದು ಯೋಚಿಸುತ್ತಿರುವರು.

ರಾಷ್ಟ್ರಪತಿಗಳಾದ ಸುಭಾಷಚಂದ್ರರಿಗೆ ಇನ್‌ಫ್ಲುಯೆಂಜಾ ಜ್ವರವಾದ್ದರಿಂದ ಸಂಪೂರ್ಣ ವಿಶ್ರಾಂತಿಯು ಅವಶ್ಯವೆಂದು ಡಾಕ್ಟರರು ಸಲಹೆ ಕೊಟ್ಟಿದ್ದಾರೆ.

ಬಳ್ಳಾರಿ, ಕಡಪ, ಕರ್ನೂಲ್, ಅನಂತಪುರ, ಜಿಲ್ಲೆಗಳಲ್ಲಿರುವ ಕ್ಷಾಮ ಬಾಧೆಯ ನಿವಾರಣೆಗಾಗಿ ಧರ್ಮಾವರದಲ್ಲಿ ಒಂದು ಯಜ್ಞವನ್ನು ಮಾಡಲಿರುವರು.

ಜೋಧಪುರ ಸರ್ಕಾರದವರು ಸಂಸ್ಥಾನದ ಎಲ್ಲಾ ಸ್ಕೂಲುಗಳಲ್ಲಿಯೂ ನೂಲು ತೆಗೆಯುವುದು ಮತ್ತು ನೇಯುವುದು ಇವನ್ನು ಕಲಿಸಲು ಏರ್ಪಡಿಸಿರುತ್ತಾರೆ.

ಬ್ರಹ್ಮಪುತ್ರ ನದಿಗೆ ನೆರೆ ಬಂದು ಪೂರ್ವ ಬಂಗಾಳದಲ್ಲಿಯ ಲಕ್ಷಗಟ್ಲೆ ಜನರು ಮನೆ ಮಾರು ಕಳೆದುಕೊಂಡು ನಿರಾಧಾರಿಗಳಾಗಿದ್ದಾರೆ. ಬ್ರಹ್ಮಪುತ್ರ ನದಿಯು ಇನ್ನೂ ಏರುತ್ತಿದೆ.

ಹಿಂದುಸ್ಥಾನೀ ಭಾಷಾ ವಿರುದ್ಧ ಚಳವಳ ಹೂಡುವವರ ನಾಯಕರಾದ ಶ್ರೀ. ಸ್ವಾಮಿ ಅರುಣಗಿರಿ ನಾಥರ್ ಎಂಬವರು, ಒಂದು ವರ್ಷದ ಕಠಿಣ ಸಜೆಗೆ ಗುರಿಮಾಡಲ್ಪಟ್ಟಿದ್ದಾರೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆ, ರಾಷ್ಟ್ರಪತಿಗಳ ಅನಾರೋಗ್ಯದ ದೆಸೆಯಿಂದ ಜುಲೈ 23 ಕ್ಕೆ ಕೂಡುವದಾಗಿ ನಿಶ್ಚೈಸಿದೆ. ಮಹಾತ್ಮಾಜಿಯವರ ಒಪ್ಪಿಗೆಗಾಗಿ, ಶ್ರೀ. ಸುಭಾಸ್ ಭೋಸರು, ಅವರಿಗೆ ಈ ವಿಚಾರವನ್ನು ತಿಳಿಸಿದ್ದಾರೆ.

ಮೈಸೂರಿನಲ್ಲಿ 'ಪ್ರಜಾಶಕ್ತಿ' ಎಂಬ ಹೆಸರಿನಿಂದ ಪ್ರಕಟವಾಗುತ್ತಿದ್ದ 'ಪ್ರಜಾಮತ' ಪತ್ರಿಕೆಯ ಸುಮಾರು 300 ಪ್ರತಿಗಳನ್ನು ಅಲ್ಲಿಯ ಸ್ಥಳೀಯ ಪೇಟೆಯ ನಗರ ಪೋಲೀಸರು ವಶಪಡಿಸಿಕೊಂಡರು. ಸಂಸ್ಥಾನದಲ್ಲೆಲ್ಲಾ 'ಪ್ರಜಾಶಕ್ತಿ'ಗೆ ಬಹಿಷ್ಕಾರ ಹಾಕಲಾಗಿದೆ.

ಪೇಶಾವರದ ಡಿಸ್ಟ್ರಿಕ್ಟ್ ಬೋರ್ಡು, ಅದಕ್ಕೆ ಸಂಬಂಧಿಸಿದ ಎಲ್ಲಾ ಶಾಲೆ, ಆಫೀಸು, ಆಸ್ಪತ್ರೆ, ಕಟ್ಟಡಗಳ ಮೇಲೆ, ರಾಷ್ಟ್ರಧ್ವಜವನ್ನು ಹಾರಿಸುವಂತೆ ಮತ್ತು ಆ ಕಟ್ಟಡಗಳೊಳಗೆ ಗಡಿನಾಡಿನ ಗಾಂಧಿ ಗಾಫರ್ ಖಾನರ ಭಾವಚಿತ್ರವನ್ನಿರಿಸುವಂತೆ, ಒಂದು ಠರಾವು ಪಾಸುಮಾಡಿದೆ.

ಸಂದರ್ಭವಶಾತ್ತಾಗಿ, ಬಹು ಸಂಖ್ಯಾಕರು, ಫೆಡರೇಶನಿನ ಯೋಜನೆಯನ್ನು ಸ್ವೀಕರಿಸುವಂತಾದರೆ, ಕಾಂಗ್ರೆಸ್ ಪ್ರೆಸಿಡೆಂಟರಾದ ಶ್ರೀ. ಸುಭಾಷ್ ಚಂದ್ರಭೋಸರವರು, ತಮ್ಮ ಆ ಸ್ಥಾನಕ್ಕೆ ರಾಜಿ ಕೊಡಬಹುದು ಎಂದೂ, ಆ ಯೋಜನೆಯ ವಿರುದ್ಧ ಅವರು ಪ್ರಬಲವಾದ ಚಳವಳ ಹೂಡಬಹುದೆಂದೂ ಅವರದೇ ಒಂದು ಪ್ರಕಟಣೆಯಿಂದ ವ್ಯಕ್ತವಾಗುತ್ತದೆ.

ಸುಮಾರು 50 ರಿಂದ 60 ಸಾವಿರದವರೆಗೆ, ಸಂಯುಕ್ತ ಪ್ರಾಂತ್ಯದಲ್ಲಿ ಕೂಲಿಗಾರರಿರುವರಾಗಿಯೂ, ಅವರಿಗೆ ಪ್ರೌಢ ವಿದ್ಯಾಭ್ಯಾಸವನ್ನೀಯುವ ಏರ್ಪಾಡನ್ನು ಸರಕಾರವು, ಅಗತ್ಯ ಕೈಕೊಳ್ಳಬೇಕಾಗಿಯೂ ಕಾಶಿಯ ಜನರು ಕಳೆದ ವಾರ 'ಪ್ರೌಢ ವಿದ್ಯಾಭ್ಯಾಸದ ದಿನ'ವನ್ನು ಆಚರಿಸಿ, ಠರಾವು ಮಾಡಿದರು.

ಅಲ್ಪ ಸಂಬಳದ ಕೆಲಸಗಾರರು-ಮೇಲಿನ ಹೆಚ್ಚಿನ ಸಂಬಳದ ತರಗತಿಗೆ ಟ್ರಾನ್ಸ್‌ಫರ್ ಮಾಡಲ್ಪಟ್ಟು ಆ ಅವಧಿ ಮುಗಿದೊಡನೆಯೇ, ಅದೇ ಬದಲಿ ಕೆಲಸದ ಸಂಬಳದ ಮೇಲೆ, ರಜೆ ಪಡಕೊಳ್ಳುತ್ತಿರುವರು. ಇದು ಸಾರ್ವಜನಿಕ ಹಿತದೃಷ್ಟಿಯಿಂದ ಅನ್ಯಾಯವಾದದ್ದು. ಆದುದರಿಂದ ಮುಂದೆ ಇಂತಹ ವಿಚಾರದಲ್ಲಿ, ರಜೆಗೆ ಅನುಮತಿ ಕೊಡುವವರು ಹೆಚ್ಚಾದ ಜಾಗ್ರತೆ ವಹಿಸಬೇಕು,-ಎಂದು ಮದ್ರಾಸ್ ಸರಕಾರವು ಸೂಚಿಸಿದೆ.

ಬೀಹಾರ್ ಸರಕಾರವು, ಹಜಾರಿಬಾಗ್ ಸೆಂಟ್ರಲ್ ಜೈಲಿನಲ್ಲಿ, ಪ್ರೌಢ ವಿದ್ಯಾಭ್ಯಾಸವನ್ನು, ಕೈದಿಗಳಿಗೆ ಕೊಡಲು ಆರಂಭಿಸಿದೆ. 'ಬಿ' ಕ್ಲಾಸಿನ ಅನೇಕ ವಿದ್ಯಾವಂತರು, ಉಪಾಧ್ಯಾಯರಾಗಿ ಕೆಲಸ ಮಾಡಲು, ಮುಂದೆ ಬಂದಿದ್ದಾರೆ. ಕೈದಿಗಳಿಗೆ ಸ್ಲೇಟು, ಪುಸ್ತಕ ಮುಂತಾದ ಬೇಕಾದ ವಸ್ತುಗಳನ್ನು ಒದಗಿಸಿ ಕೊಡಲಾಗಿದೆ. ಪ್ರತಿಯೊಬ್ಬನಿಗೂ, ದಿನಕ್ಕೆ ಎರಡು ತಾಸುಗಳ ಅಭ್ಯಾಸವನ್ನು ಕೊಡಿಸಲಾಗುತ್ತಿದೆ. ಈಗ ಕಲಿಯುವ ಮುಂದಾದವರ ಸಂಖ್ಯೆ 300.

ವಿದೇಶ

ತಾ. 12 ರಲ್ಲಿ 18 ಜಪಾನು ವಿಮಾನಗಳು ವಾಚಂಗಪಟ್ಟದ ಮೇಲೆ 100 ಬಾಂಬುಗಳನ್ನು ಎಸೆದವು. 200 ಜನರು ಮೃತರಾದರು. ಹುಪೆ ಪ್ರಾಂತೀಕ ಆಸ್ಪತ್ರೆಯ ಮೇಲೆ ಬಾಂಬು ಹಾಕಿದ್ದರಿಂದ ಅದರ ಒಂದು ಭಾಗವು ಮುರಿದು ಬಿದ್ದು; ಅಲ್ಲಿಯ ಸಿಬ್ಬಂದಿಯವರೂ, ಅನೇಕ ಕಾಯಿಲಸ್ಥರೂ ಮಣ್ಣಿನೊಳಗೆ ಹೂಳಲ್ಪಟ್ಟರು.

14 ರಿಂದ 21 ವಯಸ್ಸಿನ ಚೀನದ ಹೆಣ್ಣು ಮಕ್ಕಳನ್ನು ಹಾಂಕಾಂಗಿನಲ್ಲಿ ಗುಲಾಮರೆಂದು ಮಾರಾಟ ಮಾಡುವ ವ್ಯಾಪಾರ ನಡೆದಿದೆ. ಅವರನ್ನು 8½ ಪೌಂಡಿನಿಂದ 17 ಪೌಂಡಿನ ವರೆಗೆ ಮಾರುವರು. ಈ ವ್ಯಾಪಾರವು ಗುಪ್ತ ರೀತಿಯಿಂದ ನಡೆದಿದ್ದು ಹೆಣ್ಣು ಮಕ್ಕಳನ್ನು ಕದ್ದು, ಮುಚ್ಚಿ ಮನೆಗಳಿಂದ ಹಿಡಿಸಿಕೊಂಡು ಹೋಗಿ ಕೊರಳಲ್ಲಿ ಬೆಲೆಯ ಚೀಟಿ ಕಟ್ಟಿ ಬಿಡುವರು.

ಪಂ. ಜವಹರಲಾಲ ನೆಹರುಗಳು ಬಹಳವಾಗಿ ದಣಿದಿರುವರು. ಕಳೆದ ಗುರುವಾರ ಲಂಡನ್ ನಗರದ ಕ್ವೀನ್ಸ್ ಹಾಲ್‌ನಲ್ಲಿ ಭಾಷಣ ಮಾಡಿದರು. ಚೈನಾ ಔಷಧ ಸಹಾಯ ನಿಧಿಗಾಗಿ 200 ಪೌನುಗಳನ್ನು ಸಂಗ್ರಹಿಸಿದರು. ಅದೇ ದಿನ, ಜವಹರಲಾಲರ ಸಹಿಯಿದ್ದ ಗಾಂಧಿಟೊಪ್ಪಿಯೊಂದು, 7 ಪೌನುಗಳಿಗೆ ಮಾರಾಟವಾಯಿತು.

ಲಂಡನ್ನಿಗೆ ತೆರಳಿರುವ ಶ್ರೀ. ಜವಹರ್‌ಲಾಲರು ಅಲ್ಲಿಗೆ ಪ್ರವೇಶಿಸಿದಂದಿನಿಂದ, ಅವರನ್ನು ನೋಡಲೂ, ಮಾತನಾಡಲೂ ಬರುವ ಮಂದಿಯ ಸಂಖ್ಯೆ ಅತ್ಯಧಿಕವಾಗಿ, ಅವರಿಗೆ ಎಳ್ಳಷ್ಟೂ ವಿರಾಮವಿಲ್ಲದಾಗಿದೆ. ಒಂದೆಡೆ, ಟೆಲಿಫೋನಿನ ಕರೆಗಳಿಗಾಗಿ ಗಮನವೀಯಲು ಅದನ್ನು ಕೈಯಲ್ಲೇ ಹಿಡಿದುಕೊಂಡಿದ್ದು, ಉತ್ತರಿಸುತ್ತಾ ಇರಬೇಕಾಗಿದೆ. ಇನ್ನೊಂದೆಡೆ ಭೇಟಿಗಳ ಕಾಟ; ಭಾಷಣಗಳ ಮೇಲಾಟ. ಪಂಡಿತರು ಇದರಿಂದ ತುಂಬಾ ಬಳಲಿರುವರು.

ಮಡಿಕೇರಿ ಮುನ್ಸೀಫ್ ಕೋರ್ಟಿನಲ್ಲಿ.

1938ನೇ ಇಸವಿ ಶಿ. ಮಿ. ನಂ. 100.

ಅರ್ಜಿದಾರ. ಪಟ್ಟಮಾಡ ಕೆ. ಅಪ್ಪಯ್ಯ.

V. S.

ಎದ್ರಿ-ಪಟ್ಟಮಾಡ ನಂಜಪ್ಪ.

ಮೇಲ್ಕಂಡ ಅರ್ಜಿದಾರನು ಪೌತಾದ ಪಟ್ಟಮಾಡ ಕುಶಾಲಪ್ಪನವರಿಗೆ ಸನ್ ಲೈಫ್ ಇನ್ಶ್ಯೂರೆನ್ಸ್ ಕಂಪನಿಯಿಂದ ಬರಬೇಕಾದ 78-4-0 ರೂಪಾಯಿಗಳ ವಸೂಲಾತಿ ಬಗ್ಗೆ ತನಗೆ 1925ನೇ ಇಸವಿ XXXIXನೇ ನಂಬರು ಆಕ್ಟ್ ಮೇರೆ ಸರ್ಟಿಫಿಕೇಟು ಕೊಡಿಸಿ ಕೊಡಬೇಕಾಗಿ ಈ ಕೋರ್ಟಿಗೆ ಅರ್ಜಿದಾಸ್ತು ಮಾಡಿರುವುದರಿಂದ ಸದರಿ ಅರ್ಜಿ ಮೇರೆ ಅರ್ಜಿದಾರನಿಗೆ ಯಾಕೆ ಸರ್ಟಿಫಿಕೇಟು ಕೊಡ ಕೂಡದೆಂಬುವಕ್ಕೆ ಸಬಬು ತೋರಿಸಲು ತಾರೀಕು 5-8 1938ಕ್ಕೆ ಹಿಯರಿಂಗ್ ಇಟ್ಟಿರುತ್ತೆಯಾದ್ದರಿಂದ ತಕರಾರುದಾರರು ಸದರಿ ದಿನ ಹಗಲು 11 ಗಂಟೆಗೆ ಹಾಜರಾಗಿ ತಮ್ಮ ತಕರಾರುಗಳನ್ನು ಹೇಳಿಕೊಳ್ಳತಕ್ಕದ್ದು.

ಪಿ. ಯಂ, ನಾಣಯ್ಯ,
(ಮುನ್ಸೀಫ್, ಮಡಿಕೇರಿ.)

ತಾ. 7-7-1638.

ಪ್ರಕಟಣೆ.

ಹೊಸೂರು ಗ್ರಾಮದ ಶ್ರೀ. ಪಂದ್ಯಂಡ ಬೆಳ್ಯಪ್ಪನವರ ಜಾಗದಿಂದ ತಾರೀಕು 18-6-38ರ ಸಾಯಂಕಾಲ 5 ಗಂಟೆ ಸಮಯಕ್ಕೆ ಈ ಕೆಳಗೆ ಕೊಟ್ಟಿರುವ ಗುರ್ತುಗಳಿರುವ ಒಂದು ಹಸು ಮತ್ತು ಅದರ ನಾಲ್ಕು ತಿಂಗಳ ಕರ ಸಹ ಪರಾರಿಯಾಗಿವೆ. ಪತ್ತೆ ಹಚ್ಚಿ ಈ ಕೆಳಗಿನ ಅಡ್ರೆಸಿಗೆ ತಿಳಿಸಿದವರಿಗೆ 2 ರೂಪಾಯಿ ಬಹುಮಾನ ಕೊಡಲಾಗುವುದು.

1. ಬೂದು ವರ್ಣದ 1 ಅಡಿ ಉದ್ದದ ಬಾಚ ಕೋಡಿನ ಸುಮಾರು 3 ಅಡಿ ಎತ್ತರದ ಹಸು.

2. ಕೆಂಪು ವರ್ಣದ ಹೊಟ್ಟೆಯ ಅಡಿಯಲ್ಲಿ ಮತ್ತು ಮುಖದಲ್ಲಿ ಬಿಳಿ ಪಟ್ಟೆ ಇರುವ ಹೆಣ್ಣು ಕರ.

ಪಂದ್ಯಂಡ ಬೆಳ್ಯಪ್ಪನವರ
ವ್ಯಾಜ್ಯ ಮಾಡುವ ಗೌಡುಗಳ
ಬಳ್ಳಡ್ಕ ಪೋವಪ್ಪ,
ಹೊಸೂರು ಗ್ರಾಮ,
ಅಮ್ಮತ್ತಿ.

ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗು.

(೫ನೇ ಪುಟದಿಂದ ಸಾಗಿದ್ದು.)

29. ಬೋರ್ಡಿನ ಅಧ್ಯಕ್ಷರ, ಉಪಾಧ್ಯಕ್ಷರ ಮತ್ತು ಮೆಂಬರುಗಳ ಭತ್ಯವನ್ನು ನಿಶ್ಚಯಿಸುವ ಬಗ್ಗೆ ಚೀಫ್ ಕಮಿಷನರವರ ಪತ್ರದಲ್ಲಿ–ಅಧ್ಯಕ್ಷರಿಗೆ ಮೈಲೇಜ್ 6 ಆಣೆ, ದಿನ ಭತ್ಯ 5 ರೂ; ಉಪಾಧ್ಯಕ್ಷರಿಗೆ ಮೈಲೇಜ್ 6 ಆಣೆ ದಿನ ಭತ್ಯ 4 ರೂ. ಮತ್ತು ಉದ್ಯೋಗಸ್ಥರಲ್ಲದ ಮೆಂಬರುಗಳಿಗೆ ಮೈಲೇಜ್ 3 ಆಣೆ ದಿನ ಭತ್ಯ 2 ರೂ. ಮೇರೆಯೂ, ಮೆಂಬರುಗಳು ಮೈಲೇಜ್ ಮತ್ತು ಬಸ್ಸ್ ಚಾರ್ಜು + ದಿನ ಭತ್ಯ–ಇದರಲ್ಲಿ ಯಾವುದು ಕಡಿಮೆಯಾಗುವದೋ ಅದನ್ನು ತೆಗೆದುಕೊಳ್ಳಬೇಕೆಂದು ಸೂಚಿಸಿದ್ದನ್ನು ಅಂಗೀಕರಿಸಿದ್ದಲ್ಲದೆ ಬಸ್ಸ್ ಇಲ್ಲದ ಸ್ಥಳಗಳಿಂದ ಪ್ರಯಾಣ ಮಾಡುವವರಿಗೆ ಮೈಲೇಜು ಕೊಡುವಂತೆ ಮಾಡಬೇಕೆಂದು ಚೀಫ್ ಕಮಿಷನರನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

30. ಅಸಿಸ್ಟೆಂಟ್ ಕಮಿಷನರವರ ಶಿಫಾರಸ್ಸು ಮೇರೆ ಬೋಯಿಕೇರಿಯ ನಿವಾಸಿಗಳ ಉಪಯೋಗಕ್ಕಾಗಿ ತೆಗೆಸುವ ಬಾವಿಗೆ ರೂ. 100 ಕೊಡಲು ತೀರ್ಮಾನವಾಯಿತು.

31. ಅಸಿಸ್ಟೆಂಟ್ ಕಮಿಷನರವರ ಶಿಫಾರಸ್ಸು ಮತ್ತು ಮೆ. ಸಿ. ಪೂಣಚ್ಚನವರ ಒತ್ತಾಸೆ ಮೇರೆ ಗ್ರಾಮಾಭಿವೃದ್ಧಿ ಫಂಡಿನಿಂದ ಕುಂಜಿಲಗೇರಿ ಶಾಲೆಗೆ ತೆಗೆಸುವ ಬಾವಿಗೆ ರೂ. 100 ಬೋರ್ಡಿನಿಂದ ಕೊಡಲು ತೀರ್ಮಾನವಾಯಿತು.

32. ಕಮಿಷನರವರ ಶಿಫಾರಸ್ಸು ಮತ್ತು ಮೆ. ಬಿ. ಮಾಚಯ್ಯನವರ ಒತ್ತಾಸೆ ಮೇರೆ ಭಾಗಮಂಡಲದಿಂದ ನಾಪೋಕ್ಲಿಗೆ ಹೋಗುವ ರಸ್ತೆಯ ರಿಪೇರಿಗಾಗಿ 200 ರೂಪಾಯಿಯ ಒಳಗೆ ತನಿಖೆ ನಡೆಸಿದ ನಂತರ ಕೊಡಲು ತೀರ್ಮಾನವಾಯಿತು.

33. ಕಮಿಷನರವ ಶಿಫಾರಸ್ಸು ಮತ್ತು ಮೆ. ಕೆ. ಗಣಪತಿಯವರ ಒತ್ತಾಸೆ ಮೇರೆ ಗ್ರಾಮಾಭಿವೃದ್ಧಿ ಫಂಡಿನಿಂದ ಮಾಡಲ್ಪಡುವ ನೆಮ್ಮಲೆ ತೆರಾಲು ರಸ್ತೆಗೆ ರೂ 300 ಕೊಡಬಹುದೆಂದು ತೀರ್ಮಾನವಾಯಿತು.

34. ಅಸಿಸ್ಟೆಂಟ್ ಕಮಿಷನರವರ ಶಿಫಾರಸ್ಸು ಮೇರೆ ಕೂಡಿಗೆ ಉತ್ತಮ ಜೀವನ ಸಂಘಕ್ಕೆ ಗ್ರಾಮಸ್ಥರ ಉಪಯೋಗಕ್ಕಾಗಿ 4 ದೀಪಗಳನ್ನು ಪಡೆದುಕೊಡಲು ರೂ. 25 ಮಂಜೂರುಮಾಡಲಾಯಿತು.

35. ಎಕ್ಸಿಕ್ಯುಟಿವ್ ಇಂಜಿನೀಯರವರ ಶಿಫಾರಸ್ಸು ಮೇರೆ ಹುದಿಕೇರಿ ತಾಲಾ ಕಟ್ಟಡದ ರಿಪೇರಿ ಬಗ್ಗೆ 300 ರೂಪಾಯಿ ಕೊಡಲು ತೀರ್ಮಾನವಾಯಿತು.

36. ಸೋಮವಾರಪೇಟೆ ಆಸ್ಪತ್ರೆಗೆ ಒಂದಕ್ಕೆ 48 ರೂ. ಕ್ರಯದ 14 ಮಂಚಗಳನ್ನು ಕೊಡಬೇಕೆಂಬ ಸಿವಿಲ್ ಸರ್ಜನ್‌ರವರ ಶಿಫಾರಸ್ಸಿನ ಮೇರೆ 3 ಮಂಚಗಳಿಗಾಗಿ ರೂ. 144 ಮಂಜೂರಾಯಿತು.

37. ಮೆ. ಸಿ. ಯಂ. ಪೂಣಚ್ಚನವರ ಸೂಚನೆ ಮೇರೆ ಮೂರ್ನಾಡು ಆಸ್ಪತ್ರೆಗೆ ತಿಂಗಳಿಗೆ ರೂ. 20 ಸಂಬಳದ ಮತ್ತು 3 ರೂ. ಮನೆಬಾಡಿಗೆ ಎಲೋವನ್ಸಿನ ಒಬ್ಬ ತ್ರೈಯಿನ್ಡ ನರ್ಸನ್ನು ನೇಮಕಮಾಡಲು ತೀರ್ಮಾನವಾಯಿತು.

38. ಮೆ. ಸಿ. ಯಂ. ಪೂಣಚ್ಚನವರ ಸೂಚನೆ ಮೇರೆ ಮೂರ್ನಾಡಿನ ಇಂಡಿಯನ್ ಆಫೀಸರ್ಸ್ ಕ್ವಾರ್ಟರ್ಸ್‌ನ್ನು ಆಹಾರ ಯೋಜನೆ ಇಲ್ಲದ ವಾರ್ಡಾಗಿ ಮಾಡಲು ಬಿಟ್ಟುಕೊಡುವಂತೆ ಸರ್ಕಾರವನ್ನು ಕೇಳಿಕೊಳ್ಳಲು ತೀರ್ಮಾನವಾಯಿತು.

39. ಮೆ. ಸಿ. ಯಂ. ಪೂಣಚ್ಚನವರ ಸೂಚನೆ ಮೇರೆ ಗಾಳಿಬೀಡು ಹೊಳೆಗೆ ಗಾಳಿಬೀಡು ಸ್ಕೂಲಿನ ಹತ್ತಿರ ಒಂದು ಪಾಲ ಹಾಕಲು ರೂ. 20 ಮಂಜೂರಾಯಿತು.

40. ಮೆ. ಸಿ. ಯಂ. ಪೂಣಚ್ಚನವರ ಸೂಚನೆ ಮೇರೆ ಸರ್ಕಾರವು ಈಗ ಬೋರ್ಡಿಗೆ ಕೊಡುತ್ತಿರುವ ವಂತಿಗೆಯ ಜೊತೆಗೆ 5000 ರೂಪಾಯಿಗಳಿಗೆ ಕಮ್ಮಿ ಇಲ್ಲದ ಗ್ರಾಂಟನ್ನು ಕೊಡುವಂತೆ ಸರ್ಕಾರವನ್ನು ಕೇಳಿಕೊಳ್ಳಲು ತೀರ್ಮಾನವಾಯಿತು.

41. ಮೆ. ಸಿ. ಯಂ. ಪೂಣಚ್ಚನವರ ಸೂಚನೆಯಂತೆ ಪ್ರಾಂತೀಕ ಸರ್ಕಾರಕ್ಕೆ 'ಸೇನಿಟೇಶನ್ ಮತ್ತು ವೇಕ್ಸಿನೇಶನ್' ಇಲಾಖೆಗೆ ಬೋರ್ಡಿನಿಂದ ಕೊಡಲ್ಪಡುವ ವಂತಿಗೆಯನ್ನು ನಿಲ್ಲಿಸಬೇಕೆಂದು ಸರಕಾರವನ್ನು ಕೇಳಲು ತೀರ್ಮಾನವಾಯಿತು.

42. ಮೆ. ಕೆ. ಯಸ್. ಗಣಪತಿಯವರ ಸೂಚನೆ ಮೇರೆ ಚೆಟ್ಟಿಮಾನಿ ಶಾಲೆಗೆ ಡಿಪ್ಯುಟಿ ಇನ್ಸ್‌ಪೆಕ್ಟರವರು ಶಿಫಾರಸ್ಸು ಮಾಡಿದರೆ ಒಬ್ಬ ವಾಲಂಟೀಯರ್ ಟೀಚರನ್ನು ನೇಮಿಸಲು ತೀರ್ಮಾನವಾಯಿತು.

43. ಮೆ. ಕೆ. ಯಸ್ ಗಣಪತಿಯವರ ಸೂಚನೆ ಮೇರೆ ಇನ್ನು ಮುಂದಕ್ಕೆ ಡಿ. ಬೋರ್ಡಿನ ಜವಾನರಿಗೆ ಕೈನೂಲಿನ ಖಾದಿಯ ಉಡುಪುಗಳನ್ನೇ ಕೊಡುವಂತೆ ತೀರ್ಮಾನವಾಯಿತು.

44. ಮೆ. ಬೆಟ್ಟೋಳಂಡ ಮಾಚಯ್ಯನವರ ಸೂಚನೆ ಮೇರೆ ಕರಡ ಸ್ಕೂಲಿನಿಂದ ಅರಪಟ್ಟು ಗ್ರಾಮಕ್ಕಾಗಿ ಬಾಪಲಿ, ಕೈಕಾಡು ರೋಡಿಗೆ 2 ಮೈಲು ದೂರದ ಹೊಸ ರಸ್ತೆ ಮಾಡಿಸಲು ರೂ. 50 ಮಂಜೂರಾಯಿತು.

45. ಮೆ. ಬೆಟ್ಟೋಳಂಡ ಮಾಚಯ್ಯನವರ ಸೂಚನೆ ಮೇರೆ ಕಡಗ, ಬಿಳಿ ಮತ್ತು ಚಾಮ ಹೊಳೆಗಳಿಗೆ ಪಾಲ ಹಾಕಿಸಲು ರೂ. 25 ಮಂಜೂರಾಯಿತು.

46. ಸಂಪಾಜೆಯಲ್ಲಿ ಇಡೀ ವರ್ಷ ಹುಂಗಾಮಿ ಆಸ್ಪತ್ರೆ ಇಡಬೇಕೆಂಬ ಪತ್ರವನ್ನು ಓದಿ ಮಂಜೂರುಮಾಡಲಾಯಿತು.

47. ಮೆ. ಸಿ. ಯಂ. ಪೂಣಚ್ಚನವರ ಸೂಚನೆ ಮೇರೆ ಚೈನಾ ಎಂಬ್ಯುಲೆನ್ಸ್ ಫಂಡಿಗೆ ರೂ. 25 ಮಂಜೂರುಮಾಡಲಾಯಿತು.

48. ಮೆ. ಯಸ್. ಯನ್. ರಾಮಶೆಟ್ಟಿಯವರ ಸೂಚನೆ ಮೇರೆ ಮದ್ರಾಸಿನ ಸ್ಥಳೀಯ ಆಡಳಿತೆ ಇಲಾಖೆಯ ಮಂತ್ರಿಗಳಾದ ಮಾನ್ಯ ಗೋಪಾಲ ರೆಡ್ಡಿಯವರು ತಾ. 19ರಲ್ಲಿ ಮಡಿಕೇರಿಗೆ ಬರುವಾಗ ಅವರಿಗೆ ಒಂದು ಬಿನ್ನವತ್ತಳೆಯನ್ನರ್ಪಿಸುವಂತೆ ತೀರ್ಮಾನಿಸಿ, ಇದರ ತಯಾರಿಕೆ ಬಗ್ಗೆ ಶ್ರೀಯುತರುಗಳಾದ ಪಿ. ಐ. ಬೆಳ್ಯಪ್ಪ, ಸಿ. ಯಂ. ಪೂಣಚ್ಚ ಮತ್ತು ಯಂ. ಯಸ್. ಸೋಮಯ್ಯನವರುಗಳಿಂದ ಕೂಡಿದ ಒಂದು ಸಬ್ ಕಮಿಟಿಯನ್ನೂ ನೇಮಕಮಾಡಲಾಯಿತು.

ತನಿಖೆ ಬಗ್ಗೆ ಇಡಲ್ಪಟ್ಟ ಠರಾವುಗಳು.

1. ಪೊನ್ನಂಪೇಟೆ ಕಾನೂರು ರಸ್ತೆಯಿಂದ ನಡಿಕೇರಿ ಗ್ರಾಮಕ್ಕೆ ಹೋಗುವ 2 ಮೈಲು ರಸ್ತೆಗೆ ರೂ. 50 ಮಂಜೂರು ಮಾಡುವ ವಿಷಯ. ಸೂಚಕರು ಕಾಕಮಾಡ ಗಣಪತಿಯವರು.

2. ಪೊನ್ನಂಪೇಟೆ ಹುದಿಕೇರಿ ರಸ್ತೆಯಿಂದ ಬೇಗೂರು ಜೇಣಿವಾಡ ಗ್ರಾಮಕ್ಕೆ ಹೋಗುವ ರಸ್ತೆಗೆ ರೂ 500 ಕೊಡುವ ವಿಷಯ. ಸೂಚಕರು ಮೆ. ಕಾಕಮಾಡ ಗಣಪತಿಯವರು.

3. ಜನಾರ್ದನ ಹಳ್ಳಿಯ ಸ್ವಂತ ಶಾಲೆಗೆ ಗ್ರಾಂಟು ಕೊಡಬೇಕೆಂಬ ವಿಷಯ.

4. ಕೋಣಗೇರಿ ರಸ್ತೆಯ ಬದಿಯಲ್ಲಿರುವ ಕೆರೆಯ ರಿಪೇರಿಗೆ ರೂ. 100 ಕೊಡಬೇಕೆಂಬ ವಿಷಯ. ಸೂಚಕರು ಕಾಕಮಾಡ ಗಣಪತಿಯವರು.

5. ಕುತ್ತುನಾಡು ಜನರಿಗೆ ಹುದಿಕೇರಿ ಸಂತೆಗೆ ಹೋಗಲು ಅನುಕೂಲವಾಗುವಂತೆ ಕುತ್ತುನಾಡು ಹೊಳೆಗೆ ಒಂದು ತಂತಿ ಹಗ್ಗವನ್ನು ಕೊಡುವ ವಿಷಯ. ಸೂಚಕರು ಮೆ. ಕಾಕಮಾಡ ಗಣಪತಿಯವರು.

6. ಬಂದ ಶಾಲೆಗೆ ಒಂದು ಬಾವಿ ತೋಡಲಿಕ್ಕಾಗಿ ರೂ. 400 ಮಂಜೂರು ಮಾಡುವ ವಿಷಯ. ಸೂಚಕರು ಅಜ್ಜಿಕುಟ್ಟಿರ ಪೊನ್ನಪ್ಪನವರು.

7. ಮಾಯಮುಡಿ ಶಾಲೆಯ ಬಾವಿ ರಿಪೇರಿಗಾಗಿ ರೂ. 100 ಕೊಡುವ ವಿಷಯ. ಸೂಚಕರು ಅಜ್ಜಿಕುಟ್ಟಿರ ಪೊನ್ನಪ್ಪನವರು.

8. ಈಗಿನ ಭಾಗಮಂಡಲ ಶಾಲೆಯನ್ನು ಹೈಯರ್ ಎಲಿಮೆಂಟರಿ ಶಾಲೆಯಾಗಿ ಮಾಡುವ ವಿಷಯ. ಸೂಚಕರು ಮೆ. ಕೆ. ಎಸ್. ಗಣಪತಿಯವರು

9. ಕೊಟ್ಟೂರು ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಬೆತ್ತದ ಕೆಲಸದ ತರಗತಿಯನ್ನು ತೆರೆಯುವ ವಿಷಯ. ಸೂಚಕರು ಮೆ. ಕೆ. ಯಸ್. ಗಣಪತಿಯವರು.

10. ಕೋಕೇರಿ ರಸ್ತೆಯ ರಿಪೇರಿಗಾಗಿ ರೂ. 50 ಕೊಡಬೇಕೆಂಬ ಮೆ. ಬೆಟ್ಟೋಳಂಡ ಮಾಚಯ್ಯನವರ ಠರಾವನ್ನು ತನಿಖೆಗೆ ಇಡಲಾಗಿದೆ. ಸಕೇನ.]

ಬಾತ್ಮಿ.

ಮುಜ್ರಾಯಿ ಇಲಾಖಾ ಕಮಿಟಿ ಮೆಂಬರರ ಚುನಾವಣೆ.

ಅಯ್ಯಾ,

ಕೊಡಗು ಮುಜ್ರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ಕಮಿಟಿಯಲ್ಲಿ ಕಿಗ್ಗಟ್ಟುನಾಡು ತಾಲೋಕಿನ ಕೊಡಗರ ಪರ ಖಾಲಿ ಇದ್ದ ಸ್ಥಳಕ್ಕೆ ಈ ತಾ. 6 ರಲ್ಲಿ ವೀರಾಜಪೇಟೆಯಲ್ಲಿ ಚುನಾವಣೆ ನಡೆಯಿತು. ಕಿಗ್ಗಟ್ಟುನಾಡು ತಾಲೋಕಿನವರ ಪರ ಚುನಾವಣೆಯು ಆ ತಾಲೋಕಿನ ಹೊರಗೆ ಇರುವ ವೀರಾಜಪೇಟೆಯಲ್ಲಿ ನಡೆದದ್ದು ಆಶ್ಚರ್ಯವೇ ಸರಿ. ಇದಕ್ಕಿಂತ ಮುಖ್ಯವಾದ ಡಿಸ್ಟ್ರಿಕ್ಟ್ ಬೋರ್ಡು ಮತ್ತು ಕೌನ್ಸಿಲು ಚುನಾವಣೆಗಳು ಕಿಗ್ಗಟ್ಟುನಾಡಿನೊಳಗೇ ಗೋಣಿಕೊಪ್ಪಲು, ಪೊನ್ನಂಪೇಟೆ, ಹುದಿಕೇರಿ ಮತ್ತು ಶ್ರೀಮಂಗಲದಲ್ಲಿ ನಡೆಯುವಾಗ್ಗೆ ಮುಜ್ರಾಯಿ ಇಲಾಖೆ ಚುನಾವಣೆ ವೀರಾಜಪೇಟೆಯಲ್ಲಿ ನಡೆಯಲು ಕಾರಣವೇನು? ಕಿಗ್ಗಟ್ಟುನಾಡಿನವರಿಗೆ ವೀರಾಜಪೇಟೆಗೆ ಬರಲು ಎಷ್ಟು ತೊಂದರೆ ಇದೆ? ಆ ತಾಲೋಕಿನ ಮಧ್ಯಸ್ಥಳದಲ್ಲಿ ಓಟು ತೆಗೆದರಲ್ಲವೇ ಅಲ್ಲಿಯ ಜನರಿಗೆಲ್ಲಾ ಚುನಾವಣೆಯಲ್ಲಿ ಭಾಗವಹಿಸಲು ಅನುಕೂಲ. ಈಗಿನ ಚುನಾವಣೆ ಮೇರೆ ಕಿಗ್ಗಟ್ಟುನಾಡು ತಾಲೋಕಿನ ಪರ ಮೆಂಬರನ್ನು ಎಡೆನಾಲ್ಕುನಾಡಿನವರು ಆರಿಸಿದಂತಾಯಿತು. ಅಲ್ಲದೆ ಓಟು ಕೊಡುವಾಗ್ಯೆ ತಾನು ಓಟು ಕೊಡುವ ಉಮೇದುವಾರರ ಹೆಸರನ್ನು ಬಹಿರಂಗವಾಗಿ ಹೇಳಬೇಕಾಗಿದೆ. ಇದು ಗುಟ್ಟಿನ ನ್ಯಾಯವಾದ ಓಟಾಗಲಿಲ್ಲ ದಾಕ್ಷಿಣ್ಯದ ಓಟಾಯಿತು. ಓಟನ್ನು ಗುಟ್ಟಿನಲ್ಲಿ ಗುರುತು ಮಾಡುವಂಥಾಗಬೇಕು. ಇದು ಮಾತ್ರವಲ್ಲ, ಈ ಚುನಾವಣೆಯಲ್ಲಿ ಮಧ್ಯಾಹ್ನದ ವರೆಗೆ ಕೊಡಗರನ್ನೇ ಓಟು ಕೊಡಲು ಬಿಟ್ಟು, ನಂತರ ಕೊಡಗೇತರ ಹಿಂದೂಗಳನ್ನೂ ಓಟು ಕೊಡಲು ಬಿಟ್ಟಿದ್ದರ ಕಾರಣವೇನು? ಇವನ್ನೆಲ್ಲಾ ವಿಚಾರಿಸಿ, ದೇವಸ್ಥಾನ ಕಮಿಟಿಯವರು ಕುಂದು ಕೊರತೆಗಳನ್ನು ವಹಣೆ ಹೋಗಲಾಡಿಸುವರಾಗಿ ಕೋರಿಕೆ.

'ಕಿಗ್ಗಟ್ಟುನಾಡಿನವ.'

ಸೂಚನೆ:-'ಸಹಕಾರಿ ಸಂಸ್ಥೆಯೂ ಉದ್ಯೋಗಸ್ಥರೂ' 'ಕುತ್ತುನಾಡು ಹೊಳೆ' ಮತ್ತು 'ಅಮ್ಮತ್ತಿನಾಡಿನವರು ಶ್ರೀ. ಪಿ. ಐ. ಬೆಳ್ಯಪ್ಪನವರಿಗೆ ಕೊಟ್ಟ ಬಿನ್ನಹ ಪತ್ರ'ವನ್ನು ಪ್ರಕಟಿಸಬೇಕೆಂದು ಅಲ್ಲಿಯ ಸ್ವಾಗತಾಧ್ಯಕ್ಷರು ಕಳುಹಿಸಿದ ಚಾತ್ರಿ ಇವುಗಳನ್ನು ಸ್ಥಳಸಂಕೋಚದಿಂದ ಈ ವಾರ ಪ್ರಕಟಿಸಲಾಗಲಿಲ್ಲ. ಅದನ್ನು ಬರುವ ವಾರ ಪ್ರಕಟಿಸಲಾಗುವುದು.

ಸಂ. ಕೊ.]

ಚೈನಾದ ವಿಷಮ ಪರಿಸ್ಥಿತಿ.

ಜಪಾನೀಯರು ದಕ್ಷಿಣಕ್ಕೆ ಒತ್ತಿಬಂದ ಹಾಗೆ ಚೀನೀಯರು ಯಂಗ್‌ಸೀ ನದಿಯಲ್ಲಿ ಒಳಪ್ರಾಂತಕ್ಕೆ ಹೋಗಿ ವಾಸಿಸಲು ಯತ್ನಿಸುತ್ತಿದ್ದಾರೆ. ಒಂದು ಕಡೆ ನದಿಯ ಅಪೂರ್ವ ನೆರೆ, ಇನ್ನೊಂದು ಕಡೆ ಸಿಡಿಮದ್ದಿನ ಚೆಲ್ಲಾಟಗಳಿಂದ ಸೋತು ಸುಣ್ಣಾಗಿ ಹಾಂಕೋದಿಂದ ಇಚಾಂಗಕ್ಕೆ ಕಡಿದ 250 ಮೈಲು ಉದ್ದದ ಹೊಸ ಮಾರ್ಗದಲ್ಲಿ 30 ಮೈಲು ಉದ್ದದ ಒಂದು ದಂಗಡವು ಹೋಗುತ್ತಿರುವುದನ್ನು ಕಂಡವರಿರುವರು. ಕತ್ತೆ, ಕುದುರೆ ರಿಕ್ಷಾ, ಎತ್ತು ಬಂಡಿ ಇತ್ಯಾದಿ ಹಲವು ವಾಹನಗಳ ಮೇಲೆ ತಮ್ಮ ಅಳಿದುಳಿದ ಸೊತ್ತನ್ನು ಹೊರಿಸಿ, ಹೆಂಗಸರು ಮಕ್ಕಳು ಕೂಡ ದಾರಿಯಲ್ಲಿ ಆ ಸಾಮಾನನ್ನು ಹರಡಿ ಅದರ ಮೇಲೆಯೇ ನಿದ್ದೆಹೋಗುವ ಕೃಪೆಯುತ್ಪಾದಕ ನೋಟವು ಅಪರೂಪದ್ದು. ಅಸಂಖ್ಯಾತ ಜನರು ದೋಣಿಗಳನ್ನು ಕಟ್ಟಿಯುತ್ತಾ ಯಂಗ್‌ಸೀ ನದಿಯ ದಂಡೆಯ ಮೇಲೆ ಬಂದು ಸೇರಿರುವರು. ಇವರೆಲ್ಲ ಒಳ ಪ್ರಾಂತದಲ್ಲಿ ಹೊಸ ಜಾಗಗಳಲ್ಲಿ ವಸತಿ ಮಾಡಿ, ಅದರಲ್ಲಿ ಕೃಷಿಯಿಂದ ಜೀವನ ಮಾಡುವ ಆಶೆಯಿಂದ ಹೊರಟವರು.

ಹಿಂದೆ ವಿವರಿಸಿರುವಂತೆ ಬ್ರಿಟಿಷ್ ಇಂಡಿಯಾ ಪ್ರಾಂತ್ಯಗಳಲ್ಲಿನ ವ್ಯವಸಾಯಗಾರರು ಮಾಡಿರುವ ಸಾಲದ ಮೊತ್ತವು 900 ಕೋಟಿಯ ಹತ್ತಿರಕ್ಕೆ ತಲಪುವುದು. ಈ ಅಂದಾಜು ಅಟಗಾರಿಕೆಯ ತಪ್ಪಾದ ಮಾತುಗಳಲ್ಲ. ನಿಜವಾದ ಸಂಗತಿಯಾಗಿರುವುದು. ಇತ್ತೀಚಿನ ವರ್ಷಗಳಲ್ಲಿ ಪಂಜಾಬು ಪ್ರಾಂತ್ಯದ ಸಾಲದ ಲೆಕ್ಕವು ಹಳ್ಳಿಯ ರೈತರುಗಳಿಗೆ ಕಣ್ಣಿಗೆ ಕಾಣುವಂತೆ ಹೆಚ್ಚಿರುವುದು. ಇತರ ಇಂಡಿಯಾದಲ್ಲಿ ಈ ರೀತಿ ಹೆಚ್ಚುತ್ತಿರುವದೆಂಬದಕ್ಕೆ ಏನೇನೂ ಸಂಶಯವಿಲ್ಲ. ಘೋರವಾಗವ ಈ ಸಾಲದ ಹೊರೆಯು ವ್ಯವಸಾಯಗಾರರನ್ನು ತಲೆಯೆತ್ತದಂತೆ ನುಜ್ಜುಗುಜ್ಜು ಮಾಡುತ್ತಿರುವುದು. ಇದಕ್ಕೆ 1921ನೇ ಇಸವಿಯಿಂದ ದವಸ ಧಾನ್ಯಗಳ ಧಾರಣೆಯು ಬಿದ್ದು ಹೋಗಿರುವುದೇ ಕಾರಣವೆಂದು ತಿಳಿಯಲ್ಪಟ್ಟಿರುತ್ತೆ. 1929ನೇ ಅಕ್ಟೋಬರಿನಿಂದ ಸಾಲದ ಬಾಧೆಯು ಬಹಳ ಜೋರಾಗಿರುವುದೆಂದು ತಿಳಿದು ಬರುತ್ತಿದೆ. ಈ ಸಾಲಗಳಿಗೆ ಕಾರಣವೇನಿರಬಹುದೆಂದು ಪರಿಶೀಲಿಸಿ ನೋಡೋಣ.

ಇಂಡಿಯಾ ದೇಶದ
ಬಡ ರೈತರ ಸಾಲದ ಕಾರಣಗಳು.

● ● ●

ಸಾಲದ ಕಾರಣಗಳು.

ಸಾಲವೇ ಬಡತನಕ್ಕೆ ಕಾರಣವಾಗಿರುವಾಗ ಸಾಲವಿಲ್ಲದೆ ಇರುವುದೇ ಸಂಪತ್ತಿಗೆ ಮೂಲ ಕಾರಣವಾಗಿರುತ್ತೆ ಎಂಬ ಮಾತು ನಿಜವು ಮತ್ತು ಸತ್ಯವಾದದ್ದು. ಆಧಾರದ ಮೇಲೆ ಹೇಳಿರುವ ಸಾಲದ ವಿವರದಿಂದ ಇಂಡಿಯಾ ದೇಶದ ಬಡ ರೈತರುಗಳ ಬಡತನವನ್ನೂ, ದರಿದ್ರ್ಯತನವನ್ನೂ ವಿವರಣೆ ಮಾಡಿದಂತಾಯಿತು. ಇದನ್ನು ಮನಸಿನಲ್ಲಿ ನೆನಪು ಇಟ್ಟುಕೊಂಡು ಈಗ ಹಳ್ಳಿಯ ರೈತರುಗಳ ಬಡತನಕ್ಕೆ ಕಾರಣಗಳು ಏನೆಂಬುದನ್ನು ವಿಮರ್ಶೆ ಮಾಡಿ ಅದರ ನಿಜವಾದ ಕಾರಣವನ್ನು ಮನಗಾಣುವಂತೆ ತಿಳಿದುಕೊಳ್ಳುವುದೇ ಪ್ರತಿಯೊಬ್ಬ ಬಡ ರೈತನ ಮುಖ್ಯ ಕರ್ತವ್ಯವಾಗಿರುತ್ತದೆ.

(1) ಕೃಷಿಯಿಂದಲೇ ಜೀವನ ನಡೆಸಬೇಕಾಗಿರುವ ರೈತರುಗಳ ಮಿತಿ ಮೀರಿದ ಸಂಖ್ಯೆ.

(2) ಅನೇಕ ರೀತಿಯಲ್ಲಿ ಭಿನ್ನ ಭಿನ್ನವಾಗಿ ಹೊಲ ಗದ್ದೆಗಳನ್ನು ಪಾಲು ಮಾಡಿ, ತುಂಡು ತುಂಡುಗಳಾದ ಭೂಮಿಗಳ ಬೆಳೆಯಿಂದ ಆಗುವ ನಷ್ಟ.

(3) ಹಳ್ಳಿಯ ಕೈಗಾರಿಕೆಗಳು ಶಿಥಿಲವಾಗಿ ಕಣ್ಣಿಗೆ ಕಾಣದಂತೆ ಮಾಯವಾಗಿ ಹೋಗಿರುವಿಕೆ. ಅಲ್ಲದೆ ವ್ಯವಸಾಯದ ಕಾಲಗಳನ್ನು ಬಿಟ್ಟು ಇತರ ವಿರಾಮ ಕಾಲಗಳಲ್ಲಿ ಬೇರೆ ಬೇರೆ ಕಸಬುಗಳು ಇಲ್ಲದೆ ರೈತರುಗಳಿಗೆ ಜೀವನಕ್ಕೆ ಸಾಕಷ್ಟು ಉತ್ಪತ್ತಿಯೂ ಆದಾಯ ಇಲ್ಲದಿರುವಿಕೆ.

(4) ರೈತರುಗಳ ಅನಾರೋಗ್ಯತೆ—ಕೆಲವು ಋತುಗಳಲ್ಲಿ ರೈತರುಗಳು ಹೊಲಗದ್ದೆಗಳಲ್ಲಿ ಕೆಲಸ ಮಾಡಬೇಕಾಗಿರುವ ಸುಸಮಯಗಳಲ್ಲಿ ಮಲೇರಿಯಾ ಮೊದಲಾದ ನಾನಾ ವಿಧಗಳಾದ ರೋಗಗಳು ಬಂದು, ಅಂಥಾ ಒಳ್ಳೆಯ ಸಮಯಗಳಲ್ಲಿ ಕೆಲಸಮಾಡಲು ರೈತರುಗಳಲ್ಲಿರುವ ಶಕ್ತಿ, ಹುಮ್ಮಸ್ಸು, ಅವ ಲವಿಕೆಗಳನ್ನು ಬಹಳ ಮಟ್ಟಿಗೆ ತಗ್ಗಿಸಿ ನಿರ್ಬಲರನ್ನಾಗಿ ಮಾಡಿ ರೋಗಿಷ್ಠತನವನ್ನು ಅಭಿವೃದ್ಧಿಪಡಿಸುವುದರಿಂದ ಜಮೀನುಗಳು ವ್ಯವಸಾಯವಿಲ್ಲದೆ ಬಂಜರಾಗುವವು.

(5) ಫಸಲುಗಳ ಅಭದ್ರತೆ—ಇಂಡಿಯಾ ದೇಶದಲ್ಲಿ ವ್ಯವಸಾಯ ನಡೆಸುವ ರೈತರುಗಳು ಮಳೆಯನ್ನು ನಂಬಿರುವ ಇಂದ್ರ ದೇವನೊಡನೆ ಜೂಜು ಆಡುತ್ತಿರುವರು ಎಂಬುದನ್ನು ಡಾರ್ಲಿಂಗ್ ಸಾಹೇಬರು ಸಾರಿರುವರಲ್ಲದೆ, ಇಂಡಿಯಾ ದೇಶದ ವಾಯುಗುಣದಿಂದ ಮಳೆಗಾಲವು ಮಾನಸೂನ್ ಇಚ್ಛೆ ವ್ಯಾಪಾರವನ್ನು ನಡಿಸುವ ನಿರಂಕುಶ ಪ್ರಭುವಾದ ರಾಜನೆಂಬ ಗಾದೆಯಾಗಿರುತ್ತದೆಂದು ಹೇಳಿರುತ್ತಾನೆ. ಐದು ವರ್ಷವೆಂಬ ವೃತ್ತ ಮಂಡಲದಲ್ಲಿ, ಒಂದು ವರ್ಷದಲ್ಲಿ ಸುಭಿಕ್ಷದ ಬೆಳೆ, ಒಂದು ವರ್ಷ ನಿಕೃಷ್ಟವಾದ ಬೆಳೆ. ಉಳಿದ ಮೂರು ವರ್ಷಗಳಲ್ಲಿ ಒಳ್ಳೆಯದು ಅಲ್ಲ, ಕೆಟ್ಟದ್ದು ಅಲ್ಲದ ಸರ್ವಸಾಧಾರಣವಾದ ಬೆಳೆಯಾಗುವದು ಎಂಬದಾಗಿ ಹೇಳಲ್ಪಟ್ಟಿರುವದು.

ಸುಭಿಕ್ಷೆಯ ಕಾಲದ ಬೆಳೆಯ ವರ್ಷದಲ್ಲಿ ಮಾತ್ರ ರೈತರುಗಳು ಸಾಲ ಮಾಡದೆ ಇರಬಹುದಲ್ಲದೆ ಉಳಿದ ನಾಲ್ಕು ವರ್ಷಗಳಲ್ಲಿ ಸಾಲ ಮಾಡಲೇ ಬೇಕಾಗಿರುವದರಿಂದ ಶ್ರೀಮಂತರುಗಳ ದಾಸಾನುದಾಸರಾಗುತ್ತಾ ಬರುವದು ನಿಸ್ಸಂದೇಹವಾದ ಸಂಗತಿಯಾಗಿರುತ್ತೆ.

(6) ಕಷ್ಟಮ—ದನ ಕರುಗಳು ರೋಗಗಳಿಂದ ನಷ್ಟವಿನ ಪಾಲಾಗಿ ಆಗುವ ನಷ್ಟಗಳು ಪ್ಲೇಗ್ ರೋಗ, ಕಿರುನಾಲಿಗೆ ರೋಗ ಮೊದಲಾದ ಕಾಯಿಲೆಗಳಿಂದ ನಷ್ಟವಾಗಿ, ವ್ಯವಸಾಯಗಾರರ ಜೀವನೋಪಾಯಗಳನ್ನೇ ಹಾಳು ಮಾಡುತ್ತಿರುವದು ಇತ್ತೀಚೆ ಮುಖ್ಯವಾದ ಕಾರಣವಾಗಿರುವದು. ವ್ಯವಸಾಯಕ್ಕೆ ಅತ್ಯಗತ್ಯಗಳಾದ ದನಕರುಗಳನ್ನು ಪುನಹ ಪುನಹ ಕೊಂಡುಕೊಳ್ಳುವುದಕ್ಕೋಸ್ಕರ ಪರಸ್ಪರ ಸಹಕಾರ ಸಂಘಗಳಿಂದ ಹೆಚ್ಚಾಗಿ ಸಾಲ ಮಾಡುತ್ತಿರುವುದೇ ಪ್ರತ್ಯಕ್ಷವಾದ ಸಾಕ್ಷಿಯಾಗಿರುವದು.

(7) ಡಿಪ್ರಿಸಿಯೇಶನ್ (ಸವೆಯುವಿಕೆ)—ನೇಗಿಲು ಮೊದಲಾದ ವ್ಯವಸಾಯಕ್ಕೆ ಬೇಕಾದ ಸಾಮಾನುಗಳ ಮತ್ತು ಎತ್ತು, ಎಮ್ಮೆ, ಕೋಣ, ಹಸು, ಕರು, ಇವುಗಳಿಂದುಂಟಾಗುವ ಪ್ರತಿ ವರ್ಷಗಳ ನಷ್ಟದ ಬಾಬಿಗೆ, ಹಣವನ್ನು ಶೇಖರಿಸಿ ಶೇವಣಾತಿ ಮಾಡದೆ ಇರುವದೇ ರೈತರ ಸಾಲಕ್ಕೆ ಮತ್ತೊಂದು ಕಾರಣವಾಗಿರುತ್ತೆ. ದನಕರುಗಳು ಉಪಯೋಗಕ್ಕೆ ಬಾರದ ಸಮಯದಲ್ಲಿ ಬೇರೆ ಹೊಸದಾಗಿ ಕೊಂಡುಕೊಳ್ಳಲು ತನ್ನ ಸ್ವಂತ ಸಂಪಾದನೆಯ ಹಣವಿಲ್ಲದೇ ಇರುವುದರಿಂದ ಸಾಲ ಮಾಡದ ಹೊರತು ಬೇರೆ ಏನೂ ಉಪಾಯಗಳಿಲ್ಲದೆ ಸಾಲಗಾರರಾಗಬೇಕಾದ್ದರಿಂದ ಅಸಲು ಬಂದದ್ದಾಗಲೇ ವ್ಯಯವಾಗುತ್ತಿರುವದು. ಬಡಕೈತರು ಧನಿಕರಂತೆ ಜೀವಿಸಬೇಕೆಂಬ ದುರಾಶೆಯು ಉತ್ಕಟವಾದ ಆಶೆಗಳು ಸಹ ಸ್ವಲ್ಪ ಮಟ್ಟಿಗೆ ಸಾಲಕ್ಕೆ ಕಾರಣವಾಗಿರುವುದು.

ದನಗಳಿಗೋಸ್ಕರ ತನ್ನ ಸಂಸಾರ ಖಾಸ್ತ್ರಯುಗಳಲ್ಲಿ ಬೇರೆ ಹಣ ಕೂಡಿಡಲು ಕಷ್ಟತರದ ಕೆಲಸವಾಗಿದೆ. ಹೊಸದಾಗಿ ದನಕರುಗಳನ್ನು ಕೊಂಡುಕೊಳ್ಳಲು ಹಣವಿಲ್ಲದೆ ಹೋಗುವದರಿಂದ ರೈತರ ಸಾಲ ದಿನೇ ದಿನೇ ಅಭಿವೃದ್ಧಿಯಾಗುವುದಕ್ಕೆ ಮೂಲಕಾರಣವಾಗಿರುವದು.

(8) ಮಾರ್ಕೆಟ್ಟುಗಳಲ್ಲಿ ಹೆಚ್ಚಿನ ಸ್ಥಿತಿ ಇಂಡಿಯಾ ದೇಶದ ರೈತರುಗಳ ಸರಕುಗಳನ್ನು ಉತ್ತಮದ ವಿಕ್ರಯದಿಂದ ಸರಿಯಾದ ಸಾಧ್ಯವಿಲ್ಲದಿದ್ದರೂ ಮಾರ್ಕೆಟ್ಟಿಗಾಗಿ ಕೋರ್ಟು ಕಚ್ಚೇರಿ ಹತ್ತಿ ಹಣ ಖರ್ಚು ಮಾಡುವದೇ ರೈತರುಗಳ ಧನ ಸಂಪತ್ತನ್ನು ನಾಶಮಾಡಿ ಅವರ ಆರ್ಥಿಕ ಶಕ್ತಿಯನ್ನು ಕುಗ್ಗಿಸುತ್ತಿರುವುದು.

(9) ರೈತರುಗಳ ದುಂದುಗಾರಿಕೆ ಮತ್ತು ಮದುವೆ ಕ್ಷೇಮಸಮಾರಂಭಗಳಿಗೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಳ್ಳಲು ಪ್ರಯತ್ನಪಡದೆ ಅಲಕ್ಷ್ಯರಾಗಿರುವಿಕೆ ಯೂ ಆಸ್ಪಷ್ಟೆ.

ರೈತರುಗಳ ನಿತ್ಯಕರ್ಮಗಳಾದ ಕೆಲಸಗಳಲ್ಲಿ ಸೋಮಾರಿತನ, ಮತ್ತು ದುಂದುಗಾರಿಕೆ, ಸಹನಾಶ ದೋಷ ಇವುಗಳೇ ರೈತರುಗಳ ಹಿತಶತ್ರುಗಳೆಂದು ಹೇಳಬಹುದು.

ಏನು ಬರಹ ಬಾರದಿರುವಿಕೆ, ಜಾತಿಮತ ಹುಚ್ಚು ಇನ್ನೂ ಮೊದಲಾದ ದುರ್ಗುಣಗಳಿಂದ ರೈತರುಗಳು ಹೆಚ್ಚಾಗುತ್ತಾ ಅವರನ್ನು ದುರವಸ್ಥೆಗೆ ತಳ್ಳುತ್ತಿರುವದು ಎಂದು ಹೇಳದೆ ಇರಲು ಆಗುವುದಿಲ್ಲ. ಇಂಥಾ ಹುಚ್ಚಾಟದ ಕುಡಿಯುವಿಕೆ ಇಂದಿನ ಕಾಲಕ್ಕೆ, ಇಲ್ಲವೆಂದು ಹೇಳುವದು ತಾನೇ ಹೇಗೆ? ಇಂಡಿಯಾ ದೇಶದ ಜನರು ಅನೇಕ ಸುಲಭ ರೀತಿಯ ಜೀವನ ಮಾಡುತ್ತಿದ್ದರೂ ಕೆಲವು ಮದುವೆ ಮುಂಜಿ ನಾನಾ ಕಾಲಗಳಲ್ಲಿ ಹೆಂಡದ ಸಾಮಾನು ಉಪಯೋಗಿಸಲು ಓಂತೆಗೆಯುವುದಿಲ್ಲವೆಂಬುದರಲ್ಲಿ ಏನೇನೂ ಸಂಶಯವಿಲ್ಲ. 1876ನೇ ಇಸವಿಯಲ್ಲಿ ದಕ್ಷಿಣ ರೈತರ ತನಿಖೆ ಕಾರ್ಯ ನಡೆಸಿದ ಕಾರ್ಯದರ್ಶಿಯವರು ಮದುವೆ ಕಾಲಗಳಲ್ಲಿ ಮಿತಿಮೀರಿ ಖರ್ಚು ಮಾಡುವದರಿಂದಲೇ ರೈತರು ಸಾಲಗಾರರಾಗುವುದಕ್ಕೆ ಮುಖ್ಯ ಕಾರಣವೆಂದು ಒಪ್ಪುವುದಿಲ್ಲ. ಅವರು ಹೇಳುವುದೇನೆಂದರೆ—'ಮುಂದಿನ ಸುಖಕ್ಕೆ ಬಾಧಕಗಳಾದ ಕೆಲಸ ಕಾರ್ಯಗಳನ್ನು ನಿವಾರಿಸುವದಾಗಲಿ ಹೋಗಲಾಡಿಸುವ ಪ್ರಯತ್ನಗಳನ್ನು ಮಾಡದೆ ತಿಳುವಳಿಕೆಯಿಲ್ಲದ ಜನ ಮೂರ್ಖನೃಷ್ಟಿ ಯೂ, ಮುಂದಾಲೋಚನೆ ಇಲ್ಲದೆ ಮುಂದು ಬರುವ ಲಾಭದ ಕಡೆ ದೃಷ್ಟಿ ಇಡದೆ, ಯದ್ವಾ ತದ್ವಾ ಹೆಚ್ಚಿನ ದರದ ಬಡ್ಡಿಯ ಹಣವನ್ನು ತಕ್ಷಣ ಇರದ ಕೆಲಸಕ್ಕೆ ಖರ್ಚು ಮಾಡಲು ಹಿಂತೆಗೆಯದೆ ಇರುವದೇ ಕಾರಣವೆಂದು ಹೇಳುವರು.

ಕುಟುಂಬದ ಉದರಭರಣಾರ್ಥವಾಗಿ, ಪದೇ ಪದೇ ಮಾಡುವ ಸಾಲ ಬಿತ್ತನೆ ಬೀಜಗಳಿಗಾಗಿಯೂ, ಎತ್ತು, ಎಮ್ಮೆ, ಕೋಣ, ದನಕರುಗಳಿಗಾಗಿಯೂ ಮಾಡುವ ವರ್ಷಂಪ್ರತಿಯ ಸಣ್ಣ ಪುಟ್ಟ ಸಾಲಗಳೇ ರೈತರನ್ನು ಸಾಲವೆಂಬ ಗುಲಾಮಗಿರಿಯಲ್ಲಿ ಹಸುಮಂತನ ಬಾಲದಂತೆ ಸುತ್ತಿರುವದು ಎಂದು ಹೇಳಿದರೆ ಅತಿಶಯೋಕ್ತಿಯಾಗುವುದಿಲ್ಲ. ಕೇವಲ ಮದುವೆ ಮುಂಜಿಗಳ ಖರ್ಚಿನಿಂದ ಸಾಲ ಹೆಚ್ಚುತ್ತಿರುವದೆಂದು ಹೇಳುವದು ಮೂರ್ಖತನವೇ ಹೊರತು ನಿಜವಾದ ಕಾರಣ ಎಂದು ಒಪ್ಪಿಕೊಳ್ಳಲು ಆಗುವುದಿಲ್ಲ. ಹ್ಯಾಗೂ ಇವುಗಳಿಗಾಗಿ ಮಾಡುವ ಅಗಾಧವಾದ ಸಾಲಗಳನ್ನು ತೀರಿಸಿ ಋಣ ಮುಕ್ತನಾಗಲು ಸಾಧ್ಯವೇ ಇಲ್ಲವೆಂಬದಕ್ಕೆ ಅನೇಕ ನಿದರ್ಶನಗಳಾದ ಉದಾಹರಣೆಗಳು ಇರುವವು. ಇವುಗಳಲ್ಲದೆ ದುಂದುಗಾರಿಕೆಯ ವೆಚ್ಚಗಳು ಇತ್ತೀಚೆಗೆ ಎಲ್ಲರಿಗೂ ಗೋಚರವಾಗುವಂತೆ ದಿನೇ ದಿನೇ ಹೆಚ್ಚುತ್ತಿರುವವು.

(10) ಪಿತ್ರಾರ್ಜಿತವಾದ ಸಾಲಗಳು—ದಕ್ಷಿಣದ ರೈತರುಗಳ ವಿಚಾರಣಾ ಕರ್ತರು ಹೇಳುವುದೇನೆಂದರೆ, ಈಗ ಇರುವ ಋಣ ಬಾಧೆಗೆ ಪಿತ್ರಾರ್ಜಿತಗಳಾದ ಸಾಲಗಳೇ ಮುಖ್ಯ ಕಾರಣವೆಂದೂ, ತಂದೆಯಿಂದ ಮಗನಿಗೆ ಪರಂಪರಾನುಸಾರವಾಗಿ ಸಾಲವು ಹೆಗಲೇರಿಕೊಂಡು ಬರುತ್ತಿರುವದೂ ಎಂದು. ಕಾನೂನು ನ್ಯಾಯಗಳ ತಿಳುವಳಿಕೆ ಇಲ್ಲದಿರುವುದೇ ಪಿತ್ರಾರ್ಜಿತವಾದ ಸಾಲದ ಭಾರವು ರೈತರುಗಳ ದೆಗಲೇರಲು ಕಾರಣ. ಸತ್ತುಹೋದ ತಂದೆಯ ಸಾಲಕ್ಕಾಗಿ ತಾನು ಆಧಾರ ಮಾಡಿರುವ ಆಸ್ತಿಗಳ ಮೇಲೆ ಸಾಲ ಕೊಟ್ಟವನಿಗೆ ಹಕ್ಕು ಇರುವುದಲ್ಲದೆ, ಈತನು ಮಾಡದೇ ಇರುವ ಆಸ್ತಿಪಾಸ್ತಿಗಳ ಮೇಲೆ ಏನೂ ಹಕ್ಕು ಬಾಧ್ಯತೆ ಇಲ್ಲ. ತಂದೆಯು ಮಾಡಿದ ಸಾಲವನ್ನು ಮಗನು ತೀರಿಸುವದು ಬಹಳ ಗೌರವಕೆ ಎಂದು ತಿಳಿದುಕೊಂಡಿರುವರು. ಪಿತ್ರಾರ್ಜಿತ ಸಾಲಗಳನ್ನು ತೀರಿಸುವದು ಒಳ್ಳೆಯ ನಡೆವಳಿ, ಧರ್ಮ ಎಂದು ಅನಾದಿಯಾಗಿ ಬಂದ ಪದ್ಧತಿಯಾಗಿರುವದು. ಈ ಸಾಲಗಳ ವಿಷಯವಾಗಿ ರೈತರುಗಳಿಗೆ ಇರತಕ್ಕ ಹಕ್ಕು ಬಾಧ್ಯತೆಗಳ ತಿಳುವಳಿಕೆಯನ್ನುಂಟು ಮಾಡುವದು ಅತ್ಯಾವಶ್ಯಕವಾಗಿರುವದು. ಶಾಯಿದೆ ಕಾನೂನುಗಳನ್ನು ಚೆನ್ನಾಗಿ ತಿಳಿದುಕೊಳ್ಳದೆ 'ಧರ್ಮಗೊಡ್ಡು ವಿನಂತೆ' ಪ್ರವರ್ತಿಸಬಾರದು ಎಂಬ ತಿಳುವಳಿಕೆಯನ್ನು ಉಂಟು ಮಾಡುವದು ಅತ್ಯಾವಶ್ಯವಾಗಿರುತ್ತೆ.

ಹಳ್ಳಿಯ ದಿವಾಳಿತನದ ಸುಲಭವಾದ ಕಾನೂನುಗಳನ್ನು ಹಳ್ಳಿಯ ಸ್ಥಿತಿಗೆ ತಕ್ಕಂತೆ ಬಹಳ ಜಾಗರೂಕತೆಯಿಂದ ತಿಳುವಳಿಕೆಗೆ ಕೊಡಬೇಕು. ವ್ಯವಸಾಯದ ತನಿಖೆ ಕಾರ್ಯದರ್ಶಿಗಳು ರೈತರೆಲ್ಲರೂ ದಿವಾಳಿಯಾಗಲು ಪ್ರಯತ್ನಿಸುವುದನ್ನು ನೋಡಲು ಯಾರೂ ಅಪೇಕ್ಷಿಸುವುದಿಲ್ಲ ಮತ್ತು ಅನೇಕ ರೈತರುಗಳು ಸಾಲವಂತರಾಗಿಯೇ ಹುಟ್ಟಿ, ಸಾಲವಂತರಾಗಿಯೇ ಜೀವಿಸಿ, ಸಾಲಗಾರರಾಗಿ ಸಾಯುವುದು ಬಹಳ ಶೋಚನೀಯವಾದ ಸಂಗತಿ. ತ

ಮ್ಮ ಸಾಲದ ಭಾರವನ್ನು ತಮ್ಮ ಮಕ್ಕಳ ತಲೆಯಲ್ಲಿರಿಸಿ ಅವರ ಬೆಳವಣಿಗೆಯನ್ನು ನೋಡುವದು ಯಾವನೊಬ್ಬ ಮನುಷ್ಯಮಾತ್ರದವನಿಗೆ ಇಷ್ಟವಿರುವದಿಲ್ಲ' ಎಂಬದಾಗಿ ಮಾಡಿರುವ ಶಿಫಾರಸ್ಸನ್ನು ಸೆಂಟ್ರಲ್ ಬ್ಯಾಂಕ್ ವಿಚಾರಣಾ ಕಮಿಟಿಯ ಕಾರ್ಯದರ್ಶಿಗಳು ಅನುಮೋದಿಸುವದಲ್ಲದೆ ಹಳ್ಳಿಯಜನದ ಆಕ್ಕಿನಲ್ಲಿ ವಿಶೇಷ ಕರ ಹುಗಳನ್ನು ತೋರಿಸಬೇಕೆಂಬ ಸಲಹೆಗಳನ್ನು ಕೊಟ್ಟಿರುವರು. [ಸಶೇಷ.

'ಬಡ ಜನರ ಸೇವಕ.'

ಕಾಂಗ್ರೆಸ್ ಮಹಿಮೆಯ ರಿತು ಸದಸ್ಯರಾಗಿ ಸೇರಿರಿ.

ಸಂಯುಕ್ತ ಪ್ರಾಂತದ ಬುಡಾನ್ ಎಂಬ ಊರಲ್ಲಿ ಅಲ್ಲಿಯ ಮುನ್ಸಿಪಾಲಿಟಿಯಲ್ಲಿ 215 ಮಂದಿ ಝಾಡಮಾಲಿಗಳಿರುವರು. ಇವರು ತಲಬು ಹೆಚ್ಚಿಸಬೇಕೆಂದು ಈ ಕಳೆದ ಹತ್ತು ದಿನಗಳಿಂದ ಮುಷ್ಕರ ಆರಂಭಿಸಿರುವರು. ಆದರೆ ಈಗಿನ ಕಾಲದಲ್ಲಿ ಈ ಬೆದರಿಕೆಗೆ ಹೆದರುವರೇ? ನಾಗರೀಕರು ಸ್ವಯಂ ಸೇವಕ ದಳವನ್ನೇರ್ಪಡಿಸಿ ತಾವೇ ಕಸಗುಡಿಸುತ್ತಿರುವರು. ಮುನ್ಸಿಫಲ್ ಕೌನ್ಸಿಲರೂ ಸಹ ಈ ಕೆಲಸಕ್ಕೆ ಆಕರ್ಷಿಸಲ್ಪಟ್ಟಿದ್ದಾರೆ. ಇದರ ಕಾರಣವಾದರೂ ಏನು? ಈ ಮೊದಲು ಕಾಂಗ್ರೆಸ್ ಮಂತ್ರಿಗಳೇ ಆದರ್ಶಪ್ರಾಯರಾಗಿ ವರ್ತಿಸಿದ್ದರ ಪರಿಣಾಮ. ಇಂದು ಕಾಂಗ್ರೆಸು ಯಾವ ವಿಧದಲ್ಲೂ ಅನುಸರಿಸಲ್ಪಡತಕ್ಕದ್ದೇ ಆಗಿರುವದು. ಕಾಂಗ್ರೆಸು ಇಂದು ಬಲ್ಲಿದ ಬಡವರಲ್ಲಿರುವ ಭೇಧವನ್ನು ಹೋಗಲಾಡಿಸಿ ಎಲ್ಲರಲ್ಲೂ ಸಮಾನತ್ವವನ್ನು ಹರಡಿ ನಿರಂಕುಶಾಧಿಕಾರವನ್ನು ಬದಿಗೊತ್ತಿ ಮುಂದರಿಯುತ್ತಿರುವ ಸಂಸ್ಥೆ. ಭಾರತಮಾತೆಯ ಹಾಗೂ, ಜಗತ್ತಿನ ಬಿಕ್ಕಟ್ಟಿನ ಸಮಸ್ಯೆಯನ್ನು ಪರಿಹರಿಸಲು ಇಂದು ಹೊರಟಿರುವ ಏಕ ಮಾತ್ರ ಸಂಸ್ಥೆಯೇ ಕಾಂಗ್ರೆಸು. ಈಗಾಗಲೇ ಇಲ್ಲಿ ಕಾಂಗ್ರೆಸು ಸದಸ್ಯರನ್ನು ಸೇರಿಸುವ ಕೆಲಸವು ಪ್ರಾರಂಭಿಸಲ್ಪಡುವದು. ಎಲ್ಲರೂ ಕಾಂಗ್ರೆಸ್ಸಿನ ಮಹತ್ವವನ್ನರಿತು ಕಾಂಗ್ರೆಸ್ ಸದಸ್ಯರಾಗಿ ದೇಶದ ಕಲ್ಯಾಣವನ್ನು ಬಯಸಬೇಕಾಗಿದೆ.

ಡಾ. ನೋಕ್ಸ್ಯ್ನ್ ಎಬ್ರಹಾಮ್
ದಂತ ವೈದ್ಯರು.
(ಪೀಯರ್ಸ್‌ಲೆಸ್ಲಿ ಬಂಗ್ಲೆ)
(ಸ್ಟೆನ್ಸರ್ಸ್ ಹತ್ತಿರ)
ಮಡಿಕೇರಿ.



ಖಾತ್ರಿ.

ಖಾತ್ರಿದಾರರು ನಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. [ಕೊ. ಸಂ.

ಫ್ರೇಜರ್‌ಪೇಟೆ ನೋಟಿಫೈಡ್ ಏರ್ಯ.

ಅಯ್ಯಾ,

ಫ್ರೇಜರ್‌ಪೇಟೆ ನೋಟಿಫೈಡ್ ಏರ್ಯದ ವಿಷಯವು ಬಹಳ ವಿಷಾದಕರವಾಗಿದೆ. ಅದರ ಮೆಂಬರುಗಳು ಚುನಾಯಿಸಲ್ಪಡದೆ ಸರ್ಕಾರದವರಿಂದ ನಾಮಿನೇಟ್ ಆಗಿ ನೇಮಕವಾಗುವುದರಿಂದಲೇ ಅಲ್ಲಿನ ವೈಸ್ ಪ್ರೆಸಿಡೆಂಟರು ಮೆಂಬರುಗಳ ಸವಾಲುಗಳಿಗೆ ಮನಸ್ಸಿ ಜವಾಬು ಕೊಡುತ್ತಿರುವರೆಂದು ಕಂಡುಬರುತ್ತದೆ.

ಕಳೆದ 18 ತಿಂಗಳುಗಳಿಂದ ಮುಸಲ್ಮಾನರ ಬೀದಿಯಲ್ಲಿನ ಗಲೀಜು ಸ್ಥಿತಿಯನ್ನು ಚರ್ಚಿಸಿ ಸಾಕಾಯಿತು. ಕಳೆದ ಮಾರ್ಚ ತಿಂಗಳಲ್ಲಿ ನಡೆದ ಮುನ್ಸಿಪಲ್ ಮೀಟಿಂಗಿನಲ್ಲಿ ಮಿ. ಇಸ್ಮಾಯಿಲ್ ರಾವುತರು ಈ ವಿಷಯದಲ್ಲಿ ಸವಾಲು ಮಾಡಿದರು. ಅದಕ್ಕೆ ವೈಸ್ ಪ್ರೆಸಿಡೆಂಟರು 'ಮುಸಲ್ಮಾನರ ಬೀದಿಯು ಬಹಳ ಗಲೀಜಾಗಿರುವುದೇನೋ ನಿಜ. ನೀವು ಒಬ್ಬ ಮೆಂಬರಾಗಿದ್ದುಕೊಂಡು ಅದರ ನೈರ್ಮಲ್ಯಕ್ಕೆ ತಕ್ಕ ಪ್ರಯತ್ನವನ್ನು ಮಾಡಬೇಕಾದದ್ದು ನಿಮ್ಮ ಕರ್ತವ್ಯ' ಎಂದು ಉತ್ತರ ಕೊಟ್ಟರು. ಮುನ್ಸಿಪಲ್ ನಾಮಿನೇಟೆಡ್ ಮೆಂಬರುಗಳೇ ಬೀದಿಗಳ ಸಫಾಯಿಯನ್ನು ಮಾಡಿಸಬೇಕೊ, ಅಥವಾ ಗ್ರಾಮನಿವಾಸಿಗಳೊಡನೆ ಹೋರಾಡಿ ಅವರಿಂದ ರಸ್ತೆಗಳನ್ನು ಸಫಾಯಿ ಮಾಡಿಸಬೇಕೋ ಎಂಬ ವಿಷಯವು ಸ್ಪಷ್ಟವಾಗಿ ನಮ್ಮ ವೈಸ್ ಪ್ರೆಸಿಡೆಂಟರ ಮೇಲ್ಕಂಡ ಜವಾಬಿನಿಂದ ತಿಳಿಯಲಿಲ್ಲ. ಹಾಗಿದ್ದ ಪಕ್ಷದಲ್ಲಿ ನಿವಾಸಿಗಳ ಮೇಲೆ ತೆರಿಗೆಗಳನ್ನು ಹಾಕುವುದು ಏಕೆ? ಮತ್ತು ಬೀದಿಗಳನ್ನು ಗುಡಿಸುವವರನ್ನು ಸಂಬಳಕೊಟ್ಟು ನೇಮಕಮಾಡಿರುವುದೇತಕ್ಕೆ?

ಕಳೆದ ಮೇ ತಾ. 11 ರಲ್ಲಿ ನಡೆದ ಮೀಟಿಂಗಿನಲ್ಲಿ ಈ ಚರ್ಚೆಯು ಬಂತು. 1936ರಲ್ಲಿ ಈ ಬೀದಿಯ ಸಫಾಯಿ ಮತ್ತು ರಿಪೇರಿಗೋಸ್ಕರ ಬಜೆಟ್ಟ್ ಸೆಂಕ್ಷನ್ ಆದ 50 ರೂಪಾಯಿಗಳ ಆಯುವಾರ್ಯದ ವಿಷಯವಾಗಿ ಮೆಂಬರುಗಳಿಂದ ಸವಾಲು ಹಾಕಲ್ಪಟ್ಟಿತು ಮತ್ತು ಈ ಹಣವು ಯಾವ ವಿಧವಾಗಿ ಖರ್ಚಾಯಿತೆಂದು ಕೇಳಲ್ಪಟ್ಟಿತು. ಅದಕ್ಕೆ ವೈಸ್ ಪ್ರೆಸಿಡೆಂಟರವರು 'ಈ ವಿಷಯವನ್ನು ಕೇಳಲು ನೀವು ಯಾರು? ನಿಮಗೆ ಯಾವ ಸಂಬಂಧವೂ ಇಲ್ಲ' ಎಂದು ಉತ್ತರ ಕೊಟ್ಟರು. ವೈಸ್ ಪ್ರೆಸಿಡೆಂಟರ ಈ ರೀತಿಯ ಹೇಳಿಕೆಯು ನನಗೆ ಆಶ್ಚರ್ಯವನ್ನುಂಟುಮಾಡಿತು. ಮತ್ತು ಈ ರೀತಿಯಾದ ಸವಾಲುಗಳನ್ನು ಮಾಡಲು ನಾನು ಅರ್ಹನಾಗದೇ ಹೋದರೆ ನಾನು ಮೆಂಬರಾಗಿದ್ದು ಪ್ರಯೋಜನವೇನು? ಇದಕ್ಕಿಂತ ನಾನು ಮೀಟಿಂಗಿನಿಂದ ಎದ್ದು ಹೋಗುವುದೇ ಒಳ್ಳೆಯದಲ್ಲವೇ? ಎಂದು ಉತ್ತರ ಕೊಟ್ಟೆನು. ಅದಕ್ಕೆ ವೈಸ್ ಪ್ರೆಸಿಡೆಂಟರವರು 'ಮೀಟಿಂಗನ್ನು ಬಿಟ್ಟು ಹೊರಟು ಹೋಗಬಹುದು' ಎಂದು ಅಪ್ಪಣೆ ಕೊಟ್ಟರು. ಈ ರೀತಿಯಾಗಿ ವೈಸ್ ಪ್ರೆಸಿಡೆಂಟರವರು ಹೇಳಲು ಅವರಿಗೆ ಅಷ್ಟು ಹಕ್ಕು ಬಾಧ್ಯತೆ ಎಲ್ಲಿರುತ್ತದೆ! ಮತ್ತು ಒಂದು ಕಡೆಗೆ ಸೆಂಕ್ಷನ್ ಆದ ಹಣವನ್ನು ಹೇಳದೆ ಕೇಳದೆ ಸ್ವೇಚ್ಛೆಯಾಗಿ ಮತ್ತೊಂದು ಕಡೆಗೆ ಉಪಯೋಗಿಸಲು ಅವರಿಗೆ ಯಾವ ಅಧಿಕಾರವಿದೆ?

ಇದಕ್ಕೆ ಪ್ರತಿಕಾರವಾಗಿ ನಾನು ರಾಜಿನಾಮೆಯನ್ನು ಕಳುಹಿಸಿದೆನು. ಸರಿಯಾದ ಪಬ್ಲಿಕ್ ವಿಚಾರಣೆಯಾಗಿ ಇದನ್ನು ತೀರ್ಪು ಮಾಡಬೇಕೆಂದು ಕೇಳಿಕೊಂಡರೂ ಕೊಡಗು ಕಮಿಷನರ್ ಸಾಹೇಬರವರು ಯಾವುದನ್ನೂ ವಿಚಾರಿಸದೆ ನನ್ನ ರಾಜಿನಾಮೆಯನ್ನು ಮಂಜೂರು ಮಾಡಿದರು. ಪಬ್ಲಿಕ್ ವಿಚಾರಣೆಯನ್ನು ಮಾಡಿದರೆ ಈ ನೋಟಿಫೈಡ್ ಏರ್ಯದ ಹುಳುಕುಗಳೆಲ್ಲಾ ಬಹಿರಂಗವಾಗಬಹುದೆಂದು ಸರಕಾರವು ಹೆದರಿದ ಹಾಗೆ ಕಾಣುತ್ತೆ.

ಖರ್ಚು ಮಾಡಿದ ಹಣಕ್ಕೆ ಯಾವ ದಾಖಲೆಗಳೂ ಬಯಲಿಗೆ ಬರುವಂತಿಲ್ಲ. ಹಣವನ್ನು ಖರ್ಚಿಗಾಗಿ ಮಂಜೂರುಮಾಡುವುದು ಮುನ್ಸಿಪಲ್ ಮೆಂಬರುಗಳ ಕೆಲಸವಾಗಿದೆಯೇ ವಿನಹ ಅದು ಯಾವ ರೀತಿ? ಹೇಗೆ? ಮತ್ತು ಎಷ್ಟು ಖರ್ಚಾಯಿತೆಂದು ಕೇಳಲು ಅಪ್ಪಣೆ ಇಲ್ಲ.

ಮುಸಲ್ಮಾನರ ಬೀದಿಯ ಅವ್ಯವಸ್ಥೆಯನ್ನು ಹೇಳಲು ಅಸಹನೀಯವಾಗಿರುತ್ತದೆ. ಈ ಸ್ಥಳದ ವಿಷಯವಾಗಿ ನಡೆಯುತ್ತಿರುವ ಘಟನೆಯನ್ನು ವರ್ಣಿಸಲು ಅಸಾಧ್ಯ. ಹಾಗಿದ್ದ ಪಕ್ಷದಲ್ಲಿ ಈ ಜಾಗವನ್ನು ಮುನ್ಸಿಪಾಲಿಟಿಯಿಂದ ತೆಗೆದು ಹಾಕಬಾರದೇಕೆ? ಇಲ್ಲಿಯ ನಿವಾಸಿಗಳು ತೆರಿಗೆಯನ್ನು ಕೊಡದೆ ಹೋದರೆ ಅವರಿಗೆ ನೋಟೀಸು, ಸಮ್ಮನುಗಳು ಹುಟ್ಟುತ್ತವೆ. ಅಂತ್ಯಕ್ಕೆ ಅವರ ಆಸ್ತಿಪಾಸ್ತಿಗಳನ್ನು ಹರಾಜು ಮಾಡಿಸಿ ತೆರಿಗೆಯನ್ನು ವಸೂಲುಮಾಡಿಕೊಳ್ಳಲಾಗುತ್ತದೆ. ಆದರೆ ಆ ಸ್ಥಳಕ್ಕೆ ಮುನಿಪಾಲಿಟಿಯಿಂದ ಏನಾದರೂ ಪ್ರಯೋಜನ ಮಾಡಬೇಕೆಂದು ನಾನು ಕೇಳಿದರೆ ವೈಸ್‌ಪ್ರೆಸಿಡೆಂಟರವರು ಹಾಗೆ ಹೇಳಲು ನನಗ ಯಾವ ಅಧಿಕಾರವೂ ಇಲ್ಲವೆಂದು ವಾದಿಸುತ್ತಾರೆ.

ಸರ್ಕಾರಿ ಉದ್ಯೋಗಸ್ಥರು ಇರುವ ಜಾಗದಲ್ಲಿ ಅವರ ರೂಬು ರೂಬು ತಾನೂ ಬಹಳ ಕೆಲಸಗಾರನೆಂದು ಅವರ ಜೊತೆಗೆ ಸೇರಿ ವೈಸ್‌ಪ್ರೆಸಿಡೆಂಟರವರು ಬಹಳ ಮುಖವರ್ಜಿಯನ್ನು ವಹಿಸಿಕೊಂಡು ಹೊಗಳಿಸಿಕೊಳ್ಳುತ್ತಾರೆ. ಆದರೆ ಉದ್ಯೋಗಸ್ಥರು ಯಾವಾಗಲೂ ತಿರುಗಾಡದ ಸ್ಥಳಗಳಲ್ಲಿ ತನ್ನ ಕೆಲಸವನ್ನು ಮುನ್ಸಿಪಲ್ ಮೆಂಬರುಗಳೇ ಮಾಡಬೇಕೆಂಬ ನಿರೀಕ್ಷಣೆಯಲ್ಲಿ ವೈಸ್‌ಪ್ರೆಸಿಡೆಂಟರವರು ಕಾಲಹರಣ ಮಾಡುತ್ತಿರುವುದು ಬಹಳ ಶೋಚನೀಯವಾಗಿರುತ್ತದೆ.

ಎ. ಸಿ. ಮೋದಕ್.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಸ್ತೂರಿ ಮಿಶ್ರ)

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟ ನೋವು ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನು ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯಸ್ತಂಭನವನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ. 2—8—0.

ಮಲೇರಿಯಾ ನಿವಾರಿಣಿ

ಇದು ಚಳಿ ಜ್ವರ, ಚಾತುರ್ಥಿಕ ಜ್ವರ, ದಿನ ಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ, ಇನ್‌ಫ್ಲುಯೆಂಜಾ ಇತ್ಯಾದಿ ನಾನಾ ತರದ ಜ್ವರಗಳ ಮೇಲೆ ರಾಮಬಾಣ.

ಬಾಟ್ಲಿ 1ರ ರೂ. 1—8—0; ಸಣ್ಣ ಬಾಟ್ಲಿ ರೂ. 0—13—0.

ಸ್ಲೀನ್ ಮಿಕ್ಚರ್

ಜ್ವರಗಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಅರಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು. ಬಾಟ್ಲಿ 1ರ ರೂ. 1—2—0.

ಬಾಲಗ್ರಹ ಗುಟಿಕೆ

ಮಕ್ಕಳಿಗೆ ಆಕ್ಷೇಪ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ರಬ್ಬ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ. (12-1)

ಎಸ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ಮಂಗಳೂರು ಸ್ಟೋರ್ಸ್, ಮಡಿಕೇರಿ. ವಿ. ಬಿ. ಕಾಮತ್, ಮಡಿಕೇರಿ. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. ಎ. ಎಸ್. ನಾಚಯ್ಯ, ಸುಂಟಿಕೊಪ್ಪ. ಸುಂದರ್ ಪ್ರಭು, ಸುಳ್ಯ. [1]

ಇಂಡಿಯೂದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು! ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52-5   ಬೆಂಗಳೂರು ಸಿಟಿ.

The Bombay Mutual Life Assurance Society Ltd.,

Head Office:-BOMBAY.   Estd. 1871.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅನೋನ್ಯವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937 ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937 ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರದ ಮೇರೆ 1000ಕ್ಕೆ ವರ್ಷಕ್ಕೆ 21 ರಂತೆಯೂ, ಹೋಲ್ ಲೈಫ್ ವಿಮಾ ಖಿರಾದುಗಳಿಗೆ 26 ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

5

ಅನೇಕ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಿಕಂಪನಿ

ಸುಪ್ರಸಿದ್ಧ ಜ್ವರದ ಗುಳಿಗೆ

ಇದು ಛಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ದಿನ ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ನಾನಾತರದ ಜ್ವರಗಳ ಮೇಲೆ ತಕ್ಷಣವೇ ಗುಣ ಸಂಜೀವಿನಿಯಂತಿದೆ! ಬಾಟ್ಲಿಗೆ 1 ರೂ. 4 ಬಾಟ್ಲಿಗೆ 3 ರೂ. 12 ಬಾಟ್ಲಿಗೆ 8 ರೂ. ವಿ. ಪಿ. ಖರ್ಚು ಬೇರೆ.

ಗಣೇಶ. ರಾಮಚಂದ್ರ ಕರ್ಕಿ.

ಮತ್ತು ಕಂಪೆನಿ,

(52-32)   ಗಿರಗಾಂವ್, ಮುಂಬಯಿ ೪,

ಚಿಕ್ಕ ಮಕ್ಕಳ

ಮುಖ

ಕಾಂತಿಗೆ

ಎಳೇ ಮಕ್ಕಳ ಸ್ನಾನಕ್ಕೆ ಮೈಸೂರು ಗಂಧದ ಸಾಬೂನು ಅತ್ಯುತ್ಕೃಷ್ಟವಾದದ್ದು. ಕೆನೆಯಂತಿರುವ ಅದರ ಉತ್ತಮ ನೊರೆಯು ಸೂಕ್ಷ್ಮವಾದ ಚರ್ಮಕ್ಕೆ ಏನೊಂದು ಹಾನಿಯನ್ನುಂಟುಮಾಡದೆ ಕೊಳೆಯನ್ನೆಲ್ಲಾ ತೆಗೆದುಹಾಕುತ್ತದೆ. ಚಿಕ್ಕ ಮಕ್ಕಳಿಗೆ ಸುವಾಸನೆಯುಳ್ಳ ಈ ಗಂಧದ ಸಾಬೂನಿನಲ್ಲಿ ಸ್ನಾನಮಾಡುವದೆಂದರೆ ಅತೀ ಪ್ರೀತಿ. ಇಂದೇ ಒಂದು ಸಾಬೂನನ್ನು ಕೊಂಡುಕೊಳ್ಳಿರಿ.

ಮೈಸೂರು ಗಂಧದ ಸಾಬೂನು

ಎಲ್ಲಾ ಅಂಗಡಿಗಳಲ್ಲೂ ಸಿಕ್ಕುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

52-19)

ನೋಟೀಸು.

ಈ ಕೆಳಗಿನ ಮಹಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡಿದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿ ಮೇರೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.—

ಕೊಡಗಿನ ಎಲ್ಲಾ ಭಾಗಗಳಿಗೆ.

ಮು. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮು. ಮಂಡೇಪಂಡ ಸೋಮಯ್ಯನವರು.

ಅಮ್ಮತ್ತಿ—ಸಿದ್ದಾಪುರ— ಮು. ಐನಂಡ ಮೊಣ್ಣಪ್ಪನವರು.

ಪೊನ್ನಂಪೇಟೆ—ಮು. ಪಿ. ಜಿ. ಮುದ್ದಮ್ಮಯ್ಯನವರು.

ಹುದಿಕೇರಿ—ಮು. ಅಜ್ಜಮಾಡ ಮಾಚಪ್ಪನವರು ಮತ್ತು ಮು. ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮು. ಅಪ್ಪಚೆಟ್ಟೋಳಂಡ ನಾಣಯ್ಯನವರು.

ಸೋಮವಾರಪೇಟೆ—ಮು. ಕೆ. ಮಾಗಪ್ಪನವರು.

ಶಾಂತಳ್ಳಿ—ಮು. ಸ್ವೈಹಿತ, ಯು. ಭುಗಪ್ಪನವರು.

(ಶಾಂತಳ್ಳಿ ಸ್ಟೋರ್ಸ್)

ಕೊಡಗಿನ ವ್ಯವಹಾರ ಕೊಡಿಕೊಳ್ಳಬೇಕಾದರೆ ಮುಂದೆ ಕೊಡುಗಾಗಿ ಈ ಮುಖಾಂತರ ಕೋರಲಾಗಿದೆ.

ಮ್ಯಾನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ.

ಸದ್ವೈದ್ಯಶಾಲಾ, ನಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಸಕ್ಕೆಶೀತಗಳಿಗೂ ಅಮೃತ. ಬೆಲೆ 0-4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ 0 4 0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ.

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ. ಬೆಲೆ 0-8-0, 0-4-0.

ಸುಕುಮಾರತೈಲ

15

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ಇಂತ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ. ಬೆಲೆ 1-0-0

ಪ್ರೊಪ್ರೈಟರ್-ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತ್.

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ!

ನಿಮ್ಮ ಸಾಮಾನುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ —	ರೂ. 180.	ರೂ. 55.	ರೂ. 35.	ರೂ. 22.
6 ತಿಂಗಳಿಗೆ —	„ 100.	„ 35.	„ 22.	„ 13.
3 ತಿಂಗಳಿಗೆ —	„ 60.	„ 20.	„ 13.	„ 8.
1 ತಿಂಗಳಿಗೆ —	„ 25.	„ 10.	„ 6.	„ 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ 'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ; ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಆತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮಿ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮಿ. ಎಲ್. ಎಫ್. ಸಿ. ದಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

ಮಿ. ಬಿ. ಶೇಷಾದ್ರಿ, ಚಿ. ಇನ್ಸ್‌ಪೆಕ್ಟರು, ಶಿವಮೊಗ್ಗಾ.

62-28

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.
ವಾರ್ಷಿಕ ಚಂದಾ ರೂ. ೩-೮-೦

ತಾ. ೨೨—೭—೧೯೩೮.
ಸಂಪುಟ ೧೮] [ಸಂಚಿಕೆ ೮

THE CANARA BANKING CORPORATION, UDIPI, Ltd.

(Incorporated in British India.)

Estd. 1906.

BRANCHES:

1. Byndoor,
2. Coondapoor.
3. Erode,
4. Madras,
5. Mangalore, Car Street,
6. Mangalore, Bunder,
7. Malpe,
8. Mercara,
9. Mettupalayam,
10. Mysore,
11. Sagar,
12. Saklaspur,
13. Salem,
14. Shimoga,
15. Shirva,
16. Tellicherry,
17. Thirthahalli,
18. Virarajendrapet,
19. Vellore,
20. Udipi.

TOTAL RESOURCES EXCEED Rs. 62 LAKHS.

Udipi,
20th June 1938.

52-33

V. R. Kamath, B. A., LL. B.,
Ag. Manager.

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ [illegible] ಕಾಯಿಲೆಯವರನ್ನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ [illegible] ಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಸೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

ಸಿ. ಹೆಚ್. ರಾಮುಣ್ಣಿ ವೈದ್ಯರ್.

4

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, ಕೋರ್ಟು ಖರ್ಚು, ಆರ್ಬಿಟ್ರೇಶನ್ ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮ ಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ನಾನಾ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,740	0	0
ಜಮೂಬಂದ ಠೇವಣಾತಿ	–	2,56,747	14	4
ವಸೂಲಾದ ಕ್ಷೇಮನಿಧಿ	–	1,35,875	9	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	31,017	12	11
ತ್ರಿಪ್ಟ್ ಡಿಪಾಜಿಟ್ಟು	–	37,936	13	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3¼ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರಿಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಪ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಪ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937 ರಿಂದ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:—ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಚೌರೀರ ಎ. ಮುಂದಣ್ಣನವರು ಬಿ. ಎ., ಬಿ. ಎಲ್.
ಸೆಕ್ರೆಟರಿ:—ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ., ಬಿ. ಎಲ್.

ತಾ. 1-7-1938

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚೆನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-8

The Agricultural &
Industrial Bank Ltd

"ZANDU"

ಝುಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝುಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝುಂಡೂ ಅಯೋಡೈಸ್ಡ್
ಸೀರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝುಂಡೂ ಪ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಫ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಪ್ಪತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್

(52-50) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ಧಾತುಪುಷ್ಟಿ ಲೇಹ

(ಸುವರ್ಣ, ಸಾಲುಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳು ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ. 2—8—0.

ಮಲೇರಿಯಾ ನಿವಾರಿಣಿ

ಇದು ಚಳಿ ಜ್ವರ, ಚಾತುರ್ಥಿ ಜ್ವರ, ದಿನ ಬಿಟ್ಟುಬರುವ ಜ್ವರ, ಮಲೇರಿಯಾ ಜ್ವರ, 'ಇನ್‌ಫ್ಲುಯೆಂಜಾ' ಇತ್ಯಾದಿ ನಾನಾ ತರದ ಜ್ವರಗಳ ಮೇಲೆ ರಾಮಬಾಣ.

ಬಾಟ್ಲಿ 1ರ ರೂ. 1—8—0; ಸಣ್ಣ ಬಟ್ಲಿ ರೂ. 0—13—0.

ಸ್ಪ್ಲೀನ್ ಮಿಕ್ಸ್ಚರ್

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಅಶಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು. ಬಾಟ್ಲಿ 1ರ ರೂ. 1—2—0.

ಬಾಲಗ್ರಹ ಗುಟಿಕೆ

ಮಕ್ಕಳಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ಮಂಗಳೂರು ಸ್ಟೋರ್ಸ್, ಮಡಿಕೇರಿ. ಎ. ಬಿ. ಕಾಮತ್, ಮಡಿಕೇರಿ. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. ಸುಂದರ್ ಪ್ರೆಸ್ಸು, ಸುಳ್ಯ. [2]

ಕನಸಿನ ಬೈಗಳಿಗೆ ಶಿಕ್ಷೆ.

ಎಷ್ಟೋ ಜನರು ನಿದ್ದೆಯಲ್ಲಿ ಕನಸು ಕಂಡು ಬೊಬ್ಬಿಡುವ್ವದು, ಬೈಯ್ಯುವುದು ಇತ್ಯಾದಿ ಇದೆ. ಇಂಗ್ಲೆಂಡಿನಲ್ಲಿ ಇದು ಸಹ ತಪ್ಪು. ನ್ಯಾಯಸ್ಥಾನದಲ್ಲಿ ಶಿಕ್ಷೆಯಾಗುವ್ವದು ಈ ತಪ್ಪಿಗೆ. ಇತ್ತೀಚೆಗೆ ಒಬ್ಬನು ಹೀಗೆ ನಿದ್ರೆಯಲ್ಲಿ ಸಿಕ್ಕಾಬಟ್ಟೆ ಒದರುತ್ತಿದ್ದುದನ್ನು ಒಬ್ಬ ಪೊಲೀಸನು ಕೇಳಿ ಟಾರ್ಚ್ ಲೈಟನ್ನು ಕಿಟಿಕಿಯ ಕಡೆ ಬೀರಿದನು. ಒಬ್ಬ ಹೆಂಗಸು ಹೊರಗೆ ಇಣಿಕಿ ತನ್ನ ಗಂಡ ಕನಸಿನಲ್ಲಿ ಮಾತಾಡುವುದು. ಬೇರೇನೂ ಇಲ್ಲ. ಆಗಿಂದಾಗ ಹೀಗಾಗುವುದುಂಟು ಎಂದಳು. ಆದರೂ ಮಾರನೆದಿನ ಅವಳ ಗಂಡನಿಗೆ 5 ಶಿಲಿಂಗುಗಳ ಜುಲ್ಮಾನೆ ಆಗಿಯೇ ಹೋಯಿತಂತೆ!

—o0o—

ಹಿಂದೂದೇಶದಲ್ಲಿ ಗಾಜಿನ ಕೈಗಾರಿಕೆ

ಹಿಂದೂದೇಶದಲ್ಲಿ ತಯಾರಾಗುವ ಗಾಜಿನ ಬಾಟಲಿಗಳು, ಇತರ ಕಡೆಗಳಲ್ಲಿ ತಯಾರಾಗುತ್ತಿರುವ ಬಾಟಲಿಗಳಿಗೆ ಎಲ್ಲ ವಿಧದಲ್ಲೂ ಸರಿಯೋಲುವ್ವದಾದರೆ, ಅವುಗಳನ್ನು ಸರಕಾರೀ, ಲೋಕಲ್‌ಫಂಡ್ ಮತ್ತು ಮುನ್ಸಿಪಲ್ ಚಿಕಿತ್ಸಾಲಯಗಳಲ್ಲಿ ಉಪಯೋಗಿಸಬೇಕೆಂದು ಮದರಾಸು ಸರಕಾರದವರು ಒಂದು ಆರ್ಡರ್ ಹೊರಡಿಸಿರುವರು.

ಹಿಂದೂದೇಶದಲ್ಲಿನ ಗಾಜಿನ ಕೈಗಾರಿಕೆಯು ಇತ್ತೀಚೆಗೆ ಬಹಳ ಪ್ರಗತಿಹೊಂದಿದೆಯೆಂದೂ, ವಿದೇಶೀ ಗಾಜಿನ ಸಾಮಾನುಗಳಷ್ಟೆ ಉತ್ಕೃಷ್ಟ ಸಾಮಾನುಗಳು ಇಲ್ಲಿ ತಯಾರಾಗುತ್ತಿವೆಯೆಂದೂ ಸರಕಾರದ ತಿಳುವಳಿಕೆಗೆ ಬಂದಿದೆ.

—o0o—

ಅಶ್ವದ ಮೇಲೆ ವಿಶ್ವ ಸಂಚಾರ.

ಕಾಲ್ನಡೆಯಾಗಿ, ದೋಣಿಯಲ್ಲಿ, ಸೈಕಲಿನಲ್ಲಿ, ಮತ್ತು ಮೋಟಾರಿನಲ್ಲಿ ಭೂಸಂಚಾರಕ್ಕೆ ಹೊರಟಿರುವವರ ವಾರ್ತೆಗಳನ್ನು ಆಗಾಗ್ಗೆ ಕೇಳಿದ್ದೇವೆ. ಆದರೆ ಈಗ ಈ ವಿಭಾಗದಲ್ಲಿ ಹೊಸತೊಂದು ವಾರ್ತೆ. ಆಸ್ಟ್ರಿಯದ ಮಿಸೆಸ್ ಬಾರ್ಬರಾ ಕೆರಿಕ್ ಎಂಬ 43 ವಯಸ್ಸಿನ ಹೆಂಗುಸೋರ್ವಳು ಕುದುರೆ ಮೇಲೆ ಭೂಪ್ರದಕ್ಷಿಣೆಗೆ ಹೊರಟಿದ್ದಾಳೆ. 1926 ರಲ್ಲೀಕೆ ಆಸ್ಟ್ರೀಯದ ತನ್ನ ಊರಿಂದ ಹೊರಟಳು. 1940 ರೊಳಗೆ ತನ್ನ ಪ್ರಯಾಣವನ್ನು ಮುಗಿಸುವಳು.

ಆಕೆ ಹೊರಟಂದಿನಿಂದ ದಾರಿಯಲ್ಲಿ 5 ಕುದುರೆಗಳು ಸತ್ತುವು! ಯುರೋಪು ಮತ್ತು ಏಷ್ಯದಲ್ಲಿ ಮಾತ್ರ ಆಕೆಯ ಸಂಚಾರವಾಗಿದೆ. ಚಿಕ್ಕ ಕುದುರೆಗಳು, ದೀರ್ಘ ಪ್ರಯಾಣದಲ್ಲಿ ಬಾಳಿಕೆ ಬರುವುವೆಂದು ಆಕೆಯ ಅಭಿಪ್ರಾಯ. ಒಂದು ಕಡೆ ಹಿಮಾಲಯವನ್ನು ದಾಟುವಾಗ ಆಕೆ 23000 ಅಡಿ ಎತ್ತರದ ಪ್ರದೇಶವನ್ನು ತಲುಪಿದ್ದಳು. ಇನ್ನೆಷ್ಟು ಕುದುರೆಗಳನ್ನು ಮುಗಿಸಿ ಪ್ರಯಾಣ ಮುಗಿಸುವಳೋ ಆರಿಲ್ಲ.

—o0o—

ವಿ ವಿ ಧ ವಿ ಚಾ ರ.

ಪೈವೇಟ್ ಹೇಗಿದೆ?

ಇಂಗ್ಲೆಂಡಿನಲ್ಲಿ ಪೋರ್ಟ್ಸ್‌ಮೌಥ ಬಂದರದ ಹತ್ತಿರ ಪೋರ್ಟ್ ಡೌನ್‌ಹಿಲ್ ಎಂಬ ದಿಣ್ಣೆಯ ಕಡಿದಾದ ಪ್ರದೇಶದಿಂದ ಆಲಿಸನ್ ವ್ಯಾಲೀನ ಎಂಬ 15 ವರ್ಷದ ಒಬ್ಬ ತರುಣಿ 70 ಅಡಿ ಕೆಳಗೆ ತಗ್ಗಿನಲ್ಲಿ ಬಿದ್ದಳು. ಅವಳು ಬದುಕಿರ ಲೊಲ್ಲಳೆಂದು ಬೇಕೆಂದು ಮೂವರು ಪೊಲೀಸರು ಧಾವಿಸಿ ಹೋದರು. ಆದರೆ ಅವಳು ಜೀವಂತವಿದ್ದಳಲ್ಲದೆ ದೊಡ್ಡ ಗಾಯಗಳು ಕೂಡಾ ಆಗಿರಲಿಲ್ಲ.

—o0o—

ಸ್ಪಂಜುಗಳ ಹುಟ್ಟು.

ಸ್ಪಂಜು ಒಂದು ಜಲಪ್ರಾಣಿಯ ಅಸ್ಥಿ ಪಂಜರವೆಂಬದ ಸ್ಪಂಜನ್ನು ಉಪಯೋಗಿಸುವವರಿಗೆ ಆಶ್ಚರ್ಯ ತೋರಬಹುದು.

ಆದರೆ ಸ್ನಾನ ಮಾಡುವುದು ಅದು ಎಲುಬಿನ ಗೂಡೇ ಎಂಬುದು ನಿಜ ಸಂಗತಿ. ಗ್ರೀಕ ನಾಗರಿಕತೆಯ ಕಾಲದಲ್ಲಿಯೂ ಸ್ಪಂಜನ್ನು ಉಪಯೋಗಿಸುತ್ತಿದ್ದರು. ರೋಮನ ಸೈನಿಕರು ಅಪಾಯಗಳಿಂದ ತಪ್ಪಿಸಿಕೊಳ್ಳಲಿಕ್ಕೆ ಮೊಣಕಾಲ ಮೇಲೆ ಸ್ಪಂಜನ್ನು ಕಟ್ಟಿಕೊಳ್ಳುತ್ತಿದ್ದರು. ಈಗ ಸ್ನಾನದ ಮನೆಯಲ್ಲಿ ಮೈಯುಜ್ಜುವದಕ್ಕೂ ಜೋಡುಗಳ ಅಟ್ಟೆಯಲ್ಲಿ, ಉಡಿಗೆಗಳೊಳಗೆ ತುಂಬುವ್ವದಕ್ಕೂ, ಉಪಯೋಗಿಸುವರು.

ಸ್ಪಂಜು 'ಪೋರಿಫೆರಾ' ಎಂಬ ಜಾತಿಯ ಜಲಪ್ರಾಣಿಯ ಎಲುಬಿನ ಗೂಡಾಗಿದೆ. ಸಮುದ್ರ ತಳದಲ್ಲಿ ಆ ಪ್ರಾಣಿಗಳಿರುತ್ತವೆ. ಅವು ಕೆಂಪು ಬಣ್ಣದ ಮಾಂಸದ ಮುದ್ದೆಯಂತಿರುತ್ತವೆ. ಅವುಗಳ ಹೊರಮೈಯಲ್ಲಿ ಅನೇಕ ಉಸುರಿನ ಕೊಳವೆಗಳಿರುತ್ತವೆ. ಸ್ಪಂಜಿನಲ್ಲಿ ಕಾಣುವ ತೂತುಗಳೇ ಆ ಉಸುರು ಕೊಳವೆಗಳು. ಆ ಪ್ರಾಣಿಯು ಚಿಕ್ಕದಿರುವಾಗ ಈಸುತ್ತ ಹೋಗಿ ಗಲಗುಗಳ ಕಡ್ಡಿಗೆ ಇಲ್ಲವೆ ಹವಳದ ಗಡ್ಡೆಗಳಿಗೆ ಅಂಟಿಕೊಂಡು ಮುಂದೆ ಸಾಯುವ ವರೆಗೆ ಅಲ್ಲಿಯೇ ಇರುತ್ತದೆ. ಅದು ನಿರ್ಜೀವವಾದ ಮೇಲೆ ಸಮುದ್ರದ ಮೇಲ್ಭಾಗದಲ್ಲಿ ತೇಲುತ್ತ ದಡವನ್ನು ಸೇರುವದು. ತೆರೆಗಳ ಹೊಡೆತದಿಂದ ಆ ಪ್ರಾಣಿಯ ಮಿಕ್ಕೆಲ್ಲ ವಸ್ತುಗಳೂ ತೊಳೆದು ಹೋಗಿ ಬರಿ ಅಸ್ಥಿಪಂಜರವಷ್ಟೆ ಉಳಿಯುವದು. ವ್ಯಾಪಾರಿಗಳು ಅವನ್ನು ಸಂಗ್ರಹಿಸಿ ಕೃತ್ರಿಮವಾಗಿ ಅವನ್ನು ಇನ್ನೂ ಹೆಚ್ಚು ಮೃದುವಾಗುವಂತೆಯೂ ಬೆಳ್ಳಗಾಗುವಂತೆಯೂ ಮಾಡುವರು. ಪೂರ್ವ ಕಾಲದಲ್ಲಿ ಸಮುದ್ರ ತೀರದಲ್ಲಿ ಸಿಗುತ್ತಿರುವ ರೂಪದಲ್ಲಿಯೆ ಸ್ಪಂಜುಗಳನ್ನು ಉಪಯೋಗಿಸುತ್ತಿದ್ದರು.

—o0o—

ಆಸ್ಟ್ರೇಲಿಯದಲ್ಲಿ ಭಾರತದ ಕೋಣಗಳು.

ಉತ್ತರ ಆಸ್ಟ್ರೇಲಿಯದಲ್ಲಿ ಕೋಣಗಳ ಬೇಟೆಯೊಂದು ಉದ್ಯೋಗವೇ ಆಗಿದೆ. ಏಕೆಂದರೆ ಅಲ್ಲಿಯ ಒಂದೊಂದು ಕೋಣದ ತೊಗಲು ಸುಮಾರು 120 ಪೌಂಡುಗಳಷ್ಟು ತೂಗುತ್ತದೆ. ಅದನ್ನು ಮಾರುವವರಿಗೆ ಒಂದು ಪೌಂಡಿಗೆ ಆರಾಣೆಯಂತೆ ಸಿಗುತ್ತದೆ! ಆ ಕೋಣಗಳ ತೊಗಲು ಓವರ್‌ಕೋಟು, ಬಗ್ಗು ಮುಂತಾದ ಹೊದ್ದಿಕೆಗಳನ್ನು ನಿರ್ಮಿಸುವುದರಲ್ಲಿ ಉಪಯುಕ್ತವಾಗಿದೆ. ತೊಗಲನ್ನು ಹನ್ನೆರಡು ಪದರಾಗಿ ಸೀಳಿದರೂ ದಪ್ಪನಾದ ಪಾದರಕ್ಷೆಗಳನ್ನು ಮಾಡಬಹುದು. ಮಿ. ಜೋಸೆಫ್ ಕೂಪರನು ಹತ್ತು ವರ್ಷಗಳಲ್ಲಿ 27000 ಕೋಣಗಳನ್ನು ಕೊಂದು ಇಂದು ಕೋಟ್ಯಾಧೀಶನಾಗಿದ್ದಾನೆ.

ಆ ಕೋಣಗಳೆಂದರೆ ಕಾಡು ಕೋಣಗಳಲ್ಲ. ಊರ ಕೋಣಗಳೆ. ಅವರೂ ಆಸ್ಟ್ರೇಲಿಯದ ಕಾಡುಗಳಲ್ಲಿ ವನರಾಜರಿಗಿಂತ ಬಲಿಷ್ಠವಾಗಿವೆ. ಅವು ಗುಂಪಾಗಿ ಅಲೆಯುತ್ತವೆ. ಸಾವಿರಾರು ಕೋಣಗಳು ಕೂಡಿ ಓಡಹತ್ತಿದವೆಂದರೆ ಸುತ್ತಲಿನ ಭೂಮಿ ನಡುಗುತ್ತದೆ. ಅವುಗಳ ಕಾಲಸಪ್ಪು ಗುಡುಗಿನಂತೆ ಕೇಳುವದು. ನಮ್ಮಲ್ಲಿ ಚೆನ್ನಾಗಿ ಬೆಳೆದ ಒಂದು ಕೋಣದ ಇಮ್ಮಡಿಗಿಂತ ಅವು ಹೆಚ್ಚಾಗಿ ಗಡುತರವಾಗಿರುತ್ತವೆ! ಒಂದೊಂದು ಕೋಡು ಹತ್ತು ಫೂಟುಗಳಷ್ಟು ಉದ್ದವಾಗಿರುತ್ತದೆ. ಅವುಗಳನ್ನು ಬೇಟೆಯಾಡುವದು ಸುಲಭವಲ್ಲ. ಬಂದೂಕಿನಿಂದಲೇ ಅವನ್ನು ಕೊಲ್ಲುವದಾದರೂ ಅದಕ್ಕೂ ಕೌಶಲ್ಯ ಬೇಕು. ಸಿಕ್ಕಸಿಕ್ಕಲ್ಲಿ ಗುಂಡು ತಗಲಿದರೆ ಅವಕ್ಕೆ ಏನೂ ಕಡಿದಷ್ಟೂ ನೋವಾಗುವದಿಲ್ಲ. ಮತ್ತು ಸ್ವಲ್ಪ ಗಾಯವಾಗಿ ಆವೇಶದಲ್ಲೂ ತಿರುಗಿ ನಿಂತವೋ ಬೇಟೆಗಾರನನ್ನು ಸಾಯುವ ವರೆಗೆ ಬಿಡವು; ಇಲ್ಲವೆ ತಾವಾದರೂ ಸಾಯಬೇಕು.

ಇನ್ನು ಆ ಕೋಣಗಳೆಲ್ಲ ನಮ್ಮ ಭಾರತದವೇ ಎಂದು ಹೇಳಿದರೆ ಆಶ್ಚರ್ಯವಾಗಬಹುದು. ಈಗ ನೂರು ವರ್ಷಗಳ ಹಿಂದೆ ಉತ್ತರ ಆಸ್ಟ್ರೇಲಿಯದ ಸಮುದ್ರ ತೀರದಲ್ಲಿ ಒಂದು ಆಂಗ್ಲ ಸೈನಿಕರ ಪಾಳಯವಿತ್ತು. ಇಲ್ಲಿಗೆ ಭಾರತೀಯ ನಾವಿಕರು ವ್ಯಾಪಾರಕ್ಕಾಗಿ ಬರುತ್ತಿದ್ದರು. ಅವರು ಸೈನಿಕರ ಆಹಾರಕ್ಕಾಗಿ ಕೋಣಗಳನ್ನೂ ತರುತ್ತಿದ್ದರು. ಕೆಲವು ವರ್ಷಗಳ ನಂತರ ಆಂಗ್ಲ ಸೈನಿಕರು ಅಲ್ಲಿಂದ ಹೊರಟು ಹೋಗುವಾಗ ಮಿಕ್ಕ ಕೋಣಗಳನ್ನು ಅಡವಿಗೆ ಹೊಡೆದು ಬಿಟ್ಟರು. ಅವು ಸಾಯುವುವೆಂದು ಅವರು ತಿಳಿದಿದ್ದರು. ಆದರೆ ಇಂದಿಗೆ ಅವು ಸಾವಿರಾರು ಪಾಲು ಹೆಚ್ಚಾಗಿ ಬೆಳೆದು ಬಿಟ್ಟಿವೆ.

—o0o—

ಗಂಡಾಂತರ ಸೂಚನೆ, ಸೀಟಿನಲ್ಲಿಲ್ಲ. ಮಾತಿನಲ್ಲಿ.

ನಮ್ಮ ದೇಶದಲ್ಲಿ ಮನೆಗೆ ಬೆಂಕಿ ಹತ್ತಿದ ಕೂಡಲೆ ಪೊಲೀಸರು ತಮ್ಮ ಸೀಟಿಗಳನ್ನು ಊದುತ್ತ ಓಣಿ ಓಣಿಗೆ ಓಡುವರು. ಅದು ಜನರನ್ನು ಸಹಾಯಕ್ಕೆ ಕರೆಯಲಿಕ್ಕೆ ಒಬ್ಬ ಪೊಲೀಸನ ಗಂಡಾಂತರ ಸೂಚಕ ಸೀಟಿ ಕೇಳಿದ ಇನ್ನೊಬ್ಬ ಪೊಲೀಸನೂ ಹಾಗೇ ಸೀಟಿ ಹೊಡೆಯುವನು. ಇದರಿಂದ ಜನರಿಗೆ ಗಂಡಾಂತರದ ಕಲ್ಪನೆ ಬರುವುದಾದರೂ ಎಲ್ಲಿ ಏನಾಗಿದೆಯೆಂಬುದು ಒಮ್ಮೆಲೆ ತಿಳಿಯುವುದಿಲ್ಲ. ಸೀಟಿಯ ಸೂಚನೆಗಳಲ್ಲಿ ಬೇಕಾದಷ್ಟು ಸುಧಾರಣೆಯಾಗಿದ್ದರೂ ಅನೇಕ ಸಲ ಸೂಚನೆಗಳ ತಪ್ಪು ತಿಳುವಳಿಕೆಯಾಗುವದುಂಟು. ಅದಕ್ಕೀಗ ಸ್ಪಷ್ಟವಾಗಿ ಮಾತಾಡುವ ಒಂದು ಗಂಡಾಂತರ ಸೂಚಕವನ್ನು ಶೋಧಿಸಿದ್ದಾರೆ. ಅದರ ಶೋಧಕನು ಎಂಟು ವರ್ಷಗಳ ಪರಿಶ್ರಮದಿಂದ ಅದನ್ನು ಸಿದ್ಧಗೊಳಿಸಿದ್ದಾನೆ. ಬೆಂಕಿ ತಗಲಿದ ಮನೆಗೆ ಆ ಸೂಚಕವನ್ನು ಹಚ್ಚಿದರೆ ಅದು ಉಚ್ಚಸ್ವರದಲ್ಲಿ ಆ ಓಣಿಯ ಮತ್ತು ಮನೆಯ ಹೆಸರನ್ನೇ ಕೂಗಿ ಹೇಳುವದು. ಅದಕ್ಕೆ 'ಲೌಡಸ್ಪೀಕರ್' ಹಚ್ಚಿ ಮನೆಯ ಎಲ್ಲ ದಿಕ್ಕುಗಳಿಂದ ಕೂಗು ಹೊರಡುವಂತೆ ಮಾಡಬರುತ್ತದೆ. ಇದರಿಂದ ಬೆಂಕಿಯಾರಿಸುವ ಯಂತ್ರವನ್ನು ನಿರ್ದಿಷ್ಟ ಸ್ಥಾನಕ್ಕೆ ಬಹು ಬೇಗ ಒಯ್ಯಲು ಅನುಕೂಲವಾಗಿದೆ.

—o0o—

ಬಿಸಿಯಾಗಿಸುವ ತೊಡಿಗೆಗಳು.

ಚಳಿಗಾಲದಲ್ಲಿ ಮುದ್ದಿದ್ದವರು ಉಣ್ಣೆಯ ಬಟ್ಟೆಗಳನ್ನು ಧರಿಸುತ್ತಾರೆ. ಒಂದರ ಮೇಲೊಂದರಂತೆ 3-4 ಬಟ್ಟೆಗಳನ್ನು ಧರಿಸುವವರೂ ಇದ್ದಾರೆ. ಆದರೆ ಕುಟುಂಬ ದೊಡ್ಡದಾಗಿರುವ ಮನೆಯ ಯಜಮಾನನಿಗೆ, ಪ್ರತಿಯೊಬ್ಬರಿಗೂ ಅಷ್ಟು ಬೆಲೆಯ ಬಟ್ಟೆಗಳನ್ನು ಹೊಲಿಸಲಾಗುವುದೇ? ಕಂಬಳಿ ಹೊದ್ದುಕೊಂಡು ತಿರುಗುವುದು ನಾಗರಿಕತೆಯಲ್ಲ! ಅದಕ್ಕಾಗಿ ಈಗ ಸ್ವಯಂ ಉಷ್ಣವಾಗಿರುವ ತೊಡಿಗೆಗಳ ವ್ಯವಸ್ಥೆಯನ್ನು ಮಾಡಿದ್ದಾರೆ ವಿಜ್ಞಾನಿಗಳು. ಅಂತಹ ತೊಡಿಗೆಗಳು ಪ್ರಚುರವಾದರೆ ಒಂದೇ ಬಟ್ಟೆ ಹಾಕಿಕೊಂಡರೂ ಚಳಿ ತಗಲುವುದಿಲ್ಲ. ಆ ಬಟ್ಟೆಯೊಳಗೆಲ್ಲ ವಿದ್ಯುತ್ ಶಕ್ತಿಯ ಸಹಾಯದಿಂದ ಉಷ್ಣತೆ ಹರಡುವ ವ್ಯವಸ್ಥೆಯಿರುತ್ತದೆ. ಬಟ್ಟೆ ತೊಟ್ಟುಕೊಂಡು ವಿದ್ಯುತ್ತಿನ ಗುಂಡಿ ಒತ್ತಿದರಾಯಿತು. ವಿದ್ಯುತ್ ಶಕ್ತಿಯ ಸಂಗ್ರಹವನ್ನು ಜೇಬಿನಲ್ಲಿ ಇಟ್ಟುಕೊಂಡಿರಬೇಕು. ಇದೇನೂ ಅಷ್ಟು ಸೋಜಿಗವಲ್ಲ. ಆದರೆ ಬಿನತಂತು (wireless) ವಿನಿಂದ ಉಷ್ಣತೆಯನ್ನು ಬೇಕಾದಲ್ಲಿಗೆ ಸಾಗಿಸುವ ಪ್ರಯತ್ನ ನಡೆಸಿದ್ದಾರೆ ವಿಜ್ಞಾನಿಗಳು. ಅದು ಸಾಧಿಸಿತೆಂದರೆ ಇನ್ನೂ ಮೋಜು. ಆಗ ಬಿನತಂತುವಿನಿಂದ ವಾತಾವರಣದಲ್ಲಿ ಉಷ್ಣತೆಯನ್ನು ಹರಡುತ್ತಾರೆ. ಮನುಷ್ಯರು ತಮ್ಮ ತಲೆಯ ಮೇಲೆ ಒಂದು ಗ್ರಾಹಕ (Receiver) ಇಟ್ಟುಕೊಂಡು ಹೊರಬಿದ್ದರಾಯಿತು! ಗ್ರಾಹಕವು ವಾತಾವರಣದ ಉಷ್ಣತೆಯನ್ನು ಗ್ರಹಿಸಿ ಮನುಷ್ಯನ ದೇಹಕ್ಕೆ ಪೂರೈಸುತ್ತದೆ!

—o0o—

ಡಿಸ್ಟ್ರಿಕ್ಟ್ ಬೋರ್ಡ್ ಬಡ್ಜೆಟ್ ಮೀಟಿಂಗು.

(ಕಳೆದ ಸಂಚಿಕೆಯಿಂದ ಸಾಗಿದ್ದು.)

ವಾಪಸು ತೆಗೆದುಕೊಂಡ ಠರಾವುಗಳು.

ಬೋರ್ಡಿನಲ್ಲಿ ಹಣದ ಅಭಾವದಿಂದ ಈ ಕೆಳಗಿನ ಠರಾವುಗಳು ವಾಪಸು ತೆಗೆದು ಕೊಳ್ಳಲ್ಪಟ್ಟವು.

1. ಶನಿವಾರಸಂತೆ ಹೋಬಳಿಯ ಬೇಬಳೂರು, ನಿಡ್ತ ಮತ್ತು ದೊಡ್ಡ ಬಂಡಾರ ಗ್ರಾಮಗಳಲ್ಲಿ ಬಾವಿ ತೋಡಿಸುವ ವಿಷಯ. ಸೂಚಕರು—ಮೆ. ಹೆಚ್. ಯಂ. ಪುಟ್ಟಣ್ಣನವರು.

2. ಕೊಡಗಿನ ಎಲ್ಲಾ ಗ್ರಾಮ ರಸ್ತೆಗಳಲ್ಲಿ ಮಾರ್ಗದರ್ಶಕ ಕೈ ಕಂಬಗಳನ್ನಿಡುವ ವಿಷಯ. ಸೂಚಕರು—ಮೆ. ಹೆಚ್. ಯಂ. ಪುಟ್ಟಣ್ಣನವರು.

4. ಬಾಳೆಲೆ ಶಾಲೆಗೆ ಒಬ್ಬ ಹೆಚ್ಚಿಗೆ ಉಪಾಧ್ಯಾಯರನ್ನು ಕೊಡಬೇಕು. ಸೂಚಕರು—ಮೆ. ಅಜ್ಜಿಕುಟ್ಟೀರ ಪೊನ್ನಪ್ಪನವರು.

4. ಫ್ರೇಜರ್‌ಪೇಟೆ, ಹೋಬಳಿಯ ನಲ್ಲೂರಿಗೆ ಹೋಗುವ ರಸ್ತೆಯ ದುರಸ್ತಿಗಾಗಿ ರೂ. 100 ಕೊಡಬೇಕು. ಸೂಚಕರು ಮೆ. ಎಸ್. ಎನ್. ರಾಮಶೆಟ್ಟಿಯವರು.

5. ರಾಮಪುರದಲ್ಲಿ ಒಂದು ದೀಪದ ಕಂಬವನ್ನಿಡಬೇಕು. ಸೂಚಕರು—ಮೆ. ಎಸ್. ಎನ್. ರಾಮಶೆಟ್ಟಿಯವರು.

6. ಸುಂಟಿಕೊಪ್ಪ, ಮಾದಾಪುರ ಮತ್ತು ಹತ್ತನೇ ಮೈಲು ಈ ಸ್ಥಳಗಳಿಗೆ ಒಂದೊಂದು ಗ್ಯಾಸ್ ಲೈಟುಗಳನ್ನು ಕೊಡಬೇಕು. ಸೂಚಕರು—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

7. ಐದು ತರಗತಿಗಳನ್ನಿಡಲು ಅನುಕೂಲವಾಗುವಂತೆ ಸುಂಟಿಕೊಪ್ಪ ಶಾಲಾ ಕಟ್ಟಡವನ್ನು ಬಡಾವಣೆ ಮಾಡಬೇಕು. ಸೂಚಕರು—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

8. ಮಾದಾಪುರ-ಸೋಮವಾರಪೇಟೆ ರಸ್ತೆಯ 19ನೇ ಮೈಲು ಕಲ್ಲಿನಿಂದ ತಾಕೇರಿ ಗ್ರಾಮಕ್ಕೆ ಒಂದು ಹೊಸ ರಸ್ತೆ ಮಾಡಿಸಬೇಕು. ಸೂಚಕರು ಮೆ. ಸಿಂಗೂರು ಮಾದಪ್ಪನವರು.

9. ನಾಪೋಕ್ಲು ಆಸ್ಪತ್ರೆಯಲ್ಲಿ ಕಾಯಿಲೆಯವರನ್ನು ಇಟ್ಟುಕೊಳ್ಳಲು ಒಂದು ವಾರ್ಡನ್ನು ಕಟ್ಟಲು ತಕ್ಕ ಏರ್ಪಾಡು ಮಾಡಬೇಕು. ಸೂಚಕರು—ಮೆ. ಚೆಟ್ಟೋಳಂಡ ಮಾಚಯ್ಯನವರು.

10. ನಾಪೋಕ್ಲು ಭಾಗಮಂಡ್ಲ ರಸ್ತೆಗೆ ಈಗ ಕೊಡುತ್ತಿರುವ ಹಣವು ಸಾಲದ್ದರಿಂದ ಒಡನೆ ರೂ. 60 ಹೆಚ್ಚಿನ ಗ್ರಾಂಟು ಕೊಡಬೇಕು. ಸೂಚಕರು—ಮೆ. ಚೆಟ್ಟೋಳಂಡ ಮಾಚಯ್ಯನವರು.

11. ಹೆರೂರು ಗ್ರಾಮಕ್ಕೆ ಒಂದು ಗ್ರಾಂಟ್-ಇನ್-ಎಯಿಡ್ ಶಾಲೆಯನ್ನು ಕೊಡಬೇಕು. ಸೂಚಕರು—ಮೆ. ಎಸ್. ಎನ್. ರಾಮಶೆಟ್ಟಿಯವರು.

12. ಶ್ರೀಮಂಗಲದಲ್ಲಿ ಕಟ್ಟಲ್ಪಡುತ್ತಿರುವ ವಾರ್ಡಿಗೆ 500 ರೂ. ಗೆ ಕಮ್ಮಿಯಿಲ್ಲದೆ ಹಣ ಸಹಾಯ ಕೊಡಬೇಕು. ಸೂಚಕರು—ಮೆ. ಕಾಕಮಾಡ ಗಣಪತಿಯವರು.

13. ಶೆಟ್ಟಿಗೇರಿಯಿಂದ ಬಿರುನಾಣಿಗೆ ಹೋಗುವ ರಸ್ತೆಯಲ್ಲಿರುವ ಚಿಕ್ಕ ಮೋರಿಗಳಿಗೆ ಗಾಡಿಗಳು ಹೋಗಲು ಅನುಕೂಲವಾಗಿ ಕಬ್ಬಿಣದ ಸಲಾಕಿಗಳನ್ನು ಇಡಬೇಕು. ಸೂಚಕರು—ಮೆ. ಕಾಕಮಾಡ ಗಣಪತಿಯವರು.

14. ಹುದಿಕೇರಿಯಿಂದ ಬಾಡಗರಕೇರಿ ಸ್ಕೂಲಿಗೆ ಹೋಗುವ ರಸ್ತೆಯನ್ನು ಗಾಡಿ ಹೋಗಲನುಕೂಲವಾಗುವಂತೆ ಮಾಡಲು ತಗಲುವ ಖರ್ಚನ್ನು ಬೋರ್ಡಿನಿಂದ ಕೊಡಬೇಕು. ಸೂಚಕರು—ಮೆ. ಕಾಕಮಾಡ ಗಣಪತಿಯವರು.

15. ಹುದಿಕೇರಿಯಿಂದ ಹರಿಹರಕ್ಕೆ ಹೋಗುವ ರಸ್ತೆಯಲ್ಲಿರುವ ತೋಡಿಗೆ ಪಾಲ ಹಾಕಲು ರೂ. 10 ಕೊಡಬೇಕು. ಸೂಚಕರು—ಮೆ. ಕಾಕಮಾಡ ಗಣಪತಿಯವರು.

16. ಬೇಗೂರು ಮತ್ತು ಬೇಟೋಳಿ ಗ್ರಾಮಗಳಿಂದ ಪೊನ್ನಂಪೇಟೆಗೆ ಹೋಗುವ ದಾರಿಯಲ್ಲಿ ಕೊಲ್ಲಿ ತೋಡಿಗೆ ಪಾಲ ಹಾಕಲು ರೂ. 5 ಮಂಜೂರು ಮಾಡಬೇಕು. ಸೂಚಕರು—ಮೆ. ಕಾಕಮಾಡ ಗಣಪತಿಯವರು.

17. ಕುರ್ಚಿ ಗ್ರಾಮ ಶಾಲೆಯನ್ನು ಡಿ. ಬೋರ್ಡಿಗೆ ತೆಗೆದುಕೊಂಡು ಒಬ್ಬ ಹೆಚ್ಚಿನ ಉಪಾಧ್ಯಾಯನನ್ನು ಕೊಡಬೇಕು. ಸೂಚಕರು—ಮೆ. ಕಾಕಮಾಡ ಗಣಪತಿಯವರು.

18. ನಡಿಕೇರಿ ಗ್ರಾಮದ ಬಣ್ಣಮೊಟ್ಟೆ ಸ್ವಂತ ಶಾಲೆಗೆ ಮಾಹೆಯಾನ ರೂ. 10 ಗ್ರಾಂಟು ಕೊಡಬೇಕು. ಸೂಚಕರು—ಮೆ. ಕಾಕಮಾಡ ಗಣಪತಿಯವರು.

19. ಶೆಟ್ಟಿಗೇರಿ ಮತ್ತು ಹೇರ್ಮಾಡು ಶಾಲೆಗಳಿಗೆ ಹೆಚ್ಚಿನ ಒಬ್ಬೊಬ್ಬ ಉಪಾಧ್ಯಾಯರನ್ನು ಕೊಡಬೇಕು. ಸೂಚಕರು—ಮೆ. ಕಾಕಮಾಡ ಗಣಪತಿಯವರು.

20. ಹುದಿಕೇರಿ ಶಾಲೆಯನ್ನು ಹೈಸ್ಕೂಲಾಗಿ ಮಾಡಿ 1939ನೇ ಏಪ್ರಿಲ್‌ನಿಂದ 4ನೇ ಫಾರಂ ಕ್ಲಾಸನ್ನು ತೆರೆಯಬೇಕು. ಸೂಚಕರು—ಮೆ. ಕಾಕಮಾಡ ಗಣಪತಿಯವರು.

21. ಕುರ್ಚಿ, ನೆಮ್ಮಲೆ ಮತ್ತು ಬೀರುಗ ಗ್ರಾಮಸ್ಥರಿಗೆ ಕುಟ್ಟ ಸಂತೆಗೆ ಹೋಗಲು ಅನುಕೂಲವಾಗುವಂತೆ ಲಕ್ಷ್ಮಣತೀರ್ಥ ಹೊಳೆಗೆ ಪಾಲ ಹಾಕಲು ರೂ. 10 ಮಂಜೂರು ಮಾಡಬೇಕು. ಸೂಚಕರು—ಮೆ. ಕಾಕಮಾಡ ಗಣಪತಿಯವರು.

22. ಇರ್ಪು ದೇವಸ್ಥಾನದಿಂದ ಹುದಿಕೇರಿ ಹೈ ರೋಡಿಗಿರುವ 2 ಮೈಲು ದೂರದ ರಸ್ತೆಯನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ತೆಗೆದುಕೊಂಡು ವರ್ಷಕ್ಕೆ ರೂ. 20 ಅದರ ರಿಪೇರಿಗೆ ಮಂಜೂರು ಮಾಡಬೇಕು. ಸೂಚಕರು—ಮೆ. ಕಾಕಮಾಡ ಗಣಪತಿಯವರು.

23. ಬೀರುಗ ಶಾಲೆಯ ಹತ್ತಿರ ಕೆರೆ ರಿಪೇರಿಗಾಗಿ ರೂ. 200 ಮಂಜೂರು ಮಾಡಬೇಕು. ಸೂಚಕರು— ಮೆ. ಕಾಕಮಾಡ ಗಣಪತಿಯವರು.

24. ಹುದಿಕೇರಿ ಗ್ರಾಮಸ್ಥರಿಗಾಗಿ ಹುದಿಕೇರಿಯಲ್ಲಿ ಒಂದು ಬಾವಿ ತೋಡಿಸಲು ರೂ. 100 ಕೊಡಬೇಕು. ಸೂಚಕರು—ಮೆ. ಕಾಕಮಾಡ ಗಣಪತಿಯವರು.

24. ಮರೆನಾಡು ಹೊಳೆಗೆ ಹುದಿಕೇರಿಯಿಂದ ಮರೆನಾಡಿಗೆ ಹೋಗುವ ದಾರಿಯಲ್ಲಿ ಒಂದು ಸಾಂಬವನ್ನು ಕಟ್ಟಬೇಕು. ಸೂಚಕರು—ಮೆ. ಕಾಕಮಾಡ ಗಣಪತಿಯವರು.

25. ಕಾವಳಗೇರಿ ಹರಿಜನರಿಗಾಗಿ ಒಂದು ಬಾವಿ ತೋಡಿಸಲು ರೂ. 200 ಮಂಜೂರು ಮಾಡಬೇಕು. ಸೂಚಕರು—ಮೆ. ಕಾಕಮಾಡ ಗಣಪತಿಯವರು.

26. ಬೇಗೂರು ಗ್ರಾಮದಲ್ಲಿ ಒಂದು ಬಾವಿ ತೋಡಿಸಲು ರೂ. 150 ಮಂಜೂರು ಮಾಡಬೇಕು. ಸೂಚಕರು—ಮೆ. ಕಾಕಮಾಡ ಗಣಪತಿಯವರು.

27. ಹುಲುಕೋಡು ಗ್ರಾಮದ ಹರಿಜನರಿಗಾಗಿ ಒಂದು ಬಾವಿ ತೋಡಿಸಬೇಕು. ಸೂಚಕರು—ಮೆ. ಹೆಚ್. ಯಂ. ಪುಟ್ಟಣ್ಣನವರು.

28. ಒತ್ತುಗದ್ದೆ, ಕಣಗಾಲಿನಲ್ಲಿ ಒಂದು ಅಣೆಕಟ್ಟು ಕಟ್ಟಿಸಬೇಕು. ಸೂಚಕರು ಮೆ. ಹೆಚ್. ಯಂ. ಪುಟ್ಟಣ್ಣನವರು.

29. ಚೌಡೇನಹಳ್ಳಿಯಲ್ಲಿ ಒಂದು ಬಾವಿ ತೆಗೆಸುವಂತೆ ಈ ಬೋರ್ಡು ಶಿಫಾರಸು ಮಾಡುತ್ತದೆ. ಸೂಚಕರು ಮೆ. ಹೆಚ್. ಯಂ. ಪುಟ್ಟಣ್ಣನವರು.

30. ಸಲ್ಲಾರು ಪೊನ್ನಂಪೇಟೆ ರಸ್ತೆಯಲ್ಲಿ ಪಟ್ಟೂರು ಹೊಳೆಗೆ ಸೇತುವೆ ಕಟ್ಟಲು ರೂ. 5000 ಮಂಜೂರು ಮಾಡಬೇಕು. ಸೂಚಕರು—ಮೆ. ಅಜ್ಜಿಕುಟ್ಟೀರ ಪೊನ್ನಪ್ಪನವರು.

31 ಹಾತೂರ, ಬಿ. ಶೆಟ್ಟಿಗೇರಿ ಮತ್ತು ಬಾಳೆಲೆ ಶಾಲೆಗಳಿಗೆ ಒಬ್ಬೊಬ್ಬ ಹೆಚ್ಚಿನ ಉಪಾಧ್ಯಾಯರನ್ನು ಕೊಡಬೇಕು. ಸೂಚಕರು—ಮೆ. ಅಜ್ಜಿಕುಟ್ಟೀರ ಪೊನ್ನಪ್ಪನವರು.

32 ಬೋರ್ಡಿನ ಮೀಟಿಂಗಿನಲ್ಲಿ ಚರ್ಚೆ ಮತ್ತು ಭಾಷಣಗಳು ಕನ್ನಡದಲ್ಲಾಗಬೇಕು. ಸೂಚಕರು—ಮೆ. ಅಜ್ಜಿಕುಟ್ಟೀರ ಪೊನ್ನಪ್ಪನವರು.

33. ಫ್ರೇಜರ್‌ಪೇಟೆ ಶಾಲೆಗೆ ಒಬ್ಬ ಹೆಚ್ಚಿನ ಉಪಾಧ್ಯಾಯನನ್ನು ಕೊಡಬೇಕು. ಸೂಚಕರು—ಮೆ. ಎಸ್. ಎನ್. ರಾಮಶೆಟ್ಟಿಯವರು.

34. ಫ್ರೇಜರ್‌ಪೇಟೆ ಶಾಲೆಯನ್ನು ಹಯರ್ ಎಲಿಮೆಂಟರಿ ಶಾಲೆಯನ್ನಾಗಿ ಮಾಡಬೇಕು. ಸೂಚಕರು—ಎಸ್. ಎನ್ ರಾಮಶೆಟ್ಟಿಯವರು.

35. ಫ್ರೇಜರ್‌ಪೇಟೆ ಶಾಲೆಯ ಬಳಿಯಲ್ಲಿ ಒಂದು ಬಾವಿ ತೋಡಿಸಬೇಕು. ಸೂಚಕರು—ಮೆ. ಎಸ್. ಎನ್. ರಾಮಶೆಟ್ಟಿಯವರು.

36. ಫ್ರೇಜರ್‌ಪೇಟೆ ಆಸ್ಪತ್ರೆಗೆ ಮೂರು ಹಾಸಿಗೆಯುಳ್ಳ ಒಂದು ವಾರ್ಡನ್ನು ಕಟ್ಟಿಸಿ ಕೊಡಬೇಕು. ಸೂಚಕರು—ಮೆ. ಎಸ್. ಎನ್. ರಾಮಶೆಟ್ಟಿಯವರು.

37. ಫ್ರೇಜರ್‌ಪೇಟೆ ಹೋಬಳಿಯ ಬೆಳ್ಳೂರು ಗ್ರಾಮದ ಬಾವಿಗೆ ಕಲ್ಲು ಕೆಲಸಕ್ಕೆ ರೂ. 75 ಮಂಜೂರು ಮಾಡಬೇಕು. ಸೂಚಕರು—ಮೆ. ಎಸ್. ಎನ್. ರಾಮಶೆಟ್ಟಿಯವರು.

38. ನಾಪೋಕ್ಲು ಭಾಗಮಂಡ್ಲ ರಸ್ತೆಯ ರಿಪೇರಿಗೆ ವರ್ಷಕ್ಕೆ ರೂ. 600 ಕೊಡಬೇಕು. ಸೂಚಕರು—ಮೆ. ಚೆಟ್ಟೋಳಂಡ ಮಾಚಯ್ಯನವರು.

39. ನಾಪೋಕ್ಲು ಆಸ್ಪತ್ರೆಯಲ್ಲಿ ಔಷಧಿ ಖರ್ಚಿಗಾಗಿ ರೂ. 200 ಹೆಚ್ಚಿಗೆ ಮಂಜೂರು ಮಾಡಬೇಕು. ಸೂಚಕರು—ಮೆ. ಚೆಟ್ಟೋಳಂಡ ಮಾಚಯ್ಯನವರು.

40. ನಾಲ್ಕುನಾಡು ಅರಮನೆ ದೊಡ್ಡಿಯನ್ನು ಡಿಕ್ಕಾಪಿಗೆ ಪರಿಣಯಿಸಬೇಕು. ಸೂಚಕರು—ಮೆ. ಚೆಟ್ಟೋಳಂಡ ಮಾಚಯ್ಯನವರು.

41. ಪೊನ್ನಾರಾಜು ಟೌನಿನಲ್ಲಿರುವ ಕೆರೆ ರಿಪೇರಿಗಾಗಿ ರೂ. 200 ಕೊಡಬೇಕು. ಸೂಚಕರು—ಮೆ. ಸಿ. ಯಂ. ಪೂಣಚ್ಚನವರು.

42. ಶ್ರೀಮಂಗಲ ಆಸ್ಪತ್ರೆಗೆ ಒಂದು ಹೊರ ಮನೆಯನ್ನು ಕಟ್ಟಬೇಕು. ಸೂಚಕರು ಮೆ. ಕಾಕಮಾಡ ಗಣಪತಿಯವರು.

43. ಬೀರುಗ ಹೊಳೆಗೆ ಪಾಲ ಹಾಕಲು ಎರಡು ವರ್ಷಕ್ಕೊಮ್ಮೆ ಕೊಡುತ್ತಿರುವ 10 ರೂ ಯನ್ನು ಪ್ರತಿ ವರ್ಷ ಕೊಡಬೇಕು. ಸೂಚಕರು ಮೆ. ಕಾಕಮಾಡ ಗಣಪತಿಯವರು.

44 ಕೋಟೂರಿನಿಂದ ಕಾನೂರಿಗೆ ಹೋಗುವ ತೋಡಿಗೆ ಪಾಲಕ್ಕಾಗಿ ವರ್ಷಕ್ಕೆ ರೂ. 5 ಕೊಡಬೇಕು. ಸೂಚಕರು—ಮೆ. ಕಾಕಮಾಡ ಗಣಪತಿಯವರು.

45. ಹಂಚರ ನಾಕ್ಕೇರಿ ರಸ್ತೆಯಲ್ಲಿರುವ ತೋಡಿಗೆ ಎರಡು ವರ್ಷಕ್ಕೊಮ್ಮೆ ಕೊಡುತ್ತಿರುವ ರೂ. 10ನ್ನು ಪ್ರತಿವರ್ಷ ಕೊಡುವಂತೆ ಮಂಜೂರು ಮಾಡಬೇಕು. ಸೂಚಕರು ಮೆ. ಕಾಕಮಾಡ ಗಣಪತಿಯವರು.

46. ನೆಮ್ಮಲೆಯಿಂದ ತಿರಾಲು ಶಾಲೆಗೆ ಹೋಗುವ ರಸ್ತೆಯಲ್ಲಿರುವ ಹೊಳೆಗೆ ಪಾಲ ಹಾಕಲು ರೂ. 10 ಮಂಜೂರು ಮಾಡಬೇಕು. ಸೂಚಕರು ಮೆ. ಕಾಕಮಾಡ ಗಣಪತಿಯವರು.

47. ನೆಲಜಿ ಸ್ಕೂಲಿಗೆ ಒಂದು ಬಾವಿ ತೆಗೆಯಲು 200 ರೂ. ಒಳಗೆ ಹಣ ಸಹಾಯ ಮಾಡಬೇಕು. ಸೂಚಕರು—ಚೆಟ್ಟೋಳಂಡ ಮಾಚಯ್ಯನವರು.

48. ಬಾಕಡುವಿನಿಂದ ಕೋರಂಗಾಲದ ವರೆಗೆ ಅಂದರೆ ಮೂರು ಮೈಲು ದೂರ ನಾಪೋಕ್ಲು—ಭಾಗಮಂಡ್ಲ ರಸ್ತೆಯನ್ನು ಸಂಯೋಜಿಸುವಂತೆ ಹೊಸ ರಸ್ತೆಯೊಂದನ್ನು ಮಾಡಬೇಕು. ಸೂಚಕರು—ಮೆ. ಚೆಟ್ಟೋಳಂಡ ಮಾಚಯ್ಯನವರು.

49. ನಾಪೋಕ್ಲು—ಭಾಗಮಂಡ್ಲ ರಸ್ತೆಯಲ್ಲಿರುವ ಹೊಳೆಗೆ ಪಳಂಗೋಟು ಎಂಬ ಸೇತುವೆ ಕಟ್ಟಲು ರೂ. 100 ಮಂಜೂರು ಮಾಡಬೇಕು. ಸೂಚಕರು—ಮೆ. ಚೆಟ್ಟೋಳಂಡ ಮಾಚಯ್ಯನವರು.

ಬರುವ ಬಜೆಟ್ಟಿಗೆ ಮುಂದರಿಸಲ್ಪಟ್ಟ ಠರಾವುಗಳು.

1. ಕೊಡ್ಲಿಪೇಟೆ, ಅಮ್ಮತ್ತಿ, ಹಾತೂರು ಶಾಲೆಗಳಿಗೆ ಕಟ್ಟಡಗಳನ್ನು ಕಟ್ಟಿಸುವ ವಿಷಯ–ಶಾಲಾ ಇನ್ಸ್‌ಪೆಕ್ಟರವರ ಶಿಫಾರಸು.

2. ಬಿಳುಗುಂದ ಶಾಲೆಯಲ್ಲಿ ಉರ್ದು ಮತ್ತು ಖುರಾನ್ ಕಲಿಸಲು ಅಲ್ಲಿಯ ಮಹಮದೀ ಉಪಾಧ್ಯಾಯರಿಗೆ ರೂ. 10 ಎಲೋವೆನ್ಸ್ ಕೊಡಬೇಕು–ಶಾಲಾ ಇನ್ಸ್‌ಪೆಕ್ಟರವರ ಶಿಫಾರಸು.

3. ಗ್ರಾಮಾಭಿವೃದ್ಧಿ ಫಂಡಿನಿಂದ ರಿಪೇರಿ ಮಾಡಿಸಲ್ಪಡುವ ಹುದಿಕೇರಿ-ಮರಿನಾಡು ರಸ್ತೆಗೆ ಅದರ ಖರ್ಚಿನ ½ನೇ ಭಾಗವನ್ನು ಬೋರ್ಡಿನಿಂದ ಕೊಡಬೇಕೆಂಬ ದಕ್ಷಿಣ ಕೊಡಗು ಸುಬೇದಾರರ ಶಿಫಾರಸು.

4. ಗ್ರಾಮಾಭಿವೃದ್ಧಿ ಫಂಡಿನಿಂದ ಕಟ್ಟಲ್ಪಡುವ ಭಾಗಮಂಡ್ಲ ನಾಡಿನ ಮೋತಿಗುಮ್ಮಿ ಹೊಳೆಯ ಸೇತುವೆಯ ಖರ್ಚಿನ ½ನೇ ಭಾಗವನ್ನು ಬೋರ್ಡಿನಿಂದ ಕೊಡಬೇಕೆಂಬ ಕಮಿಷನರವರ ಶಿಫಾರಸು.

ತಿರಸ್ಕರಿಸಲ್ಪಟ್ಟ ಠರಾವುಗಳು.

1. ಶ್ರೀಮಂಗಲ ಮತ್ತು ಶನಿವಾರಸಂತೆ ಆಸ್ಪತ್ರೆಗಳಲ್ಲಿ ರಸ ಪರೀಕ್ಷಾ ಮನೆಗಳನ್ನು ಕಟ್ಟಬೇಕೆಂಬ ಸಿವಿಲ್ ಸರ್ಜನರ ಶಿಫಾರಸು.

2. ಶೆಟ್ಟಿಗೇರಿ ಕೊಂಗಣ ರಸ್ತೆಯನ್ನು ರಿಪೇರಿ ಮಾಡುವ ಬಗ್ಗೆ ಅಸಿಸ್ಟೆಂಟ್ ಕಮಿಷನರ ಶಿಫಾರಸು.

3. ಮಕ್ಕೇರಿರ ಮತ್ತು ಪುಗ್ಗೆರ ಮನೆಯವರಿಗೆ ಅನುಕೂಲವಾಗುವ ರೀತಿ ಹಾಲುಗುಂದ ಗ್ರಾಮದಲ್ಲಿ ಭಾವಿ ತೋಡಿಸಲು ರೂ. 75 ಬೋರ್ಡಿನಿಂದ ಕೊಡಬೇಕೆಂಬ ಅ. ಕಮಿಷನರವರ ಶಿಫಾರಸು.

4. ಸೋಮವಾರಪೇಟೆ ನಾಡಿನ ಬಿಳಿಗೇರಿ ಗ್ರಾಮದ ಒಂದು ಬಾವಿ ರಿಪೇರಿಗಾಗಿ ರೂ. 150 ಕೊಡಬೇಕೆಂಬ ರೆವಿನ್ಯೂ ಅಧಿಕಾರಿಗಳ ಶಿಫಾರಸು.

ಕಳೆದ ವರ್ಷ ಪಾಸಾಗಿದ್ದ ಈ ಕೆಳಗಿನ ವಿಷಯಗಳಿಗೂ ಬಜೆಟಿನಲ್ಲಿ ಹಣ ಇಡುವಂತೆ ತೀರ್ಮಾನಿಸಲಾಯಿತು.

1. ಶೆಟ್ಟಿಗೇರಿ ಹೊಳೆಗೆ ಬಲವಾದ ಪಾಲ ಕಟ್ಟಲು (ಗ್ರಾಮಾಭಿವೃದ್ಧಿ ಫಂಡಿನ ಕೆಲಸ) ವಂತಿಗೆ ರೂ. 250.

2. ಬೆಳ್ಳುಮಾಡು-ಪಾರಾಣೆ-ನಾಪೋಕ್ಲು-ಭಾಗಮಂಡ್ಲ ರಸ್ತೆ ವಿಶೇಷ ದುರಸ್ತಿಗೆ (ಗ್ರಾಮಾಭಿವೃದ್ಧಿ ಫಂಡಿನ ಕೆಲಸ) ವಂತಿಗೆ ರೂ. 600.

3. ನಲ್ವತೊಕ್ಲು-ಕೊಕ್ಲಡ ಬೈಗೋಡು ರಸ್ತೆ ರಿಪೇರಿಗೆ ರೂ. 50.

4. ಫ್ರೇಜರ್‌ಪೇಟೆ ಹೋಬಳಿ ಮಂಗಳೂರು ಗ್ರಾಮದ ಬಾವಿ ಕೆಲಸಕ್ಕೆ ರೂ. 100.

5. ಹಾಕತ್ತೂರು ರಸ್ತೆಯ ಸೇತುವೆಗೆ ರೂ. 100.

6. ಒಂಟಿಯಂಗಡಿ ಬಾವಿಗೆ ರೂ. 200.

7. ಕೊಳ್ಳಕೊಳ್ಳು-ಮಾಯಮುಡಿ ರಸ್ತೆ ರಿಪೇರಿಗೆ–ರೂ 100.

8. ಅಮ್ಮತ್ತಿಯಲ್ಲಿ (ಗ್ರಾಮಾಭಿವೃದ್ಧಿ ಫಂಡಿನ ಕೆಲಸ) ಬಾವಿ ಕೆಲಸಕ್ಕೆ ವಂತಿಗೆ–ರೂ. 300.

9. ಕೊಡ್ಲಿಪೇಟೆ ಬೋರ್ಡಿಂಗಿನ ಅಡಿಗೆಯವನ ಸಂಬಳಕ್ಕೆ–ರೂ. 60.

10. ಕರ್ಕ ಶಾಲೆಗೆ ಗ್ರಾಂಟ್–ರೂ. 20.

11. ಕೊಟ್ಟಗೇರಿ ಶಾಲೆಗೆ ಹೆಚ್ಚಿನ ಗ್ರಾಂಟ್–ರೂ. 120.

12. ಅರಮನೆ ಪಾಗ (ಬಾಕೆಲಿ) ಯಲ್ಲಿ ಆಸ್ಪತ್ರೆಗೆ–ರೂ. 500.

13. ಸಿದ್ದಾಪುರದಲ್ಲಿ ವಾರಕ್ಕೊಂದು ದಿನ ಆಸ್ಪತ್ರೆ ತೆರೆಯಲಿಕ್ಕೆ–ರೂ. 200.

14. ಮಡಿಕೇರಿ-ಸಿದ್ದಾಪುರ ರಸ್ತೆಯ 10ನೇ ಮೈಲಿನಲ್ಲಿ ವಾರಕ್ಕೊಂದು ದಿನ ಆಸ್ಪತ್ರೆ ತೆರೆಯಲಿಕ್ಕೆ–ರೂ. 200.

15. ಕೊಡ್ಲಿಪೇಟೆಯಲ್ಲಿ ವಾರಕ್ಕೊಂದು ದಿನ ಆಸ್ಪತ್ರೆ ತೆರೆಯಲಿಕ್ಕೆ–ರೂ. 200.

ಹಿಂದೀಯರಿಗೆ ಗವರ್ನರರ ಪದವಿಗಳನ್ನು ಕೊಡಬೇಕು

ರಾಷ್ಟ್ರಪತಿ ಶ್ರೀ. ಸುಭಾಷಚಂದ್ರ ಬೋಸರ ಹೇಳಿಕೆ

ಕಳೆದ ಕೆಲವು ತಿಂಗಳುಗಳಲ್ಲಿ ಗವರ್ನರ ಪದವಿಗಳಿಗೆ ಬದಲಿ ಜನರನ್ನು ನೇಮಿಸುವಾಗ ಸರಕಾರದವರು ಅನುಸರಿಸಿದ ಧೋರಣೆಯನ್ನು ಪರಿಶೀಲಿಸಬೇಕಾದ ಸಮಯ ಬಂದಿದೆ. ಈ ವರ್ಷ ಗವರ್ನರರು ರಜೆ ಮೇಲೆ ಹೋದುದು ಸ್ವಲ್ಪ ಹೆಚ್ಚು. ಅದರಿಂದ ಈ ಬದಲಿ ಗವರ್ನರುಗಳ ಅವಶ್ಯಕತೆಯೂ ಹೆಚ್ಚಿತು. ಈ ಖಾಲಿ ಸ್ಥಳಗಳಿಗೆ ಬಹುಮಟ್ಟಿಗೆ ಬ್ರಿಟಿಷ್ ಸಿವಿಲ್ ಸರ್ವೀಸಿನವರನ್ನೇ ನೇಮಿಸಿದ್ದನ್ನು ನೋಡಬಹುದು. ಇದರಲ್ಲಿ ಒಂದು [illegible] ಜಾತೀಯ [illegible]

ಇನ್ನು [illegible] ಗವರ್ನರ ಹುದ್ದೆಗೆ [illegible] ನೆಯನ್ನು ಏಕೆ ನೇಮಿಸಲಿಲ್ಲವೆಂದು ಒಂದು ಸೊಲ್ಲನ್ನಾದರೂ ಹೇಳಿದವರಿಲ್ಲ. ಹಿಂದೀ ಮತ್ತು ಆಂಗ್ಲೊ ಇಂಡಿಯನ್ ಪತ್ರಿಕೆಗಳು ಮಾತ್ರ ಈ ಪ್ರಶ್ನೆಯನ್ನು ಎತ್ತಿಕೊಂಡಿವೆ. ನಮ್ಮ ಜನರ ಅಭಿಪ್ರಾಯಗಳಿಗೆ ಸರಕಾರದವರು ಯಾವ ಬೆಲೆಯನ್ನೂ ಕೊಡುವುದಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ದ್ವಿದಳ ವ್ಯವಸ್ಥೆಯ ದಿನಗಳಲ್ಲಿ ಗವರ್ನರ ಪದವಿಗಳನ್ನು ಹಿಂದೀಯರಿಗೆ ಕೊಡಬಾರದೆಂಬ ಭಾವನೆಯಿರಲಿಲ್ಲ. ಮೊದಲನೆ ಹಿಂದೀ ಗವರ್ನರರಾಗಿ ನೇಮಕ ಹೊಂದಿದ ಲಾರ್ಡ್ ಸಿಂಹರನ್ನು ಕಂಡು ಇನ್ನೂ ಹಲವು ಪ್ರಾಂತ್ಯಗಳಲ್ಲಿ ಇದೇ ರೀತಿ ಆಗಬಹುದೆಂಬ ಭಾವನೆಯಿತ್ತು. ಆ ಆಸೆಗಳೆಲ್ಲ ನಿಷ್ಫಲವಾದುವು. ಚಳವಳಿಯ ಪರಿಣಾಮವಾಗಿ ಬದಲಿ ಕೆಲಸಗಳನ್ನು ಗವರ್ನರರ ಕೌನ್ಸಿಲಿನ ಹಿಂದೀ ಮೆಂಬರ್ ಸದಸ್ಯರಿಗೆ [illegible] ಉಪಯೋಗಿಸಬಹುದೆಂದು [illegible] ಅವರಿಗೆ ಕೊಡುವುದೆಂದು [illegible]. ಇದರಿಂದ ಬಹಳ ಪ್ರಗತಿಯಾಗಲಿಲ್ಲ.

ಈಗ ಪ್ರಾಂತಿಕ ಸ್ವರಾಜ್ಯದಲ್ಲಿ ಈ ವಿಷಯದಲ್ಲಿ ಮೊದಲಿಗಿಂತ ನಾವು ಹಿಂದೆ ಹೋಗಿರುವಂತೆ ಕಂಡು ಬರುತ್ತದೆ. ಈ ರಜೆ ಮೇಲೆ ಹೋದ ಗವರ್ನರರ ಬದಲಿ ಸ್ಥಾನಕ್ಕೆ ನೇಮಿಸಲು ಯೋಗ್ಯ ಹಿಂದೀಯರಿಲ್ಲವೆಂದು ಸರಕಾರದವರು ಹೇಳುವರೆ? ಬ್ರಿಟಿಷ್ ಸರಕಾರಕ್ಕೆ ಇದು ಮನಸ್ಸಿಲ್ಲವೆಂಬುದು ಸ್ಪಷ್ಟವಿರುತ್ತದೆ. ಇದಕ್ಕೋಸ್ಕರವೇ ನಾವು ಈ ಪ್ರಶ್ನೆಯನ್ನು ಎತ್ತಿ ಹಿಡಿಯಬೇಕಾಗಿದೆ. ಪ್ರಾಂತಿಕ ಸ್ವರಾಜ್ಯದಿಂದ ಹಿಂದೆ ಇದ್ದ ಸಂದರ್ಭಗಳನ್ನು ಕೂಡಾ ಹಿಂದೀಯರು ಕಳೆದುಕೊಳ್ಳಬೇಕೆಂಬ ಅರ್ಥವೆ? ಇದು ನಿಜವಾದರೆ ಹೊಸಘಟನೆಯು ನಿಷ್ಪ್ರಯೋಜಕವೆಂಬುದಕ್ಕೆ ಒಂದು ಹೆಚ್ಚಿನ ಕಾರಣವಾಯಿತು.

ಸಿವಿಲಿಯನರನ್ನೇ ನೇಮಿಸುವುದಾದರೆ ಒಬ್ಬ ಹಿಂದೀ ಸಿವಿಲಿಯನನನ್ನಾದರೂ ನೇಮಿಸಲಿಲ್ಲವೇಕೆ? ಈ ಜಾತೀಯತೆಯ ಭಾವನೆಯಿಂದ ಸರಕಾರದವರು ಎರಡು ಜನಾಂಗಗಳೊಳಗಿನ ಭೇದವನ್ನು ಹೆಚ್ಚಿಸಿದಂತಾಗುವುದಲ್ಲದೆ ಬೇರೆ ಫಲವಿಲ್ಲ. ಬದಲಿಯಾಗಲೀ ಖಾಯಮಾಗಲಿ ಗವರ್ನರ ಪದವಿಗಳು ಬ್ರಿಟಿಷ್ ಸಿವಿಲಿಯನರಿಗೆ ಮಾತ್ರ ಕಾದಿಟ್ಟ ಬಹುಮಾನಗಳಾಗಬಾರದು. ಅಂಥ ಸ್ಥಾನಗಳಿಗೆಲ್ಲ ಹಿಂದೀಯರೇ ಬರುವ ದಿನವು ದೂರವಿಲ್ಲವೆಂಬುದು ನನ್ನ ನಂಬಿಕೆ.

ಇದನ್ನೆಲ್ಲ ಒತ್ತಟ್ಟಿಗಿಟ್ಟರೂ ಈ ಸ್ಥಾನಗಳಿಗೆ ಬದಲಿಯಾಗಿಯಾಗಲೀ ಖಾಯಮಾಗಿಯಾಗಲಿ ನೇಮಕಗಳನ್ನು ಮಾಡುವಾಗ ಮುಂದೆ ಒಂದು ನಿಶ್ಚಿತ ಕ್ರಮವಿರಬೇಕೆಂಬುದು ನನ್ನ ಅಭಿಪ್ರಾಯ. ಇಂಥ ನೇಮಕಗಳನ್ನು ಆಯಾ ಪ್ರಾಂತ್ಯಗಳ ಮಂತ್ರಿ ಮಂಡಲಗಳ ಸೂಚನೆಗಳಂತೆ ಮಾಡುವ ತತ್ವವನ್ನು ಅಂಗೀಕರಿಸುವುದು ಉತ್ತಮ. ಐರ್ಲೆಂಡಿನಲ್ಲಿ ಈ ತತ್ವವನ್ನು ಇತ್ತೀಚೆಗೆ ಜಾರಿಗೆ ತಂದಿರುವುದನ್ನು ನೋಡಬಹುದು. ಗವರ್ನರ ಜನರಲರನ್ನು ಕೂಡಾ ಮಂತ್ರಿ ಮಂಡಲದ ಸೂಚನೆಯಂತೆ ನೇಮಿಸಿರುವರು. ನಾವು ಹಿಂದೂಸ್ಥಾನದಲ್ಲಿ ಇದೇ ತತ್ವವನ್ನು ಜಾರಿಗೆ ತರಲು ಕಾಯುವುದೇಕೆ?

ಒಂದು ಪ್ರಾಂತ್ಯದಲ್ಲಿ ನೌಕರನಾಗಿದ್ದವನು ಬೇರೆ ಪ್ರಾಂತ್ಯದಲ್ಲಿ ಗವರ್ನರನಾಗುವುದು ಅಷ್ಟೊಂದು ಚೆನ್ನಾಗಿಲ್ಲವೆಂದೇ ನನಗನ್ನಿಸುತ್ತದೆ. ವ್ಯವಹಾರದಲ್ಲಿ ಕೂಡಾ ಇದು ಅಪೇಕ್ಷಣೀಯವಲ್ಲ.

ಇತ್ತೀಚಿನ ನೇಮಕಗಳಲ್ಲಿ ಒಂದು ನಿಶ್ಚಿತ ಧೋರಣೆಯಿರಲಿಲ್ಲವೆಂದು ನಾನು ಭಾವಿಸುತ್ತೇನೆ. ಆದರೆ ಕೆಲವರಲ್ಲಿ ಈ ಕುರಿತು ಸಂಶಯವಿರುವುದರಿಂದ ಸರಕಾರದವರು ಈ ವಿಷಯ ತಮ್ಮ ಧೋರಣೆಯನ್ನು ಸ್ಪಷ್ಟಪಡಿಸಿ ಮುಂದೆ ಇಂತ ನೇಮಕಗಳನ್ನು ಆಯಾ ಮಂತ್ರಿಗಳೊಡನೆ ಕೇಳಿ ಮಾಡುವುದು ಯೋಗ್ಯವಿರುತ್ತದೆ. ಸರಕಾರದವರು ಈ ಕುರಿತು ಇದಕ್ಕೆ ಮೊದಲೇ ಸ್ಪಷ್ಟವಾಗಿ ತಮ್ಮ ಧೋರಣೆಯನ್ನು ಹೇಳಬೇಕಿತ್ತು. ಇನ್ನಾದರೂ ಈ ವಿಚಾರವನ್ನು ವಿಳಂಬವಿಲ್ಲದೆ ಹೇಳಿದರೆ ಸಂಬಂಧಪಟ್ಟವರೆಲ್ಲರಿಗೆ ಒಳ್ಳೆಯದು.

ಕಾಂಗ್ರೆಸ್ಸಿಗೆ ಸೇರಲು ಶರತುಗಳು!

ಮಧ್ಯಪ್ರಾಂತದ ಹಂಗಾಮಿ ಮಂತ್ರಿಗಳಾಗಿದ್ದ ಡಾ. ರಾಘವೇಂದ್ರರಾಯರು ಕಾಂಗ್ರೆಸನ್ನು ಸೇರುವ ಇಚ್ಛೆಯಿಂದ ಮಹಾತ್ಮ ಗಾಂಧಿಯವರಿಗೆ ಪತ್ರ ಬರೆದಿರುವರಷ್ಟೆ. ಆ ವ್ಯವಹಾರದಲ್ಲಿ ಅವರು ಕಾಂಗ್ರೆಸ್ಸಿಗೆ ಸೇರಿ ಕೆಲಸ ಮಾಡಲು ಮೂರು ಶರತುಗಳನ್ನು ಹಾಕಿರುವರು. '(1) ಮುಖ್ಯ ಮಂತ್ರಿಪದವಿಯನ್ನು ತನಗೆ ಕೊಡಬೇಕು. (2) ತನ್ನ ಸಹಕಾರಿಗಳನ್ನು ಆರಿಸುವ ಹಕ್ಕು ನನಗೇ ಇರಬೇಕು. (3) ಪ್ರಾಂತಿಕ ಕಾಯದೇ ಮಂಡಲದಲ್ಲಿಯ ಕಾಂಗ್ರೆಸ್ ಪಕ್ಷ ಮತ್ತು ವರ್ಕಿಂಗ್ ಕಮಿಟಿ ಇವರನ್ನು ಬಿಟ್ಟು ಉಳಿದವರ ಮಾತು ಕೇಳಲಾರೆನು. ಇವೇ ಡಾ. ರಾಘವೇಂದ್ರರಾಯರ ಶರತುಗಳಾಗಿವೆ. ಇಂದು ಭಾರತ ಮಾತೆಯ ಉದ್ಧಾರಕ್ಕೆ 30 ಲಕ್ಷ ಸದಸ್ಯರನ್ನೊಳಗೊಂಡು ಹೊರಟಿರುವ ಏಕ ಮಾತ್ರ ಸಂಸ್ಥೆಯಾದ ಕಾಂಗ್ರೆಸಿಗೆ ಶರತುಗಳನ್ನಿಟ್ಟದ್ದು ಇದು ಮೊದಲನೇ ಬಾರಿ ಏನೂ ಅಲ್ಲ. ನಮ್ಮ ಈ ಪುಟ್ಟ ದೇಶ, ಈ ವಿಚಾರದಲ್ಲಿ ಕಡಿಮೆಯೇನೂ ಇಲ್ಲ. ಕಳೆದ ಡಿ. ಬೋರ್ಡಿನ ಚುನಾವಣೆಯಲ್ಲಿ ಇದೇ ಮಾದರಿಯ ಶರತುಗಳನ್ನು ನಮ್ಮ ಕೊಡಗು ಕಾಂಗ್ರೆಸಿನ ಮುಂದಿಟ್ಟ ಮಹನೀಯರ ವಿಚಕ್ಷಣತೆಯನ್ನು ಈಗ ಹೊಗಳದೆ ಗತ್ಯಂತರವಿಲ್ಲ. ತಮ್ಮ ಶರತುಗಳನ್ನು ಅಂಗೀಕರಿಸಿ ತಮ್ಮನ್ನು ಕಾಂಗ್ರೆಸಿಗೆ ಸೇರಿಸಿಕೊಳ್ಳಲಿಲ್ಲವೆಂದು [illegible] ಲ್ಲಿಯ ಕಾಂಗ್ರೆಸಿನ ಮೇಲೆ ದೋಷಾರೋಪಣೆ ಹೊರಿಸಿದ ಮಹನೀಯರು ದಯಮಾಡಿ ಇದರ ಫಲಿತಾಂಶವೇನಾಗುವದೆಂಬುದನ್ನು ಚಿತ್ತವಿಟ್ಟು ಗಮನಿಸಬೇಕಾಗಿ ಅರಿಕೆ.

ಕೊಡಗು

ಜುಲೈ ತಾರೀಖು ೨೨ನೇ ಶುಕ್ರವಾರ ೧೯೩೮.

ಕೊಡಗಿನ ೧೯೩೬-೩೭ನೇ ವರ್ಷದ ಆಡಳಿತ ವರದಿ.

ಲೇಖಾಂಕ ೧.

ಕೊಡಗಿನ ಸರ್ಕಾರದ 1936-37 ನೇ ವರ್ಷದ ವರದಿಯು ಪ್ರಕಟವಾಗಿ ಕೆಲವು ದಿವಸಗಳಾದವು. ಇದರಲ್ಲಿ ಟೀಕಿಸಲು ವಿಶೇಷ ಸಂಗತಿಗಳಿಲ್ಲದಿದ್ದರೂ, ಆಡಳಿತೆಯ ಫಲಿತಾಂಶವು ಹೇಗಾಗುತ್ತಿದೆಯೆಂಬುದನ್ನು ಗ್ರಾಮಾಂತರಗಳಲ್ಲಿರುವ ಜನರ ತಿಳುವಳಿಕೆಗೆ ತರುವುದು ಅವಶ್ಯವಾಗಿದೆ. ಆ ಕಾರಣ ಈ ವರದಿಯಲ್ಲಿರುವ ಕೆಲವು ವಿಷಯಗಳನ್ನು ಎತ್ತಿ, ಇಲ್ಲಿ ಕೊಡಲಾಗಿದೆ.

'ವರದಿಯ ವರ್ಷದಲ್ಲಿ ಜನರ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳಲಿಲ್ಲ. ಭತ್ತದ ಬೆಲೆಯು ಸ್ವಲ್ಪ ಉತ್ತಮವಾಗಿದ್ದರೂ, ಕ್ರಯವು ಏರದ ಕಾರಣ ರೈತರ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಗೊಳಿಸಲು ಸಾಧ್ಯವಾಗಲಿಲ್ಲ. ವಾಡಿಕೆಯಂತೆ ಅಗತ್ಯವೆಂದು ಕೋರಿದಲ್ಲಿ ಕಂದಾಯ ಮತ್ತು ಟಕ್ಕಾವಿ ಸಾಲಗಳ ಪಾವತಿಗೆ ಸಮಯ ಕೊಡಲಾಯಿತು. ಇದರಿಂದ ಭೂಮಿ ಹರಾಜು ಕಡಿಮೆಯಾಯಿತು. ಇಂಡಿಯಾ ಸರ್ಕಾರದವರು ಕಾಫಿ ಪ್ಲಾಂಟರುಗಳಿಗೆ ಕೊಟ್ಟ ಏಳು ಲಕ್ಷ ರೂಪಾಯಿಯ ಸಾಲವು ಕಾಫಿ ಕೈಗಾರಿಕೆಯನ್ನು ಆರ್ಥಿಕ ದುಃಸ್ಥಿತಿಯ ಪೆಟ್ಟಿನಿಂದ ಕಾಪಾಡುವಂತೆ ಮಾಡಿತು' ಎಂದು ವರದಿಯ ಪ್ರಾರಂಭದಲ್ಲೇ ಹೇಳಲಾಗಿದೆ.

ಆದರೆ ದೇಶದ ಜನರ ಆರ್ಥಿಕ ದುಃಸ್ಥಿತಿಯನ್ನು ಹೋಗಲಾಡಿಸಲು ಸರ್ಕಾರದವರು ಮಾಡಿದ ಕಾರ್ಯಗಳೇನು? ಜನರ ಕೃಷಿಯ ಉತ್ಪತ್ತಿಯನ್ನು ಹೆಚ್ಚಿಸಿ, ಅವರು ಬೆಳೆಸುವ ಧಾನ್ಯಗಳಿಗೆ ಉತ್ತಮವಾದ ಬೆಲೆಯು ಸಿಕ್ಕುವಂತೆ ಮಾಡಿದರೇನೇ ಅವರ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳುವುದು. ಇದಕ್ಕಾಗಿ ಸರ್ಕಾರದವರು ಮಾಡಿದ ಪ್ರಯತ್ನವೇನೆಂದು 'ವ್ಯವಸಾಯ'ವನ್ನು ಕುರಿತ ಪ್ಯಾರಾದಲ್ಲಿ ಹೀಗೆಂದಿರುವರು:—'ಸುಧಾರಿಸಿದ ವ್ಯವಸಾಯ ಕ್ರಮವನ್ನು ಜನರಲ್ಲಿ ಹರಡುವ ಯತ್ನ ಮಾಡಲಾಯಿತು. ವ್ಯವಸಾಯದ ಮುಖ್ಯ ಉತ್ಪತ್ತಿಗಳ ಮಾರಾಟದ ಏರ್ಪಾಡಿನ ಸರ್ವೆ ಮಾಡಲಾಯಿತು. ಕಬ್ಬಿಣದ ನೇಗಿಲುಗಳು ಮತ್ತು ಭತ್ತ, ಕಾಫಿ ಮೊದಲಾದ ಬೆಳೆಗಳಿಗೆ ಗೊಬ್ಬರಗಳು ರೈತರಿಗೆ ಹಂಚಲ್ಪಟ್ಟವು; ಇವುಗಳ ಉಪಯೋಗ ಮತ್ತು ವ್ಯವಸಾಯ ಕ್ರಮಗಳಲ್ಲಿ ರೈತರಿಗೆ ಬೋಧನೆ ಕೊಡಲಾಯಿತು. ಭತ್ತ ಬೆಳೆಸುವುದರಲ್ಲಿ ಹಲವು ಪರಿಶೋಧನೆಗಳು ಮಾಡಲ್ಪಟ್ಟು, ಸುಧಾರಿಸಿದ ರೀತಿಗಳು ಜನರಿಗೆ ಹೇಳಿಕೊಡಲ್ಪಟ್ಟವು. ಕಿತ್ತಳೆ ಪರಿಶೋಧನಾಲಯದ ಕೆಲಸವು ಮುಂದುವರಿಯುತ್ತಿದೆ.'

ಈ ವಿಚಾರವನ್ನು ಕುರಿತು ಹೆಚ್ಚು ಟೀಕಿಸುವ ಅವಶ್ಯವಿಲ್ಲ. ಯಾಕೆಂದರೆ ಇವೆಲ್ಲವೂ ಗ್ರಾಮಾಂತರ ಜನರಿಗೆ ಪ್ರತ್ಯಕ್ಷ ತಿಳಿದಿರುವ ವಿಷಯವಾಗಿರಬೇಕು. ಈ ಕಾರ್ಯಗಳೆಲ್ಲವೂ ಗ್ರಾಮಗಳಲ್ಲಿ ರೈತರಿಗಾಗಿ ಮಾಡಲ್ಪಟ್ಟವಾಗಿವೆ; ಅಂದ ಮೇಲೆ ಅವರಿಗೆ ಗೊತ್ತಿರಲೇ ಬೇಕು. ಆದರೆ ವರದಿಯಲ್ಲಿ ಬರೆದಿರುವಷ್ಟು ಉತ್ತಮವಾದ ಕೆಲಸವು ಗ್ರಾಮಾಂತರಗಳಲ್ಲಿ ನಡೆದಿರುವುದಿಲ್ಲವೆಂದು ಗ್ರಾಮಸ್ಥರಿಗೆ ತಿಳಿಯದೆ ಇರಲಿಕ್ಕಿಲ್ಲ. ಇವೆಲ್ಲ ಬರೀ ವರದಿಯ ಪುಟಗಳನ್ನು ತುಂಬಿಸುವ ಸಾಧನವೆಂದರೆ ತಪ್ಪಾಗಲಾರದು. ಒಂದು ವೇಳೆ ಈ ಕಾರ್ಯಗಳು ಮಾಡಲ್ಪಟ್ಟಿದ್ದರೆ ಅವುಗಳ ಫಲಿತಾಂಶವೇನೆಂದು ಯಾಕೆ ಸೂಚಿಸಲಿಲ್ಲ? ಈ ಪರಿಶೋಧನೆಗಳಿಂದಲೂ, ಸುಧಾರಿಸಿದ ಕ್ರಮಗಳಿಂದಲೂ ರೈತರ ಬೆಳೆ ಫಸಲು ಎಷ್ಟರ ಮಟ್ಟಿಗೆ ಹೆಚ್ಚಿದೆ ಮತ್ತು ಮಾರ್ಕೆಟಿಂಗ್ ಸರ್ವೆಯಿಂದ ಕೃಷಿಕರು ಬೆಳೆಸಿದ ಧಾನ್ಯಗಳಿಗೆ ಎಷ್ಟರ ಮಟ್ಟಿಗೆ ಬೆಲೆ ಹೆಚ್ಚು ದೊರೆತ್ತಿದೆ ಎಂಬೀ ವಿಚಾರಗಳನ್ನು ಪ್ರಕಟಿಸಿದ್ದರೆ ಉತ್ತಮವಾಗಿತ್ತು. ಇದೆಲ್ಲದರ ಫಲಿತಾಂಶವಾಗಿ ಸರ್ಕಾರದವರೇ ಹೇಳುವಂತೆ—'ರೈತರ ಆರ್ಥಿಕ ಹೀನಸ್ಥಿತಿಯು ಒಂದಿಷ್ಟು ಉತ್ತಮಗೊಂಡಿರುವುದಿಲ್ಲ.'

ಕಂದಾಯ ಮತ್ತು ಟಕ್ಕಾವಿ ಸಾಲ ಮರುಪಾವತಿಗೂ ಅಗತ್ಯವಿದ್ದಲ್ಲಿ ಸ್ವಲ್ಪ ಸಮಯ ಕೊಟ್ಟು, ಇದರಿಂದ ಧಾನ್ಯಗಳ ಕ್ರಯವು ಹೆಚ್ಚಿದಾಗ ಅವುಗಳನ್ನು ಪಾವತಿ ಮಾಡಲು ರೈತರಿಗೆ ಅನುಕೂಲ ಮಾಡಿಕೊಟ್ಟಿರುವರೆಂದು ಹೇಳಿರುವರು. ಆದರೆ 1937-38 ರಲ್ಲೂ ಬೆಲೆಯು ಹೆಚ್ಚಲಿಲ್ಲ; ಆದರೂ ಬಾಕಿಯಾದ ಕಂದಾಯವನ್ನು ರೈತರು ಕೊಡಲೇಬೇಕಾಯಿತು. ಈ ತರಹದ ರಿಯಾಯಿತಿಯಿಂದ ರೈತರಿಗೆ ತತ್ಕಾಲಕ್ಕೆ ಮಾತ್ರ ಸಹಾಯವಾಗಿ ತೋರುವುದೇ ಹೊರತು ನಂತರ ಮತ್ತಷ್ಟು ಕಷ್ಟವಾಗಿ ಪರಿಣಮಿಸುವುದು. ಅದರ ಬದಲು ಮಾಫಿ ಬಿಟ್ಟಿದ್ದರೆ ಅದೊಂದು ನಿಜವಾದ ಸಹಾಯವಾಗುತ್ತಿತ್ತು.

'ಏಳು ಲಕ್ಷ ರೂಪಾಯಿಯ ಕಾಫಿ ಸಾಲವು ಕಾಫಿ ಕೈಗಾರಿಕೆಯನ್ನು ಕಾಪಾಡಿತು' ಎಂದು 1936-37 ರಲ್ಲಿ ಬರೆಯಲಾಗಿದೆ. ಆದರೆ ಈ ಸಾಲವೇ ಈಗ ಹಲವು ಕಾಫಿ ತೋಟಗಳನ್ನು ಹರಾಜಿಗೆ ತಂದಿರಿಸಿದೆಯೆಂಬುದು ಆಶ್ಚರ್ಯವನ್ನುಂಟುಮಾಡಬಹುದು. ಕಾಫಿಯ ಕ್ರಯವು ಇಳಿಯುತ್ತಾ ಬಂದ ಕಾರಣ ಕಾಫಿ ಪ್ಲಾಂಟರುಗಳಲ್ಲಿ ಅನೇಕರು ತಮ್ಮ ಸಾಲದ ಕಂತಿನ ಹಣವನ್ನು ಮರುಪಾವತಿ ಮಾಡಲಾರದೆ ಕಷ್ಟಪಡುತ್ತಿರುವರು. ಆದರೆ ಸ್ಥಳೀಯ ಸರ್ಕಾರದವರು ತಮ್ಮ ಆದಾಯದಿಂದ ಈ ಸಾಲವನ್ನು ಮರುಪಾವತಿ ಮಾಡುವ ಶರತ್ತಿನ ಮೇರೆಗೆ ಈ ಸಾಲವನು ಇಂಡಿಯಾ ಸರ್ಕಾರದಿಂದ ಪಡೆದೊಂದ ಕಾರಣ ಈಗ ದಯೆ ದಾಕ್ಷಿಣ್ಯವಿಲ್ಲದೆ ಅಧಿಕಾರಿಗಳು ಕಂತು ಮರುಪಾವತಿ ಮಾಡಲು ತಪ್ಪಿದವರ ಕಾಫಿ ತೋಟಗಳನ್ನು ಹರಾಜು ಮಾಡುತ್ತಿರುವರು. ಹಲವು ಸಂದರ್ಭಗಳಲ್ಲಿ ದೊಡ್ಡ ವಿಸ್ತೀರ್ಣದ ತೋಟಗಳು ಬಹು ಅಲ್ಪ ಬೆಲೆಗೆ ಮಾರಾಟವಾಗುತ್ತಿವೆ. ಕೆಲವು ಸಂದರ್ಭಗಳಲ್ಲಿ ತೋಟಗಳನ್ನು ಕೊಂಡುಕೊಳ್ಳುವವರೇ ಇಲ್ಲದೆ ಸರ್ಕಾರದವರೇ ವಹಿಸಿಕೊಳ್ಳಬೇಕಾಗುತ್ತಿದೆ. ಇದು ತುಂಬಾ ವ್ಯಸನಕರವಾದ ಪರಿಸ್ಥಿತಿಯಾಗಿದೆ. ಸ್ಥಳೀಯ ಸರ್ಕಾರದವರು ಇಷ್ಟು ಕಠಿಣ ತರಹದ ಶರತ್ತಿನಿಂದ ಈ ಸಾಲವನ್ನು ಕೇಂದ್ರ ಸರ್ಕಾರದಿಂದ ಪಡೆದದ್ದೇ ಸರಿಯಲ್ಲ. ಕೆಲವು ಪ್ಲಾಂಟರುಗಳ ಸಹಾಯಕ್ಕಾಗಿ ಇಡೀ ದೇಶದ ಸರ್ಕಾರದ ಆದಾಯವನ್ನು ಒತ್ತೆ ಇಟ್ಟದ್ದು ಎಂದೂ ನ್ಯಾಯವಲ್ಲ. ಈಗ ಪ್ಲಾಂಟರುಗಳ ಸ್ಥಿತಿಯು ಬಹು ಮಟ್ಟಿಗೆ ಕೆಟ್ಟು ಹೋಗಿರುವುದರಿಂದ ಸ್ಥಳೀಯ ಸರ್ಕಾರದವರು ಇಂಡಿಯಾ ಸರ್ಕಾರಕ್ಕೆ ಈ ವಿಚಾರವನ್ನು ವಿವರವಾಗಿ ತಿಳಿಸಿ, ಮುಂದಿಟ್ಟು ಮಾಡಿ ಸಾಲದ ಕಂತುಗಳನ್ನು 5 ರಿಂದ 10 ಕ್ಕೆ ಹೆಚ್ಚಿಸುವ ಮತ್ತು ಈ ವರ್ಷ ಬಾಕಿಯಾಗಿರುವ ಕಂತಿನ ಹಣಕ್ಕೆ ಒಂದು ವರ್ಷದ ವರೆಗೆ ಸಮಯ ಕೊಡುವ ರಿಯಾಯಿತಿಯನ್ನು ಪಡೆಯದೆ ಹೋದರೆ, ಕೊಡಗಿನಲ್ಲಿ ಕಾಫಿ ಕೈಗಾರಿಕೆಯು ಬಹು ಬೇಗನೆ ನಾಶಗೊಳ್ಳಲ್ಪಡುವುದೆಂಬುದರಲ್ಲಿ [illegible] ಕಾಫಿ ಕೈಗಾರಿಕೆಯನ್ನು [illegible] ತಿಳಿಸಬೇಕಾಗಿತ್ತು. ಆದುದರಿಂದ ಚೀಫ್ ಕಮಿಷನರರು ಈಗ ನಡೆದಿರುವ ಹರಾಜುಗಳನ್ನು ನಿಲ್ಲಿಸಿ, ಇಂಡಿಯಾ ಸರ್ಕಾರದಿಂದ ಮೇಲೆ ಸೂಚಿಸಿದ ರಿಯಾಯಿತಿಯನ್ನು ಕೂಡಲೆ ಪಡೆಯಲು ಯತ್ನಿಸುವರಾಗಿ ನಂಬುತ್ತೇವೆ.

ಅತಿ ದೊಡ್ಡ ರಾಜಕೀಯ ಸನ್ಯಾಸಿ.

ಸರ್. ರಾಧಾಕೃಷ್ಣರವರ ಭಾಷಣ.

ಮದ್ರಾಸು 'ಗೋಖಲೆ ಹಾಲ್'ನಲ್ಲಿ ಈ ತಾ. 19 ರಲ್ಲಿ ಮದ್ರಾಸು ಸರ್ಕಾರದ ಪ್ರಧಾನ ಮಂತ್ರಿಯವರಾದ ಶ್ರೀ ರಾಜಗೋಪಾಲಚಾರ್ಯರವರ ಭಾವಚಿತ್ರವನ್ನು ತೆರೆಯುವ ಸಮಾರಂಭದಲ್ಲಿ ಪ್ರಸಿದ್ಧ ತತ್ವಜ್ಞಾನಿಯಾದ ಸರ್. ಯಸ್. ರಾಧಾಕೃಷ್ಣರವರು ಮಾಡಿದ ಭಾಷಣದಲ್ಲಿ ಹೀಗೆಂದು ಹೇಳಿದರು:-

'ದೇಶದ ಸ್ವಾತಂತ್ರ್ಯ ಮತ್ತು ಏಳಿಗೆಗಾಗಿ ಭಕ್ತಿಯಿಂದಲೂ, ತ್ಯಾಗಬುದ್ಧಿಯಿಂದಲೂ ಕೆಲಸ ಮಾಡುವಂಥ ರಾಜಕೀಯ ಸನ್ಯಾಸಿಗಳ ಆವಶ್ಯಕತೆಯನ್ನು ಕಂಡು ಹಿಡಿದ ಇಂಡಿಯಾದ ಪ್ರಥಮ ಮುಂದಾಳು ಎಂದರೆ ನಾಮ್ಯ ಗೋಖಲೆಯವರು. ಇಂಥಾ ಸನ್ಯಾಸಿಗಳಲ್ಲಿ ಎಲ್ಲರಿಗಿಂತಲೂ ದೊಡ್ಡವನು ಮಹಾತ್ಮ ಗಾಂಧಿಯವರು. ಕಾಂಗ್ರೆಸ್ಸಿನ ಕೆಲಸಗಾರರಲ್ಲಿ—ಕೆಲವರು ಗೌರವಕ್ಕೂ, ಸ್ಥಾನಗಳಿಗೂ, ಇನ್ನು ಕೆಲವರು ಮುಂದೊತ್ತುವ ಉತ್ಸಾಹದಿಂದಲೂ ಸೇರಿರುವವರಾದರೂ—ಹೆಚ್ಚಿನವರು ಬಡತನವನ್ನು ಕೈಕೊಂಡಿರುವವರು, ಕಷ್ಟವನ್ನು ಅನುಭವಿಸಿರುವವರು, ತ್ಯಾಗದ ಜೀವನವನ್ನು ನಡಿಸಿರುವವರು. ಅಂಥವರಲ್ಲಿ ಶ್ರೀ ಸಿ. ರಾಜಗೋಪಾಲಚಾರ್ಯರು ಪ್ರಥಮ ಶ್ರೇಣಿಯಲ್ಲಿರುವರೆಂಬುದಕ್ಕೆ ಸಂಶಯವಿಲ್ಲ.'

'ಇಂಡಿಯಾದಲ್ಲಿ ಈಗೊಂದು ಮೌನವಾದ ಸಾಮಾಜಿಕ ಕ್ರಾಂತಿಯು ನಡೆಯುತ್ತಿದೆ. ಈ ಕ್ರಾಂತಿಯು ಮುಂದರಿಯುತ್ತಿರುವಾಗ್ಯೆ ಈ ಚಳವಳಿಯನ್ನು ಸಮತೂಕದ ಮನಸ್ಸಿನ, ಮುಂದಾಲೋಚನೆ ಮತ್ತು ಧೈರ್ಯವಿರುವ, ವಿಶ್ವಾಸ ಮತ್ತು ಶಕ್ತಿ ಇರುವ ಮುಂದಾಳುಗಳು ನಡಿಸಬೇಕಾದದ್ದು ಅತ್ಯವಶ್ಯ. ಈ ಗುಣಗಳಿಂದ ತುಂಬಿರುವ ಶ್ರೀ ಸಿ. ರಾಜಗೋಪಾಲಚಾರ್ಯರಿಗೆ ನಮಸ್ಕರಿಸಲು ನನಗೆ ಆನಂದ ಉಂಟಾಗುತ್ತದೆ. ಇವರ ಭಾವಚಿತ್ರವು ಇಲ್ಲಿ ಸೇರುವ ವಿದ್ಯಾರ್ಥಿಗಳಿಗೆ ಒಂದು ಆದರ್ಶಪಾತ್ರವಾಗುವುದು.'

'ನಾನು ಸ್ವಲ್ಪ ಸಮಯದ ಹಿಂದೆ ಯೂರೋಪಿನಲ್ಲಿದ್ದಾಗ್ಯೆ ಹಿಂದೀಯರ ಕೋರಿಕೆಯನ್ನು ನೆರವೇರಿಸಲು ಈ ಸುಸಂಧಿಯನ್ನು ಕಳಕೊಳ್ಳಬಾರದೆಂದು ಬ್ರಿಟಿಷ್ ಜನರ ಮನಸ್ಸಿಗೆ ಮುಂದಿಟ್ಟು ಮಾಡಲೆತ್ನಿಸಿದೆನು. ಅವರಿಗೆ ಹೀಗೆಂದೆನು—'ಇಂದು ಇಂಡಿಯಾದ ರಾಜಕೀಯ ಚಳವಳಿಯನ್ನು ನಡಿಸುತ್ತಿರುವ ಮುಂದಾಳು ಮತ್ತು ಸಾಧುನಿಂಥವರು ಪ್ರತಿ ವರ್ಷ ಯಾ ಪೀಳಿಗೆಗೊಮ್ಮೆ ಹುಟ್ಟುವವರಲ್ಲ, ಅವರು ಹಲವು ಶತಮಾನಗಳಿಗೊಮ್ಮೆ ಜನ್ಮವೆತ್ತುವವರು; ಮತ್ತು ಅವರು ಪೂರ್ಣ ಸ್ವರಾಜ್ಯ ಅಂದರೆ ಸ್ವಾತಂತ್ರ್ಯದ ಹಕ್ಕನ್ನು ಮಾತ್ರ ಕೇಳುತ್ತಿರುವರು. ಅದು ನ್ಯಾಯ ಮತ್ತು ಉಚಿತವಾಗಿದೆ. ಅದನ್ನು ಇಂದಲ್ಲ ಒಂದು ದಿನ ಕೊಡಲೇಬೇಕು. ಯೋಚಿಸಿ ಒಂದು ಬಿಕ್ಕಟ್ಟು ಅದನ್ನು ನಿರ್ಧರಿಸುವುದು. ಅವರು ಜೀವಂತರಾಗಿರುವಾಗ ಮತ್ತು ಆ ಚಳವಳಿಯನ್ನು ಪೂರ್ಣ ಅಹಿಂಸಾತತ್ವದಿಂದ ನಡಿಸುತ್ತಿರುವಾಗ ನೀವು ಅವರೊಡನೆ ಒಂದು ರಾಜಿಗೆ ಬಾರದೆ ಹೋದರೆ, ಅವರ ಅವಸಾನದ ಪರಿಣಾಮವೇನಾಗುವುದೆಂದು ಯೋಚಿಸಲು ನಾನು ನಡುಗುತ್ತೇನೆ. ಬ್ರಿಟಿಷರು ಮೂಲೆಗೊತ್ತಲ್ಪಟ್ಟರೆ ಯಾ ಅವರಿಗೆ ವಿಧಿ ಇಲ್ಲದಂತೆ ಮಾಡಿದರೆ ಮಾತ್ರ ಅವರು ಏನನ್ನಾದರೂ ಕೊಡುವರಲ್ಲದೆ ಅನ್ಯಥಾ ಇಲ್ಲವೆಂದು ಈಜಿಪ್ಟ್, ಐರ್ಲೆಂಡ್, ದಕ್ಷಿಣ ಆಫ್ರಿಕಾ ಮುಂತಾದ ದೇಶಗಳು ಇಂಡಿಯಾಕ್ಕೆ ಹೇಳಿಕೊಡುತ್ತಿವೆ. ಗಾಂಧಿಜಿಯವರು ಅಪಜಯ ಹೊಂದಿದರೆ, ಅಹಿಂಸಾತತ್ವವು ಹಿಂದಕ್ಕೆ ತಳ್ಳಲ್ಪಟ್ಟರೆ ಈ ದೇಶದ ಕೋರಿಕೆಗೆ ಪ್ರಪಂಚದ ಮನಸ್ಸಿಗೆ ಬೆಂಬಲವು ದೊರೆತರೆ ಮತ್ತು ಬ್ರಿಟನ್ನಿಗೂ ಈ ದೇಶಕ್ಕೂ ದೊಡ್ಡ ಕದನ ಉಂಟಾದರೆ ಅದು ಈ ಮೊದಲು ಕೇಳರಿಯದಷ್ಟು ದೊಡ್ಡ ಕದನವಾಗುವುದೆಂಬುದರಲ್ಲಿ ಸಂಶಯವಿಲ್ಲ. ಹಿಂದೀಯರ ನ್ಯಾಯವಾದ ಕೋರಿಕೆಗಳನ್ನು ಕೊಡದಿದ್ದರೆ ಉಂಟಾಗುವ ಚಳವಳಿಯು ಈ ಮೊದಲಿನ ದೊಡ್ಡ ಸಿಪಾಯಿ ದಂಗೆ ಅಥವಾ ಅಸಹಕಾರದ ಚಳವಳಿಯನ್ನು ಅಲ್ಪವನ್ನಾಗಿ ಮಾಡುವುದು.'

ಒಳದೇಶ.

ತಾ. 15-7-38ರಿಂದ 22-7-38ರ ವರೆಗೆ ಮಡಿಕೇರಿಯಲ್ಲಿ 8 ಇಂಚು 94 ಸೆಂಟು ಮಳೆಯಾಗಿದೆ. ತಾ. 21ರಲ್ಲಿ 2 ಇಂಚು 71 ಸೆಂಟು ಮಳೆ ಬಿದ್ದಿದೆ.

ಸಿದ್ದಾಪುರದ ಚಾರ್ಟರ್ಡ್ ಎಸ್ಟೇಟಿನ ಮಿ. ಕಟ್ಟೆಂಡ ಕಾರ್ಯಪ್ಪನವರು ಈ ತಾ. 16ರಲ್ಲಿ ಒಂದು ಹುಲಿಯನ್ನು ಗುಂಡು ಹೊಡೆದು ಕೊಂದರೆಂದು ತಿಳಿಯಬರುತ್ತದೆ.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ. 30ರಲ್ಲಿಯೂ, ಸುಪರ್‌ವಿಜನ್ ಬೋರ್ಡಿನ ಮೀಟಿಂಗು ಈ ತಾ. 23ರಲ್ಲಿಯೂ ನಡೆಯುವವಾಗಿ ತಿಳಿಯಬರುತ್ತದೆ.

ಕಲ್ಲಿಕೋಟೆಯ ಮಿ. ಜಿ. ಸಿ. ದಾಸ್‌ರವರು ಇಡೀ ಹಿಂದೂಸ್ಥಾನದಲ್ಲಿ ಕಾಲ್ನಡಿಗೆಯ ಪ್ರಯಾಣ ಮಾಡಲುದ್ಯುಕ್ತರಾಗಿ ಈ ವಾರ ವೀರಾಜಪೇಟೆ-ಮಡಿಕೇರಿಗಾಗಿ ನಾಟೆ ಮೈಸೂರಿಗೆ ಹೋದರು.

ಕಳೆದ ತಾ. 30ರ ರಾತ್ರಿ ಸೂರ್ಯಮುಡಿ ಗ್ರಾಮದ ಮಿ. ಜಿ. ಜಿ. ವೀರಭದ್ರಯ್ಯನವರ ಕೊಟ್ಟಿಗೆಯೊಂದು ಮಳೆಗಾಳಿಯ ದೆಸೆಯಿಂದ ಮುರಿದು ಬಿದ್ದು, ದನಕರುಗಳಿಗೆ ಜಖಂ ಆಗಿ, ಐನೂರು ರೂಪಾಯಿಗಿಂತ ಹೆಚ್ಚು ನಷ್ಟವಾಯಿತೆಂದು ವರ್ತಮಾನ.

ಚೀಫ್ ಫಾರೆಸ್ಟ್ ಆಫೀಸರಾದ ಮಿ. ಜಿ. ಡಬ್ಲ್ಯು. ಯಂ. ಮಿಚೆಲ್‌ರವರು ತಾರೀಕು 18-7-38ರಿಂದ ಒಂದು ತಿಂಗಳ ರಜೆಯಲ್ಲಿ ಹೋಗಿರುವರು. ದಕ್ಷಿಣ ಕೊಡಗಿನ ಡಿವಿಜನಲ್ ಆಫೀಸರಾದ ಮಿ. ಯಂ. ಯಸ್. ರಂಗಸ್ವಾಮಿಯವರು ಅವರ ಹುದ್ದೆಯ ಚಾರ್ಜಿನಲ್ಲಿರುವರು.

ಸೋಮವಾರಪೇಟೆ, ಫ್ರೇಜರ್‌ಪೇಟೆ ಮತ್ತು ಕೊಪ್ಪಪೇಟೆ ನೋಟಿಫೈಡ್ ಏರಿಯಾಗಳ ಕಮಿಟಿಗಳ ಅವಧಿಯನ್ನು ಸರಕಾರದವರು ಬರುವ ಆಗೋಸ್ಟು 10ರ ವರೆಗೆ ಮುಂದರಿಸಿರುವರು. ಈ ಮೂರು ಸ್ಥಳಗಳ ಕಮಿಟಿಗಳ ಚುನಾವಣೆಯು ಈ ತಾ. 28ರಲ್ಲಿ ಜರಗುವದಾಗಿ ಪ್ರಕಟವಾಗಿದೆ.

ಡೇರಾಡೂನ್ ಮಿಲಿಟರಿ ಕಾಲೇಜಿನಲ್ಲಿ ತರಬೇತು ಹೊಂದುತ್ತಿರುವ ಮಿ. ಕೆ. ಯಂ. ಚಂಗಪ್ಪ ಬಿ. ಎ. ಯವರು ತಮ್ಮ ಕಾಲೇಜು ಮತ್ತು ಸೈನ್ಯ ಜೀವನವನ್ನು ಕುರಿತು ತಾ. 14-7-38ರಲ್ಲಿ ವೀರಾಜಪೇಟೆ ಹೈಸ್ಕೂಲ್ ಹಾಲ್‌ನಲ್ಲಿ ಭಾಷಣ ಮಾಡಿದರು. ಕೆಪ್ಟನ್ ಕೆ. ಎ. ಪೊನ್ನಣ್ಣನವರು ಅಧ್ಯಕ್ಷರಾಗಿದ್ದರು.

ಬೆಳಗಾಂ ಮಿಲಿಟರಿಯಲ್ಲಿದ್ದ ಮಿ. ಚೆಂಡಪ್ಪೂಡ ಪೊಣ್ಣಪ್ಪನವರನ್ನು 2 ತಿಂಗಳ ವಿಶೇಷ ತರಬೇತಿಗೆ ಸೈನ್ಯಾಧಿಕಾರಿಗಳು ಆರಿಸಿ, ಅಹಮದ್ ನಗರದ ಮರಾಟ ಲೈಟ್ ಇನ್‌ಫೇಂಟ್ರಿಯ 5ನೇ ಬಟಾಲಿಯನ್ನಿಗೆ ವರ್ಗಾಯಿಸಿರುವರೆಂದೂ ಅಲ್ಲಿಯ ಮಿಲಿಟರಿ ಉದ್ಯೋಗಸ್ಥರ ಪೈಕಿ ಇವರೊಬ್ಬರೇ ಈ ತರಬೇತಿಗೆ ಆರಿಸಲ್ಪಟ್ಟಿರುವರೆಂದೂ ತಿಳಿಯುತ್ತೇವೆ.

ಯೂರೋಪಿಯನರ ಪರವಾಗಿ ಲೆಜಿಸ್ಲೇಟಿವ್ ಕೌನ್ಸಿಲ್ ಸದಸ್ಯರಾಗಿದ್ದ ಮಿ. ಮಿರ್ಚ್ ಬುಲ್‌ರವರು ಇಂಗ್ಲೆಂಡಿಗೆ ಹೋಗಿರುವ ಕಾರಣ ಕೌನ್ಸಿಲಿನಲ್ಲಿ ಖಾಲಿಯಾದ ಸ್ಥಳಕ್ಕೆ ಒಬ್ಬರನ್ನು ಯೂರೋಪಿಯನ್ ಮತದಾರರು ಆಗೋಸ್ಟು 25ನೇ ತಾರೀಕಿನೊಳಗೆ ಚುನಾಯಿಸಬೇಕೆಂದು ಚೀಫ್ ಕಮಿಷನರವರು ಗಜೆಟಿನಲ್ಲಿ ಪ್ರಕಟಿಸಿರುವರು.

ವರ್ತಮಾನ ಸಂಗ್ರಹ.

ಹಿಂದೂದೇಶ.

1937-'38ರಲ್ಲಿ ರೈಲ್ವೆಯವರ ಆದಾಯವು ಸುಮಾರು 2 ಕೋಟಿಯಷ್ಟಾಗಿದೆ. ಆದಾಗ ವೃದ್ಧಿಯಾಗಿದೆ.

ಕೊಚ್ಚಿಯ ಮಿನಿಸ್ಟರರ ಸಂಬಳ ತಿಂಗಳಿಗೆ ರೂ. 500, ಎಡೆಷನಲ್ ರೂ. 175 ಎಂದು ಅಲ್ಲಿನ ಶಾಸನ ಸಭೆಯಲ್ಲಿ ನಿರ್ಧಾರವಾಗಿದೆ.

ಮದ್ರಾಸ್ ಮಂತ್ರಿಮಂಡಲವು, ತನ್ನ ಆಳಿಕೆಯನ್ನು ಆರಂಭಿಸಿದ ನೆನಪಿಗಾಗಿ, ಇದೇ ಜುಲೈ ತಾರೀಕು 15ರಂದು, 'ಆಫೀಸ್ ಎಕ್ಸ್‌ಪ್ರೆಸ್'ನ ಉತ್ಸವವು ಅಧಿಕೃತವಾಗಿ ಆಚರಿಸಲ್ಪಟ್ಟಿತು.

ಶ್ರೀಮಾನ್ ಸತ್ಯಮೂರ್ತಿಗಳವರು, ಮುಂದಿನ ಸೆಂಟ್ರಲ್ ಅಸೆಂಬ್ಲಿಯ ಅಧಿವೇಶನದ ಕಾಲದಲ್ಲಿ, ಬಿಳಿ ಅಧಿಕಾರಿಗಳ ಕೆಲವು ನೇಮಕಗಳು, ಅಬಿಸೀನಿಯದ ವಿಚಾರ ಮೊದಲಾದ ವಿಷಯಗಳ ಮೇಲೆ, ಕೆಲವು ಪ್ರಶ್ನೆಗಳನ್ನು ಕೇಳಲಿರುವರು.

ಕರಾಚಿಯ ಉತ್ತರಕ್ಕಿರುವ ಕರಾವಳಿಯಲ್ಲಿ, ಒಂದು ಸಬ್‌ಮೆರೀನ್ (ಜಲಾಂತರ್ಗಾಮಿ ನಾವೆ) ... ಹಂಚಿಕೆ ನಡೆದಿದೆ. ಈ ನಾವೆಗಳಿಗೆ, ಬೇಕಾದ 'ಟಾರ್ಪೆಡೋ'ಗಳನ್ನು, ಜಬ್ಬಲ್‌ಪುರದ ಗನ್ ಕ್ಯಾರಿಯೇಜ್ ಕಾರ್ಖಾನೆಯಲ್ಲಿ ತಯಾರಿಸಲಿರುವರು.

ಕಾಂಗ್ರೆಸಿಗೆ ವಿರೋಧವಾದ ಅಭಿಪ್ರಾಯಗಳನ್ನಿಟ್ಟುಕೊಂಡವರ್‍ನೂ ಸಾರ್ವಜನಿಕ ಸಭೆಯಲ್ಲಿ ಹಾಡಿದವರಿಗಾಗಿ, ... ಜನರು, ಶೋಲಾಪುರದ ಕಾಂಗ್ರೆಸ್ ಕೆಲಸಗಾರರಿಗೆ, ಒಂದು ವರ್ಷದ ಕಠಿಣ ಶಿಕ್ಷೆ ವಿಧಿಸಿದರು.

ಬಂಗಾಳದಲ್ಲಿ ಪುನಃ 23 ಕೈದಿಗಳು ಬಿಡುಗಡೆ ಹೊಂದಿದ್ದಾರೆ. ಪ್ರಾಯಶಃ ಆಗೋಸ್ಟು ಅಂತ್ಯದೊಳಗೇ, ಕ್ರಿಮಿನಲ್ ತಕ್ಸೀರಿಗೆ ಒಳಗಾದ ಯಾವತ್ತು ರಾಜಕೀಯ ಕೈದಿಗಳೂ ಬಿಡುಗಡೆ ಹೊಂದುವರೆಂದು ವದಂತಿ. ಈ ವಿಚಾರದಲ್ಲಿ, ರಾಷ್ಟ್ರಪತಿ ಬೋಸರು, ಮಹಾತ್ಮಾಜಿಯವರನ್ನು ಕಂಡು ಮಾತನಾಡಲಿರುವರೆಂದು ಗೊತ್ತಾಗಿದೆ.

ಮಹಾತ್ಮಾಜಿಯವರು, 'ಸ್ಪೀಕರ್ಸ್ ಮತ್ತು ರಾಜಕೀಯ'ಯ ಕುರಿತಾಗಿ, ತಮ್ಮ ಅಭಿಪ್ರಾಯ ಕೊಟ್ಟಿದ್ದಾರೆ. 'ಸ್ಪೀಕರನ ಸ್ಥಾನವು, ಪ್ರಧಾನರ ಸ್ಥಾನಕ್ಕಿಂತಲೂ ಮಹತ್ವದ್ದು. ಅವನು ನಿಷ್ಪಕ್ಷಪಾತಿಯಾಗಿರಬೇಕಾಗಿದೆ. ಎದುರುಪಾರ್ಟಿಗಳನ್ನು ತನ್ನ ಕಡೆಗೆ ಒಲಿಸಿಕೊಳ್ಳುವ ಸಂದರ್ಭಗಳು, ಅವನಿಗಿರುವಷ್ಟು ಇತರರಿಗೆ ಇಲ್ಲ. ಆದ ಕಾರಣ, ಸ್ಪೀಕರನು ಶಾಸನ ಸಭಾ ಮಂದಿರದ ಒಳಗೂ, ಹೊರಗೂ, ನ್ಯಾಯವಾಗಿ ವರ್ತಿಸಬಲ್ಲ, ಪ್ರಥಮ ಶ್ರೇಣಿಯ ಪಕ್ಷಾ ಕಾಂಗ್ರೆಸ್ ಮಂದಿಯಾಗಿರಬೇಕು' ಎಂದಿದ್ದಾರೆ.

ಕಾಮಾಕ್ಷ್ಯದ ಪ್ರಯೋಗದಿಂದ ಸಂಗಿತ ಸೂಕಪೀಯವರ ಪ್ರಕೃತಿಯು ಸುಧಾರಿಸಿದ್ದರಿಂದ ಮಹಾತ್ಮ ಗಾಂಧಿಯವರೂ ಆ ಪ್ರಯೋಗ ಮಾಡಿಕೊಳ್ಳಬೇಕೆಂದು ಅವರ ಅನುಯಾಯಿಗಳು ಆಗ್ರಹಪಡುತ್ತಿರುವರು. ಬಹಳ ಆಗ್ರಹ ಮಾಡಿದ್ದರಿಂದ ಈ ಬಗ್ಗೆ ವಿಚಾರ ಮಾಡುವುದಾಗಿ ಅವರು ಒಪ್ಪಿರುವರೆಂದು ತಿಳಿಯುತ್ತದೆ. ... ದಿಲ್ಲಿಯ ... ಅಭಿಪ್ರಾಯ ಕೇಳಿದ್ದು, ಅನುಕೂಲ ಅಭಿಪ್ರಾಯ ದೊರೆತಲ್ಲಿ ಒಬ್ಬರ ವಶಿಗಾಲದಲ್ಲಿ ಮಹಾತ್ಮರು ಕಾಯಕಲ್ಪ ಪ್ರಯೋಗ ಮಾಡಿಕೊಳ್ಳಲು ಒಪ್ಪಬಹುದೆಂದು ತೋರುತ್ತದೆ.

... ಹೊಸ ಚಿಂತನೆಗೆ ಬಂದಿದೆ. ... ಡಿ. ... ಪ್ರೆಸಿಡೆಂಟರೂ, ವೈಸ್ ಪ್ರೆಸಿಡೆಂಟರೂ, ಡಿ. ಬೋರ್ಡಿನ ವಿದ್ಯಾಭ್ಯಾಸ ... ಮತ್ತು ... ... ಮತ್ತು ಆ ಕೌನ್ಸಿಲಿನ ಮೆಂಬರರು ... ಒಬ್ಬ ... ಹೆಡ್ಡಿಂಗ್ ಆಫೀಸರರ ಜೊತೆಯಲ್ಲಿ ಹೊರನಾಡು ಭೇಟಿ ಕೊಡಬಾರದೆಂದು ಮದ್ರಾಸ್ ಸರಕಾರವು ಕಟ್ಟಾಜ್ಞೆ ಮಾಡಿದೆ. ಇದರಲ್ಲಿ, ಮುನ್ಸಿಪಲ್ ಕಮಿಷನರುಗಳ ... ಪ್ರಸ್ತಾಪವೇ ... ಇಲ್ಲ.

ವಿದೇಶ

ಪ್ರಿಟನ್ ... ಇದು ವರೆಗೆ, ಹೆಚ್ಚು ಮಾಡುವಲ್ಲದೆ, ಇನ್ನೂ 22,001 ಸಾವಿರ ಪವನುಗಳನ್ನು, ವಿಮಾನ ದಳಕ್ಕಾಗಿ ಹೆಚ್ಚಿಗೆ ವೆಚ್ಚ ಮಾಡಲಿದೆ. ಅಂದರೆ, ಒಟ್ಟು 131,403 ಸಾವಿರ ಪವನುಗಳನ್ನು, ವಿಮಾನ ದಳಕ್ಕಾಗಿಯೇ, ಈ ವರ್ಷದಲ್ಲಿ ವೆಚ್ಚ ಮಾಡಿದಂತಾಗುತ್ತದೆ.

ಹಿಂದೂ ದೇಶದಿಂದ, ಇಂಗ್ಲೆಂಡಿಗೆ ಶ್ರೀಮತಿ ಎಸ್. ಕೆ. ದತ್ತರ ನಾಯಕತ್ವದಲ್ಲಿ, ತೆರಳಿದ್ದ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರ ಕೂಟವನ್ನು, ಮೊನ್ನೆ ಮಹಾರಾಣಿಯವರು, ಬಕ್ಕಿಂಗ್ಹ್ಯಾಮ್ ಅರಮನೆಗೆ ಬರಮಾಡಿಸಿಕೊಂಡು, ಹಿಂದೀ ಸ್ತ್ರೀಯರು, ಹಿಂದೂ ದೇಶದಲ್ಲಿ, ಸ್ತ್ರೀಯರ ಮೇಲ್ಮೆಗಾಗಿ ಮಾಡುತ್ತಿರುವ ಕಾರ್ಯಗಳನ್ನು ತಿಳಿದುಕೊಂಡರು.

ಇಂಡಿಯಾ ಆಕ್ಟಿನಲ್ಲಿ ಬದಲಾವಣೆ ಇಲ್ಲ!

ಇಂಡಿಯಾ ಸರಕಾರದ ಆಕ್ಟಿನ ಫೆಡರಲ್ ಭಾಗಕ್ಕೆ ಇಂಡಿಯಾದ ಜನರ ಬಲವಾದ ವಿರೋಧವಿರುವ ದೆಸೆಯಿಂದ ಫೆಡರಲ್ ಕೆಳಗಿನ (ಎಸೆಂಬ್ಲಿ) ಸಭೆಗೆ ನೇರಾ ಚುನಾವಣೆ ಇರುವ, ಈ ಸಭೆಗೆ ಹಣದ ಮೇಲೆ ಅಧಿಕಾರ ಕೊಡುವ ಮತ್ತು ಇಂಡಿಯಾ ಆಕ್ಟಿನ 112 ರಿಂದ 117 ನೆ ಸೆಕ್ಷನ್ ವರೆಗೆ ಬದಲಾವಣೆ ಮಾಡುವ ಉದ್ದೇಶದಿಂದ ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ತಿದ್ದುಪಡಿಯ ಮಸೂದೆಯೊಂದನ್ನು ತರುವ ಯೋಚನೆ ಸರ್ಕಾರಕ್ಕೆ ಇದೆಯೋ ಎಂದು ಲೇಬರ್ ಪಕ್ಷದ ಮಿ. ಫೋರ್ಡ್ಸ್ ವಿಲ್ಲಿಯಮ್ಸ್‌ರವರು ಈ ತಾ. 18ರಲ್ಲಿ ಕಾಮನ್ಸ್ (ಪಾರ್ಲಿಮೆಂಟ್) ಸಭೆಯಲ್ಲಿ ಪ್ರಶ್ನೆ ಕೇಳಿದರು.

ಇಂಡಿಯಾದ ಅಂಡರ್ ಸೆಕ್ರೆಟರಿಯವರಾದ ಲೆಫ್ಟಿನೆಂಟ್ ಕರ್ನಲ್ ಮ್ಯೂರ್ ಹೆಡ್‌ರವರು ಇದಕ್ಕೆ ಹೀಗೆಂದು ಉತ್ತರವಿತ್ತರು—'ಮೇಲೆ ಹೇಳಿದ ಸ್ಥಿತಿಯು ಪಾರ್ಲಿಮೆಂಟಿನವರ ದೀರ್ಘಾಲೋಚನೆಯ ತೀರ್ಮಾನಗಳ ಫಲಿತಾಂಶವಾಗಿದೆ; ಮತ್ತು ಅದನ್ನು ಪುನಃ ಆಲೋಚಿಸುವಂತೆ ಪಾರ್ಲಿಮೆಂಟನ್ನು ಕೇಳುವ ಇಚ್ಛೆಯು ಸರ್ಕಾರಕ್ಕೆ ಇಲ್ಲ.'

ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿ ಮೀಟಿಂಗು.

ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮೀಟಿಂಗು ಈ ತಾ. 13ರಲ್ಲಿ ವೀರಾಜಪೇಟೆಯಲ್ಲಿ ನಡೆಯಿತು. ಕಮಿಟಿಯ ಪ್ರೆಸಿಡೆಂಟರಾದ ಶ್ರೀ. ಐನಂಡ ಕಾರ್ಯಪ್ಪನವರು ಅಧ್ಯಕ್ಷರಾಗಿದ್ದರು.

ಕಮಿಟಿಯ ಲೆಕ್ಕಾಚಾರ, ಕಾಂಗ್ರೆಸ್ ಮೆಂಬರುಗಳನ್ನು ಸೇರಿಸುವುದು, ಮೆಂಬರರ ಚಂದಾವಲ್ಲಿ ತಾಲೋಕು ಕಮಿಟಿಗಳಿಗೆ ಸಲ್ಲಬೇಕಾದ ಭಾಗ, ಮೊದಲಾದುವುಗಳನ್ನು ಆಲೋಚಿಸಿ ತೀರ್ಮಾನಿಸಿದ ಮೇಲೆ ಕೊಡಗಿನ ಭವಿಷ್ಯತ್ತಿನ ವಿಚಾರ ದೀರ್ಘ ಚರ್ಚೆ ನಡೆಯಿತು. ನಂತರ ಈ ಕೆಳಗಿನ ಠರಾವುಗಳು ಮಂಜೂರು ಮಾಡಲ್ಪಟ್ಟವು.

1. ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆಂಬ ಕೋರಿಕೆ ಕೊಡಗಿನ ಜನರಲ್ಲಿಲ್ಲದಿದ್ದರೂ ಇಲ್ಲಿಯ ಜನರ ಈ ತರಹದ ಕೋರಿಕೆಗೆ ಕಾಂಗ್ರೆಸು ಸಭೆಯು ಹರಿಪುರ ಅಧಿವೇಶನದಲ್ಲಿ ಒತ್ತಾಸೆಯನ್ನಿತ್ತದ್ದಕ್ಕೆ ಈ ಕಮಿಟಿಯು ವಿಷಾದಿಸುತ್ತದೆ; ಮತ್ತು ಈ ಠರಾವನ್ನು ರದ್ದು ಮಾಡಬೇಕೆಂದು ಕಾಂಗ್ರೆಸ್ ಸಭೆಯನ್ನು ಆಗ್ರಹಪೂರ್ವಕ ವಿನಯದಿಂದ ಕೇಳಿಕೊಳ್ಳುತ್ತದೆ.

(2) ಕೊಡಗಿನ ಪೂರ್ಣ ಪ್ರಾಂತೀಯ ಸರ್ಕಾರ ಪಡೆಯಲು ಕೂಡಲೆ ಚಳವಳಿ ಹೂಡಬೇಕೆಂದೂ, ಈ ಚಳವಳಿಯನ್ನು ಯಾವ ರೀತಿ ನಡೆಸಬೇಕೆಂಬ ವಿಚಾರದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಬುದ್ಧಿವಾದ ಕೇಳಬೇಕೆಂದೂ ತೀರ್ಮಾನಿಸಲಾಯಿತು.

ಚೈನಾ-ಜಪಾನ್ ಯುದ್ಧ.

ಚೈನಾ-ಜಪಾನ ಯುದ್ಧವು ಪ್ರಾರಂಭವಾಗಿ ಒಂದು ವರ್ಷವಾಯಿತು. ಈ ಅವಧಿಯಲ್ಲಿ ರಾಜ್ಯ ವಿಸ್ತರಣಾಲಾಲಸೆಯ ಸಮರ ಕ್ಷೇತ್ರದಲ್ಲಿ ಲಕ್ಷೋಪಲಕ್ಷ ಜನರು ತಮ್ಮ ಜೀವದಾನ ಮಾಡಿರುವರು. ಆದರೂ ಯುದ್ಧವು ಕೊನೆಗಾಣುವ ಸಂಭವದಲ್ಲಿಲ್ಲ. ಜಪಾನವು ಚೈನಾವನ್ನು ಕೊನೆಗಾಣಿಸಿ ಬಿಡಬೇಕೆಂಬ ಉತ್ಕಟೇಚ್ಛೆಯಿಂದ ಕಂಕಣಬದ್ಧವಾಗಿ ನಿಂತಿರುವದು. ಜಪಾನವು ಈ ಯುದ್ಧದಿಂದ ಎರಡು ಧ್ಯೇಯಗಳನ್ನು ಗಳಿಸುವ ಇಚ್ಛೆಯಿಂದಿರುವದು. ಯುದ್ಧದಲ್ಲಿ ಸೋತರೆ ಸುಖ, ಗೆದ್ದರೆ ಲಾಭ ಎಂದು ಬಯಸಿದೆ. ಜಪಾನು ಚಿಕ್ಕದೊಂದು ದೇಶ. ಅವರ ಜನ ಸಂಖ್ಯೆಯು ಹೆಚ್ಚು, ಅಲ್ಲಿ ಎಲ್ಲರಿಗೂ ತಮ್ಮ ಹೊಟ್ಟೆ ಹೊರೆಯಲು ಅಸಾಧ್ಯವೆಂದು ತಿಳಿದಿರುವದರಿಂದ ಇಂದು ತಮ್ಮ ಹೊಟ್ಟೆಗೆ ಅನ್ನ ಸಂಗ್ರಹಿಸಲು ನಿರಪರಾಧಿಯರಾದ ಚೈನೀಯರ ಮೇಲೆ ಕೈ ಹಾಕಿದೆ. ಈ ಪಾಠವನ್ನು ಜಪಾನು ಇಟಲಿ-ಅಬಿಸೀನಿಯಾ ಯುದ್ಧದಿಂದ ಕಲಿತಿರುವದು. ಆದರೆ ಇಂಥಾ ಅಮೋಘ ಕಾಂಕ್ಷೆಗಳಿಂದ ತೊಡಗಿದ ಜಪಾನಿನ ಭವಿತವ್ಯವು ಆರ್ಥಿಕ ದಿವಾಳಿ, ಕ್ರಾಂತಿ ಮತ್ತು ವಿನಾಶವೇ ಆಗಿರುವದು. ಆದ್ದರಿಂದಲೇ ಭುಲಾಬಾಯಿ ದೇಸಾಯಿಯವರು-"ಜಪಾನು ಹೆಚ್ಚುಕಾಲ ವಿಶಾಲ ಚೈನಾವನ್ನು ಕಾದಾಡಿ, ದೃಢವಾಗಿ ನಿಲ್ಲಲಾರದು. ಅವರ ಆರ್ಥಿಕ ಅಸ್ತಿವಾರವು ಈಗಲೇ ಅಲುಗಾಡುತ್ತಿದೆ. ಜಪಾನಿ ಸೈನಿಕರು ನಿರಾಶೆಯಿಂದ ಕುಗ್ಗಿ ಕುಕ್ಕರಿಸಿರುವರು. ಚೈನಿಯರು ತಮ್ಮ ಮೇಲಾದ ಅತ್ಯಾಚಾರಗಳಿಂದ ದ್ವಿಗುಣಿತವಾಗಿ ವೀರಾವೇಶವೊಂದಿರುವದು" ಎಂದು ಹೇಳಿರುವರು. ಚೈನವು ದೊಡ್ಡ ತ್ಯಾಗವನ್ನು ಮಾಡುತ್ತಿದೆ. ಅವರ ಒಗ್ಗಟ್ಟು ನಿರ್ಧಾರಗಳು ಅತುಲವಾಗಿವೆ. ಇಂದು ಚೈನವು ತನ್ನ ಜನಾಂಗಕ್ಕಾಗಿ ಮಾತ್ರವಲ್ಲ ಇಡೀ ಏಸ್ಯಾ ಖಂಡಕ್ಕಾಗಿ ಹೋರಾಡುತ್ತಿರುವದು.

ಕಳೆದ ತಾ. 7ರಲ್ಲಿ ಚೈನಾದವರೂ ಜಪಾನರೂ ಈಗ ನಡೆಯುತ್ತಿರುವ ಯುದ್ಧದ ವರ್ಧಂತಿಯನ್ನಾಚರಿಸಿದರು. ಆದರೆ ಇತ್ತಂಡಿಯಲ್ಲಿಯೂ ಸಂತೋಷದ ಚಿಹ್ನೆಯು ಮಾಯವಾಗಿತ್ತು. ಚೈನಾದವರಿಗೆ ಅಪರಿಮಿತ ಜನ ಹಾನಿಯಾದುದಲ್ಲದೆ, ಜಪಾನರನ್ನು ಚೈನಾದ ಪವಿತ್ರ ಭೂಮಿಯಿಂದ ಹೊಡೆದೋಡಿಸಲು ಸಾಧ್ಯವಾಗದಿರುವದೇ ಆ ನಿರುತ್ಸಾಹಕ್ಕೆ ಕಾರಣ. ಜಪಾನರ ಮಟ್ಟಿಗೆ ಚೈನಾವನ್ನು ಹೆಳ್ಳಿಂದರೆ ಎರಡು ಮೂರು ತಿಂಗಳಲ್ಲಿ ಬರೀ ಅರ್ಧ ಲಕ್ಷ ಸಿಪಾಯಿಗಳ ಸಹಾಯದಿಂದ ಬಗ್ಗುಬಡಿದು ವಶಪಡಿಸಿಕೊಳ್ಳಬಹುದೆಂದು [illegible] ರಣರಂಗಕ್ಕೆ ಧುಮುಕಿದ ಜಪಾನ [illegible] [illegible] ಕಳುಹಬೇಕಾಗಿದೆ. ಅಲ್ಲದೆ [illegible] ಕಳುಹಿಸಿದ [illegible] [illegible] [illegible] [illegible] ಕಾರಣ.

ಯುದ್ಧದ ಲಾಭ ನಷ್ಟಗಳು.

ಈವರೆಗಿನ ಕದನದಲ್ಲಿ ಜಪಾನರು 350,000 ಚದರ ಮೈಲುಗಳಷ್ಟು ಭೂಮಿಯನ್ನು ವಶಪಡಿಸಿಕೊಂಡಿರುವರು. ಹತ್ತು ಮುಖ್ಯ ನಗರಗಳನ್ನು ವಶಪಡಿಸಿಕೊಂಡಿರುವರಲ್ಲದೆ 1,300 ಮೈಲು ಚೈನಾದ ಸಮುದ್ರ ತಟಾವಳಿಯೂ ಅವರ ವಶವಾಗಿದೆ. ಈ ಯುದ್ಧದಲ್ಲಿ ಜಪಾನಿನ ಪ್ರತಿಯೊಂದು ಮನೆಯೂ ಒಬ್ಬೊಬ್ಬನನ್ನು ಕಳೆದುಕೊಂಡಿದೆ ಎಂದು ಹೇಳಬಹುದು.

ಚೈನಾಕ್ಕೂ ಅಪರಿಮಿತ ನಷ್ಟವಾಗಿದೆ. ಸೈನಿಕರಿಗಿಂತಲೂ ನಾಗರೀಕರು ಜಪಾನರ ಕ್ರೂರಾಚಾರಕ್ಕೆ ತುತ್ತಾಗಿರುವರು. ಇನ್ನೂ ಚೈನಾದ ವಶದಲ್ಲಿ ಹನ್ನೆರಡು ಮುಖ್ಯ ನಗರಗಳೂ 1500 ಮೈಲು ಸಮುದ್ರ ತಟಾವಳಿಯೂ ಇದೆ. ಇವರಿಗಾದ ಪ್ರಾಮುಖ್ಯ ಲಾಭವೆಂದರೆ ಚೈನಾದ ರಾಷ್ಟ್ರೀಯ ಐಕ್ಯತೆ. ಅದರ ಒಟ್ಟು 145 ಮಿಲಿಯ ಜನರು ಇಂದು ಜಪಾನರನ್ನು ಹೊಡೆದೋಡಿಸಬೇಕೆಂದು ದೃಢಸಂಕಲ್ಪ ಮಾಡಿದ್ದಾರೆ. ಅನೇಕ ವರ್ಷಗಳಿಂದಲೂ ಛಿನ್ನಭಿನ್ನವಾಗಿ ಒಳಗೊಳಗೆ ಅಂತಃಕಲಹ ಮಾಡುತ್ತಿದ್ದವರೆಲ್ಲರೂ ಇಂದು ದೇಶದ ಸ್ವಾತಂತ್ರ್ಯವನ್ನುಳಿಸಲು ನಿರ್ಧರಿಸಿದ್ದಾರೆ. ಇದರಿಂದಾಗಿ ಚೈನಾ ಸಾಮ್ರಾಜ್ಯದಲ್ಲಿ ನವ ಚೇತನ, ನವ ಹುರುಪು, ನವ ಉತ್ಸಾಹ ಮತ್ತು ನವ ದೇಶಪ್ರೇಮ ಉಂಟಾಗಿದೆ. ಆದ್ದರಿಂದ ಇನ್ನು ಕೆಲವು ನಗರಗಳೋ ಅಥವಾ ಕೆಲವು ಸಾವಿರ ಚದರ ಮೈಲುಗಳ ಭೂಮಿಯೋ ಶತ್ರುಗಳ ವಶವಾದರೆ ಯುದ್ಧವು ಕೊನೆಗಾಣುವಂತಿಲ್ಲ. ಈ ಯುದ್ಧದಿಂದ ಚೈನೀಯರಲ್ಲಿ ಐಕ್ಯತೆಯು ನೆಲಸಿ ಧೈರ್ಯ ಸಾಹಸಗಳು ಮೇರೆ ಮೀರಿ ಹರಿಯುತ್ತಿವೆ. ಇದರಿಂದ ಇಂದಲ್ಲ ನಾಳೆ ಚೈನಾವು ಜಪಾನರು ವಶಪಡಿಸಿಕೊಂಡಿರುವ ಸಕಲವನ್ನೂ ಬಡ್ಡಿ ಸಮೇತ ಹಿಂಪಡೆಯುವದರಲ್ಲಿ ಸಂದೇಹವಿಲ್ಲ.

ಕ್ಷಯ ರೋಗ ನಿವಾರಣಾ ನಿಧಿ.

ಸಾರ್ವಭೌಮ ಚಕ್ರವರ್ತಿಯವರ ಇಂಡಿಯಾ ನೇರದ ಕ್ಷಯರೋಗ ನಿವಾರಣಾ ನಿಧಿಗೆ ಕೊಡಗಿನಲ್ಲಿ ಕಳೆದ ಜೂನ್ 30ರ ವರೆಗೆ ವಸೂಲಾದ ಚಂದಾ ಮೊಬಲಗಿನ ವಿವರ:--

ಚೀಫ್ ಕಮಿಷನರವರಾದ ಜೆ. ಕೆ. ಜಿ. ದೆಚ್. ಗೋರ್ಡನ್‌ರವರು-ರೂ. 250. ಕಮಿಷನರಾದ ಮಿ. ಐ. ಯಂ. ಫ್ರೇಜರ್‌ರವರು-ರೂ. 100, ಕ್ಯಾಪ್ಟನ್ ಆರ್. ಡಿ. ಮೈತ್ರೆಯವರು-ರೂ. 30, ಮಿ. ನಿಕಲ್ಸ್‌ರವರು-ರೂ. 25, ಮಿ. ಗಳಾದ ಯಂ. ಎಸ್. ಜೆ. ಥಾಮ್‌ಸನ್, ರಾ. ಸಾ. ವಿಶ್ವನಾಥ ಅಯ್ಯರ್, ಮಹಮದ್ ಉಸ್ಮಾರ್ ಖಾನ್, ಇವರು ಪ್ರತಿಯೊಬ್ಬರು-ರೂ. 20ರಂತೆ. ಮಿ. ಗಳಾದ ಎನ್. ಸಿ. ಸುಬ್ಬಯ್ಯ, ಪಿ. ಯಂ. ನಾಣಯ್ಯ, ಎಸ್. ಮುದ್ದಪ್ಪ, ಬಿ. ಎಸ್. ಕುಶಾಲಪ್ಪ, ಲಿ. ಕೆ. ಹೆಚ್. ಎಫ್. ಮೂರ್ಲೆಂಡ್, ಜಿ. ಎಸ್. ಯಂಗ್‌ಹಸ್ಬೆಂಡ್, ಡಿ. ಸಿದ್ದಣ್ಣ, ಡಿ. ಹೆಚ್. ದಾಸಪ್ಪನವರು-ರೂ. 10ರಂತೆ. ಮಿ ಸಿ. ಯಂ. ರಾಮರಾವ್‌ರವರು-ರೂ. 7-8-0, ಡಾ. ಟಿ. ಬಿ ಮೇದಪ್ಪ, ಡಾ. ಸಿ. ಬಿ. ಅಚ್ಚಯ್ಯ, ರಾ. ಬಾ. ಪಿ. ದೇವಯ್ಯ. ಮಿ. ಗಳಾದ ಪಿ. ಸಿ ಉತ್ತಯ್ಯ, ಅಬ್ದುಲ್ ರಹೀಮಾನ್‌ಖಾನ್, ಟಿ. ಎ. ಟೆಪ್ಸ್‌ಟ್ಸ್, ಸಿ. ಎ. ಟೆಪ್ಸ್‌ಟ್ಸ್, ಹೆಚ್. ಚಂಗಪ್ಪ, ಸಿ. ಆರ್. ಜೋಸೆಫ್, ಬಿಸ್ಮಿಲ್ಲಾದಿನ್ ಸಾಹೇಬ್, ಸಿ. ಹೆಚ್. ಪ್ರೊಸ್ಟಿಜ್, ಮತ್ತು ಪಟೇಲ್ ಹೂವಯ್ಯನವರುಗಳು-ರೂ 5ರಂತೆ ಜುಮ್ಲಾ ರೂ. 612-8-0.

'ಇಂಡಿಯನ್ ರೆಡ್ ಕ್ರಾಸ್ ಸಂಘದ ಕೊಡಗು ಶಾಖೆಯ ಮೂಲಕ ಜಮಾ ರೂ. 200. ಪೊಳಿಬೆಟ್ಟ ಕ್ರಿಶ್ಚಿಯನ್ ಚರ್ಚ್-ರೂ. 90, ಶ್ರೀ ಶ್ರೀನಿವಾಸ ಟೂರಿಂಗ್ ಟಾಕೀಸ್ ರೂ. 75. ಮಿ. ಮಲ್ಲಪ್ಪನವರ ನಾಟಕ ಕಂಪನಿ-ರೂ. 34. ಮಡಿಕೇರಿ ಮುನ್ಸಿಪಾಲಿಟಿ-ರೂ.10. ಜುಮ್ಲಾ ರೂ. 400. ಬಾವಟ ದಿನ ವಸೂಲಾತಿ-ರೂ. 620-15-11. ಪಬ್ಲಿಕಿನವರ ಚಂದಾ-ರೂ. 775-1-5, ಒಟ್ಟು ಜುಮ್ಲಾ ಜಮಾ ರೂ. 2,417-9-4. ಖರ್ಚು-ಪ್ರಿಂಟಿಂಗ್ ಮತ್ತು ಬಾವಟ ದಿನದ್ದು-ರೂ. 61-11-6. ಉಳಿಕೆಯಾದ ರೂ. 2,355-13-10ರಲ್ಲಿ ರೂ. 2,321 ಆ. 8 10ನ್ನು ಡೆಲ್ಲಿಯಲ್ಲಿರುವ ಗೌ. ಖಜಾನ್ಸಿಯವರಿಗೆ ಕಳುಹಿಸಲಾಗಿದೆ. ಬಾಕಿ ರೂ. 34-5-0 ಟ್ರಿಜರಿಯಲ್ಲಿದೆ.

ಐ. ಯಂ. ಫ್ರೇಜರ್,
(ಕಮಿಷನರ್.)

ಡಾ. ಮೇತ್ಯೂಸ್ ಎಬ್ರಹಾಮ್
ದಂತ ವೈದ್ಯರು.
(ಸೀಯರ್ ಶೆಸ್ಸಿ ಬಂಗ್ಲೆ)
(ಪ್ಲವರ್ಸ್ ಹತ್ತಿರ)
ಮಡಿಕೇರಿ.



ಬಾತ್ಮಿ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. [ಕೊ. ಸಂ.

—:0:—

ಕುತ್ತನಾಡು ಹೊಳೆ.

ಅರಪ್ಪು,

ಕುತ್ತನಾಡು ಈ ಮೇಲಿನ ಹೊಳೆಯಿಂದ ಸುತ್ತುವರಿದು ಒಂದು ದ್ವೀಪದಂತಿದೆ. ಇಲ್ಲಿಂದ ಹೊರಗೆ ಹೋಗಲು ಮಳೆಗಾಲದಲ್ಲಿ ಈ ಹೊಳೆಯಿಂದ ಬಹಳ ತೊಂದರೆ ಇದೆ. ಇಂಥಾ ತೊಂದರೆಯನ್ನು ನೀಗಲು ಈ ವರೆಗೆ ಯಾವ ಏರ್ಪಾಡೂ ಆಗಿರುವದಿಲ್ಲ. ಪೊನ್ನಂಪೇಟೆ ಕೊಪ್ಪ ಸಂತೆಗೆ ಹೋಗಲು ಡಿ. ಬೋರ್ಡಿನವರು ಒಂದು ದೋಣಿ ಹಾಕಿಸುತ್ತಾರೆ. ಗೋಣಿಕೊಪ್ಪಲಿಗೆ ವ್ಯಾಪಾರಕ್ಕೆ ಹೋಗುವವರು ಬೆಳಿಗ್ಗೆ ಹೋದರೆ 12 ಗಂಟೆಯ ವರೆಗೂ ನಾಲ್ಕು ನಾಲ್ಕು ಜನರಾಗಿಯೇ ಅವರಲ್ಲಿ ದಾಟಬೇಕು. ನಾಲ್ಕು ಗಂಟೆಯ ಮೇಲೆ ಬರುವಾಗ ಸಹ ಹಾಗೆಯೇ ಹತ್ತು ಗಂಟೆಯ ವರೆಗೆ ಕಾಯಬೇಕು. ಈ ಕಷ್ಟವನ್ನು ಪರಿಹರಿಸಲು ಗ್ರಾಮಾಭಿವೃದ್ಧಿ ಫಂಡಿಗೆ ಅರ್ಜಿ ಬರೆಕೊಂಡ ಮೇರೆ ಗ್ರಾಮಸ್ಥರಿಂದ 250 ರೂಪಾಯಿಗಳೂ ಡಿ. ಬೋರ್ಡಿನಿಂದ 250 ರೂಪಾಯಿಗಳೂ ಸಿಕ್ಕಿದರೆ ಸರಕಾರದಿಂದ 1000 ರೂ ಮಂಜೂರು ಮಾಡಲಾಗುತ್ತದೆ ಎಂಬ ಮಾಹಿತಿ ದೊರೆಯಿತು. ಇದಕ್ಕೆ ನಾವು ಮುಂದಾಗ ಬೇಕಾಗಿದ್ದೇವೆ. [illegible] ನಾವು ಗ್ರಾಮಸ್ಥರು ರೂ. 200 ಕೊಡ [illegible] [illegible] [illegible] [illegible] [illegible]

ಪರೀಕ್ಷಾಕ್ಷೇತ್ರಗಳ ಭತ್ತ ವ್ಯವಸಾಯದ ಫಲಿತಾಂಶ.

ಕೊಡಗಿನ ಭತ್ತ ವ್ಯವಸಾಯದ ಪರೀಕ್ಷಾ ಕ್ಷೇತ್ರಗಳ 1937-38ರ ಫಲಿತಾಂಶವು ಈ ಕೆಳಗಿನ ರೀತಿ ಇದೆಯೆಂದು ವ್ಯವಸಾಯ ಇಲಾಖೆಯ ಡಿಪ್ಯುಟಿ ಡೈರೆಕ್ಟರವರು ತಿಳಿಸಿರುವರು.

ಕ್ಷೇತ್ರ.	ಸ್ಥಳೀಯ ಭತ್ತ.	ಎಕ್ರೆಗೆ, ಬಟ್ಟಿ-ಪರೆ.	ಹೊರಗಿನದು.	ಬಟ್ಟಿ-ಪರೆ.
ಹುದಿಕೇರಿ	ತಿರುಬಿಳಿಯ	15-5	ಬೋಂತ್ ಅಕ್ಕಲು	9-5
ಗೋಣಿಕೊಪ್ಪಲು	,,	22-4	ಪುನಾಸ್ ಕೊನಮಣಿ	16-7
ನಾಪೋಕ್ಲು	,,	18-3	ಅಟ್ರಗಡ	20-7
ಮುಕ್ತಾಮೂರ್ತಿ	ಮುಂಡೊಳಿಯ	20-4	ಕೊನಮಣಿ	19-2

ಸೂಚನೆ:-(1) ಹುದಿಕೇರಿ ಮತ್ತು ಮುಕ್ತಾಮೂರ್ತಿ ಕ್ಷೇತ್ರಗಳಲ್ಲಿ ಪರೀಕ್ಷಿಸಿದ ಬತ್ತದ ಜಾತಿಗಳು-ನೀರು ಕಡಿಮೆಯಾದ ಎತ್ತರ ಸ್ಥಳಗಳಲ್ಲಿರುವ ಗದ್ದೆಗಳಲ್ಲಿ ಸ್ಥಳೀಯ ಜಾತಿಗಳಿಗಿಂತ ಕೊಂಚ ಕಾಲದಲ್ಲಿ ಬೆಳೆಯುವವಾಗಿವೆ.

(2) ಮುಕ್ತಾಮೂರ್ತಿಯಲ್ಲಿ ಉಪಯೋಗಿಸಿದ 'ಕೊನಮಣಿ' ಬತ್ತದ ಬೆಳೆಗೆ 'ಸ್ಟೆರಿಲಿಟಿ' ಎಂಬ ಕಾಯಿಲೆಯು ಅಂಟಿತ್ತು.

ಕೃತಕ ಗದ್ದೆಗಳ ಫಲಿತಾಂಶ.

ಕೆಲವು ಕೃತಕ ಗದ್ದೆಗಳಲ್ಲಿ ನಾಟಿಯಾಗಿ ಹಾಕುವ ವನದ ಗೊಬ್ಬರದ ಮೇಲೆ ಎಕ್ರೆಗೆ 50 ಪೌಂಡು 'ಸಿಸಿಪ್ರೋಸ್' ಎಂಬ ಕೃತಕ ಗೊಬ್ಬರ ಹಾಕಿದ್ದರ ಎಕ್ರೆಗೆ ಸರಾಸರಿ ದೊರೆತ ಫಲಿತಾಂಶ ಹೀಗಿದೆ:-

ಕೃತಕ ಗೊಬ್ಬರದ ಕ್ರಯ ರೂ. 3-15-6.
ಈ ಗೊಬ್ಬರ ಉಪಯೋಗಿಸದಲ್ಲಿ ಫಸಲು ಬಟ್ಟಿ 17 ಪರೆ 6.
ಈ ಗೊಬ್ಬರ ಉಪಯೋಗಿಸಿದಲ್ಲಿ ಫಸಲು ,, 20 ,, 5.
ಹೆಚ್ಚಿನ ಉತ್ಪಾದನೆ ,, 2 ,, 7.

ಬಟ್ಟಿಗೆ ರೂ. 3ರ ದರದಲ್ಲಿ ಇದರಿಂದ ರೂ. 6-11-4 ಹೆಚ್ಚಿನ ಲಾಭವಾಯಿತು.

ಲು ಸಾಧ್ಯವಾಗಲಿಲ್ಲ. ಆದರೆ ಈ ವರ್ಷ ಕೆಲಸವು ಜರಗಬಹುದೆಂದು ಊಹಿಸಿದ್ದೆವು. ಆದರೆ ಅದೂ ನಿರಾಶೆಯೇ ಆಯಿತು. ಈಗ ನಮ್ಮಲ್ಲಿ, ಮುಂದಿನ ವರ್ಷಕ್ಕಾದರೂ ಆದೀತೋ ಎಂಬ ಶಂಕೆ ಹುಟ್ಟಿದೆ. ಈಗ ಸರಕಾರದಿಂದ ಬಂದ ನೋಟೀಸು ಮೇರೆ ನಾವು ಕೇಳುವ ಸ್ಥಳದಲ್ಲಿ ಪಾಲ ಕಟ್ಟಿಸದೆ ಬೇರೆ ಸ್ಥಳದಲ್ಲಿ ಕಟ್ಟಿಸುವಂತೆ ತಿಳಿದು ಬರುತ್ತದೆ. ಇದು 'ಧರ್ಮಕ್ಕೆ ಕೆರೆತೋಡಿ ಕರ್ಮಕ್ಕೆ ಹೊಸಳೆ ಬಿಟ್ಟ' ನಾಣ್ಣುಡಿಯಂತಾಗುವದು. ಈಗ ಅವರು ಸೂಚಿಸಿರುವ 'ನಾಡುಗುಂಡಿ' ಎಂಬಲ್ಲಿ ಪಾಲ ಹಾಕುವದಾದರೆ ನಾಡಿನವರಿಗೆ ಎಂದೂ ಪ್ರಯುಕ್ತವಿಲ್ಲ. ಇದರಿಂದ ಬರೇ ಒಂದೆರಡು ಮನೆಯವರಿಗೆ ಅನುಕೂಲವಾಗುವದೇ ವಿನಹ ನಾಡಿನವರಿಗೆ ಪೆಟ್ಟಿನ ಉಪಯೋಗ ದೊರೆಯಲಾರದು. ಈಗಿನ ಪಾಲ ಹಾಕುವ ಸ್ಥಳವು ಗದ್ದೆಗಳ ಮಧ್ಯದಲ್ಲಿರುವದರಿಂದ ರಸ್ತೆ ಮಾಡಲಿಕ್ಕೆ ಭೂಮಾಲಿಕರು ಒಪ್ಪಲಿಕ್ಕಿಲ್ಲ. ಈ ವಿಷಯ ಕಮಿಷನರವರಿಗೆ ಅರ್ಜಿದಾಸ್ತು ಮಾಡಿಕೊಳ್ಳಲಾಗಿದೆ. ಆದ್ದರಿಂದ ಇನ್ನಾದರೂ ಈ ಚಿತ್ರವೃತ್ತಿಯನ್ನು ಬದಲಾಯಿಸಿ ಈಗ ಇರುವ ರಸ್ತೆಯ 'ಕೆಂದರಿ' ಕಡವಿನಲ್ಲೇ ಪಾಲ ಹಾಕಿಸಬೇಕಾಗಿ ಕಮಿಷನರ್ ಸಾಹೇಬರವರನ್ನು ವಿನಯದಿಂದ ಕೇಳಿಕೊಳ್ಳುವ,

'ಕುತ್ತುನಾಡಿನವ.'

ಸಹಕಾರಿ ಸಂಸ್ಥೆಯೂ, ಸರ್ಕಾರಿ ಉದ್ಯೋಗಸ್ಥರೂ.

ಅಯ್ಯಾ,

ಕಳೆದ ಜೂನ್ ತಾ. 20ರಲ್ಲಿ 'ಜನ್ಮಭೂಮಿ' ಪತ್ರಿಕೆಯಲ್ಲಿ ಈ ಮೇಲಿನ ಶಿರೋನಾಮೆಯ ಚಾಕ್ಮಿಯೊಂದನ್ನು ಓದಲಾಯಿತು. ಸರ್ಕಾರಿ ಉದ್ಯೋಗಸ್ಥರೂ ಅವರವರ ಇಲಾಖಾ ಸಹಕಾರಿ ಸಂಘಗಳಲ್ಲಿ ಅಲ್ಲದೆ ಇತರ ಪತ್ತಿನ ಸಂಘಗಳ ಕಾರ್ಯಕಾರಿ ಮಂಡಳಿಯಲ್ಲಿ ಸೇರಿ ಕೆಲಸ ನಡೆಸುತ್ತಿರುವರೆಂದೂ ಈ ವಿಷಯವನ್ನು ಸರ್ಕಾರದವರು ತಿಳಿದು ಬೇರೆ ಪತ್ತಿನ ಸಂಘಗಳ ಮತ್ತು ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುತನದಲ್ಲಿ ರಕೂಡದೆಂದು ಕೆಲವು ಸರಕಾರಿ ಉದ್ಯೋಗಸ್ಥರಿಗೆ ಹುಕುಂ ಮಾಡಿರುವರಾಗಿಯೂ ಉಲ್ಲೇಖಿಸಿದ್ದು ವಾಸ್ತವ್ಯವಾಗಿದೆ.

ಜಿನಸು, ಬಟ್ಟೆ ವಗೈರೆ ಸಾಮಾನುಗಳನ್ನು ಕೆಲವು ಸ್ಟೋರುಗಳಲ್ಲಿ ಕೆಲವರಿಗೆ ಸಾಲವಾಗಿ ಬಿಕ್ರಿ ಮಾಡುವುದರಿಂದ ಈ ಸಂಸ್ಥೆಗಳೂ ಸಹ ಪತ್ತಿನ ಸಂಘಗಳೆಂದೂ ಅವುಗಳ ಕಮಿಟಿಯಲ್ಲಿಯೂ ಸರ್ಕಾರಿ ಉದ್ಯೋಗಸ್ಥರು ಇರಕೂಡದೆಂದೂ 'ಸಹಕಾರಿ'ಯವರ ಅಭಿಪ್ರಾಯವು ಒಪ್ಪತಕ್ಕದ್ದಲ್ಲ. ಸ್ಟೋರುಗಳನ್ನು ಸ್ಥಾಪಿಸುವಾಗ ಅವುಗಳ ಕೆಲಸವನ್ನು ಚೆನ್ನಾಗಿ ನಡೆಸುವದಕ್ಕೆ ಉದ್ಯೋಗಸ್ಥರ ಸಹಾಯವು ಅವಶ್ಯಕವೆಂದೂ, ಚೆನ್ನಾಗಿ ಕೆಲಸ ಮಾಡುವದಕ್ಕಾಗಿ ಅವರು ಮುಂದೆ ಬರುತ್ತಿರುವದರಿಂದ ಸರ್ಕಾರಿ ಉದ್ಯೋಗಸ್ಥರ ಸಹಾಯವು ಅವಶ್ಯವಿಲ್ಲವೆಂದೂ, 'ಸಹಕಾರಿ'ಯವರ ಅಭಿಪ್ರಾಯವಿರುತ್ತದೆ. ಅಲ್ಲದೆ ಇಂಥಾ ಉದ್ಯೋಗಸ್ಥರು ಕೆಲವು ಸ್ಟೋರುಗಳ ಕಮಿಟಿಗಳಲ್ಲಿದ್ದರೂ ಅವುಗಳು ಅಭಿವೃದ್ಧಿಯನ್ನು ಹೊಂದುತ್ತಿಲ್ಲ, ಅನೇಕ ಸ್ಟೋರುಗಳು ನಷ್ಟದಲ್ಲಿ ಕೆಲಸ ಮಾಡುತ್ತಿವೆ, ಕೆಲವು ಸ್ಟೋರುಗಳು ಮುಚ್ಚಿವೆ, ಕೆಲವು ಮುಚ್ಚುವ ಸ್ಥಿತಿಗೆ ಬಂದಿವೆ. ಇವೇ ಮೊದಲಾದ ಆರೋಪಣೆಯನ್ನು ಸರ್ಕಾರಿ ಉದ್ಯೋಗಸ್ಥರ ಮೇಲೆ ಹೊರಿಸುವ 'ಸಹಕಾರಿ'ಯವರ ಅಭಿಪ್ರಾಯಕ್ಕೆ ವ್ಯಸನಪಡಬೇಕಾಗಿದೆ. ಸ್ಟೋರುಗಳ ಹೀನಾವಸ್ಥೆಗೆ ಸರ್ಕಾರಿ ಉದ್ಯೋಗಸ್ಥರು ಸ್ವತಃ ಮತ್ತು ವ್ಯಕ್ತಿತಃ ಕಾರಣಪುರುಷರಲ್ಲವೆಂಬದನ್ನು ಆಯಾಯ ಸ್ಟೋರುಗಳಿಗೆ ಅನ್ವಯಿಸುವ ಕಾರಣಗಳು ಅನೇಕ ಇವೆ ಎಂಬದನ್ನು ಮರೆಯಬಾರದು.

ನಮ್ಮ ದೇಶದಲ್ಲಿ 1921ನೇ ಇಸವಿಯ ವರೆಗೆ ಬರೇ ಪತ್ತಿನ ಸಂಘಗಳು ಸ್ಥಾಪಿಸಲ್ಪಟ್ಟು ಅನಂತರ ಆರ್ಥಿಕ ಮುಗ್ಗಟ್ಟಿನ ಬೇಸಿಗೆಯಿಂದ ಜನರು ಬಂಗೆದುವ ಕಾಲಕ್ಕೆ ಬಿನ್‌ಪತ್ತಿನ ಸಂಘಗಳು ಸ್ಥಾಪಿಸಲ್ಪಡಲು ಪ್ರಾರಂಭವಾದವು. ಅನೇಕ ಬಾಧ್ಯಸ್ಥಗಳಲ್ಲಿ ಅಮೋಘವಾದ ಸಹಕಾರದ ಒಂದು ಜೀವ ಮಾತ್ರವು ಜನರ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಪಡಿಸುವದಾಗಿದೆ. ಈ ಸಾಂಪತ್ತಿಕಾಭಿವೃದ್ಧಿಯು ಬರೇ ಪತ್ತಿನ ಸಂಘಗಳ ಮೂಲಕವೇ ಉಂಟಾಗದೆ ಬೆಳೆಸುವವರ (Producer's) ಮತ್ತು ಉಪಯೋಗಿಸುವವರ (Consumers') ಬಿನ್‌ಪತ್ತಿನ ಸಂಘಗಳ ಸಹಾಯದಿಂದ ಉಂಟಾಗುವದೆಂಬದನ್ನು ನಮ್ಮ ಜನರು ಕಡವಾಗಿಯಾದರೂ ತಿಳಿದುಕೊಂಡದ್ದು ಸಂತೋಷಕರವಾಗಿದೆ. ಬಹು ಕಡವಾಗಿ ನಾವು ಸ್ಟೋರು ಸಂಘಗಳನ್ನು ವಿಚಾರಿಸಲಿಕ್ಕೆ ತೊಡಗಿದ್ದರಿಂದ ವ್ಯಾಪಾರದ ಧರ್ಮ ಮತ್ತು ಗುಟ್ಟನ್ನು ನಾವು ಸಾವಕಾಶದಿಂದ ತಿಳಿಯಬೇಕಾಗಿದೆ. ಸ್ಟೋರುಗಳ ಕೆಲಸಗಾರರು, ಮುಖ್ಯವಾಗಿ ಗುಮಾಸ್ತರು, ಸೇಲ್ಸ್‌ಮ್ಯಾನ್‌ಗಳು ಮತ್ತು ಕಾರ್ಯನಿರ್ವಾಹಕ ಮಂಡಳಿಯವರು ವ್ಯಾಪಾರದ ಪರಿಪಾಟಿಗಳಿಗೆ ಹೊಸಬರಾದದ್ದು ಒಂದುಕಡೆ, ಆರ್ಥಿಕ ಮತ್ತು ವ್ಯಾಪಾರದ ಮುಗ್ಗಟ್ಟು ಇನ್ನೊಂದು ಕಡೆ, ಸ್ಪರ್ಧೆ ಮತ್ತು ಉದ್ರೇಕ ಮತ್ತು ಪ್ರಯೋಜನವನ್ನು ಮೆಂಬರುಗಳು ತಿಳಿದುಕೊಳ್ಳದೆ ಪ್ರೋತ್ಸಾಹ ಕಡಮೆಯಾದದ್ದು ಮತ್ತೊಂದು ಕಡೆ ಮತ್ತು ಕೆಲಸಗಾರರ ಮೋಸಗಾರಿಕೆ ಮತ್ತು ಅಪ್ರಾಮಾಣಿಕತೆ ಎಲ್ಲಾ ಕಾರಣಗಳಿಂದ ಕೆಲವು ಸ್ಟೋರುಗಳು ಹೀನಾವಸ್ಥೆಗೆ ಬಂದಿವೆಯೆಂದು ತಿಳಿಯಬೇಕಾಗಿದೆ.

ಇನ್ನು ಕೆಲವು ಸ್ಟೋರುಗಳು ಹೀನಸ್ಥಿತಿಗೆ ಬರಲು ಆಯಾಯ ಸ್ಟೋರಿಗೆ ಸಂಬಂಧಪಡುವ ಪ್ರತ್ಯೇಕ ಕಾರಣಗಳೇ ಮುಖ್ಯವಾಗಿ [illegible] ಹೊಂದಿರುವದಿಲ್ಲ. ಕಾರಣವೇನೆಂದು [illegible] ಸ್ಟೋರಿಗೆ ಬೇಕಾಗುವ ಸಾಮಾನುಗಳನ್ನು [illegible] ಸ್ಟೋರಿಗೆ [illegible]. ಬೇಕಾದ ಭಕ್ತರನ್ನು [illegible] ಬೇಕಾಗುವ ಸಾಮಾನುಗಳ [illegible] ಅವುಗಳಲ್ಲಿ [illegible] ಅಲ್ಲದೆ [illegible] ಸಾಮಾನುಗಳನ್ನು [illegible] ಆರ್ಥಿಕ [illegible] ಕಮಿಟಿಯವರು [illegible] ಅವುಗಳೆಲ್ಲಾ [illegible] ಸ್ಟೋರು [illegible] 'ಸಹಕಾರಿ'ಯವರ ಅಭಿಪ್ರಾಯವಂತೆ [illegible] ಸರಾಗಿದ್ದಲ್ಲಿ

ಉದ್ಯೋಗಸ್ಥರು ಕಮಿಟಿಯಲ್ಲಿರುವ [illegible] ಸಹಕಾರಿ ಸ್ಟೋರು. [illegible] ಸ್ಟೋರು ಮತ್ತು [illegible] ಕೆಲಸ ಮಾಡುತ್ತಿವೆ. ಸರಕಾರಿ ಉದ್ಯೋಗಸ್ಥರ ಸಹಾಯದಿಂದ [illegible] ಸಂಘಗಳ ಅಭಿವೃದ್ಧಿಗೆ [illegible] ಉದ್ಯೋಗಸ್ಥರಲ್ಲಿ [illegible] ಸ್ಟೋರುಗಳ [illegible] 'ಸಹಕಾರಿ'ಯೂ ಒಪ್ಪಬೇಕಾಗುವದು.

'ಸಹಕಾರಿ'ಯವರು—ಸ್ಟೋರುಗಳ ಅವಸ್ಥೆಯನ್ನು ನೋಡಿ ವ್ಯಸನಪಡಬೇಕಾಗಿದೆಯೆಂದು ತಿಳಿಸುತ್ತಾರೆ. ಸ್ಟೋರುಗಳು ನಷ್ಟದಲ್ಲಿ ಕೆಲಸ ಮಾಡುವ ಮಾತ್ರಕ್ಕೆ ಯಾರ ಮೇಲೆ ಅಪರಾಧ ಹೊರಿಸಿ ಯಾರೂ ವ್ಯಸನಪಡಬೇಕಾಗಿಲ್ಲ. ವ್ಯಾಪಾರ ಧರ್ಮ ಮತ್ತು ಗುಟ್ಟನ್ನು ತಡವಾಗಿಯಾದರೂ ತಿಳಿಯಲಿಕ್ಕೆ ಪ್ರಾರಂಭಿಸುವ ನಮ್ಮ ಸ್ಟೋರುಗಳ ಶೈಶವಾವಸ್ಥೆಯಲ್ಲಿ ನಷ್ಟ ಕಷ್ಟಗಳು ಸಂಭವಿಸದೆ ಇರಲಾರವು. ಅನೇಕ ವರ್ಷಗಳ ಅನುಭವದಿಂದ ನಡೆಯುತ್ತಿರುವ ನಮ್ಮ ವ್ಯವಸಾಯದ ಕೆಲಸ

The Guardian of India Insurance Co., Ltd., Madras.

Enquiries have been made of us by Policyholders, Shareholders and other constituents of this Company as to whether this Company is effected and to what extent, by the suspension of business of the Travancore National & Quilon Bank, Ltd.

In reply, we give the definite assurance that this Company's position or affairs will not be effected by reason of the Bank's suspension of business. The Company has already made the required maximum statutory deposit with the Controller of Currency (Government). The Company has also sufficient liquid resources in the shape of Government Securities (in addition to the deposit referred to above) and a substantial credit balance in other Banks to enable it to carry on normal business.

We may mention that as on the date of the Bank's suspension of business the total amount that was due to this Company from the Head Office and every one of the branches of the Bank amounted to Rs. 29,347-10-8. We have every reason to believe, in view of the Bank's reported financial position, that we will be able to recover practically the entire amount. Hence rumours "Guardian has invested its entire or major portion of its amount in the Travancore National & Quilon Bank, Ltd., and that its position is unstable" are utterly false.

As already definitely stated, the Company will not by reason of the lock up of this sum in the bank be effected in any way in regard to its stability or security.

E. A. Pais, Esqr., B. Sc.,

Mangalore. (Branch Manager.)

ದಲ್ಲಿಯೂ ಕೂಡ ಕೆಲವು ಸಂದರ್ಭಗಳಲ್ಲಿ ಸಾಕಷ್ಟು ಅನುಭವ ಹೊಂದದೆ ನಮ್ಮವರು ತಪ್ಪಿ ಬೀಳುವರು. ಇವುಗಳೆಲ್ಲಾ ಅನುಭವದಿಂದ ಸರಿಯಾಗಬೇಕಾಗಿದೆ. ಅದೇ ರೀತಿ ವ್ಯಾಪಾರದಲ್ಲೂ ಅನೇಕ ಸಂದರ್ಭಗಳಲ್ಲಿ ವಿಪರೀತ ಕಷ್ಟ ನಷ್ಟಗಳನ್ನು ಹೊಂದಬೇಕಾಗುತ್ತಿದೆ ಎಂಬದನ್ನು 'ಸಹಕಾರಿ'ಯು ಮರೆಯಲಾಗದು. ಅಲ್ಲದೆ ಈಗಿನ ಆರ್ಥಿಕ ಮುಗ್ಗಟ್ಟು, ವ್ಯಾಪಾರದ ಸ್ಪರ್ಧೆ, ಖಾಸಗಿ ಜನರ ಲಾಭ ಕಾಂಕ್ಷೆ, ಇವೇ ಮೊದಲಾದವುಗಳು ಸಹಕಾರಿ ಸಂಸ್ಥೆಗಳನ್ನೇ ಏಕೆ ಖಾಸಗಿ ಜನರ ಸಂಸ್ಥೆಗಳನ್ನೂ, ನಮ್ಮ ಸರ್ಕಾರವನ್ನೂ ಸಹ ಪೀಡಿಸುತ್ತಿವೆಂಬುವುದು ಎಲ್ಲರೂ ತಿಳಿದ ವಿಷಯವಾಗಿದೆ. ದಕ್ಷಿಣ ಹಿಂದೂಸ್ಥಾನದಲ್ಲಿ ಮದ್ರಾಸ್ ಟ್ರಿಪ್ಲಿಕೇನ್ ಸ್ಟೋರಿನಲ್ಲಿಯೇ ಕೆಲವು ವರ್ಷಗಳ ಹಿಂದೆ ನಷ್ಟ ಸಂಭವಿಸಿ ಕೆಲಸವು ಅವ್ಯಸ್ತಿಕರವಾಗಿತ್ತೆಂದು ನಮಗೆ ತಿಳಿಯುತ್ತೆ. ವರ್ಷಕ್ಕೆ ಲಕ್ಷಾಂತರ ರೂಪಾಯಿಗಳ ವ್ಯಾಪಾರ ವಹಿವಾಟನ್ನು ನಡೆಸುವ ಈ ಸ್ಟೋರಿನಲ್ಲಿ ಪ್ರಾಸಿತವಾದ ಸಮಯದಲ್ಲೊಂದು ದಿನ ಬರೇ 0-9-4 ರೈಯ ವ್ಯಾಪಾರವಾಯಿತೆಂದು ರಿಪೋರ್ಟಿನಿಂದ ತಿಳಿದು ಬರುತ್ತದೆ. ಇಡೀ ಪ್ರಪಂಚದ ಶ್ರೀಮಂತರಲ್ಲೊಬ್ಬರಾದ ಹೆನ್ರಿ ಫೋರ್ಡರ ಸಂಸ್ಥೆಯಲ್ಲೂ ಸಹ ಕೆಲವು ವರ್ಷಗಳ ಹಿಂದೆ ವ್ಯಾಪಾರದ ಮುಗ್ಗಟ್ಟು, ಕೆಲಸಗಾರರ ಮುಷ್ಕರ–ಇವುಗಳ ದೆಸೆಯಿಂದ ನಷ್ಟ ಸಂಭವಿಸಿತ್ತೆಂದು ತಿಳಿದುಬರುತ್ತೆ. ಹೆಚ್ಚೇಕೆ, ನಮ್ಮ ಸರಕಾರದ ಆಯ ವ್ಯಯವನ್ನು 'ಸಹಕಾರಿ'ಯವರು ಹೋಲಿಸಿ ನೋಡಲಿ. ಇಂದಿಯೂ ಸರ್ಕಾರದಿಂದ ಸಾಲವೆತ್ತಿ ಆಯವ್ಯಯದ ತಕ್ಕಡಿಯ ತಟ್ಟೆಗಳನ್ನು ಸರ್ಕಾರವು ಹಿಡಿದು ಸರಿಪಡಿಸುತ್ತಿರುವುದು. ನಷ್ಟದಲ್ಲಿ ಕೆಲಸ ಮಾಡುತ್ತಿದೆ ಎಂದ ಮಾತ್ರಕ್ಕೆ ಸರಕಾರವು ಪ್ರಯೋಜನವಿಲ್ಲ ವೆಸ್ಟೈರೆಯಾಗಿ ಹೇಳುವವರ ಬದಲು ಸರ್ಕಾರವನ್ನು ಲಾಭಕರವನ್ನಾಗಿ ಮಾಡಲು ಜನರೆಲ್ಲರೂ ಪ್ರಯತ್ನಿಸಬೇಕಾಗಿದೆ. ಅದೇ ರೀತಿ ಸಹಕಾರಿ ಸ್ಟೋರುಗಳಲ್ಲಿ ನಷ್ಟ ಸಂಭವಿಸಿ ದುಬ್ಬಾಸ ಸ್ಥಿತಿಗೆ ಬಂದರೆ ಕುಂದು ಕೊರತೆಗಳನ್ನು ಪರಿಶೀಲಿಸಿ ಉದ್ಯೋಗಸ್ಥರೂ, ಇತರರೆಲ್ಲರೂ ಸೇರಿ ಪ್ರಯತ್ನಿಸಬೇಕಾದದ್ದು ಜನರ ಕರ್ತವ್ಯವಾಗಿರುತ್ತದೆ.

'ಉದ್ಯೋಗಸ್ಥರು ಸಹಕಾರಿ ಸಂಸ್ಥೆಗಳ ಕಮಿಟಿಗೆ ಬರಲು ಪ್ರಯತ್ನಪಡುವದರಿಂದ ಒಪಕು ಹೆಚ್ಚಾಗಿ ಸಂಗಡ ಭಾವವು ಪ್ರಬಲವಾಗುತ್ತಿದೆ' ಎಂದು ಲೇಖಕರು ಉದ್ಗಾರ ತೆಗೆಯುತ್ತಾರೆ. ಇವರಲ್ಲಿ ಎಷ್ಟರ ಮಟ್ಟಿಗೆ ಹುರುಳಿದೆಯೆಂದು ವಾಚಕರೇ ತಿಳಿಯಬೇಕಾಗಿದೆ. ಈ ರೀತಿಯ ಅನ್ಯಾಯ ದೋಷಾರೋಪಣೆಯು 'ಸಹಕಾರಿ' ಎಂದು ಹೆಸರಿಟ್ಟುಕೊಂಡು ಬರೆವ ಬಾತ್ಮೀದಾರರಿಗೆ ಯಾವ ರೀತಿಯಲ್ಲಿ ಒಪ್ಪುವದೋ ತಿಳಿಯಬಾರದು. ಜನತಾ ಸೇವೆಯನ್ನು ಮಾಡುತ್ತಿರುವ ಕೆಲವು ಉದ್ಯೋಗಸ್ಥರ ಮೇಲೆ ಗೋಮುಖ ವ್ಯಾಘ್ರರಂತೆ 'ಸಹಕಾರಿ' ಎಂಬ ಹೆಸರನ್ನು ಧರಿಸಿ ಇಂಥಾ ಸುಳ್ಳು ಅಪವಾದಗಳನ್ನು ಹೊರಿಸುವಂತೆ ಕಾಣುತ್ತೆ. ಸರಕಾರಿ ಉದ್ಯೋಗಸ್ಥರು ಯಾವ ರೀತಿಯಲ್ಲಿ ಪಂಗಡ ಭಾವವನ್ನು ಹೆಚ್ಚಿಸಲು ಈ ಕಮಿಟಿಗೆ ಸೇರಿ ಪ್ರಯತ್ನಿಸುತ್ತಿರುವರೆಂದು 'ಸಹಕಾರಿ'ಯವರು ಕೂಲಂಕುಷವಾಗಿ ಬರೆದಿದ್ದರೆ ಉತ್ತಮವಾಗಿತ್ತು.

ಕೆಲವು ಸ್ಟೋರುಗಳಲ್ಲಿ ಜನರಿಗೆ ಸಾಮಾನುಗಳನ್ನು ಸಾಲವಾಗಿ ಬಿಕ್ರಿಮಾಡುತ್ತಿರೆಂಬೂ ಅದ್ದರಿಂದ ಈ ಸ್ಟೋರುಗಳು ಸಹ ಸಾಲದ ಸಂಸ್ಥೆಗಳಾಗಿವೆಯೆಂದೂ ಅಂಥಾ ಸ್ಟೋರುಗಳ ಕಮಿಟಿಯಲ್ಲಿ ಸರಕಾರಿ ಉದ್ಯೋಗಸ್ಥರು ಇದ್ದರೆ ಲೇವಾದೇವಿ ನಡೆಸಿದಂತೆ ಆಗುತ್ತದೆಂತಲೂ 'ಸಹಕಾರಿ'ಯವರ ಮತ್ತೊಂದು ಹೇಳಿಕೆಯಾಗಿರುತ್ತದೆ. ಸ್ಟೋರುಗಳಲ್ಲಿ ಸಾಲವಾಗಿ ಸಾಮಾನುಗಳನ್ನು ವಿಕ್ರಯಮಾಡುವದು ಸ್ಟೋರಿನ ತತ್ವಕ್ಕೆ ವಿರೋಧವಾದರೂ ಕೆಲವು ಸ್ಟೋರುಗಳಲ್ಲಿ ಕೆಲಸಗಾರರ ಅಥವಾ ಕಾರ್ಯನಿರ್ವಾಹಕರ ಸ್ವಂತ ಜವಾಬ್ದಾರಿಯ ಮೇಲೆ ತಿಂಗಳ ಮಟ್ಟಿಗೆ ಸಾಲಕೊಡುವದು ವಾಡಿಕೆಯಲ್ಲಿ ಇದೆ. ಆ ಮಾತ್ರಕ್ಕೆ ಉದ್ಯೋಗಸ್ಥರು ಯಾವ ರೀತಿಯಲ್ಲಿ ಲೇವಾದೇವಿ ನಡೆಸುವರೆಂದು ಗೊತ್ತಾಗುವದಿಲ್ಲ. 'ಸಹಕಾರಿ'ಯೆಂಬ ಬಾತ್ಮಿದಾರರಿಗೆ ಸರಕಾರಿ ಉದ್ಯೋಗಸ್ಥರು ಸ್ಟೋರುಗಳ ಕಮಿಟಿಯಲ್ಲಿದ್ದುಕೊಂಡು ಕೆಲಸ ಮಾಡುವದನ್ನು ಕಂಡು ಹೊಟ್ಟೆ ಉರಿಯುಂಟಾಗಿದೆಯೆಂದು ಕಾಣುತ್ತದೆ. ಅದ್ದರಿಂದಲೇ ಇಲ್ಲದ ಸಲ್ಲದ ದೋಷಾರೋಪಣೆಯನ್ನು ಅವರ ಮೇಲೆ ಹೊರಿಸಿ ಸರಕಾರಿ ಉದ್ಯೋಗಸ್ಥರು ಇನ್ನು ಮುಂದೆ ಅನವರ ಇಲಾಖಾ ಸಂಘಗಳಲ್ಲಲ್ಲದೆ ಬೇರೆ ಯಾವ ಸಂಘಗಳ ಕಮಿಟಿಯಲ್ಲೂ ಇರಕೂಡದೆಂಬ ಹುಕುಮನ್ನು ಸರಕಾರದವರಿಂದ ಮಂಜೂರು ಮಾಡಿಸಿಬಿಟ್ಟರೆ ತಮ್ಮಂಥ 'ಗೋಮುಖ ವ್ಯಾಘ್ರ' 'ಸಹಕಾರಿ'ಗೆ ಅನುಕೂಲವಾಗುತ್ತೆಂಬ ಅಭಿಪ್ರಾಯದಿಂದ ಇಂಥಾ ಬಾತ್ಮಿಯನ್ನು ಬರೆದಂತೆ ಕಾಣುತ್ತೆ. ಸ್ಟೋರುಗಳಿಗೆ ಸರಕಾರಿ ಉದ್ಯೋಗಸ್ಥರ ಸಹಾಯವು ಇನ್ನೂ ಕೆಲವು ವರ್ಷಗಳ ವರೆಗೆ ಅತ್ಯವಶ್ಯವಾಗಿರುತ್ತದೆ. ಅಲ್ಲದೆ ಸ್ಟೋರುಗಳು ಸಾಲದ ಸಂಘವಲ್ಲದ್ದರಿಂದ ಖಂಡಿತವಾಗಿಯೂ ಸರಕಾರಿ ಉದ್ಯೋಗಸ್ಥರು ಅವರ ಅನುಕೂಲ್ಯವಾದ ವಿರಾಮ ಸಮಯವನ್ನು ಜನಸೇವೆಗೋಸ್ಕರವಾಗಿ ವಿನಿಯೋಗಿಸಲು ಸಹಾಯ ಮಾಡುವಂತೆ ಸರಕಾರವು ಸ್ಟೋರು ಸಂಘಗಳ ಕಮಿಟಿಯಲ್ಲಿ ಸರಕಾರಿ ಉದ್ಯೋಗಸ್ಥರು ಇರಲು ಯಾವ ನಿರ್ಬಂಧವನ್ನೂ ಮಾಡಬಾರದು.

'ಸಹಕಾರಿ ಸ್ಟೋರು ಹಿತಾಭಿಲಾಷಿ.'

ಕಾಂಗ್ರೆಸ್ಸು ಬದಲಾವಣೆಯಾದ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯನ್ನು ಅಂಗೀಕರಿಸುವುದು.

●●●

ಮಲೆಯಾಳದ ಶ್ರೀ ದೇವಿದಾಸರ ಭವಿಷ್ಯ ನುಡಿ.

●●

'ಸಾರ್ವಭೌಮರ ಈಗಿನ ದೇಶಾಲಸ್ಯದಿಂದ ತೀವ್ರ ಕಷ್ಟಗಳೇನೂ ಒದಗುವುದಿಲ್ಲ. ವಿಶ್ವದ ಅಂತರರಾಷ್ಟ್ರೀಯ ಪರಿಸ್ಥಿತಿಯು ಬಹಳ ವ್ಯವಸ್ಥೆಯಿಂದ ಕದಡಿದುದಾಗಿರುವಾಗ ಸಾರ್ವಭೌಮರು ಪ್ಯಾರಿಸ್ಸಿಗೆ ಪ್ರಯಾಣ ಮಾಡಿ ವಿಶ್ವದ ದೊಡ್ಡ ಎರಡು ಪ್ರಜಾಪ್ರಭುತ್ವ ರಾಷ್ಟ್ರಗಳ ಬಾಂಧವ್ಯವನ್ನು ಹೆಚ್ಚಿಸಿಕೊಳ್ಳುವುದರಿಂದ ಅಂತರರಾಷ್ಟ್ರೀಯ ಪರಿಸ್ಥಿತಿಯು ಒಂದು ವ್ಯವಸ್ಥೆಗೆ ಬರುವುದು. ಚೀಣಾ ಜಪಾನ್ ಯುದ್ಧವು 1939 ನೆ ವರ್ಷದ ಆಗಸ್ಟು ತಿಂಗಳ ಮಧ್ಯದ ವರೆಗೂ ನಡೆಯುವುದು. ಬ್ರಿಟಿಷರ ಮಧ್ಯಸ್ಥಿಕೆಯಿಂದ ಎರಡು ಪಕ್ಷದವರಿಗೂ ಸಾಧಾರಣವಾದ ಒಪ್ಪಂದವಾಗುವುದು. ಆದರೆ ಎರಡು ಪಕ್ಷದವರೂ ತಕ್ಷಣ ಯುದ್ಧವನ್ನು ನಿಲ್ಲಿಸುವುದಿಲ್ಲ. ಆಗಸ್ಟ್ ತಿಂಗಳಲ್ಲಿ ಪಾರ್ಲಿಮೆಂಟ್ ಸಭೆಯಲ್ಲಿ ಚೀಣಾ–ಜಪಾನ್ ಯುದ್ಧದ ಸಂಬಂಧವಾಗಿ ಬಹಳ ತೀವ್ರವಾದ ಮತ್ತು ಬಿಡಿಹಾಸಿದ ಚರ್ಚೆ ನಡೆಯುವುದು. ಸ್ನೇಹವಿಲ್ಲದಿರುವ ರಾಷ್ಟ್ರಗಳ ಗೂಢಚಾರರ ಕೆಲಸ ಕಾರ್ಯಗಳಿಗೆ ಬ್ರಿಟನ್ನು ಅವಕಾಶ ಕೊಟ್ಟಿತೆಂದೂ ಅದರಿಂದ ಬ್ರಿಟನ್ನಿಗೆ ಬಹಳ ಅಪಾಯ ತಟ್ಟುವುದೆಂದೂ ಅಪಾದನೆ ಹೊರಿಸಲಾಗುವುದು. 1939 ರಲ್ಲಿ ನೆವಿಲ್ ಛೇಂಬರ್ಲೇನರು ತಮ್ಮ ಅಧಿಕಾರ ಸ್ಥಾನವನ್ನು ಬಿಟ್ಟು ಬಿಡಬೇಕಾಗುವುದರಿಂದ ಬ್ರಿಟನ್ನು ಯೂರೋಪಿನ ರಾಜಕೀಯ ಸ್ಥಿತಿಯಲ್ಲಿ ಹಿಂದೆ ಯಾವ ಸ್ಥಾನದಲ್ಲಿದ್ದಿತೋ ಆ ಸ್ಥಾನಕ್ಕೆ ಬರಲು ಸಹಾಯಮಾಡಿದಂತಾಗುವುದು.

ಹೆರ್ ಹಿಟ್ಲರನು 1939 ರಲ್ಲಿ ಜೆಕೊಸ್ಲೋವೇಕಿಯವನ್ನು ವಶಪಡಿಸಿಕೊಳ್ಳಲು ಯತ್ನಿಸುವನು. ಆದರೆ ಬ್ರಿಟಿಷರ ಮಧ್ಯಸ್ಥಿಕೆಯಿಂದ ಆಸ್ಟ್ರಿಯವು (ಹಿಟ್ಲರನು) ಜೆಕೊಸ್ಲೋವೇಕಿಯವನ್ನು ವಶಪಡಿಸಿಕೊಳ್ಳಲಾಗುವದಿಲ್ಲ. ಇಂಗ್ಲೆಂಡಿಗೂ ಮತ್ತು ಇಟಲಿಗೂ ಒಪ್ಪಂದವಾದರೂ ಮುಸೋಲಿನಿಯು ಪೂರ್ವ ಅಫ್ರಿಕ ಮತ್ತು ಮೆಡಿಟೆರೇನಿಯನ್ ಸಮುದ್ರಗಳ ಮೇಲಿನ ದುರಾಸೆಯನ್ನು ಬಿಡುವುದಿಲ್ಲ' ಎಂಬಿವೇ ಮುಖ್ಯವಾದ ವಿಷಯಗಳನ್ನು ಕುರಿತು ಸುಪ್ರಸಿದ್ಧ ಮಲೆಯಾಳಿ ಜ್ಯೋತಿಷ್ಯರಾದ ಶ್ರೀ ಪಿ. ಕೆ. ಕೆ. ಎಸ್. ದಾಸರವರು ಭವಿಷ್ಯ ನುಡಿದಿರುವರು. ಅವರು ಸಧ್ಯಕ್ಕೆ ಈಗ ಹುಬ್ಬಳ್ಳಿಯಲ್ಲಿರುವರು. ಶ್ರೀ ದಾಸರವರು ಪಂಚಮ-ಜಾರ್ಜರ ಮರಣದ ಭವಿಷ್ಯವನ್ನು ನುಡಿದಿದ್ದರು.

'ಸೋವಿಯಟ್ ಸರಕಾರವು ಯಾವ ವಿಧವಾದ ಯುದ್ಧಕ್ಕೂ ಹೋಗುವುದಿಲ್ಲ. ಆದರೆ ಯುದ್ಧ ಒದಗಿದರೆ ಬೇಕಾಗುವ ಯುದ್ಧ ಸಾಮಗ್ರಿಗಳನ್ನೆಲ್ಲ ಶೇಖರಿಸುತ್ತದೆ. ಕಾಂಗ್ರೆಸ್ಸು ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ವಿಚಾರದಲ್ಲಿ ತನ್ನ ವಿರೋಧವನ್ನೇನೂ ಕಡಿಮೆ ಮಾಡುವುದಿಲ್ಲ. ಆದರೆ ಹಲವು ಬದಲಾವಣೆಗಳಿಂದ ಕೂಡಿದ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯನ್ನು ಅಂಗೀಕರಿಸುತ್ತದೆ.'

ಶನಿಯು ಮುಂದೆ ಇರುವುದರಿಂದ ಹಿಂದೂ ಮುಸ್ಲಿಂ ಒಪ್ಪಂದವು ಆಗದ ಮಾತು. ಸಂಧಾನಗಳನ್ನು ಎಷ್ಟು ನಡೆಸಿದರೂ ಒಪ್ಪಂದವೇನೂ ಆಗುವುದಿಲ್ಲ.

ಮೇಷರಾಶಿಯಲ್ಲಿ ಶನಿಯು ಕ್ರೂರವು ಅಧಿಕವಾಗುವುದರಿಂದ 1939 ಡಿಸೆಂಬರ್ ತಿಂಗಳಲ್ಲಿಯೂ 1940 ನೆ ಜನವರಿ ತಿಂಗಳಲ್ಲಿಯೂ ಮಹಾತ್ಮರು ನರಗಳ ನಿಬ್ಬಲತೆಯಿಂದ ನರಳುವರು. ಆದರೆ ಅವರು ಗುಣ ಹೊಂದುವರೆಂಬುವದರಲ್ಲಿ ಯಾವ ಸಂದೇಹವೂ ಇಲ್ಲ. ಪಂಡಿತ ಜವಹರಲಾಲರು 1938ನೇ ಸಪ್ಟೆಂಬರ್ 15 ರಿಂದ ಅಕ್ಟೋಬರ್ 15 ರ ವರೆಗೂ 1939 ನೆ ಮಾರ್ಚ 15 ರಿಂದ ನೋ 15 ರ ವರೆಗೂ ರೋಗದಿಂದ ನರಳುವರು.

ಚೀಣಾ ಜಪಾನ್ ಯುದ್ಧದಲ್ಲಿ ಹಾಂಕೊನಗರವೇನೊ ಜಪಾನರ ಕೈವಶವಾಗುವುದು. ಆದರೆ ಚೈನೀಯರ ಚಲ್ಕ್ಯೂಹ ಚತುರತೆಯಿಂದಲೂ ಮತ್ತು ಧೈರ್ಯೋತ್ಸಾಹಗಳಿಂದಲೂ ಮರಳಿ ಹಾಂಕೊ ಚೈನಿಯರ ಕೈ ವಶವಾಗುವುದು.' ಎಂಬುದಾಗಿ ಶ್ರೀ ಪಿ. ಕೆ. ಕೆ. ಎಸ್. ದೇವಿದಾಸರವರು ವಿಶ್ವದ ಭವಿಷ್ಯವನ್ನು ತಿಳಿಸಿ ನುಡಿದಿರುವರು.

ಯೂನಾನಿ ಫಾರ್ಮೆಸಿಯ ಉತ್ತಮ ಔಷಧಿಗಳು.

ಉಬ್ಬಸ ಸಂಹಾರಿ (Asthma cure) ಕೆಲವು ದಿನಗಳ ಸೇವನೆಯಿಂದ ಉಬ್ಬಸವನ್ನು ಖಾತ್ರಿಯಾಗಿ ಗುಣಪಡಿಸುತ್ತದೆ. 40 ದಿನದ ಔಷಧಿಗೆ ಕ್ರಯ ರೂ 5—12—0.

ಅಂಬರ್ ಕೊಡಲೆಣ್ಣೆ, ಸುಗಂಧಯುಕ್ತ ಆಮ್ಲಕೇಶ ತೈಲ ಅಲ್ಲದೆ ಎಲ್ಲಾ ರೋಗಗಳಿಗೂ ರಾಮಬಾಣದಂತಿರುವ ಮಾತ್ರೆಗಳೂ, ಚೂರ್ಣಗಳೂ, ಲೇಹಗಳೂ, ತೈಲಗಳೂ ಮತ್ತು ಕೇಶ ತೈಲಗಳೂ ಸಹ ತಯಾರಿರುವುವು.

ಬೇಗನೆ ಬರೆಯಿರಿ:—

ಯು. ಯಂ ಸಿದ್ದೀಕ್,
ಪ್ರೊಪ್ರೈಟರ್,
ಯುನಾನಿ ಔಷಧಶಾಲಾ, ಮಡಿಕೇರಿ, ಕೊಡಗು.

20

ಇಂಡಿಯಾದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತವೆ. ಲಂಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು! ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52–6 ಬೆಂಗಳೂರು ಸಿಟಿ.

೪೨ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೀ ಕಂಪನಿ

ಸುಪ್ರಸಿದ್ಧ ಜ್ವರದ ಗುಳಿಗೆ

ಇದು ಛಳಿಜ್ವರ, ಚಾತುರ್ಥಿ ಜ್ವರ, ೨ ದಿನಬಿಟ್ಟು ದಿನ ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ನಾನಾತರದ ಜ್ವರಗಳ ಮೇಲೆ ತಕ್ಷಣವೇ ಗುಣ ಸಂಜೀವಿನಿಯಂತಿದೆ! ಬಾಟ್ಲಿಗೆ 1 ರೂ 4 ಬಾಟ್ಲಿಗೆ 3 ರೂ. 12 ಬಾಟ್ಲಿಗೆ 8 ರೂ ವಿ ಪಿ ಖರ್ಚು ಬೇರೆ.

ಗಣೇಶ. ರಾಮಚಂದ್ರ ಕರ್ಕೀ.

ಮತ್ತು ಕಂಪನಿ,

(52–33) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹಾಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡಿದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಯ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರುಗಳು ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮ ಮುಕ್ಕಾಟಿರ ಹೋಯಪ್ಪನವರು

ಚಾಚಮ್ಮನ ಕರ್ಣಮ್ಮನವರು

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ ಮಂಡೇಪಂಡ ಸೋಮಯ್ಯನವರು

ಅಮ್ಮತ್ತಿ—ಸಿದ್ದಾಪುರ— ಮ ಐನಂಡ ಮಾದಪ್ಪನವರು

ಪೊನ್ನಂಪೇಟೆ—ಮ ಪಿ ಜಿ ಮುದ್ದಮ್ಮಯ್ಯನವರು

ಶ್ರೀಮಂಗಲ—ಮ ಅಜ್ಜಮಾಡ ಮಾಚಪ್ಪನವರು ಮತ್ತು ಮ

ಕೆ ಮಾಚಮ್ಮಯ್ಯನವರು

ಸುಂಟಿಕೊಪ್ಪ—ಮ ಅಪ್ಪನೆರವಂಡ ಮಾಚಯ್ಯನವರು

ಸೋಮವಾರಪೇಟೆ—ಮ ಕೆ ಬೊಗಪ್ಪನವರು

ನಾಪೋಕ್ಲು—ಮ ಬೆಳ್ಯಪಂಡ ಯಂ ಪೂಣಚ್ಚನವರು

(ನಾಪೋಕ್ಲು ಸ್ಟೋರ್ಸ್)

ಸೂಚನೆ — ಪ್ರಿಂಟಾದ ರಶೀತಿ ಹೊಂದಿಲ್ಲದ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ.

The Bombay Mutual Life Assurance Society Ltd.,

Head Office:-BOMBAY. Estd 1871.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅನೋಪವಾದ ಕೆಲಸ ಕಾರ್ಯಗಳನ್ನು ಮಾಡಿದೆ ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರದ ಮೇರೆ 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ 26ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪರೇಡ್, ಬೆಂಗಳೂರು.

52–20

[ಚಿಕ್ಕ ಡಾಕ್ಟರ್] **ವೇಪ್ರಿನ್** [ರಿಜಿಸ್ಟರ್ಡ್]

ಚರ್ಮವ್ಯಾಧಿಗಳ ವೈರಿ—ಪ್ರತಿ ಒಬ್ಬರ ಸ್ನೇಹಿತ—ಸ್ವದೇಶಿ ವಸ್ತು.

ಇದರ ಲೇಪನದಿಂದ ಕಜ್ಜಿ, ಗಾಯ, ವ್ರಣ, ಇಸಬು, ನಾರು ಹುಣ್ಣು, ಮೂಲವ್ಯಾಧಿ, ಮೆಟ್ಟಿನ ಘಾಯ, ಮುದ್ದಣ(Pimples) ಸುಟ್ಟಘಾಯ, ಕತ್ತಿಘಾಯ, ಕೊಡವಾಳೆ, ಗಣಕರ್ಣ ಇವು ಮಾಯವಾಗುವವು ಇದು ಸುರಿಯುತ್ತಿರುವ ರಕ್ತವನ್ನು ನಿಲ್ಲಿಸಿ ನೋವನ್ನು ನಿವಾರಿಸುವುದು. ಅಲ್ಲದೆ ಇಂದ್ರಜಾಲದೋಷಾದಿಯಲ್ಲಿ ಚೇಳಿನ ವಿಷವನ್ನು ಬಹಿರ್ಗತಪಡಿಸುವುದು ನಿಮ್ಮಲ್ಲಿ ಒಂದು ಬಾಟ್ಲು ಇದ್ದಲ್ಲಿ ಒಬ್ಬ ಡಾಕ್ಟರೇ ಇದ್ದಂತಾಗುವುದು ಕ್ರಯ ಬಹಳ ಸುಲಭ.

½ ಔನ್ಸ್ ಬಾಟ್ಲು 1ಕ್ಕೆ ಆಣೆ 0–8–0 ¼ ಔನ್ಸ್ ಬಾಟ್ಲು 1ಕ್ಕೆ ಆಣೆ 0–4–0.

ವಿ ಸೂ:—ಪೆಟ್ಟು ತಾಗಿದ ಸ್ಥಳದಲ್ಲಿ ವೇಪ್ರಿನ್ ಚೆನ್ನಾಗಿ ತಿಕ್ಕುವುದು. ಇಲ್ಲವೇ ಬಟ್ಟೆಯ ಮೇಲೆ ಸವರಿ ಅಂಟಿಸುವುದು. ನಂತರ ಸಾಬೂನಿನಿಂದ ಕೈ ತೊಳೆಯುವುದು. ಇದಲ್ಲದೆ ಇನ್ನೂ ಅನೇಕ ತರಹದ ಔಷಧಿಗಳು ನಮ್ಮಲ್ಲಿವೆ.

ಲಸ್ಕರ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ,

ಪಿ. ಪೊ. ಬೆಂಗಳೂರು ಸಿಟಿ.

52–50 ಸೋಲ್ ಏಜೆಂಟ್ —ಹರಿದಾಸ್ ನಂಜುಂಡ ಗುಪ್ತ,

ಮಡಿಕೇರಿ, (ಕೊಡಗು).

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆಶಿಳತಗಳಿಗೂ ಅಮೃತ ಬೆಲೆ 0 4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದ, ಅಜೀರ್ಣ, ವಾಯು, ಜ್ವರಗಳಿಗೆ ಬೆಲೆ 0-4-0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ ಬೆಲೆ 0-8-0, 0-4-0

ಸುಕುಮಾರತೈಲ

16

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ಇಂತ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ ಬೆಲೆ 1 0 0

ಪ್ರೊಪ್ರೈಟರ್—ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ ವಿ ಪಂಡಿತ್.

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ	1 ಪುಟಕ್ಕೆ.	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ 180	ರೂ 55	ರೂ 35	ರೂ. 22
6 ತಿಂಗಳಿಗೆ—	„ 100	„ 35	„ 22	„ 13
3 ತಿಂಗಳಿಗೆ—	„ 60	„ 20	„ 13.	„ 8
1 ತಿಂಗಳಿಗೆ—	„ 25	„ 10	„ 6	„ 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರ ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮಿ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮಿ. ಎಲ್. ಎಫ್. ಸಿ. ವಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ)

ಮಿ. ಬಿ. ಶೇಷಾದ್ರಿ, ಅ. ಇನ್ಸ್‌ಪೆಕ್ಟರು, ಶಿವಮೊಗ್ಗಾ

82-29

Printed & Published by P. I Belliappa, at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ. | ವಾರ್ಷಿಕ ಚಂದಾ ರೂ. ೩-೮-೦

ತಾ. ೨೯—೭—೧೯೩೮. | ಸಂಪುಟ ೧೮] [ಸಂಚಿಕೆ ೯

THE CANARA BANKING CORPORATION, UDIPI, Ltd.

(Incorporated in British India.)

Estd. 1906.

STATEMENT OF AFFAIRS AS ON 30th JUNE, 1938.

Capital and Liabilities:					Property and Assets:				
1. Paid up Capital ...	Rs.	3,03,145	0	0	1. Landed Property, Premises and Buildings, Safes and Furniture ..	Rs	3,63,004	5	0
2. Reserves	,,	3,88,788	6	8	2 Advances	,,	36,56,673	2	3
3. Deposits	,,	39,34,585	9	6	3 Investment on Govt. Securities, Debentures, Shares etc		17,53,942	5	2
4. Due to Bankers	,,	13,57,642	14	11	4 Cash on Hand and with Bankers at call	,,	3,45,360	5	10
5. Bills for collection per contra		1,13,331	3	2	5 Bills for collection	,,	1,13,331	3	2
6 Sundries ...	,,	2,00,858	4	8	6 Sundries	,,	66,040	1	6
Total	,,	62,98,351	6	11	Total	,,	62,98,351	6	11

Udipi,
8th July 1938.

52-34

V. R. Kamath, B A., LL.B.,
Manager

ಧನ್ವಂತರಿ ಸಹಾಯ ಔಷಧಾಲಯ.

ವೀರರಾಜಪೇಟೆ, (ದ. ಕೊಡಗು).

ಆಯುರ್ವೇದ [illegible] ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳೂ [illegible] ಪ್ರತ್ಯಕ್ಷ ವಿಕ್ರಯವಾಗುತ್ತವೆ. [illegible] ರೋಗಿಗಳನ್ನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ದಿವಸ [illegible] ದೂರದಲ್ಲಿರುವ [illegible] 12 [illegible] ವಿಳಾಸ ಸ್ಪಷ್ಟವಾಗಿಯೂ ಪ್ರಬಂಧದಲ್ಲಿ [illegible]

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣ ಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಸೀತಜ್ವರ, ಮೋಹಿಯಾಲಸ್ಯ, ಅಜೀರ್ಣ, ಬಾಯಾರಿಕೆ, ಉಬ್ಬಸ, ಕೆಮ್ಮು, ಪಾಂಡುರೋಗ, [illegible], ಕಾಮಾಲೆ, ಬೆನ್ನು ಉರಿ, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ.—ದೇಹದ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಟ್ಟು ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಖರ್ಚು ಪ್ರತ್ಯೇಕ.

ಸಿ. ಹೆಚ್. ರಾಮಣ್ಣ ವೈದ್ಯರ್.

ಪೂರಾಪಟ್ಟಿ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ ಜಮಾ. ಖರ್ಚು, ಸಾಲ ಪಡೆವರ ರಿಜಿಸ್ಟರು, **ಸಾಲದ** ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, ಪೋಸ್ಟೇಜ್ ಖರ್ಚು, ಆರ್ಬಿಟ್ರೇಶನ್ ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸ್ ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳು, ಬಿಲ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಕರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಆಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

	ರೂ.	ಆ.	ಪೈ.
ಶೇರ್ ಬಂಡವಾಳ	- 50,000	0	0
ವಸೂಲಾದ ಶೇರ್ ಮೊಬಲಗು	- 45,740	0	0
ಜಮೂಬಂದ ಠೇವಣಾತಿ	- 2,56,747	14	4
ವಸೂಲಾದ ಕ್ಷೇಮನಿಧಿ	- 1,35,875	9	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	- 31,017	12	11
ತ್ರಿಫ್ಟ್ ಡಿಪಾಜಿಟ್ಟು	- 37,936	13	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ ಇವರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4 1937ರಿಂದ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಡಮೊಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:—ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಚೌರೀರ ಎ. ಮಂದಣ್ಣನವರು ಬಿ. ಎ., ಬಿ. ಎಲ್.
ಸೆಕ್ರೆಟರಿ:—ಪುಲಿಯಂಡ ಜಿ ಐಯ್ಯಪ್ಪನವರು ಬಿ. ಎ, ಬಿ ಎಲ್

ತಾ. 1-7-1938

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—"ಲಕ್ಷ್ಮೀನಿವಾಸ್" ಬಿಲ್ಡಿಂಗ್ಸ್, ಕುಂದಾಪುರ, ದ. ಕ

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80. 200, 400 ಮತ್ತು 800 ಗಳ ನಾನಾಪರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ 10, 25, 50, 100. 250, 500 ಮತ್ತು 1000 ಗಳು.

ಬಡ್ಡಿಯಾಗಿ ಕೊಡುವ ಶಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

53-9

The Agricultural &
Industrial Bank Ltd

"ZANDU"

ಝಂಡೂರವರ	ಝಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸ ರೋಗಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝಂಡೂ ಆಯೋಡೈಸ್ಡ ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟ್ರೈನ್.

ಇದು ನ್ಯುಮೋನಿಯಾ, ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತಾಗಿ ಕಳುಹಿಸಲಾಗುತ್ತೆ

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್ ಎ ಎಂ ಎಸ್
ಮತ್ತು ಆಯುರ್ವೇದ ವಿದ್ವಾನ್

(52-51)

ವೀರಾಜಪೇಟೆಯ ಏಜೆಂಟರು-ಕೆ ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅತ್ಯಮೃತವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನು ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ

ಬಾಟ್ಲಿ 1ರ ರೂ 2—8—0.

ಮಲೇರಿಯಾ ನಿವಾರಿಣಿ

ಇದು ಚಳಿ ಜ್ವರ, ಚಾತುರ್ಥಿಕ ಜ್ವರ, ದಿನ ಬಿಟ್ಟುಬರುವ ಜ್ವರ, ಮಲೇರಿಯಾ ಜ್ವರ, ಇನ್‌ಫ್ಲುಯೆಂಜಾ ಇತ್ಯಾದಿ ನಾನಾ ತರದ ಜ್ವರಗಳ ಮೇಲೆ ರಾಮಬಾಣ

ಬಾಟ್ಲಿ 1ರ ರೂ. 1—8—0; ಸಣ್ಣ ಬಟ್ಲಿ ರೂ. 0—13—0.

ಸ್ಪ್ಲೀನ್ ಮಿಕ್ಸ್ಚರ್

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಅಶಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು ಬಾಟ್ಲಿ 1ರ ರೂ. 1—2—0

ಬಾಲಗ್ರಹ ಗುಟಿಕೆ

ಮಕ್ಕಳ ಅಜೀರ್ಣ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ಮಂಗಳೂರು ಸ್ಟೋರ್ಸ್, ಮಡಿಕೇರಿ. ವಿ. ಬಿ. ಕಾಮತ್, ಮಡಿಕೇರಿ. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. ಎ. ಎಸ್. ಮೂಡಯ್ಯ, ಸುಂಟಿಕೊಪ್ಪ. ಸುಂದರ್ ಪ್ರಭು, ಸುಳ್ಯ [3]

ವಿವಿಧ ವಿಚಾರ.

ಇವರೂ ಬದುಕಿದನು!

ಒಬ್ಬ ಹೊಂಬರವನನು ಶರೀರದ್ದಾಗಿ ಸಂಕೋಲೆಯ 20 ಗೊಲುಸುಗಳನ್ನು, ಎರಡು ಬಾಚಣಿಗೆಗಳನ್ನು, ಹಲ್ಲು ಕುಡುಕೆಲಾಳದ ಚಾಕುಗಳನ್ನು, 54 ಬೇರೆ ಬೇರೆ ಗಳನ್ನು, 35 ಮುಳ್ಳುಗಳನ್ನು, 8 ಇಸ್ಕೂರುಗಳನ್ನು, 50 ಗುಂಡುಗಳನ್ನು, 12 ಸೂಜಿಗಳನ್ನು, ಒಂದು ಚೂರಿಯ ಹಿಡಿಯನ್ನೂ ನುಂಗಿಬಿಟ್ಟನು. ನಂತರ ಆತನು ಹೊಟ್ಟೆನೋವಿನಿಂದ ನರಳುತ್ತಿರಲು ಆತನ ಮೇಲೆ ಶಸ್ತ್ರಕ್ರಿಯೆ ಮಾಡಲ್ಪಟ್ಟಿತು. ಈಗಲೂ ಆತನು ಪೂರ್ಣ ಗುಣಹೊಂದಿ ಬದುಕಿರುವನು.

—:o:—

ಮೀನು ಹಿಡಿಯುವ ಹೊಸ ವಿಧಾನ.

ಜಪಾನಿನ [illegible] ವಿಸ್ತೃತ ಜಪಾನ್ ನೌಕಾದಳ [illegible] ವಿಮಾನಗಳನ್ನು ನಡೆಸುತ್ತಿರುವರು. ಈ ವಿಮಾನಗಳು ಸಮುದ್ರದ ಮೇಲೆ [illegible] ಹಾರಿ ಮೀನುಗಳ ಗುಂಪುಗಳಿರುವ ಪ್ರದೇಶಗಳನ್ನು ಕಾರ್ಯಾಲಯ [illegible] ತಿಳಿಸುತ್ತವೆ. [illegible] ಯಂತ್ರಗಳಿಂದ ಜೋಡಿಸಲ್ಪಟ್ಟ ನಾವೆಗಳು ಮೀನು ಹಿಡಿಯಲು ವಿಮಾನದಿಂದ ಕಳುಹಿಸಲ್ಪಟ್ಟ ವಾರ್ತೆಯನ್ನು ಓದಿದ ಕೂಡಲೆ ಮೀನು ಇದ್ದ ಭಾಗಕ್ಕೆ ಧಾವಿಸುವವು.

—:o:—

ಗುಪ್ತ ಧನದ ವೈಚಿತ್ರ್ಯ.

ಹಣವನ್ನು ಹೂಳಿಡುವ ಪದ್ಧತಿ [illegible] ನೋಡಬಹುದು. ಆದರೆ, [illegible] ಅಗೆಯುವಾಗ [illegible] ವಿಧದಲ್ಲಿ, ತಮ್ಮ ಕಷ್ಟ [illegible] ಒದಗುವಂತೆ, ಹಣ ಹೂಳಿಡುವುದು. ಟೊರಂಟೋ ಎಂಬಲ್ಲಿ, ಒಬ್ಬ ಹೆಂಗಸು ಎಕ್ಸರ ಹೆಮ್ಮಡಿಯ ಒಂದು ಹೊಸ 'ಬೂಟ್' ವಿಲಾಸದಲ್ಲಿ ಕೊಂಡುಕೊಂಡಳು. ಅದರ ಅಡಿಯನ್ನು ದುರಸ್ತು ಮಾಡುತ್ತಿರುವ ಮೊಚಿಗೆ, ಅದರೊಳಗೆ ಆತನಿಗೆ, ಒಂದು ಸಾವಿರ ಪವನಿನ ನೋಟುಗಳು ದೊರಕಿದುವು. ಆಕೆ ಕೊಟ್ಟ ಬೆಲೆ 4 ಶಿಲ್ಲಿಂಗ್. ಅದೇ ರೀತಿ, ನ್ಯೂ ಕೇಸ್ಸಲ್‌ನಲ್ಲಿ, ಒಬ್ಬ ಒಂದು ಪ್ರೆಸ್ ಕೊಂಡುಕೊಂಡ. ಅದೂ ಕೆಲವು ಶಿಲ್ಲಿಂಗುಗಳಿಗೆ. ಆದರೆ, ಅದರೊಳಗೆ ಆತನಿಗೆ 280 ಪವನು ಬೆಲೆಯ ಚಿನ್ನದ ನಾಣ್ಯ ದೊರೆಯಿತು. ಹೀಗೇ ಮಿಡ್‌ಲ್ಯಾಂಡ್ಸ್‌ನಲ್ಲಿ, ಒಬ್ಬ ಒಂದು, 'ಬ್ಯೂರೋ'ವನ್ನು, 20 ಪವನುಗಳ ಬೆಲೆಗೆ ಕೊಂಡುಕೊಂಡ. ಅದೇ, ಅವರಲ್ಲೊಬ್ಬ ಅರೆಗಳು (ಡ್ರಾವರ್) ಇವೆಯೋ ಎಂದು ನೋಡುತ್ತಿರಲು, ಒಂದೆಡೆ 500 ಪವನುಗಳ 'ಚೆಕ್' ದೊರೆಯಿತು. ಮತ್ತೆ ಲಂಕೇಶಯರಿನಲ್ಲಿಯೂ ಒಂದು ನಿದರ್ಶನ. ಅಲ್ಲಿನ ಟೌನ್ ಹಾಲಿನ ಮಾಡು ಕಳಚುತ್ತಿರಲು ಅದು 1750ರಲ್ಲಿ ಕಟ್ಟಲ್ಪಟ್ಟ ಕಟ್ಟಡ. ಆದರೆ 'ರೋಮನ' ರಾಜ್ಯಕ್ಕಿಂತಲೂ ಪೂರ್ವದ, ಅತೀ ಹಳೆಯ ನಾಣ್ಯಗಳು ಕೆಲವು, ಮಾಡಿನಿಂದ ಕೆಳಕ್ಕುರುಳಿದುವು. ಇದೆಲ್ಲಾ, ಹಣ ಬಚ್ಚಿಡುವ ಬುದ್ಧಿವಂತರ ವಿಧಾನ!

—:o:—

ಮೂರು ವಿದ್ಯಾರ್ಥಿಗಳು ಶಾಶ್ವತರಾಗಿರುವರು.

ಕಳೆದ ಗುರುವಾರದಿಂದ ಬೋಂಬಾಯಿಯ ಒಂದು ಶಾಲೆಯಲ್ಲಿ ಕಲಿಯುತ್ತಿದ್ದ ನಾಲ್ಕು ಸಮೀಪ ಹುಡುಗರು ಸುಮಾರು 13 ವರ್ಷ ವಯಸ್ಸಿನವರು ಇಲ್ಲದಾಗಿರುವರು. ಈ ಬಗ್ಗೆ ಪೋಲೀಸರು ಬಲ್ಲಿ ಚೌಕಸಿ ನಡೆಸಿರುವರು. ಅವರ ಲೈಬ್ರರಿಯ ಪುಸ್ತಕವನ್ನು ತಪಾಸಿಸಲಾಗಿ ಅದರಲ್ಲಿ ನನ್ನ ಮತ್ತು ಪರಮೇಶ್ವರನ ಟಿಬೇಟಿಗೆ ಹೋಗುವೆನು ಎಂದು ಬರೆದಿತ್ತು.

—:o:—

ಮರಣದ ನಂತರ ಮಾತಾಡುವುದು.

ಹೊನ್ನಿ ಪ್ರಿನ್ಸ್‌ಪೀಸ್ ಎಂಬ ವಿಜ್ಞಾನಿಯು [illegible] ಮರಣ [illegible] ಗ್ರಾಮೋಫೋನ್ ರಿಕಾರ್ಡು ಮಾಡಿರುವನು. ಇದರಲ್ಲಿ ತನ್ನ ಮರಣಾನಂತರ ತನ್ನ ಆಸ್ತಿಯ [illegible] ಕೆಲಸವನ್ನು ಸೂಚಿಸಿರುವನು. [illegible] ಕೆಲವು ಒಂದುಗಳನ್ನು [illegible] ಕ್ಕಾಗಿ ಮುದ್ರಿಸಿ [illegible] ಇರುವನು. ಈ ಗ್ರಾಮೋಫೋನ್ ಅವನ ಮರಣಾನಂತರ [illegible] ಬಂಧುಗಳು [illegible] ನುಡಿಸಬೇಕೆಂದು [illegible] ಈಗ ಅದನ್ನು ಭದ್ರವಾಗಿ ತನ್ನ ಸ್ವಾಧೀನದಲ್ಲಿರಿಸಿಕೊಂಡಿರುವನು. ನೋಡಬೇಕು. ಆತನ ಮರಣಾನಂತರ ಬಂಧುಗಳಿಗೆ ಬಯ್ಯುವನು ಮತ್ತು ಯಾವ ರೀತಿಯಲ್ಲಿ ಅವನ ಆಸ್ತಿಯು ಹಂಚಲ್ಪಡಬೇಕೆಂದು ಹೇಳುವನೋ ಏನೋ!

—:o:—

ವಿಮಾನದ ಪ್ರಯಾಣದಲ್ಲಿ ಅತ್ಯದ್ಭುತ ಸಾಧನೆ ಜಯಶೀಲರಾದರು.

ಈ ದಿವಸಗಳಲ್ಲಿ ಅತ್ಯಲ್ಪ ಸಮಯದಲ್ಲಿ ಭೂಮಿಯನ್ನು ಸುತ್ತಿ ಬಂದವರು ಎ. ಪೋಸ್ಟ್ ಎಂಬವರು. ಇವರಿಗೆ ಈ ಕಾರ್ಯಕ್ಕೆ 2 ದಿನ 18 ಗಂಟೆ 49 ಮಿನಿಟು ಸಮಯ ಬೇಕಾಯಿತು. ನೆಚ್ಚು ಕಡಿಮೆ ಇವರ ಅರ್ಧ ಸಮಯದಲ್ಲಿ ವಿಮಾನ ಪ್ರಯಾಣ ಜಗತ್ತನ್ನು ಸುತ್ತಿ ಬರಬಹುದು. ಇವರು ಘಂಟೆಗೆ ಸರಾಸರಿ 161 ಮೈಲುಗಳಂತೆ ಹಾರಾಡಿದರು.

ಇವರನ್ನು ಪ್ರಚಂಡ ಜನ ಸಮೂಹವು ನ್ಯೂಯೋರ್ಕ್ ನಗರದ ಫ್ಲೋಯಿಡ್ ಬೆನಟ್ ಎಂಬಲ್ಲಿ ಸ್ವಾಗತ ಮಾಡಿತು. ತಮಗೆ ಈ ನಿಬಿಡ ಹಾರಾಟದ ಕಾರಣ ಬಹು ಬಳಲುವಿಕೆಯಾದರೂ ಆರೋಗ್ಯಕ್ಕೇನೂ ಕೊಂದರೆಯಿಲ್ಲವೆಂದರು. ಮತ್ತು ತಾವು ತಮ್ಮ ಈ ಅಮೋಘ ಕಾರ್ಯದಲ್ಲಿ ಬಹು ಸಂತುಷ್ಟತೆಯನ್ನು ಪಡೆದಿರುವೆನೆಂದರು.

—:o:—

ಜರ್ಮನ್ ವೈಜ್ಞಾನಿಕರ ಭವಿಷ್ಯವಾಣಿ.

ಇತ್ತೀಚೆಗೆ ಜರ್ಮನರು ಕೆಲವು ವಿಧವಾಗಿ [illegible] ಭವಿಷ್ಯವನ್ನು ನುಡಿದಿದ್ದಾರೆ. ಆಗ ಜರ್ಮನಿಯ ಪ್ರಸಿದ್ಧ ವೈಜ್ಞಾನಿಕರೊಬ್ಬರು ಒಂದು ಚಿತ್ರ [illegible] ದ್ವಾರೆ ಅದನ್ನು ಸ್ಪಷ್ಟೀಕರಿಸಲಾಗಿದೆ.

'ಮುಂದಿನ ವರ್ಷದಲ್ಲಿ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಪ್ರಪಂಚ [illegible] ಕ್ಷಾಮಗಳು ಸಂಭವಿಸುವುವು. ಮಹಾ ಪ್ರಲಯವೇ ಒದಗುವುದು. ಇದರಿಂದಾಗಿ ಲೋಕವೇ ನಾಶ ಹೊಂದುವ ಸಂಭವವಿದೆ. ಈ ಆಕಸ್ಮಿಕ ಸಂಭವಿಸುತ್ತಿರುವ ಭೂಕಂಪಗಳು [illegible] ನಡೆಯುವ ಬಿಸಿಲು [illegible] ವಾಯು ಗುಣದಲ್ಲಿ [illegible] ಬದಲಾವಣೆಗಳು-ಇವೆಲ್ಲವೂ ಮುಂದೆ ಬರುವ ವಿಪತ್ತಿನ ಪೂರ್ವ ಚಿಹ್ನೆಗಳೆಂದೆನ್ನಬಹುದು.

'ಬರುವ ವರ್ಷದಲ್ಲಿ ಪ್ರಲಯವಾಗುವುದೆನ್ನುವುದಕ್ಕೆ ಮುಖ್ಯವೆಂದು ಬಲವಾದ ಕಾರಣವಿದೆ. ಅದಾವುದೆಂದರೆ ಭಯಂಕರವಾದ ಧೂಮಕೇತುವೊಂದು ಬರುವ ವರ್ಷ ಕಾಣಿಸಿಕೊಳ್ಳುವುದು. ಈ ಧೂಮ ಕೇತುವು ಈಗಿರುವ ಗ್ರಹಮಂಡಲವನ್ನು ಧ್ವಂಸಮಾಡತಕ್ಕ ಶಕ್ತಿಯುಳ್ಳದ್ದಾಗಿದೆ. ಇದು ವರೆಗೆ ಈ ಧೂಮಕೇತುವು ವಾಯುಮಂಡಲದಲ್ಲಿ ಕಾಣಬಂದಿಲ್ಲ. ಬರುವ ವರ್ಷ ಅದಿ ಭಾಗದಲ್ಲಿ ಯೇ ಇದು ಕಾಣಿಸಿಕೊಳ್ಳುವುದೆಂಬುದಕ್ಕೆ ಸಾಕಷ್ಟು ಕಾರಣಗಳಿವೆ. ಈ ಧೂಮಕೇತುವು ನಭೋಮಂಡಲದಲ್ಲಿ ಅತ್ಯಂತ ತ್ವರಿತಗತಿಯಲ್ಲಿ ಚಲಿಸಿ ಇನ್ನುಳಿದ ಶಿಕ್ಷಗ್ರಹಗಳೆಲ್ಲಾ ಪುಡಿಮಾಡಿಕೊಂಡು ಹೋಗುವುದು. ಇದರಿಂದಾಗಿ ಇತರ ಗ್ರಹಗಳಲ್ಲಾದಂತೆಯೇ ಭೂಮಿಯಲ್ಲಿಯೂ ಅನೇಕ ರೀತಿಯ ಉತ್ಪಾತಗಳು ಆಗುವ ಸಂಭವವಿದೆ. ಜ್ವಾಲಾಮುಖಿಗಳು ಏಳಬಹುದು; ಭಯಂಕರ ಭೂಕಂಪಗಳಾಗಬಹುದು; ಅಥವಾ ಜಲಪ್ರಲಯವಾಗಬಹುದು. ಅಂತೂ ಮುಂದಿನ ವರ್ಷ ಬಹಳ ಕಷ್ಟಗಳು ಪ್ರಪಂಚಕ್ಕೆ ಸಂಭವಿಸುವುದು ನಿಶ್ಚಯ.'

ಮೇಲಿನ ಅಭಿಪ್ರಾಯಗಳನ್ನು ಜರ್ಮನಿಯ ಫ್ರಾಂಕ್‌ಫರ್ಟ್ ವಿಶ್ವ ವಿದ್ಯಾನಿಲಯದ ಎಸ್ಟ್ರಾನಾಮಿಕಲ್ ಅಬ್ಸರ್ವೇಟರಿಯ ಡೈರೆಕ್ಟರರಾದ ಡಾ. ಕರ್ಟ್ ನಾಸಿಟ್ ಪ್ಯಾಮಸ್ಸಿ ಎಂಬ ಮಹಾ ಪಂಡಿತರು ಕೊಟ್ಟಿದ್ದಾರೆ.

—:o:—

ಅಂತೆ ಬಚ್ಚಿಟ್ಟ ಭಂಡಾರ.

ಯುನೈಟೆಡ್ ಸ್ಟೇಟಿನ ಟೆಕ್ಸಾಸ್ [illegible] ಮನೆಯ ಅಟ್ಟದಲ್ಲಿ ತಳದಡಿಯ ಅಲ್ಲಿಯ [illegible] ಜನರು ಅದನ್ನು ಹುಡುಕಿದರು. ಅಂತೆ [illegible] ನ ಕಾಗದವನ್ನು ಕಳುಹಿಸುವ [illegible] ಹಾಗು ಒಂದನ್ನು ಈ ಪುಸ್ತಕದ ಕಂಡ [illegible] ದ್ದಾರೆ. [illegible] ಒಂದು ವಿಚಿತ್ರ ತರದ ಭಾಷೆಯಲ್ಲಿ ಕೆಲವು ಸಂಕೇತಾಕ್ಷರಗಳನ್ನು ಇವರು ಬರೆದಿರುವರು. [illegible] ಇದರೊಳಗಿನ ಅರ್ಥ ತಿಳಿಯದೆ, ಅವರು ಕೆಲವರು, [illegible] ಈ ಪತ್ರವನ್ನು [illegible] ಬಹಳ ಸಮಯದ ವರೆಗೆ [illegible] ಈ ಭಂಡಾರವು [illegible] ಕೆಲಸದ [illegible] ನೋಡಿಯಾಯಿತು.

—:o:—

ಬಡಕ [illegible].

[illegible] ಮನೆಗೆ ಹೋಗಿ ಎಲ್ಲ [illegible] ಗಳನ್ನು [illegible] 'ಪರ' [illegible] ಬಹಳ ಹೊತ್ತು [illegible] ಕಳುಹಿಸಿತ್ತು. [illegible] ನೋಡಿದ [illegible] ಕೇಳದಾದರೆ, [illegible] ಮನೆಗೆ ಬಂದ ಅನಂತರದ ಕಥೆ! ಅದರ [illegible] ದರ್ಶನವೇ ಒಂದು [illegible] ಬಿಟ್ಟದ್ದು [illegible] ಬಾಗಿಲಿನಿಂದ [illegible] ಕೆಲವು [illegible] ಗಳನ್ನು ಕಳೆದು [illegible] ಹಾಗೆ ಇದ್ದು ನಮ್ಮ [illegible] ಸೂಚನೆಯಾಗಿ ಇದನ್ನು ಬರೆದಿದ್ದೇನೆ!

—:o:—

77 ವರ್ಷದ ಬ್ರಹ್ಮಚಾರಿ ವರ

'ಎಂದು ಮದುವೆ ಬಾರದ [illegible] ನಂತರ [illegible] ಒಬ್ಬೊಬ್ಬರೇ ಇರುವುದಕ್ಕಿಂತ ವಿವಾಹವಾಗಿ ಒಂದೇ ಒಳ್ಳೆ ಸುಖದಿಂದ ಬಾಳುವುದು ಒಳ್ಳೆಯದಲ್ಲವೇ? ಈ ಕಾರಣದಿಂದಲೇ ನಾವು ಮದುವೆ ಮಾಡಿಕೊಳ್ಳುವೆವು' ಎಂದು [illegible] 77 ವರ್ಷದ ಯುವಕನು ಇಂಗ್ಲೆಂಡಿನಲ್ಲಿ [illegible] 94 ವರ್ಷ ವಯಸ್ಸಿನ ವಿವಾಹವನ್ನು ಮದುವೆ ಮಾಡಿಕೊಳ್ಳಲು ಹೊರಟಿರುವರ ಕಾರಣವೇನು ಹೇಳಿದನು.

ವಧುವು ಈಗ 20 ವರ್ಷಗಳ ಹಿಂದೆ ಗಂಡನನ್ನು ಕಳೆದುಕೊಂಡ 9 ಮಕ್ಕಳ ತಾಯಿ. 3 ಹೆಣ್ಣು 2 ಗಂಡು ಇನ್ನೂ ಬದುಕಿದ್ದಾರಂತೆ. ಇನ್ನು ವಯಸ್ಸಾದ ಮೇ ತನ್ನ ಮನೆ ಕೆಲಸವನ್ನು ತಾನೇ ಮಾಡುತ್ತಾಳಂತೆ.

ವರನು ಇಂತ ವೃದ್ಧನಾದರೂ ತೋಟದ ಕೆಲಸ ಮಾಡುತ್ತಿದ್ದಾನಂತೆ. 'ನಾವು ಸಣ್ಣವರಾಗಿದ್ದೇವೆ. ವಿವಾಹಕ್ಕೆ ಕಾಲವಿನ್ನೂ ಮೀರಿಲ್ಲ. ಆದಳು ಬಾಳನು ಹಾಗೆ ನೋಡುತ್ತಾಳೆ' ಎಂದು ಪತ್ರಿಕಾವರದಿಗೆ ತಿಳಿಸಿದನು.

—:o:—

ಕಾಂಗ್ರೆಸ್ಸು ರಾಜಕಾರಣದಲ್ಲಿ ಶಕ್ತಿ ಸಂಪನ್ನ ಸಂಸ್ಥೆ.

(ಆಂಗ್ಲೇಯ ನಿರೀಕ್ಷಕರೊಬ್ಬರು ರಾಯ್ಸ್ ಎಂಬ ಪತ್ರಿಕೆಯಲ್ಲಿ ಬರೆದದ್ದರ ಸಾರಾಂಶ.)

ಭಾರತೀಯ ರಾಜಕಾರಣದಲ್ಲಿ ಇಂದು ನಡೆಯುತ್ತಿರುವ ಘಟನಾವಿಶೇಷಗಳ ಪ್ರಾಮುಖ್ಯತೆಯನ್ನು ಜನರು ಚೆನ್ನಾಗಿ ತಿಳಕೊಂಡಿದ್ದಾರೆಯೋ ಎಂದು ನನಗೆ ಆಶ್ಚರ್ಯವಾಗುತ್ತದೆ. ಕಾಂಗ್ರೆಸಿಗೆ ತನ್ನ ರಾಜ್ಯದಲ್ಲಿ ಯಾವ ಸ್ಥಾನವನ್ನು ಕೊಡದದ್ದರಿ ಬ್ರಿಟಿಷ್ ಶ್ರೇಷ್ಠ ಅಧಿಕಾರವನ್ನು ತಾವು ಮನ್ನಿಸಿದಂತಾಗಿ ತಮ್ಮ ಕರ್ತವ್ಯವು ಮುಗಿಯಿತೆಂದು ಸಂಸ್ಥಾನಾಧಿಕಾರಿಗಳು ತಿಳಿಯುತ್ತಿದ್ದ ಒಂದು ಕಾಲವಿತ್ತು. ಆದರೆ ಇಂದು ನಾವು ಮೈಸೂರಿನಲ್ಲಿ ಏನನ್ನು ನೋಡುತ್ತೇವೆ?

ಮೈಸೂರು ಸರ್ಕಾರವು ಪ್ರತ್ಯಕ್ಷವಾಗಿ ಪ್ರಕಟವಾಗಿ ಭಾರತೀಯ ಕಾಂಗ್ರೆಸಿನೊಂದಿಗೆ ಸಂಧಾನ ಕ್ರಮಗಳನ್ನು ಬೆಳೆಸುತ್ತಾ ಇದೆ. ಶ್ರೇಷ್ಠ ಅಧಿಕಾರವು ಬ್ರಿಟಿಷ್ ಅರಸರಿಗಿರುವುದಿಲ್ಲ. ಕಾಂಗ್ರೆಸಿಗೇ ಇರುವಂತೆ ಅದು ತಿಳಿದು ವರ್ತಿಸುತ್ತದೆ. ಕಾಂಗ್ರೆಸ್ ಕಡೆಯಿಂದ ಸರದಾರ ಪಟೇಲರು ಮೈಸೂರು ರಾಜ ದರಬಾರದಲ್ಲಿ ರಾಯಭಾರಿಗಳಾಗಿದ್ದಾರೆ. ಮೈಸೂರು ದಿವಾನರು ಪಟೇಲರನ್ನು ಕರೆಸಿ ಅವರಿಗೆ ಸಂದರ್ಶನವನ್ನು ಕೊಡುತ್ತಾರೆ. ಮೈಸೂರು ಕಾಂಗ್ರೆಸ್ ಕಮಿಟಿಯು ಸರಕಾರ ಆಡಳಿತದೊಡನೆ ಸಂಧಿಯನ್ನು ಮಾಡುತ್ತದೆ.

ಹೇಗಾಗಬೇಕಿತ್ತೋ ಮೈಸೂರಿನಲ್ಲಿ ಹಾಗೆಯೇ ಆಗುತ್ತಲಿದೆ ಎಂದು ನಾವೆಂದುಕೊಳ್ಳಬಹುದು. ಮೈಸೂರಿನ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲರ ಉದಾರ ಸರಳ ಸ್ವಭಾವಗಳ ಕಥನವನ್ನು ನಾನು ಹಿಂದೆ ಹಲವು ಬಾರಿ ಕೇಳಿದ್ದೆ. ಅವಕ್ಕೆ ಪ್ರತ್ಯಕ್ಷ ನಿದರ್ಶನವು ನನಗೆ ಈಗ ದೊರೆಯಿತು. ವಿದುರಾಶ್ವತ್ಥ ಗುಂಡುಗಳು ಎಲ್ಲರಿಗಿಂತ ಹೆಚ್ಚಾಗಿ ಅವರನ್ನು ದಂಗುಬಡಿಸಿವೆ. ದೇಶದ ಪರವಾಗಿ ತಮ್ಮ ಕರ್ತವ್ಯ ನಿರ್ವಾಹ ಮಾಡುವಾಗ ಸಶಸ್ತ್ರ ಪೋಲೀಸರನ್ನು ಎದುರಾಯಿಸುವ ಹಳ್ಳಿಗರ ಎದೆಗಾರಿಕೆಯ ಮಹತ್ವವೆಷ್ಟೆಂಬುವುದನ್ನು ಅವರು ತಿಳಿದಷ್ಟು ಚೆನ್ನಾಗಿ ಬೇರೆಯವರು ತಿಳಿದಿರಲಿಕ್ಕಿಲ್ಲ. ಆ ಪ್ರಕರಣದಲ್ಲಿ ಅವರು ಎಷ್ಟು ಮಾತ್ರಕ್ಕೂ ಛಲಧುರಥ ಮಾನವನ್ನು ತೋರಿಸಿಲ್ಲ. ಮೈಸೂರಿನಲ್ಲಿ ಎಲ್ಲರಿಗಿಂತ ಹೆಚ್ಚಾದ ದೇಶಪ್ರೇಮಾಭಿಮಾನಗಳನ್ನು ಮಿರ್ಜಾ ಇಸ್ಮಾಯಿಲರು ಪ್ರಕಟಿಸಿದ್ದಾರೆ. ಅವರಿಂದ ಅವರ ಆಡಳಿತದ ಮಾನವು ಎಷ್ಟೋ ಬೆಳೆದಿದೆ.

ಆದರೆ ಈ ಎಲ್ಲ ಘಟನೆಗಳ ಹಿಂದುಗಡೆ ಯಾವ ಅಪ್ರತಿಮ ಶಕ್ತಿಯು ಕೆಲಸ ಮಾಡುತ್ತಾ ಇದೆ ಎಂಬುವನ್ನು ನಾವು ತಿಳಿಯಬೇಕು. ಬ್ರಿಟಿಷ್ ಅಧಿಕಾರಕ್ಕೆ ಮೇಲಾಗಿ ಈಗ ಭಾರತದಲ್ಲಿ ಕಾಂಗ್ರೆಸ್ ಅಧಿಕಾರವು ಸ್ಥಾಪಿತವಾಗಿದೆ. ಇನ್ನು ಭೇದವೇನು ಒಂದಿಲ್ಲ. ಸಮ್ರಾಟರ ಪ್ರತಿನಿಧಿಗಳಾಗಿ ವೈಸರಾಯರು ಈಗಲೂ ಸಂಸ್ಥಾನಗಳ ಮೇಲೆ ಅಧಿಕಾರ ನಡೆಸುತ್ತಾರೆ. ಅವರ ರಾಜಕಾರಣ ನೀತಿಯು ಹಗಲೂ ಚೇತನಮಯವಾಗಿದೆ. ಅವರೂ ಕೂಡ ರಾಜ್ಯದಲ್ಲಿ ಶಿಸ್ತು ವ್ಯವಸ್ಥೆಯುಂಟಾಗಲಿಕ್ಕೂ, ಕಾನೂನು ಕಾಯಿದೆಗಳಿಗೆ ಜನರ ಮನ್ನಣೆ ದೊರೆಯಲಿಕ್ಕೂ ಮೊದಲಿನಂತೆ ಒಂದು ಸಂಸ್ಥಾನವು ರೆಸಿಡೆಂಟರ ಸಹಾಯವನ್ನು ಅಪೇಕ್ಷಿಸುವದಿಲ್ಲ, ರಾಜಕಾರಣ ನೀತಿಯ ಸಹಾಯವನ್ನು ಬೇಡುವದಿಲ್ಲ, ಆದರೆ ಭಾರತೀಯ ಕಾಂಗ್ರೆಸಿನ ಅಖಂಡ ಮುಖಂಡರ ಸಹಾಯ ಬಲವುಗಳನ್ನು ನಿರೀಕ್ಷಿಸುತ್ತದೆ.

(ಕಾಂಗ್ರೆಸ್ ಪೋಷಕ ಮಹಾತ್ಮ ಗಾಂಧಿ)

ಇದರ ಅರ್ಥವೇನೆಂದು ಗೊತ್ತಾಯಿತೇ? ಬ್ರಿಟಿಷರು ಇಲ್ಲಿ ತಮ್ಮ ಪಕ್ಕಾ ಅಧಿಕಾರಿಗಳು ಯಥಾಪ್ರಕಾರ ಕಾಯಲ್ಪಟ್ಟಿರುವರೆಂದು ಭಾವಿಸಿದ್ದಾರೆ. ಬ್ರಿಟಿಷ್ ಅಧಿಕಾರಿಗಳ ಮಾತುಗಳಿಗೆ ಇಲ್ಲಿ ಮನ್ನಣೆ ಇರುತ್ತದೆಂದು ತಿಳಿದಿದ್ದಾರೆ. ಆದರೆ ನಿಜ ಸ್ಥಿತಿ ಏನು? ಮೊಗಲಾಯಿಗಳ ಕಾಲದಲ್ಲಿ ವ್ಯಾಪಾರ ಮಾಡಲಿಕ್ಕೆ ಕೆಲವು ಅನುಕೂಲತೆಗಳನ್ನು ತಮಗೆ ಕೊಡಬೇಕೆಂದು ಮೊಗಲ್ ಬಾದಶಹರನ್ನು ಕೇಳುತ್ತಿದ್ದಾಗ ಇಂಡಿಯಾದಲ್ಲಿ ಬ್ರಿಟಿಷರ ಯಾವ ಸ್ಥಿತಿಗತಿಗಳಿದ್ದವೋ ಅದೇ ಸ್ಥಿತಿಗತಿಗಳಿಗೆ ಬ್ರಿಟಿಷರು ಭಾರತದಲ್ಲೀಗ ಇಳಿಯುತ್ತಿದ್ದಾರೆ. ಈಗ '[illegible]' ಎಂಬ ಶಬ್ದದ ನಿಜವಾದ ಅರ್ಥದಲ್ಲಿ ಭಾರತವನ್ನು ಆಳುತ್ತಿರುವದಿಲ್ಲ. ಕಾಂಗ್ರೆಸು ಪ್ರಾಂತ್ಯಗಳಲ್ಲಿ ಮಾತ್ರವಲ್ಲ, ಸಂಸ್ಥಾನಗಳಲ್ಲಿ ಕೂಡ ಜನರು ತಮ್ಮ ಸ್ಥಾನಮಾನ ಹಕ್ಕು ಅಧಿಕಾರಗಳನ್ನು ತಿಳಕೊಂಡಿದ್ದಾರೆ. ಈಗ ಪ್ರತಿಯೊಂದು ವಿಷಯವನ್ನು ಬ್ರಿಟಿಷರ ಮನೋನೀತಿಯು ನಿರ್ಧರಿಸುವದಿಲ್ಲ, ಪರಂತು ಭಾರತೀಯ ಜನಮತವು ಅದನ್ನು ನಿರ್ಧರಿಸುತ್ತದೆ.

ಜನರು ಒಂದಾಗಿ ಚಳವಳಿಸಬೇಕು. ಆಗ ಸರ್ಕಾರವು ತಾನಾಗಿ ಜನಮತಕ್ಕೆ ಬಗ್ಗುತ್ತದೆ ಎಂಬುದು ಇದರಿಂದ ಸ್ಪಷ್ಟವಾಯಿತು. ಬ್ರಿಟಿಷ್ ರಾಜನಿಗೆ ಇದು ನವೀನ ಭಾರತದಲ್ಲಿದ್ದ ಅಧಿಕಾರ ಪ್ರತಿಷ್ಠೆಗಳು ಈಗ ಕುಂದಲಾರಂಭಿಸಿವೆ. ಇದರ ದೃಷ್ಟಾಂತಗಳು ಯಾವುವೆಂದರೆ—ಸಂಯುಕ್ತ ಪ್ರಾಂತ್ಯ, ಬಿಹಾರುಗಳಲ್ಲಿ ರಾಜಿನಾಮೆ ಕೊಟ್ಟ ಮಂತ್ರಿಗಳು ಪುನಃ ತಮ್ಮ ಪದವಿಗಳನ್ನು ಸ್ವೀಕರಿಸಬೇಕಾದರೆ ಅಲ್ಲಿಯ ಗವರ್ನರುಗಳು ತಾವು ಮಾಡಲು ಆದ ಅವಿಚಾರದ ಪ್ರತಿಜ್ಞೆಯ ಮಾತುಗಳನ್ನೆಲ್ಲಾ ವಾಪಸ್ಸು ತೆಗೆದುಕೊಳ್ಳಬೇಕಾಯಿತು. ಕಾಂಗ್ರೆಸು ಜನಮತಕ್ಕೆ ಪತಿಯಾಗಿ ಯೇ ಪಿ ಯವರು ಸಿ. ಪೈನರ ಗವರ್ನರ ಪದವಿಯನ್ನು ಬಿಟ್ಟವ ಮಂತ್ರಿಗಳ ಅಭಿಪ್ರಾಯಕ್ಕೆ ಬಿಡಿಕೊಡಬೇಕಾಯಿತು.

ಇಲ್ಲಿ ಲಾರ್ಡ್ ಲಿನ್‌ಲಿತ್‌ಗೋ ಮತ್ತು ಆವರ ಬ್ರಿಟಿಷ್ ಸರ್ಕಾರವೇ ಏಕೆ ಬಗ್ಗಬೇಕಾಗಿದೆಯೋ ಅಲ್ಲಿ ಸರ್ ಮಿರ್ಜಾ ಇಸ್ಮಾಯಿಲರು ಏಕೆ ಬಗ್ಗಿದರೆಂಬುದರಲ್ಲಿ ಆಶ್ಚರ್ಯವಿಲ್ಲ. ಭಾರತೀಯರಾಗಿ ಭಾರತೀಯರಿಗೆ ಅವರು ಬಗ್ಗಿದುದರಲ್ಲಿ ಒಂದು ಬಗೆಯ ಗೌರವವಿದೆ, ಅಭಿಮಾನವಿದೆ. ಅದರಿಂದಾಗಿಯೇ ಸರ್ಕಾರ ಮತ್ತು ಪ್ರಜಾವರ್ಗದ ನಡುವೆ ಮೊದಲಿನ ಸ್ನೇಹ ಸಂಬಂಧವು ಪುನಃ ಕಟ್ಟಿಬರುವಂತಾಯಿತು. ಕಾಂಗ್ರೆಸು ಮುಖಂಡರು ಸೇರಿರುವ ಮೈಸೂರು ಸುಧಾರಣಾ ಕಮಿಟಿಯಿಂದ ಶಿಫಾರಸು ಮಾಡಲ್ಪಡುವ ಪ್ರಕಾರ ಮೈಸೂರು ಮಹಾರಾಜರು ಜಾರಿಗೆ ತರುವ ಆ ರಾಜಕೀಯ ಸುಧಾರಣೆಗಳು ಹೇಗೆ ಕೆಲಸ ಮಾಡುವವೆಂಬುದನ್ನು ಪ್ರತಿಯೊಬ್ಬರು ಕುತೂಹಲದಿಂದ ನೋಡುವರು. ಮೈಸೂರು ಇವತ್ತು ಮಾಡಿದುದನ್ನೇ ನಾಳೆ ಉಳಿದ ಸಂಸ್ಥಾನಗಳು ಮಾಡುವವು. ಯಾಕೆಂದರೆ ಸಂಸ್ಥಾನಗಳಿಗೆಲ್ಲಾ ಮೈಸೂರೇ ಮುಂದಾಳುವಾಗಿರುವದು. ಮೈಸೂರಿನ ಅನುಕರಣೆಯನ್ನು ಎಲ್ಲ ಸಂಸ್ಥಾನಗಳೂ ಮಾಡುವವು.

ಮಧ್ಯಪ್ರಾಂತ್ಯ ಮಂತ್ರಿ ಮಂಡಲದಲ್ಲಿ ಪುನಃ ಬಿಕ್ಕಟ್ಟು.

ಹೊಸ ಮಂತ್ರಿ ಮಂಡಲದ ರಚನೆ ಮತ್ತು ರಾಜಿನಾಮೆ.

ಮಧ್ಯಪ್ರಾಂತ ಮಂತ್ರಿ ಮಂಡಲದಲ್ಲಿ ಈ ಮೊದಲೊಮ್ಮೆ ಭಿನ್ನಾಭಿಪ್ರಾಯ ಉಂಟಾಗಿ ಕಾಂಗ್ರೆಸ್ ಪಾರ್ಲಿಮೆಂಟರಿ ಸಬ್ ಕಮಿಟಿಯವರ ಅಭಿಪ್ರಾಯದಂತೆ ಪುನಃ ತಮ್ಮ ತಮ್ಮೊಳಗಿನ ಜಗಳವನ್ನು ಪರಿಹರಿಸಿಕೊಂಡಿದ್ದರು. ಆದರೆ ಇತ್ತೀಚೆಗೆ ಪುನಃ ಅವರಲ್ಲಿ ಆ ಜಗಳವು ಗೊಂದಲವೆದ್ದು ಮತಭೇದಗಳುಂಟಾಗಿ ತಾ. 20-7-38 ರಲ್ಲಿ ಮುಖ್ಯ ಮಂತ್ರಿ ಡಾ. ಖರೆಯವರು, ರಾಜಿನಾಮೆ ಕೊಟ್ಟರು.

ಅವರೊಡನೆ ಶ್ರೀಗಳಾದ ಆರ್. ಎಂ. ದೇಶಮುಖ್, ಮತ್ತು ಪಿ. ಬಿ. ಗೋಳೆ ಇವರು ಸಹ ರಾಜಿನಾಮೆಯನ್ನಿತ್ತರು. ಮಹಾಕೋಸಲಕ್ಕೆ ಸೇರಿದ ಉಳಿದ ಮಂತ್ರಿಗಳಾದ ಶ್ರೀ ಶುಕ್ಲ, ಮೆಹತಾ ಮತ್ತು ಮಿಶ್ರ ಇವರು ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯಿಂದ ನಮಗೆ ಆಜ್ಞೆ ದೊರೆತ ಹೊರತು ರಾಜಿನಾಮೆ ಕೊಡುವದು ಶಕ್ಯವಿಲ್ಲವೆಂದು ಹೇಳಿಬಿಟ್ಟರು. ಅಲ್ಲದೆ "ಕಾಂಗ್ರೆಸಿನ ಅಪ್ಪಣೆ ಮೇರೆ ನಾವು ಮಂತ್ರಿಪದವನ್ನು ಸ್ವೀಕರಿಸಿದ್ದೇವೆ, ಅದು ಹೇಳಿದಂತೆ ನಡೆಯಲು ತಯಾರಿರುವೆವು. ಮುಖ್ಯ ಮಂತ್ರಿಗಳು ರಾಜಿನಾಮೆ ಕೊಟ್ಟ ಕೂಡಲೇ ಅವರ ಸಹೋದ್ಯೋಗಿಗಳೆಲ್ಲರೂ ರಾಜಿನಾಮೆ ಕೊಡಬೇಕೆಂಬ ತತ್ವವು ನಮಗೆ ಮಾನ್ಯವಿದೆ. ಆದರೆ ಕಾಂಗ್ರೆಸಿನ ಆಜ್ಞೆಯ ಮೇರೆ ಸ್ವೀಕರಿಸಿದ ಹೊಣೆಗಾರಿಕೆಯನ್ನು ಬಿಟ್ಟು ಕೊಡಲು ನಾವು ಸ್ವತಂತ್ರರಲ್ಲ" ಎಂದು ಗವರ್ನರರಿಗೆ ಬರೆದ ಪತ್ರದಲ್ಲಿ ನಿವೇದಿಸಿರುವದಲ್ಲದೆ ಮುಖ್ಯ ಮಂತ್ರಿ, ದೇಶಮುಖ, ಮತ್ತು ಗೋಳೆಯವರ ರಾಜಿನಾಮೆಯನ್ನು ಈಗಲೇ ಸ್ವೀಕರಿಸಬಾರದೆಂದೂ ಕೇಳಿಕೊಂಡಿದ್ದರು.

ಈ ವಿಚಾರದಲ್ಲಿ ರಾಜೇಂದ್ರ ಪ್ರಸಾದರು ಡಾ. ಖರೆ, ಶ್ರೀ ದೇಶಮುಖ್ ಮತ್ತು ಶ್ರೀ ಗೋಳೆಯವರಿಗೆ ವರ್ಕಿಂಗ್ ಕಮಿಟಿ ಕೂಡುವ ವರೆಗೆ ರಾಜಿನಾಮೆ ಕೊಡಬೇಡಿರಿ. ಅಥವಾ ರಾಜಿನಾಮೆಯನ್ನು ಸ್ವೀಕರಿಸಬೇಡಿರೆಂದು ಗವರ್ನರರಿಗೆ ಹೇಳಿರೆಂದು ತಂತಿ ಬರೆದಿದ್ದರು. ಆದರೆ ಮುಖ್ಯ ಮಂತ್ರಿ ಖರೆಯವರು ಗವರ್ನರರ ಬಳಿಗೆ ಹೋಗಿ ತಮ್ಮ ರಾಜಿನಾಮೆಯನ್ನು ಸ್ವೀಕರಿಸಬೇಕೆಂದೂ ಬೇಗನೆ ಮುಂದಿನ ಉಪಾಯವನ್ನು ಕೈಕೊಳ್ಳಬೇಕೆಂದೂ ಒತ್ತಾಯಪಡಿಸಿದರಂತೆ.

ಗವರ್ನರರು ತಾ. 21 ರಲ್ಲಿ ಇವರ ರಾಜಿನಾಮೆಯನ್ನು ಸ್ವೀಕರಿಸಿ, ರಾಜಿನಾಮೆ ಕೊಡಲು ನಿರಾಕರಿಸಿದ ಉಳಿದ ಮೂರು ಜನ ಮಂತ್ರಿಗಳನ್ನು ಅಧಿಕಾರ ಸ್ಥಾನದಿಂದ (ಡಿಸ್‌ಮಿಸ್) ತಳ್ಳಿ ಹಾಕಿದರು.

ಸದ್ಯಕ್ಕೆ ಅಸೆಂಬ್ಲಿ ಕಾಂಗ್ರೆಸ್ ಪಕ್ಷದ ಮುಖಂಡರು ಡಾ. ಖರೆಯವರೇ ಆದ್ದರಿಂದಲೂ, ಅಸೆಂಬ್ಲಿಯಲ್ಲಿ ಕಾಂಗ್ರೆಸ್ ಪಕ್ಷವೇ ಬಹುಮತದಲ್ಲಿರುವದರಿಂದಲೂ, ಗವರ್ನರರು ಡಾ. ಖರೆಯವರನ್ನು ಪುನಃ ಮಂತ್ರಿ ಮಂಡಲವನ್ನು ರಚಿಸಿಕೊಳ್ಳುವಂತೆ ಕೇಳಿಕೊಂಡರು. ಡಾ. ಖರೆಯವರು ಇದಕ್ಕೆ ಒಪ್ಪಿ ಈ ಕೆಳಗಿನಂತೆ ಹೆಸರುಗಳನ್ನು ಕೊಟ್ಟರು. ಡಾ. ಖರೆ (ಮುಖ್ಯ ಮಂತ್ರಿ) (2) ಆರ್. ಎಂ. ದೇಶಮುಖ್, (3) ಪಿ. ಬಿ. ಗೋಳೆ, (4) ಠಾಕೂರ ಪ್ಯಾರೆಲಾಲಸಿಂಗ್ ಮತ್ತು (5)

ಶ್ರೀ ರಾಮೇಶ್ವರ ಅಗ್ನಿಭೋಜ (ಹರಿಜನ) (ಮಂತ್ರಿಮಂಡಲಕ್ಕೆ ಇವರನ್ನು ಹೊಸದಾಗಿ ಸೇರಿಸಲಾಗಿದೆ ಎಂದು ತಿಳಿಯುತ್ತದೆ.)

ಗವರ್ನರರು ಈ ಹೊಸ ಮಂತ್ರಿ ಮಂಡಳಕ್ಕೆ ತಮ್ಮ ಒಪ್ಪಿಗೆಯನ್ನಿತ್ತರು. ಹೊಸ ಮಂತ್ರಿಗಳು ಗವರ್ನರರ ಎದುರಿಗೆ ಪ್ರತಿಜ್ಞಾವಿಧಿಯನ್ನೂ ಮಾಡಿದಾಯಿತು.

ತಾ. 23 ರಲ್ಲಿ ಕಾಂಗ್ರೆಸ್ ಪಾರ್ಲಿಮೆಂಟರಿ ಉಪಸಮಿತಿಯು ಈ ಘಟನೆಗಳನ್ನು ಕುರಿತು ವಿಚಾರ ವಿನಿಮಯ ನಡೆಸಿತು. ಕೊನೆಗೆ ಡಾ. ಖರೆಯವರೂ ಅವರ ಸಹೋದ್ಯೋಗಿಗಳೂ ತಾವು ಮಾಡಿದ್ದು ತಪ್ಪೆಂದು ಒಪ್ಪಿಕೊಂಡು ಪುನಃ ತಮ್ಮ ಮಂತ್ರಿಪದಕ್ಕೆ ರಾಜೀನಾಮೆಯನ್ನು ಕೊಟ್ಟಿರುವರು. ಡಾ. ಖರೆಯವರು ಗವರ್ನರರಿಗೆ ಬರೆದ ಪತ್ರವು ಹೀಗಿದೆ,

ಸರ್ ಫ್ರಾನ್ಸಿಸರೆ,

'ನಾನು ಮುಖ್ಯ ಮಂತ್ರಿಪದಕ್ಕೆ ರಾಜೀನಾಮೆ ಇತ್ತು ಹೊಸ ಮಂತ್ರಿ ಮಂಡಳವನ್ನು ಸ್ಥಾಪಿಸಿಕೊಂಡ ಸಂಗತಿ ಕಾಂಗ್ರೆಸ್ ಅಧ್ಯಕ್ಷರನ್ನೂ, ಪಾರ್ಲಿಮೆಂಟರಿ ಉಪಸಮಿತಿಯನ್ನೂ ಕಂಡು ಮಾತನಾಡಿದೆನು. ಇದರಿಂದ ನಾನು ರಾಜೀನಾಮೆಯನ್ನು ಕೊಟ್ಟು ಹೊಸ ಮಂತ್ರಿ ಮಂಡಲವನ್ನು ಸ್ಥಾಪಿಸಿಕೊಂಡದ್ದು ತಪ್ಪೆಂದು ಅನಿಸಿರುವುದು. ಈ ಬಗ್ಗೆ ನಾನು ಆತುರದಿಂದಲೂ ತಪ್ಪು ವಿಚಾರದಿಂದಲೂ ವರ್ತಿಸಿದೆನೆಂದು ನನಗೆ ಮನವರಿಕೆಯಾಗಿದೆ. ಆದ್ದರಿಂದ ನಾನು ನನ್ನ ಪರವಾಗಿಯೂ ನನ್ನ ಸಹೋದ್ಯೋಗಿಗಳ ಪರವಾಗಿಯೂ ರಾಜೀನಾಮೆಯನ್ನು ಕೊಟ್ಟಿರುತ್ತೇನೆ'

ಕಾಂಗ್ರೆಸ್ ಮುಖಂಡರ ಸಲಹೆಯಂತೆ ಡಾ. ಖರೆಯವರು ರಾಜೀನಾಮೆ ಇತ್ತಿರುವದರಿಂದ ಮಂತ್ರಿ ಮಂಡಲದ ನಾಟಕವು ಮತ್ತೊಂದು ಸ್ವರೂಪವನ್ನು ತಳೆದಿರುವದು. ಮುಂದಿನ ಕೆಲಸವೆಲ್ಲವೂ ಗವರ್ನರರನ್ನೆ ಅವಲಂಬಿಸಿರುವದು.

ಡಾ. ಖರೆಯವರು ಗವರ್ನರರೊಡನೆ ಮಾತಾಡುವಾಗ ಅವರ ರಾಜೀನಾಮೆಯನ್ನು ಸ್ವೀಕರಿಸುವದು ತನ್ನಿಂದಿಲ್ಲವೆಂದು ಖರೆಯವರಿಗೆ ತಿಳಿಸಿರುವದಾಗಿ ಗೊತ್ತಾಗಿದೆ.

ಮಹಾತ್ಮ ಗಾಂಧಿಯವರೊಡನೆ ಮಧ್ಯಪ್ರಾಂತ್ಯದ ಪ್ರಧಾನ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟ ಡಾ. ಖರೆಯವರು ಮಹಾತ್ಮ ಗಾಂಧಿಯವರು ಮೊದಲಿನ ಮತ್ತು ಹೊಸ ಮಂತ್ರಿ ಮಂಡಲವನ್ನು ಬಿಟ್ಟು ಬೇರೊಬ್ಬನನ್ನು ಕಾಂಗ್ರೆಸ್ ಮುಖಂಡನನ್ನಾಗಿ ಆರಿಸಬೇಕೆಂಬ ಅಭಿಪ್ರಾಯ ಇಟ್ಟಿರುವವರಾಗಿರುವರು. ಈ ವಿಚಾರದಲ್ಲಿ ಆರ್. ಯಸ್. ಶುಕ್ಲರವರನ್ನು ಆರಿಸಬಹುದೆಂಬ ಊಹೆ ಇದೆ. ಆದರೆ ಡಿಸ್‌ಮಿಸ್ ಮಾಡಿದ ಮಂತ್ರಿಗಳನ್ನು ಪುನಃ ಅಧಿಕಾರಕ್ಕೆ ತರಲು ಗವರ್ನರರು ಒಪ್ಪದಿದ್ದರೆ ಒಂದು ರಾಜಕೀಯ ಬಿಕ್ಕಟ್ಟು ಉಂಟಾಗುವುದು. ಒಂದು, ಗವರ್ನರರು ಅಧಿಕಾರವನ್ನು ವಹಿಸಿಕೊಳ್ಳಬೇಕು ಇಲ್ಲವೇ ಹೊಸ ಚುನಾವಣೆಯಾಗಬೇಕು. ಅಂತೂ ಈ ಪರಿಸ್ಥಿತಿಯಿಂದ ಕಾಂಗ್ರೆಸ್ ಜನತೆಯ ಮೇಲಿರುವ ತನ್ನ ಹಿಡಿತವನ್ನು ಹೆಚ್ಚಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲವೆಂದು ಊಹಿಸಲಾಗಿದೆ.

ವರ್ಕಿಂಗ್ ಕಮಿಟಿಯ ಪತ್ರ

ಡಾ. ಖರೆಯವರು ಮುಖಂಡತ್ವಕ್ಕೆ ರಾಜೀನಾಮೆ ಕೊಡದೆ ಹಿಂದೆ ನಿಲ್ಲಲಿ ಎಂದು ... ಅಸೆಂಬ್ಲಿಯ ... ದೇಶದಲ್ಲಿ ... ಗವರ್ನರರು ಡಿಸ್‌ಮಿಸ್ ಮಾಡಿದ ಕೆಲವು ಮಂತ್ರಿಗಳನ್ನು ಪುನಃ ಮಂತ್ರಿಪದದಲ್ಲಿರಿಸಿ. ಗವರ್ನರರು ಅದನ್ನು ಒಪ್ಪುವಂತೆ ಮಾಡಲು ವರ್ಕಿಂಗ್ ಕಮಿಟಿಯು ಹಟತೊಟ್ಟಿದೆ. ಗಾಂಧೀಜಿಯವರು ಡಾ. ಖರೆಯವರ ಈ ವರ್ತನೆಯು ಕ್ಷಮಿಸಲರ್ಹವಾದದ್ದಲ್ಲವೆಂದೂ ಅಭಿಪ್ರಾಯಪಟ್ಟಿರುವರು.

ಡಾ. ಖರೆಯವರು ಮುಖಂಡತ್ವಕ್ಕೆ ಸ್ಪರ್ಧಿಸದೆ ಹಿಂದೆ ನಿಲ್ಲಲು ತನ್ನ ಸ್ನೇಹಿತರನ್ನು ವಿಚಾರಿಸಿ ಉತ್ತರಕೊಡುವೆನೆಂದು ವರ್ಕಿಂಗ್ ಕಮಿಟಿಗೆ ಹೇಳಿದ್ದರ ಮೇರೆ ಅವರು ಸ್ನೇಹಿತರೊಡನೆ ವಿಮರ್ಶಿಸಿ ವರ್ಕಿಂಗ್ ಕಮಿಟಿಯ ತೀರ್ಮಾನಕ್ಕೆ ಒಪ್ಪಲು ಸಾಧ್ಯವಿಲ್ಲವೆಂದು ಟೆಲಿಫೋನ್ ಮೂಲಕ ತಿಳಿಸಿದರು. ಈ ವಿಚಾರದ ಬಗ್ಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಡಾ. ಖರೆಯವರ ಈ ವರ್ತನೆಯು ಕಾಂಗ್ರೆಸಿನ ಶಿಸ್ತಿಗೆ ವಿರುದ್ಧವಾದದ್ದೆಂದೂ, ಆದ್ದರಿಂದ ಅವರು ಕಾಂಗ್ರೆಸಿನಲ್ಲಿ ಅಧಿಕಾರ ವಹಿಸಲು ಅರ್ಹರಲ್ಲವೆಂದೂ ಠರಾವು ಪಾಸುಮಾಡಿತು.

ಶ್ರೀ ರವಿಶಂಕರ ಶುಕ್ಲರು ಮುಖಂಡರಾಗಿ ಆರಿಸಲ್ಪಟ್ಟರು

ಮಧ್ಯಪ್ರಾಂತದ ಅಸೆಂಬ್ಲಿಯ ಕಾಂಗ್ರೆಸ್ ಮೆಂಬರುಗಳ ಮೀಟಿಂಗು ತಾರೀಕು 27 ರಲ್ಲಿ ಸುಭಾಸಚಂದ್ರರ ಅಧ್ಯಕ್ಷತೆಯಲ್ಲಿ ನಡೆಯಿತು. ಬೋಸರು ಖರೆಯವರ ಆ ವರೆಗಿನ ವರ್ತನೆಗಳನ್ನು ವಿವರಿಸಿ ಅವರು ಕಾಂಗ್ರೆಸಿನಲ್ಲಿ ಯಾವ ಅಧಿಕಾರ ಸ್ಥಾನಕ್ಕೂ ಯೋಗ್ಯರಲ್ಲವೆಂದು ಸಭೆಗೆ ಅರುಹಿ ಕೊಟ್ಟನಂತರ ಮುಖಂಡರ ಚುನಾವಣೆಯು ನಡೆಯಿತು. ಶ್ರೀ ರವಿಶಂಕರ ಶುಕ್ಲರವರಿಗೆ 46 ಓಟುಗಳೂ, ಶ್ರೀ ಆರ್. ಯು. ದೇಶಮುಖರವರಿಗೆ 12 ಓಟುಗಳೂ ಸಿಕ್ಕಿದ್ದರಿಂದ ರವಿಶಂಕರ ಶುಕ್ಲರವರು ಬಹುಮತದಿಂದ ಮುಖಂಡರಾಗಿ ಆರಿಸಲ್ಪಟ್ಟರು.

ಡಾ. ಖರೆಯವರ ರಾಜೀನಾಮೆಯನ್ನು ಗವರ್ನರರು ಅಂಗೀಕರಿಸಿರುವದಾಗಿ ಇತ್ತೀಚೆಗೆ ತಿಳಿಯಬರುತ್ತದೆ. ರವಿಶಂಕರ ಶುಕ್ಲರು ಹೊಸ ಮಂತ್ರಿ ಮಂಡಲವನ್ನು ರಚಿಸುವಂತೆ ಗವರ್ನರರು ಆಹ್ವಾನಿಸಬಹುದೆಂದು ಡಾ. ಖರೆಯವರು ಒಪ್ಪಿಗೆ ಕೊಟ್ಟಿದ್ದರೆ ಈ ಹೊಸ ಮಂತ್ರಿ ಮಂಡಲದಲ್ಲಿ ಸಧ್ಯಕ್ಕೆ 6 ಮಂತ್ರಿಗಳಿರಬಹುದೆಂದೂ, ತಪ್ಪಿ ಹಾಕಲ್ಪಟ್ಟ ಮಂತ್ರಿಗಳಾದ ಶ್ರೀ ಮೆಹತಾ ಮತ್ತು ಮಿಶ್ರರಿಗೆ ಅದರಲ್ಲಿ ಸ್ಥಾನ ಸಿಗುವದಲ್ಲದೆ, ಮೆಂಬರುಗಳಾದ ಗೋಖಲೆ, ಬಾರುಕ ಮತ್ತು ಯಂ. ಪಿ. ಕೊಲ್ಲಿ ಇವರುಗಳನ್ನೂ ಮಂತ್ರಿಗಳಾಗಿ ಆರಿಸಬಹುದೆಂಬ ಊಹನೆ ಇದೆ.

ಬ್ರಿಟಿಷ್ ಸಿಂಹಕ್ಕೆ ಈ ಅವಸ್ಥೆಯೇ ?

ಮಿ. ಲಾಯಿಡ್ ಜಾರ್ಜರ ಹೇಳಿಕೆ.

ಬ್ರಿಟಿಷ್ ಸರಕಾರದ ಈಗಿನ ಘೋರ ನಿಯಮವನ್ನು ಕುರಿತು ಇತರ ರಾಷ್ಟ್ರದವರು ಬ್ರಿಟನನ್ನು ನೋಡಿ ನಗುವಂತಾಗಿರುವದೆಂದು ಮಿ. ಲಾಯಿಡ್ ಜಾರ್ಜರು ಸ್ವಾನ್‌ಸೀನಲ್ಲಿ ಭಾಷಣ ಕೊಡುವಾಗ ತಿಳಿಸಿದರು. ಇವರು ತಮ್ಮ ಭಾಷಣದಲ್ಲಿ ಈ ರೀತಿ ಹೇಳಿದರು—

'ಇತ್ತೀಚಿನ ಕೆಲವು ವರ್ಷಗಳಲ್ಲಿ ಯುದ್ಧ ಸಾಮಗ್ರಿಗಳನ್ನು ಬಹಳವಾಗಿ ಶೇಖರಿಸಿದ ದೇಶಗಳೆಂದರೆ ಜರ್ಮನಿ ಮತ್ತು ಇಟಲಿ. 1931-32ನೇ ಇಸವಿಗಳಲ್ಲಿ ಇವರ ಸ್ಥಿತಿ ಹೇಗಿತ್ತು? ಆಗ ಇವರು ಬಾಂಬು ಹಾಕುವ ಎಲ್ಲಾ ವಿಮಾನಗಳನ್ನು ತ್ಯಜಿಸಲಿಕ್ಕೆ, ಎಲ್ಲಾ ಸಬ್ ಮೆರೀನುಗಳನ್ನೂ, ಟ್ಯಾಂಕುಗಳನ್ನೂ ಬಿಟ್ಟು ಬಿಡಲಿಕ್ಕೆ, ಯುದ್ಧ ಹಡಗುಗಳನ್ನು ಸಣ್ಣದಾಗಿ ಮಾಡಲಿಕ್ಕೆ, ದೊಡ್ಡ ಫಿರಂಗಿಗಳನ್ನು ತೆಗೆದು ಹಾಕಲಿಕ್ಕೆ, ಈಗ ಚೀನಾ ಮತ್ತು ಸ್ಪೈನ್ ದೇಶಗಳಲ್ಲಿ ಸರ್ವನಾಶ ಮಾಡುತ್ತಿರುವ ಅತ್ಯಾಚಾರಗಳಿಗೆ ಕಾರಣವಾಗಿರುವಂಥ ಎಲ್ಲಾ ಬಗೆಯ ಸಾಮಗ್ರಿಗಳ ಉಪಯೋಗವನ್ನು ನಿಲ್ಲಿಸಲಿಕ್ಕೆ ಸಿದ್ಧರಿದ್ದರು. ಆಗ ಈ ಯೋಜನೆಯನ್ನು ನಾವು ಒಪ್ಪಿಕೊಂಡಿದ್ದರೆ ಈಗ ಯುದ್ಧ ಸಾಮಗ್ರಿಗಳ ಮೇಲೆ ಎರಡು ಸಾವಿರ ಮಿಲಿಯ ಪವನು ನಾವು ಖರ್ಚು ಮಾಡಬೇಕಾಗಿ ಬರುತ್ತಿರಲಿಲ್ಲ. ಆಗಿನ ನಮ್ಮ ಬಜೆಟ್‌ನಲ್ಲಿ ಕಡಿತ ಮಾಡಬಹುದಿತ್ತು. ಆ ಯೋಜನೆಯನ್ನು ನಾವೇಕೆ ಒಪ್ಪಿಕೊಳ್ಳಲಿಲ್ಲ? ನಾವು ಮಾತಾಡಿದೆವು—ಮಾತೇ ಬೆಳೆಸಿದೆವು—ಹುಚ್ಚರಂತೆ ವರ್ತಿಸಿದೆವು.

ಇದರ ಪರಿಣಾಮವಾಗಿ ನಾವಿಂದು ಪ್ರತಿಯೊಂದಕ್ಕೂ ತಲೆಬಾಗುತ್ತಿದ್ದೇವೆ. ಜಪಾನಿಯು ಮಂಚೂರಿಯಾಗಿಂದ ಆಗ್ರಮಿಸಿದಳು. ಜಪಾನು ಮಂಚೂರಿಯಕ್ಕೆ ಘೋಷಿಸುತ್ತದೆ—ಇದನ್ನು ನಾವು ಸಹಿಸುವುದಿಲ್ಲ ಎಂದೆವು. ಇಡೀ ಜನಾಂಗ ಸಂಘವನ್ನೆ ನಮ್ಮ ಬೆಂಬಲಕ್ಕೆ ಕಟ್ಟಿಕೊಂಡೆವು. ಅಮೇರಿಕವೂ ನಮ್ಮೊಡನಿದ್ದಿತು. ಒಂದು ಗುಂಡನ್ನಾದರೂ ಹಾರಿಸದೆ ಅತ್ಯಾಚಾರವನ್ನು ತಡೆಗಟ್ಟಲು ನಮಗೆ ಸಾಮರ್ಥ್ಯವಿದ್ದಿತು. ಆದರೆ ನಾವೇನು ಮಾಡಿದೆವು? ಸುಮ್ಮನೆ ನೋಡಿದೆವು. ಅನಂತರದ ಅಬಿಸೀನಿಯದ ಪ್ರಸಂಗ ಬಂತು. ಇದನ್ನು ನಾವು ಬಿಡಲಾರೆವೆಂದು ಮುಸಲೋನಿಗೆ ತಿಳಿಸಿದೆವು. ಜಪಾನಿನ ಎದುರು ನಾವು ಕೋಟು ಮಾತ್ರ ಕಳೆದೆವು. ಮುಸಲೋನಿ ಎದುರು ಕೋಟನ್ನೂ, ವೇಸ್ಟ್-ಕೋಟನ್ನೂ ಕಳೆದೆವು. ಮತ್ತು ಕುಸ್ತಿಯ ಕಣದಿಂದ ಜಾರಿದೆವು. ಮುಸಲೋನಿಯು ನಮ್ಮ ಕೋಟನ್ನು ವೇಸ್ಟ್-ಕೋಟನ್ನೂ ಹಿಡಿದುಕೊಂಡೇ ಹೋದನು. ಅಬಿಸೀನಿಯವು ಇನ್ನೂ ಅವನ ವಶವಾಗಿಲ್ಲ. ಹಾಗಾದರೆ ಅದಕ್ಕೆ ನಾವು ಜವಾಬ್ದಾರರಲ್ಲ. ಆ ಗುಡ್ಡಗಾಡಿನ ಸಿಪಾಯಿಗಳು ಇನ್ನೂ ಪರ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾರೆ. ಇವರಿಗೆ ಬಾಂಬು ಹಾಕಲು ವಿಮಾನಗಳಿಗೆ ಬೇಕಾದ ಎಣ್ಣೆಯನ್ನು ಒದಗಿಸಿ ನಾವು ಹಣ ಮಾಡುತ್ತಿದ್ದೇವೆ. ಮುಸಲೋನಿಯ ಹುಡುಗುಗಳನ್ನು ಸುವೇಜ್ ಕಾಲುವೆಯಿಂದ ಹೋಗಲು ಬಿಡುತ್ತಿದ್ದೇವೆ. ಇದರಲ್ಲಿಯೂ ನಮಗೆ ಹಣ ಸಿಕ್ಕುತ್ತಾ ಇದೆ. ನಾವು ಮುಸಲೋನಿಯೊಡನೆ ರಾಜಿ ಒಪ್ಪಂದಕ್ಕೆ ದಸ್ಕತು ಮಾಡುತ್ತಿದ್ದೇವೆ.

ಸ್ಪೈನಿನ ಸಮುದ್ರದಲ್ಲಿ ಬ್ರಿಟಿಷ್ ಹಡಗುಗಳಿಗೆ ಬಾಂಬುಗಳು ಬೀಳುತ್ತಿವೆ. ಬ್ರಿಟಿಷ್ ನಾವಿಕರು ಕೈಕಾಲು ಮುರಿದುಕೊಳ್ಳುತ್ತಿದ್ದಾರೆ. ಇಲ್ಲವೆ ಸಮುದ್ರದಲ್ಲಿ ಮುಳುಗಿಸಲ್ಪಡುತ್ತಿದ್ದಾರೆ. ನಾವೇನು ಮಾಡುತ್ತಿದ್ದೇವೆ? ಪಕ್ಷಿಯ ಗೂಡಿಗೆ ಯಾರಾದರೂ ಕೊಂಡರೆ ಕೊಟ್ಟರೆ ಅದು ಹೇಗೆ ಚೀರಿಟ್ಟು ಓಡುವಂತೆ ನಮ್ಮ ಕುಗ್ಗಿದ ನಿಷೇಧಗಳನ್ನು ಉಚ್ಚರಿಸುತ್ತಿದ್ದೇವೆ. ಈ ನಿಷೇಧಗಳನ್ನಾದರೂ ಜರ್ಮನಿಗೆ ಅಥವಾ ಇಟಲಿಗೆ ಕಳುಹಿಸುತ್ತಿರುವೆವೆ? ಇಲ್ಲ—ನಮಗೆ ಅವರ ಹೆದರಿಕೆಯಾಗುತ್ತಿದೆ. ಬ್ರಿಟಿಷ್ ಸಿಂಹಕ್ಕೆ ಇಂಥ ಅವಸ್ಥೆ ಎಂದಿನಿಂದ ಪ್ರಾಪ್ತವಾಯಿತು? ನಾವು ಅಂದು ಕಳುಹಿಸುವ ನಮ್ಮ ನಿಷೇಧಗಳು ಜಗತ್ತಿಗೆ ಹಾಸ್ಯದ ವಿಷಯಗಳಾಗಿವೆ. ಜರ್ಮನಿಯವರು ನಗುತ್ತಿದ್ದಾರೆ—ಇಟಲಿಯವರು ನಗುತ್ತಿದ್ದಾರೆ. ಅಮೇರಿಕದವರೂ ನಗುತ್ತಿದ್ದಾರೆ. 70 ವರ್ಷಗಳ ತನ್ನಂಥ ಮುದುಕನಿಗೆ ಬ್ರಿಟಿಷರ ಧ್ವಜವು ಈ ರೀತಿ ಜನಾಂಗಗಳ ಹಾಸ್ಯಕ್ಕೆ ಗುರಿಯಾಗುವುದನ್ನು ನೋಡಲು ದುಃಖವಾಗುತ್ತದೆ.

ಯೂನಾನಿ ಫಾರ್ಮಸಿಯ ಉತ್ತಮ ಔಷಧಿಗಳು.

ಉಬ್ಬಸ ಸಂಹಾರಿ (Asthma cure) ಕೆಲವು ದಿನಗಳ ಸೇವನೆಯಿಂದ ಉಬ್ಬಸವನ್ನು ಖಾತ್ರಿಯಾಗಿ ಗುಣಪಡಿಸುತ್ತದೆ. 40 ದಿನದ ಔಷಧಿಗೆ ಕ್ರಯ ರೂ 5—12—0.

ಅಂಬರ್ ಕೂದಲೆಣ್ಣೆ, ಸುಗಂಧಯುಕ್ತ ಆಮ್ಲಕೀಕ ತೈಲ ಅಲ್ಲದೆ ಎಲ್ಲಾ ರೋಗಗಳಿಗೂ ರಾಮಬಾಣದಂತಿರುವ ಮಾತ್ರೆಗಳೂ, ಚೂರ್ಣಗಳೂ, ಲೇಹಗಳೂ, ತೈಲಗಳೂ ಮತ್ತು ಕೇಶ ತೈಲಗಳೂ ಸಹ ತಯಾರಿರುವವು.

ಬೇಗನೆ ಬರೆಯಿರಿ:—

ಯಂ. ಏಂ. ಸಿದ್ದೀಕ್,
ಪ್ರೊಪ್ರೈಟರ್,
ಯೂನಾನಿ ಔಷಧಶಾಲಾ, ಮಡಿಕೇರಿ, ಕೊಡಗು.

21

ಕೊಡಗು

ಜುಲೈ ತಾರೀಕು ೨೯ನೇ ಶುಕ್ರವಾರ ೧೯೩೮

ಕೊಡಗಿನ ೧೯೩೬-೩೭ನೇ ವರ್ಷದ ಆಡಳಿತ ವರದಿ. ಲೇಖಾಂಕ ೨.

ಕೊಡಗಿನ ಸರ್ಕಾರದ 1936-37ನೇ ವರ್ಷದ ವರದಿಯಲ್ಲಿ ಪೋಲೀಸು ಇಲಾಖೆಯ ಕೆಲಸವನ್ನು ಕುರಿತು ಹೀಗೆ ಹೇಳಲಾಗಿದೆ:— ಪೋಲೀಸಿಗೆ ದಾಖಲಾದ ವಿಚಾರಿಸಲರ್ಹವಾದ ಕೇಸುಗಳ ಸಂಖ್ಯೆ ಹೆಚ್ಚಿತು. ಹಿಂದಿನ ವರ್ಷ 459 ಇದ್ದದ್ದು ವರದಿ ವರ್ಷದಲ್ಲಿ 567ಕ್ಕೆ ಏರಿತು. ಇವುಗಳಲ್ಲಿ ಶೇಕಡ 63.31 ರಷ್ಟು ಶಿಕ್ಷೆಯಾಯಿತು, ಹಿಂದಿನ ವರ್ಷ 61.73% ರಷ್ಟು ಶಿಕ್ಷೆಯಾಗಿತ್ತು. ಹಿಂದಿನ ವರ್ಷದ ಕಡಿತದಲ್ಲಿದ್ದ ಐದು ಕೇಸುಗಳನ್ನು ಸೇರಿ 11 ಖೂನಿ ಕೇಸುಗಳು ವಿಚಾರಿಸಲ್ಪಟ್ಟವು. ಇವುಗಳ ಪೈಕಿ ಎರಡರಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಯಿತು, 1 ರಲ್ಲಿ ಬಿಡುಗಡೆಯಾಯಿತು ಮತ್ತು 5 ವಿಚಾರದಲ್ಲಿದ್ದವು. ರೂ 7461 ರಷ್ಟು ಬೆಲೆಯ ಸಾಮಾನುಗಳು ಕಳವಾದವು. ಹಿಂದಿನ ವರ್ಷ ಕಳವಿನ ಮೌಲ್ಯ ರೂ 6,193. ವರದಿ ವರ್ಷ ಕಳವಾದ ಸಾಮಾನುಗಳಲ್ಲಿ ಶೇಕಡ 31.71 ರಷ್ಟು ಮಾತ್ರ ಪತ್ತೆ ಮಾಡಲಾಯಿತು. ಹಿಂದಿನ ವರ್ಷ 47.77% ರಷ್ಟು ಪತ್ತೆ ಮಾಡಲಾಗಿತ್ತು. ದಸ್ತಗಿರಿ ಮಾಡಲ್ಪಟ್ಟ 462 ಜನರಲ್ಲಿ 319 ಜನರಿಗೆ ಶಿಕ್ಷೆಯಾಯಿತು. ದರೋಡೆಯ ಕೇಸೊಂದೂ ಪತ್ತೆ ಮಾಡಲಾಗಲಿಲ್ಲ. ದಾಖಲು ಮಾಡಲ್ಪಟ್ಟ ೮ ದು ಕಳವು ಕೇಸುಗಳ ಪೈಕಿ ಒಂದರಲ್ಲಿ ಮಾತ್ರ ಶಿಕ್ಷೆಯಾಯಿತು, 4 ವಜಾ ಮಾಡಲ್ಪಟ್ಟವು, ಒಂದು ವಿಚಾರದಲ್ಲಿತ್ತು. ವರ್ಷಾಂತ್ಯದಲ್ಲಿ 23 ಹೆಡ್ ಕಾನ್‌ಸ್ಟೇಬಲರು, 154 ಕಾನ್‌ಸ್ಟೇಬಲರು, 2 ಜಮೇದಾರರು ಮತ್ತು 30 ಚೌಕೀದಾರರು ಈ ಇಲಾಖೆಯಲ್ಲಿದ್ದರು. ಇದರಿಂದ ಪೋಲೀಸು ಇಲಾಖೆಯವರ ಕೆಲಸವು ತೃಪ್ತಿಕರವೆಂದು ಹೇಳಲಾಗುವುದಿಲ್ಲ. ಖೂನಿ ಕೇಸುಗಳ ರುಜುವಾತಿಗೂ, ದರೋಡೆ ಮತ್ತು ಕಳವು ಕೇಸುಗಳ ಪತ್ತೆಗೂ ಸಾಕಷ್ಟು ಗಮನ ಕೊಡಲಿಲ್ಲವೆಂದೇ ಹೇಳಬೇಕಾಗುತ್ತದೆ. ಇದರ ಬದಲು ಅವರ ಹೆಚ್ಚಿನ ಸಮಯವು ಮೋಟಾರು ವಾಹನಗಳ ಮೇಲೆ ಕೇಸು ನಡಿಸಲು ಉಪಯೋಗಿಸಲ್ಪಡುತ್ತಿದೆಯೆಂದರೆ ತಪ್ಪಾಗಲಾರದು. ಇನ್ನು ಮುಂದಾದರೂ ಖೂನಿ ಮತ್ತು ಕಳವು ಕೇಸುಗಳ ಪತ್ತೆ ವಿಚಾರದಲ್ಲಿ ಹೆಚ್ಚಿನ ಪ್ರಯತ್ನ ಮಾಡಿ ಕೊಡಗಿನ ಪೋಲೀಸು ದಳದ ಕೀರ್ತಿಯನ್ನು ಉಳಿಸುವರೆಂದು ನಂಬುತ್ತೇವೆ.

ವರದಿ ವರ್ಷದಲ್ಲಿ 1273 ಅಂದರೆ ಹಿಂದಿನ ವರ್ಷಕ್ಕಿಂತ 189 ಹೆಚ್ಚು ಕ್ರಿಮಿನಲ್ ಮೊಕದ್ದಮೆಗಳು ದಾಖಲು ಮಾಡಲ್ಪಟ್ಟವು; ಅವುಗಳ ಪೈಕಿ 1176 ವಿಚಾರಿಸಲ್ಪಟ್ಟು, 758 ಜನರಿಗೆ ಶಿಕ್ಷೆಯಾಯಿತು, 838 ಬಿಡುಗಡೆಯಾಯಿತು, ಅಂದರೆ ಶೇಕಡ 48.46 ರಷ್ಟು ಶಿಕ್ಷೆಯಾದಂತಾಯಿತು. ಇದು ಹಿಂದಿನ ವರ್ಷಕ್ಕಿಂತ ಶೇಕಡ 1ರಷ್ಟು ಹೆಚ್ಚು. ಅಪರಾಧಿಗಳ ಮೇಲೆ ವಿಧಿಸಲ್ಪಟ್ಟ ಒಟ್ಟು ಜುಲ್ಮಾನೆ ರೂ. 5,846, ಹಿಂದಿನ ವರ್ಷ ಇದು ರೂ 5023 ಮಾತ್ರವಾಗಿತ್ತು. ಕೊಡಗಿನಲ್ಲಿರುವ ಬೆಂಚು ಮೇಜಿಸ್ಟ್ರೇಟರುಗಳ ಮತ್ತು ಸ್ಪೇಷಲ್ ಮೇಜಿಸ್ಟ್ರೇಟರುಗಳ ಜೊತೆಗೆ ಇತರ ಸೆಕೆಂಡ್ ಮತ್ತು ಫಸ್ಟ್ ಕ್ಲಾಸ್ ಮೇಜಿಸ್ಟ್ರೇಟರುಗಳ ಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡರೆ ಇಲ್ಲಿ ಈ ಮೇಜಿಸ್ಟ್ರೇಟರುಗಳಿಗೆಲ್ಲಾ ಸಾಕಷ್ಟು ಕೆಲಸವಿಲ್ಲವೆಂದೇ ಹೇಳಬೇಕಾಗುತ್ತದೆ. ಇವುಗಳಲ್ಲಿ ಹಲವು ಗೌರವ ಮೇಜಿಸ್ಟ್ರೇಟರುಗಳ ಮೇಲಿನ ಕೇಸುಗಳೇ ಆಗಿರಬಹುದು.

'ಕೊಡಗಿನಲ್ಲಿರುವುದು ಮಡಿಕೇರಿಯಲ್ಲಿರುವ ಒಂದು ಜೈಲು ಮಾತ್ರ. ಇತರ ಕಡೆಗಳಲ್ಲಿರುವ ಲಾಕಪ್ ಸಬ್ ಜೈಲುಗಳು. ವರದಿ ವರ್ಷದಲ್ಲಿ ಜೈಲಿಗೆ ಸೇರಿಸಲ್ಪಟ್ಟವರು 215, ಇದು ಹಿಂದಿನ ವರ್ಷದಕ್ಕಿಂತ 3 ಜನ ಹೆಚ್ಚು. ಹಿಂದಿನ ವರ್ಷಾಂತ್ಯದಲ್ಲಿ ಬಂಧಿಖಾನೆಯಲ್ಲಿದ್ದವರು 40 ಜನ. ವರದಿ ವರ್ಷದಲ್ಲಿ ಬಿಡುಗಡೆಯಾದವರು 263, ಉಳಿದವರು 22. 1936-37 ರಲ್ಲಿ ಕಸ್ಟಡಿಯಲ್ಲಿದ್ದ 189 ಕೈದಿಗಳ ಪೈಕಿ 60 ಜನರಿಗೆ ಮಾತ್ರ ಶಿಕ್ಷೆಯಾಯಿತು. 114 ಬಿಡುಗಡೆ ಮಾಡಲ್ಪಟ್ಟರು, 11 ಜನರ ವಿಚಾರವು ಮುಗಿದಿರಲಿಲ್ಲ.' ಇದರಿಂದ ಇಷ್ಟು ಕಷ್ಟಕ್ಕೆ ಕಾರಣರಾಗಿಲ್ಲದೆ ಎಷ್ಟೋ ಜನರು ವಿನಾಕಾರಣ ಕಸ್ಟಡಿಯಲ್ಲಿ ಕಷ್ಟಪಡುತ್ತಿರುವರೆಂದೂ, ಆದರೆ ಅವರ ಅಪರಾಧಗಳನ್ನು ರುಜುವಾತುಪಡಿಸಲು ಸಂಬಂಧಪಟ್ಟವರು ಹೆಚ್ಚು ಪ್ರಯತ್ನ ವಹಿಸುತ್ತಿಲ್ಲವೆಂದೂ ಕಂಡು ಬರುತ್ತದೆ. ನ್ಯಾಯದ ದೃಷ್ಟಿಯಿಂದ ಇದು ಸರಿಯಲ್ಲ. ಜೈಲಿನಲ್ಲಿ ವಸತಿಯ ಏರ್ಪಾಡುಗಳು ತೃಪ್ತಿಕರವಾಗಿದ್ದವೆಂದೂ, ಕೈದಿಗಳಿಗೆ ಕೊಡುತ್ತಿದ್ದ ಆಹಾರವು ಅವರನ್ನು ಒಳ್ಳೇ ಆರೋಗ್ಯದಲ್ಲಿಡುವಷ್ಟು ಚೆನ್ನಾಗಿತ್ತೆಂದೂ ಹೇಳಲಾಗಿದೆ. ಆದರೆ ಕೆಲವು ಸಬ್ ಜೈಲುಗಳಲ್ಲಿ ವಸತಿ, ಶೌಚ ಮೊದಲಾದವುಗಳ ಏರ್ಪಾಡುಗಳು ತೃಪ್ತಿಕರವಾಗಿಲ್ಲ. ಕೈದಿಗಳು ಅದರಲ್ಲೂ ಗುಮಾನಿಯ ಮೇಲೆ ಲಾಕಪ್ಪಿನಲ್ಲಿ ತಳ್ಳಲ್ಪಡುವರು ಮನುಷ್ಯರು, ಅವರು ಉಳಕೊಳ್ಳಲು ತಕ್ಕದಾದ ಏರ್ಪಾಡುಗಳಿರಬೇಕೆಂಬುದನ್ನು ಅಧಿಕಾರಿಗಳು ಮರೆಯಲಿಕ್ಕಿಲ್ಲವಾಗಿ ನಂಬುತ್ತೇವೆ. ಮದ್ರಾಸು ಪ್ರಾಂತ್ಯದಲ್ಲಿ ಕೈದಿಗಳಿಗೆಲ್ಲಾ ಮಜ್ಜಿಗೆಯನ್ನು ಕೊಡುವ ಏರ್ಪಾಡು ಮಾಡಿರುವರೆಂದು ತಿಳಿಯುತ್ತದೆ. ಜೈಲಿನ ವಿಚಾರದಲ್ಲಿ ಅಲ್ಲಿಯ ನಿಯಮ ನಿಬಂಧನೆಗಳನ್ನೇ ಹಿಂಬಾಲಿಸುವ ಇಲ್ಲಿಯ ಸರ್ಕಾರದವರೂ ಆ ವಿಚಾರದನ್ನು ಇಲ್ಲಿಯೂ ಜಾರಿಗೆ ತಂದಿರುವರೋ ತಿಳಿಯದು. ಒಂದು ವೇಳೆ ಹಾಗೆ ಮಾಡದಿದ್ದ ಪಕ್ಷದಲ್ಲಿ ಕೂಡಲೆ ಜಾರಿಗೆ ತರುವರೆಂದಾಗಿ ಆಶಿಸುತ್ತೇವೆ.

ಆರು ತಿಂಗಳ ಮೇಲೆ ಸಜೆಯಾದ ಕೈದಿಗಳನ್ನು ಈ ವರೆಗೂ ಕಣ್ಣಾನೂರಿನ ಸೆಂಟ್ರಲ್ ಜೈಲಿಗೆ ಕಳುಹಿಸಿಬಿಡುತ್ತಿದ್ದರು. ಈ ನಿಜಾಂ ಸರದಿಯಲ್ಲಿ ಹೀಗೆ ಬರಿಯಲಾಗಿದೆ—'ದೀರ್ಘ ಕಾಲದ ಕೈದಿಗಳನ್ನು ಮಡಿಕೇರಿ ಜೈಲಿನಲ್ಲಿಯೇ ಇಡುವ ಆಲೋಚನೆ ಮಾಡಲಾಯಿತು. ಅವರನ್ನು ಕಣ್ಣಾನೂರಿಗೆ ಕಳುಹಿಸುವುದಕ್ಕಿಂತ ಇಲ್ಲಿಯೇ ಇಡುವುದು ಮಿತವ್ಯಯವೆಂದು ಕಂಡು ಬಂತು. ಆದುದರಿಂದ ಎ ಮತ್ತು ಬಿ ಕ್ಲಾಸು ಕೈದಿಗಳು, ರಾಜಕೀಯ ತಪ್ಪಿಗಾಗಿ ಶಿಕ್ಷಿಸಲ್ಪಟ್ಟ ಸಿ ಕ್ಲಾಸಿನ ಸ್ತ್ರೀ ಕೈದಿಗಳು, ಮೊದಲೊಮ್ಮೆ ಸಜೆ ಅನುಭವಿಸಿದವರು, ಅಪಾಯಕರವಾದ ಬಂಧಿಗಳು ಮತ್ತು ಜೀವಾಂತ್ಯ ಶಿಕ್ಷೆಗೆ ಗುರಿಯಾದವರು—ಇವರುಗಳ ವಿನಹ ಉಳಿದ ಕೈದಿಗಳೆಲ್ಲರೂ ಎಷ್ಟು ದೀರ್ಘಕಾಲ ಸಜೆ ವಿಧಿಸಲ್ಪಟ್ಟರೂ ಮಡಿಕೇರಿ ಜೈಲಿನಲ್ಲೇ ಇಡಲ್ಪಡಬೇಕೆಂದು 1936 ನೇ ಡಿಸೆಂಬರಿನಲ್ಲಿ ತೀರ್ಮಾನಿಸಲ್ಪಟ್ಟಿದೆ.' ಇದರಿಂದ ಎಷ್ಟರ ಮಟ್ಟಿಗೆ ಖರ್ಚು ಕಡಿಮೆಯಾಗುವುದು ತಿಳಿಯದು. ಕೈದಿಗಳನ್ನು ಅತ್ತಿತ್ತ ಸಾಗಿಸುವ ಖರ್ಚು ಉಳಿತಾಯವಾಗುವುದರಿಂದ ಮಿತವ್ಯಯವಾಗಬಹುದು. ಆದರೆ ಕೈದಿಗಳ ಸುಧಾರಿತ ಜೀವನವನ್ನು ನಡಿಸಲು ಮತ್ತು ಬಿಡುಗಡೆಯಾಗಿನ ಮುಂದಿನ ಜೀವನಕ್ಕೆ ಅನುಕೂಲವಾಗಲು ಉಪಯುಕ್ತವಾಗುವ ನೂಲುವಿಕೆ, ಚರ್ಮದ ಕೆಲಸ, ಬಡಗಿ ಕೆಲಸ, ಕಮ್ಮಾರ ಕೆಲಸ, ಹಗ್ಗ ಮಾಡುವ ಕೆಲಸ ಮೊದಲಾದವುಗಳನ್ನು ಕಲಿಯಬೇಕಾದಂಥ ಅವಕಾಶವು ಕಣ್ಣಾನೂರು ಜೈಲಿನಲ್ಲಿರುವುದರಿಂದ ಈ ಅನುಕೂಲವು ದೀರ್ಘ ಕಾಲದ ಕೈದಿಗಳಿಗೆ ತಪ್ಪಿಹೋಗುತ್ತದೆ. ಮಡಿಕೇರಿ ಜೈಲಿನಲ್ಲಿರುವ ಕೈದಿಗಳಿಗೆ ಸರಕಾರಿ ತೋಟದಲ್ಲಿ ಕೆಲಸ, ನೌಕರಿ ಒಡೆಯುವ, ಬಾಗಿಲು ಗುಡಿಸುವ ಕೆಲಸ ಮಾತ್ರವಿದ್ದು, ಇವು ಉಪಯುಕ್ತವಾದ ಕೆಲಸಗಳೇ ಅಲ್ಲ. ಆದ ಕಾರಣ ಈ ನೂತನ ಏರ್ಪಾಡನ್ನು ಬದಲಾಯಿಸಿದ್ದು ಪ್ರಯೋಜನಕಾರಿಯಲ್ಲವೆಂದು ಹೇಳಬೇಕಾಗಿದೆ. ಈ ವಿಷಯ ಸಂಬಂಧಪಟ್ಟ ಅಧಿಕಾರಿಗಳು ಪುನರಾಲೋಚನೆ ಮಾಡುವುದು ಯುಕ್ತವೆಂದು ತೋರುತ್ತದೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ತೀರ್ಮಾನಗಳು

ತಾ. 23-7-38 ರಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ವಾರ್ಧಾದಲ್ಲಿ ಶ್ರೀ ಸುಭಾಷ ಚಂದ್ರಬೋಸರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಅಲ್ಲಿ ಪಾಸಾದ ಠರಾವುಗಳ ಸಾರಾಂಶ ಈ ಕೆಳಗೆ ಕೊಡಲಾಗಿದೆ.

1. ಆರ್ಥಿಕ ಮತ್ತು ರಾಜಕೀಯ ಹಕ್ಕು ಬಾಧ್ಯತೆಗಳಿಗಾಗಿ ರಾಮದುರ್ಗ, ಜಮಖಂಡಿ, ಮಿರಾಜ್ ಮತ್ತು ಮಾಣವಾಲಾ ಪ್ರಾಂತಗಳ ಜನರು ಹೂಡಿದ ಅಹಿಂಸಾಪೂರಿತ ಚಳವಳವನ್ನು ವರ್ಕಿಂಗ್ ಕಮಿಟಿಯು ಶ್ಲಾಘಿಸುತ್ತದೆ.

2 ಒರಿಸ್ಸಾ ಪ್ರಾಂತದ ನೀಲಗಿರಿಯಲ್ಲಿರುವ ಕಾನೂನು ಕಾಯಿದೆಯ ವಿರೋಧ ನಡೆಸುತ್ತಿರುವ ಅಲ್ಲಿಯ ಜನರ ಅಹಿಂಸಾ ಚಳವಳಕ್ಕೆ ಸಹಾನುಭೂತಿಯನ್ನು ಕೊಡುತ್ತದೆ.

3 ಸಣ್ಣಕ್ಕೆ ಸಂಸ್ಥಾನ ಕಾಂಗ್ರೆಸ್ ಕಮಿಟಿಗಳು ಮೊದಲಿನಂತೆ ಆಯಾಯ ಪ್ರಾಂತೀಯ ಕಾಂಗ್ರೆಸು ಕಮಿಟಿಗಳ ಅಧೀನದಲ್ಲಿ ಕೆಲಸ ಮಾಡಬಹುದೆಂದು ತೀರ್ಮಾನಿಸುತ್ತದೆ.

4 ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೊದಲಿನ ಆಫೀಸು ಸೆಕ್ರೆಟರಿಗಳಾದ ಶ್ರೀ ಬಿ. ರಾಜರಾಯರ ಅಕಾಲ ನಿಧನಕ್ಕೆ ತನ್ನ ಸಂತಾಪವನ್ನು ಸೂಚಿಸುತ್ತದೆ.

5 ಶ್ರೀ ಬಿ. ರಾಜರಾಯರು ಕಾಂಗ್ರೆಸಿಗೆ ಸಲ್ಲಿಸಿದ ಅಮೂಲ್ಯ ಸೇವೆಗಾಗಿ ಅವರ ಕುಟುಂಬಕ್ಕೆ ಕಾಂಗ್ರೆಸ್ ಸಂಸ್ಥೆಯಿಂದ ರೂ 1000 ಉಚಿತವಾಗಿ ಕೊಡಬಹುದೆಂದು ತೀರ್ಮಾನಿಸುತ್ತದೆ.

6 ಸ್ಥಳೀಯ ಸಂಸ್ಥೆಗಳ ಚುನಾವಣೆಯ ತಕರಾರುಗಳನ್ನು ಇನ್ನು ಮುಂದೆ ಆಯಾ ಪ್ರಾಂತೀಯ ಸಂಸ್ಥೆಗಳಿಂದ ತೀರ್ಮಾನಿಸಲ್ಪಟ್ಟ ವಿಷಯ ವರ್ಕಿಂಗ್ ಕಮಿಟಿಗೆ ನಿವೇದಿಸಕೂಡದು.

7. ಬಂಗಾಳ ಮತ್ತು ಬಿಹಾರಿ ವಾದವಿವಾದಗಳನ್ನು ತೀರಿಸಲು ಬಾಬು ರಾಜೇಂದ್ರ ಪ್ರಸಾದರಿಗೆ ಪೂರ್ಣ ಅಧಿಕಾರ ಕೊಟ್ಟಿರುವದಲ್ಲದೆ ತೀರ್ಮಾನಿಸಿದ ಸಂಗತಿಗಳನ್ನು ಅಲ್ಲಿಯ ಪ್ರಸಂಗಗಳಿಗೆ ವರ್ಕಿಂಗ್ ಕಮಿಟಿಯು ತಿಳಿಸುವದು.

8 1937 ನೇ ಆಗಸ್ಟ್ 14 ನೇ ತಾರೀಕಿನ ವರ್ಕಿಂಗ್ ಕಮಿಟಿಯು ಮೀಟಿಂಗಿನಲ್ಲಿ ಪಾಸು ಮಾಡಿದ ಠರಾವನ್ನು ಸ್ವಲ್ಪ ಮಾರ್ಪಾಡಿಸಿ ಕೈಗಾರಿಕೆಗಳ ಅಭಿವೃದ್ಧಿಯ ಬಗ್ಗೆ ವಿಚಾರ ವಿನಿಮಯ ಮಾಡಬೇಕೆಂದು ಕಾಂಗ್ರೆಸ್ ಅಧ್ಯಕ್ಷರು ರಾಷ್ಟ್ರಪತಿಗಳಿಗೆ, ಕೈಗಾರಿಕೆ ಮಂತ್ರಿಗಳ ಒಂದು ಸಮ್ಮೇಳನವನ್ನು ಕರೆಸಿ ಈ ವಿಚಾರದ ಯೋಜನೆಯ ಅಧಿಕಾರ ಕೊಡಲಾಯಿತು.

ಭಾಷಾನುವಾರು ಪ್ರಾಂತ ರಚನೆ.

9 ಆಂಧ್ರ ಮಹಾಸಭೆ, ಕರ್ನಾಟಕ ಏಕೀಕರಣ ಸಮಿತಿ, ಕೇರಳ ಪ್ರಾಂತೀಯ ಕಾಂಗ್ರೆಸ್ ಕಮಿಟಿ ಮತ್ತು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಗಳು ಕಳುಹಿಸಿದ ಡೆಪ್ಯುಟೇಷನಿನವರ ಭಾಷಾನುವಾರು ಪ್ರಾಂತ ರಚನೆಯ ಸೂಚನೆಗಳನ್ನು ಕೇಳಲಾಯಿತು. ಈ ವಿಚಾರದಲ್ಲಿ ಮುಂಬಾಯಿ ಎಸೆಂಬ್ಲಿಯಲ್ಲಿ ಕರ್ನಾಟಕ ಪ್ರಾಂತ ರಚನೆಯಾಗಬೇಕೆಂದೂ, ಮದ್ರಾಸು ಅಸೆಂಬ್ಲಿಯಲ್ಲಿ ಭಾಷಾನುವಾರು ಪ್ರಾಂತ ರಚನೆಯಾಗಬೇಕೆಂದೂ ಪಾರ್ಲಿಮೆಂಟರಿ ಉಪಸಮಿತಿಯವರ ಅನುಮತಿ ಪಡೆದು ಪಾಸಾದ ಠರಾವುಗಳನ್ನು ಈ ಕಮಿಟಿಯು ಒಪ್ಪುತ್ತದೆ. ಕಾಂಗ್ರೆಸಿಗೆ ಇಂಥಾ ಕೆಲಸ ಮಾಡಲು ಅಧಿಕಾರ ಬಂದ

ಕೊನೆಗೆ ಈ ಪ್ರಶ್ನೆಯು ಇಂಡಿಯಾ ಸರಕಾರದ ಮುಂದಿನ ಯೋಜನೆಯ ಒಂದು ಭಾಗವಾಗಿ ಬಗೆ ಹರಿಸಲ್ಪಡುವದೆಂದು ಮತ್ತು ಈ ಸಂಬಂಧ ಚಳವಳವನ್ನು ನಡಿಸಿದ್ದಾದರೆ ಅದು ದೇಶದ ಮುಂದಿರುವ ಪ್ರಾಮುಖ್ಯ ಪ್ರಶ್ನೆಗೆ ದೇಶದ ಜನರ ಗಮನವನ್ನು ಕಡಿಮೆ ಮಾಡುವಂತಾಗುವದರಿಂದ ಈ ವಿಚಾರದಲ್ಲಿ ಇದಕ್ಕೆ ಸಮ್ಮಂಧಪಟ್ಟ ಪ್ರಾಂತ್ಯದ ಜನರ್ಯಾರೂ ಮುಂದೆ ಯಾವ ಚಳವಳವನ್ನೂ ನಡಿಸಕೂಡದೆಂದು ಈ ಕಮಿಟಿಯು ಕೇಳಿಕೊಳ್ಳುತ್ತದೆ.

ಮುಸ್ಲಿಂ ಲೀಗಿಗೆ ಉತ್ತರ.

'ಮುಸ್ಲಿಂ ಲೀಗನ್ನು ಮುಸ್ಲಿಂಮರ ಹಿತಾಪೇಕ್ಷೆಯಾದ ಏಕಮಾತ್ರ ಸಂಸ್ಥೆ ಎಂದು ಒಪ್ಪಬೇಕೆಂದಿರುವ ಲೀಗಿನ ಕೋರಿಕೆಯನ್ನು ರಾಷ್ಟ್ರೀಯ ಸಂಸ್ಥೆಯಾಗಿರುವ ಇಂಡಿಯನ್ ನೇಶನಲ್ ಕಾಂಗ್ರೆಸ್ ಒಪ್ಪಲಾರದು. ಮುಸ್ಲಿಂ ಲೀಗನ್ನು ಕೇವಲ ಮುಸ್ಲಿಂ ಪ್ರಧಾನರಿಂದ ಕೂಡಿದ ... ಮುಸ್ಲಿಂಮರ ಪ್ರಧಾನ ಸಂಸ್ಥೆ ಎಂದು ಮಾತ್ರ ಈ ಕಮಿಟಿಯು ಒಪ್ಪುವುದು ಕಾಂಗ್ರೆಸ ವರ್ಕಿಂಗ್ ಕಮಿಟಿಯು ಮುಸ್ಲಿಂ ಲೀಗಿನ ಕೋರಿಕೆಗಳನ್ನು ... ಸಾಧ್ಯವಾದಷ್ಟುಗಳೆಂದು ... ದು ... ಲಂ ಅಭಿಪ್ರಾಯವನ್ನು ಮುಸ್ಲಿಂಮರ ಸಮಸ್ಯೆಗಳನ್ನು ವ್ಯವಸ್ಥೆಗೊಳಿಸಲು ವರ್ಕಿಂಗ್ ಕಮಿಟಿಯು ನೇಮಿಸುವ ಸಾಧ್ಯವಿದ್ದಷ್ಟು ಬೇಗ ತೀರ್ಮಾನಿಸಲಾಗಿದೆ.

ದಿ ಬೋಂಬೆ ಲೈಫ್ ಎಶ್ಯೂರೆನ್ಸ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು:-ಬೊಂಬಾಯಿ

ಬೋಂಬೆ ಲೈಫ್ ಎಶ್ಯೂರೆನ್ಸ ಕಂಪನಿಯು 1937 ನೇ ವರ್ಷದ ವಾರ್ಷಿಕ ವರದಿಯು ಎಲ್ಲಾ ವಿಭಾಗಗಳಲ್ಲೂ ಈ ಸಂಸ್ಥೆಯ ಅಭಿವೃದ್ಧಿಯನ್ನು ತೋರಿಸುತ್ತಿದೆ. ಈ ಸಂಸ್ಥೆಯ ಜೀವ ವಿಮೆ ಫಂಡು ರೂ. 98,68,231-15-9 ಆಗಿದೆ. ... ನಿಧಿ ರೂ 20,382-1-7 ಆಗಿರುವದು ... ವರದಿ ವರ್ಷದಲ್ಲಿ 1088 ವಿಮಾ ... ದಾರುಗಳ ರೂ 1,72,3797... ರ ಹೊಸ ಉದ್ಯಮವು ಮಾಡಲ್ಪಟ್ಟಿದೆ. ವಿಮಾ ... 202 ವಿಮಾದಾರರು ... ದ ಬೋನಸ್ಸಿನೊಡನೆ ಅವರಿಗೆ ಸಲ್ಲತಕ್ಕ ಹಣ 4,26,...96-11-0 ಮತ್ತು 123 ಎಂಡೋಮೆಂಟ್ ಪೋಲಿಸಿಗಳು ... ನಿಶ್ಚಿತ ಸಮಯವನ್ನು ... ಈ ಬಗ್ಗೆ ರೂ. 1,91,498-8-0 ಕೊಡಲಾಗಿದೆ. ಸಾವಿರಕ್ಕೆ ಹೋಲ್ ಲೈಫ್ ವಿಮಾ ಪಾಲಿಸಿಗಳಿಗೆ ರೂ. 20 ... ಯೂ ಮತ್ತು ಎಂಡೋಮೆಂಟ್ ... ದುಗಳಿಗೆ ರೂ. 16 ರಂತೆಯೂ ಬೋನಸು ಹಂಚಲಾಗಿದೆ. ಇವರ ಎಲ್ಲಾ ಕೆಲಸವು ತೃಪ್ತಿಕರವಿದೆ. ವೃದ್ಧಾಪ್ಯದಲ್ಲಿ ಅನುಕೂಲತೆಗಳನ್ನೂ, ಮರಣಾನಂತರ ಸಂಸಾರಕ್ಕೆ ಸಹಾಯವನ್ನೂ ಕೊಡಲು ಸರ್ವವಿಧದಲ್ಲಿಯೂ ಸಹಕಾರಿಯಾಗಿದೆ.

—೦—

ವರ್ತಮಾನ ಸಂಗ್ರಹ.

ಒಳದೇಶ.

ತಾ 23-7-38ರಿಂದ 29-7-38 ರ ವರೆಗೆ ಮಡಿಕೇರಿಯಲ್ಲಿ 8 ಇಂಚು 10 ಸೆಂಟು ಮಳೆಯಾಗಿದೆ.

ಕೆಪ್ಟನ್ ... ಆ ... ನ ವರು ಮೋಟಾರಿಗೆ ... ದು ತಿಳಿಯುತ್ತೇವೆ.

... ಹೈಸ್ಕೂಲಿನಲ್ಲಿ ತಾ 1 ... ತಿಳಿಯಬರುತ್ತದೆ.

ಜುಲ್ಯೆ ತಿಂಗಳು 3 ರಲ್ಲಿ ... ಕಮಿಟಿ ಮೀಟಿಂಗು ಮಡಿಕೇರಿಯಲ್ಲಿ ನಡೆಯುವುದಾಗಿ ತಿಳಿಯುತ್ತದೆ.

... ಹೈಸ್ಕೂಲು ... ರಜೆಯಾಗಿ ಈ ತಾ 22 ರಿಂದ ಆಗೋಸ್ಟು 15 ರ ವರೆಗೆ ಮುಚ್ಚಲ್ಪಟ್ಟಿದೆ ಎಂದು ತಿಳಿಯುತ್ತೇವೆ.

... ಯೂನಿಯನ್ ಬಸ್ಸು ... ನವರ ಹೊಸ ಲೈಸೆನ್ಸಿನ ... ಈ ತಾರೀಕು 24 ರಿಂದ ...

... ಕಡೆ ... ಲ್ಲಿ ... ನಾಲ್ಕು ... ದಿಂಗಳಿಂದ ... ರುವದಾಗಿ ತಿಳಿಯುತ್ತೇವೆ.

ಈ ವಾರ ವೀರಾಜಪೇಟೆಯಲ್ಲಿ 120 ಪಡಿಯ ಗಾಡಿಗೆ ರೂ 45 ಮತ್ತು ಗೋಣಿಕೊಪ್ಪಲಲ್ಲಿ 140 ಪಡಿಯ ಗಾಡಿಗೆ ರೂ 52 ... ಕ್ರಯವಿತ್ತೆಂದು ತಿಳಿಯಬರುತ್ತದೆ.

ಸಬ್ ಜಡ್ಜಿ ... ಯಂ ಭುಜಂಗರಾಯರ ಪುತ್ರಿ ... ಯಂ ಬಿ ಗೋಪಾಲ ಕೃಷ್ಣ ... ತಮ್ಮ ಬಿ ಎಲ ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ಈಗ ಮಡಿಕೇರಿಯಲ್ಲಿ ಲಾಯರು ವೃತ್ತಿಯನ್ನು ಪ್ರಾರಂಭಿಸಿರುವರು.

ಶ್ರೀಮಂಗಲ ... ದಲ್ಲಿ ಕಲವು ದಿವಸಗಳ ... ವನ್ನು ... ಈ ತಾ 25 ... ಕೋರ್ಟಿನಲ್ಲಿ ವಿಚಾರ ನಡೆಯುತ್ತಿದೆ.

... ನೇಶನಲ್ ... ಸರ್ವಿಸ್ ... ಮದ್ರಾಸಿನ ... ಯವರು ... ಬ್ರಾಂಚಿನ ... ಈ ... 25 ರಲ್ಲಿ ... ಪಿ ... ಮೀಟಿಂಗು ನಡಿಸಿ ... ಗೊಳಿಸಿದರು.

ಈ ತಾ 25 ರಲ್ಲಿ ಫ್ರೇಜರ್‌ಪೇಟೆಯು ... ದ ಬಳಿ ಗೌಡುಗಳ ... ನದಿಯನ್ನು ಈಜಿ, ದಾಟುವಾಗ್ಯೆ ನದಿ ಹೊಳೆಯಲ್ಲಿ ... ದನ್ನು ಕಂಡು ಅಲ್ಲಿಯ ರೇಂಜರು ಮತ್ತು ಕ್ಯಾಂಪಿನಲ್ಲಿದ್ದ ಪೋಲೀಸು ಸ. ಇನ್ಸ್‌ಪೆಕ್ಟರೂ, ಸರ್ಕಲ್ ಇನ್ಸ್‌ಪೆಕ್ಟರೂ ಸೇರಿ ಮುಸಲ್ಮಾನರ ಅಬ್ದುಲ್ ಗಫೂರ್‌ರವರ ಸಹಾಯದಿಂದ ಜೀವ ಸಹಿತ ಅತನನ್ನು ... ದಡಕ್ಕೆ ತಂದರೆಂದು ವರ್ತಮಾನ.

—೦—

ಹೊರದೇಶ.

ಪಂಡಿತ ಜವಾಹರಲಾಲ್ ನೆಹರೂರವರು ತಮ್ಮ ಕುಮಾರಿಯೊಡನೆ ತಾ 22 ರಲ್ಲಿ ಸ್ಪೈನಿಗೆ ಹೋಗಿರುವರು. ಅಲ್ಲಿ ಕೆಲವು ದಿವಸವಿದ್ದು ಪುನಃ ಇಂಗ್ಲೆಂಡಿಗೆ ಹೋಗುವರು.

ಪುನಃ 17 ಮಂದಿ ರಾಜಕೀಯ ಕೈದಿಗಳು ಕಲ್ಕತ್ತೆಯಲ್ಲಿ ಬಿಡುಗಡೆ ಮಾಡಲ್ಪಟ್ಟರು. ಶ್ರೀ. ಯಂ ಯನ್ ರಾಯ್‌ರವರು ... ಕೈದಿಗಳನ್ನು ಅಭಿನಂದಿಸಿ ತಮ್ಮ ಸಂದೇಶವನ್ನು ಕಳುಹಿಸಿದ್ದಾರೆ.

ಬ್ರಿಟಿಷ್ ಚಕ್ರವರ್ತಿ ದಂಪತಿಗಳು ತಾ 21 ಸಾಯಂಕಾಲ 5-30 ಗಂಟೆಗೆ ... ಬಿಟ್ಟು 7-10 ಗಂಟೆಗೆ ಡೋವರಿಗೆ ಬಂದರು. ಇಲ್ಲಿಗೆ ಅವರ ಫ್ರಾನ್ಸ ಪ್ರವಾಸವು ಮುಗಿಯಿತು.

... ಮಕ್ಕಳ ಸಹಾಯಕ್ಕಾಗಿ ... ಭಾರತ ರಾಷ್ಟ್ರೀಯ ಸಂಸ್ಥೆಯು ಪರವಾಗಿ 5,000 ... ಮೊದಲಾದವುಗಳನ್ನು ಚೀನಾ ಸರ್ಕಾರಕ್ಕೆ ಕಳುಹಿಸಬೇಕೆಂದು ನಿರ್ಧರಿಸಲಾಯಿತು.

ಗಡಿನಾಡಿನಲ್ಲಿ ವಿಮಾನ ಹಾರುತ್ತಿರುವಾಗ ... ಧೂಳಿನ ದೆಸೆಯಿಂದ ... ದಲ್ಲಿ ... ಆಫೀಸರರಿ ... ನ್ ಎಂಬ ಇನ್ಸ್ಪೆಕ್ಟರ್ ಅದರ ... ವಾಗಿದೆ.

... ದಿನಗಳಿಂದ ... 50 ... ನಾಮೊಸಕೆ ... ದ್ದಾರೆ ...

ಜಣ ವಾಲ ಕೊಡುವ ವಿಚಾರದಲ್ಲಿ ... ಒಂದು ... ಚರ್ಚೆಗೆ ಒಂದು ... ಪಂಜಾಬಿನಲ್ಲಿ ಸುಮಾರು 35 ಸಾವಿರ ಮಂದಿ ಸಾಲ ಕೊಡುವ ... ಕಾರಣದಿಂದ ... ಗಳ ... ತಿಳಿದುಬಂದಿದೆ.

ಮಹಾತ್ಮ ಗಾಂಧಿಯವರು ಇನ್ನು 3 ವರ್ಷಗಳ ವರೆಗೆ ನಿಶ್ಚಯವಾಗಿಯೂ ಇರುವರು ಎಂಬ ಭವಿಷ್ಯವನ್ನು ಪಂಡಿತ ಲಕ್ಷ್ಮೀಕಾಂತ ಶಸ್ತ್ರಿಯವರ ಎಂಬ ಸುಪ್ರಸಿದ್ಧ ಜ್ಯೋತಿಷಿಗಳು ... ಇದಿರುವರು. ಹಿಂದಕ್ಕೊಮ್ಮೆ ... ಯ ಉರ್ದು ಪತ್ರಿಕೆಯಲ್ಲಿ ಮಹಾತ್ಮರು ಮುಂದಿನ ಜನವರಿಯಲ್ಲಿ ಸಾಯುವರೆಂದು ಬರೆದ ಭವಿಷ್ಯದಲ್ಲಿ ಏನೂ ಸತ್ಯಾಂಶವಿಲ್ಲವೆಂದೂ, ಮಹಾತ್ಮರು ತಮ್ಮ 72 ನೇ ವರ್ಷದ ವಯಸ್ಸಿನಲ್ಲಿ ಸಾಯುವರೆಂದೂ ಇವರ ಹೇಳಿಕೆ. ಈ ಜ್ಯೋತಿಷಿಗಳು ಹಿಂದಕ್ಕೊಮ್ಮೆ ಯು. ಪಿ. ಯಲ್ಲಿ ಕಾಂಗ್ರೆಸ್ ಮಂತ್ರಿ ಮಂಡಲವು ರಾಜ್ಯಸೂತ್ರವನ್ನು ಕೈಕೊಳ್ಳುವ ಬಗ್ಗೆ ತಮ್ಮ ಭವಿಷ್ಯ ನುಡಿದದ್ದು ನಿಜವಾಗಿದೆ.

ಸಾಗುವಳಿಗಾಗಿ ಕಾಲುವೆಯ ನೀರನ್ನು ಬೇಕಾದಂತೆ ಉಪಯೋಗಿಸಲು ಬಿಡಲಿಲ್ಲವೆಂದೂ ತಮ್ಮ ಮೇಲೆ ಸರ್ಕಾರವು ಅಧಿಕವಾದ ತೆರಿಗೆಯನ್ನು ಹೊರಿಸಿದೆಯೆಂದೂ ಮನನೊಂದ ಸುಮಾರು 3 ಸಾವಿರ ಮಂದಿ ರೈತರು ಜುಲಿಯನ್‌ವಾಲಾ ಬಾಗಿನಲ್ಲಿ ಸಭೆ ಕೂಡಿ ಮೆರವಣಿಗೆಯಿಂದ ಹೊರಟರು. ಆಗ ಸುಮಾರು 100 ಮಂದಿ ಪೋಲೀಸರೂ, ಇತರ ಮೇಜಿಸ್ಟ್ರೇಟರೇ ಮುಂತಾದ ಅಧಿಕಾರಿಗಳೂ ಸಂಧಿಸಿ ಈ ಗುಂಪು ಚೆದರಬೇಕೆಂದರೂ ಹಾಗಾಗದ ಕಾರಣ ಈ ಮಂದಿಯ ಮೇಲೆ ಲಾಠಿ ಚಾರ್ಜು ಮಾಡಿದುದರಿಂದ ಸುಮಾರು 350 ಜನರಿಗೆ ಪೆಟ್ಟುಬಿದ್ದು ಗಾಯಗಳಾದವು. ಪ್ರಮುಖ ನಾಯಕರನ್ನು ಕೈದುಮಾಡಲಾಗಿ ... ಕೈದಿರ ಮೇಲೆ ಪೋಲೀಸರ ಲಾಠಿ ಚಾರ್ಜು ಆದ ಪರಿಣಾಮವಾಗಿ ರೈತರು 144 ನೇ ಪ್ರಕರಣವನ್ನು ಉಲ್ಲಂಘಿಸುವಂತೆ ನಿತ್ಯವೂ 25 ಮಂದಿಯ ಒಂದು ಗುಂಪನ್ನು ಕಳುಹಿಸಬೇಕೆಂದು ನಿರ್ಧರಿಸಿರುವರು.

ವಿದೇಶ

ಸ್ಪೈಯಿನಿನ ತೀರಕ್ಕೆ ಸಮೀಪದಲ್ಲಿದ್ದ ... ಎಂಬ ಬ್ರಿಟಿಷ್ ಹಡಗಿನ ಮೇಲೆ ದಂಗೆಗಾರರ ... ವಿಮಾನಗಳು ... ಹಡಗು ಈಗ ಉರಿಯುತ್ತಿರುವುದು ... ಬಾಂಬುಗಳಿಂದ ಎಂಟು ಮಂದಿ ಹತರಾದರು.

ಗ್ರೀಸ್ ದೇಶದಲ್ಲಿ ಭೂಕಂಪವಾಗಿ ಲೆಕ್ಕವಿಲ್ಲದಷ್ಟು ಮನೆಗಳು ಉರುಳಿವೆ. ... ಮಂದಿ ... 80 ಮಂದಿಗೆ ಗಾಯಗಳಾಗಿವೆ. ... ಎಂಬಲ್ಲಿ ... ಸಾಗುತ್ತಿದೆ.

1945 ನೇ ವರ್ಷದ ... ಉತ್ತರ ಸಮುದ್ರ ಮತ್ತು ಕಪ್ಪು ಸಮುದ್ರಗಳ ನಡುವೆ ಒಂದು ಬೃಹತ್ ... ಕಾಲುವೆಯನ್ನು ... ಪ್ರಯಾಣಕ್ಕೆ ... ಗೋಸನ್ನು ... ಜರ್ಮನೀ ಡಿಕ್ಟೇಟರು ನಿಶ್ಚಯಿಸಿರುವುದಾಗಿ ತಿಳಿದುಬಂದಿದೆ.

ಮೊಸ್ಕೊವಲ್ಲಿಯ ... ಯವರ ... ಲಿಮಿಟೆಡ್ ... ವಿಯಟ ವಿದೇಶಾಂಗ ಮಂತ್ರಿ ಲಿಟ್ವಿನೋಫ್ ಇವರನ್ನು ... ಗಡಿಯಲ್ಲಿರುವ ... ಸೋವಿಯಟ್ ... ವನ್ನು ... ಯವರು ... ಪ್ರಯೋಗ ಮಾಡಲು ... ಹಾಕಲಾಗಿದೆಯೆಂದು ತಿಳಿದುಬರುತ್ತದೆ.

The Bombay Life Assurance Company Ltd.

(Estd. 1908)

45-47, Churchgate Street, Fort-Bombay.

Evidence of

Progress, Security and Stability.

Year.	New Business completed.	Premium Income	Life Fund	Business in force.
1931	73,00,000	11,00,000	33,00,000	2,37,00,000
1934	1,04,00,000	19,00,000	58,00,000	3,71,00,000
1937	1,40,00,000	31,00,000	99,00,000	6,00,00,000

The Company offers all that is best and up-to-date in Life Assurance

Applications for agencies will be considered from Honest and Respectable Ladies & Gentlemen.

For full particulars apply to any of our following Offices :—

FOCHIKAR & BROTHERS Ltd.,
Madras Branch Secretaries,
Post Box No. 337, Mount Road, MADRAS.
[Phone No 8245.]

1

Bombay Life Building Udipi	Gautam Nivas Charni Road Girgaum Bombay 4	Visweswarapuram Circle Bangalore City	Purbhus ... Calicut	... Street Mangalore	Palpalam S. Malabar.	Trivandrum (Travancore St.)

ವಕೀಲ ವೃತ್ತಿಯಲ್ಲಿ ಕ್ರಾಂತಿಕಾರಕ ಬದಲಾವಣೆ.

ಮುಖ್ಯ ಮಂತ್ರಿಯವರ ಮನಸ್ಸಿನ ಇಚ್ಛೆ.

'ಒಂದು ದಿನ ಬೆಳಗ್ಗೆ ಆ ಕಾಲೇಜಿನ ಬಾಗಿಲುಗಳನ್ನು ಮುಚ್ಚಿ ವಕೀಲ ವೃತ್ತಿಗೆ ಇಂತಿಷ್ಟೇ ಮಂದಿಯನ್ನು ಸೇರಿಸಿಕೊಳ್ಳಬೇಕೆಂದೂ, ಇವರೆಲ್ಲರಿಗೆ ನಿರ್ಧರಿಸ್ಪ ಸಂಬಳ ಕೊಡಬೇಕೆಂದೂ ಮಾಡಿದರೆ ನಿಮಗೆ ಎಷ್ಟು ಮೆಚ್ಚು ಕಂಡೀತು? ಇದೂ ನನ್ನದೊಂದು ಸ್ವಪ್ನವಿರುತ್ತದೆ. ಒಂದು ದಿನ ನನ್ನ ಮಂತ್ರಿ ಮಂಡಲದ ವಕೀಲರಲ್ಲದ ಮುಖಾ ಜನರ ಬೆಂಬಲದಿಂದ ಇದನ್ನು ನಾನು ಜಾರಿಗೆ ತರುವಂತಾದರೆ ನನಗೆ ಆಶ್ಚರ್ಯವಾಗದು' ಈ ರೀತಿ ಮುಖ್ಯ ಮಂತ್ರಿ ರಾಜಾಜಿಯವರು ನೆಲ್ಲೂರಿನ ವಕೀಲರಿಗೆ ಭಾಷಣ ಮಾಡಿದರು.

'ಇಬ್ಬರನ್ನೊಬ್ಬರು ಮೋಸದಲ್ಲಿ ಹಾಕಬೇಕೆಂದು ಯತ್ನಿಸುವ ಈ ಗೃಹಸ್ಥರ ವಕೀಲ ವೃತ್ತಿಯಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಅಗತ್ಯ. ಒಂದು ಜಗಳದ ತೀರ್ಮಾನಕ್ಕೆ ನಮಗೆ ಇಬ್ಬರು ವಕೀಲರು ಬೇಡ. ಸ್ವರ್ಗ ನರಕಗಳ ನಡುವೆ ಶಿಕ್ಷೆಯನ್ನು ಜಾರಿ ಮಾಡುವ ಕೋರ್ಟಿನಂತೆ ನಾವಿರುವಂತೆ ಕಾಣುತ್ತದೆ. ನಾವು ಕ್ರಾಸ್ ಮಾಡಲು ಶುರುಮಾಡಿದರೆ ಅದಕ್ಕೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ನನಗೆ ಇದೆಲ್ಲ ಅನಾವಶ್ಯಕವಾಗಿ ಕಾಣುತ್ತದೆ. ನನ್ನ ವಕೀಲ ಶಿಕ್ಷಣವು ಇದು ಅಗತ್ಯವಲ್ಲವೆಂದು ನನಗೆ ಹೇಳುತ್ತಿದೆ. ಇದನ್ನೆಲ್ಲ ನಾವು ಬಿಡಬೇಕು.'

ರಾಜಕೀಯ ವಿಚಾರಗಳಲ್ಲಿ ವಕೀಲರ ಭಾಗವನ್ನು ಕುರಿತು ಮಾತಾಡುತ್ತಾ—'ಈಗಿನ ವಕೀಲರಿಗೆ ರಾಜಕೀಯ ವಿಚಾರಗಳು ದುಡಿಸುವುದು ಕಡಿಮೆ. ಹಿಂದಿನ ವಕೀಲರು ರಾಜಕೀಯ ಪ್ರಗತಿಗೆ ಬಹಳ ಮಟ್ಟಿಗೆ ಕಾರಣರಾಗಿದ್ದರು. 1920ರಲ್ಲಿ ಕೋರ್ಟುಗಳಿಗೆ ಬಹಿಷ್ಕಾರ ಹಾಕಿದೆಂದು ಹೇಳಲು ಸಂಭವವಾದಂದಿನಿಂದ ವಕೀಲರು ರಾಜಕೀಯ ರಂಗದಿಂದ ದೂರವಾಗಲು ಆರಂಭಿಸಿದ್ದಾರೆ, ಇದು ಹಿತಕರವಲ್ಲ.

ರಾಷ್ಟ್ರ ಯುದ್ಧದ ಕಾಲದಲ್ಲಿ ವಕೀಲರು, ಉಪಾಧ್ಯಾಯರು, ಡಾಕ್ಟರರು ಎಲ್ಲರನ್ನೂ ಒಂದು ಮಾಡಲಾಯಿತು. ಇವರೊಳಗೆ ಭೇದ ಎಣಿಸಲಾಗಲಿಲ್ಲ. ಈಗ ಜಾರಿಯಲ್ಲಿರುವುದು ಶಾಂತರೀತಿಯ ರಾಜನೀತಿಯ ಕಾರ್ಯಕ್ರಮ. ರಾಜಕೀಯ ಕ್ರಮವು ಜನತೆಯಲ್ಲಿ ಸರಿಯಾಗಿ ಪಸರಿಸುವಂತೆ ಅವರ ಕಾಲುವೆಗಳಲ್ಲಿಯ ಕೆಸರನ್ನು ತೆಗೆದು ನ್ಯಾಯವಾದ ದಾರಿ ಮಾಡಿಕೊಡುವ ಕಾರ್ಯ ಭಾರವು ಈಗ ವಕೀಲರ ಪಾಲಿನದಾಗಿರುತ್ತದೆ. ವಕೀಲರು ದೇಶದ ಭವಿಷ್ಯತ್ತನ್ನು ರೂಪಿಸಬೇಕು. ಪಾಶ್ಚಾತ್ಯ ದೇಶಗಳಲ್ಲಿ ಆ ದೇಶಗಳ ಅವಶ್ಯಕತೆಗಳನ್ನನುಸರಿಸಿ ಈ ಸಂಸ್ಥೆಯು ಬೆಳೆದಿದೆ. ಈ ದೇಶದ ಪರಿಸ್ಥಿತಿ ಬೇರೆ. ಅಲ್ಲಿಯ ಕ್ರಮಗಳೆಲ್ಲಾ ಇಲ್ಲಿಗೂ ಬೇಕೆಂಬುದು ಸರಿಯಲ್ಲ. ಇಲ್ಲಿಗೆ ಅನುಕೂಲವಾದಂತೆ ಮಾರ್ಪಡಿಸಿದರೆ ಮಾತ್ರ ಇದರಿಂದ ಉಪಯೋಗವಿರುತ್ತವೆ. ಅಲ್ಲಿ ಒಪ್ಪಿಕೊಂಡ ತತ್ವಗಳನ್ನು ಅಗತ್ಯ ಬಂದರೆ ನಾವು ಇಲ್ಲಿ ಮಾರ್ಪಡಿಸಲು ನೋಡುವುದು ಅನ್ಯಾಯವಾಗಲಾರದು.

ಪ್ರತಿಯೊಬ್ಬನಿಗೂ ಕಾನೂನಿನ ಸ್ವಲ್ಪ ಮಟ್ಟಿಗೆ ಜ್ಞಾನ ಅಗತ್ಯವೆಂಬುದು ಸರಕಾರದವರು ಪ್ರತಿಯೊಬ್ಬರಿಗೂ ಸ್ವಲ್ಪ ಕಾನೂನು ಕಲಿಸಲು ಏನಾದರೂ ಮಾಡಬಾರದೆಂದಲ್ಲ. ಸ್ತ್ರೀಯರಿಗೂ, ಗ್ರಾಮಸ್ಥರಿಗೂ ಈ ಜ್ಞಾನವಿಲ್ಲದ ಬಹಳ ತೊಂದರೆಯಾಗುತ್ತದೆ. ಕಾನೂನಿನ ತತ್ವಗಳ ಜ್ಞಾನ ಅವರಿಗೆ ಬೇಡ. ಸಾಮಾನ್ಯ ಜ್ಞಾನ ಸಾಕು. ಒಬ್ಬ ಕೃಷಿಕನಿಗೆ ತಿಳುವಳಿಕೆ ಇದ್ದರೆ ಅವನಿಗೆ ಎಷ್ಟು ಉಪಕಾರವಾದೀತು? ಸರ್ಕಾರಕ್ಕೂ ಇದರಿಂದ ಉಪಯೋಗವಿರುತ್ತದೆ. ಇದೊಂದು ಸ್ವಪ್ನ ಮಾತ್ರವಿರಬಹುದು. ಆದರೆ ಹೀಗೆ ಎಲ್ಲರಿಗೂ ಕಾನೂನು ತಿಳಿದರೆ ಕೋರ್ಟಿನಲ್ಲಿ ನಂಬರುಗಳು ಅತೀ ಕಡಿಮೆಯಾದಾವು. ಮಂತ್ರಿ ಮಂಡಲವನ್ನು ಎಲ್ಲೆಲ್ಲಿಯೂ ಹೊಗಳುತ್ತಾರೆ. ನಮಗೆ ಹೊಗಳಿಕೆ ಬೇಡವೆಂದು ನಿಮಗೆ ಗೊತ್ತಿದೆ. ಜನರ ಅವಶ್ಯಕತೆಗಳನ್ನು ಪೂರೈಸಲಿಕ್ಕಾಗಿ ನಾವು ಕಾರ್ಯಮಾಡುತ್ತಿದ್ದೇವೆ.

ಈಗಿನ ಸರ್ಕಾರಕ್ಕೆ ಬಂದ ವಿನಂತಿ ಮತ್ತು ಅರ್ಜಿಗಳ ರಾಶಿಯನ್ನು ಮುಂದೆ ಒಬ್ಬ ಇತಿಹಾಸ ಲೇಖಕನು ನೋಡಿದರೆ 1937–38 ರಲ್ಲಿ ಸರ್ಕಾರವು ಜನರ ಪ್ರೀತಿಗೆ ಬಹಳ ಮಟ್ಟಿಗೆ ಪಾತ್ರವಾಗಿತ್ತು, ಅವರಿಗೆ ಬೇಕಾದುದನ್ನು ಇವರು ಮಾಡುತ್ತಿರಲಿಲ್ಲವೆಂದು ಭಾವಿಸುವದರಲ್ಲಿ ಅನುಮಾನವಿಲ್ಲ. ರಾಜಕೀಯ ಕೆಲಸಗಾರರ ಜೀವನ ಕಷ್ಟ. ಪ್ರತಿಯೊಬ್ಬರೂ ಅವನನ್ನು ಖಂಡಿಸುತ್ತಾರೆ. ಮುಖ್ಯ ಮಂತ್ರಿಯನ್ನು ಇತರ ಮಂತ್ರಿಗಳು ಖಂಡಿಸುತ್ತಾರೆ. ಮಂತ್ರಿ ಮಂಡಲವನ್ನು ಕಾಂಗ್ರೆಸ್ ಕಾರ್ಯಕಾರೀ ಮಂಡಲಿ ಖಂಡಿಸುತ್ತದೆ. ಈ ಕಾಂಗ್ರೆಸ್ ಕಮಿಟಿಯನ್ನು ಎಸೆಂಬ್ಲಿ ಮೆಂಬರುಗಳು ಖಂಡಿಸುತ್ತಾರೆ. ಇವರನ್ನು ಹಲವು ಕಾಂಗ್ರೆಸ್ ಕಮಿಟಿಗಳು ಖಂಡಿಸುತ್ತಿವೆ. ಈ ರೀತಿ ಈ ಟೀಕೆ ಪ್ರತಿ ಟೀಕೆಗಳು ಸರ್ವತ್ರ ಹಬ್ಬಿವೆ. ಇದು ಇಂದಿನ ಪರಿಸ್ಥಿತಿ.

ಹಿಂದಿನ ದಿನದಲ್ಲಿ ಎಷ್ಟು ಟೀಕೆ ಮಾಡಿದರೂ ಸರ್ಕಾರವು ಬಂಡೆಕಲ್ಲಿನಂತೆ ಅಚಲವಾಗಿ ಇರುತ್ತಿತ್ತು. ಈ ಜಗಳ ಜಾಸ್ತಿಯಾದಷ್ಟು ಅವರಿಗೆ ಆನಂದವೇ ಇತ್ತು. ಈವತ್ತಿನ ಪರಿಸ್ಥಿತಿ ಸೂಕ್ಷ್ಮವಾಗಿದೆ. ಆಳಿಕೆಯ ಯಂತ್ರವೂ ಸೂಕ್ಷ್ಮವಾಗಿದೆ. ಮಂತ್ರಿ ಮಂಡಲವು ಬಂಡೆಕಲ್ಲಿನಂತೆ ಗಟ್ಟಿಯಾಗಿರಲಾರದು. ಈಗಿನವರು ಗಾಜಿನ ಮನೆಯಲ್ಲಿ ವಾಸಮಾಡುತ್ತಿದ್ದಾರೆ.

ಪ್ರತಿಯೊಂದು ಟೀಕೆಯಿಂದ ಮಂತ್ರಿ ಮಂಡಲದ ಮೇಲೆ ಪರಿಣಾಮವಿರುತ್ತದೆ. ಅವಕ್ಕೆ ಪೆಟ್ಟಾದರೆ ಅದು ಬೊಕ್ಕಾಗಿ ಬ್ರಿಟಿಷ್ ಸರ್ಕಾರದೊಡನೆ ಜಗಳಾಡುವುದರಲ್ಲಿ ಪರಿಣಾಮಕಾರಿಯಾಗಲಾರದು. ವಿಮರ್ಶೆಯ ಹಕ್ಕು ಎಲ್ಲರಿಗೂ ಇದೆ. ಆದರೆ ಯಂತ್ರವನ್ನು ಕಾಪಾಡಬೇಕು.'

ಭಾರತದ ರಾಯಬಾರಿ ನೆಹರು, ಮನುಷ್ಯಕೋಟಿಯ ವೀರ.

ಫೆಡರಲ್ ಯೋಜನೆಯನ್ನು ಬದಲಾಯಿಸಿರಿ ಆಂಗ್ಲೇಯರ [illegible]

ಪಂಡಿತ ಜವಾಹರಲಾಲ್ ನೆಹರೂರವರು ತಮ್ಮ ಈ ವರೆಗಿನ ಅವಿಶ್ರಾಂತ ಕಾರ್ಯಗಳಿಂದ ಬಳಲಿದವರಾಗಿ ಪರದೇಶ ಪರ್ಯಟನದ ನೆವದಿಂದ ವಿಶ್ರಾಂತಿ ಪಡೆಯಲು ಸಂಚಾರಕ್ಕೆ ಹೊರಟಿರುವರಷ್ಟೆ. ಆದರೆ ಇಂದು ಆ ಅವರ ಯೋಚನೆಗೆ ಶೀರಾ ಎಡೆ ಇಲ್ಲದಂತಾಗಿದೆ. ವಿಶ್ರಾಂತಿ ಎಂಬುದನ್ನು ಮರೆತು ದಿನವಹಿ ಭಾಷಣಾದಿಗಳಲ್ಲೇ ನಿರತರಾಗಿ ಪರಿಶ್ರಮಿಸುತ್ತಿರುವರು. ಶ್ರೀಮಂತರಲ್ಲಿ ಹುಟ್ಟಿ ತಮ್ಮ ಸರ್ವಸ್ವವನ್ನೂ ದೇಶಹಿತಕ್ಕಾಗಿ ಧಾರೆ ಎರೆದಿರುವಾಗ ಅವರು ಎಲ್ಲಿ [illegible] ಸಿಗಳನ್ನು ನುರಿಯುವವರುಂಟೇ? ಅದೇ ಕಾರಣವೇ ಇಂಥಾ ಸಂದರ್ಭ [illegible] ರುವದಾಗಿದೆ.

ಇಂಗ್ಲೆಂಡಿನ ಮಂತ್ರಿಗಳು ಭಾರತದ ಸಮಸ್ಯೆಯನ್ನು ಏ [illegible] ದ್ದೇನೆ ಎಂದು ತಮ್ಮ ಬೆನ್ನು [illegible] ಡು ಸ್ವಸ್ಥ ಚಿತ್ತರಾಗಿದ್ದರು. [illegible] ಲ್ಲಿಂಡನಿಯ ಮಾತನ್ನು ಕಾಂಗ್ರೆಸು [illegible] ತು ಹೇಗಿರಬಹುದು, ಏಳು ಪ್ರಾಂತಗಳಲ್ಲಿ ಕಾಂಗ್ರೆಸು ಅಧಿಕಾರ ವಹಿಸಿ ದೇಶಿ ಸಂಸ್ಥಾನಗಳ ಮೇಲೂ ತಮ್ಮ ದೃಷ್ಟಿಯನ್ನು ಬೀರುವವರಲ್ಲೇ ಅದು [illegible] ಹುದು ಎಂದು ಅವರ ಗ್ರಹಿಕೆಯಾಗಿತ್ತು. ಕಾಂಗ್ರೆಸು ಮತ್ತೊಂದು ಸಮಸ್ಯೆಯನ್ನು ಮುಂತಂದು ಅಗತ್ಯ ತೋರಿದರೆ [illegible] ಲ್ಲಿಂಥನಿಗ ತೊಡಗಬಹುದೆಂದು ಬ್ರಿಟಿಷರು ಕನಸಿನಲ್ಲೂ ತಿಳಿದಿರಲಿಲ್ಲ. ಆದರೆ ಇಂಥಾ ಅವರ ಆತ್ಮ ಸಮಾಧಾನವನ್ನು ಇಂದು ಭಾರತದ ರಾಯಭಾರಿಗಳೂ ಅಮಿತ ಮುಖಂಡರೂ ಆದ ನೆಹರೂರವರು ತಮ್ಮ ಭಾಷಣಗಳಿಂದ ಮಾಯವಾಗಿದೆ. ಅವರ ದೃಷ್ಟಿಯೆಲ್ಲಾ ಭಾರತದ ಮೇಲೆ ಬಿದ್ದಿದೆ. ಭಾರತವೇ ಪ್ರಪಂಚದ ಕೇಂದ್ರ ಎಂದೂ, ಅದರ ಸುಖ ದುಃಖಗಳೇ ಪ್ರಪಂಚದ ಸುಖ ದುಃಖಗಳೆಂದೂ ಮನವರಿಕೆಯಾಗುವಂತಾಗಿದೆ. ಜವಹರಲಾಲರನ್ನು ಮನುಷ್ಯಕೋಟಿಯ ವೀರನೆಂದು ಬ್ರಿಟಿಷರು ಮುಕ್ತಕಂಠದಿಂದ ಹೊಗಳುವಂತಾಗಿದೆ. ಬ್ರಿಟಿಷ್ ಸಭೆಯೊಂದರಲ್ಲಿ ಅಧ್ಯಕ್ಷರಾಗಿದ್ದವರು ಗಾಂಧೀಜಿಯವರಿಗಿಂತ ನೆಹರೂರವರು ವೀರಪುರುಷರೆಂಬ ಅಭಿಪ್ರಾಯವನ್ನು ಮುಂದೆ ತಂದಿದ್ದರೆಂತೆ. ಆದರೆ ನೆಹರೂರವರು ಆ ಬಿರುದನ್ನು ಮಹಾತ್ಮಾಜಿಯವರಿಗೆ ವರ್ಗಾಯಿಸಿರಬಹುದು. ಮಹಾತ್ಮರು ವೀರಪುರುಷರೊಬ್ಬರೇ ಅಲ್ಲ, ಮಾನವ ಕೋಟಿಯ ಸೇವಕರೂ, ರಕ್ಷಕರೂ ಇದ್ದಾರೆ.

ಜವಹರಲಾಲ ನೆಹರೂರವರ ಭಾಷಣಗಳಿಂದಲೋ ಎಂಬಂತೆ ಬ್ರಿಟಿಷ್ ರಾಜಕೀಯ ಹಿತವ್ಯಕ್ತಿಯು ಭಾರತದ ಮೇಲೆ ಬಿದ್ದಿರುವ [illegible]

[illegible]

[illegible] ಬ್ರಿಟಿಷ ಮಂತ್ರಿ [illegible] ಕಾಂಗ್ರೆಸಿನ ಪ್ರತಿಬಂಧ [illegible] ಕಾಂಗ್ರೆಸಿಗೆ [illegible] ಕೊಡದಿದ್ದರೆ ಪರಿಣಾಮವು ವಿಪರೀತವಾಗುವದೆಂದು ಸರಕಾರಕ್ಕೆ ತಿಳಿದಿದೆ. [illegible] ಇಂಗ್ಲೆಂಡ್ ಫೆಡರಲ್ ಯೋಜನೆಯಲ್ಲಿ ಕೆಳಗೆ ಸೂಚಿಸಿದ ಬದಲಾವಣೆಗಳಿಗೆ ಬ್ರಿಟನು ಸಿದ್ಧವಿರುವದೆಂದು ತಿಳಿದುಬರುತ್ತದೆ.

(1) ಆಸ್ಥಾನ ರಾಜರುಗಳು ಪ್ರಜಾಸತ್ತಾತ್ಮಕ [illegible] ಫೆಡರಲ್ [illegible] ಪ್ರಜೆಗಳ ಪ್ರತಿನಿಧಿ [illegible] ಮಾಡಿ. ಪ್ರಜಾಸತ್ತಾ ಪ್ರಾಂತಗಳೊಡನೆ ಸಮ್ಮಂದ ಕಾರಿ ರಾಜರುಗಳ ಪ್ರತಿನಿಧಿಗಳು ಇರಕೂಡದೆಂಬ ಕಾಂಗ್ರೆಸಿನ ಆಕ್ಷೇಪವನ್ನು ನಿವಾರಿಸುವದು.

(2) ಪ್ರಾಂತಗಳಲ್ಲಿ ಕೊಟ್ಟಂತೆ ದಿನನಿತ್ಯದ ಫೆಡರೇಷನ್ ಸರಕಾರದ ವ್ಯವಹಾರಗಳಲ್ಲಿ ವೈಸರಾಯರು ಕೈ ಹಾಕುವದಿಲ್ಲ ವೆಂಬದಾಗಿ ಭರವಸೆಯನ್ನು ಕೊಡಿಸುವದು.

(3) ಪ್ರಜಾಭಿಪ್ರಾಯ ಪ್ರಕಾರ ಹಿಂದು [illegible] ಶಾಸನ ರಚನೆಯಾಗುವಂತೆ ಮತ್ತು ಇಂಡಿಯಾ ಆಕ್ಟನ್ನು ಜನರ ಅಪೇಕ್ಷೆ ಪ್ರಕಾರ [illegible] ಕಾಲದ ಗುಸಿರಿ [illegible]

[illegible]

[illegible] ಇಂಡಿಯಾ ಸೆಕ್ರೆಟರಿ [illegible]

[illegible]

ಗ್ರಾಮಾಭಿವೃದ್ಧಿ.

(ಬಂದ ಒಂದವು)

ನಮ್ಮ ಕೊಡಗು [illegible]

[illegible]

[illegible] ಹುಲು [illegible] ನವಸಿ [illegible] ಗೊಬ್ಬರ ನ [illegible] ಕೊಪ್ಪಿನ [illegible] ಗೊಬ್ಬರವನ್ನು ಧಾರಾಳವಾಗಿ [illegible] ಭೂಮಿಯ [illegible] ಹೆಚ್ಚಿನ ಬೆಳೆಯ [illegible] ಲಾಭವನ್ನು ಪಡೆಯಬಹುದು. ಇದಲ್ಲದೆ ನಮ್ಮ ಬಾಣೆ ಬಾಕೆಗಳಲ್ಲಿರುವ ಪಟ್ಟೆಗಳಲ್ಲಿ ಮಳೆಯ ದಿನಗಳಿಂದ ಕೊಚ್ಚಿಹೋಗಿ [illegible] ಧಾರಾಳವಾಗಿ [illegible] ಹೆಚ್ಚು ಬೆಳೆಯನ್ನು [illegible] ದು [illegible] ಹೊಂಗೆಬಹುದು ಎಂಬ ಗಾದೆಯನ್ನು ಮರೆಯಬಾರದು. ಇದನ್ನು ಗುರಿಯಾಗಿಟ್ಟು ಕೊಂಡು ಪ್ರಯತ್ನಪಟ್ಟರೆ ಹಲವು ಸಂಭವಿಸಿರುವ ಈಗಿನ ಕಷ್ಟಗಳನ್ನು ಬಹಳ ಮಟ್ಟಿಗೆ ಸುಧಾರಿಸಿಕೊಳ್ಳಬಹುದು.

ರೈತನು ಮುಖ್ಯವಾಗಿ ತನ್ನ ಆರೋಗ್ಯವನ್ನು ವೃದ್ಧಿಪಡಿಸುವ ವಿಧಾನವನ್ನು ಕಲಿತುಕೊಳ್ಳಬೇಕು. ಕೊಡಗಿನಲ್ಲಿ ಇತ್ತೀಚೆಗೆ ಮಲೇರಿಯಾ ಜ್ವರ [illegible] ಸ್ಪತ್ರೆಗಳಲ್ಲಿ ಡಾಕ್ಟರುಗಳು ತಯಾರಿಸುವ ರಿಪೋರ್ಟುಗಳಿಂದ ತಿಳಿಯಬಹುದು. ಆಸ್ಪತ್ರೆಗೆ ದೂರದಲ್ಲಿ ವಾಸಮಾಡುವ ರೈತನಿಗೆ ಕಾಯಿಲೆ ಕಸ ಬಂದರೆ ಡಾಕ್ಟರುಗಳ ಸಹಾಯವನ್ನು ಹೊಂದುವುದು ಕಷ್ಟವಾಗಿರಬಹುದು. ಹಾಗಾದ ಬಳಿಕ ರೈತನು ಮಾಡಬೇಕಾದದ್ದೇನು? ಅವನು ಮುಖ್ಯವಾಗಿ ಕಾಯಿಲೆ ಬರದ ಹಾಗೆ ಎಚ್ಚರಿಕೆಯಲ್ಲಿರುವದೇ ದಾರಿ. ರೈತನು ತಾನು ಕುಡಿಯುವ ನೀರನ್ನು ಚೆನ್ನಾಗಿ ಕಾಯಿಸಿ ಆರಿಸಿ ಕುಡಿಯಬೇಕು. ಮಲೇರಿಯಾ ಜ್ವರ ಬರದ ಹಾಗೆ ಸೊಳ್ಳೆಗಳು ಕಚ್ಚದಂತೆ ನೋಡಿಕೊಳ್ಳಬೇಕು. ಕನಿಷ್ಟಪಕ್ಷ [illegible] ಮಳೆಗಾಲ [illegible] ವರೆಗಾದರೂ [illegible] ದೊರೆಯುವ ಒಂದು ಪುಟ್ಟ ಕ್ವಿನೈನ [illegible] ಗ್ರೇನಿನ ಎರಡು ಗುಳಿಗೆ ಕ್ವಿನೈನನ್ನಾದರೂ ತಪ್ಪದೆ ವಾರಕ್ಕೆ ಒಂದು ಸಲವಾದರೂ ಸೇವಿಸಬೇಕು. ತಾನು ವಾಸಮಾಡುವ ಮನೆಯಲ್ಲಿ ಮತ್ತು ಮನೆಯ ಸಮೀಪದಲ್ಲಿ ನೀರು ನಿಲ್ಲದ ಹಾಗೆ ನೋಡಿಕೊಳ್ಳಬೇಕು. ಅಲ್ಲದೆ ತಾನು ಮಲಗುವ ಕೋಣೆಯಲ್ಲಿ ಕಮ್ಮಿ ಪಕ್ಷ ಎರಡರಷ್ಟು ಕಿಟಕಿಗಳನ್ನಾದರೂ ಇಟ್ಟಿರಬೇಕು. ಉಡುವ ಮತ್ತು ಹಾಸುವ ಬಟ್ಟೆಗಳನ್ನು ವಾರಕ್ಕೆ ಒಂದುಸಲವಾದರೆ [illegible] ಒಗೆದುಕೊಳ್ಳಬೇಕು. [illegible] ಹೊದಿಕೆ ಮೊದಲಾದವುಗಳನ್ನು ಶಿಸ್ತಿನಿಂದ ಬಿಸಿಲಿನಲ್ಲಿ ಒಣಗಿಸಿಕೊಳ್ಳಬೇಕು. [illegible] ದುಡಿಯುವ ರೈತನು ಪ್ರತಿದಿನವೂ ಹಾಯಿಂಕಾಲದ ಹೊತ್ತಿನಲ್ಲಿ ಸ್ನಾನಮಾಡಬೇಕು. ಕಾಲಕ್ಕೆ ಸರಿಯಾಗಿ ಊಟ ಉಪಹಾರಗಳನ್ನು ನಿಧಾನವಾಗಿ ಮಾಡಬೇಕು. ಚೆನ್ನಾಗಿ ದುಡಿಯುವವನು ಮಧ್ಯಾಹ್ನದ ಊಟವಾದ ನಂತರ ಸ್ವಲ್ಪ ಹೊತ್ತು ಸರಿಯಾದ ವಿಶ್ರಾಂತಿಯನ್ನು ತೆಗೆದುಕೊಳ್ಳಬೇಕು. ತನ್ನ ಮನಸ್ಸಿನಲ್ಲಿ ಯಾವುದಾದರೂ ಬೇಸರವಿದ್ದರೆ ಅದನ್ನು ಆಗಾಗ ನೆನಪಿಗೆ ತಂದುಕೊಳ್ಳದೆ [illegible] ಶ್ರಮಪಟ್ಟು ಕೆಲಸಮಾಡಿ ತನ್ನ ಗುರಿಯನ್ನು ಸಾವಧಾನವಾಗಿ ತಲುಪಬೇಕು.

ಡಾ ಮೋಹಮ್ಮದ್ ಎಬ್ರಹಾಮ್
ದಂತ ವೈದ್ಯರು.
(ಪಿಯರ್ಸ್ ಲೆಸ್ಲಿ ಬಂಗ್ಲೆ)
(ಪ್ರೆಸ್ಬರ್ಸ್ ಹತ್ತಿರ)
ಮಡಿಕೇರಿ

ಮಳೆಗಾಲದಲ್ಲಿ ಜೇನು ಗೂಡುಗಳ ವಿಷಯ ತೆಗೆದುಕೊಳ್ಳಬೇಕಾದ ಎಚ್ಚರಿಕೆ.

(ಲೇಖಕ-ಪಿ ಲಕ್ಷ್ಮೀನಾರಾಯಣರಾವ್, ಬೀ ಇನ್‌ಸ್ಪೆಕ್ಟರ್, ವೀರಾಜಪೇಟೆ)

ಜೇನು ಹುಳುಗಳಿಗೆ ಅತೀ ಕಷ್ಟಕಾಲವೆಂದರೆ ಮಳೆಗಾಲ ಆಗ ಅವು ಅನೇಕ ತೊಂದರೆಗಳಿಗೊಳಗಾಗುವುದರಿಂದ ಗೂಡನ್ನು ಬಿಟ್ಟು ಹೋಗುವುದೂ ಉಂಟು. ಆದುದರಿಂದ ಕೆಳಗೆ ವಿವರಿಸಿದ ವಿಷಯಗಳನ್ನು ಅನುಸರಿಸಿದರೆ ಹೆಚ್ಚಿನ ಮಟ್ಟಿಗೆ ಗೂಡುಗಳನ್ನು ಕಾಪಾಡಿಕೊಳ್ಳಬಹುದು.

ಜೇನು ಗೂಡುಗಳು ಮಳೆಯಲ್ಲಿ ನೆನೆಯದಂತೆ ಚೆನ್ನಾಗಿ ಮುಚ್ಚಬೇಕು ಗೂಡಿನ ಮೇಲೆ ಮಳೆ ಬೀಳದಂತಿದ್ದರೆ ಗೋಣಿಚೀಲದಿಂದ ಮುಚ್ಚಿ ಬಾಗಿಲಿನ ಹೊರತು ಇತರ ಯಾವ ಭಾಗದಲ್ಲಿಯೂ ಶೀತಗಾಳಿ ಬಾರದಂತೆ ಮಾಡಬೇಕು ಅಲ್ಲದೆ ಗೂಡಿನ ಬಾಗಿಲನ್ನು ಸಣ್ಣದಾಗಿ ಮಾಡುವುದು ಉತ್ತಮ ಇದರಿಂದ ದೊಡ್ಡ ಹುಳ (ನರಿಹದಂಬಿ) ಮುಂತಾದವುಗಳಿಗೆ ಗೂಡಿನೊಳಸೇರಲು ಸಾಧ್ಯವಾಗುವುದಿಲ್ಲ

ಪ್ರತಿ 15 ದಿನಸಗಳಿಗೊಂದಾವರ್ತಿ ಗೂಡಿನ ಅಡಿ ಹಲಗೆಯನ್ನು ತೆಗೆದು ಚೊಕ್ಕಟಮಾಡಿಡಬೇಕು ಹೀಗೆ ಮಾಡದಿದ್ದರೆ ಒಂದು ಜಾತಿಯ ಚಿಟ್ಟೆ ಪತಂಗ (Wax Moth) ಬಂದು ಮೊಟ್ಟೆಯಿಡುತ್ತದೆ ಆ ಮೊಟ್ಟೆಗಳು ಒಡೆದು ಹುಳುಗಳಾಗಿ ಎರಿಗಳನ್ನು ನಾಶಮಾಡಿ ಜೇನು ಹುಳುಗಳನ್ನು ಓಡಿಸಿಬಿಡುತ್ತವೆ ಜೇನು ಹುಳುಗಳಿಂದ ಮುಚ್ಚಲ್ಪಡದ ಎರಿಗಳನ್ನು ಗೂಡಿನಲ್ಲಿ ಕಂಡರೆ ಅವುಗಳನ್ನೆಲ್ಲಾ ತೆಗೆದುಬಿಡಬೇಕು ಹೀಗೆ ತೆಗೆಯುವುದರಿಂದ ಚಿಟ್ಟೆ ಹುಳಕ್ಕೆ ಅನುಕೂಲ ದೊರೆಯುವುದಿಲ್ಲ

ವಿಪರೀತ ಗಾಳಿ ಬೀಸುವ ದಿಕ್ಕಿಗೆ ಎದುರಾಗಿ ಗೂಡಿನ ಬಾಗಿಲಿದ್ದರೆ ಸ್ವಲ್ಪ ಮಟ್ಟಿಗೆ ಗೂಡನ್ನು ತಿರುಗಿಸುವುದು ಅವಶ್ಯ.

ಗೂಡಿನಲ್ಲಿ ಹುಳಗಳಿಗೆ ಸಾಕಷ್ಟು ಆಹಾರವಿಲ್ಲವೆಂದು ತೋರಿದಾಗ ಆಹಾರ ಕೊಡಬೇಕು. ಇತರ ಗೂಡಿನಲ್ಲಿ ಜೇನಿರುವ ಎರಿಗಳು ಇದ್ದರೆ ಒಂದೆರಡು ಜೇನಿನ ಎರಿಗಳನ್ನು ತೆಗೆದು ಜೇನಿಲ್ಲದ ಗೂಡಿಗೆ ಕೊಡಬಹುದು ಅಥವಾ ಗೂಡಿನ ಮುಚ್ಚಳ ತೆಗೆದು ಒಂದು ಒರಿದಾದ ಮೇಲು ಕೋಣೆ (Super) ಯನ್ನಿಟ್ಟು ಅದರೊಳಗೆ ಜೇನು ತುಂಬಿದ ಪಾತ್ರೆಯ ಬಟ್ಟೆಯಿಂದ ಬಾಯಿ ಕಟ್ಟಿದ ಒಂದು ಶಾಯಿಕುಪ್ಪಿ ತರದ ಕುಪ್ಪಿಯನ್ನು ಕವುಚಿ ಹಾಕಿ ಗೂಡಿನ ಮುಚ್ಚಳ ಹಾಕಬೇಕು. ಬಾಯಿ ಕಟ್ಟಿದ ಬಟ್ಟೆಯ ಮೂಲಕ ಒಸರುವ ಜೇನನ್ನು ಹುಳಗಳು ಕುಡಿಯುತ್ತವೆ. ಆದರೆ ಈ ರೀತಿ ಆಹಾರ ಕೊಡುವಾಗ ಗೂಡಿಗೆ ಇರುವೆಗಳು ಸೇರುವ ಸಂಭವವಿರುವುದರಿಂದ ಗೂಡನ್ನು ಜಾಗ್ರತೆಯಿಂದ ನೋಡಿಕೊಳ್ಳಬೇಕು. ಗೂಡಿಗೆ ಇರುವೆ ಬಾರದಂತೆ ಮಾಡಲು ಒಂದು ಸುಲಭ ಉಪಾಯವಿದೆ. ಏನೆಂದರೆ–

ಗೂಡನ್ನು ಒಂದು ಕಾಲ್ಮಣೆಯ (stool) ಮೇಲಿಟ್ಟು ಆ ಕಾಲ್ಮಣೆಯ ಕಾಲಿನ ಸುತ್ತಲೂ ಅರ್ಧ ಅಂಗುಲ ಅಗಲಕ್ಕೆ ಹರಳೆಣ್ಣೆ (castor oil) ಯಲ್ಲಿ ನೆನೆಸಿದ ಬಟ್ಟೆಯನ್ನು ಸುತ್ತಿದರೆ ಇರುವೆಗಳು ಬರುವುದಿಲ್ಲ ಗೂಡುಗಳನ್ನು ಸೂಚಿಸಲ್ಪಟ್ಟ ಪಂಜರಕ್ಕೆ ಹೋಗದಿದ್ದರೆ ಹಾಗಿದ್ದ ಹಗ್ಗಗಳ ಸುತ್ತ ಹರಳೆಣ್ಣೆ ಸವರಬಹುದು

ಜೇನು ಹುಳಗಳಿಗೆ ಸಕ್ಕರೆಯ ನೀರನ್ನು ಆಹಾರವಾಗಿ ಕೊಡಬಾರದು ಕೊಟ್ಟರೆ ರೋಗಗಳು ಬರುವ ಸಂಭವವಿದೆ ಆದುದರಿಂದ ಜೇನನ್ನೇ ಕೊಡಬೇಕು

ಗೂಡಿನ ಸುತ್ತ ಹತ್ತಿರದಲ್ಲೂ ಪೊದರು ಬೆಳೆಗಳು ಇರದಂತೆಯೂ ಕಸ ಕಡ್ಡಿಗಳು ಬೀಳದಂತೆಯೂ ನೋಡಿಕೊಳ್ಳುವುದು ಅವಶ್ಯ

ಬಾತ್ಮಿ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ [ಕೊ ಸಂ

—:0:—

ಗೋವಧೆ ಪಟ್ಟಿ

ಅಯ್ಯಾ,

ಮಡಿಕೇರಿ ಪಟ್ಟಣವಾಸಿಗಳಾದ ಕೆಲವು ಮುಸಲ್ಮಾನರು ತಾ 10 ರ ರಾತ್ರಿ 9 ಗಂಟೆಯ ಸಮಯಕ್ಕೆ ಟೌನಿನಲ್ಲೇ ಅಂದರೆ ಗವರ್ನಮೆಂಟ್ ರಸ್ತೆಯ ಬಳಿ 30 ಗಜಗಳ ದೂರದಲ್ಲಿ ಒಂದು ಎತ್ತನ್ನು ಕೊಂದು ಮಾಂಸವನ್ನು ಕತ್ತರಿಸುತ್ತಿದ್ದರು ಈ ವಾರ್ತೆಯನ್ನು ಟೌನು ನಿವಾಸಿಗಳಾದ ಕೆಲವು ಹಿಂದುಗಳು ಕೇಳಿ ಟೌನಿನಲ್ಲಿದ್ದ ಪೋಲೀಸರೊಬ್ಬರಿಗೆ ತಿಳಿಸಿ ಅವರೊಡನೆ ಆ ಸ್ಥಳಕ್ಕೆ ಹೋಗುತ್ತಲಿರಲು ಇದನ್ನರಿತ ಮುಸಲ್ಮಾನರಲ್ಲಿ ಕೆಲವರು ಓಡಿ ಹೋದರು ಕಾಣಲು ಸಿಕ್ಕಿದ ಕೆಲವರನ್ನು ವಿಚಾರಿಸಲು ತಾವು ಕೊಂದದ್ದೆಂದು ಒಪ್ಪಿಕೊಂಡದ್ದರಿಂದ ಅವರ ಮೇಲೆ ಮೊಜರು ಮಾಡಿ ಘನ ಸರ್ಕಾರದವರಿಗೆ ಈ ವಿಚಾರದಲ್ಲಿ ಒಂದು ಅರ್ಜಿ ದಾಖಲು ಮಾಡಿದೆವು ಆದರೆ ಈ ವಿಚಾರದಲ್ಲಿ ಸರ್ಕಾರದವರು ಈ ವರೆಗೆ ಯಾವದೊಂದು ಯೋಚನೆ ಮಾಡಿರುವುದಿಲ್ಲ ಇದರಿಂದ ಈ ಕೃತ್ಯಕ್ಕೆ ಸ್ವಲ್ಪ ಬೆಂಬಲಕೊಟ್ಟಂತಾಗಿದೆ ಈ ವಿಚಾರದಲ್ಲಿ ಇಲ್ಲಿಯ ಮುಸಲ್ಮಾನರು "ನಿಂಪು ಅರ್ಜಿ ಬರೆದುದರ ಪರಿಣಾಮವೇನು?" ಎಂದು ದಾಂಷ್ಟ್ಯ ಮಾಡುವ ಸಂದರ್ಭ ಒದಗಿದೆ ಇದರಿಂದ ಇಂಥಾ ಸಂಗತಿಗಳು ಹೆಚ್ಚಲು ಅನುಮಾಡಿದಂತಾಯಿತು ಅವರಿಗೆ ಮೊದಲಿದ್ದ ಭಯವನ್ನು ಅರ್ಜಿ ಹಾಕಿ ಪರಿಹರಿಸಿ ಕೊಟ್ಟಂತಾಗಿದೆ! ಈ ವರೆಗ ಇಲ್ಲಿ ಅನೇಕ ಇಂಥಾ ಪ್ರಸಂಗಗಳು ಕಳೆದು ಹೋಗಿವೆ ಹೊಸ ಎತ್ತುಗಳನ್ನು ಕದ್ದು ಕಾಣದೆ ಪರಾರಿಯಾಯಿತೆಂಬ ನೆಪದಿಂದ ಈ ಕ್ರೂರ ಕೃತ್ಯವನ್ನು ನಡೆಸಿರಬಹುದು ಸಂಶಯವಿದೆ. ಭಾರತವು ಕೃಷಿಕರ ದೇಶ, ಅದಲ್ಲೂ ಪವಿತ್ರ ಕೊಡಗು ವ್ಯವಸಾಯಗಾರರ ಬೀಡು ದನಕರಗಳೇ ರೈತರ ಸರ್ವಸ್ವ ದನಕರಗಳನ್ನು ಸುಪುತ್ರನೆಂದು ಆರಾಧಿಸುವ ಪವಿತ್ರ ನಾಡಿನಲ್ಲಿ ಇಂಥಾ ಪಾಷಂಡ ಕೃತ್ಯಗಳು ನಡೆದರೂ ಅವನ್ನು ಸರಿಯಾಗಿ ವಿಚಾರಿಸದ್ದು ಸರ್ಕಾರಕ್ಕೆ ಶೋಭಿಸದು ಆದ್ದರಿಂದ ಈ ವಿಚಾರವನ್ನು ಪರಿಶೀಲಿಸಿ ತಕ್ಕ ವ್ಯವಸ್ಥೆ ಮಾಡಬೇಕಾಗಿ ವಿನಂತಿ

'ಪಟ್ಟಣವಾಸಿ'

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ.—ಈ ವರ್ಷದಲ್ಲಿ 52,54,750 ರೂ ಮೊಬಲಗಿನ 1629 ಪ್ರಪೋಸಲುಗಳು ಸಿಕ್ಕಿವೆ ಅವರಲ್ಲಿ ಜಾರಿಗೆ ಬಂದ ಪಾಲಿಸಿಗಳು 1447 ಪ್ರಪೋಸಲುಗಳ ಬಾಬ್ತು 40,67,650 ರೂ ಗಳ ಬಗ್ಗೆ ವರ್ಷಾವಧಿ 2,21,950 ೧-೦ ರೂ ವಿಮಾ ಕಂತು ಬರುತ್ತೆ. ಕಂಪೆನಿಯಿಂದ ಭರವಸ ಪಡೆಯದ ಪಾಲಿಸಿ ಹಣ ರೂ 39,38,150. ಬಾಕಿ ರೂ 1,29,500 ಪುನಃ ಭರವಸೆ ಕೊಡಲ್ಪಟ್ಟಿದೆ ಬಾಕಿ ಇರುವ ಪ್ರಪೋಸಲುಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುವರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತವೆ ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ 4,13,775 ಹೆಚ್ಚಿದೆ

ಈ ಕೆಳಗಿನ ಒಕ್ಕಣೆಯಿಂದ ಅಭಿವೃದ್ಧಿಯನ್ನು ಹೋಲಿಸಿ ನೋಡಬಹುದು ಕಂಪೆನಿಯ ಪ್ರಗತಿಯನ್ನು ಇಷ್ಟಪಡುತ್ತಾರೆ

ಇಂಡಿಯಾ ಸರ್ಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನ್ ಕಂಪೆನಿಗಳವೆಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಸೂರೆನ್ಸ್ ಇಯರ್ ಬುಕ್' ಎಂಬುವುದರಿಂದ ತಿಳಿಯಬರುತ್ತದೆ. ಈ ಕಂಪೆನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪೆನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ವರೆಗೆ ಕ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೆಯದಾಗಿದೆ. ಒಂದನೇಯದಾದ ಕಂಪೆನಿಯು ಇದಕ್ಕಿಂತ 25 ವರ್ಷಗಳ ಮುಂದೆ ಸ್ಥಾಪಿಸಲ್ಪಟ್ಟದ್ದಾಗಿದೆ

ವಿಮಾ ಕಂತುಗಳ ಆದಾಯ.—ಈ ವರ್ಷದ ಎಲ್ಲಾ ವಿಮಾ ಕಂತುಗಳ ಆದಾಯವು (ಮರು ವಿಮೆಗೆ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮಾ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ ವರದಿ ವರ್ಷದ ವಿಮಾ ಕಂತಿನ ಆದಾಯವು ರೂ 3,66,198-13-0, ಗತ ವರ್ಷದ್ದು 2,36,767-6-6 ಆಗಿದೆ

ಜೀವವಿಮಾ ಫಂಡು:—ಈ ಕಂಪೆನಿಯ ಜೀವ ವಿಮಾ ಫಂಡು ರೂ. 75,258-14-9ರಿಂದ, ವ್ಯವಸ್ಥಾ ಕ್ರಮಕ್ಕೆ ಮತ್ತು ಇತರ ಖರ್ಚಿಗಾಗಿ ರೂ 45,037-8-4 ವಜಾ ಕಳೆದು ರೂ. 21,00,421-1-3ಕ್ಕೆ ಏರಿದೆ ಈ ಕೆಳಗೆ ಅದರ ತಪಶೀಲನ್ನು ಕೊಡಲಾಗಿದೆ

ವರ್ಷಾಂತ್ಯದಲ್ಲಿ.		ವಿಮಾ ಕಂತು		ಜೀವ ವಿಮಾ ಫಂಡು.
1ನೇ ವರ್ಷದ	ರೂ	1,46,949	ರೂ.	15,619
2ನೇ ವರ್ಷದ	"	2,36,767	"	75,259
3ನೇ ವರ್ಷದ	"	3,66,199	"	2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪೆನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತ ವಿಮಾ ಕಂಪೆನಿಗಳ ವಾರ್ಷಿಕ ವೃತ್ತಾಂತದಲ್ಲಿ ಹೊಗಳಲರ್ಹವಾದದ್ದೇ ಆಗಿದೆ

ಭಾರತ ಜೀವವಿಮಾ ಕಂಪೆನಿಗಳ ಅಲ್ಪಸ ಷೇರ್ ಕ್ಯಾಪಿಟಲ್:—ಈ ಬಾಬನು ಷೇರ್ ಕ್ಯಾಪಿಟಲ್ ಮಾಡತಕ್ಕದಿದ್ದ ರೂ, 2 ಲಕ್ಷವನ್ನು ಪೂರ್ತಿಯಾಗಿ ಡಿಪಾಜಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷವುಳ್ಳವರಾಗಿರುವರು.

ಸಿ ಯಂ. ತಿಮ್ಮಯ್ಯ,

(12-8) ವಿಶೇಷಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

ಪ್ರಕಟಣೆ.

ಮಡಿಕೇರಿಯಿಂದ ಫ್ರೇಜರ್‌ಪೇಟೆ ಮಾರ್ಗವಾಗಿ ಪಿರಿಯಾಪಟ್ಣ, ಸೋಮವಾರಪೇಟೆ, ಶನಿವಾರಸಂತೆಗೆ ಪೋಸ್ಟಾಫೀಸಿನ ಟಪ್ಪಾಲನ್ನು ಮೋಟಾರ್ ಬಸ್ಸಿನಲ್ಲಿ ತಾರೀಖು 1 1-39 ರಿಂದ 31-12 1941 ರ ವರೆಗೆ ಅಂದರೆ ಮೂರು ವರ್ಷ ಕಾಲ ಸಾಗಿಸಲು ಇಷ್ಟ ಉಳ್ಳವರು ತಮ್ಮ ಅರ್ಜಿಯನ್ನು ಸೀಲು ಮಾಡಿ ತಾ. 10-9-38 ರ ವಳಗೆ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಕಳುಹಿಸತಕ್ಕದ್ದು. ಇದಕ್ಕೆ ಬೇಕಾದ ಫಾರಂಗಳಿಗೂ, ಹೆಚ್ಚಿನ ಮಾಹಿತಿಗೂ ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು. ಅರ್ಜಿಯೊಡನೆ ರೂ. 5 ನ್ನು ಕಟ್ಟಬೇಕು. ಈ ಹಣವು ವಾಪಸು ಮಾಡಲಾಗದು.

ಯಂ. ವಿ. ಸುಬ್ಬರಾವ್, ಬಿ. ಎ.

ಪೋಸ್ಟಲ್ ಸೂಪರಿಂಟೆಂಡೆಂಟ್,

ಮೈಸೂರು.

ಇಂಡಿಯಾದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು! ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ

ಆತಂಕ ನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ,

52–7 ಬೆಂಗಳೂರು ಸಿಟಿ.

೪೨ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೆ ಕಂಪನಿ

ಸುಪ್ರಸಿದ್ಧ ಜ್ವರದ ಗುಳಿಗೆ

ಇದು ಛಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ದಿನ ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ನಾನಾತರದ ಜ್ವರಗಳ ಮೇಲೆ ತಕ್ಷಣವೇ ಗುಣ ಸಂಜೀವಿನಿಯಂತಿದೆ! ಬಾಟ್ಲಿಗೆ 1 ರೂ 4 ಬಾಟ್ಲಿಗೆ 3 ರೂ. 12 ಬಾಟ್ಲಿಗೆ 8 ರೂ. ವಿ. ಪಿ ಖರ್ಚು ಬೇರೆ.

ಗಣೇಶ. ರಾಮಚಂದ್ರ ಕರ್ಕೆ.
ಮತ್ತು ಕಂಪೆನಿ,

(52–34) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾ ಹಣವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು
ಒಡೆಯಮ್ಮನ ಕರ್ತಮು ನವರು

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ ಮಂಡೇಪಂಡ ಸೋಮಯ್ಯನವರು.
ಮೆ ಕೆ ಯಂ ಸುಬ್ರಾಯನವರು
ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು
ಪೊನ್ನಂಪೇಟೆನಾಡು—ಮೆ ಪಿ ಕೆ ಮುದ್ದಮ್ಮಯ್ಯನವರು
ಹುದಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ ಕೆ ಮಾದಮ್ಮಯ್ಯನವರು
ಸುಂಟಿಕೊಪ್ಪ—ಮೆ ಅಪ್ಪಚೆಟ್ಟೋಳಂಡ ಮಾಚಯ್ಯನವರು
ಸೋಮವಾರಪೇಟೆ—ಮೆ ಕೆ ಬೋಗಪ್ಪನವರು.
ನಾಪೋಕ್ಲು—ಮೆ. ಬೆಳ್ಳಿಪಂಡ ಯಂ ಪೂಣಚ್ಚನವರು
(ನಾಪೋಕ್ಲು ಸ್ಟೋರ್ಸ್)

ಸೂಚನೆ—ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ,

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

The Bombay Mutual Life Assurance Society Ltd.,

Head Office:-BOMBAY. Estd 1871.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಆರೋಗ್ಯವಾದ ಕೆಲಸ ಕಾರ್ಯಗಳನ್ನು ಮಾಡಿದೆ ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರದ ಮೇರೆ 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ 26ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಶೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪರೇಡ್, ಬೆಂಗಳೂರು.

52–21

[ಚಿಕ್ಕ ಡಾಕ್ಟರ್] **ವೇಪ್ರಿನ್** [ರಿಜಿಸ್ಟರ್ಡ್]

ಚರ್ಮವ್ಯಾಧಿಗಳ ವೈರಿ—ಪ್ರತಿ ಒಬ್ಬರ ಸ್ನೇಹಿತ—ಸ್ವದೇಶಿ ವಸ್ತು.



ಇದರ ಲೇಪನದಿಂದ ಕಜ್ಜಿ, ಹುಣ್ಣು, ವ್ರಣ, ಇಸಬು, ನಾರು ಹುಣ್ಣು, ಮೂಲವ್ಯಾಧಿ, ಸುಟ್ಟ ಗಾಯ, ಮುಖವ್ರಣ(Pimples) ಸುಟ್ಟಗಾಯ, ಕತ್ತಿಗಾಯ, ತೊಡವಾಳೆ, ಗಣಕರ್ಣ ಇವು ವಾಸಿಯಾಗುವವು. ಇದು ಸುರಿಯುತ್ತಿರುವ ರಕ್ತವನ್ನು ನಿಲ್ಲಿಸಿ ನೋವನ್ನು ನಿವಾರಿಸುವುದು. ಅಲ್ಲದೆ ಇಂದ್ರಜಾಲದೋಪಾದಿಯಲ್ಲಿ ಚೇಳಿನ ವಿಷವನ್ನು ಬಹಿರ್ಗತಪಡಿಸುವುದು. ನಿಮ್ಮಲ್ಲಿ ಒಂದು ಬಾಟ್ಲು ಇದ್ದಲ್ಲಿ ಒಬ್ಬ ಡಾಕ್ಟರ್ ಇದ್ದಂತಾಗುವುದು ಕ್ರಯ ಬಹಳ ಸುಲಭ.

½ ಔನ್ಸ್ ಬಾಟ್ಲು 1ಕ್ಕೆ ಆಣೆ 0-8-0 ¼ ಔನ್ಸ್ ಬಾಟ್ಲು 1ಕ್ಕೆ ಆಣೆ 0-4-0.

ವಿ ಸೂ—ಪೆಟ್ಟು ತಾಗಿದ ಸ್ಥಳದಲ್ಲಿ ವೇಪ್ರಿನ್ ಚೆನ್ನಾಗಿ ತಿಕ್ಕುವುದು ಇಲ್ಲವೇ ಬಟ್ಟೆಯ ಮೇಲೆ ಸವರಿ ಅಂಟಿಸುವುದು. ನಂತರ ಸಾಬೂನಿನಿಂದ ಕೈ ತೊಳೆಯುವುದು ಇದಲ್ಲದೆ ಇನ್ನೂ ಅನೇಕ ತರಹದ ಔಷಧಿಗಳು ನಮ್ಮಲ್ಲಿವೆ

ಅಪ್ಸರ್ ಮ್ಯಾನಿಫ್ಯಾಕ್ಚರಿಂಗ್ ಕಂಪೆನಿ,
ಡಿ. ಪೊ. ಬೆಂಗಳೂರು ಸಿಟಿ.

52–51 ಸೋಲ್ ಏಜೆಂಟ್:—ಹರಿದಾಸ್ ನಂಜುಂಡ ಗುಪ್ತ, ಮಡಿಕೇರಿ, (ಕೊಡಗು).

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆಶೂಲೆಗಳಿಗೂ ಅಮೃತ. ಬೆಲೆ 0-4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ 0-4-0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ.

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ. ಬೆಲೆ 0-8-0, 0-4-0.

ಸುಕುಮಾರತೈಲ

17

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ಇಂತ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ. ಬೆಲೆ 1-0-0

ಪ್ರೊಪ್ರೈಟರ್—ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತ್.

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಸಾಮಾನುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22.
6 ತಿಂಗಳಿಗೆ—	,, 100.	,, 35.	,, 22.	,, 13.
3 ತಿಂಗಳಿಗೆ—	,, 60.	,, 20.	,, 13.	,, 8.
1 ತಿಂಗಳಿಗೆ—	,, 25.	,, 10.	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

6೦ ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮೆ. ಎಸಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಎಲ್. ಎಫ್. ಸಿ. ವಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

52-30 ಮೆ. ಡಿ. ಶೇಷಾದ್ರಿ, ಅ. ಇನ್ಸ್‌ಪೆಕ್ಟರು, ಶಿವಮೊಗ್ಗಾ.

Printed & Published by P. I. Belliappa, at 'Kodagu' Press Mercara for 'Kodagu' Ltd.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ. | ತಾ. ೫—೮—೧೯೩೮. | ವಾರ್ಷಿಕ ಚಂದಾ ರೂ. ೩-೮-೦

ಸಂಪುಟ ೧೮] [ಸಂಚಿಕೆ ೦

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

THE CANARA BANKING CORPORATION, UDIPI, Ltd.

(Incorporated in British India.)

Estd. 1906.

STATEMENT OF AFFAIRS AS ON 30th JUNE, 1938.

Capital and Liabilities:

1 Paid up Capital	Rs.	3,03,145	0	0
2. Reserves	,,	3,88,788	6	8
3. Deposits	,,	39,34,585	9	6
4. Due to Bankers	,,	13,57,642	14	11
5. Bills for collection per contra		1,13,331	3	2
6. Sundries	,,	2,00,858	4	8
Total	,,	62,98,351	6	11

Property and Assets:

1. Landed Property, Premises and Buildings, Safes and Furniture	Rs.	3,63,004	5	0
2. Advances	,,	36,56,673	2	3
3. Investment on Govt. Securities, Debentures, Shares etc.		17,53,922	5	2
4. Cash on Hand and with Bankers at call	,,	3,45,380	5	10
5. Bills for collection	,,	1,13,331	3	2
6. Sundries	,,	66,040	1	6
Total	,,	62,98,351	6	11

Udipi,
8th July 1938.

52-35

V. R. Kamath, B. A., LL. B.,
Manager.

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನ್ನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯ್ತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಸೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

6

ಸಿ. ಹೆಚ್. ರಾಮಣ್ಣಿ ವೈದ್ಯರ್.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,740	0	0
ಜಮೂಬಂದ ಠೇವಣಾತಿ	–	2,56,747	14	4
ವಸೂಲಾದ ಕ್ಷೇಮನಿಧಿ	–	1,35,875	9	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಟ್ಟು	–	31,017	12	11
ತ್ರಿಫ್ಟ್ ಡಿಪಾಜಿಟ್ಟು	–	37,936	13	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಧವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಿಂದ ನಿಲ್ಲಿಸಲಾಗಿದೆ

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಚೌರೀರ ಎ. ಮಂದಣ್ಣನವರು ಬಿ. ಎ; ಬಿ. ಎಲ್.
ಸೆಕ್ರೆಟರಿ:—ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ, ಬಿ ಎಲ್.

ತಾ. 1-7-1938

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80, 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ನೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ, ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52–10 The Agricultural & Industrial Bank Ltd

"ZANDU"

ಝುಂಡೂರವರ	ಝುಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝುಂಡೂ ಅಯೋಡೈಸ್ಡ್ ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝುಂಡೂ ಫ್ಲೋಜಿಸ್ಟ್ರೀನ್.

ಇದು ನ್ಯುಮೋನಿಯಾ, ಶೋಧ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು

ಕೆಟಲಾಗಿಗೆ ಬರೆಯಿರಿ, ಮುಪ್ಪತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್ ಎ. ಎಂ. ಎಸ್
(52–52) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು–ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳ್ನು ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ. 2—8—0.

ಮಲೇರಿಯಾ ನಿವಾರಿಣಿ

ಇದು ಚಳಿ ಜ್ವರ, ಚಾತುರ್ಥಿ ಜ್ವರ, ದಿನ ಬಿಟ್ಟುಬರುವ ಜ್ವರ, ಮಲೇರಿಯಾ ಜ್ವರ, ಇನ್‌ಫ್ಲುಯೆಂಜಾ ಇತ್ಯಾದಿ ನಾನಾ ತರದ ಜ್ವರಗಳ ಮೇಲೆ ರಾಮಬಾಣ.

ಬಾಟ್ಲಿ 1ರ ರೂ. 1—8—0; ಸಣ್ಣ ಬಟ್ಲಿ ರೂ. 0—13—0.

ಸ್ಪ್ಲೀನ್ ಮಿಕ್ಸ್ಚರ್

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಅಶಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು ಬಾಟ್ಲಿ 1ರ ರೂ. 1—2—0.

ಬಾಲಗ್ರಹ ಗುಟಿಕೆ

ಮಕ್ಕಳಚೇಷ್ಟ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ಮಂಗಳೂರು ಸ್ಟೋರ್ಸ್, ಮಡಿಕೇರಿ. ಎ. ಬಿ ಕಾಮತ್, ಮಡಿಕೇರಿ. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. ಸುಂದರ್ ಪ್ರಭು, ಸುಳ್ಯ [4]

ಸುಮಾರು ಕ್ರಿ. ಶ. ಸಾವಿರದೆಂಟುನೂರ ಹದಿನೇಳನೆಯ ಇಸವಿ. ಕೊಡಗಿನಲ್ಲಿ ಲಿಂಗರಾಜನು ಆಳುತ್ತಿದ್ದನು. ಆ ಸಮಯದಲ್ಲಿ ಒಂದು ದಿವಸ ಪ್ರಾತಃಕಾಲವು ಕಳೆದಿದೆ. ಸೂರ್ಯನು ಆಕಾಶದಲ್ಲಿ ಮೇಲಕ್ಕೇರುತ್ತಿದ್ದಾನೆ. ಬಿಸಿಲಿನ ತಾಪವು ಹೆಚ್ಚಾಗುತ್ತಲಿದೆ. ಆಗ ಅರಮನೆಯಲ್ಲಿ ಜ್ಯೋತಿಶ್ಶಾಸ್ತ್ರಜ್ಞನಾದ ಹಂಚಿನಮನೆ ಸುಬ್ಬರಸೈಯ್ಯನೆಂಬ ಬ್ರಾಹ್ಮಣನು ಕಾರ್ಯಾರ್ಥವಾಗಿ ಕುಂದೂರುಮೊಟ್ಟೆಯನ್ನು ಇಳಿದು ಕೆಳಕ್ಕೆ ಹೋಗುತ್ತಿದ್ದನು. ಇವನು ಆ ಗುಡ್ಡವನ್ನು ಅರ್ಧದೂರ ಇಳಿಯುವಷ್ಟರಲ್ಲಿ ಇವನಿಗೆ ಎದುರಾಗಿ ಒಬ್ಬ ಸಾಧಾರಣ ಇಳಿವಯಸ್ಸಿನ ಬ್ರಾಹ್ಮಣನೂ, ಒಬ್ಬ ಹತ್ತು ಹನ್ನೆರಡು ವರ್ಷ ಪ್ರಾಯದ ಕನ್ಯೆಯೂ ಬರುತ್ತಾ ಇದ್ದರು. ಬ್ರಾಹ್ಮಣನು ನೋಡುವುದಕ್ಕೆ ಬಹಳ ಆಸ್ತಿಕನಂತಿದ್ದನು. ಶುಭ್ರವಾದ ಒಂದು ಪಂಚೆಯನ್ನುಟ್ಟು ಒಂದು ಬಿಳಿ ವಸ್ತ್ರವನ್ನು ಮೇಲೆ ಹೊದ್ದಿದ್ದನು. ಆದರೆ ಅವನು ಉಟ್ಟಿದ್ದ ಮತ್ತು ಹೊದೆದ ಬಟ್ಟೆಗಳು ಅಲ್ಲಲ್ಲಿ ಹರಿದುಹೋಗಿದ್ದು ಗಂಟು ಹಾಕಲ್ಪಟ್ಟಿದ್ದವು. ಆತನ ಮುಖವು ಬಹಳ ಚಿಂತೆಯಿಂದ ನಿಸ್ತೇಜವಾಗಿದ್ದಿತು. ಈತನು ನಡೆಯುವುದಕ್ಕಾಗಿ ಕೈಯಲ್ಲಿ ದೊಣ್ಣೆಯನ್ನು ಹಿಡಿದುಕೊಂಡು ನಿಧಾನವಾಗಿ ಗುಡ್ಡವನ್ನು ಹತ್ತುತ್ತಿದ್ದನು. ಈತನ ಸಂಗಡವಿದ್ದ ಸ್ತ್ರೀಯು ಆಗ ತಾನೇ ಯೌವ್ವನದಲ್ಲಿ ಕಾಲಿಡುತ್ತಿದ್ದಳು. ಸುಂದರವಾದ ಮೈಬಣ್ಣ, ಲಕ್ಷಣಯುಕ್ತವಾದ ಮುಖ. ಇವುಗಳಿಂದ ನೋಡುವವರ ಮನಸನ್ನು ಆಕರ್ಷಿಸುತಲಿದ್ದಳು. ಇವಳೂ ಒಂದು ಹಳೆಯ ಸೀರೆಯನ್ನುಟ್ಟಿದ್ದಳು. ಇವಳ ಮುಖದಲ್ಲೂ ದುಃಖ ಮತ್ತು ನಿರಾಶೆಗಳ ಸೂಚನೆಗಳು ಕಾಣಬರುತ್ತಿದ್ದವು. ಇವರನ್ನು ಕಂಡು ಸುಬ್ಬರಸೈಯ್ಯನಿಗೆ ಇವರ ಮೇಲೆ ಕನಿಕರ ಉಂಟಾಯಿತು; ಇವರು ಯಾರೆಂದು ತಿಳಿಯಬೇಕೆಂಬ ಕುತೂಹಲವುಂಟಾಯಿತು. ಆಗ ಅವನು ವೃದ್ಧ ಬ್ರಾಹ್ಮಣನನ್ನು ಕುರಿತು 'ಏನು ಸ್ವಾಮಿ, ನೀವು ಎಲ್ಲಿಂದ ಬರುತ್ತೀರಿ? ಎಲ್ಲಿಗೆ ಹೋಗುವವರು' ಎಂದು ಕೇಳಿದನು.

ವೃದ್ಧ ಬ್ರಾಹ್ಮಣ—ನಾವು ಪುತ್ತೂರಿನಿಂದ ಬಂದಿದ್ದೇವೆ. ಇಲ್ಲಿಯ ವರೆಗೇ ಬಂದವರು.

ಸುಬ್ಬರಸೈಯ್ಯ—ನಿಮಗೆ ಮಡಿಕೇರಿಯಲ್ಲಿ ಯಾರಾದರೂ ಬಾಂಧವರಿರುವರೋ, ಅವರ ಮನೆಗೆ ಹೋಗುತ್ತೀರೋ?

ವೃದ್ಧ—ಇಲ್ಲ ಸ್ವಾಮಿ, ನಮಗೆ ಮಡಿಕೇರಿಯಲ್ಲಿ ಸಂಬಂಧಿಕರೂ, ಬೇಕಾದವರೂ ಯಾರೂ ಇಲ್ಲ. ನಾವು ರಾಜಸಂದರ್ಶನಕ್ಕೆ ಹೋಗುತ್ತಿದ್ದೇವೆ. ತಾವು ಯಾರೆಂದು ತಿಳಿಯಲಿಲ್ಲ.

ಸುಬ್ಬರಸೈಯ್ಯ—ನಾನು ರಾಜನ ಆಸ್ಥಾನದಲ್ಲಿ ಜ್ಯೋತಿಷ್ಯವನ್ನು ಹೇಳುವವನು. ರಾಜರಿಗೆ ಪ್ರತಿನಿತ್ಯವೂ ಆ ದಿವಸದ ಶುಭಾಶುಭ ಫಲಗಳನ್ನು ಹೇಳಬೇಕು.

ವೃದ್ಧ—ಹಾಗಾದರೆ ನಮಗೆ ಒಳ್ಳೆಯದೇ ಆಯಿತು. ತಾವು ದಯವಿಟ್ಟು ಹೇಗಾದರೂ ನಮಗೆ ರಾಜರ ಭೇಟಿ ಮಾಡಿಸಬೇಕು.

ಕೊಡಗಿನ ಚರಿತ್ರೆಯ ಕಥೆಗಳು.

ಓಂಕಾರೇಶ್ವರ ಲಿಂಗ ಪ್ರತಿಷ್ಠಾಪನೆ.

(ಲೇಖಕ:—ಡಿ. ಎನ್. ಕೃಷ್ಣಯ್ಯ, ಎಂ. ಎ. ಬಿ. ಇಡಿ.)

ಲೇಖಾಂಕ ೧೨

(ಎಲ್ಲಾ ಹಕ್ಕುಗಳನ್ನು ಕಾಯ್ದಿಡಲ್ಪಟ್ಟಿದೆ.)

ಸುಬ್ಬರಸೈಯ್ಯ—ಅದೇನು ಸ್ವಾಮಿ, ನಿಮಗೆ ರಾಜರಲ್ಲಿ ಕೆಲಸ. ಗುಟ್ಟಿಲ್ಲದಿದ್ದರೆ ತಿಳಿಸಿ.

ವೃದ್ಧ—ಅದರಲ್ಲಿ ಗುಟ್ಟೇನು ಸ್ವಾಮಿ! ನಾನು ಬಹಳ ಬಡತನದಲ್ಲಿದ್ದೇನೆ. ದೊಡ್ಡ ಸಂಸಾರ. ಒಬ್ಬ ಹೆಂಡತಿ, ಎಂಟು ಮಕ್ಕಳು. ಹ್ಯಾಗೋ ಹಿರೀ ಮಗಳೊಬ್ಬಳನ್ನು ಕಷ್ಟದಿಂದ ಮದುವೆ ಮಾಡಿಕೊಟ್ಟೆ. ಅವಳು ಗರ್ಭಿಣಿಯಾಗಿ ಹೆರಿಗೆಗೆ ಮನೆಗೆ ಬಂದಿದ್ದಾಳೆ. ಇವರೆಲ್ಲರನ್ನೂ ಸಾಕುವುದಕ್ಕೆ ನನಗೆ ಮಾರ್ಗವೇ ತೋಚದಾಗಿದೆ. ಆದುದರಿಂದ ನನ್ನ ಎರಡನೇ ಮಗಳು—ಇವಳನ್ನು ರಾಜನಿಗೆ ನಜರು ಕೊಟ್ಟರೆ ನಮಗೇನಾದರೂ ರಾಜನಿಂದ ಸಹಾಯವು ದೊರೆಯಬಹುದೋ ಎಂದು ಆಸೆಯಿಂದ ಬಂದಿದ್ದೇನೆ. (ಈ ಮಾತುಗಳನ್ನು ಕೇಳಿ ಆ ಹೆಣ್ಣು ಮಗಳು ಮುಖವನ್ನು ಕೆಳಗೆ ಹಾಕಿಕೊಂಡು ಕಣ್ಣೀರನ್ನು ಸುರಿಸುತ್ತಿದ್ದಳು.)

ಸುಬ್ಬರಸೈಯ್ಯ—ಅಯ್ಯೋ. ನೀವು ಎಂಥಾ ಆಲೋಚನೆ ಮಾಡಿದಿರಿ. ಎಂಥಾ ಬಡತನ ಬಂದರೂ ಮಗಳನ್ನು ರಾಜನ ವಿಲಾಸ ಸಾಮಗ್ರಿಯಾಗಿ ಮಾಡುವುದೇ? ಅದರಲ್ಲಿಯೂ ನೀವು ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿ ನಿಮ್ಮ ಮಗಳನ್ನು ಪರಜಾತಿಯ ಪುರುಷನಿಗೆ ಕೊಡುವುದೇ? ಅವನು ಅರಸನಾದರೇನು? ಶ್ರೀಮಂತನಾದರೇನು? ಮನುಷ್ಯನಿಗೆ ಧರ್ಮ, ನೀತಿ, ಕುಲ ಇವು ಯಾವುದೂ ಬೇಡವೇ? ಎಂದಿಗೂ ಈ ಕೆಲಸವನ್ನು ಮಾಡಬೇಡಿ.

ವೃದ್ಧ—ಏನು ಮಾಡುವುದು ಸ್ವಾಮಿ, ಬಡತನದ ಕಷ್ಟವು ಬಹಳ. ನಿಮಗೆ ಗೊತ್ತಿರದು. ನನ್ನ ಮಕ್ಕಳು ಹೊತ್ತುಹೊತ್ತಿಗೆ ಸರಿಯಾಗಿ ಆಹಾರವಿಲ್ಲದೆ ಅಳುತ್ತಿರುವುದನ್ನು ಎಷ್ಟು ದಿವಸ ಸಹಿಸಿಕೊಂಡಿರಲಿ. ಪ್ರಾಣ ತೆಗೆದುಕೊಳ್ಳೋಣವೆಂದರೆ ಹೆಂಡತಿ ಮಕ್ಕಳನ್ನು ನಾನೇ ಕೊಂದಂತೆಯೇ ಸರಿ. ಆತ್ಮಹತ್ಯೆಯು ಪುರುಷನಿಗೆ ಹೇಳಿದ್ದಲ್ಲ. ಅದರಷ್ಟು ಪಾಪಕೃತ್ಯವೆ ಇನ್ನೊಂದಿಲ್ಲ. ಹಾಗಾಗಿ ಈ ಕೆಲಸಕ್ಕೆ ಕೈಹಚ್ಚಿದೆನು.

ಸುಬ್ಬರಸೈಯ್ಯ—ನಿಮಗೆ ನನ್ನ ಕೈಲಾದಷ್ಟು ಧನ ಸಹಾಯ ಮಾಡುತ್ತೇನೆ. ನೀವು ನಿಮ್ಮ ಮಗಳನ್ನು ಕರೆದುಕೊಂಡು ಹೋಗಿ ಯಾರಾದರೊಬ್ಬ ಯೋಗ್ಯ ವರನಿಗೆ ಧಾರೆಯೆರೆದು ಕೊಡಿ. ಆದರೆ ಎಂದಿಗೂ ನಿಮ್ಮ ಮಗಳನ್ನು ರಾಜನ ಉಪಪತ್ನಿಯಾಗಗೊಡಬೇಡಿ. ಇವತ್ತು ಮಧ್ಯಾಹ್ನ ನಮ್ಮಲ್ಲಿ ಭೋಜನವನ್ನು ತೀರಿಸಿ ಹಿಂದಕ್ಕೆ ಪ್ರಯಾಣವನ್ನು ಮಾಡಿ.

ವೃದ್ಧ—ಹಾಗೇ ಆಗಲಿ ಸ್ವಾಮಿ, ನೀವು ನನ್ನ ಭಾಗದ ದೇವತೆಯಾಗಿ ಬಂದಿರಿ ಎಂದು ಹೇಳುತ್ತಾ ಕಣ್ಣೀರು ಸುರಿಸಿದನು. ಅವನ ಮಗಳು ಕೃತಜ್ಞತಾಪೂರ್ವಕ ದೃಷ್ಟಿಯಿಂದ ಸುಬ್ಬರಸೈಯ್ಯನನ್ನು ನೋಡುತ್ತಾ ಅವನ ಪಾದಗಳಿಗೆ ನಮಸ್ಕಾರ ಮಾಡಿದಳು.

ಸುಬ್ಬರಸೈಯ್ಯನು ತನ್ನ ಕೆಲಸವನ್ನು ಬಿಟ್ಟು ಅವರನ್ನು ಕರೆದುಕೊಂಡು ತಿರುಗಿ ಮಡಿಕೇರಿಗೆ ಬಂದನು.

ಸುಬ್ಬರಸೈಯ್ಯನ ಮನೆಗೆ ಒಬ್ಬ ವೃದ್ಧ ಬ್ರಾಹ್ಮಣನೂ ಒಬ್ಬ ಸುಂದರಿಯಾದ ಚಿಕ್ಕ ವಯಸ್ಸಿನ ಸ್ತ್ರೀಯೂ ಬಂದುದನ್ನು ನೋಡಿ ನೆರೆಕೆರೆಯವರಿಗೆ ಬಹಳ ಆಶ್ಚರ್ಯವಾಯಿತು. ಅವರು ಯಾರು ಎಂದು ತಿಳಿಯಬೇಕೆಂದು ಕುತೂಹಲವೂ ಉಂಟಾಯಿತು. ಮೆಲ್ಲಮೆಲ್ಲನೆ ಒಬ್ಬೊಬ್ಬರಾಗಿ ಆ ವೃದ್ಧ ಬ್ರಾಹ್ಮಣನನ್ನು ಮಾತನಾಡಿಸಿ ಆತನಿಂದ ಎಲ್ಲಾ ವಿಷಯಗಳನ್ನು ತಿಳಿದುಕೊಂಡರು. ಆ ಕಾಲದಲ್ಲಿ ಪರಸ್ಥಳದವರು ಬರುವುದು ಹೋಗುವುದು ಬಹಳ ಅಪರೂಪವಾದುದರಿಂದ ಯಾರಾದರೂ [illegible] ಬಂದರೂ ಅವರ ವಿಷಯ ತಿಳಿಯಲು ಜನರೆಲ್ಲಾ ಕಾತರರಾಗಿರುತ್ತಿದ್ದರು. ಅಂಥಾ ಜನರಲ್ಲಿ ಕೆಲವರು ರಾಜನ ಗೂಢಚಾರರೂ ಇರುತ್ತಿದ್ದರು. ಈ ಬ್ರಾಹ್ಮಣನೂ, ಆತನ ಮಗಳೂ ಮಧ್ಯಾಹ್ನದ ಬಿಸಿಲು ಕಡಿಮೆಯಾದಮೇಲೆ ತಾವು ಹಿಂದಿರುಗಿ ತಮ್ಮ ಊರಿನ ಕಡೆ ಹೊರಟರು.

ಲಿಂಗರಾಜನು ಆ ದಿವಸ ಮಡಿಕೇರಿಯಲ್ಲಿರಲಿಲ್ಲ. [illegible] ಆತನು ಬಂದ [illegible] ಗೂಢಚಾರರು ವೃದ್ಧ ಬ್ರಾಹ್ಮಣನು ಮಡಿಕೇರಿಗೆ ಬಂದ ಉದ್ದೇಶವನ್ನೂ, ಅದಕ್ಕೆ ಸುಬ್ಬರಸೈಯ್ಯನು ವಿಘ್ನವನ್ನು ತಂದೊಡ್ಡಿ ಅವನನ್ನು ಹಿಂದಕ್ಕೆ ಕಳುಹಿಸಿದನ್ನೂ ರಾಜನಿಗೆ ತಿಳಿಸಿದರು. ಲಿಂಗರಾಜೇಂದ್ರನಿಗೆ ಈ ವರ್ತಮಾನವನ್ನು ತಿಳಿದು ಮಹತ್ತಾದ ಕೋಪ ಉಂಟಾಯಿತು. ತನ್ನ ಅಂತಃಪುರಕ್ಕೆ ಬರುತ್ತಿದ್ದ ಸ್ತ್ರೀಯನ್ನು ಸುಬ್ಬರಸೈಯ್ಯನು ತಪ್ಪಿಸಿದನೆಂದು ಅವನ ಮೇಲೆ ಕಿಡಿಕಿಡಿಯಾದನು. ಆ ಕೂಡಲೇ ಸುಬ್ಬರಸೈಯ್ಯನನ್ನು ಹಿಡಿದುಕೊಂಡು ಬರುವುದಕ್ಕೆ ತನ್ನ ಸಿದ್ದಿಯವರನ್ನು ಕಳುಹಿಸಿದನು. ಸಿದ್ದಿಯವರು ಮೊದಲೇ ಕ್ರೂರಿಗಳು. ಅದರಲ್ಲೂ ಈಗ ರಾಜಾಜ್ಞೆ. ಅವರು ಸುಬ್ಬರಸೈಯ್ಯನು ದೇವರ ಪೂಜೆ ಮಾಡುತ್ತಿರುವ ವೇಳೆಯಲ್ಲಿ ಅವನ ಮನೆಗೆ ಬಂದು ಅವನನ್ನು ಹಿಡಿದು ಎಳೆದುಕೊಂಡು ಹೋದರು. ಸುಬ್ಬರಸೈಯ್ಯನಿಗೆ ತನ್ನನ್ನು ಯಾತಕ್ಕೆ ಹಿಡಿದುಕೊಂಡು ಹೋಗುತ್ತಾರೆಂದು ತಿಳಿಯಿತು. ತನ್ನ ಮನೆಯವರಿಗೆ 'ನಾನು ಇನ್ನು ಹಿಂದಕ್ಕೆ ಬರುವ ಹಾಗಿಲ್ಲ. ನನ್ನ ಉತ್ತರ ಕ್ರಿಯೆಗಳನ್ನು ಯಾವಾಗ ಮಾಡಬೇಕೆಂದು ರಾಜನ ಅಪ್ಪಣೆ ತೆಗೆದುಕೊಂಡು ಮಾಡಿ' ಎಂದು ಹೇಳಿ ಹೊರಟುಹೋದನು.

ಅರಮನೆಯಲ್ಲಿ ಲಿಂಗರಾಜನು ಸುಬ್ಬರಸೈಯ್ಯನನ್ನು ಯಾವಾಗ ಹಿಡಿದು ತರಲಿಲ್ಲವೆಂದು ಇವನ ಬರವನ್ನೇ ಕಾಯುತ್ತಿದ್ದನು. ಆತನ ಮುಖಮುದ್ರೆಯು ಉಗ್ರವಾಗಿತ್ತು. ಸುಬ್ಬರಸೈಯ್ಯನನ್ನು ಸಿದ್ದಿಗಳು ಹಿಡಿದುಕೊಂಡು ಬರಲು ಲಿಂಗರಾಜೇಂದ್ರನು ಕ್ರೂರ ದೃಷ್ಟಿಯಿಂದ ಆತನನ್ನು ನೋಡಿ 'ಸುಬ್ಬರಸೈಯ್ಯ, ಏನು! ಅರಮನೆ ಅನ್ನ ತಿಂದು ಗರ್ವ ಬಂದ ಹಾಗೆ ತೋರುತ್ತದೆ. ನಮಗೆ ಬರತಕ್ಕ ನಜರನ್ನು ತಪ್ಪಿಸುವುದಕ್ಕೆ ನಿನಗೆಷ್ಟು ಧೈರ್ಯ. ಬೇಗನೆ ಆ ಹುಡುಗಿಯನ್ನು ನನಗೆ ತಂದೊಪ್ಪಿಸು. ಇಲ್ಲವಾದರೆ ನಿನ್ನ ಪ್ರಾಣವು ಉಳಿಯಲಾರದು.

ಸುಬ್ಬರಸೈಯ್ಯ—ನನಗೆ ನ್ಯಾಯವೆಂದು ತೋರಿದ್ದನ್ನು ಮಾಡಿದ್ದೇನೆ ಮಹಾಸ್ವಾಮಿ. ಆ ಹೆಣ್ಣು ಮಗಳನ್ನು ತಂದೊಪ್ಪಿಸಲು ನನಗಾಗದು.

ಲಿಂಗರಾಜ—ಈ ಹಾರುವನಿಗೆಷ್ಟು ಗರ್ವ. ಇವನಿಗೆ ಇಪ್ಪತ್ತು ಛಡಿ ಹೊಡೆಯಿರಿ ಎಂದು ಸಿದ್ದಿಯವರಿಗೆ ಹೇಳಿದನು. ಹಾಗೆಯೇ ಸಿದ್ದಿಯವರು ಅವನಿಗೆ ಇಪ್ಪತ್ತು ಛಡಿಗಳನ್ನೂ ಹೊಡೆದರು. ಅನಂತರ ಲಿಂಗರಾಜನು ಅವನನ್ನು ಕುರಿತು 'ಏನೋ ಹಾರುವ, ಈಗಲಾದರೂ ನಿನ್ನ ತಪ್ಪನ್ನು ಒಪ್ಪಿಕೊಂಡು ಅವಳನ್ನು ತಂದೊಪ್ಪಿಸುವೆಯಾ' ಎಂದು ಕೇಳಿದನು. ಅದಕ್ಕೆ ಸುಬ್ಬರಸೈಯ್ಯನು 'ಮಹಾಸ್ವಾಮಿ, ಅದು ನನ್ನಿಂದ ಎಂದಿಗೂ ಆಗದು. ಮಹಾಸ್ವಾಮಿಯವರ ಚಿತ್ತವಿದ್ದಂತೆ ಮಾಡಬಹುದು.'

ಲಿಂಗರಾಜನು ತನ್ನ ಸಿದ್ದಿಯವರಿಗೆ ಸುಬ್ಬರಸೈಯ್ಯನ ಇಬ್ಬರು ಗಂಡು ಮಕ್ಕಳನ್ನು ಹಿಡಿದುಕೊಂಡು ಬರುವುದಕ್ಕೆ ಕಳುಹಿಸಿದನು. ಅವರು ಹಾಗೆ ಹಿಡಿದು ತಂದ ಕೂಡಲೇ ಲಿಂಗರಾಜನು 'ಸುಬ್ಬರಸೈಯ್ಯ, ನೋಡು, ಈಗಲೇ ನಿನ್ನ ಈ ಗಂಡು ಮಕ್ಕಳನ್ನು ನಿನ್ನ ಕಣ್ಣ ಮುಂದೆ ಕೊಲ್ಲಿಸುವೆನು, ನಾನು ಹೇಳಿದ ಹಾಗೆ ಈಗಲಾದರೂ ಕೇಳುವೆಯೋ' ಎಂದನು.

ಸುಬ್ಬರಸೈಯ್ಯನು 'ಮಹಾಸ್ವಾಮಿ, ನನಗೆ ಒಂದೇ ನಾಲಿಗೆ ಇರುವುದು. ನಾನು ಮೊದಲು ಹೇಳಿದ್ದಕ್ಕೆ ವ್ಯತಿರಿಕ್ತವಾಗಿ ಈಗೇನೂ ಮಾಡಲಾರೆ'

ರಾಜನ ಕೋಪಕ್ಕೆ ಮೇರೆತಪ್ಪಿತು. ಆ ಕ್ಷಣವೇ ಅವನು ಸಿದ್ದಿಯವರಿಗೆ ಅವನ ಮಕ್ಕಳ ತಲೆಕಡಿಯುವುದಕ್ಕೆ ಅಜ್ಞಾಪಿಸಿದನು. ತಲೆ ಕಡಿದ ಹಾಗೆ ಸುಬ್ಬರಸೈಯ್ಯನ ಶರೀರವನ್ನು ಸ್ವಲ್ಪ ಸ್ವಲ್ಪವಾಗಿ ಕೊಚ್ಚುವುದಕ್ಕೆ ಅಪ್ಪಣೆ ಮಾಡಿದನು. ಸಿದ್ದಿಯವರು ಅವನ ಎರಡು ಕೈಗಳನ್ನೂ ಕತ್ತರಿಸಿ ಹಾಕಿದ ಮೇಲೆ ರಾಜನು ತಿರುಗಿ ಅವನನ್ನು 'ಈಗಲಾದರೂ ಅವಳು ಎಲ್ಲಿರುವಳು ಎಂದು ಹೇಳುವೆಯೋ, ಅವಳ

ನ್ನು ಕರೆದುಕೊಂಡು ಬರುವಿಯೊ' ಎಂದು ಕೇಳಿದನು. ಸುಬ್ಬರಸೈಯ್ಯನು 'ಮಹಾಸ್ವಾಮಿ, ದೇಹಕ್ಕೆ ನೀವು ಯಾವ ಶಿಕ್ಷೆಯನ್ನಾದರೂ ಮಾಡಬಹುದು. ಆದರೆ ಆತ್ಮವು ಶಾಶ್ವತ. ಆತ್ಮವಂಚನೆಯನ್ನು ಮಾಡಲು ನನ್ನಿಂದಾಗದು. ನೀವು ಆ ನ್ಯಾಯದ ಮಾರ್ಗದಲ್ಲಿ ಳಿಯಬೇಡಿ. ಇದರಿಂದ ಒಳ್ಳೆಯದಾಗದು. ಇದಕ್ಕೆ ಪ್ರತೀಕಾರವು ತಪ್ಪದು' ಎಂದನು.

ಲಿಂಗರಾಜನ ಅನುಮತಿ ಮೀರಿ ಸಿದ್ಧಿಯವರು ತಮ್ಮ ಕೆಲಸವನ್ನು ಮುಂದರಿಸಿದರು. ಸುಬ್ಬರಸೈಯ್ಯನ ಪ್ರಾಣವು ಸ್ವಲ್ಪ ಹೊತ್ತಿನಲ್ಲಿಯೇ ಹೋಯಿತು. ಪ್ರಾಣ ಹೋಗುವಾಗ ಅವನ ಕಣ್ಣುಗಳು ರಾಜನನ್ನು ತೀಕ್ಷ್ಣ ದೃಷ್ಟಿಯಿಂದ ನೋಡುವಂತೆ ತೋರುತ್ತಿದ್ದವು. ಆಗ ಲಿಂಗರಾಜನಿಗೆ ಸ್ವಲ್ಪ ಭಯವಾದ ಹಾಗಾಯಿತು.

ಸುಬ್ಬರಸೈಯ್ಯನು ಪರಮ ನಿಷ್ಠಾವಂತ ಬ್ರಾಹ್ಮಣನಾಗಿದ್ದನು. ಸಕಲ ಶಾಸ್ತ್ರಗಳನ್ನೂ ತಿಳಿದವನಾಗಿದ್ದನು. ವ್ರತೋಪವಾಸಗಳನ್ನೂ ಕ್ರಮವಾಗಿ ಮಾಡುತ್ತಿದ್ದನು. ದೇವತಾರಾಧನೆಯೂ ನಡೆಯುತ್ತಿತ್ತು. ಜೊತೆಗೆ ದೇವಿಯ ಉಪಾಸನೆಯೂ ಇತ್ತು.

ಅಂದು ರಾತ್ರಿಯಾಯಿತು. ರಾತ್ರಿಯಾದ ಕೂಡಲೇ ಲಿಂಗರಾಜನಿಗೆ ತನ್ನ ಕೋಣೆಯಲ್ಲಿ ಯಾರೋ ಮಂತ್ರಗಳನ್ನು ಉಚ್ಚರಿಸುತ್ತಿರುವಂತೆ ಕೇಳಿತು. ಹಾಗೆ ನೋಡುತ್ತಿರುವಾಗ ಸುಬ್ಬರಸೈಯ್ಯನು ತನ್ನ ಮುಂದೆ ನಿಂತಿರುವಂತೆ ಕಂಡಿತು. ಆಗ ಲಿಂಗರಾಜನು ಬೆದರಿ ಬಾಗಿಲಿನ ಹೊರಗಿದ್ದ ಸಿದ್ದಿಯವರನ್ನು ಕರೆದನು. ಸಿದ್ದಿಯವರು ಒಳಕ್ಕೆ ಬಂದಾಗ ಅವನಿಗೆ ಏನೂ ಕಾಣಿಸುತ್ತಿರಲಿಲ್ಲ. ಅವರು ಮರೆಯಾದ ಕೂಡಲೇ ರಾಜನ ಕಡೆಗೆ ಬೊಟ್ಟು ಮಾಡಿ ತೋರಿಸುತ್ತಾ ಸುಬ್ಬರಸೈಯ್ಯನ ರೂಪವು ಅವನು ಭೋಜನಕ್ಕೆ ಕುಳಿತರೆ ಅವನು ಊಟಮಾಡುತ್ತಿದ್ದ ಚಿನ್ನದ ಬಟ್ಟಲು ಇಟ್ಟಲ್ಲಿಂದ ಕೋಣೆಯ ಇನ್ನೊಂದು ಮೂಲೆಗೆ ಸರಿಸಲ್ಪಡುತ್ತಿತ್ತು. ರಾತ್ರಿ ಮಂಚದ ಮೇಲೆ ಮಲಗಿದರೆ ಮಂಚದಿಂದ ಎಳೆದು ಹಾಕಲ್ಪಡುತ್ತಿದ್ದನು. ಇದೇ ರೀತಿ ಒಂದೆರಡು ದಿವಸಗಳನ್ನು ರಾಜನು ಬಹಳ ಕಷ್ಟದಿಂದ ಕಳೆದನು. ಈ ಉಪದ್ರವವು ದಿವಸ ಹೋಗುತ್ತಾ ಹೆಚ್ಚಾಗುವುದನ್ನು ನೋಡಿ ರಾಜನು ಅನೇಕ ಮಂತ್ರವಾದಿಗಳನ್ನು ಕರೆಸಿ ಅವರಿಂದ ತಾಯಿತಗಳನ್ನು ಬರೆಸಿ ಕಟ್ಟಿಕೊಂಡನು. ಅನೇಕ ರಕ್ಷೆಗಳನ್ನು ಮಾಡಿಸಿದನು. ಆದರೆ ಇವು ಯಾವುದರಿಂದಲೂ ಏನೂ ಪ್ರಯೋಜನವಾಗಲಿಲ್ಲ. ಆಗ ಆತನ ದಿವಾನರೂ, ಕರಣಿಕರೂ ನೀಲೇಶ್ವರ ತಂತ್ರಿಯನ್ನು ಕರೆಸಿ ಆತನಿಂದ ಮಂತ್ರವಾದ ಮಾಡಿಸಬೇಕೆಂದು ಹೇಳಿದರು. ಹಾಗೆಯೇ ರಾಜನು ನೀಲೇಶ್ವರ ತಂತ್ರಿಯನ್ನು ಕರೆದುಕೊಂಡು ಬರುವುದಕ್ಕೆ ಕರಣಿಕ ಸುಬ್ಬೈಯ್ಯನನ್ನು ಕಳುಹಿಸಿದನು. ನೀಲೇಶ್ವರ ತಂತ್ರಿಯು ಇವರ ಕೋರಿಕೆ ಮೇರೆ ಬಂದು ಮಂತ್ರವಾದವನ್ನು ಮಾಡಿ ನೋಡಿದನು. ಆಗ ಅವನಿಗೆ ಸುಬ್ಬರಸೈಯ್ಯನು ಬ್ರಹ್ಮರಾಕ್ಷಸನಾಗಿರುವನೆಂದೂ, ಆ ಬ್ರಹ್ಮರಾಕ್ಷಸನಿಗೆ ಒಂದು ಸ್ಥಳವನ್ನು ಕಲ್ಪಿಸದೆ ಹೋದರೆ ರಾಜನಿಗೆ ಉಪದ್ರವವು ತಪ್ಪಲಾರದೆಂದು ತಿಳಿಯಿತು. ರಾಜನು ಪ್ರತ್ಯಾಗಾನರೂ ಮಾಡಿ ಆ ಬ್ರಹ್ಮರಾಕ್ಷಸನ ಹಿಂಸೆಯನ್ನು ನಿಲ್ಲಿಸಬೇಕೆಂದು ನೀಲೇಶ್ವರ ತಂತ್ರಿಯನ್ನು ಕೇಳಿಕೊಳ್ಳಲು, ಆತನು ಒಂದು ಈಶ್ವರ ದೇವಸ್ಥಾನವನ್ನು ಕಟ್ಟಿಸಬೇಕೆಂದೂ, ಆ ದೇವಸ್ಥಾನದ ಬಳಿ ಬ್ರಹ್ಮರಾಕ್ಷಸನಿಗೆ ಒಂದು ಸ್ಥಳ ಕಲ್ಪಿಸಬೇಕೆಂದೂ, ಬ್ರಹ್ಮರಾಕ್ಷಸನಿಗೆ ರಾತ್ರಿ ಹೊತ್ತು ಸಂಚಾರಕ್ಕೆ ಒಂದು ನಿಯಮಿತ ಸ್ಥಳವನ್ನು ಗೊತ್ತುಮಾಡಬೇಕೆಂದೂ ಹೇಳಿದನು.

ಹಾಗೆಯೇ ಲಿಂಗರಾಜನು ಕೋಟೆಯ ಎದುರಿನ ತಗ್ಗಾದ ಸ್ಥಳದಲ್ಲಿ ನೀಲೇಶ್ವರ ತಂತ್ರಿಯಿಂದ ಪಂಚಾಂಗ ಹಾಕಿಸಿ ದೇವಸ್ಥಾನದ ಕೆಲಸವನ್ನು 1817 ನೇ ಇಸವಿಯಲ್ಲಿ ಪ್ರಾರಂಭಿಸಿದನು. ದೇವಸ್ಥಾನದ ಕಟ್ಟಡವು ಎರಡು ವರ್ಷ ಒಂಬತ್ತು ತಿಂಗಳು ಇಪ್ಪತ್ತೈದು ದಿನಗಳಲ್ಲಿ ಕಟ್ಟಿ ಪೂರೈಸಲ್ಪಟ್ಟಿತು. ದೇವಸ್ಥಾನವು ಚಚ್ಚೌಕದ ಒಂದು ಸುಂದರವಾದ ಕಟ್ಟಡ. ಮೇಲ್ಗಡೆ ಮಾಡಿಲ್ಲ. ಉಪ್ಪರಿಗೆ ಮೇಲೆ ಮಧ್ಯಭಾಗದಲ್ಲಿ ಚಂದಿನಂತಿರುವ ರಚನೆಯಿದ್ದು ಅದರ ತುದಿಯಲ್ಲಿ ಚಿನ್ನದ ತಿಳಿ ಕೊಟ್ಟ ಒಂದು ಕಲಶವಿರುವುದು. ದೇವಸ್ಥಾನದ ಸುತ್ತಲೂ ಪೌಳಿಗೋಡೆಯಿರುವುದು. ಮುಂಭಾಗದಲ್ಲಿ ಹೊರಗೆ ಸುಂದರವಾದ ಒಂದು ಕೊಳವಿರುವುದು. ಕೊಳದ ಮಧ್ಯಭಾಗದಲ್ಲಿ ಒಂದು ಚಿಕ್ಕ ಮಂಟಪ. ಮಂಟಪಕ್ಕೂ ಕೊಳದ ಅಂಚಿಗೂ ಎರಡು ಭಾಗದಲ್ಲಿಯು ಕಟ್ಟಿ ಇರುವ ಒಂದು ಕಿರಿದಾದ ದಾರಿ. ದೇವಸ್ಥಾನದ ಒಳ ಆವರಣದಲ್ಲಿಯೂ, ಕೆರೆಯ ಮೇಲ್ಗಡೆ ನಾಲ್ಕು ಬದಿಗಳಲ್ಲಿಯೂ ಕೆತ್ತಿದ ಕಲ್ಲು ಹಾಸಿದ್ದು ನೋಟಕರ ಮನಸ್ಸನ್ನು ಆನಂದಗೊಳಿಸುತ್ತದೆ.

ದೇವಸ್ಥಾನವು ಕಟ್ಟಿದ ನಂತರ ಅದರಲ್ಲಿ ಲಿಂಗ ಪ್ರತಿಷ್ಠಾಪನೆ ಮಾಡುವುದಕ್ಕೆ ಲಿಂಗವನ್ನು ಎಲ್ಲಿಂದ ತರುವುದೆಂಬ ಪ್ರಶ್ನೆಯು ಬಂತು. ಈಶ್ವರ ದೇವಸ್ಥಾನವಾದುದರಿಂದ ಶಿವಲಿಂಗವನ್ನು ಕಾಶಿಯಿಂದಲೇ ತರುವುದೆಂದು ನಿಶ್ಚಯವಾಯಿತು. ಆಗ ಲಿಂಗರಾಜನು ತನ್ನ ಆಸ್ಥಾನದಲ್ಲಿದ್ದ ಪಂಡಿತ ರಾಮೈಯ್ಯ, ತಿರುಮಲೇಶ್ವರ ಭಟ್ಟ, ನಾರಾಯಣಭಟ್ಟ ಎಂಬ ಬ್ರಾಹ್ಮಣರನ್ನು ಒಬ್ಬೊಬ್ಬರು ಕಾರ್ಯಕಾರರನ್ನು ಕಾಶಿಗೆ ಲಿಂಗತರುವುದಕೋಸ್ಕರ ಕಳುಹಿಸಿದನು. ಇವರು ಅಲ್ಲಿಗೆ ಹೋಗಿ ವಿಶೇಷವಾದ ಒಂದು ಲಿಂಗವನ್ನು ತಂದರು. ಹಿಂದಕ್ಕೆ ಬರುವಾಗ ಬ್ರಾಹ್ಮಣರು ಸರತಿ ಮೇರೆ ಉಪವಾಸವಿದ್ದು ಲಿಂಗವನ್ನು ಮಡಿಕೇರಿಗೆ ತೆಗೆದುಕೊಂಡು ಬಂದರು. ಲಿಂಗವನ್ನು ತರುವ ಸಮಯಕ್ಕೆ ಸರಿಯಾಗಿ ಲಿಂಗರಾಜನು ನೀಲೇಶ್ವರ ತಂತ್ರಿಗಳನ್ನು ಕರೆಸಿ ಅವರಿಂದ ಕಲಿಸಂದ 4922 ನೇ ವಿಕ್ರಮ ಸಂವತ್ಸರವಾದ ಚೈತ್ರ ಶುದ್ಧ ದ್ವಾದಶಿ (26-3-1820) ಯಲ್ಲಿ ಶಿವಲಿಂಗವನ್ನು ಪ್ರತಿಷ್ಠೆಮಾಡಿಸಿದನು. ಆ ಲಿಂಗಕ್ಕೆ ಓಂಕಾರೇಶ್ವರನೆಂದು ಹೆಸರಿಟ್ಟನು. ನೀಲೇಶ್ವರ ತಂತ್ರಿಗಳೂ, ಕರಣಿಕ ಸುಬ್ಬೈಯ್ಯನೂ ಇತರ ಕೆಲವು ಬ್ರಾಹ್ಮಣ ಉದ್ಯೋಗಸ್ಥರೂ ಸೇರಿ ನಿಶ್ಚಯಿಸಿದ ಮೇರೆ ಆ ದೇವಸ್ಥಾನದಲ್ಲಿ ದಿವಸಕ್ಕೆ ಮೂರು ಸಾರಿ ಪೂಜೆಯಾಗಬೇಕೆಂತಲೂ, ಪ್ರತಿ ದಿವಸ ಅನ್ನ ದಾನವಾಗಬೇಕೆಂತಲೂ, ನಂದಾದೀಪವು ಉರಿಯುತ್ತಿರಬೇಕೆಂತಲೂ, ಪರ್ವಕಾಲಗಳಲ್ಲಿ ಉತ್ಸವಗಳು ನಡೆಯಬೇಕೆಂತಲೂ ಕಟ್ಟು ಮಾಡಿದನು. ಸುಬ್ಬರಸೈಯ್ಯನ ಮನೆಯ ಬೆಳ್ಳಿಯ ಶಿವಲಿಂಗವನ್ನು ದೇವಸ್ಥಾನದಲ್ಲಿ ಡಿಸಿದನು.

ಇದಲ್ಲದೆ ದೇವಸ್ಥಾನದ ಎಡಭಾಗದಲ್ಲಿ ಒಂದು ಸಂಪಿಗೆ ಸಸಿಯನ್ನು ನೀಲೇಶ್ವರ ತಂತ್ರಿಯು ನೆಟ್ಟು ಬ್ರಹ್ಮರಾಕ್ಷಸನಿಗೆ ಅದರಲ್ಲಿ ಸ್ಥಳವನ್ನು ಕಲ್ಪಿಸಿದನು. ಬ್ರಹ್ಮರಾಕ್ಷಸನಿಗೆ ಸಂಚಾರಕ್ಕೆ ಒಂದು ನಿಶ್ಚಿತ ಮಿತಿಯನ್ನು ಇಡಬೇಕಾಯಿತು. ಅದಕೋಸ್ಕರ ದೇವಸ್ಥಾನದಿಂದ ಸುಮಾರು ಒಂದು ಕೂಗಿನ ದೂರದಲ್ಲಿ ಒಂದು ಅಶ್ವತ್ಥ ಮರವನ್ನು ನೆಟ್ಟು ಅಲ್ಲಿ ನಾಗನ ಕಲ್ಲುಗಳನ್ನು ಪ್ರತಿಷ್ಠೆಮಾಡಿ ಅಲ್ಲಿ ಪ್ರತಿ ದಿನವೂ ಪೂಜೆಯನ್ನು ಏರ್ಪಡಿಸಲಾಯಿತು. ಬ್ರಹ್ಮರಾಕ್ಷಸನು ದೇವಸ್ಥಾನದ ಪಕ್ಕದ ಸಂಪಿಗೆ ಮರದಿಂದ ಅಶ್ವತ್ಥ ಮರದ ವರೆಗೆ ರಾತ್ರಿ ಸಂಚರಿಸಬೇಕೆಂದು ನೀಲೇಶ್ವರ ತಂತ್ರಿಗಳು ಮಂತ್ರಿಸಿದರು. ಅಂದಿನಿಂದ ರಾಜನಿಗೆ ಬ್ರಹ್ಮರಾಕ್ಷಸನ ಬಾಧೆಯು ತಪ್ಪಿತು.

ನೀಲೇಶ್ವರ ತಂತ್ರಿಗೆ ಲಿಂಗರಾಜನು ಕೊಡಗಿನ ಎಲ್ಲಾ ದೇವಸ್ಥಾನಗಳ ತಾಂತ್ರಿಕ ವಿಚಾರಗಳಲ್ಲಿ ಅಧಿಕಾರವನ್ನು ಕೊಟ್ಟನು.

ಈ ಕಥೆಯನ್ನು ಮಡಿಕೇರಿಯಲ್ಲಿರುವ ಪ್ರಾಯ ಹೋದ ಮುದಿ ಮಹನೀಯರನೇಕರಿಂದ ಕೇಳಿ ತಿಳಿದಿದ್ದೇನೆ. ದೇವಸ್ಥಾನದ ಪಕ್ಕದ ಸಂಪಿಗೆ ಮರದಿಂದ ಅಶ್ವತ್ಥ ಮರದ ವರೆಗೆ ಪರ್ವಕಾಲಗಳಲ್ಲಿ ರಾತ್ರಿ ಬ್ರಹ್ಮರಾಕ್ಷಸವು ಸಂಚರಿಸುತ್ತಿತ್ತೆಂದೂ ದಾರಿಯಲ್ಲಿ ಮಂತ್ರಗಳನ್ನು ಉಚ್ಚರಿಸಿಕೊಂಡು ಹೋಗುತ್ತಿತ್ತೆಂದೂ ಜನರು ಹೇಳುವುದನ್ನೂ ಕೇಳಿದ್ದೇನೆ. ಸುಬ್ಬರಸೈಯ್ಯನ ಮನೆಯ ಹೆಂಗಸರನ್ನು ಕಂಡು ಮಾತನಾಡಿದ ಸ್ತ್ರೀಯರಿಂದ ಕಥೆಯನ್ನು ಕೇಳಿದ ಮುದಿಯರು ಈಗಲೂ ಮಡಿಕೇರಿಯಲ್ಲಿರುವರು. ಕಾಶಿಯಿಂದ ಲಿಂಗವನ್ನು ತಂದ ಪಂಡಿತ ರಾಮೈಯ್ಯ ಮೊದಲಾದವರಿಗೆ ಭೂಮಿಯನ್ನು ಧರ್ಮವಾಗಿ ಕೊಟ್ಟ ವಾಕ್ಷೆಯು ಈಗಲೂ ಮಡಿಕೇರಿ ಅರಮನೆಯಲ್ಲಿದೆ. ಸುಬ್ಬರಸೈಯ್ಯನು ಪೂಜೆಮಾಡುವಾಗ ಕೂರುತ್ತಿದ್ದ ಮಣೆಯು ಓಂಕಾರೇಶ್ವರ ದೇವಸ್ಥಾನದಲ್ಲಿದೆಯೆಂದೂ ಅರ್ಚಕರು ಹೇಳುತ್ತಾರೆ.

ಡಾ. ಮೋಕ್ಸ್ಯಸ್ ಎಬ್ರಹಾಮ್
ದಂತ ವೈದ್ಯರು.
(ಪೀಯರ್ಸ್‍ಲೆಸ್ಲಿ ಬಂಗ್ಲೆ)
(ಸ್ಪೆನ್ಸರ್ಸ್ ಹತ್ತಿರ)
ಮಡಿಕೇರಿ.

ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿ.

ಕಾಂಗ್ರೆಸ್ ಸದಸ್ಯರನ್ನು ಮಾಡಿರಿ. ಎರಡೇ ತಿಂಗಳುಗಳು ಉಳಿದಿವೆ.

ಈ ವರ್ಷ ಕಾಂಗ್ರೆಸ್ ಸದಸ್ಯರನ್ನು ಮಾಡುವ ಕೊನೆಯ ತಾರೀಕು 1 ನೇ ಅಕ್ಟೋಬರ್ ಎಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ನಿರ್ಧರಿಸಿರುವರು. ಅಂದರೆ ಇನ್ನು ಎರಡು ತಿಂಗಳು ಮಾತ್ರ ಈ ಕಾರ್ಯಕ್ಕೆ ಉಳಿದಂತಾಯಿತು. ಇಲ್ಲಿಯ ವರೆಗೆ ನಮ್ಮ ಕಡೆಗೆ ಬಂದ ವರದಿಗಳ ಮೇಲಿಂದ ನೋಡಲಾಗಿ ಪ್ರಾಂತದಲ್ಲಿಯ ಎಲ್ಲಾ ಕಾಂಗ್ರೆಸ್ ಕಮಿಟಿಗಳೂ, ಕಾರ್ಯಕರ್ತರೂ ಹೆಚ್ಚು ಆಸಕ್ತಿ ವಹಿಸಿದಂತೆ ಕಂಡುಬರುವುದಿಲ್ಲ. ಎಲ್ಲ ಕಡೆಯಲ್ಲಿಯೂ ಕಾಂಗ್ರೆಸು ಕೆಲಸಗಾರರು ಸ್ಥಾನಿಕ ಚುನಾವಣೆಗಳೇ ಮೊದಲಾದ ಕಾರ್ಯಕ್ರಮಗಳಲ್ಲಿ ಸಂಪೂರ್ಣ ಮನಹಾಕಿ ಸದಸ್ಯರನ್ನು ಮಾಡುವ ಕೆಲಸದ ಕಡೆಗೆ ಬಹುಮಟ್ಟಿಗೆ ಅಲಕ್ಷ್ಯ ಮಾಡಿರುವರೆಂಬುದು ವಿಷಾದದ ಸಂಗತಿಯಾಗಿದೆ. ಕಾಂಗ್ರೆಸಿನ ಸದ್ಯದ ಕಾರ್ಯಕ್ರಮಗಳಲ್ಲಿ ಸ್ಥಾನಿಕ ಚುನಾವಣೆಗಳಲ್ಲಿ ಭಾಗವಹಿಸಲು ಅನುಸಿದೆ. ಅದಕ್ಕೆ ಹೆಚ್ಚು ಗಮನ ಕೊಡ ಬಾರದೆಂದಲ್ಲ. ಆದರೆ ಕಾಂಗ್ರೆಸ್ ಸಂಸ್ಥೆಯ ಅಡಿಗಲ್ಲಾದ ಸದಸ್ಯತ್ವದ ಕಡೆಗೆ ಲಕ್ಷ್ಯಕೊಡದಿರುವದು ಯುಕ್ತವಲ್ಲ. ಸದ್ಯಕ್ಕೆ ಇಡೀ ದೇಶದಲ್ಲೆಲ್ಲಾ ಕಾಂಗ್ರೆಸಿನ ವರ್ಚಸು ಹೆಚ್ಚಿಗೆ ಬೆಳದಿದ್ದು ಜನರೆಲ್ಲರೂ ಕಾಂಗ್ರೆಸ್ ಸಂಸ್ಥೆಯಲ್ಲಿ ಸೇರಲು ಉತ್ಸುಕರಿರುವರು. ಇಂಥಾ ಸಮಯದಲ್ಲಿ ಕಾಂಗ್ರೆಸ್ ಕಮಿಟಿಗಳು ಸದಸ್ಯರನ್ನು ಮಾಡುವ ಕೆಲಸಕ್ಕೆ ಇನ್ನುಳಿದ ಎರಡು ತಿಂಗಳನ್ನಾದರೂ ಸಂಪೂರ್ಣವಾಗಿ ಮೀಸಲಾಗಿಟ್ಟರೆ ಅತೀ ಹೆಚ್ಚು ಪ್ರಮಾಣದಿಂದ ಜನರು ಕಾಂಗ್ರೆಸ್ ಸದಸ್ಯರಾಗುವರೆಂಬುದರಲ್ಲಿ ಸಂದೇಹವಿಲ್ಲ. ಹೋದ ವರ್ಷ ನಮ್ಮ ಪ್ರಾಂತದಲ್ಲಿ 1,19,658 ಪ್ರಾಥಮಿಕ ಸದಸ್ಯರಾಗಿದ್ದು ಈ ವರ್ಷ ಮನಮುಟ್ಟಿ ಕೆಲಸ ಮಾಡಿದರೆ ಸದಸ್ಯರ ಸಂಖ್ಯೆಯು ಮೂರು ಲಕ್ಷದ ವರೆಗೆ ಏರುವುದೆಂಬುವುದನ್ನು ನಿಸ್ಸಂದೇಹವಾಗಿ ಹೇಳಬಹುದು. ಈ ಸಂದರ್ಭದಲ್ಲಿ ನಾವು ನಮ್ಮ 9 ನೇ ಪ್ರಕಟಣೆಯಲ್ಲಿ ಪ್ರಸಿದ್ಧಿಸಿದ 'ಈ ವರ್ಷ ಹೆಚ್ಚು ಸದಸ್ಯರನ್ನು ಮಾಡಿದ ಜಿಲ್ಲೆಗೆ ಬೆಳ್ಳಿಯ ಢಾಲು (Shield) ಒಂದನ್ನು ಬಹುಮಾನವಾಗಿ ಕೊಡಲ್ಪಡುವುದು' ಎಂಬ ವಿಷಯವನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಗಳ ಗಮನಕ್ಕೆ ತರಬಯಸುತ್ತೇವೆ. ಕಾರಣ ಆಗಸ್ಟ್-ಸೆಪ್ಟೆಂಬರ್—ಈ ಎರಡು ತಿಂಗಳುಗಳಲ್ಲಿ ಪ್ರಾಂತದಲ್ಲಿಯ ಎಲ್ಲ ಕೆಲಸಗಾರರು ಮತ್ತು ಕಾಂಗ್ರೆಸ್ ಕಮಿಟಿಗಳು ಪ್ರಾಥಮಿಕ ಸದಸ್ಯರನ್ನು ಮಾಡುವ ಕೆಲಸವನ್ನು ಜೋರಿನಿಂದ ಸಾಗಿಸಬೇಕೆಂದು ನಮ್ಮ ನಮ್ರವಾದ ವಿನಂತಿ.

ಕಾಂಗ್ರೆಸ್ ಸದಸ್ಯರನ್ನು ಮಾಡುವಾಗ್ಯೆ ಈ ಕೆಳಗಿನ ವಿಷಯಗಳನ್ನು ನೆನಪಿನಲ್ಲಿಡಬೇಕು:—

1. ಸದಸ್ಯರನ್ನು ಮಾಡುವ ಪುಸ್ತಕದ ಪ್ರತಿಯೊಂದು ಪಾನಿನ ಮೇಲೂ

ವನಸ್ಪತಿ ವರ್ಗವೂ, ಜೇನು ನೊಣಗಳೂ.

(ಲೇಖಕ–ಪಿ. ಲಕ್ಷ್ಮೀನಾರಾಯಣರಾವ್, ಬೀ ಇನ್ಸ್ಪೆಕ್ಟರ್, ವೀರಾಜಪೇಟೆ.)

ಜೇನು ನೊಣಗಳ ಮುಖ್ಯ ಆಹಾರವು ಪುಷ್ಪರಸ ಮತ್ತು ಪರಾಗವಾಗಿರುವುದು. ಈ ಎರಡು ವಸ್ತುಗಳು ಗಿಡಮರಬಳ್ಳಿಗಳ ಪುಷ್ಪಗಳಲ್ಲಿ ದೊರೆಯುವುವೇ ಹೊರತು ಬೇರೆ ಸಿಗಲಾರವು. ಆದುದರಿಂದ ವನಸ್ಪತಿ ವರ್ಗವಿಲ್ಲದೆ ಜೇನು ನೊಣಗಳು ಜೀವಿಸಲಾರವೆಂಬುದು ನಿಶ್ಚಯ. ಇನ್ನು ಜೇನು ನೊಣಗಳಿಂದ ಗಿಡಮರಗಳಿಗೇನಾದರೂ ಪ್ರಯೋಜನವಿದೆಯೇ ಎಂದು ವಿಚಾರಿಸುವ:–

ಒಂದು ಮರದಲ್ಲಿ ಕಾಯಿ ಅಥವಾ ಫಲವಾಗಬೇಕಾದರೆ ಆ ಮರದಲ್ಲಿರುವ ಗಂಡು ಮತ್ತು ಹೆಣ್ಣು ಪುಷ್ಪಗಳ ಸಂಯೋಗ (Pollination) ವಾಗಬೇಕು. ಅದು ಹೇಗೆಂದರೆ–ಗಂಡು ಪುಷ್ಪದ ಪರಾಗಾಣುಗಳು ಹೆಣ್ಣು ಪುಷ್ಪದ ಶಲಾಕಾಗ್ರದಲ್ಲಿ ನೆಲಸಬೇಕು. ತರುವಾಯ ಆ ಪರಾಣುಗಳು ಶಲಾಕರಂಧ್ರದ ಮೂಲಕ ಬೀಜಾಶಯವನ್ನು ಸೇರುವನ್ನ ಕೂಡಲೇ ಬೀಜದ ಬೆಳವಣಿಗೆಯು ಪ್ರಾರಂಭಿಸುವುದು.

ಈ ತರಹದ ಗಂಡು ಮತ್ತು ಹೆಣ್ಣು ಪುಷ್ಪಗಳು ಒಂದೇ ಮರದಲ್ಲಿ ಇರುವುದೂ ಉಂಟು. ಇನ್ನು ಕೆಲವು ವರ್ಗದ ಮರಗಳಲ್ಲಿ ಒಂದೊಂದೇ ಜಾತಿಯ ಪುಷ್ಪಗಳೂ ಇರುತ್ತವೆ. ಮತ್ತೆ ಕೆಲವು ವರ್ಗದ ಮರಗಳಲ್ಲಿ ಗಂಡು ಮತ್ತು ಹೆಣ್ಣು ಎಂದು ಬೇರೆ ಬೇರೆ ಜಾತಿಯ ಪುಷ್ಪಗಳಿಲ್ಲದ ಪ್ರತಿಯೊಂದು ಪುಷ್ಪದಲ್ಲಿಯೂ ಆ ಎರಡರ ಭಾಗಗಳು ಸಮನವಾಗಿ ಬೆಳೆದುಕೊಂಡಿರುತ್ತವೆ. ಆದರೆ ಇಂಥ ಪುಷ್ಪದ ಅಂಡಾಶಯವೂ, ಪರಾಗಾಣುಗಳೂ ಏಕ ಕಾಲದಲ್ಲಿ ಪಕ್ವವಾಗದಿರುವುದರಿಂದ ಒಂದು ಪುಷ್ಪದ ಪರಾಗಾಣುಗಳು ಅದೇ ಪುಷ್ಪದ ಅಂಡಾಶಯವನ್ನು ಸೇರಲು ಅನುಕೂಲವಾಗದೆ ಇತರ ಪುಷ್ಪದ ಅಂಡಾಶಯವನ್ನು ಸೇರಬೇಕಾಗುತ್ತವೆ. ಹೀಗೆ ಈ ಎರಡು ಜಾತಿಯ ಪುಷ್ಪಗಳು ಮರದ ಬೇರೆ ಬೇರೆ ಕೊಂಬೆಗಳಲ್ಲಿ ಅಥವಾ ಬೇರೆ ಬೇರೆ ಮರಗಳಲ್ಲಿರುವುದರಿಂದಲೂ ಮತ್ತು ಗಂಡು ಮತ್ತು ಹೆಣ್ಣು ಎಂಬ ಭೇದವಿಲ್ಲದ ಪುಷ್ಪಗಳಿದ್ದಾಗ ಅವುಗಳ ಅಂಡಕೋಶಗಳೂ, ಪರಾಗಾಣುಗಳೂ ಏಕ ಕಾಲದಲ್ಲಿ ಬೆಳೆಯದಿರುವುದರಿಂದಲೂ ಅವುಗಳೊಳಗಿನ ಸಂಯೋಗವು ಹೇಗುಂಟಾಗುತ್ತದೆ ಎಂದು ತಿಳಿಯುವುದು ಅಗತ್ಯ.

ವನಸ್ಪತಿ ವರ್ಗಕ್ಕೆ ಚಲನಾಶಕ್ತಿಯು ಇಲ್ಲವಾದುದರಿಂದ ಈ ಪರಾಗ ಚಲನಾಕಾರ್ಯವು ಇತರ ಯಾವುದಾದರೂ ಸಾಧನದಿಂದ ನೆರವೇರತಕ್ಕದ್ದು. ಗಾಳಿ, ನೀರು, ಅನೇಕ ತರಹದ ಪತಂಗಗಳು ಮತ್ತು ಜೇನು ನೊಣಗಳು ಈ ಕಾರ್ಯವನ್ನು ನೆರವೇರಿಸುತ್ತವೆ. ಹೇಗೆಂದರೆ–ಗಾಳಿಯು ಬೀಸುವಾಗ ಬಹು ಹಗುರವಾದ ಪರಾಗಾಣುಗಳು ಗಾಳಿಯೊಡನೆ ಪುಷ್ಪದಿಂದ ಮೇಲಕ್ಕೆ ಕಳ್ಳಲ್ಪಟ್ಟು ಸಮೀಪದ ಪುಷ್ಪದ ಶಲಾಕಾಗ್ರದಲ್ಲಿ ನೆಲಸುತ್ತವೆ. ತರುವಾಯ ಅವು ಬೀಜಾಶಯವನ್ನು ಸೇರಿ ಫಲವುಂಟಾಗುವುದು. ಈ ರೀತಿ ಗಾಳಿಯ ಸಹಾಯದಿಂದ ಫಲವಾಗುವ ಗಿಡಮರಗಳ ಪುಷ್ಪಗಳು ಬಣ್ಣ ಮತ್ತು ಸುವಾಸನೆಯು ಳ್ಳವಾಗಿಲ್ಲದೆ ಅವುಗಳ ಪರಾಗಾಣುಗಳು ಬಹು ಹಗುರವಾಗಿಯೂ ಸೂಕ್ಷ್ಮವಾಗಿಯೂ ಇರುತ್ತವೆ. ಕಬ್ಬು, ಭತ್ತ, ರಾಗಿ, ಜೋಳ ಮೊದಲಾದ ಸಸಿಗಳಲ್ಲಿ ಮುಖ್ಯವಾಗಿ ಗಾಳಿಯ ಸಹಾಯದಿಂದಲೇ ಫಲವುಂಟಾಗುತ್ತದೆ.

ಕೆರೆಕುಂಟೆಗಳಲ್ಲಿ ಹಾವಸೆ ಮೊದಲಾದ ಗಿಡಗಳ ಪರಾಗಾಣುಗಳು ನೀರಲ್ಲಿ ತೇಲುತ್ತಿದ್ದು ಹೆಣ್ಣು ಪುಷ್ಪವನ್ನು ಸೇರುತ್ತವೆ. ಗಾಳಿಯಿಂದಲೂ, ನೀರಿನಿಂದಲೂ ಮೇಲೆ ವಿವರಿಸಿದ ಪರಾಗ ಚಲನಾಕಾರ್ಯವು ಹೆಚ್ಚಾಗಿ ನಡೆಯುವುದಿಲ್ಲ; ಅಲ್ಲದೆ ಜೇನು ನೊಣಗಳಿಂದಾಗುವಷ್ಟು ಉಪಕಾರಿಯೂ ಆಗುವುದಿಲ್ಲ. ಜೇನು ನೊಣಗಳು ತಮ್ಮ ಆಹಾರವಾದ ಪುಷ್ಪರಸ ಮತ್ತು ಪರಾಗವನ್ನು ಸಂಗ್ರಹಿಸುವುದಕ್ಕಾಗಿ ಪಗಲೆಲ್ಲಾ ಪುಷ್ಪಗಳನ್ನು ಸಂದರ್ಶಿಸುತ್ತಲೇ ಇರುತ್ತವೆ. ಒಂದರಿಂದ ಇನ್ನೊಂದು ಪುಷ್ಪಕ್ಕೆ ಅವು ಹಾರಾಡುವ ವೇಳೆ ಒಂದು ಪುಷ್ಪದ ಪರಾಗವು ಇನ್ನೊಂದರಲ್ಲಿ ಬೀಳುವುದು ಸ್ವಾಭಾವಿಕ. ನೊಣವು ಒಂದು ಪುಷ್ಪದ ಮೇಲೆರಗಿದೊಡನೆಯೇ ಅದರಲ್ಲಿರುವ ಪರಾಗಾಣುಗಳು ನೊಣದ ಒರಟಾದ ಕಾಲುಗಳಲ್ಲಿ ಸೇರಿಕೊಂಡು ಅದು ಇನ್ನೊಂದು ಪುಷ್ಪವನ್ನು ಸಂದರ್ಶಿಸುವಾಗ ಅದರ ಶರೀರದಲ್ಲಿ ಸಿಕ್ಕಿದ ಪರಾಗಾಣುಗಳು ಅದರ ಶಲಾಕಾಗ್ರದಲ್ಲಿ ಸೇರಿಕೊಳ್ಳುವುವು. ಈ ರೀತಿ ಒಂದು ತಾಸಿನೊಳಗೆ ಒಂದು ನೊಣದಿಂದ ನೂರಾರು ಪುಷ್ಪಗಳು ಫಲವತ್ತಾಗುವುವು. ಒಂದು ಜೇನು ನೊಣವು ತನ್ನ ಗೂಡನ್ನು ಬಿಟ್ಟು ಪುನಃ ಗೂಡನ್ನು ಸೇರುವುದರೊಳಗೆ ಒಂದೇ ಜಾತಿಯ ಪುಷ್ಪಗಳನ್ನು ಮಾತ್ರ ಸಂದರ್ಶಿಸುವುದಲ್ಲದೆ ಇತರ ಜಾತಿಯ ಪುಷ್ಪಗಳ ಮೇಲೆರಗದು. ಇದರಿಂದ ಒಂದು ವರ್ಗದ ಮರಗಳ ಪುಷ್ಪಗಳ ಪರಾಗಾಣುಗಳು ಇನ್ನೊಂದು ಜಾತಿಯ ಮರದ ಪುಷ್ಪಗಳಲ್ಲಿ ಸೇರಿ ನಿಷ್ಫಲವಾಗುವ ಸಂಭವವಿಲ್ಲ. ಹೀಗೆ ಮರಗಿಡಗಳಿಗೆ ಜೇನು ನೊಣಗಳ ಸಹಾಯವು ಎಷ್ಟು ಅವಶ್ಯವೆಂದು ತಿಳಿಯಬಹುದು.

ವನಸ್ಪತಿ ವರ್ಗಕ್ಕೆ ಜೇನು ನೊಣಗಳನ್ನು ತನ್ನ ಕಡೆಗೆ ಆಕರ್ಷಿಸಲು ಹಲವು ಸಾಧನಗಳಿವೆ. ಮೊದಲನೆಯದಾಗಿ, ಪುಷ್ಪದ ಅಂದವಾದ ಬಣ್ಣದಿಂದಲೂ, ಎರಡನೆಯದಾಗಿ, ಅದರ ಸುವಾಸನೆಯಿಂದಲೂ ಜೇನು ನೊಣಗಳನ್ನೂ, ಇತರ ಕ್ರಿಮಿಗಳನ್ನೂ ತನ್ನ ಕಡೆಗೆ ಆಕರ್ಷಿಸುತ್ತದೆ. ರಾತ್ರಿ ಕಾಲದಲ್ಲಿ ಅರಳುವ ಪುಷ್ಪಗಳಿಗೆ ಪರಿಮಳವು ಹೆಚ್ಚಿರುವುದಕ್ಕೂ, ಅವುಗಳ ಬಣ್ಣವು ಬಿಳಿಯಾಗಿರುವುದಕ್ಕೂ ಜೇನು ನೊಣಗಳನ್ನು ತನ್ನ ಕಡೆಗೆ ಆಕರ್ಷಿಸುವ ಉದ್ದೇಶವೇ ಕಾರಣ. ರಾತ್ರಿ ಕಾಲದಲ್ಲಿ ಬಿಳಿ ಹೊರತು ಇತರ ಬಣ್ಣಗಳು ನಿಷ್ಫಲವಾಗುವುದರಿಂದ ಪರಿಮಳವು ಹೆಚ್ಚಿನ ಸಹಕಾರಿಯಾಗಿದೆ. ಹಗಲು ಹೊತ್ತಿನಲ್ಲಿ ಬಣ್ಣವೇ ಮುಖ್ಯ. ಇವೇ ಮುಂತಾದ ಸಾಧನಗಳಿಂದ ವನಸ್ಪತಿ ವರ್ಗವು ಜೇನು ನೊಣಗಳನ್ನು ತನ್ನ ಕಡೆಗೆ ಬರಮಾಡುತ್ತದೆ. ಹೀಗೆ ಇವುಗಳೊಳಗಿರುವ ಪರಸ್ಪರ ಸಹಾಯ ಮತ್ತು ಸಹಕಾರವು ಬಹಳ ಗಾಢವಾದುದು.

ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಸೀಲು ಇದ್ದುದನ್ನೇ ಉಪಯೋಗಿಸಬೇಕು.

2. ಸದಸ್ಯನ ಪೂರ್ಣ ಹೆಸರು, ಊರು, ಓಣಿ, ಉದ್ಯೋಗ ಇವುಗಳನ್ನು ಸಂಪೂರ್ಣವಾಗಿ ಬರೆಯಬೇಕು.

3. ಸದಸ್ಯನಾಗುವವನ ಸಹಿಯನ್ನು 'ಪ್ರತಿಜ್ಞಾ ಪತ್ರ' (Membership form.) ದ ಮೇಲೆ ತೆಗೆದುಕೊಳ್ಳಲೇಬೇಕು.

4. ಜಿಲ್ಲಾ ಕಾಂಗ್ರೆಸ್ ಕಮಿಟಿಗಳಿಗೆ ಯಾದಿಯನ್ನೊಪ್ಪಿಸುವಾಗ್ಯೆ ಎಲ್ಲ ಪುಸ್ತಕಗಳನ್ನು ತಿರುಗಿ ಕೊಡುವದಲ್ಲದ ಯಾದಿಯಲ್ಲಿ ಅನುಕ್ರಮ ನಂಬರು, ಸದಸ್ಯನಾದ ತಾರೀಕು, ಪೂರ್ಣ ಹೆಸರು, ಪೂರ್ಣ ವಿಳಾಸ, ಉದ್ಯೋಗ, ವಯಸು–ಇವುಗಳೆಲ್ಲವನ್ನೂ ಬರೆಯಬೇಕು.

5. 'ಹಳ್ಳಿಗರ' ಮತ್ತು 'ಪಟ್ಟಣಿಗರ' ಯಾದಿಯನ್ನು ಬೇರೆ ಬೇರೆ ಕೊಡುವದಲ್ಲದೆ ಎರಡರಲ್ಲಿಯೂ ಮುಸಲ್ಮಾನ ಸದಸ್ಯರ ಹೆಸರನ್ನು ವಿಶಿಷ್ಟ ರೀತಿಯಿಂದ ಗುರ್ತಿಸಬೇಕು. ಹಾಗೂ ಕೊನೆಗೆ ಅವರ ಒಟ್ಟು ಸಂಖ್ಯೆಯನ್ನು ಕೊಡಬೇಕು.

6. ಯಾದಿಯೊಡನೆ ಕೊಟಾ ಹಣವನ್ನಾದರೂ ಪೂರ್ಣವಾಗಿ ಕೊಡಬೇಕು.

ಗುಷ್ಟೆಪ್ಪ ಹಳ್ಳಿಕೇರಿ,
ಪ್ರ. ಕಾರ್ಯದರ್ಶಿ.

ಚೈನಾ-ಜಪಾನ್ ಯುದ್ಧ.

ಚೈನೀಯರಿಗೆ ಸಹಾಯಕೊಡಲು ರಷ್ಯಾದ 20 ಸಾವಿರ ಸೈನ್ಯ ಶಾಸ್ತ್ರನಿಪುಣರೂ 200 ಮಂದಿ ವಿಮಾನ ನಡೆಸುವವರೂ ನಾಂಕಿಂ ನಗರಕ್ಕೆ ಬಂದು ಸೇರಿರುವರು.

ಚೀನೀಯರು ತಮ್ಮ ಕಿಯೂಕಿಯಾಂಗ್ ಯುದ್ಧರಂಗದಲ್ಲಿ ರಕ್ಷಣಾಬಲಗಳನ್ನು ಹೆಚ್ಚಿಸಿ ಜಪಾನಿಯರನ್ನು ಎದುರಿಸಿ ಕಾದಾಡಿದರು. ಹೊಕೌವಿನ ಬಳಿ ಜಪಾನಿ ಹಡಗುಗಳ ಮೇಲೆ ಬಾಂಬೆಸದಿದ್ದು ಕಿಯೂಕಿಯಾಂಗಿನ ದಕ್ಷಿಣದಲ್ಲೂ ಸೈರುತ್ಯದಲ್ಲೂ ಜಪಾನಿನ ಮತ್ತು ಚೀನೀ ಸೈನ್ಯಗಳು ಸಂಧಿಸಿದಾಗ ಘೋರ ಕದನವಾಯಿತು. ಜಪಾನು 200000 ಜನಾತ ಸೈನ್ಯದಿಂದಲೂ, ಯುದ್ಧದ ಹಡಗುಗಳಿಂದಲೂ, ವಿಮಾನಗಳ ಸಹಾಯದಿಂದಲೂ ಮೂರು ದಿನಗಳ ವರೆಗೆ ಚೀನೀಯರೊಡನೆ ಕಾದಾಡಿದರು. ಈ ಯುದ್ಧದಲ್ಲಿ ಜನರಲ್ ಚಿಯಾಂಗ್ ಕೈಶೇಕ್‌ರವರ ಪ್ರಖ್ಯಾತ ಸೈನ್ಯದಳವೂ ಇದ್ದಿತು. ಇವರು ಎಷ್ಟೆ ಧೈರ್ಯದಿಂದ ಕಾದಾಡಿದರೂ ಸಹ, ಜಪಾನರ ವಿಮಾನ ಸೈನ್ಯಗಳೂ, ಹಡಗು ಪಡೆಗಳೂ ಸಿಡಿಮದ್ದುಗಳನ್ನೂ, ಗುಂಡುಗಳನ್ನೂ ಇವರ ಮೇಲೆ ಸುರಿಸಿ ಇವರ ಪ್ರಯತ್ನವನ್ನು ವಿಫಲಮಾಡಿದವು. ಈ ರೀತಿ ಚೀನೀಯರು ವಿಶೇಷ ನಷ್ಟಗೊಂಡು ಹಿಮ್ಮೆಟ್ಟಬೇಕಾಯಿತು. ಕಳೆದ ಎರಡು ದಿನಗಳಿಂದ ಕಿಯೂಕಿಯಾಂಗ್ ನಗರವು ಜಪಾನರ ಭೀಕರವಾದ ದಾಳಿಗೆ ತುತ್ತಾಗಿ ಭಗ್ನಾವಶೇಷವಾಗಿದೆ.

ಈ ನಗರವನ್ನು ವಶಪಡಿಸಿಕೊಂಡು ಜಪಾನರು ಮುಂದೆ ನುಗ್ಗಲು ಯತ್ನಿಸುತ್ತಿರುವರು. ಇವರನ್ನು ಪ್ರತಿಭಟಿಸಲು ಚೀನೀಯರು ಮುಂದಾಗುತ್ತಿರುವರು.

ರಷ್ಯಾ ಜಪಾನರ ಘರ್ಷಣೆ.

ಚೀನಾದೇಶದ ಗಡಿಯಿಂದಾಚೆ ಉತ್ತರ ದಿಗ್ಭಾಗದಲ್ಲಿ ಮಾಂಚುಕ್ವೋ ರಾಜ್ಯದ ಎಲ್ಲೆಯಲ್ಲಿ ರಷ್ಯಾ ಸರಕಾರದವರಿಗೆ ಸೇರಿದ ಭೂಪ್ರದೇಶವಿದೆ. ಇಲ್ಲಿ ಕೆಲವು ದಿನಗಳಿಂದಲೂ ಜಪಾನ್ ರಷ್ಯಾದವರೊಳಗೆ ಗಲಭೆಗಳು ಉಂಟಾಗುತ್ತಿವೆ. ರಷ್ಯಾ ದೇಶದ ಅಧಿಕಾರಿಗಳು ಮಾಂಚುಕ್ವೋ ಗಡಿಯಲ್ಲಿರುವ ಅವರ ಭೂಪ್ರದೇಶವನ್ನು ಸುಮಾರು 2½ ಮೈಲುಗಳ ವರೆಗೆ ಜಪಾನರ ಆಕ್ರಮಿಸಿಕೊಂಡು, ಅಲ್ಲಿಯ ರಷ್ಯಾ ಕಾವಲುಗಾರರ ಮೇಲೆ ಗುಂಡು ಹಾರಿಸಿದರೆಂದೂ, ಇದರ ಪರಿಣಾಮವಾಗಿ ಆರು ಗಂಟೆಗಳ ವರೆಗೆ ಯುದ್ಧ ನಡೆದು ರಷ್ಯಾ ದೇಶದ 30 ಮಂದಿ ಯೋಧರು ಹತರಾಗಿರುವರೆಂದೂ ಪ್ರಕಟಿಸಿರುವರು. ಅಲ್ಲದೆ ಈಚೆಗೆ ಜಪಾನದೇಶದ ಕಸುಬ್ದಾರ ... ಕ್ಷದ ಸೈನಿಕರು ಮಾಂಚುಕ್ವೋ ರಾಜ್ಯದೊಳಕ್ಕೆ ನುಗ್ಗಿ ಅಲ್ಲಿನ ಕೆಲವು ಗ್ರಾಮಗಳ ಜನರನ್ನು ಜಪಾನರಿಗೆ ಎದುರು ಬೀಳುವಂತೆ ಪ್ರೇರೇಪಿಸುತ್ತಿರುವರೆಂದೂ ಹೇಳಲಾಗಿದೆ.

ಮಾಂಚುಕ್ವೋ ಗಡೀ ಪ್ರದೇಶದಲ್ಲಿ ಜಪಾನರು ಎರಡು ಸಾರಿ ರಷ್ಯಾ ಸೈನಿಕರನ್ನು ಹಿಂದಕ್ಕೆ ಅಟ್ಟಿ ಅವರು ಆಕ್ರಮಿಸಿದ್ದ ಪ್ರದೇಶಗಳನ್ನು ವಶಮಾಡಿಕೊಂಡಿರುವರೆಂದೂ, ರಷ್ಯಾದವರ 1800 ಮಂದಿ ಸೈನಿಕರು ಆ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನಿಸಿದಾಗ ಜಪಾನರ ಬಂದೂಕುಗಳೂ ಅವರನ್ನು ಚದರಿಸಿದವೆಂದೂ ತಿಳಿದು ಬಂದಿದೆ.

ನೋಟೀಸು.

ಸೆಂಟ್ರಲ್ ಬ್ಯಾಂಕಿನಲ್ಲಿ ಫಿಕ್ಸ್ಡ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-7-37ನೆ ಆಗಾಯಿತು ತಾ. ... ಗಳಿಂದ ನಿಲ್ಲಿಸಲಾಗಿತ್ತು. ಆದರೆ ಪುನಃ ಡಿಪಾಜಿಟ್ಟನ್ನು ತಾ. 1-8-38ರಿಂದ ಪುನಹ ಹೊಂದಿಕೊಳ್ಳಬಹುದಾಗಿ ಡೈರೆಕ್ಟರುಗಳು ತಮ್ಮ ತಾ. 30-7-38ರ ಮೀಟಿಂಗಿನಲ್ಲಿ ತೀರ್ಮಾನಿಸಿರುವುದರಿಂದ ಆ ಪ್ರಕಾರ ಬ್ಯಾಂಕಿನಲ್ಲಿ ಫಿಕ್ಸ್ಡ ಡಿಪಾಜಿಟ್ಟನ್ನು ಹೊಂದಿಕೊಳ್ಳಲಾಗುತ್ತೆ ಎಂಬದನ್ನು ಈ ಮೂಲಕ ತಿಳಿಸೋಣವಾಗಿದೆ.

ಪಿ. ಟಿ. ಐಯ್ಯಪ್ಪ,
(ಗೌರವ ಕಾರ್ಯದರ್ಶಿ)

ಕೊಡಗು

ಅಗೊಸ್ಟು ತಾರೀಖು ೫ನೇ ಶುಕ್ರವಾರ ೧೯೩೮.

ಮಧ್ಯಪ್ರಾಂತ್ಯದ ಮಂತ್ರಿಮಂಡಲದ ಗೊಂದಲ.

ಹಿಂದೂ ದೇಶದಲ್ಲಿ ಕಳೆದ ವರ್ಷ ನಡೆದ ಎಸೆಂಬ್ಲಿ ಮತ್ತು ಕೌನ್ಸಿಲು ಚುನಾವಣೆಗಳಲ್ಲಿ ಬಹುಮತ ಪಡೆದು ಕಾಂಗ್ರೆಸ್ಸಿನವರು ಅಧಿಕಾರ ಸ್ವೀಕಾರ ಮಾಡಿದ ಏಳು ಪ್ರಾಂತ್ಯಗಳಲ್ಲಿ ಮಧ್ಯಪ್ರಾಂತ್ಯ ಒಂದಾಗಿದೆ. ಅಲ್ಲಿಯ ಎಸೆಂಬ್ಲಿ ಮೆಂಬರುಗಳು ಡಾಕ್ಟರ್ ಖಾರೆಯವರನ್ನು ಮುಂದಾಳಾಗಿ ಆರಿಸಿಕೊಂಡದ್ದರಿಂದ ಅವರು ಪ್ರಧಾನ ಮಂತ್ರಿಯಾಗಿ ಮಂತ್ರಿ ಮಂಡಲಿಯನ್ನು ರಚಿಸಿದರು. ಅವರು ಅಲ್ಲಿಯ ಸರಕಾರವನ್ನು ನಡೆಸುತ್ತಾ ಬರುತ್ತಿರುವಾಗ್ಯೆ ಅವರ ಮಂತ್ರಿ ಮಂಡಲಿಯೊಳಗೆ ಭಿನ್ನಾಭಿಪ್ರಾಯ ಉಂಟಾಯಿತು. ಅದನ್ನು ಸರಿಪಡಿಸಲು ಕಾಂಗ್ರೆಸ್ ಪಾರ್ಲಿಮೆಂಟರಿ ಸಬ್ ಕಮಿಟಿ ಮೆಂಬರುಗಳ ಸಹಾಯವನ್ನು ಕೋರಿದರು. ಹಾಗೆಯೇ ಕೆಲವು ಕಾಂಗ್ರೆಸು ಧುರೀಣರು ಇವರೊಳಗೆ ರಾಜಿಯನ್ನು ಮಾಡಿದರು. ಆದರೆ ಈ ರಾಜಿ ತೀರ್ಮಾನವು ದೀರ್ಘಕಾಲ ಬಾಳಲಿಲ್ಲ. ಪುನಹ ಕೆಲವು ಮಂತ್ರಿಗಳಿಗೆ ಪ್ರಧಾನರ ಮೇಲೆ ವಿಶ್ವಾಸ ಕಮ್ಮಿಯಾಯಿತು. ಈ ಸಾರಿ ಅದನ್ನು ಕಾಂಗ್ರೆಸ್ ಪಾರ್ಲಿಮೆಂಟರಿ ಸಬ್ ಕಮಿಟಿಯ ಆಲೋಚನೆಗೆ ಬಿಡದೆ ಪ್ರಧಾನರು ತಾವಾಗಿಯೇ ಕಾರ್ಯವನ್ನು ನಡಿಸಿದರು. ತನಗೆ ಒಪ್ಪದ ಮಂತ್ರಿಗಳನ್ನು ತೆಗೆದು ಹಾಕುವ ಪ್ರಯತ್ನ ಮಾಡಿದರು. ಅದಕ್ಕೆ ಅವರಿಗೆ ವಿರೋಧವಿದ್ದ ಮಂತ್ರಿಗಳು ಸಮ್ಮತಿಸಲಿಲ್ಲ. ತಾವೂ, ತಮ್ಮ ಜೊತೆಗಾರ ಇನ್ನಿಬ್ಬರು ಮಂತ್ರಿಗಳೂ ತಮ್ಮ ಪದವಿಗೆ ರಾಜಿನಾಮೆ ಬರೆದು ಗವರ್ನರಿಗೆ ಕೊಟ್ಟರು. ಅದನ್ನು ಗವರ್ನರರು ಅಂಗೀಕರಿಸಿದರು. ಆದರೆ ಖಾರೆಯವರಿಗೆ ವಿರುದ್ಧವಿದ್ದ ಮೂವರು ಮಂತ್ರಿಗಳು ಕಾಂಗ್ರೆಸ್ ಪಾರ್ಲಿಮೆಂಟರಿ ಸಬ್ ಕಮಿಟಿಯವರನ್ನು ಕೇಳದೆ ರಾಜಿನಾಮೆ ಕೊಡಲು ಒಪ್ಪಲಿಲ್ಲ. ಗವರ್ನರರವರು ತಮ್ಮ ವಿಶೇಷ ಅಧಿಕಾರವನ್ನು ಉಪಯೋಗಿಸಿ, ಈ ಮೂವರನ್ನು 'ಡಿಸ್‌ಮಿಸ್' ಮಾಡಿದರು. ಕೂಡಲೆ ಡಾ. ಖಾರೆಯವರು ತನ್ನ ಜೊತೆಗಾರರೊಡನೆ ಇನ್ನಿಬ್ಬರನ್ನು ಮಂತ್ರಿಗಳಾಗಿ ನೇಮಿಸಿಕೊಂಡು ಹೊಸ ಮಂತ್ರಿ ಮಂಡಲಿಯನ್ನು ಏರ್ಪಡಿಸಿದರು. ಅದನ್ನು ಗವರ್ನರರವರು ಅಂಗೀಕರಿಸಿದರು.

ಇಷ್ಟರಲ್ಲಿ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯು ವಾರ್ಧಾದಲ್ಲಿ ಸೇರಿತು. ಈ ವಿಷಯವು ಈ ಕಮಿಟಿಯವರಿಂದ ದೀರ್ಘವಾಗಿ ಪರ್ಯಾಲೋಚಿಸಲ್ಪಟ್ಟಿತು. ಮಹಾತ್ಮ ಗಾಂಧಿಯವರೂ ಈ ವಿಚಾರದಲ್ಲಿ ಕೈಹಾಕಬೇಕಾಗಿ ಬಂತು. ಡಾ. ಖಾರೆಯವರನ್ನು ಕರೆಸಿ ವಿಚಾರ ಮಾಡಲಾಯಿತು. ವರ್ಕಿಂಗ್ ಕಮಿಟಿಯ ಮೀಟಿಂಗು ಬೇಗನೆ ಸೇರಲಿರುವುದೆಂದು ತಿಳಿದರೂ ಕೂಡ, ಅದನ್ನು ಕಾಯದೆ ಮತ್ತು ಪಾರ್ಲಿಮೆಂಟರಿ ಸಬ್ ಕಮಿಟಿಯವರ ಆಲೋಚನೆ ಕೇಳದೆ ಡಾ. ಖಾರೆಯವರು ಅವಸರದಲ್ಲಿ ಮಂತ್ರಿಪದವಿಗೆ ರಾಜಿನಾಮೆಕೊಟ್ಟದ್ದೂ, ಪುನಃ ಹೊಸ ಮಂತ್ರಿ ಮಂಡಲಿಯನ್ನು ರಚಿಸಿದ್ದೂ ತಪ್ಪೆಂತಲೂ, ಇದು ಕಾಂಗ್ರೆಸ್ಸಿನ ಶಿಸ್ತಿಗೆ ವಿರೋಧವೆಂತಲೂ ಮಹಾತ್ಮ ಗಾಂಧಿಯವರು ಹಾಗೂ ವರ್ಕಿಂಗ್ ಕಮಿಟಿಯವರು ಅಭಿಪ್ರಾಯ ಪಟ್ಟದಕ್ಕೆ ಖಾರೆಯವರು ಒಪ್ಪಿದರು. ಹಾಗೆಯೇ ಅವರು ಪುನಹ ಮುಂದಾಳುತನಕ್ಕೆ ಯತ್ನಿಸಬಾರದೆಂದೂ ಸೂಚಿಸಲಾಯಿತು. ಆದರೆ ಅವರು ವಾರ್ಧಾದಿಂದ ನಾಗಪುರಕ್ಕೆ ಹಿಂತಿರುಗಿ, ಮೇಲಿನ ಅಭಿಪ್ರಾಯಕ್ಕೆ ತನಗೆ ಸಮ್ಮತಿಸಲಾಗುವುದಿಲ್ಲವೆಂದು ತಿಳಿಸಿ, ಮತ್ತೊಂದು ಅಪರಾಧಕ್ಕೆ ಗುರಿಯಾದರು. ಆದುದರಿಂದ ವರ್ಕಿಂಗ ಕಮಿಟಿಯವರು ಖಾರೆಯವರು ಜವಾಬ್ದಾರಿ ಪದವಿಯನ್ನು ವಹಿಸಲು ಅನರ್ಹರೆಂದು ತೀರ್ಮಾನಿಸಿದರು. ನಂತರ ಮಧ್ಯಪ್ರಾಂತ್ಯದ ಎಸೆಂಬ್ಲಿಯ ಕಾಂಗ್ರೆಸು ಪಕ್ಷದ ಮೆಂಬರುಗಳ ಸಭೆ ಸೇರಿ ಪಂಡಿತ ರವಿಶಂಕರ ಶುಕ್ಲರವರು ಮುಂದಾಳಾಗಿ ಆರಿಸಲ್ಪಟ್ಟರು. ಇವರು ಈ ಮೊದಲು ಖಾರೆಯವರಿಗೆ ವಿರುದ್ಧವಿದ್ದು ಗವರ್ನರರಿಂದ 'ಡಿಸ್‌ಮಿಸ್' ಮಾಡಲ್ಪಟ್ಟ ಮಂತ್ರಿಗಳಲ್ಲಿ ಒಬ್ಬರು. ಇವರೀಗ ಪ್ರಧಾನರಾಗಿ ಅಲ್ಲಿಯ ಮಂತ್ರಿ ಮಂಡಲಿಯನ್ನು ಹೊಸದಾಗಿ ರಚಿಸಿರುವರು. ಇವರ ಪ್ರಧಾನ ಮಂತ್ರಿತನವು ಹೇಗೆ ನಡೆಯುವುದೋ ಇನ್ನು ನೋಡಬೇಕಷ್ಟೆ.

ಡಾ. ಖಾರೆಯವರ ವರ್ತನೆಯ ವಿಚಾರವಾಗಿಯೂ, ಅದರ ಸಲುವಾಗಿ ವರ್ಕಿಂಗ್ ಕಮಿಟಿಯವರು ಮಾಡಿದ ತೀರ್ಮಾನವನ್ನು ಕುರಿತೂ ಅಲ್ಲಲ್ಲಿ ಟೀಕೆಗಳು ಕೇಳಿಬರುತ್ತಿವೆ. ಮಧ್ಯಪ್ರಾಂತ್ಯದ ಎಸೆಂಬ್ಲಿಯ ಮೆಂಬರುಗಳು ಖಾರೆಯವರನ್ನು ಮುಂದಾಳಾಗಿ ಆರಿಸಿಕೊಂಡ ಮೇಲೆ ಅವರಿಂದ ನೇಮಿಸಲ್ಪಟ್ಟ ಅಲ್ಲಿಯ ಮಂತ್ರಿಗಳು ಅವರು ಹೇಳಿದ ಹಾಗೆ ಕೇಳಬೇಕಿತ್ತೆಂತಲೂ, ಮಂತ್ರಿ ಮಂಡಲಿಯು ರಾಜಿನಾಮೆಕೊಟ್ಟ ಮೇಲೆ ಮುಂದಾಳನ್ನು ಆರಿಸುವ ವಿಚಾರದಲ್ಲಿ ವರ್ಕಿಂಗ್ ಕಮಿಟಿಯವರು ಕೈ ಹಾಕಿದ್ದು ಸರಿಯಲ್ಲವೆಂತಲೂ ಕೆಲವರ ಅಭಿಪ್ರಾಯವಾಗಿದೆ. ಆದರೆ ಇಲ್ಲಿ ಪ್ರಧಾನರಾದ ಖಾರೆಯವರ ವರ್ತನೆಯೇ ಹೆಚ್ಚು ಪ್ರಾಮುಖ್ಯವಾದದ್ದು. ಕಾಂಗ್ರೆಸು ಮಂತ್ರಿಗಳೆಲ್ಲರೂ ತಮ್ಮ ಕಾರ್ಯಕಲಾಪಗಳನ್ನು ಪಾರ್ಲಿಮೆಂಟರಿ ಸಬ್ ಕಮಿಟಿಯವರ ಅಧೀನಕ್ಕೊಳಪಟ್ಟು ನಡಿಸಬೇಕೆಂದಿರುವಾಗ್ಯೆ ಮತ್ತು ಈ ಮೊದಲೊಮ್ಮೆ ತಮ್ಮೊಳಗೆ ಭಿನ್ನಾಭಿಪ್ರಾಯ ಉಂಟಾಗಿದ್ದಾಗ್ಯೆ ಆ ಸಬ್ ಕಮಿಟಿಯ ಸಹಾಯ ತೆಗೆದುಕೊಂಡಿದ್ದು, ಈಗ ಖಾರೆಯವರು ಪಾರ್ಲಿಮೆಂಟರಿ ಸಬ್ ಕಮಿಟಿಯ ಆಲೋಚನೆ ಕೇಳದೆ ಮತ್ತು ಒಂದೆರಡು ದಿವಸಗಳಲ್ಲಿ ಸೇರಲಿಕ್ಕಿದ್ದ ವರ್ಕಿಂಗ್ ಕಮಿಟಿಯ ಮೀಟಿಂಗನ್ನೂ ಕಾಯದೆ, ತಮ್ಮ ಮನಸ್ಸೋಇಚ್ಛೆ ಮಂತ್ರಿ ಪದವಿಗೆ ರಾಜಿನಾಮೆಕೊಟ್ಟು, ಮತ್ತು ಪುನಹ ಹೊಸ ಮಂತ್ರಿ ಮಂಡಲಿಯನ್ನು ಏರ್ಪಡಿಸಿದ್ದು ಕಾಂಗ್ರೆಸ್ಸಿನ ಶಿಸ್ತನ್ನು ಮುರಿದಂತಾಯಿತು ಎಂಬುದರಲ್ಲಿ ಸಂಶಯವಿಲ್ಲ. ಇವರ ಈ ತರಹದ ವರ್ತನೆಯಿಂದಲೇ ಅಲ್ಲಿಯ ಗವರ್ನರರು ತಮ್ಮ ವಿಶೇಷ ಅಧಿಕಾರ ಬಲದಿಂದ ಮೂವರು ಮಂತ್ರಿಗಳನ್ನು 'ಡಿಸ್‌ಮಿಸ್' ಮಾಡಿದ್ದಾಗಿದೆ. ಕಾಂಗ್ರೆಸು ಅಧಿಕಾರ ಸ್ವೀಕಾರ ಮಾಡಿದಂದಿನಿಂದ ಗವರ್ನರರು ಮಂತ್ರಿಗಳ ಸಮ್ಮಂಧ ಹೀಗೆ ವರ್ತಿಸಿದ್ದು ಇದೇ ಪ್ರಥಮ. ಇದು ಕಾಂಗ್ರೆಸ್ಸಿನ ಕೀರ್ತಿಗೆ ಕುಂದುಂಟುಮಾಡಿದೆ. ಮಾತ್ರವಲ್ಲ, ಡಾ. ಖಾರೆಯವರು ಮಹಾತ್ಮ ಗಾಂಧಿಯವರ ಸಮಕ್ಷಮ ತಾನು ಅವಸರದಲ್ಲಿ ಮಾಡಿದ ತಪ್ಪನ್ನು ಒಪ್ಪಿದರೂ, ನಾಗಪುರಕ್ಕೆ ಹಿಂತಿರುಗಿದ ಮೇಲೆ ತಾನು ಮುಂದಾಳ್ತನದ ಸೂಚನೆಗೆ ಸಮ್ಮತಿಸುವುದಿಲ್ಲವೆಂದು ಹೇಳಿದ್ದು ಖಾರೆಯವರಂಥಾ ಕಾಂಗ್ರೆಸ್ ಪ್ರಧಾನರಿಗೆ ಯೋಗ್ಯವಲ್ಲ. ಕಾಂಗ್ರೆಸ್ ಸಂಸ್ಥೆಯು ಹಿಂದೂಸ್ಥಾನದ ಸ್ವಾತಂತ್ರ್ಯವನ್ನು ಪಡೆಯಲು ನಡಿಸುತ್ತಿರುವ ಮಹಾ ಹೋರಾಟದಲ್ಲಿ ಶಿಸ್ತಿಗೆ ಮಹತ್ತಾದ ಪ್ರಾಮುಖ್ಯತೆಯನ್ನು ಕೊಡಬೇಕಾದದ್ದು ಅತ್ಯವಶ್ಯ. ಅದನ್ನು ನಿಯಮವಾಗಿ ಪರಿಪಾಲಿಸದಿದ್ದರೆ ಕಾಂಗ್ರೆಸ್ ಕಮಿಟಿಗಳ ಸರಪಳಿಯ ಕೊಂಡಿಗಳು ಸಡಿಲವಾಗಿ ಕಾಂಗ್ರೆಸ್ಸಿನ ಶಕ್ತಿಯು ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಡಾ. ಖಾರೆಯವರು ಕಾಂಗ್ರೆಸ್ಸಿನ ಶಿಸ್ತನ್ನು ಉಲ್ಲಂಘನೆ ಮಾಡಿ ಕಾಂಗ್ರೆಸ್ಸಿನ ಪ್ರತಿಷ್ಠೆಯು ಕಡಿಮೆಯಾಗುವಂತೆ ಮಾಡಿದ ವರ್ತನೆಗೆ ವರ್ಕಿಂಗ್ ಕಮಿಟಿಯವರು ನ್ಯಾಯವಾದ ತೀರ್ಪನ್ನು ಕೊಟ್ಟಿರುವರು. ಇದು ಕಠಿಣವಾದ ತೀರ್ಪೆಂದು ಕೆಲವರಿಗೆ ತೋರಬಹುದು. ಆದರೆ ಸ್ವಾತಂತ್ರ್ಯ ಹೋರಾಟದ ಪರಿಸ್ಥಿತಿಯು ಹಾಗಿದೆ. ಕಾಂಗ್ರೆಸ್ಸಿನ ಶಕ್ತಿಯನ್ನೂ, ಒಗ್ಗಟ್ಟನ್ನೂ ಕಾಪಾಡಲು ಇಂಥಾ ನಿರ್ದಾಕ್ಷಿಣ್ಯದ ತೀರ್ಮಾನವು ಅವಶ್ಯವಾಗಿದೆ. ಇದರಿಂದ ಕಾಂಗ್ರೆಸ್ ಕೆಲಸಗಾರರು ಕಾಂಗ್ರೆಸ್ಸಿನ ಪ್ರತಿಷ್ಠೆಗೆ ಕುಂದಕ ಬಾರದ ರೀತಿಯಲ್ಲಿ ವರ್ತಿಸುವಂತೆ ಅವರನ್ನು ಎಚ್ಚರಿಸಿದಂತಾಗಿದೆ.

ಶಾಲಾ ಇನ್ಸ್‌ಪೆಕ್ಟರ ಹುದ್ದೆ.

ಬೆಂಗಳೂರು ಕಂಟೋನ್ಮೆಂಟಿನ ಶಾಲಾ ಇನ್ಸ್‌ಪೆಕ್ಟರರವರು ಕೊಡಗಿನ ವಿದ್ಯಾ ಇಲಾಖೆಯ ಮೇಲಧಿಕಾರಿಯಾಗಿರುವರು. ಇವರ ಮತ್ತು ಇವರ ಸಿಬ್ಬಂದಿಯ ಸಂಬಳಕ್ಕಾಗಿ ಈಗ ಕೊಡಗು ಸರಕಾರದಿಂದ ವರ್ಷಕ್ಕೆ 8,000 ರೂ. ವಂತಿಗೆ ಕೊಡಲ್ಪಡುತ್ತಿದೆ. ಆದರೆ ಇವರು ವರ್ಷದ ಕೆಲವು ದಿವಸಗಳಲ್ಲಿ ಮಾತ್ರ ಕೊಡಗಿನ ಶಾಲೆಗಳ ಮೇಲುಸ್ತುವಾರಿ ನೋಡುತ್ತಾರೆ. ಆರ್ಥಿಕ ಹೀನಸ್ಥಿತಿಯ ಈ ಸಮಯದಲ್ಲಿ ಇದು [illegible] ದುಂದುಗಾರಿಕೆಯಾಗಿದೆ. ಆದುದರಿಂದ ಇದನ್ನು ನಿಲ್ಲಿಸಲು, [illegible] ಕೊಡಗಿನಲ್ಲಿ ಇರುವ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ ಹುದ್ದೆಯನ್ನು 'ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರ್' ಆಗಿ ಬದಲಾಯಿಸಬೇಕೆಂದು ಈ ಮೊದಲು ಹಲವು ಬಾರಿ ಬರೆಯಲಾಗಿತ್ತು. ಇದೇ ತರಹದ ಗೊತ್ತುವಳಿಯೊಂದು ಲಜಿಸ್ಲೇಟಿವ್ ಕೌನ್ಸಿಲಿನಲ್ಲಿಯೂ [illegible] ಸರಕಾರದವರು [illegible] ಮಾನ್ಯ ಮೆಂಬರರು ಬೇಡಿದರು. [illegible] ಜಯ[illegible]ಸುವರು [illegible].

ಆದರೆ ಈ ತಿಂಗಳ ಗಜೆಟಿನಲ್ಲಿ ಈಗಿನ ಇನ್ಸ್‌ಪೆಕ್ಟರಾದ ಮಾ. [illegible]ರ ಹುದ್ದೆಯ ಅವಧಿಯನ್ನು 1939ನೇ ಜುಲೈ 20ರ ವರೆಗೆ ಮುಂದರಿಸಲಾಗಿದೆಯೆಂದು ಪ್ರಕಟವಾಗಿದೆ. ಇದರೊಂದಿಗೆ ಫೈನಾನ್ಸಿಯಲ್ ವಿಚಾರಣಾ ಆಫೀಸರಾದ ಮಿ. ಪಟ್ನಾಲ್‌ರವರ ವರದಿಯು ಸರಕಾರಕ್ಕೆ ಬಂದಿದೆಯೆಂದೂ ಸುದ್ದಿ ಇದೆ. ಹಾಗಾದರೆ ಸಿಬ್ಬಂದಿ ಕೋತೆಯ ಯೋಜನೆಯಲ್ಲಿ ಈ ಹುದ್ದೆಯನ್ನು ಬೇಗನೆ ಬದಲಾಯಿಸುವ ಆಲೋಚನೆ ಮೊದಲಿಲ್ಲವೆಂದು ಭಾವಿಸಬೇಕಾಗುತ್ತದಲ್ಲವೇ? ಇದರ ನಿಜಸ್ಥಿತಿ ಮಿ. ಪಟ್ನಾಲ್‌ರವರ ವರದಿಯು ಪ್ರಕಟವಾದ ಮೇಲೆ ಗೊತ್ತಾಗಬಹುದು. ಇದು ನಿಜವಾದರೆ ಇಂಥಾ ಅನಾವಶ್ಯಕ ದುಂದುಗಾರಿಕೆಯ ಹುದ್ದೆಯನ್ನು ತೆಗೆದು ಹಾಕದ ಸಿಬ್ಬಂದಿ ಕೋತೆಯ ಯೋಜನೆಯಲ್ಲಿ ಏತರ ಸೂಚನೆಗಳಿರುವವೋ ತಿಳಿಯದು. ಸಾವಿರಗಟ್ಲೆ ಸಂಬಳ ತಿನ್ನುವ ದೊಡ್ಡ ಹುದ್ದೆಗಳನ್ನು ಕೋತ ಮಾಡದೆ, ಬಡ ಚಿಕ್ಕ ನೌಕರರನ್ನು ಕಡಿಮೆ ಮಾಡುವ ಯಾ ಶಾಲೆ, ಆಸ್ಪತ್ರೆ ಮುಂತಾದ ಸಂಸ್ಥೆಗಳನ್ನು ತೆಗೆಯುವ ಯೋಜನೆಯನ್ನು ದೇಶದವರು ಸಂಪೂರ್ಣ ವಿರೋಧಿಸುತ್ತಿರುವುದರಲ್ಲಿ ಏನೊಂದೂ ಸಂಶಯವಿಲ್ಲ. ಹೇಗೂ ಮಿ. ಪಟ್ನಾಲ್‌ರವರ ವರದಿಯನ್ನು ದೇಶದವರು ಕುತೂಹಲದಿಂದ ಎದುರುನೋಡುತ್ತಿರುವರು.

ಒಳದೇಶ.

ಮೂರ್ನಾಡಿನಲ್ಲಿದ್ದ ಗ್ರಾಮ ಪಂಚಾಯಿತಿಯು ವಜಮಾಡಲ್ಪಟ್ಟಿದೆ.

ಕೊಡಗು ಪ್ಲೇಗಿನಿಂದ ಬಿಡುಗಡೆಯೂ ಗಿದೆಯೆಂದು ಗಜೆಟಿನಲ್ಲಿ ಪ್ರಕಟವಾಗಿದೆ.

ಕಳೆದ ಜೂನ್ ತಿಂಗಳಲ್ಲಿ ಕೊಡಗಿನಲ್ಲಿ 345 ಜನನಗಳೂ, 419 ಮರಣಗಳೂ ಸಂಭವಿಸಿದವೆಂದು ಪ್ರಕಟವಾಗಿದೆ.

ಕೊಡವ ವಿದ್ಯಾಭಿವೃದ್ಧಿ ಫಂಡಿನ ವಾರ್ಷಿಕ ಮಹಾಸಭೆಯು ಈ ತಾ. 6 ರಲ್ಲಿ ಮಡಿಕೇರಿಯಲ್ಲಿ ನಡೆಯುವದೆಂದು ತಿಳಿಯಬರುತ್ತದೆ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಮೀಟಿಂಗು ಬರುವ ಅಕ್ಟೋಬರು ತಿಂಗಳ 26 ನೇ ಬುಧವಾರ ನಡೆಯುವದೆಂದು ಪ್ರಕಟವಾಗಿದೆ.

ಕೊಡಗಿನ ಮುನ್ಸಿಪಲ್ ಕಮಿಟಿ [illegible] ಗಳ ಅವಧಿಯು ಮೂರು ವರ್ಷ [illegible] ಚೀಫ್ ಕಮೀಷನರು [illegible] ಮಾಡಿರುವರು.

ಬರುವ ಅಕ್ಟೋಬರು 1 [illegible] ಹೋಬಳಿಯ [illegible] ಗ್ರಾಮವನ್ನು ಸರ್ಕಾರದವರು 'ನೋಟಿಫೈಡ್ ಏರಿಯ' ವಾಗಿ [illegible]

[illegible] ಭಾಗಗಳಲ್ಲಿ [illegible] ಸಾಲದ [illegible] ತಿಳಿದು ಬರುತ್ತದೆ.

ಸರ್ಕಾರದವರು ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡುವ ಸುಮಾರು 49,000 [illegible] 7,000 [illegible] ಸಂಭವವಿದೆಯೆಂದು [illegible]

ರಜೆಯಲ್ಲಿ ಇಂಗ್ಲೆಂಡಿಗೆ ಹೋಗಿದ್ದ [illegible] ಸರ್ಜನರಾದ [illegible] ತಾರೀಖಿನಲ್ಲಿ [illegible] ರಲ್ಲಿ [illegible] ಚಾರ್ಜನ್ನು ವಹಿಸಿಕೊಂಡರು.

ಕುಟ್ಟ ಗ್ರಾಮದ ಶೀತಿರ ಸಂಜಪ್ಪನವರು ಒಬ್ಬ ಮೊಸಳೆ, ಹೆಂಗಸನ್ನು ಕುತ್ತಿಗೆ ಸುಮ್ಮ ಕೊಂದ ಮೊಸಳೆ ಕೇಸಿನಲ್ಲಿ [illegible] ಜೀವಾಂತ್ಯದ ವರೆಗೆ ಗಡೀಪಾರು ಶಿಕ್ಷೆಯು ವಿಧಿಸಲ್ಪಟ್ಟಿದೆಯೆಂದು ತಿಳಿಯುತ್ತೇವೆ.

ಬೆಂಗಳೂರು ಮತ್ತು ಕೊಡಗು ತಾಲೂ ಇನ್ಸ್ಪೆಕ್ಟರಾದ ಮಿ. ಯಂ. ಯಸ್. [illegible] ಇವರ ಮುದ್ದತಿಯು ಅವಧಿಯನ್ನು ಚೀಫ್ ಕಮೀಷನರವರು 1939 ನೇ ಜುಲೈ 20 ರ ವರೆಗೆ ಮುಂದರಿಸಿರುವರು.

ಗೌಡ ವಿದ್ಯಾರ್ಥಿಗಳ ಬೋರ್ಡಿಂಗ್ ಭವನವು ಮಡಿಕೇರಿ ಹೈಸ್ಕೂಲ್ ಬಳಿ ಸರಕಾರದವರಿಂದ ಮಂಜೂರಾಗಿರುವ ಜಾಗದಲ್ಲಿ ಕಟ್ಟಡದಲ್ಲಿ ತಾ. 8-8-38 ರಿಂದ ತೆರೆಯಲ್ಪಡುವದಾಗಿ ಗೌಡ ವಿದ್ಯಾ ಸಂಘದವರು ತಿಳಿಸುತ್ತಾರೆ.

ಕಳೆದ ತಾ. 23 ರಲ್ಲಿ ವಾರ್ಧಾದಲ್ಲಿ ಸಭೆ ಸೇರಿದ್ದ ಕಾಂಗ್ರೆಸು ವರ್ಕಿಂಗ್ ಕಮಿಟಿಯವರಲ್ಲಿಗೆ ಕರ್ನಾಟಕ ಏಕೀಕರಣ ವಿಚಾರ ಡೆಪ್ಯುಟೇಶನ್ ಹೋಗಿದ್ದವರ ಪೈಕಿ ಮಿ. ಚೆಪ್ಪುಡಿರ ಪೂಣಚ್ಚನವರು ಒಬ್ಬರಾಗಿದ್ದರೆಂದು ತಿಳಿಯಬರುತ್ತದೆ.

ಸೋಮವಾರಪೇಟೆಯಲ್ಲಿ ಮಿ. [illegible] ಯ್ಯನವರ ಪ್ರಯತ್ನದಿಂದಲೂ, ಪೇಟೆಯ ಮಹನೀಯರ ಉದಾರ ಸಹಾಯದಿಂದಲೂ [illegible] ಸಂಘದ [illegible] ತಾ. 10 ನೇ ಬುಧವಾರ [illegible] ಗಿಯೂ, ಆ ದಿವಸ [illegible] ದೆಯೆಂದೂ ತಿಳಿಯುತ್ತೇವೆ.

ತಾ. 30-7-38 ರಿಂದ 5-8-38 ರ ವರೆಗೆ ಮಡಿಕೇರಿಯಲ್ಲಿ 2 ಇಂಚು 10 ಸೆಂಟು ಮಳೆಯಾಗಿದೆ. [illegible] 17 ಇಂಚು 21 ಸೆಂಟು [illegible] 57 ಇಂಚು 77 ಸೆಂಟು ಮಳೆಯಾಗಿದ್ದು [illegible] ಜುಲೈ ಅಂತ್ಯದ ವರೆಗೆ 91 ಇಂಚು 61 ಸೆಂಟು ಮಳೆಯಾಗಿದೆ. ಕಳೆದ [illegible] ಜುಲೈ ಅಂತ್ಯದ ವರೆಗೆ 86 ಇಂಚು 51 ಸೆಂಟು ಮಳೆಯಾಗಿತ್ತು.

[illegible] ಹಾಕಿ [illegible] ಸೆಲೆಕ್ಟಿಂಗ್ ಮತ್ತು [illegible] ಲ್ಲಿ ಆರು [illegible] ಉಮೇದುವಾರರು [illegible] 18 [illegible] ವಿಭಾಗದ [illegible] ರು ತಾ. 1 ರಲ್ಲಿ [illegible] ಪ್ರಕಟಿಸಿರುವರು.

ಚೆಪ್ಪುನಾಡು [illegible] ಮಿ. [illegible] ತಾ. 28 ರಲ್ಲಿ [illegible] ತಾ. 31 ರಲ್ಲಿ [illegible] ಎಂಬುದಾಗಿ [illegible] ತಿಳಿಸಲು [illegible]

ಹಿಂದೂದೇಶ.

ಸಿಂಧ್ ಪ್ರಾಂತಿಕ ಮುಸ್ಲಿಂ ಲೀಗಿನ ಜನರಲ್ ಸೆಕ್ರೆಟರಿ ಮಿ. ಜಿ. ಅಲ್ಲನ ಎಂಬವರು, ಕಾಂಗ್ರೆಸನ್ನು ಸೇರಿರುವರು.

ಆಂಧ್ರರು ತಮ್ಮ ಪ್ರಾಂತ್ಯದ [illegible] ವಿಚಾರದಲ್ಲಿ, ವರ್ಕಿಂಗ್ ಕಮಿಟಿ ಮಾಡಿದ ತೀರ್ಮಾನದ ಕುರಿತು, ಕೇವಲ ಅಸಂತುಷ್ಟರಾಗಿದ್ದಾರೆಂದು ಶ್ರೀ. ವಿ. [illegible] ಪಂಕಲುಗಳು ಪ್ರಕಟಿಸುತ್ತಾರೆ.

ಚೀನಾಕ್ಕೆ ಹಿಂದೂಸ್ಥಾನದಿಂದ ವೈದ್ಯ ಶುಶ್ರೂಷಾಪಥಕವು ಇದೇ ಆಗೋಸ್ಟು ತಾ. 15 ರಲ್ಲಿ ಹೊರಡುವುದು. ನಾಲ್ಕು ಮಂದಿ ಡಾಕ್ಟರರುಗಳೂ, ಒಂದು ಪಕ್ಷಿಕಾ ಉದ್ಯೋಗಿಗಳೂ, ಇವರ ಜೊತೆಯಲ್ಲಿರುವರು.

ಅಮೃತಸರದಲ್ಲಿ ಪೈತರ ಮೇಲೆ ಪೋಲೀಸಿನವರು ಲಾಠಿ ಚಾರ್ಜು ಮಾಡಿದ ಘಟನೆಯ ಕುರಿತಾಗಿ ವಿಚಾರಿಸಲು, ಪಂಜಾಬ್ ಕಾಂಗ್ರೆಸ್ ಕಮಿಟಿಯವರು, ಡಾ. ಸತ್ಯಪಾಲ್, ಪಂಜಾಬ್ [illegible] ಮತ್ತು [illegible] ಇವರನ್ನು ನೇಮಿಸಿದ್ದಾರೆ.

[illegible], ಜೈಪುರಿನ 400 ನೇ [illegible] ಅಧ್ಯಕ್ಷತೆಯಲ್ಲಿ ಜರುಗಿತು. ಆ [illegible] 1000 [illegible] ದಲ್ಲಿ ಸುಮಾರು 200 ಮಿಲಿಯ ಪ್ರೈವರಿ ಪ್ರತಿಗಳು [illegible] ಎಂದು [illegible] ಅವರು [illegible]

'ನಾನೂ [illegible] ಕೊಡುವದಿಲ್ಲ. ಯಾರಿಂದ ಓಡಿ ಹೋಗುವ ಮನುಷ್ಯ ನಾನಲ್ಲ. [illegible] ಚೆನ್ನಾಗಿ ಗೊತ್ತಿದೆ. [illegible]

1924 ರಲ್ಲಿ ಅಂದಮಾನ್‌ನಿಂದ [illegible] ಶ್ರೀ [illegible] ಕಾಂಗ್ರೆಸಿನ [illegible] ಪ್ರಸಿದ್ಧರುವರು.

[illegible] ಶ್ರೀ ಗೋಖಲೆ ಎಂಬವರು ಪ್ರಸಿದ್ಧ [illegible] ಶ್ರೀ [illegible] ಅಮರಾವತಿಯ ಕಾಂಗ್ರೆಸ್ ಪಕ್ಷದ.

'ನೋಟಿಫೈಡ್ ಏರಿಯೊದ' ಕಮಿಟಿಗಳು.

ಕಳೆದ ತಾ. 28 ರಲ್ಲಿ ಸರ್ಕಾರ [illegible] ಯಲ್ಲಿ ಈ ಕೆಳಗಿನ ಮಹನೀಯರು [illegible] 'ನೋಟಿಫೈಡ್ ಏರಿಯೊದ' ಕಮಿಟಿ ಮೆಂಬರುಗಳಾಗಿ ಆರಿಸಲ್ಪಟ್ಟಿರುವರು.

ಸೋಮವಾರಪೇಟೆ.

ಮೆ. ಗಳಾದ (1) ಡಿ. ವಾಸಪ್ಪನವರು, (2) ಬಿ. [illegible] ಬಸವಯ್ಯನವರು, (3) ಯಂ. ಅಬ್ದುಲ್ ಕರೀಮ್ ಹಾಜಿ ಆಲಿ ಸೇಟರವರು, (4) ಬಸವಲಿಂಗಯ್ಯನವರು, (5) ಕೆ. ನಾಗಪ್ಪನವರು, (6) ಎಸ್ ಹೆಚ್. ಶೇಷಣ್ಣನವರು ಮತ್ತು (7) ಹೆಚ್. ಸಿ. ರಾಜರವರು.

ಫ್ರೇಜರ್‌ಪೇಟೆ.

ಮೆ. ಗಳಾದ (1) ಎಸ್. ಲಕ್ಷ್ಮಣ ಶೆಟ್ಟಿಯವರು, (2) ಶರೀಫ್ ಸುಬ್ಬಶೆಟ್ಟಿಯವರು, (3) [illegible] ಸಾಹೇಬರವರು. (4) [illegible] ಶೆಟ್ಟಿಯವರು, (5) ಡಿ. ತಿಮ್ಮಪ್ಪಶೆಟ್ಟಿಯವರು ಮತ್ತು (6) [illegible] ಯ್ಯನವರು

ಕೊಪ್ಪಪೇಟೆ.

ಮೆ. ಗಳಾದ (1) [illegible] (2) [illegible] (3) [illegible] ವರು, (4) [illegible] ಯಸ್. [illegible] (5) ಬಿ. ಯಸ್. [illegible] ಶೆಟ್ಟಿಯವರು ಮತ್ತು (6) [illegible] ಶಂಕರಪ್ಪನವರು

[illegible]

[illegible]

[illegible] 'ನೋಟಿಫೈಡ್ ಏರಿಯೊದ' [illegible] (1), [illegible] ಕೊಡಗು [illegible] (ಅಧ್ಯಕ್ಷರು), [illegible] (3) [illegible] (4) [illegible] (5) [illegible] (6) [illegible] (7) [illegible] (8) [illegible] (9) [illegible] (10) [illegible] (11) [illegible]

ಪ್ರಿಯ ಬಾಂಧವರಲ್ಲಿ ವಿಜ್ಞಾಪನೆ.

ಕಳೆದ ತಾ. 1 ರಲ್ಲಿ ನನ್ನ ಪ್ರಿಯ ಪತ್ನಿಯು ನಿಧನದಿಂದ ನನಗುಂಟಾದ ದುಃಖ [illegible] ಸಂದರ್ಭದಲ್ಲಿ [illegible] ನಾನು ಎಲ್ಲರಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಪತ್ರ ಬರೆಯಲು ಅಶಕ್ತನಾಗಿರುವುದರಿಂದ ನನ್ನ ಕೃತಜ್ಞತೆಯನ್ನು ಈ ಮೂಲಕ ವ್ಯಕ್ತಪಡಿಸುತ್ತೇನೆ.

ಪುಟ್ಟೀರಂಡ ಪೊಣ್ಣಪ್ಪ.

COORG FOREST DEPARTMENT,
Mercara, 28-7-1938.

TENDER NOTICE.

Tenders are invited by 22-8-1938 for the purchase of two pairs of buffaloes in good working condition together with 2 carts now at Nagerhole, Kutta Post.

For further particulars please apply to Nagerhole Range Officer, Balecove, Kutta Post.

The Bombay Life Assurance Company Ltd.

(Estd. 1908.)

55-47, Churchgate Street, Fort-Bombay.

Evidence of

Progress, Security and Stability.

Year.	New Business completed.	Premium Income.	Life Fund	Business in force.
1931	73,00,000	11,00,000	33,00,000	2,27,00,000
1934	1,04,00,000	19,00,000	58,00,000	3,71,00,000
1937	1,40,00,000	31,00,000	99,00,000	6,00,00,000

The Company offers all that is best and up-to-date in Life Assurance.

Applications for agencies will be considered from Honest and Respectable Ladies & Gentlemen.

For full particulars apply to any of our following Offices:—

KOCHIKAR & BROTHERS Ltd.,
Madras Branch Secretaries,
Post Box No. 337, Mount Road, MADRAS.
2 [Phone No. 8245.]

Bombay Life Building, Udipi	Gautam Nivas, Charni Road Girgaum Bombay 4	Visweswarapuram Circle Bangalore City	Puthiyara, Calicut	Car Street, Mangalore	Ottapalam S. Malabar.	Trivandrum (Travancore St.)

ದಿವಂಗತ
ಸರ್ ಪುಟ್ಟಣ್ಣಶೆಟ್ಟಿಯವರು.

ಬೆಂಗಳೂರಿನ ದಿವಾನ್ ಬಹದ್ದೂರ್ ಸರ್ ಪುಟ್ಟಣ್ಣಶೆಟ್ಟಿಯವರು ಕಳೆದ ವಾರ ಸ್ವರ್ಗಸ್ಥರಾದ ಸುದ್ದಿಯು ಎಲ್ಲರನ್ನೂ ದುಃಖಕ್ಕೀಡುಮಾಡಿದೆ. ಇವರು 1856 ರಲ್ಲಿ ಜನ್ಮಧಾರಣೆ ಮಾಡಿದರು. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಅವರು ವ್ಯಾಸಂಗ ಮಾಡಿದರು. ಆ ಕಾಲದಲ್ಲಿ ವಿಶ್ವವಿದ್ಯಾನಿಲಯಗಳೂ, ವಿದ್ಯಾಶಾಲೆಗಳೂ ಬಹಳವಾಗಿರಲಿಲ್ಲ. ಸ್ವಲ್ಪ ಓದು ಬರಹ ಕಲಿತ ಪ್ರತಿಯೊಬ್ಬನೂ ಸರಕಾರದ ಆಶ್ರಯ ಪಡೆಯಬಹುದಾಗಿತ್ತು. ಸರ್ ಶೆಟ್ಟಿಯವರು 1875 ರಲ್ಲಿ ರೈಲ್ವೆ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದರು. 1884 ರಲ್ಲಿ ಅವರು ಮೈಸೂರು ರೈಲ್ವೆಯ ಟ್ರಾಫಿಕ್ ಮೇನೇಜರಾಗಿದ್ದರು. 1890 ರಿಂದ 1906 ರ ವರೆಗೆ ಅವರು ಜಿಲ್ಲಾಧಿಕಾರಿಗಳಾಗಿ ಕೆಲಸ ಮಾಡಿದರು. 1906 ರಿಂದ 1912 ರ ವರೆಗೆ ಅವರು ಸಚಿವ ಸ್ಥಾನವನ್ನಲಂಕರಿಸಿದರು. ಮೈಸೂರು ಸರ್ಕಾರದವರು ಅವರಿಗೆ ರಾಜಸಭಾ ಭೂಷಣ ಎಂಬ ಬಿರುದನ್ನು ಕೊಟ್ಟರು.

ಸಾರ್ವಭೌಮ ಸರ್ಕಾರದವರು ಇವರಿಗೆ 1911 ರಲ್ಲಿ ದಿವಾನ್ ಬಹದ್ದೂರ್ ಎಂಬ ಬಿರುದನ್ನೂ ಮತ್ತು 1917 ರಲ್ಲಿ ಸಿ. ಐ. ಇ. ಎಂಬ ಬಿರುದನ್ನೂ ದಯಪಾಲಿಸಿದರು. 1925 ರಲ್ಲಿ ಸಾರ್ವಭೌಮ ಸರ್ಕಾರದವರು 'ಸರ್' ಬಿರುದನ್ನೂ ದಯಪಾಲಿಸಿದರು. ಮೈಸೂರು ವಿಶ್ವವಿದ್ಯಾನಿಲಯದವರು 'ಎಲ್ ಎಲ್ ಡಿ.' ಗೌರವ ಪ್ರಶಸ್ತಿಯನ್ನು ಕೊಟ್ಟರು.

ಸರಕಾರಿ ಉದ್ಯೋಗದಿಂದ ನಿವೃತ್ತರಾದ ನಂತರ ಸರ್ ಶೆಟ್ಟರು ಸಾರ್ವಜನಿಕ ಸೇವೆಯಲ್ಲಿ ತೊಡಗಿದರು. ಸಾಮಾಜಿಕ, ರಾಜಕೀಯ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಅವರು ಬಹಳ ಆಸಕ್ತಿಯಿಂದ ಕೆಲಸ ಮಾಡಿದರು. ಸ್ವರ್ಗಸ್ಥರಾಗುವ ದಿನದ ವರೆಗೂ ಅವರು ಅವಿಶ್ರಾಂತವಾಗಿ ದುಡಿಯುತ್ತಿದ್ದರು.

ಸರ್ ಶೆಟ್ಟರು ಬಹಳ ಉದಾರಿಗಳು. ಅವಿಶ್ರಾಂತವಾಗಿ ಸಾರ್ವಜನಿಕ ಸೇವೆಯಲ್ಲಿ ನಿರತರಾಗಿದ್ದುದರ ಜೊತೆಗೆ ಅವರು ಅನೇಕ ಮಹಾ ದಾನಗಳನ್ನು ಮಾಡಿದ್ದಾರೆ. ಅವರು ಮಾಡಿರುವ ದಾನ ಧರ್ಮಗಳು 5 ಲಕ್ಷ ರೂಪಾಯಿಗೆ ಮೀರಿದ ಎಂದು ಗೊತ್ತಾಗಿದೆ. ವಿಕ್ಟೋರಿಯಾ ಆಸ್ಪತ್ರೆಯ ಹೊರ ಭಾಗದಲ್ಲಿರುವ ಉಚಿತ ವೈದ್ಯಶಾಲೆಗೆ ಅವರು 26,000 ರೂಪಾಯಿಗಳನ್ನು ಕೊಟ್ಟಿದ್ದಾರೆ. ನಗರ ಭವನಕ್ಕಾಗಿ ರೂ. 1 ಲಕ್ಷ, ವೀರಶೈವ ವಿದ್ಯಾರ್ಥಿನಿಲಯಕ್ಕೆ ರೂ 1 ಲಕ್ಷವನ್ನೂ ಕೊಟ್ಟಿದ್ದಾರೆ. ಅಲ್ಲದೆ ಮೈಸೂರು ವಿಶ್ವವಿದ್ಯಾನಿಲಯಕ್ಕೂ ಮತ್ತು ಇತರ ಅನೇಕ ಸಂಸ್ಥೆಗಳಿಗೂ ಉದಾರವಾಗಿ ಸಹಾಯ ಮಾಡಿದ್ದಾರೆ. ಅವರ ನಿಧನದಿಂದುಂಟಾದ ಸಂತಾಪವನ್ನು ಸೈರಿಸಲು ಭಗವಂತನು ಅವರ ಕುಟುಂಬಕ್ಕೆ ಶಕ್ತಿಯನ್ನು ಕೊಡಲಿ.

ಕೊಡಗು ಮೋಟಾರು
ಕೆಲಸಗಾರರ ಸಂಘ.

ಕೊಡಗು ಮೋಟಾರು ಕೆಲಸಗಾರರ ಸಂಘವನ್ನು ಸ್ಥಾಪಿಸುವ ಉದ್ದೇಶ್ಯ ಕಳೆದ ಜುಲೈ ತಾ 30 ನೇ ಶನಿವಾರ ಮಡಿಕೇರಿಯಲ್ಲಿರುವ 'ಅಂಬಿಕಾ ಪ್ರೆಸ್ಸ್' ಕಟ್ಟಡದಲ್ಲಿ ಕೊಡಗಿನ ಮೋಟಾರು ಕೆಲಸಗಾರರ ಮಹಾ ಸಭೆ ಸೇರಿತ್ತು. ಶ್ರೀ ಕಂದ್ಯಂಡ ಬೆಳ್ಯಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

ಈ ಕೆಳಗಿನ ವಿಷಯಗಳು ಸರ್ವಾನುಮತದಿಂದ ಪಾಸಾದವು

1. ಕೊಡಗಿನ ಮೋಟಾರು ವಾಹನಗಳ ಕೆಲಸಗಾರರ ಸಂಘವನ್ನು ಸ್ಥಾಪಿಸಬೇಕೆಂಬುದು ಒಮ್ಮತದಿಂದ ತೀರ್ಮಾನವಾಯಿತು.

2. ಹದಿನೈದು ಸದಸ್ಯರಿಂದ ಕೂಡಿದ ಚುನಾಯಿತ ಕಾರ್ಯಕಾರಿ ಮಂಡಳಿಯಾಗಬೇಕೆಂದೂ, ಅವರೊಳಗಿಂದ ಒಬ್ಬ ಅಧ್ಯಕ್ಷರು, ಇಬ್ಬರು ಕಾರ್ಯದರ್ಶಿಗಳು ಮತ್ತು ಒಬ್ಬ ಕೋಶಾಧ್ಯಕ್ಷರು ಆರಿಸಲ್ಪಡಬೇಕೆಂದೂ ತೀರ್ಮಾನಿಸಲಾಯಿತು

3. ಕಾರ್ಯಕಾರಿ ಮಂಡಳಿಗೆ ಶ್ರೀಗಳಾದ (1) ಕೋಡಿರ ಮುದ್ದಪ್ಪನವರು, (2) ಎ. ದೇವರಾಜುರವರು, (3) ಜಿ. ಕೆ. ಶಿವಣ್ಣನವರು, (4) ಯಂ. ಯಂ. ಮಾದಪ್ಪನವರು, (5) ಪಿ. ಸಿ. ಕೋಟ್ಯಣ್ಣನವರು, (6) ಎ. ಪಿ. ರಾಬರ್ಟರವರು, (7) ವಿ. ವೇಲಾಯುಧರವರು (8) ಕಾಣತಂಡ ಸೋಮಯ್ಯನವರು, (9) ಕುಂದಿರ ಮಂದಪ್ಪನವರು, (10) ಬಿ. ಅಪ್ಪಸ್ವಾಮಿಯವರು, (11) ಬಲ್ಲಡಿಚಂಡ ಕಾರ್ಯಪ್ಪನವರು, (12) ಬಟ್ಟಿಯಂಡ ಸೋಮಯ್ಯನವರು, (13) ನಾಟೋಳಂಡ ಅಚ್ಚಪ್ಪನವರು, (14) ಮುರುವಂಡ ಬೋಜಪ್ಪನವರು ಮತ್ತು (15) ಮುಕ್ಕಾಟಿರ ಪೂಣಚ್ಚನವರುಗಳನ್ನು ಆರಿಸಲಾಯಿತು. ಇವರ ಪೈಕಿ ಮಿ. ಜಿ. ಕೆ. ಶಿವಣ್ಣನವರನ್ನು ಅಧ್ಯಕ್ಷರನ್ನಾಗಿಯೂ, ಮಿ. ಕೋಡಿರ ಮುದ್ದಪ್ಪನವರನ್ನು ಕಾರ್ಯದರ್ಶಿಯನ್ನಾಗಿಯೂ ಮಿ. ಬಲ್ಲಡಿಚಂಡ ಕಾರ್ಯಪ್ಪನವರನ್ನು ಜಂಟಿ ಕಾರ್ಯದರ್ಶಿಯನ್ನಾಗಿಯೂ, ಮಿ. ಯಂ. ಯಂ. ಮಾದಪ್ಪನವರನ್ನು ಖಜಾಂಚಿಯರನ್ನಾಗಿಯೂ ಆರಿಸಲಾಯಿತು.

4. ಮೇಲ್ಕಂಡ ಕಾರ್ಯಕಾರಿ ಮಂಡಳಿಯವರು ಸಂಘದ ನಿಬಂಧನೆಗಳನ್ನು ತಯಾರಿಸಿ ಒಂದು ತಿಂಗಳೊಳಗೆ ಸಂಘದ ಮಹಾ ಸಭೆಯ ಮಂಜೂರಾತಿಗಿಡತಕ್ಕದ್ದೆಂದು ನಿರ್ಣಯಿಸಲಾಯಿತು.

ಮಡಿಕೇರಿ, ಕೋಡಿರ ಮುದ್ದಪ್ಪ,
ತಾ. 3-8-'38 (ಕಾರ್ಯದರ್ಶಿ.)

ಬಾತ್ಮಿ.

ಫ್ರೇಜರ್‌ಪೇಟೆ ನೋಟಿಫೈಡ್ ಏರಿಯಾ.

ಅಯ್ಯಾ ಮೋಡರ್‌ರವರೇ,

ತಾವು ಅತ್ಯಂತ ಶ್ರಮವಹಿಸಿ ತಾ. 15-7-1938ರ 'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿದ ಬಾತ್ಮಿಗೆ ನಿಮಗೆ ಎಷ್ಟು ವಂದಿಸಿದರೂ ಸಾಲದು.

ತಮ್ಮ ಬಾತ್ಮಿಯನ್ನು ಓದಿದಾಗ ಬೆಕ್ಕು ಕಣ್ಣು ಮುಚ್ಚಿಕೊಂಡು ಹೊಟ್ಟೆ ತುಂಬಾ ಹಾಲು ಕುಡಿದು ತಾನು ಹಾಲನ್ನೇ

ನೋಡಲಿಲ್ಲವೆಂದು ಹೇಳಿದ ಕಥೆಯು ನನ್ನ ನೆನಪಿಗೆ ಬಂತು. ನೋಟಿಫೈಡ್ ಏರ್ಯಾದ ಕಮಿಟಿಯಲ್ಲಿ ನಿಮ್ಮಂತೆಯೇ ಇನ್ನೂ 5 ಜನ ನಾಮಿನೇಟೆಡ್ ಮೆಂಬರುಗಳಿರುವರು. ಅವರಲ್ಲೂ ಮಹಮ್ಮದೀಯರ ಪರವಾಗಿ ಇಬ್ಬರು ಮೆಂಬರುಗಳಿರುವರು. ಮಹಮ್ಮದೀಯರ ಬೀದಿಯು ಬಹಳ ಅಸಹ್ಯವಾಗಿದೆಯೆಂದು ಬರೆಯುತ್ತೀರಿ. ಇಲ್ಲಿ ಬಿರಂಡಿಯಲ್ಲೆಲ್ಲಾ ಕಾಡು ತುಂಬಿ ನಡೆಯಲು ಸಹ ಅಸಾಧ್ಯವಾಗಿದ್ದದ್ದು, ಈಗಿನ ವೈಸ್ ಪ್ರೆಸಿಡೆಂಟರು ಬಂದ ನಂತರ ಕ್ಲೀನುಮಾಡಿ ಪಾರ್ಕನ್ನು ಗೈದಿಸುತ್ತಿದ್ದನ್ನು ಪ್ರತಿ ದಿವಸವೂ ಗುಡಿಸುವಂತೆ ಮಾಡಿ, ರಸ್ತೆಯ ಅಜು ಬಾಜುಗಳನ್ನು ಆದಷ್ಟು ಕ್ಲೀನು ಮಾಡಿದ್ದು ತಮಗೆ ಗೋಚರವಾಗದಿದ್ದು ಆಶ್ಚರ್ಯವೇ ಸರಿ. ಅವರಲ್ಲೂ ಮಹಮ್ಮದೀಯರ ಹಕ್ಕನ್ನು ಕಾಯ್ದುಕೊಳ್ಳಲು ಮಹಮ್ಮದೀಯರೇ ಇರುವಾಗ ತಾವೇಕೆ ಭಾರವನ್ನು ವಹಿಸಿಕೊಳ್ಳಬೇಕು? ಈ ಬೀದಿಯ ನೈರ್ಮಲ್ಯದ ವಿಷಯ ಮ. ರಾ. ಇಸ್ಮಾಯಿಲ್ ರಾವುತರು ಮಾತಾಡಿದ್ದು ನಾನು ಕೇಳಲಿಲ್ಲ. ಹಿತ್ತಲುಗಳಿಂದ ಲಂತಾನ ತೆಗೆಸಲು ಮೆಂಬರುಗಳೂ ಸಹಾಯ ಮಾಡಬೇಕು, ತಾನು ಹೆಚ್ಚಿನ ಸಮಯ ಗ್ರಾಮಾಂತರಗಳಲ್ಲಿ ತಿರುಗಬೇಕಾಗಿರುವುದರಿಂದ ತನಗೆ ಸಮಯ ಸಿಕ್ಕುವುದಿಲ್ಲವೆಂದು ವೈಸ್ ಪ್ರೆಸಿಡೆಂಟರು ಹೇಳಿದ್ದು ನನಗೆ ನೆನಪಿದೆ. ಅವರಲ್ಲಿ ತಪ್ಪೇನಿದೆ?

1936 ನೇ ಇಸವಿಯಲ್ಲಿ ನಡೆದ ಸಂಗತಿಗೆ ಈಗಿನ ವೈಸ್ ಪ್ರೆಸಿಡಂಟರು ಹೇಗೆ ತಾನೇ ಜವಾಬ್ದಾರರಾಗುವರು? ಮೇ ತಾ. 11 ರಲ್ಲು ನಡೆದ ಮೀಟಿಂಗಿನಲ್ಲಿ ನಾನು ಹಾಜರಿದ್ದೆ. ಆದರೆ ನೀವು ಹೇಳುವ ರೀತಿ ನಡೆದಿರುವುದಿಲ್ಲ. ನೀವೇ ಯಾವುದೋ ಒಂದು ವ್ಯಕ್ತಿಯಲ್ಲಿ ದ್ವೇಷವಿಟ್ಟುಕೊಂಡು, ಅವರ ಮೇಲೆ ನಿಮಗೆ ಇದ್ದ ಕಿಚ್ಚನ್ನು ಹೊರಪಡಿಸಲು, ಕಾರ್ಯಕ್ರಮದ ಪಟ್ಟಿಯಲ್ಲಿ ಇಲ್ಲದ ಸಂಗತಿಯನ್ನು ಪ್ರಸ್ತಾಪಿಸುತ್ತಾ, ಅಸಭ್ಯ ರೀತಿಯಲ್ಲಿ ಪ್ರಶ್ನೆ ಕೇಳಿದ್ದು. ಆದರೂ ವೈಸ್ ಪ್ರೆಸಿಡೆಂಟರು ಸಾಂಗವಾಗಿ ಉತ್ತರ ಕೊಡುತ್ತಾ ಬಂದದ್ದೂ, ಕಡೆಗೆ ನೀವು 'ಆ ಕೆಲಸಕ್ಕೆ ಏಕೆ ಅಷ್ಟು ಖರ್ಚು ಮಾಡಿದ್ದು, ಈ ಕೆಲಸ ಏಕೆ ಮಾಡಲಿಲ್ಲ' ಇತ್ಯಾದಿಯಾಗಿ ಕೇಳಿದ ಪ್ರಶ್ನೆಗೆ 'ಯಾವ ಕೆಲಸವಾದರೂ ಕಮಿಟಿಯ ಅಭಿಪ್ರಾಯ ಪಡೆದು, ಕಮಿಷನರವರ ಮಂಜೂರಾತಿ ಪಡೆದುಕೊಂಡು ತಾನು ಕಮಿಟಿ ಪರವಾಗಿ ನೆರವೇರಿಸುತ್ತಿದ್ದೇನೆ. ವಿನಹ ನನ್ನ ಸ್ವೇಚ್ಛೆಯಾಗಿ ಒಂದು ಕಾಸು ಸಹ ಖರ್ಚು ಮಾಡಿಲ್ಲ. ಆದ್ದರಿಂದ ನೀವು ಈ ತರದಲ್ಲಿ ಪ್ರಶ್ನೆ ಕೇಳಕೂಡದು, ಗ್ರಾವಲ್ ರೋಡುಗಳನ್ನು ಸೆಪ್ಟೆಂಬರು ತಿಂಗಳಲ್ಲಿ ರಿಪೇರಿ ಮಾಡಲಾಗುವುದು' ವಗೈರೆ ಹೇಳಿದರೇ ವಿನಹ ಬೇರೇನೂ ಹೇಳಿರುವುದಿಲ್ಲ. ಆ ಸಮಯದಲ್ಲಿ ನೀವು ಇಂಥಾ ಮೀಟಿಂಗಿನಲ್ಲಿ ಭಾಗವಹಿಸಲು ನಿಮಗೆ ಇಷ್ಟವಿಲ್ಲವೆಂದು ಹೇಳಿ ಎದ್ದು ನಿಲ್ಲಲು 'ನಿಮ್ಮ ಇಷ್ಟ' ಎಂತ ವೈಸ್ ಪ್ರೆಸಿಡಂಟರು ಹೇಳಿದರೇ ವಿನಹ ಮೀಟಿಂಗನ್ನು ಬಿಟ್ಟು ಹೊರಟು ಹೋಗಬಹುದೆಂತ ಹೇಳಲೇ ಇಲ್ಲ. ನೀವು ಹೇಳುವ ರೀತಿ ನಡೆದಿದ್ದರೆ ನೀವು ಮೀಟಿಂಗಿನಿಂದ ಹೊರಗೆ ಹೋದವರು ಪುನಹ ವಾಪಸು ಬಂದು ಮೀಟಿಂಗಿನಲ್ಲಿ ಕಡೆ ವರೆಗೂ ಭಾಗ ವಹಿಸಿ, ಮೀಟಿಂಗು ತೀರಿದ ನಂತರ ಬೇರೆ ಮೆಂಬರರು ಹೊರಟು ಹೋದಾಗಲೂ ಸಹ ನೀವು ಅಲ್ಲೇ ಕುಳಿತಿದ್ದು ವೈಸ್ ಪ್ರೆಸಿಡೆಂಟರ ಜೊತೆಯಲ್ಲಿ ಸುಮಾರು ಅರ್ಧ ಗಂಟೆ [illegible] ಹರಟೆ ಹೊಡೆಯುತ್ತಾ, ತಮಾಷೆ ಮಾಡುತ್ತಾ ಕುಳಿತಿದ್ದುದು ಏಕೆ? ಖರ್ಚು ಮಾಡಿದ ಹಣಕ್ಕೆ ದಾಖಲೆಗಳೇ ಇಲ್ಲವೆಂತ ಹೇಳುತ್ತೀರಿ. ಪ್ರತಿ ತಿಂಗಳ ಮೀಟಿಂಗಿನಲ್ಲಿ ಆದಾಯ ವೆಚ್ಚದ ತಪ್ಸೀಲು ಪಟ್ಟಿಯೊಂದನ್ನು ಮೆಂಬರರ ಮುಂದೆ ಪ್ಲಸ್ ಅಂಡ್ ಮೈನಸ್ (plus and minus memo) ಪಟ್ಟಿಯನ್ನು ಇಡುವುದನ್ನು ನೀವು ನೋಡದೆ ಕಣ್ಣು ಮುಚ್ಚಿಕೊಂಡಿದ್ದಿರೇ? ಇದರಿಂದಲೇ ನೀವು ಬರೆದಿರುವ ಸಂಗತಿಗಳೆಲ್ಲಾ ಎಷ್ಟರ ಮಟ್ಟಿಗೆ ನಿಜವೆಂದು ಊಹಿಸಬಹುದು. ಹೆಚ್ಚಿಗೆ ಬರೆದು ಪ್ರಯೋಜನವಿಲ್ಲ.

ಮಿ. ಮೋಡರ್ನರವರೇ, ನೀವು ಇನ್ನಾದರೂ ಕಣ್ಣು ತೆರೆದು ನೋಡಿ. ಪೇಟೆಯ ಬೀದಿಯನ್ನು ನಿಮ್ಮಿಷ್ಟರ ಅಭಿಪ್ರಾಯಕ್ಕೆ ವಿರೋಧವಾಗಿ ರಿಪೇರಿ ಮಾಡಿಸಿದ್ದು ದಕ್ಷವಾಗಿ ಕಚ್ಚು ಇದ್ದರೆ ಅದನ್ನು ನ್ಯಾಯವಾದ ರೀತಿಯಿಂದ ಹೇಳಿ. ಅದಕ್ಕೆ ಬದಲಾಗಿ ಹೀಗೆಲ್ಲ ನಿಜವಲ್ಲದ ಆರೋಪಣ ಮಾಡುತ್ತ ಮುತುವರ್ಜಿಯಿಂದ ಕೆಲಸ ಮಾಡುತ್ತಿರುವ ಉದ್ಯೋಗಸ್ಥರ ಮನಸ್ಸನ್ನು ನೋಯಿಸಬೇಡಿ. ಈಗಿನ ವೈಸ್ ಪ್ರೆಸಿಡೆಂಟರು ಉತ್ಸಾಹದಿಂದ ಕೆಲಸಮಾಡಿ ನಮ್ಮ ನೋಟಿಫೈಡ್ ಏರ್ಯಾದ ಚರಿತ್ರೆಯಲ್ಲಿ ಒಂದು ಹೊಸ ಹಾಳೆಯನ್ನೇ ತೆರೆದಿರುತ್ತಾರೆಂದು ಇನ್ನಾದರೂ ತಿಳಿದುಕೊಳ್ಳಿ. ಅನೇಕ ವರ್ಷಗಳಿಂದ ಈ ನೋಟಿಫೈಡ್ ಏರ್ಯ ನಡೆಯುತ್ತಿದ್ದರೂ ಈ ಹಿಂದೆ ಮಾಡದ ಅನೇಕ ಕೆಲಸಗಳು ಈಗ ಮಾಡಲ್ಪಡುತ್ತಿವೆ. ಇದು, ಹೆಚ್ಚಿನ ಸಮಯವನ್ನು ಪರದೇಶದಲ್ಲಿ ಕಳೆದು ಮೀಟಿಂಗುಗಳಿಗೆ ಸರಿಯಾಗಿ ಹಾಜರಾಗದೆ ವ್ಯಕ್ತಿದ್ವೇಷವನ್ನೇ ಮುಂದಿಟ್ಟುಕೊಂಡಿರುವ ತಮಗೆ ಒಂದು ಶೂಲೆಯಾಗಿರಬಹುದು. ನೀವು ನೋಟಿಫೈಡ್ ಏರ್ಯದ ವಿಷಯ ತುಂಬಾ ಮುತುವರ್ಜಿ ತೆಗೆದುಕೊಳ್ಳುವವರೂ, ಮಹಮ್ಮದೀಯರ ಬೀದಿಯಲ್ಲಿ ತುಂಬಾ ಅಭಿಮಾನ ಇರುವವರೂ ಆಗಿದ್ದರೆ ಮೊನ್ನೆ ತಾನೇ ನಡೆದ ಚುನಾವಣೆಗೆ ಏಕೆ ಒಬ್ಬ ಉಮೇದುವಾರನಾಗಿ ನಿಲ್ಲಲಿಲ್ಲ? ಜನರಿಗೆ ತಮ್ಮಲ್ಲಿರುವ ವಿಶ್ವಾಸವನ್ನು ಅರಿತುಕೊಂಡಿರುವಿರಲ್ಲವೇ? ಇದನ್ನೆಲ್ಲಾ ಪೂರ್ತಿ ಬರೆಯುವುದಾದರೆ ಪತ್ರಿಕೆಯ ಹೆಚ್ಚಿನ ಸ್ಥಳವನ್ನು ಆಕ್ರಮಿಸಬೇಕಾಗುತ್ತೆ. ಅದರಲ್ಲಿ ಪ್ರಯೋಜನವಿಲ್ಲ. ಆದ್ದರಿಂದ ಇನ್ನಾದರೂ ಸರಕಾರದವರು ನಿಮಗೆ ಕೊಡುತ್ತಿರುವ ಪೆನ್ಶನನ್ನು ಅನುಭವಿಸುತ್ತ ಶಾಂತ ಚಿತ್ತರಾಗಿರಿ. ರೈತರ ಹಿತದಲ್ಲಿ ಕೆಲಸ ಮಾಡುವ ಉದ್ಯೋಗಸ್ಥರ ಮನಸ್ಸು ಕೆಡಿಸುವ ಪ್ರಯತ್ನದಿಂದ ಪ್ರಯೋಜನವಿಲ್ಲ. ಈ ತರದ ವ್ಯಕ್ತಿಯು ನಿಮಗೆ ಬೇಡ.

'ಒಬ್ಬ ಮೆಂಬರು.'

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ 52,54,750 ರೂ. ಭರವಸೆಯ 4689 ಪ್ರಪೋಸಲ್‌ಗಳು ಸಿಕ್ಕಿವೆ. ಅವರಲ್ಲಿ ಹಿಂದಿನ ವರ್ಷದ ಪೂರ್ತಿಯಾಗದ 1447 ಪ್ರಪೋಸಲ್‌ಗಳ ಬಾಬ್ತು 40,67,650 ರೂ. ಗಳ ಬಗ್ಗೆ ವರ್ಷಾವಧಿ 2,21,959–6–0 ರೂ. ವಿಮಾ ಕಂತು ಬರುತ್ತೆ. ಕಂಪೆನಿಯಿಂದ ಭರವಸೆ ಪಡೆದಿರುವ ಹಣ ರೂ. 39,38,150. ಬಾಕಿ ರೂ. 1,29,500 ಪುನಹ ಭರವಸೆ ಕೊಟ್ಟಿದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುವರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತಿವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ 4,13,775 ಹೆಚ್ಚಿದೆ.

ಈ ಕೆಳಗಿನ ಒಳ್ಳೆ ಸಂಗತಿಗಳಿಂದ ಲಭಿಸಿದ ತೃಪ್ತಿಯನ್ನು ಮೆಂಬರುಗಳೊಡನೆ ಅನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯಾ ಸರ್ಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪೆನಿಗಳಿವೆಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಶೂರೆನ್ಸ್ ಈಯರ್ ಬುಕ್' ಎಂಬುವುದರಿಂದ ತಿಳಿದುಬರುತ್ತದೆ. ಈ ಕಂಪೆನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪೆನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ವರೆಗೆ ಶ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೇಯದಾಗಿದೆ. ಒಂದನೇಯದಾದ ಕಂಪೆನಿಯು ಇದಕ್ಕಿಂತ 25 ವರ್ಷಗಳ ಮುಂದೆ ಸ್ಥಾಪಿಸಲ್ಪಟ್ಟದ್ದಾಗಿದೆ.

ವಿಮಾ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮಾ ಕಂತುಗಳ ಆದಾಯವು (ಪುನಹ ಭರವಸೆ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮಾ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ವರದಿ ವರ್ಷದ ವಿಮಾ ಕಂತಿನ ಆದಾಯವು ರೂ 3,66,198–13–0, ಗತ ವರ್ಷದ್ದು 2,36,767–6–6 ಆಗಿದೆ.

ಜೀವವಿಮಾ ಫಂಡು:—ಈ ಕಂಪೆನಿಯ ಜೀವ ವಿಮಾ ಫಂಡು ರೂ 75,258–14–9ರಿಂದ, ವ್ಯವಸ್ಥಾ ಕ್ರಮಕ್ಕೆ ಮತ್ತು ಇತರ ಖರ್ಚಿಗಾಗಿ ರೂ 45,037–8–4 ವಜಾ ಕಳೆದು ರೂ. 21,00,421–1–3ಕ್ಕೆ ಏರಿದೆ. ಈ ಕೆಳಗೆ ಅವರ ತಪಸೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿಮಾ ಕಂತು	ಜೀವ ವಿಮಾ ಫಂಡು.
1ನೇ ವರ್ಷದ	ರೂ. 1,46,949	ರೂ. 15,619
2ನೇ ವರ್ಷದ	,, 2,36,767	,, 75,259
3ನೇ ವರ್ಷದ	,, 3,66,199	,, 2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪೆನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತ ವಿಮಾ ಕಂಪೆನಿಗಳ ವಾರ್ಷಿಕ ವೃತ್ತಾಂತದಲ್ಲಿ ಹೊಗಳಲರ್ಹವಾದದ್ದೇ ಆಗಿದೆ.

ಭಾರತ ಜೀವವಿಮಾ ಕಂಪೆನಿಗಳ ಆಕ್ಟಿನ ಮೇರೆ ಠೇವಣಾತಿ:—ಈ ಇನ್ಶೂರೆನ್ಸು ಮೇರೆ ಠೇವಣಾತಿ ಮಾಡತಕ್ಕದಿದ್ದ ರೂ, 2 ಲಕ್ಷವನ್ನು ಪೂರ್ತಿಯಾಗಿ ಡಿಪಾಜಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷವುಳ್ಳವರಾಗಿರುವರು.

ಸಿ. ಯಂ. ತಿಮ್ಮಯ್ಯ,

(12–9) ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

ಯೂನಾನಿ ಫಾರ್ಮಸಿಯ ಉತ್ತಮ ಔಷಧಿಗಳು.

ಉಬ್ಬಸ ಸಂಹಾರಿ (Asthma cure) ಕೆಲವು ದಿನಗಳ ಸೇವನೆಯಿಂದ ಉಬ್ಬಸವನ್ನು ಖಾತ್ರಿಯಾಗಿ ಗುಣಪಡಿಸುತ್ತದೆ. 40 ದಿನದ ಔಷಧಿಗೆ ಕ್ರಯ ರೂ· 5—12—0.

ಅಂಬರ್ ಕೊವಲೆಟ್ಟ, ಸುಗಂಧಯುಕ್ತ ಆಮ್ಲಕೇಶ ತೈಲ ಅಲ್ಲದೆ ಎಲ್ಲಾ ರೋಗಗಳಿಗೂ ರಾಮಬಾಣದಂತಿರುವ ಮಾತ್ರೆಗಳೂ, ಚೂರ್ಣಗಳೂ, ಲೇಹಗಳೂ, ತೈಲಗಳೂ ಮತ್ತು ಕೇಶ ತೈಲಗಳೂ ಸಹ ತಯಾರಿರುವುವು.

ಬೇಗನೆ ಬರೆಯಿರಿ:—

ಯಂ. ಯಂ. ಸಿದ್ದೀಕ್,

22 ಪ್ರೊಪ್ರೈಟರ್,

ಯುನಾನಿ ಔಷಧಶಾಲಾ, ಮಡಿಕೇರಿ, ಕೊಡಗು.

2790 ಭಾಷೆಗಳು.

ಪ್ರಪಂಚದಲ್ಲೆಲ್ಲಾ ಒಟ್ಟು 2790 ಭಾಷೆಗಳಿವೆಯಂತೆ.

ಈ ಭಾಷೆಗಳಲ್ಲಿ ಹೆಚ್ಚು ಶಬ್ದಗಳಿರುವುದು ಇಂಗ್ಲಿಷಿನಲ್ಲಿ. ಇದನ್ನು ಮಾತನಾಡುವವರೂ ಅನೇಕರಿದ್ದಾರೆ. ಸುಮಾರು 24 ಕೋಟಿ ಜನರಿಗೆ ಇದು ರಾಷ್ಟ್ರಭಾಷೆಯಾಗಿದೆ. ಇಂಗ್ಲೀಷು ಭಾಷೆಯಲ್ಲಿ ಸುಮಾರು 7,00,000 ಶಬ್ದಗಳಿವೆ. ಇಂಗ್ಲಿಷಿಗೆ ಎರಡನೆಯ ಭಾಷೆಯೆಂದರೆ ಜರ್ಮನ್. ಇದನ್ನು ಸುಮಾರು 11 ಕೋಟಿ ಜನರು ಮಾತನಾಡುತ್ತಾರೆ.

—o0o—

ಪೋಪ್-ಮುಸೊಲಿನಿ ವಿರೋಧ.

'ಮೇರೆ ಮಿತಿಯಿಲ್ಲದ ರಾಷ್ಟ್ರಪ್ರೇಮ, ರಾಷ್ಟ್ರೀಯತೆ, ಮತ್ತು ಜನಾಂಗ ಭಾವನೆ ಇವು ಕ್ರೈಸ್ತ ಧರ್ಮಕ್ಕೂ ಮತ್ತು ಮಾನವ ಧರ್ಮಕ್ಕೂ ವಿರೋಧವಾಗಿದೆ' ಎಂಬುದಾಗಿ ಜಗದ್ಗುರು ಪೋಪರು ರೋಮನ್ ಕೆಥೋಲಿಕ್ ಪಾದರಿಗಳ ಸಭೆಯೊಂದರಲ್ಲಿ ಹೇಳಿದರು.

ಇಟೆಲಿಯ ಫೇಸಿಸ್ಟ್ ಪಕ್ಷದವರು ಕೆಲವು ದಿನಗಳ ಹಿಂದೆ ತಾನೆ ಜನಾಂಗ ಭಾವನೆಯ ನೀತಿಯನ್ನು ನಿರ್ಧರಿಸಿದರು. ಈಗ ಪೋಪರಿಗೂ ಮತ್ತು ಮುಸೋಲಿನಿಗೂ ಮತಭೇದ ಬಂದಂತಾಯಿತು.

—o0o—

ಸೋವಿಯಟ್ ಅಧಿಕಾರಿಗಳ ಸಂಬಳ.

ರಷ್ಯದ ಸೋವಿಯಟ್ ಫೆಡರೇಟೆಡ್ ಸೋಷಿಯಲಿಸ್ಟ್ ರಿಪಬ್ಲಿಕ್ಕಿನ ಕೇಂದ್ರ ಕೌನ್ಸಿಲ್ ಸಭೆಯು ಸೇರಿ 1½. ಗಂಟೆಗಳ ಕಾಲ ಚರ್ಚಿಸಿ, ಸದಸ್ಯರ ಸಂಬಳವು 600 ರೂಬಲ್ಲುಗಳು (ಸುಮಾರು 104 ರೂ. ಗಳು) ಇರಬೇಕೆಂದೂ, ಸಭೆ ಸೇರಿದ ದಿನ ಪ್ರತಿಯೊಬ್ಬ ಸದಸ್ಯರಿಗೂ 100 ರೂಬಲ್ಲುಗಳ (ಸುಮಾರು 17-5-4 ರೂ. ಗಳು) ಸಂಭಾವನೆಯನ್ನೂ ಮತ್ತು ಉಚಿತವಾದ ಪ್ರಯಾಣ ಸೌಕರ್ಯವನ್ನೂ ಕೊಡಬೇಕೆಂದು ನಿಶ್ಚಯಿಸಿತು.

ತರುವಾಯ ಕೇಂದ್ರ ಕೌನ್ಸಿಲಿನ ಸಭೆಯು ಮುಕ್ತಾಯವಾಯಿತು.

ಅಸೆಂಬ್ಲಿಯ ಅಧ್ಯಕ್ಷರಿಗೂ ಮತ್ತು ಉಪಾಧ್ಯಕ್ಷರಿಗೂ ವರ್ಷವೊಂದಕ್ಕೆ 'ಪ್ರಾತಿನಿಧ್ಯ ಸಂಭಾವನೆ' ಯೆಂದು ವಿಶೇಷ ಸಂಭಾವನೆಯನ್ನು ಕೊಡಲಾಗುವುದು. ಅದರಂತೆ ಅಧ್ಯಕ್ಷರಿಗೆ 1,50,000 ರೂಬಲ್ಲುಗಳನ್ನು (ಸುಮಾರು 26,000 ರೂ. ಗಳು) ಕೊಡಲಾಗುವುದು.

ರಿಪಬ್ಲಿಕ್ ಕೇಂದ್ರ ಕೌನ್ಸಿಲಿನಲ್ಲಿರುವ 727 ಸದಸ್ಯರಲ್ಲಿ 272 ಸದಸ್ಯರು ಸರಕಾರದ ಅಧಿಕಾರಿಗಳು, ಸಂಸ್ಥಾನದ ಕಾರಾಗಾರಗಳ ವ್ಯವಸ್ಥಾಪಕರು 64 ಜನ, ಸಂಸ್ಥಾನದ ಅಕಾಡಮಿ ಪ್ರತಿನಿಧಿಗಳು 13 ಜನ. ಈಗಾಗಲೇ 194 ಜನ ಸದಸ್ಯರಿಗೆ ಸೋವಿಯಟ್ ಸರಕಾರದ ಬಿರುದುಬಾವಲಿಗಳು ದೊರೆತಿವೆ.

ರಿಪಬ್ಲಿಕಿನ ರಾಜ್ಯಾಂಗ ವ್ಯವಸ್ಥೆಯನ್ನು ಬದಲಾಯಿಸಿ ಜಾರ್ ಗವರ್ನರ ಗಿರಿಯಂತೆ ರಷ್ಯವನ್ನು ಸಣ್ಣ ಸಣ್ಣ ಪ್ರಾಂತ್ಯಗಳಾಗಿ ವಿಂಗಡಿಸಬೇಕೆಂದು ಕೌನ್ಸಿಲಲ್ಲು ಅಭಿಪ್ರಾಯಪಟ್ಟಿತು.

—o0o—

ವಿವಿಧ ವಿಚಾರ.

ಹಲವು ಮಕ್ಕಳ ತಾಯಿ!

ಮೆಕ್ಸಿಕೋ ದೇಶದಲ್ಲಿ ಸೆನೋರಾ ಮರ್ಸಿಡಿಸ್ ಮೊರೇಲ್ಸ್ ಎಂಬ 63 ವರ್ಷ ಪ್ರಾಯದ ಓರ್ವ ಹೆಂಗಸಿದ್ದಾಳೆ. ಅವಳು 29 ಮಕ್ಕಳಿಗೆ ಜನನವಿತ್ತಿರುವಳು. ಈ ಪೈಕಿ 19 ಮಂದಿ ಜೀವಂತರಾಗಿದ್ದಾರೆ. ಇವರ ಪ್ರಾಯ 4 ವರ್ಷದಿಂದ 44 ರ ವರೆಗಿದೆ. ಅವಳ ಮಕ್ಕಳು, ಮೊಮ್ಮಕ್ಕಳು, ಮರಿ ಮಕ್ಕಳು-ಎಲ್ಲ ಒಟ್ಟು 150 ಮಂದಿ ಇದ್ದಾರಂತೆ. ಇಷ್ಟು ಸಂತತಿಗೆ ಇವಳು ಕಾರಣಳಾದುದಕ್ಕೆ ಸರಕಾರದಿಂದ 200 ಪವನಿನಷ್ಟು ಇವಳಿಗೆ ಬಹುಮಾನ ದೊರೆತಿದೆ.

—o0o—

ಕಣ್ಣಿಗೆ ಕಾಣದ ವಿಮಾನ.

ಬ್ರಿಟಿಷ್ ವಿಜ್ಞಾನಿಗಳು ಅದೊಂದು ಬಗೆಯ ಪಾರದರ್ಶಕ ವಸ್ತುವಿನಿಂದ ವಿಮಾನಗಳನ್ನು ತಯಾರಿಸಲು ಪ್ರಯತ್ನಿಸುತ್ತಿರುವರು. ಅವರ ಪ್ರಯತ್ನಗಳು ಫಲಕಾರಿಯಾದರೆ, ಇನ್ನು ಮುಂದಿನ ವಿಮಾನಗಳು ಮೇಲಿದ್ದಾಗ ಪ್ರಾಯಶಃ ಕಣ್ಣಿಗೇ ಕಾಣಿಸಲಿಕ್ಕಿಲ್ಲ.

ಆ ವಸ್ತುವು ಕನ್ನಡಿಯಂತೆ ಪಾರದರ್ಶಕವಾಗಿರುವುದಲ್ಲದೆ, ಈಗ ವಿಮಾನಗಳನ್ನು ತಯಾರಿಸುತ್ತಿರುವ ವಸ್ತುಗಳಂತೆ ಗಟ್ಟಿಯೂ ಬಲವೂ ಆಗಿರುವುದು. ಅಂತು ಇನ್ನು ಮುಂದೆ ಗೋಪ್ಯವಾಗಿ ಬಂದು, ನಗರಗಳ ಮೇಲೆ ಬೊಂಬೆಸೆದು ಹೋಗಲು ಸುಲಭವಾಯಿತೆನ್ನಿ!

—o0o—

'ಉದಯಿಸುವ ಸೂರ್ಯನ' ಊಟ.

ಜಪಾನೀಯರು ಚೀನದಲ್ಲಿ ನಡೆಸುತ್ತಿರುವ ಯುದ್ಧದ ವೆಚ್ಚವನ್ನು ಒದಗಿಸುವುದಕ್ಕಾಗಿ 'ಉದಯಿಸುವ ಸೂರ್ಯ'ನೆಂಬ ಊಟವನ್ನು ಅವರು ಈಗ ತಮ್ಮ ಹೊಟೇಲುಗಳಲ್ಲಿ ಕೊಡುತ್ತಿರುವರು.

ಅನ್ನದ ಒಂದು ಉಂಡೆ ಮಾಡಿ ಅದರ ತಲೆಯ ಮೇಲೆ ಒಂದಿಷ್ಟು ಉಪ್ಪಿನಕಾಯಿ ಹಾಕುವುದು. ಬಿಳಿ ಬಣ್ಣದ ಹಿನ್ನೆಲೆಯ ಮೇಲೆ ಕೆಂಪು ಬಣ್ಣದ ಉದಯಿಸುವ ಸೂರ್ಯನೇ ಅವರ ಧ್ವಜವಾದುದರಿಂದ ಈ ಬಗೆಯ ಊಟಕ್ಕೂ 'ಉದಯಿಸುವ ಸೂರ್ಯ'ನೆಂದು ಹೆಸರು ಕೊಡಲಾಗಿದೆ.

ಜುಲೈ 7 ನೆಯ ದಿನ-ಜಪಾನೀಯರು ಚೀನದೊಡನೆ ಯುದ್ಧವನ್ನು ಪ್ರಾರಂಭಿಸಿದ ವಾರ್ಷಿಕೋತ್ಸವದ ದಿನ-ಇದು ಮೊದಲು ಬಳಕೆಯಲ್ಲಿ ಬಂತು. ಅದೇ ದಿನವನ್ನು ಇಡೀ ಜಪಾನು ಮಾಂಸ ತಿನ್ನದೆ ಕಳೆಯಿತು. ಮಾತ್ರವಲ್ಲ, ಇನ್ನು ಮುಂದೆ ಯುದ್ಧಕ್ಕಾಗಿ ಹಣವನ್ನು ಶೇಖರಿಸಲು ಪ್ರತಿ ತಿಂಗಳಲ್ಲಿ ಒಂದು ದಿನವನ್ನಾದರೂ ಮಾಂಸಾಹಾರವಿಲ್ಲದೆ ಕಳೆಯಬೇಕಾಗಿ ನಿರ್ಧರಿಸಲಾಗಿರುವುದು.

—o0o—

'ಇಚ್ಛಾ ಮರಣ.'

ರೆಹ್‌ಮಾನ್ ಬೆ ಎಂಬೊಬ್ಬ ಈಜಿಪ್ಟಿನ ಫಕೀರನು ಇಂಗ್ಲೆಂಡಿನಲ್ಲಿ ತನ್ನ ಯೋಗ ಸಾಮರ್ಥ್ಯವನ್ನು ಪ್ರದರ್ಶಿಸಿ ಜನರಲ್ಲಿ ಬಹಳ ಆಶ್ಚರ್ಯವನ್ನುಂಟುಮಾಡಿದ್ದಾನೆ. ಬಹಳ ಹರಿತವಾದ ಎರಡು ಖಡ್ಗಗಳ ತುದಿಯ ಮೇಲೆ ತನ್ನ ಖಾಲಿ ಬೆನ್ನನ್ನಿಟ್ಟು ಮಲಗುತ್ತಾನೆ. ಈ ಸಮಯದಲ್ಲಿ ಅವನ ಕಣ್ಣುಗಳು ಮುಚ್ಚಿರುತ್ತವೆ. ಅವಯವಗಳು ಬಹಳ ಬಿರುಸಾಗಿರುತ್ತವೆ. ರಕ್ತಚಲನೆ ನಿಂತಿರುತ್ತದೆ. ಹೀಗಿರುವಾಗ ಅವನು 'ಇಚ್ಛಾ ಮರಣ'ವನ್ನು ಹೊಂದಿಕೊಂಡಿರುವನೆಂಬುದು ನಿಸ್ಸಂದೇಹ. ಅನಂತರ ಜನರು ನೋಡುತ್ತಿದ್ದಂತೆಯೇ ಅವನು ಈ ಸ್ಥಿತಿಯಿಂದ ಮೇಲಕ್ಕೇಳುತ್ತಾನೆ. ಸ್ವಲ್ಪ ಸಹ ಮೈಯಿಂದ ರಕ್ತ ಸೂಸುವುದಿಲ್ಲ.

ಐದು ದಿನಗಳ ಸಮಾಧಿ.

ಒಮ್ಮೆ ಅವನು ರಸದ ಪೆಟ್ಟಿಗೆಯೊಳಗೆ ಮಲಗಿದನು. ಆ ಪೆಟ್ಟಿಗೆಯು ಅವನ ದೇಹಸಹಿತ ಐದು ದಿನಗಳ ವರೆಗೆ ಸಮುದ್ರದಡಿಯಲ್ಲಿತ್ತಂತೆ. ಅವನನ್ನು ಹೊರತೆಗೆದು ವಿಜ್ಞಾನಿಗಳು ಪರೀಕ್ಷಿಸಿದರು. ಯಾವ ಹಿಕ್‌ಮತ್ತೂ ಅವರಿಗೆ ಕಾಣಲಿಲ್ಲ. ಹೀಗೆ ಸಮಾಧಿಸ್ಥಿತಿಯಲ್ಲಿರುವುದರಿಂದ ಶರೀರದ ಕ್ರಿಯೆಗಳೆಲ್ಲ ಸತ್ತು ಸರ್ವರೋಗಗಳೂ ನಾಶವಾಗಿ ಹೋಗುತ್ತವೆಂದು ಅವನು ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿದನಂತೆ. 'ನನಗೆ ಇಷ್ಟ ಬಂದಾಗ, ವಿದ್ಯುಚ್ಛಕ್ತಿಯ ದೀಪವನ್ನು ನಂದಿಸುವಂತೆ, ಅತಿ ಸುಲಭವಾಗಿ ನನ್ನ ಶ್ವಾಸಚಲನೆಯನ್ನು ನಾನು ನಿಲ್ಲಿಸುತ್ತೇನೆ' ಎಂದವನು ಹೇಳಿರುವನು. ಯೋಗಾಭ್ಯಾಸದ ಬಲವೆಷ್ಟೆಂಬುದು ಇದರಿಂದ ತಿಳಿಯಬಹುದಲ್ಲವೆ?

—o0o—

ಮಾತಾಡುವ ಕಾಗದಗಳು!

ಡಚ್ ಅಂಚೆ ಇಲಾಖೆಯವರು ಒಂದು ಹೊಸ ಯಂತ್ರವನ್ನು ರಚಿಸಿದ್ದಾರೆ. ಇದರಿಂದ ಜನರು ತಮಗೆ ಬರುವ ಸುದ್ದಿಗಳನ್ನು ಕಿವಿಯಿಂದ ಕೇಳಬಹುದು, ಪತ್ರವನ್ನು ಓದಬೇಕಾಗಿಲ್ಲ! ಒಂದು ರಿಕಾರ್ಡಿಂಗ್ ಮೆಶಿನಿನ 'ಸ್ಲೋಟ್' ಯಂತ್ರಕ್ಕೆ ಒಂದು ನಾಣ್ಯ ಹಾಕಿ ಅದರ ಮುಂದೆ ಕುಳಿತು ತಾನು ಕಳಿಸಬೇಕಾದ ಸುದ್ದಿಯನ್ನು ಆ ಮೆಶಿನಿನೆದುರು ಉಸುರಿದರಾಯಿತು. ಗ್ರಾಮಫೋನು ರಿಕಾರ್ಡಿನಂತೆ ಒಂದು ರಿಕಾರ್ಡು ತಯಾರಾಗುತ್ತದೆ. ಅದನ್ನು ಕಾಗದದಲ್ಲಿ ಸುತ್ತಿ ವಿಳಾಸ ಬರೆದು ಅಧಿಕಾರಿಗಳಿಗೆ ಕೊಡುವುದು. ವಿಳಾಸದಾರರು ಅದನ್ನು ತಮ್ಮ ಅಂಚೆ ಆಫೀಸಿನಿಂದ ಪಡೆದು ಗ್ರಾಮಫೋನು ಯಂತ್ರದಲ್ಲಿರಿಸಿ ಅದನ್ನು ನುಡಿಸಿದರಾಯಿತು. ಬರಬೇಕಾದ ಸುದ್ದಿಯನ್ನು ಕಿವಿಯಿಂದ ಕೇಳಬಹುದು. ಈ ಉಪಾಯವು ಅಲ್ಲಿ ಈಗ ಬಹಳ ಪ್ರಸಿದ್ಧಿಗೆ ಬಂದಿದೆ.

—o0o—

ಯಮನ ಕಿರಣ.

ಜರ್ಮನಿಯಲ್ಲಿ ಹೊಸತಾಗಿ ತಯಾರಾದ ಯುದ್ಧ ವಿಮಾನಗಳಲ್ಲಿ ಮರಣ ಕಿರಣ (Death Rays) ಗಳನ್ನು ಬೀರುವ ಒಂದು ಯಂತ್ರವನ್ನು ಜೋಡಿಸಿದ್ದಾರೆಂದು ರೋಮಿನ ಒಂದು ವಾರ್ತೆಯು ಹೇಳುತ್ತದೆ. ವಿಮಾನಗಳನ್ನು ಇದಿರಿಸಲು ಶತ್ರುಗಳ ವಿಮಾನಗಳು ಬಂದೊಡನೆ ಈ ಕಿರಣವನ್ನು ಅವುಗಳೆಡೆಗೆ ಬೀರಿದರೆ ಸರಿ. ವಿರೋಧಿಗಳ ವಿಮಾನದ ಯಂತ್ರವು ಥಟ್ಟನೆ ನಿಂತು, ಅದು ನೆಲಕ್ಕೆ ಧೊಪ್ಪನೆ ಬಿದ್ದು ಪುಡಿ ಪುಡಿಯಾಗುವುದು.

—o0o—

ಆಯುಸ್ಸನ್ನು ಹೆಚ್ಚಿಸಲಾಗುವುದೇ?

ಪ್ರಪಂಚದ ಎಲ್ಲ ವಿಜ್ಞಾನಿಗಳು ಜೀವನದ ಕಾಲಮಾನವನ್ನು ಹೆಚ್ಚಿಸುವ ಸಲುವಾಗಿ ಅನೇಕ ಶೋಧನೆಗಳನ್ನು ನಡೆಸುತ್ತಿದ್ದಾರೆ. ಜೆಕೋಸ್ಲೊವೇಕಿಯದ ಇಬ್ಬರು ವೈದ್ಯರಿಗೆ ಈ ಶೋಧನೆಯಲ್ಲಿ ಜಯ ಸಿಗಬಹುದೆಂದು ತಿಳಿದು ಬಂದಿದೆ. ವೃದ್ಧಾಪ್ಯದ ಮುಖ್ಯ ಕಾರಣಗಳು, ಹೃಸ್ವ ಶ್ವಾಸೋಚ್ಛ್ವಾಸ, ಕಮ್ಮಿ ರಕ್ತದೊತ್ತಡ, ನಾಡಿಯ ನಿಶ್ಶಕ್ತಿ, ತಲೆ ತಿರುಗುವಿಕೆ, ನಿರ್ಬಲತೆ ಮತ್ತು ಇತರ ದೇಹ ವೈತ್ಯಾಸಗಳು.

ಈ ಲಕ್ಷಣಗಳು ಸಾಮಾನ್ಯವಾಗಿ ಕೆಲವು ರೋಗಗಳಲ್ಲಿ ಕಂಡು ಬರುವುವು. ಆಯುಃ ಪರಿಮಿತಿಗೂ ಇದೇ ಕಾರಣವಾದರೆ ಈ ರೋಗಗಳನ್ನು ನಿವಾರಿಸಿ ವೃದ್ಧಾಪ್ಯವನ್ನೂ ನಿವಾರಿಸಬಹುದೆಂಬುದೇ ವಿಜ್ಞಾನಿಗಳ ವಾದ. ಚಿಕಿತ್ಸೆಯು ಕೆಲವು ಇಂಜೆಕ್ಷನ್‌ಗಳಿಂದ ಕೂಡಿದ್ದಾಗಿರುವುದಂತೆ.

—o0o—

ಕೂದಲಿನ ಬೆಳವಣಿ

ಕೂದಲು ವರ್ಷದ ಯಾವ ಯಾವ ಕಾಲದಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿ ಬೆಳೆಯುವುದೆಂಬುದನ್ನು ಶೋಧನೆ ನಡಿಸಿ ಕಂಡು ಹಿಡಿದಿದ್ದಾರೆ. ಪಾಲ್ ಮತ್ತು ಮೇರಿ ಕುಟಿನ್ ಇವರುಗಳು ಈ ವಿಷಯದಲ್ಲಿ ಬಹಳ ಶೋಧಗಳನ್ನು ನಡಿಸಿ ತಾವು ಕಂಡು ಹಿಡಿದ ಸಂಗತಿಯನ್ನು ಈ ರೀತಿ ಪ್ರಕಟಿಸಿದ್ದಾರೆ. ಉಷ್ಣವು ಹೆಚ್ಚಾಗಿರುವಾಗ ಕೂದಲು ಹೆಚ್ಚು ಬೇಗನೆ ಬೆಳೆಯುವುದಾಗಿಯೂ ಚಳಿಯಲ್ಲಿ ಅದರ ಬೆಳವಣಿಗೆಯು ಬಹಳ ಕಡಿಮೆಯೆಂದೂ ಅವರು ತಿಳಿಸುತ್ತಾರೆ. 80 ಡಿಗ್ರಿ ಫೆರನ್ಹೈಟ್ ಉಷ್ಣದಲ್ಲಿ ದಿನ ಒಂದಕ್ಕೆ ಕೂದಲು 1/50 (ಐವತ್ತನೇ ಒಂದು) ಇಂಚಿನಷ್ಟಕ್ಕಿಂತ ಸ್ವಲ್ಪ ಅಧಿಕವಾಗಿ ಬೆಳೆಯುವುದಂತೆ. ತೆದೇ 50-60 ಡಿಗ್ರಿ ಫೆರನ್ಹೈಟ್ ಶಾಖದಲ್ಲಿ ದಿನ ಒಂದರ ಒಂದಿಂಚಿನ (1/75) ಎಪ್ಪತ್ತೈದನೇ ಒಂದಂಶದಷ್ಟು ಬೆಳೆಯುವುದಂತೆ. ಈ ವಿಷಯವು 'ಗುಡ್ ಹೆಲ್ತ್' ಪತ್ರಿಕೆಯಲ್ಲಿ ಪ್ರಕಟವಾಗಿದೆ.

—o0o—

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯೊದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತವೆ. ಲಂಕ್ಷಾಂತರ ಜನರಿವನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ

ಆತಂಕ ನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ,

52–8 ಬೆಂಗಳೂರು ಸಿಟಿ.

---

೬೨ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೀಕಂಪನಿ

ಸುಪ್ರಸಿದ್ಧ ಜ್ವರದ ಗುಳಿಗೆ

ಇದು ಛಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ದಿನ ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ನಾನಾತರದ ಜ್ವರಗಳ ಮೇಲೆ ತತ್ಕ್ಷಣವೇ ಗುಣ ಸಂಜೀವಿನಿಯಂತಿದೆ! ಬಾಟ್ಲಿಗೆ 1 ರೂ. 4 ಬಾಟ್ಲಿಗೆ 3 ರೂ. 12 ಬಾಟ್ಲಿಗೆ 8 ರೂ. ವಿ. ಪಿ. ಖರ್ಚು ಬೇರೆ.

ಗಣೇಶ ರಾಮಚಂದ್ರ ಕರ್ಕೀ.
ಮತ್ತು ಕಂಪೆನಿ,

(52–35) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಾಗಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ಣಮ್ಮನವರು

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ ಸುಬ್ರಾಯನವರು

ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು

ಪೊನ್ನಂಪೇಟೆನಾಡು—ಮೆ ಪಿ. ಜಿ. ಮುದ್ದಮ್ಮಯ್ಯನವರು.

ಹುದಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಜಿ ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮೆ ಕೆ ಮೊಗಪ್ಪನವರು.

ನಾಪೋಕ್ಲು—ಮೆ. ಬೆಳ್ಳಿಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)

ಸೂಚನೆ.—ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ,

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

The Bombay Mutual Life Assurance Society Ltd.,

Head Office:–BOMBAY. **Estd. 1871.**

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರದ ಮೇರೆ 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ 26ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್
ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52–22

[ಚಿಕ್ಕ ಡಾಕ್ಟರ್] **ವೇಪ್ರಿನ್** [ರಿಜಿಸ್ಟರ್ಡ್]

ಚರ್ಮವ್ಯಾಧಿಗಳ ವೈರಿ—ಪ್ರತಿ ಒಬ್ಬರ ಸ್ನೇಹಿತ—ಸ್ವದೇಶಿ ವಸ್ತು.



ಇದರ ಲೇಪನದಿಂದ ತಜ್ಜಿ, ಘಾಯ, ವ್ರಣ, ಇಸಬು, ಸಾರು ಹುಣ್ಣು, ಮೂಲವ್ಯಾಧಿ, ಸುಟ್ಟಿನ ಘಾಯ, ಮುದ್ದಣ(Pimples ಸುಟ್ಟಘಾಯ, ಕತ್ತಿಘಾಯ, ತೊಡವಾಳೆ, ಗಣಕರ್ಣ ಇವು ಮಾಯವಾಗುವವು. ಇದು ಸುರಿಯುತ್ತಿರುವ ರಕ್ತವನ್ನು ನಿಲ್ಲಿಸಿ ನೋವನ್ನು ನಿವಾರಿಸುವುದು. ಅಲ್ಲದೆ ಇಂದ್ರಜಾಲದೋಪಾದಿಯಲ್ಲಿ ಚೇಳಿನ ವಿಷವನ್ನು ಬಹಿರ್ಗತಪಡಿಸುವುದು. ನಿಮ್ಮಲ್ಲಿ ಒಂದು ಬಾಟ್ಲು ಇದ್ದಲ್ಲಿ ಒಬ್ಬ ಡಾಕ್ಟರೇ ಇದ್ದಂತಾಗುವುದು. 'ಕ್ರಯ ಬಹಳ ಸುಲಭ.

1/2 ಔನ್ಸ್ ಬಾಟ್ಲು 1ಕ್ಕೆ ಆಣೆ 0–8–0. 1/4 ಔನ್ಸ್ ಬಾಟ್ಲು 1ಕ್ಕೆ ಆಣೆ 0–4–0.

ವಿ. ಸೂ:—ಪೆಟ್ಟು ತಾಗಿದ ಸ್ಥಳದಲ್ಲಿ ವೇಪ್ರಿನ್ ಚೆನ್ನಾಗಿ ತಿಕ್ಕುವುದು. ಇಲ್ಲವೇ ಬಟ್ಟೆಯ ಮೇಲೆ ಸವರಿ ಅಂಟಿಸುವುದು. ನಂತರ ಸಾಬೂನಿನಿಂದ ಕೈ ತೊಳೆಯುವುದು. ಇವಲ್ಲದೆ ಇನ್ನೂ ಅನೇಕ ತರಹದ ಔಷಧಿಗಳು ನಮ್ಮಲ್ಲಿವೆ.

ಲಸ್ಟರ್ ಮ್ಯಾನಿಫ್ಯಾಕ್ಚರಿಂಗ್ ಕಂಪೆನಿ,
ಡಿ. ಪೊ. ಬೆಂಗಳೂರು ಸಿಟಿ.

52–52 ಸೋಲ್ ಏಜೆಂಟ್:—ಹರಿದಾಸ್ ನಂಜುಂಡ ಗುಪ್ತ,
ಮಡಿಕೇರಿ, (ಕೊಡಗು).

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆಶೀತಗಳಿಗೂ ಅಮೃತ. ಬೆಲೆ 0-4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ 0-4-0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ.

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ. ಬೆಲೆ 0-8-0, 0-4-0.

ಸುಕುಮಾರತೈಲ

18

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ತಿರಿತ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ. ಬೆಲೆ 1-0-0

ಪ್ರೊಪ್ರೈಟರ್—ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತ್.

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ಣಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22
6 ತಿಂಗಳಿಗೆ—	„ 100.	„ 35.	„ 22.	„ 13
3 ತಿಂಗಳಿಗೆ—	„ 60.	„ 20.	„ 13.	„ 8.
1 ತಿಂಗಳಿಗೆ—	„ 25.	„ 10.	„ 6.	„ 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವವು.

ಮೆ. ಯಂ. ಹೆಚ್. ಕೃಷ್ಣಮೂರ್ತಿ, (ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಎಲ್. ಎಸ್. ಸಿ. ವಾಸ್, (ಇನ್ಸ್‌ಪೆಕ್ಟರ್, ಮಡಿಕೇರಿ.)

52-31 ಮೆ. ಡಿ. ಶೇಷಾದ್ರಿ, ಅ. ಇನ್ಸ್‌ಪೆಕ್ಟರು, ಶಿವಮೊಗ್ಗಾ.

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ — ಪಿ. ಐ. ಬೆಳ್ಯಪ್ಪ.

ತಾ. ೧೨—೮—೧೯೩೮.

ವಾರ್ಷಿಕ ಚಂದಾ ರೂ. ೩-೮-೦

ಸಂಪುಟ ೧೮] [ಸಂಚಿಕೆ ೧೧

THE CANARA BANKING CORPORATION, UDIPI, Ltd.

(Incorporated in British India)

Estd 1906.

STATEMENT OF AFFAIRS AS ON 30th JUNE, 1938

Capital and Liabilities

1	Paid up Capital	Rs	3,03,145	0	0
2	Reserves	„	3,88,788	6	8
3	Deposits	„	39,34,585	9	6
4	Due to Bankers	„	13,57,642	14	11
5	Bills for collection per contra	„	1,13,331	3	2
6	Sundries	„	2,00,858	1	8
	Total		62,98,351	6	11

Property and Assets:

1	Landed Property, Premises and Buildings, Safes and Furniture	Rs	3,63,004	5	0
2	Advances	„	36,56,673	2	3
3	Investment on Govt Securities Debentures Shares etc		17,53,922	5	2
4	Cash on Hand and with Bankers at call	„	3,45,380	5	10
5	Bills for collection	„	1,13,331	3	2
6	Sundries		66,040	1	6
	Total	„	62,98,351	6	11

Udipi,
8th July 1938

52-36

V R. Kamath, B A., LL B.,
Manager

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳೂ ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯಶಾಲೆಯು ರೋಗಿಗಳನ್ನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ [illegible] ಬರುತ್ತದೆ. ದೂರದಲ್ಲಿರುವ ಮಹನೀಯರು ಅವರ ರೋಗದ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಅನುಭವದಿಂದ ಈ ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಶೀತಜ್ವರ, ಮೂಲವ್ಯಾಧಿ, ದಣಿವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಾಲೆ, ಪಕ್ಕೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ 1-0-0 ಟಪ್ಪಾಲು ಹಾಸಲು ಪ್ರತ್ಯೇಕ.

7

ಸಿ. ಹೆಚ್. ರಾಮಣ್ಣ ವೈದ್ಯರ್.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ವರ್ತಕ ಭಂಡಾರಗಳಲ್ಲಿರಬೇಕಾದ ರಿಜಿಸ್ತರುಗಳು ಅಂದರೆ—ಜಮಾ, **ಖರ್ಚು, ಸಾಲ ಮೂಲದ** ರಿಜಿಸ್ತರು, **ಸಾಲದ** ರಿಜಿಸ್ತರು, ಮೆಂಬರು ರಿಜಿಸ್ತರು, ಶೇರು ರಿಜಿಸ್ತರು, **ಡಿಪಾಜಿಟ್ಟು** ರಿಜಿಸ್ತರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ತರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಸಂಚಾಲಕನಲ್ಲಿಯೂ ಇರಬೇಕಾದ ಸಹಕಾರ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಇತರ ಪುಸ್ತಕಗಳೂ ಅಲ್ಲದೆ ಜನ್ಮಪಂಚಾಂಗ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ವರ್ತಕ ಭಂಡಾರದ ಕರಾರು, ಸ್ಟೋರ್ ಕೀಪರ ಬಾಂಡು ಮತ್ತು ನಾನಾ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಇವು ಬೇಕಾದ ಸಂಘದವರು ಆರ್ಡರು ಕೊಟ್ಟಲ್ಲಿ ವಿ. ಪಿ. **ಮೂಲಕ** ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,760	0	0
ಜಮೂಬಂದ ಠೇವಣಾತಿ	–	2,52,649	7	4
ವಸೂಲಾದ ಕ್ಷೇಮನಿಧಿ	–	1,36,284	9	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	41,275	9	0
ಟ್ರಿಸ್ಟ್ ಡಿಪಾಜಿಟ್ಟು	–	37,190	15	8

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1 9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ಟ್ರಿಸ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು. ಟ್ರಿಸ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಚೌರೀರ ಎ. ಮಂದಣ್ಣನವರು ಬಿ. ಎ., ಬಿ. ಎಲ್.
ಸೆಕ್ರೆಟರಿ:—ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ., ಬಿ. ಎಲ್.

ತಾ. 1-8-1938

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)
ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಷ್ಟಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! ಇಚ್ಛಿಸಿದಾಗ ಹಣ ಹಿಂದಕ್ಕೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ಪೈಯಕ್ತ್ರಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ಜಮೆಮಾಡಿ ಕೊಡುವ ತಾರೀಖನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-11

The Agricultural & Industrial Bank Ltd

"ZANDU"

ಝಂಡೂರವರ	ಝಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝಂಡೂ ಅಯೋಡೈಸ್ಡ್ ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಧ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52-1) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು-ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು [illegible] ರಿಗೆ ಅತ್ಯಂತ [illegible] ವ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ, [illegible] ಪತನ ರೋಗದಾಗುವಿಕೆ, ಸೊಂಟ ನೋವು, ಕೈಕಾಲು ಬತ್ತುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನು ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ 2—8—0.

ಮಲೇರಿಯಾ ನಿವಾರಿಣಿ

ಇದು ಚಳಿ ಜ್ವರ, ಚಾತುರ್ಥಿ ಜ್ವರ, ದಿನ ಬಿಟ್ಟುಬರುವ ಜ್ವರ, ಮಲೇರಿಯಾ ಜ್ವರ, ಇನ್‌ಫ್ಲುಯೆಂಜಾ ಇತ್ಯಾದಿ ನಾನಾ ತರದ ಜ್ವರಗಳ ಮೇಲೆ ರಾಮಬಾಣ.
ಬಾಟ್ಲಿ 1ರ ರೂ. 1—8—0; ಸಣ್ಣ ಬಟ್ಲಿ ರೂ. 0—13—0.

ಸ್ಪ್ಲೀನ್ ಮಿಕ್ಚರ್ ೧ ೨ರ

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಅಶಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟು ಮಾಡುವುದು. ಬಾಟ್ಲಿ 1ರ ರೂ. 1—2—0.

ಬಾಲಗ್ರಹ ಗುಟಿಕೆ

ಮಕ್ಕಳಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ಮಂಗಳೂರು ಸ್ಟೋರ್ಸ್, ಮಡಿಕೇರಿ. ವಿ. ಬಿ. ಕಾಮತ್, ಮಡಿಕೇರಿ. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. ಸುಂದರ್ ಪ್ರಭು, ಸುಳ್ಯ. [5]

ವಿ ವಿ ಧ ವಿ ಚಾ ರ.

ಅಲ್ಯುಮಿನಂ ನಿಬ್ಬುಗಳು.

ಈ ವರೆಗೆ ಲೇಖಣಿಯ ಮೊನೆ (ನಿಬ್ಬು) ಗಳನ್ನು ಲೋಹದಿಂದ ತಯಾರಿಸುತ್ತಿದ್ದರು. ಆದರಿಂದ ಪುನಃ ಪುನಃ ಮಸಿಯಲ್ಲಿ ಮೊನೆಯನ್ನು ಅದ್ದಬೇಕಾಗುತ್ತದೆ. ಅದಕ್ಕಾಗಿ ಮಸಿಯನ್ನು ಇಂಗಿಸಿಕೊಂಡಿಡುವ ಮೊನೆಗಳನ್ನು ತಯಾರಿಸುತ್ತಿದ್ದಾರೆ. ಲೋಹದ ಬದಲು ಅಲ್ಯುಮಿನಂ ಉಪಯೋಗಿಸುತ್ತಾರೆ. ಆದರಿಂದ ಸಿದ್ಧವಾದ ಮೊನೆಗಳ ಕೊನೆಗೆ ವಿದ್ಯುತ್ತಿನ ಸಹಾಯದಿಂದ ಆಮ್ಲಜನಕದ ಸಂಸ್ಕಾರ ಕೊಡುತ್ತಾರೆ. ಆದರಿಂದ ಮೊನೆಗಳು ಮಸಿಯನ್ನು ಇಂಗಿಸಿಕೊಳ್ಳುವಂತಹ ಅತಿಸೂಕ್ಷ್ಮ ರಂಧ್ರಗಳುಳ್ಳವಾಗುತ್ತವೆ. ಒಂದು ಸಲ ಮಸಿಯಲ್ಲಿ ಅದ್ದಿದರೆ ಬಹಳ ಹೊತ್ತಿನವರೆಗೆ ಬರೆಯಲಾಗುವದು

—oOo—

ಕೃತ್ರಿಮ ಬೆಳದಿಂಗಳು.

ನ್ಯೂಯಾರ್ಕಿನ ಒಬ್ಬ ಎಂಜನಿಯರರು ಹೊಸ ಶೋಧವೊಂದನ್ನು ಮಾಡಿದ್ದಾರೆ. ಅದರಿಂದ ಮನೆಯಲ್ಲಿ ಕೂತಲ್ಲಿಯೆ ದಂಪತಿಗಳಿಗೆ ಬೆಳದಿಂಗಳ ರಮ್ಯತೆಯನ್ನು ಅನುಭವಿಸಲಿಕ್ಕೆ ಅನುಕೂಲವಾಗಿದೆ. ಈ ಬಗೆಯ ದೀಪದಂತೆಯೆ ನಳಿಗೆಯಿಂದ ಹೊರಡುವ ಗ್ಯಾಸಿನಿಂದ ಅದು ಹೊತ್ತುತ್ತದೆ. ವಿದ್ಯುದ್ದೀಪದಂತೆಯೆ ಗುಂಡಿಯನ್ನು ಒತ್ತಿದ ಕೂಡಲೆ ಆ ಬೆಳದಿಂಗಳ ದೀಪವು ಹತ್ತುತ್ತದೆ. ಅದೇ ರೀತಿಯಲ್ಲಿ ಹಗಲು-ಬೆಳಕನ್ನೂ ಕೃತ್ರಿಮವಾಗಿ ಹುಟ್ಟಿಸಲು ಬರುವದೆಂದು ಆ ಸಂಶೋಧಕರು ಹೇಳುತ್ತಾರೆ. ಅವರು ಮತ್ತೂ ಒಂದು ದೀಪವನ್ನು ಶೋಧಿಸಿದ್ದಾರೆ. ಅದರಿಂದ ಗೋಡೆಗಳ ಮೇಲೆ ಬೇಕಾದ ಬಣ್ಣದ ಕಿರಣಗಳನ್ನು ಹರಡಲು ಬರುವದು. ಇಂದು ಮನೆಯೊಳಗಿನ ಗೋಡೆಗಳು ನೀಲಿ ಬಣ್ಣದವಾಗಿ ಕಂಡರೆ ನಾಳೆ ಹಸರು ಬಣ್ಣದವಾಗಿ ಕಾಣುವಂತೆ ಮಾಡಲು ಬರುವದು.

—oOo—

ಸಪ್ಪಳ ತಡೆಯಲು ಗಾಜು.

ಕೋಣೆಗಳಲ್ಲಿ ಗಾಳಿಬರದಂತೆ ಬೆಳಕನ್ನಷ್ಟೆ ಬಿಡುವದಕ್ಕೆ ಗಾಜಿನ ಕಿಡಿಕೆಗಳನ್ನು ಉಪಯೋಗಿಸುತ್ತಾರೆ. ಆದರೆ ಅವರಿಂದ ಸಪ್ಪಳಕ್ಕೆ ಪೂರ್ಣ ತಡೆಯಾಗುವದಿಲ್ಲ. ಅದಕ್ಕೀಗ ಗಾಳಿಯನ್ನೂ ಬೆಳಕನ್ನೂ ಒಳಗೆ ಬಿಟ್ಟು ಸಪ್ಪಳವನ್ನಷ್ಟೆ ನುಂಗುವ ನೊರೆಯಂತಹ ಗಾಜುಗಳನ್ನು ಇಲಿನ್ವಾಯ್ ಗ್ಲಾಸ್ ಕಂಪೆನಿಯವರು ತಯಾರಿಸಿದ್ದಾರೆ. ಆ ಗಾಜು ಸ್ಪಂಜಿನಂತೆ ಅಸಂಖ್ಯ ಸೂಕ್ಷ್ಮ ರಂಧ್ರಗಳುಳ್ಳದ್ದಾಗಿದೆ. ಮತ್ತು ಮಿದುವಾಗಿರುವದರಿಂದ ಬೇಕಾದ ಆಕಾರಕ್ಕೆ ತಿರುಗಿಸಿ ಬೇಕಾದ ಸ್ಥಳವಲ್ಲದನ್ನು ಕೂಡಿಸಲೂ ಬರುವದು. ಅದಕ್ಕೆ ಬಣ್ಣವು ಸುಲಭವಾಗಿ ಅಂಟುವದರಿಂದ ದಿನಕ್ಕೊಂದು ಬಣ್ಣವನ್ನು ಕೊಟ್ಟು ಅಲಂಕಾರಿಕವಾಗಿ ಉಪಯೋಗಿಸಲೂ ಬರುವದು. ಅದು ಗಾಳಿ ಬೆಳಕುಗಳನ್ನು ಸಾಕಷ್ಟು ಒಳಗೆ ಬಿಡುವುದಲ್ಲದೆ, ಅದರ ಸೂಕ್ಷ್ಮ ರಂಧ್ರಗಳಲ್ಲಿ ಸಪ್ಪಳವು ಇಂಗಿಹೋಗುವದು.

—oOo—

ಮೈಸೂರಿಗೆ ರಾಷ್ಟ್ರಪತಿಗಳ ಆಗಮನ.

ಶ್ರೀ ಸುಭಾಷರು ಈ ತಿಂಗಳಲ್ಲೇ ದಕ್ಷಿಣ ಪ್ರಾಂತ್ಯಗಳ ಸಂಚಾರ ಗೈಯುವಾಗ ಮೈಸೂರು ಸಂಸ್ಥಾನಕ್ಕೂ ಚಿತ್ತೈಸಬೇಕೆಂದು ಮೈಸೂರು ಸಂಸ್ಥಾನಿಕ ಕಾಂಗ್ರೆಸ್ ಪಕ್ಷದವರು ಕೇಳಿಕೊಂಡಿರುವರು.

—oOo—

ಗಗನದಲ್ಲಿ ಕಾರನ್ನು ಹಾರಿಸುವರು.

—oOo—

ಅಮೇರಿಕದಲ್ಲೊಂದು ಮೋಟಾರು ತಯಾರಾಗಿದೆ. ಇದು ನೆಲದ ಮೇಲೆ ತಾಸಿಗೆ 75 ಮೈಲಿಗಳಂತೆ ಓಡಬಲ್ಲದು. ಇದಕ್ಕೆ ಇಕ್ಕೆಡೆಗಳಲ್ಲಿಯೂ ಗರಿಗಳಂಥ ಭಾಗಗಳಿವೆ. ಮುಂದೆ ಪ್ರೊಪೆಲ್ಲರೂ ಇದೆ. ಇದು ನೆಲದ ಮೇಲೆ ಮೋಟಾರು ಓಡುವಾಗ ತಿರುಗದಿದ್ದರೂ ಹಾರಾಡುವಾಗ ತಿರುಗುತ್ತದೆ. ಏನಿಲ್ಲ! ಬರೇ ೮ ನಿಮಿಷಗಳ ಬುದ್ಧಿವಂತಿಗೆ ಖರ್ಚು ಮಾಡಿದರೆ ಸಾಕು! ಕೂಡಲೇ ಈ ಮೋಟಾರು ಕಾರು ಮಾರ್ಗವನ್ನೇ ಬಿಟ್ಟು ಗಾಳಿಯಲ್ಲಿ ಹಾರತೊಡಗುವುದು. ಭೂಚರವೂ, ಖೇಚರವೂ ಆದ ಇದು ಗಾಳಿಯಲ್ಲಿ ತಾಸಿಗೆ 125 ಮೈಲಿ ಹಾರಬಲ್ಲದು. ಧನಿಕರ ತರುಣಿಯರನ್ನು ಹಾರಿಸಬೇಕೆಂದಿರುವ ಪ್ರಿಯರಿಗೆ ಸುಯೋಗ! ಪರದೇಶಗಳಲ್ಲಿ ಏನೇನು ನಡೆಯಲಿಕ್ಕಿದೆಯೋ ಯಾರಿಗೆ ಗೊತ್ತು!!

—oOo—

ಜಪಾನಿನ ಹೊಸ ಅಸ್ತ್ರ.

ಸುದ್ದಿಗಳನ್ನು ಕಳುಹಿಸುವುದಕ್ಕಾಗಿ ಪಾರಿವಾಳಗಳನ್ನು ಹಿಂದೆ ಉಪಯೋಗಿಸುತ್ತಿದ್ದರು. ಅದೇ ರೀತಿಯಾಗಿ ಜಪಾನಿನ ವಿಜ್ಞಾನಿಯೊಬ್ಬನು ಜೇನು ನೊಣಗಳನ್ನು ಈ ಕೆಲಸಕ್ಕಾಗಿ ತರಬೇತು ಮಾಡುತ್ತಿದ್ದಾನೆ. ಏನಿಲ್ಲೆಂದರೂ ಇವನ ಬಳಿ ಹಲವು ಲಕ್ಷ ಜೇನು ನೊಣಗಳಿವೆ. ಇವು ವಿದ್ಯೆಯಲ್ಲಿ ಪಾಸಾದೊಡನೆ ತಮ್ಮ ಯಜಮಾನನು ಹೇಳಿದಂತೆ ವರ್ತಿಸಬಲ್ಲವಂತೆ. ಅಲ್ಲದೆ ಈಗ ತಾಸಿಗೆ ಮೂರು ಮೈಲಿಗಳಂತೆ ಇವು ಪ್ರಯಾಣ ಮಾಡುತ್ತಿದ್ದರೂ ಇವು ಮುಂದೆ ತಾಸಿಗೆ ಮೂವತ್ತು ಮೈಲಿಗಳಂತೆ ಓಡಬಲ್ಲವೆಂದು ಯೋಚಿಸಲಾಗಿದೆ. ಇವುಗಳಿಗೆ ಕಲಿಸಿಕೊಡುವ ಸಂದೇಶವಾದರೂ ಪೂರ್ವ ಕಾಲದ್ದೇ. ವರುಣಾಸ್ತ್ರ, ವಾಯುವಾಸ್ತ್ರ, ಸರ್ಪಾಸ್ತ್ರ ಮುಂತಾದವುಗಳಿದ್ದಂತೆ 'ಜೇನು ನೊಣಾಸ್ತ್ರ'ವನ್ನು ಮುಂದೆ ಯುದ್ಧದಲ್ಲಿ ಉಪಯೋಗಿಸಬಹುದು. ಇವುಗಳ ಉದ್ಯೋಗವೆಂದರೆ ಅಪ್ಪಣೆ ದೊರೆತೊಡನೆ ಹಾರಿ ವೈರಿಗಳನ್ನು ಕಡಿದು ಬಿಡುವುದು! ನೋಡಿ ಜಪಾನಿನ ಮುಂದಿನ ಸೈನಿಕರು!!

—oOo—

ಮಾನಿನಿಯ [illegible]

[illegible] ಯುವತಿಯೊಬ್ಬಳು ವರನು ಬೇರೆಯವರೊಡನೆ [illegible] ಅವನ ಕೈ ಬೆರಳನ್ನು ಕತ್ತರಿಸಿ ಹುಡುಗಿಗೆ ಕೊಟ್ಟರೇ ಹುಡುಗಿಯು ಅವನನ್ನು ವರಿಸುವದು. ಈ ಕೈ ಬೆರಳನ್ನು ತನ್ನ ಕತ್ತಿಗೆ ಹಾಕಿಕೊಳ್ಳುವಳು. ಅಂದರೆ ಬಹುಶಃ [illegible] ಅಲ್ಲಿ ಹೆಣ್ಣು ಸಿಕ್ಕುವಂತಿಲ್ಲ.

—oOo—

ಮಣ್ಣು ತಿನ್ನುವ ಜನರು.

ಮಣ್ಣು ತಿನ್ನು ಅಂತ ಯಾರಾದರೂ ಅಂದರೆ, ಸಿಟ್ಟು ಕೋಪಿಸಿಕೊಳ್ಳುತ್ತೀರಷ್ಟೆ. ಮಣ್ಣನ್ನು ಖುಷಿಯಿಂದ ತಿನ್ನುವ ಜನರಿದ್ದಾರೆ. ಓರಿನೋಕೋ ನದಿ ತೀರದಲ್ಲಿ ವಾಸಿಸುತ್ತಾರೆ. ನದಿಯ ಪ್ರವಾಹ ನಂತರ, ದಡದಲ್ಲಿನ ಮೃದುವಾದ ಮಣ್ಣನ್ನು ಕಿತ್ತಳೆ ಹಣ್ಣಿನ ಗಾತ್ರ ಕಟ್ಟಿ ಒಣಗಿಸಿ [illegible] ಹುಣ್ಣಿಮೆಗಳಲ್ಲಿ [illegible] ಅದ್ದಿ ತಿನ್ನುತ್ತಾರೆ. ಆಹಾ, [illegible] ಬದಲು!

—oOo—

ಅದೃಶ್ಯ ವಿಮಾನ.

ಬ್ರಿಟಿಷ ವಿಜ್ಞಾನಿಗಳು ಅದೊಂದು ಬಗೆಯ ಪಾರದರ್ಶಕ ವಸ್ತುವಿನಿಂದ ವಿಮಾನಗಳನ್ನು ತಯಾರಿಸಲು ಪ್ರಯತ್ನಿಸುತ್ತಿರುವರು. ಅವರ ಪ್ರಯತ್ನಗಳು ಫಲಕಾರಿಯಾದರೆ, ಇನ್ನು ಮುಂದಿನ ವಿಮಾನಗಳು ಮೇಲಿದ್ದಾಗ [illegible] ಕಣ್ಣಿಗೆ ಕಾಣಿಸಲಿಕ್ಕಿಲ್ಲ.

ಆ ವಸ್ತುವು ಕನ್ನಡಿಯಂತೆ ಪಾರದರ್ಶಕವಾಗಿರುವುದಲ್ಲದೆ, ಈಗ ವಿಮಾನಗಳನ್ನು ತಯಾರಿಸುತ್ತಿರುವ ವಸ್ತುಗಳಂತೆ ಗಟ್ಟಿಯೂ ಬಲವೂ ಆಗಿರುವದು. ಅಂತು ಇನ್ನು ಮುಂದೆ ಗೋಪ್ಯವಾಗಿ ಬಂದು, ನಗರಗಳ ಮೇಲೆ ಬಾಂಬುಗಳನ್ನು ಹಾಕಲು ಸುಲಭವಾಯಿತಿನ್ನು!

—oOo—

ಇಂಜೆಕ್ಷನ್ ಮೂಲಕ ಭೋಜನ.

ಊಟ ಮಾಡಲು ಸಾಧಾರಣವಾಗಿ ಬಾಯಿಂದ ತೆಗೆದುಕೊಳ್ಳುವದು ಜಗತ್ತಿನಲ್ಲಿ ರೂಢಿಯಲ್ಲಿದೆ. ಹೀಗಿರುವಾಗ ವಿಜ್ಞಾನ ಪರಿಶೋಧನೆಯಿಂದ ಈ ಕಷ್ಟವೂ ತಪ್ಪುವದಾಗಿದೆ.

ವಾಷಿಂಗ್ಟನ್ ವಿಶ್ವವಿದ್ಯಾನಿಲಯದ ವೈದ್ಯಕೀಯ ಶಾಲೆಯ ಡಾ. ರಾಬರ್ಟ ಎಲ್ಮನ್‌ರವರು ಇಂಜೆಕ್ಷನ್ ಮೂಲಕವೇ ಆಹಾರವನ್ನು ತೆಗೆದುಕೊಳ್ಳಬಹುದೆಂಬ ಅಂಶವನ್ನು ಕಂಡು ಹಿಡಿದಿರುವರು. ಹಾಲು, ಲವಣ ಮತ್ತು ನೀರು ಇವುಗಳನ್ನು ಇಂಜೆಕ್ಷನ್ ಮಾಡಬಹುದಾಗಿದೆ. 'ಪ್ರೋಟೀನ್'ನ್ನು ರಕ್ತದೊಳಕ್ಕೆ ಇಂಜೆಕ್ಟ್ ಮಾಡಬಹುದಾಗಿದೆ. ಇದರಿಂದ ಆಹಾರವನ್ನು ಸಂಪೂರ್ಣವಾಗಿ ಇಂಜೆಕ್ಷನ್ ಮೂಲಕವೇ ತೆಗೆದುಕೊಳ್ಳಬಹುದಾಗಿದೆ.

—oOo—

ಸಮುದ್ರದಡಿಯಲ್ಲಿ ಕಾಡು.

ಸಮುದ್ರದಡಿಯಲ್ಲಿ ಅನೇಕ ಮರಗಳಿಂದ ಕೂಡಿದ ಅಡವಿ ಪ್ರದೇಶಗಳಿರುವದಾಗಿ ವನಸ್ಪತಿ ಶಾಸ್ತ್ರಜ್ಞರು ಕೆಲವರು ಕಂಡು ಹಿಡಿದಿರುವರು. 18 ಇಂಚು ವ್ಯಾಸವುಳ್ಳ [illegible] ಮರಗಳಂತೆ [illegible] ಸಮುದ್ರ ವೃಕ್ಷವೊಂದು [illegible] ಶಾಸ್ತ್ರಜ್ಞರಿಗೆ ದೊರಕಿರುವದು.

ಸಮುದ್ರದಡಿಯಲ್ಲಿರುವ ಈ ಕಾಡುಗಳಲ್ಲಿ [illegible] ಮರಗಳ [illegible] 600 ಅಡಿ ಎತ್ತರದ ಮರವನ್ನು ಕಂಡು ಹಿಡಿದಿದ್ದಾರೆ.

—oOo—

[illegible] ಜೇಡರ ಮೂಳೆಗಳು.

ಜೇಡರ ಹುಳಗಳು [illegible] ಇದಕ್ಕಾಗಿ ಜೇಡರ [illegible] ಕಾಲನ್ನು [illegible] ಗಾಳಿಯು [illegible] ನೀರಿನ [illegible] ಹಾರಿ [illegible] ಆ [illegible] ಲ್ಲವು.

—oOo—

ಜೇಡರ ಬಲೆಯ ನೂಲು.

ಮನುಷ್ಯನ ತಲೆಗೂದಲಿಗಿಂತ ಐದು ಪಟ್ಟು ಸಣ್ಣಾಗಿರುವದು ಜೇಡನ ಬಲೆಯ ನೂಲು. ಮನುಷ್ಯನೀಗ ಆ ಸೂಕ್ಷ್ಮ ನೂಲನ್ನು ತನ್ನ ವೈಜ್ಞಾನಿಕ ಸಾಧನಗಳಿಗೆ ಉಪಯೋಗಿಸುತ್ತಿದ್ದಾನೆ. [illegible] ಸೂಕ್ಷ್ಮ [illegible] ಉಪಯೋಗಿಸುತ್ತಿದ್ದಾರೆ. [illegible] ಸಾಧನಗಳ [illegible] (X) ಸೂಕ್ಷ್ಮ [illegible] ನೂಲು [illegible] ಉಪಯುಕ್ತವಾಗಿದೆ [illegible] ಜೇಡನ [illegible] ಒಂದೊಂದು ಜೇಡನ ಹೊಟ್ಟೆಯಿಂದ ಒಂದು ಸಲಕ್ಕೆ ತೆಗೆದ ನೂಲು 350 ಫೂಟಿನ ವರೆಗೆ ಉದ್ದವಾಗಿರುವದು.

—oOo—

ವರ್ಕಿಂಗ್ ಕಮಿಟಿಯ ಕೆಲಸಕಾರ್ಯಗಳು.

ಮಧ್ಯಪ್ರಾಂತದ ಮಂತ್ರಿಗಳ ಬಿಕ್ಕಟ್ಟಿನ ವಿಚಾರದಲ್ಲಿ ಪತ್ರಿಕೆಗಳು ಪ್ರಕಟಿಸಿದ ವಿಷಯಗಳು ಬೋಧಪ್ರದವಾಗಿವೆ. ಡಾ. ಖಾರೆಯವರಂಥ ಅನುಭವಸ್ಥ ಮುಖಂಡರ ವರ್ತನೆಗೆ ವರ್ಕಿಂಗ್ ಕಮಿಟಿಯವರು ಮಾಡಿದ ಠರಾವಿನ ಮೇಲೆ ತೀವ್ರ ಟೀಕೆಗಳು ಬರುವವೆಂದು ಊಹಿಸಿರಲಿಲ್ಲ. ವರ್ಕಿಂಗ್ ಕಮಿಟಿಯ ಕೆಲಸ ಕಾರ್ಯಗಳ ಮೇಲೆ ವಿಶ್ವಾಸಘಾತುಕ ಮಾಡಿದ ಟೀಕೆಗಳ ಅಜ್ಞಾನಕ್ಕೆ ನಾನು ಸಿದ್ಧನಿಲ್ಲ.

ಡಾ. ಖಾರೆಯವರು ಪಾರ್ಲಿಮೆಂಟರಿ ಬೋರ್ಡಿನ ಎಚ್ಚರಿಕೆಯನ್ನು ತಿರಸ್ಕರಿಸಿದ ಒಂದು ತಪ್ಪುದಾರರಲ್ಲ. ಗವರ್ನರರಿಂದ ಸಮೂನೆ ಮಾಡಿಸಿಕೊಂಡು ತಮ್ಮ ಮುಖಂಡತ್ವದ ಅನರ್ಹತೆಯನ್ನು ತೋರಿಸಿ ಕಾಂಗ್ರೆಸಿನ ವರ್ಚಸ್ಸಿಗೆ ಕುಂದುಕ ತಂದರು. ಅವರು ತಪ್ಪನ್ನು ಒಪ್ಪಿಕೊಂಡು ಮುಖಂಡತ್ವವನ್ನು ಬಿಡಬೇಕೆಂದು ವರ್ಕಿಂಗ್ ಕಮಿಟಿಯವರು ಕೊಟ್ಟ ಬೋಧನೆಯನ್ನು ಉಲ್ಲಂಘಿಸಿ ತಮ್ಮ ತಪ್ಪಿನ ಆಳತೆಯನ್ನು ಹೆಚ್ಚಿಸಿಕೊಂಡರು. ವರ್ಕಿಂಗ್ ಕಮಿಟಿಯು ಖಾರೆಯವರ ಈ ವರ್ತನೆಯನ್ನು ಖಂಡಿಸಿ ಅವರ ಅನರ್ಹತೆಯನ್ನು ನಿರ್ಣಯಿಸದಿದ್ದ ಪಕ್ಷ ಅದು ತನ್ನ ಕರ್ತವ್ಯ ಭ್ರಷ್ಟತೆಯನ್ನು ಮಾಡಿದಂತಾಗುತ್ತಿತ್ತು. ಈ ಪಂಕ್ತಿಗಳನ್ನು ವ್ಯಸನದಿಂದ ಬರೆಯಬೇಕಾಗಿದೆ. ಡಾ. ಖಾರೆಯವರು ನನ್ನ ಸ್ನೇಹಿತರು. ಎಷ್ಟೋ ಸಲ ನನಗೆ ಖಾಯಿಲೆ ಇದ್ದಾಗ ಔಷಧಿ ಕೊಟ್ಟು ನನ್ನ ಶುಶ್ರೂಷೆ ಮಾಡಿದ್ದಾರೆ. ನನ್ನ ಬೋಧನೆ ಮತ್ತು ಆಶೀರ್ವಾದಕ್ಕಾಗಿ ಎಷ್ಟೋ ಸಲ ನನ್ನ ಹತ್ತಿರ ಬಂದುದುಂಟು. ಈ ನಂಬಿಕೆಯಿಂದ ನಾನು ಕಳೆದ ತಾ. 25 ರಲ್ಲಿ ಅವರು ಮುಖಂಡತ್ವದಿಂದ ಹಿಂದಕ್ಕೆ ನಿಂತು ಕಾಂಗ್ರೆಸ್ ಶಿಸ್ತನ್ನು ಪಾಲಿಸಬೇಕೆಂದು ಧೈರ್ಯದಿಂದ ಕೇಳಿಕೊಂಡೆನು. ಅವರು ಇದಕ್ಕೆ ಒಪ್ಪುವವರಿದ್ದರು. ಆದರೆ ದುರುಪದೇಶಗಳ ಫಲಿತಾಂಶವಾಗಿ ವರ್ಕಿಂಗ್ ಕಮಿಟಿಯ ನಿರ್ಣಯವನ್ನು ಉಲ್ಲಂಘನೆ ಮಾಡಿದ್ದಲ್ಲದೆ, ಅವರ ಅವಿಚಾರಿ ರಾಜಿನಾಮೆ ಮತ್ತು ಹೊಸ ಮಂತ್ರಿ ಮಂಡಲ ರಚನೆ, ಈ ವಿಚಾರವಾಗಿ ಪ್ರಶ್ನಿಸಲು ವರ್ಕಿಂಗ್ ಕಮಿಟಿಗೆ ಯಾವ ಅಧಿಕಾರವಿದೆ ಎಂಬರ್ಥದ ಒಂದು ಕಾಗದವನ್ನೂ ಬರೆದರು. ಪೂರ್ಣ ಪರಿಭಾವನೆಯಿಂದ ಅವರು ತನ್ನ ತಪ್ಪನ್ನು ತಿಳಿದು ವರ್ಕಿಂಗ್ ಕಮಿಟಿಯ ನಿರ್ಣಯವನ್ನು ಅಂಗೀಕರಿಸಬೇಕಿತ್ತು. ಅವರ ಈ ವರ್ತನೆಯಲ್ಲಿ ಮಾನಸಿಕ ದುರಾಚಾರಗಳೇನೂ ಇಲ್ಲ. ಅವರು ಚೆನ್ನಾಗಿ ಹೋರಾಡುವವರು. ಸ್ನೇಹಿತರಿಗೆ ಸಹಾಯ ಮಾಡುವವರಲ್ಲಿ ಧಾರಾಳಿಗಳು. ಆದರೆ ಈ ಗುಣಗಳು ಒಬ್ಬ ಮುಖ್ಯ ಮಂತ್ರಿ ಇಲ್ಲವೇ ಆಳಿಕೆಗಾರರಿಗೆ ಬೇಕಾಗಿಲ್ಲ. ಸದ್ಯಕ್ಕೆ ಅವರು ಕಾಂಗ್ರೆಸಿನ ಶಿಸ್ತಿಗೆ ಅನುಸರಿಸಿ ಕೆಲಸ ಮಾಡಬೇಕೆಂಬುದೂ, ಮೇಲೆ ಹೇಳಿದ ಗುಣಗಳ ಸಂಪೂರ್ಣ ಲಾಭವನ್ನು ಕಾಂಗ್ರೆಸಿಗೆ ಕೊಡಬೇಕೆಂದೂ ನಾನು ಸ್ನೇಹಿತನಾಗಿ ಕೇಳಿಕೊಳ್ಳುವವನಾಗಿದೆ.

'ಹರಿಜನ' ಪತ್ರಿಕೆಯಲ್ಲಿ ಮಹಾತ್ಮಗಾಂಧಿಯವರು ಬರೆದ ಲೇಖನದ ಸಾರಾಂಶ.

ಡಾ. ಖಾರೆಯವರು ಅವರ ಹಟಪೂರಿ ಸ್ನೇಹಿತರಿಗೆ ಕಿವಿಗೊಡದಿದ್ದ ಪಕ್ಷ ರಾಜಿನಾಮೆಯನ್ನು ಗವರ್ನರರನ್ನು ಕೇಳದೆ ಕೊಡದೆ ವರ್ಕಿಂಗ್ ಕಮಿಟಿಯ ಅಭಿಪ್ರಾಯದಂತೆ ಮಾಡುತ್ತಿದ್ದರು. ವರ್ಕಿಂಗ್ ಕಮಿಟಿಯ ತೀರ್ಮಾನದಿಂದ ತೃಪ್ತರಾಗದಿದ್ದಿದ್ದರೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿಗೆ ಅಪೀಲು ಮಾಡಬಹುದಿತ್ತು. ಆದರೆ ಎಂಥಾ ಸಂದರ್ಭದಲ್ಲಿಯೂ ಮಂತ್ರಿಗಳು ತಮ್ಮೊಳಗಿನ ಒಡಕನ್ನು ವರ್ಕಿಂಗ್ ಕಮಿಟಿಯ ಅಪ್ಪಣೆ ಇಲ್ಲದ ಗವರ್ನರರ ಮುಂದಿಡುತ್ತಿರಲಿಲ್ಲ. ಕಾಂಗ್ರೆಸ್ ಯಂತ್ರವು ನಿಧಾನವಾಗಿ ಚಲಿಸುತ್ತಿರಬಹುದು. ಆದರೆ ಅದನ್ನು ವೇಗವಾಗಿ ಚಲಿಸುವಂತೆ ಮಾಡಬಹುದು. ವರ್ಕಿಂಗ್ ಕಮಿಟಿಯಲ್ಲಿರುವವರು ಸ್ವಾರ್ಥಿಯವರೆಂದಾದರೆ ಅವರನ್ನು ತೆಗೆಯಲು ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಇದೆ. ಇಂಥಾ ಸಂಗತಿಗಳನ್ನು ಖಾರೆಯವರು ಯೋಚಿಸದೆ ವರ್ಕಿಂಗ್ ಕಮಿಟಿ ಮೀಟಿಂಗಿನ ದಿನ ಗವರ್ನರರಲ್ಲಿಗೆ ಹೋಗಿ ತಮ್ಮ ಯಾತನೆಯನ್ನು ನಿವೇದಿಸಿದ್ದರಿಂದ ಅಕ್ಷಮ್ಯ ಅಪರಾಧವನ್ನು ಮಾಡಿರುವರು.

ಡಾ. ಖಾರೆಯವರ ಬದಲಾಗಿ ನೇಮಿಸಲ್ಪಟ್ಟವರು ಸ್ವಾರ್ಥಸಾಧಕರೆಂದೂ, ಅಯೋಗ್ಯರೆಂದೂ, ಖಾರೆಯವರನ್ನು ಯಾವ ಗುಣದಿಂದಲಾದರೂ ಹೋಲಿಸಲು ಅಸಮರ್ಥರೆಂದೂ ಸೂಚನೆ ನಡೆದಿದೆ. ಈ ಟೀಕೆದಾರರಿಂದ ಟೀಕಿಸಲ್ಪಟ್ಟಂತೆ ಅವರಿದ್ದ ಪಕ್ಷ ಅವರು ಕೈಕೊಂಡಿರುವ ಪ್ರಾಮುಖ್ಯ ಕೆಲಸಗಳಲ್ಲಿ ಹಿಂದೆ ಬೀಳಬೇಕಾದದ್ದು ವಾಸ್ತವವಾಗಿದೆ. ಆಗ ಸಹ ವರ್ಕಿಂಗ್ ಕಮಿಟಿಯು ತನ್ನ ಮೇರೆಯನ್ನು ತಿಳಿದು ವರ್ತಿಸಬೇಕಾಗಿದೆ. ಮಂತ್ರಿಗಳು ಚುನಾಯಿತ ಮೆಂಬರರು. ಅವರನ್ನು ಚುನಾಯಿಸಿದ ಪಾರ್ಟಿಯೇ ಪುನಃ ಅವರನ್ನು ಆರಿಸಿದರೆ ಅವರು ಜನತೆಯ ನಂಬಿಗೆಗೂ, ಕಾಂಗ್ರೆಸ್ ಶಿಸ್ತಿಗೂ ಸರಿಯಾಗಿರುವವರೆಗೆ ಆ ವಿಷಯ ಪ್ರಶ್ನಿಸಲು ವರ್ಕಿಂಗ್ ಕಮಿಟಿಗೆ ಅಧಿಕಾರವಿಲ್ಲ. ಇಂಥಾ ಬಿಕ್ಕಟ್ಟುಗಳಿಂದ ಮಂತ್ರಿಗಳು ಧೈರ್ಯಯುತರಾಗಬೇಕು. ಅವರ ಮೇಲೆ ಹೊರಿಸಿದ ಆರೋಪಣೆಗಳು ನಿರಾಧಾರವಾದವುಗಳೆಂದೂ ಅವರ ಕರ್ತವ್ಯಗಳನ್ನು ನಿಸ್ವಾರ್ಥಿಗಳಾಗಿ, ಜಯಪ್ರದವಾಗಿ ನಡೆಸಲು ಸಶಕ್ತರೆಂದೂ ವ್ಯಕ್ತಪಡಿಸುವುದು ಅವರಲ್ಲಿದೆ.

ವರ್ಕಿಂಗ್ ಕಮಿಟಿಯವರು ಈ ಬಿಕ್ಕಟ್ಟಿನ ಸಂದರ್ಭದಲ್ಲಿ ಗವರ್ನರರು ವಹಿಸಿದ ಪಾತ್ರದ ವಿಚಾರ ಮಾಡಿದ ನಿರ್ಣಯವನ್ನು ಪಕ್ಷಪಾತವಿಲ್ಲದೆ ಪತ್ರಿಕೆಗಳು ಟೀಕಿಸಿವೆ. ವರ್ಕಿಂಗ್ ಕಮಿಟಿಯವರ ನಿರ್ಣಯವು ಹೇಗೆ ಗವರ್ನರರಿಗೆ ಅನ್ಯಾಯ ಮಾಡಿದೆ ಎಂಬುದು ಎಂದೂ ನನಗೆ ತಿಳಿಯದ್ದಾಗಿದೆ. ಅವರ ವರ್ತನೆಯನ್ನು ಪರಿಶೀಲಿಸುವದಾದರೆ ಡಾ. ಖಾರೆ ಮತ್ತು ಅವರ ಸಹಪಾಠಿಗಳ ರಾಜಿನಾಮೆಯನ್ನು ಸ್ವೀಕರಿಸಿದ್ದು, ಬಾಕಿ ಮಂತ್ರಿಗಳನ್ನು ರಾಜಿನಾಮೆ ಕೊಡಬೇಕೆಂದು ಕೇಳಿದ್ದು, ಅವರ ಕಾರಣಗಳನ್ನು ತಿರಸ್ಕರಿಸಿ ಅವರನ್ನು ಡಿಸ್‌ಮಿಸ್ ಮಾಡಿದ್ದು, ಇದಕ್ಕೋಸ್ಕರವಾಗಿ ತನ್ನ ಕೆಳ ನೌಕರರನ್ನೆಲ್ಲಾ ರಾತ್ರಿ ಜಾಗರಣೆ ಇರಿಸಿದ್ದು ಇವೆಲ್ಲ ಅಯೋಗ್ಯ ವರ್ತನೆಗಳೆಂದೇ ಹೇಳಬಲ್ಲೆನು. ಡಾ ಖಾರೆಯವರ ರಾಜಿನಾಮೆಯನ್ನು ಸ್ವೀಕರಿಸದೆ ವರ್ಕಿಂಗ್ ಕಮಿಟಿ ಮೀಟಿಂಗಿನವರೆಗೆ ಇರಿಸಿದ್ದರೆ ಏನೂ ಆಗುತ್ತಿರಲಿಲ್ಲ. ಇದೇ ಮಾದರಿಯ ಬಿಕ್ಕಟ್ಟಿನಲ್ಲಿ ಬಂಗಾಳ ಗವರ್ನರರು ಮಧ್ಯಪ್ರಾಂತ ಗವರ್ನರರಿಗಿಂತ ತೀರಾ ವ್ಯತಿರಿಕ್ತನಾಗಿ ವರ್ತಿಸಿದರು. ಗವರ್ನರರ ವರ್ತನೆಯು ಖಾನೂನು ಮೀರಿ ಇರುವದೇನೋ ಖಂಡಿತ. ಆದರೆ ಅದು ಬ್ರಿಟಿಷ್ ಸರ್ಕಾರದ ಮತ್ತು ಕಾಂಗ್ರೆಸಿನ ಗುಪ್ತ ಒಡಂಬಡಿಕೆಯ ಮನಸ್ಸನ್ನು ಕೊಂದು ಹಾಕಿದೆ. ವರ್ಕಿಂಗ್ ಕಮಿಟಿಯು ಅಧಿಕಾರ ವಹಿಸಿ ಕೆಲಸ ಮಾಡಬೇಕೆಂದೂ, ಗವರ್ನರರು ಇವರ ದಿನಚರ್ಯದ ಕೆಲಸದಲ್ಲಿ ಕೈಹಾಕುವುದಿಲ್ಲವೆಂದೂ ವೈಸರಾಯರಿಂದ ಪ್ರಕಟಿಸಲ್ಪಟ್ಟ ಇಸ್ತಿಹಾರನಾಮೆ ಮೀರಿ ಈಗ ಗವರ್ನರರು ವರ್ತಿಸುತ್ತಿಲ್ಲವೆಂಬುದು ಈ ಬಿಕ್ಕಟ್ಟಿನಿಂದ ವಿಶದವಾಗುತ್ತಿದೆ. ಗವರ್ನರರ ಈ ವರ್ತನೆಯು ಕಾಂಗ್ರೆಸಿನ ವರ್ಚಸ್ಸನ್ನು ಕುಗ್ಗಿಸಿ ಅವರಲ್ಲಿ ತೊಂದರೆ ತಂದುಹಾಕಬೇಕೆಂದು ಮಾಡಿದ ಯತ್ನವೆಂದು ಯಾರಿಗಾದರೂ ತಿಳಿಯಬರದು.

ಬ್ರಿಟಿಷ್ ಆಡಳಿತೆಗಾರರಿಗೆ ವರ್ಕಿಂಗ್ ಕಮಿಟಿಯ ಠರಾವು, ಪತ್ರಿಕೆಗಳ ಟೀಕೆಗಳಿಗಿಂತ ಹೆಚ್ಚು ಮರ್ಯಾದೆಯನ್ನು ಕೊಡುವದಾಗಿದೆ. ಬ್ರಿಟಿಷ್ ಜನರು ಬೇಟೆಗಾರರು. ವಿನೋದದ ಪೂರ್ಣ ಪರಿಜ್ಞಾನವು ಅವರಿಗಿದೆ. ಅವರು ಬಲವಾಗಿ ಹೊಡೆಯಬಹುದು. ಹಾಗೆಯೇ ಅಂಥ ಹೊಡೆತವನ್ನೇ ಸಹಿಸಿಕೊಳ್ಳಬಹುದು. ಆದ್ದರಿಂದ ಕಾಂಗ್ರೆಸ್ಸಿನ ನಿರ್ಣಯವನ್ನು ಗವರ್ನರರು ಸಹನೆಯಿಂದ ತೆಗೆದುಕೊಳ್ಳುವರೆಂಬದರಲ್ಲಿ ಸಂಶಯವಿಲ್ಲ. ಅವರು ಹಾಗೆ ತೆಗೆದುಕೊಳ್ಳುತ್ತಾರೋ ಇಲ್ಲವೋ, ವರ್ಕಿಂಗ್ ಕಮಿಟಿಯು ಗವರ್ನರರ ವರ್ತನೆಯಲ್ಲಿ ಕಂಡದ್ದನ್ನು ಪ್ರಕಟಿಸುವದು ಕರ್ತವ್ಯವಾಗಿದೆ. ಸಾಧ್ಯವಿದ್ದರೆ ಅದು ಹೋರಾಟವನ್ನು ಬಿಡುತ್ತದೆ. ಇಲ್ಲವೇ ಹೂಡುತ್ತದೆ. ಹೋರಾಟವನ್ನು ನಿಲ್ಲಿಸಬೇಕಾದ ಪಕ್ಷ ಗವರ್ನರರು

ಕಾಂಗ್ರೆಸ್ ಒಂದು ರಾಜಕೀಯ ಸಂಸ್ಥೆ, ಒಂದಿಲ್ಲೊಂದು ದಿನ ಅದು ಬ್ರಿಟಿಷ್ ಸರ್ಕಾರವನ್ನು ಸ್ಥಳಾಂತರಿಸುವದೆಂಬದನ್ನು ಅರಿಯಬೇಕು. ಸಂಯುಕ್ತ ಪ್ರಾಂತ ಬೇಹಾರು ಮತ್ತು ಒರಿಸ್ಸಾ ಗವರ್ನರುಗಳು ಬಿಕ್ಕಟ್ಟು ಬಂದಾಗ ಕಾಂಗ್ರೆಸಿನ ವರ್ತನೆಯನ್ನು ಕಾಯ್ದು ನಿಂತರು. ಈ ಮೂರು ಬಿಕ್ಕಟ್ಟುಗಳಲ್ಲಿ ಅವರು ಅವರ ಹಿತಕ್ಕಾಗಿ ಹೀಗೆ ನಿಂತದ್ದೆಂದು ಹೇಳಬೇಕಾಗಿಲ್ಲ. ಮಧ್ಯಪ್ರಾಂತ್ಯದಲ್ಲಿ ಗವರ್ನರರು ಹೀಗೆ ಅವಸರ ಮಾಡಿದ್ದು ಕಾಂಗ್ರೆಸ್ಸಿನ ಅಭಾಭಂಗ ಮಾಡಲಿಕ್ಕೆಂದು ಹೇಳಬೇಡವೇ? ವರ್ಕಿಂಗ್ ಕಮಿಟಿಯ ಠರಾವು ಬ್ರಿಟಿಷ್ ಸರ್ಕಾರಕ್ಕೆ ಒಂದು ಸ್ನೇಹಪರ ಎಚ್ಚರಿಕೆಯಾಗಿದೆ.

ಈಗ ಕಾಂಗ್ರೆಸ್ಸಿನ ಕಾರ್ಯಗಳೇನು ಎಂಬದನ್ನು ವಿಚಾರಿಸುವ. ಆಂತರಿಕ ಆಡಳಿತ ಮತ್ತು ಅಭಿವೃದ್ಧಿಗೆ ಅದು ಜಗತ್ತಿನಲ್ಲೇ ಇಲ್ಲದಂಥಾ ಪ್ರಜಾಧಿಪತ್ಯ ಸಂಸ್ಥೆಯಾಗಿದೆ. ಆದರೆ ಈ ಪ್ರಜಾಧಿಪತ್ಯ ಸಂಸ್ಥೆಯು ಇಂದು ಪ್ರಪಂಚದ ದೊಡ್ಡದಾದ ಸಾರ್ವಭೌಮ ಶಕ್ತಿಯೊಡನೆ ಹೋರಾಡಬೇಕಿರುವುದರಿಂದ ಅದು ಒಂದು ಸೈನ್ಯದ ರೂಪವನ್ನು ತಾಳುವದು ಅವಶ್ಯವಿದೆ. ಹಾಗಾಗುವಾಗ ಅದು ತನ್ನ ಪ್ರಜಾಧಿಪತ್ಯವನ್ನು ಕಳಕೊಳ್ಳಬೇಕು. ಇದರ ಕೇಂದ್ರ ಅಧಿಕಾರ ವರ್ಗಕ್ಕೆ ಸೈಕೆಳಗೆ ಕೆಲಸ ಮಾಡುವ ಉಪ ಶಾಖೆಗಳ ಮೇಲೆ ಸಮಯೋಚಿತ ಮತ್ತು ಯೋಗ್ಯ ಶಿಸ್ತುಗಳನ್ನು ಜಾರಿ ಮಾಡುವ ಅಧಿಕಾರವಿದೆ. ಪ್ರಾಂತೀಕ ಸಂಸ್ಥೆಗಳ ಮತ್ತು ಪಾರ್ಲಿಮೆಂಟರಿ ಬೋರ್ಡುಗಳು ಈ ಕೇಂದ್ರ ಅಧಿಕಾರ ವರ್ಗಕ್ಕೆ ಆಶ್ರಿತವಾಗಿವೆ.

ನನ್ನ ಪ್ರತಿಪಾದನೆಯು ಖಾಯಿದೆ ಭಂಗದ ಪ್ರತ್ಯಕ್ಷ ಯುದ್ಧವಿರುವಾಗ ಸರಿಹೋಗುತಿತ್ತು. ಆದರೆ ತತ್ಕಾಲ ಅದು ನಿಲ್ಲಿಸಲ್ಪಟ್ಟಿರುವುದರಿಂದ ಈಗ ಸರಿ ಹೋಗದು. ಖಾಯಿದೆಭಂಗ ಚಳವಳ ತತ್ಕಾಲ ನಿಂತದ್ದರಿಂದ ಯುದ್ಧವೇ ನಿಂತುಹೋಯಿತು ಎನ್ನಲಾಗದು. ಇಂಡಿಯವು ಸ್ವತಂತ್ರವಾಯಿತು ಎನ್ನುವ ವರೆಗೆ ಅದು ನಿಲ್ಲಲಾರದು. ಅಷ್ಟರ ವರೆಗೆ ಕಾಂಗ್ರೆಸು ಒಂದು ಸೈನ್ಯದಂತೆಯೇ ಇರಬೇಕು. ಪ್ರಜಾಪ್ರಭುತ್ವ ಬ್ರಿಟನು ಭಾರತದಲ್ಲಿ ಕೌಶಲ್ಯದ ಒಂದು ರಾಜ್ಯಭಾರ ಕ್ರಮವನ್ನು ಏರ್ಪಡಿಸಿದೆ. ಅದರ ನಗ್ನಾವಸ್ಥೆಯಲ್ಲಿ ಅದನ್ನು ನೋಡಿದ್ದೇ ಆದರೆ ಅದು ಬರೇ ಸುಶಿಕ್ಷಿತ ಸೈನ್ಯ ಪದ್ಧತಿಯಲ್ಲದೆ ಬೇರಲ್ಲವೆಂಬುವುದು ವಿಶದವಾಗುವದು. ನಿಜವಾದ ಆ ಖಾನೂನಿನನುಸಾರ ಮಂತ್ರಿಗಳು ಅವರ ಕೈಗೊಂಬೆಗಳು. ಇಂದು ಅವರ ಕೈಕೆಳಗೆ ಕೆಲಸ ಮಾಡುತ್ತಿರುವ ಮತ್ತು ಇಂದು ಅವರನ್ನು 'ಸರ್' ಎಂದು ಸಂಭೋಧನೆ ಮಾಡುತ್ತಿರುವವರೇ ಅವರ ನಿಜ ಅಧಿಕಾರಿಗಳಾದ ಗವರ್ನರರು ಅಪ್ಪಣೆ ಮಾಡಿದ್ದೇ ಆದರೆ ಈ ಮಂತ್ರಿಗಳನ್ನು ಹಿಡಿದು ಜೈಲಿನಲ್ಲಿ ಇಡಲೂ ಬಹುದು. ಆದ್ದರಿಂದ ಕಾಂಗ್ರೆಸು ಇಂದು ಅಧಿಕಾರ ಸ್ವೀಕಾರ ಮಾಡಿದ್ದು ಸರ್ಕಾರದ ಕಾಯ.

The Bombay Life Assurance Company Ltd.

(Estd 1908.)

43-47, Churchgate Street, Fort-Bombay.

Evidence of

Progress, Security and Stability.

Year.	New Business completed.	Premium Income	Life Fund	Business in force.
1931	73,00,000	11,00,000	33,00,000	2,27,00,000
1934	1,04,00,000	19,00,000	58,00,000	3,71,00,000
1937	1,40,00,000	31,00,000	99,00,000	6,00,00,000

The Company offers all that is best and up-to-date in Life Assurance.

Applications for agencies will be considered from Honest and Respectable Ladies & Gentlemen.

For full particulars apply to any of our following Offices:—

KOCHIKAR & BROTHERS Ltd.,
Madras Branch Secretaries,
Post Box No. 337, Mount Road, MADRAS.
[Phone No. 8245.]

3

Bombay Life Building, Udipi	Gautam Nivas, Charni Road Girgaum Bombay	Visweswarapuram Circle Bangalore City	Puthiyara Calicut	Car Street Mangalore	Ottapalam S. Malabar.	Trivandrum (Travancore St.)

ದಗೆ ಸಂಯೋಗಿ ವರ್ತಿಸುವಷಕ್ಕಲ್ಲ. ಒಂದು ವಿಧದಲ್ಲಿ ಆ ಖಾಯಿದೆಯ ಬದಲಿಗೆ ನಮ್ಮದೇ ಆದ ಒಂದು ಖಾನೂನು ತರುವ ದಿನವನ್ನು ಹತ್ತಿರ ತರುವದಕ್ಕಾಗಿ ಎಂದು ಸೂಚಿಸುವದಾಗಿದೆ.

ಅದ್ದರಿಂದ ಕಾಂಗ್ರೆಸು ಒಂದು ಹೋರಾಡುವ ಸೈನಿಕನಂತೆ ತನ್ನ ಹಿಡಿತವನ್ನು ಪ್ರತಿ ಶಾಖೆ ಮತ್ತು ಪ್ರತಿ ಕಾಂಗ್ರೆಸಿನವರ ಮೇಲೂ ಇಟ್ಟು ಶಿಸ್ತಿನಿಂದ ಮುಂದುವರಿಯಬೇಕಾಗಿದೆ. ಇದಿಲ್ಲದೆ ನಮ್ಮ ಹೋರಾಟವು ಮುಂದೆ ಸಾಗಲಾರದು.

ಇದು ಇಟಲಿಯ ಫ್ಯಾಸಿಜಂ ಎಂದು ಹೇಳುವವರಿದ್ದಾರೆ. ಫ್ಯಾಸಿಜಂ ದಿಗಂಬರ ಖಡ್ಗವೆಂಬುವುದನ್ನು ಅವರರಿಯರು. ಫ್ಯಾಸಿಜಮ್ಮಿನ ಮೇರೆ ಇಂದು ಡಾ. ಖಾರೆಯವರು ತಮ್ಮ ತಲೆಯನ್ನು ಕಳಕೊಳ್ಳಬೇಕಿತ್ತು. ಆದರೆ ಕಾಂಗ್ರೆಸು ಅಹಿಂಸಾ ತತ್ವದ ಮೇಲೆ ಆಧರಿಸಿ ನಿಂತಿರುವುದರಿಂದ ಫ್ಯಾಸಿಜಮ್ಮಿಗೂ ಇದಕ್ಕೂ ಸಮ್ಮಂಧವೇ ಇಲ್ಲ. ಕಾಂಗ್ರೆಸ್ಸಿನ ರಾಜ್ಯದಲ್ಲಿ ಡಾ. ಖಾರೆಯವರು ನಾಗಪುರದ ವೀರರಾಗಿ ಇರಬಹುದು. ಇದೇ ಕಾಂಗ್ರೆಸ್ಸಿನ ಶಕ್ತಿ ಮತ್ತು ಗೌರವವಾಗಿದೆ. ಅದರ ಈ ಅಧಿಕಾರವು ಅಹಿಂಸೆಯಿಂದ ಉದ್ಭವಿಸಿದೆ. ಕಾಂಗ್ರೆಸು ಒಂದೇ ನನಗೆ ವಿಧಿತವಿರುವ ಮಟ್ಟಿಗೆ ಅ ಹಿಂ ಸಾ ಮ ಯ ವಾ ದ ರಾಜಕೀಯ ಜಗತ್ತಿನ ಪ್ರಾಮುಖ್ಯ ಸಂಸ್ಥೆಯಾಗಿದೆ. ಡಾ. ಖಾ ರೆ ಯ ವ ರಂಥಾ ಅಖಂಡ ಮುಖಂಡರನ್ನು ಸಹ ಅದರಲ್ಲಿರುವ ವರೆಗೆ ಹಿಡಿತದಲ್ಲಿಡಲು ಕಾಂಗ್ರೆಸು ಸಮರ್ಥವಿದೆ ಎಂಬುವುದು ಕಾಂಗ್ರೆಸ್ಸಿಗೆ ಹೆಮ್ಮೆಯ ಮಾತಾಗಿದೆ.

ಚೈನಾ-ಜಪಾನ್ ಯುದ್ಧ.

ಆರ್ಥಿಕ ಅಭಿವೃದ್ಧಿಯನ್ನು ಮಾಡಿಕೊಂಡು ಜಗತ್ತಿನ ಎಲ್ಲಾ ಪೇಟೆಗಳಿಗೂ ಅಗ್ಗವಾಗಿ ಸಾಮಾನುಗಳನ್ನು ಪೂರೈಸಿ ಕೊಡುತ್ತಿದ್ದ ಜಪಾನವು ಚೀನದ ವಿಸ್ತಾರವಾದ ಸಾಮ್ರಾಜ್ಯವನ್ನು ಕೈವಶ ಮಾಡಿಕೊಂಡು ರಷ್ಯವನ್ನು ಮೂಲೆಗೊತ್ತಿ ಪೂರ್ವಾರ್ಣಂತ್ಯದ 'ಬ್ರಿಟನ' ಆಗಬೇಕೆಂದು ಹವಣಿಸುತಿತ್ತು. ಅಂತೆಯೇ ಯುದ್ಧರಂಗದಲ್ಲಿ ಧೈರ್ಯ ಸಾಹಸಗಳಿಂದ ಹೋರಾಡುತಿತ್ತು. ಆದರೆ ಚೀನದ ಅಗಾಧ ಸಾಹಸ, ಸಂಘಟನೆ, ಗೊರಿಲ್ಲಾ ಸೇನೆಯ ಗತ್ತುಗಾರಿಕೆಯ ಯುದ್ಧ, ಅವರ ಅಪರಿಮಿತವಾದ ಸ್ವಾಭಿಮಾನ ಇವೆಲ್ಲಾ ಜಪಾನರ ಸ್ವಾಭಿಮಾನವನ್ನು ಕುಗ್ಗಿಸಿವೆ. ವಿಪತ್ತು ಪರಂಪರೆಗಳನ್ನು ಸಹಿಸಿಕೊಂಡು ಚೀನವು ಯಾವತ್ತೂ ನೈತಿಕ ನಿಯಮಗಳನ್ನು ಬಿಟ್ಟು ಅನ್ಯಾಯವಾಗಿ ತಮ್ಮ ಮೇಲೆ ಧಾಳಿ ಮಾಡುತ್ತಿರುವ ಜಪಾನರನ್ನು ಪ್ರತಿಭಟಿಸಿತು. ಇಂಥಾ ಧೈರ್ಯಪೂರಿತವಾದ ಪ್ರತಿಭಟನೆಯು ಜಪಾನರನ್ನು ದಂಗು ಬಡಿಸಿದೆ. ಅಲ್ಲದೆ ರಷ್ಯಾವನ್ನು ತಮ್ಮ ಗೊಡ್ಡು ಬೆದರಿಕೆಗಳಿಂದ ಭಯಗೊಳಿಸಿ ತಟಸ್ಥವಾಗುವಂತೆ ಮಾಡಬೇಕೆಂಬ ಪ್ರಯತ್ನವೂ ಮಣ್ಣುಪಾಲಾಯಿತು. ಚೀನದ ಕಾಲಾಂಶವು ಜಪಾನರ ಕೈವಶವಾಗಿದೆಯೆಂದು ಅವರು ಪ್ರಕಟಿಸಿದರೂ, ಜಪಾನರ ಅಂಕೆಯೊಳಗೆ ಚೀನದ ಯಾವ ಭಾಗವೂ ಬಂದಿರುವುದಿಲ್ಲ. ಪರಕೀಯ ಅಧಿಕಾರವನ್ನು ಚೀನಿಯರು ಎಂದೂ ಸಹಿಸುವಂತಿಲ್ಲ. ಹೀಗೆ ತಮ್ಮ ಆಸೆಗಳೆಲ್ಲಾ ನಿರಾಶೆಗೊಂಡು ಹದಗೆಟ್ಟ ಜಪಾನವು ಬಹಳ ಯೋಚನೆಗೆ ಬಿದ್ದಿದೆ. ರಷ್ಯವು ಜಪಾನರ ಏಳ್ಗೆಯನ್ನು ಸಹಿಸುವಂತಿಲ್ಲ. ಒಂದು ವೇಳೆ ರಷ್ಯಾದೊಡನೆ ಒಪ್ಪಂದ ಮಾಡಿಕೊಂಡರೂ ಚೀನದ ಒಬ್ಬನೇ ಒಬ್ಬ ಗಂಡಸು ಜೀವ ಹಿಡಿದಿರುವ ತನಕ ಪರದೇಶಿಯರ ಅಧಿಕಾರಕ್ಕೊಳಪಡೆವೆಂದು ಸಾರುತ್ತಿರುವಾಗ ಚೀನಿಯರೊಡನೆ ಹೇಗೆ ಸಂಧಾನವಾದೀತು? ಆದ್ದರಿಂದ ಯುದ್ಧವು ಮುಂದುವರಿಯುತ್ತಾ ಇದೆ.

ಉತ್ತರ ಚೀನದಲ್ಲಿ ಜಪಾನರ ದಂಡುಗಳೆಲ್ಲವೂ ರಣರಂಗದಿಂದ ಪಲಾಯನ ಸೂತ್ರವನ್ನು ಪಠಿಸುತ್ತಿರುವದಾಗಿ ವಾರ್ತೆ ಬಂದಿದೆ. ಕಳೆದ ಸ್ವಲ್ಪ ದಿನಗಳಲ್ಲಿ ಚೀನಿಯರ ಗೊರಿಲ್ಲಾ ದಂಡು ಜಪಾನರ ಕೈವಶವಿದ್ದ 22 ಜಿಲ್ಲೆಗಳಲ್ಲಿ 9ನ್ನು ಕೈವಶಪಡಿಸಿಕೊಂಡಿರುವದು. ಅಲ್ಲಿ ಜಪಾನರು ನೇಮಿಸಿದ್ದ ಮೇಜಿಸ್ಟ್ರೇಟರೆಲ್ಲರೂ ತಲೆತಪ್ಪಿಸಿಕೊಂಡು ಓಡಿ ಹೋಗಿರುವರು.

ಜಪಾನಿನ ವಾಯು ವಿಮಾನಗಳು ತಾ. 7ರಲ್ಲಿ ನಾನ್‌ಕಿಂಗಿನ ಮೇಲೆ ಬಾಂಬುಗಳನ್ನೆಸೆದವು. ನಾನ್‌ಕಿಂಗ್ ಸ್ಟೇಷನ್ ಮತ್ತು ಕಿಯೂಕಿಯಾಂಗ್ ನಾನ್‌ಚಾಂಗ್ ರೈಲ್ವೆಗಳು ಈ ಅನಾಹುತಕ್ಕೆ ತುತ್ತಾಗಿವೆ. ಜಪಾನು ಹಡಗುಗಳು ಯಾಂಗ್‌ಟ್ಸೆ ನದಿಯಲ್ಲಿ ಚೀನೀಯರ ಎರಡು ಹಡಗುಗಳನ್ನು ಮುಳುಗಿಸಿರುವವು. ಹಾಂಕೋವಲ್ಲಿ ನಡೆದ ವಾಯು ಯುದ್ಧದಲ್ಲಿ ಚೀನೀಯರ 16 ವಿಮಾನಗಳು ನಾಶವಾಗಿವೆಯಾಗಿ ತಿಳಿದುಬಂದಿದೆ.

ಯಾಂಗ್‌ಟ್ಸೆ ನದಿಯಲ್ಲಿ ಉಬ್ಬರವು ಹೆಚ್ಚುತ್ತಿರುವುದರಿಂದ ಹಾಂಕೋ ನಗರದ ಮೇಲೆ ಜಪಾನರು ಧಾವಳಿ ಮಾಡಲು ಸಾಧ್ಯವಾಗಲಾರದೆಂದು ತಿಳಿದು ಬಂದದೆ.

ತಾ. 8ರಲ್ಲಿ ಜಪಾನು ವಿಮಾನ ಸೈನಿಕರು ಕ್ಯಾಂಟನ್ ನಗರದ ಮೇಲೆ 30 ಬಾಂಬುಗಳನ್ನು ಹಾಕಿದರು. ಅನೇಕ ಚೀನೀಯರು ಗಾಯಗೊಂಡದ್ದಲ್ಲದೆ 101 ಜನರು ಮೃತರಾದರು. ತಾ. 9ರಲ್ಲಿ ಪುನಹ ಕ್ಯಾಂಟನ್ನಿನ ಮೇಲೆ ಬಾಂಬು ಹಾಕಲಾಯಿತು. 109 ಜನರು ಮೃತರಾದರಲ್ಲದೆ 159 ಜನರು ಇದರಿಂದ ಗಾಯಗೊಂಡರು.

ತಾ. 8ರಲ್ಲಿ ಚೀನೀ ಸೈನಿಕರು ಯಾಂಗ್‌ಟ್ಸೆ ನದಿಯ ದಡದಲ್ಲಿ ಜಪಾನರನ್ನು ಎದುರಿಸಿದರು. ಜಪಾನರ ಸೈನ್ಯವು ಚೀನಿಯರಿಂದ ಹಿಂದಕ್ಕೆ ಸರಿಸಲ್ಪಟ್ಟಿತು. ಈ ಕದನದಲ್ಲಿ 2 ಸಾವಿರ ಜಪಾನೀ ಸೈನಿಕರು ಗಾಯಗೊಂಡುದಲ್ಲದೆ ಅನೇಕರು ಮೃತರಾದರು.

ಕೊಡಗು

ಅಗೊಸ್ತು ತಾರೀಕು ೧೦ನೇ ಶುಕ್ರವಾರ ೧೯೩೪.

ಸಿಬ್ಬಂದಿ ಖೋತೆ.

ಕೊಡಗಿನ ಸರ್ಕಾರದ ಆರ್ಥಿಕ ಸ್ಥಿತಿಯನ್ನು ವಿಚಾರಿಸಲು ನೇಮಿಸಲ್ಪಟ್ಟು, ಕಳೆದ ಮೇ ತಿಂಗಳಲ್ಲಿ ಕೊಡಗಿಗೆ ಬಂದು ಇಲ್ಲಿಯ ಸರ್ಕಾರಿ ಇಲಾಖೆಗಳ ಮೇಲಧಿಕಾರಿಗಳನ್ನೂ ಮತ್ತು ಕೆಲವು ಉದ್ಯೋಗಸ್ಥರಲ್ಲದ ಮಹನೀಯರುಗಳನ್ನೂ ಭೇಟಿಯಾಗಿ ಸಲಹೆಗಳನ್ನು ತೆಗೆದುಕೊಂಡು ಹೋದ ಮಿ. ಪಟ್ವಾಲ್‌ರವರ ವರದಿ ತಯಾರಾಗಿ ಬಂದಿದೆಯೆಂದೂ, ಸ್ಥಳೀಯ ಸರ್ಕಾರದವರು ಅದರ ಮೇಲೆ ಪುನಹ ಇಲಾಖಾ ಮುಖ್ಯಾಧಿಕಾರಿಗಳ ಅಭಿಪ್ರಾಯ ಕೇಳುತ್ತಿದ್ದಾರೆಂದೂ ವರ್ತಮಾನ ಹರಡಿದೆ. ಆದುದರಿಂದ ಸಿಬ್ಬಂದಿ ಖೋತೆಯನ್ನು ಕುರಿತು ಒಂದೆರಡು ಮಾತುಗಳನ್ನು ಈಗ ಪುನಹ ಬರೆಯದೆ ಕಳೆಯದು. ಕೊಡಗಿನ ಸರ್ಕಾರದ ಇಲಾಖೆಗಳಲ್ಲಿ ಕಾರ್ಯಸಾಧಕತ್ವಕ್ಕೆ ಹಾನಿತಟ್ಟದೆ ಯಾವ ರೀತಿಯಲ್ಲಿ ಖರ್ಚು ಖೋತೆ ಮಾಡಬಹುದೆಂಬುದನ್ನು ಕುರಿತು ಈ ಮೊದಲು ಹಲವು ಸಾರಿ ಬರೆಯಲಾಗಿದೆ. ಅವನ್ನೇ ಪುನಹ ಎತ್ತಿ ಬರೆಯಲು ಇಚ್ಛಿಸುವುದಿಲ್ಲವಾದರೂ, ಸಿಬ್ಬಂದಿ ಖೋತೆಯನ್ನು ಕುರಿತು ಅಧಿಕಾರಿಗಳು ಅಖೈರು ತೀರ್ಮಾನಕ್ಕೆ ಬರುತ್ತಿರುವಂಥ ಈ ಸಮಯದಲ್ಲಿ ಅದರ ಮುಖ್ಯ ತತ್ವಗಳನ್ನು ಅವರ ಜ್ಞಾಪಕಕ್ಕೆ ತರುವುದು ಅವಶ್ಯವೆಂದು ಕಂಡು ಬರುತ್ತದೆ.

ಪ್ರಪಂಚದಲ್ಲಿ ಅತೀ ಬಡ ದೇಶ ಹಿಂದೂಸ್ಥಾನ; ಆದರೆ ಎಲ್ಲಾ ದೇಶಗಳಿಗಿಂತಲೂ ಹೆಚ್ಚು ದುಂದುಗಾರಿಕೆಯ ಮತ್ತು ತಲೆಭಾರದ ಆಡಳಿತ ಕ್ರಮ ಇರುವುದೂ ಈ ಬಡ ಹಿಂದೂಸ್ಥಾನದಲ್ಲಿಯೇ. ಅದರಲ್ಲೂ ನಮ್ಮ ಈ ಚಿಕ್ಕ ಪ್ರಾಂತ್ಯವು ಈ ವಿಚಾರದಲ್ಲಿ ಇಂಡಿಯಾದ ಇತರ ಎಲ್ಲಾ ಪ್ರಾಂತ್ಯಗಳನ್ನು ಮೀರಿದೆ ಎಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಆದುದರಿಂದಲೇ ಹಲವು ವರ್ಷಗಳಿಂದ ಇಲ್ಲಿಯ ವಿಶೇಷ ತಲೆಭಾರದ ಸರ್ಕಾರದಲ್ಲಿ ಯಥೋಚಿತ ಖರ್ಚು ಖೋತೆ ಮಾಡಬೇಕೆಂದು ಇಲ್ಲಿಯ ಲೆಜಿಸ್ಲೇಟಿವ್ ಕೌನ್ಸಿಲ್ ಒಳಗೂ, ಹೊರಗೂ ಚಳವಳ ನಡಿಸುತ್ತಾ ಬಂದದ್ದಾಗಿದೆ. ಆದರೆ ಇಲ್ಲಿಯ ವರೆಗೆ ಸರ್ಕಾರದವರು ಜನರ ಈ ಕೂಗಿಗೆ ಕಿವಿಕೊಡದೆ, ಮಾತ್ರವಲ್ಲ, ಅದನ್ನು ಉಲ್ಲಂಘಿಸಿ, ಅನಾವಶ್ಯವಾದ ಹುದ್ದೆಗಳನ್ನು ಏರ್ಪಡಿಸಿಕೊಂಡು ಖರ್ಚನ್ನು ಮತ್ತಷ್ಟು ಹೆಚ್ಚಿಸಿದರು; ಸರ್ಕಾರಕ್ಕೆ ಸಾಲವನ್ನು ಏರಿಸಿದರು. ಸರ್ಕಾರದ ಆದಾಯವನ್ನು ಮೀರಿ ದುಂದುಗಾರಿಕೆಯ ಆಡಳಿತ ಖರ್ಚು ಮಾಡುತ್ತಿರುವದನ್ನು ನೋಡಿ ಇಂಡಿಯಾ ಸರ್ಕಾರದವರು ಎಚ್ಚರಗೊಳಿಸಿದ ಮೇಲೆ ಇದೀಗ ಸ್ಥಳೀಯ ಸರ್ಕಾರದವರು ಖರ್ಚು ಕಡಿಮೆ ಮಾಡುವ ಪ್ರಯತ್ನಕ್ಕೆ ಕೈ ಹಾಕಿರುವರು. ತಾವು ಇಷ್ಟರ ವರೆಗೆ ಮಾಡಿದ ದುಂದುಗಾರಿಕೆಯ ಖರ್ಚಿನ ತಪ್ಪಿತಕ್ಕಾಗಿ ಈಗ ಬಹು ಕಠಿಣ ತರಹದ ಸಿಬ್ಬಂದಿ ಖೋತೆಯನ್ನು ಮಾಡಬೇಕಾಗುತ್ತದೆಂಬ ವದಂತಿಯೂ ಇದೆ. ಈಗಿನ ಆರ್ಥಿಕ ಹೀನ ಸ್ಥಿತಿಯಲ್ಲಿ ಸಿಬ್ಬಂದಿ ಖೋತೆ ಮಾಡಬೇಕಾಗಿದ್ದರೂ ಅದನ್ನು ದೇಶದ ಜನರಿಗೆ ಹಾನಿಯುಂಟಾಗುವ ರೀತಿಯಲ್ಲಿ ಮಾಡಲು ಯಾರೂ ಒಪ್ಪಲಾರರು. ಆದುದರಿಂದ ಪಟ್ವಾಲರವರ ವರದಿಯನ್ನೂ, ಸಿಬ್ಬಂದಿ ಖೋತೆಯ ಯೋಜನೆಯನ್ನೂ ಪ್ರಕಟಿಸಿ ದೇಶದವರ ಅಭಿಪ್ರಾಯವನ್ನು ತೆಗೆದ ವಿನಹ ಅದನ್ನು ಜಾರಿಗೆ ತರುವುದು ಎಂದೂ ಯುಕ್ತವಲ್ಲ. ಹಾಗೆ ಕೂಡಲೇ ಜಾರಿಗೆ ತಂದದ್ದೇ ಆದರೆ ದೇಶದಲ್ಲಿ ಅತೃಪ್ತಿ ಉಂಟಾಗದಿರದು.

ದೇಶದ ಜನರ ಹಿತಕ್ಕೆ ಹಾನಿತಟ್ಟದ ರೀತಿಯಲ್ಲಿ ಆಡಳಿತ ಖರ್ಚು ಕಡಿಮೆ ಮಾಡುವದಾದರೆ ಇಲಾಖೆಗಳ ಮುಖ್ಯಾಧಿಕಾರ ಭಾರವುಳ್ಳ ತಲೆಗಳ ಮೇಲೆ ಕತ್ತರಿಯ ಪ್ರಯೋಗ ಮಾಡಬೇಕಾಗಿದೆ. [illegible] ಎರಡು ಸಾವಿರಕ್ಕಿಂತ ಹೆಚ್ಚು ವೇತನವಿರುವ ಸೀನಿಯರ್ ಐ ಸಿ ಯಸ್ ಆಫೀಸರ ಬದಲು ಸಾವಿರ ರೂಪಾಯಿ ಸಂಬಳದ ಜೂನಿಯರ್ ಆಫೀಸರನ್ನು ಕಮಿಷನರಾಗಿ ನೇಮಿಸಿದರೆ ಸಾಕಾಗದೆ? ಫಾರೆಸ್ಟ್, ಪಬ್ಲಿಕ್ ವರ್ಕ್ಸ್ ಮತ್ತು ಮೆಡಿಕಲ್ ಇಲಾಖೆಗಳ ಮೇಲಧಿಕಾರಿಗಳಾಗಿ ಐನೂರು ರೂಪಾಯಿಯ ಪ್ರೊವಿನ್ಸಿಯಲ್ ಆಫೀಸರುಗಳನ್ನು ನೇಮಿಸಿದರೆ ಸಾಕು. ಆದರೆ ತಿಂಗಳಿಗೆ ಒಂದೂವರೆ ಸಾವಿರ ರೂಪಾಯಿ ವೇತನವಿರುವ ಈಗಿನ ಚೀಫ್ ಫಾರೆಸ್ಟ್ ಆಫೀಸರ ಹುದ್ದೆಯ ಅವಧಿಯನ್ನು ಇನ್ನೂ ಮೂರು ವರ್ಷಗಳ ವರೆಗೆ ಮುಂದರಿಸುತ್ತಾರೆಂಬ ಸುದ್ದಿ ಇದೆ. ಇದು ನಿಜವಾದರೆ ಇದನ್ನು ಎಷ್ಟು ಖಂಡಿಸಿದರೂ ಸ್ವಲ್ಪವೆ. ಈ ಹುದ್ದೆಯಲ್ಲಿ ಇಷ್ಟು ದೊಡ್ಡ ಸಂಬಳದವರನ್ನು ಇಡುವುದು ಅನಾವಶ್ಯ ಮತ್ತು ಅನ್ಯಾಯ. ಕೊಡಗಿನಲ್ಲಿ ಇವರ ಐದು ವರ್ಷದ ಅವಧಿಯು ಬರುವ ಸೆಪ್ಟೆಂಬರು ತಿಂಗಳಲ್ಲಿ ಅಂತ್ಯವಾಗುತ್ತದೆಂದು ತಿಳಿಯಬರುತ್ತದೆ. ಆದುದರಿಂದ ಇಲ್ಲಿಯ ಆಡಳಿತಕ್ಕೆ 'ಬಿಳಿ ಆನೆ' ಯಂತಿರುವ ಈ ಹುದ್ದೆಯ ಖರ್ಚನ್ನು ಕಡಿಮೆ ಮಾಡಲು ಇದೀಗ ತಕ್ಕ ಸಮಯ. ಅಲ್ಲದೆ ಐದು ವರ್ಷಗಳ ಮೇಲೆ ಇಂಪೀರಿಯಲ್ ಉದ್ಯೋಗಸ್ಥರೊಬ್ಬರನ್ನು ಹೆಚ್ಚಿನ ಕಾಲ ಇಟ್ಟುಕೊಳ್ಳುವುದೂ ಸರಿಯಲ್ಲ. ಆದಕಾರಣ ಯಾವ ಸಂದರ್ಭದಲ್ಲೂ ಇವರ ಅವಧಿಯನ್ನು ಖಂಡಿತವಾಗಿಯೂ ಮುಂದರಿಸಕೂಡದು. ಐನೂರು ರೂಪಾಯಿ ಒಳಗಿನ ಸಂಬಳದ ಒಬ್ಬ ಡಿಸ್ಟ್ರಿಕ್ಟ್ ಎಜ್ಯುಕೇಶನ್ ಆಫೀಸರನ್ನು ನೇಮಿಸಿದರೆ ಸಾಕೆಂದಿರುವಾಗ್ಯೆ ದೊಡ್ಡ ಸಂಬಳದ ಈಗಿನ ಶಾಲಾ ಇನ್‌ಸ್ಪೆಕ್ಟರವರ ಅವಧಿಯನ್ನು ಒಂದು ವರ್ಷ ಮುಂದರಿಸಿರುವುದನ್ನು ಕುರಿತು ಕಳೆದ ವಾರ ಟೀಕಿಸಿದ್ದೆವು. ಇಂಥಾ ಸಾವಿರ ಗಟ್ಲೆ ರೂಪಾಯಿ ಖರ್ಚಾಗುವ ಹುದ್ದೆಗಳ ವೇತನವನ್ನು ಕಡಿಮೆ ಮಾಡದೆ ಹೋದರೆ ಮತ್ಯಾವ ರೀತಿಯಿಂದ ಖರ್ಚು ಖೋತೆ ಮಾಡುವರೋ ತಿಳಿಯದು. ಅಧಿಕಾರಿಗಳು ಒಂದು ವೇಳೆ ಕೆಲವು ಫಾರೆಸ್ಟು ಗಾರ್ಡುಗಳನ್ನೂ, ಪೋಲೀಸು ಕಾನ್‌ಸ್ಟೇಬಲರುಗಳನ್ನೂ ಜವಾನರುಗಳನ್ನೂ ಮತ್ತು ಕಡಿಮೆ ಸಂಬಳದ ಕೆಳ ಉದ್ಯೋಗಸ್ಥರನ್ನೂ ತೆಗೆಯುವ ಆಲೋಚನೆಯಲ್ಲಿರಬಹುದು. ಆದರೆ ಹೀಗೆ ಮಾಡುವುದರಿಂದ ಹೆಚ್ಚಿನ ಉಳಿಕೆಯಾಗುವ ಸಂಭವವೂ ಇಲ್ಲ ಮತ್ತು ಇದರಿಂದ ಹಲವು ಬಡ ಕುಟುಂಬಗಳಿಗೆ ಅನಿರೀಕ್ಷಿತ ಕಷ್ಟ ಉಂಟಾಗದಿರದು, ಅಲ್ಲದೆ ಆಡಳಿತೆಯ ಕಾರ್ಯಸಾಧಕತ್ವವೂ ಕೆಡುವುದು. ಆದುದರಿಂದ ಇಂಥಾ ಏರ್ಪಾಡನ್ನು ಪೂರ್ತಿ ವಿರೋಧಿಸಬೇಕಾಗಿದೆ. ಇವರ ಬದಲು, ಡಿವಿಜನಲ್ ಫಾರೆಸ್ಟ್ ಆಫೀಸರು, ಎಕ್ಸೈಜ್ ಇನ್‌ಸ್ಪೆಕ್ಟರು, ಅಸಿಸ್ಟೆಂಟ್ ಹೆಲ್ತ್ ಆಫೀಸರು, ಸಬಾರ್ಡಿನೇಟ್ ಜಡ್ಜರು, ಸ್ಪೆಶಲ್ ಮೇಜಿಸ್ಟ್ರೇಟರುಗಳು ಮೊದಲಾದ ಅನಾವಶ್ಯದ ಹುದ್ದೆಗಳನ್ನು ವಜಮಾಡಬಹುದು. ಯಾವದಾದರೂ ಹುದ್ದೆಯನ್ನು ವಜಮಾಡುವ ಸಂದರ್ಭದಲ್ಲಿ ಈಗ ಉದ್ಯೋಗಕ್ಕೆ ಸೇರಿರುವವರನ್ನು ತೆಗೆಯುವುದರ ಬದಲು ಸಾಧ್ಯವಾದಷ್ಟು ಪೆನ್ಷನಿಗೆ ಅರ್ಹರಾದವರನ್ನು ರಿಟಯರ್ ಮಾಡಿಸುವುದು ಉತ್ತಮ.

ಇದರೊಂದಿಗೆ ಜನರಿಗೆ ಬಹು ಉಪಯುಕ್ತವಾದ ಹುದ್ದೆಗಳನ್ನು ಅಂದರೆ ವಿರಾಜಪೇಟೆ ಆಸ್ಪತ್ರೆಯ ಅಸಿಸ್ಟೆಂಟ್ ಸರ್ಜನರು, ಲೇಡಿ ಡಾಕ್ಟರರು, ಸಹಕಾರಿ ಸಂಘಗಳ ರಿಜಿಸ್ಟ್ರಾರರವರು ಮೊದಲಾದ ಉದ್ಯೋಗಗಳನ್ನು ಎಂದಿಗೂ ತೆಗೆದು ಹಾಕಬಾರದು. ವಿರಾಜಪೇಟೆ ಆಸ್ಪತ್ರೆಯು ಮಡಿಕೇರಿ ಆಸ್ಪತ್ರೆಯಷ್ಟೇ ಪ್ರಾಮುಖ್ಯವಾದುದು. ಅಲ್ಲಿ ಮಡಿಕೇರಿ ಆಸ್ಪತ್ರೆಯಷ್ಟೇ ರೋಗಿಗಳು ಬಂದು ಚಿಕಿತ್ಸೆ ಹೊಂದುತ್ತಿರುವರು. ಉತ್ತರ ಕೊಡಗಿನವರಿಗೆ ಮಡಿಕೇರಿ ಆಸ್ಪತ್ರೆ ಎಷ್ಟು ಉಪಯುಕ್ತವಾದುದೋ ಅಷ್ಟೇ ವಿರಾಜಪೇಟೆ ಆಸ್ಪತ್ರೆ ದಕ್ಷಿಣ ಕೊಡಗಿನವರಿಗೆ ಪ್ರಯೋಜನಕರವಾದುದು. ಅಂದ ಮೇಲೆ ಮಡಿಕೇರಿ ಆಸ್ಪತ್ರೆಯಲ್ಲಿ ಒಬ್ಬ ಸಿವಿಲ್ ಸರ್ಜನರೂ, ಲೇಡಿ ಡಾಕ್ಟರರೂ ಇರುವಾಗ್ಯೆ ವಿರಾಜಪೇಟೆಯಲ್ಲಿ ಒಬ್ಬ ಅಸಿಸ್ಟೆಂಟ್ ಸರ್ಜನರೂ, ಲೇಡಿ ಡಾಕ್ಟರರೂ ಇರಬೇಕಾದದ್ದು ಅತ್ಯವಶ್ಯ. ಹಾಗೆಯೇ ಸಹಕಾರಿ ಸಂಘಗಳ ರಿಜಿಸ್ಟ್ರಾರರ ಹುದ್ದೆಯು ಅವಶ್ಯವಾದದ್ದು. ಸಹಕಾರಿ ಇಲಾಖೆಯು ದಿನೇ ದಿನೇ ಬೆಳೆಯುತ್ತಾ ಇದೆ. ಹೊಸ ಆಕ್ಟಿನ ಮೇಲೆ ರಿಜಿಸ್ಟ್ರಾರರಿಗೆ ಬಹು ದೊಡ್ಡ ಜವಾಬ್ದಾರಿಯು ಇದೆ. ಆದುದರಿಂದ ಈ ಇಲಾಖೆಗೆ ಪ್ರತ್ಯೇಕ ಒಬ್ಬ ಮುಖ್ಯಾಧಿಕಾರಿಯು ಇರುವುದು ಅಗತ್ಯವಾಗಿದೆ. ಒಂದು ವೇಳೆ ಈ ಹುದ್ದೆಗಳ ಸಂಬಳದಲ್ಲಿ ಸ್ವಲ್ಪ ಖೋತೆ ಮಾಡಿದರೂ ಆಗಬಹುದು; ಆದರೆ ಈ ಹುದ್ದೆಗಳನ್ನು ಮಾತ್ರ ತೆಗೆದು ಹಾಕಬಾರದು. ಈ ಹುದ್ದೆಗಳನ್ನು ವಜಮಾಡುತ್ತಾರೆಂಬ ವರ್ತಮಾನವಿರುವುದರಿಂದ ಇವುಗಳನ್ನು ಮಾತ್ರ ಇಲ್ಲಿ ಎತ್ತಿ ಬರೆದದ್ದಾಗಿದೆ.

ಇದಲ್ಲದೆ ಶಾಲೆಗಳನ್ನೂ, ಆಸ್ಪತ್ರೆಗಳನ್ನೂ ಕಡಿಮೆ ಮಾಡುವುದಾಗಲೀ, ಸ್ಕೂಲು ಫೀಸನ್ನು ಹೆಚ್ಚಿಸುವುದಾಗಲೀ ಕೂಡದೆಂದು ಎಷ್ಟು ಒತ್ತಿ ಹೇಳಿದರೂ ಸಾಲದು. ಮಕ್ಕಳ ವಿದ್ಯಾಭ್ಯಾಸದ ಮತ್ತು ಕಾಯಿಲೆಯವರ ಚಿಕಿತ್ಸೆಯ ಏರ್ಪಾಡುಗಳನ್ನು ಸಾಕಷ್ಟು ಮಾಡಿಕೊಡಬೇಕಾದದ್ದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಈ ವಿಚಾರಗಳಲ್ಲಿ ಈಗಿರುವ ಏರ್ಪಾಡುಗಳೇ ಸಾಲವೆಂದು ಜನರು ಕೂಗಿಕೊಳ್ಳುತ್ತಿರುವಾಗ್ಯೆ ಇರುವುದನ್ನು ಕಡಿಮೆ ಮಾಡುವುದೆಂದರೆ ಸರ್ಕಾರದವರು ಜನರ ಹಿತಕ್ಕೆ ವಿರುದ್ಧ ವರ್ತಿಸುವರೆಂದಾಗುವುದು. ಇದರಿಂದ ದೇಶದಲ್ಲಿ ತುಂಬಾ ಅಸಮಾಧಾನ ಉಂಟಾಗುವುದರಲ್ಲಿ ಸಂದೇಹವಿಲ್ಲ.

ಕೊಡಗಿನಲ್ಲಿ ಕೆಲವು ಉದ್ಯೋಗಸ್ಥರಿಗೆ ಸ್ಪೆಶಲ್, ಒವರ್‌ಸೀ, ಹಿಲ್ಸ್, ಪರ್ಸನೆಲ್ ಚಾರ್ಜ್ ಮೊದಲಾದ ಒಂದಲ್ಲ ಒಂದು ತರಹದ ಎಲೋವೆನ್ಸ್ ಕೊಡಲ್ಪಡುತ್ತಿದೆ. ಉದ್ಯೋಗಕ್ಕೆ ತಕ್ಕುದಾದ ಸಂಬಳ ಕೊಟ್ಟ ಮೇಲೆ ಈ ತರಹದ ದುಂದುಗಾರಿಕೆಯ ಎಲೋವೆನ್ಸ್ ಕೊಡುವದನ್ನು ಖಂಡಿತವಾಗಿಯೂ ನಿಲ್ಲಿಸಬೇಕಾಗಿದೆ. ಅಲ್ಲದೆ ಉದ್ಯೋಗಸ್ಥರ ಪ್ರಯಾಣದ ಭತ್ಯವನ್ನೂ ಖೋತೆ ಮಾಡಲು ತುಂಬಾ ಅವಕಾಶವಿದೆ. ಇನ್ನು ಮುಂದೆ 50 ರೂಪಾಯಿ ಮೇಲಿನ ವೇತನದ ಉದ್ಯೋಗಕ್ಕೆ ಮೈಸೂರು ಸಂಸ್ಥಾನದಲ್ಲಿರುವಂತೆ ಅಥವಾ ಮದ್ರಾಸು ಪ್ರಾಂತ್ಯದಲ್ಲಿ ಹೊಸದಾಗಿ ನಿಶ್ಚಯಿಸಿರುವಂತೆ ಕಮ್ಮಿ ದರದ ಸಂಬಳವನ್ನು ಮಾಡುವಂತೆ ಮಾಡಬೇಕು. ಈ ಹೊಸ ದರವು ಇನ್ನು ಮುಂದೆ ಸರ್ಕಾರಿ ನೌಕರಿಗೆ ಸೇರುವವರಿಗೆ ಮಾತ್ರವಲ್ಲ, ಮದ್ರಾಸಿನಲ್ಲಿರುವ ಹಾಗೆ ಈ ಮೊದಲೇ ಸೇರಿದ್ದ ಪ್ರಮೋಶನ ದೊರೆತಾಗಲೂ ಜಾರಿಗೆ ಬರುವಂತೆ ಆಗಬೇಕು. ಅವಶ್ಯವಿದ್ದರೆ, ಈಗಾಗಲೇ ನೌಕರಿಗೆ ಸೇರಿದ ಯುವಕರನ್ನು ಉದ್ಯೋಗದಿಂದ ತೆಗೆಯುವುದರ ಬದಲು 50 ರೂಪಾಯಿಗಿಂತ ಮೇಲ್ಪಟ್ಟ ಸಂಬಳದವರಿಗೆ ಅವರ ವೇತನದ ಶೇಕಡ 2½ ರಿಂದ 25 ರ ವರೆಗೆ ಕಡಿಮೆ ಮಾಡುವುದು ಉಚಿತ. ಇಷ್ಟರ ಮಟ್ಟಿಗೆ ಖರ್ಚು ಖೋತೆ ಮಾಡಿ ಬಜೆಟ್ಟನ್ನು ತತ್ಕಾಲ ಸರಿಗಟ್ಟಲು ಸಾಧ್ಯವಾಗದೆ ಹೋದರೆ ಇಂಡಿಯಾ ಸರ್ಕಾರದಿಂದ ಹೆಚ್ಚಿನ ವಾರ್ಷಿಕ ವಂತಿಗೆಯನ್ನು ಖಂಡಿತವಾಗಿಯೂ ಪಡೆಯತಕ್ಕದ್ದು.

ಸರ್ಕಾರದವರು ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡುವ ವಂತಿಗೆಯಲ್ಲಿ ಸುಮಾರು ಏಳು ಸಾವಿರ ರೂಪಾಯಿ ಕಡಿಮೆ ಮಾಡುವ ಆಲೋಚನೆಯೂ ಇದೆಯಾಗಿ ತಿಳಿದು ಬರುತ್ತದೆ. ಗ್ರಾಮವಾಸಿಗಳಿಗೆ ಅತ್ಯವಶ್ಯವಾದ ಪ್ರೈಮರಿ ವಿದ್ಯಾಭ್ಯಾಸ, ವೈದ್ಯ ಚ

ಶಿಕ್ಷೆ ಮತ್ತು ಗ್ರಾಮಾಂತರ ರಸ್ತೆಗಾಗಿಯೇ ತಮ್ಮ ಆದಾಯವನ್ನೆಲ್ಲಾ ಖರ್ಚು ಮಾಡುತ್ತಿರುವ ಡಿ. ಬೋರ್ಡಿಗೆ ಈಗ ಕೊಡುತ್ತಿರುವ ಗ್ರಾಂಟೇ ಸಾಲದೆಂದಿರುವಾಗ್ಯೆ ಅದನ್ನು ಕಡಿಮೆ ಮಾಡುವುದರಲ್ಲಿ ಅರ್ಥವಿಲ್ಲ. ಈ ವಿಚಾರ ಬರುವ ವಾರ ವಿವರವಾಗಿ ಬರೆಯಲಾಗುವುದು.

ಹೇಗೂ ಸರ್ಕಾರದವರು ಮಾಡುವ ಸಿಬ್ಬಂದಿ ಖೋತೆಯನ್ನು ದೇಶದ ಹಿತದ ದೃಷ್ಟಿಯಿಂದ ಮಾಡುವುದಾದರೆ, ಅದರ ಯೋಜನೆಯನ್ನು ದೇಶದವರ ಹಾಗೂ ಕೌನ್ಸಿಲಿನವರ ಮುಂದಿಟ್ಟು, ಅವರ ಅಭಿಪ್ರಾಯ ಪಡೆದು, ಅದನ್ನು ಜಾರಿಗೆ ತರುವುದು ಯುಕ್ತವೆಂದು ಮತ್ತೊಮ್ಮೆ ಹೇಳದೆ ಇರಲಾರೆವು.

ಒಳದೇಶ.

ಈ ವಾರ ವೀರಾಜಪೇಟೆಯಲ್ಲಿ ಭತ್ತ ಗಾಡಿಗೆ ರೂ. 47 ರ ವರೆಗೆ ಕ್ರಯವಿತ್ತೆಂದು ತಿಳಿಯುತ್ತೇವೆ.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಸುಪರ್‌ವಿಜನ್ ಬೋರ್ಡಿನ ಮೀಟಿಂಗೊಂದು ಈ ತಾ. 20ರಲ್ಲಿ ನಡೆಯುವುದಾಗಿ ತಿಳಿಯಬರುತ್ತದೆ.

ಸಿವಿಲ್ ಸರ್ಜನರು ಮಡಿಕೇರಿ ಸಿವಿಲ್ ಆಸ್ಪತ್ರೆಯ ಸ್ಪೆಷ್ಯಲ್ ವಾರ್ಡಿನಲ್ಲಿ ಕಾಯಿಲಸ್ಥರಿಗೆ ಚಿಕಿತ್ಸೆಯ ಚಾರ್ಜನ್ನು ಕಡಿಮೆ ಮಾಡಿರುವರಾಗಿ ವರ್ತಮಾನ.

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನಲ್ಲಿ ಈಗ ಪುನಹ ಫಿಕ್ಸ್‌ಡ್ ಡಿಪಾಜಿಟ್ಟುಗಳನ್ನು ತೆಗೆದುಕೊಳ್ಳುವಂತೆ ಅವರ ಡೈರೆಕ್ಟರುಗಳು ತೀರ್ಮಾನಿಸಿರುವರಾಗಿ ತಿಳಿಯುತ್ತೇವೆ.

ಸಿವಿಲ್ ಸರ್ಜನರಾದ ಕೆಪ್ಟನ್ ಚಾರ್ಲ್ಸ್‌ವರ್ಥ್‌ರವರು ಹೆಂಗಸರ ಹೆರಿಗೆಯ ಸಮ್ಬಂಧ ಯಂ. ಸಿ. ಒ. ಜಿ. (ಲಂಡನ್) ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೆಂದು ತಿಳಿಯಬರುತ್ತದೆ.

ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿ ಮೀಟಿಂಗು ತಾ. 20-8-38ನೇ ಶನಿವಾರ ಮಡಿಕೇರಿಯಲ್ಲಿ ಸೇರುವುದೆಂದು ತಿಳಿಯುತ್ತೇವೆ.

ಕಮಿಷನರರವರು ಈ ತಾ. 9 ರಿಂದ 14ರ ವರೆಗೆ ಪೊಲ್ಲಿಬೆಟ್ಟದಲ್ಲೂ, ತಾ. 15 ರಿಂದ 19 ರ ವರೆಗೆ ವೀರಾಜಪೇಟೆಯಲ್ಲೂ ಕ್ಯಾಂಪು ಇದ್ದು, ತಾ. 20 ರಲ್ಲಿ ಮಡಿಕೇರಿಗೆ ಹಿಂತಿರುಗಿ ಬರುವರಾಗಿ ತಿಳಿಯುತ್ತೇವೆ.

ಬೆಂಗಳೂರಿನ ಕಮರ್ಶಿಯಲ್ ಬ್ಯಾಂಕ್, ಏಜನ್ಸಿ ಸೆಕ್ಷನಿನ ಮೇನೇಜರರಾಗಿದ್ದ ಮೆ. ಪಳಂಗಂಡ ಯಂ. ಗಣಪತಿಯವರನ್ನು, ಇದೇ ಸಂಸ್ಥೆಯ ಮಡಿಕೇರಿ ಶಾಖೆಯ ಮೇನೇಜರರಾಗಿ ನೇಮಿಸಿರುವರೆಂದು ತಿಳಿಯಬರುತ್ತದೆ.

ಕೆಲವು ದಿನಗಳ ಹಿಂದೆ ಕುಟ್ಟ, ಕುರ್ಚಿ ಮತ್ತು ಮಂಚಳ್ಳಿ ಗ್ರಾಮಗಳ ದನಕರಗಳನ್ನು ಹಿಡಿದು ನಾಶಪಡಿಸುತ್ತಿದ್ದ ಹೆಬ್ಬುಲಿಯನ್ನು ಮೆ. ಅಜ್ಜಮಾಡ ಬೆಳ್ಯಪ್ಪನವರು ತಾ. 1-8-38 ರಲ್ಲಿ ಗುಂಡು ಹೊಡೆದು ಕೊಂದು ಅದರ ಕಾಟವನ್ನು ಪರಿಹರಿಸಿದರೆಂದು ತಿಳಿಯಬರುತ್ತದೆ.

ಬಹು ದಿವಸಗಳಿಂದ ಮಳೆ ಇಲ್ಲದ ಕಾರಣ ವೀರಾಜಪೇಟೆ ಬಳಿ ಬೆಟ್ಟದ ಮೇಲಿರುವ ಮಲೆದೇವಸ್ಥಾನದಲ್ಲಿ ಆ ಪೇಟೆಯವರು ಕಳೆದ ಸೋಮವಾರದ ವರೆಗೆ ಆರು ದಿವಸ ರುದ್ರಾಭಿಷೇಕ ಪೂಜೆಯನ್ನು ಮಾಡಿಸಿದರೆಂದೂ, ಆದಿತ್ಯವಾರ ದಿನ ಒಂದು ಭಾರೀ ಮಳೆ ಬಿತ್ತೆಂದೂ ತಿಳಿಯುತ್ತೇವೆ.

ರಿಟೈಯರ್ಡ್ ಪೋಲೀಸು ಡೆಪ್ಯುಟಿ ಸುಪರಿಂಟೆಂಡೆಂಟರಾದ ರಾ. ಸಾ. ಪಡಿಕೇರಿಯಂಡ ಕಾಳಪ್ಪನವರು ಈ ತಾ. 6 ರ ರಾತ್ರಿ ಮೈಸೂರು ಆಸ್ಪತ್ರೆಯಲ್ಲಿ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಶವವು ಅವರ ನಾಡು ಮನೆಗೆ ತರಲ್ಪಟ್ಟು ಮರುದಿನ ದಫನ ಮಾಡಲ್ಪಟ್ಟಿತು.

ಮಡಿಕೇರಿ ದೇಚೂರಿನಲ್ಲಿರುವ ಕೊಡಂಡೆರ ಮೆ. ಪೂದಪ್ಪನವರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಅಣ್ಣರಕಂಡ ಮೋಟುಯ್ಯನೆಂಬವನು ತಾ. 11 ರಲ್ಲು ಅಕಸ್ಮಾತು ಬಾವಿಗೆ ಬಿದ್ದು ಕೂಡಲೇ ತೆಗೆಯಲ್ಪಟ್ಟನೆಂದೂ, ಸಾಧಾರಣ ಜಖಂ ಆಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವನೆಂದೂ ವರ್ತಮಾನ.

ತಾ. 5-8-38 ರಿಂದ 12.8.38 ರ ವರೆಗೆ ಮಡಿಕೇರಿಯಲ್ಲಿ 2 ಇಂಚು 82 ಸೆಂಟು ಮಳೆಯಾಗಿದೆ. ಆದರೆ ಶನಿವಾರ ಮತ್ತು ಆದಿತ್ಯವಾರ ದೇಶದ ಕೆಲವು ಭಾಗಗಳಿಗೆ ಮಳೆ ಬಿದ್ದಿದ್ದರೂ ಬಹು ಭಾಗಕ್ಕೆ ಮಳೆ ಹೊಡೆದಿರುವುದಿಲ್ಲ. ಕಿಗ್ಗಟ್ಟುನಾಡಿನಲ್ಲಿ ಬಹು ದಿವಸಗಳಿಂದ ಮಳೆ ಇಲ್ಲದೆ ಜನರಲ್ಲಿ ಹಾಹಾಕಾರವೆದ್ದಿದೆ. ನೀರಿನ ಅಭಾವದಿಂದ ವ್ಯವಸಾಯವು ಬಹಳ ಮಟ್ಟಿಗೆ ಕೆಟ್ಟು ಹೋಗಿದೆ.

ತಿರುವಣ್ಣಮಲೆಯಲ್ಲಿ ರಮಣಮಹರ್ಷಿಗಳ ದರ್ಶನಾರ್ಥವಾಗಿ ಹೋಗಿದ್ದ ವೀರಾಜಪೇಟೆ ಚಾದಗ ಗ್ರಾಮದ ಮೆ. ಸಂಬುದಮೊಡ ಮುದ್ದಯ್ಯನವರು ಆಗೋಸ್ತು ತಾ. 6 ನೇ ಶನಿವಾರ ದಿನ ಅಲ್ಲಿ ಕೆರೆಗೆ ಸ್ನಾನಮಾಡಲು ಹೋಗಿದ್ದಾಗ ಆಕಸ್ಮಾತ್ತಾಗಿ ಕೆರೆಯೊಳಗೆ ಮು[illegible] ಶಿವಾಧೀನರಾದರೆಂದು ತಿಳಿಸಲು [illegible]ತ್ತೇವೆ.

ಕೊಡವ ವಿದ್ಯಾಭಿವೃದ್ಧಿ ಫಂಡಿನ ವಾರ್ಷಿಕ ಮಹಾ ಸಭೆಯು ಈ ತಾ. [illegible] ರಲ್ಲಿ ಮಡಿಕೇರಿಯಲ್ಲಿ ನಡೆದು ರಾ. ಸಾ. ಮುಂಡೇಪಂಡ ಸೋಮಣ್ಣನವರು ಪ್ರಸಕ್ತ ಫಂಡಿನ ಅಧ್ಯಕ್ಷರಾಗಿಯೂ, ಮೆ. ಚೆಕ್ರಂಡ ಗಣಪತಿಯವರು ಕಾರ್ಯದರ್ಶಿಯವರಾಗಿಯೂ, ಮೆ. ಮಾಚಮಾಡ ಚೆಂಗಪ್ಪನವರು ಖಜಾನ್ಜಿಯವರಾಗಿಯೂ ಆರಿಸಲ್ಪಟ್ಟರೆಂದು ತಿಳಿಯಬರುತ್ತದೆ.

ಈ ತಾ. 15 ರಿಂದ ಮಡಿಕೇರಿಯಿಂದ ಡಾಕ್ಟರ್ ಶೀತಿರ ಮೇದಪ್ಪನವರನ್ನು ವೀರಾಜಪೇಟೆ ಆಸ್ಪತ್ರೆಯ ಆಕ್ಟಿಂಗ್ ಆಸಿಸ್ಟೆಂಟ್ ಸರ್ಜನರಾಗಿಯೂ, ಡಾಕ್ಟರ್ ಕೋದಂಡ ಮೇದಪ್ಪನವರನ್ನು ಮಡಿಕೇರಿ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರಾಗಿಯೂ, ಡಾ. ಹೆಚ್. ಬಿ. ಮಂಜಪ್ಪನವರನ್ನು ವೀರಾಜಪೇಟೆಯಿಂದ ಮಡಿಕೇರಿ ಆಸ್ಪತ್ರೆಗೂ ವರ್ಗಾಯಿಸಿರುವರೆಂದೂ, ಮೆ. ಬಿಟ್ಟಿಯಂಡ ಸುಬ್ಬಯ್ಯನವರನ್ನು ವೀರಾಜಪೇಟೆ ಆಸ್ಪತ್ರೆಯಲ್ಲಿ ಸಬ್ ಅಸಿಸ್ಟೆಂಟ್ ಸರ್ಜನರಾಗಿ ನೇಮಿಸಿರುವರೆಂದೂ ತಿಳಿಯಬರುತ್ತದೆ.

ತಾ. 3-8-38 ರಲ್ಲಿ ನಡೆದ ಕೊಡಗು ಪ್ಲಾಂಟೇಷನ್ ಫಂಡಿನ ಮೀಟಿಂಗಿನಲ್ಲಿ 1. ಪಟ್ಟಚೆರವಂಡ ದೇವಯ್ಯ, (2) ಮನೆಯಪಂಡ ಕಾರ್ಯಪ್ಪ (3) ಅಮ್ಮಣಿಚಂಡ ಸಿ. ಸುಬ್ಬಯ್ಯ, 4. ನೊಣ್ಣಂಡ ಎ. ಉತ್ತಯ್ಯ, (5) ಕೋದಂಡ ಯಂ. ಕಾರ್ಯಪ್ಪ ಇವರಿಗೆ 15 ರೂಪಾಯಿಗಳಂತೆ ಮತ್ತು (6) ಬಿಟ್ಟಿಯಂಡ ಕೆ. ಮುತ್ತಮ್ಮ, (7) ಪಾಂಡಂಡ ಸಿ. ಪಾರ್ವತಿ, (8) ಕೋದಂಡ ಎ. ಪೂವಯ್ಯ, (9) ಬಿದ್ದಂಡ ಯಂ. ಪೊನ್ನಪ್ಪ, (10) ಪಾರ್ವಂಗಡ ಎನ್. ಗಣಪತಿ ಮತ್ತು (11) ಚೆಟ್ರಂಡ ಎಸ್. ಗಣಪತಿ ಇವರಿಗೆ 5 ರೂಪಾಯಿಗಳಂತೆ ಹೊಸ ವಿದ್ಯಾರ್ಥಿವೇತನವನ್ನು ಕೊಡುವಂತೆಯೂ, (12) ಕೋಡಿಮಣಿಯಂಡ ಕೆ. ಮುಕ್ಕಪ್ಪ, (13) ಮಿಸ್ ನಂಬಿಸೆವಂಡ ಜಿ. ಕಾವಮ್ಮ, (14) ಪಾಲೇಕಂಡ ಎ. ನಂಜಪ್ಪ, (15) ಮಿಸ್ ಅದೇಂಗಂದ ಎನ್. ಪೂವಮ್ಮ, (16) ಯಂ. ವಿ. ಮುತ್ತಪ್ಪ (17) ಸಿ. ಕೆ. ಭೀಮಯ್ಯ, ಮತ್ತು (10) ಕೋದಂಡ ಕೆ. ಕಾವೇರಿ ಇವರಿಗೆ ಕೊಡುತ್ತಿದ್ದ ವೇತನವನ್ನು ಒಂದು ವರ್ಷದ ವರೆಗೆ ಮುಂದರಿಸುವಂತೆಯೂ ಮಂಜೂರಾಗಿದೆ.

ಹಿಂದೂದೇಶ.

ಸಂಯುಕ್ತ ಪ್ರಾಂತದ ಲೋಕಲ್ ಸೆಲ್ಫ್ ಗವರ್ನ್‌ಮೆಂಟಿನ ಮಂತ್ರಿಗಳಾದ [illegible] ತಮ್ಮ ಯೂರೋಪಿನ ಪ್ರಯಾಣವನ್ನು ರದ್ದು ಮಾಡಿದ್ದಾರೆ.

ಡಾ. ಖಾರೆಯವರು ಗವರ್ನರರನ್ನು ಭೇಟಿಯಾಗಿ ಇನ್ನು ಮುಂದೆ ತನ್ನ ಡಾಕ್ಟರ್ ಕೆಲಸವನ್ನೇ ನೋಡಿಕೊಂಡಿರುವುದಾಗಿ ಹೇಳಿ ಅವರಿಂದ ಧನ್ಯವಾದಗಳನ್ನು ಪಡೆದು ಬಂದರೆಂದು ವಾರ್ತೆ.

[illegible] ಪ್ರಾಂತದಿಂದ ಚೈನಕ್ಕೆ ಹೋಗಲಿರುವ ವಿದ್ಯಾರ್ಥಿ ವರ್ಗದ ಬಗ್ಗೆ [illegible] ಡಾ. ಠಾಕೂರರು [illegible] ಚೈನಾಕ್ಕೆ ಹೊರಡುವರು.

ರಜಾದ ಮೇಲೆ ಇಂಗ್ಲೆಂಡಿಗೆ ತೆರಳಿದ ಮಾನ್ಯ ವೈಸ್ರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರು, 1939 ರ ಜನವರಿ ತಿಂಗಳಲ್ಲಿ, ಕೆಲವು ದಿನಗಳ ಮಟ್ಟಿಗೆ ಮುಂಬಾಯಿಯನ್ನು ಸಂದರ್ಶಿಸಲಿರುವರೆಂದು ತಿಳಿಯಬರುತ್ತದೆ.

ಕಾಂಗ್ರೆಸ್ ಯಂ. ಯಲ್. ಎ. ಗಳಾದ ಡಾ. ವಿಶ್ವನಾಥ್ ಮುಖರ್ಜಿಯವರು, ಅಲ್ಲಹಾಬಾದ್ ಹೈಕೋರ್ಟನ್ನು ಅಪಮಾನಗೊಳಿಸಿದ್ದರೆಂಬ ಕಾರಣದಿಂದ, ಅವರಿಗೆ ನೂರು ರೂಪಾಯಿ ಜುಲ್ಮಾನೆ ಅಥವಾ ತಿಂಗಳ ಸಜೆ ಎಂದು ವಿಧಿಸಿದ್ದರಲ್ಲಿ, ಅವರು ಜುಲ್ಮಾನೆ ತೆರದೆ ಜೈಲಿಗೆ ತೆರಳಿರುವರು.

ಉತ್ತರ ಗಡೀ ಪ್ರಾಂತದಲ್ಲಿರುವಂಥ ಪೆನ್ಶನ್‌ದಾರರು ತಮ್ಮ ಪೆನ್ಶನ್ ತೆಗೆಯಬೇಕಾದರೆ ತಮ್ಮ ಫೋಟೋವನ್ನು ತೋರಿಸಬೇಕೆಂಬ ಕಾನೂನನ್ನು ಬಂಗಾಳದಲ್ಲಿ ಜಾರಿಗೆ ತಂದಿರುವರು. ಪರದೇ ಹೆಂಗಸರಿಗೆ, ಯೂರೋಪಿಯನ್ ಹೆಂಗಸರಿಗೆ, ಗಜೆಟೆಡ್ ಆಫೀಸರುಗಳಿಗೆ ಮತ್ತು ಬಿರುದು ಧರಿಸಿದವರಿಗೆ ಇದರಲ್ಲಿ ವಿನಾಯಿತಿ ಇದೆ.

ತಿರುವಾಂಕೂರು ಬ್ಯಾಂಕಿನಿಂದ ತಮಗೆ ಬರಬೇಕಾಗಿರುವ ಹಣವನ್ನು ಅದು ವಾಪಸು ಕೊಡುವ ಚೈತನ್ಯ ಹೊಂದಿಲ್ಲವೆಂದೂ ಆದುದರಿಂದ ಅದನ್ನು ಮುಚ್ಚಿಸಿಬಿಡಬೇಕೆಂದೂ ಕ್ವಿಲಾನಿನ ಮೆ. ಸುಬ್ರಹ್ಮಣ್ಯಯ್ಯರ್‌ರವರು ಅಲ್ಲಿನ ಡಿಸ್ಟ್ರಿಕ್ಟ್ ಜಡ್ಜಿಯವರನ್ನು ಪ್ರಾರ್ಥಿಸಿದ್ದರು. ನ್ಯಾಯಾಧೀಶರು ಅದರಂತೆ ಆ ಬ್ಯಾಂಕನ್ನು ದಿವಾಳಿಯೆಂದು ಪತಕ್ಕದ್ದೆಂದು ಅಪ್ಪಣೆ ಮಾಡಿರುತ್ತಾರೆ. ಮತ್ತು ಅವರು ಈ ಸಂಸ್ಥೆಯನ್ನು ಪುನರ್ರಚಿಸಲು ಉದ್ಯೋಗಶೀಲರಿಗೆ ಪ್ರೋತ್ಸಾಹನಕರವಾಗಿರುವ ಯಾವ ವಿಚಾರವೂ ಇದುವರೆಗೆ ಸೂಚನೆಯಾಗಿಲ್ಲ. ಈ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಲು ಸಾಕಾದಷ್ಟು ಸೌಲಭ್ಯಗಳು ಒದಗಿದಾಗ ಇಂಥಾ ವಿಚಾರವೊಂದು ಮುಂದೆ ರಚನೆಯಾಗುವುದು ಸಾಧ್ಯವಾದೀತೆಂದು ತಮ್ಮ ತೀರ್ಮಾನದಲ್ಲಿ ಅಭಿಪ್ರಾಯ ಸೂಚಿಸಿರುತ್ತಾರೆ.

ಸಿಬ್ಬಂದಿ ಖೋತೆ.

ಮೆ. ನಿಡ್ಡೆಮಲೆ ಸೋಮಣ್ಣನವರು ಬರುವ ಆಕ್ಟೋಬರ್ ತಿಂಗಳಲ್ಲಿ ನಡೆಯುವ ಕೌನ್ಸಿಲು ಮೀಟಿಂಗಿಗೆ ಈ ಕೆಳಗಿನ ಠರಾವನ್ನು ಕಳುಹಿಸಿರುವರೆಂದು ತಿಳಿಸುತ್ತಾರೆ

“ಕೊಡಗು ಚಿರಕಾಲದಿಂದ ಒಂದು ಅದಳಿತ ಭಾಗವಾಗಿ ಇರುವಂತೆಯೇ ಇರಬೇಕೋ ಬೇಡವೋ ಎಂಬ ಅದರ ಭವಿಷ್ಯತ್ತನ್ನು ತೀರ್ಮಾನಿಸದೆ ಬಜೆಟನ್ನು ಸರಿಪಡಿಸಬೇಕೆಂಬ ಉದ್ದೇಶದಿಂದ, ಪ್ರಾಂತದ ಆಡಳಿತ ಖರ್ಚಿನಲ್ಲಿ ಯಾವುದೊಂದು ಖೋತೆಯನ್ನು ಮಾಡುವುದು, ಸರ್ಕಾರದ ಉದ್ಯೋಗವನ್ನೇ ಅವಲಂಬಿಸಿಕೊಂಡಿರುವ ಅನೇಕ ಕುಟುಂಬಗಳಿಗೆ ನಾಶ ತರುವದರಿಂದ, ಪ್ರಾಂತದ ಹಿತಚಿಂತನೆಯ ದೃಷ್ಟಿಯಿಂದ ಅನಾವಶ್ಯಕ ಮತ್ತು ಅಪ್ರಯೋಜಕವೆಂದು ಈ ಕೌನ್ಸಿಲು ನಿಶ್ಚಿತ ಅಭಿಪ್ರಾಯ ಪಡುತ್ತದೆ. ಅದ್ದರಿಂದ ಕೊಡಗಿನ ಸರ್ಕಾರದ ಪರ್ಯಾಲೋಚನೆಯಲ್ಲಿರುವ ಸಿಬ್ಬಂದಿ ಖೋತೆಯ ಸಲಹೆಗಳನ್ನು ಕುರಿತು ಈ ಸಭೆಗೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸಂದರ್ಭ ಸಿಕ್ಕುವ ವರೆಗೆ ಅವುಗಳನ್ನು ಜಾರಿಗೆ ತರಕೂಡದೆಂದು ಈ ಕೌನ್ಸಿಲು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ. ಈ ಸಿಬ್ಬಂದಿ ಖೋತೆಯ ಸಲಹೆಗಳ ಮತ್ತು ಕೊಡಗಿನ ಭವಿಷ್ಯದ ವಿಚಾರ ವಿವೇಚಿಸಿ ರಿಪೋರ್ಟು ಮಾಡುವ ಬಗ್ಗೆ ಉದ್ಯೋಗಸ್ಥರಲ್ಲದವರ ಬಹುಮತದಿಂದ ಕೂಡಿದ ಒಂದು ಕಮಿಟಿಯನ್ನು ಒಡನೆ ಸ್ಥಾಪಿಸಬೇಕೆಂದು ಈ ಕೌನ್ಸಿಲು ಚೀಫ್ ಕಮಿಷನರಿಗೆ ಮತ್ತೂ ಶಿಫಾರಸು ಮಾಡುತ್ತದೆ.”

ಫೆಡರೇಷನಿನ ಕುರಿತು ಮಿ. ಸಿ. ಸಿ. ಮಿಲ್ಲರರ ಭಾಷಣ.

ಕಲ್ಕತ್ತಾ ಶಾಖೆಯ ಯೂರೋಪಿಯನ್ ಸಂಘದ ಒಂದು ಮೀಟಿಂಗಿನಲ್ಲಿ ಮಿ. ಸಿ ಸಿ ಮಿಲ್ಲರ್‌ರವರು ಭಾಷಣ ಮಾಡುತ್ತಾ ಫೆಡರೇಶನಿನ ವಿಚಾರವಾಗಿ ಅಭಿಪ್ರಾಯ ಸೂಚಿಸಿದರು. ಆ ಯೋಜನೆಯ ಕುರಿತು ಕೊಂಚ ಪ್ರಸ್ತಾಪಿಸಿ ಕೇಂದ್ರ ಸರಕಾರವನ್ನು ಉದ್ದೇಶಿಸಿ ಅವರು ಹೇಳಿರುವದೇನಂದರೆ-

'ಕೇಂದ್ರ ಸರ್ಕಾರವು ಬೇಜವಾಬ್ದಾರಿಯುಳ್ಳ ಒಂದು ಸರ್ಕಾರ, ಅಂದರೆ ಅದು ಚುನಾಯಿಸಲ್ಪಟ್ಟ ಸಭೆಯಲ್ಲ, ಅದ್ದರಿಂದ ಅದು ಯಾವ ಪ್ರಜೆಗೂ ಉತ್ತರವಾದಿಯಲ್ಲ. ಇಷ್ಟೇ ಅಲ್ಲದೆ ಅದೊಂದು 'ಮೈನಾರಿಟಿ' ಸರ್ಕಾರವೂ ಅಹುದು. ಒಂದು ವೇಳೆ ಯೂರೋಪಿಯನ್ ತಂಡದ ಬೆಂಬಲವು ಆ ಸರ್ಕಾರಕ್ಕೆ ದೊರಕಬಹುದೆಂದರೂ ಎಸಂಬ್ಲಿಯ ಮುಕ್ಕಪರು ಒಟ್ಟಾಗುವಲ್ಲಿ ಈ ಬೆಂಬಲವೂ ವ್ಯರ್ಥ. ಆದರೆ ಕೆಲವು ವಿಷಯಗಳಲ್ಲಿ ಸರ್ಕಾರಕ್ಕೆ ಎಸೆಂಬ್ಲಿಯ ಈ ಬಹುಮತವನ್ನು ರದ್ದು ಮಾಡುವ ಪೂರ್ಣ ಅಧಿಕಾರವಿದೆಯೆನ್ನಿ. ಆದರೂ ಈ ಬೆಂಬಲದ ಪರಿಣಾಮವೇನು? ಎಮರು ತಂಡದವರು ಪೆಡರೇಶನಿನ ಆ ಕಲ್ಲುಗೋಡೆಗೆ ಗುದ್ದುತ್ತಾ, ಬಡಿಯುತ್ತಾ ಇರುವರು, ಇದರಿಂದ ಎಸಂಬ್ಲಿಯವರು ತಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳಬಹುದು. ಹಾಗೆ ಅದೇ ಗೋಡೆಯ ಹಿಂದೆ ಆಶ್ರಯ ಪಡೆದ ಸರ್ಕಾರವೂ ತನ್ನ ಪ್ರಜೆಗಳ ಭಾವವೇನೆಂದೂ ತಿಳಿಯಲಾರದೆ ಹೋಗಬಹುದು. ಇದೀಗ ಸರ್ಕಾರವ ಆ ರಚನೆ ಮಾಡುವ ವಿಶೇಷಾಧಿಕಾರದಲ್ಲಿ ಕಂಡುಬರುವ ಲೋಪದೋಷ. ಹೀಗೆ ಕೇಂದ್ರ ಎಸೆಂಬ್ಲಿಯ ವ್ಯವಸ್ಥೆಯೇ ಇರುವಲ್ಲಿ ಸ್ವಾತಂತ್ರ್ಯವನ್ನು ಪಡೆದಿರುವೆವೆಂಬ ಪ್ರಾಂತ್ಯಗಳ ಅವಸ್ಥೆಯಾದರೂ ಹೇಗಿರಬೇಕು? ಕೊಂಚ ಯೋಚಿಸಿರಿ! ಕೆಲವು ಕಾಲದಿಂದ ಚುನಾವಣೆ ಹೊಂದಿದ ಮಿನಿಸ್ಟರರ ರಾಜ್ಯಭಾರದ ಪ್ರದರ್ಶನವೇನೋ ನಡೆಯುತ್ತಿದೆ ಖರೆ. ಆದರೆ ಅವರ ಅಧಿಕಾರವನ್ನು ಒಲ್ಲೆನೆನ್ನಲು ಒಲ್ಲರು.

ಪ್ರಾಂತೀಕ ಅಧಿಕಾರದ ಹೊರಗೆ ಗವರ್ನಮೆಂಟ್ ಇಂಡಿಯಾ ಆಕ್ಟಿನ ಮೇರೆಗೆ ಅದರ ಮಿಕ್ಕಿ ಉಳಿದ ವಿಷಯಗಳು ಸಂಪೂರ್ಣವಾಗಿ ಕೇಂದ್ರ ಸರಕಾರದ ಆಡಳಿತಕ್ಕೊಳಪಟ್ಟಿವೆ. ಆದ್ದರಿಂದ ಆ ರಚನೆಯು ಅಪೂರ್ಣವಾಗಿದೆ. ಇಂಥಾ ಅಪೂರ್ಣ ರಚನೆಯು ಪೂರ್ಣವಾಗಿ ಅಲ್ಲಿ ಚುನಾಯಿಸಲ್ಪಟ್ಟ ಪ್ರಾತಿನಿಧ್ಯದ ಕೈನಡೆಯದ ಹೊರತು ಆ ರಾಜ್ಯ ರಚನೆಯಲ್ಲಿ ಆಗಾಗ ಬಿರುಕುಂಟಾಗುವ ಸಂಭವವಿದೆ.

ಫೆಡರೇಶನಿನ ಯೋಜನೆಯಲ್ಲಿ ಮೊದಲಿನ ವಿಷಯವೆಂದರೆ ನರೇಂದ್ರರ ಮಾತು. ಆ ನರೇಂದ್ರರಿಗೂ ಇಂಡಿಯಾ ಸರ್ಕಾರಕ್ಕೂ ನಡೆಯುತ್ತಿರುವ ವ್ಯವಹಾರವು ಯಾವುದೋ ಕಾರಣಗಳಿಂದ ಅತ್ಯಂತ ರಹಸ್ಯವಾಗಿ ಇರಿಸಲ್ಪಟ್ಟಿದೆ. ಕಾಂಗ್ರೆಸಿನವರ ಅಭಿಪ್ರಾಯವು ಈ ಫೆಡರೇಶನಿನ ಕುರಿತು ಏನೆಂಬದು ಹರಿಪುರ ಕಾಂಗ್ರೆಸಿನಲ್ಲಿ ಸ್ಪಷ್ಟವಾಗಿದೆ. ಅದರ ಮೇರೆಗೆ ಕಾಂಗ್ರೆಸಿನವರು ಫೆಡರೇಶನಿನ ಆಡಳಿತದ ಅಧಿಕಾರವನ್ನು ಸಂಪೂರ್ಣವಾಗಿ ಕೇಳುತ್ತಿದ್ದಾರೆ. ಎಸೆಂಬ್ಲಿಯವರು ಇಂಡಿಯಾದಲ್ಲಿ ಬ್ರಿಟಿಷ್ ಸೈನ್ಯವನ್ನು ಇರಿಸಿಕೊಳ್ಳುವದರ ಕುರಿತು ನಾನಾ ರೀತಿಯಿಂದ ಮೇಲೆ ಪ್ರಬಲವಾದ ಆಕ್ಷೇಪಗಳನ್ನೆತ್ತುತ್ತಿದ್ದಾರೆ. ಇದೊಂದು ನಿರುದ್ಯೋಗಿಯಾದ ಸೈನ್ಯವೆಂದು ಅವರು ಆಗಾಗ ಹಂಗಿಸುತ್ತಿದ್ದಾರೆ. ಬ್ರಿಟಿಷರು ಗಂಟು ಮೂಟೆಯನ್ನು ಕಟ್ಟಿ ಇಂಡಿಯಾದಿಂದ ಹೊರಟು ಹೋದರೂ ಹಿಂದುಸ್ಥಾನದ ಮೇಲೆ ಯಾರೂ ಅಭಿಯೋಗವನ್ನು ನಡೆಸುವ ಸಂಭವವಿಲ್ಲ. ಒಂದು ವೇಳೆ ಅಂಥಾ ಸಂಭವ ಒದಗಿದರೂ ಹಾಗೆ ಅಭಿಯೋಗ ಮಾಡಿದವರಿಗೆ ಇಲ್ಲಿ ಸ್ವಾಗತ ದೊರಕುವುದು ಎಂದು ಪಂಡಿತ ಜವಾಹಿರ್‌ಲಾಲರು ಹೇಳುತ್ತಾರೆ. ಆದರೆ ಈ ಅಭಿಯೋಗದಲ್ಲಿ ಗಂಡಾಂತರಗಳಿಲ್ಲವೇ? ಅನ್ಯಾಯಕತ್ವ ಉಂಟಾಗದೇ? ಹಾಗೂ ಅಭಿಯೋಗ ಮಾಡಿದ ಈ ಹೊಸ ರಾಷ್ಟ್ರವು ತನ್ನ ವ್ಯಾಪಾರದ ಅಭಿವೃದ್ಧಿಗಾಗಿ ಹಿಂದುಸ್ಥಾನವನ್ನು ಪಾದಾಕ್ರಾಂತವನ್ನಾಗಿ ಮಾಡಿಕೊಳ್ಳದೇ? ಫೆಡರೇಶನಿನ ವಿಚಾರದಲ್ಲಿ ಮುಸ್ಲಿಮರೂ ಹಿಂದೂ ಮಹಾ ಸಭೆಯೂ ಕಾಂಗ್ರೆಸಿನಿಂದ ಬೇರೆಯಾಗಿ ನಿಂತಿರುವದಷ್ಟೇ ಅಲ್ಲ, ಪ್ರಮುಖರಾದ ಕಾಂಗ್ರೆಸ್ ಮಂದಿಗಳಲ್ಲಿಯೇ ಈ ಕುರಿತು ಭಿನ್ನಾಭಿಪ್ರಾಯವು ಹುಟ್ಟಿ ಹರಡುತ್ತಲೂ ಇದೆ. ಹೀಗಾಗಿ ಫೆಡರೇಶನನ್ನು ಮುರಿಯುವ ಆಲೋಚನೆಯಲ್ಲಿ ಭಾರತೀಯರೆಲ್ಲರೂ ಒಂದಾಗಲಾರರೆಂಬುದು ನಿಸ್ಸಂದೇಹ. ಇಷ್ಟಾದರೂ ಕಾಂಗ್ರೆಸಿನ ಪ್ರಭಾವವು ಇದೇ ರೀತಿ ಮುಂದೆಯೂ ಮತದಾರ ಮಂಡಲದ ಮೇಲೆ ಬೀಳುವದಾಗಿದ್ದರೆ ಅದರಿಂದ ಕೇಂದ್ರದ ಫೆಡರಲ್ ಯಂತ್ರವು ಸುಸೂತ್ರವಾಗಿ ಕೆಲಸ ಮಾಡುವ ಹಾಗೆ ಬಲವಾದ ಅಡ್ಡಿ ಅಡಚಣೆಗಳುಂಟಾಗಬಹುದೆಂಬುದೂ ನಿಸ್ಸಂದೇಹದ ಮಾತೇ!

1933ರಿಂದ ಸರ್ಕಾರದ ತಿರಿಗೆಯ ವಿಚಾರದ ಘೋರಣೆಯು ಏನೇನೋ ಪ್ರಕಟವಾಗುತ್ತ ಬಂದಿದೆ. ಈಗಲೂ ಸರಕಾರದ ಹಣಕಾಸಿನ ಸ್ಥಿತಿ ಬಹಳ ಮಟ್ಟಿಗೆ ಸುಧಾರಿಸಿದೆ ಎನ್ನಲು ಬರುವಂತಿಲ್ಲ. ಇದು ಮುಂದಿನ ಸಂದರ್ಭಗಳಲ್ಲಿ ವಿಚಾರಣೀಯವಾದ ವಿಷಯ. ಹಾಗೆಯೇ ಕಾಂಗ್ರೆಸ್, ಪ್ರಾಂತೀಕ ಸರ್ಕಾರಗಳ ವಿಷಯದಲ್ಲಿ ಸಮಗ್ರ ಭಾರತ ಕಾಂಗ್ರೆಸ್ ಪಾರ್ಲಿಮೆಂಟರಿ ಕಮಿಟಿಯು ತೋರಿಸುತ್ತಿರುವ ಆ ಸರ್ವಾಧಿಕಾರದ ಹಿಡಿತದ ಪ್ರಾಬಲ್ಯವೂ ವಿಚಾರಣೀಯವಾಗಿಯೇ ಇದೆ. ಒಟ್ಟಿನಲ್ಲಿ ಕಾಂಗ್ರೆಸ್ ಫೆಡರೇಶನನ್ನು ತಡೆಯಲಾರದೆಂದೂ, ಆದರೆ ಅದು ಫೆಡರೇಶನಿನ ಕಾರ್ಯಕ್ಕೆ ಪ್ರಬಲವಾದ ವಿಘ್ನಪರಂಪರೆಗಳನ್ನು ತಂದೊಡ್ಡಬಹುದೆಂದೂ, ಕೇಂದ್ರ ಸರಕಾರದಲ್ಲಿ ಚುನಾವಣೆ ಇಲ್ಲದ್ದರಿಂದ ಅಪರಿಮಿತವಾದ ಗಂಡಾಂತರಗಳುಂಟಾಗಬಹುದೆಂದೂ ಈ ಮಹನೀಯರು ಅಭಿಪ್ರಾಯಪಟ್ಟಿರುತ್ತಾರೆ.

ರಷ್ಯಾ ಜಪಾನು ಘರ್ಷಣೆ.

ರಷ್ಯಾ ಜಪಾನು ತಿಕ್ಕಾಟವು ಮುಂದುವರಿಯುತ್ತಿದೆ. ಜಪಾನಿ ರಾಯಭಾರಿಯಾದ ಶಿಗೆಮಿಟ್ಸೊ ಎಂಬವರು ಶ್ರೀ ಲಿಟ್‌ವಿನೋಫ್‌ರವರನ್ನು ಕಂಡು ಈ ಘರ್ಷಣೆಯನ್ನು ನಿಲ್ಲಿಸಬೇಕೆಂದೂ ಮುಂದೆ ತಮ್ಮೊಳಗೆ ಒಪ್ಪಂದ ಮಾಡಿಕೊಳ್ಳಬೇಕೆಂದೂ ಕೇಳಿಕೊಂಡರು. ಆದರೆ ಲಿಟ್‌ವಿನೋಫರು ಇದಕ್ಕೆ ಸಮ್ಮತಿಸಲಿಲ್ಲ. '1868ರಲ್ಲಿ ನಡೆದ ಒಪ್ಪಂದದ ಶರತ್ತುಗಳ ಮೇರೆ ಜಪಾನು ರಶಿಯಾ ಸರಹದ್ದಿನೊಳಗೆ ಬರಕೂಡದು. ಹಾಗೆ ಜಪಾನು ಅತಿಕ್ರಮ ಮಾಡುವದಾದರೆ ರಶಿಯಾವು ಇದನ್ನು ಸಹಿಸಿಕೊಂಡು ಸುಮ್ಮನಿರದು' ಎಂದು ಉತ್ತರಕೊಟ್ಟರು.

ಜಪಾನರು ಬೇಕೆಂದು ರಶಿಯಾದೊಡನೆ ಯುದ್ಧ ಮಾಡಲು ಕೆಣಕುತ್ತಿರುವರೆಂದೂ, ಈಗ ಸರಹದ್ದಿನ ಈ ಘರ್ಷಣೆಯು ಯುದ್ಧವಾಗಿ ಪರಿಣಮಿಸಿರುವದೆಂದು ಲಿಟ್‌ವಿನೋಫರು ಹೇಳಿದರು. ಜಪಾನರು ಮಂಚುಕೋದ ಈ ಗಡಿಯಿಂದ ಗ್ರ್ಯಾಡ್ಸ್‌ಕೋವೊ ಎಂಬಲ್ಲಿಗೆ ಮುಂದರಿದು ಅಲ್ಲಿಯ ರಷ್ಯಾ ಸೈನಿಕರ ಮೇಲೆ ಧಾಳಿಮಾಡಿ ಪುನಃ ಮಂಚೂರಿಯಕ್ಕೆ ಹಿಂತಿರುಗಿರುವರು. ಅನೇಕ ರಶಿಯನರು ಪಾಯಗೊಂಡಿರುವದಲ್ಲದೆ ಜಪಾನರೂ ಹಾನಿಗೆ ಒಳಗಾಗಿರುವರು. ಇದರ ಫಲಿತಾಂಶವಾಗಿ ರಶಿಯಾವು ಜಪಾನಿಗೆ, 'ಇನ್ನು ಮುಂದಕ್ಕೆ ಇಂಥಾ ಅಸಂಬದ್ಧವ ಕಾರ್ಯಗಳು ನಡೆದರೆ ರಶಿಯಾವು ತಮ್ಮ ಸೈನ್ಯ, ವಿಮಾನಗಳನ್ನು ಉಪಯೋಗಿಸುವಂತೆ ನಿಶ್ಚಯಿಸಿದೆ' ಎಂಬ ಒಂದು ಎಚ್ಚರಿಕೆಯನ್ನು ಕೊಟ್ಟಿದೆ. ರಶಿಯಾವು ತಮ್ಮ ಗಡಿಯಲ್ಲಿ ಸೈನ್ಯಗಳನ್ನು ನಿಲ್ಲಿಸಿದೆ. ತಾ 7ರಲ್ಲಿ ಕೊರಿಯಾದಲ್ಲಿ ನಡೆದ ಕಲಹದಲ್ಲಿ 100 ರಶಿಯಾ ವಿಮಾನಗಳು ಭಾಗವಹಿಸಿದ್ದವು. ಈ ಯುದ್ಧದಲ್ಲಿ ರಶಿಯನರಿಗೆ ಅಪರಿಮಿತ ನಷ್ಟ ಉಂಟಾಗಿದೆ. ಅವರು ತಮ್ಮ ಪ್ರಥಮ ಯತ್ನದಲ್ಲಿ ಹಿಂಜರಿದಿರುವರು. ಪುನಃ ಅವರ ಮತ್ತೊಂದು ಸೈನ್ಯವು ಜಪಾನರನ್ನು ಎದುರಿಸಲು ಸಿದ್ಧವಿದೆ.

ತಾ 8ರ ಪ್ರಕಟಣೆ ಮೇರೆ ರಶಿಯಾ ಜಪಾನು ಸರಹದ್ದಿನ ಚರ್ಚೆಯು ಘೋರ ಸಂಗ್ರಾಮವಾಗಿ ಪರಿಣಮಿಸಿದೆ, ರಶಿಯನರು 20000 ಸೈನಿಕರಿಂದಲೂ 200 ವಿಮಾನಗಳಿಂದಲೂ ಕೂಡಿದ ಒಂದು ಸೈನ್ಯವನ್ನು ಇಲ್ಲಿಗೆ ತಂದಿರುವರು. ರಶಿಯನರ ವಾಯುವಿಮಾನಗಳು ಕೊರಿಯ ಪ್ರಾಂತದ ಮೇಲೆ ಭಯಂಕರವಾದ ವಿಮಾನಧಾಳಿಯನ್ನು ಮಾಡಿದವು. ಚಂಗ್‌ಕೂಫೆಂಗ್ ಎಂಬಲ್ಲಿ ಘೋರ ಕೈ ಕೈ ಜಗಳವು ನಡೆಯಿತು. ಯುದ್ಧ ಪ್ರಾರಂಭದಿಂದ ಈವರೆಗೆ ಆರು ರಶಿಯನರ ವಿಮಾನಗಳನ್ನು ನಾಶಮಾಡಿರುವದಾಗಿ ಜಪಾನರು ಹೇಳುತ್ತಾರೆ. ಅನೇಕ ಜಪಾನಿಯೋಧರು ಯುದ್ಧದಲ್ಲಿ ಮೃತರಾಗಿದ್ದಾರೆ.

ಚಾತ್ರಿ.

ಬಸ್ಸ್ ಸರ್ವಿಸು.

ಅಯ್ಯಾ ಕೊಡಗಿನ ಮಹನೀಯರೇ,

ಈಗಲಾದರೂ ನಿದ್ದೆಯಿಂದೆದ್ದು ಹೊರಗೆ ನೋಡುವಿರಾ? ಜೋರಾದ ಮಳೆ ಹೊಡೆಯುತ್ತೆ, ನಮ್ಮ ಸರ್ವಸ್ವವನ್ನೂ ನೀರು ಕೊಚ್ಚಿಕೊಂಡು ಹೋಗುತ್ತಾ ಇದೆಯೋ ಎಂಬಂತೆ ಪರ ಊರಿನವರ ಆಕ್ರಮಣವು ಇಲ್ಲಿ ನಡೆದಿದೆ. ಪರ ಊರಿನವರು ನಿಮ್ಮ ನಿದ್ದೆ ಬಿಡದ ಹಾಗೆ ಏನಾದರೂ ಮಂಕು ಬೂದಿ ಹಾಕಿರುವರೋ ಏನೋ ತಿಳಿಯದು. ಈಗಾಗಲೇ ಕೆಲವು ವರ್ಷಗಳಿಂದ ನಮ್ಮ ದೇಶದವರು ಪ್ರತಿಯೊಂದು ಇಲಾಖೆಯ ಉಚ್ಚ ಪದವಿಗೆ ಬಂದಿರುವರು. ಆದರೆ ಕೆಲವು ವರ್ಷಗಳಿಂದ ಯಾರ್ಯಾರ ಪದವಿಯಲ್ಲಿ ಯಾವ ಜ್ಞಾನವನ್ನು ತಂದೊಡ್ಡಿ ನಮ್ಮ ದೇಶದ ಸ್ಥಿತಿಯನ್ನು ಈ ಗತಿಗೆ ತಂದಿಟ್ಟಿರುವರೆಂಬುದನ್ನು ಯೋಚಿಸುವಿರಾ. ತನಗೆ ತಾನೇ ಕೊಡೆ ಹಿಡಿಯಬೇಕೇ ಹೊರತು ಇನ್ನೊಬನು ನಮಗಾಗಿ ಕೊಡೆ ಹಿಡಿಯುವನೆಂದು ಯೋಚಿಸಿದರೆ ನಮ್ಮ ಗತಿ ಏನಾದೀತು. ನಮ್ಮ ಜನ್ಮ ಜಹಗೀರುಗಳೆಂಬ ಪೊಳ್ಳು ಜಂಭವನ್ನು ಬಿಟ್ಟು ಒಂದಾವರ್ತಿ ಯೋಚಿಸಿರಿ. ಕೆಲವರ ದನ ಕಾಯುವ ದೇಶ ಬೋರೆ ಗೌಡನೆಂಬ ಹೆಸರು ಪಡೆಯುವುದಕ್ಕಾಗಿ ನಮ್ಮವರು ಎಷ್ಟೋ ಶ್ರಮಪಡುವರು. ಆದರೆ ಪೊಳ್ಳು ಬಿರುದಿನಿಂದ ಏನು ತಾನೇ ಮಾಡಲಾದೀತು. ಇದಕ್ಕಿಂತ ದೇಶಕ್ಕಾಗಿ ಎಳ್ಳಷ್ಟು ದುಡಿದಿದ್ದರೆ ಇಂದು ದೇಶೀಯರು ಈ ಸ್ಥಿತಿಯಲ್ಲಿರುತ್ತಿರಲಿಲ್ಲ. ಈಗಾಗಲೇ ಹುಟ್ಟಿ ಮಾಯವಾದ ಆ ಶ್ರೀ ಕಾವೇರಿ ಬಸ್ ಸರ್ವಿಸಿನ ಅಂತ್ಯವನ್ನು ನೋಡಿದೆವು. ಅವರ ಅಂತ್ಯ ಸಮಯದಲ್ಲಿ ಬೀದಿ ನಾಯಿಗಳು ಬೊಗಳಿದ ಹಾಗೆ ನಾವೆಷ್ಟೋ ಬೇಡಿಕೊಂಡೆವು. ಆದರೆ ನಮ್ಮ ಘನ ಸರ್ಕಾರದವರು ಅದನ್ನು ಎಳ್ಳಷ್ಟು ಮನಸಿಗೆ ತರಲಿಲ್ಲ. ಆದರೂ ಇಲ್ಲಿಯವರು ಧೈರ್ಯಗೆಡದೆ ಪುನ ಸರ್ವಿಸುಗಳನ್ನು ಸ್ಥಾಪಿಸಿ ಹೋರಾಡುತ್ತಿರುವರು. ಆದ್ದರಿಂದ ಮಹನೀಯರೇ, ದೇಶದ ಸ್ವಾತಂತ್ರ್ಯವನ್ನು ಕಾಪಾಡಲು ಹೋರಾಡುತ್ತಿರುವ ಸ್ಥಳೀಯ ಜನರ ಪ್ರಯತ್ನಕ್ಕೆ ಬೆಂಬಲವನ್ನೀಯಿರಿ. ದೊಡ್ಡ ಅಲೆಗಳನ್ನು ಎದುರಿಸಲಾರದೆ ಗುಳ್ಳೆಗಳು ಅವರೊಳಗೆ ಸೇರಿಕೊಳ್ಳುವಂತೆ ಈ ಚಿಕ್ಕ ಸಂಸ್ಥೆಗಳು ದೊಡ್ಡ ಸಂಸ್ಥೆಗಳಲ್ಲಿ ಮಾಯವಾದಾಗ ಪರಿತಪಿಸಬೇಡಿ. ಆದ್ದರಿಂದ ಇನ್ನಾದರೂ ಎಚ್ಚತ್ತು ದೇಶೀಯರ ಪ್ರಯತ್ನಗಳಿಗೆ ಸಹಾಯವಿತ್ತು ದೇಶದ ಗೌರವವನ್ನು ಉಳಿಸಿರಿ.

'ಹಿತಚಿಂತಕ'

ಡಾ. ನೇತ್ಯೂಸ್ ಎಬ್ರಹಾಮ್
ದಂತ ವೈದ್ಯರು.
(ಪೀಯರ್ಸ್‌ಲೆಸ್ಲಿ ಬಂಗ್ಲೆ)
(ಸ್ಪೆನ್ಸರ್ಸ್ ಹತ್ತಿರ)
ಮಡಿಕೇರಿ.



ಸಂಖ್ಯೆ [illegible]

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ 52,54,750 ರೂ. ಭರವಸೆಯ 4689 ಪ್ರಪೋಸಲ್‌ಗಳು ಸಿಕ್ಕಿವೆ. ಅವರಲ್ಲಿ ಹಿಂದಿನ ವರ್ಷದ ಪೂರ್ತಿಯಾಗದ 1447 ಪ್ರಪೋಸಲ್‌ಗಳ ಬಾಬ್ತು 40,67,650 ರೂ. ಗಳ ಬಗ್ಗೆ ವರ್ಷಾವಧಿ 2,21,959-6-0 ರೂ. ವಿಮಾ ಕಂತು ಬರುತ್ತೆ. ಕಂಪನಿಯಿಂದ ಭರವಸೆ ಪಡೆದಿರುವ ಹಣ ರೂ. 39,38,150. ಬಾಕಿ ರೂ. 1,29,500 ಪ್ರಸಿದ್ಧ ಭರವಸೆ ಕೊಟ್ಟದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುವರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ. 4,13,775 ಹೆಚ್ಚಿದೆ.

ಈ ಕೆಳಗಿನ ಒಕ್ಕೆ ಸಂಗತಿಗಳಿಂದ ಲಭಿಸಿದ ತೃಪ್ತಿಯನ್ನು ಮೆಂಬರುಗಳೊಡನೆ ಅನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯಾ ಸರ್ಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪೆನಿಗಳಿವೆಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಶೂರೆನ್ಸ್ ಈಯರ್ ಬುಕ್' ಎಂಬುವುದರಿಂದ ತಿಳಿದುಬರುತ್ತದೆ. ಈ ಕಂಪೆನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪೆನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ವರೆಗೆ ಶ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೆಯದಾಗಿದೆ. ಒಂದನೆಯದಾದ ಕಂಪೆನಿಯು ಇದಕ್ಕಿಂತ 25 ವರ್ಷಗಳ ಮುಂಚೆ ಸ್ಥಾಪಿಸಲ್ಪಟ್ಟದ್ದಾಗಿದೆ.

ವಿಮಾ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮಾ ಕಂತುಗಳ ಆದಾಯವು (ಪುನಃ ಭರವಸೆ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮಾ ಕಂತಿನ ಆದಾಯಕ್ಕಿಂತ ರೇಕಡ 55ರಷ್ಟು ಹೆಚ್ಚಿದೆ. ಪರದ ವರ್ಷದ ವಿಮಾ ಕಂತಿನ ಆದಾಯವು ರೂ. 3,66,198-13-0, ಗತ ವರ್ಷದ್ದು 2,36,767-6-6 ಆಗಿದೆ.

ಜೀವವಿಮಾ ಫಂಡು:—ಈ ಕಂಪೆನಿಯ ಜೀವ ವಿಮಾ ಫಂಡು ರೂ. 75,258-14-9ರಿಂದ, ವ್ಯವಸ್ಥಾ ಕ್ರಮಕ್ಕೆ ಮತ್ತು ಇತರ ಖರ್ಚಿಗಾಗಿ ರೂ. 45,037-8-4 ವಜಾ ಕಳೆದು ರೂ. 21,00,421-1-3ಕ್ಕೆ ಏರಿದೆ. ಈ ಕೆಳಗೆ ಅದರ ತಪಶೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿಮಾ ಕಂತು	ಜೀವ ವಿಮಾ ಫಂಡು.
1ನೇ ವರ್ಷದ	ರೂ. 1,46,949	ರೂ. 15,619
2ನೇ ವರ್ಷದ	,, 2,36,767	,, 75,259
3ನೇ ವರ್ಷದ	,, 3,66,199	,, 2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತ ವಿಮಾ ಕಂಪೆನಿಗಳ ವಾರ್ಷಿಕ ವೃತ್ತಾಂತದಲ್ಲಿ ಹೊಗಳಲು ಅರ್ಹವಾದದ್ದೇ ಆಗಿದೆ.

ಭಾರತ ಜೀವವಿಮಾ ಕಂಪೆನಿಗಳ ಆಕ್ಟಿನ ಮೇರೆ ಠೇವಣಾತಿ:—ಈ ಕಾನೂನು ಮೇರೆ ಠೇವಣಾತಿ ಮಾಡತಕ್ಕದಿದ್ದ ರೂ. 2 ಲಕ್ಷವನ್ನು ಪೂರ್ತಿಯಾಗಿ ಡಿಪಾಜಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷವುಳ್ಳವರಾಗಿರುವರು.

ಸಿ. ಯಂ. ತಿಮ್ಮಯ್ಯ,

(12-10) ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

ಯೂನಾನಿ ಫಾರ್ಮೆಸಿಯ ಉತ್ತಮ ಔಷಧಿಗಳು.

ಉಬ್ಬಸ ಸಂಹಾರಿ (Asthma cure) ಕೆಲವು ದಿನಗಳ ಸೇವನೆಯಿಂದ ಉಬ್ಬಸವನ್ನು ಖಾತ್ರಿಯಾಗಿ ಗುಣಪಡಿಸುತ್ತದೆ. 40 ದಿನದ ಔಷಧಿಗೆ ಕ್ರಯ ರೂ. 5—12—0.

ಅಂಬರ್ ಕೂದಲೆಣ್ಣೆ, ಸುಗಂಧಯುಕ್ತ ಆಮ್ಲ ಕೇಶ ತೈಲ ಅಲ್ಲದೆ ಎಲ್ಲಾ ರೋಗಗಳಿಗೂ ರಾಮಬಾಣವಂತಿರುವ ಮಾತ್ರೆಗಳೂ, ಚೂರ್ಣಗಳೂ, ಲೇಹಗಳೂ, ತೈಲಗಳೂ ಮತ್ತು ಕೇಶ ತೈಲಗಳೂ ಸಹ ತಯಾರಿರುವುವು.

ಬೇಗನೆ ಬರೆಯಿರಿ:—

ಯಂ. ಯಂ. ಸಿದ್ದೀಕ್,

23 ಪ್ರೊಪ್ರೈಟರ್,

ಯುನಾನಿ ಔಷಧಶಾಲಾ, ಮಡಿಕೇರಿ, ಕೊಡಗು.

ಅಭಿನವ ಔರಂಗಜೇಬ.

——):(——

ಇಂದು ಹೈದರಾಬಾದಿನಲ್ಲಿರುವ ಪ್ರಜೆಗಳಲ್ಲಿ ಸಾಧಾರಣ ಶೇಕಡಾ 89 ಮಂದಿ ಹಿಂದುಗಳು. ಹಿಂದುಗಳೇ ಹೆಚ್ಚು ಮಂದಿ ಇರುವ ಆ ಸಂಸ್ಥಾನದಲ್ಲಿ ಅವರ ನಿಜಾಮರು ಅವರತ್ತ ಅದೆಂತಹ ದೃಷ್ಟಿಯನ್ನು ಬೀರಿರುವರೆಂಬುದು ಈ ಕೆಳಗೆ ಕೊಟ್ಟ ಕೆಲವು ವಿಷಯಗಳಿಂದ ವಿಶದವಾಗದಿರದು.

ಈಗಿನ ನಿಜಾಮರು ಪಟ್ಟವನ್ನೇರಿದೊಡನೆ ತಾನು ಅಭಿನವ ಅವರಂಗಜೇಬನಾಗುವೆನೆಂದು ಬಹಿರಂಗವಾಗಿ ಹೇಳಿದ್ದವರಲ್ಲದೆ, ಅಂದಿನಿಂದ ತನ್ನ ರಾಜ್ಯದ ಒಳಗೂ ಹೊರಗೂ ಇಸ್ಲಾಂ ಪ್ರಚಾರಕ್ಕಾಗಿ ಲಕ್ಷಾವಧಿ ರೂಪಾಯಿಗಳನ್ನು ವ್ಯಯಿಸುತ್ತಿರುವರು. ತಾನು ಇಸ್ಲಾಂ ಧರ್ಮಾಭಿಮಾನಿ ಎಂಬುದನ್ನು ಮೆರೆಸುವುದಕ್ಕಾಗಿ, ತುರ್ಕಿಯ ಕಾಲಿಫರ ಪುತ್ರಿಯರೊಡನೆ ತನ್ನಿಬ್ಬರು ಪುತ್ರರ ವಿವಾಹವನ್ನು ಜರಗಿಸಿದರು. ಅವರ ರಾಜ್ಯದಲ್ಲಿಂದು ಅನೇಕ ಅನ್ಯಾಯದ ಕಾನೂನುಗಳು ಹಿಂದುಗಳ ಮೇಲೆ ಹೊರಿಸಲ್ಪಟ್ಟಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಟ್ಟಿವೆ.

1. ಒಂದೇ ಸಮಯದಲ್ಲಿ ದಸರಾ ಮತ್ತು ಮೊಹರಮ್ ಬಂದರೆ, ಹಿಂದುಗಳು ಎಲ್ಲಿಯೂ ವಾದ್ಯಾದಿಗಳನ್ನು ಮಾಡಬಾರದು. ಹಾಡುವುದು, ಹಬ್ಬದೂಟಗಳನ್ನು ಮಾಡುವುದು, ಇಂತಹ ಸಂತೋಷ ಸಮಾರಂಭಗಳನ್ನೂ ಅವರು ನೆರವೇರಿಸಕೂಡದು. ಎಲ್ಲಿಯಾದರೂ ಸ್ವಂತ ಮನೆಗಳಲ್ಲಿ ಇಂತಹ ಸಮಾರಂಭಗಳು ಜರಗುವುದಾದರೂ, ಯಾವ ಬಗೆಯ ಸದ್ದೂ ಹೊರಗೆ ಹರಿಯದಂತೆ ಮಾಡಲು ಮನೆಯ ಗೋಡೆಗಳು ಬಹಳ ಉನ್ನತವಾಗಿರಬೇಕು. ಈ ಹುಕುಮಿಗೆ ವಿರುದ್ಧವಾಗಿ ವರ್ತಿಸುವವರನ್ನು 5 ವರ್ಷ ಕಠಿಣ ಸಜೆಗೂ 1000 ರೂಪಾಯಿಗಳ ದಂಡನೆಗೂ ಒಳಪಡಿಸಲಾಗುವುದು. ಆಗಿನ ಸಮಯಗಳಲ್ಲಿ ಹಿಂದುಗಳು ಹೊಸ ಉಡುಪುಗಳನ್ನೂ ಉಟ್ಟುಕೊಳ್ಳಬಾರದು.

2. ಸ್ವಂತ ಮನೆಯಲ್ಲೊಂದು ಹಬ್ಬದ ಸಮಾರಂಭವನ್ನು ಕೈಕೊಳ್ಳಬೇಕಾದರೆ, 15 ದಿನಗಳ ಮುಂಚಿತವಾಗಿ ಸರಕಾರದಿಂದ ಅನುಮತಿಯನ್ನು ಪಡಕೊಳ್ಳತಕ್ಕದು.

3. ಯಾವಾಗಲಾದರೂ, ಯಾವ ಸಂದರ್ಭದಲ್ಲಾದರೂ ಮಸೀದಿಯ ಮುಂದುಗಡೆಯಲ್ಲಿ ಸಂಗೀತ ವಾದ್ಯಾದಿಗಳನ್ನು ಜರಗಿಸಬಾರದು.

4. ಮಹಮ್ಮದೀಯರ ವಸತಿಯು ಹೆಚ್ಚಾಗಿದ್ದ ಸ್ಥಳಗಳಲ್ಲಿದ್ದ ದೇವಾಲಯ ಗುಡಿಗಳನ್ನು ಸರಿಪಡಿಸುವುದು, ಅವುಗಳಿಗೆ ಸುಣ್ಣ ಬಳಿಯುವುದು, ನಿರ್ಬಂಧಿಸಲ್ಪಟ್ಟಿರುವುದು.

5. ಹಿಂದುಗಳು ಖಾಸಗಿ ಶಾಲೆಗಳನ್ನು ತೆರೆಯಬಾರದು. ಪ್ರತಿಯೊಂದು ತರಗತಿಯಲ್ಲಿ 15 ಮಂದಿಗೆ ಮಿಕ್ಕ ವಿದ್ಯಾರ್ಥಿಗಳಿದ್ದರೆ ಸರಕಾರದಿಂದ ಮುಂಚಿತವಾಗಿಯೇ ಅನುಮತಿಯನ್ನು ಹೊಂದತಕ್ಕದ್ದು. ಈ ಕಾನೂನು ಜಾರಿಗೆ ಬರುವ ಮುನ್ನ ಸಾಧಾರಣ 5000 ಪಾಠಶಾಲೆಗಳು ಆ ಸಂಸ್ಥಾನದಲ್ಲಿದ್ದುವು. ಈಗ ಸರಕಾರದಧೀನವಾದ ಮತ್ತು ಖಾಸಗಿ ಶಾಲೆಗಳು ಕೂಡಿ 1300 ಮಾತ್ರ ಇರುವುವು. ಪರಂತು ಅವುಗಳಲ್ಲಿ ಒಂದೂ ಹಿಂದುಗಳ ಕೈಕೆಳಗಿಲ್ಲ. ಸರ್ವಸಾಧಾರಣವಾಗಿ ಅಲ್ಲಿ ತೆಲುಗು ಮತ್ತು ಮರಾಠಿ ಭಾಷೆಯನ್ನಾಡುವವರು 65 ಲಕ್ಷ ಮಂದಿ ಇರುವರಾದರೂ, ಅವರು ಕಡ್ಡಾಯವಾಗಿ ಉರ್ದುವನ್ನು ಕಲಿಯಬೇಕು, ನುಡಿಯಬೇಕೆಂಬ ನಿರ್ಬಂಧವು ಹೊರಿಸಲ್ಪಟ್ಟಿರುವುದು. ಈ ಕಡ್ಡಾಯ ಶಿಕ್ಷಣವು ಜಾರಿಗೆ ಬರುವ ಮೊದಲು ಸಾವಿರಕ್ಕೆ 47 ರಂತೆ ಅಕ್ಷರಜ್ಞರಿದ್ದರು; ಈಗ ಅವರ ಸಂಖ್ಯೆಯು 30 ಕ್ಕೆ ಇಳಿದಿರುವುದು.

6. ಯಾರೂ ಪ್ರಾರ್ಥನಾಮಂದಿರಗಳನ್ನೂ ಹವನ ಕುಂಡಗಳನ್ನೂ ನಿರ್ಮಿಸಬಾರದಾಗಿದೆ. ಅಲ್ಲದೆ ವ್ಯಾಯಾಮಶಾಲೆಗಳ ಮೇಲೂ ನಿರ್ಬಂಧವು ಹಾಕಲ್ಪಟ್ಟಿರುವುದು.

ಈ ರೀತಿಯಲ್ಲಿ ಹಿಂದುಗಳನ್ನು ಸಂಸ್ಥಾನದವರು ಪರಿಪರಿಯಾಗಿ ಪೀಡಿಸುತ್ತಿರುವರು. ಸುಮ್ಮ ಸುಮ್ಮನೆ ಸುಳ್ಳು ಮೊಕದ್ದಮೆಗಳೂ ಅವರ ಮೇಲೆ ಹೊರಿಸಲಾಗುವುವು. ಒಮ್ಮೆ ನಿಜಾಮಾಬಾದಿನಲ್ಲಿ ಆರ್ಯಸಮಾಜದವರು ಸ್ಥಾಪಿಸಿದ್ದ ಮಂದಿರವನ್ನು ನಡೆಸಕೂಡದಾಗಿ ಅವರ ಮೇಲೆ ಒತ್ತಾಯವು ನಡೆಸಲಾಯಿತು. ಆಗ ಅದರ ಹದಿನಾರು ಮಂದಿ ಅಧಿಕಾರಿಗಳೂ ಇದಕ್ಕೊಪ್ಪದಿರಲು, ಅವರನ್ನು ಸೆರೆಮನೆಯಲ್ಲಿ ತುರುಬಿ, ಮೂತ್ರ, ಮಾಂಸಾದಿ ಕೊಳಕು ಪದಾರ್ಥಗಳು ಬಲಾತ್ಕಾರದಿಂದ ಅವರ ಬಾಯಿಯಲ್ಲಿ ತುರುಕಿಸಲ್ಪಟ್ಟುವು. ಈ ವಿಷಯವು ಮೇಲಧಿಕಾರಿಗಳ ಗಮನಕ್ಕೆ ತರಲಾಯಿತು. ಆದರೆ ಅವರು ಅತ್ತ ಲಕ್ಷ್ಯವನ್ನೇ ಕೊಡಲಿಲ್ಲ.

ಯಾವತ್ತು ಮೀಟಿಂಗುಗಳು ಜರಗಬೇಕಾದರೆ ಅವರಲ್ಲಿ ಮಂಜೂರಾತಿಗೆ ಬರಲಿರುವ ಠರಾವುಗಳು ಮೇಲಧಿಕಾರಿಗಳಿಗೆ ಮೊದಲು ಕಳುಹಿಸಲ್ಪಟ್ಟು ಅವರ ಅನುಮೋದನೆಯು ದೊರಕಬೇಕು. ದಂಗೆಗಳು, ಕಲಹಗಳು ನಡೆದಲ್ಲಿ, ತಪ್ಪು ಯಾರದೂ ಇರಲಿ, ಹಿಂದುಗಳೇ ಅದಕ್ಕೆ ಹೊಣೆ ಮಾಡಲ್ಪಡುತ್ತಿರುವರು. ಮುಸಲ್ಮಾನರು ಹಿಂದೂ ಧರ್ಮದ ಕುರಿತು ಅಸಂಬದ್ಧ ಅಪಪ್ರಚಾರ ನಡೆಸುತ್ತಿದ್ದರೂ ಪ್ರತ್ಯುತ್ತರವನ್ನು ಕೊಡುವ ಹಕ್ಕು ಹಿಂದುಗಳಿಗಿಲ್ಲ. ಯಾರಾದರೊಬ್ಬನು ಪ್ರತ್ಯುತ್ತರ ಕೊಟ್ಟಲ್ಲಿ ಆತನನ್ನು ದಸ್ತಗಿರಿ ಮಾಡಲಾಗುತ್ತಿದೆ. ಹಿಂದೂಗಳನ್ನು ಮುಸಲ್ಮಾನರು ಹುಂಬಾ ತಮ್ಮ ಧರ್ಮಕ್ಕೆ ಮತಾಂತರಗೊಳಿಸುತ್ತಿರುವರು.

ಇತ್ತೀಚೆಗೆ ಹೈದರಾಬಾದಿನಲ್ಲಿ ನಡೆದ ದೊಂಬಿಗಳಿಗೆ ಹಿಂದುಗಳೇ ಮೂಲ ಭೂತರೆಂದು ಸರಕಾರದವರು ಸಾರಲಾಗಿ

ಜಗತ್ತಿನ ಸಾರ ಪ್ರದೇಶವೆಂದರೆ ಭಾರತ ಭೂಮಿ. ಇದು ಸುವರ್ಣ ಭೂಮಿಯೆನಿಸಿತ್ತು, ಭಂಗಾರದ ಹೊಗೆಯು ಹಾಯುತ್ತಿತ್ತು. ಜನರು ಸುಖ ಶಾಂತಿಗಳಲ್ಲಿ ತೇಲಾಡುತ್ತಿದ್ದರು. ಇದೇ ಅಲ್ಲ, ದೇವತಾ ಅವತಾರಕ್ಕೆ ಅವಕಾಶ ಕೊಟ್ಟ ಪವಿತ್ರ ಭೂಮಿ. ಸಾಧು ಸತ್ಪುರುಷರು ಹಾಡಿ ಹರಸಿದ ಪಾವನ ಭೂಮಿ. ಒಂದು ಕಾಲದಲ್ಲಿ ಪ್ರಪಂಚದ ನಾಗರೀಕ ದೇಶಗಳಲ್ಲಿ ಅಗ್ರಸ್ಥಾನವನ್ನು ಪಡೆದು ತನ್ನ ಭಾಗ್ಯಾಕಾರದಲ್ಲಿ ಪ್ರಜೆಗಳನ್ನು ಸುಖಿಗಳನ್ನಾಗಿ ಮಾಡಿದ್ದ ಭೂಮಿಯಾಗಿತ್ತು. ಆದರೆ ಇಂದೂ ಆ ಪವಿತ್ರ ಭೂಮಿ ಇದೆ. ಅದೇ ಹಿಮಾಚಲವು ಗಗನವನ್ನು ಚುಂಬಿಸುವ ತೆರದಿಂದ ನಿಂತಿರುತ್ತದೆ. ಗಂಗಾ, ಯಮುನ ಇವೇ ಮೊದಲಾದ ಆ ಪವಿತ್ರ ನದಿಗಳು ಇಂದೂ ಹರಿಯುತ್ತಲೇ ಇವೆ. ಅದೇ ವಂಶದ ಜನರೂ ಇಂದು ಇರುವರು. ಆದರೇನು? ಈ ಚಿತ್ರಕ್ಕೂ ಮೊದಲಿನ ಚಿತ್ರಕ್ಕೂ ಅದೆಷ್ಟು ಅಂತರ. ಇಂದಿನ ಕಂಗಾಲಾದ ಸ್ಥಿತಿಯನ್ನು ನೋಡಿದರೆ ಯಾವ ಕಾಲಕ್ಕಾದರೂ ಮುಂದಿನ ಉಚ್ಛ ಸ್ಥಿತಿಯನ್ನು ಮುಟ್ಟಲು ಸಾಧ್ಯವೇ ಎಂಬ ಪ್ರಶ್ನೆಯು ತಲೆದೋರುತ್ತದೆ. ಇಂದಿನ ಕರುಣಾಜನಕ ಸ್ಥಿತಿಯನ್ನು ನೋಡಿ ಮರಮರನೆ ಮರುಗದ ಮಾನವನಿರುವನೇ? ಅಂದ ಬಳಿಕ ಸದ್ಯದ ವಿಷಮಾವಸ್ಥೆಗೆ ಕಾರಣವೇನು? ರಾಜ್ಯದಾಡಳಿತೆಯು ಬದಲಾಗಿದೆ. ಭಾರತಮಾತೆಯ ಸ್ವಾತಂತ್ರ್ಯವು ಹೋಗಿದೆ. ಆರ್ಥಿಕ ಸುಲಿಗೆಯು ಯಥೇಚ್ಛವಾಗಿ ನಡೆದಿದೆ. ಅತರ ರಾಷ್ಟ್ರೀಯ ಪರಿಸ್ಥಿತಿಯು ಭರದಿಂದ ಬದಲಾಗುತ್ತಾ ಬಂದಿದೆ. ಯಂತ್ರಗಳ ಬಿರುಗಾಳಿಗೆ ಹಳ್ಳಿಯ ಉದ್ಯೋಗ ವ್ಯವಸಾಯಗಳು ಹಾರಿಹೋಗ ಹತ್ತಿವೆ. ಜನರ ಕೈಯ್ಯಲ್ಲಿ ದುಡ್ಡಿಲ್ಲ; ತಿನ್ನಲಿಕ್ಕೆ ಅನ್ನವಿಲ್ಲ. ಮೈ ತುಂಬ ಅರಿವೆ ಇಲ್ಲ. ಸಾಹುಕಾರ

ದೆ. ಆದರೆ ಹಲವು ಮಂದಿ ಮುಸಲ್ಮಾನ ಜಹಗೀರುದಾರರ ಪ್ರೇರೇಪಣೆಯಿಂದಾಗಿ ಮುಸಲ್ಮಾನರೇ ಹಿಂದುಗಳ ಅಂಗಡಿಗಳನ್ನು ಲೂಟಿಮಾಡಲು ಸಿದ್ಧತೆಗಳನ್ನು ಮಾಡುತ್ತಿದ್ದರಾಗಿ ತಿಳಿದುಬಂದಿದೆ. ಆ ಸಮಯದಲ್ಲಿ ಹಿಂದುಗಳಲ್ಲಿ ಕೀಳುತರಗತಿಯವರಾದ 'ಭೋಥ'ಜಾತಿಯ 4000 ಮಂದಿ ಈ ಲೂಟಿಯು ಆಗದಂತೆ ಮಾಡಿದರು. ಇದೊಂದು ತಪ್ಪಿಗಾಗಿ ಅವರನ್ನು ಸಾವಿರ ಗಟ್ಟಲೆಯಿಂದ ಕೈದುಮಾಡಿ, ತುರಂಗಗಳಲ್ಲಿ ದೊಬ್ಬಿ ಪರಿಪರಿಯಾಗಿ ಪೀಡಿಸುತ್ತಿರುವರು.

ಪ್ರಸ್ತುತ ಆರ್ಯ ಸರ್ವದೇಶಿಕ ಸಭೆಯವರು 14 ಕೇಳಿಕೆಗಳನ್ನೊಳಗೊಂಡ ಒಂದು ಬಿನ್ನವತ್ತಳೆಯನ್ನು ತಯಾರುಮಾಡಿ ಸರಕಾರಕ್ಕೆ ಒಪ್ಪಿಸಿರುವರು. ಅವು ಸರಕಾರದಿಂದ ಮನ್ನಿಸಲ್ಪಡದಿದ್ದರೆ ಶೀಘ್ರದಲ್ಲಿಯೇ ಅಲ್ಲಿ ಸತ್ಯಾಗ್ರಹವು ಹೂಡಲ್ಪಡಬಹುದಾಗಿದೆ. ಸಂಸ್ಥಾನದ ಪ್ರತಿಯೊಬ್ಬ ಹಿಂದುವು ತನ್ನ ಧರ್ಮರಕ್ಷಣಾರ್ಥವಾಗಿ ಸರ್ವಸ್ವವನ್ನೂ ತ್ಯಾಗಮಾಡಿ ಸತ್ಯಾಗ್ರಹ ಸಮರವನ್ನು ಸೇರಲು ಸಿದ್ಧರಿರುವರು.

ರೈತನ ಹಿತಸಾಧನೆ ಮತ್ತು ರಕ್ಷಣೆಯಾಗುವುದಾದರೆ ಕಾಂಗ್ರೆಸಿನಿಂದ.

ರ ಉಪದ್ರವಕ್ಕೆ ಆಳವಿಲ್ಲ. ಸರ್ಕಾರವು ಕಿವಿಗೊಡುವುದಿಲ್ಲ. ಕಾಂಗ್ರೆಸ್ಸಿಗೆ ಸಾಕಷ್ಟು ಅಧಿಕಾರವಿಲ್ಲ. ನಿರಾಶೆಯಿಂದ ನಾಸಂಡೀ ಕೃತ್ಯಗಳು ನಡೆಯದೆ ಇಲ್ಲ. ಹೀಗೆ ಸರ್ವತ್ರ ಶೂನ್ಯವೇ ನೆಲೆಗೊಂಡಿರುವದು.

ಇಂಥಾ ನಿಕೃಷ್ಟ ಸ್ಥಿತಿಗೆ ಮುಟ್ಟಿದ ಹಿಂದೂಸ್ಥಾನದಲ್ಲಿ ಎಂದೋ ಕ್ರಾಂತಿಯಾಗಿ ಹೋಗಬಹುದಿತ್ತು. ಜನತೆಯೊದರೂ ಇದನ್ನು ಎಲ್ಲಿಯ ವರೆಗೆ ತಾಳುವುದು. ತಾಳ್ಮೆಗಾದರೂ ಒಂದು ಸೀಮೆ ಇದೆಯಲ್ಲವೇ? ಇಂಥಾ ಪರಿಸ್ಥಿತಿಯನ್ನು ತಪ್ಪಿಸಿದ ಬಗ್ಗೆ ಪ್ರಜೆಗಳಂತೆ ಸರ್ಕಾರದವರೂ ಮಹಾತ್ಮರಿಗೆ ಋಣಿಯಾಗಿರಬೇಕು. ಇಡೀ ಭಾರತದಲ್ಲಿ ಏಳು ಲಕ್ಷ ಹಳ್ಳಿಗಳಿವೆ. ಹಳ್ಳಿಯ ಉದ್ಯೋಗವೆಂದರೆ ಕೃಷಿ. ಈ ಕೃಷಿಯಿಂದ ವರ್ಷದ ಅನ್ನವು ದೊರೆಯುವಂತಿಲ್ಲ. ಅದ್ದರಿಂದ ಇದಕ್ಕೆ ಸಹಾಯಕ ಕೈಗಾರಿಕೆಯು ಅವಶ್ಯ. ಅಖಿಲ ಭಾರತ ಚರಕಾ ಸಂಘವು ಈ ಬಗ್ಗೆ ಸ್ಥಾಪಿತವಾಗಿದ್ದು ತನ್ನ ಕಾರ್ಯಕ್ಷೇತ್ರವನ್ನು ಬೆಳೆಸುತ್ತಿದೆ. ಇದೇ ರೀತಿ ಮೃತಪ್ರಾಯವಾದ ಹಳ್ಳಿಯ ಉದ್ಯೋಗಗಳನ್ನು ಪುನರುಜ್ಜೀವನಗೊಳಿಸುವದು ಅಗತ್ಯ. ಕಾಂಗ್ರೆಸು ಹೀಗೆ ಒಂದು ವಿಧದಲ್ಲಿ ಗ್ರಾಮೋದ್ಧಾರ ಕಾರ್ಯವನ್ನು ಕೈಕೊಂಡಿರುತ್ತಿರುವದು ಸರ್ಕಾರಕ್ಕೆ ಗೋಚರವಾಯಿತು. ಸರ್ಕಾರವೂ ಗ್ರಾಮೋದ್ಧಾರಕ್ಕೆ ಪ್ರಾರಂಭಿಸಿತು. ಕಾಂಗ್ರೆಸ್ಸಿನ ಬೆಳೆಯುವ ವರ್ಚಸನ್ನು ಹೀಗೆ ಅಪಹರಿಸಲೆತ್ನಿಸಿತು. ದೊಡ್ಡ ದೊಡ್ಡ ಅಧಿಕಾರಿಗಳು ಮೋಟಾರು ಬಂಡಿಗಳಲ್ಲಿ ಕುಳಿತು ಬಂದು ಹಳ್ಳಿಗರಿಗೆ ಅಮೋಘವಾದ ವ್ಯಾಖ್ಯಾನಗಳನ್ನು ಕೊಡಲಾರಂಭವಾಯಿತು. ಕುರಿ ಕೋಳಿಗಳನ್ನು ಸಾಕಬೇಕೆಂದು ಉಪದೇಶ ಮಾಡಿದರು. ಪ್ರದರ್ಶನಗಳನ್ನು ತೆರೆದರು. ಹೀಗೆ ಸುಧಾರಿಸಿದ ಸಾಹಿತ್ಯಗಳಿಗೆ ಪ್ರೋತ್ಸಾಹ ಕೊಡಲಾಯಿತೇ ವಿನಹ ಬಡ ರೈತರಿಗೆ ಇದರಿಂದಾದ ಪ್ರಯೋಜನವೇನು? ಮಧ್ಯಾಹ್ನ ಊಟಕ್ಕೆ ಗತಿ ಇಲ್ಲದವನು ಸುಧಾರಿಸಿದ ಸಾಹಿತ್ಯಗಳನ್ನು ಹೇಗೆ ಕೊಂಡುಕೊಳ್ಳಬಲ್ಲನು? ರೈತನು ಹಣವೆಂದು ಕೂಗುತ್ತಿರುವಾಗ ಸರ್ಕಾರವು ಹೆಣವನ್ನು ತೋರಿಸಿದಂತಾಯಿತು. ಬಡ ರೈತರ ಬೇಡಿಕೆಗಳು ಸರ್ಕಾರದ ಕಲ್ಲು ಹೃದಯವನ್ನು ಹೇಗೆ ಕರಗಿಸಬಲ್ಲವು?

ಇವೆಲ್ಲವೂ ಕಾಂಗ್ರೆಸು ಅಧಿಕಾರಕ್ಕೆ ಬರುವ ಪೂರ್ವದ ಸಂಗತಿಯಾಯಿತು. ಕಾಂಗ್ರೆಸು ಈಗ ಏಳು ಪ್ರಾಂತ್ಯಗಳಲ್ಲಿ ಅಧಿಕಾರ ವಹಿಸಿರುವದು. ರೈತರ ನಾಡಿ ಪರೀಕ್ಷೆಯು ಚೆನ್ನಾಗಿ ತಿಳಿದಿರುವುದರಿಂದ ಅವರ ಹಿತದ ಕಾರ್ಯವನ್ನು ಒಂದೊಂದಾಗಿ ಜರಗಿಸುತ್ತಿದ್ದಾರೆ. ಇದರಿಂದ ರೈತನಿಗೆ ಬದುಕುವ ಆಶೆಯುಂಟಾಗಿದೆ. ಆದರೆ ಹಿಂದೂಸ್ಥಾನಕ್ಕೆ ಅಂಟಿಕೊಂಡಿರುವ ಮಹಾರೋಗ (ಬಡತನ) ದ ನಿವಾರಣೆಯಾಗಬೇಕಾದರೆ ಆಮೂಲಾಗ್ರವಾಗಿ ಸುಧಾರಣೆಗಳು ಬೇಕು. ಈ ಸುಧಾರಣೆಗಳಾಗಬೇಕಾದರೆ ಕಾಂಗ್ರೆಸ್ ಮಂತ್ರಿಗಳ ಕೈಯಲ್ಲಿ ಹೆಚ್ಚಿನ ಅಧಿಕಾರಬೇಕು. ಹಿಂದೂಸ್ಥಾನದ ಉತ್ಪನ್ನದಲ್ಲಿ ಬಹು ದೊಡ್ಡ ಭಾಗವನ್ನು ತಿನ್ನುತ್ತಿರುವ ಸೈನ್ಯಖಾತೆಯ ಖರ್ಚನ್ನು ಖೋತೆ ಮಾಡುವ ಅಧಿಕಾರ ಅವರಿಗಿಲ್ಲ. ಯಾವ ದೇಶದಲ್ಲಿಯೂ ಇಲ್ಲದಷ್ಟು ದೊಡ್ಡ ಸಂಬಳವನ್ನು ಇಲ್ಲಿಯ ಅಧಿಕಾರಿಗಳು ಸಂಪಾದಿಸುತ್ತಿದ್ದು ಅದನ್ನು ಕಡಮೆ ಮಾಡುವ ಅಧಿಕಾರವಿಲ್ಲ. ಇಡೀ ಬ್ರಿಟಿಷ್ ಸಾಮ್ರಾಜ್ಯದ ಮುಖ್ಯ ಮಂತ್ರಿಗೆ ತಿಂಗಳಿಗೆ 5 ಸಾವಿರ ರೂಪಾಯಿಗಳಾದರೆ ನಮ್ಮಲ್ಲಿ ವೈಸರಾಯರಿಗೆ 25 ಸಾವಿರ ದೊರೆಯುತ್ತದೆ. ಸೇನಾಪತಿಯ ಸಂಬಳವು 20 ಸಾವಿರ ಇದೆ. ಹೆಚ್ಚೇಕೆ? ಅಧಿಕಾರ ವಹಿಸಿ ಕೆಲಸ ಮಾಡುತ್ತಿರುವ ಕಾಂಗ್ರೆಸ್ ಮಂತ್ರಿಗಳು ತಮ್ಮ ಸಂಬಳವನ್ನು ಕಡಿಮೆ ಮಾಡಿಕೊಂಡರೆ ಅವರ ಕೈಕೆಳಗಿರುವ ನೌಕರರಿಗೆ ಮೊದಲಿನ ವೇತನವನ್ನೇ ಕೊಡಬೇಕಾಗಿದೆ. ಸಣ್ಣಪುಟ್ಟ ಅಧಿಕಾರಿಗಳ ಸಂಬಳವನ್ನು ಅವರು ಕಮ್ಮಿ ಮಾಡಬಹುದು. ಆದರೆ ಸಿವಿಲ್ ಸರ್ವೆಂಟರ ಸಂಬಳಕ್ಕೆ ಕೈ ಹಚ್ಚುವಂತಿಲ್ಲ. ಹೊಸ ಕಂದಾಯವನ್ನು ಹೇರುವದು ಕಠಿಣವಾಗಿದೆ. ಹೀಗಿದ್ದ ಮೇಲೆ ಆಮೂಲಾಗ್ರ ಸುಧಾರಣೆ ಮಾಡಲಿಕ್ಕೆ ಹೆಚ್ಚಿನ ಅಧಿಕಾರವು ಬೇಕು. ಅಧಿಕಾರ ದೊರೆತ ಬಳಿಕ ದೊಡ್ಡ ದೊಡ್ಡ ಸಂಬಳಕ್ಕೆ ಕತ್ತರಿಯನ್ನು ಹಚ್ಚಬಹುದು. ಜನಹಿತದ ಕಾರ್ಯಗಳಿಗಾಗಿ ಸಾಕಷ್ಟು ಹಣ ಉಳಿಸಬಹುದು. ಆ ವರೆಗೆ ಬದುಕುವದೇನು? ಕಾಂಗ್ರೆಸ್ ಮಂತ್ರಿಗಳು ಸಾಲ ತೆಗೆದು ರೈತರಿಗೆ ಹೊಸ ಉದ್ಯೋಗ ವ್ಯವಸಾಯಗಳನ್ನು ಕಲ್ಪಿಸಬೇಕು. ಜನರು ಸಶಕ್ತರಾದ ಮೇಲೆ ಇದನ್ನು ಕಂದಾಯದ ರೂಪದಲ್ಲಾದರೂ ವಸೂಲು ಮಾಡಿದರೆ ಅಡ್ಡಿ ಇಲ್ಲ. ಮದ್ರಾಸ್ ಕಾಂಗ್ರೆಸ್ ಮಂತ್ರಿ ಮಂಡಳವು ಈ ಕೆಲಸಕ್ಕೆ ಕೈ ಹಾಕಲು ನಿಶ್ಚಯಿಸಿರುವುದಾಗಿ ತಿಳಿದುಬಂದಿದೆ.

ಸದ್ಯಕ್ಕೆ ಕಾಂಗ್ರೆಸ್ ಮಂತ್ರಿಗಳು ಕೊಡುತ್ತಿರುವ ಅಲ್ಪ ಸ್ವಲ್ಪ ಸುಧಾರಣೆಗಳು ಬೇನೆಗೆ ಕಷಾಯವಾಗುವದೇ ಹೊರತು ಪೌಷ್ಟಿಕ ಆಹಾರವಾಗದು. ಆದ್ದರಿಂದ ಹತ್ತು ವರ್ಷಗಳಲ್ಲಿ ಜನರು ಸಶಕ್ತರಾಗುವಂತೆ ಒಂದು ಉತ್ತಮ ದಾರಿಯನ್ನು ಹುಡುಕಬೇಕು. ಈಗಿನ ಮುಂದುಗಾರಿಕೆಯ ಖರ್ಚನ್ನು ಖೋತೆ ಮಾಡಲು ಸಣ್ಣ ಕತ್ತರಿಯಿಂದ ಸಾಧ್ಯವಿಲ್ಲ. ದೊಡ್ಡ ಕತ್ತರಿಯನು ಉಪಯೋಗಿಸಲು ಅಧಿಕಾರವಿಲ್ಲ. ಆದ್ದರಿಂದ ಸಾಲವನ್ನು ಹೊತ್ತಾದರೂ ಬಡ ರೈತರನ್ನು ಉದ್ಧರಿಸದೆ ಶಕ್ಯವಿಲ್ಲ. ಜನರು ಸಶಕ್ತರಾದ ಮೇಲೆ ಇದನ್ನು ವಸೂಲು ಮಾಡಿಕೊಳ್ಳಲು ಅಡ್ಡಿ ಇಲ್ಲ. ಸಾಲದ ಶೂಲದಿಂದ ಜನರನ್ನು ಮುಕ್ತರನ್ನಾಗಿ ಮಾಡದೆ ಗತ್ಯಂತರವಿಲ್ಲ. ಆದ್ದರಿಂದ ಇಂಥಾ ಆಮೂಲಾಗ್ರ ಸುಧಾರಣೆಗಳು ಬರಬೇಕಾದರೆ ಕಾಂಗ್ರೆಸ್ಸಿನ ವರ್ಚಸ್ಸು ಸರ್ವತೋಮುಖವಾಗಿ ಹರಡಬೇಕು. ಎಲ್ಲರೂ ಕಾಂಗ್ರೆಸಿಗೆ ಬೆಂಬಲವಿತ್ತು ನಮ್ಮ ಧ್ಯೇಯವನ್ನು ಸಾಧಿಸಲು ಸಹಕಾರಿಗಳಾಗಬೇಕು. ರೈತರನ್ನು ಉದ್ಧರಿಸುವ ಸಂಸ್ಥೆ ಕಾಂಗ್ರೆಸ್ ಅಲ್ಲದೆ ಬೇರೊಂದಿಲ್ಲ.

ತೋಟಗಾರರೂ, ಜೇನು ನೊಣಗಳೂ.

ಲೇ— ವಿ. ಲಕ್ಷ್ಮೀನಾರಾಯಣರಾವ್, ಬಿ. ಎ.
ಬೀ ಇನ್ಸ್‌ಪೆಕ್ಟರ್, ವೀರಾಜಪೇಟೆ.

ಜೇನು ನೊಣಗಳ ಸಹಾಯದಿಂದುಂಟಾದ ಫಲವು ಅತ್ಯುತ್ತಮವಾದದ್ದು. ಈ ವಿಚಾರವಾಗಿ ಆಂಗ್ಲ ಶೋಧಕರು ಹೀಗೆ ಬರೆಯುತ್ತಾರೆ 'ಜೇನು ನೊಣಗಳಿಂದ ಪರಾಗ ಚಲನಾಕಾರ್ಯವು ನೆರವೇರಿ ಉಂಟಾದ ಬೀಜವು ಬಲವಾಗಿಯೂ, ಸಾರವತ್ತಾಗಿಯೂ ಇದ್ದು ಆ ಬೀಜದಿಂದುಂಟಾಗುವ ಮರವು ಅಧಿಕ ಫಲಕೊಡುವ ಮರವಾಗುವುದು.'

ಮಣಸ, ಕಿತ್ತಳೆ, ತೆಂಗು, ಮಾವು ಮೊದಲಾದ ಮರಗಳಲ್ಲಿಯೂ, ಸವುತೆ, ಕುಂಬಳ, ಪೀರ್ಸಿ, ಹೀರೆ, ಬಚ್ಚಂಗಾಯಿ ಮೊದಲಾದ ಬಳ್ಳಿಗಳಲ್ಲಿಯೂ ಜೇನು ನೊಣಗಳ ಸಹಾಯದಿಂದಲೇ ಮುಖ್ಯವಾಗಿ ಅಧಿಕ ಫಲವಾಗುವುದಾಗಿದೆ. ಕೃಷಿಕರಿಗೆ ತಮ್ಮ ತೋಟದಲ್ಲಿ ಕಡಿಮೆ ಉತ್ಪತ್ತಿ ಸಿಗಲು ಜೇನು ನೊಣಗಳನ್ನು ಸಾಕದಿರುವುದು ಒಂದು ಕಾರಣವೆನ್ನಬಹುದು. ಆದುದರಿಂದ ತೋಟಗಾರರಿಗೆ ಜೇನು ನೊಣಗಳನ್ನು ತಮ್ಮಲ್ಲಿ ಸಾಕುವುದರಿಂದ ಉತ್ತಮ ಜೇನನ್ನು ಪಡೆಯಬಹುದಲ್ಲದೆ ತೋಟದ ಉತ್ಪತ್ತಿಯನ್ನೂ ವೆಚ್ಚವಿಲ್ಲದೆ ಹೆಚ್ಚಿಸಿಕೊಳ್ಳಬಹುದು.

ಅಮೇರಿಕಾ ಮುಂತಾದ ಪಾಶ್ಚಾತ್ಯ ದೇಶಗಳಲ್ಲಿ ಈ ವಿಷಯವನ್ನರಿಯದ ತೋಟಗಾರರಿಲ್ಲ. ಅನೇಕ ತೋಟಗಾರರು ತಾವು ಜೇನು ನೊಣಗಳನ್ನು ಸಾಕದಿದ್ದರೂ ತೋಟದಲ್ಲಿ ಹೂವಾಗಲು ಪ್ರಾರಂಭಿಸಿದೊಡನೆಯೇ ಜೇನು ನೊಣ ಸಾಕುವವರಿಂದ ಒಂದೆರಡು ಗೂಡುಗಳನ್ನಾದರೂ ಬಾಡಿಗೆ ಕೊಟ್ಟು ತೋಟದೊಳಗೆ ತಂದಿಟ್ಟುಕೊಳ್ಳುತ್ತಾರೆ. ಯಾಕೆಂದರೆ ಜೇನು ನೊಣಗಳು ಮಾಡುವ ಉಪಕಾರವು ಅವರಿಗೆ ಸಂಪೂರ್ಣ ಗೊತ್ತು. ಆದರೆ ನಮ್ಮ ದೇಶದಲ್ಲಿ ಇದನ್ನರಿತ ಜನರು ತೀರ ವಿರಳ. ಹಳ್ಳಿಗಳೇ ಹೆಚ್ಚಾಗಿದ್ದು ಕೃಷಿಯೇ ಮುಖ್ಯ ವೃತ್ತಿಯಾಗಿರುವ ಈ ದೇಶದಲ್ಲಂತೂ ಜೇನು ನೊಣಗಳನ್ನು ಸುಧಾರಿಸಿದ ರೀತಿಯಲ್ಲಿ ಸಾಕುವುದು ಅಗತ್ಯವೆಂದು ಬೇರೆ ಹೇಳಬೇಕೇ?

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯೊದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52-9 ಬೆಂಗಳೂರು ಸಿಟಿ.

೪೨ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೇಕಂಪನಿ

ಸುಪ್ರಸಿದ್ಧ ಜ್ವರದ ಗುಳಿಗೆ

ಇದು ಛಳಿಜ್ವರ, ಚಾತುರ್ಥ ಜ್ವರ, ದಿನಬಿಟ್ಟು ದಿನ ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ನಾನಾತರದ ಜ್ವರಗಳ ಮೇಲೆ ತತ್ಕ್ಷಣವೇ ಗುಣ ಸಂಜೀವಿನಿಯಂತಿದೆ! ಬಾಟ್ಲಿಗೆ 1 ರೂ. 4 ಬಾಟ್ಲಿಗೆ 3 ರೂ. 12 ಬಾಟ್ಲಿಗೆ 8 ರೂ. ವಿ. ಪಿ. ಖರ್ಚು ಬೇರೆ.

ಗಣೇಶ. ರಾಮಚಂದ್ರ ಕರ್ಕೇ.

ಮತ್ತು ಕಂಪನಿ,

(52-36) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಬೋಯಪ್ಪನವರು.

ಕಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು

ವಿರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,

ಮೆ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮೆ ಪಿ. ಕೆ. ಮುದ್ದಮ್ಮಯ್ಯನವರು.

ಹುದಿಕೇರಿ—ಮೆ. ಅಜ್ಜಮಾಡ ಮಾಕಪ್ಪನವರು ಮತ್ತು ಮೆ. ಕೆ. ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮೆ ಕೆ ಮೊಗಪ್ಪನವರು.

ಶಾಂತಳ್ಳಿ—ಮೆ. ಬೆಳ್ಯಪಂಡ ಯಂ. ಪೂಣಚ್ಚನವರು.

(ಶಾಂತಳ್ಳಿ ಸ್ಟೋರ್ಸ್)

ಸೂಚನೆ.—ಪ್ರಿಂಟಿಂಗ ರಶೀತಿ ಕೊಂಡಿದ್ದಲ್ಲದೆ ಯಾರೂ ಹಣ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ

The Bombay Mutual Life Assurance Society Ltd.,

Head Office:—BOMBAY. Estd. 1871.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೂ ಕೈಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ ರೂ. 2,53,15,500.

1937ರಲ್ಲಿ ಪೂರೈಸಿದ ಉದ್ಯೋಗ ರೂ. 2,02,02,000.

ಎಂಡೋಮೆಂಟ್ ವಿಮಾ ಪತ್ರದ ಮೇರೆ 1000ಕ್ಕೆ ವರ್ಷಕ್ಕೆ 21 ರಂತೆಯೂ, ಹೋಲ್ ಲೈಫ್ ವಿಮಾ ಪತ್ರದಾರರುಗಳಿಗೆ 26 ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, **ಸೌತ್ ಪೆರೇಡ್**, ಬೆಂಗಳೂರು.

52-23

[ಚಿಕ್ಕ ಡಾಕ್ಟರ್. [illegible] [ರಿಜಿಸ್ಟರ್ಡ್]

ಚರ್ಮವ್ಯಾಧಿಗಳ ವೈರಿ—ಪ್ರತಿ ಒಬ್ಬರ ಸ್ನೇಹಿತ—ಸ್ವದೇಶಿ ವಸ್ತು.

ಇದರ ಲೇಪನದಿಂದ ಕಜ್ಜಿ, ಘಾಯ, ವ್ರಣ, ಇಸಬು, ನಾರುಹುಣ್ಣು, ಮೂಲವ್ಯಾಧಿ, ಹೆಟ್ಟಿನ ಘಾಯ, ಮುಖವ್ರಣ (Pimples ಸುಟ್ಟಘಾಯ, ಕತ್ತಿಘಾಯ, ಕೊಡವಾಳೆ, ಗಣಕರ್ಣ ಇವು ಮಾಯವಾಗುವವು. ಇದು ಸುರಿಯುತ್ತಿರುವ ರಕ್ತವನ್ನು ನಿಲ್ಲಿಸಿ ನೋವನ್ನು ನಿವಾರಿಸುವುದು. ಅಲ್ಲದೆ ಇಂದ್ರಜಾಲದೋಪಾದಿಯಲ್ಲಿ ಚೇಳಿನ ವಿಷವನ್ನು ಬಹಿರ್ಗತಪಡಿಸುವುದು. ನಿಮ್ಮಲ್ಲಿ ಒಂದು ಬಾಟ್ಲು ಇದ್ದಲ್ಲಿ ಒಬ್ಬ ಡಾಕ್ಟರೇ ಇದ್ದಂತಾಗುವುದು. ಕ್ರಯ ಬಹಳ ಸುಲಭ.

½ ಔನ್ಸ್ ಬಾಟ್ಲು 1ಕ್ಕೆ ಆಣೆ 0-8-0. ¼ ಔನ್ಸ್ ಬಾಟ್ಲು 1ಕ್ಕೆ ಆಣೆ 0-4-0.

ವಿ. ಸೂ:—ಪೆಟ್ಟು ತಾಗಿದ ಸ್ಥಳದಲ್ಲಿ ವೇಸ್ಲಿನ್ ಚೆನ್ನಾಗಿ ತಿಕ್ಕುವುದು. ಇಲ್ಲವೇ ಬಟ್ಟೆಯ ಮೇಲೆ ಸವರಿ ಅಂಟಿಸುವುದು. ನಂತರ ಸಾಬೂನಿನಿಂದ ಕೈ ತೊಳೆಯುವುದು. ಇದಲ್ಲದೆ ಇನ್ನೂ ಅನೇಕ ತರಹದ ಔಷಧಿಗಳು ನಮ್ಮಲ್ಲಿವೆ.

ಲಕ್ಷ್ಮೀ ಮ್ಯಾನಿಫ್ಯಾಕ್ಚರಿಂಗ್ ಕಂಪೆನಿ,

ಬಿ. ಕೆ. ಬೆಂಗಳೂರು ಸಿಟಿ.

52-53 **ಸೋಲ್ ಏಜೆಂಟ್:—ಹರಿದಾಸ್ ನಂಜುಂಡ ಗುಪ್ತ,**

ಮಡಿಕೇರಿ, (ಕೊಡಗು).

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆಶೂಲೆಗಳಿಗೂ ಅಮೃತ. ಬೆಲೆ 0-4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ ಬೆಲೆ 0-4-0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ.

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ. ಬೆಲೆ 0-8-0, 0-4-0.

ಸುಕುಮಾರತೈಲ

19

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ಇಾತ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ. ಬೆಲೆ 1-0-0

ಪ್ರೊಪ್ರೈಟರ್—ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತ್.

ಉತ್ತಮ ಪ್ರಚಾರ! ಜ್ಞಾನಭಂಡಾರ!!

ವ್ಯಾಪಾರಸ್ಥರೇ

ನಿಮ್ಮ ಸರಕುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ಣಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ 22
6 ತಿಂಗಳಿಗೆ—	„ 100.	„ 35.	„ 22.	„ 13
3 ತಿಂಗಳಿಗೆ—	„ 60	„ 20.	„ 13.	„ 8
1 ತಿಂಗಳಿಗೆ—	„ 25	„ 10.	„ 6.	„ 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಆತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮಿ. ಯಂ. ಜೆ. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮಿ. ಎಲ್. ಎಫ್. ಸಿ. ದಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

ಮಿ. ಡಿ. ಶೇಷಾದ್ರಿ, ಅ. ಇನ್ಸ್‌ಪೆಕ್ಟರು, ಶಿವಮೊಗ್ಗಾ.

82-52

Printed & Published by P. I. Belliappa, at 'Kodagu' Press Mercara for 'Kodagu' Ltd.

Reg No. M. 1550

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ. ವಾರ್ಷಿಕ ಚಂದಾ ರೂ. ೩-೮-೦

ತಾ. ೧೯—೮—೧೯೩೮. ಸಂಪುಟ ೧೮] [ಸಂಚಿಕೆ ೧೨

THE CANARA BANKING CORPORATION, UDIPI, Ltd.

(Incorporated in British India.)
Estd. 1906.

STATEMENT OF AFFAIRS AS ON 30th JUNE, 1938.

Capital and Liabilities:

1. Paid up Capital	Rs.	3,03,145	0	0
2. Reserves	„	3,88,788	6	8
3. Deposits	„	39,34,585	9	6
4. Due to Bankers	„	13,57,642	14	11
5. Bills for collection per contra		1,13,331	3	2
6. Sundries	„	2,00,858	4	8
Total	„	62,98,351	6	11

Property and Assets:

1. Landed Property, Premises and Buildings, Safes and Furniture	Rs.	3,63,004	5	0
2. Advances	„	36,56,673	2	3
3. Investment on Govt. Securities, Debentures, Shares etc.		17,53,922	5	2
4. Cash on Hand and with Bankers at call	„	3,45,380	5	10
5. Bills for collection	„	1,13,331	3	2
6. Sundries	„	66,040	1	6
Total	„	62,98,351	6	11

V. R. Kamath, B. A., LL. B.,
Manager.

Udipi,
8th July 1938.

52-37

The Bombay Life Assurance Company Ltd.

(Estd. 1908.)
45-47, Churchgate Street, Fort-Bombay.

Evidence of

Progress, Security and Stability.

Year.	New Business completed.	Premium Income.	Life Fund	Business in force.
1931	73,00,000	11,00,000	33,00,000	2,27,00,000
1934	1,04,00,000	19,00,000	58,00,000	3,71,00,000
1937	1,40,00,000	31,00,000	99,00,000	6,00,00,000

The Company offers all that is best and up-to-date in Life Assurance.
Applications for agencies will be considered from Honest and Respectable Ladies & Gentlemen:

For full particulars apply to any of our following Offices:—

KOCHIKAR & BROTHERS Ltd.,
Madras Branch Secretaries,
Post Box No. 337, Mount Road, MADRAS. [Phone No. 8243.]

4

Bombay Life Building, Udipi	Gautam Nivas, Charni Road, Girgaum, Bombay 4	Visweswarapuram. Circle Bangalore City.	Puthiyara. Calicut.	Car Street, Mangalore	Ottapalam S. Malabar.	Trivandrum (Travancore.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,760	0	0
ಜನರುಗಳ ಠೇವಣಾತಿ	–	2,52,649	7	4
ವಸೂಲಾದ ಕ್ಷೇಮನಿಧಿ	–	1,36,284	9	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಸು	–	14,275	9	0
ಕ್ರಿಸ್ಟ್ ಡಿಪಾಜಿಟ್ಸು	–	37,190	15	8

ಈ ಬ್ಯಾಂಕಿನಿಂದ ಕೊಡಗು ಜಿಲ್ಲೆ ಸಹಕಾರಿ ಸಂಘಗಳಿಗೆ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಕೇಳದ ಕಾಲಿಯಾದ [illegible] ವರವಲ್ಲಿಯೂ, ಮೂರು ವರ್ಷ ಹೆಚ್ಚಿನ ಅವಧಿಯ ಠೇವ ಣಾತಿಗಳಿಗೆ ಕೇಳದ ಕಾಲಿಯಾದ [illegible] ವರವಲ್ಲಿಯೂ ತಾ. 1 9 1937ರಿಂದ ಬಡ್ಡಿ ಕೊಡಲಾಗುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕ ವೂ ಮತ್ತು ಕ್ರಿಸ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿದೆ. [illegible] 1-4-1937 [illegible] ತಾ. 1 8 1936ರಿಂದ [illegible]

[illegible] ಲೆಕ್ಕ [illegible]

[illegible] ಎಂ. ಎಲ್. ಸಿ.
[illegible] ಬಿ. ಎ., ಬಿ. ಎಲ್.
[illegible] ಬಿ. ಎ., ಬಿ. ಎಲ್.

ತಾ. 1-8-1936

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

([illegible])

ಹೆಡ್ ಆಫೀಸು:—ಲಕ್ಷ್ಮೀನಿವಾಸ್ ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

[illegible]

ಆಕ್ಷ್ಯಕ ಲಾಭ! ಇಟ್ಟಿಸಿದಾಗ ಹಣ ಹಿಂದಕ್ಕೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

[illegible] "ಕೊಡಗಿನ ಕ್ಯಾಶ್ ಸರ್ಟಿಫಿಕೇಟುಗಳು" ರೂ ಪಾಯಿ 32, 40, 80, 200, 400 ಮತ್ತು 800 ನಗ [illegible] ಠೇವ ಣಾತಿಗಳಿಗೆ [illegible] ರೂ. 10, 25, 50, 100, 250, 500 ಮತ್ತು 1000 ಗಳು.

[illegible] ಹೆಚ್ಚಿನ ಮಾಹಿತಿಯನ್ನು ನಮ್ಮ [illegible], ಕುಂದಾಪುರ, ಗೋಕರ್ಣ, ಬೈಂದೂರು, ತೀರ್ಥಹಳ್ಳಿ, ಸೋಮವಾರಪೇಟೆ, ಕೊಟೇಶ್ವರ, ಶಿವಮೊಗ್ಗ, ಶಂಕರ ಮತ್ತು [illegible] ತಿಳಿದುಕೊಳ್ಳಬಹುದು.

52–12

The Agricultural &
Industrial Bank Ltd

"ZANDU"

ಝುಂಡೂರವರ	ಝುಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ರಕ್ತವರ್ಧಕ ಮತ್ತು ಶ್ವಾಸ ಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮ ವಾದವು. ಕ್ಷಯದ ಪ್ರಾರಂಭಾವಸ್ಥೆ ಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯ ವಾದ ಔಷಧ. **ಝುಂಡೂ ಅಯೋಡೈಸ್ಡ ಸೇರಸಪೆರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝುಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯೂ, ಶೋಧ, ಚೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ ಎಂ. ಎಸ್
(52–2) ಮತ್ತು ಆಯುರ್ವೇದ ವಿದ್ವಾನ್
ವೀರಾಜಪೇಟೆಯ ಏಜೆಂಟರು–ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಸ್ರಿ, ಕಲ್ಮದ ಮಿಶ್ರ)

[illegible] ರಸಾಯನ, ಸ್ವಪ್ನಾವಸ್ಥೆ, [illegible] ಧಾತು [illegible] ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಬಿಚ್ಚುವುದು, ಮಲಬದ್ಧತೆ, ಬಳಲ್ಲವ, ಅಶಕ್ತತೆ ಇವುಗಳನ್ನು ಹೋಗಲಾ ಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬ ಲ್ಯವನ್ನು ಹೋಗಲಾಡಿಸಿ ನವಯೌವನವನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ 2—8—0.

ಮಲೇರಿಯಾ ನಿವಾರಿಣಿ

ಇದು ಚಳಿ ಜ್ವರ, ಜಾಡ್ಯ ಜ್ವರ, ದಿನ ಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ, ಇನ್ಫ್ಲುಯೆಂಜಾ ಇತ್ಯಾದಿ ನಾನಾ ತರದ ಜ್ವರಗಳಿಗೆ ರಾಮಬಾಣ. ಬಾಟ್ಲಿ 1ರ ರೂ 1—8—0; ಸಣ್ಣ ಬಾಟ್ಲಿ ರೂ. 0- 13—0.

ಸ್ಪ್ಲೀನ್ ಮಿಕ್ಶರ್

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಅಶಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟು ಮಾಡುವುದು. ಬಾಟ್ಲಿ 1ರ ರೂ. 1 —2—0.

ಬಾಲಗ್ರಹ ಗುಟಿಕೆ

ಮಕ್ಕಳ ಕೆಂಪು, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ಮಂಗಳೂರು ಸ್ಟೋರ್ಸ್, ಮಡಿಕೇರಿ. ವಿ. ಬಿ. ಕಾಮತ್, ಮಡಿಕೇರಿ. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. ಸುಂದರ್ ಪ್ರಭು, ಸುಳ್ಯ. [6]

ಉದ್ಯೋಗ ಹುಡುಕಿಕೊಂಡು ಎರಡು ಭೂಖಂಡಗಳನ್ನು ದಾಟಿದನು.

ಹೊಲ್ಲೆಂಡಿನ ತರುಣನೊಬ್ಬನು ಉದ್ಯೋಗದ ಶಿಕ್ಷಣವನ್ನು ಪಡೆದನು. ಒಂದು ಉದ್ಯೋಗವನ್ನು ಹುಡುಕಾಡಿ, ಸೈಕಲಿನಲ್ಲೇ ಸಮಸ್ತ ಹಾಲೆಂಡಿನ ಪ್ರವಾಸ ಮಾಡಿದನು. ಫಲ ಸಿಗಲಿಲ್ಲ. ಕೊನೆಗೆ ಈಸ್ಟ್ ಇಂಡಿಸ್ ದ್ವೀಪಗಳಲ್ಲಿ ಒಕ್ಕಲ ಶಾಸನವಿರುವುದಾಗಿ, ಯಾರಿಂದಲೊ ತಿಳಿದು ಅಲ್ಲಿಗೆ ತೆರಳಲು, ಸ್ನೇಹಿತರು ಹಣವನ್ನು ವಿಚಾರಿಸಿದನು. ಅಷ್ಟು ಹಣವು ಅವನಲ್ಲಿ ಇಲ್ಲದಿರಲು, ಸೈಕಲಿನಲ್ಲೇ ಈಸ್ಟ್ ಇಂಡಿಸ್ ದ್ವೀಪಗಳಿಗೆ ತೆರಳಲು ಹೊರಟನು. ತನ್ನ ಸ್ವದೇಶದಲ್ಲಿ ಆ ತರುಣನು ಉದ್ಯೋಗಕ್ಕಾಗಿ ಸಾಧಾರಣ ಒಂದೂವರೆ ವರ್ಷ ಸಮಯ ಅಲೆದಾಡಿದ್ದನು. ಫೆಬ್ರವರಿಯಲ್ಲಿ ಒಂದಾನೊಂದು ದಿನ ಆ ತರುಣನು ಈಸ್ಟ್ ಇಂಡಿಸ್ ದ್ವೀಪಗಳ ಕಡೆ ತನ್ನ ಸೈಕಲಿನಲ್ಲೆ ಹೊರಟನು. ಜರ್ಮನಿಯ ಮೂಲಕವಾಗಿ, ಡೆನ್ಯೂಬ್‌ಗಾಗಿ, ಯುರೋಪನ್ನು ದಾಟಿ ಏಸ್ಯಾಖಂಡವನ್ನು ದಾಟಿ ಬೇಗೂ ಡಚ್ ಈಸ್ಟ್ ಇಂಡಿಸ್ ದ್ವೀಪಗಳಿಗೆ ಬರುವವನಾದನು.

ದಾರಿಯಲ್ಲಿ ಅವನಿಗೆ ಮಲೇರಿಯಾ ಜ್ವರವು ಹಿಡಿಯಿತು. ಸಂಪೂರ್ಣ ನೋತವನಾಗಿ ಕೈಯಲ್ಲ ಒಂದು ಚಿಕ್ಕಾಸು ಇಲ್ಲದವನಾಗಿ, ಆ ತರುಣನು ಬೇಗೂ ಸಿಂಗಾಪುರಕ್ಕೆ ತೆರಳಿದನು. ಅಲ್ಲಿಂಗ ಆತನು ಆಸ್ಪತ್ರೆಯಲ್ಲಿರುವರು ಇನ್ನು ಮೂರು ತಿಂಗಳ ಸಮಯ ಆತನು ಅಲ್ಲಿರಬೇಕಾಗುವುದಂತೆ.

—o0o—

ಬಾಲವಿರುವ ಮಾನವರು ಪಪುವಾ ದ್ವೀಪದಲ್ಲಿರುವರು.

ಪಪುವಾ ದ್ವೀಪದ ಅಡವಿ ಪ್ರದೇಶದಲ್ಲಿ ಬಾಲವಿರುವ ಮನುಷ್ಯರಿರುವರೆಂದು ಮೊನ್ನೆ ಅತ್ತ ಕಡೆಗೆ ತೆರಳಿದ ಪ್ರಸಿದ್ಧ ವಿಜ್ಞಾನಿಗಳೊಬ್ಬರು ಕಂಡು ಹಿಡಿದಿರುವರು. ಸರ್ ಹ್ಯೂಬರ್ಟ್ ಮುರೇ ಎಂಬವರು ಪಪುವಾ ದ್ವೀಪದ ಗವರ್ನರರು. ಅವರಿರುವ ಪಟ್ಟಣದ ತೀರದಲ್ಲಿರುವ ಅಡವಿ ಪ್ರದೇಶದಲ್ಲಿ ಬಾಲವಿರುವ ಮನುಷ್ಯರಿರುವರೆಂದು ಅವರ ಸೇವಕನೊಬ್ಬನು ತಿಳಿಸಿರುವನಂತೆ.

ಇದಲ್ಲದೆ, ಪಪುವಾದ್ವೀಪದ ಆ ಅಡವಿ ಪ್ರದೇಶದಲ್ಲಿ ಪ್ರವಾಸಗೈದು, ಇನ್ನೂ ಅನೇಕರು ಬಾಲವಿರುವ ಆ ಮನುಜರನ್ನು ಕಂಡಿರುವರಾಗಿ ತಿಳಿದು ಬರುತ್ತದೆ.

ಆ ಜನರು ನೆಲದಿಂದ ಎತ್ತರಿಸಲ್ಪಟ್ಟ ಗೂಟಗಳ ಮೇಲೆ ರಚಿಸಲ್ಪಟ್ಟ ಮನೆಗಳಲ್ಲಿ ವಾಸಮಾಡುತ್ತಿರುವರು. ಮನೆಗಳ ನೆಲದಲ್ಲಿ ಅಲ್ಲಲ್ಲಿ ತೂತುಗಳಿರುವವಂತೆ. ಬಾಲವನ್ನು ಅವುಗಳೊಳಗೆ ಹಾಕಿ ಕೂತುಕೊಳ್ಳಲು ಅವರಿಗೆ ಆ ತೂತುಗಳಿಂದ ಅನುಕೂಲವಾಗುತ್ತದೆ.

ಪ್ರಯಾಣಿಕನೊಬ್ಬನು ಆ ತರದ ಮನೆಯ ಒಳಗೆ ಸೇರಿ, ಆ ಬಾಲಗಳನ್ನೆಲ್ಲಾ ಮೆಲ್ಲನೆ ಕಟ್ಟಿ ಬಿಟ್ಟು, ಗದ್ದಲವೆಬ್ಬಿಸಿ, ಪಲಾಯನಮಾಡಿದನು. ಗಾಬರಿ ಹೊಂದಿದ ಬಾಲವುಳ್ಳ ಆ ಮನುಜರೂ ಪಕ್ಕನೆ ಏಳಲು ಆಗದೆ ಬಹಳ ಚಡಪಡಿಸಿದರಂತೆ.

—o0o—

ವಿವಿಧ ವಿಚಾರ.

ರಣಹದ್ದುಗಳಿಂದ ಕೊಲ್ಲಲ್ಪಟ್ಟ.

ಜಗನ್ನಾಥಪುರದಲ್ಲಿ ದನ ಮೇಯಿಸುವವನೊಬ್ಬ, ಎಂದಿನಂತೆ ದನಗಳನ್ನು ಹುಲ್ಲುಗಾವಲಿಗೆ ಕೊಂಡೊಯ್ಯುತ್ತಿರುವಾಗ, ಒಂದು ದನವನ್ನು ರಣಹದ್ದುಗಳು ಹಿಂಡಿಸುತಿದ್ದುದನ್ನು ಕಂಡ. ಅದರಿಂದ, ಆತನು ದನವನ್ನು ಕಾಪಾಡುತಿದ್ದ ರಣಹದ್ದುಗಳನ್ನೋಡಿಸಲು ಯತ್ನಿಸಿದ. ತನ್ನ ತಿನಿಸಿಗೆ ತೊಂದರೆ ಕೊಟ್ಟ ಕೋಪದಿಂದ, ಆ ರಣಹದ್ದುಗಳೆಲ್ಲ ಒಟ್ಟಾಗಿ, ದನ ಮೇಯಿಸುವವನನ್ನೇ ಮುತ್ತಿದುವು. ಅವನನ್ನು ಸಿಕ್ಕ ಸಿಕ್ಕಂತೆ ಕುಕ್ಕಿ, ಕೊಂದು ಬಿಟ್ಟವು. ಹರಿದಾಸರು, ಈ ಕತೆಯನ್ನು ದನಿಕ ಮತ್ತು ಬಡವರ ಕತೆಗೆ ಉದಾಹರಣೆಯಾಗಿ ಕೊಡಿಸಿಕೊಳ್ಳಬಹುದು!

—o0o—

ಆಕಾಶದಲ್ಲಿ ಕೌನ್ಸಿಲ್ ಸಭೆ!

ಡೆನ್ಮಾರ್ಕ್ ದೇಶದ ಅಲ್ಬರ್ಗ್ ಎಂಬುವ ನಗರದ ಪೌರಸಭೆಯ ಸದಸ್ಯರು ವಿಮಾನದಲ್ಲೇ ಕುಳಿತು ಸಭೆಯೊಂದನ್ನು ನಡೆಸಿ ಸುಮಾರು 26 ವಿಷಯಗಳನ್ನು ಚರ್ಚಿಸಿದರು. ಇವರಲ್ಲಿ 21 ಮಂದಿ ಸದಸ್ಯರು, ಒಬ್ಬ ಕಾರ್ಯದರ್ಶಿಯೂ ಮೂವರು ಪತ್ರಿಕಾಕರ್ತರೂ ಇದ್ದರು. ಡೆನ್ಮಾರ್ಕಿನಲ್ಲೆಲ್ಲಾ ಹೊಸದಾಗಿ ಕನ್‌ಡರ್ ಎಂಬ ವಿಮಾನದಲ್ಲಿ ಮೀಟಿಂಗು ನಡೆಯಿತು. ಮೀಟಿಂಗಿಗೆ ಮುಂಚೆ ಮೇಲಕ್ಕೆ ವಿಮಾನವೇರಿತು. ವಿಷಯವೆಲ್ಲ ಚರ್ಚಿಸಲ್ಪಟ್ಟ ಮೇಲೆ ವಿಮಾನ ಕೆಳಗಿಳಿಯಿತು. ತರುವಾಯ ಹ್ಯಾಂಬರ್ಗ್ ಮತ್ತು ಕೋಪೆನ್‌ಹೇಗನ್ ನಗರಗಳ ಮಧ್ಯ ವೈಮಾನಿಕ ಸಂಚಾರ ಸಂಬಂಧವಾಗಿ ವಿಮಾನ ನಿಲ್ದಾಣದ ವಿಷಯಕ್ಕೆ ಬೆಂಬಲಿಸಿದ್ದರು.

—o0o—

ತ್ರಿಪುರಾ ಕಾಂಗ್ರೆಸ್ ಸಿದ್ಧತೆ.

ಬರುವ ಮಹಾಕೋಶಲ ತ್ರಿಪುರಿ ಕಾಂಗ್ರೆಸ್ ನಗರರಚನಾ ಕಾರ್ಯವು ಈಗಾಗಲೇ ಪ್ರಾರಂಭವಾಗಿದೆ. ಗೊಂಡಿಯೂ ಮತ್ತು ನಾಗಪುರಕ್ಕೆ ಸಂಬಂಧಪಟ್ಟ ರಚನಾಸಮಿತಿಯ ಅಧಿಕಾರಿಗಳು ಹೋಗಿದ್ದಾರೆ. ನಗರ ನಿರ್ಮಾಣಕ್ಕೆ ಬೇಕಾದ ಸಾಮಗ್ರಿಗಳ ಅನ್ವೇಷಣ ಕಾರ್ಯವಾಗುತ್ತಿದೆ.

250 ಟನ್ ಸಿಮೆಂಟು ಧರ್ಮಾರ್ಥ ದೊರೆಯಿತು. ಬಿ. ಯನ್. ಆರ್. ಮತ್ತು ಜಿ. ಐ. ಪಿ. ರೈಲ್ವೇ ಅಧಿಕಾರಿಗಳನ್ನು ಕಂಡು 'ಗೂಡ್ಸು' ಹಾಗೂ ಪಸೆಂಜರ್ ರೈಲ್ವೆಗಳ ವ್ಯವಸ್ಥೆ ಮಾಡಲಾಯಿತು.

ನಗರದ ನಕಾಶೆಯನ್ನು ನಿರ್ಮಾಣ ಸಮಿತಿಯವರು ತಯಾರಿಸಿ ಕಾಂಗ್ರೆಸ್ ನಗರರಚನಾ ಕರ್ತ ಎಂಜಿನೀಯರ್ ಶ್ರೀ. ಗುಲ್‌ಹಾತಿ ಇವರಿಗೊಪ್ಪಿಸಲಾಗಿದೆ. ವಸತಿ, ಭೋಜನ ಸ್ಥಳಗಳನ್ನು ಕುರಿತು ಮಹಾಕೋಶಲ ಕಾಂಗ್ರೆಸ್ ಕಮಿಟಿ ಹಾಗೂ ಮಹಾತ್ಮಾ ಗಾಂಧಿಯರ ಸಲಹೆ ಕೇಳಲಾಗಿದೆ.

—o0o—

ಟೆಲಿಫೋನಿನಲ್ಲಿ ಒಬ್ಬರನ್ನು ಇನ್ನೊಬ್ಬರು ಕಾಣುವ ವೈಚಿತ್ರ್ಯ!

ಟೆಲಿಫೋನಿನ ಮೂಲಕ ಮಾತನಾಡುವಾಗ, ಮಾತನಾಡುವ ಕಡೆಯಿಂದ ಮಾತನಾಡುವವರ ಭಾವಚಿತ್ರವನ್ನು ನೋಡುವುದಾದ ಸೌಲಭ್ಯವೀಗ ದೊರೆಯಲು ಸಂಭವಿಸಿದೆ. ಆ ಸಾಧನವನ್ನು ಈಗ ಜರ್ಮನಿಯಲ್ಲಿ ಉಪಯೋಗಿಸಲಾಗುತ್ತಿದೆ. ಬರ್ಲಿನಿಗೂ ಮ್ಯೂನಿಚಿಗೂ ಈಗ ಟೆಲಿವಿಷನ್-ಟೆಲಿಫೋನ್ ಸೌಕರ್ಯವೇರ್ಪಡಿಸಲಾಗಿದೆ. (ಈ ನಗರಗಳ ಮಧ್ಯೆ ದೂರ ಸುಮಾರು 400 ಮೈಲಿಗಳು)

ಬರ್ಲಿನ್‌ನಲ್ಲಿ ಒಬ್ಬ ಮನುಷ್ಯನು ಮ್ಯೂನಿಚ್‌ನಲ್ಲಿರುವವನೊಂದಿಗೆ ಮಾತನಾಡಬೇಕಾದರೆ ಈಗ ಸಾಧಾರಣವಾಗಿ ಟೆಲಿಫೋನ್ ಕನೆಕ್ಷನ್ ಪಡೆದುಕೊಳ್ಳುವಂತೆಯೇ ಕೇಳಿಕೊಳ್ಳುವನು. ಆ ಮನುಷ್ಯನು ಟೆಲಿವಿಷನ್‌ಬೂತ್‌ಗೆ ಬಂದು ಮಾತನಾಡಲು ಆರಂಭಿಸಿದಾಗ ಒಬ್ಬರು ಇನ್ನೊಬ್ಬರ ಮೊಗ ನೋಡಬಹುದಾಗಿದೆ. ಇಂಥ ಟೆಲಿವಿಷನ್ ಸ್ಟೇಷನ್‌ಗಳು ಬರ್ಲಿನ್ ನಗರದಲ್ಲಿ ಸುಮಾರು 10 ಇವೆ. ಜರ್ಮನಿಯಲ್ಲಿ ಇದೇ ಪ್ರಥಮ ಈ ಕಾರ್ಯಕ್ರಮವನ್ನು ಜಾರಿಗೆ ತಂದಿರುವುದು. ಇನ್ನು ಅನೇಕ ದೊಡ್ಡ ಪಟ್ಟಣಗಳೊಂದಿಗೆ ಈ ಸೌಕರ್ಯವೇರ್ಪಡುವುದಾಗಿದೆ.

—o0o—

7·12 ಪೌಂಡುಗಳ ಭಾರದ ಮನುಷ್ಯ.

ಅಮೇರಿಕದಲ್ಲೆಲ್ಲಾ ಅತ್ಯಂತ ಭಾರವಾದವನು ಜಾನ್‌ಮಚ್ ಎಂಬುವನು. ಆವನು ಕೆಲವು ದಿವಸಗಳ ಹಿಂದೆ ಮಡಿದನಂತೆ. ಅವನು ಎಷ್ಟು ಭಾರವುಳ್ಳವನು ಎಂಬುದು ತಿಳಿದಿದ್ದೀರೋ? ಹತ್ತಿರ ಹತ್ತಿರ 7·42 ಪೌಂಡುಗಳು ಮಾತ್ರ. ಅವನ ವೃತ್ತಿ ಏನು ಗೊತ್ತೆ? ಯುನೈಟೆಡ್ ಸ್ಟೇಟ್ಸಿನಲ್ಲಿ ತನ್ನ ದೇಹವನ್ನು ಪ್ರದರ್ಶಿಸುವುದೇ ಅವನ ವೃತ್ತಿ. ಅವನು ಆ ವೃತ್ತಿಯನ್ನು ಪ್ರಾರಂಭಿಸಿದ್ದು ತನ್ನ 6 ನೇ ವಯಸ್ಸಿನಲ್ಲಿ.

ಅವನು ಹುಟ್ಟಿದಾಗ 10 ಪೌಂಡು ಭಾರ ಇದ್ದ. 3 ವರ್ಷದವನಾದಾಗ 150 ಪೌಂಡು ತೂಗುತ್ತಿದ್ದ. ಅಂದಿನಿಂದ ಸರ್ಕಸ್ ಕಂಪೆನಿಯಲ್ಲಿ ಸೇರಿಕೊಂಡು ತನ್ನ ದೇಹವನ್ನು ಪ್ರದರ್ಶಿಸಲು ಪ್ರಾರಂಭಿಸಿದ. ಕಾಲೇಜುಗಳಲ್ಲಿ ಇವನಿಗೆ ಕೂಡಲು ಯೋಗ್ಯವಾದ ಆಸನಗಳಿಲ್ಲದ್ದರಿಂದ ಓದನ್ನು ಮುಂದುವರಿಸಲಿಲ್ಲವಂತೆ.

ಅವನು ಸತ್ತಾಗ ಅವನನ್ನು ಹೊತ್ತುಕೊಂಡು ಹೋದ ಪೆಟ್ಟಿಗೆಯು 6X5 ಅಡಿ ಅಳತೆಯುಳ್ಳದ್ದು.

ಅವನಿಗೆ ಅಲ್ಪ ಸ್ವಲ್ಪ ತಿಂದರೆ ಗೊತ್ತಿಲ್ಲ. ಒಂದು ಹೊತ್ತಿಗೆ 18 ಮೊಟ್ಟೆಗಳು, ಒಂದು ಬ್ರೆಡ್ಡು, ಒಂದು ಪೌಂಡು ಬೆಣ್ಣೆ, ಅರ್ಧ ಸೇರು ಹಾಲು, ಇಷ್ಟೆ. ಅವನು ಸತ್ತಾಗ ಅವನಿಗೆ 32 ವರ್ಷ ವಯಸ್ಸು.

—o0o—

ಬೇಕಾದಾಗ ಮಳೆ-ಬೇಕಾದಾಗ ಬೆಳೆ.

ಕಾಲಕಾಲಕ್ಕೆ ಮಳೆ ಬಾರದೆ [illegible] ಬೇಕಾದಾಗ ಮಳೆ [illegible] ವಿಜ್ಞಾನಿಗಳು [illegible] ಉಪಯೋಗವಾಗುತ್ತ ಬಂದಿದೆ.

—o0o—

ಪೋಲೀಸರಿಗೆ ಇದರಿಂದ ಬಹಳ ಉಪಕಾರ.

ಅಮೇರಿಕೆಯ ಪೋಲೀಸರಿಗೆ, ಹೊಸತೊಂದು ರಿವಾಲ್ವರು ಕಂಡು ಹಿಡಿಯಲ್ಪಟ್ಟಿದೆ. ಈ ರಿವಾಲ್ವರಿನ ಜೊತೆಗೆ ಒಂದು 'ಕೆಮರಾ'ವೂ ಸೇರಿಸಲ್ಪಟ್ಟಿರುವುದರಿಂದ, ತಪ್ಪಿಸಿ ಓಡುವ ಕಳ್ಳನಿಗೆ ಗುಂಡಿಕ್ಕಿ ಆತನು ತಪ್ಪಿಸಿಕೊಂಡರೂ ಕೂಡಾ, ರಿವಾಲ್ವರಿಗೆ ಅಂಟಿಕೊಂಡಿರುವ 'ಕೆಮರಾ' ಆತನ ಫೋಟೋ ತೆಗೆದುಬಿಡುವುದು. ಇದರಿಂದ ಮುಂದೆ ಹುಡುಕಲು ಅನುಕೂಲವಾಗುತ್ತದೆ. ರಿವಾಲ್ವರು ಇತರ ರಿವಾಲ್ವರಂತೆಯೇ ಇದ್ದು, ಅದಕ್ಕಿಂತ ಕೆಮರಾ, ಒಂದೇ ಎರಡು ಇಂಚು ದೊಡ್ಡದಾಗಿದೆ. ಅಂತೂ, ಚೋರ ಹಿಡಿಯಲೂ ತೆಗೆಯಲೂ ಉತ್ತಮ ಸಾಧನ! [illegible] ಬಂದರೆ ಇನ್ನು ಮುಂದೆ [illegible] ಚೆನ್ನಾಗಿ ಸಿಕ್ಕಿ ಹಾಕಿಕೊಳ್ಳುವರು.

—o0o—

ಪಾರಿವಾಳದ ಕಾನೂನು.

[illegible] ಒಂದು ಪಾರಿವಾಳವಿದೆ. [illegible] ಸೀಸನ್ ಟಿಕೇಟು ದರ ನ್ಯಾಯವಂತೆ, ಇದನ್ನು ಒಬ್ಬರೇ ಉಪಯೋಗಿಸತಕ್ಕದ್ದು. ಮನೆಯಿಂದ ಹೊರಟು ಬಸ್ಸಿನ ಮೂಲಕ ಕೆಲ ಮೈಲಿಗಳ ದೂರದ ಪೇಟೆಗೆ ಬಂದ ಕುಟುಂಬದ ಯಜಮಾನನು, ತನ್ನ ಒಂದು ಪಾರಿವಾಳವನ್ನೂ ಹಿಡಿದುಕೊಂಡಿದ್ದ. ಬಸ್ಸಿನಿಂದಿಳಿದು, ಆ ಬಸ್ಸು ಕಣ್ಮರೆಯಾದೊಡನೆ ಈತನು ತನ್ನ ಸೀಸನ್ ಟಿಕೇಟನ್ನು ತೆಗೆದು ಪಾರಿವಾಳದ ಕಾಲಿಗೆ ಕಟ್ಟಿ ಹಾರಿಸಿದನು. ಹಕ್ಕಿ ಪುನಃ ಇನ್ನೊಬ್ಬರಿಗೆ ಆ ಟಿಕೇಟನ್ನು ಕೊಡಲು ಮನೆಯ ಕಡೆ ತೆರಳಿತು. ಈ ಆಟವನ್ನು ಕಂಡ ಪೋಲೀಸನೊಬ್ಬನು, 'ನಿಮ್ಮ ಇಡೀ ಕುಟುಂಬಕ್ಕೆ ಇದೊಂದೇ ಪಾಸೇ?' ಎಂದು ಆತನನ್ನು ಕೈದು ಮಾಡಿದನು.

—o0o—

ರಷ್ಯಾ ಜಪಾನು ಯುದ್ಧದ ಕಾರಣ ಮತ್ತು ಪರಿಣಾಮ.

ರಷ್ಯಾದ ಬಲದ ಮುಂದೆ ಜಪಾನರ ಬೇಳೆ ಬೇಯುವಂತಿಲ್ಲ!!

ರಷ್ಯಾ ಮತ್ತು ಜಪಾನು ಸ್ನೇಹದಿಂದ ಇದ್ದುದೇ ಇಲ್ಲ. ಅವು ಈಗ ಜನ್ಮಸಿದ್ಧ ವೈರಿಗಳಂತಾಗಿವೆ. ಕಳೆದ ಘೋರ ಯುದ್ಧದ ಮೊದಲು ಅದು ಎರಡು ಸಾಮ್ರಾಜ್ಯಗಳೊಳಗಣ ರಾಜ್ಯ ವಿಸ್ತರಣಾಲಾಲಸೆಯ ಕಲಹವಾಗಿದ್ದಿತು. ಆದರೆ ಇತ್ತೀಚೆಗೆ ರಷ್ಯಾದಲ್ಲಿ ಸಮತಾವಾದವು ಪ್ರಾಬಲ್ಯಕ್ಕೆ ಬಂದುದರಿಂದ ಜಪಾನಿಗೆ ಅವರ ಮೇಲೆ ಮತ್ತಷ್ಟು ದ್ವೇಷ ಹೆಚ್ಚಲು ಕಾರಣವಾಯಿತು. ಅದನ್ನು ಬಗ್ಗು ಬಡಿಯಬೇಕೆಂದೇ ರಷ್ಯಾದ ಬದ್ಧ ದ್ವೇಷಿಗಳಾದ ಜರ್ಮನಿ ಮತ್ತು ಇಟಲಿಯೊಡನೆ ಸಖ್ಯವನ್ನಾದರೂ ಅದು ಬೆಳೆಯಿಸಿರುವದು. 1931ರಲ್ಲಿ ಜಪಾನು ಮಂಚೂರಿಯಾವನ್ನು ವಶಪಡಿಸಿಕೊಂಡಂದಿನಿಂದ ಜಪಾನು ಮತ್ತು ರಷ್ಯಾಗಳು ಪರಸ್ಪರರನ್ನು ಎದುರಿಸಿಕೊಂಡು ಕಚ್ಚಾಡುತ್ತಿವೆ. 1931ರಿಂದ ಕಳೆದ ವರ್ಷದ ವರೆಗೆ ಜಪಾನ್ ಮತ್ತು ಸೋವಿಯೆಟ್ ರಷ್ಯಾ ಸೈನಿಕರೊಳಗೆ 2,400 ಜಗಳಗಳಾಗಿವೆಯೆಂದು ಕಳೆದ ವರ್ಷ ಜಪಾನ್ ಪ್ರಧಾನ ಮಂತ್ರಿಯಾದ ಹಾಯೊಶಿಯವರೆ ಹೇಳಿದ್ದರು. ಅಂದರೆ ಬಳಿಕ ದಿನಕ್ಕೊಂದು ಜಗಳವಾದಂತಾಯಿತು. ಜಪಾನು ರಷ್ಯಾದೊಳಗಿನ ಈ ವೈಷಮ್ಯವನ್ನು ಸುಧಾರಿಸಲು ಹಲವಾರು ಪ್ರಯತ್ನಗಳು ನಡೆದಿದ್ದರೂ ಜಪಾನರ ಉದ್ಧಟತನದಿಂದ ಅವೆಲ್ಲಾ ನಿಷ್ಫಲಗೊಂಡವು. ರಷ್ಯಾದ ವಿದೇಶ ಮಂತ್ರಿ ಯಂ. ಲಿಟ್ವಿನೋಫರು ಈ ಪ್ರಶ್ನೆಯನ್ನು ಇತ್ಯರ್ಥಿಸಲು ನಿಷ್ಪಕ್ಷಪಾತಿಯ ಒಂದು ಕಮಿಟಿಯನ್ನು ನೇಮಿಸಲು 1932-33ರಲ್ಲಿ ಕೇಳಿಕೊಂಡರೂ ಜಪಾನು ಅಲಕ್ಷಿಸಿತು. ರಷ್ಯಾವು ಇತ್ತೀಚೆಗಾಗಿ ಚೈನಾಕ್ಕೆ ಸಹಾಯವೀಯುವದರಿಂದ ಇವುಗಳೊಳಗಿನ ಕ್ಷೋಭೆಯು ಮತ್ತಷ್ಟು ಅಭಿವೃದ್ಧಿಗೊಂಡಿತು. ಚೈನಾದ ಯುದ್ಧ ಶೀಘ್ರವಾಗಿ ಕೊನೆಗೊಳ್ಳದ್ದಕ್ಕೆ ರಷ್ಯಾವೇ ಕಾರಣವೆಂದು ಜಪಾನೀಯರು ಕಾರುತ್ತಿರುವಾಗ, ಮಂಚೂರಿಯಾದ ಗಡಿಯಲ್ಲಿ ಕಲಹವೆದ್ದಿರುವದು ಸೋಜಿಗವೇನೂ ಅಲ್ಲ. ಈ ಕಲಹವು ಯುದ್ಧವಾಗಿ ಮಾರ್ಪಟ್ಟರೆ ಈ ಎರಡು ರಾಷ್ಟ್ರಗಳ ಬಲಾಬಲಗಳು ಹೇಗಿವೆ, ಕಷ್ಟಸುಖಗಳು ಹೇಗಿರುತ್ತವೆ ಎಂಬದು ಸ್ವಾರಸ್ಯದ ವಿಚಾರ. ಈ ವಿಚಾರವನ್ನು ವಿವೇಚಿಸುವ ಮೊದಲು ಯುದ್ಧದ ಬಗ್ಗೆ ಈ ರಾಷ್ಟ್ರಗಳ ಮನೋವೃತ್ತಿ ಹೇಗಿದೆಯೆಂದು ನೋಡಬೇಕು. ಎಂಥಾ ಒಂದು ಜಗಳ ಅಥವಾ ಒಂದು ಕಲಹವೇ ಆಗಲಿ ಕೊನೆಯ ಪಕ್ಷ ಎರಡು ಪಕ್ಷಗಳಾದರೂ ಇಲ್ಲದೆ ಉಂಟಾಗಲಾರದು. ಇವುಗಳ ಪೈಕಿ ಒಂದು ಕಾದಾಟವನ್ನು ತಡೆಗಟ್ಟಲು ಪ್ರಯತ್ನಿಸಿದಲ್ಲಿ ಇನ್ನೊಂದು ಪಕ್ಷವು ಅದನ್ನು ಬಹುದೂರ ವಿರೋಧಿಸಲಾರದು. ಈ ದೃಷ್ಟಿಯಿಂದ ಇಂದು ರಷ್ಯಾಕ್ಕೆ ಯಾವ ಯುದ್ಧದಲ್ಲಿ ತೊಡಗಲೂ ಆಸಕ್ತಿ ಇಲ್ಲವೆಂದು ಹೇಳಬಹುದು. ಯಾಕೆಂದರೆ ರಷ್ಯಾವು ವಿಶಾಲವಾದ ದೇಶವಾದ್ದರಿಂದ ಇದಕ್ಕೆ ಸಾಮ್ರಾಜ್ಯ ವಿಸ್ತರಣಾ ದಾಹವಿಲ್ಲ. ದೇಶದ ಜನಾಂಗವನ್ನೇ ಕೈಗಾರಿಕೆಗಳನ್ನು ಹೆಚ್ಚಿಸಲು ಕೆಲಸಕ್ಕೆ ಹಾಕಿರುವ ಪ್ರಯುಕ್ತ ಆ ಧ್ಯೇಯವನ್ನು ಬದಲಾಯಿಸಿ ಜನಶಕ್ತಿಯನ್ನು ಯುದ್ಧಕ್ಕಾಗಿ ವಿನಿಯೋಗಿಸಲು ಅದಕ್ಕೆ ಇಷ್ಟವಿಲ್ಲ. ಅಲ್ಲದೆ ಅವರ ಮುಖ್ಯಾಧಿಕಾರಿಯಾದ ಸ್ಟಾಲಿನಿಗೆ ಯುದ್ಧದಲ್ಲಿ ಆಸಕ್ತಿ ಇಲ್ಲ. ಆದರೆ ಜಪಾನರು ರಷ್ಯಾದ ಈ ಮನೋಸಂಕಲ್ಪವನ್ನು ತಿಳಿದು ಮುಂದುವರಿದು ಧಾಳಿಯನ್ನು ಆರಂಭಿಸಿದರೆ ರಷ್ಯಾವು ಯುದ್ಧವನ್ನು ಕೈಕೊಳ್ಳದೆ ಹಿಂದೆಗೆಯುವುದಿಲ್ಲ. ಏತಕ್ಕೆಂದರೆ ಜಪಾನರ ಧಾಳಿ ಎದುರಿನಲ್ಲಿ ಹಿಂತೆಗೆಯುವದು ರಷ್ಯಾ ಸರ್ಕಾರದ ಘನತೆಗೆ ಕೀರ್ತಿ ತರುವಂತಹ ವಿಚಾರ ಅಲ್ಲವೇ ಅಲ್ಲ.

ಈಗ ಕೆಲವು ವರ್ಷಗಳಿಂದೀಚೆಗೆ ರಷ್ಯಾವು ತನ್ನ ಸೇನಾ ಬಲವನ್ನು ಭದ್ರಪಡಿಸುತ್ತಿದೆ ಎಂಬದು ಜಪಾನರಿಗೆ ತಿಳಿದಿದೆ. ಈ ಮೊದಲೊಮ್ಮೆ ರಷ್ಯಾದವರನ್ನು ಸೋಲಿಸಿ ಓಡಿಸಿದಂತೆ ಈಗ ಸಾಧ್ಯವಿಲ್ಲವೆಂದು ಅವರಿಗೆ ಮನದಟ್ಟಾಗಿದೆ, ಆದ್ದರಿಂದ ಈ ಬಾರಿ ರಷ್ಯಾದವರನ್ನು ಬಗ್ಗು ಬಡಿಯಲು ಹೊರಗಿನ ಸಹಾಯವನ್ನು ನಿರೀಕ್ಷಿಸಿದ್ದಾಗಿದೆ.

ರಷ್ಯಾ ಜಪಾನರ ಬಲಾಬಲಗಳನ್ನು ವಿಮರ್ಶಿಸಿದರೆ ರಷ್ಯಾದವರಿಗೆ 13 ಲಕ್ಷ ಖಾಯಂ ಸೈನಿಕರೂ ಅನೇಕ ಲಕ್ಷ ಶಿಕ್ಷಣ ಪಡೆದ ಸೈನಿಕರೂ ಇರುವರು. ಈ ಸುಶಿಕ್ಷಿತ ನವೀನ ಯುದ್ಧೋಪಕರಣಗಳಿಂದ ಕೂಡಿದ ಸೈನ್ಯಕ್ಕೆ ಮಂಗೋಲಿಯದ ಸೈನ್ಯಪಡೆಯು ಸಹಾಯ ನೀಡದಿರದು. ರಷ್ಯಾವು ವಿಶಾಲ ದೇಶವಾದ್ದರಿಂದ ಅದಕ್ಕೆ ಬೇಕಾದ ಎಲ್ಲಾ ಸೌಲಭ್ಯಗಳೂ ದೇಶದಲ್ಲೇ ದೊರೆಯುವದು. ಆದ್ದರಿಂದ ಯುದ್ಧಕಾಲದಲ್ಲಿ ಬೇರೆಯವರ ಹಂಗಿಗೊಳಗಾಗದೆ ಇರಲು ರಷ್ಯಾಕ್ಕೆ ಸಾಧ್ಯವಿದೆ. ಆದರೆ ಜಪಾನರ ಪರಿಸ್ಥಿತಿ ಬೇರೆ. ಅವಕ್ಕೆ ಬೇಕಾದ ಅನೇಕ ಸಾಮಗ್ರಿಗಳು ಬೇರೆ ದೇಶಗಳಿಂದ ಬರಬೇಕಾಗಿದೆ. ಆರ್ಥಿಕ ಮುಗ್ಗಟ್ಟಿನಲ್ಲಿ ತತ್ತರಿಸುತ್ತಿರುವ ಜಪಾನು ಹೇಗೆ ಯುದ್ಧ ಸಮಯದಲ್ಲಿ ಈ ಸಾಮಗ್ರಿಗಳನ್ನು ಒದಗಿಸಿಕೊಳ್ಳುವದು? ಇದಲ್ಲದೆ ರಷ್ಯಾದ ವಿಮಾನ ದಳವು ಅಸಾಧಾರಣವಾದದ್ದು. ಇದರ ಮುಂದೆ ಜಪಾನ ವಿಮಾನ ಪಡೆಯ ಆಟವು ನಡೆಯಲಾರದೆಂಬುವದು ಸತ್ಯ. ವಿಮಾನ ಪಡೆಯ ವಿಚಾರದಲ್ಲಿ ರಷ್ಯನರಿಗೆ ಒಂದು ಅನುಕೂಲವಿದೆ. ಅವರು ತಮ್ಮ ಗಡಿಯಿಂದ ಹಾರಿ ಬಹಳ ಅಂತರದಲ್ಲಿಲ್ಲದ ಜಪಾನಿ ಪಟ್ಟಣಗಳ ಮೇಲೆ ಸುಲಭದಲ್ಲಿ ಬಾಂಬುಗಳನ್ನು ಹಾಕಿ ಬರಲು ಸಾಧ್ಯವಿದೆ. ಆದರೆ ಜಪಾನರಿಗೆ ರಷ್ಯಾ ಪಟ್ಟಣಗಳು ಒಂದೊಂದರಿಂದ ಸಾವಿರಾರು ಮೈಲುಗಳ ಅಂತರದಲ್ಲಿರುವದರಿಂದ ತಮ್ಮ ಕೈವಾಡವನ್ನು ಚೈನೀಯರ ಮೇಲೆ ತೋರಿಸಿದಂತೆ ತೋರಿಸಲು ಸಾಧ್ಯವಿಲ್ಲ. ಜಪಾನೀ ಹಡಗು ಪಡೆಯು ಭೂವಲಯದಲ್ಲಿ ಮೂರನೇ ಸ್ಥಾನವನ್ನು ಪಡೆದಿರುವದೇನೋ ಹೌದು. ಆದರೆ ರಷ್ಯನರ ಹತ್ತಿರ ದೊಡ್ಡ ದೊಡ್ಡ ಸಬ್‌ಮೆರಿನ್‌ಗಳ ಪಡೆ ಇರುವುದರಿಂದ ಜಪಾನರ ನೌಕಾಬಲವನ್ನು ಕೊಳ್ಳೆ ಹೊಡೆಯಲು ಅನುಕೂಲವಿದೆ.

ಆರ್ಥಿಕ ಸ್ಥಿತಿಯಲ್ಲಿ ರಷ್ಯನರು ಜಪಾನರಿಗಿಂತ ಉತ್ತಮರಿದ್ದಾರೆ. ಚೀನಾ ಜಪಾನ್ ಯುದ್ಧದ ದೆಸೆಯಿಂದ ಜಪಾನರ ವ್ಯಾಪಾರೋದ್ಯಮಗಳು ಕುಗ್ಗಿ ಹೋಗಿವೆ. ಅವರ ಆರ್ಥಿಕ ಅಡಿಪಾಯವು ಅಲುಗಾಡುತ್ತಿದೆ. ಹೀಗಿರುವಾಗ ಅವರಿಗೆ ಪರದೇಶದವರಿಂದ ಏನಾದರೂ ಸಹಾಯ ಒದಗೀತೇ? ಎಂಬುವುದನ್ನು ಪರ್ಯಾಲೋಚಿಸಿದರೆ, ಜರ್ಮನಿಯು ಕಳೆದ ಘೋರ ಯುದ್ಧದಿಂದ ತನ್ನ ಆರ್ಥಿಕ ಅಭಿವೃದ್ಧಿಗೆ ಸಿಕ್ಕಿದ ಆಘಾತದಿಂದ ಇನ್ನೂ ಚೇತರಿಕೊಂಡಿಲ್ಲ. ಇಟಲಿಯಾದರೋ ತನ್ನ ರಾಜ್ಯ ವಿಸ್ತರಣಾಲಾಲಸೆಯ ಯುದ್ಧದಲ್ಲಿ ಬಳಲಿ ಬೆಂಡಾಗಿದೆ. ತನ್ನ ರಾಜ್ಯ ಸುಧಾರಣೆಗೆ ಪರದೇಶದಿಂದ ಸಾಲ ಕೇಳುತ್ತಿದೆ. ಅಂದ ಬಳಿಕ ಇವುಗಳಿಂದ ಜಪಾನಿಗೆ ಆರ್ಥಿಕ ಸಹಾಯವು ನೀರಿನ ಗುಳ್ಳೆಯಂತೆಯೇ ಸರಿ. ಅಮೇರಿಕದವರೂ ಜಪಾನಿಗೆ ಸಹಾಯ ಮಾಡಬಹುದೋ ಎಂದು ಬಗೆದರೆ ಜಪಾನಿನ ಈ ವರೆಗಿನ ಪಾಷಂಡೀ ಕೃತ್ಯಗಳಿಂದಲೂ, ರೀತಿ ನೀತಿಗಳಿಂದಲೂ ಕೋಪಗೊಂಡಿದೆ. ಆದ್ದರಿಂದ ಅದು ರಷ್ಯಾಕ್ಕೆ ಬೆಂಬಲವೀಯುವುದೇ ವಿನಹ ಜಪಾನಿಗೆ ಖಂಡಿತಾ ಸಹಾಯ ಮಾಡದು. ಈ ಕಾರಣಗಳಿಂದಾಗಿ ರಷ್ಯಾದ ಆರ್ಥಿಕ, ಸೈನಿಕ, ಸಾಂಪತ್ತಿಕ ಮತ್ತು ರಾಜಕೀಯ ಸ್ಥಿತಿಯು ಜಪಾನಿನಿಗಿಂತ ಉತ್ತಮವಾಗಿರುವುದು.

ಈಗಾಗಲೇ ಜಪಾನರ ಆರ್ಥಿಕ ಸ್ಥಿತಿಯೂ ಕೆಟ್ಟು ಹೋಗಿದೆಯಾಗಿ ಅನೇಕ ಬಾರಿ ಬರೆದಿರುವೆವು. ಈ ಯುದ್ಧ ಪ್ರಾರಂಭವಾದರೆ ಒಂದು ಕಡೆ ಚೈನೀ ಯುದ್ಧ ಮತ್ತೊಂದೆಡೆ ರಷ್ಯಾ ಯುದ್ಧದಿಂದ ಮಹತ್ತರ ಲಾಭವಾಗುವದೆಂದು ಬಯಸಿದ ಜಪಾನರ ಗಾಳಿಗೋಪುರಗಳು ಬಿರುಗಾಳಿಗೆ ಸಿಲುಕಿದ ತರಗೆಲೆಗಳಂತೆ ಹಾರಿ ಹೋಗದಿರವು. ಈ ಯುದ್ಧವು ದೀರ್ಘಕಾಲ ನಡೆದಲ್ಲಿ ಜಪಾನ್ ಪ್ರಜೆಗಳಲ್ಲಿ ದಾರಿದ್ರ್ಯದ ಬೇಗೆಯು ಹೆಚ್ಚಿ ಪ್ರಜೆಗಳು ಸರ್ಕಾರದ ಈ ವರ್ತನೆಯನ್ನು ಖಂಡಿಸಿ ಬಂಡಾಯವೆಬ್ಬಿಸುವಂತಾಗದಿರುವುದೇ?

ಈ ವಿಚಾರಗಳನ್ನು ವಿವೇಚಿಸಿದರೆ ಜಪಾನು ಯುದ್ಧದಲ್ಲಿ ತೊಡಗುವುದರಿಂದ ಅದು ತನ್ನ ಅಂತಿಮ ಕಾಲವನ್ನು ಆಹ್ವಾನಿಸಿದಂತಾಗದಿರದು. ಜಪಾನಿಗೆ ಇದರ ಅರಿವೇ ಇಲ್ಲದಿಲ್ಲ. ಆದುದರಿಂದಲೇ ರಷ್ಯಾ ವಿಮಾನಗಳು ಜಪಾನ ಗಡಿಯಲ್ಲಿ ಬಾಂಬೆಸೆಯುತ್ತಿದ್ದರೂ ಅವರು ಚೈನೀಯರ ಮೇಲೆ ಕೈಕೊಂಡಂತೆ ತೀವ್ರ ಯುದ್ಧವನ್ನು ಹೂಡದೆ ಯೋಚನೆಯಲ್ಲಿರುವದಾಗಿದೆ. ಮುಂದಿನ ಪ್ರಸಂಗ ಹೇಗಾದೀತು ನಿರೀಕ್ಷಿಸುವ.

ಕಾಂಗ್ರೆಸಿಗೆ ಸದಸ್ಯರನ್ನು ಸೇರಿಸುವಿಕೆ.

ಇದೀಗ ಕಾಂಗ್ರೆಸ್ ಮೆಂಬರರನ್ನು ಹೊಸ ವರ್ಷಕ್ಕೆ ತಿರುಗಿ ಸೇರಿಸುವ ಕಾರ್ಯವು ಈ ಮೊದಲೇ ಆರಂಭವಾಗಿರುವುದು. ಮೆಂಬರರ ಸಂಖ್ಯೆಯು ಬೆಳೆಯಬೇಕೆಂದು ಜನತೆಯ ಆಶೆಯು. ಆದರೆ ಈ ಮೆಂಬರರನ್ನು ಸೇರಿಸುತ್ತಿರುವ ವಿಚಾರವು ಕಾಂಗ್ರೆಸಿನ ಶಕ್ತಿಯನ್ನು ಹೆಚ್ಚಿಸುವ ಉದ್ದೇಶಕ್ಕಾಗಿರದೆ, ಹಲವೆಡೆ ಸ್ವಾರ್ಥಸಂಕುಚಿತ ದೃಷ್ಟಿಯ ಜನರು ಕಾಂಗ್ರೆಸಿನ ಪ್ರಾತಿನಿಧ್ಯ ಸ್ಥಾನವನ್ನು ಗಳಿಸುವ ಯೋಜನೆಯನ್ನು ಹೊಂದಿಕೊಂಡಿರುವುದೆಂಬುವದು ಖೇದಾಸ್ಪದವಾದದು. ಮೇಲಾಗಿ ಕಾಂಗ್ರೆಸ್ ಸಂಸ್ಥೆಯು ಲಕ್ಷಗಟ್ಟಲೆ ಸದಸ್ಯರನ್ನೊಳಗೊಂಡ ಸಂಸ್ಥೆಯಾಗಿರುವುದು. ಹೀಗೆ ಮೆಂಬರರು ಹೆಚ್ಚಾಗಿ ಸೇರುತ್ತಾ ಬಂದರೂ ಕಾಂಗ್ರೆಸ್ ಸಂಸ್ಥೆಯ ಈ ರೀತಿಯ ಸದಸ್ಯರಿಂದ ಕಾಂಗ್ರೆಸಿನ ತತ್ವವು ಅಪಾಯಕರ ರೀತಿಗೆ ಮಾರ್ಪಡುವಂತಾಗಿದೆ.

ಕಾಂಗ್ರೆಸು ಕಳೆದ ವರ್ಷ ಅಧಿಕಾರ ಸ್ವೀಕಾರ ಮಾಡಿದ್ದರಿಂದ ಮೆಂಬರರ ಸಂಖ್ಯೆಯು ಒಂದೇ ಸಮನೆ ಏರಿತೆನ್ನಬಹುದು. ನಿಜವಾಗಿ ಅಧಿಕಾರ ಸ್ವೀಕಾರದಿಂದ ಕಾಂಗ್ರೆಸು ಅಷ್ಟೊಂದು ಹೆಚ್ಚಿನ ಕಾರ್ಯಸಾಧಿಸಿಲ್ಲವಾದರೂ, ಸಾಮಾನ್ಯ ಜನತೆಯ ದೃಷ್ಟಿಯಲ್ಲಿ ಕಾಂಗ್ರೆಸ್ ಸರಕಾರ ಸ್ಥಾಪಿತವಾಯಿತೆಂದೂ, ಇನ್ನು ಜನರ ಸಂಕಷ್ಟವು ನಿವಾರಿತವಾಗುವದೆಂದೂ ನಂಬಿಕೆಬಂದಿದೆ. ಹೀಗಾಗಿ ಈ ವರ್ಷವೆಂತೂ ಸದಸ್ಯರ ಸಂಖ್ಯೆಯು ಹೆಚ್ಚುವದು ಸುಲಭಸಾಧ್ಯ. ಆದರೆ ಸಾಮಾನ್ಯ ಜನತೆಯು ಕಾಂಗ್ರೆಸಿಗೆ ಸೇರುವ ಉದ್ದೇಶವು ಮುಖ್ಯವಾಗಿ ತಾತ್ಕಾಲಿಕ ಪ್ರಯೋಜನಕ್ಕಾಗಿಯಲ್ಲದೆ, ಬ್ರಿಟಿಷ್ ಸರ್ಕಾರದೊಡನೆ ನಡೆಸಬೇಕಾಗಿರುವ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸುವ ಧ್ಯೇಯದಿಂದಲ್ಲ. ಈ ಪರಿಸ್ಥಿತಿಯಲ್ಲಿ ಜನಸಾಮಾನ್ಯರನ್ನು ಒತ್ತಾಯದಿಂದ ಕಾಂಗ್ರೆಸಿಗೆ ಸೇರಿಸಿ ರಾಜಕೀಯ ವಿಚಾರವನ್ನರಿಯದವರ ಬೆಂಬಲವನ್ನು ಪಡೆದು "ಕಿಂಗ್ ಮೇಕರ್"ಗಳೆಂಬ ಬಿರುದನ್ನು ಧರಿಸಲೆತ್ನಿಸುವ ಮಹನೀಯರ ವರ್ತನೆಯು ಕಾಂಗ್ರೆಸ್ ಶಕ್ತಿಯ ಬೆಳವಣಿಗೆಗಾಗಲೀ, ಯೋಗ್ಯ ಧುರೀಣರ ಪ್ರಾತಿನಿಧ್ಯಕ್ಕಾಗಲೀ ಧಕ್ಕೆ ತರುವದೆಂಬುದರಲ್ಲಿ ಸಂದೇಹವಿಲ್ಲ.

ದೇಶದ ಸಮರಕ್ಕೆ ಜನತೆಯ ಬೆಂಬಲಬೇಕು. ಆದರೆ ಜನತೆಯ ಬಲದ ಹಿಂದೆ ಕಳಂಕಿತ ಧೋರಣೆ ಇರದಂತೆ ನೋಡಿಕೊಳ್ಳಬೇಕು. ಇಲ್ಲವೇ ಈ ಜನತೆಯ ಸದಸ್ಯತೆ ಎಂಬುದು ಕಾಂಗ್ರೆಸಿನ ದಾರಿಯನ್ನು ಕಂಟಕಮಯವನ್ನಾಗಿ ಮಾಡದಿರದು.

ಡಾ. ಮೇಥ್ಯೂಸ್ ಎಬ್ರಹಾಮ್
ದಂತ ವೈದ್ಯರು.
(ಪೀಯರ್ಸ್‌ಲೆಸ್ಲಿ ಬಂಗ್ಲೆ)
(ಸ್ಪೆನ್ಸರ್ಸ್ ಹತ್ತಿರ)
ಮಡಿಕೇರಿ.

ಭಾರತದ ಆರ್ಥಿಕ ಶೋಷಣೆ.

ರೈತರ ಏಳಿಗೆ ಎಂದು?

ಭಾರತವು ಸುವರ್ಣಮಯ ಭೂಮಿಯೆಂದೂ, ಪುಣ್ಯಪುರುಷರಿಗೆ ಜನ್ಮದಾಯಿನಿಯೆಂದೂ ಪ್ರಖ್ಯಾತಿಗೊಂಡ ದೇಶ. ಆದರೆ ಅದರ ಇಂದಿನ ಪರಿಸ್ಥಿತಿಯು ಎಂಥಾ ಕಠಿಣಹೃದಯವನ್ನಾದರೂ ಕರಗಿಸದಿರದು. ಇಂದು ಭಾರತದ ಜನರು ಗುಲಾಮರು, ಸ್ವಾತಂತ್ರ್ಯ ಹೀನರು; ಈ ಜನರನ್ನು ಆಳುತ್ತಿರುವವರು ಒಂದು ಹಿಡಿಯಷ್ಟೇ ಇರುವರು. ಅವರಿಗೆ ಭಾರತದ ಉನ್ನತಿಯ ಬಗ್ಗೆ ಲವಲೇಶವೂ ಯೋಚನೆ ಇಲ್ಲ. ಭಾರತವನ್ನು ಅವರು ತಮ್ಮದೊಂದು ಸಂತೆಯಾಗಿ ಮಾರ್ಪಡಿಸಿರುವರು. ಆದ್ದರಿಂದಲೇ ಭಾರತದ ಆರ್ಥಿಕ, ಸಾಂಪತ್ತಿಕ. ಸ್ಥಿತಿಗಳು ಕುಗ್ಗಿ ವಿಷಮಾವಸ್ಥೆಗೆ ಇಳಿದಿವೆ. ಪರದೇಶಗಳಿಂದ ಬಂದು ನಮ್ಮ ಮೇಲೆ ಅಧಿಕಾರಿಗಳಾಗಿರುವ ವೈಸರಾಯರೂ, ಗವರ್ನರರೂ, ಬೇರೆ ಸ್ವಾತಂತ್ರ್ಯ ದೇಶಗಳಲ್ಲಿರುವ ಮುಖ್ಯಾಧಿಕಾರಿಗಳು ತೆಗೆದುಕೊಳ್ಳುತ್ತಿರುವ ಸಂಬಳದ ನೂರಾರು ಪಾಲು ಹೆಚ್ಚಿನ ವೇತನವನ್ನು ತೆಗೆದುಕೊಳ್ಳುತ್ತಿರುವರು. ಭಾರತವನ್ನು ಅಭಿವೃದ್ಧಿಗೊಳಿಸಬೇಕೆಂಬ ಹಿತಕಾಂಕ್ಷೆ ಇಲ್ಲದೆ ಪ್ರಭುತ್ವವನ್ನು ನಡೆಸುತ್ತಿರುವಾಗ ಇದು ವಾಸ್ತವವೇ ಸರಿ. ಆದ್ದರಿಂದಲ್ಲವೇ ಆಂಗ್ಲೇಯ ಪ್ರವೀಣರೊಬ್ಬರು 'ಭಾರತವನ್ನು ನಾವು ಜಯಿಸಿದ್ದು ಭಾರತದ ಪ್ರಜೆಗಳನ್ನು ಸುಖಿಗಳನ್ನಾಗಿಸಿ, ಭಾರತದ ಅಭಿವೃದ್ಧಿಯನ್ನು ಕೋರುವುದಕ್ಕಲ್ಲ; ನಮ್ಮ ಆರ್ಥಿಕ ತೃಷೆ ಇವೇ ಮೊದಲಾದ ಲಾಲಸೆಗಳ ಸಾಧನೆಗಾಗಿ' ಎಂದು ಹೇಳಿರುವದು? ಜಯಿಸಿದಾಗಲೇ ಈ ಧ್ಯೇಯದಿಂದಿದ್ದವರು, ಈಗಲಾದರೂ ಕಾಂಗ್ರೆಸ್ ಚಳವಳ ಪ್ರಾರಂಭವಾಗಿ ಅವರ ಕುಟಿಲ ನೀತಿಗಳನ್ನು ಹೊರಗೆಡಹುತ್ತಿರುವಾಗ ಭಾರತದ ಅಭಿವೃದ್ಧಿಯ ವಿಚಾರ ಚಿಂತಿಸುವರೇ? ಇರುವಷ್ಟು ದಿನ ಭಾರತದಲ್ಲಿ ಸುಖಿಗಳಾಗಿರಬೇಕೆಂದು ಪ್ರಯತ್ನಿಸುವರು. ಆದ್ದರಿಂದ ಪರದೇಶದಿಂದ ಬಂದ ಈ ಪರದೇಶೀ ಅಧಿಕಾರಿಗಳಿಗೆ ತಮ್ಮ ಸಂಬಳದ ವಿನಹ ದೇಶದ ಬಡತನದ ಕಡೆಗೆ ಗಮನವೇ ಇಲ್ಲ. ಯಾವನೊಬ್ಬನಾದರೂ ಇವರ ಸಂಬಳವನ್ನು ನೋಡಿದರೆ ಭಾರತವು ಬಡದೇಶವೆಂದು ಹೇಳಲಾರನು. ಭಾರತದ ಹೀನ ಸ್ಥಿತಿಯನ್ನು ಅರಿಯಲಾರನು. ಭಾರತದ ಬಡ ರೈತರ ದುಸ್ಥಿತಿಯನ್ನು ಊಹಿಸಲಾರನು. ಆದರೆ ಮಾಡುವದೇನು? ಅವರು ತಮ್ಮ ಅಧಿಕಾರವನ್ನು ಛಲಾಯಿಸುತ್ತಲೇ ಇರುವರು. ಮಹಡಿಯ ಮೇಲೆ ಕುಳಿತು ರೇಡಿಯೋ ಮೂಲಕ ಪ್ರಪಂಚದ ವಿದ್ಯಮಾನಗಳನ್ನು ತಿಳಿಯುತ್ತಿರುವವರಿಗೆ ಭಾರತದ ಬಡ ರೈತರ ಹೀನದೆಶೆಯ ದೃಶ್ಯವು ಕಾಣಲಾರದು. ಮುರುಕು ಗುಡಿಸಲಿನ ರೋದನವೂ, ಬಡತನದ ಬೇಗೆಯಲ್ಲಿ ಬಳಲಿ ಬೆಂಡಾಗಿರುವ ಅವರ ಆರ್ತಧ್ವನಿಯೂ, ಸುಶ್ರಾವ್ಯವಾದ ಸಂಗೀತವನ್ನು ಕೇಳುತ್ತಿರುವವರಿಗೆ ಕೇಳಿಸಲು ಸಾಧ್ಯವಾಗಬಹುದೇ? ರೈತರ ಹೃದಯವಿರುವವರ್ಯ

ಮತ್ತು ಕೈಗಾರಿಕೆ [illegible] ಲ್ಲದು.

ಭಾರತವು ಹಳ್ಳಿಗರ ನಾಡು, ಭಾರತ ಜನ್ಮಭೂಮಿ ಹಳ್ಳಿ. ಹಳ್ಳಿಗಳ ನಿವಾಸಿಗಳು ರೈತರು ಮತ್ತು ಕೂಲಿಕಾರರು. ಇವರಿಗೆ ತಕ್ಕ ಶಿಕ್ಷಣ ದೊರೆತ ವಿನಹ ಭಾರತವು ಮುಂದುವರಿಯಲಾರದು. ಪಟ್ಟಣಗಳಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚು ಅನುಕೂಲ. ಹಳ್ಳಿಗಳಲ್ಲಿ ನೂರಕ್ಕೆ 80 ಗ್ರಾಮಗಳಲ್ಲಿ ಶಾಲೆಗಳೇ ಇಲ್ಲ. ಹಾಗೂ ಮಕ್ಕಳ ಮುಂದಿನ ವಿದ್ಯಾಭ್ಯಾಸ ಖರ್ಚನ್ನು ನಿರ್ವಹಿಸಲು ಹಳ್ಳಿಗರ ಆರ್ಥಿಕ ಅಡಿಪಾಯವು ಭದ್ರವಾಗಿಲ್ಲ.

ಭಾರತದ ಹಿತಕ್ಕೆಂದು ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚಮಾಡಿ ಸೈನ್ಯವನ್ನು ಇಟ್ಟಿದ್ದಾರೆ. ಈ ಸೈನ್ಯದ ಧ್ಯೇಯವಾವದೂ ನಮಗೆ ತಿಳಿಯದೆಂಬವನ್ನು ಹಾಸಕ ಮಹಾಶಯರಿಗೆ ತಿಳಿಸಬೇಕಾಗಿಲ್ಲ. ಇದಕ್ಕಾಗಿ ಖರ್ಚು ಮಾಡುವ ಹಣದ ಸಹಸ್ರ ಪಾಲಿನಲ್ಲಿ ಒಂದು ಭಾಗವನ್ನು ನಮ್ಮ ನಾಡಿನ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸುತ್ತಿದ್ದಲ್ಲಿ ನಿರಕ್ಷರತೆ ಎಂಬ ಭೂತವು ಎಂದೋ ನಮ್ಮ ದೇಶದಿಂದ ಪಲಾಯನ ಮಾಡುತ್ತಿತ್ತು. ನಮ್ಮನ್ನಾಳುವವರಾದರೋ ರಾಜನೀತಿಜ್ಞರೂ, ಸಂಗರಿಕರೂ, ಲೋಕಸ್ತ್ರೀಯರೂ, ಲೋಕೋಪಕಾರವೇ ತಮ್ಮ ಧ್ಯೇಯವೆಂದು ಹೊಗಳಿಕೊಳ್ಳುವವರೂ ಆಗಿದ್ದಾರೆ. ಭಾರತವು ಅವರ ಪ್ರಭುತ್ವಕ್ಕೊಳಗಾಗಿ ನೂರಾರು ವರ್ಷಗಳು ದಾಟಿದವು. ಆದರೂ ಭಾರತದಲ್ಲಿ ನೂರಕ್ಕೆ ಬರೀ ಒಂಭತ್ತು ಜನರಂತೆ ಅಕ್ಷರ ತಿಳಿದಿರುವವರಿರುವರೆಂದೂ ಹೇಳುವುದು ನಾಚಿಕೆಗೇಡಲ್ಲವೇ? ಶಿಕ್ಷಣವಿಲ್ಲದ್ದರಿಂದಲೇ ರೈತರಲ್ಲಿ ಜಾಗ್ರತಿಯುಂಟಾಗಿಲ್ಲ. ಅವರಿಗೆ ಪ್ರಪಂಚದ ಭಯವಿಲ್ಲ. ಅವರು ವಿದ್ಯಾವಂತರಾಗಿದ್ದಲ್ಲಿ, ಅವರಿಗೆ ತಮ್ಮ ದೇಶದ ಬಡತನಕ್ಕೆ ಕಾರಣ ಗೊತ್ತಿದ್ದಲ್ಲಿ, ನಾವು ಗುಲಾಮರೆಂಬ ಭಾವನೆಯು ಅವರ ಹೃದಯಾಂತರಾಳದಲ್ಲಿ ಪ್ರತಿಬಿಂಬಿಸಿದಲ್ಲಿ ಭಾರತದ ದುಃಸ್ಥಿತಿಯು ಮಾಯವಾಗುತ್ತಿತ್ತು. ಪರದೇಶೀಯ ಸಾಮಾನುಗಳಿಗಾಗಿ ಸೂರೆಯಾಗಿ ಹೋಗುತ್ತಿರುವ ಹಣದ ಪ್ರವಾಹವು ಎಂದೋ ನಿಂತುಹೋಗುತ್ತಿತ್ತು. ಪರ ದೇಶೀಯರು ತಮ್ಮ ಉತ್ಪತ್ತಿಗಳನ್ನು ಭಾರತದ ಸಂತೆಯಲ್ಲಿ ಮಾರಿ ಬಡ ಜನರನ್ನು ಸೂರೆಮಾಡುವ ಅವಕಾಶವಿರುತ್ತಿರಲಿಲ್ಲ. ಉದಾಹರಣೆಗಾಗಿ ವಿದೇಶಿ ಹಣ್ಣು ಹಂಪಲುಗಳಿಗಾಗಿ ವರ್ಷಕ್ಕೆ 1,46,96,351 ರೂ. ಗಳನ್ನು ಭಾರತವು ವರ್ಷಂಪ್ರತಿ ಖರ್ಚು ಮಾಡುತ್ತಿದೆ. ಈ ರೀತಿ ಭಾರತದಲ್ಲಿ ವಿದೇಶಿ ಹಣ್ಣುಗಳ ವ್ಯಾಪಾರವು ಹೆಚ್ಚಲು ಕಾರಣವೇನು? ಯಾವ ದೇಶದಲ್ಲಾದರೂ ವ್ಯವಸಾಯ ಕರ್ತೃಗಳು ರೈತರು. ಅವರಿಗೆ ನಿಜಸ್ಥಿತಿಯು ಗೊತ್ತಿದ್ದರೆ ಅವರು ಖಂಡಿತಾ ಹಿಂದೆ ಬೀಳುತ್ತಿರಲಿಲ್ಲ. ಆದ್ದರಿಂದ ಮುಖ್ಯವಾಗಿ ಅವರ ಅವಿದ್ಯೆಯು ಅವರ ನಾಶಕ್ಕೂ, ದೇಶದ ನಾಶಕ್ಕೂ ಕಾರಣವಾಗಿದೆ.

ಇದು ವ್ಯವಸಾಯದ ವಿಚಾರವಾಯಿತು. ಈ ದಿನಸಿಗಳಲ್ಲಿ ತಯಾರಾಗುವ ಸಾಮಾನುಗಳಿಗಾದರೂ ಭಾರತದ ಸಂತೆಯಲ್ಲಿ ಹಣವನ್ನು ಲಕ್ಷೋಪಲಕ್ಷವಾಗಿ ಸೂರೆಗೊಳ್ಳುತ್ತಿವೆ. ಭಾರತವು ವಿಶಾಲವಾದ ದೇಶ. ಇಲ್ಲಿ ಕಾರ್ಖಾನೆಗಳಿಗೂ, ಇತರ ಯಾವ ಕೈಗಾರಿಕೆಯ ಉದ್ಯೋಗಕ್ಕೂ ಬೇಕಾಗುವ ಸಾಮಾನುಗಳಿಗೆ ಯಾವ ಕೊರತೆಯೂ ಇಲ್ಲ. ಇಂಥ ಬಳಿಕ ಇಲ್ಲಿ ಕೈಗಾರಿಕೆಯು ಹಿಂದೆ ಬೀಳಲು ಕಾರಣವೇನು? ಇದು ಭಾರತವನ್ನು ಸಂತೆಯಾಗಿ ಮಾರ್ಪಡಿಸುವ ಕುಟಿಲ ತಂತ್ರದ ಪರಿಣಾಮವೆಂದರೆ ತಪ್ಪಾದೀತೇ? ಸರ್ಕಾರದಿಂದ ಕೈಗಾರಿಕೆಗೆ ಪ್ರೋತ್ಸಾಹವಿಲ್ಲ. ಇಂಥ ಬಳಿಕ ಜನತೆಯಲ್ಲಿ ನಿರಾಶೆಯು ಮೊಳೆಯುವುದರಲ್ಲಿ ಆಶ್ಚರ್ಯವೇನು?

ಇಂದು ಕಾಂಗ್ರೆಸು ಕೆಲವು ಪ್ರಾಂತಗಳಲ್ಲಿ ಅಧಿಕಾರ ಸೂತ್ರವನ್ನು ಕೈಯ್ಯಲ್ಲಿ ಹಿಡಿದು ಈಗಾಗಲೇ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ತೆರೆಯಬೇಕೆಂಬ ಸಮಸ್ಯೆಯನ್ನು ವಿಮರ್ಶಿಸುತ್ತಿದೆ. ತಮಗೆ ಆಂತರಿಕ ಅಧಿಕಾರವಿಲ್ಲದಿದ್ದರೂ ಕಾಂಗ್ರೆಸು ಕೈಗಾರಿಕೆಯು ಮತ್ತು ವ್ಯವಸಾಯದ ಕಡೆಗೆ ತನ್ನ ದೃಷ್ಟಿಯನ್ನು ಬೀರಿ [illegible] ದ ಪ್ರಯತ್ನ ಮಾಡುತ್ತಿದೆ. ಇವರ ಈ ಪ್ರಯತ್ನಗಳಿಗೆ ಬಂಡವಾಳಗಾರರ ಬೆಂಬಲವು ಅಗತ್ಯ. ಕಾಂಗ್ರೆಸಿಗೆ ಅಧಿಕಾರವನ್ನು ಗಳಿಸಲು ಜನರು ಒಗ್ಗಟ್ಟಾಗಬೇಕು. ಪೂರ್ಣ ಸ್ವರಾಜ್ಯವನ್ನು ಗಳಿಸಬೇಕು. ರೈತರ ಹಿತ ಕಾಂಕ್ಷೆಯ ಕೆಲಸಗಳು ಯಥೇಚ್ಛ ನಡೆಯಬೇಕು. ಅಂತೇ ಭಾರತದ ಮುಕ್ತಿ; ಅಂದೇ ರೈತರ ಮುಕ್ತಿ; ಅಂದೇ ದೇಶಕ್ಕೆ ಬಡತನೋದ್ಧಾರದ ರಕ್ತಿ. ಆದ್ದರಿಂದ ದೀನರ ಕೋಟಿಯ ಉದ್ಧಾರಕ್ಕಾಗಿ ಹೋರಡುವ ಕಾಂಗ್ರೆಸನ್ನು ಬಲಪಡಿಸಬೇಕು. ರೈತರ ಮತ್ತು ದೇಶದ ಕಲ್ಯಾಣವಾಗಬೇಕಾದರೆ ಅದು ಕಾಂಗ್ರೆಸಿನಿಂದ ಮಾತ್ರ ಸಾಧ್ಯ.

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯ್ಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನ್ನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಅನುಭವ ಯುತ ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನು, ಸೀತಜ್ವರ, ಮೋಹಾಲಸ್ಯ, ತಲೆನೋವು ಬಾಯೊರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಾಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಅಂಚೆ ಸಾಗಿಸಲು ಪ್ರತ್ಯೇಕ.

8 ಸಿ. ಹೆಚ್. ರಾಮಣ್ಣ ವೈದ್ಯರ್.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, ಕೋರ್ಟು ಖರ್ಚು, ಆರ್ಬಿಟ್ರೇಶನ್ ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಕೊಡಗು

ಆಗೊಸ್ತು ತಾರೀಕು ೧೯ನೇ ಶುಕ್ರವಾರ ೧೯೩೮.

ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡುವ ವಂತಿಗೆಯಲ್ಲಿ ಖೋತೆ.

ಕೊಡಗಿನ ಸರ್ಕಾರದ ಆರ್ಥಿಕ ಸ್ಥಿತಿಯನ್ನು ಪರಿಶೀಲಿಸಿ, ಆದಾಯ ವೆಚ್ಚವನ್ನು ಸರಿಗಟ್ಟಲು ಇಂಡಿಯಾ ಸರ್ಕಾರದಿಂದ ನೇಮಿಸಲ್ಪಟ್ಟ ಫೈನಾನ್ಸಿಯಲ್ ಆಫೀಸರಾದ ಮಿ ವಟ್ಟಾಲ್‌ರವರ ವರದಿಯ ಪರಿಣಾಮವಾಗಿ ಇಲ್ಲಿಯ ಪ್ರಾಂತೀಕ ಸರ್ಕಾರದವರು ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡುವ ಸುಮಾರು 50,000 ರೂಪಾಯಿ ವಂತಿಗೆಯಲ್ಲಿ ರೂ 7,000 ಕಡಿಮೆ ಮಾಡಲ್ಪಡಬಹುದೆಂಬ ವರ್ತಮಾನವಿದೆ ಇದು ನ್ಯಾಯವೂ ಅಲ್ಲ, ಉಚಿತವೂ ಅಲ್ಲ

ಸರ್ಕಾರದವರು ಈಗ ಕೊಡುತ್ತಿರುವ ವಂತಿಗೆಗಿಂತ ಹೆಚ್ಚಾಗಿಯೇ ಡಿಸ್ಟ್ರಿಕ್ಟ್ ಬೋರ್ಡಿಗೆ ನ್ಯಾಯವಾಗಿ ಸಲ್ಲಬೇಕಾಗಿದೆ. ಈಗ ಡಿ ಬೋರ್ಡಿಗೆ ವಿದ್ಯಾ ಇಲಾಖೆಯ ಖರ್ಚಿಗಾಗಿ ರೂ. 22,720, ಮೋಟಾರು ತೆರಿಗೆಯ ಬಾಪ್ತು ರೂ 20,000 ಮತ್ತು ಸಿವಿಲ್ ವರ್ಕ್ಸ್‌ಗಾಗಿ 7,000 ರೂಪಾಯಿ ಸರ್ಕಾರದಿಂದ ಗ್ರಾಂಟು ದೊರೆಯುತ್ತಿದೆ. ಮೋಟಾರು ವಾಹನಗಳ ತೆರಿಗೆಯ ಆಕ್ಟು ಜಾರಿಗೆ ಬರುವವರೆಗೆ ಮುಂಚೆ ಡಿ ಬೋರ್ಡಿನವರು ಸುಂಕದ ಕಟ್ಟೆಗಳಲ್ಲಿ ಮೋಟಾರುಗಳ ಮೇಲೆ ಸುಂಕ ಎತ್ತುತ್ತಿದ್ದರು ಆಗ್ಯೆ ಮೋಟಾರು ವಹಿವಾಟುಗಳು ಹೆಚ್ಚುತ್ತಾ ಬಂದ ಹಾಗೆ ಬೋರ್ಡಿಗೆ ಸುಂಕದ ಉತ್ಪತ್ತಿಯು ಏರುತ್ತಾ ಬರುತ್ತಿತ್ತು! ಬೋರ್ಡಿನ ಈ ಬಾಬಿನ ಉತ್ಪತ್ತಿಯು 1927 ರಲ್ಲಿ ಸುಮಾರು ರೂ 28,000 ಇದ್ದದ್ದು 1931 ರಲ್ಲಿ ರೂ. 36,000 ಕ್ಕೆ ಏರಿತು ಹೀಗೆಯೇ ಮುಂದುವರಿಯುತ್ತಾ ಬಂದಿದ್ದರೆ ಈಗ ವರ್ಷಕ್ಕೆ ಕಮ್ಮಿ ಪಕ್ಷ 60,000 ರೂಪಾಯಿಯಾದರೂ ದೊರೆಯುತ್ತಿತ್ತು. ಆದರೆ ಮೋಟಾರು ವಾಹನಗಳ ತೆರಿಗೆಯ ಆಕ್ಟು ಜಾರಿಗೆ ಬಂದು ಮೋಟಾರುಗಳ ಮೇಲೆ ಬೋರ್ಡಿನವರು ಸುಂಕ ಎತ್ತಕೂಡದೆಂದು ಮಾಡಿದ್ದರಿಂದ ಬೋರ್ಡಿನ ಸುಂಕದ ಉತ್ಪತ್ತಿಯು 1932–33 ರಲ್ಲಿ ಸುಮಾರು ರೂ 17,000 ಇಳಿದು ಹೋಯಿತು. ಬೋರ್ಡಿಗೆ ಈ ರೀತಿಯಿಂದ ಉಂಟಾದ ನಷ್ಟವನ್ನು ಭರ್ತಿಮಾಡಲಿಕ್ಕಾಗಿ ಸರ್ಕಾರದವರು ರೂ 18,000 ವಂತಿಗೆ ಕೊಡಲು ತೀರ್ಮಾನಿಸಿದರು ಎರಡು ವರ್ಷಗಳ ನಂತರ ಬೋರ್ಡಿನವರ ಕೋರಿಕೆ ಮೇರೆ ಈ ಗ್ರಾಂಟನ್ನು ರೂ 20,000 ಕ್ಕೆ ಏರಿಸಿದರು 1932–33 ರಲ್ಲಿ ಮೋಟಾರುಗಳ ತೆರಿಗೆಯಿಂದ ಸರ್ಕಾರದವರ ಆದಾಯ ರೂ. 68,000 ಇದ್ದದ್ದು ಈಗ ಅದು ರೂ. 95,000ವನ್ನು ಮೀರಿದೆ. ಅಲ್ಲದೆ ಲಾರಿಗಳ ವಹಿವಾಟವು ಹೆಚ್ಚಾಗುತ್ತಾ ಬಂದು ಎತ್ತಿನ ಗಾಡಿಗಳ ಸಂಖ್ಯೆಯು ಕಡಿಮೆಯಾಗುತ್ತಿರುವದರಿಂದ ಬೋರ್ಡಿನ ಸುಂಕದ ಆದಾಯವು 1932–33 ರಲ್ಲಿ ರೂ. 17,000 ಇದ್ದದ್ದು ಈಗ 10,000 ಕ್ಕೆ ಇಳಿದು ಹೋಗಿದೆ. ಇನ್ನೂ ವರ್ಷ ವರ್ಷಕ್ಕೆ ಕಡಿಮೆಯಾಗುವ ಚಿಹ್ನೆಗಳೇ ಇವೆಯಲ್ಲದೆ ಹೆಚ್ಚಾಗುವ ಸಂಭವವೇ ಕಾಣುವುದಿಲ್ಲ. ಆದುದರಿಂದ, ಸರ್ಕಾರದ ಈ ಬಾಬಿನ ಆದಾಯವು ಒಂದು ಲಕ್ಷದ ಹತ್ತಿರ ತಲಪಿರುವಾಗ್ಯೆ ಬೋರ್ಡಿಗೆ ಅದರ ಅರ್ಧ ಭಾಗವನ್ನಾದರೂ ಕೊಡಬೇಕೆನ್ನುವುದು ನ್ಯಾಯವಲ್ಲವೇ? ಸರ್ಕಾರದವರೇ ಮುಖ್ಯವಾದ ರಸ್ತೆಗಳ ಖರ್ಚುವೆಚ್ಚವನ್ನು ನಡಿಸುತ್ತಿರುವುದರಿಂದ ಮೋಟಾರು ತೆರಿಗೆಯ ಹೆಚ್ಚಿನ ಭಾಗವನ್ನು ಅವರೇ ಇಟ್ಟುಕೊಳ್ಳುವುದರಲ್ಲಿ ಅನ್ಯಾಯವೇನೂ ಇಲ್ಲವೆಂದೂ ವಾದಿಸಬಹುದು ಮೋಟಾರು ವಾಹನಗಳ ತೆರಿಗೆಯ ಆಕ್ಟು ಬರುವ ಮೊದಲೂ ಸರ್ಕಾರದವರೇ ರಸ್ತೆಗಳ ಖರ್ಚನ್ನು ನಡಿಸುತ್ತಿದ್ದರು ಆಗ್ಯೆ ಬೋರ್ಡಿನವರು ಈ ಬಗ್ಗೆ ಸುಂಕದ ಉತ್ಪತ್ತಿಯಿಂದ ಸರ್ಕಾರಕ್ಕೇನೂ ವಂತಿಗೆ ಕೊಡುತ್ತಿರಲಿಲ್ಲ ಒಂದು ವೇಳೆ ಸರ್ಕಾರಕ್ಕೂ ಮೋಟಾರುಗಳ ವಹಿವಾಟಿನಿಂದ ರಸ್ತೆ ರಿಪೇರಿ ಖರ್ಚು ಹೆಚ್ಚಾಗುತ್ತಿದೆಯೆಂದರೆ ಮೋಟಾರು ತೆರಿಗೆಗಳ ಉತ್ಪತ್ತಿಯ ಅರ್ಧವನ್ನು ಅವರು ಉಪಯೋಗಿಸಿಕೊಳ್ಳಬಹುದು ಆದುದರಿಂದ ಈಗ ಮೋಟಾರು ತೆರಿಗೆಯ ಆಕ್ಟಿನಿಂದ ಬೋರ್ಡಿಗೆ ತುಂಬಾ ನಷ್ಟ ಉಂಟಾಗಿರುವಾಗ್ಯೆ ಮತ್ತು ಸರ್ಕಾರಕ್ಕೆ ಇದರಿಂದ ದೊಡ್ಡ ಆದಾಯ ಬರುತ್ತಿರುವಾಗ್ಯೆ ಈ ಬಾಬಿನ ಗ್ರಾಂಟನ್ನು ಹೆಚ್ಚಿಸದೆ ಇರುವುದು ಸರಿಯಲ್ಲ ಅದರೊಂದಿಗೆ ವಂತಿಗೆಯನ್ನು ಏಳು ಸಾವಿರದಷ್ಟು ಕಡಿಮೆ ಮಾಡಲು ಯೋಚಿಸುವುದು ತುಂಬಾ ಶೋಚನೀಯ

ಕೆಲವು ಮೋಡಲ್ ಶಾಲೆಗಳ ವಿನಹ ದೇಶದ ಪ್ರೈಮರಿ ವಿದ್ಯಾಭ್ಯಾಸವೆಲ್ಲವೂ ಡಿಸ್ಟ್ರಿಕ್ಟ್ ಬೋರ್ಡಿನಿಂದಲೇ ನಡಿಸಲ್ಪಡುತ್ತಿದೆ ಈ ಇಲಾಖೆಗಾಗಿ ಬೋರ್ಡಿನವರು 1911 ರಲ್ಲಿ ರೂ. 15,000 ಖರ್ಚು ಮಾಡುತ್ತಿದ್ದಾಗ ಸರ್ಕಾರದವರು ರೂ 12,000 ವಂತಿಗೆ ಕೊಡುತ್ತಿದ್ದರು ಬೋರ್ಡಿನ ಈ ಬಾಬಿನ ಖರ್ಚು ಹೆಚ್ಚಾಗುತ್ತಾ ಬಂದದ್ದರಿಂದ 1931–32 ರಲ್ಲಿ ಈ ಗ್ರಾಂಟನ್ನು ರೂ. 15,000 ಕ್ಕೂ, 1936–37 ರಲ್ಲಿ ರೂ. 22,720 ಕ್ಕೂ ಏರಿಸಿದರು. ಈಗ ಬೋರ್ಡಿನಲ್ಲಿ ಈ ಇಲಾಖೆಗಾಗಿ ರೂ 80,000 ಕ್ಕಿಂತ ಹೆಚ್ಚು ವೆಚ್ಚವಾಗುತ್ತಿದೆ. ಬೇರೆ ಪ್ರಾಂತ್ಯಗಳಲ್ಲಿ ಬೋರ್ಡಿನ ವಿದ್ಯಾ ಇಲಾಖೆಯ ಖರ್ಚಿನ ಸಮಾ ಅರ್ಧದಷ್ಟು ಪ್ರಾಂತೀಕ ಸರ್ಕಾರದವರು ಕೊಡುತ್ತಿರುವಾಗ್ಯೆ ಇಲ್ಲಿ ನಾಲ್ಕರಲ್ಲಿ ಒಂದು ಭಾಗದಷ್ಟು ಮಾತ್ರ ಕೊಡುತ್ತಿರುವುದು ವಿಷಾದಕರ. ಸಾಲದುದಕ್ಕೆ, ಈ ವಂತಿಗೆಯನ್ನು ಹೆಚ್ಚಿಸುವುದರ ಬದಲು ಅದರಲ್ಲಿ ರೂ. 5,000 ಖೋತೆ ಮಾಡುವ ಅಭಿಪ್ರಾಯದಲ್ಲಿರುವುದು ದೊಡ್ಡ ಅನ್ಯಾಯವೆಂದೇ ಹೇಳಬೇಕಾಗಿದೆ. ಇದರಿಂದ, ಸರ್ಕಾರದವರು ದೇಶದ ಜನರಿಗೆ ಅತ್ಯವಶ್ಯವಾದ ಪ್ರೈಮರಿ ವಿದ್ಯಾಭ್ಯಾಸಕ್ಕೆ ಎಲ್ಲಾ ಸಲಕರಣೆಗಳನ್ನು ಮಾಡಿಕೊಡುವುದರ ಬದಲು, ಇರುವ ಅನುಕೂಲತೆಗಳನ್ನೂ ಕಡಿಮೆ ಮಾಡುವ ಇರಾದೆಯಲ್ಲಿರುವರೆಂದು ಕಂಡುಬರುತ್ತದೆ. ಇದು ಖಂಡನೀಯವಾಗಿದೆ.

ಸರ್ಕಾರದವರು ಸ್ಥಳೀಯ ಸ್ವರಾಜ್ಯ ಸಂಸ್ಥೆಗಳಿಗೆ ವಂತಿಕೆ ಕೊಡುವುದು ವಾಡಿಕೆ ಆದರೆ ನಮ್ಮಲ್ಲಿಯ ಡಿಸ್ಟ್ರಿಕ್ಟ್ ಬೋರ್ಡಿನಿಂದ 'ಆರೋಗ್ಯ ಮತ್ತು ಶುಚಿತ್ವ' ಇಲಾಖೆಗಾಗಿ ವರ್ಷಕ್ಕೆ ರೂಪಾಯಿ 5000 ವಂತಿಗೆಯನ್ನು ಸರ್ಕಾರದವರು ಹೊಂದಿಕೊಳ್ಳುತ್ತಿರುವುದು ಆಶ್ಚರ್ಯವೇ ಸರಿ ಬೋರ್ಡಿನವರು ಈ ಇಲಾಖೆಯನ್ನು ನಡಿಸುತ್ತಿದ್ದಾಗ್ಯೆ ಅದರ ವೆಚ್ಚವನ್ನು ಬೋರ್ಡಿನವರೇ ಕೊಡುತ್ತಿದ್ದದ್ದು ಯುಕ್ತವಾಗಿತ್ತು. ಆದರೆ ಎರಡು ವರ್ಷಗಳ ಹಿಂದೆ ಸರ್ಕಾರದವರು ಈ ಇಲಾಖೆಯನ್ನು ಪುನರ್ರಚಿಸಿ, ಈಗ ಅದನ್ನು ತಾವೇ ನಡಿಸುತ್ತಿರುವಾಗ್ಯೆ ಅದರ ಖರ್ಚನ್ನು ಸರ್ಕಾರದವರೇ ವಹಿಸಿಕೊಳ್ಳದೆ ಬೋರ್ಡಿನಿಂದ ಅದಕ್ಕಾಗಿ ಗ್ರಾಂಟು ತೆಗೆದುಕೊಳ್ಳುತ್ತಿರುವುದು ಯಾವ ನ್ಯಾಯವೋ ತಿಳಿಯದು. ಆದುದರಿಂದ ಬೋರ್ಡಿನ ಕಳೆದ ಬಜೆಟ್ ಮೀಟಿಂಗಿನಲ್ಲಿ ಈ ವಂತಿಗೆಯನ್ನು ವಜಾ ಮಾಡಬೇಕೆಂದು ರೆಸೊಲ್ಯೂಷನು ಮಾಡಿದ್ದು ಸಕಾರಣವಾಗಿದೆ

ವೈದ್ಯ ಇಲಾಖೆಯು ಸಿವಿಲ್ ಸರ್ಜನರ ಅಧಿಕಾರದಲ್ಲಿರುವುದಾದರೂ ಬೋರ್ಡಿನವರು ಇದರ ಖರ್ಚಿನ ದೊಡ್ಡ ಭಾಗವನ್ನು ವಹಿಸಿಕೊಂಡಿರುವರು ಕೊಡಗಿನಲ್ಲಿರುವ ಎಲ್ಲಾ ಸಬ್ ಅಸಿಸ್ಟೆಂಟ್ ಸರ್ಜನರುಗಳ ಅಂದರೆ ಸಿವಿಲ್ ಸರ್ಜನ್ ಮತ್ತು ವೀರರಾಜಪೇಟೆ ಆಸ್ಪತ್ರೆಯ ಅಸಿಸ್ಟೆಂಟ್ ಸರ್ಜನರ ವಿನಹ ಉಳಿದ ಎಲ್ಲಾ ಪುರುಷ ಡಾಕ್ಟರುಗಳ ಬತ್ತಿ ಸಂಬಳವನ್ನೂ, ಮಡಿಕೇರಿ ಮತ್ತು ವೀರರಾಜಪೇಟೆ ಆಸ್ಪತ್ರೆಗಳನ್ನು ವಿನಾಯಿಸಿ ಉಳಿದ ಎಲ್ಲಾ ಆಸ್ಪತ್ರೆಗಳ ನರ್ಸ್, ಕಂಪೌಂಡರ್ ಮೊದಲಾದ ಎಲ್ಲಾ ಕೆಲಸಗಾರರ ಸಂಬಳವನ್ನೂ, ಔಷಧಿಯ ಖರ್ಚನ್ನೂ ಬೋರ್ಡಿನವರೇ ಕೊಡುತ್ತಿರುವರು ಸಬ್ ಅಸಿಸ್ಟೆಂಟ್ ಸರ್ಜನರುಗಳ ಪ್ರಾರಂಭದ ಸಂಬಳವನ್ನು ಮಾತ್ರ ಸರ್ಕಾರದವರು ಕೊಡುತ್ತಿರುವರು.

ಇವುಗಳೊಂದಿಗೆ ಬೋರ್ಡಿನವರು ಗ್ರಾಮಾಂತರ ರಸ್ತೆಗಳಿಗೆ ಬೇಕಾದ ವೆಚ್ಚವನ್ನೆಲ್ಲಾ ನಡಿಸುತ್ತಿರುವರು ಈ ರಸ್ತೆಗಳ ದೆಸೆಯಿಂದ ಗ್ರಾಮದಲ್ಲಿ ರೈತರು ಬೆಳೆಸುವ ದವಸ ಧಾನ್ಯಗಳಿಗೆ ಸ್ವಲ್ಪ ಹೆಚ್ಚಿನ ಬೆಲೆಯು ದೊರೆಯುತ್ತಿರುವುದಲ್ಲದೆ, ಕಾಯಿಲಸ್ಥರನ್ನು ಆಸ್ಪತ್ರೆಗೆ ಸಾಗಿಸಲೂ ಗ್ರಾಮವಾಸಿಗಳಿಗೆ ಅನುಕೂಲವಾಗಿದೆ ಪ್ರೈಮರಿ ವಿದ್ಯಾಭ್ಯಾಸ, ವೈದ್ಯಕೀಯ ಚಿಕಿತ್ಸೆ ಮತ್ತು ಗ್ರಾಮಾಂತರ ರಸ್ತೆಗಳು–ಇವು ಯಾವ ದೇಶದ ಪ್ರಜೆಗಳಿಗಾದರೂ ಅತ್ಯವಶ್ಯವಾದ ವಿಷಯಗಳು. ಇವುಗಳಿಗಾಗಿಯೇ ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ಆದಾಯವನ್ನೆಲ್ಲಾ ವೆಚ್ಚ ಮಾಡುತ್ತಿರುವರು. ಕೆಲವು ಖಾಸಗಿ ಶಾಲೆಗಳಿಗೆ ಗ್ರಾಂಟು, ಬೋರ್ಡಿನ ಶಾಲೆಗಳಿಗೆ ಕೆಲವು ಉಪಾಧ್ಯಾಯರುಗಳು, ಆಸ್ಪತ್ರೆಗಳಿಂದ ಬಹು ದೂರವಾಗಿರುವ ಗ್ರಾಮಗಳಿಗೆ ವೈದ್ಯಕೀಯ ಚಿಕಿತ್ಸೆಯ ಏರ್ಪಾಡು, ಅತ್ಯಗತ್ಯವಾದ ಕೆಲವು ಗ್ರಾಮಾಂತರ ರಸ್ತೆಗಳು–ಇವೇ ಮೊದಲಾದ ದೀರ್ಘ ಕಾಲದ ಕೋರಿಕೆಗಳನ್ನು ನೆರವೇರಿಸಲಿಕ್ಕಾಗಿ ಬೋರ್ಡಿನ ಮೆಂಬರುಗಳು ಕಳೆದ ಬಜೆಟ್ ಮೀಟಿಂಗಿನಲ್ಲಿ ಬಹು ಜಾಗರೂಕತೆಯಿಂದ ಆದಾಯ ವೆಚ್ಚವನ್ನು ಪರಿಶೀಲಿಸಬೇಕಾಯಿತು ಹೊಸ ಕೆಲಸಕ್ಕಾಗಿ ಹಣ ಬೇಕೆನ್ನುವ ಠರಾವುಗಳು ನೂರಕ್ಕಿಂತ ಹೆಚ್ಚಿದ್ದರೂ ಕೂಡ ಹಣದ ಅಭಾವದಿಂದ ಅವುಗಳಲ್ಲಿ ಮೂರರಲ್ಲಿ ಒಂದು ಭಾಗಕ್ಕಿಂತ ಕಮ್ಮಿಯಾದವುಗಳಿಗೆ ಮಾತ್ರ ಹಣ ಮಂಜೂರು ಮಾಡಲಾಯಿತೆಂದು ತಿಳಿದುಬರುತ್ತದೆ ಉಳಿದವುಗಳನ್ನು ಹಣ ದೊರೆತಾಗ ಆಲೋಚಿಸುವಂತೆ ಮುಂದಕ್ಕಿಡಲಾಯಿತಂತೆ ಈ ಅತ್ಯವಶ್ಯದ ಕೆಲವು ಹೊಸ ಕೆಲಸಗಳಿಗಾಗಿ ಸುಮಾರು ಎಂಟು ಸಾವಿರ ರೂಪಾಯಿ ಮಂಜೂರು ಮಾಡಲಾಗಿದೆ ಇದು ಸಮ್ಮಂದಪಟ್ಟ ಜನರಿಗೆ ಗೊತ್ತೂ ಆಗಿದೆ ಈಗ ಸರ್ಕಾರದವರ ಆಲೋಚನೆಯಂತೆ ಏಳುಸಾವಿರ ರೂಪಾಯಿ ವಂತಿಗೆ ಕಡಿಮೆ ಮಾಡಲ್ಪಟ್ಟರೆ ಈ ವರ್ಷ ಮಂಜೂರು ಮಾಡಿದ ಕೆಲವು ಕಸ್ಮಿ ಎಲ್ಲಾ ಹೊಸ ಕೆಲಸಗಳನ್ನು ಬಾಕಿ ಇಡಬೇಕಾಗುತ್ತದೆ ಇದರಿಂದ ದೇಶದಲ್ಲಿ ಅತೃಪ್ತಿಯೂ, ಅಸಮಾಧಾನವೂ ಉಂಟಾಗದೆ ಇರದು ಬೋರ್ಡಿನ ಖರ್ಚನ್ನು ಖೋತೆ ಮಾಡುವದೆಂದರೆ ಗ್ರಾಮವಾಸಿಗಳಿಗೆ ಅತ್ಯಗತ್ಯವಾದ ಕೆಲಸ ಕಾರ್ಯಗಳನ್ನು ನಿಲ್ಲಿಸಬೇಕಾಗುವುದು ಇದಲ್ಲದೆ ಡಿಸ್ಟ್ರಿಕ್ಟ್ ಬೋರ್ಡು ನಡಿಸುತ್ತಿರುವ ಬಹು ಉಪಯುಕ್ತ ಕಾರ್ಯಗಳಿಗೋಸ್ಕರ ಸರ್ಕಾರದವರು ಕೊಡುತ್ತಿರುವ ವಂತಿಗೆಯನ್ನು ಹೆಚ್ಚಿಸಬೇಕಾದದ್ದು ಅವರ ಕರ್ತವ್ಯವಾಗಿದೆ ಅದರ ಬದಲು ಅವರು ಗ್ರಾಂಟನ್ನು ಕಡಿಮೆ ಮಾಡಲು ಯೋಚಿಸುತ್ತಿರುವುದು ಎಂದೂ ಸರಿಯಲ್ಲ. ಅಧಿಕಾರಿಗಳು ಇನ್ನಾದರೂ ಚೆನ್ನಾಗಿ ಆಲೋಚಿಸಿ, ಬೋರ್ಡಿಗೆ ಕೊಡುವ ವಂತಿಗೆಯಲ್ಲಿ ಖೋತೆ ಮಾಡಲಿಕ್ಕಿಲ್ಲವಾಗಿ ನಂಬುತ್ತೇವೆ.

ನಾಡು ಕಚೇರಿಗಳು.

ಸರ್ಕಾರದ ಸಿಬ್ಬಂದಿ ಖೋತೆಯ ಯೋಜನೆಯಲ್ಲಿ ಈಗಿರುವ ಹನ್ನೊಂದು ನಾಡು ಕಚೇರಿಗಳಲ್ಲಿ ಎರಡನ್ನು ತೆಗೆದುಹಾಕುವರೆಂಬ ವರ್ತಮಾನವು ಬಲವಾಗುತ್ತಿದೆ. ಇದು ನಿಜವಾಗಲಿಕ್ಕಿಲ್ಲವೆಂದೇ ನಾವು ಭಾವಿಸಬೇಕಾಗಿದೆ. ಯಾಕೆಂದರೆ– ಸರ್ಕಾರದವರು ರೈತರ ಹಿತವನ್ನು ಬಯಸುವವರಾದರೆ ಈ ತರಹದ ವರ್ತನೆಯನ್ನು ಕೈಕೊಳ್ಳಲಾರರು. ಕೋರ್ಟು ಕಚೇರಿ ಮೊದಲಾದ ಸರ್ಕಾರಿ ಸಂಸ್ಥೆಗಳ ಪೈಕಿ ವ್ಯವಸಾಯಗಾರರು ಆಗಾಗ್ಯೆ ಹೋಗಬೇಕಾದ್ದು ನಾಡು ಕಚೇರಿಗೆ. ಆದರಿಂದ ಅದರ ಕೆಲಸಗಳು ಎಷ್ಟೋ ನಡೆಯಲಿಕ್ಕಿವೆ.

ಒಳದೇಶ.

ಈ ವಾರ ವೀರಾಜಪೇಟೆಯಲ್ಲಿ ಭತ್ತ ಗಾಡಿಗೆ ರೂ 48 ಕ್ರಯವಿಕ್ರಯವು ತಿಳಿಯಬರುತ್ತದೆ.

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ. 27 ರಲ್ಲಿ ನಡೆಯುವುದು

ಕಳೆದ ತಾ 18 ರಿಂದ ಒಂದು ತಿಂಗಳ ರಜೆಯಲ್ಲಿದ್ದ ಚೀಫ್ ಫಾರೆಸ್ಟ್ ಆಫೀಸರಾದ ಮಿ. ಮಿಚೆಲ್‌ರವರು ಪುನಹ ಒಂದು ವಾರ ಹೆಚ್ಚಿಗೆ ರಜೆ ತೆಗೆದುಕೊಂಡಿರುವರು.

ಈಗ ಇರುವ ಖಜೇರಿಗಳೇ ಬಹು ದೂರವೆಂದು ರೈತರು ಕೂಗಿಕೊಳ್ಳುತ್ತಿರುವಾಗ್ಯ ಇರುವವುಗಳಲ್ಲಿ ಕೆಲವನ್ನು ತೆಗೆದು ಹಾಕುವದೆಂದರೆ ರೈತರನ್ನು ಮತ್ತಷ್ಟೂ ಕಷ್ಟಕ್ಕೆ ಇಳಿಸಿದಂತಾಗುವುದು ತೃಪ್ತರಾದ ರೈತರೇ ದೇಶದ ಹಾಗೂ ಸರ್ಕಾರದ ಸಿಸ್ಥಿತಿಗೆ ಕಾರಣರೆಂಬುದನ್ನು ಸರ್ಕಾರದವರು ಚೆನ್ನಾಗಿ ಅರಿತುಕೊಂಡು, ಅವರನ್ನು ವಿಶೇಷ ಅಸಮಾಧಾನಕ್ಕೆ ಈಡುಮಾಡುವ ಈ ತರಹದ ಸಿಬ್ಬಂದಿ ಯೋಜನೆಯನ್ನು ನಿಲ್ಲಿಸುವರಾಗಿ ಆಶಿಸುತ್ತೇವೆ

ಮಳೆಯ ಅಭಾವದಿಂದ ರೈತರ ಗೋಳು.

ಈ ವರ್ಷ ಕೊಡಗಿನಲ್ಲಿ ಮಡಿಕೇರಿ ಯಂಥ ಕೆಲವು ಕಡೆಗಳಿಗೆ ಮಡಿಕೇರಿ... ಸ್ವಲ್ಪ ಹೆಚ್ಚು ಮಳೆಯಾಗಿದ್ದರೂ ಒಟ್ಟು ಕೊಡಗಿನಲ್ಲಿ ಮಳೆಯ ಅಭಾವವು ಅತಿಯಾಗಿದೆಯೆಂದೇ ಹೇಳಬೇಕಾಗಿದೆ ಪ್ರಾರಂಭದ ಮಳೆಯು ಸಾಕಷ್ಟು ಬಿರುಸಾಗಿ ಬೀಳದ್ದರಿಂದ ಪೈರ್ ಹುಟ್ಟಿದ್ದು ಬಹಳ ಕಡಿಮೆಯಾಗಿದೆ ಇತ್ತೀಚೆಗೆ ಮಳೆಯು ಬಿಡುವಾಗಿ ವ್ಯವಸಾಯಕ್ಕೆ ಬಹು ತೊಂದರೆ ಉಂಟಾಗಿದೆ [illegible] ನಾಟಿ ತಾಲೋಕಿನಲ್ಲಿ, ಅದರಲ್ಲೂ ಹುತ್ತುಗಳ್ಳಿ ನಾಡಿನಲ್ಲಿ ನ್ಯಾಯವಾದ ಮಳೆ ಬೀಳದೆ ಒಂದು ತಿಂಗಳಿಗಿಂತ ಮೇಲ್ಪಟ್ಟಾಗಿದೆ ನೀರು ಇಲ್ಲದೆ ಉತ್ತ ಗದ್ದೆಗಳು ಒಣಗಿ ಹೋಗಿ ನಾಟಿ ನೆಡಲಿಕ್ಕಾಗದಿರುವುದಲ್ಲದೆ ನೆಟ್ಟ ಕೆಲವು ಗದ್ದೆಗಳೂ ಒಣಗುತ್ತಾ ಇವೆ ಇಂದು, ನಾಳೆ ಮಳೆ ಬೀಳುವದೆಂದು ರೈತರು ಇಂದು ಬಂದು ಜೀವಿಸುತ್ತಾ ಹೋಗಿರುವರು ಆ ಕಡೆ ಎಲ್ಲಿ ನೋಡಿದರೂ ವ್ಯವಸಾಯಗಾರರಲ್ಲಿ ದುಃಖಾಕಾರವುಂಟಾಗಿರುವುದು ಕೊಟ್ಟಗೇರಿ, ನಿಟ್ಟೂರು, ಬಾಳೆಲೆ ಮೊದಲಾದ ಗ್ರಾಮಗಳ ಸ್ಥಿತಿಯನ್ನು ವರ್ಣಿಸಲಸದಳವಾಗಿದೆ ರೈತರ ಈ ಕಷ್ಟದ ಸ್ಥಿತಿಯನ್ನು ಕಮಿಷನರು, ಅಸಿಸ್ಟೆಂಟ್ ಕಮಿಷನರವರೇ ಮೊದಲಾದ ಮೇಲಧಿಕಾರಿಗಳು ಈಗ ಖುದ್ದು ಹೋಗಿ ನೋಡುವುದು ಅಗತ್ಯವಾಗಿದೆ ಅಲ್ಲಿಯ ರೈತರು ಈ ಸ್ಥಿತಿಯಲ್ಲಿ ಏನು ಮಾಡಬೇಕು, ಯಾವ ತರಹದ ಕೃಷಿಯನ್ನು ಕೈಕೊಳ್ಳಬೇಕೆಂದು ಅವರಿಗೆ ಸಲಹೆಗಳನ್ನು ಕೂಡಲೆ ಕೊಡಬೇಕು. ಇಲ್ಲವಾದರೆ ಅವರ ಸ್ಥಿತಿಯು ಬಹು ಶೋಚನೀಯವಾಗುವುದು. ಅಧಿಕಾರಿಗಳು ತಮ್ಮ ಈ ಮುಖ್ಯ ಕರ್ತವ್ಯಕ್ಕೆ ಹದಿಲ ಗಮನ ಕೊಡುವರೇ?

ತಾ. 12-8-38 ರಿಂದ 19-8-38 ರ ವರೆಗೆ ಮಡಿಕೇರಿಯಲ್ಲಿ 3 ಇಂಚು 51 ಸೆಂಟು ಮಳೆಯಾಗಿದೆ ಕೊಡಗಿನ ಅನೇಕ ಭಾಗಗಳಲ್ಲಿ ಗಾಳಿ ಬಹಳ ಕಡಿಮೆಯೆಂದು ತಿಳಿಯುತ್ತೇವೆ

ಮಡಿಕೇರಿ ನಗರದ ಬಲ ಕೆರೆಗೆದಾರರ ಮತ್ತು ಮುತಸದ್ದಿಗಳ ಸಂಘದ ವಿಶೇಷ ಮಹಾಸಭೆಯು ತಾರೀಕು 27 8 38 ರಲ್ಲಿ ಕೊಡಗು ಜಮೀನ್ದಾರರ ಸಂಘದ ಹಾಲಿನಲ್ಲಿ ನಡೆಯುವದಾಗಿ ತಿಳಿಯುತ್ತೇವೆ

ಮೈಸೂರಿಂದ ತಿಮ್ಮಯ್ಯನವರ ಮಡಿಕೇರಿಯಲ್ಲಿರುವ ಬರ್ಮೊ ಶೆಲ್ ಪೆಟ್ರೋಲ್ ಪಂಪನ್ನು ಶ್ರೀ ಕೆನರಾ ಪಬ್ಲಿಕ್ ಕನ್ವೇಯನ್ಸ್ ಕಂಪನಿಯವರು ನಡಕೊಂಡು ತಾ 19-8-38 ರಿಂದ ನಡಸುತ್ತಿರುವರಾಗಿ ತಿಳಿಯಬರುತ್ತೆ

ಕೊಡಗಿನ ಬಸ್ಸ್ ಮಾಲೀಕರುಗಳ ಸಭೆಯು ಈ ತಾ 10 ರಲ್ಲಿ ಮಿ ಪಿ ಯಸ್ [illegible] ರವರ ಅಧ್ಯಕ್ಷತೆಯಲ್ಲಿ ಮಡಿಕೇರಿಯಲ್ಲಿ ನಡೆದು, ಅವರ ಸಂಘ [illegible] ಸ್ಥಾಪಿಸಲ್ಪಟ್ಟಿದೆಯಾಗಿ ತಿಳಿಯುತ್ತೇವೆ

ಮದ್ರಾಸಿನ ಡಬ್ಲ್ಯು ಆರ್ ಯಸ್ [illegible] ಸತನಾದನ ಐ ಸಿ ಯಸ್ ರವರು ಮಡಿಕೇರಿಯಲ್ಲಿರುವ ಮಿ. [illegible] ಅವರ ಕನ್ಯೆಯನ್ನು ವೃತ್ತಿಸಿ ತಮ್ಮ (ಬಿ.ಒ) ನವರನ್ನು ಲಗ್ನವಾಗುವರೆಂದು 'ಹಿಂದು' ಪತ್ರಿಕೆಯಲ್ಲಿ ಪ್ರಕಟವಾಗಿದೆ

ಪೊನ್ನಂಪೇಟೆನಾಡು ಕುಂದ ಗ್ರಾಮದ [illegible] ರವರು ತಾ. 12-8-38 ರಲ್ಲಿ ತಮ್ಮ 100 ನೇ ವಯಸಿನಲ್ಲಿ ಸ್ವರ್ಗಸ್ಥರಾದರು ಇವರಿಗೆ ಕೊಡಗು [illegible] ಎಲ್ಲಾ [illegible] ಚೆನ್ನಾಗಿ ಕಳಿಯುತ್ತಾರೆ?

ತಾ 15-8-38 ರಲ್ಲಿ [illegible] ರವಿವಾರ ಹುಬ್ಬಳಿ ಗಾಂಧಿ [illegible] ದೇವಸ್ಥಾನದಲ್ಲಿ ಕಲ್ಲು ಮಠದ ಶ್ರೀ [illegible] ಸ್ವಾಮಿಗಳ ಅಧ್ಯಕ್ಷತೆಯಲ್ಲಿ [illegible] ಯ [illegible] ರವರ [illegible] ನೇರಿ, ಕೊಡಗು [illegible] ವೀರಶೈವ [illegible] ಪ್ರಸ್ತಾಪವನ್ನು [illegible] ಸಿಸಿದರಾಗಿ [illegible] ರುತ್ತವೆ

ಶನಿವಾರಸಂತೆಯ ಗ್ರಾಮದ [illegible] ನ [illegible] ರವರು ತಾ 12-8-38 ರಲ್ಲಿ 11 ಅಡಿ ಉದ್ದದ ಒಂದು ದೊಡ್ಡ ಕಿಂಗ್ ಕೋಬ್ರಾ (ಕಾಳಿಂಗಸರ್ಪ) ಹಾವನ್ನು ಜೀವದಿಂದ ಹಿಡಿದು ತಾ 13-8-38 ರಲ್ಲಿ ಮೈಸೂರು ಲಾಲ ಭಾಗಿಗೆ ತೆಗೆದುಕೊಂಡು ಹೋಗಿರುವರೆಂಗಿ ತಿಳಿಯಬರುತ್ತೆ. ಇವರೇ ಕಳೆದ ವರ್ಷವೂ ಇಂಥಾ ಒಂದು ಹಾವನ್ನು ಹಿಡಿದಿದ್ದರು

ಹಿಂದೂದೇಶ.

ಸಂಸ್ಥೆಪುರದ ಮುನ್ಸಿಪಲ್ ಬೋರ್ಡು, ತನ್ನ ಅಧ್ಯಕ್ಷನನ್ನಾಗಿ, ಶ್ರೀ. ಭೂಪನಾರಾಯಣ ಧೋಬಿ ಎಂಬ ಹರಿಜನ ಕೊಬ್ಬರನ್ನು ಆರಿಸಿರುವುದಾಗಿ ಹಾಬ್ಬದ ವಾರ್ತೆ.

ಪಂಜಾಬ್ ಸರಕಾರದ ಬಡ್ಜೆಟ್ಟಿನಲ್ಲಿ 55 ಲಕ್ಷದ ಉಳಿತಾಯವು ಕಂಡು ಬರುತ್ತಿದ್ದು, ಅಲ್ಲಿನ ಗ್ರಾಮೋದ್ಧಾರ ಫಂಡಿಗಾಗಿ 42 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಯಿತು

ಬ್ರಿಟಿಷ್ ಸಾರ್ವಭೌಮ ದಂಪತಿಗಳು ಮೊನ್ನೆ ಮೊನ್ನೆ ಫ್ರಾನ್ಸ್ ದೇಶವನ್ನು ಸಂದರ್ಶಿಸಿದರಷ್ಟೆ! ಈ ಸಂದರ್ಶನಕ್ಕಾಗಿ ಫ್ರಾನ್ಸು ವೆಚ್ಚ ಮಾಡಿದ ಹಣ 2 ಲಕ್ಷ ಪವನುಗಳೆಂದು ತಿಳಿದುಬಂದಿದೆ

ಬಾಬು ರಾಜೇಂದ್ರ ಪ್ರಸಾದರವರು ತಿರುವನ್ನಾಮಲೆಗೆ ರಮಣ ಮಹರ್ಷಿಗಳ ಸಂದರ್ಶನಕ್ಕೆ ಹೊರಟವರು, ಬೆಜವಾಡದಲ್ಲಿ ಹಲವು ಪ್ರಮುಖರ ತನಿಕ್ಷೆಯಿಂದ ಅಲ್ಲಿಳಿದು, ಹಲವು ಸಂಸ್ಥೆಗಳನ್ನು ಸಂದರ್ಶಿಸಿದರು

ಮಧ್ಯಪ್ರಾಂತದ ಆರ್ಥಿಕ ಸಮಿತಿಯವರು, ಕೆಲಕೆಲವು ಹುದ್ದೆಗಳ ರದ್ದಿಯಿಂದ ಮೊದಲಾದುವುಗಳಿಂದ 14 ಲಕ್ಷ ರೂಪಾಯಿಗಳ ಉಳಿತಾಯವನ್ನು ತಮ್ಮ ವರದಿಯಲ್ಲಿ ಸೂಚಿಸಿ ಅದಕ್ಕೆ ತಕ್ಕಂತೆ ಶಿಫಾರಸುಗಳನ್ನೂ ಬರೆದಿರುತ್ತಾರೆ

ಸಂಯುಕ್ತ ಪ್ರಾಂತ್ಯದಲ್ಲಿ ವಿಪರೀತ ಮಳೆ, ನೆರೆಗಳಿಂದ 1,77,500 ಮಂದಿ ಮನೆಮಾರುಗಳನ್ನು ಕಳಕೊಂಡು ಅನಾಥರಾಗಿದ್ದಾರೆ ಕಾನ್ಪುರದಲ್ಲಿ ಒಂದು ಕಡೆ ಒಂದು ಮನೆ ಕುಸಿದು ಬಿದ್ದು ಇಬ್ಬರು ಹೆಂಗಸರು ಕೂಡಾ ಆರು ಮಂದಿ ಮಡಿದರು

[illegible] ಶ್ರೀ ಚತ್ರಾ [illegible] ಕೌನ್ಸಿಲಿನಲ್ಲಿ [illegible] ಗೊಳಿಸುವ ಬಗೆಗೆ [illegible] ಯೋಜನೆಯು ಸಿದ್ಧವಾಗುತ್ತಿದೆ ಎಂದೂ, ಅಲ್ಲಿನ [illegible] ಯವರು ಮೊಟ್ಟಮೊದಲಿಗೆ ವಿದ್ಯಾಭಿವೃದ್ಧಿ ಕಾರ್ಯಕ್ರಮವನ್ನು ಕೈಗೊಳ್ಳುವರೆಂದೂ ಪ್ರಕಟವಾಗಿದೆ

ಇಷ್ಟು ಜನ್ನವರ್ಗದಿಂದವರು ಪ್ಯಾರಿಸ್ ನಗರವನ್ನು ಸಂದರ್ಶಿಸಿದ್ದಾಗ, ಸುಮಾರು 15 ಲಕ್ಷ ಪವನುಗಳ ಬೆಲೆಯ ಆಭರಣಗಳನ್ನು ಅವರು ಮಡಿದ್ದರು ಇ[illegible] 'ಬ್ಲ್ಯಾಕ ಸ್ಟಾರ್' [illegible] ಸ್ಕಾಟ್‌ಲೆಂಡ್ ಯಾರ್ಡಿನ ಗುಪ್ತ ಪೋಲೀಸರು, ಈ ಆಭರಣಗಳ ಶೋಧನೆ ನಡೆಸುತ್ತಿದ್ದರು

ಇಂಡಿಯಾ ದೇಶದಲ್ಲಿ ಯಾವ ವಿಧವಾದ ಗಣಿಯೊಳಗೂ ಭೂಗರ್ಭದೊಳಗೆ ಹೆಂಗಸರು ಇಳಿದು ಕೆಲಸ ಮಾಡಲೇಕೂಡದೆಂದು ಇಂಡಿಯಾ ಸರ್ಕಾರದವರು ನಿರ್ಬಂಧದ ಕಾನೂನು ಜಾರಿಮಾಡಿರುತ್ತಾರೆ. ಈ ತೀರ್ಮಾನವನ್ನು ಇಂಡಿಯಾ ಸರ್ಕಾರದವರು ಜಿನೀವಾನಗರದಲ್ಲಿರುವ ಅಂತರ ರಾಷ್ಟ್ರೀಯ ಶ್ರಮಜೀವಿಗಳ ಕಚೇರಿಗೆ ತಿಳಿಸಿರುತ್ತಾರೆ.

ಅಪ್ಪರ್ ಇಂಡಿಯದ ಪತ್ರಿಕಾ ಉದ್ಯೋಗಿಗಳ ಸಂಘವು, ಅಲ್ಲಹಾಬಾದಿನ ತನ್ನದೊಂದು ಮೀಟಿಂಗಿನಲ್ಲಿ ಶ್ರೀ. ಜೆ. ಬಿ ಕೃಪಲಾನಿಯವರ ವರ್ತನೆಯನ್ನು ಖಂಡಿಸಿ, ಠರಾವು ಮಂಜೂರು ಮಾಡಿದೆ. ಮೋ ತಿಂಗಳಲ್ಲಿ ಮಹಮ್ಮದಾಲಿ ಪಾರ್ಕಿನಲ್ಲಿ, ಶ್ರೀ ಕೃಪಲಾನಿಯವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಜರಗಿದ್ದಾಗ ಅವರು ಪತ್ರಿಕಾ ಉದ್ಯೋಗಿಯೊಬ್ಬನನ್ನು ಅಲ್ಲಿ ಅವಮಾನಿಸಿದ್ದರೆಂಬುದೇ ಈ ಖಂಡನೆಯ ಠರಾವಿಗೆ ಮೂಲ.

ರಷ್ಯಾ ಮತ್ತು ಜಪಾನು ದೇಶಗಳು ತಮ್ಮೊಳಗೆ ತಾ 13 ರಲ್ಲಿ ಒಂದು ಒಪ್ಪಂದವನ್ನು ಮಾಡಿಕೊಂಡಿರುವರು. ಇದಕ್ಕನುಸಾರವಾಗಿ ಇಕ್ಕೆಡೆಯ ಸೈನ್ಯಗಳೂ ಹಿಂತೆಗೆಯಲ್ಪಟ್ಟಿರುವವು.

ಒಳ್ಳೆ ಸೊತ್ತುಗಳ ಹರಾಜು.

ದಕ್ಷಿಣ ಕೊಡಗು ಅಮ್ಮತ್ತಿನಾಡು ಪೊಲ್ಲಿಬೆಟ್ಟ ಗ್ರಾಮ, ಸಿದ್ದಾಪುರ ಗ್ರಾಮ ಮತ್ತು ಕರಡಿಗೋಡು ಗ್ರಾಮಗಳಲ್ಲಿರುವ ಲೇಟ್ ಟಿ ಎ ಕುಪ್ಪುಸ್ವಾಮಿಪಿಳ್ಳೆಯವರದಾಗಿದ್ದು ಬೆಂಗಳೂರು ಪಟ್ಟಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎಷ್ಯೂರೆನ್ಸ್ ಕಂಪನಿಯವರು ಕೊಡಗು ಸಬ್ ಜಡ್ಜಿಯವರ ಕೋರ್ಟ್ ಓ ಎಸ್ ನಂಬರು 32 1938 ರಲ್ಲು ಸ್ವಾಧೀನ ಹೊಂದಿದ ಸೊತ್ತುಗಳನ್ನು ಸದರಿ ಕಂಪನಿಯವರ ಪರ ಅಡ್ವೋಕೇಟ್ ಮ ಕೆ ವೆಂಕಟಗಿರಿರಾವ್ ಬಿ ಎ ಎಲ್ ಎಲ್ ಬಿ ಯವರು ಸಿದ್ದಾಪುರ ಪೇಟೆಯಲ್ಲಿ 1938 ನೇ ಇಸವಿ ಸೆಪ್ಟೆಂಬರ್ ತಾ 11 ರ ಮಧ್ಯಾಹ್ನ 1 ಗಂಟೆಗೆ ಬಹಿರಂಗವಾದ ಹರಾಜು ಮಾಡುತ್ತಾರೆ ಸೊತ್ತುಗಳ ತಪಶೀಲನ್ನು ಮತ್ತು ಹರಾಜು ಶರತುಗಳನ್ನು ಮ ಕೆ ವೆಂಕಟಗಿರಿರಾವ್, ಅಡ್ವೋಕೇಟ್, ಮಡಿಕೇರಿ, ಇವರಿಂದ ಪಡಯಬಹುದು

ಕೆ ವೆಂಕಟಗಿರಿರಾವ್,

ಬಿ ಎ ಬಿ ಎಲ್.

ಅಡ್ವೋಕೇಟ್, ಮಡಿಕೇರಿ

ಏಲಕ್ಕಿ ಗಿಡಕ್ಕೆ ಕ್ರಿಮಿಗಳ ಹಾನಿ.

[illegible] ಗಿಡಗಳಿಗೆ ದೇಶಿ ಕ್ರಿಮಿಗಳು [illegible] ಏಲಕ್ಕಿ ಕ್ರಿಮಿಗಳ ತೊಂದರೆ [illegible] ಅಭಿಪ್ರಾಯವು [illegible] ಏಲಕ್ಕಿ ಗಿಡಕ್ಕೆ [illegible] ಒಂದು ರೋಗವಿದೆಯೆಂದು ಹೇಳಲು ಸಾಕಷ್ಟು ಕಾರಣಗಳಿಲ್ಲ. ಏಲಕ್ಕಿ ಗಿಡಕ್ಕೆ ಬರುವ ಈ ನಷ್ಟಗಳು ಈಗ ಪ್ರಾರಂಭವಾದುವೆಂದು ಅಥವಾ ಉಪೇಕ್ಷಿತವಾಗಿ ಹೂರಟಿದ್ದು ದೆಂದುವಂದೂ ಹೇಳಲು ಸಾಕಷ್ಟು ಕಾರಣಗಳಿಲ್ಲ.

೧ ಸೋಮವಾರಪೇಟೆ, ಬಾಗಮಂಡಲ, ಭಾಗಮಂಡ್ಲ, ಭೀಮಕಲ್, ಸಂಪಾಜೆ, ಬಾನಡಕೊಲ್ಲಿ, ದೇವರಕೊಲ್ಲಿ, ಚೌರಿ ಮತ್ತು ಕಕ್ಕಬೆಗಳು ಮುಂತಾದ ಪಲೆಗಳನ್ನು ಅಸಿಸ್ಟೆಂಟ್ ಕೀಟಕ ವಿಜ್ಞಾನ ಶಾಸ್ತ್ರಜ್ಞರಾದ ಎನ್. ಸಿ. ಚಟರ್ಜಿಯವರೂ ಮತ್ತು ತಾನೂ 1936 ನೇ ಇಸವಿ ಸೆಪ್ಟೆಂಬರ್ 27 ರಿಂದ ಅಕ್ಟೋಬರ್ 8 ರ ವರೆಗೆ ಸಂದರ್ಶಿಸಿ ನೋಡಿದೆವು. ಅನೇಕ ವಿಧದ ಪಕ್ಷಿಗ

ಳನ್ನು ಕಂಡಿವೆ. ಆದರೆ ಇವು ಸಾಂಕ್ರಾಮಿಕ ಸಂಭವಿಸುವಂಥವಲ್ಲ. ಈ ನಷ್ಟಗಳು ಸ್ಥಳದ ವಿವಿಧ ಬೇಧ ಮತ್ತು ಬೆಳೆಯ ಪರಿಸ್ಥಿತಿಯಿಂದಾಗುವವಾಗಿದೆ. ನಮ್ಮ ಸಂದರ್ಶನದ ಸಮಯದಲ್ಲಿ ಇದ್ದ ಕ್ರಿಮಿಗಳನ್ನು ಎರಡು ಭಾಗಮಾಡಬಹುದು. (1) ತಮ್ಮ ಶೈಶವಾವಸ್ಥೆಯಲ್ಲಿ ಏಲಕ್ಕಿ ಫಲದೊಳಗೆ ವಾಸಿಸುವಂಥವು. (2) ಆನಿರೀಕ್ಷಿತವಾಗಿ ಮಳೆಗಳಿಗೆ ಬಂದು ನಾಶಪಡಿಸಿ ಬೇರೆ ಸ್ಥಳಕ್ಕೆ ಹೊರಟು ಹೋಗುವಂಥವು. ಈ ಒಂದನೇ ಭಾಗಕ್ಕೆ ಸೇರಿದ ಕೀಟಗಳೆಂದರೆ, ಏಲಕ್ಕಿ ಬೀಜದಿಂದಲೇ ಜೀವಿಸುವ ರೆಕ್ಕೆ ಹುಳ, ಹರಳೆಣ್ಣೆ ಗಿಡದಿಂದ ಮತ್ತು ಅರಸಿನ ಗಿಡಗಳಿಂದ ಹುಟ್ಟುವ ಒಂದು ತರಹದ ಕಂಬಳಿ ಹುಳ, ಇತರ ಮರಗಳ ಹೂವಿನಿಂದ ಹುಟ್ಟಿ ಏಲಕ್ಕಿ ಹೂ ಕಾಯಿಗಳನ್ನು ನಾಶಪಡಿಸುವ ಚಿಟ್ಟೆಕಂಬಳಿಹುಳ ಇವಾಗಿವೆ. ಎರಡನೇ ಭಾಗಕ್ಕೆ ಸೇರಿದ ಹುಳಗಳು ಸಾಧಾರಣವಾಗಿ ಏಲಕ್ಕಿ ಗಿಡದ ಸುತ್ತಮುತ್ತಲಿನ ಕಾಡಿನಲ್ಲಿ ಜೀವನ ನಡೆಸುತ್ತಿದ್ದು ಏಲಕ್ಕಿ ಗಿಡವು ಫಲಭರಿತವಾದಾಗ ನುಗ್ಗಿ ಕೊಳ್ಳೆ ಹೊಡೆಯುವಂತವಾಗಿವೆ. ಈವು ಏಲಕ್ಕಿ ಕಾಯಿಯಲ್ಲಿ ತೂತಗಳನ್ನು ಕೊರೆದು ಒಳಗಿನ ಬೀಜವನ್ನು ತಿಂದುಬಿಡುತ್ತವೆ. ಮಿಡಿತೆಗಳು ಈ ವರ್ಗಕ್ಕೆ ಸೇರುತ್ತವೆ. ಈ ವರ್ಗಕ್ಕೆ ಸೇರಿದ ಇನ್ನೂ ಅನೇಕ ಕ್ರಿಮಿಗಳಿವೆ.

ಒಂದನೇ ಪಂಗಡಕ್ಕೆ ಸೇರಿದ ಕ್ರಿಮಿಗಳ ಬಾಧೆ ತಪ್ಪಿಸಲು ನಿತ್ಯವೂ ಏಲಕ್ಕಿ ಗಿಡದ ಸುತ್ತು ಗುಡಿಸಿ ಕೊಳೆತ ಹಣ್ಣುಗಳನ್ನು ದೂರ ಬಿಸಾಡಿ ಹುಳಗಳ ಆಹುತಿಗೆ ಸಿಕ್ಕಿದ ಹಣ್ಣುಗಳನ್ನು ಕುಯಿದು ಬಿಸಾಡಬೇಕು. ಕೆಲವು ಕ್ರಿಮಿಗಳ ನಾಶಕ್ಕಾಗಿಯಲ್ಲಿ ಕಾಡಿನ ಮರಗಳನ್ನು ಹುಡುಕಿ ಈ ಕ್ರಿಮಿಗಳನ್ನು ಪೋಷಿಸುವ ಮರಗಳಿದ್ದರೆ ಆ ಸ್ಥಳದಲ್ಲಿ ಏಲಕ್ಕಿ ವ್ಯವಸಾಯ ಮಾಡಲೇ ಬಾರದು. ಏಲಕ್ಕಿ ಗಿಡಗಳ ಹತ್ತಿರ ಹರಳೆಣ್ಣೆ ಗಿಡಗಳನ್ನು ಇಡಕೂಡದು.

ಎರಡನೇ ಭಾಗದ ಕ್ರಿಮಿಗಳ ನಾಶಕ್ಕೆ ಏಲಕ್ಕಿ ಗಿಡದ ಸುತ್ತಮುತ್ತಲಲ್ಲಿ ಕಸ ಕಡ್ಡಿಗಳು ಬೆಳೆಯುವಂತೆ ಬಿಡಬಾರದು. ಬಿದ್ದ ತರಗೆಲೆಗಳು ಕೊಳೆತ ಇತರ ಕಸಗಳು ಈ ಹುಳಗಳ ನಿವಾಸಸ್ಥಾನವಾಗಿರುವದರಿಂದ ಇವು ಗಿಡದ ಹತ್ತಿರದಲ್ಲಿರಬಾರದು. ಇಂಥಾ ಕೊಳಕ್ಕಿಲ್ಲದ ವ್ಯವಸಾಯವು ಕ್ರಿಮಿಗಳ ಬಾಧೆಯನ್ನು ತಪ್ಪಿಸುತ್ತದೆ. ಈ ಹುಳಗಳ ಬಾಧೆಯನ್ನು ಸಮೂಲವಾಗಿ ನಾಶಪಡಿಸಬೇಕಾದರೆ ಯೋಗ್ಯ ಔಷಧಿಯನ್ನು ತುಂತುರುಗಳಾಗಿ ಗಿಡಕ್ಕೆ ಚಿಮುಕಿಸಬೇಕು. ಒಣಗಿದ ಧೂಳು ಸಿಗಿದ ಮರದ ಧೂಳು ಸಾರ್ವತ್ರಿಕ ಮಳೆ ಇಲ್ಲದಿರುವಾಗ ಕಾಯಿಗಳನ್ನು ಕಾಪಾಡಲು ಸಹಾಯಕವಾಗುತ್ತವೆ. ಕ್ರಿಮಿ ನಾಶಕ್ಕಾಗಿ ಆವಶ್ಯವಿರುವ ಆಧುನಿಕ ಔಷಧಿಗಳನ್ನು ಕಂಡುಹಿಡಿಯಬಹುದು. ಆದರೆ ವ್ಯವಸಾಯಗಾರರು ಅದನ್ನು ಉಪಯೋಗಿಸುವ ಭರವಸೆ ಇರುವ ವರೆಗೆ ಇದು ಅಸಾಧ್ಯ.

ನಾವು ಕೊಡಗಿನ ಫಾರೆಸ್ಟ್ ಇಲಾಖೆಯವರಿಗೆ ಸೂಚಿಸುವದೇನೆಂದರೆ–ಭಾಗಮಂಡಲ ಮತ್ತು ಸೋಮವಾರಪೇಟೆ ಮಳೆಗಳಲ್ಲಿ ಪರೀಕ್ಷಾಕ್ಷೇತ್ರಗಳನ್ನು ತೆರೆದು ವ್ಯವಸಾಯದ ರೀತಿಯನ್ನು ಮಳೆಗಾರರಿಗೆ ಬೋಧಿಸಬೇಕು. ಈ ಪರಿಶೋಧನಾಕ್ಷೇತ್ರಗಳಲ್ಲಿ ನಾನಾ ತರಹದ ಔಷಧಿಗಳಿಂದ ಕೂಡಿದ ದ್ರವಗಳನ್ನು ತಯಾರಿಸಿ ಗಿಡಗಳ ಮೇಲೆ ಚಿಮುಕಿಸಿ ಇಲ್ಲಿಗೆ ತಕ್ಕುದಾದ ಒಂದು ಔಷಧವನ್ನು ಪರಿಶೋಧಿಸಬೇಕು. ಮೊದಲು ಕಾಫಿ ವ್ಯವಸಾಯಕ್ಕೆ ಉಪಯೋಗಿಸುವ ದ್ರವವನ್ನು ಉಪಯೋಗಿಸುವುದು.

ಸ್ಥಳೀಯ ಉಪಯೋಗದ ಬಗ್ಗೆ ಮೈಸೂರು ಸರ್ಕಾರದ ಕೀಟಕ ವಿಜ್ಞಾನ ಶಾಸ್ತ್ರಜ್ಞರು ಕ್ರಿಮಿನಾಶಕಾ ಕೆಲಸಕ್ಕೆ ತೊಡಗಿರುವರು. ಅದೇ ಮಾದರಿಯ ಕೆಲಸವನ್ನು ಇಲ್ಲಿಯೂ ಮಾಡಿದರೆ ಅದು ಸಾಕು. ಅದು ಇಲ್ಲಿ ಸಹಕಾರಿಯಾಗುವದೆಂದು ಸೂಚಿಸುತ್ತೇನೆ.

ಕೊಡಗಿನ ಫಾರೆಸ್ಟ್ ಇಲಾಖೆಯವರು ಈ ರೀತಿ ಪರೀಕ್ಷಿಸಿ ಏಲಕ್ಕಿ ವ್ಯವಸಾಯಕ್ಕೆ ಪ್ರೋತ್ಸಾಹ ಕೊಟ್ಟು ಮುಂಬರುವ ಉತ್ಪತ್ತಿಯ ಲೆಕ್ಕವಿಟ್ಟರೆ ಆದರೆ ಕಂದಾಯ ಮಾಫಿಯ ಬಗ್ಗೆ ತೀರ್ಮಾನ ಮಾಡಲು ಅವಕ್ಕೆ ಸಾಧ್ಯವಾಗುವುದು.

ಸಿ. ಎಸ್. ಬೀಗನ್,
ಕೀಟಕ ವಿಜ್ಞಾನಿ

ಬಾತ್ಮಿ.

ಹುಡುಗಿಯರ ಶಾಲೆ.

ಆಯ್ಯಾ,

ದಕ್ಷಿಣಕೊಡಗು ತಾಲೋಕಿನ ಜನರು ವೀರಾಜಪೇಟೆಯಲ್ಲಿರುವ ಹುಡುಗಿಯರ ಶಾಲೆಯನ್ನು ತೆಗೆಯದೆ ಅದನ್ನು ಹಯರ್ ಎಲಿಮೆಂಟರಿ ತರಗತಿಗೆ ಏರಿಸಬೇಕಾಗಿಯೂ, ಈಗಿರುವ ಬೋರ್ಡಿಂಗನ್ನು ಬೇರೆ ಕಟ್ಟಡಕ್ಕೆ ವರ್ಗ ಮಾಡುವಂತೆ ಸರ್ಕಾರದವರು ಯೋಚಿಸಿರುವದನ್ನು ನಿಲ್ಲಿಸಬೇಕಾಗಿಯೂ ಮತ್ತು ಕೊಡಗಿನ ಶಾಲೆಗಳಲ್ಲೆಲ್ಲಾ ಒಂದೇ ತರದ ಪರೀಕ್ಷೆ ನಡಿಸುವ ಏರ್ಪಾಡು ಮಾಡಿ ತೀರ್ಮಾನಿಸುವಂತೆಯೂ ಕಳೆದ ಜೂನ್ ತಾರೀಕು 1ರಲ್ಲಿ ಹಜರತ್ ಚೀಫ್ ಕಮಿಷನರ್ ಸಾಹೇಬರವರ ಜನಾಬಿಗೆ ಒಂದು ಮೆಮೋರಿಯಲ್ ಜಾಹಿರ್ ಮಾಡಿಕೊಂಡರು. ಆದರೆ ಆದು ನಿತ್ಯದ ಸಂಗತಿಯಾಗಲೀ ಅಥವಾ ಅದನ್ನು ಆಲೋಚನೆ ಮಾಡುವ ಸಂಗತಿಯಾಗಲೀ ಜನರ ತಿಳುವಳಿಕೆ ಬಗ್ಗೆ ಈ ವರೆಗೂ ಯಾವ ತರದ ಹುಕುಂ ದಯಪಾಲಿಸದ್ದಕ್ಕೆ ನಾವು ತುಂಬಾ ವಿಷಾದಿಸುತ್ತೇವೆ.

ರೈತರ ಕಷ್ಟ ಸುಖಗಳನ್ನು ಸರಕಾರದೊಂದಿಗೆ ಹೇಳಿಕೊಳ್ಳುವದು ವಾಡಿಕೆ. ಆದರೆ ಹಾಗೆ ಹೇಳಿಕೊಂಡರೂ ಸರ್ಕಾರದವರು ಗಮನ ಕೊಡದಿದ್ದಲ್ಲಿ ರೈತರ ಪಾಡೇನಾಗಬೇಕೆಂಬದನ್ನು ವಿವರಿಸಬೇಕಿಲ್ಲ. ಇನ್ನಾದರೂ ಹಜರತ್ ಚೀಫ್ ಕಮಿಷನರವರು ಈ ಮೆಮೋರಿಯಲ್ ಯಾವ ಸ್ಥಿತಿಯಲ್ಲಿದೆ ಎಂಬದನ್ನು ದಯವಿಟ್ಟು ತಿಳಿಸಬೇಕಾಗಿ ಕೋರುತ್ತೇನೆ.

'ಹಿತಕಾಂಕ್ಷಿ'

ಕೊಡಗಿನಲ್ಲಿ ಉದ್ಯೋಗದ ನೇಮಕ.

ಆಯ್ಯಾ,

ಈಗ ಕೆಲವು ದಿನಗಳ ಹಿಂದೆ ಮದ್ರಾಸ್ ಸರ್ಕಾರದವರು ಇನ್ನು ಮುಂದೆ ಅವರ ಸರ್ಕಾರದಲ್ಲಿ ಉದ್ಯೋಗಕ್ಕೆ ನೇಮಕ ಹೊಂದುವವರು, ಮದ್ರಾಸಿನಲ್ಲಿ ಹುಟ್ಟಿ ಬೆಳೆದವರಾಗಬೇಕು. ಅಲ್ಲದಿದ್ದರೆ ಮದ್ರಾಸಿನಲ್ಲೇ ಹತ್ತು ವರ್ಷ ತನಕ (domicile) ವಾಸವಿದ್ದಂತವರನ್ನು ಮಾತ್ರ ನೇಮಕ ಮಾಡಬೇಕೆಂದು ಕಾನೂನು ಹೊರಡಿಸಿರುವುದು ಎಲ್ಲರ ತಿಳುವಳಿಕೆಗೆ ಬಂದಿರಬಹುದು. ಹೀಗಿರುವಾಗ ಇನ್ನು ಮುಂದೆ ನಮ್ಮ ಸರ್ಕಾರದವರು ಇದರ ವಿಷಯ ನಮ್ಮ ದೇಶದಲ್ಲೂ ಈ ಮೇಲ್ಕಂಡ ಕಾನೂನಿನಂತೆ ಪಂಗಡಿಯ ದಾಯಿ ಉದ್ಯೋಗಕ್ಕೆ ಪರಿಚಯರನ್ನು ಯಾ ದೇಶದಲ್ಲಿ ಹತ್ತು ವರ್ಷದ ತನಕ ವಾಸ ಇದ್ದವರನ್ನು ನೇಮಕ ಮಾಡಬೇಕೆಂಬದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಹಾಗೆ ದೇಶದಲ್ಲಿ ಉದ್ಯೋಗಕ್ಕೆ ತಕ್ಕ ಅರ್ಹರಾದವರನ್ನು ಸಿಕ್ಕದ ಸಂದರ್ಭದಲ್ಲಿ ಮಾತ್ರ ಬೇರೆ ಏರ್ಪಾಡು ಮಾಡಬಹುದು. ಕೊಡಗನ್ನು ಪ್ರತ್ಯೇಕವಾಗಿ ಇಟ್ಟುಕೊಳ್ಳಬೇಕೆಂಬ ಇರಾದ ಇರುವ ಪಕ್ಷದಲ್ಲಿ ಇದಕ್ಕೆ ನಮ್ಮ ದೇಶಸ್ಥರು ಹೆಚ್ಚಿನ ಗಮನ ಕೊಡುವರೆಂದು ಹಾರೈಸುವ.

'ದೇಶಾಭಿಮಾನಿ'.

ಕೊಡಗು ಪತ್ರಿಕೆಯ ತಾ. 12-8-38 ರ

ಬಸ್ಸು ಸರ್ವಿಸಿನ ಬಾತ್ಮಿಗೆ ಉತ್ತರ.

ಆಯ್ಯಾ ಹಿತಚಿಂತಕನೇ,

ನಿಮ್ಮ ಬಸ್ಸು ಸರ್ವೀಸಿನ ಲೇಖನವನ್ನು ಓದಿ ನೋಡಿದಲ್ಲಿ ನೀವು ಹಿತಚಿಂತಕನೆಂದು ಬರೆದಿದ್ದರೂ ನನ್ನ ಮನಸ್ಸಿಗೆ ನೀವು ಹೇಳಿಕೊಳ್ಳುವಂತೆ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಸ್ಥಳೀಯ ಸರ್ವಿಸಿನವರೆಂದು ತೋರುತ್ತೆ. ಪರ ಊರಿನವರು ದೇಶವನ್ನಾಕ್ರಮಿಸಿ ನಿದ್ರೆ ಬಿಡದ ಹಾಗೆ ಏನಾದರೂ ಮಂಕು ಬೂದಿ ಹಾಕಿರುವರೋ ಎಂದು ಬರೆಯುತ್ತೀರಿ. ದೇಶದವರಿಗೆ ಮಂಕುಬೂದಿ ಹಾಕಿರುವುದೋ ಅಥವಾ ಪರ ಊರಿನವರು ಸರ್ಕಾರದವರಿಗೆ ಮಂಕುಬೂದಿ ಹಾಕಿರುವುದೋ ಎಂಬ ಸಂಗತಿಯು ನಿಮ್ಮ ಲೇಖನದಲ್ಲಿ ಅರ್ಥವಾಗುವದಿಲ್ಲ. ತನಗೆ ತಾನೇ ಕೊಡೆ ಹಿಡಿಯಬೇಕೆಂದು ಬರೆಯುತ್ತೀರಿ ಅದೇನೋ ನಿಜ. ಆದರೆ ಮಳೆಯಿರುವಾಗ ಕೊಡೆಯಿಲ್ಲದ ನಿಸು ನೆನೆಯುವಂತೆ ಇನ್ನೊಬ್ಬರ ಕೊಡೆಯ ಸಹಾಯವನ್ನು ಅಪೇಕ್ಷಿಸುವದರಿಂದ ನಾಚಿಕೆಯೇನು? ಈ ರೀತಿ ಮಾಡುವುದರಿಂದ ಒಬ್ಬರಿಗೊಬ್ಬರಿಗೆ ಮಿತ್ರತ್ವವು ಹೆಚ್ಚುವುದಿಲ್ಲವೇ? ನಿಮ್ಮ ಸ್ವಾತಂತ್ರ್ಯ ಎಂಬುವಕ್ಕೆ ಅರ್ಥವೇನು. ನೀವು ಈಗ ಸ್ವತಂತ್ರರೆಂದು ತಿಳಿದುಕೊಂಡಿರುವಿರೇ? ನೀವು ಸ್ವಾತಂತ್ರ್ಯ ಕಳೆದುಕೊಂಡು 100 ವರ್ಷವಾಯಿತು. ಊರಿನವರು ಪರ ಊರಿನವರು ಎಂಬ ಬೇಧಭಾವವನ್ನಿಟ್ಟೇ ನಮ್ಮ ದೇಶದವರ ಗತಿ ಹೀಗಾಗಿರುವುದು.

ಆದಿ ಕಾವೇರಿ ಸಂಸ್ಥೆಯು ಹುಟ್ಟಿ ಮಾಯವಾಯಿತೆಂದು ಬರೆಯುತ್ತೀರಿ. ಆ ರೀತಿ ಮಾಯಮಾಡಲಿಕ್ಕೆ ನಿಮ್ಮಂಥವರು ಪ್ರಯತ್ನ ಮಾಡಿದ್ದೇನೋ ನಿಜ. ಆದರೆ ಘನಸರ್ಕಾರದವರು ದೇಶಿಯ ಸಂಸ್ಥೆ ಉಳಿಯಬೇಕೆಂದು ಮತ್ತು ಅವರಲ್ಲಿ ಹಾಲುದಾರರಾದ ದೇಶೀಯ ಜನರಿಗೆ ನಷ್ಟ ಬರಬಾರದೆಂದು ಯೋಚಿಸಿ ಸಂಸ್ಥೆಯನ್ನು ಉಳಿಸಲಿಕ್ಕೆ ದಾರಿ ಮಾಡಿದರು. ಈ ಕಾರಣ ದೈವಸಹಾಯದಿಂದ ಆದಿ ಕಾವೇರಿ ಸಂಸ್ಥೆಯು ನೀವು ತಿಳಿದುಕೊಂಡಿರುವ ರೀತಿ ಮಾಯವಾಗದೆ ಬಾಕಿಯಾಗಿದೆ. ಮತ್ತು ಇನ್ನೂ ಅನೇಕ ವರ್ಷಗಳ ವರೆಗೆ ದೇಶೀಯ ಸಂಸ್ಥೆಯಾಗಿ ನಿಲ್ಲುವುದರಲ್ಲಿ ಏನೂ ಸಂಶಯವಿಲ್ಲ. ಅದರ ಅಂತ್ಯವನ್ನು ಕಾಣಿಸಲು 'ಬೀದಿಯ ನಾಯಿಗಳು ಬೂಗಳಿಕೊಂಡ ಹಾಗೆ (ನಿಮ್ಮ ಹೇಳಿಕೆಯಂತೆಯೇ) ಬೇಡಿಕೊಂಡಿದ್ದು ನಿಜ. ಆದರೆ ಘನಸರ್ಕಾರದವರು ಬೀದಿ ನಾಯಿಗಳ ಬೂಗಳುವಿಕೆಗೆ ಮನಸ್ಸು ಕೊಡದೆ ಇದ್ದದ್ದು ನ್ಯಾಯವಾದದ್ದೆ ಸರಿ. ಹಿತಚಿಂತಕರೇ ಗುಳ್ಳೆಗಳು ಆಲಿಗಳ ಒಳಗೆ ಸೇರಿಕೊಳ್ಳುತ್ತವೆಂದು ಬರೆಯುತ್ತೀರಿ." ಅದು ಸಹಜವೇ! ಪುಣ್ಯಭೂಮಿಯಲ್ಲಿ ಹುಟ್ಟುವ ಕಾವೇರಿ ಮಾತೆಯು ಸಹ ಅರಬ್ಬಿ ಸಮುದ್ರವನ್ನು ಸೇರುವುದು ನಿಮಗೆ ತಿಳಿಯದೇ? ಇನ್ನಾದರೂ ಊರಿನವ, ಪರ ಊರಿನವ ಎಂಬ ಹುಚ್ಚು ಕನಸನ್ನು ಬಿಟ್ಟು ಬರೀ ಬಸ್ಸಿನ ಸ್ವಾತಂತ್ರ್ಯಕ್ಕೆ ಹೋರಾಡದೆ ವಿಶಾಲಹೃದಯದಿಂದ ಎಲ್ಲವನ್ನು ಶಿಕ್ಷಿಸಿ ನಾವಲ್ಲರೂ ಹಿಂದೂಸ್ಥಾನದವರೆಂದು ಯೋಚಿಸಿ ಹೆಚ್ಚಿನದಾದ ಹಿಂದೂಸ್ಥಾನದ ಸ್ವಾತಂತ್ರ್ಯಕ್ಕೆ ಪ್ರಯತ್ನ ಮಾಡಿ.

'ನಿಷ್ಪಕ್ಷಪಾತಿ.'

'ತೋಳನ ಮುಂದೆ ಕುರಿಮರಿ'

ಸಿಂಹದ ಮುಂದೆ ಯಾರು?

ಆಯ್ಯಾ,

ಈ ಬಾತ್ಮಿಯನ್ನು 'ಜನ್ಮಭೂಮಿ' ಪತ್ರಿಕೆಗೆ ಕಳುಹಿಸಿದಲ್ಲಿ ಪ್ರಕಟಿಸದ್ದರಿಂದ ನಿಮ್ಮಲ್ಲಿಗೆ ಕಳುಹಿಸಿದ್ದಾಗಿದೆ.

ಆಯ್ಯಾ ಜನ್ಮಭೂಮಿ ಸಂಪಾದಕರೇ,

ನಿಮ್ಮ ತಾ. 20-7-38 ರ ಪತ್ರಿಕೆಯಲ್ಲಿ ನಂಪೋಕ್ಲು ಆಸ್ಪತ್ರೆ ಎಂಬದಾಗಿ 'ಹಾಜರಿದ್ದ ನಾಡಿನ ಓಟರು' ಎಂಬವರ ಬಾತ್ಮಿಯನ್ನು ನೋಡಲಾಯಿತು. ಅದು ನಿಜವಲ್ಲದ ಬಾತ್ಮಿಯಾದುದರಿಂದ ಜವಾಬುಕೊಡಬೇಕಾಗಿದೆ. ಜನ್ಮಭೂಮಿಯ ಸಂಪಾದಕರೇ 'ಹಾಜರಿದ್ದ ನಾಡಿನ ಓಟರ' ಹೆಸರನ್ನು ದುರುಪಯೋಗಪಡಿಸಿಕೊಂಡು ಬರದ ಬಾತ್ಮಿ ಎಂಬದಕ್ಕೆ ಕೆಳಗೆ ರುಜುವಾತುಕೊಡುತ್ತೇನೆ. ಠರಾವು ತಂದ ಸೂಚಕರು ಕೊಟ್ಟ ಕಾರಣಗಳನ್ನೆಲ್ಲಾ ಬರೆಯಲಿಲ್ಲ. ಅವನ್ನೆಲ್ಲಾ ಇತರರ ಭಾಷಣದಲ್ಲಿ ಹಾಕಿರುತ್ತೀರಿ. ಸೂಚಕರಾದ ಮೆ. ಬಿ. ಪಿ. ಮಾಚಯ್ಯನವರು ಠರಾವನ್ನು ಸೂಚಿಸಿ ಈ ವರ್ಷದ ಬಡ್ಜೆಟಿನಲ್ಲಿ ಹಣವಿಲ್ಲದ್ದರಿಂದ ಮುಂದಿನ ವರ್ಷದ ಬಡ್ಜೆಟಿನಲ್ಲಾದರೂ ಇದನ್ನು ತಪ್ಪದೆ ಸೇರಿಸುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳಿ ವಾಪಾಸು ತೆಗೆದುಕೊಂಡದನ್ನು ಬರೆಯಲೇ ಇಲ್ಲ. 'ಅ. ಕಮಿಷನರು ಹೊಗೆ ವಾರ್ಡಿನ ವಿಷಯವಾಗಿ ಉಪಸೂಚನೆಯನ್ನು ತರುವಾಗ ಮೆ. ರಾಮಶೆಟ್ಟಿಯವರು ಹಿಂಗೆ ವಾರ್ಡಿಗೆ ಖರ್ಚಿಲ್ಲ 'ಎಂಬದಾಗಿ ಕೇಳುವಾಗ, 'ಆಕ್ಟಿಂಗ್ ಸಿವಿಲ್ ಸರ್ಜನರು ಜನರಲ್ ವಾರ್ಡಿಗಿಂತ ಇದಕ್ಕೆ ಕಮ್ಮಿ ಖರ್ಚು ಎಂಬದಾಗಿ ಮಾತ್ರ ಹೇಳಿದ್ದಕ್ಕೆ ಸಿವಿಲ್ ಸರ್ಜನರು ಪತ್ನಾಸಿಯಾಗಿಯೂ ವಗ್ಗೆಯಾಗಿಯೂ ಎಂಬದಾಗಿ' ಸೇರಿಸಿರು

ತ್ತೀರಿ. ಮೆ. ಸಿ. ಯಂ. ಪೂಣಚ್ಚನವರು ಕೊಟ್ಟ ಸೂಚನೆಯನ್ನೂ ಅವರ ಭಾಷಣವನ್ನೂ ಒಂದು ಚೂರು ನೀವು ಪ್ರಕಟಿಸಲೇ ಇಲ್ಲ. ಅದೇಕೆ? ಅದು ನಿಮ್ಮ ಅಗ್ರಲೇಖನಕ್ಕೂ,ಬಾತ್ಮಿಗೂ ಒಂದಕ್ಕೊಂದು ವಿತ್ರಾಸೆಕೊಡುವದಾಗಲೀ ಪುಷ್ಟೀಕರಿಸುವದಾಗಲೀ ಇಲ್ಲವೆಂತಲೋ? ಮುಖ್ಯ ಅವರ ಭಾಷಣದ ಮೂಲಾಧಾರವು ಒಂದೇ ಒಂದು ವಾಕ್ಯವನ್ನು ಸೇರಿಸಿದರೆ ನಿಮ್ಮ ಬಾತ್ಮಿಯ ತಿರುಳೆಲ್ಲಾ ಅದರಲ್ಲಿ ಹೊಳೆಯುತ್ತಿದೆ ಎಂಬವಕ್ಕೆ ಬಿಟ್ಟುಬಿಟ್ಟಿರುತ್ತೀರೇನು? ಅವರ ಸೂಚನೆಯನ್ನು ವಾಚಕ ಮಹಾಶಯರ ತಿಳುವಳಿಕೆ ಬಗ್ಗೆಯೂ ನಿಮ್ಮ ಬಾತ್ಮಿಯ ಅನರ್ಥವನ್ನು ಸೂಚಿಸುವ ಬಗ್ಗೆಯೂ ಕೊಡುತ್ತೇನೆ. 'ಮೆ. ಬಿ. ಪಿ. ಮಾಚ್ಚಯ್ಯನವರು ಹೇಳುವ ವಾರ್ಡಿಗೆ 4000 ರೂ. ಬೇಕಾಗುತ್ತದೆ. ಇದಕ್ಕೆ ದಿವಂಗತ ಮೆ. ಎ. ಬಿ. ಚಂಗಪ್ಪನವರು ತನ್ನ ತಂದೆ ಪಟ್ಟೆರೆಯವರು ಕಟ್ಟಿಸಿದ ಆಸ್ಪತ್ರೆಗೆ ಒಂದು ವಾರ್ಡ್ ಕಟ್ಟುವಾಗ ತಾನು ಕೊಡುವ 2000 ರೂ.ಯನ್ನು ಉಪಯೋಗಿಸಿಕೊಳ್ಳಬೇಕೆಂದು ಇಟ್ಟಿರುವ ರೂ 2000 ಯನ್ನು ಈ ಹೆರಿಗೆ ವಾರ್ಡಿಗೆ ಕೊಡುತ್ತೀರೋ ಎಂಬದಾಗಿ ರಾ. ಬಾ. ಎ ಬಿ ಚಂಗಪ್ಪನವರನ್ನು ವಿಚಾರಿಸಿ ಆ ಮೇಲೆ ಇದನ್ನು ಚರ್ಚಿಸುವ' ಎಂದರು. ಅದಕ್ಕೆ ಮೆ. ಬಿ. ಪಿ ಮಾಚ್ಚಯ್ಯನವರು ಜನರಲ್ ವಾರ್ಡಿಗಿದ್ದುಕೊಂಡು ಹೆರಿಗೆ ಏರ್ಪಾಡು ಒಳಗೊಂಡ ವಾರ್ಡಾಗಿರಬೇಕೆಂತಲೂ ಮೆ. ಎ. ಬಿ ಚಂಗಪ್ಪನವರನ್ನು ಕೇಳಬೇಕಾಗಿರುವದಿಲ್ಲವಾಗಿಯೂ, ಅವರ ಮೃತ್ಯುಪತ್ರದಾದರೂ ಒಂದು ಕಾಗದದಲ್ಲೂ ಸಹ ಅವರು ನಿರ್ಧರಿಸಿರುವದಿಲ್ಲವಾಗಿಯೂ ಹೇಳಿದರು. ಅದಕ್ಕೆ ಅಧ್ಯಕ್ಷರು ಸೂಚಕರನ್ನು ಕುರಿತು ನೀವು ಠರಾವನ್ನು ವಾಪಾಸು ತೆಗೆದುಕೊಂಡಿರುತ್ತೀರೋ ಬೋರ್ಡಿಗೆ ಬಿಡುತ್ತೀರೋ ಎಂಬದಾಗಿ ಕೇಳುವಾಗ ಅ. ಕಮಿಷನರು ಇದನ್ನು ವಾಪಾಸು ತೆಗೆದುಕೊಳ್ಳುವದು ಸರಿಯಲ್ಲವೆಂತಲೂ ವಗೈರೆಯಾಗಿ ಮಾತಾಡಿದರು. ಒಬ್ಬರು ಒಂದು ಠರಾವು ತಂದು ಅದನ್ನು ಇನ್ನೊಬ್ಬರು ಅನುಮೋದಿಸಿದರೆ ಅದನ್ನು ಯಾರಿಂದಲೂ ವಾಪಾಸು ತೆಗೆದುಕೊಳ್ಳಲು ಅಧಿಕಾರವಿಲ್ಲ ಹೌದು. ಹೀಗಿರುವಾಗ ಅದನ್ನು ವಾಪಾಸು ತೆಗೆದುಕೊಳ್ಳುತ್ತೀರೋ ಎಂಬದಾಗಿ ಕೇಳಲು ಪ್ರಸಿಡೆಂಟರಿಗಾಗಲೀ ಇನ್ನೊಬ್ಬರಿಗಾಲೀ ಅಧಿಕಾರವಿಲ್ಲ ನಿಜ. ಸೂಚಕರು ಮೊದಲೇ ಅದನ್ನು ವಾಪಾಸು ತೆಗೆದುಕೊಂಡದ್ದರ ಮೇಲೆ ಪುನಃ ಅದನ್ನು ವಾಪಾಸು ತೆಗೆದುಕೊಂಡಿರುತ್ತೀರೋ ಎಂಬದಾಗಿ ಕೇಳಲು ಮತ್ತು ಅ. ಕಮಿಶನರು ಹಾಗೆ ಕೇಳುವದು ಸರಿಯಲ್ಲವೆಂಬದಾಗಿ ಸವಿನಯದಿಂದ ಕೇಳಲು ಅವಕಾಶವಾಯಿತೇ ಹೊರತು ಅನ್ಯಥಾ ಅಲ್ಲವೆಂಬದನ್ನು ಹಾಜರಿದ್ದ ನಾಡಿನ ಓಟರೂ ಸಂಪಾದಕರೂ ಇನ್ನೊಮ್ಮೆ ತಿಳಕೊಳ್ಳಲಿ.

ಅಯ್ಯೋ ಬಾತ್ಮಿದಾರ ಸಂಪಾದಕರೇ, ಬಾತ್ಮಿದಾರರು ಬೇರೆಯವರೊಬ್ಬರಾಗಿದ್ದಾಗ್ಯೂ ಕೂಡ ನೀವು ಖುದ್ದು ಹಾಜರಿದ್ದದರಿಂದ ಮುಖ್ಯವಾದ ಸಂಗತಿಗಳು ಬಿಟ್ಟುಹೋಗಿ ಬಂದ ಬಾತ್ಮಿಯನ್ನು ಸಂಪಾದಕರಾದ ನೀವಾಗಲೀ ಇಲ್ಲವೇ ನಿಮ್ಮ ಬಾತ್ಮಿದಾರರೇ ಆಗಲೀ ಸರಿಪಡಿಸಿ ಬರೆಯಿಸಿದ್ದರಲ್ಲವೇ ಇನ್ನೊಂದು ಕಡೆಯಲ್ಲಿ ನೀವು ಹೇಳುವ ನಿಷ್ಪಕ್ಷಪಾತವನ್ನು ತೋರಿಸಿಕೊಟ್ಟಂತಾಗುತಿದ್ದದು. ಇದು ಬಹುಶಃ ನಿಮ್ಮ ನಿಷ್ಪಕ್ಷಪಾತವನ್ನು ಇನ್ನೊಬ್ಬರ ಹಿಂಬಾಲಿಸುವುದು ಎಂದರೆ ತಪ್ಪೇನು? ಹಂಪಿಯು ಅಮೋಘವನ್ನು ತಿಂದು ... ಒಪ್ಪಿದಂತಾಯಿತಲ್ಲವೇ? ಆ ಮೇಲೆ ಗಲಿಬಲಿಯಾಗಿ ಹೊರಹೋಗಿದ್ದರಿಂದ ಬರೆಯುತ್ತೀರಿ. ಇದಕ್ಕೆ ಮೊದಲು ಕಮಿಷನರ್ ಸಾಹೆಬರು ಒಬ್ಬರನ್ನು ಮಂಜೂರು ಮಾಡಬೇಕೆಂದು ಪತ್ರ ಬರೆದಾಗ್ಯೂ ಕೂಡ ಇದೇ ಮೆಂಬರುಗಳಲ್ಲವೇ ಆಗ ಕಮಿಷನರ್ ಸಾಹೇಬರು ಹಾಗೆ ಬರೆಯುವದು ಸರಿಯಲ್ಲವೆಂದೂ, ಅವರಿಗೆ ಅಧಿಕಾರವಿಲ್ಲವೆಂದೂ, ಠರಾವು ಪಾಸುಮಾಡಿ ಬಜೆಟನ್ನು ತಿರಸ್ಕರಿಸಿ ಪುನಃ ಚುನಾವಣೆಯ ಗೊಂದಲವೆದ್ದು ಪುನಃ ಇದೇ ಮೆಂಬರುಗಳು ಚುನಾಯಿಸಿ ಬಂದದ್ದೂ, ಇದರಲ್ಲಿ ನೀವು ಸಹ ಉಮೇದ್ವಾರರಾಗಿ ನಿಂತು ಅಪಜಯಹೊಂದಿದ್ದೂ, ಇಷ್ಟು ಬೇಗನೆ ನಿಮಗೆ ಮರೆತು ಹೋಯಿತೇ? ಬಜೆಟ್ಟನ್ನು ತಿರಸ್ಕರಿಸುವಾಗ ನೀವಷ್ಟು ಗಲಿಬಿಲಿ ಪಟ್ಟಿರಬೇಕು? ಇನ್ನು ತೋಳನ ಮುಂದೆ ಕುರಿಮರಿ–ಕಾಂಗ್ರೆಸೆಂದರೆ ಕಂಬತ್ತಾದರೂ ಓಟು ಕೊಡಿ ಎಗ್ಗರೆಯಾಗಿ ಬರೆಯುತ್ತೀರಿ ಇದೇ ಮೆಂಬರಾದ ಬಿ. ಪಿ ಮಾಚ್ಚಯ್ಯನವರು ಇದಕ್ಕೆ ಮೊದಲು 1930 ರಿಂದ 34 ರ ವರೆಗೆ ಮೆಂಬರಾಗಿರುವಾಗ ಇದೇ ಠರಾವನ್ನು ತಂದ ಕಮಿಷನರ್ ಸಾಹೇಬರು ಅಧ್ಯಕ್ಷರಾಗಿರುವಾಗ ಪಾಸು ಮಾಡಲಿಲ್ಲವೇ? ಈಗ ತೋಳನ ಮುಂದೆ ಕುರಿಮರಿ ಎಂದು ಹೇಳುತ್ತೀರಿ ಆಗ ಬ್ರಿಟಿಷ್ ಸಿಂಹದ ಮುಂದೆ ಯಾರಾಗಿದ್ದರು? ಆಗ ಕಂಬದಂತೆ ಕಾಂಗ್ರೆಸಿನ ಪರವಾಗಿ ಚುನಾವಣೆಯಾದರೇ? ಆಗ ಮಾಡಿದ ಅಲ್ಪ ಸೇವೆಯನ್ನರಿತೇ ಪುನಃ ಈಗಲೂ ಸಹ ಕಾಂಗ್ರೆಸಿನ ಪರ ನಿಂತು ಇಷ್ಟು ಹೆಚ್ಚಿನ ಓಟುಗಳಿಂದ ಜಯಶೀಲರಾದರೆಂದು ತಿಳಿದುಕೊಳ್ಳಿ.

ಅಯ್ಯೋ, ಹಾಜರಿದ್ದ ನಾಡಿನ ಓಟರು ಎಂದು ತಮ್ಮ ಬಾತ್ಮಿಗೆ ರುಜು ಹಾಕಿಕೊಂಡ ನಿಮ್ಮ ಚಾಣಕ್ಯತನವನ್ನು ಒಂದಾವೃತ್ತಿ ಕೊಂಡಾಡಿ ತಮ್ಮ ಬಾತ್ಮಿಯನ್ನು ಮುಗಿಸುತ್ತೇನೆ. ಈ ಠರಾವು ಚರ್ಚೆಯಾಗುವಾಗ ಪ್ರೇಕ್ಷಕರಲ್ಲಿದ್ದವರು 2 ಜನ ಮಾತ್ರ ಒಬ್ಬರು ಜನ್ಮಭೂಮಿಯ ಸಂಪಾದಕರು, ಇನ್ನೊಬ್ಬರು ಜಿಲ್ಲಾ ಕಾಂಗ್ರೆಸು ಕಮಿಟಿ ಮೆಂಬರು. ಇವರಿಬ್ಬರೂ ಈ ನಾಡಿನವರಲ್ಲ. ಕಾಂಗ್ರೆಸ್ ಕಮಿಟಿ ಮೆಂಬರರು ಎಂದೂ ನಿಜವಲ್ಲದ ಮತ್ತು ಕಾಂಗ್ರೆಸಿಗೆ ವಿರೋಧವಾಗಿ ವರ್ತಿಸುವವರಲ್ಲ. ಅವರು ನಿಮ್ಮ ಹಾಗೆ 3 ವರ್ಷಕ್ಕೆ ಜನರಿಂದ ಕೌನ್ಸಿಲಿಗೆ ಕಳುಹಿಸಿದಲ್ಲು 7 ವರ್ಷವಿದ್ದು ತಮ್ಮ ಜೊತೆಗಾರರೆಲ್ಲಾ ಒಟ್ಟಾಗಿ ಸೇರಿ ರಾಜಿನಾಮೆಯನ್ನು ಕೊಟ್ಟಾಗ್ಯೂ, ಕೂಡ ತಾವು ಕೊಡದೆ ಇನ್ನೂ ಮುಂದರಿಸಬೇಕೆಂದು ಇದ್ದವರಲ್ಲ, ಅವರು ಮಾತೃಭೂಮಿಯ ಬಂಧನ ವಿಮೋಚನೆಗಾಗಿ ಜೈಲಿಗೆ ಹೋದವರು. ಅವರು ಈ ಬಾತ್ಮಿಯನ್ನು ಬರೆದವರಲ್ಲ. ಬಾತ್ಮಿ ಬರುವದರಿಂದ ಜನ್ಮಭೂಮಿಯ ಸಂಪಾದಕರಾದ ನೀವಲ್ಲವೇ? ಅದಕೋಸ್ಕರವಲ್ಲವೇ ಬಾತ್ಮಿಗೆ ಅಗ್ರಲೇಖನದಲ್ಲು ವಕಾಲತ್ತುಸೆಕೊಟ್ಟು ಪುಷ್ಟೀಕರಿಸಿದ್ದು? ನಾಪೋಕ್ಲುನಾಡಿನ ಜನರಿಗೆ ಕಾಂಗ್ರೆಸ್ಸೆಂದರೆ ಮರದ ಕಂಬತ್ತಾದರೂ ಓಟು ಕೊಡಿ ಎಂಬದಾಗಿ ನೀವು ಬರೆಯುವದರ ಅರ್ಥವೇನು? ನಾಪೋಕ್ಲುನಾಡಿನ ಜನರಿಗೆ ನಿಮ್ಮ ಪತ್ರಿಕೆಯೊಂದೇ ವರ್ತಮಾನ ಪತ್ರಿಕೆಯೆಂದೂ ಇತರ ಪತ್ರಿಕೆಗಳನ್ನು ತರಿಸಿ ಓದಲು ಬರುವುದಿಲ್ಲವೆಂದು ತಿಳಿದಿರುವಿರೋ? ಕಾಂಗ್ರೆಸಿನ ಶಕ್ತಿಯನ್ನು ಇತರ ಪತ್ರಿಕೆಗಳಿಂದ ತಿಳಿಯಲಾರದ ಮೂಢರೆಂಬ ನಂಬಿಕೆಯನ್ನು ನೀವು ಇಟ್ಟುಕೊಂಡು ಈಗ ಕಾಂಗ್ರೆಸಿನ ಗುಟ್ಟು ಗೊತ್ತಾಯಿತೆಂದು ಪ್ರಲಾಪಿಸುತ್ತಿರುವಿರೋ? ಅಯ್ಯೋ, ಕಾಂಗ್ರೆಸಿನಲ್ಲಿ ಗುಟ್ಟು ವಿಸಿದೆ ಎಂಬದು ಪತ್ರಿಕೆಯಲ್ಲಿ ಓದುವ ಎಲ್ಲರಿಗೂ ಗೊತ್ತೇ ಇದೆ. ಕಾಂಗ್ರೆಸಿನ ವರ್ಚಸ್ಸು ಎಲ್ಲರಿಗೂ ತಿಳಿದೇ ಇದೆ. ಇನ್ನು ನಿಮ್ಮಲ್ಲಿರುವ ಗುಟ್ಟನ್ನು ರಟ್ಟು ಮಾಡಬೇಡಿ. ಇಂಥಾ ಮೂಢತನವನ್ನು ತೋರಬೇಡಿ.

ಮೊದಲು ನಮ್ಮ ರಾಜರಿಂದ ಆಳಲ್ಪಟ್ಟ ರಾಜ್ಯವನ್ನು ನಿಮ್ಮಂಥವರಲ್ಲವೇ ಪರದೇಶೀಯರಿಗೆ ದಾನ ಮಾಡಿದ್ದು. ಈಗ ಪುನಃ ದಾನ ಎರೆಯಲು ಅಖಂಡ ಶ್ರಮವಹಿಸುತ್ತಿರುವವರಲ್ಲವೇ ನೀವು? ಈಚೆಗೆ ಮಧ್ಯಸರಕಾರವು ಈ ದೇಶದ ಆದಾಯದಿಂದ ಸಾಧಾರಣ 80 ಲಕ್ಷ ರೂಗಳವರೆಗೆ ದೋಚಿಕೊಂಡು ಹೋದ ಹಣದಿಂದ ಇಂದು ತಕ್ಕಮಟ್ಟಿಗೆ ವರ್ಷಕ್ಕೆ ವಂತಿಗೆ ಹೊಂದಿಕೊಂಡು ಕೆಲವು ಮಟ್ಟಿಗೆಯಾದರೂ ಈಗ ಇರುವ ಗುಲಾಮಗಿರಿಯನ್ನು ಹೋಗಲಾಡಿಸಲು ಪ್ರಯತ್ನಪಡುವಾಗ ನೀವು ಹೊಣ ಕೈಯಲ್ಲಿ ಇರುವ ಬೆಲ್ಲವನ್ನು ತಿನ್ನಲು ಯತ್ನಿಸುವದೆಂದೂ, ಅದು ಸಿಕ್ಕುವದಲ್ಲವೆಂದೂ, ಪುಷ್ಟೀಕರಿಸಿಕೊಂಡು ಇನ್ನೂ ತಮ್ಮ ದೇಶವೆಲ್ಲಾ ಗುಲಾಮಗಿರಿಯಲ್ಲಿ ಮುಳುಗಿರಬೇಕೆಂದು ಹೋರಾಡುವವರಲ್ಲಿ ಒಬ್ಬರಲ್ಲವೇ ನೀವು? ಇನ್ನು ನಿಮ್ಮ ತಿರುಳಿಲ್ಲದ ಬಾತ್ಮಿಗೆ ಯಾವ ಜವಾಬೂ ಬರೆಯಬೇಕಿಲ್ಲ. ನಿಜಸ್ಥಿತಿಯನ್ನು ಪ್ರಕಟಿಸಿರುತ್ತೇನೆ.

ಬಿ. ಪಿ. ಮಾಚಯ್ಯ.

ದಿವಂಗತ ನಂಬುಡಮಾಡ ಮುದ್ದಯ್ಯನವರು.

(ಬರೆದು ಬಂದದ್ದು)

ಇವರು ನಮ್ಮ ಕೊಡಗು ಪ್ರಾಂತ್ಯದ ವೀರಾಜಪೇಟೆನಾಡು ಬಾಡಗ ಗ್ರಾಮದಲ್ಲಿ ಜನ್ಮವೆತ್ತಿದವರು. ಇವರು ವಿದ್ಯಾವಂತರಲ್ಲ, ಪ್ರಖ್ಯಾತಿಯನ್ನು ಹೊಂದಿದವರಲ್ಲ. ಮತ್ತು ಇವರನ್ನು ಹೆಚ್ಚು ಜನರಿಗೆ ಗೊತ್ತಿರಲಿಕ್ಕೂ ಇಲ್ಲ. ಆದರೆ ಇವರು ನಿರಂತರವೂ ದೈವಭಕ್ತಿ ಮತ್ತು ದೇವರ ಸೇವೆ ಮತ್ತು ನಾಮ ಸ್ಮರಣೆಯಲ್ಲಿಯೇ ತನ್ನ ಜನ್ಮವನ್ನು ಅಂತ್ಯಗೊಳಿಸಿದವರು. ಇವರಿಗೆ ಸುಮಾರು 28 ವರ್ಷ ಪ್ರಾಯವಿರಬಹುದು. ತನ್ನ ಈ ಜೀವನದಲ್ಲಿ ಇವರು ಹೆಚ್ಚಾಗಿ ದೇವರ ಚಿಂತೆಯಲ್ಲಿಯೇ ಮಗ್ನರಾಗಿದ್ದರು. ಬಾಲಕನಾಗಿರುವಾಗಲೇ ಇವರು ತನ್ನ ಸ್ನೇಹಿತರೊಡನೆ ಆಡುತ್ತಿರುವಾಗ ಕೆಲವು ವೇಳೆ ಅವರ ಸಂಗವನ್ನು ಬಿಟ್ಟು ತಾನೊಬ್ಬನೇ ಮರದಡಿಯಲ್ಲಿ ಕುಳಿತು ರಾಮನಾಮ ಸಂಕೀರ್ತನೆಯಲ್ಲಿ ಲೀನರಾಗಿ ಕುಣಿಯುವುದು, ನಗಾಡುವುದು, ಅಳುವುದು ಇವೇ ಅವರ ಸ್ವಭಾವದ ಚಿಹ್ನೆಗಳು. ಅವರು ಪ್ರಾಪ್ತ ವಯಸ್ಕರಾದಾಗ ದೇವರನ್ನು ಪ್ರತ್ಯಕ್ಷ ನೋಡಬೇಕೆಂಬ ಅಭಿಲಾಷೆಯು ಹೆಚ್ಚಾಯಿತು ಅಷ್ಟರಲ್ಲಿ ದೈವವಶಾತ್ ಒಬ್ಬ ಗುರುವಿನ ಸಹಾಯವು ದೊರಕಿತು. ಅವರ ಉಪದೇಶವಾಯಿತು. ನಂತರ ಶ್ರೀ ಕಾವೇರಿ ಮಾತೆಯಲ್ಲಿ ಅಧಿಕವಾದ ಭಕ್ತಿಯುಂಟಾಯಿತಲ್ಲದೆ, ಭಜನೆ ಮಾಡುವುದರಲ್ಲಿಯೂ ರಾಮಾಯಣ, ಭಾರತ ಮತ್ತು ಭಾಗವತ ಮೊದಲಾದ ವೇದಾಂತ ಪುಸ್ತಕಗಳನ್ನು ಓದುತ್ತಾ ತಮ್ಮ ಕಾಲ ಕಳೆದರು. ಹೀಗೆ ಅವರ ದೈವ ಭಕ್ತಿಯು ವಿಶೇಷವಾಗಿ ಮುಂದುವರಿಯಿತು.

ಇವರು ವರ್ಷಕ್ಕೆ ಐದಾರು ಸಾರಿ ತಲಕಾವೇರಿಗೆ ಹೋಗಿ ಅಲ್ಲಿ ಶ್ರೀ ಮಾತೆಯನ್ನು ದೃಢ ಭಕ್ತಿಯಿಂದ ಅನ್ನ ನಿದ್ರಾದಿಗಳಿಲ್ಲದೆ ಧ್ಯಾನಿಸಿ ಆ ಜಗನ್ಮಾತೆಯ ದರ್ಶನವನ್ನು ಪಡೆದರು. ಇದೆಲ್ಲಾ ಜನರಿಗೆ ಸಂಶಯವಾಗಿ ತೋರಬಹುದು. ಆದರೆ ದಿವಂಗತ ಮುದ್ದಯ್ಯನವರ ಜೀವನದ ವಿಷಯ ಅನುಭವ ಇರುವವರಿಗೆ ಇದು ಆಶ್ಚರ್ಯವಾಗಿ ತೋರುವುದಿಲ್ಲ.

ಇವರು ಈ ಸ್ಥಿತಿಯಲ್ಲಿ ಇ... ವೇಳೆಯಲ್ಲಿ ಕೊಡಗಿನಿಂದ ಕೆಲವು ಮಂದಿಯರು ತಿರುವಣ್ಣಾಮಲೆಯಲ್ಲಿರುವ ರಮಣ ಮಹರ್ಷಿಗಳ ದರ್ಶನಾರ್ಥವಾಗಿ ಹೋಗುವದರೊಡನೆ ತಾನೂ ಹೋಗಿ ಆ ಮಹಾಪುರುಷರ ದರ್ಶನವನ್ನು ಪಡೆಯಬೇಕೆಂದು ನಿರ್ಧರಿಸಿ ಕಳೆದ ಆಗೊಸ್ತು ತಾ. 3ರಲ್ಲಿ ಹೊರಟು ತಾ. 5ನೇ ಸಾಯಂಕಾಲಕ್ಕೆ ತಿರುವಣ್ಣಾಮಲೆಗೆ ತಲಪಿದರು. ಮಾರಣೆ ದಿವಸ ಅಂದರೆ ತಾ. 6ನೇ ಶನಿವಾರ ದಿನ ಮಧ್ಯಾಹ್ನ ಊಟ ತೀರಿಸಿ, ಇವರೂ, ಇವರ ಜೊತೆಯಲ್ಲಿ ಇನ್ನಿಬ್ಬರೂ ಬಟ್ಟೆ ಒಗೆದು ಸ್ನಾನ ಮಾಡಿಕೊಂಡು ಬರಲು ಆಶ್ರಮದ ಬಳಿ ಇರುವ ಕೆರೆಗೆ ಹೋದರು. ಅಲ್ಲಿ ಮುದ್ದಯ್ಯನವರು ಸ್ನಾನ ಮಾಡುತ್ತಿರುವಾಗ ಆಕಸ್ಮಾತ್ತಾಗಿ ಕೆರೆಯೊಳಗೆ ಮುಳುಗಿ ಪರಲೋಕವನ್ನೈದಿದ ಸಂಗತಿಯು ನಮಗೆಲ್ಲರಿಗೂ ವ್ಯಸನವನ್ನುಂಟುಮಾಡದಿರದು.

ಇವರು ತನ್ನ ಸಣ್ಣ ವಯಸ್ಸಿನಲ್ಲೇ ಶ್ರೇಷ್ಠ ಭಕ್ತರಾಗಿದ್ದು ಇವರಿಗೆ ಈ ತರದ ಅಕಾಲ ಮರಣ ಉಂಟಾದದ್ದು ನಮ್ಮ ದೇಶದವರಿಗೆ ದೊಡ್ಡ ನಷ್ಟವೆಂದೇ ಹೇಳಬಹುದು. ಇವರು ಮಹಾಪುರುಷ ರಮಣಮಹರ್ಷಿಗಳ ಪಾದವಡಿಯಲ್ಲಿ ಮೃತ್ಯು ಹೊಂದಿದ ಕಾರಣ ಧನ್ಯರಾದವರು. ಇವರ ಮರಣದಿಂದ ಅವರ ಮಾತಾ ಪಿತೃ ಮತ್ತು ಬಂಧು ಬಳಗದವರಿಗೆ ಉಂಟಾಗಿರುವ ದುಃಖದಲ್ಲಿ ನಾವೆಲ್ಲರೂ ಭಾಗಿಗಳಾಗಿದ್ದೇವೆ.

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ 52,54,750 ರೂ. ಭರವಸೆಯ 4689 ಪ್ರಪೋಸಲ್‌ಗಳು ಸಿಕ್ಕಿವೆ. ಅದರಲ್ಲಿ ಹಿಂದಿನ ವರ್ಷದ ಪೂರ್ತಿಯಾಗದ 1447 ಪ್ರಪೋಸಲ್‌ಗಳ ಬಾಬ್ತು 40,67,650 ರೂ. ಗಳ ಬಗ್ಗೆ ವರ್ಷಾವಧಿ 2,21,959-6-0 ರೂ. ವಿಮಾ ಕಂತು ಬರುತ್ತೆ. ಕಂಪೆನಿಯಿಂದ ಭರವಸೆ ಪಡೆದಿರುವ ಹಣ ರೂ. 39,38,150. ಬಾಕಿ ರೂ. 1,29,500 ಪುನಹ ಭರವಸೆ ಕೊಟ್ಟಿದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುವರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತಿವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ. 4,13,775 ಹೆಚ್ಚಿದೆ.

ಈ ಕೆಳಗಿನ ಒಳ್ಳೆ ಸಂಗತಿಗಳಿಂದ ಲಭಿಸಿದ ತೃಪ್ತಿಯನ್ನು ಮೆಂಬರುಗಳೊಡನೆ ಅನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯಾ ಸರ್ಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪೆನಿಗಳಿವೆಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಸೂರೆನ್ಸ್ ಈಯರ್ ಬುಕ್' ಎಂಬುವುದರಿಂದ ತಿಳಿದುಬರುತ್ತದೆ. ಈ ಕಂಪೆನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪೆನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ವರೆಗೆ ಶ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೇಯದಾಗಿದೆ. ಒಂದನೇಯದಾದ ಕಂಪೆನಿಯು ಇದಕ್ಕಿಂತ 25 ವರ್ಷಗಳ ಮುಂದೆ ಸ್ಥಾಪಿಸಲ್ಪಟ್ಟದ್ದಾಗಿದೆ.

ವಿಮಾ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮಾ ಕಂತುಗಳ ಆದಾಯವು (ಪುನಹ ಭರವಸೆ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮಾ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ವರದಿ ವರ್ಷದ ವಿಮಾ ಕಂತಿನ ಆದಾಯವು ರೂ. 3,66,198-13-0, ಗತ ವರ್ಷದ್ದು 2,36,767-6-6 ಆಗಿದೆ.

ಜೀವವಿಮಾ ಫಂಡು:—ಈ ಕಂಪೆನಿಯ ಜೀವ ವಿಮಾ ಫಂಡು ರೂ. 75,258-14-9ರಿಂದ, ವ್ಯವಸ್ಥಾ ಕ್ರಮಕ್ಕೆ ಮತ್ತು ಇತರ ಖರ್ಚಿಗಾಗಿ ರೂ. 45,037-8-4 ವಜಾ ಕಳೆದು ರೂ. 21,00,421-1-3ಕ್ಕೆ ಏರಿದೆ. ಈ ಕೆಳಗೆ ಅದರ ತಪಶೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿಮಾ ಕಂತು	ಜೀವ ವಿಮಾ ಫಂಡು
1ನೇ ವರ್ಷದ	ರೂ. 1,46,949	ರೂ. 15,619
2ನೇ ವರ್ಷದ	,, 2,36,767	,, 75,259
3ನೇ ವರ್ಷದ	,, 3,66,199	,, 2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪೆನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತ ವಿಮಾ ಕಂಪೆನಿಗಳ ವಾರ್ಷಿಕ ವೃತ್ತಾಂತದಲ್ಲಿ ಹೊಗಳಲು ಹರ್ಷವಾದದ್ದೇ ಆಗಿದೆ.

ಭಾರತ ಜೀವವಿಮಾ ಕಂಪೆನಿಗಳ ಆಕ್ಟಿನ ಮೇರೆ ಠೇವಣಾತಿ:—ಈ ಕಾನೂನು ಮೇರೆ ಠೇವಣಾತಿ ಮಾಡತಕ್ಕದಿದ್ದ ರೂ. 2 ಲಕ್ಷವನ್ನು ಪೂರ್ತಿಯಾಗಿ ಡಿಪಾಜಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷಪಡುವವರಾಗಿರುವರು.

ಸಿ. ಯಂ. ತಿಮ್ಮಯ್ಯ,

(12-11) ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

ಯೂನಾನಿ ಫಾರ್ಮಸಿಯ ಉತ್ತಮ ಔಷಧಿಗಳು.

ಉಬ್ಬಸ ಸಂಹಾರಿ (Asthma cure) ಕೆಲವು ದಿನಗಳ ಸೇವನೆಯಿಂದ ಉಬ್ಬಸವನ್ನು ಖಾತ್ರಿಯಾಗಿ ಗುಣಪಡಿಸುತ್ತದೆ. 40 ದಿನದ ಔಷಧಿಗೆ ಕ್ರಯ ರೂ. 5—12—0.

ಅಂಬರ್ ಕೊಡಲೆಣ್ಣೆ, ಸುಗಂಧಯುಕ್ತ ಆಮ್ಲ ಕೇಶ ತೈಲ ಅಲ್ಲದೆ ಎಲ್ಲಾ ರೋಗಗಳಿಗೂ ರಾಮಬಾಣದಂತಿರುವ ಮಾತ್ರೆಗಳೂ, ಚೂರ್ಣಗಳೂ, ಲೇಹಗಳೂ, ತೈಲಗಳೂ ಮತ್ತು ಕೇಶ ತೈಲಗಳೂ ಸಹ ತಯಾರಿರುವುವು.

ಬೇಗನೆ ಬರೆಯಿರಿ:—

ಯಂ. ಯಂ. ಸಿದ್ದೀಕ್,

24 ಪ್ರೊಪ್ರೈಟರ್,

ಯುನಾನಿ ಔಷಧಶಾಲಾ, ಮಡಿಕೇರಿ, ಕೊಡಗು.

ಯುದ್ಧದಲ್ಲಿ ಭಾಗವಹಿಸಬಾರದೆಂಬ ಹಿಂದೀಯರ ನಿರ್ಧಾರ!

ಕಾಂಗ್ರೆಸ್ಸು ಈ ವಿಷಯದಲ್ಲಿ ತೆಗೆದ ಉದ್ಗಾರ. ಮತಪ್ರದರ್ಶನದ ಮೂಲಭೂತ ಹಕ್ಕಿಗೆ ಗದಾಪ್ರಹಾರ.

——):(——

ಹಿಂದುಸ್ಥಾನವು ಕಳೆದ ಮಹಾ ಯುದ್ಧದಲ್ಲಿ ಬ್ರಿಟಿಷ್ ಸಾಮ್ರಾಜ್ಯವನ್ನು ಸಂರಕ್ಷಿಸುವದಕ್ಕಾಗಿ ತನ್ನ ರಕ್ತವನ್ನು ಸೂರೆ ಮಾಡಿದ್ದುಂಟು. ಸಾವಿರಾರು ಹಿಂದೀ ತರುಣರು ಮೆಸೊಪೊಟೇಮಿಯಾ ರಣಾಂಗಣಕ್ಕೆ ಧಾವಿಸಿ ಹೋಗಿ ಶೌರ್ಯದಿಂದ ಕಾದಾಡಿ ಶತ್ರುಪಕ್ಷವನ್ನು ಜರ್ಜರಿತ ಮಾಡಿರುವರು. ಲಕ್ಷಾವಧಿ ರೂಪಾಯಿಗಳು ವಾರ್ ಲೋನ್, ವಾರ್ ಬಾಂಡ್ ಮುಂತಾದ ರೂಪದಿಂದ ರಣದೇವತೆಗರ್ಪಿಸಲ್ಪಟ್ಟಿವೆ. ನಿಧವಿಧದ ತಿಂಡಿ ತಿನಸುಗಳು ಬಟ್ಟೆ ಮುಂತಾದ ಸಾಮಾನುಗಳು ಸಮರ ಭೂಮಿಗೆ ಕಳುಹಿಸಲ್ಪಟ್ಟದ್ದು ಪ್ರತಿಯೊಬ್ಬ ಭಾರತೀಯನಿಗೆ ನೆನಸಿರಲು ಸಾಕು. ಇಷ್ಟೆಲ್ಲಾ ಜನ-ಧನ ಹಾನಿಯನ್ನು ನೋಡಿ ಬ್ರಿಟಿಷ್ ಸರ್ಕಾರದ ವಿಜಯದಲ್ಲಿ ಮುಖ್ಯ ಪಾಲುಗಾರನಾಗಿರುವ ಹಿಂದೂಸ್ಥಾನಕ್ಕೆ ಈಗ ಅವರು ಕೊಟ್ಟ ಪ್ರತಿಫಲವೇನು? ಲಾರೀ ರಾಜ್ಯ, ಗೋಳೀಬಾರಿನ ಸುರಿಮಳೆ, ಶಿಕ್ಷೆಯ ಸತ್ರ; ಇಷ್ಟೆಲ್ಲ ಮುಗಿದ ಬಳಿಕ ತ್ಯಾಜ್ಯವಾದ ಈ ಹೊಸ ಸುಧಾರಣೆಗಳು! ಇವರ ಮೇಲಿಂದ ಪ್ರತಿಜ್ಞೆ, ವಿಲ್ಸನರ ತತ್ವಗಳಿಗೆ ಬ್ರಿಟಿಷರು ಎಂದೋ ತಿಲಾಂಜಲಿ ಕೊಟ್ಟಿರುವರೆಂಬುದು ಕಂಡುಬರದಿರಲಾರದು. ಬ್ರಿಟಿಷರ ಈ ಧೋರಣೆಯನ್ನು ಚೆನ್ನಾಗಿ ಅರಿತದ್ದರಿಂದಲೇ ಇನ್ನು ಮುಂದಿನ ಯುದ್ಧಗಳಲ್ಲಿ ಭಾಗವಹಿಸಬಾರದೆಂದು ಹಿಂದೀಯರು ನಿರ್ಧರಿಸಿರುವರು.

ಬ್ರಿಟಿಷ್ ಸಾಮ್ರಾಜ್ಯ ಸಂರಕ್ಷಣೆಯ ಯುದ್ಧದಲ್ಲಿ ಹಿಂದೀಯರು ಭಾಗವಹಿಸುವದರಿಂದ ಆಗುವ ಹಾನಿಯನ್ನು ತಿಳಿದೇ ಭಾರತದ ಪ್ರಮುಖ ರಾಜಕೀಯ ಸಂಸ್ಥೆಯಾದ ಕಾಂಗ್ರೆಸು ಇನ್ನು ಮುಂದೆ ಯಾವ ಯುದ್ಧದಲ್ಲಿಯೂ ಭಾಗವಹಿಸಬಾರದೆಂದು ನಿರ್ಧರಿಸಿದೆ. ಅಲ್ಲದೆ ಬ್ರಿಟಿಷ್ ಸಾಮ್ರಾಜ್ಯ ಸಂವರ್ಧನೆಗಾಗಿ ಹೂಡಿದ ಯುದ್ಧದ ವೆಚ್ಚವನ್ನು ಕೂಡ ಕೊಡಲಾರೆವೆಂದು ನಿರ್ಣಯಿಸಿದೆ. ಕಾಂಗ್ರೆಸಿನವರು ಈ ರೀತಿ ನಿರ್ಣಯ ಮಾಡಿ ಪ್ರಚಾರವನ್ನು ಮಾಡಿದುಂಟು. ಇದರ ಪರಿಣಾಮದಿಂದ ಭಾವೀ ಯುದ್ಧದಲ್ಲಿ ಹಿಂದಿಯರೇಕೆ ತಮ್ಮ ರಕ್ತವನ್ನು ಸೂರೆಮಾಡಬೇಕೆಂಬ ಧ್ವನಿ ಅಲ್ಲಲ್ಲಿ ಹೊರಡುತ್ತಿದೆ. ಬ್ರಿಟಿಷ್ ಸರ್ಕಾರದವರಿಗೆ ಇದೊಳ್ಳೆ ಅಪಥ್ಯವೆನಿಸ ಹತ್ತಿದೆ. ಹಿಂದೀಯರ ಮನೋವೃತ್ತಿಯು ಹೀಗೆಯೇ ಬದಲಾಗುತ್ತಾ ಹೋದರೆ ಮುಂದಿನ ಮಹಾ ಯುದ್ಧದಲ್ಲಿ—ಯುದ್ಧವಾಗಿಯೇ ತೀರುವದೆಂದು ಯುರೋಪಿನ ಮುತ್ಸದ್ದಿಗಳು ಮನಗಂಡಿರುವರು—ಹಿಂದೂಸ್ಥಾನದಿಂದ ಯಾವ ಬಗೆಯ ಸಹಾಯವೂ ಸಿಕ್ಕಲಾರದೆಂದು ಬ್ರಿಟಿಷರು ಭಯಭೀತರಾಗಿರುವರು. ಅಂತೆಯೇ ಈ ಮನೋವೃತ್ತಿಯನ್ನು ತಡೆಯಲು ಹಿಂದೂಸ್ಥಾನ ಸರಕಾರದ ಸೈನ್ಯ ಖಾತೆಯ ಸೆಕ್ರೆಟರಿಗಳು ಇದೀಗ ಒಂದು ಬಿಲ್ಲನ್ನು ಡಿಲ್ಲಿ ಎಸೆಂಬ್ಲಿಯಲ್ಲಿ ಮಂಡಿಸಿರುವರು.

ಭಾವೀ ಯುದ್ಧದಲ್ಲಿ ಭಾಗವಹಿಸಬೇಡಿರೆಂದು ತಮ್ಮ ಮತವನ್ನು ಪ್ರದರ್ಶಿಸುವ ಮೂಲಭೂತ ಹಕ್ಕಿನ ಮೇಲೆ ಗದಾಪ್ರಹಾರ ಮಾಡುವದಕ್ಕಾಗಿ ಫೌಜದಾರಿ ಕಾಯದೆಯಲ್ಲಿ ತಿದ್ದುಪಡಿ ಮಾಡಲು ಒಗಿಲ್ವೆ ಸಾಹೇಬರು ಹೊಸ ಬಿಲ್ಲನ್ನು ಮಂಡಿಸಿರುವರು. ಜನರು ಸೈನ್ಯದಲ್ಲಿ ಸೇರಬಾರದು, ಸೈನ್ಯ ಖಾತೆಯಲ್ಲಿ ಸೇರಿದ ಮೇಲೆ ಬಹಿಷ್ಕಾರ ಹಿಡಿಯಬೇಕು ಇಲ್ಲವೆ ಆಜ್ಞಾಭಂಗ ಮಾಡಬೇಕೆಂಬ ಭಾಷಣಗಳು ಈಗ ಹೆಚ್ಚಾಗಿದ್ದರಿಂದ ಅವನ್ನು ತಡೆಯುವದಕ್ಕಾಗಿ ಈ ತಿದ್ದುಪಡಿಯನ್ನು ಸೂಚಿಸಿರುವರಂತೆ. ವಿಶೇಷತಃ ಕಳೆದ 18 ತಿಂಗಳಲ್ಲಿಯೇ ಈ ತರದ ಭಾಷಣಗಳು ಹೆಚ್ಚಾಗಿವೆಯಂತೆ. ಎಂದರೆ ಪ್ರಾಂತಿಕ ಸ್ವಾಯತ್ತತೆಯಲ್ಲಿ ಕಾಂಗ್ರೆಸ್ ಮಂತ್ರಿಗಳು ಭಾಷಣ ಸ್ವಾತಂತ್ರ್ಯ ಕೊಟ್ಟಿದ್ದನ್ನು ಸಹಿಸಲಾರದ ಸೈನ್ಯಖಾತೆಯ ಸಕ್ರೆಟರಿಗಳು ಈ ತಿದ್ದುಪಡಿ ಸೂಚಿಸಿರಬಹುದು. ಇಂಥ ಭಾಷಣ ಮಾಡುವವರಿಗೆ ಇನ್ನು ಮುಂದೆ 2 ವರ್ಷ ಶಿಕ್ಷೆ ಮತ್ತು ದಂಡ ವಿಧಿಸಲಾಗುವದು. ಪಿನಲ್ ಕೋಡಿನಲ್ಲಿ ಬೇಕಾದಷ್ಟು ಕಲಮುಗಳಿರುವಾಗ ಈ ತಿದ್ದುಪಡಿಯ ಅವಶ್ಯಕತೆಯೇನಿದ್ದಿತೋ ತಿಳಿಯದಾಗಿದೆ. ಅಲ್ಲದೆ ಯುದ್ಧದಲ್ಲಿ ಭಾಗವಹಿಸಬೇಡಿರೆಂದು ತಮ್ಮ ಮತವನ್ನು ವ್ಯಕ್ತಪಡಿಸಿದರೆ ಅದೆಂತು ಅಪರಾಧವೆನಿಸುವದೋ? ಯಾವದೊಂದು ಯುದ್ಧದಲ್ಲಿ ಸೇರುವದು ಇಲ್ಲವೆ ಬಿಡುವದು ಆಯಾದೇಶದ ಜನಮತದ ಮೇಲೆ ಅವಲಂಬಿಸತಕ್ಕದ್ದು. ತಮಗೆ ಲಾಭಕರವಿಲ್ಲದ ಯುದ್ಧದಲ್ಲಿ ಸೇರಿ ಪ್ರಾಣಹಾನಿಮಾಡಿಕೊಳ್ಳಲಿ ಯಾರು ಸಿದ್ಧರಾಗುವರು? ಆದುದರಿಂದ ಬ್ರಿಟಿಷ್ ಸರಕಾರದವರು ಹಿಂದುಸ್ಥಾನದ ಬಗ್ಗೆ ತಮ್ಮ ಧೋರಣೆಯನ್ನೇ ಬದಲಿಸಿ ಅವರಿಗೆ ಬೇಕಾದ ಸ್ವಾತಂತ್ರ್ಯವನ್ನು ಕೊಟ್ಟು ಬಿಟ್ಟರೆ ಹಿಂದೀಯರು ಯುದ್ಧದಲ್ಲಿ ಭಾಗವಹಿಸಬಹುದು. ಬ್ರಿಟಿಷರು ಕೂಡ ಸಮಾಧಾನತೆಯಿಂದ ಸಹಾಯ ಸಹಕಾರಗಳನ್ನು ನೀಡಬಹುದು. ಅವನ್ನೆಲ್ಲ ಬಿಟ್ಟುಕೊಟ್ಟು ಮತಸ್ವಾತಂತ್ರ್ಯದಂಥ ಮೂಲಭೂತ ಹಕ್ಕಿನ ಮೇಲೆ, ಪ್ರಾಂತಿಕ ಸ್ವಾಯತ್ತತೆಯ ಈ ಯುಗದಲ್ಲಿ ಗದಾಪ್ರಹಾರ ಮಾಡುವದು ಯಾವ ರೀತಿಯಿಂದಲೂ ಯೋಗ್ಯವಾಗಲಾರದು. ಅಸೆಂಬಿಯಲ್ಲಿಯ ಎಲ್ಲ ಪಕ್ಷದ ಸದಸ್ಯರು ಈ ತಿದ್ದುಪಡಿಯನ್ನು ವಿರೋಧಿಸಿ ಅದು ಸ್ವೀಕೃತವಾಗದಂತೆ ನೋಡಿಕೊಳ್ಳುವರೆಂದು ನಂಬಿದ್ದೇವೆ.

ಸ. ಶ.

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು! ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧನ್ವಂತರಿ ಹಾಗು ಟಿಪ್ಪಣಿ ಪುಸ್ತಕವನ್ನು ಉಚಿತವಾಗಿ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52–10 ಬೆಂಗಳೂರು ಸಿಟಿ.

---

೪೨ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಿ ಕಂಪನಿ

ಸುಪ್ರಸಿದ್ಧ ಜ್ವರದ ಗುಳಿಗೆ

ಇದು ಛಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ದಿನ ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ನಾನಾತರದ ಜ್ವರಗಳ ಮೇಲೆ ತಕ್ಷಣವೇ ಗುಣ ಸಂಜೀವಿನಿಯಂತಿದೆ! ಬಾಟ್ಲಿಗೆ 1 ರೂ 4 ಬಾಟ್ಲಿಗೆ 3 ರೂ. 12 ಬಾಟ್ಲಿಗೆ 8 ರೂ ವಿ ಪಿ ಖರ್ಚು ಬೇರೆ

ಗಣೇಶ, ರಾಮಚಂದ್ರ ಕಿರ್ಕಿರೆ.
ಮತ್ತು ಕಂಪನಿ,
(52–37) ಗಿರಗಾಂವ, ಮುಂಬಯಿ ೪,

ಸೂಚನೆ.

ಈ ಕೆಳಗಿನ ಮಹನೀಯರು 'ಕೊಡಗು' [illegible] ದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡಿದ್ದು ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ [illegible] ಸಬ್ ಏಜೆಂಟರ [illegible] ಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು [illegible] ವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು [illegible] ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.
ಮ. ಮುಕ್ಕಾಟಿರ ಬೋಪಯ್ಯನವರ
ಬಾಚಮ್ಮನ ಕರ್ಣಮ್ಮನವರು

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ, ಮಂಡೇಪಂಡ ಸೋಮಯ್ಯನವರು,
ಮ ಕೆ ಯಂ ಸುಬ್ಬಯ್ಯನವರು.
ಅಮ್ಮತ್ತಿ—ಸಿದ್ದಾಪುರ— ಮ. ಐನಂಡ ಮಾದಪ್ಪನವರು
ಪೊನ್ನಂಪೇಟೆನಾಡು—ಮ ಪಿ ಜಿ ಮುದ್ದಮ್ಮಯ್ಯನವರು.
ಮಡಿಕೇರಿ—ಮ ಅಜ್ಜಮಾಡ ಮಾದಪ್ಪನವರು ಮತ್ತು ಮ.
ಜ ಮಾದಮ್ಮಯ್ಯನವರು.
ಸುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು
ಸೋಮವಾರಪೇಟೆ—ಮ ಕೆ ಮೊಗಪ್ಪನವರು.
ನಾಪೋಕ್ಲು—ಮ. ಬೆಳ್ಳಿಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)

ಸೂಚನೆ.—ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ,

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

The Bombay Mutual Life Assurance Society Ltd.,

Head Office:-BOMBAY. Estd. 1871.

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅನೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರೈಸಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರದ ಮೇಲೆ 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ದಾರರುಗಳಿಗೆ 26ರಂತೆಯೂ ಬೋನಸು ಹಂಚಲಾಗಿದೆ

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್
ಸೊಸೈಟಿ ಲಿಮಿಟೆಡ್,

12, ಸೌತ್ ಪರೇಡ್, ಬೆಂಗಳೂರು.

52 24

[ಒಕ್ಕೆ ಡಾಕ್ಟರ್] **ವೇಪ್ರಿನ್** [ರಿಜಿಸ್ಟರ್ಡ್]

ಚರ್ಮವ್ಯಾಧಿಗಳ ವೈರಿ—ಪ್ರತಿ ಒಬ್ಬರ ಸ್ನೇಹಿತ—ಸ್ವದೇಶಿ ವಸ್ತು.



ಇದರ ಲೇಪನದಿಂದ ಕಜ್ಜಿ, ಗಾಯ, ವ್ರಣ, ಇಸಬು, ಹಾದು ಮೊಡವೆ, ಸುಟ್ಟ ಗಾಯ, ಮುಖದ ಮೇಲಿನ Pimples ಮುಂತಾದವು, ಕ್ರಿಮಿ ಕಡಿತ, ಮೊದಲಾದವುಗಳು ಇಲ್ಲದಾಗುವವು. ಇದು ಸುರಿಯುತ್ತಿರುವ ರಕ್ತವನ್ನು ನಿಲ್ಲಿಸಿ ನೋವನ್ನು ನಿವಾರಿಸುವುದು. ಇಲ್ಲದೆ ಇಂದ್ರಜಾಲದೋಪಾದಿಯಲ್ಲಿ ಚರ್ಮದ ವಿಷವನ್ನು ಬಹಿರ್ಗತಗೊಳಿಸುವುದು ನಿಮ್ಮಲ್ಲಿ ಒಂದು ಬಾಟ್ಲು ಇದ್ದಲ್ಲಿ ಒಬ್ಬ ಡಾಕ್ಟರೇ ಇದ್ದಂತಾಗುವುದು ಕ್ರಯ ಬಹಳ ಸುಲಭ.

1 ಔನ್ಸ್ ಬಾಟ್ಲು 1ಕ್ಕೆ ಆಣೆ 0-8-0. ½ ಔನ್ಸ್ ಬಾಟ್ಲು 1ಕ್ಕೆ ಆಣೆ 0–4–0.

ವಿ. ಸೂ:—ಪೆಟ್ಟು ತಾಗಿದ ಸ್ಥಳದಲ್ಲಿ ವೇಪ್ರಿನ್ ಚೆನ್ನಾಗಿ ತಿಕ್ಕುವುದು. ಇಲ್ಲವೇ ಬಟ್ಟೆಯ ಮೇಲೆ ಸವರಿ ಅಂಟಿಸುವುದು. ನಂತರ ಸಾಬೂನಿನಿಂದ ಕೈ ತೊಳೆಯುವುದು. ಇದಲ್ಲದೆ ಇನ್ನೂ ಅನೇಕ ತರಹದ ಔಷಧಿಗಳು ನಮ್ಮಲ್ಲಿವೆ.

ಲಕ್ಷ್ಮೀರ್ ಮ್ಯಾನಿಫ್ಯಾಕ್ಚರಿಂಗ್ ಕಂಪೆನಿ,
ಡಿ. ಪೊ. ಬೆಂಗಳೂರು ಸಿಟಿ.

52–2 ಸೋಲ್ ಏಜೆಂಟ್:—ಹರಿದಾಸ್ ನಂಜುಂಡ ಗುಪ್ತ,
ಮಡಿಕೇರಿ, (ಕೊಡಗು).

ಸದ್ವೈದ್ಯ ಶಾಲಾ, ಸಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆಶೂಲೆಗಳಿಗೂ ಅಮೃತ ಬೆಲೆ 0-4-0, 0 2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ ಬೆಲೆ 0-4-0

ನಮ್ಮ ರಿಜಿಸ್ಟರ್ಡ್

ಸಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ ಬೆಲೆ 0-6-0, 0-4-0

ಸುಕುಮಾರತೈಲ

20

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ಇರಿತ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ ಬೆಲೆ 1 0 0

ಪ್ರೊಪ್ರೈಟರ್—ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ ವಿ ಪಂಡಿತ್.

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ಣಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ	1 ಪುಟಕ್ಕೆ	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ 180	ರೂ 55	ರೂ 35.	ರೂ 22
6 ತಿಂಗಳಿಗೆ—	,, 100	,, 35	,, 22	,, 13
3 ತಿಂಗಳಿಗೆ—	,, 60	, 20	,, 13	,, 8
1 ತಿಂಗಳಿಗೆ—	,, 25	,, 10	,, 6	,, 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವುದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪಾಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವವು

ಮೆ. ಯಂ. ಹೆಚ್. ಕೃಷ್ಣಮೂರ್ತಿ, (ಇನ್ಸ್‌ಪೆಕ್ಟರ್, ಮೈಸೂರು)

ಮೆ. ಎಲ್. ಎಫ್. ಸಿ. ವಾಸ್, (ಇನ್ಸ್‌ಪೆಕ್ಟರ್, ಮಡಿಕೇರಿ)

ಮೆ. ದಿ. ಶೇಷಾದ್ರಿ, ಅ ಇನ್ಸ್‌ಪೆಕ್ಟರು, ಶಿವಮೊಗ್ಗಾ.

52-33

Printed & Published by P I Bellıappa, at 'Kodagu' Press Mercara for 'Kodagu' Ltd.

Reg No. M. 1550

ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:— ಐ. ಬಿ. ಬೆಳ್ಯಪ್ಪ. ವಾರ್ಷಿಕ ಚಂದಾ ರೂ. ೩-೮-೦

ತಾ. ೨೬—೮—೧೯೩೮. ಸಂಪುಟ ೧೮] [ಸಂಚಿಕೆ ೧೩

THE CANARA BANKING CORPORATION, UDIPI, Ltd.

(Incorporated in British India.)
Estd. 1906.

MEMBER: { RESERVE BANK OF INDIA, & BANKERS' CLEARING HOUSE, MADRAS.

Head Office: UDIPI, S. K.

Paid up Capital ... Rs. 3,08,265
Reserves ... 3,58,942

Our Deposit Rates.

3 months	2½% p. a.
6 or 9 months	3% p. a.
12 months	3½% p. a.
SHORT TERM	2% p. a.

Branches.

1. Udipi, 2. Coondapoor, 3. Car Street, Mangalore, 4. Madras, 5. Shimoga, 6. Bunder, Mangalore, 7. Mercara, 8. Virarajendrapet, 9. Saklaspur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

BANKING BUSINESS OF EVERY DESCRIPTION TRANSACTED.

Udipi,
8th July 1938.

53-38

V. R. Kamath, B. A., LL. B.,
Manager.

The Bombay Life Assurance Company Ltd.

(Estd. 1908.)
45-47, Churchgate Street, Fort-Bombay.

Evidence of

Progress, Security and Stability.

Year.	New Business completed	Premium Income.	Life Fund	Business in force.
1931	73,00,000	11,00,000	38,00,000	2,27,00,000
1934	1,04,00,000	19,00,000	58,00,000	3,71,00,000
1937	1,40,00,000	31,00,000	90,00,000	6,00,00,000

The Company offers all that is best and up to-date in Life Assurance.
Applications for agencies will be considered from Honest and Respectable Ladies & Gentlemen.

For full particulars apply to any of our following Offices:—

KOCHIKAR & BROTHERS Ltd.,
Madras Branch Secretaries,
Post Box No. 337, Mount Road, MADRAS. [Phone No. 8245.]

5

Bombay Life Building, Udipi	Gautam Nivas, Charni Road, Girgaum, Bombay 4	Visweswarapuram Circle, Bangalore City	Puthiyara, Calicut	Car Street, Mangalore	Ottapalam S. Malabar.	Trivandrum (Travancore St.)

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,760	0	0
ಜಮೂಬಂದ ಠೇವಣಾತಿ	–	2.52.649	7	4
ವಸೂಲಾದ ಕ್ಷೇಮನಿಧಿ	–	1,36.284	9	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	14.275	9	0
ಫಿಕ್ಸ್ಡ್ ಡಿಪಾಜಿಟ್ಟು	–	37.190	15	8

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಬಡ್ಡಿಯೂ 3½ ದರದಲ್ಲಿಯೂ, ಮೂರು ಅದರ ಹೆಚ್ಚಿನ ಅವಧಿಯ ಠೇವ ಣಾತಿಗಳಿಗೆ ಶೇಕಡ ಬಡ್ಡಿಯೂ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ಕೊಡಲಾಗುತ್ತದೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ಫಿಕ್ಸ್ಡ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿದೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ಫಿಕ್ಸ್ಡ್ ಡಿಪಾಜಿಟ್ಟು ತೆಗೆದುಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಃ ತಾ. 1-8-1938ರಿಂದ ತೆಗೆದುಕೊಳ್ಳುವಂತೆ ತೀರ್ಮಾನಿಸಲಾಗಿದೆ.

ಮದ್ರಾಸ್ ಸರಕಾರದ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟ್:—ಪೇಮ್ಮಂಡ ಎ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಚೌರೀರ ಎ. ಸುಬ್ಬಣ್ಣನವರು ಬಿ. ಎ., ಬಿ. ಎಲ್.
ಸೆಕ್ರೆಟರಿ:—ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ., ಬಿ. ಎಲ್.

ತಾ. 1–8–1938

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(೧೯೨೦ನೇ ಇಸವಿಯಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಷ್ಟಕಾಲದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚೆನ್ನಾದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ!　　　　**ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊಮ್ಯುಲೇಟಿವ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ಪರಿಮಿತಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಾರ್ಕಳ ಶಾಖೆಗಳಿಂದ ತಿಳಿದುಕೊಳ್ಳಬಹುದು.

52–13　　　　**The Agricultural & Industrial Bank Ltd.**

"ZANDU"

ಝಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಆಯೋಡೈಸ್ಡ್ ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52-3)　　　　ಮತ್ತು ಆಯುರ್ವೇದ ವಿದ್ವಾನ್

ವೀರರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಪದ ಮಿಶ್ರ)

ಇದು ಎಲ್ಲಾ ಋತುವಿನಲ್ಲಿಯೂ ಉಪಯೋಗಿಸತಕ್ಕ ಉತ್ತಮವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ, ಧಾತುದೌರ್ಬಲ್ಯ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಉರಿಯುವುದು, ಮಲಬದ್ಧತೆ, ಒಳಜ್ವರ, ಅರಕ್ತತೆ ಇವುಗಳನ್ನು ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ಆಯುರ್ವೃದ್ಧಿಯನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ. 2—8—0.

ಮಲೇರಿಯಾ ನಿವಾರಿಣಿ

ಇದು ಚಳಿ ಜ್ವರ, ಚಾತುರ್ಥಿಕ ಜ್ವರ, ದಿನ ಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ, ಇನ್‌ಫ್ಲುಯೆಂಜಾ ಇತ್ಯಾದಿ ನಾನಾ ತರದ ಜ್ವರಗಳ ಮೇಲೆ ರಾಮಬಾಣ.

ಬಾಟ್ಲಿ 1ರ ರೂ. 1—8—0; ಸಣ್ಣ ಬಾಟ್ಲಿ ರೂ. 0—13—0.

ಸ್ಪ್ಲೀನ್ ಮಿಕ್ಸ್ಚರ್

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಅಶಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು.　　ಬಾಟ್ಲಿ 1ರ ರೂ. 1—2—0.

ಬಾಲಗ್ರಹ ಗುಟಿಕೆ

ಮಕ್ಕಳ ಹೊಟ್ಟೆ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಎಸ್. ಗಣಪಯ್ಯ ಎಂಡ್ ಸನ್ಸ್.

ಆಯುರ್ವೇದಿಕ್ ಫಿಜಿಸಿಯನ್ಸ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ಮಂಗಳೂರು ಸ್ಟೋರ್ಸ್, ಮಡಿಕೇರಿ. ವಿ. ಬಿ. ಕಾಮತ್, ಮಡಿಕೇರಿ. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. ಎ. ಎಸ್. ಪೂಜಯ್ಯ, ಸುಂಟಿಕೊಪ್ಪ. ಸುಂದರ್ ಪ್ರಭು, ಸುಳ್ಯ.　　[7]

'ಎಂತಹ ಅದ್ಭುತ ಪ್ರತಿಭೆ! ಓದುವುದೇದರೆ ನನ್ನ ಹತ್ತಿರಲ್ಲೊಂದಂಶವಿಲ್ಲ. ನೀರು ಕುಡಿದ ಹಾಗೆ ಪುಸ್ತಕದಲ್ಲಿರುವವುದೆಲ್ಲವನ್ನೂ ಹೇಳುತ್ತಿ! ದೇವರೆಂತಹ ಜ್ಞಾಪಕಶಕ್ತಿಯನ್ನು ನಿನಗೆ ದಯಪಾಲಿಸಿರುವನಪ್ಪಾ! ಸಾಕಲ್ಲ. ಇದಿಷ್ಟನ್ನೇ ನಾಳೆ ಪರೀಕ್ಷೆಯಲ್ಲಿ ಬರೆದರೆ? ಪ್ರಾರ್ಥನೆ ಮೊಕ್ಕಾಗೆ ನೀನಲ್ಲದೆ ಇನ್ನಾರು ಯೋಗ್ಯರು!' ಎಂದು ಚಾರುದತ್ತನು ಹೇಳುತ್ತಾ ಅಸೂಯೆ ಮಿಶ್ರಿತನಾದ ಮುಗುಳು ನಗೆಯಿಂದ ಪುಸ್ತಕವನ್ನು ಮುಚ್ಚಿದನು.

'ಅವರ ವಿಷಯ ಬಿಡಪ್ಪ! ಓದುವುದೇನು? ಶಾಲೆಯಲ್ಲಿ ಉಪಾಧ್ಯಾಯರು ವಿವರಿಸುವುದನ್ನು ಕೇಳಿದರೆ ಸಾಕು. ಅವನ ತಲೆಯು ಒಂದು ತರದ ಚಿತ್ರ ತಾಳಿಸುವ ಯಂತ್ರವೆಂದು ತೋರುತ್ತೆ. ಕೇಳಿದೆಲ್ಲಾ ಅಲ್ಲಿ ಚಿತ್ರಿಸಿ ಹೋಗುತ್ತೆ. ಅದೆಲ್ಲಾ ಇರಲಿ, ಇನ್ನು ಊಟಕ್ಕೆ ಹೋಗೋಣ ಬೇಗ ಬಂದು ಲೆಕ್ಕ ಮಾಡಬೇಕು. ಈ ಗಣಿತ ಶಾಸ್ತ್ರಕ್ಕೂ ನನಗೂ ಇದೇನೊಂದು ವೈರವೋ ಕಾಣೆ' ಎನ್ನುತ್ತಾ ರಮೇಶನು ಎದ್ದು ನಿಂತನು.

ಚಾರುದತ್ತ:-'ಅವರಲ್ಲಿ ಸುಮ್ಮನೆ ತಲೆ ಚಚ್ಚುವುದೊಂದೆ ಎಂದು ತೋರುತ್ತದೆ. ಏನಾದರೂ ಸರಿಯೆ. ಮಧ್ಯಾಹ್ನದ ಮೇಲೆ ಆಗುವಷ್ಟು ಪ್ರಯತ್ನಿಸುವ. ಈ ಹೊತ್ತು ಮಾಡಿದ್ದು ನಾಳೆಗೆ ಸರಿಯಾಗಿ ಜ್ಞಾಪಕದಲ್ಲಿರುವುದು.

ದೇವದತ್ತಾ! ಗಣಿತ ಪುಸ್ತಕಗಳನ್ನು ತಾ ಹೇಗಾದರೂ ಮಾಡಿ ನಮ್ಮನ್ನೊಂದು ಸಲ ಉದ್ಧರಿಸು.'

'ನಾನು ಮಾಡುವುದೇನು? ಎಲ್ಲಾ ದೇವರ ಕೈಯಲ್ಲಿದೆ ಹೋಗುವ, ಬೇಗ ಬರುವಿರಪ್ಪ' ಎಂದು ಮೇಲಿನ ವಿದ್ಯಾರ್ಥಿಗಳ ಹೊಗಳಿಕೆಗೆ ಪಾತ್ರನಾದ ದೇವದತ್ತನು ಹೊರಡಲುದ್ಯುಕ್ತನಾದನು.

ರಮೇಶ:-'ಬಾರದೆ ಉಂಟೆ? ಗಣಿತವನ್ನು ಇಷ್ಟರ ವರೆಗೆ ಮುಟ್ಟಲೇ ಇಲ್ಲಾ. ಅಗೋ! ಮನೋಹರನು ಈ ಕಡೆ ಬರುತ್ತಿರುವನು. ಅವನ ಪರೀಕ್ಷೆಯು ಸಹ ನಾಳೆ ಅಲ್ಲವೆ?!'

ಚಾರುದತ್ತ:-'ಹೌದು. ನಾವಿಲ್ಲಿ ನಿಂತರೆ ಮಾತಿನಲ್ಲೇ ಸಮಯ ಹಾಳಾಗುತ್ತದೆ. ಆದುದರಿಂದ ಬೇಗ ಹೊರಡುವ ದೇವದತ್ತ ಬೇಗ ಬಾ.'

ವಿದ್ಯಾರ್ಥಿಗಳು ಮೂವರೂ ಊಟಕ್ಕೆ ಹೊರಟರು. ಮನೋಹರನು ಸಮೀಪಿಸಿ, 'ಏನು ನಾನು ಬರುವುದನ್ನು ನೋಡಿ ಹೊರಟಿರಾ? ನೀವು ಕಲಿಯುವ ಸ್ಥಳಕ್ಕೆ ಇತರರು ಬರಬಾರದೆಂದೋ?'

ದೇವದತ್ತ:-'ಹಾಗಲ್ಲ. ಅತಿಥಿಗಳಾದ ನೀವು ಬಂದ ಮೇಲೆ ನಿಮ್ಮನ್ನು ಮನೆಗೆ ಕರದೊಯ್ದು ಸತ್ಕರಿಸುವುದನ್ನು ಬಿಟ್ಟು ನಾವಿಲ್ಲಿ ಓದುತ್ತಾ ಇರುವುದು ಯೋಗ್ಯವೆ! ಆದುದರಿಂದ ನಿಮ್ಮನ್ನು ಆದರಿಸುವ ನಿಮಿತ್ತ' ನಾವು ಹೊರಟದಾಯಿತು' ಎಂದು ನಕ್ಕನು.

ಮನೋಹರನು ನಕ್ಕು:-'ಹಾಗಾದರೆ ಹೋಗುವ ದಾರಿ ಬರುವರೆಲ್ಲಿಗೆ?

ಈ ವಾರದ ಕಥೆ:—

ದೇವದತ್ತ.

ಸಾಮಾಜಿಕ ಕಾದಂಬರಿ.

ಅಧ್ಯಾಯ ೧.

ನೀವು ನಿಮ್ಮ ನಿಮ್ಮ ಮನೆಗೆ ಹೊರಟಿದ್ದಿರಾ?'

ಚಾರುದತ್ತ:-'ನಿಮಗಿಷ್ಟವಿರುವಲ್ಲಿಗೆ ದಯಮಾಡಿಸಬಹುದು.'

ಮನೋಹರ:-'ಹಾಗಾದರೆ ನಿಮ್ಮಲ್ಲಿಗೆ ಬರುವೆನು ಹೋಗುವ.'

'ಹಾಗಾದರೆ ಹೋಗಿ, ನಾನು ಹೋಗುವೆನು' ಎಂದು ಹೇಳಿ ದೇವದತ್ತನು ಅವನ ಮನೆಗೆ ಹೊರಟನು. ಮನೋಹರನು ಚಾರುದತ್ತ ರಮೇಶರೊಡನೆ ಅವರ ಭವನಕ್ಕೆ ನಡೆದನು. ದಾರಿಯುದ್ದಕ್ಕೂ ನಡೆದ ಅವರ ಮಾತಿನ ವಿಷಯವು, ಮಾರನೆಯ ದಿನವೇ ಪ್ರಾರಂಭಿಸಲಿದ್ದ ಪರೀಕ್ಷೆಯೇ ಆಗಿತ್ತು.

ಮನೆಗೆ ಸೇರಿದೊಡನೆ ಊಟವಾಯಿತು. ಭೋಜನಾನಂತರ ಎಲ್ಲರೂ ಹೊರಗೆ ಬಂದು ಕುಳಿತರು.

ಚಾರುದತ್ತ:-'ನಾಳೆ ದಿವಸ ಏನು ಗತಿಯೋ ನನಗೆ ತೋರುವುದಿಲ್ಲ. ಈ ಹಾಳಾದ ಗಣಿತ ಶಾಸ್ತ್ರವನ್ನು ಯಾರು ಕಂಡು ಹಿಡಿದರೋ ಅವರಿಗೆ ಧಿಕ್ಕಾರವಿರಲಿ. ಎಷ್ಟು ಪ್ರಯತ್ನಿಸಿದರೂ ನನ್ನ ತಲೆಗೆ ಹೊಕ್ಕುವುದೇ ಇಲ್ಲ. ನಾಳೆ ಒಂದು ಲೆಕ್ಕ ಸಹ ಸರಿಯಾಗಿ ಮಾಡುತ್ತೇನೆಂಬ ಧೈರ್ಯ ನನಗಿಲ್ಲ.'

ಮನೋಹರ:-'ಗಣಿತ ಒಂದಲ್ಲದೆ ಬಾಕಿ ಎಲ್ಲದರಲ್ಲೂ ಪಾಸಾಗುವ ಧೈರ್ಯವಿದೆಯೋ ನಿನಗೆ?'

ಚಾರುದತ್ತ:-"ದೇವದತ್ತನೊಡನೆ ಸೇರಿ ಓದಿದ್ದರಿಂದ ಬಾಕಿ ಪಾಠಗಳಲ್ಲಿ ಹೇಗಾದರೂ ಮಾಡಬಹುದು. ಆದರೆ ಈ ಹಾಳಾದ ಗಣಿತದಲ್ಲಿ ಎಷ್ಟು ಹೇಳಿದರೂ ನನ್ನ ತಲೆಗೆ ಹೋಗುವುದೇ ಇಲ್ಲ. ಯಾರಾದರೂ ಪರೀಕ್ಷೆಗೆ ಬರತಕ್ಕ ಲೆಕ್ಕವನ್ನು ಮೊದಲೆ ಮಾಡಿಕೊಟ್ಟರೆ, ಅದನ್ನು ಹಾಗೆಯೇ ಪರೀಕ್ಷಾ ಕೋಣೆಗೆ ತೆಗೆದುಕೊಂಡು ಹೋಗಿ ಅಲ್ಲಿ ನಕಲು ತೆಗೆದು ಪಾಸಾಗುತ್ತಿದ್ದೆನು. ಇಲ್ಲದಿದ್ದರೆ ಇಲ್ಲಿ ಮಾಡಿದ್ದು ಸಹ ಅಲ್ಲಿ ಜ್ಞಾಪಕಕ್ಕೆ ಬರುವಂತಿಲ್ಲ.'

ಮನೋಹರ:-ನಕ್ಕು. 'ಹಾಗಾದರೆ ಗಣಿತ ಶಾಸ್ತ್ರದಲ್ಲಿ ನಿನ್ನ ಪಾಂಡಿತ್ಯವು ಶ್ಲಾಘನೀಯವಾದದ್ದೇ ಸರಿ ಗಣಿತದಲ್ಲಿ ನಿಮ್ಮೀರ್ವರನ್ನು ತೇರ್ಗಡೆಯಾಗುವ ಹಾಗೆ ಮಾಡುವುದು ನನ್ನ ಕೆಲಸ. ಇತರ ಪಾಠಗಳಲ್ಲಿ ಖಂಡಿತವಾಗಿಯೂ ತೇರ್ಗಡೆಯಾಗುತ್ತೇವೆಂದು ಭರವಸೆ ಕೊಡುವಿರಾ?

ಚಾರುದತ್ತ ಮತ್ತು ರಮೇಶ:-ಧಟ್ಟನೆ ಎದ್ದು ನಿಂತು 'ಖಂಡಿತವಾಗಿಯೂ ಗೆಲ್ಲುತ್ತೇವೆ ಆದರೆ ನೀನು ಸಹಾಯ ಮಾಡುವುದಾದರೂ ಹೇಗೆ?'

ಮನೋಹರ:-'ಅವಿರಲಿ, ನನಗೇನು ಕೊಡುವಿರಿ?

ಚಾರುದತ್ತ ಮತ್ತು ರಮೇಶ:-'ನಾವೇನು ಕೊಡಬಲ್ಲೆವು? ನಿನಗೊಂದು ದಿವಸ ತಿಂಡಿಯನ್ನು ಕೊಡುತ್ತೇವೆ' ಎಂದು ಹೇಳಿ ನಕ್ಕರು.

ಮನೋಹರ:-'ಹಾಸ್ಯವು ಸಾಕು. ಮಿರಾಯಿ ಗಿಟಾಯಿ ಮತ್ತಾಗಲಿ ಒಪ್ಪಿ ಉತ್ತೀರ್ಣರಾಗಲು ನೋಡಿ. ಆದರೆ ನೀವು ನನಗೆ ಒಂದು ಮಾತು ಕೊಡಬೇಕು' (ತಗ್ಗಿದ ಸ್ವರದಿಂದ) 'ನೀವೀ ರಹಸ್ಯವನ್ನು ಯಾರಿಗೂ ಎಂದೂ ಹೇಳಕೂಡದು. ಗುಟ್ಟೇನಾದರೂ ಬಯಲಿಗೆ ಬಿದ್ದರಾದರೆ ಪರಿಣಾಮವು ವಿಪರೀತವಾದೀತು. ನಿಮ್ಮ ಮತ್ತು ನಮ್ಮ ಪರೀಕ್ಷೆಯ ಗಣಿತ ಪ್ರಶ್ನೆ ಪತ್ರಗಳು ನನ್ನ ಕೈಸೇರಿವೆ. ನಮ್ಮ ಹೆಡ್ಮಾಸ್ಟರ ಮಗನೂ, ನಾನೂ ಪರಮ ಮಿತ್ರರು. ನಿನ್ನೆ ದಿವಸ ನನಗೆ ತಂದು ಕೊಟ್ಟನು. ಆದರೆ ಅವನಿಂದ ಅವು ದೊರೆಯಬೇಕಾದರೆ ಸುಮ್ಮನಾಗಲಿಲ್ಲ. ಗೊತ್ತಿದೆಯಲ್ಲವೆ? ಕಾಂಚಾಣಂ ಕಾರ್ಯಸಿದ್ಧಿ.'

'ನಾವು ಯಾರಿಗೂ ಹೇಳುವುದಿಲ್ಲ. ಪರೀಕ್ಷೆಯು ತೀರಿದ ಮೇಲೆ ನಮ್ಮ ವಾಗ್ದಾನವನ್ನು ಪೂರೈಸುವೆವು. ಆ ಲೆಕ್ಕಗಳನ್ನು ನೀನೇ ಮಾಡಿಯೂ ಕೊಡಬೇಕು.' ಎಂದು ಚಾರುದತ್ತನು ಹೇಳಿದನು.

ರಮೇಶ:-'ನಾವ್ಯಾರಿಗೂ ಹೇಳುವುದಿಲ್ಲ.' ದೇವದತ್ತನಿಗೊಬ್ಬನಿಗೆ ಮಾತ್ರ ಹೇಳುತ್ತೇವೆ. ಯಾಕೆಂದರೆ'..........

'ಸಾಕು ದೇವದತ್ತನಿಗೂ ಇಲ್ಲ, ಯಾವದತ್ತನಿಗೂ ಇಲ್ಲ. ಅದು ಒಬ್ಬರ ಬಾಯಿಯಿಂದ ಇನ್ನೊಬ್ಬರ ಬಾಯಿಗೆ ದಾಟಿದ್ದಾದರೆ ಪರಿಣಾಮವು ವಿಪರೀತವಾದೀತು. ತನ್ನ ತಲೆಗೆ ಕೊಡೆ ಹಿಡಿಯುವುದು ಬಿಟ್ಟು ದಾಸ ದೇವಲೋಕಕ್ಕೆ ಹಿಡಿಯುವುದಕ್ಕೆ! ಅದರಲ್ಲೂ ದೇವದತ್ತನು ನಮ್ಮ ಹಾಗೆ ದಡ್ಡನೇನೂ ಅಲ್ಲ' ಎಂದು ಸ್ವಲ್ಪ ತಿರಸ್ಕಾರ ಸ್ವರದಿಂದ ರಮೇಶನ ಮಾತನ್ನು ಅಣಕಿಸಿ ಚಾರುದತ್ತನು ಹೇಳಿದನು.

'ಹಾಗಾದರೆ ಸರಿ, ಅವನಿಗೂ ಹೇಳುವುದಿಲ್ಲ' ಎಂದು ರಮೇಶನು ಒಪ್ಪಿದನು. ಆ ಮೇಲೆ ಮನೋಹರನು ತನ್ನ ಕಿಸೆಯಿಂದ ಉದ್ದವಾದ ಪತ್ರ ಒಂದನ್ನು ತೆಗೆದು ಚಾರುದತ್ತನ ಕೈಗೆ ಕೊಟ್ಟನು. ಅದರಲ್ಲಿ ಮಾರನೆ ದಿವಸ ಪರೀಕ್ಷೆಯಲ್ಲಿ ಬರತಕ್ಕ ಲೆಕ್ಕಗಳು ವಿವರವಾಗಿ ಬರೆಯಲ್ಪಟ್ಟಿದ್ದವು. ಅವುಗಳ ಕೆಳಗೆ ಮನೋಹರನು ಎಲ್ಲರಿಗೂ ತಿಳಿಯುವ ಹಾಗೆ ಅವುಗಳನ್ನು ಮಾಡಿಯೂ ಪೂರೈಸಿದನು.

ಚಾರುದತ್ತನಿಗೆ ನಿಧಿಯೇ ಸಿಕ್ಕಿದಂತಾಯಿತು. 'ನಿನಗೆ ಸಾವಿರ ವಂದನೆಗಳು' ಎನ್ನುತ್ತಾ ಅವನು ಅದನ್ನು ಒಂದು ಪುಸ್ತಕದಲ್ಲಿಟ್ಟು ನಿಶ್ಚಿತಸ್ಥಾನಕ್ಕೆ ದೇವದತ್ತನೊಡನೆ ಓದಲು ಹೊರಡಲಿಕ್ಕೆ ಉದ್ಯುಕ್ತನಾದನು. ಮನೋಹರನು ಅವರಿಬ್ಬರಿಗೂ ಪುನಃ 'ಗುಟ್ಟು' ಎಂದು ಹೇಳಿ ಹೊರಟು ಹೋದನು.

ದಾರಿಯಲ್ಲಿ ಮನೋಹರನು ಬರುತ್ತಿರುವಾಗ್ಗೆ ದೇವದತ್ತನು ಊಟ ಮಾಡಿಕೊಂಡು ಸಂಕೇತಸ್ಥಾನಕ್ಕೆ ಓದಲಿಕ್ಕೆ ಬರುತ್ತಿದ್ದನು.

ದೇವದತ್ತ:-'ಏನು ಇಷ್ಟು ಅತುರದಿಂದ ಹೊರಟೆ? ಒಸ್ಸಿ ಸ್ವಲ್ಪ ಮಾತನಾಡೋಣ.'

ಮನೋಹರ:-'ಒದಗಲಿ. ನಿನ್ನ ಓದುಗಾರಿಕೆಯು ಹಾಳಾದೀತು. ನನಗೂ ನಾಳೆ ಪರೀಕ್ಷೆಯಲ್ಲವೆ? ಈ ದಿವಸ ಸ್ವಲ್ಪ ನೋಡಿದ್ದೆ ನಾಳೆ ಜ್ಞಾಪಕದಲ್ಲಿರುವುದು. ಅದಿರಲಿ ನಿಮ್ಮ ಓದು ಹೇಗಾಯಿತು? ನಾಳೆ ಸರಿಯಾಗಿ ಗಣಿತದಲ್ಲಿ ಉತ್ತೀರ್ಣರಾಗುವಿರೊ?'

ದೇವದತ್ತ:-'ನಾಳೆ ನನಗೆ ಸರಿಯಾದ ಭರವಸೆಯಿಲ್ಲ. ತೇರ್ಗಡೆಯಾಗುವುದರಲ್ಲಿ ಏನೂ ಸಂಶಯವಿಲ್ಲ. ಆದರೆ ಕ್ಲಾಸಿನಲ್ಲಿ ಒಂದನೆ ನಿಲ್ಲಲು ಆಗುವುದಿಲ್ಲ. ಬಾಕಿರುವ ಪಾಠಗಳಲ್ಲಿ ಹೆದರಿಕೆಯೇ ಇಲ್ಲ. ಇನ್ನಾರಿಗೂ ಪ್ರಥಮಸ್ಥಾನವನ್ನು ಬಿಡಲಾರೆನು.'

ಮನೋಹರ:-'ಖಂಡಿತವಾಗಿಯೊ'?

'ಖಂಡಿತವಾಗಿಯೂ' ಎಂದು ದೇವದತ್ತನು ಮರುನುಡಿ ಇತ್ತನು.

ಮನೋಹರ:-'ಹಾಗಾದರೆ ಗಣಿತದಲ್ಲಿಯೂ ಹೆದರಬೇಡ. ನಾಳೆ ಬರುವ ಲೆಕ್ಕಗಳು ನನಗೆ ಗೊತ್ತಿವೆ. ನಿನಗೆ ಹೇಳಿಕೊಡುತ್ತೇನೆ. ನೀನು ಮಾತ್ರ ಅವುಗಳನ್ನು ಯಾರಿಗೂ ಹೇಳಕೂಡದು.'

ದೇವದತ್ತ:-'ಚಾರುದತ್ತನಿಗೂ, ರಮೇಶನಿಗೂ ಹೇಳುತ್ತಿಯೊ?

ಮನೋಹರ:-'ಇಲ್ಲ.'

ದೇವದತ್ತ:-ಚಾರುದತ್ತನಿಗೂ, ರಮೇಶನಿಗೂ ಹೇಳಿಕೊಡಲು ನೀನು ಒಪ್ಪಿದುದಾದರೆ, ನಾನು ಅವುಗಳನ್ನು ನಿಮ್ಮಿಂದ ತೆಗೆದುಕೊಳ್ಳುತ್ತೇನೆ. ಇಲ್ಲವಾದರೆ ಬೇಡ. ನಾನು ಹೇಗಾದರೂ ತೇರ್ಗಡೆಯಾಗುವೆನು ಆ ಕಷ್ಟವಿರುವುದೇ ಅವರಿಗೆ. ಅದಲ್ಲದೆ ನಾವು ನಮ್ಮೊಳಗೆ ಒಂದು ಒಪ್ಪಂದ ಮಾಡಿಕೊಂಡಿರುತ್ತೇನೆ. ನಾವು ಮೂವರಲ್ಲಿ ಯಾರಿಗೆ ಏನು ಗೊತ್ತಾದರೂ ಅದನ್ನು ಬಚ್ಚಿಡದೆ ಪ್ರತಿಯೊಬ್ಬನಿಗೂ ತಿಳಿಸಬೇಕೆಂದು. ಈಗ ನಾನು ಆ ಒಪ್ಪಂದಕ್ಕೆ ವಿರೋಧವಾಗಿ ನಡೆಯಲಾರೆ.'

ಮನೋಹರ:-'ನಿನ್ನ ಮಾತು ಸರಿ. ನಿನ್ನ ಮನಸನ್ನು ಅರಿಯಲು ನಾನು ಹಾಗೆ ಹೇಳಿದೆನು. ಅವರಿಗೂ ಹೇಳಿದ್ದೇನೆ. ಅವರು ಯಾರಿಗೂ ಹೇಳುವದಿಲ್ಲವೆಂದು ಮಾತು ಕೊಟ್ಟಿರುವರು. ಅವರು ಆ ಮಾತನ್ನು ನಡೆಸುವರೋ ಇಲ್ಲವೋ ನೋಡುತ್ತೇನೆ. ನೀನು ಮಾತ್ರ ನಾನು ಹೇಳಿದ ಸಂಗತಿಯನ್ನು ಅವರಿಗೆ ತಿಳಿಸಬೇಡ' ಎಂದು ಹೇಳಿ ದೇವದತ್ತನಿಗೂ ಒಂದು ಪ್ರಶ್ನಾಪತ್ರವನ್ನು ಕೊಟ್ಟು ತಾನು ಹೊರಟು ಹೋದನು.

ಅಷ್ಟರಲ್ಲಿ ಚಾರುದತ್ತನು ಕೂಗಿದ್ದರಿಂದ ದೇವದತ್ತನು ಪ್ರಶ್ನಾಪತ್ರವನ್ನು ಓ

ದುವುದನ್ನು ನಿಲ್ಲಿಸಿ ಕಿಸೆಯೊಳಗೆ ಇಟ್ಟು ಓದುವ ಸ್ಥಳಕ್ಕೆ ಬಂದನು. ಚಾರುದತ್ತನು ನಸುನಗೆಯನ್ನು ಸೂಚಿಸುತ್ತಾ 'ದೇವದತ್ತಾ ನಮ್ಮ ಕೆಲಸವನ್ನು ಯೋಚಿಸುವಾಗ ನನಗೇಕೊ ನಗೆಬರುತ್ತೆ. ಲೆಕ್ಕದಲ್ಲಿ ನಮಗಿರತಕ್ಕ ಪಾಂಡಿತ್ಯವು ಗೋಳನೆ ಸರಿ. ಆದರೂ ನಾವು ಅದನ್ನು ಇಷ್ಟು ದಿವಸ ಮೂಲೆಗಿಟ್ಟು, ನಾಳೆ ಪರೀಕ್ಷೆ ಎನ್ನುವಾಗ ಇವತ್ತು ಅಭ್ಯಾಸಿಸಲು ಪ್ರಯತ್ನಿಸುವುದೆಂದರೆ ಯಾರಿಗೆ ತಾನೆ ನಗೆ ಬರದಿರುವುದು.' ಎನ್ನುತ್ತಾ ಬಲಾತ್ಕಾರದ ಒಂದು ನಾಟ್ಯನಗೆಯನ್ನು ತೋರ್ಪಡಿಸಿ, 'ಈಗ ನನ್ನ ಅಭಿಪ್ರಾಯವೇನೆಂದರೆ, ಈ ಹೊತ್ತು ಮೀರಿದ ಸಮಯದಲ್ಲಿ ಗಣಿತವನ್ನು ಮುಟ್ಟುವುದರಿಂದ ಏನು ಪ್ರಯೋಜನವಾಗಲಾರದು. ಬರೀ ಸಮಯ ಹಾಳುಮಾಡಿದಂತಾಗುವುದು. ಅದ ಕಾರಣ ಈ ಪರೀಕ್ಷೆಗೆ ಗಣಿತದ ಗೊಡವೆಯೇ ಬೇಡ. ಅದಂತಾಗಲಿ ನಾಳೆ ಏನಾದರೂ ಗೊತ್ತಾದರೆ ಪ್ರಯತ್ನಿಸುವ, ಇಲ್ಲದಿದ್ದರೆ ಹಾಗೆಯೇ ಎದ್ದು ಹೊರಟು ಹೋಗುವ ಬೇರೆ ಇರುವ ಪಾಠಗಳಲ್ಲಿ ಆಗುವಷ್ಟು ಪ್ರಯತ್ನ ಮಾಡುವ. ನಿನ್ನ ಅಭಿಪ್ರಾಯ ಹೇಗೆ ರಮೇಶ?' ಎಂದು ಅವನನ್ನು ನೋಡಿ ಕಣ್ಣು ಮುಚ್ಚಿದನು.

ರಮೇಶನು:-'ಅದೇ ಒಳ್ಳೆದಾಗಿ ಕಾಣುತ್ತದೆ. ನಿನ್ನ ಅಭಿಪ್ರಾಯವೇನು ದೇವದತ್ತ' ಎಂದು ಕೇಳಿದನು.

ದೇವದತ್ತ:-'ನಿಮ್ಮ ಮಾತುಗಳೇಕೋ ನನಗೆ ಆಶ್ಚರ್ಯವನ್ನುಂಟುಮಾಡುವಂತೆ ಕಾಣುತ್ತವೆ. 'ಗಣಿತ ಮುಟ್ಟಲಿಲ್ಲ, ಗಣಿತ ಮುಟ್ಟಲಿಲ್ಲ' ಎಂದು ಕೂಗುತ್ತಿದ್ದ ನೀವು ಇಷ್ಟೊಂದು ಹೊತ್ತಿನಲ್ಲಿ ನಿಮ್ಮ ಮನಸ್ಸನ್ನು ಹೀಗೆ ಒತ್ತಡನೆ ಬದಲಾಯಿಸಲು ಕಾರಣವೇನು? ಮನೋಹರನೇನಾದರೂ ನಾಳೆ ಬರತಕ್ಕ ಪ್ರಶ್ನೆಯನ್ನು ನಿಮಗೆ ಹೇಳಿಕೊಟ್ಟನೆ?' ಎನ್ನುತ್ತಾ ಹಸನ್ಮುಖನಾಗಿ, ದೇವದತ್ತನು ತಾನು ತಂದಿದ್ದ ಪುಸ್ತಕಗಳನ್ನು ಮೇಜಿನ ಮೇಲೆಸೆದನು.

ರಮೇಶನ ಮುಖವು ತಕ್ಷಣವೆ ವಿವರ್ಣವಾಯಿತು. ಅವನು ಚಾರುದತ್ತನ ಮುಖವನ್ನು ನೋಡಿದನು. ಕೂಡಲೇ ಉಪಾಯಪರನಾದ ಚಾರುದತ್ತನು ಬಲವಾಗಿ ನಕ್ಕು 'ಏನು? ದೇವಾ! ನಾವೇನು ಅಷ್ಟು ಪುಣ್ಯವಂತರೆ? ಅಂತಹ ಭಾಗ್ಯವು ನಮಗಲ್ಲಿಂದ ಬಂದೀತು? ಮನೋಹರನು ನಮ್ಮ ಅಮ್ಮನ ಹತ್ತಿರ ಏನೋ ಮಾತು ಹೇಳಲು ಬಂದಿದ್ದನು. ಆತನೇನಾದರೂ ಹೇಳಿದ್ದರೆ ಅವನ್ನು ನಿನ್ನಿಂದ ಮರೆಮಾಚುವೆನೆ? ಇಷ್ಟಾಗಿಯೂ ಸಂಶಯವೇ?' ರಮೇಶನ ಕಡೆಗೆ ತಿರುಗಿ 'ರಮೇಶ ನಮ್ಮ ನಡವಳಿಕೆಯೇ ಬೇರೆ. ಈತನದೇ ಬೇರೆ. ನಾವಿವನನ್ನು ಸಂಪೂರ್ಣವಾಗಿ ನಂಬಿರುತ್ತೇವೆ. ಇವನಿಗೆ ಮಾತ್ರ ನಮ್ಮಲ್ಲಿ ಪೂರ್ಣ ನಂಬಿಗೆ ಇನ್ನೂ ಇಲ್ಲ. ಮನೋಹರನನ್ನು ಕಾಣಲಿಲ್ಲವೇ? ಹಾಗಿದ್ದರೆ ಅವನು ನಿನಗೆ ಮಾತ್ರ ತಿಳಿಸದಿರುವನೆ?' ಎಂದು ಹೇಳಿ ದೇವದತ್ತನ ಮುಖವನ್ನೇ ನೋಡಿದನು.

ದೇವದತ್ತ:-ನಾನು ಅವನನ್ನು ನೋಡಿದೆನು. ಮಾತಾಡುತ್ತಿರುವಷ್ಟರಲ್ಲಿ ನೀವು ಕೂಗಿದ್ದರಿಂದ ನಾನು ಒಡನೆ ಬಂದೆನು. ನಾನು ಹಾಸ್ಯಮಾಡಿದೆನಷ್ಟೆ. ಗಣಿತವನ್ನು ಮುಟ್ಟುವುದು ನಿಷ್ಪ್ರಯೋಜನವಾದರೆ ಸಮಯವನ್ನು ಹಾಳುಮಾಡುವುದೇತಕ್ಕೆ? ಆದರೆ ಒಂದು ಲೆಕ್ಕವನ್ನು ಮಾಡುವ. ಉಪಾಧ್ಯಾಯರು ಕ್ಲಾಸಿನಲ್ಲಿ ಮೂರು ನಾಲ್ಕು ಸಾರಿ ಒತ್ತಿ ಒತ್ತಿ ಹೇಳಿರುತ್ತಾರೆ. ಆ ಜಾತಿಯ ಲೆಕ್ಕವೇತಕ್ಕೋ ನನಗೆ ಸರಿಯಾಗಿ ಬರುವದಿಲ್ಲ. ರಮೇಶನಿಗೆ ಗೊತ್ತಿದೆ.' ಎನ್ನುತ್ತಾ ಪುಸ್ತಕದ ಹಾಳೆಯನ್ನು ಮಗುಚಿ ಒಂದು ಎಣ್ಣೆ ಅಳತೆ ಸಮ್ಮಂಧವಾದ ಲೆಕ್ಕವನ್ನು ತೋರಿಸಿದನು. ಮನೋಹರನು ಕೊಟ್ಟಿದ್ದ ಲೆಕ್ಕಗಳ ಪೈಕಿ ಅದು ಒಂದಾಗಿತ್ತು.

ಚಾರುದತ್ತನು ಅವನ್ನು ಕಂಡೊಡನೆ ರಮೇಶನ ಮುಖವನ್ನು ನೋಡಿದನು. ಅವನೇನೊ ಸಂಜ್ಞೆಯನ್ನು ಮಾಡಿದನು. ದೇವದತ್ತನಿಗೆ ಪ್ರಶ್ನೆಗಳು ಗೊತ್ತಿಲ್ಲವೆಂಬುದು ಈಗ ಚಾರುದತ್ತನಿಗೆ ವ್ಯಕ್ತವಾಯಿತು. ಯಾತಕ್ಕೆಂದರೆ, ಗೊತ್ತಿದ್ದ ಪಕ್ಷದಲ್ಲಿ ಅವನು ಆ ಲೆಕ್ಕವನ್ನು ನಮಗೆ ತೋರಿಸಿಕೊಡುತ್ತಿರಲಿಲ್ಲವೆಂಬುದೇ ಅವನ ಅಭಿಪ್ರಾಯ. ಕೂಡಲೇ ಚಾರುದತ್ತನು. 'ದೇವದತ್ತಾ, ಅದು ಖಂಡಿತವಾಗಿಯೂ ಬರುವುದಿಲ್ಲ. ವ್ಯರ್ಥವಾಗಿ ಅದಕ್ಕೆ ಕೈಹಾಕಿದರೆ ಸಮಯವು ಹಾಳು ಮತ್ತು ಸ್ವಲ್ಪ ಮಟ್ಟಿಗೆ ಶಾಂತವಾಗಿರುವ ತಲೆಯು ಅಲ್ಲೋಲಕಲ್ಲೋಲವಾದೀತು. ದಯೆಮಾಡಿ ಬೇಡ. ಅದರ ಬದಲು ಈ ಎರಡು ಇಂಗ್ಲಿಷ್ ಪದ್ಯಗಳನ್ನಾದರೂ ಸಾಂಗವಾಗಿ ವಿವರಿಸಿಕೊಡು. ನನಗೇತಕ್ಕೋ ಅದು ಸರಿಯಾಗಿ ಅರ್ಥವಾಗುವುದೇ ಇಲ್ಲ.' ಎಂದು ಹೇಳಿದನು.

ದೇವದತ್ತನು ತನಗರಿಯುವ ಮಟ್ಟಿಗೆ ಅವನ್ನು ವಿವರಿಸಿ ಹೇಳಿದನು. ಚಾರುದತ್ತನು ರಮೇಶನ ಮುಖವನ್ನು ನೋಡಿ ಏನೋ ಸಂಜ್ಞೆಮಾಡಿದನು. ಅದರಿಂಗಿತವನ್ನರಿತ ರಮೇಶನು ಅದೇ ರೀತಿಯಲ್ಲಿ ಮರುನುಡಿಯಿತ್ತನು. ಕೂಡಲೆ ಚಾರುದತ್ತನು,' ದೇವದತ್ತಾ! ನನಗೇತಕ್ಕೊ ತಲೆನೋಯುತ್ತದೆ. ನಾಳೆ ಪರೀಕ್ಷೆಯಲ್ಲವೆ? ಆದುದರಿಂದ ಓದಿದ್ದು ಸಾಕು. ಮನಸ್ಸಿಗೆ ಸ್ವಲ್ಪ ಸಮಾಧಾನವಿರಲಿ ಹೋಗುವ, ನಿನಗೇನೂ ಹೆದರಿಕೆ ಬೇಡ' ಎಂದು ದೇವದತ್ತನ ಪ್ರತಿಭೆಯನ್ನು ಕೊಂಡಾಡತೊಡಗಿದನು. ನಿರ್ಮಲಹೃದಯನಾದ ದೇವದತ್ತನಿಗೆ ಆ ತರಹದ ಅಸೂಯೆ ಮಿಶ್ರಿತವಾದ ಮುಖಸ್ತುತಿಯನ್ನು ಕೇಳಲು ಆಗುತ್ತಿರಲಿಲ್ಲ. ಅಂತಹ ಸಂದರ್ಭಗಳಲ್ಲಿ ತಾನು ಯಾವ ತರದದ ಜವಾಬು ಕೊಡಬೇಕೆಂಬುವುದು ಸಹ ಅವನಿಗೆ ತಿಳಿಯದು. ಆದುದರಿಂದ ಅವನು ಕೂಡಲೆ ಅವರನ್ನು ಬೀಳ್ಕೊಂಡು ಸ್ವಗೃಹಾಭಿಮುಖನಾಗಿ ಹೊರಟನು. ಆ ತರಹದ ಹೊಗಳಿಕೆಯು ಅವನ ಮನಸ್ಸಿಗೆ ಬಹಳ ವೇದನೆಯನ್ನುಂಟುಮಾಡುತ್ತಿತ್ತು. ಚಾರುದತ್ತನನ್ನು ತಾನೆಷ್ಟು ಪ್ರೀತಿಸಿದರೂ ಸಹ ಅವನಿಗೆ ತನ್ನ ವಿಷಯದಲ್ಲಿ ಅಷ್ಟು ಅಸೂಯಪರನಾಗಿರುತ್ತಾನೆಂಬುವುದು ಅವನಿಗೆ ತಿಳಿಯಲಿಲ್ಲ. ಅವರೂ ಚಾರುದತ್ತನಿಗೆ ಮನನೋಯುವ ಯಾವದೊಂದು ಮಾತನ್ನು ಅವನು ಎಂದೂ ಆಡಿದವನಲ್ಲ. ಅಂತಹ ಸಂದರ್ಭಗಳು ದೊರೆತಾಗನೆಲ್ಲಾ ಅವನನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದನು. ಈ ದಿವಸ ಚಾರುದತ್ತನ ಸ್ತುತಿಯು ಅಂತಹ ತೃಪ್ತಿಕರವಾದುದು [illegible]. ಆತನ ಮನಸ್ಸಿನಲ್ಲಿ ತರತರದ ಭಾವನೆಗಳು ಮೂಡತೊಡಗಿದವು. ಅವನ್ನೆಲ್ಲಾ ಯೋಚಿಸುತ್ತಾ ಮನೆಗೆ ಬಂದನು.

[ಸಶೇಷ.

ವಿಶೇಷ ವರ್ತಮಾನಗಳನ್ನು ತಿಳಿಯಬೇಕೇ? ಬೇಕು. ಹಾಗಾದರೆ
'ಕೊಡಗು' ಪತ್ರಿಕೆಯನ್ನು
ತರಿಸಿ ಓದಿ ನೋಡಿ! ಆಗ ತಿಳಿಯುವುದು.

ಕೊಡಗು ವಿದ್ಯಾಭಿವೃದ್ಧಿ ಫಂಡಿನ ವಾರ್ಷಿಕ ಮಹಾಸಭೆ.

ತಾ. 6-8-38ರಲ್ಲು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಕೆ. ಜಿ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿದ ಕೊಡವ ವಿದ್ಯಾಭಿವೃದ್ಧಿ ಸಂಘದ ಮಹಾ ಸಭೆಯ ತೀರ್ಮಾನಗಳು:

(1) ಈ ಸಂಘದ 170 ಸದಸ್ಯರ ಪೈಕಿ 52 ಸದಸ್ಯರು ಮಾತ್ರ ಹಾಜರಿದ್ದರು.

(2) ಗತ ವರ್ಷದ ಆಡಿಟ್ ಮತ್ತು ಕಾರ್ಯದರ್ಶಿಯವರ ವರದಿ ಓದಿ ಒಪ್ಪಲಾಯಿತು.

(3) ಈ ಸಂಘದಿಂದ ವಿದ್ಯಾ ವೇತನ ಮತ್ತು ಸಾಲವನ್ನು ಈ ವರೆಗೆ ಪಡೆದ ಮಹನೀಯರುಗಳು ಎಷ್ಟು ಬಿಡುವು ಕಾಲದಲ್ಲಿ ಗ್ರಾಮಾಂತರಗಳಿಗೆ ಹೋಗಿ ಈ ಸಂಘಕ್ಕೆ ಧನ ಮತ್ತು ಧಾನ್ಯ ರೂಪದಲ್ಲಿ ವಂತಿಗೆಯನ್ನು ವಸೂಲು ಮಾಡಬೇಕೆಂಬ ಸೂಚನೆಯನ್ನು ಅಧ್ಯಕ್ಷರು ಸಭೆಯ ಮುಂದಿಟ್ಟರು. ಶ್ರೀ. ಕೇತಿಯಂಡ ಕಾಳಪ್ಪನವರಿಂದ ಅನುಮೋದಿಸಲ್ಪಟ್ಟು ಈ ಸೂಚನೆಯು ಸರ್ವ ಸಮ್ಮತದಿಂದ ಮಂಜೂರಾಯಿತು.

(4) ಮುಂದಿನ ಎರಡು ವರ್ಷಗಳಿಗೆ ಈ ಕೆಳಗೆ ಕಾಣಿಸಿದ ಮಹನೀಯರಿಂದ ಕೂಡಿದ ಕಾರ್ಯ ಮಂಡಲಿಯನ್ನು ಆರಿಸಲಾಯಿತು.

(1) ರಾ. ಸಾ. ಬೋ. ಯಸ್. ಮಂದಣ್ಣನವರು (ಅಧ್ಯಕ್ಷರು), ಶ್ರೀ. ಗಳಾದ (2) ಚೆಟ್ರಂಡ ಗಣಪತಿಯವರು (ಕಾರ್ಯದರ್ಶಿ), (3) ಮಾಚಿಮಾಡ ಚಂಗಪ್ಪ ಬಿ. ಎ. ಎಲ್. ಟಿ.ಯವರು (ಖಜಾಂಚಿ), (4) ಕರವಂಡ ಚಂಗಪ್ಪನವರು, (5) ಚೋಡಿರ ಉತ್ತಪ್ಪ ಬಿ. ಎ. ಯವರು, (6) ನೆಲ್ಲಮಕ್ಕಡ ಸುಬ್ಬಯ್ಯ ಬಿ. ಎ. ಯವರು, (7) ಐಚೆಟ್ಟೀರ ಸುಬ್ಬಯ್ಯ ಬಿ. ಎ., ಬಿ. ಎಲ್.ರವರು, (8) ಕೋಳೆರ ಕುಟ್ಟಪ್ಪ ಬಿ. ಎ.ಯವರು, (9) ರಾ.ಬಾ. ಪಟ್ಟಮಾಡ ದೇವಯ್ಯನವರು, (10) ಪುಚ್ಚಿಮಾಡ ನಾಣಯ್ಯ ಬಿ. ಎ. ಎಲ್‌ಎಲ್. ಬಿ. ಯವರು, (11) ಕೋದಾಂಡ ಬೆಳ್ಯಪ್ಪನವರು, (12) ಜೀರಂಡ ಮಂದಣ್ಣನವರು, (13) ಕೇತಿಯಂಡ ಕಾಳಪ್ಪನವರು, (14) ಮೇರಿಯಂಡ ಮಾದಪ್ಪ ಬಿ.ಎ. ಬಿ. ಎಲ್.ರವರು, (15) ಕೇತಿಯಂಡ ಪೆಮ್ಮಪ್ಪನವರು.

(5) ಶ್ರೀ. ಗಳಾದ ಮಾದಂಡ ಪೂವಯ್ಯ ಮತ್ತು ಮುಂಜಾಂದರ ಐಯ್ಯಪ್ಪನವರುಗಳನ್ನು ಬರುವ ಸಾಲಿಯಾನ ಲೆಕ್ಕ ಪರಿಶೋಧಕರಾಗಿ ನೇಮಿಸಲಾಯಿತು.

ಅಧ್ಯಕ್ಷರಿಗೂ ಮಾಜಿ ಕಾರ್ಯದರ್ಶಿಯವರಿಗೂ ವಂದಿಸಿ ಸಭೆಯು ಮುಕ್ತಾಯವಾಯಿತು.

ಗತ ವರ್ಷದ ಕಾರ್ಯಕಾರಿ ಮಂಡಲಿಯವರು ಸಭಿಕರಿಗೆ ಒಂದು ಉಪಹಾರವನ್ನು ಇತ್ತರು.

ಸಿ. ಕೆ. ಗಣಪತಿ,
(ಕಾರ್ಯದರ್ಶಿ)

ಧನ್ವಂತರಿ ಸಹಾಯ ಔಷಧಾಲಯ.
ವೀರರಾಜಪೇಟೆ, (ದ. ಕೊಡಗು).
ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲೆಯವರನ್ನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.
ಜ್ವರ ಸಂಹಾರ ಸುದರ್ಶನ.
ಈ ಔಷಧಿಯು ತ್ರಿದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಶೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಾಲೆ, ಬೆನ್ನು, ಸೊಂಟ, ಮಂಡಿ, ಪಕ್ಕೆಗಳು-ಈ ಭಾಗಗಳ ನೋವನ್ನು ಗುಣಪಡಿಸುವುದು.
ಉಪಯೋಗದ ಕ್ರಮ:-ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಖಾಸಲು ಪ್ರತ್ಯೇಕ.
8
ಸಿ. ಹೆಚ್. ರಾಮುಣ್ಣಿ ವೈದ್ಯರ್.

ಪರದೇಶಗಳಲ್ಲಿ ನಡೆಯುತ್ತಿರುವುದೇನು?

ರಷ್ಯಾ ಜಪಾನರ ತಿಕ್ಕಾಟ.

ರಷ್ಯಾ ಜಪಾನುಗಳೊಳಗಣ ತಿಕ್ಕಾಟದ ವಿಚಾರ ಎಲ್ಲರಿಗೂ ತಿಳಿದಿರುವುದು. ಸೈಬೀರಿಯಾ, ಕೊರಿಯ ಮತ್ತು ಮೊಂಚುಕೋ ಈ ಮೂರು ದೇಶಗಳಿಗೆ ಅತೀ ಸಮೀಪದಲ್ಲಿರುವ ಚಂಕುಫೆಂಗ ಎಂಬ ಹಳ್ಳಿ ಮತ್ತು ಅದರ ಸುತ್ತು ಮುತ್ತಲಿನ ಗುಡ್ಡಗಳು ಯಾರಿಗೆ ಸೇರಬೇಕು ಎಂಬ ವಿಚಾರವಾಗಿಯೇ ಅವುಗಳೊಳಗೆ ಕಲಹಬಂದದ್ದಾಗಿದೆ. ಒಂದುವಾರದ ವರೆಗೆ ಈ ಘೋರ ಯುದ್ಧವು ನಡೆದು 900 ಜನರು ಮೃತರಾದುದಲ್ಲದೆ 300 ಜನರಿಗೆ ಗಾಯಗಳಾದುವು. ಎಲ್ಲ ರೀತಿಯಿಂದಲೂ ಪ್ರಬಲವಾದ ರಷ್ಯಾವನ್ನು ವಿರೋಧಿಸಿ ಜಪಾನು ತನು ಮನ ಧನಗಳಿಂದ ಹಾನಿಗೀಡಾಗಿದೆ. 1866ರಲ್ಲಿ ರಷ್ಯಾ ಜಪಾನುಗಳಿಗೆ ಆದ ಒಪ್ಪಂದದ ಮೇರೆ ಚಂಕುಫೆಂಗವು ರಷ್ಯಾಕ್ಕೆ ಸೇರತಕ್ಕದ್ದು. ಆದರೆ ಜಪಾನು ತನಗೆ ಆ ಒಪ್ಪಂದದ ವಿಚಾರವೇ ಗೊತ್ತಿಲ್ಲವೆಂದು ಗೊಡ್ಡು ಬೆದರಿಕೆ ಹಾಕಿ ರಷ್ಯಾದಿಂದ ಅದನ್ನು ವಶಪಡಿಸಿಕೊಂಡು ತನ್ನ ಸಾಮ್ರಾಜ್ಯ ವಿಸ್ತರಣಾ ತೃಷೆಯನ್ನು ಪರಿಹರಿಸಿಕೊಳ್ಳಲು ಯತ್ನಿಸಿತು. ಆದರೆ ರಷ್ಯಾವು ತನ್ನ ಬಲ ತೋರಿಸಿದೆ ಎಂಬುದನ್ನು ತೋರಿಸಿದೊಡನೆಯೇ ಜಪಾನು ಬೆದರಿ ಚಂಕುಫೆಂಗನನ್ನು ರಷ್ಯಾಕ್ಕೆ ಬಿಟ್ಟು ಅದರೊಂದಿಗೆ ಒಪ್ಪಂದವನ್ನು ಮಾಡಿಕೊಂಡಿತು. ಇದರಿಂದಾಗಿ ಪೂರ್ವಾತ್ಯದಲ್ಲಿ ಘೋರ ಸಂಗ್ರಾಮದ ಸಂಭವವು ತಪ್ಪಿತು. ಇದರಿಂದ ಜಪಾನು ತನ್ನ ಅಂತಿಮಾವಸ್ಥೆಯನ್ನು ಪರಿಹರಿಸಿಕೊಂಡಿತೇನೋ ನಿಜ. ಆದರ ಈ ಯುದ್ಧದಿಂದಾಗಿ ಮೂರು ಮುಖ್ಯದ ಕಾರಣಗಳಾಗಿವೆ. (1) ಪೂರ್ವಾತ್ಯದಲ್ಲಿ ತನ್ನ ಸ್ಥಾನ ಮಾನಗಳಿಗೆ ಸ್ವಲ್ಪ ಧಕ್ಕೆ ತಗಲಿದ್ದೇ ಅಲ್ಲದೆ ರಷ್ಯಾವು ಕೊಡಲಿ ರಣರಂಗಕ್ಕಿಳಿಯುವುದು. ಜಪಾನಿಗೆ ಅದು ಎಂದೂ ಬೆದರಿ ನಿಲ್ಲಲಾರದು. (2) ಜಪಾನವು ರಷ್ಯಾದ ವೈರಿಯೆಂದು ಸಾರಿಕೊಳ್ಳುತ್ತಿದ್ದರೂ ರಷ್ಯಾವನ್ನು ಎದುರಿಸುವ ಶಕ್ತಿ ಅದಕ್ಕಿಲ್ಲ. ಅದರಲ್ಲಿಯೂ ಚೀನಾ ಯುದ್ಧದಲ್ಲಿ ಅದು ಬಳಲಿ ಬೆಂಡಾಗಿರುವದು. (3) ಈ ವರೆಗೆ ಅವಿಚ್ಛಿನ್ನರಾಗಿ ಯುದ್ಧ ಮಾಡುತ್ತಿದ್ದ ಚೈನೀಯರಿಗೆ ಈ ಕದನದಿಂದ ಸ್ವಲ್ಪ ದಿನಗಳ ವರೆಗೆ ವಿಶ್ರಾಂತಿ ದೊರಕಿದ್ದರಿಂದ ಅವರು ತಮ್ಮ ಬಲವನ್ನು ಹೆಚ್ಚಿಸಿಕೊಳ್ಳಲು ಅನುವಾಯಿತು. ಜಪಾನರ ಈ ವರ್ತನೆಯು 'ವಿನಾಶ ಕಾಲಕೆ ವಿಪರೀತ ಬುದ್ಧಿ' ಎಂಬ ನಾಣ್ಣುಡಿಗೆ ಸರಿ ಹೋಗುತ್ತದಲ್ಲವೇ?

ಚೈನಾ ಜಪಾನು ಯುದ್ಧ.

ರಷ್ಯಾ ಮತ್ತು ಜಪಾನುಗಳೊಳಗೆ ಒಪ್ಪಂದವಾಗಿ ಯಾವಾಗ ಅವರೊಳಗಿನ ಯುದ್ಧವು ನಿಂತಿತೋ ಇತ್ತ ಯಾಂಗ್ಸಿ ನದಿಯ ದಂಡೆಯ ಮೇಲೆ ಪುನಃ ಜಪಾನರು ತಮ್ಮ ಧಾಳಿಯನ್ನು ಮುಂದುವರಿಸಿರುವರು. ನಾಂಚೆಂಗ್ ಮತ್ತು ಯೊಚೆಂಗ್‌ಗಳ ಮೂಲಕವಾಗಿ ಹಾಂಕೊ ನಗರದ ಮೇಲೆ ಧಾಳಿ ನಡಿಸಿ ಅದನ್ನು ವಶಪಡಿಸಿಕೊಂಡರೆ ಜಪಾನ್ ಯುದ್ಧದ ಎರಡನೆ ಅಂಕವು ಮುಗಿದು ಚಿಯಾಂಗ್ ಕೈಶೇಕನ ರಾಷ್ಟ್ರೀಯ ಸರ್ಕಾರವು ನಾಶ ಹೊಂದುವುದೆಂದು ಜಪಾನರು ನಂಬಿರುವರು. ಆದರೆ ಅವರ ಈ ಉತ್ಕಟೇಚ್ಛೆಯು ಈಡೇರುವದು ಸಾಧ್ಯವಿಲ್ಲೆಂದು ಚೀನದ ಪರಿಸ್ಥಿತಿಯನ್ನು ಬಲ್ಲವರಿಗೆ ತಿಳಿಯುದಿರದು.

ರಷ್ಯಾ ಜಪಾನುಗಳೊಳಗೆ ಯುದ್ಧ ನಡೆಯುತ್ತಿರುವಾಗ ಜಪಾನು ಸೈನ್ಯದ ದೃಷ್ಟಿಯೆಲ್ಲವೂ ಅತ್ತ ಕಡೆಗೇ ಹರಿದಿತ್ತು. ಜಪಾನರು ಈ ಎರಡು ಯುದ್ಧಗಳ ಮಧ್ಯೆ ಸಿಲುಕಿ ದುಂದುಗಾಣದಾಗಿದ್ದರು. ಆದ್ದರಿಂದ ಚೈನಾ ಯುದ್ಧದಲ್ಲಿ ನಿರತವಾಗಿದ್ದ ಜಪಾನ ಸೈನ್ಯಗಳನೇಕವು ರಷ್ಯಾದ ಕಡೆಗೆ ಧಾವಿಸಿದ್ದುವು. ಈ ಪ್ರಸಂಗದಲ್ಲಿ ಚೀನೀಯರಿಗೆ ವಿಶ್ರಾಂತಿ ದೊರೆತಂತಾಗಿ ತಮ್ಮ ಸೈನ್ಯದ ಪುನರ್ಘಟನೆ ಮಾಡಲು ಅನುವು ದೊರೆಯಿತು. ಬೇರೆ ಬೇರೆ ರಣಭೂಮಿಗಳಲ್ಲಿ ಕುಶಲರೂ, ಸಮರ್ಥರೂ ಆದ ಸೇನಾಪತಿಗಳನ್ನು ನೇಮಿಸಿದ್ದಾರೆ. ಹಾಂಕೋ ನಗರದ ರಕ್ಷಣೆಗಾಗಿ 10 ಲಕ್ಷ ಜನರು ಸುಸಜ್ಜಿತರಾಗಿದ್ದಾರೆ. ಆದ್ದರಿಂದ ಜಪಾನರ ಎಣಿಕೆಯ ಧಾಳಿಯು ಸುಲಭಸಾಧ್ಯವೇನೂ ಅಲ್ಲ. ಜಪಾನಿನ ಪರಿಸ್ಥಿತಿಯು ಎರಡು ದೋಣಿಗಳಿಗೆ ಕಾಲಿಟ್ಟು ಪ್ರಯಾಣ ಮಾಡಲೆಳಸುವವರ ಪ್ರಸಂಗದಂತಾಯಿತು. ಕಳೆದ ಒಂದು ವಾರದಿಂದ ನಡೆಯುತ್ತಿರುವ ಯುದ್ಧದ ವಿಮರ್ಶೆಯಿಂದ ಇದು ವಿಶದವಾಗುವುದು. ಯಾಂಗತ್ಸಿ ನದಿಯ ದಕ್ಷಿಣ ದಂಡೆಯಿಂದ ನುಗ್ಗುತ್ತಿರುವ ಜಪಾನಿ ದಂಡಾಳುಗಳನ್ನು ಚೈನೀಯರು ಹಿಂದಕ್ಕೋಡಿಸಿದರು. ಅತ್ತ ಕಿಯುಕಿಯಾಂಗದಿಂದ ನಾಂಚೆಂಗಿನ ಕಡೆಗೆ ನುಗ್ಗುತ್ತಿದ್ದ ಜಪಾನಿ ದಂಡುಗಳು ಸಾಹೋ ಎಂಬಲ್ಲಿ ಸೋಲಿಸಲ್ಪಟ್ಟವು. ಇದರಿಂದ ಚೀನಿಯರ ಪ್ರತಿಹಲ್ಲೆಯ ಪರಿಣಾಮ ಮತ್ತು ಯುದ್ಧದ ಮುಂದಿನ ಗತಿಯು ಕಾಣಾಗಿ ತಿಳಿಯುತ್ತಿರುವುದು. ಈ ಪರಾಜಯಗಳ ಜೊತೆಗೆ ಜಪಾನೀ ಸೈನ್ಯವನ್ನು ಯಾಂಗತ್ಸಿ ನದಿಯ ನೆರೆಯ ಹಾವಳಿಯು ಹಿಂದಕ್ಕೋಡಿಸಿತು. ಈಗಲಾದರೋ ಅವರ ಸೈನ್ಯದಲ್ಲಿ ಮಾರಿ ಬೇನೆಯು ಪ್ರಾರಂಭವಾಗಿ ಈಗಾಗಲೇ ಸಾವಿರಾರು ಜನರು ಅಲಕ್ಷ್ಯ ತುತ್ತಾಗಿರುವರು. ಹೀಗೆ ಅನಾಥರಾಗಿದ್ದ ಚೈನೀಯರಿಗೆ ದೊರಕಿರುವ ದೈವ ಸಹಾಯ ಮುಂದುವರಿದರೆ ಜಗನ್ನಿಯಾಮಕನ ಅನಾಥ ರಕ್ಷಕನೆಂಬ ಬಿರುದು ಸಾರ್ಥಕವಾಗುವುದಲ್ಲವೇ?

ಬ್ರಿಟನಿನಲ್ಲಿ ಏನು ನಡಿದಿದೆ?

ಇಟಲಿ ಜರ್ಮನಿಗಳು ಸ್ಪೈಯಿನಿನಲ್ಲಿ ತಮ್ಮ ಪ್ರೇರಣೆಯಿಂದ ಅಂತಃಕಲಹವನ್ನು ನಡೆಸಿ ಬ್ರಿಟಿಷರಿಗೆ ತಮ್ಮ ಬಲ ಹಾಗೂ ದರ್ಪವನ್ನು ತೋರ್ಪಡಿಸಿ ಭೂಮಧ್ಯ ಸಮುದ್ರದಲ್ಲಿ ತಮ್ಮ ಅಧಿಕಾರವನ್ನು ಹೇರಿಸಿಕೊಳ್ಳಬೇಕೆಂಬ ಹವಣಿಕೆಯಿಂದ ಸ್ಪೈಯಿನಿನಲ್ಲಿ ಅಂತಃಕಲಹದ ಬೀಜ ಬಿತ್ತಿ ಬ್ರಿಟನರ ವರ್ತನೆಯನ್ನು ನಿರೀಕ್ಷಿಸಿದುವು. ಆದರೆ ಬ್ರಿಟನರು ಬ್ರಿಟನಿನಲ್ಲೇ ನಿಂತು ತಮ್ಮ ಗೊಡ್ಡು ಬೆದರಿಕೆಯನ್ನು ಹಾಕಿದರು. ಇದರಿಂದ ಇಟಲಿ ಜರ್ಮನಿಗಳ ಆಶೆಯು ಈಡೇರಲಿಲ್ಲ. ಈಗಂತೂ ಇದರಿಂದ ಪ್ರೋತ್ಸಾಹಿತನಾದ ಜನರಲ್ ಫ್ರಾಂಕೋ ಬ್ರಿಟಿಷ್ ಹಡಗುಗಳನ್ನು ಮುಳುಗಿಸಿ, ಅವರ ವರ್ತನೆಯನ್ನು ನೋಡಿದನು. ಆದರೆ ಇದರಿಂದಲೂ ಇಟಲಿ ಜರ್ಮನಿಗೆ ಪ್ರಯೋಜನವಾಗಲಿಲ್ಲ. ಅಂತೂ ಬ್ರಿಟನು ತಾಟಸ್ಥ್ಯ ಭಾವನೆಯನ್ನು ತಳೆದ. ಪೂರ್ವಾತ್ಯದಲ್ಲಿ ಜಪಾನರು ಬ್ರಿಟಿಷ್ ರಾಯಭಾರಿಗಳನ್ನು ನಾಶಪಡಿಸಿದ್ದಲ್ಲದೆ ಅನೇಕ ಹಡಗುಗಳನ್ನು ಸಮುದ್ರಾಂತರಾಳಕ್ಕೆ ಕಳುಹಿಸಿದರು. ಆದರೂ ಬ್ರಿಟನು ಅವರಿಗೆ ಎಚ್ಚರಿಕೆಯನ್ನಿತ್ತಿತೇ ವಿನಹ ಕಾರ್ಯಾಸ್ತ್ರವು ಕೈಗೊಳ್ಳಲಿಲ್ಲ. ಹಿಟ್ಲರನು ಆಸ್ಟ್ರೀಯವನ್ನು ವಶಪಡಿಸಿಕೊಳ್ಳುವಾಗಲೂ, ಬ್ರಿಟನು ಮಾಡಿದ್ದೇನು? ಈ ಗೊಡ್ಡು ಬೆದರಿಕೆಯೇ. ಇದ ಬಳಿಕ ಬ್ರಿಟನು ನಿಸ್ತೇಜಗೊಂಡಿದ. ಯುದ್ಧದ ಭೀತಿಯಂತೂ ಚೆನ್ನಾಗಿ ಅವರ ಮನದಲ್ಲಿ ನಾಟಿದೆ. ಆದ್ದರಿಂದ ಇಂದು ಬ್ರಿಟನು ಈ ಅಹಿಂಸಾ ವ್ರತವನ್ನು ಧರಿಸಿ, ಹಣಕಿ ಮುತ್ತಿದ ದಾಸ ಪದ್ದುಗಳಂತೆ ಸಾಮ್ರಾಜ್ಯ ವಿಸ್ತರಣಾ ಲಾಲಸೆಯ ತೃಷೆಯಲ್ಲಿ ನಡೆಯುತ್ತಿರುವ ಈ ಯುದ್ಧವು ಅಯೋಗ್ಯವೆಂದು ತಟಸ್ಥವಾಗಿ ನಿಂತಿದೆ. ಅಂತೂ ಬ್ರಿಟನು 'ತಾಳಿದವ ಬಾಳ್ಯಾನು' ಎಂಬ ನಾಣ್ಣುಡಿಯನ್ನು ಅಕ್ಷರಶಃ ಪಾಲಿಸುವಂತೆ ಕಾಣುತ್ತದೆಯಲ್ಲವೇ?

ಯೂನಾನಿ ಫಾರ್ಮಸಿಯ ಉತ್ತಮ ಔಷಧಿಗಳು.

ಉಬ್ಬಸ ಸಂಹಾರಿ (Asthma cure) ಕೆಲವು ದಿನಗಳ ಸೇವನೆಯಿಂದ ಉಬ್ಬಸವನ್ನು ಖಾತ್ರಿಯಾಗಿ ಗುಣಪಡಿಸುತ್ತದ. 40 ದಿವಸ ಔಷಧಿಗೆ ಕ್ರಯ ರೂ. 5—12—0.

ಅಂಬರ್ ಕೂಪಲೆಟ್ಸ್, ಸುಗಂಧಯುಕ್ತ ಅಮ್ಲಕೇಶ ತೈಲ ಅಲ್ಲದೆ ಎಲ್ಲಾ ರೋಗಗಳಿಗೂ ರಾಮಬಾಣದಂತಿರುವ ಮಾತ್ರೆಗಳೂ, ಚೂರ್ಣಗಳೂ, ಲೇಹಗಳೂ, ತೈಲಗಳೂ ಮತ್ತು ಕ್ಷೀರ ತೈಲಗಳೂ ಸಹ ತಯಾರಿರುತ್ತವೆ.

ಬೇಗನೆ ಬರೆಯಿರಿ:—

ಯಂ. ಯಂ. ಸಿದ್ದೀಕ್,
ಪ್ರೊಪ್ರೈಟರ್,
25 ಯುನಾನಿ ಔಷಧಶಾಲಾ, ಮಡಿಕೇರಿ, ಕೊಡಗು.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು ಕೋರ್ಟು ಖರ್ಚು, ಆರ್ಬಿಟ್ರೇಶನ್ ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಕರಾರು, ಸ್ಟೋರ್ ಕೀಪರ್ ಬಾಂಡು ಮತ್ತು ನಾನಾ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಡಾ. ಮೇತ್ಯೂಸ್ ಎಬ್ರಹಾಮ್
ದಂತ ವೈದ್ಯರು.
(ಪೀಯರ್ಸ್‌ಲೆಸ್ಲಿ ಬಂಗ್ಲೆ)
(ಸ್ಪೆನ್ಸರ್ಸ್ ಹತ್ತಿರ)
ಮಡಿಕೇರಿ.

ಕೊಡಗು

ಆಗೊಸ್ಟು ತಾರೀಖು ೨೬ನೇ ಶುಕ್ರವಾರ ೧೯೩೭.

ಭೂಮಿ ಗಿರ್ವಿ ಬ್ಯಾಂಕು.

ದೇಶದ ರೈತರನ್ನು ಹಳೇ ಸಾಲದ ಬಾಧೆಯಿಂದ ತಪ್ಪಿಸಲಿಕ್ಕಾಗಿ ಸಾಲ ಕೊಟ್ಟವರನ್ನೂ, ಸಾಲ ಪಡಕೊಂಡವರನ್ನೂ ಸೇರಿಸಿ ರಾಜಿಯಿಂದ ಸಾಲದ ಮೊಬಲಗನ್ನು ಕಡಿಮೆ ಮಾಡಿ, ಅದನ್ನು ತೀರಿಸಲಿಕ್ಕಾಗಿ ಅವರಿಗೆ ಭೂಮಿ ಗಿರ್ವಿಯ ಮೇಲೆ ದೀರ್ಘ ಕಂತಿನ ಸಾಲ ಕೊಡುವ ಏರ್ಪಾಡು ಮಾಡಬೇಕೆಂದು ಕೆಲವು ವರ್ಷಗಳಿಂದ [illegible] ಕೊಡಗಿನ ಆರ್ಥಿಕ [illegible] ರು ಇದಕ್ಕಾಗಿ ಒಂದು ಪ್ರತ್ಯೇಕ ಭೂಮಿ [illegible] ಬ್ಯಾಂಕನ್ನು ಸ್ಥಾಪಿಸಬೇಕೆಂದು ಸಿದ್ಧಾಂತವ ಮಾಡಿದ್ದರು. [illegible] ಕೊಡಗಿನಂಥಾ ಚಿಕ್ಕ ಪ್ರಾಂತ್ಯದಲ್ಲಿ ಪ್ರತ್ಯೇಕ ಒಂದು ಭೂಮಿ ಗಿರ್ವಿ ಬ್ಯಾಂಕಿಗೆ ಸಾಕಷ್ಟು ಕೆಲಸವಿರಲಿಕ್ಕಿಲ್ಲ [illegible]. [illegible] ಸೆಂಟ್ರಲ್ ಬ್ಯಾಂಕಿನೊಂದಿಗೆ [illegible] ತಲೂ, ಅಲ್ಲದೆ ಈ ತರದ ಪ್ರತ್ಯೇಕ ಬ್ಯಾಂಕಿನಿಂದ ಎಲ್ಲಿಯೂ [illegible], ಉಂಟಾಗಿ [illegible] ಯ [illegible]ಗಳಿಗೆ ದೊಡ್ಡ ನಷ್ಟ [illegible] ಲೂ, ಆ ಕಾರಣ ಪ್ರತ್ಯೇಕ ಭೂಮಿ ಗಿರ್ವಿ ಬ್ಯಾಂಕನ್ನು ಸ್ಥಾಪಿಸುವುದರ ಬದಲು ದೀರ್ಘ ಕಂತಿನ ಸಾಲ ಕೊಡುವ ಏರ್ಪಾಡನ್ನು ಈಗಿರುವ ಸಹಕಾರಿ ಸೆಂಟ್ರಲ್ ಬ್ಯಾಂಕಿನಲ್ಲೇ ಮಾಡುವುದು ಉತ್ತಮವೆಂತಲೂ ಈ ಹಿಂದೆ ಹಲವು ಸಾರಿ ಬರೆದಿದ್ದೆವು.

ಈ ವಿಚಾರ ಸರಕಾರದವರು ಚೆನ್ನಾಗಿ ಪರ್ಯಾಲೋಚನೆ ಮಾಡಿ, ಪ್ರತ್ಯೇಕ ಭೂಮಿ ಗಿರ್ವಿ ಬ್ಯಾಂಕನ್ನು ಸ್ಥಾಪಿಸಲು [illegible] ಸಾಧ್ಯವಿಲ್ಲವಾದ ಕಾರಣ ಸೆಂಟ್ರಲ್ ಬ್ಯಾಂಕಿನಲ್ಲೇ ದೀರ್ಘ ಕಂತಿನ ಸಾಲ ಕೊಡುವ ಏರ್ಪಾಡು ಮಾಡಲು [illegible] ವಾಗಲಿಕ್ಕಿಲ್ಲ[illegible] ಎಂದು ಸೆಂಟ್ರಲ್ ಬ್ಯಾಂಕಿನವರನ್ನು [illegible] ಬರೆದು [illegible], ಅದಕ್ಕೆ ಸೆಂಟ್ರಲ್ ಬ್ಯಾಂಕಿನವರು ಕೆಲವು ಶರತ್ತುಗಳನ್ನು [illegible], ಸರಕಾರದವರು ಅವುಗಳಿಗೆ ಒಪ್ಪಿದರೆ ದೀರ್ಘ ಕಂತಿನ ಸಾಲ ಕೊಡುವ [illegible]ಯನ್ನು ಸೆಂಟ್ರಲ್ ಬ್ಯಾಂಕಿನಲ್ಲಿ ತೆರೆಯಲಾಗುವದೆಂದು ಉತ್ತರ ಕೊಟ್ಟಿರುವರೆಂದೂ ತಿಳಿಯಬರುತ್ತದೆ.

ಸೆಂಟ್ರಲ್ ಬ್ಯಾಂಕಿನವರು ಹಾಕಿರುವ ಶರತ್ತುಗಳಾದರೂ ಹೊಸವೇನೂ ಅಲ್ಲ. ಬ್ಯಾಂಕಿನಲ್ಲಿ ಇಡುವ ಠೇವಣಾತಿಗಳ ಅಸಲು ಮತ್ತು ಬಡ್ಡಿಗೆ ಸರ್ಕಾರದವರು ಭರವಸೆಯನ್ನೀಯಬೇಕೆಂಬುವುದು ಒಂದನೇ ಶರತ್ತು. ಬ್ಯಾಂಕಿಗೆ ದೀರ್ಘ ಕಂತಿನ ಠೇವಣಾತಿಗಳು ಬರಬೇಕಾದರೆ ಸರ್ಕಾರದವರು ಈ ತರಹದ ಭರವಸೆಯನ್ನೀಯಬೇಕು [illegible] ಅವಶ್ಯವಾಗಿದ [illegible] ತಿರುವಾಂಕೂರು ಸ್ಟೇಟಿನಲ್ ಮತ್ತು ಕೊಯಿಲಾನ್ ಬ್ಯಾಂಕಿನ ಠೇವಣಾತಿಗಳು [illegible] ಹೋಗಿ, ಜನರಿಗೆ ಬ್ಯಾಂಕುಗಳ ಮೇಲೆ ಒಂದು ವಿಧದ ಅಪನಂಬಿಕೆಯು—ಇದು ಸಕಾರಣವಾದುದಲ್ಲವಾದರೂ—ಹುಟ್ಟಿರುವ ಈ ಸಮಯದಲ್ಲಿ ಇಂಥಾ ಭರವಸೆಯು ಅವಶ್ಯಕವಿಯು [illegible]. ಬೇರೆ ಪ್ರಾಂತ್ಯಗಳಲ್ಲಿ ಭೂಮಿ ಗಿರ್ವಿ ಬ್ಯಾಂಕುಗಳ ಡಿಬೆಂಚರುಗಳಿಗೆ ಸರ್ಕಾರದವರು ಇಂಥಾ ಭರವಸೆಯನ್ನಿತ್ತಿರುವಾಗ್ಯೆ ಇಲ್ಲಿಯೂ ಸರಕಾರದವರು ಹಾಗೆ ಮಾಡಲು ಹಿಂಜರಿಯಲಿಕ್ಕೆ ಕಾರಣವಿಲ್ಲ.

ಸರಕಾರದವರು ಈಗ ತಾವೇ [illegible] ಸಾಲದ ಅಕ್ಕನ್ನು [illegible] ಮಾಡಿ, [illegible] ಸಾಲ [illegible] ಕಂತಿನ ಸಾಲ ಕೊಡಲಿಕ್ಕಾಗಿ ವರ್ಷಕ್ಕೆ [illegible] ನೂರು [illegible] ಜೂರು [illegible] ಈ ಹಣವನ್ನು ಸರಕಾರದವರು [illegible] ಆನ್ನು ಸೆಂಟ್ರಲ್ ಬ್ಯಾಂಕಿನ [illegible] ಹಾಗಿ [illegible] ಈ [illegible] ಸಾಲ [illegible] ಇದರಿಂದ ಎರಡು [illegible] ಸಾಲ [illegible] ಯೂ ಆ [illegible].

ಬ್ಯಾಂಕಿನವರ [illegible] ಇದಕ್ಕಾಗಿ [illegible] ಯಿಂದ [illegible] ಇದಕ್ಕಾಗಿ [illegible] ಮತ್ತು [illegible] ಉದ್ಯೋಗಸ್ಥರ [illegible] ಕೊಡಬೇಕೆಂಬುದು ಮೂರನೆಯ ಶರತ್ತು [illegible] ಈ [illegible] ಸಹಾಯವನ್ನು ಕೊಡಲ್ಪಡುತ್ತಿದ [illegible] ಕೆಲಸವನ್ನು ಇಲಾಖೆಯ ಉದ್ಯೋಗಸ್ಥರು ಈ ಕೆಲಸವನ್ನು ಮಾಡಬೇಕು. ಆದುದರಿಂದ ಅವರಿಗೆ ಇದೊಂದು ಹೊಸ ಭಾರವಾದಂಥ ಕೆಲಸವಾಗಲಿಕ್ಕಿಲ್ಲ.

ಸೆಂಟ್ರಲ್ ಬ್ಯಾಂಕಿನಲ್ಲಿ ದೀರ್ಘ ಕಂತಿನ ಸಾಲದ ಶಾಖೆ ಇಡುವ ಖರ್ಚಿಗಾಗಿ ಸರ್ಕಾರದವರು ವರ್ಷಕ್ಕೆ ರೂ. 1,500 ವಂತಿಗೆ ಕೊಡಬೇಕೆಂದು ಕೇಳಿಕೊಳ್ಳಲಾಗಿದೆ. ಸರ್ಕಾರದವರು ಪ್ರತ್ಯೇಕ ಭೂಮಿ ಗಿರ್ವಿ ಬ್ಯಾಂಕು ಇಡುವದಾಗಿದ್ದರೆ ಅವರು ಕಮ್ಮಿಪಕ್ಷ ವರ್ಷಕ್ಕೆ ಆರೇಳು ಸಾವಿರ ರೂಪಾಯಿ ವೆಚ್ಚ ಮಾಡಬೇಕಾಗುತ್ತಿತ್ತು. ಆದುದರಿಂದ ಭೂಮಿ ಗಿರ್ವಿ ಬ್ಯಾಂಕಿನ ಅನುಕೂಲವನ್ನೇ ಕಲ್ಪಿಸಿಕೊಡುವುದಕ್ಕಾಗಿ ಸೆಂಟ್ರಲ್ ಬ್ಯಾಂಕಿಗೆ ಇಷ್ಟೊಂದು ಚಿಕ್ಕ ವಂತಿಗೆಯನ್ನು ಕೊಡಲು ಸರ್ಕಾರದವರು ಹಿಂಜರಿಯಲಿಕ್ಕಿಲ್ಲವಾಗಿ ನಂಬುತ್ತೇವೆ. ಸರ್ಕಾರದವರು ಈ ಶರತ್ತುಗಳಿಗೆಲ್ಲಾ ಒಪ್ಪಿದವಾದರೆ ಬ್ಯಾಂಕಿನ ಡೈರೆಕ್ಟರುಗಳ ಬೋರ್ಡಿನಲ್ಲಿ ಸರ್ಕಾರದವರು ನೇಮಿಸುವ, ರಿಜಿಸ್ಟ್ರಾರರ ಸಮೇತ ಎರಡು ಯಾ ಮೂರು ಡೈರೆಕ್ಟರುಗಳಿಗೆ ಸ್ಥಳ ಕೊಡಲು ಬ್ಯಾಂಕಿನವರು ಒಪ್ಪಿರಾಗಿರುವರು [illegible] ಸರ್ಕಾರದವರಿಗೆ ಬ್ಯಾಂಕಿನ ಆಡಳಿತದಲ್ಲಿ ಸಾಕಷ್ಟು ಜಾಗ ದೊರೆತಂತಾಗುತ್ತದೆ.

ಹಳೇ ಸಾಲದ [illegible] ತೀರಿಸಲು ದೀರ್ಘ ಕಂತಿನ [illegible] ಪ್ರಯೋಜನವನ್ನು [illegible] ಹೊಂದ[illegible]ಪ್ಪವಂತೆ, ಹಳೇ ಸಾಲದ ಮೊತ್ತವನ್ನು ಕಡಿಮೆ ಮಾಡಲಿಕ್ಕಾಗಿ [illegible] ದವರು [illegible] [illegible] ಭಾಗ [illegible] ಅವಧಿ [illegible] ದೀರ್ಘ ಕಂತಿ [illegible] ಉಪ [illegible] [illegible] ಬ್ಯಾಂಕಿನವರು [illegible] ಸಾಲ [illegible] ಸರಕಾರದವರ ಸಹಾಯ [illegible] ಬ್ಯಾಂಕಿನವರು [illegible] ಸ್ಥಿರ [illegible] ನಿರಾ[illegible]ಗ ನಂಬಿ [illegible] ಸಾಧ್ಯವಾಗಿ ನಂಬುತ್ತೇವೆ.

ವೀರಾಜಪೇಟೆ ಹುಡುಗಿಯರ ಶಾಲೆ.

ಚೀಫ್ ಕಮೀಷನರವರಿಗೆ ದಕ್ಷಿಣ ಕೊಡಗಿನ ನಿವಾಸಿಗಳು ಕಳುಹಿಸಿದ ಹ್ಯಾಪಕ ಪತ್ರದ ಸಾರಾಂಶ.

ಈಗ ಬರುವ ರಿಟ್ರೆಂಚ್‌ಮೆಂಟಿನಲ್ಲಿ ವೀರಾಜಪೇಟೆ ಹುಡುಗಿಯರ ಶಾಲೆಯನ್ನು ತೆಗೆಯುವರೆಂಬ ಸುದ್ದಿ ಇದೆಯೆಂದು ತಿಳಿಯುತ್ತೇವೆ. ಸರಕಾರದ ಆಡಳಿತದಲ್ಲಿ ಹೆಚ್ಚಾಗಿರುವ ಉದ್ಯೋಗಗಳಿಗೆ ರಿಟ್ರೆಂಚ್‌ಮೆಂಟ್ ಅಗತ್ಯ. ಆದರೆ ವಿದ್ಯಾ ಇಲಾಖೆಗೆ ಖರ್ಚು ಮಾಡುವ ಹಣವು ಸಂಚಯದ ರಿಟ್ರೆಂಚ್‌ಮೆಂಟಿಯೇ ಇರುವದರಿಂದ ಈ ಇಲಾಖೆಯ ಆಡಳಿತದಲ್ಲಿ ಖೋತೆ ಮಾಡದೆ ಕೊಡವಾಗಿ ಬೇಡಿಕೊಳ್ಳುವದಾಗಿದೆ. ಇದಲ್ಲದೆ ವೀರಾಜಪೇಟೆ ಹುಡುಗಿಯರ ಶಾಲೆಯನ್ನು ತೆಗೆಯಕೂಡದು—ದೂ ಹೈಸ್ಕೂಲಿನ ಬೋರ್ಡಿಂಗನ್ನು ಈಗಿನ ಕಟ್ಟಡದಲ್ಲೇ ಇಡಬೇಕೆಂದೂ ವಿನಂತಿ ಒಪ್ಪಿಸುತ್ತೇವೆ. ಹುಡುಗಿಯರ ಶಾಲೆಯು ಸ್ಥಾಪನೆಯಾಗಿ 50 ವರ್ಷಗಳಾದವು. 18 ವರ್ಷಗಳಿಂದ [illegible] ಪಬ್ಲಿಕ ಜನತೆಯು ಮತ್ತು ಕೌನ್ಸಿಲು ಕೊಡಗಿನ [illegible] ಯ ಅವಶ್ಯಕತೆಯನ್ನು [illegible] ಶಾಲೆ [illegible] ಮಾಡಲಾಯಿತು. ಈಗ ಅದು 281 ವಿದ್ಯಾರ್ಥಿನಿಯರನ್ನೂ 11 ಅಧ್ಯಾಪಕಿಯರನ್ನೂ ಒಳಗೊಂಡಿರುವದರಿಂದ ಎದನ್ನು ಮುಚ್ಚಿದರೆ ಎಷ್ಟೋ ಬಾಲಿಕೆಯರು ವಿದ್ಯಾಹೀನರಾಗುವರಲ್ಲದೆ ಈ ಭಾಗದಲ್ಲಿ 100ಕ್ಕೆ 50ರಷ್ಟು ಸ್ತ್ರೀ ವಿದ್ಯಾಭ್ಯಾಸವು ಕಮ್ಮಿಯಾಗುವದು. ಹುಡುಗರ [illegible] ಯನ್ನು ಮುಚ್ಚಿ [illegible], ಆದ [illegible] ಶಾಲೆಯೊಂದಿಗೆ ಸಂಯೋಜಿಸಲಾಗುತ್ತಿ ಎಂಬದಾಗಿ ಹೇಳುವದು. ಈ ಯೋಜನೆಯು ಖಂಡಿತ ಉಪಯೋಗವಾಗಲಾರದೆಂದು ಹೇಳುವೆವು. ಈ ಎರಡು [illegible] ಎರಡು ಶಾಲೆಗಳನ್ನು ಒಟ್ಟಿಗೆ [illegible] ಶಾಲೆಗೆ [illegible] 19, 50 [illegible] ವರೆಗೆ ಬರುತ್ತ [illegible] [illegible] ಹುಡುಗಿಯರ [illegible] [illegible] ಹುಡುಗಿಯರ ಶಾಲೆಯನ್ನು [illegible] [illegible] ಹುಡುಗರ [illegible] ವನ್ನು [illegible] ಹೈಸ್ಕೂಲಿನ [illegible] ಹುಡುಗಿಯರ [illegible] ಅಲ್ಲಿ [illegible] ಈ [illegible] ಹುಡುಗಿಯರ ಶಾಲೆಯನ್ನು [illegible] ಇಡಬೇಕೆಂದು ಬೇಡಿಕೆಯಾಗಿದೆ. ಈಗಿನ ಹುಡುಗಿಯರ ಶಾಲೆಯನ್ನು [illegible] ಹೈಸ್ಕೂಲ್ ಬೋರ್ಡಿಂಗಾಗಿ ಮಾಡುವ ವಿಚಾರವು ಇರುವದಾಗಿ ತಿಳಿಯಿತು. [illegible] ಈ ಶಾಲೆಯ ಕಟ್ಟಡವು ಸಣ್ಣ ಸಣ್ಣ ಕೋಣೆಗಳಿಂದ ಕೂಡಿದುದರಿಂದಲೂ, ಇದರ ಗೋಡೆಗಳು ಭದ್ರವಿಲ್ಲದೆ ಮನುಷ್ಯರ ವಸತಿಗೆ ಅಯೋಗ್ಯವಾಗಿರುವುದರಿಂದಲೂ, ಅದರಲ್ಲಿ ಅಡಿಗೆ ಮತ್ತು ಊಟ ಮಾಡಲು ಕೋಣೆಗಳ ಅನುಕೂಲವಿಲ್ಲದ್ದರಿಂದಲೂ, ಮೀಯುವದಕ್ಕೆ ಅಲ್ಲಿ ಬೇರೆ ವ್ಯವಸ್ಥೆ ಇಲ್ಲದ್ದರಿಂದ ಬಹಿರಂಗವಲ್ಲಿ ಮೀಯಬೇಕಾಗಿರುವ ಪ್ರಯುಕ್ತ ಅದು ಆರೋಗ್ಯದ ಮತ್ತು ವಿಹಾರದ ವಿಚಾರದಲ್ಲಿ ಅಸಹ್ಯವಾಗಿರುವದೆ

ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿ ಮೀಟಿಂಗು.

ಶ್ರೀಮತಿ ಕಮಲಾದೇವಿಯ ವರ ದಸ್ತಗಿರಿ ಮತ್ತು ಬಿಡುಗಡೆ.

ಇದೇ ತಾರೀಕು 20 ಮತ್ತು 21 ರಲ್ಲಿ ಅಖಿಲ ತಿರುವಾಂಕೂರು ಯುವಕರ ಸಮ್ಮೇಳನವು ನಿರ್ಧಾರವಾಗಿದ್ದಿತು. ಇದರ ಅಧ್ಯಕ್ಷತೆಯನ್ನು ವಹಿಸಲು ಶ್ರೀಮತಿ ಕಮಲಾದೇವಿಯವರು ಗಿಪ್ಪಿ ತಿರುವೆಂಡ್ರಮ್ಮಿಗೆ ಹೊರಟರು. ಅವರು ತಿರುವಾಂಕೂರು ಗಡಿಯನ್ನು ದಾಟಿದೊಡನೇ ಸ್ಟೇಷನಿನ ಮತ್ತು ತ್ರಿವೆಂಡ್ರಮ್ಮಿನ ಡಿ. ಮ್ಯಾಜಿಸ್ಟ್ರೇಟರು—ಅವರು ತಿರುವಾಂಕೂರು ಪ್ರಾಂತದೊಳಗೆ ಪ್ರವೇಶಿಸಿ ಭಾಷಣ ಮಾಡಬಾರದಾಗಿ ಹೇಳಿದರು. ಆದರೂ ಅವರು ಇದನ್ನು ಉಲ್ಲಂಘಿಸಿ ಮುಂದುವರಿದದ್ದರಿಂದ ಅವರಿಗೆ ಎಂಬತ್ತೈದು ರೂಪಾಯಿಗಳ ದಂಡ ವಿಧಿಸಿ ಅವರ ಮೇಲೆ ಪ್ರತಿ ಬಂಧಕ ಆಜ್ಞೆಯೊಂದನ್ನು ಜಾರಿ ಮಾಡಿದರು. ಆದರೂ ಅವರು ಹಿಂತಿರುಗದೆ ತಾ. 20 ರಲ್ಲಿ ತಿರುವಾಂಕೂರು ನಗರವನ್ನು ಪ್ರವೇಶಿಸಿದರು. ಅಲ್ಲಿ ಅವರಿಗೆ ವಿಶೇಷ ಸ್ವಾಗತವಿದ್ದಿತು. ಅವರು ಅಧ್ಯಕ್ಷತೆಯನ್ನು ವಹಿಸಲು ಸ್ಟೇಷನಿನಿಂದ ಹೊರಟಾಗ ಅವರನ್ನು ಕೂಡಲೇ ಪೋಲೀಸಿನವರು ದಸ್ತಗಿರಿಮಾಡಿ ಮ್ಯಾಜಿಸ್ಟ್ರೇಟರ ಕೋರ್ಟಿಗೆ ಕರಕೊಂಡು ಹೋದರು. ಮ್ಯಾಜಿಸ್ಟ್ರೇಟರು ಅವರನ್ನು ವಿಚಾರ ಮಾಡುವ ವರೆಗೆ ಅಂದರೆ ತಾ. 22ರ ವರೆಗೆ ಬಂಧಿಖಾನೆಯಲ್ಲಿಟ್ಟಿರಬೇಕೆಂದು ಅಪ್ಪಣೆ ಮಾಡಿದರು. ಅನಂತರ ಅವರನ್ನು ಅಲ್ಲಿಯ ಕೇಂದ್ರ ಬಂಧೀಖಾನೆಯಲ್ಲಿಡಲಾಯಿತು. ಆದರೆ ತಾ. 21 ರ ಸಾಯಂಕಾಲ ಪೋಲೀಸಿನವರು ಅವರನ್ನು ತಿನ್ನವೆಲ್ಲಿಗೆ ಕರಕೊಂಡು ಹೋಗಿ ಬಿಟ್ಟು ಬಂದರೆಂದು ತಿಳಿದುಬಂದಿದೆ.

ಬ್ಯಾಂಕುಗಳ ವಿಚಾರ

ರಾಜಾಜಿಯವರ ಪ್ರಕಟಣೆ.

ಮದ್ರಾಸು ಸರ್ಕಾರದ ಮುಖ್ಯ ಮಂತ್ರಿಗಳಾದ ಮಾನ್ಯ ಸಿ. ರಾಜಗೋಪಾಲಾಚಾರ್ಯರು ಈ ಕೆಳಗಿನ ಪ್ರಕಟಣೆಯನ್ನು ಮಾಡಿರುವರು.

'ಕೆಲವು ದಿನಗಳ ಹಿಂದೆ ಮದ್ರಾಸು ಪ್ರಾಂತದ ಕೆಲವು ಬ್ಯಾಂಕುಗಳೆಲ್ಲಾ ಸುರಕ್ಷಿತ ಸ್ಥಿತಿಯಲ್ಲಿದ್ದುವೆಂಬ ವಿಚಾರ ಒತ್ತಿ ಹೇಳಲು ಈ ಪ್ರಕಟಣೆ ಹೊರಡಿಸಲು ಅವಶ್ಯವಾಯಿತು. ಈ ಒದಗಿದ್ದ ಬಿಕ್ಕಟ್ಟಿನ ಸಂದರ್ಭದಲ್ಲಿ ರಿಜರ್ವ್ ಬ್ಯಾಂಕಿನಿಂದ ಸಹಾಯ ಪಡೆದು ಬ್ಯಾಂಕುಗಳು ತಮ್ಮ ಲೆಕ್ಕಗಳನ್ನು ತಪಾಸಣೆ ಮಾಡಿದರೆ ನ್ಯಾಶನಲ್ ರಿಜರ್ವ್ ಬ್ಯಾಂಕು ಈ ಬ್ಯಾಂಕುಗಳಿಗೆ ಅವಶ್ಯವಾದ ಸಹಾಯ ನೀಡಲು ಸಿದ್ಧವಿದೆ. ನಾನು ಇಲ್ಲಿಯ ರಿಜರ್ವ್ ಬ್ಯಾಂಕಿನ ಬ್ರಾಂಚ್ ಮನೇಜರೊಂದಿಗೆ ಹಿಂದಿನ ವಾರದಲ್ಲಿ ಸಮಾಲೋಚನೆ ನಡೆಸಿ ಇದರ ಫಲಿತಾಂಶವಾಗಿ ಈ ಪ್ರಕಟಣೆಯನ್ನು ಕೊಟ್ಟಿದ್ದಾಗಿದೆ. ಲಕ್ಷ್ಯಗೇಡಿನ ಅಥವಾ ಸೋಮಾರಿತನದ ವದಂತಿಗಳಿಗೂ ಕಿವಿ ಕೊಡುವುದು ಸರಿಯಲ್ಲ. ಬಜಾರ ಗಲಾಟೆಗಳಿಂದ ಯಾವ ಎಚ್ಚರಿಕೆಯಿಲ್ಲದ ಮದ್ರಾಸಿನ ಬ್ಯಾಂಕುಗಳಿಗೆ ತೊಂದರೆಯನ್ನು ತರಬಲ್ಲರೆಂದು ನಾನು ಹೇಳಬಲ್ಲೆ.'

ತಾ. 20-8-38 ರಲ್ಲಿ ಈ ಸಭೆಯು ಮಡಿಕೇರಿ ಜಮೀನ್ದಾರರ ಸಂಘದ ಹಾಲ್‌ನಲ್ಲಿ ಮ. ರಾ. ರಾ. ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

1. ಕಳೆದ ಮೀಟಿಂಗಿನ ನಡವಳಿಕೆಗಳನ್ನು ಓದಿ ಒಪ್ಪಲಾಯಿತು.

2. ಜುಲೈ ತಿಂಗಳ ವರೆಗಿನ ಲೆಕ್ಕಗಳನ್ನು ಓದಿ ಒಪ್ಪಲಾಯಿತು.

3. ಆಸ್ಸಾಂ ಪ್ರಾ. ಕಾ. ಕಮಿಟಿಯ ಅಪೇಕ್ಷೆ ಮೇರೆಗೆ ಅಸ್ಸಾಮಿನಲ್ಲಿ ಪ್ರವಾಹದಿಂದ ತತ್ತರಿಸಿ ನೆರೆಯ ಹಾವಳಿಗೆ ಸಿಕ್ಕಿ ಕಷ್ಟ ನಷ್ಟಪಟ್ಟ ಜನರ ಸಹಾಯಾರ್ಥವಾಗಿ ಸೇರಿದ್ದ ಕಾಂಗ್ರೆಸ್ ಸದಸ್ಯರು ಕೊಟ್ಟ ಚಂದಾ ರೂ. 8-4-0 ಗಳಿಗೆ ಕೊಡಗು ಜಿಲ್ಲಾ ಕಮಿಟಿಯ ಫಂಡಿನಿಂದ ರೂ. 4 ನ್ನು ಸೇರಿಸಿ ರೂ 12-4-0 ಅನ್ನು ಆಸ್ಸಾಂ ಪ್ರಾ. ಕಾ. ಕಮಿಟಿಗೆ ಕಳುಹಿಸುವಂತೆ ತೀರ್ಮಾನವಾಯಿತು.

4. ಇನ್ನು ಮೇಲೆ ಮೀಟಿಂಗು ನೋಟೀಸುಗಳನ್ನು ಪೋಸ್ಟು ಮುಖಾಂತರವೇ ಕಳುಹಿಸಬೇಕೆಂದು ನಿರ್ಣಯಿಸಲಾಯಿತು.

5. ಕೊಡಗಿನ ಪರಿಸ್ಥಿತಿಯನ್ನು ಕುರಿತು ಈ ಕೆಳಗಿನ 3 ಠರಾವುಗಳು ಪಾಸಾದವು.

(1) "ಈ ಕಾಂಗ್ರೆಸ್ ಕಮಿಟಿಯು ಕೊಡಗಿನ ಭವಿಷ್ಯತ್ತಿನ ಪ್ರಶ್ನೆಯನ್ನು ಪರ್ಯಾಲೋಚಿಸಿ, ಮತ್ತು ಪ್ರತ್ಯೇಕ ಪ್ರಾಂತವಾಗಿರುವುದು ಕೊಡಗಿನ ಹಿತದೃಷ್ಟಿಯಿಂದ ಅತ್ಯವಶ್ಯವೆಂದೂ, ಹಾಗೆ ಪ್ರತ್ಯೇಕ ಜವಾಬ್ದಾರಿ ಸರಕಾರವುಳ್ಳ ಪ್ರಾಂತದ ಎಲ್ಲಾ ಹಕ್ಕು ಭಾದ್ಯತೆಗಳನ್ನು ಪಡೆಯುವುದು ಕೊಡಗಿನ ಹಿತಕ್ಕೆ ಮೇಲು ಎಂದು ಅಭಿಪ್ರಾಯಪಡುತ್ತದೆ. ಈ ಕಮಿಟಿಯು ತಾ. 13-7-38 ರಲ್ಲಿ ಕೊಡಗಿನ ಜನತೆಯನ್ನು ಕುರಿತು ಮಾಡಲಾದ ಮನವಿಯನ್ನು ಒಪ್ಪುತ್ತದೆ, ಮತ್ತು ಅವನ್ನು ಬೆಂಬಲಿಸುತ್ತದೆ. ಇಲ್ಲಿಯ ಅಧಿಕಾರವರ್ಗವನ್ನು ಕುರಿತು ಕರೆದು ಒಟ್ಟು ತಮ್ಮ ಕೈಲಾಗುವ ಸಹಾಯ ಮಾಡಬೇಕೆಂದು ಇಂಡಿಯನ್ ನ್ಯಾಶನಲ್ ಕಾಂಗ್ರೆಸಿನ ವರ್ಕಿಂಗ್ ಕಮಿಟಿಯನ್ನು ವಿನಯಪೂರ್ವಕ ಕೇಳಿಕೊಳ್ಳುತ್ತದೆ."

ಸೂಚಕರು—ಮ. ಪದ್ಮನಾಭ ಪಡಿಪ್ಪಿನವರು. ಅನುಮೋದಕರು—ಗಣಪತಿಯವರು.

(2) "ಕೊಡಗು ಪ್ರಾಂತದ ಚರಿತ್ರೆ ಮತ್ತು ಜನಾಂಗದ ವಿಷಯವಾಗಿ ಇಂಡಿಯನ್ ನ್ಯಾಶನಲ್ ಕಾಂಗ್ರೆಸಿನ ಪ್ರತಿನಿಧಿ ನಮ್ಮಲ್ಲಿಗೆ ಬರಬೇಕೆಂಬ ವಿಚಾರವನ್ನು ಚರ್ಚಿಸಿ ಈ ಆಗಸ್ಟು ತಾರೀಖು 1 ರ ಧಾರವಾಡದ 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ ಅವರ ವಿಶೇಷ ಸುದ್ದಿಗಾರರಿಂದ ಬರೆಯಲ್ಪಟ್ಟ 2 ವಾಕ್ಯಗಳನ್ನು ಕೊಡಗು ಕಾಂಗ್ರೆಸ್ ಕಮಿಟಿಯು ವ್ಯಸನದಿಂದ ಅವಲೋಕಿಸುತ್ತದೆ. ಆ ಪತ್ರಿಕೆಯಲ್ಲಿ ಕೊಡಗಿನ ಕಾಂಗ್ರೆಸಿನವರು ಯುರೋಪಿಯನ್ ಪ್ಲಾಂಟರುಗಳೊಂದಿಗೆ ಸೇರಿಕೊಂಡಿರುವರೆಂಬುದನ್ನು ಉಲ್ಲೇಖಿಸಿರುವುದನ್ನು ಈ ಕಮಿಟಿಯು ಖಂಡಿಸುತ್ತದೆ. ಕೊಡಗಿನ ಕಾಂಗ್ರೆಸಿನವರ ಮೇಲೆ ತಪ್ಪು ಅಭಿಪ್ರಾಯಗಳನ್ನು ಕೊಡಲು ಯಾರೂ ಕಾರಣರಿಗೆ ಗಿರಬಾರದೆಂಬ ನಂಬಿಕೆಯಿಂದ ಆ ವರದಿಯು ಸರಿಯಲ್ಲವೆಂದು ಈ ಕಮಿಟಿಯು ಅರಿಕೆ ಮಾಡುತ್ತದೆ. ಇಂಡಿಯನ್ ನ್ಯಾಶನಲ್ ಕಾಂಗ್ರೆಸಿನ ಅಧ್ಯಕ್ಷರ ವಿಶೇಷ ಮತ್ತು ಕಾರ್ಯದ ಮೇರೆ ಈ ಕಮಿಟಿಗೆ ಪೂರ್ಣ ವಿಶ್ವಾಸವಿರುವುದರಿಂದ, ಈ ಕಮಿಟಿಯಿಂದ ಅಧಿಕಾರ ಹೊಂದದ ಮತ್ತು ಶಿಫಾರಸು ಪಡೆಯದ ವ್ಯಕ್ತಿಯ ಯಾ ವ್ಯಕ್ತಿಗಳ ಹೇಳಿಕೆಯನ್ನು ಕೇಳಿ ಕಾಂಗ್ರೆಸ್ ಅಧ್ಯಕ್ಷರು, ಆ ಪತ್ರಿಕೆಯಲ್ಲಿ ಪ್ರಕಟಿಸಿದಂತೆ, ಕೊಡಗು ಕಾಂಗ್ರೆಸಿನವರ ಕಾರ್ಯದ ಮೇಲೆ ತಮ್ಮ ಅಸಮ್ಮತಿಯನ್ನು ಸೂಚಿಸಿರಲಾರರೆಂದು ಈ ಕಮಿಟಿಯು ನಂಬುತ್ತದೆ. ಆದುದರಿಂದ ಎಂಥಾ ಪ್ರಸಂಗದಲ್ಲೂ ಕೊಡಗಿನ ಕಾಂಗ್ರೆಸಿನವರು ಕಾಂಗ್ರೆಸ್ ತತ್ವಕ್ಕೆ ವಿರುದ್ಧವಿರುವ ವ್ಯಕ್ತಿಗಳ ಅಥವಾ ಅಂಥಾ ಪಕ್ಷಗಳಿಂದ ಕೂಡಿದ ಸಂಸ್ಥೆಗಳೊಂದಿಗೆ ಸಹಕರಿಸಲಾರರೆಂಬ ಭರವಸೆಯನ್ನು ಈ ಕಮಿಟಿಯು ಇಂಡಿಯನ್ ನ್ಯಾಶನಲ್ ಕಾಂಗ್ರೆಸಿನ ಪ್ರೆಸಿಡೆಂಟರಿಗೆ ಕೊಡುತ್ತದೆ; ಮತ್ತು ಈ ಠರಾವನ್ನು ಇಂಡಿಯನ್ ನ್ಯಾಶನಲ್ ಕಾಂಗ್ರೆಸಿನ ವರ್ಕಿಂಗ್ ಕಮಿಟಿಗೆ ತಿಳಿಸಲು ತೀರ್ಮಾನಿಸುತ್ತದೆ."

ಸೂಚಕರು—ಮ. ಪೊನ್ನಪ್ಪನವರು. ಅನುಮೋದಕರು—ಮ. ಚೆಂಬಾಂಡ ಮಾದಪ್ಪನವರು.

(3) ಈ ವಿಷಯಗಳನ್ನು ವರ್ಕಿಂಗ್ ಕಮಿಟಿಯ ಮುಂದಿಡಲು ಮ. ಗಳಾದ ಪಂದ್ಯಂಡ ಕಾರ್ಯಪ್ಪನವರು, ಕೊಕ್ಕಂಡ ಕರುಂಬಯ್ಯನವರು ಮತ್ತು ಪಿ. ಸಿ. ಬೆಳ್ಳಿಯಪ್ಪನವರುಗಳಿಂದ ಕೂಡಿದ ಒಂದು ಡೆಪ್ಯೂಟೇಶನನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಬಳಿಗೆ ಕಳುಹಿಸಲು ತೀರ್ಮಾನಿಸಲಾಯಿತು. ಇದರ ಪ್ರಯಾಣದ ಖರ್ಚಿನ ಬಗ್ಗೆ ರೂ. 50 ಮಂಜೂರು ಮಾಡಲಾಯಿತು.

6 ಕಾಂಗ್ರೆಸ ಅಧ್ಯಕ್ಷರಾದ ಸುಬ್ಬಯ್ಯನವರು ಪಕ್ಷಿ ಉಂಡಾ ಸ್ಥಾನ ಪ್ರವಾಸವನ್ನು ಕೈಕೊಳ್ಳುವಾಗ ಕೋಗಿಗೂ ಅವರನ್ನು ಬರಮಾಡಿಕೊಳ್ಳಬೇಕೆಂದೂ, ಆ ಬಗ್ಗೆ ಪತ್ರವ್ಯವಹಾರ ನಡೆಸಬೇಕೆಂದೂ ತೀರ್ಮಾನಿಸಲಾಯಿತು.

ಸಿ. ಯಂ ಪೂಣಚ್ಚ,
(ಸೆಕ್ರೆಟರಿ.)

ಡೆಹ್ಲಿ ಸ್ವಾತಂತ್ರ್ಯಕ್ಕೆ ಸುಧಾರಣೆ.

ಸತ್ಯಾಗ್ರಹವಾಗುವುದೇ?

ಡೆಹ್ಲಿ ಸ್ವಾತಂತ್ರ್ಯದ ಸುಧಾರಣೆ ಬಗ್ಗೆ ಅಲ್ಲಿಯ ಜಿಲ್ಲಾ ಕಾಂಗ್ರೆಸು ಕಮಿಟಿಯವರು ಅಲ್ಲಿಯ ಸ್ಥಳೀಯ ಸರಕಾರಕ್ಕೆ ಈ ಕೆಳಗಿನ ಕೋರಿಕೆಗಳನ್ನು ಕಳುಹಿಸಲಿರುವರು. 'ರಾಜಕೀಯ ಕೈದಿಗಳನ್ನೆಲ್ಲಾ ಬಿಡುಗಡೆ ಮಾಡಬೇಕು. ಅಲ್ಲಿಯ ಆಡಳಿತೆಯ ವಿಚಾರದಲ್ಲಿ ಚೀಫ್ ಕಮಿಷನರರಿಗೆ ಸಹಾಯ ನೀಡಲು ಚುನಾಯಿತ ಮೆಂಬರುಗಳಿಂದ ಕೂಡಿದ ಒಂದು ಎಡ್ವೈಸರಿ ಬೋರ್ಡನ್ನು ಸ್ಥಾಪಿಸಬೇಕು. ಸ್ವಾತಂತ್ರ್ಯ ಸಂಪೂರ್ಣ ಸರಕಾರ ಅನುಭವಿಸುತ್ತಿರುವ ಪ್ರಾಂತಗಳಿಗಿರುವ ಹಕ್ಕುಗಳನ್ನು ಡೆಹ್ಲಿ ಪ್ರಾಂತಕ್ಕೂ ಕೊಡಬೇಕು.' ಬರುವ ಕೆಲವು ತಿಂಗಳುಗಳಲ್ಲಿ ಕೆಲವು ಬಿಲ್ಲುಗಳೂ ಹೇಳಲ್ಪಡುವುವು.

ಈ ನ್ಯಾಯವಾದ ಕೋರಿಕೆಗಳನ್ನು ಸರಕಾರದವರು ಸಲ್ಲಿಸದ ಪಕ್ಷದಲ್ಲಿ ಡೆಹ್ಲಿ ಪ್ರಾಂತ್ಯದಲ್ಲಿ ಸತ್ಯಾಗ್ರಹವನ್ನು ಪ್ರಾರಂಭಿಸಲು ಅಲ್ಲಿಯ ಸ್ಥಳೀಯ ಕಾಂಗ್ರೆಸು ಕಮಿಟಿಗೆ ಅಧಿಕಾರ ಕೊಡಲಾಗಿದೆ.

ನೋಟೀಸು.

ಸೆಂಟ್ರಲ ಬ್ಯಾಂಕಿನಲ್ಲಿ ಫಿಕ್ಸ್‌ಡ್ ಡಿಪಾಜಿಟ್ಟು ತಾ. 1-8-1938 ರಿಂದ ಹೊಂದಿಕೊಳ್ಳಲಾಗುತ್ತದೆಯೆಂದು ಈ ಹೊಸದರಲ್ಲೇ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸಿದ್ದು ಸರಿಯಷ್ಟೆ. ಆದರೆ ಸದರಿ ಡಿಪಾಜಿಟ್ಟಿನ ರೂಲ್ಸು, ಬಡ್ಡಿ ದರ್‍ಗಳ ಕೆಲವರಿಗೆ ಗೊತ್ತಿಲ್ಲದಿರುವುದರಿಂದ ನಮಗೆ ತಿಳಿಸುಬಂದಿದ್ದರಿಂದ ಅಂಥಾ ಮಹನೀಯರು ಈ ಕೆಳಗಿನ ಆಫೀಸಿಗೆ ಪತ್ರ ಮೂಲಕ ಬಂದು ಕೇಳಿದಲ್ಲಿ ಅಂಥವರಿಗೆ ರೂಲ್ಸು ಒಂದು ನಕಲನ್ನು ಬ್ಯಾಂಕಿನಿಂದ ಕಳುಹಿಸಲಾಗುವುದೆಂಬ ಸಂಗತಿ ಈ ಮೂಲಕ ತಿಳಿಸಿದೆ.

ಪಿ. ಟಿ. ಐಯ್ಯಪ್ಪ.
ಗೌರವ ಕಾರ್ಯದರ್ಶಿ,
ಸೆಂಟ್ರಲ್ ಬ್ಯಾಂಕು ಆಫೀಸು.

ಕೊಡಗಿನ ಪ್ರಶ್ನೆ.

ತಾ. 1-8-38 ರ 'ಸಂಯುಕ್ತ ಕರ್ನಾಟಕ' ಪತ್ರಿಕೆಯಿಂದ ಎತ್ತಿ ಹಾಕಿದ್ದು.

(ವಿಶೇಷ ಸುದ್ದಿಗಾರರಿಂದ)

ವರ್ಕಿಂಗ್ ಕಮಿಟಿಯ ಕಡೆಗೆ ಈಗ ಬಂದ ಪತ್ರ, ತಂತಿ ಮುಂತಾದವುಗಳನ್ನು ನೋಡಿದರೆ ಕೊಡಗಿನ ಕಾಂಗ್ರೆಸ್ ಕಾರ್ಯಕರ್ತರಲ್ಲಿಯೇ ಇಬ್ಬಣವಾದಂತೆ ಕಂಡುಬರುತ್ತದೆ. ಕೊಡಗನ್ನು ಸಂಯುಕ್ತ-ಕರ್ನಾಟಕದ ಪ್ರಾಂತೀಕರಣವಾಗುವವರೆಗೆ-ಮದ್ರಾಸಿಗೆ ಸೇರಿಸಬೇಕೆಂದು ಹರಿಪುರ ಕಾಂಗ್ರೆಸಿನಲ್ಲಿ ಠರಾವಾಯಿತು. ಇದರಿಂದ ನಿಜವಾಗಿ ಕೊಡಗಿನ ಹಿತವಿದೆ. ಇದರಿಂದ (1) ಅಲ್ಲಿಯ ಚೀಫ್ ಕಮಿಷನರನ ನಿರಂಕುಶ ಆಳಿಕೆಯು ನಷ್ಟವಾಗುವುದು. (2) ಅಲ್ಲಿ ಕಾಂಗ್ರೆಸ್ ಪ್ರಾಬಲ್ಯವಾಗುವುದು. (3) ಮದ್ರಾಸ್ ಕಾಂಗ್ರೆಸ್ ಮಂತ್ರಿ ಮಂಡಳದಿಂದ ಅನೇಕ ಲಾಭಗಳಾಗುವವು. (4) ಮುಂದೆ ಕರ್ನಾಟಕ ಪ್ರಾಂತೀಕರಣದ ಕಾಲಕ್ಕೆ ಮದ್ರಾಸಿನ ಉಳಿದ ಕನ್ನಡ ಭಾಗಗಳೊಡನೆ ಕರ್ನಾಟಕಕ್ಕೆ ಒಂದಾಯಸವಾಗಿ ಕೂಡಿಕೊಳ್ಳುವದು

ವರ್ತಮಾನ ಸಂಗ್ರಹ.

ಒಳದೇಶ.

ಕೊಡಗಿನ ಚೀಫ್ ಕಮಿಷನರವರು ಈ ದಿನ ಬೆಂಗಳೂರಿನಿಂದ ಮಡಿಕೇರಿಗೆ ಬಂದು ತಾರೀಕು 31ರಲ್ಲಿ ವಾಪಸು ಹೋಗುವರೆಂದು ವರ್ತಮಾನ

ಮಡಿಕೇರಿಯಲ್ಲಿ ವಾಸವಿದ್ದ ಮ. ಕೊಡಂದೆರ ಪಿ. ಕ. ಅಯ್ಯಪ್ಪನವರು ಈ ತಾ 24ರ ರಾತ್ರಿ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ

ಅಸಿಸ್ಟೆಂಟ್ ಇಂಜಿನೀಯರಾದ ಮ. ಬಬ್ಬೀರಿಯಂಡ ಮುತ್ತಣ್ಣನವರು ಕಲ್ಲಿಕೋಟೆಯಿಂದ ಮಂಡಿಗಲ್ಲಿಗೆ ವರ್ಗಾಯಿಸಲ್ಪಟ್ಟಿರುವರೆಂದು ತಿಳಿದುಬರುತ್ತದೆ

ತಾ. 27-8-38 ರಲ್ಲಿ ಶ್ರೀಯುತ ಬಿ. ಕೆ ಸುಬ್ರಾಯನವರು ಮಡಿಕೇರಿ ವೇದಾಂತ ಸಂಘದಲ್ಲಿ 'ಕೃಷ್ಣಲೀಲಾ' ಎಂಬ ಹರಿಕಥೆಯನ್ನು ಮಾಡುವರಾಗಿ ತಿಳಿಯುತ್ತೇವೆ.

ಈ ದಿನ ಸಾಯಂಕಾಲ 5-30 ಗಂಟೆಗೆ ಮಡಿಕೇರಿ ಸ್ಪೆಷಲ್ ಬೋರ್ಡ್ ಶಾಲೆಯಲ್ಲಿ ಉತ್ತರ ಇಂಡಿಯಾದ ಶ್ರೀಮಾನ್ ಪಂಡಿತ ಬಜಪೆಯವರು ಹಿಂದಿ ಭಾಷೆಯನ್ನು ಕುರಿತು ಹಿಂದಿಯಲ್ಲಿ ಒಂದು ವ್ಯಾಖ್ಯಾನವನ್ನು ಮಾಡುವರಾಗಿ ತಿಳಿಯಬರುತ್ತದೆ.

ರಿಂದಲೂ, ಆ ಕಟ್ಟಡವು ಶೀತವಾಗಿ ಆರೋಗ್ಯಕ್ಕೆ ಕೇಡು ಬರುವ ಸಂಭವವಿರುವುದರಿಂದಲೂ, ಶಾಲೆ ಮೊದಲಾದುವನ್ನು ಕೂಡಿಡುವ ಮನೆಗಳ ಸೌಕರ್ಯಗಳಿಲ್ಲವಿರುವುದರಿಂದಲೂ, ಆ ಕಟ್ಟಡವು ಶಾಲಾ ಬೋರ್ಡಿಂಗಿಗೆ ಅಯೋಗ್ಯವಿರುವುದು. ಈಗಿನ ಕಟ್ಟಡವು ವಿಶಾಲತೆಯುಳ್ಳದ್ದಾಗಿಯೂ, ಆರೋಗ್ಯದೃಷ್ಟಿಯಿಂದಲೂ ಯೋಗ್ಯವಿರುವುದರಿಂದ ಕೆಲವು ರೂಪಾಯಿಗಳ ಉಳಿಕೆಗಾಗಿ ವಿದ್ಯಾರ್ಥಿಗಳಿಗೆ ಅನಾನುಕೂಲತೆಯನ್ನು ಮಾಡುವದು ಸರಿಯಲ್ಲವೆಂದು ಹೇಳಬೇಕಾಗಿದೆ.

ಕೊಡಗಿನಲ್ಲಿ ಒಂದೇ ವಿದ್ಯಾ ಇಲಾಖೆ ಇರುವದಾದರೂ ಈಗ ಎರಡು ಇರುವಂತೆ ಗೋಚರವಾಗುತ್ತದೆ. ಡಿ. ಇನ್ಸ್‌ಪೆಕ್ಟರವರ ಪ್ರಾಥಮಿಕ ಪರೀಕ್ಷೆ ಪಾಸಾದ ನಂತರ 1 ನೇ ಫಾರಮಿಗೆ ಹೈಸ್ಕೂಲಿಗೆ ಸೇರಬೇಕಾದರೆ ಒಂದು ಪರೀಕ್ಷೆ ಇದೆ. ಎಲಿಮೆಂಟರಿ ಶಾಲೆಯಿಂದ ಹೈಸ್ಕೂಲಿಗೆ ಹೋಗುವದಾದರೂ ಒಂದು ಪರೀಕ್ಷೆಯು ಇದ್ದೇ ಇದೆ. ಪರೀಕ್ಷೆಗಳು ಚಿಕ್ಕ ಮಕ್ಕಳಿಗೆ ಹಿತಕರವಾದುವಲ್ಲ. ಹೀಗೆ ಮೇಲೆ ಮೇಲೆ ಪರೀಕ್ಷೆಯಾಗುವದರಿಂದ ಹುಡುಗರ ಮೇಲೆ ಅದರಿಂದ ದುಷ್ಪರಿಣಾಮವಾಗಬಾರದು. ಅದ್ದರಿಂದ ಈ ವಿಚಾರ ಪರ್ಯಾಲೋಚಿಸಿ ಆದಷ್ಟು ಬೇಗನೆ ಇದನ್ನು ನಿವಾರಿಸಬೇಕಾಗಿದೆ.

ಈಗಿನ ಈ ಯೋಜನೆಯನ್ನು ಜಾರಿಗೆ ತರುವಾಗ ನಮ್ಮ ಈ ಸೂಚನೆಗಳನ್ನು ಮನಸ್ಸಿನಲ್ಲಿಟ್ಟು ವರ್ತಿಸಬೇಕಾಗಿ ಪ್ರಾರ್ಥನೆ,

'ದಕ್ಷಿಣ ಕೊಡಗಿನ ನಿವಾಸಿಗಳು'

ತಾ 19-8-38 ರಿಂದ 26-8-38ರ ವರೆಗೆ ಮಡಿಕೇರಿಯಲ್ಲಿ 7 ಇಂಚು 15 ಸೆಂಟು ಮಳೆಯಾಗಿದೆ ಈ ವಾರ ಕೊಡಗಿನ ಹಲವು ಕಡೆಗಳಿಗೆ ಮಳೆ ಬಿದ್ದದ್ದರೂ ಬತ್ತುಗದ್ದೆಗಳಿಗೆ ಇನ್ನೂ ವ್ಯವಸಾಯಕ್ಕೆ ಸಾಕಷ್ಟು ಮಳೆಯಾಗಿರುವುದಿಲ್ಲವೆಂದು ವರ್ತಮಾನ.

ಸರ್ಕಾರದವರು ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡುತ್ತಿರುವ ಗ್ರ್ಯಾಂಟಿನಲ್ಲಿ ಏಳುಸಾವಿರ ರೂಪಾಯಿ ಕಡಿಮೆ ಮಾಡುವುದರ ಸಮ್ಮಂಧ ಡಿಸ್ಟ್ರಿಕ್ಟ್ ಬೋರ್ಡಿನವರ ಡೆಪ್ಯುಟೇಷನೊಂದು ಚೀಫ್ ಕಮಿಷನರವರನ್ನು ಈ ತಾ. 29ರಲ್ಲಿ ಮಡಿಕೇರಿಯಲ್ಲಿ ಭೇಟಿಯಾಗುವದೆಂದು ತಿಳಿಯುತ್ತೇವೆ.

ಹಿಂದೂದೇಶ.

ಬಂಗಾಳದಲ್ಲಿಯ ನೋಯಾಖಾಲಿ ಎಂಬಲ್ಲಿ ನೊನ್ನೆ ಬೆಳಿಗ್ಗೆ ಜಮ್ಮಾದಿ ಗಂಟೆಗೆ ಭೂಕಂಪದ ಧಕ್ಕೆ ಬಡಿಯಿತು

ಬಂಗಾಳ ಸರಕಾರದವರು. ಇದೇ ಭಾಗ, ಯಾದ ವರ್ತಮಾನ ಇಲ್ಲದೆ 144 ಮಂದಿ ಕೈದಿಗಳನ್ನು ಬಿಡುಗಡೆ ಮಾಡಲು ಅಜ್ಞೆ ಮಾಡಿದ್ದಾರೆ

ಅಲ್ಲಹಬಾದ್ ಪ್ರಾಂತದಲ್ಲಿ, ನದಿಗಳ ಮಹಾ ಪ್ರವಾಹದಿಂದ 350 ಗ್ರಾಮಗಳು ಮುಳುಗಿ ಹೋಗಿವೆ. 15 ಸಾವಿರ ಮಂದಿ ಜನ ಭಯಗೊಂಡಿದ್ದಾರೆ.

ಸಿಂಧ್ ಪ್ರಾಂತದಲ್ಲಿ, ಕಾಂಗ್ರೆಸ್ ಮಂತ್ರಿ ಮಂಡಲಿ ನಿರ್ಮಾಣವಾಗುವ ಬಗೆಗೆ ಪ್ರಯತ್ನಗಳು ನಡೆಯುತ್ತಿವೆ ಸರ್ದಾರ್ ವಲ್ಲಭಭಾಯಿ ಪಟೇಲರು ಅಲ್ಲಿಗೆ ತೆರಳಿರುವರು.

ಒರಿಸ್ಸದ ಪ್ರಧಾನರಾದ ಶ್ರೀ ವಿಶ್ವನಾಥ ದಾಸ್‌ರವರು, ಡಾಕ್ಟರರ ಸೂಚನೆಯಂತೆ, ಸಂಪೂರ್ಣ ವಿಶ್ರಾಂತಿ ಪಡೆಯಲು ಸಾಲಾಚ್‌ನ ಗುಡ್ಡಗಾಡುಗಳಿಗೆ ಹೋಗಿ, ಅಲ್ಲಿ ಸ್ವಲ್ಪ ಕಾಲ ಇರುವರೆಂದು ತಿಳಿದುಬಂದಿದೆ.

ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್‌ರವರು, ಯುರೋಪಿಗೆ ಹೊರಟು ಹೋದರು. ಲಂಡನ್ನಿನಲ್ಲಿಯೇ ಅವರು ಕಲಕಾಲ ಕಳೆಯುವರು; ಪ್ಯಾರಿಸಿಗೂ ಹೋಗಿ ಬರುವರು. ಯೂರೋಪಿಗವರು ತೆರಳಿರುವುದು ಇದು ನಾಲ್ಕನೆಯ ಬಾರಿ

ತಿರುವಾಂಕೂರು ನ್ಯಾಷನಲ್ ಮತ್ತು ಕ್ವಿಲನ್ ಬ್ಯಾಂಕು ಮೊದಲು ಮುಚ್ಚಿತು. ಇದನ್ನು ಜೆಕ್ಮನ್ ಕಮರ್ಷಿಯಲ್ ಬ್ಯಾಂಕು ಅನುಸರಿಸಿತು. ಮುಂದಿನ ಸರದಿ ಬೆಂಗಳೂರು ದಂಡಿನ ಕ್ಯಾಲಿಕಟ್ ಬ್ಯಾಂಕಿಗೆ ಬಂತು. ಈ ಬ್ಯಾಂಕು ಇದೇ 16 ನೇ ತಾರೀಕಿಗೆ ಮುಚ್ಚಲ್ಪಟ್ಟಿತು.

ಡಾ. ಖಾರೆಯವರ ಕುರಿತು ಆಗಿರುವ ಕಾಂ. ವ. ಕಮಿಟಿಯ ತೀರ್ಮಾನವನ್ನು ನಿಷೇಧಿಸುವ ಉದ್ದೇಶದಿಂದ, ನಾಗ್ಪುರ ಪ್ರಾಂತದ 100 ಮಂದಿ ವಿದ್ಯಾರ್ಥಿಗಳು ಸದ್ಯದಲ್ಲಿಯೇ ಶಿವಗಾಂಗೆ ತೆರಳಿ, ಅಲ್ಲಿ ಮಹಾತ್ಮರ ಭೇಟಿ ಮಾಡಿ, ಅವರಲ್ಲಿ ಬಿನ್ನೈಸಿಕೊಳ್ಳುವರೆಂದು ತಿಳಿದು ಬಂದದೆ

ಮಹಾತ್ಮ ಗಾಂಧಿಯವರ ವಾರ್ಧಾ ವಿದ್ಯಾಭ್ಯಾಸ ಯೋಜನೆಯು ಜಾರಿಗೆ ತರೆ ಅಸಾಧ್ಯವಾದದೆಂದೂ, ಅದನ್ನು ತನ್ನ ಪ್ರಾಂತ್ಯದಲ್ಲಿ ಪರೀಕ್ಷಾರ್ಥವಾಗಿಯೂ ಕೂಡ ಪ್ರಯತ್ನಿಸುವದಿಲ್ಲವೆಂದೂ ಬಂಗಾಳದ ಪ್ರಧಾನರಾದ ಫಜುಲುಲ್ ಹಕ್ ರವರ ಹೇಳಿಕೆ

ಕ್ವಿಲಾನಿನ ಡಿಸ್ಟ್ರಿಕ್ಟ್ ಜಡ್ಜಿಯವರು ತಿರುವಾಂಕೂರು ನೇಶನಲ್ ಬ್ಯಾಂಕನ್ನು ಮುಚ್ಚಿಸಿಬಿಡಬೇಕೆಂದು ಮಾಡಿದ್ದ ತೀರ್ಮಾನದ ಮೇಲೆ ಆ ಬ್ಯಾಂಕಿನವರು ತಿರುವಾಂಕೂರು ಹೈಕೋರ್ಟಿನಲ್ಲಿ ಅಪೀಲು ಮಾಡಿಕೊಂಡರು ಅದರೆ ನ್ಯಾಯಾಧೀಶರು ಅವರ ಅಪೀಲನ್ನು ವಜಾಮಾಡಿರುವರು

ಸಿಲೋನಿನ ರಾಷ್ಟ್ರ ಸಭೆಯ ಪಿಂಟ್ ದಲಗರು ತಮ್ಮ ದ್ವೀಪದ ರಾಜ್ಯದ ಸ್ಥಿತಿಯ ವಿಷಯದಲ್ಲಿ ತಮ್ಮ ಮತವನ್ನು ಪ್ರದರ್ಶಿಸಿದ್ದಾರೆ. ಇನ್ನು ಕೆಲ್ಸ ಪರೀಕ್ಷೆಯ ಕಾಲ ಮುಗಿದದ್ದರಿಂದ ತಮಗೆ ಜಾಗ್ರತೆ ಸ್ವರಾಜ್ಯ ಕೊಡಬೇಕೆನ್ನುವ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ

ಬರ್ಮಾದಲ್ಲಿ ಈಚೆಗೆ ನಡೆದ ಗಲಭೆಯಲ್ಲಿ ಅಲ್ಲಿಗೆ ಹೋಗಿ ನೆಲೆಸಿದ್ದವರಲ್ಲಿ ಹದಿನಾರು ಸಾವಿರ ಮಂದಿ ಹಿಂದೂ ಪ್ರಜೆಗಳಿಗೆ ನಷ್ಟವಾಗಿದೆಯೆಂದೂ ಆ ಸಂಬಂಧ ಬರ್ಮಾ ಸರಕಾರವು ಇವರಿಗೆಲ್ಲ ಪರಿಹಾರದ್ರವ್ಯವನ್ನು ಕೊಡುವಂತೆ ಬರ್ಮ ಸರಕಾರವನ್ನು ಕೇಳಿಕೊಳ್ಳಬೇಕೆಂದೂ ಕಲ್ಕತ್ತೆಯಲ್ಲಿ ನಡೆದ ಒಂದು ಸಾರ್ವಜನಿಕ ಸಭೆಯಲ್ಲಿ ನಿರ್ಧಾರವಾಯಿತು.

'ಹಿಂದೂ ಜನಾಂಗದ ಹಿತಾಸಕ್ತಿಗೆ, ಸಂಪ್ರದಾಯಿಕ ನಿರ್ಣಯ ವಿರುದ್ಧ ಚಳವಳಿ, ತೀರಾ ವಿರೋಧವಾಗಿದೆ; ಹಿಂದೂಸ್ಥಾನವನ್ನು, ಸರ್ವ ಪ್ರಕಾರದಿಂದಲೂ ಪ್ರೋತ್ಸಾಹಿಸಲೇ ಬೇಕು. ಇದು ಸ್ವಾತಂತ್ರ್ಯ ಮಾರ್ಗದಲ್ಲಿರುವ ಒಂದು ಮೈಲಿಗಲ್ಲು'— ಹೀಗೆಂದು ರಾಷ್ಟ್ರಪತಿ ಸುಭಾಷ್‌ಚಂದ್ರ ಬೋಸ್‌ರವರು, ತಮ್ಮ ಅಭಿಯವನ್ನು ಪತ್ರಿಕಾಸಂದೇಶದ ಮೂಲಕವಾಗಿ ಪ್ರಕಟಿಸಿದ್ದಾರೆ

1937 ನೇ ಇಸವಿ, ಜುಲೈ 15 ನೇ ತಾರೀಕಿನಿಂದ, 1938 ನೇ ಇಸವಿ ಜೂನ್ 30 ರ ವರೆಗೆ, ಮದ್ರಾಸು ಸಂಸ್ಥಾನದ ಮಂತ್ರಿಗಳ ಪ್ರಯಾಣದ ಭತ್ತೆಯು ಮೊತ್ತ ಒಟ್ಟಿಗೆ, 34,293 ರೂಪಾಯಿಗಳೆಂದೂ, ಅವರ ಸೆಕ್ರೆಟರಿಗಳ ಮತ್ತು ಸಿಬ್ಬಂದಿಯ ಈ ಬಾಬಿನ ಒಟ್ಟು ವೆಚ್ಚ 20,422 ರೂಪಾಯಿಗಳೆಂದೂ, ಮದ್ರಾಸು ಕೌನ್ಸಿಲಿನ ಪ್ರಶ್ನೋತ್ತರಗಳಿಂದ ಪ್ರಕಟವಾಗಿದೆ.

ಈ ತಾ. 21 ರಲ್ಲಿ ತಿರುಚಿನಾಪಳ್ಳಿಯಿಂದ ಹೊರಟ ಶೆಂಕೊಟ್ಟಾ ಪೇಸೆಂಜರ್ ಟ್ರೈನ್ ಅಯ್ಯಲೂರಿನ ಬಳಿ ಕ್ಲೈಲ್ ಲೈನಿನಿಂದ ತಪ್ಪಿ ಕೆಳಗೆ ಗುಂಡಿಗೆ ಬಿದ್ದು ದೊಡ್ಡ ನಷ್ಟ ಸಂಭವಿಸಿತು. ಈ ಅಪಾಯದಲ್ಲಿ 12 ಜನರು ಮೃತರಾದರೆಂದೂ, 115 ಜನರಿಗೆ ಜಖಂ ಆಗಿದೆಯೆಂದೂ ಇಷ್ಟರ ವರೆಗೆ ತಿಳಿದುಬಂದಿದೆ. ಈ ಅಪಘಾತದ ಕಾರಣವನ್ನು ಕಂಡು ಹಿಡಿಯಲು ಮದ್ರಾಸು ಸರ್ಕಾರದವರು ವಿಚಾರ ನಡಿಸುತ್ತಿರುವರು.

ವಿದೇಶ

ಸಮುದ್ರ ನೀರಿನಿಂದ ಚಿನ್ನ ತೆಗೆಯಬಹುದೆಂಬ ಶೋಧವನ್ನು ಜಪಾನೀ ಶೋಧಕರು ನಡಸಿದ್ದಾರೆ ಇದಕ್ಕಾಗಿ 7 ಲಕ್ಷ ವೆಚ್ಚದಿಂದ ಒಂದು ಯಂತ್ರ ನಿರ್ಮಾಣವಾಗಲಿದೆ. ಇದರ ಪ್ರಥಮ ಪ್ರವೇಶ ಹಿಂದೂ ದೇಶಕ್ಕೆ ಇರಬಹುದೇ?

ಚೀನಾ ಯುದ್ಧದ ಸಂಬಂದವಾಗಿ ಜಪಾನು ಸಾಲ ಕೊರಬಿದ್ದಾರೆ. 397,000,000 ಯೆನ್ನುಗಳ ಸಾಲವೊಂದು ಇಷ್ಟರಲ್ಲೇ ಸಂಗ್ರಹವಾಗುವುದರಲ್ಲಿದೆ. ಇದಕ್ಕೆ ಬಡ್ಡಿ 3ರ ಸಲೆ. ಮರುಪಾವತಿ 17 ವರ್ಷಗಳಲ್ಲಿ !

ರಷ್ಯದಲ್ಲಿ ಇದು ವರೆಗೆ, ಎಂದೂ ಖರ್ಚಾಗದಷ್ಟು ಹಣ ಈ ಬಾರಿ ವಿಮಾನ ಹಾಗೂ ದೋಣಿಗಳ ಪಡೆಗಾಗಿ ಖರ್ಚಾಗಲಿದೆ. ಅದು ರಷ್ಯಾ ಸೈನ್ಯದ ಸಂಪೂರ್ಣ ಅನುಮತಿಯಿಂದ ಇದನ್ನು ಮಂಜೂರಾತಿ ಮಾಡಿದೆ ಅದು 10800 ಲಕ್ಷ ರೂಬಲುಗಳು.

ಕೇಂದ್ರಶಾಸನ ಮಂಡಲದಲ್ಲಿ ಮಿ ಅಣೆಲಿನ್ಸಿಯವರು ಮಂಡಿಸಿದ ಯುದ್ಧದಲ್ಲಿ ಸೇರುವವರನ್ನು ಬೇಡವೆಂದು ಹೇಳುವವರಿಗೆ ಶಿಕ್ಷೆ ವಿಧಿಸಬೇಕೆಂಬ ಸೂಚನೆಯು ಬಹುಮತದಿಂದ ಪಾಸಾಯಿತು ಕಾಂಗ್ರೆಸಿನವರಲ್ಲದೂ ವಿರೋಧಿಸಿದರು

ಉತ್ತರ ಚೀನಾದಲ್ಲಿನ ಚೀನಿ ಪಾಳೆಯದ ಸೇನೆಯು ಜುಲೈ 5 ರಿಂದ ಆಗೋಸ್ತು 6 ರ ತನಕ ಜಪಾನಿನ ಕಾದಾಟದ ಪರಿಣಾಮವಾಗಿ 13300 ಜಪಾನಿಯರು ಕೊಲ್ಲಲ್ಪಟ್ಟಿರುವರು, 4600 ಮಂದಿ ಗಾಯಗೊಂಡಿರುವರು, 60 ಸಾವಿರ ಮಂದಿ ಸೈನಿಕರು ಸೆರೆ ಹಿಡಿಯಲ್ಪಟ್ಟಿರುವರೆಂದು ತಿಳಿದು ಬಂದಿದೆ. ಅಲ್ಲದೆ ಲೆಕ್ಕವಿಲ್ಲದಷ್ಟು ಮದ್ದುಗುಂಡುಗಳು ಚೀನೀಯರ ವಶವಾಗಿವೆ

ಲಾರ್ಡ್ ಜೆಟ್ಲೆಂಡ್‌ರವರು ಹಿಂದುಸ್ಥಾನಕ್ಕೆ ದಯಮಾಡಿಸಿ, ಇಲ್ಲಿನ ಪ್ರಕೃತದ ಪರಿಸ್ಥಿತಿಯನ್ನು, ಸ್ವತಃ ಅನುಭವ ಮಾಡಿಕೊಳ್ಳುವದೇ ಶ್ರೇಯಸ್ಕರವೆಂದು—ಬ್ರಿಟನ್‌ನ ಕೆಲವು ಅಧ್ಯರು ಅಭಿಪ್ರಾಯಪಟ್ಟಿರುವದಾಗಿಯೂ; ಮಿ. ಚೇಂಬರ್‌ಲೇನ್, ಲಾರ್ಡ್ ಹಾಲಿಫೆಕ್ಸ್ ಮತ್ತು ಲಾರ್ಡ್ ಲಿನ್‌ಲಿತ್‌ಗೋ, ಇವರೊಳಗೆ ನಡೆದ ಸಂಭಾಷಣೆಯಲ್ಲಿ ಲಾರ್ಡ್ ಲಿನ್‌ಲಿತ್‌ಗೋರವರು 'ಭಾರತದೊಂದಿಗೆ ರಾಜಿ ಮಾಡಿಕೊಳ್ಳುವದು' ಒಳ್ಳೆದೆಂಬ ಅಭಿಪ್ರಾಯವನ್ನು ಸೂಚಿಸಿರುವುದಾಗಿಯೂ ಬ್ರಿಟನಿನ ಸುದ್ದಿಗಾರರು, 'ಅಮೃತ ಬಜಾರ್' ಪತ್ರಿಕೆಗೆ ವರದಿ ಕಳುಹಿಸಿದ್ದಾರೆ.

ಆದರೆ ಇದರ ವಿರುದ್ಧ ಈಗ ಹಲವು ಕಾಂಗ್ರೆಸ್ ಕಾರ್ಯಕರ್ತರೇ ಬಂಡಾಯ ಹೂಡಿರುವರಂತೆ.

ಸ್ವತಂತ್ರ ಕೊಡಗು ಪ್ರಾಂತ.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು ಈಗ ಸ್ವತಂತ್ರ ಕೊಡಗು ಪ್ರಾಂತದ ಖಟಪಿಟಿಯಲ್ಲಿ ತೊಡಗಿರುವರು. ಅದೂ ಹೇಗೆ? ಯೂಪ 1935 ರ ಘಟನೆಯನ್ನು ಕಾಂಗ್ರೆಸಿನವರು ತಿರಸ್ಕರಿಸಿರುವರೋ ಆ ಘಟನೆಯ ಪ್ರಕಾರ! ಇದರ ರ ಕ್ಯಾಕ್ಯತೆಯ ವಿಚಾರವನ್ನೂ ಇವರು ಮಾಡಿದಂತೆ ಕಾಣುವದಿಲ್ಲ.

ಬೆಂಬಲ ಯಾರದು?

ಇದರಲ್ಲಿ ಇವರಿಗೆ ಬೆಂಬಲವು ಯಾರದು? ಇದು ಇವರಿಗೆ ಅನ್ಯಾಹತವಾಗಿ ಕರ್ನಾಟಕಕ್ಕೆ ಸೇರಬೇಕೆಂದು ಚಳವಳ ಹೂಡಿದ ಶ್ರೀ ಬೆಳ್ಯಪ್ಪನವರೇ ಈಗ ಯಾವ ಪ್ರೋತ್ಸಾಹಕ್ಕೆ ಒಳಗಾಗುವರೋ ಏನೊ? ಬ್ರಿಟಿಷ್ ಕಾಫಿ ವ್ಯಾಪಾರಸ್ಥರೊಡನೆ ಸಂಚು ಮಾಡಿ ಇವರು ಸ್ವತಂತ್ರ ಕೊಡಗು ಪ್ರಾಂತವನ್ನು ಬೇಡತೊಡಗಿದ್ದಾರೆ. ಅಲ್ಲಿರುವ [illegible] ಸ್ವತಂತ್ರ ಪ್ರಾಂತ ಬೇಕಾಗಿದೆ. ಕೊಡಗು ಈಗಿನಂತೆ ಪ್ರತ್ಯೇಕ [illegible] ಇವರ ಬೇಳೆ ಬೇಯುವುದು. ಏಕೆಂದರೆ ಅಲ್ಲಿ [illegible] ಮುಖ್ಯ ಕೋಟೆಗಾರ ಮಾಲಿಕರಾಗಿದ್ದಾರೆ. ಇದನ್ನರಿತುಕೊಂಡು ಬೆಳ್ಯಪ್ಪನವರು ಸ್ವಲ್ಪ ಮುನ್ನೆಚ್ಚರಿಕೆಯನ್ನು ತೋರಿಸಬೇಕಾಗಿತ್ತು.

ಸುಬ್ಬಯ್ಯನವರ ಮುಂದಿನ ಪ್ರಶ್ನೆ.

ಈ ಪ್ರಶ್ನೆಯ [illegible] ಯೋಚನೆಯನ್ನು ಶ್ರೀ [illegible] ಪರ್ನಾಟಕ್ಕೆ ಹೋದಾಗ ಸುಬ್ಬಯ್ಯನವರ ಮುಂದೆ ಇಟ್ಟಿದರು. ಆದರೆ ಅಲ್ಲಿಯ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳು, ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಸಭಾಸದರೂ ಅಖಿಲ ಇಂಡಿಯಾ ಕಾಂಗ್ರೆಸ್ ಕಮಿಟಿಯ ಸಭಾಸದರು ಇರುವರು.

ಪೂರ್ಣ ವಿಚಾರ ಮಾಡದೇ ನಾನು ಏನೂ ಹೇಳಲಾರೆನು ಎಂದು ಸುಬ್ಬಯ್ಯನವರು ಇವರಿಗೆ ಉತ್ತರ ಕೊಟ್ಟರು.

ಕೊಡಗಿನ ಕಾಂಗ್ರೆಸ್ಸಿಗರ ಹೋರಾಟಕ್ಕೆ ಅಸಮ್ಮತಿ.

ರಾಷ್ಟ್ರಪತಿಗಳ ಸಂದರ್ಶನ.

ಕರ್ನಾಟಕದ ಶಿಷ್ಟ ಮಂಡಲದವರು ರವಿವಾರ ದಿನ ಮತ್ತೆ ರಾಷ್ಟ್ರಪತಿಗಳನ್ನು ಸಂದರ್ಶಿಸಿ ಕೊಡಗಿನ ಸಮಸ್ಯೆಯ ಸಂಬಂಧವಾಗಿ ವಿಚಾರವಿನಿಮಯ ಮಾಡಿದರು. **ಕೊಡಗಿನ ಕಾಂಗ್ರೆಸ್ಸಿಗರು ಪರದೇಶೀ ಪ್ಲಾಂಟರುಗಳ ಕೂಡ ಸಹಕಾರ ಮಾಡಿ ಕೊಡಗನ್ನು ಸ್ವತಂತ್ರ ಪ್ರಾಂತವನ್ನಾಗಿ ಕಾಯಂ ಇಡಬೇಕೆಂದು ಮಾಡುತ್ತಿರುವ ಪ್ರಯತ್ನಗಳ ಬಗ್ಗೆ ರಾಷ್ಟ್ರಪತಿಗಳು ಅಸಮ್ಮತಿಯನ್ನು ವ್ಯಕ್ತಪಡಿಸಿದರು.**

ಬಸ್ಸು ಮಾಲೀಕರುಗಳ ಸಂಘ.

(ಬರೆದು ಬಂದದ್ದು)

ತಾ. 10-8-1938 ರಲ್ಲಿ ಶ್ರೀಮಾನ್ ವಿ. ಎಸ್. ಕುದ್ರು ಇವರ ಅಧ್ಯಕ್ಷತೆಯಲ್ಲಿ ಮಡಿಕೇರಿಯಲ್ಲಿ ನಡೆದ ಬಸ್ಸು ಮಾಲೀಕರ [illegible] ಕೊಡಗು ಬಸ್ [illegible] ಎಂಬ ಸಂಸ್ಥೆಯನ್ನು ಸರ್ವಾನುಮತದಿಂದ ಏರ್ಪಡಿಸಲಾಯಿತು. ಶ್ರೀ ಗಣೇಶ ಸರ್ವಿಸ ಮಾಲೀಕರೊಬ್ಬರಲ್ಲದೆ ಬಾಕಿ ಎಲ್ಲಾ ಮಾಲೀಕರೂ ಹಾಜರಿದ್ದರು. ಶ್ರೀಮಾನ್ ವಿ. ಎಸ್. ಕುದುರವರನ್ನು ಸದರಿ ಸಂಸ್ಥೆಯ ಪ್ರೆಸಿಡೆಂಟರನ್ನಾಗಿಯೂ, ಶ್ರೀಮಾನ್ ಕೆ. ಮುಂಡಣ್ಣನವರನ್ನು ಕಾರ್ಯದರ್ಶಿಯರನ್ನಾಗಿಯೂ ಒಳಗೊಂಡ 7 ಜನ ಮೆಂಬರರ ಒಂದು ಎಕ್ಸಿಕ್ಯೂಟಿವ್ ಕಮಿಟಿ ಸಹ ಏರ್ಪಡಿಸಲಾಯಿತು. ಅನೇಕ ವರ್ಷಗಳಿಂದ ಇಂಥಾ ಸಂಘವನ್ನು ಏರ್ಪಡಿಸಬೇಕಾಗಿ ಯೋಚಿಸಿದ್ದರೂ ಈಗ ಅದು ಸಾಧ್ಯವಾದದ್ದು ಎಲ್ಲಾ ಮಾಲೀಕರ ಭಾಗ್ಯೋದಯವೆಂದು ಎಣಿಸಬೇಕಾಗಿದೆ. ಶ್ರೀಮಾನ್ ಕೆಂಬಯ್ಯನವರು [illegible] ಈ ವಿಚಾರದಲ್ಲಿ ತುಂಬಾ ಪ್ರಯತ್ನಪಟ್ಟು ಸಂಸ್ಥೆಯನ್ನು ಏರ್ಪಡಿಸಲು ಪ್ರಯತ್ನ [illegible]

ಬಾತ್ಮಿ.

[illegible]

—:0:—

[illegible]

ಅಯ್ಯಾ,

[illegible]

ಇನ್ನು [illegible] ಪತ್ರಿಕೆಗಳು [illegible] ಕೃಷಿಕರು [illegible] ಮಾಂಟಿಗೋಮೆರಿ, [illegible] ಕ್ರಮವನ್ನು [illegible]

'ಶ್ರೀಮಂಗಲ ನಾಡಿನವ.'

ಸಂಪಾಜೆ ಹೆಂಗಾಮಿ ಆಸ್ಪತ್ರೆ.

ಅಯ್ಯಾ,

ಇಲ್ಲಿ ವಾರಕ್ಕೊಂದಾವರ್ತಿ ಮಂಗಳವಾರ ಮತ್ತು ಬುಧವಾರ ಆಸ್ಪತ್ರೆ ತೆರೆದು ಔಷಧ ಕೊಡುತ್ತಿರುವುದನ್ನು ಕಳೆದ ವರ್ಷ ಜೂನ್ ತಾ. 15ರಿಂದ ನಾಲ್ಕು ತಿಂಗಳು ಮುಚ್ಚಿಬಿಟ್ಟಿದ್ದರು. ಫಲಿತಾಂಶವಾಗಿ ಇಲ್ಲಿಯ ನಿವಾಸಿಗಳು ಕಾಯಿಲೆಯಿಂದ ಬಹಳ ಸಂಕಷ್ಟಕ್ಕೊಳಪಟ್ಟು ಸಮ್ಬಂಧಪಟ್ಟ ಅಧಿಕಾರಿಗಳಿಗೆ ಮೊರೆ ಇಟ್ಟದ್ದರಿಂದ ಈ ವರ್ಷ ಇದೇ ಆಗೊಸ್ಟು ತಿಂಗಳ ಆಗ ಮತ್ತು ಒಂದು ವಾರದಲ್ಲಿ ಒಂದು ದಿನ (ಬುಧವಾರ) ಆಸ್ಪತ್ರೆ ತೆರೆಯುವಂತೆ ಡಿ. ಬೋರ್ಡಿನಿಂದ ಹುಕುಂ ಆಗಿರುವುದಾಗಿ ತಿಳಿಯುತ್ತೇವೆ. ಆದರೆ ಕಂಪಾಂಡರಲ್ಲದೆ ಡಾಕ್ಟರೊಬ್ಬರೇ ಒಮ್ಮೆಯೇ ಬಂದ ರೋಗಿಗಳನ್ನು ಪರೀಕ್ಷಿಸಿ ಔಷಧ ಕೊಡುವುದು ಕಷ್ಟವಾಗಿರುವುದರಿಂದ ರೋಗಿಗಳಿಗೂ ತೊಂದರೆಯಾಗುತ್ತದೆ. [illegible] ಮರಾಠಿ, ಜೆಂಬು, [illegible] ಮಂಗಳವಾರ ದಿವಸ ಸಂತೆ ಕೆಲಸಕ್ಕಾಗಿ ಬಂದು ಪ್ರತಿ ಬುಧವಾರ ಔಷಧಕ್ಕಾಗಿ ಎಂಟು-ಹತ್ತು ಮೈಲು ದೂರದಿಂದ ಬರುವುದು ತೂಡ ಅಸಾಧ್ಯವಾಗಿದೆ.

ಆದುದರಿಂದ ವಾರದಲ್ಲಿ ಹತ್ತಾಲ ಒಂದೇ ದಿವಸವಾದರೂ ಮಂಗಳವಾರ ದಿವಸ ಆಸ್ಪತ್ರೆ ತೆರೆಯುವಂತೆಯೂ, ಕಂಪಾಂಡರನ್ನು ಒದಗಿಸಿ ಕೊಡುವಂತೆಯೂ ಮಾಡಬೇಕಾಗಿ ಕೋರುವ.

'ಗ್ರಾಮಸ್ಥ.'

ನಾಲ್ಕುನಾಡು ಅರಮನೆ.

ಅಯ್ಯಾ,

ಈಗ [illegible] (ಸೆಪ್ಟೆಂಬರ್ [illegible]) [illegible] ಅರಮನೆಯು [illegible] ಮೇಲೆ ಬರೆದಿರುವ ಚಿತ್ರಗಳೂ, ಕೆಳಗಿನ ಭಾಗದಲ್ಲಿ ಕೈದಿಗಳನ್ನೂ, ಅಪರಾಧಿಗಳನ್ನೂ ಇಡುತ್ತಿದ್ದ ಕತ್ತಲೆ ಕೋಣೆಯೂ ರಾಜರ ಅತ್ಯಾಚಾರವನ್ನು ಮಡಿಕೇರಿಯ ಅರಮನೆಗಿಂತ ಸರಿಯಾಗಿ ನೆನಪಿಗೆ ತರುತ್ತವೆ. ಅದೇ ಅರಮನೆಯ ಮುಂದುಗಡೆ ದೊಡ್ಡ ವೀರರಾಜನು 1796 ರಲ್ಲಿ ಮಹಾದೇವಮ್ಮಾಜಿಯನ್ನು ವಿವಾಹವಾಗುವಾಗ ಕೂಡುಕೊಳ್ಳುವುದಕ್ಕೆ **ಕಟ್ಟಿಸಿದ ವಿವಾಹಮಂಟಪವು ಇವತ್ತಿಗೂ ಇಲ್ಲದೆ. ಆದರೆ ಈ ಅರಮನೆಯು ಈಗ ಹಾಳಾಗಿ ಹೋದರೆ ಕೊಂಡುಕೊಳ್ಳುವವರು ಅರಮನೆಯ ಕಟ್ಟಡದಲ್ಲಿ ವ್ಯತ್ಯಾಸ ಮಾಡಿ ತಮ್ಮ ವಾಸಕ್ಕಾಗಲಿ ಅನುಕೂಲ ಮಾಡಿಕೊಳ್ಳುವರು. ಐತಿಹಾಸಿಕ ಚಿಹ್ನೆಗಳು ಯಾವುವೂ ನಿಲ್ಲುವುದಿಲ್ಲ. ಪ್ರತಿಯೊಂದು ದೇಶದಲ್ಲಿಯೂ ಐತಿಹಾಸಿಕ ಕಟ್ಟಡಗಳನ್ನೂ, ಶಾಸನ, ಕಂಬ ಮೊದಲಾದವುಗಳನ್ನು** ಹಾಳಾಗದಂತೆಯೂ ಜೀರ್ಣವಾಗದಂತೆಯೂ ಎಚ್ಚರಿಕೆ ತೆಗೆದುಕೊಳ್ಳುತ್ತಾರೆ. ನಮ್ಮ ದೇಶದಲ್ಲಿಯು ಇರುವ ಒಂದೆರಡು ಕಟ್ಟಡಗಳನ್ನು ಸರಕಾರದವರು ತಾವೇ ಇಟ್ಟುಕೊಳ್ಳಬಾರದೇ? ಈ ವಿಷಯದಲ್ಲಿ ದೇಶದ ಮುಖಂಡರೂ, ಇತಿಹಾಸಪ್ರೇಮಿಗಳೂ [illegible] ನಾಲ್ಕುನಾಡು ಅರಮನೆಯು ಹಾಳಾಗದಂತೆ ನೋಡಿಕೊಳ್ಳುವರಾಗಿ ಪ್ರಾರ್ಥನೆ.

'ಇತಿಹಾಸ ಪ್ರೇಮಿ.'

ಡಿ. ಬೋರ್ಡಿನ ಗ್ರಾಂಟು.

ಅಯ್ಯಾ,

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿಗೆ ಸರಕಾರದವರು ಕೊಡುತ್ತಿರುವ 50000 ರೂಪಾಯಿಗಳ ಗ್ರಾಂಟಿನಲ್ಲಿ ಈ ವರ್ಷ 7000 ರೂ. ಕೋತೆ ಮಾಡುವರೆಂಬ ವಾರ್ತೆಯು ಎಲ್ಲರಿಗೂ ತಿಳಿದಿರುವದು. ಈ ವಿಚಾರ ಸವಿಸ್ತಾರವಾಗಿ ಕಳೆದ ವಾರದ ನಿಮ್ಮ ಅಗ್ರಲೇಖನದಲ್ಲಿ ಬರೆಯಲಾಗಿತ್ತು. ದೇಶದ ಸ್ವರಾಜ್ಯ ಸಂಸ್ಥೆ ಮತ್ತು ರೈತರ ಹಿತಸಾಧನೆಗೆ ಸಹಕಾರಿಯಾಗಿರುವ ಸಂಸ್ಥೆಯಾದ ಈ ಡಿ. ಬೋರ್ಡಿನ ಗ್ರಾಂಟಿನಲ್ಲಿ ಕೋತೆ ಎಂಬ ವಿಚಾರ ಹೃದಯ ದ್ರಾವಕವಿರುವದರಿಂದ ಈ ಕುರಿತು ಇನ್ನು ಸ್ವಲ್ಪ ಬರೆಯಲು ಪ್ರೇರೇಪಿಸುತ್ತಿದೆ.

ಡಿಸ್ಟ್ರಿಕ್ಟ್ ಬೋರ್ಡು ದಿನೇ ದಿನೇ ತನ್ನ ಕಾರ್ಯಕ್ಷೇತ್ರವನ್ನು [illegible] ಸ್ವರಾಜ್ಯ ಸಂಸ್ಥೆ. [illegible] ಅಧಿಕ ರೈತರನ್ನು [illegible] ರೈತರ ಹಿತಸಾಧನೆಗೆ [illegible] ಸರಕಾರದವರು ಈ ಗ್ರಾಂಟನ್ನು [illegible]

ದೇಶದ ಹಿತಸಂರಕ್ಷಣೆಗೆ ಕೌನ್ಸಿಲು ಸಭೆಯು ಅನುಕೂಲ. ಡಿ. ಬೋರ್ಡಿಗಿಂತ ದೇಶದ ಆಡಳಿತದ ಮೇಲೆ ಅದಕ್ಕೆ ಹೆಚ್ಚಿನ ಹಿಡಿತವಿರಬೇಕು. ಆದ ಪ್ರಯುಕ್ತ ಡಿ. ಬೋರ್ಡಿನ ಗ್ರಾಂಟಿನಲ್ಲಿ ಹಣ ಕೋತೆ ಮಾಡಿದರೂ ಕೌನ್ಸಿಲು ಇದರ ರಕ್ಷಣೆಯನ್ನು ಕೈಕೊಳ್ಳುವದೆಂಬ ನಂಬಿಕೆ ಕೆಲವರಿಗಿದೆ. ಡಿ. ಬೋರ್ಡಿಗಿಂತ ಕೌನ್ಸಿಲಿನಲ್ಲಿ ಹೆಚ್ಚಿನ ಅಧಿಕಾರವಿರಬೇಕಾದುದೇನೋ ಹೌದು. **ಆದರೆ ಅದರ ಇಂದಿನ ಅವಸ್ಥೆಯಲ್ಲಿ ದೇಶಹಿತಕ್ಕೆ ಅದು ಮಾಡುವ ಪ್ರಯತ್ನವು ನಿಷ್ಫಲವಾಗಿದೆ. ಕೌನ್ಸಿಲು ಸಭೆಯು ತನ್ನ ಮೀಟಿಂಗಿನಲ್ಲಿ [illegible] ನಯತದ ಒಗ್ಗೆ ಯಾವ ಠರಾವನ್ನು ಪಾಸುಮಾಡಿದರೂ ಸರಕಾರದ ಪ್ರಗತಿಗೆ ಅಥವ ಪ್ರತಿಷ್ಠೆಗೆ ಇದರಿಂದ ತೊಂದರೆಯಾಗು**

ಪಕ್ಷ ಅದು ಜಾರಿಗೆ ಬರಲಾರದೆಂಬ ಅನುಭವದ ಮಾತು. ಆದ್ದರಿಂದ ಇಂತಹ ಯಾವದಾದರೊಂದು ದೇಶೀಯ ಸಂಸ್ಥೆ ದೇಶೀಯರ ಏಳಿಗೆಗಾಗಿ ಪ್ರಯತ್ನ ತೊಡುತ್ತಿರುವದೆಂದರೆ ಅದು ಡಿ. ಬೋರ್ಡು. ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಕಾಂಗ್ರೆಸಿನವರ ಬಹುಮತ ಬಂದು ರೈತರ ನಾಡಿ ಪರೀಕ್ಷೆಯನ್ನು ತಿಳಿದ ಕಾಂಗ್ರೆಸಿನವರು ಅವರ ಹಿತಕಾರ್ಯಗಳನ್ನು ಕೈಕೊಳ್ಳುವ ಈ ಸಂದಿಗ್ಧ ಸಮಯದಲ್ಲಿ ಈ ಖೋತೆಯಿಂದ ಬಹಳ ಧಕ್ಕೆ ತಗಲಿದೆ. ಈ ಸಮಯದಲ್ಲಿ ದೇಶದ ಸ್ಥಿತಿಯಾದರೂ ಚಿಂತಾಜನಕವಾಗಿದೆ. ಈಗ ಕೆಲವು ವರ್ಷಗಳಿಂದ ಮಳೆಗೂ, ಆ ಪರಿಣಾಮವಾಗಿ ಬೆಳೆಗೂ ರಿಟ್ರೆಂಚ್‌ಮೆಂಟ್ ಬಂದಿದೆ. ಹೀಗೆ ಕಷ್ಟಸ್ಥಿತಿಯಲ್ಲಿ ಬೆಳೆದ ಬೆಳೆಯು ಫಸಲಿಗಾದರೂ ಸಿಕ್ಕುವ ಕ್ರಯವು ತಗ್ಗಿ ಹೋಗಿದೆ. ಅದ ಪ್ರಯುಕ್ತ ಮುಂದೂ ಇಂಥ ತೊಂದರೆಗಳು ಬರಲಾರದೆಂಬ ಭರವಸೆ ಇಲ್ಲದ ಕಾರಣ ಸರಕಾರದವರು ಮಳೆಯಿಲ್ಲದೆ ತೊಂದರೆಗೊಳಗಾಗಿರುವ ಭಾಗಗಳಿಗೆ ನೀರಾವರಿಯ ಯೋಜನೆಯನ್ನು ಮಾಡುವದು ಸೂಕ್ತವಾಗಿದೆ. ಅದರೆ ಈ ವರೆಗೆ ದೇಶಕ್ಕೆ ಒದಗಿರುವ ಈ ಕಷ್ಟಪರಂಪರೆಗಳಲ್ಲಿ ಸರಕಾರದವರು ಅವರ ಹಿತಚಿಂತನೆ ಮಾಡದಿರುವದು ಯೋಗ್ಯವಲ್ಲ. ತತ್ಕಾಲ ಸರಕಾರದಲ್ಲಿ ಹಣವಿಲ್ಲದಿರಬಹುದು. ಆದರೆ ಪದೇ ಪದೇ ಕನಿಷ್ಠ ಬೆಳೆಯಿಂದ ಬಳಲುತ್ತಿರುವ ರೈತನು ಸರಕಾರದ ಕಂದಾಯ ಕಾಣಿಕೆಗಳನ್ನು ಹೇಗೆ ತೆರಲಾಪನು? ಆದ್ದರಿಂದ ರೈತನ ವ್ಯವಸಾಯಕ್ಕೆ ಸಾಕಷ್ಟು ಸಹಾಯ ಕೊಡದಿದ್ದರೆ ರೈತನು ಕಂದಾಯ ಪಾವತಿ ಮಾಡಲಾರನಾದ್ದರಿಂದ ಸರಕಾರಕ್ಕೇ ಇದರಿಂದ ತೊಂದರೆಬರುವದೆಂಬುದು ನಿಸ್ಸಂದೇಹ. ಸದ್ಯಕ್ಕೆ ರೈತನ ಅಭಿವೃದ್ಧಿಗೆ ಅಲ್ಪ ಸ್ವಲ್ಪ ಸಹಾಯ ಮಾಡುತ್ತಿರುವದು ಡಿ. ಬೋರ್ಡು. ಅಂದ ಬಳಿಕ ಡಿ. ಬೋರ್ಡು ಸರಕಾರದ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸಂಸ್ಥೆಯೆಂದು ಸಂಕೋಚವಿಲ್ಲದೆ ಹೇಳಬಹುದು. ಆದ್ದರಿಂದ ಸರಕಾರದವರು ಈ ಸಂಸ್ಥೆಯನ್ನು ಪ್ರೋತ್ಸಾಹಿಸಿ ದೇಶದ ಏಳಿಗೆಯನ್ನು ಬಯಸುವುದು ರೈತರಿಗೆ ಹಿತಕರ ಮತ್ತು ಸರಕಾರಕ್ಕೆ ಶ್ರೇಯಸ್ಕರ. ಇದು ಬಿಟ್ಟು ಈಗ ಕೊಡುತ್ತಿರುವ ಅಲ್ಪ ಗ್ರ್ಯಾಂಟಿನಲ್ಲಿ ಖೋತಿಮಾಡುವುದು ಸರಕಾರಕ್ಕೆ ಎಂದಿಗೂ ಶೋಭಿಸದು. ಇದರಿಂದ ಅದು ತನ್ನ ಅಭಿವೃದ್ಧಿಗೆ ಕಂಟಕವನ್ನು ತಂದಂತಾಗುವದು. ಬಡ ರೈತರಿಗೆ ಪ್ರತಿಯೊಂದು ವಿಧದಲ್ಲಿಯೂ, ಅಂದರೆ ಮಳೆಯಲ್ಲಿ ಖೋತೆ ಬೆಳೆಯಲ್ಲಿ ಖೋತೆ, ಕ್ರಯದಲ್ಲಿ ಖೋತೆ ಹೀಗೆ ಪ್ರಕೃತಿ ಖೋತೆಗಳಾಗಿವೆ. ಅದರ ಜೊತೆಗೆ ಡಿ ಬೋರ್ಡಿನ ಗ್ರ್ಯಾಂಟಿನಲ್ಲಿ ಖೋತೆ ಮಾಡಿ, ಹುಣ್ಣಿನ ಮೇಲೆ ಬರೆ ಎಳೆದಂತೆ ಮಾಡುವದು ಹಿತವಲ್ಲ.

ಕಳೆದ ಡಿ. ಬೋರ್ಡು ಮೀಟಿಂಗಿನಲ್ಲಿ ಈಗ ಕೊಡುತ್ತಿರುವ ಗ್ರ್ಯಾಂಟು ಸಾಕಾಲದೆಂದು, ಅದರ ಜೊತೆಗೆ ರೂ. 6000 ಕೂಡಿಸಿ ಕೊಡಬೇಕೆಂದೂ ಸರಕಾರವನ್ನು ಕೇಳುವಂತೆ ತೀರ್ಮಾನಿಸಿರುವರು. ಹೀಗಿದ್ದ ಬಳಿಕ ಈ ಅವಶ್ಯವನ್ನು ... ಪಡಿಸುತ್ತಿರುವ ಈ ಸಂಸ್ಥೆಗೆ ಸರಕಾರದವರು ಈಗ ಕೊಡುತ್ತಿರುವ ಗ್ರ್ಯಾಂಟು ಖಂಡಿತಾ ಸಾಲದು. ಅಂತದ್ದರಲ್ಲಿ ಕೊಡುತ್ತಿರುವ ಗ್ರ್ಯಾಂಟಿನಿಂದಲೇ ಖೋತೆ ಮಾಡುವುದೆಂದರೆ ಜನತೆಯ ಬೇಡಿಕೆಯನ್ನು ಮನ್ನಿಸಿದಂತಾಗಲಾರದು. ಆದ್ದರಿಂದ ಸರಕಾರದವರು ಈ ವಿಷಯದ ತಮ್ಮ ಘೋಷಣೆಯನ್ನು ಬದಲಾಯಿಸಿ ರೈತರ ಹಿತವನ್ನು ಬಯಸುವದು ಯೋಗ್ಯವಾಗಿದೆ. ಇಂಥಾ ವರ್ತನೆಯಿಂದ ಸರಕಾರವು ತನ್ನ ತಳಹದಿಯನ್ನು ಭದ್ರಪಡಿಸಿಕೊಂಡಂತಾಗುವದಲ್ಲದೆ ಬಡ ರೈತರ ಶ್ರೇಯೋಭಿವೃದ್ಧಿಯನ್ನೂ ಪ್ರೋತ್ಸಾಹಿಸಿದಂತಾಗುವದು.

'ಬಡ ರೈತ'

ಬಡ ರೈತರೂ, ಗಜೆಟೆಡ್ ಉದ್ಯೋಗಸ್ಥರೂ.

ಅಯ್ಯಾ,

ಹತ್ತುಗಟ್ಟು ನಾಡಿನ ಕೊಟ್ಟಗೇರಿ, ನಿಟ್ಟೂರು, ಬಾಳೆಲೆ ಮೊದಲಾದ ಗ್ರಾಮಗಳಲ್ಲಿ ಈ ವರ್ಷ ಮಳೆಯ ಅಭಾವದಿಂದ ವ್ಯವಸಾಯವೇನೂ ಮಾಡಲು ಸಾಧ್ಯವಾಗಿರುವುದಿಲ್ಲ. ಅಲ್ಲದೆ ಈಗ ಸುಮಾರು ಆರೇಳು ವರ್ಷಗಳಿಂದ ಪ್ರತಿ ವರ್ಷವೂ ಮಳೆ ಕಡಿಮೆಯಾಗುತ್ತಾ ವ್ಯವಸಾಯಕ್ಕೆ ತೊಂದರೆಯಾಗುತ್ತಿರುವದರಿಂದ ಅಲ್ಲಿ ಭತ್ತ ವ್ಯವಸಾಯದ ಬದಲು ಹಾಲುಗೆಡ್ಡೆ, ಶುಂಟಿ, ಮೊದಲಾದುವನ್ನು ಬೆಳೆಸುವದು ಅಥವ ಆಡುಗಳನ್ನು ಸಾಕುವ ವೃತ್ತಿಯನ್ನು ಕೈಕೊಳ್ಳುವದು ಉತ್ತಮವೋ? ಹಾಗೆ ಮಾಡುವದಾದರೆ ಸರಕಾರದಿಂದ ಯಾವ ತರದ ಸಹಾಯ ದೊರಕೀತು? ಎಂದು ಕೊಡಗಿನ ಒಬ್ಬೊಬ್ಬ ಗಜೆಟೆಡ್ ಉದ್ಯೋಗಸ್ಥರ ಅಭಿಪ್ರಾಯವನ್ನು ಕೇಳುವ ಉದ್ದೇಶ್ಯ ಈ ತಾ. 13 ರಲ್ಲಿ ನಾನು ಮಡಿಕೇರಿಗೆ ಹೋಗಿದ್ದೆನು. ಬೆಳಿಗ್ಯೆ 10 ಗಂಟೆಗೆ ಒಬ್ಬ ಆಫೀಸರನ್ನು ಕಂಡು ನಮ್ಮ ಎಲ್ಲಾ ಕಷ್ಟಗಳನ್ನು ವರ್ಣಿಸಿದೆನು. ಅದಕ್ಕೆ ಅವರು ತುಂಬಾ ವ್ಯಸನಪಟ್ಟು-ಈಗ ರಿಟ್ರೆಂಚ್‌ಮೆಂಟಿನ ಸಮಯವಾದ್ದದರಿಂದ ಸರಕಾರವು ತುಂಬಾ ಕಷ್ಟದಲ್ಲಿದೆ; ಆದರೂ ಸರಕಾರದವರು ಆ ಕಡೆಗೆ ನೀರಿನ ಸರಬರಾಯಿ ಏರ್ಪಾಡಿನ ವಿಷಯ ಆಲೋಚನೆ ಮಾಡಲಿರುವರು. ಎಂದು ಸಮಾಧಾನವ ಮಾತನ್ನಾಡಿದರು. ನಂತರ ಮತ್ತೊಬ್ಬ ಗಜೆಟೆಡ್ ಉದ್ಯೋಗಸ್ಥರಲ್ಲಿಗೆ ಹೋದೆನು. ಅವರೊಂದಿಗೆ ರೈತರ ಕಷ್ಟದ ವಿಚಾರವನ್ನು ಕೂಲಂಕುಷವಾಗಿ ವರ್ಣಿಸಬೇಕೆಂದಿದ್ದೆನು. ಆದರೆ ನನ್ನ ಒಂದೊಂದು ವಾಕ್ಯವೂ ಹೊರಬಿದ್ದ ಕೂಡಲೇ ಅವರು ಗದರಿಸಿ ಉತ್ತರಕೊಡುತ್ತಾ ಬಂದುದರಿಂದ ನನಗೆ ಅವರಲ್ಲಿ ಸವಿಸ್ತಾರವಾಗಿ ಹೇಳಲು ಸಾಧ್ಯವಾಗಲಿಲ್ಲ. ಅವರು ಹೇಳಿದ್ದರ ಸಾರಾಂಶವಾದರೂ ಹೀಗಿದೆ—ಹತ್ತುಗಟ್ಟು ನಾಡಿನವರು ದೇವರ ಪೂಜೆಯನ್ನು ಬಿಟ್ಟಿರುತ್ತೀರಿ ಮತ್ತು ಕಾಂಗ್ರೆಸ್ಸಿಗೆ ಸೇರಿಕೊಂಡು ಹಿಂದೂ ದೇವಾಲಯಗಳಿಗೆ ಹೊಲೆಯರನ್ನು ಸೇರಿಸುತ್ತಿದ್ದೀರಿ ಆದ್ದರಿಂದ ನಿಮ್ಮಲ್ಲಿಗೆ ಮಳೆ ಹೊಡೆಯುವದಿಲ್ಲ. ಇನ್ನಾದರೂ ಮಳೆ ಬೇಕಾದರೆ ದೇವರಿಗೆ ಪೂಜೆ ನಡೆಸಬೇಕು. ಉತ್ತರ ಹಿಂದೂಸ್ಥಾನದಲ್ಲಿ ಎಷ್ಟೋ ಅನಾಹುತಗಳಾಗುತ್ತಿವೆ. ಹಾಗೆಯೇ ಇಲ್ಲಿ ಒಂದೆರಡು ಕಡೆ ನಷ್ಟ ಆದರೆ ಸರಕಾರದವರು ಏನೂ ಮಾಡಲಾಗುವುದಿಲ್ಲ.

ಹಾಲುಗೆಡ್ಡೆ ಶುಂಠಿ ಮೊದಲಾದುವನ್ನು ಮತ್ತು ಆಡು ಸಾಕುವದನ್ನು ಕುರಿತು ಮಾತಾಡಿದಾಗ್ಯೆ ಅವರು-ಈ ವಿಷಯ ನನಗೆ ಸಮ್ಬಂಧವಿಲ್ಲ; ಅದಕ್ಕೆ ತಕ್ಕ ಉದ್ಯೋಗಸ್ಥರಿರುವರು; ಅವರನ್ನು ಅರ್ಜಿಯ ಮೂಲಕ ಕೇಳಿಕೊಳ್ಳಬಹುದು. ಎಂದು ಉತ್ತರ ಕೊಟ್ಟುಬಿಟ್ಟರು. ನನ್ನ ಆಶೆಯೆಲ್ಲವೂ ನಿಷ್ಫಲವಾಯಿತು. ದೊಡ್ಡ ಉದ್ಯೋಗಸ್ಥರು ಬಡ ರೈತರ ಕಡೆಗೆ ಇಷ್ಟರ ಮಟ್ಟಿಗೆ ದಯೆಹೀನರಾಗುವರೆಂದು ನಾನು ಬಯಸಿರಲಿಲ್ಲ, ಇಡೀ ಹಿಂದೂಸ್ಥಾನದಲ್ಲಿ ದೊಡ್ಡ ಉದ್ಯೋಗಸ್ಥರೆಲ್ಲರೂ ರೈತರ ಸಂಪರ್ಕ ಬೆಳೆಸಿಕೊಂಡು ಅವರ ಕಷ್ಟಗಳನ್ನು ಪರಿಹರಿಸಬೇಕೆಂದು ಪ್ರಯತ್ನಿಸುತ್ತಿರುವಾಗ್ಯೆ, ನಮ್ಮ ಈ ಪುಟ್ಟ ದೇಶದಲ್ಲಿ ಹೀಗೆ ವರ್ತಿಸುವದು ತುಂಬಾ ವ್ಯಸನಕರ. ಇನ್ನಾದರೂ ಗಜೆಟೆಡ್ ಉದ್ಯೋಗಸ್ಥರು ನಮ್ಮ ಗ್ರಾಮಗಳನ್ನು ಬಂದು ನೋಡಿ ನಿಜಸ್ಥಿತಿಯನ್ನರಿತುಕೊಂಡು ನಮ್ಮಲ್ಲಿಯ ರೈತರ ಕಷ್ಟವನ್ನು ನಿವಾರಿಸಲು ತಕ್ಕ ಸಹಾಯಮಾಡುವರಾಗಿ ಪ್ರಾರ್ಥಿಸುತ್ತೇನೆ.

'ಹತ್ತುಗಟ್ಟು ನಾಡಿನವ'

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ 52,54,750 ರೂ ಭರವಸೆಯ 4689 ಪ್ರಪೋಸಲ್‌ಗಳು ಸಿಕ್ಕಿವೆ. ಅದರಲ್ಲಿ ಹಿಂದಿನ ವರ್ಷದ ಪೂರ್ತಿಯಾಗದ 1447 ಪ್ರಪೋಸಲ್‌ಗಳ ಬಾಬ್ತು 40,67,650 ರೂ. ಗತ ಬಗ್ಗೆ ವರ್ಷಾಂತದ 2,21,959-6-0 ರೂ. ವಿಮಾ ಕಂತು ಬರುತ್ತೆ. ಕಂಪೆನಿಯಿಂದ ಭರವಸೆ ಪಡೆದಿರುವ ಹಣ ರೂ. 39,38,150. ಬಾಕಿ ರೂ. 1,29,500 ಪುನಹ ಭರವಸೆ ಕೊಟ್ಟದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುವರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತಿವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ. 4,13,775 ಹೆಚ್ಚಿದೆ.

ಈ ಕೆಳಗಿನ ಒಳ್ಳೆ ಸಂಗತಿಗಳಿಂದ ಲಭಿಸಿದ ತೃಪ್ತಿಯನ್ನು ಮೆಂಬರುಗಳೊಡನೆ ಅನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯಾ ಸರ್ಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪೆನಿಗಳವೆಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಶೂರೆನ್ಸ್ ಈಯರ್ ಬುಕ್' ಎಂಬುವುದರಿಂದ ತಿಳಿದುಬರುತ್ತದೆ. ಈ ಕಂಪೆನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪೆನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ವರೆಗೆ ಶ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೆಯದಾಗಿದೆ. ಒಂದನೇಯದಾದ ಕಂಪೆನಿಯು ಇದಕ್ಕಿಂತ 25 ವರ್ಷಗಳ ಮುಂಚೆ ಸ್ಥಾಪಿಸಲ್ಪಟ್ಟದ್ದಾಗಿದೆ.

ವಿಮಾ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮಾ ಕಂತುಗಳ ಆದಾಯವು (ಪುನಹ ಭರವಸೆ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮಾ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ವರದಿ ವರ್ಷದ ವಿಮಾ ಕಂತಿನ ಆದಾಯವು ರೂ. 3,66,198-13-0, ಗತ ವರ್ಷದ್ದು 2,36.767-6-6 ಆಗಿದೆ.

ಜೀವವಿಮಾ ಫಂಡು:—ಈ ಕಂಪೆನಿಯ ಜೀವ ವಿಮಾ ಫಂಡು ರೂ. 75,258-14-9ರಿಂದ, ವ್ಯವಸ್ಥಾ ಕ್ರಮಕ್ಕೆ ಮತ್ತು ಇತರ ಖರ್ಚಿಗಾಗಿ ರೂ 45,037-8-4 ವಜಾ ಕಳೆದು ರೂ 21,00,421-1-3ಕ್ಕೆ ಏರಿದೆ. ಈ ಕೆಳಗೆ ಅದರ ತಪಶೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿಮಾ ಕಂತು	ಜೀವ ವಿಮಾ ಫಂಡು
1ನೇ ವರ್ಷದ	ರೂ. 1,46,949	ರೂ. 15,619
2ನೇ ವರ್ಷದ	,, 2,36,767	,, 75,259
3ನೇ ವರ್ಷದ	,, 3,66,199	,, 2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪೆನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತ ವಿಮಾ ಕಂಪೆನಿಗಳ ವಾರ್ಷಿಕ ವೃತ್ತಾಂತದಲ್ಲಿ ಹೊಗಳಲು ಯೋಗ್ಯವಾದದ್ದೇ ಆಗಿದೆ.

ಭಾರತ ಜೀವವಿಮಾ ಕಂಪೆನಿಗಳ ಆಕ್ಟಿನ ಮೇರೆ ಠೇವಣಾತಿ:—ಈ ಖಾನೂನು ಮೇರೆ ಠೇವಣಾತಿ ಮಾಡತಕ್ಕದ್ದು ರೂ, 2 ಲಕ್ಷವನ್ನು ಪೂರ್ತಿಯಾಗಿ ಠೇವಣಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷವುಳ್ಳವರಾಗಿರುವರು.

ಸಿ. ಯಂ. ತಿಮ್ಮಯ್ಯ,

(12-12) ಏಜೆಂಟುಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

ಜ್ಞಗದೊಳೊಂದೇ ಬೆಳಕು ಜೊಳೆಯುತಿರಲಾ ಜ್ಯೋತಿ
ಯಲಿ ಕೆಲವು ಮಿಂಚುಂಬುಳುಗಳು ಜಾರಾಡುತಲಿ
ತನ್ನ ಪ್ರೈ ಬೆಳಕಿಂದ ಲೋಕ ಬೆಳಗುವುದೆಂದು
ಹೆಮ್ಮೆಗೊಳ್ಳುವುದುಂಟು, ಅಕ್ಕರದ ಕಲಿಕುಡಕೆ
ಸುಜ್ಞಾನ ಜ್ಯೋತಿಯಲಿ ಜಗವನುದ್ಧರಿಪಂತೆ
ನೋಗಿನಿಂ ಸ್ವಾರ್ಥದಿಂ ಮೆರೆಯುವರಿನ್ನೆಷ್ಟೊ!

ಬಾಹ್ಯ ಪ್ರಪಂಚದಲಿ ಯೋಗಿಯಾದವನಿಂದು
ಹುಚ್ಚನೆನಿಸುವಂತೆ-ಆದರಾ ತ್ಯಾಗಿ
ಯಾರು ಮುಟ್ಟಿದರೇನು? ಬೈದರುವನೆ? ಕದಲುವನೆ?
ತನ್ನ ಮಾರ್ಗದ ಬಿಡದ ಸಾಧನದ ಬಗೆಯಿಂದ
ಕೊನೆಯ ಮುಟ್ಟುವನವನು; ಮಲಿನ ಮಾನಸರನ್ನು
ನಿರ್ಮಲರ ಮಾಡುವನು; ಒಮ್ಮೆ ನೋಡಿದರಾಯ್ತು,
ಒಮ್ಮೆ ಸೋಕಿದರಾಯ್ತು, ಒಮ್ಮೆ ಹರಸಿದರಾಯ್ತು,
ಒಮ್ಮೆ ನೆನೆಸಿದೊಡಾಯ್ತು, ಒಮ್ಮೆ ನುಡಿಸಿದೊಡಾಯ್ತು
ಪಾಪಗಳು ತೊಲಗುವವು, ಅವನ ಮಹಿಮೆಯದೆಷ್ಟೊ!
ಅವನ ಸಹವಾಸದಲಿ ಶಿಲೆಯಾದರೂ ನೊಳೆತು
ಭಕ್ತಿ ರಸವನು ಹಿಂಡಿ ತೋರುವುದು ಲೋಕದಲಿ;
ಪರಮ ಹಂಸರ ದಿವ್ಯ ಪದರಜದ ಪಡೆಯೊಳಗೆ
ನಡಿಸುತಲಿ, ಅವರ ಮುಖದರ್ಶನವ ಮಾಡುತಲಿ
ಜನುಮ ಸಾರ್ಥಕಗೈವುದೊಳ್ಳಿತೆಲೆ ಮಾನವನೆ
ಬಿಡು ನಿನ್ನ ಹಂಕೃತಿಯ:

ಗಪ್ಪುಗೆಯ ಮೋಜೇರಿ
"ನಾನು ಮಾಡಿಸುತಿಹೆನು, ಮಾಡಿ ಪೊರೆಯುತ್ತಿಹೆನು"
[illegible] ತೊರೆ ನಿನ್ನ [illegible]
[illegible] ಹೋದಲ್ಲಿ, ಕರ್ಮಫಲಂಗಳನು
ನು ಶ್ರೀಕೃಷ್ಣ ಮುನ್ನಮೇ ಸಾರಿಹನು
ಅಂತವನ ಖುದಿರಾಮನರ್ಚನೆಯ ಮಾಡುತಲಿ
ಜಗಕೊಂದು ಮೇಲ್ಪಂಕ್ತಿಯನು ತೋರಿ ತಿಳಿಸಿಹನು,
ಅವನ ಸುತ ರಾಮಕೃಷ್ಣರು ಬಹಳ ವೈರಾಗ್ಯ
ವನು ಪೊಂದಿ ಜಗಕೊಂದು ಹೊಸ ದಾರಿಯನು ತೋರಿಹರು
ಇವರ ನಡವಳಿಕೆಗಳ ನೋಡಿದರೆ ಕಲಿಯುಗದ
ನಮಗಾದೊಡವಿದೇನು ದುಸ್ಸಾಧ್ಯ, ಸುಲಭದಿಂ
ತೋರುವುದುಮದರಿಂದೆ-ಪರಮಾತ್ಮ ಲೀಲೆಯನೆ
ಚಿಂತಿಸುತ ಮುಕ್ತಿ ಮಾರ್ಗದ ತಿಳಿದು ಸ ಜ್ಞಾನ
ಸೋಪಾನದಲಿ ಕುಳಿತು-ಮೋಕ್ಷ ಸಾಮ್ರಾಜ್ಯದಲಿ
ಸಿಲ್ಕುತಿಹುದೊಂದು ಸೊಡರ್ನೆ ಜನ್ಮದಲಿ
ಸುಕೃತ ಮಾಡುಹುದೆಂದು ಪೇಳಬೇಹುದೆ ಜಗಕೆ!!
ಪರಮಹಂಸರು ತಾವು ಗೈದ ಸಾಧನೆಯಿಂದ
ಲೋಕ ಸಂಗ್ರಹದ ಕಾರ್ಯವನು ಮಾಡಿ ತಿಳಿಸಿದರು.
ಅಂತಾ ಗಧಾಧರನು ಜೀವನೋದದಿ ದಿವ್ಯ
ದರ್ಶನವ ಪಡೆಯುವಕೆ-ಅದರಿಂದ ಲೋಕವನೆ
ಉದ್ಧಾರವಾಗಲೆಂದವನೆಲ್ಲ ಶಿಷ್ಯರಿಗೆ
ಬೋಧಿಸುತ ಕಳುಹಿದರು:

ಎಂಥ ಮಹಾತ್ಮರವ!!!

ವಂಗದೇಶದಿ ಜನಿಸಿ ಖುದಿರಾಮನೆಂಬವನು
ಕರ್ಮನಿಷ್ಠನಾಗಿಹನು, ರಘುವೀರ ಚರಣಯಲಿ
ನಿರತನಾಗುತ ನಿತ್ಯ, ವೇದ ಧರ್ಮವನರಿತು
ಸನ್ಮಾರ್ಗದಲಿ ನಡೆವ ವೈರಾಗ್ಯ ಮಹಿಮೆಯವನು;
ಅಲ್ಪರಿಂದಲಿ ದಾನ ಮೊದಲಾದುದನು ಕೊಳ್ಳ
ಬ್ರಾಹ್ಮಣರ ಧರ್ಮವನು ಎಳ್ಳನಿತು ಮೀರದೆಯೆ
ನಿತ್ಯ ಕರ್ಮದಿ ನಿರತನಾಗಿಹನು ಸದ್ಯೋಗಿ:
ಚಂದ್ರದೇವಿಯು ಸತಿಯು-ಅನುಕೂಲೆಯಾಗಿಹಳು
ಪತಿಯ ಪಥಗಾಮಿನಿಯು-ನಿಂದಾಗುವಳು ಸತತ
ಭರ್ತೃ ಸೇವೆಯನವಳು ತಿಳಿದು ಮಾಡುತಲಿರಲು
ಬಡತನದ ಸಂಸಾರ ಸಾಗಿತ್ತು ಭರದಿಂದ.
ಹಿರಿಯ ರಾಮಕುಮಾರ, ಪುತ್ರಿ ಕಾತ್ಯಾಯಿನಿಯು
ಜನಿಸಿರಲು-ಎರಡು ಮಕ್ಕಳ ನಡುವೆ ತಾಯ್ತಂದೆ
ಯರು ಹರುಷದಿಂದಿರಲು ಬಿರುಗಾಳಿ ಬೀಸುತಲಿ
ಕವಳಿ ತೆರುವನ್ನುರುಳಿಸುವೊಲು ಖುದಿ ರಾಮನನು
ಬಡತನದ ಕಾಲದಲಿ ಘೋರ ಹಿಂಸಿಸಿತು.
ಧೈರ್ಯಗೆಡದಾಯೋಗಿ ನೆರೆಯೂರ ಸೇರುತಲಿ
ಲಕ್ಷ್ಮಣ ಜಾಲದ ಶಾಖ ಮಾಡಿಕೊಂಡನು ಮತ್ತೆ.

ಶ್ರೀ ರಾಮಕೃಷ್ಣ ಪರಮಹಂಸರು.

ಗತಿ ೧.

ಲೇಖಕ:-ಎಂ. ಎಸ್. ಅನಂತಪದ್ಮನಾಭರಾವ್.

● ●

ಕಾಮಾರ್ಪುಕೂರವೆಂದಾ ಊರ ಹೆಸರಿತ್ತು.
ನಯದಲಲಿ ರಾಮೇಶ್ವರನ ಸೇರಿ ಖುದಿರಾಮ
ರಾಮಲಿಂಗೇಶ್ವರನ ಪೂಜಿಸುತಲಿ ಮರಳಿದನು
ಮತ್ತೆ ಜನಿಸಿದ ಕುವರ ರಾಮೇಶ್ವರಾಂಕಿತದಿ
ಜೊತೆಯ ಸಂಸಾರವನು ಸಹನದಲಿ ಬಾಳಿದನು.

ಯಾತ್ರೆಗಳ ಮಾಡುವುದು ಖುದಿರಾಮಗದೆ ನೀತಿ.
ಪರಮಾತ್ಮ ದರ್ಶನವು, ಸಾಧುಗಳ ಸತ್ಸಂಗವೆ
ಇವುಗಳಲಿ ಸದ್ಭಕ್ತಿಯುದಯನಿಗಾಗಿಯೆಯಯ್ತು
ಗಯೆ ಗದಾಧರನ ದರ್ಶನವ ಮಾಡುವೆನೆಂದು
ಬಯಸುತ್ತ ಪೂರ್ವದೊಳ್ಳೆ, ಕಾಲ್ನಡಿಗೆಯಲಿ ಸಾಗಿ
ನೋಡಿದ ಗದಾಧರನ, ಮನಕೆ ನೆಮ್ಮದಿಯಾಯ್ತು.
ಹೂಬಿಲ್ಲ್ವತ್ರ ಕಾದಿಗೆ ಪಚ್ಚಾಗಿ ಧರಿಸಿತ್ತು,
ಇಂದಮುದ ದೇವರ್ಗೆ ನೈವೇದ್ಯವಾದತ್ತು.
ಆನಂದಬಾಷ್ಪಗಳು ಸಳಸಳನೆ ಉರುಳಿದುವು.
ತನ್ನನೇ ಮರೆಯುತ್ತ ಮುಳುಗಿದ ಸಮಾಧಿಯಲಿ.
ಆ ದೈವ ಚಿಂತನೆಯೋ ಜಾವ ಜಾವಗಳಾಯ್ತು
ಮತ್ತೇನು ಬೇಡಿನ್ನು-ಆ ಮೂರ್ತಿ ನಲಿಯುತಿರೆ
ಮನದಲಿ ಸಂತೋಷಮಾಗಿರಲು ನೋಡಿದನು,
ಎಲ್ಲೆಲ್ಲು ಪರಮಾತ್ಮ ರೂಪದಂ ನೋಡಿದನು:
[illegible] ಹಂತಾದಿ ಪರಿವಾರಗಳನೊಂದು
[illegible] ಕೊಳ್ಳಲ್ಲ ಪರಮಾತ್ಮನಂ ಕಂಡು
ಚಿನ್ಮೂರ್ತಿ ತಾನಾಗಿ ನಲ್ಲನಸುಗಳ ಕಂಡ
"ಮುಂದೆ ಪ್ರತ್ಯಕ್ಷನಾ, ಎನಗಳೂದು ಪಿಕ್ಕ್ರ್ರಲಿ,
ಆ ಮುಗಿದೆ ನಾನ ಕೈಸಿಂದಿದು ಕೊಳ್ಳುತ್ತದು.
ನಿನಗೆ [illegible] ನಿನ್ನ ಭಕ್ತಿಯ ನನ
ಪಾದ ಮೊದಲು ಬಂದು ಸುತನಾಗಿ ಕಾಡಿಸನು
ನಿನ್ನ ಕೊಪದೊಳು ನಲಿಗಿ ಹಾಡುಗಳ ಕೇಳುತ್ತ
ಬಾಳನಗ [illegible] ಬೊಂಗು ನಲಿಯಲ್ಕೆ ಬಯಸುವೆನು.
ನಿನ್ನ [illegible]
[illegible]
[illegible] ಶಿಲ-ಸಾವಿನ್ನ [illegible]"
ಎಂದದ [illegible] "ಎಲೆ ಪರಮಾತ್ಮ ನೀ
[illegible] ನಿನ್ನೆದ [illegible]
[illegible]
[illegible]
ನಾಯೆನುವೆ! ಮ [illegible] ಹೇಳ್ವೆನು!
[illegible]
ಮಾಡುತಿದೆ ಜೇಡ. ಬಿಡು, ರಾಜಾಧಿರಾಜನಿಗೆ
ಮಗನಾಗಿ ರಾಜೋಪಚಾರದಲಿ ವೃದ್ಧಿಯನು
ನೀ ಪಡೆದು ಹಿಂದಿರುಗು, ಬಡವರೊಡಗಗ್ಗಳನು
ಎನಗಿಂತ ಬಡ-ನವರೋಪಾರಿ ಕರು ಲೋಕದಲಿ
ಎನ್ನ ಹೊಟ್ಟೆಗೆಯೊಳಗೆ ಬಾಳಬಾರೆಯ ನೀನು!
ದಿವಸ ದಿವಸಕ್ಕೊಂದು ನಿಯಮದಲಿ ನುಡಬೇಕು
ದೇಹವನು; ದಾರಿದ್ರ್ಯದಾವಾಸ ಕಾಡುವುದು
ಬೇಡ ನಿನಗೀ ವ್ಯಸನವೆಂದ"ರಾ ಪರಮಾತ್ಮ.
ನಸುನಗುತ "ಎನಗಮದೆ ಬೇಕಾದ್ದು, ಬಯಸಿದ್ದು
ರಾಜೋಪಚಾರಗಳ ನಾನೊಲ್ಲೆನೆಂಬುವನು
ನಿನಿವರಿಯೆ! ಬಡತನದ ಬಾಳಿನಲಿ ಸುಖ ಪಡೆವ
ಸಂಸಾರಿ ಸನ್ಯಾಸಿಯೆಂಗಸಂಗವು ಬೇಕು
ಫಲಿಸಿತು ತಪ: ಫಲವು-ಸಮಜನವನಿತ್ತಿಹೆನು
ಮುಂದೆ ದರುಶನವ ನಾಂ ಕೊಳ್ಳುವೆನು ತೆರಳೆಂ"ದು
ಮಾಯವಾಗಲು ದೇವ ಖುದಿರಾಮನಾಶ್ಚರ್ಯ
ಗಳ ನೆನೆನು ನೆನೆನೆನೆದು ಸಂತೋಷ ಬಾಷ್ಪದೊಳು
ಮೈದೊಳೆದು-"ಹೇದೇವ ನಿನಗಿಂತ ನೋಲಾದ

ದೇವರಿನ್ನಾರಿಹರು! ಎನ್ನ ಕಿಂಚಿನ್ಮಾತ್ರ
ಭಕ್ತಿಗೊಲಿಯುತ ನೀನು ಎನ್ನ ಮನೆಯಂಗಳದಿ
ನಲಿದಾಡಿ ಬಯಸುವೆಯ-ಈ ಒಂದು ಲೀಲೆಯನು
ಭಕ್ತರಿಗೆ ತೋರಲಿಕೆ ಎಷ್ಟು ಕರುಣೆಯೊ ನಿನಗೆ!
ನೀನೆಂಥ ಸೌಭಾಗ್ಯ ಸಂಪದವ ನೆನಗಿತ್ತೆ!
ನಿನ್ನಂಥ ಮಗುವನ್ನು ಗರ್ಭದಲ್ಲಿ ಧರಿಸುವಾ
ಸತಿಯೆಷ್ಟು ಸೌಭಾಗ್ಯಶಾಲಿನಿಯೊ! ಆ ಸತಿಯ
ಕರಪಿಡಿದ ನಾನೆಂಥ ಪುಣ್ಯಾತ್ಮನಹೆನಿನ್ನು!
ಎನ್ನ ಕೊಟ್ಟಿಗೆ ನಿನಗೆ ವೈಕುಂಠ! ಕೈಲಾಸ!!
ಸತ್ಯಲೋಕವೊ! ಮೇಣು ಸುರಪುರಿಯೊ! ಮತ್ತೇನು!!
ಆಹುದಹುದು-ಈ ಲೋಕಗಳಿನಿಂದ ಮಿಗಿಲದುದು.
ಆ ದಿಟ್ಟ; ನೀ ಜನ್ಮವೆತ್ತುವಾ ಕೊಟ್ಟಿಗೆಯು
ಪಾವನದ ಪುಣ್ಯಕ್ಷೇತ್ರ-ಜಯದಾನ-ರಣರಾದು!
ಬಾರೆನ್ನ ಮಂದಿರಕೆ ನಿನಗೆ ಸುಸ್ವಾಗತವು.
ಆಗಲಾಗಲಿ ನಿನಗೆ ದಾರಿದ್ರ್ಯದುಪವಾಸ
ಅದರಿಂದ ಜಗದಲ್ಲಿ ದಾರಿದ್ರ್ಯಹರಣ ನಿಜ"

ಖುದಿರಾಮ ಪರಮ ಸಂತೋಷದಲಿ ತೇಲಾಡು
ತಬ್ಬಿದನು-ಮತ್ತೊಮ್ಮೆ ನೋಡಲಾ ದೇವನನು
ಹಾರೊರೆದ ನಾದೊಡಂ ಸಿಗಲಿಲ್ಲ-ಬರಲಿಲ್ಲ.
ಆವನೆಲ್ಲಿ! ಎಲ್ಲಿಹನು!!-ತಿಳಿದತ್ತು ದೇವನಾ
ಚಂದ್ರದೇವಿಯ ಒಳಗೆ ಹೋಗಿಹನು-ಅವಸರದಿ
ಗಂಡ ಬರುವಾ ಮುನ್ನ ಸಂಗತಿಯ ತಾನರಿಯ
ಬೇಕೆಂಬ ತವಕಗಿಂದೋಡಿಹನು ಪರಮಾತ್ಮ!

ಆ ರಾತ್ರಿ ಚಂದ್ರಿಯೊಂದಿಗೆ ಮಲಗಿ ಪತಿನಾಮ
ಪಾರಾಯಣದ ಮಾಡಿ, ತನ್ನೊಡೆಯ ಪದಿಪಾದ
ದರ್ಶನದ ಮಾಡುತಲಿ ಹರುಷದಿಂ ಬರುತಿಹನು.
ಆ ದಿವ್ಯ ದರ್ಶನದ ಲಾಭದಲಿ ಜೋಂಪಿನಿಯ
ಪಡೆದಿರುವ ದೇಹವಿನ್ನೆಷ್ಟು ಕಾಂತಿಯ ಪಡೆದು
ಶ್ರೇಷ್ಠತನುಯಾಗಿಹುದೆನ! ಆ ಶರೀರದ ಸಂಗ
ದಲಿ ಪುಣ್ಯ ಭಾಗಿನಿಯು ನಾನಪ್ಪೆನೆನ್ನುತ್ತ
ನೆನೆಯುತ್ತ ಮಲಗಿರಲು-ಅವನೊಂದು ಪರವ್ಯಕ್ತಿ
ಒಂದಾದನೆ ಮಲಗಿದನು-ಭಯವಾಯ್ತು, ನಡುಗಿದಳು
ನುತ್ತಿಯ್ಯ ಆ ದಿನದ, ಬಾಗಿಲುಗಳಿಯ ಹಾಕಿ
ಮಲಗಿರಲು ಹಾಕಿದಂತೆಯೆ ಇದ್ದ ತಪ್ಪಿಲ್ಲ,
ಮನದೊಳಿಂದು ಚಿಂತ್ರಿಂದಿ ಜಾವಂ ನೋಡುತ್ತ
ಮಲಗಿದಳು ಮತ್ತೊಮ್ಮೆ-ಆ ದಿವ್ಯ ಮೂರುತಿಯು
[illegible] ಲಲಿ ಮಲಗಿಹುದು, ಪರಮಾತ್ಮನು ನೋಡಿ
[illegible] ಲ-ಆ ಸಮಾಧಿಯೊಳಗಳು
[illegible] ನೋಡಿದಳು. ಮತ್ತೊಮ್ಮೆ ಕಣ್ದೆರೆಯ
[illegible] ಮೂರ್ತಿ ನಿದ್ದೆ ಬಾರದು ಮತ್ತೆ.
ಅಂತೆಂತು ರಾತ್ರಿಯನು ಕಳೆಯುತ್ತ, ಬೆಳಗಿನಲಿ
ಪತಿಯರಿಗೆ ಪೇಳಿದಳು, ನಿನಗಿದುವ ಹುಚ್ಚೆಂದು
ಅನುವಾದಿದರವರು

ಆ ದಿವಸ ಶಿವಪೂಜೆ;
ಗೆಳತಿಯರ ಸಂಗದಲಿ ಶಿವಪೂಜನೋತ್ಸವದ
ನೋಡುತಿರೆ ಥಂಡ್ರಿಯಲಿ, ದಿವ್ಯ ತೇಜಸ್ಸಿಂದು
ಶಿವಮೂರ್ತಿಯಿಂದಿಳಿದು ಬಣ್ಣ ಬೃಹ ಕಣ್ಣೆರದ
ತೇಗದಲಿ ಚಂದ್ರಮದಿ ದೇಹಪ್ರವೇಶವ
ಮಾಡಿದುದು. ಆ ದೇವಿ ಬಿಳ್ದಳು ಸಮಾಧಿಯಲಿ.
ಉಪಚಾರದಿಂದಾಗ ಕಣ್ತೆರೆದು ಮನೆ ಸೇರಿ
ಪತಿಯು ಬರದನೆ ನಾಯಿತಿದಳಾ ನರವಧುವು.

ಇಂತಿರಲು ಯಾತ್ರೆಯಂ ಮುಗಿಸುತ್ತ ಖುದಿರಾಮ
ಮರಳಿದನು ಪುರವರಕೆ-ಸತಿಪತಿಯ ರೀರ್ಸದರುಂ
ದೇವ ದರುಶನದಿಂದ ಕಳೆಯೇರಿ ಬಂದಿಹರು..
ತರ್ಗದಂ 'ಹರಿಹರನ' 'ಹರಹರಿಯ' ದರ್ಶನದಿ
ಸಂತೋಷ ಪಡೆವಂತೆ ಸುಖಿಸಿದರು ಮುದದಿಂದ.
ಚಂದ್ರದೇವಿಯ ದರ್ಶನಗಳ ಕೇಳುತಲವನು
ಪರಮಾತ್ಮನವತಾರಗಳ ತಾಳಲ್ಕೆ ಕಾಯುವನು
ಜಾತಿಹೆನು, ಚಿಜನೆಂದ, 'ಪರಮಾತ್ಮ ಸೇವೆಯೊಳು
ನಿರತಳಾಗಿರು' ಎಂದು ಸತಿಗೆ ಹೇಳಿದನವನು.

[ಸಶೇಷ.]

ವಿ ವಿ ಧ ವಿ ಚಾ ರ .

ಗಾಂಧೀಜೀಯವರ ಮೌನ ವ್ರತ.

ಗಾಂಧೀಜೀಯವರಿಗೆ ಈಗ ಕೆಲಂಚ ಕಾಲದಿಂದ ಆರೋಗ್ಯ ಚೆನ್ನಾಗಿಲ್ಲ. ಶೀಗಾನ್ ಹಳ್ಳಿಯಲ್ಲಿ ಕಾಲರಾ ವ್ಯಾಧಿಯು ಹರಡಿರುವುದರಿಂದಲೂ ಮತ್ತು ನೂರು ಮಂದಿ ಮುಖ್ಯ ಕೆಲಸಗಾರರು ಕಾಲರಾ ವ್ಯಾಧಿಗೆ ತುತ್ತಾದುದರಿಂದಲೂ ಮಹಾತ್ಮರ ಮನಸ್ಸು ಬಹು ಕೆಟ್ಟಿದೆ. ಇತ್ತೀಚೆಗೆ ಅವರ ರಕ್ತದ ಒತ್ತಡದಲ್ಲಿ ಬಹಳ ಏರಿಳಿತವು ಕಾಣಬರುತ್ತಿದೆ. ಪೂರ್ಣ ವಿಶ್ರಾಂತಿ ಪಡೆಯಲೋಸುಗ ಮಹಾತ್ಮರು ಅನಿಶ್ಚಿತ ಕಾಲದ ವರೆಗೆ ಮೌನ ವ್ರತವನ್ನು ಹಿಡಿದಿದ್ದಾರೆ. ಕಳವಳಕ್ಕೇನೂ ಕಾರಣವಿಲ್ಲ.

—o0o—

ಜಗತ್ತಿನ ಅದ್ಭುತ ದೀಪ!

ಚಿಕಾಗೋ ನಗರದ ಮನೆಯೊಂದರ ಮೇಲ್ಚಾವಣಿಯ ಮೇಲಿರುವ ದೀಪಸ್ತಂಭವೊಂದೇ ಜಗತ್ತಿನಲ್ಲೆಲ್ಲಾ ಅತ್ಯಂತ ಪ್ರಕಾಶಮಾನವಾದ ದೀಪವೆಂದು ಹೇಳಲಾಗಿದೆ. ಈ ದೀಪದ ಪ್ರಕಾಶ ಸುಮಾರು 200 ಕೋಟಿ ಕ್ಯಾಂಡಲ್ ಪವರ್ ಆಗಿರುತ್ತದೆ. ಒಂದು ದಿನ ವಿಮಾನದಲ್ಲಿ ಪ್ರಯಾಣಿಕರು ಸುಮಾರು 7,000 ಅಡಿಗಳ ಎತ್ತರದಲ್ಲಿ ಹೋಗುತ್ತಿದ್ದಾಗ ಇದರ ಬೆಳಕಿನಲ್ಲಿ ವೃತ್ತ ಪತ್ರಿಕೆಯನ್ನು ಓದಿದರಂತೆ!

ಈ ದೀಪಸ್ತಂಭದ ಹತ್ತಿರ ಒಂದು ಗಜ ದೂರದಲ್ಲಿ ದೀಪದ ಪ್ರಕಾಶವು ಮಧ್ಯಾಹ್ನ ಹೊತ್ತು ಸೂರ್ಯನ ಭೂಮಿಯ ಮೇಲೆ ಇರುವ ಪ್ರಕಾಶಕ್ಕಿಂತಲೂ ಅವ್ವ 20,000 ಪಾಲು ಹೆಚ್ಚು ಪ್ರಕಾಶಮಾನವಾಗಿರುವುದಂತೆ. ಅಲ್ಲದೆ ಪೌರ್ಣಮೆಯ ಚಂದ್ರನ ಪ್ರಕಾಶಕ್ಕಿಂತ 8 ಕೋಟಿ ಪಾಲು ಹೆಚ್ಚು ಪ್ರಕಾಶದ್ದೆಂದು ಹೇಳಬಹುದಂತೆ! ಇಂಥಾ ದೀಪಗಳಿದ್ದರೆ ಸೂರ್ಯನ ಅವಶ್ಯವೇ ಬೇಡವೆನ್ನಿ? ಅಂತು ಮಾನವನು ತನ್ನ ಅಚಲ ಪ್ರಯತ್ನದಿಂದ ದಿನೇ ದಿನೇ ಸ್ವಾವಲಂಬಿಯಾಗುತ್ತಿದ್ದಾನೆ.

—o0o—

ಬೆಕ್ಕಿಗೆ ಯೋಗ್ಯತಾ ಪತ್ರ.

ಉರಿಯುತ್ತಿರುವ ಒಂದು ಮನೆಯಿಂದ ತನ್ನ ಮರಿಗಳನ್ನು ರಕ್ಷಿಸಿದ ಒಂದು ಬೆಕ್ಕಿಗೆ ಅಮೇರಿಕದ ಭೂತದಯಾಪರ ಸಂಘದವರು ಸಾರ್ವಜನಿಕ ಸಭೆಯನ್ನು ಜರುಗಿಸಿ ಒಂದು ಯೋಗ್ಯತಾ ಪತ್ರವನ್ನು ಕೊಡಲು ನಿಶ್ಚೈಸಿರುವರು. ಆ ನಗರದ ಅಧ್ಯಕ್ಷರೇ ಈ ಕಾರ್ಯವನ್ನು ಮಾಡಲು ಒಪ್ಪಿರುವರು.

—o0o—

ಗುಡಿ ಗೋಪುರಗಳು ಸಾಕು.

'ಗುಡಿ ಗೋಪುರಗಳನ್ನು ಕಟ್ಟುವುದರ ಬದಲು ಬಡವರಿಗಾಗಿ ಮನೆಗಳನ್ನು ಕಟ್ಟು' ಹೀಗೆ ಲಂಡನಿನ ಒಂದು ಪತ್ರಿಕೆಯು ಬೋಧಿಸುತ್ತದೆ. ಈ ಬೋಧನೆಯು ಲಂಡನಿನವರಿಗೆ ಮಾತ್ರ ಇರದೆ ಬಾರತದ ಅನೇಕ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ದೇವಸ್ಥಾನಗಳನ್ನು ಕಟ್ಟಿಸುವ ಧರ್ಮವಂತ ಭಾರತೀಯರ ಗಮನಕ್ಕೂ ಸಹ ಬರಬಹುದು. ಭಾರತದ ಮುಖ್ಯ ಪಟ್ಟಣ ಒಂದರಲ್ಲಿ 4,000 ಗುಡಿಗಳಿದ್ದು ಅಲ್ಲಿಗೆ ಬರುವ ಜನರ ವಸತಿಗಾಗಿ ಗುಡಿಸಲುಗಳೂ ಕೂಡ ಇಲ್ಲ. ಲಂಡನ್ನಿನ ಪಾದ್ರಿಗಳೊಬ್ಬರು ಹೊಸದಾಗಿ 25 ಚರ್ಚುಗಳನ್ನು ಕಟ್ಟಲು ಯೋಚಿಸಿದ್ದಾರಂತೆ. ಇವುಗಳನ್ನು ಕಟ್ಟಿಸುವ ಬದಲು ಅದೇ ಸ್ಥಳದಲ್ಲಿ ಬಡಬಗ್ಗರಿಗಾಗಿ ಮನೆಗಳನ್ನು ಕಟ್ಟಿಸಿದರೆ ಬಹಳ ಶ್ರೇಷ್ಠ ಕಾರ್ಯ ಮಾಡಿದಂತಾಗುವದೆಂದು ಕೆಲರು ಸಲಹೆ ಕೊಟ್ಟಿದ್ದಾರಂತೆ. ಅವರು ಆ ಕಾರ್ಯವನ್ನು ಕೈಕೊಳ್ಳುವ ಮೊದಲು ಭಾರತೀಯ ಶ್ರೀಮಂತ ಧರ್ಮ ಪ್ರವರ್ತಕರು ಮೊದಲು ಅದಕ್ಕೆ ಕೈಹಚ್ಚಿ ಏಕೆ ಆದರ್ಶಪ್ರಾಯರಾಗಕೂಡದು?

—o0o—

ಸಾಲದ ವಸೂಲಿಗೆ ಉಪಾಯ.

ಫಿಲಿಪ್ಪೈನ್ ದ್ವೀಪಗಳಲ್ಲೊಂದರಲ್ಲಿನ ಮಾಂಸ ಮಾರುವವನು ಸಾಲ ವಸೂಲಿ ಮಾಡಲು ಹೊಸ ಉಪಾಯ ಕಂಡು ಹಿಡಿದಿದ್ದಾನೆ. ಸಾಲ ಹೆಚ್ಚುತ್ತಿದ್ದುದನ್ನು ಕಂಡು ಅಂಗಡಿಯ ಬಾಗಿಲನ್ನು ಮುಚ್ಚಿ, ಒಂದು ಪ್ರಕಟಣೆಯನ್ನು ತೂಗ ಹಾಕಿದ. 'ಅರಿಯನ್ನು ಳಿಯಲೇ ಬೇಕಾದ ನಿಕೃಷ್ಟ ಸಾಲಗಳು ಹೆಚ್ಚಿರುವದರಿಂದ ಅಂಗಡಿಯನ್ನು ಮುಚ್ಚಲೇ ಬೇಕಾಯಿತು. ಸಾಲಗಾರರ ಹೆಸರುಗಳನ್ನು ಬೇಗನೇ ಪ್ರಕಟಪಡಿಸಲಾಗುವುದು.' ಎಂದಿಷ್ಟೇ ಆ ಪ್ರಕಟಣೆ. ಆ ಪ್ರಕಟಣೆಯ ಪರಿಣಾಮವಾಗಿ ಕೂಡಲೇ ಹಳೇ ಸಾಲಗಳೆಲ್ಲ ಮರಳಿ ಬರತೊಡಗಿದೆ. ತಮ್ಮ ಹೆಸರು ಎಲ್ಲರಿಗೂ ತಿಳಿದುಬಿಡಬಹುದೆಂಬ ಭಯವಿರಬೇಕು—ಆ ಸಾಲಗಾರರಿಗೆ. ಅನೇಕ ವ್ಯಾಪಾರಿ ಸಂಸ್ಥೆಗಳು ಈ ಹೊಸ ಉಪಾಯದ ಯುಕ್ತಾಯುಕ್ತತೆಗಳ ಕುರಿತಾಗಿ ಯೋಚಿಸುತ್ತಿವೆ.

—o0o—

ರೇಡಿಯೋ ಸಹಾಯದಿಂದ ಅಧಿಕ ಹಾಲು.

ಜೋಸೆಫೆಬ್ರಿನ್ ಎಂಬೊಬ್ಬ ನ್ಯೋರ್ಟ್ ಲ್ಯಾಂಡಿನ ಗೌಳಿಯು ತಾನು ದನ ಕಟ್ಟುವ ಕೊಟ್ಟಿಗೆಯಲ್ಲಿ ಒಂದು ರೇಡಿಯೋ ಯಂತ್ರ ಸ್ಥಾಪಿಸಿ ದಿನ ದಿನ ಆವಳ ದನಗಳು ಕರೆಯುವ ಹಾಲು ಅಧಿಕವಾಗಿಯೂ, ಉತ್ತಮವಾಗಿಯೂ ಇದೆ ಎಂದು ತಿಳಿಸುತ್ತಾಳೆ. ಅವಳು ಹಾಲನ್ನು ಕರೆಯುವಾಗ ರೇಡಿಯೋ ಯಂತ್ರದ ಸಹಾಯದಿಂದ ಇಂಪಾದ ಸಂಗೀತ ವನ್ನು ಕೇಳಿಸುತ್ತಾಳೆ. ಹಸುಗಳು ಗಾನದಲ್ಲಿ ಮಗ್ನವಾಗುವುವು, ಆಗ ಸುಸೂತ್ರವಾಗಿ ಹಾಲನ್ನು ಅಧಿಕವಾಗಿ ಕರೆಯಬಹುದಂತೆ.

—o0o—

ಅಂಚೆ ಮೂಲಕ ಸಮಾಚಾರ ಯಾಕೆ ಕಳುಹಿಸಬೇಕು?

ಬಾಯಿಮಾತಿನಲ್ಲೇ ಹೇಗೆ ಊರಿಂದೂರಿಗೆ ಅಂಚೆ ಮೂಲಕ ಸಮಾಚಾರ ಕಳುಹಿಸಬಹುದೆಂಬುದು ಆಧುನಿಕ ವಿಜ್ಞಾನ ಪರಿಶೋಧನೆಯ, ಪ್ರತಿಫಲವಾಗಿ ಹಾಲೆಂಡಿನ ಆಮ್‌ಸ್ಟರ್‌ಡ್ಯಾಂ ನಗರದ ಅಂಚೆ ಕಚೇರಿಯ ಮುಂದೆ ಒಂದು ಯಂತ್ರವನ್ನು ಇಟ್ಟಿರುವರು. ನಿಗದಿ ಮಾಡಲ್ಪಟ್ಟಿರುವ ಹಣವನ್ನು ಯಂತ್ರದಲ್ಲಿ ಹಾಕಿ ಅದರ ಮುಂದೆ ಇರುವ ಮೈಕ್ರೊಫೋನಲ್ಲಿ 100 ಪದಗಳಿಗೆ ಮೀರದಂತೆ ಮಾತನಾಡಬಹುದು. ಮಾತಾಡಿದ್ದು ಗ್ರಾಮಾಫೋನ್ ರಿಕಾರ್ಡುಗಳಂತೆ ತಯಾರಾಗಿ ಬರುವುವು. ಅದನ್ನು ಅಂಚೆ ಮೂಲಕ ರವಾನಿಸಿದರೆ, ವಿಳಾಸದಾರರು ಅದನ್ನು ಹಾಡಿಸಿ ತಿಳಿದುಕೊಳ್ಳಬಹುದಾಗಿದೆ. ಕಾಗದಗಳನ್ನು ಯಾರು ಓದುವರೋ ಎಂಬುವ ಭಯವೇ ಇರುವದಿಲ್ಲ.

—o0o—

ಕಪ್ಪು ಮನುಷ್ಯರು ಹೆದರಬೇಕಾಗಿಲ್ಲ.

ಇನ್ನೇನು ಹುಟ್ಟು ಬಣ್ಣವನ್ನು ಸುಲಭವಾಗಿ ಬದಲಾಯಿಸಬಹುದು. 'ಕರಿ ನಾಯಿಯನ್ನು ಬಿಳಿ ನಾಯಿಯಾಗಿ ಮಾಡುವ ಪ್ರಯತ್ನ' ಎಂಬ ಗಾದೆಯನ್ನು ಬದಲಾಯಿಸುವ ಪ್ರಸಂಗ ಬಂದಿದೆ. ಅಮೇರಿಕದ ಪ್ರೊ. ಪಿಬೊಕಾರ್ ಎಂಬೊಬ್ಬ ಪರಿಶೋಧನಗಾರರು ಕರಿ ನಿಗ್ರೊಗಳನ್ನು ಬಿಳಿಯರನ್ನಾಗಿ ಮಾಡಬೇಕೆಂದು ಪ್ರಯೋಗ ನಡೆಸುತ್ತಿದ್ದಾನಂತೆ. ಈಗಾಗಲೇ ಆತನು ಗ್ರಂಥಿ ಚಿಕಿತ್ಸೆಯಿಂದ ಕೆಲವ ಐದು ಜನ ನೀಗ್ರೊಗಳನ್ನು ಮಸಕ ಕಪ್ಪು ಬಣ್ಣದವರನ್ನಾಗಿ ಮಾಡಿರುವನೆಂದು ತಿಳಿದುಬಂದಿದೆ. ಇನ್ನು ಸ್ವಲ್ಪ ದಿವಸಗಳಲ್ಲಿ ಅವರನ್ನು ಬಿಳಿಯರನ್ನಾಗಿ ಮಾಡುವೆನೆಂಬ ಭರವಸೆ ಅವನಿಗಿದೆಯಂತೆ. ಅಂದ ಮೇಲೆ ಈಗಿರುವ ಈ ಬಿಳಿ-ಕಪ್ಪು ಜನಗಳಿನ ವ್ಯತ್ಯಾಸಗಳು ಹೋಗುವುದೇನೊ? ಭಾರತಕ್ಕೆ ಈ ಪ್ರಯೋಗವು ಬಹು ಪರಿಣಾಮಕಾರಿಯಾಗಬಹುದಲ್ಲವೇ? ಕಪ್ಪು ಜನರೇ ಹೆದರಬೇಡಿ!

—o0o—

ಹಾಲಿನಿಂದ ಬಟ್ಟೆಗಳು.

ಬರ್ಯರೂತ್ ಎಂಬಲ್ಲಿ ನಡೆದ ಮಹಾ ಸಭೆಯೊಂದರಲ್ಲಿ ರಸಾಯನಶಾಸ್ತ್ರಜ್ಞರು ಭಾಷಣ ಮಾಡುತ್ತಾ—ಇನ್ನತ್ತಲ್ಪ ಕಾಲದಲ್ಲೇ ಜರ್ಮನಿಯವರು ಹಾಲಿನಿಂದ ತಯಾರಾದ ಬಟ್ಟೆಯನ್ನು ಹೊಂದಲವಕಾಶವಾಗುವುದೆಂದೂ ಅಭಿಪ್ರಾಯ ಪಟ್ಟಿರುವರು. ತೆಳುವಾದ ಹಾಲಿನಿಂದ ಒಂದು ವಿಧವಾದ ನಾರನ್ನು ತಯಾರು ಮಾಡಬಹುದಾಗಿದೆ. ಈ ನಾರನ್ನು ಉತ್ತಮಪಡಿಸಿ ಬಟ್ಟೆಗಳನ್ನು ತಯಾರುಮಾಡಬಹುದು. ಅದ್ದರಿಂದ ಆಹಾರಕ್ಕೆ ಬೇಕಾಗುವಷ್ಟು ಹಾಲಿನ ಸರಬರಾಜು ಆಗಿ ಮಿಕ್ಕ ಹಾಲನ್ನು ಶೇಖರಿಸಲು ಒಂದು ಸಂಸ್ಥೆಯು ಈಗಾಗಲೇ ಕೆಲಸಕ್ಕಾರಂಭಿಸಿದೆ.

—o0o—

ಹೇರಳೇ ಗಿಡದಲ್ಲಿ ಮಾವಿನ ಫಲ

ಅಲಹಾಬಾದನಲ್ಲಿ ಒಂದು ಮಾವಿನ ಹಣ್ಣಿನ ಪ್ರದರ್ಶನವು ನಡೆಯಿತು. ಸುಮಾರು 90 ವಿಧ ಮಾವಿನ ಫಲಗಳನ್ನು ಪ್ರದರ್ಶಿಸಲಾಯಿತು. ಅದರಲ್ಲೊಂದು ಹೇರಳೇ ಗಿಡದಿಂದ ಆದ ಮಾವಿನ ಫಲವು. ಈ ಹಣ್ಣು ನೋಡಲಿಕ್ಕೆ ಮಾವಿನ ಹಣ್ಣಿನ ಆಕಾರದಲ್ಲಿದ್ದು ಅದರ ಸಿಪ್ಪೆಯು ಮಾತ್ರ ಹೇರಳೇ ಹಣ್ಣಿನ ಸಿಪ್ಪೆಯಂತೆ ಮುದುರು ಮುದುರಾಗಿತ್ತು. ವಾಟೆ ಸಣ್ಣದಾಗಿದೆ. ಸಿಪ್ಪೆ ಹುಳಿಯಾಗಿದೆ. ಆದರೆ ಅದರ ರುಚಿ ಮಾವಿನ ಹಣ್ಣಿನಂತೆಯೂ ಇಲ್ಲ, ಹೇರಳೇ ಹಣ್ಣಿನಂತೆಯೂ ಇಲ್ಲ. ಸಿಪ್ಪೆ ಹುಳಿಯನ್ನು ತೆಗೆಯಲು ಪ್ರಯೋಗಗಳು ನಡೆಯುತ್ತಿವೆ. ಹೀಗೆ ಒಂದು ಮರದಿಂದ ಬೇರೊಂದು ಮರದ ಹಣ್ಣನ್ನು ತೆಗೆಯುವ ಶೋಧನೆಯಾಯಿತು. ಮನುಷ್ಯನ ಮೇಲೆ ಈ ಕೃಷಿ ನಡೆಸಿದರೆ ಹ್ಯಾಗೆ?

—o0o—

ಭೂ, ಜಲ ಮತ್ತು ವಾಯು ಮಂಡಲದಲ್ಲಿ ಸಂಚರಿಸುವ ಕಾರು.

ಕ್ಯಾಪ್ಟವಿಕ್ಟರ್‌ಡಿಪ್ರೋಸ್ಕಿ ಎಂಬವರು ಒಂದು ಹೊಸ ಮೋಟಾರು ಮಾದರಿಯ ಯಂತ್ರವನ್ನು ನಿರ್ಮಿಸಿರುವರು. ಇದು ರಸ್ತೆಯ ಮೇಲೆ ಮೋಟಾರಿನಂತೆ ಓಡಬಲ್ಲುದು; ನೀರಿನಲ್ಲಿ ಆವಿಯ ದೋಣಿಯಂತೆ ತೇಲಬಲ್ಲುದು, ಆಕಾಶದಲ್ಲಿ ವಿಮಾನದಂತೆ ಹಾರಬಲ್ಲುದು. ರಸ್ತೆಯಲ್ಲಿ ಇದರ ವೇಗವು ಗಂಟೆಗೆ 60 ಮೈಲಿ; ನೀರಿನಲ್ಲಿ 30 ಮೈಲಿ; ಆಕಾಶದಲ್ಲಿ 120; ರಸ್ತೆಯಲ್ಲಿ ಇದು 12.5 ಅಡಿ ಉದ್ದದ 3 ಚಕ್ರಗಳುಳ್ಳ ಮೋಟಾರು. ನೀರಿನಲ್ಲಿ ಆವಿಯ ವೇಗದಿಂದ ಹೋಗಬಲ್ಲ ದೋಣಿ; ಆಕಾಶದಲ್ಲಿ ಹಾರುವಾಗ 'ಹೆಲಿಕಾಪ್ಟರ್' ಎಂಬುವ ನೇರವಾಗಿ ಮೇಲಕ್ಕೆ ಹಾರುವ ಯಂತ್ರ. ಇನ್ನೇನು ಮಾನವನ ಕಾರ್ಯದ ಕುಶಲತೆಯನ್ನು ವಿವರಿಸುವದಕ್ಕಾಗುತ್ತದೆ. ಪುರಾಣ ಕಾಲದ ಇಂದ್ರಜಿತುವನ್ನು ಮೀರಿಸಿದಂತಾಯಿತಲ್ಲವೇ? ಆದರೆ ಭಾರತೀಯರು ಹೆದರಬೇಕಾಗಿಲ್ಲ. ಇದೆಲ್ಲಾ ಭಾರತದ ಪ್ರಾಚೀನ ಗ್ರಂಥಗಳೇ ಉಗಮಸ್ಥಾನವೆಂಬುವುದರಲ್ಲಿ ಸಂದೇಹವಿಲ್ಲ.

—o0o—

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತವೆ. ಲಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು! ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಖಾಸಲು ವಿನಹ ಕಳುಹಿಸಲ್ಪಡುವ ನಮ್ಮ

· ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52-11 ಬೆಂಗಳೂರು ಸಿಟಿ.

೪೨ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೆಕಂಪನಿ

ಸುಪ್ರಸಿದ್ಧ ಜ್ವರದ ಗುಳಿಗೆ

ಇದು ಛಳಿಜ್ವರ, ಚಾತುರ್ಥ ಜ್ವರ, ದಿನಬಿಟ್ಟು ದಿನ ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ನಾನಾತರದ ಜ್ವರಗಳ ಮೇಲೆ ತತ್ಕ್ಷಣವೇ ಗುಣ ಸಂಜೀವಿನಿಯಂತಿದೆ! ಬಾಟ್ಲಿಗೆ 1 ರೂ. 4 ಬಾಟ್ಲಿಗೆ 3 ರೂ. 12 ಬಾಟ್ಲಿಗೆ 8 ರೂ. ವಿ. ಪಿ. ಖರ್ಚು ಬೇರೆ.

ಗಣೇಶ ರಾಮಚಂದ್ರ ಕರ್ಕೆ.

ಮತ್ತು ಕಂಪೆನಿ,

(52-38) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಬೋಯಪ್ಪನವರು.

ಐಚೆಟ್ಟಿರ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,

ಮೆ ಕೆ ಮು ಸುಬ್ರಾಯನವರು.

ಅಮ್ಮತ್ತಿ—ಸಿದ್ಧಾಪುರ— ಮೆ. ಐನಂಡ ಪೂವಪ್ಪನವರು.

ಪೊನ್ನಂಪೇಟೆನಾಡು—ಮೆ ಪಿ. ಕೆ. ಮುದ್ದಮ್ಮಯ್ಯನವರು.

ಹುದಿಕೇರಿ—ಮೆ. ಅಜ್ಜಮಾಡ ಪೂವಪ್ಪನವರು ಮತ್ತು ಮೆ. ಕೆ: ಪೂವಮ್ಮಯ್ಯನವರು.

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಪೂಚಯ್ಯನವರು.

ಸೋಮವಾರಪೇಟೆ—ಮೆ ಕೆ ಪೊಗಪ್ಪನವರು.

ಶಾಂತಳ್ಳಿ—ಮೆ. ಬೆಳ್ಳಿಯಂಡ ಮು. ಪೂಣಚ್ಚನವರು.

(ಶಾಂತಳ್ಳಿ ಸ್ಟೋರ್ಸ್)

ಸೂಚನೆ.—ಪ್ರಿಂಟೆಡ್ ರಶೀತಿ ಕೊಂಡುಕೊಳ್ಳದೆ ಯಾರೂ ಹಣ ಕೊಡಕೂಡದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ

The Bombay Mutual Life Assurance Society Ltd.,

Head Office:-BOMBAY. **Estd. 1871.**

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937 ರಲ್ಲಿ ಮಾಡಿದ ಉದ್ಯೋಗ	ರೂ. 2,53,15,500.
1937 ರಲ್ಲಿ ಪೂರ್ತಿಯಾದ ಉದ್ಯೋಗ	ರೂ. 2,02,02,000.

ಎಂಡೋಮೆಂಟ್ ವಿಮಾ ಪತ್ರದ ಮೇರೆ 1000ಕ್ಕೆ ವರ್ಷಕ್ಕೆ 21 ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ 26 ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, **ಸೌತ್ ಪೆರೇಡ್, ಬೆಂಗಳೂರು.**

52-25

[ಟ್ರೇಡ್ ಮಾರ್ಕ್] **ವೇಪ್ರಿನ್** [ರಿಜಿಸ್ಟರ್ಡ್]

ಚರ್ಮವ್ಯಾಧಿಗಳ ವೈರಿ—ಪ್ರತಿ ಒಬ್ಬರ ಸ್ನೇಹಿತ—ಸ್ವದೇಶಿ ವಸ್ತು.

ಇದರ ಲೇಪನದಿಂದ ಕಜ್ಜಿ, ಗಾಯ, ವ್ರಣ, ಇಸಬು, ನಾರು ಹುಣ್ಣು, ಮೂಲವ್ಯಾಧಿ, ಸುಟ್ಟಿನ ಗಾಯ, ಮುಖದ ಮೊಡವೆ(Pimples ಸುಟ್ಟಗಾಯ, ಕತ್ತಿಗಾಯ, ಕೊಡಪಾನೆ, ಗಣಕರ್ಣ ಇವು ವಾಸಿಯಾಗುವುವು. ಇದು ಸುರಿಯುತ್ತಿರುವ ರಕ್ತವನ್ನು ನಿಲ್ಲಿಸಿ ನೋವನ್ನು ನಿವಾರಿಸುವುದು. ಅಲ್ಲದೆ ಇಂದ್ರಜಾಲದೋಷಾದಿಯಲ್ಲಿ ಚೇಳಿನ ವಿಷವನ್ನು ಬಹಿರ್ಗತಪಡಿಸುವುದು. ನಿಮ್ಮಲ್ಲಿ ಒಂದು ಬಾಟ್ಲು ಇದ್ದಲ್ಲಿ ಒಬ್ಬ ಡಾಕ್ಟರೇ ಇದ್ದಂತಾಗುವುದು. ಕ್ರಯ ಬಹಳ ಸುಲಭ.

½ ಔನ್ಸ್ ಬಾಟ್ಲು 1ಕ್ಕೆ ಬೆಲೆ 0-8-0. ¼ ಔನ್ಸ್ ಬಾಟ್ಲು 1ಕ್ಕೆ ಬೆಲೆ 0-4-0.

ವಿ. ಸೂ:—ಪೆಟ್ಟು ತಾಗಿದ ಸ್ಥಳದಲ್ಲಿ ವೇಪ್ರಿನ್ ಚೆನ್ನಾಗಿ ತಿಕ್ಕುವುದು. ಇಲ್ಲವೇ ಬಟ್ಟೆಯ ಮೇಲೆ ಸವರಿ ಅಂಟಿಸುವುದು. ನಂತರ ಸಾಬೂನಿನಿಂದ ಕೈ ತೊಳೆಯುವುದು. ಇದಲ್ಲದೆ ಇನ್ನೂ ಅನೇಕ ತರಹದ ಔಷಧಿಗಳು ನಮ್ಮಲ್ಲಿವೆ.

ಲಕ್ಷ್ಮೀ ಮ್ಯಾನುಫ್ಯಾಕ್ಚರಿಂಗ್ ಕಂಪನಿ,

ವಿ. ಪೊ. ಬೆಂಗಳೂರು ಸಿಟಿ.

52-3 **ಸೋಲ್ ಏಜೆಂಟ್:—ಹರಿದಾಸ್ ಕಲ್ಯಾಣ ಗುಪ್ತ,**

ಮಡಿಕೇರಿ, (ಕೊಡಗು).

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆಶೀತಗಳಿಗೂ ಅಮೃತ. ಬೆಲೆ 0-1-0, 0-2 0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ 0- 1-0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ.

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ. ಬೆಲೆ 0-8-0, 0-4-0.

ಸುಕುಮಾರತೈಲ

21

ಬಿಸಿಲು ಹೆಚ್ಚಿನ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ಇಂತ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ ಬೆಲೆ 1-0 0

ಪ್ರೊಪ್ರೈಟರ್—ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ ವಿ ಪಂಡಿತ್.

ಉತ್ತಮ ಪ್ರಚಾರ! ಜ್ಞಾನಭಂಡಾರ!!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ಣಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180	ರೂ. 55.	ರೂ. 35.	ರೂ. 22
6 ತಿಂಗಳಿಗೆ—	„ 100.	„ 35.	„ 22.	„ 13
3 ತಿಂಗಳಿಗೆ—	„ 60	„ 20.	„ 13.	„ 8.
1 ತಿಂಗಳಿಗೆ—	„ 25	„ 10	„ 6.	„ 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿನ್ನೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವುದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಪ್ರವೀಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮಿ. ಎಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮಿ. ಎಲ್. ಎಫ್. ಸಿ. ದಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

ಮಿ. ಜಿ. ಶೇಷಾದ್ರಿ, ಅ. ಇನ್ಸ್‌ಪೆಕ್ಟರು, ಶಿವಮೊಗ್ಗಾ.

62-34

Printed & Published by P. I. Belliappa, at 'Kodagu' Press Mercara for 'Kodagu' Ltd.

Reg No. M. 1390

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು

ಸಂಪಾದಕರು:—[illegible]

ತಾ. ೨—೯—೧೯೩೮.

ವಾರ್ಷಿಕ ಚಂದಾ [illegible]

ಸಂಪುಟ [illegible] [ಸಂಚಿಕೆ [illegible]

ನಿಮ್ಮ

ಮುದ್ರಣ ಕೆಲಸಗಳನ್ನು

" ಕೊಡಗು "

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

The Bombay Life Assurance Company Ltd.

(Estd 1908.)

45 47, Churchgate Street, Fort Bombay.

Assets and Liabilities as on 31st December 1937.

Liabilities.			
Life Fund	98,68,231	15	9
Reserve Fund	20,382	1	7
Share Capital (Paid up)	1,35,100	0	0
Premium on issue of Shares	90,750	0	0
Depreciation Fund	1,43,[illegible]	[illegible]	[illegible]
Claims admitted or intimated but not paid	4,08,356	0	7
Other liabilities for Provident Fund, Premium deposits, unclaimed dividends etc.	5,25,780	10	0
Total	1,11,9[illegible],258	11	11

Assets. (Investments)			
Gilt-edged Securities and Bonds	[illegible]	11	
Debentures of Industrial Concerns and Banks	2,65,146	2	[illegible]
Bank Shares	92,001	[illegible]	[illegible]
Railway Shares	1,26,612	4	0
Pref Shares of Industrial Concerns	[illegible]	1	
Ordinary Shares Do.	[illegible]	[illegible]	
First mortgage on properties within India	2,82,025	0	[illegible]
Loans on Co.'s policies within their surrender value	9,17,253	1	[illegible]
House properties in India	[illegible]	0	7
Advances to agents and Loans against Provident Fund	72,[illegible]2	7	[illegible]
Cash with Banks and on Hand	[illegible]	[illegible]	
Sundry [illegible] outstanding premiums, [illegible] interest, furniture, [illegible] balances etc	[illegible]148	[illegible]	[illegible]
Total	1,11,9[illegible],258	11	11

Progress Proves its Popularity.

Year.	Business in force	Claims Paid	Life Assurance Fund
1931	[illegible]26,82,130	[illegible]	33,24,[illegible]
1933	3,07,[illegible]	3,51,003	50,04,871
1935	4,12,51,[illegible]	5,75,198	68,01,501
1937	6,01,70,[illegible]	6,09,018	9[illegible],68,232

Total Claims Paid Between 1909 and 1937— Rs. 36,22,573

BOMBAY LIFE is a [illegible] Indian Concern Offering all [illegible] best in Life Assurance.

To Insure or to Represent it pays you to consult us or our Branches—

KOCHIKAR & BROTHERS Ltd.,
Madras Branch Secretaries,
Post Box No. 337, Mount Road, MADRAS. [Phone No. [illegible]]

6

Bombay Life Building. Udipi	Gautam Nivas, Charni Road Girgaum Bombay 4	Visweswarapuram Circle Bangalore City	Puthiyara Calicut.	Car Street, Mangalore	Ottapalam S. Malabar.	Central Station Road. Trivandrum

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಅ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,760	0	0
ಜನರಿಂದ ಠೇವಣಾತಿ	–	2,52,619	7	4
ವಸೂಲಾದ ಕ್ಷೇಮನಿಧಿ	–	1,36,284	9	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	14,275	9	0
ತ್ರಿಫ್ಟ್ ಡಿಪಾಜಿಟ್ಟು	–	37,190	15	8

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಃ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ಪುನಃ ಆರಂಭಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:—ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಚೌರೀರ ಎ. ಪೊಂದಣ್ಣನವರು ಬಿ. ಎ., ಬಿ. ಎಲ್.
ಸೆಕ್ರೆಟರಿ:—ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ., ಬಿ. ಎಲ್.

ತಾ. 1-8-1938

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—"ಲಕ್ಷ್ಮೀನಿವಾಸ್" ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚೆನ್ನವಾದ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛೈಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ಕಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ಕಾರ್ಕಳ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-14 **The Agricultural & Industrial Bank Ltd**

"ZANDU"

ಝಂಡೂರಸಶಾಲೆ	ಝಂಡೂರಸಶಾಲೆ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝಂಡೂ ಅಯೋಡೈಸ್ಡ್ ಸೀರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝಂಡೂ ಪ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಧ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್

(52-4) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಸ್ರಿ, ಕಸ್ತೂರಿ ಮಿಶ್ರ)

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಜಡ್ಡುವದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳ್ನು ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ 2—8—0.

ಮಲೇರಿಯಾ ನಿವಾರಿಣಿ

ಇದು ಚಳಿ ಜ್ವರ, ಚಾತುರ್ಥಿ ಜ್ವರ, ದಿನ ಬಿಟ್ಟುಬರುವ ಜ್ವರ, ಮಲೇರಿಯಾ ಜ್ವರ, ಇನ್‌ಫ್ಲುಯೆಂಜಾ ಇತ್ಯಾದಿ ನಾನಾ ತರದ ಜ್ವರಗಳ ಮೇಲೆ ರಾಮಬಾಣ.

ಬಾಟ್ಲಿ 1ರ ರೂ. 1—8—0; ಸಣ್ಣ ಬಟ್ಲಿ ರೂ. 0—13—0.

ಪ್ಲೀನ್ ಮಿಕ್ಶ್ಚರ್

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಅಶಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು ಬಾಟ್ಲಿ 1ರ ರೂ. 1—2—0.

ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಸಿಸಿಯನ್ಸ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ಮಂಗಳೂರು ಸ್ಟೋರ್ಸ್, ಮಡಿಕೇರಿ. ವಿ. ಜಿ. ಕಾಮತ್, ಮಡಿಕೇರಿ. ಜಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. ಎ. ಎಸ್. ಮಾಣಯ್ಯ, ಸುಂಟಿಕೊಪ್ಪ. ಸುಂದರ್ ಬ್ರದರ್ಸ್, ಸುಳ್ಯ. [8]

ಗಂಟೆಗಳಿಂದ ಯುದ್ಧ ಸಾಮಗ್ರಿ.

ಯುದ್ಧ ಸಾಮಗ್ರಿಗಳ ತಯಾರಿಗೆ ಬೇಕಾದಷ್ಟು ಲೋಹವಿಲ್ಲದೆ ಕಷ್ಟಪಡುತ್ತಿರುವ ಹಿಟ್ಲರ್ ತನ್ನ ದೃಷ್ಟಿಯನ್ನು ಇಗರ್ಜಿಗಳ ಕಡೆಗೆ ತಿರುಗಿಸಿದ್ದಾನೆ. ಜನರನ್ನು ಪ್ರಾರ್ಥನೆಗೆ ಕರೆಯಲು ಉಪಯೋಗಿಸಲ್ಪಡುತ್ತಿದ್ದ ಪುರಾತನ ಕಾಲದ ಗಂಟೆಗಳನ್ನೆಲ್ಲಾ ತೆಗೆಯಿಸಿ ಅವುಗಳ ಬದಲು ಅವುಗಳಷ್ಟೇ ಶಬ್ದವನ್ನೀಯುವ ಅಲ್ಯೂಮಿನಿಯಂ ಲೋಹದಿಂದ ಮಾಡಲ್ಪಟ್ಟ ಗಂಟೆಗಳನ್ನು ತೂಗಾಡಿಸತೊಡಗಿದ್ದಾನೆ. ಪುರಾತನ ಕಾಲದ ಕಂಚಿನ ಹಾಗೂ ಇತರ ಬೆಲೆಬಾಳುವ ಲೋಹಗಳಿಂದ ಮಾಡಲ್ಪಟ್ಟ ಈ ಗಂಟೆಗಳು ಆಯುಧಸಾಮಗ್ರಿಗಳಿಗಾಗಿ ಕರಗಿಸಲ್ಪಡುತ್ತವೆ. ಒಂದು ಮಾತ್ರ ಉಳಿದಿದೆ! ಪಾದ್ರಿಗಳನ್ನು ಸೈನಿಕರನ್ನಾಗಿ ಮಾಡುವುದು. ಆಗ ಕೈಯಲ್ಲಿ ಬಂದೂಕು, ಬಾಯಲ್ಲಿ ಮಂತ್ರ ಎಂಬುದು ಸರಿಯಾಗುವುದು.

—೦0೦—

ಬ್ರಹ್ಮಚಾರಿಗಳಿಗೆ ನಿಷೇಧ.

ನಾವು ಇಟಲಿಯಲ್ಲಿ ಹುಟ್ಟಬೇಕಿತ್ತು. ಎಷ್ಟು ಅವಿವಾಹಿತ ತರುಣರು ನಮ್ಮಲ್ಲಿ ಅಧಿಕವಿದ್ದಂತೆ, ನಾವೇಕೆ ಇಲ್ಲಿ ಹುಟ್ಟಿದೆವು ಎನ್ನುವ ಇಟಲಿಯ ಬ್ರಹ್ಮಚಾರಿಗಳೂ ಬಹಳ. ಇಟಲಿಯ ಜನಸಂಖ್ಯೆಯನ್ನು ಹೆಚ್ಚಿಸಲೆಳಸಿದ ಮುಸಲನಿ, ಅವಿವಾಹಿತರ ಮೇಲೆ ತೆರಿಗೆಯನ್ನು ಹೊರಿಸಿದ್ದಲ್ಲದೆ ಈಗ ಹೊಸತೊಂದು ಆತಂಕ ತಂದೊಡ್ಡಿದ್ದಾನೆ. ಅದು ಅವಿವಾಹಿತರು ನಗರ ಸಭಾಧ್ಯಕ್ಷತನವನ್ನಾಗಲೀ, ಉತ್ತಮ ಹುದ್ದೆಗಳನ್ನಾಗಲೀ ಹೊಂದಕೂಡದು. ಇದು ಅವಿವಾಹಿತರಿಗೆ ಮಾತ್ರವಲ್ಲದೆ ವಿವಾಹಿತರಾಗಿ, ಮಕ್ಕಳಿಲ್ಲದೆ ಮಡದಿಯನ್ನು ಕಳಕೊಂಡವರಿಗೂ ಅನ್ವಯಿಸುತ್ತದೆ. ಹಾಗಿದ್ದವರು ಇದಾಗಲೇ ಹುದ್ದೆಯನ್ನು ಹೊಂದಿದ್ದರೆ ಕೂಡಲೇ ರಾಜಿನಾಮೆ ಕೊಟ್ಟು ಹೊರಡಬೇಕೆಂಬ ಆಜ್ಞೆಯೂ ಹೊರಟಿದೆ. ಆದರೆ ನಮಗೆ ಬೇಕಾದುದು ಇದಕ್ಕೆ ತೀರಾ ವಿರುದ್ಧವಾದ ಕಾನೂನೇ!

—೦0೦—

ರಕ್ಷಣೆಗೆ ಹೋದ ಶಿಕ್ಷೆ ದೊರೆಯಿತು.

ಕೆಲಿಫೋರ್ನಿಯದ ಓಕ್‌ಲೆಂಡ್ ಎಂಬಲ್ಲಿ ಮೆರಿಟ್ ಎಂಬ ಸರೋವರವಿದೆ. ಜಾರ್ಜ್ ಜೇಕೋಬ್ಸ್ ಎಂಬವನು ಒಂದು ದಿನ ಅದರ ಬಳಿ ಹೋದಾಗ ನೀರೊಳಗೆ ಒಬ್ಬ ಮನುಷ್ಯನಿದ್ದಂತೆ ತೋರಿತವನಿಗೆ. ಅವನು ಸಾಯುವನಲ್ಲ ಎಂದು ಕನಿಕರಪಟ್ಟು ಅವನನ್ನು ರಕ್ಷಿಸಲೆಂದು ನೀರಿಗೆ ಹಾರಿದನು. ಹಾರುವುದನ್ನು ನೋಡಿದ ಒಬ್ಬ ಪೋಲೀಸನು ಓಡಿ ಬಂದನು. ಬಂದು ನೋಡಿ ಮಾಡಿದ್ದಾದರೂ ಏನು? ಜಾರ್ಜನನ್ನು ಬಂಧಿಸಿ ಕೋರ್ಟಿಗೆಳೆತಂದನು. ಕುಡಿದು ಅಮಲು ಹೆಚ್ಚಿದೆ ಎಂಬ ಆರೋಪಣೆ ಬಂತು ಜಾರ್ಜನ ಮೇಲೆ; ಕಾರಣವೇನು? ನಿಜವಾಗಿಯೂ ನೀರಿನಲ್ಲಿ ಇನ್ನೊಬ್ಬನಿರಲಿಲ್ಲವಂತೆ. ತನ್ನ ನೆರಳನ್ನೇ ನೋಡಿ ಜಾರ್ಜನು ಭ್ರಮೆಗೊಂಡಿದ್ದನಂತೆ!

—೦0೦—

ವಿ ವಿ ಧ ವಿ ಚಾ ರ .

ಬಡವರೇ ಮೇಧಾಶಕ್ತಿಯುತರು.

'ಮೇಧಾಶಕ್ತಿಯುತರೂ, ವಿವೇಕಿಗಳೂ ಬೇಕಾಗಿದ್ದಲ್ಲಿ ಬಡವರಲ್ಲಿ ಆರಿಸಬೇಕು' ಎಂಬುದಾಗಿ ಹಾಲಿಫಾಕ್ಸ್ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಶ್ರೀ ಎ. ಬಿ. ಮೆಕ್ಡೋನಾಲ್ಡರು ಹೇಳಿರುವರು. ಯಾಕೆಂದರೆ ಐನೂರು ಪೌಂಡುಗಳ ವರಮಾನಕ್ಕೆ ಕಡಿಮೆಯುಳ್ಳವರು ಚಟುವಟಿಕೆಯಿಂದ ಕೂಡಿ ಕೆಲಸಮಾಡುವವರೂ ವಿವೇಚನೆಯಿಂದ ಕೂಡಿದವರೂ ಆಗಿ ಜವಾಬ್ದಾರಿಯನ್ನು ಅರಿತು ಕೆಲಸಮಾಡುವವರಾಗಿರುತ್ತಾರೆ. ಇದರ 500 ಪೌಂಡುಗಳ ಮೇಲ್ಪಟ್ಟು ವರಮಾನವುಳ್ಳವರು ಸೋಮಾರಿಗಳಾಗಿ ಚಟುವಟಿಕೆಯಿಂದ ಕೆಲಸ ಮಾಡದೆ ವಿಷಯಗಳನ್ನು ವಿಮರ್ಶಿಸದೆಯೇ 'ಸರಿ' ಎಂದು ಒಪ್ಪಿಕೊಳ್ಳುವ ಸ್ವಭಾವದಿಂದ ಕೂಡಿರುವವರಾಗಿರುತ್ತಾರೆಂದು ಅಭಿಪ್ರಾಯಪಟ್ಟಿರುತ್ತಾರೆ.

—೦0೦—

ನಿರುದ್ಯೋಗದ ಕಥೆ.

ಎಷ್ಟೋ ವಿದ್ಯಾವಂತರು ನಿರುದ್ಯೋಗದಲ್ಲಿ ಬಳಲುವವರಾಗಿರುವರು. ನಿರುದ್ಯೋಗವನ್ನು ನೀಗುವುದಕ್ಕಾಗಿ ತಮ್ಮ ಹೊಟ್ಟೆಬಟ್ಟೆಯನ್ನು ಕಟ್ಟಿ ಇದ್ದ ಹಣ ಕಾಸುಗಳನ್ನು ಅರ್ಜಿ ಹಾಕುವುದರಲ್ಲಿಯೇ ಖರ್ಚು ಮಾಡಿರುವವರೂ ಇದ್ದಾರೆ. ಉದ್ಯೋಗ ಬೇಟೆಯಲ್ಲಿ ತನ್ನ ಶಕ್ತಿಮೀರಿ ಖರ್ಚನ್ನು ಮಾಡಿದವರೊಬ್ಬರ ಕಥೆಯು ನಂಬಲರ್ಹವಾದ ಕಡೆಯಿಂದ ಕೇಳಬಂದಿದೆ. ಒಬ್ಬ ಜಿಲ್ಲಾ ಬೋರ್ಡು ಓವರ್‌ಸಿಯರು 3 ತಿಂಗಳ ರಜದಲ್ಲಿ ಹೋದರು. ಆರು ವಾರಗಳ ನಂತರ ಬೋರ್ಡಿನವರು ಆ ಜಾಗವನ್ನು ಭರ್ತಿಮಾಡಬೇಕೆಂದು ಯೋಚಿಸಿ ತಂತಿ ಮೂಲಕ ಒಬ್ಬ ನಿರುದ್ಯೋಗಿ ಓವರ್‌ಸೀರನ್ನು ನೇಮಿಸಲು ಅವರು ಬರುವದಾಗಿ ತಂತಿಯ ಮೂಲಕವೇ ಒಪ್ಪಿದರು. ಕೆಲಸದ ಮೇಲೆ ಬರುವಂತೆ ಪತ್ರ ಬಂದ ಕೂಡಲೇ ಆ ನಿರುದ್ಯೋಗಿಯು 510 ಮೈಲಿ ಪ್ರಯಾಣ ಮಾಡಿ ಬಂದು ಕೆಲಸಕ್ಕೆ ಸೇರಿಕೊಂಡರು. ಅಷ್ಟರಲ್ಲಿ ರಜದ ಮೇಲೆ ಹೋಗಿದ್ದವರು ತಮ್ಮ ರಜವನ್ನು ವಜಾ ಮಾಡಿ ಕೆಲಸದ ಮೇಲೆ ಬರುವುದಾಗಿ ತಿಳಿಸಿದರು. ಆದುದರಿಂದ ಹೊಸಬರಿಗೆ ಮಾರನೆಯ ದಿವಸದಿಂದಲೇ ಕೆಲಸವಿಲ್ಲದಂತಾಗಿ ಮನೆಗೆ ಹಿಂತಿರುಗಬೇಕಾಯಿತು. ಇಷ್ಟರಲ್ಲಿ ಎಲ್ಲ ಹಣವೂ ಖರ್ಚಾಗಿ ಹೋಗಿತ್ತು. ರೂ. 40 ಸಾಲ ಸಹ ಮಾಡಿದ್ದರು. ಆ ಕೆಲಸಕ್ಕೆ ರೂ. 50 ಸಂಬಳ ನಿಜ. ಆದರೆ ಇಂಥಾ ಸಂದರ್ಭದಲ್ಲಿ ಆ ಬಡ ನಿರುದ್ಯೋಗಿಯ ಅವಸ್ಥೆ ಏನಾಗಬೇಕು? ನಿರುದ್ಯೋಗಿಗಳೇ! ಉದ್ಯೋಗದ ಬೇಟೆಯಲ್ಲಿ ದುಡ್ಡಿನ ಸೂರೆಮಾಡದೆ ಕಾಸಿಗೆ ಗಂಟು ಹಾಕಿ!

—೦0೦—

ಅಂಚೆಯ ಮೂಲಕ ದೇವರಿಗೆ ಪತ್ರ.

ಮೆಕ್ಸಿಕೋದ ನಾಗರಿಕರೊಬ್ಬರು ಅಂಚೆಯ ಮೂಲಕ ದೇವರಿಗೆ ಬರೆದ ಕಾಗದವಿದು! ಸರ್ವೇಶ್ವರನಾದ ಎಲೈ ದೇವನೆ! ನಾನು ನಮ್ಮ ಊರಿನ ಎಲ್ಲಾ ಜನರ ಪರ ಪುಟ್ಟದೊಂದು ವಿನಂತಿಯನ್ನು ನಿನ್ನಲ್ಲಿ ಮಾಡಿಕೊಂಡು, ನನ್ನ ಪ್ರಾರ್ಥನೆಯನ್ನು ನಡೆಸಿಕೊಡುವೆ ಎಂದೂ, ಮತ್ತು ಅದು ನಿನಗೆ ಒಪ್ಪಿತವಾಗುವುದೆಂದೂ ನಂಬಿದ್ದೇನೆ. ನನ್ನ ಪ್ರಾರ್ಥನೆ ಏನೆಂದರೆ:—

ನಿನ್ನ ಮೊದಲನೆಯ ಅಧಿಕಾರಿಯಾದ ಸೂರ್ಯ ದೇವನು ಮೆಕ್ಸಿಕೋದ ನಾಗರೀಕರಿಗೆ ಬಹಳ ಕಷ್ಟ ಕೊಡುತ್ತಿದ್ದಾನೆ.

ನಿನ್ನ ಎರಡನೆಯ ಅಧಿಕಾರಿಯಾದ ಇಂದ್ರ ದೇವನು ತಮ್ಮ ಮೇಲೆ ಕುಪಿತನಾಗಿದ್ದಾನೆ. ಅನೇಕ ವೇಳೆ ಒಂದು ತೊಟ್ಟು ನೀರನ್ನು ಕೊಡದೆ ಅದೃಶ್ಯನಾಗುತ್ತಾನೆಂದು ತೋರುತ್ತದೆ.

ನಿನ್ನ ಮೂರನೆಯ ಅಧಿಕಾರಿಯಾದ ಪವನನು ನಮ್ಮ ಮೇಲೆ ದಯವನ್ನೇ ತೋರಿಸುವುದಿಲ್ಲ. ಮತ್ತು ಅನೇಕ ವೇಳೆ ಸೂರ್ಯ ದೇವನನ್ನೂ, ಇಂದ್ರ ದೇವನನ್ನೂ ಹಿಂಬಾಲಿಸದೆ ಹೋಗುವನು.

ಕೆಲವು ಸಲವಂತೂ ಆತನು ಬಿರುಗಾಳಿಯ ರೂಪವನ್ನು ತಾಳಿಬಿಡುತ್ತಾನೆ. ಮತ್ತೆ ಕೆಲವು ಸಲ ಸೌಮ್ಯನಾಗಿರುತ್ತಾನೆ.

ಎಲೈ ಸರ್ವಾಂತರ್ಯಾಮಿಯೇ! ಈ ರೀತಿ ತೊಂದರೆಪಡಿಸಲು ನಾವು ಮಾಡಿದ ಅಂಥಾ ಮಹಾಪರಾಧವಾದರೂ ಏನು?

ಎಲೈ ಜಗದ್ರಕ್ಷಕನೇ! ನಮ್ಮ ಮೇಲೆ ದಯೆ ಇಡು. ನಮ್ಮ ಊರಿನಲ್ಲಿ ಮಳೆಯನ್ನು ಕರೆಸು. ಚಂದ್ರ ಮತ್ತು ಸೂರ್ಯ ದೇವರುಗಳನ್ನು ನಮ್ಮ ಮೇಲೆ ದಯೆ ಇಡುವಂತೆ ಮತ್ತು ಕರುಣ ತೋರುವಂತೆ ಆಜ್ಞಾಪಿಸು.

ಅವರಿಬ್ಬರೂ ಪಕ್ಕದಲ್ಲಿರುವ ಸ್ಥಳಗಳಿಗೆ ಮಳೆಯನ್ನು ಕೊಟ್ಟು, ನಮಗೆ ಮಾತ್ರ ಏನನ್ನೂ ಕೊಡದೆ ಇದ್ದಾರೆ.

ಹೇ ಜಗದ್ಪಾಲಕನೆ! ನೀನು ನಿನ್ನ ಅಧಿಕಾರಿಗಳನ್ನು ಹತೋಟಿಯಲ್ಲಿಡುವಷ್ಟು ಸಮರ್ಥನಾಗಿ ಹೋಗಿದ್ದರೆ ಬೇರೊಬ್ಬರಿಗೆ ನಿನ್ನ ಸ್ಥಳವನ್ನು ಕೊಡು. ಅಥವಾ ನಿನಗಿಂತಲೂ ಹೆಚ್ಚು ದಯಾವಂತರೂ ಮತ್ತು ಧೀರರುಗಳೂ ಆದವರಿಗೆ ನಿನ್ನ ಸ್ಥಳವನ್ನು ಬಿಟ್ಟುಕೊಡು. ಮಾನವರಿಗೆ ಸಹಾನುಭೂತಿ ತೋರುವುದೇ ಆದರೆ ನಿನ್ನ ಹೃದಯದಲ್ಲಿರುವಂಥ ದಯಾಭಾವವನ್ನು ನಮ್ಮ ಮೇಲೆ ಬೀರು.

ಅಬ್ಬಾ! ಎಲ್ಲಿಂದ ಯಾರಿಗೆ ಪತ್ರ! ದೇವರಿಗೆ ಬರೆದ ಕಾಗದದ ಮೇಲಿನ ಲಕೋಟೆಯಿಂದ ಯಾಕೆ ಅಂಚೆ ಚೀಟಿ ತೆಗೆದಿಲ್ಲ!! ನಮ್ಮೂರಲ್ಲಿ ಮಾನವರಿಗೆ ಬರೆದ ಕಾಗದಗಳ ಅಂಚೆ ಚೀಟಿಯೇ ದೇವರ ಕೃಪೆಯಿಂದ ಮಾಯ!

—೦0೦—

ತತ್ವಜ್ಞಾನಿಗಳ ಸಮ್ಮೇಳನ.

ಮುಂದಿನ ಡಿಸೆಂಬರ್ ತಿಂಗಳಲ್ಲಿ ಲಹಾಬಾದಿನಲ್ಲಿ ನಡೆಯಲಿರುವ ಅಖಿಲ ಭಾರತ ತತ್ವಜ್ಞಾನಿಗಳ ಮಹಾಧಿವೇಶನದ ಅಧ್ಯಕ್ಷಸ್ಥಾನಕ್ಕೆ ಮದರಾಸಿನ ಮಹಾ ಪ್ರಧಾನರಾದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರ ಹೆಸರನ್ನೂ ಸೂಚಿಸಲಾಗಿದೆ.

—೦0೦—

ಸೊಳ್ಳೆ ದಿನಾಚರಣೆ.

ಹೆಸರನ್ನು ಕೇಳಿದ ಕೂಡಲೇ ವಾಚಕರಿಗೆ ನಗು ಬರಬಹುದು. ವಿಚಾರವಿಮಯ ಮಾಡಿಕೊಂಡರೆ ಎಂಥಾ ಮುಖ್ಯ ವಿಷಯವಿದು ಎಂಬುದು ಗೊತ್ತಾಗುದು. ಈ ವಾರ ಸಿಲೋನಿನ ಪ್ರತಿಯೊಂದು ಹಳ್ಳಿಯಲ್ಲೂ ಈ ಸೊಳ್ಳೆ ದಿನಾಚರಣೆಯನ್ನು ಆಚರಿಸಲಾಯಿತು. ಹೀಗೆ ಪದ್ಧತಿಯು ಕಳೆದ 40 ವರ್ಷಗಳಿಂದಲ ಆಚರಿಸಲ್ಪಡಲಾಗುತ್ತಿದೆ. ಹೆಚ್ಚಿಗೆನೇನೂ ಇಲ್ಲ; ಮಲೇರಿಯಾವನ್ನು ನಿರ್ಮೂಲ ಮಾಡುವುದೇ ಇದರ ಉದ್ದೇಶ. ಈ ಸೊಳ್ಳೆ ದಿನಾಚರಣೆ ದಿನ ಸಕಲರು ಹೇಗೆ ತಮ್ಮ ಮನೆಗಳನ್ನು ಚೊಕ್ಕಟವಾಗಿಟ್ಟುಕೊಳ್ಳಬೇಕು? ನೀರು ಇಲ್ಲದಂತೆ ಮಾಡಬೇಕು? ಒಳ್ಳೆಯ ಆಹಾರವನ್ನು ಸ್ವೀಕರಿಸುವ ಕ್ರಮ ಹೇಗೆ? ಮುಂತಾದವುಗಳನ್ನು ತಿಳಿದುಕೊಳ್ಳಲು ಅನೇಕರು ಉಪನ್ಯಾಸಗಳನ್ನು ತಮಾಷೆ ಚಿತ್ರಗಳ ಮೂಲಕ ಬೋಧಿಸುವುದೇ ಆಗಿದೆ. ನಮ್ಮಲ್ಲಿ ಇದನ್ನು ಆಚರಿಸುವುದು ಹಿತವಲ್ಲವೇ?

—೦0೦—

ಫ್ರೆಂಚರ ನೂತನ ಶೋಧನೆ.

ಫ್ರಾನ್ಸಿನ ಸಮರ ಸಂಸ್ಥೆಯವರು ಒಂದು ಹೊಸ ಆಯುಧವನ್ನು ಕಂಡುಹಿಡಿದಿರುವರಂತೆ. ಇದರ ಶಕ್ತಿಯು ಶತ್ರುಪಕ್ಷದವರನ್ನು ನಿಶ್ಶಕ್ತರನ್ನಾಗಿ ಮಾಡುವುದೆಂದು 'ಪೀಪಲ್ಸ್' ಪತ್ರಿಕೆಯು ತಿಳಿಸುತ್ತದೆ.

ಇದು ಬಹಳ ಮಹತ್ವ ಶೋಧನೆಯಾಗಿರುವದರಿಂದ ಇದು ತಯಾರಾಗುವ ಕಾರ್ಖಾನೆಯ ಸುತ್ತಲೂ ಮುಳ್ಳಿನ ಬೇಲಿಯನ್ನು ಹಾಕಿ ಕಾವಲುಗಾರರನ್ನು ಇಟ್ಟಿದ್ದಾರೆ.

ಇಂಥಾ ಶಕ್ತಿಯನ್ನು ಪಡೆದಿರುವ ವಸ್ತುವು ವಾಯುರೂಪದ್ದೇ ಅಥವಾ ದ್ರವರೂಪದ್ದೇ ಎಂಬುದು ಇದಕ್ಕೆ ಸಂಬಂಧಪಟ್ಟ ಕೆಲವು ಅಧಿಕಾರಿಗಳ ವಿನಹ ಮಂತ್ರಿಗಳಿಗೂ ಗೊತ್ತಿಲ್ಲ. ಇದನ್ನು ಬಾಂಬುಗಳನ್ನು ಸುರಿಸುವ ವಿಮಾನದ ಸಹಾಯದಿಂದ ಉಪಯೋಗಿಸಲಾಗುವದು.

ಅನುಕೂಲವಾದ ಗಾಳಿಯು ಚಲನವೂ, ಹವವೂ ಇದ್ದಲ್ಲಿ ಈ ವಾಯುವು ರಕ್ಷೆಯೂ ಮುಂದುವರಿಯುತ್ತಿರುವ ಶತ್ರುಪಕ್ಷದ ಸೈನ್ಯವನ್ನು ಅಚಲರನ್ನಾಗಿ ಮಾಡುವುದು.

—೦0೦—

ಕೊಡಗಿನ ಚರಿತ್ರೆಯ ಕಥೆಗಳು.

ಕುಲ್ಲಟ್ಟಿ ಪೊನ್ನಣ್ಣ.

(ಲೇಖಕ:-ಡಿ. ಎಸ್. ಕೃಷ್ಣಯ್ಯ, ಎಂ. ಎ. ಬಿ. ಇಡಿ.)

ಲೇಖಾಂಕ ೧೩

(ಎಲ್ಲಾ ಹಕ್ಕುಗಳನ್ನು ಕಾಯ್ದಿಡಲ್ಪಟ್ಟಿದೆ.)

ಈಗ ಸುಮಾರು ಮುನ್ನೂರು ವರ್ಷಗಳ ಹಿಂದಿನ ಕಾಲ. ಆಗ್ಯೆ ಕೊಡಗಿನಲ್ಲಿ ಪ್ರಬಲರಾದ ಅರಸರು ಯಾರೂ ಇರಲಿಲ್ಲ. ಅಲ್ಲಲ್ಲಿ ನಾಯಕರು ಆಳುತ್ತಿದ್ದರು. ಈ ನಾಯಕರ ಸ್ವಾಧೀನದಲ್ಲಿ ಎರಡು ಮೂರು ಗ್ರಾಮಗಳು ಅಥವಾ ಒಂದೊಂದು ನಾಡು ಇರುತ್ತಿದ್ದವು. ಕೊಡಗಿನಲ್ಲಿ ಇಂಥಾ ನಾಯಕರು ಹಲವರಿದ್ದರು. ಇವರು ತಮ್ಮೊಳಗೆ ಯಾವಾಗಲೂ ಜಗಳವಾಡುತ್ತಲೂ, ಕಾದಾಡುತ್ತಲೂ ಇರುತ್ತಿದ್ದರು. ಇವರಲ್ಲಿ ನೂರಂಬಡ ನಾಯಕನು ಒಬ್ಬನಾಗಿದ್ದನು. ಈತನು ಕಾಟೂರು, ಮಂಚೇರಿ, ಕರ್ಕೇರಿ ಎಂಬ ಮೂರು ಕೇರಿಗಳ ನಾಯಕನಾಗಿದ್ದನು. ಈತನು ತನ್ನ ನೆರೆನಾಡಿನ ನಾಯಕರೊಡನೆ ಆಗಾಗ ಯುದ್ಧ ಮಾಡುತ್ತಿದ್ದನು. ಆಗ ಒಂದು ಯುದ್ಧದಲ್ಲಿ ಇವನು ಸತ್ತುಹೋದನು. ಇವನ ಮರಣಾನಂತರ ಇವನ ಚಿಕ್ಕ ಮಗನನ್ನು ನೂರಂಬಡ ನಾಡಿನವರು ಸಾಕಿದರು. ಈ ಹುಡುಗನು ನೋಡುವುದಕ್ಕೆ ಗಿಡ್ಡಾಗಿದ್ದುದರಿಂದ ಇವನ ತಂದೆ ತಾಯಿಗಳು ಇವನನ್ನು ಕುಳ್ಳಪ್ಪನೆಂದು ಕರೆಯುತ್ತಿದ್ದರು. ಆ ನಾಡಿನವರು ಇವನನ್ನು ಕುಳ್ಳ ಪಟೇಲನೆಂದು ಕರೆಯುತ್ತಿದ್ದರು. ಈ ಹೆಸರು ಕ್ರಮೇಣ ವಾಡಿಕೆಯಾಗಿ ಇವನ ಮನೆಯವರಿಗೂ ಕುಳ್ಳ ಪಟೇಲನ ಮನೆಯವರೆಂದು ಹೆಸರಾಯಿತು.

ಈ ಹೆಸರು ಬರಬರುತ್ತಾ ರೂಪಾಂತರವಾಗಿ ಕುಲ್ಲಟ್ಟಿಯೆಂತಾಯಿತೆಂದು ಈಗಿರುವ ಆ ಮನೆಯ ವೃದ್ಧರು ಹೇಳುವರು. ಕುಳ್ಳ ಪಟೇಲನು ತಾನು ಪ್ರಾಯಕ್ಕೆ ಬಂದಮೇಲೆ ತನ್ನ ನಾಡಿನವರಿಗೆ ನಾಯಕನಾಗಿ ಆಳುತ್ತಿದ್ದನು. ಇವನನಂತರ ಇವನ ಮಗ ಐಯ್ಯಪ್ಪನು ಅಧಿಕಾರಕ್ಕೆ ಬಂದನು. ಆದರೆ ಆ ಸಮಯದಲ್ಲಿ ಹಾಲೇರಿ ಅರಸನು ಕೊಡಗಿನ ನಾಯಕರನ್ನು ಒಬ್ಬೊಬ್ಬರನ್ನಾಗಿ ಸೋಲಿಸಿ ತನ್ನ ರಾಜ್ಯವನ್ನು ಕಟ್ಟಿದ್ದನು. ಆದುದರಿಂದ ಐಯ್ಯಪ್ಪನು ಹಾಲೇರಿ ಅರಸನ ಕಾರ್ಯಕಾರನಾದನು. ಐಯ್ಯಪ್ಪನೂ, ಆತನ ಪುತ್ರರೂ ರಾಜನ ಅತೀ ಆಪ್ತರಾದ ಕಾರ್ಯಕಾರರಾಗಿದ್ದು ಆ ರಾಜಪರಂಪರೆಯ ಎಲ್ಲಾ ಯುದ್ಧಗಳಲ್ಲಿ ತಾವು ತಮ್ಮ ನಾಡಿನ ಜನರನ್ನು ಕರೆದುಕೊಂಡು ಹೋಗಿ ರಾಜನಿಗೆ ಸಹಾಯ ಮಾಡುತ್ತಿದ್ದರು.

ಹೀಗೆ ನಡೆಯುತ್ತಿರಲು ಕ್ರಿ. ಶ. 1759 ರಲ್ಲಿ ಈ ಕುಟುಂಬದಲ್ಲಿ ಕಾಳಚ್ಚನೆಂಬವನಿಗೆ ಮಾಣಿಚ್ಚನೆಂಬ ಪುತ್ರನೂ, ಕ್ರಿ. ಶ. 1762 ರಲ್ಲಿ ಪೊನ್ನಣ್ಣನೆಂಬ ಬಾಲಕನೂ ಜನಿಸಿದರು. ಪೊನ್ನಣ್ಣನು ಚಿಕ್ಕಂದಿನಿಂದಲೇ ಬಹಳ ಧೈರ್ಯಶಾಲಿಯೂ, ಶೂರನೂ ಆಗಿದ್ದನು.

ಈ ಮಧ್ಯೆ ಕೊಡಗಿನ ರಾಜ್ಯಭಾರದಲ್ಲಿ ಬಹಳ ಬದಲಾವಣೆಗಳು ಉಂಟಾಗಿದ್ದವು. ಮೈಸೂರಿನಲ್ಲಿ ಹೈದರಾಲಿಯು ತಲೆಯೆತ್ತಿ ಕೊಡಗನ್ನು ವಶಪಡಿಸಿಕೊಳ್ಳುವ ಸಂದರ್ಭವನ್ನು ಹುಡುಕುತ್ತಿದ್ದನು. ಇಷ್ಟರಲ್ಲಿ ಕೊಡಗಿನ ರಾಜ ಕುಟುಂಬದಲ್ಲಿ ರಾಜ್ಯಕ್ಕೋಸ್ಕರ ದಾಯಾದಿಗಳೊಳಗೆ ಕಲಹ ಉಂಟಾಗಿ ಒಬ್ಬ ಹಕ್ಕುದಾರನಾದ ಲಿಂಗರಾಜನು ಹೈದರನ ಸಹಾಯವನ್ನು ಕೋರಿದನು. ಹೈದರ್ ಆಲಿಯು ಲಿಂಗರಾಜನ ಸಹಾಯಕ್ಕೆ ಬಂದು ಆತನ ದಾಯಾದಿಯಾದ ದೇವಪ್ಪ ರಾಜನನ್ನು ಕೊಡಗಿನಿಂದ ಓಡಿಸಿದನು. ಲಿಂಗರಾಜನು ಕೊಡಗಿನ ರಾಜನಾದನು. ಹೈದರನು ಲಿಂಗರಾಜನಿಗೆ ಸಹಾಯ ಮಾಡಿದಕ್ಕೋಸ್ಕರ ಆತನಿಗೆ ಲಿಂಗರಾಜನು 24,000 ರೂಪಾಯಿಗಳನ್ನು ಯುದ್ಧದ ಖರ್ಚಿಗಾಗಿ ಕೊಡಬೇಕೆಂದು ಒಪ್ಪಂದ ಮಾಡಿಕೊಂಡನು. ಇದಾದ ಒಂದೆರಡು ವರ್ಷಗಳಲ್ಲಿ ಲಿಂಗರಾಜನು ಸತ್ತುಹೋದನು. ಇಂಥಾ ಸಮಯವನ್ನೇ ಕಾಯುತ್ತಿದ್ದ ಹೈದರನು ಇವನ ಮಕ್ಕಳಾದ ವೀರರಾಜ, ಅಪ್ಪಾಜಿರಾಜ ಮೊದಲಾದವರು ಇನ್ನೂ ಚಿಕ್ಕವರಾದ್ದರಿಂದ ಅವರನ್ನು ಕುಟುಂಬ ಸಮೇತ ಹಾಸನದ ಗೊರೂರು ಎಂಬಲ್ಲಿ ಸೆರೆಯಿಟ್ಟು ಕೊಡಗನ್ನು ತಾನು ಆಕ್ರಮಿಸಿಕೊಂಡನು. ಕೊಡಗಿನಲ್ಲಿ ತನ್ನ ಪ್ರತಿನಿಧಿಯಾಗಿ ಸುಬ್ಬರಸಯ್ಯನೆಂಬ ಬ್ರಾಹ್ಮಣನನ್ನು ನೇಮಿಸಿದನು. ಹೈದರನ ಆಳಿಕೆಗೆ ಕೊಡಗಿನ ಜನರು ಒಪ್ಪದೆ ದಂಗೆ ಎದ್ದು ತಮ್ಮ ತಮ್ಮ ನಾಡುಗಳಲ್ಲಿ ಸ್ವತಂತ್ರರಾದರು. ಇವರಲ್ಲಿ ಕಾಳಚ್ಚನು ನೂರಂಬಡದಲ್ಲಿ ತಾನು ಸ್ವತಂತ್ರ ನಾಯಕನಾದನು. ಇಷ್ಟರಲ್ಲಿ ಹೈದರನು ಸತ್ತುಹೋದನು. ಅವನ ಮಗ ಟಿಪ್ಪುಸುಲ್ತಾನನು ಕೊಡಗರನ್ನು ದಂಡಿಸುವದಕ್ಕೋಸ್ಕರ ಮೇಲೆ ಮೇಲೆ ಸೈನ್ಯ ತೆಗೆದುಕೊಂಡು ಬಂದನು. ಆದರೂ ಕೊಡಗರು ಹೆದರದೆ ಇರುವುದನ್ನು ನೋಡಿ ಕೊಡಗರೊಡನೆ ರಾಜಿಮಾಡಿಕೊಳ್ಳಬೇಕೆಂದು ಭಾಗಮಂಡಲದ ಹತ್ತಿರ ದೇವಟು ಪರಂಬಿಗೆ ಕೊಡಗರನ್ನೆಲ್ಲಾ ಬರಹೇಳಿದನು. ಆದರೆ ಕುಲ್ಲಟ್ಟಿ ಪೊನ್ನಣ್ಣ, ಅಪ್ಪನೆರವಂಡ ಅಚ್ಚಯ್ಯ ಮತ್ತು ಪಟ್ಟಚೆರವನ ಬೋಳುಕ ಮೊದಲಾದ ಕಡಿಯತ್ತುನಾಡು ಪಾಡಿನಾಲ್ಕುನಾಡು ಕಾರ್ಯಗಾರರು ಟಿಪ್ಪುವಿನ ಮಾತಿಗೆ ಮರುಳಾಗಲಿಲ್ಲ; ಮತ್ತು ದೇವಟು ಪರಂಬಿಗೆ ಹೋಗಲಿಲ್ಲ. ಈ ವರ್ತಮಾನವನ್ನು ಟಿಪ್ಪುವು ತಿಳಿದು ತನಗೆ ವಿರೋಧವಾಗಿರುವ ಈ ಕಾರ್ಯಕಾರರ ಮನೆಗಳನ್ನು ಸುಟ್ಟು ಅವರನ್ನೂ, ಅವರ ಹೇಳಿಕೆಯಲ್ಲಿರುವಂಥ ಜನರನ್ನೂ ಕೊಂದು ಹಾಕಿ ಅಲ್ಲಿರತಕ್ಕ ದೇವಾಲಯಗಳನ್ನು ನಾಶಮಾಡಬೇಕೆಂದು ತನ್ನ ಸೈನಿಕರನ್ನು ಕಳುಹಿಸಿದನು. ಇವರು ನೂರಂಬಡಕ್ಕೆ ಬಂದು ಪೊನ್ನಣ್ಣನ ಮನೆಯನ್ನೂ, ಅಲ್ಲಿ ನೆರೆಕೆರೆಯಲ್ಲಿದ್ದ ಇತರರ ಮನೆಗಳನ್ನೂ, ಅಲ್ಲಿನ ದೇವಸ್ಥಾನಗಳನ್ನೂ ಸುಟ್ಟು ಸಿಕ್ಕಿದ ಇತರರನ್ನೂ ಹಿಡಿದು ಕೊಂದುಹಾಕಿ ಹಿಂದಕ್ಕೆ ಹೋದರು. ಆದರೆ ಕುಲ್ಲಟ್ಟಿ ಪೊನ್ನಣ್ಣನೂ, ಆತನ ಅಣ್ಣ ಮಾಣಿಚ್ಚನೂ ಕಾಡುಗಳಿಗೆ ಓಡಿಹೋಗಿ ತಲೆತಪ್ಪಿಸಿಕೊಂಡರು. ಟಿಪ್ಪುವು ಹಿಂದಕ್ಕೆ ಹೋದ ಮೇಲೆ ಇವರು ಕೊಡಗಿನಲ್ಲಿದ್ದ ಮುಸಲ್ಮಾನರೊಡನೆ ಯುದ್ಧ ಮಾಡುತ್ತಾ ಇದ್ದರು.

ಇದಾಗಿ ಒಂದೆರಡು ವರ್ಷಗಳಲ್ಲಿ ಪಿರಿಯಾಪಟ್ಟಣದ ಸೆರೆಮನೆಯಲ್ಲಿದ್ದ ವೀರರಾಜನು ತನ್ನ ಪತ್ನಿ ಮತ್ತು ತಮ್ಮಂದಿಯರೊಡನೆ ಸೆರೆಯಿಂದ ತಪ್ಪಿಸಿಕೊಂಡು ಕುರ್ಚಿ ಗ್ರಾಮಕ್ಕೆ ಬಂದು ಅಲ್ಲಿ ಮೊದಲು ನಿಂತನು. ಅಲ್ಲಿ ಅವನಿಗೆ ಸಹಾಯಕರು ಯಾರೂ ಇರಲಿಲ್ಲ. ಈ ಸಮಯದಲ್ಲಿ ಕೊಡಗಿನ ಅಮಲ್ದಾರನಾಗಿದ್ದ ಸುಬ್ಬರಸಯ್ಯನ ತಮ್ಮ ನಾಗಪ್ಪಯ್ಯನು ಕೋಟೆರಾಜನೊಡನೆ ಸೇರಿ ವೀರರಾಜನನ್ನು ಉಪಾಯದಿಂದ ಕೋಟೆರಾಜನ ರಾಜ್ಯಕ್ಕೆ ಬರಮಾಡಿಸಲು ಕೋಟೆ ರಾಜನು ಅಲ್ಲಿ ಅವನನ್ನು ಪಹರೆಯಲ್ಲಿಟ್ಟನು. ಅಲ್ಲಿಂದ ವೀರರಾಜನಿಗೆ ಹಿಂದಕ್ಕೆ ಕೊಡಗಿಗೆ ಬರಬೇಕಾದರೆ ಕೋಟೆರಾಜನಿಗೆ ಕೊಡಗಿನ ಅನೇಕ ನಾಡುಗಳನ್ನು ಕೊಡುವುದಾಗಿ ಕರಾರು ಬರಕೊಟ್ಟು ಬರಬೇಕಾಯಿತು. ವೀರರಾಜನು ಕೊಡಗಿಗೆ ಹಿಂದಿರುಗಿದ ಸ್ವಲ್ಪ ದಿವಸಗಳಲ್ಲೇ ಕೋಟೆರಾಜನು ತಾನು ಮೋಸದಿಂದ ಸಂಪಾದಿಸಿದ ನಾಡುಗಳನ್ನು ಸ್ವಾಧೀನ ತೆಗೆದುಕೊಳ್ಳುವುದಕ್ಕೆ ಸೈನ್ಯ ಸಮೇತ ಕೊಡಗಿಗೆ ಬಂದನು. ಆಗ ವೀರರಾಜನು ಬರಪೊಳೆಯ ಹತ್ತಿರ ಒಂದು ಅರಮನೆಯಲ್ಲಿದ್ದನು. ಕೋಟೆರಾಜನು ಬರುವ ವರ್ತಮಾನವನ್ನು ತಿಳಿದು ವೀರರಾಜನು ತನ್ನ ಆಪ್ತರಾದ ಅಪ್ಪನೆರವಂಡ ಅಚ್ಚಯ್ಯ ಮತ್ತು ಪಟ್ಟಚೆರವಂಡ ಬೋಳುಕ ಇವರನ್ನು, ತನ್ನ ಸಹಾಯಕ್ಕೆ ಬರುವಂತೆ ಹೇಳಿಕಳುಹಿಸಿದನು. ಆದೇ ಮೇರೆ ಇವರಿಬ್ಬರೂ, ತಮ್ಮ ಸ್ನೇಹಿತರನ್ನೂ, ನಾಡಿನ ಜನರನ್ನೂ ಕರೆದುಕೊಂಡು ಬರಪೊಳೆಯ ಹತ್ತಿರ ಅರಮನೆಗೆ ಹೋದರು. ಅವರೊಡನೆ ಕುಲ್ಲಟ್ಟಿ ಪೊನ್ನಣ್ಣನೂ ಇದ್ದನು. ಇಷ್ಟರಲ್ಲಿ ಕೋಟೆರಾಜನು ಮರೆನಾಡಿಗೆ ಬರಲು ವೀರರಾಜನು ಕೋಟೆರಾಜನು ತನ್ನ ಹಿರಿಯರನ್ನು ಕೊಂದದ್ದಕ್ಕೆ ತಲೆಗೆ ಪ್ರತಿತಲೆಯನ್ನು ಕೊಡಬೇಕೆಂದೂ, ಇಲ್ಲವಾದರೆ ವೈನಾಡಿನ ಕಲ್ಪಾತಿ ವರೆಗಿನ ಸೀಮೆಯನ್ನು ಬಿಟ್ಟುಕೊಡಬೇಕೆಂದೂ ಹೇಳಿದನು. ಇದನ್ನು ಕೇಳಿ ಕೋಟೆರಾಜನು ಹೆದರಿ ಕಲ್ಪಾತಿಯ ವರೆಗಿನ ಸೀಮೆಯನ್ನು ವೀರರಾಜನಿಗೆ ಬರಕೊಟ್ಟು ಅವತ್ತು ರಾತ್ರಿಯೇ ಹೇಳದೆ ತನ್ನ ಸೈನಿಕರೊಡನೆ ಘಟ್ಟ ಇಳಿದು ತನ್ನ ಸೀಮೆಗೆ ಓಡಿ ಹೋದನು. ಈ ವರ್ತಮಾನವನ್ನು ಮಾರಣೆ ದಿವಸ ವೀರರಾಜನು ತಿಳಿದು ಅವರನ್ನು ಬೆನ್ನಟ್ಟಿ ಹೋಗಿ ಹಿಡಿಯುವುದಕ್ಕೆ ಅಚ್ಚಯ್ಯ, ಬೋಳುಕ, ಪೊನ್ನಣ್ಣ ಮೊದಲಾದವರನ್ನು ಕಳುಹಿಸಿದನು. ಇವರು ಹೋಗುವಷ್ಟರಲ್ಲಿ ಕೋಟೆರಾಜನು ತನ್ನ ಸೀಮೆಯ ಸರಹದ್ದನ್ನು ದಾಟಿಬಿಟ್ಟಿದ್ದನು. ಆದರೆ ನಾಗಪ್ಪಯ್ಯನು ಮಾತ್ರ ಇವರ ಕೈಗೆ ಸಿಕ್ಕಿಬಿದ್ದು ಅವನು ವೀರರಾಜನಲ್ಲಿಗೆ ತರಲ್ಪಟ್ಟನು. ಅವನನ್ನು ವೀರರಾಜನು ನಾಲ್ಕುನಾಡಿಗೆ ಕಳುಹಿಸಿ ಅವನ ಕಾಲಿಗೆ ಸರಪಣಿ ಹಾಕಿಸಿ ಸೆರೆಯಲ್ಲಿಟ್ಟನು. ಈ ಸಂದರ್ಭದಲ್ಲಿ ವೀರರಾಜನು ಕುಲ್ಲಟ್ಟಿ ಪೊನ್ನಣ್ಣನ ಶೌರ್ಯಕ್ಕೆ ಮೆಚ್ಚಿ ಅವನಿಗೆ ಕಾರ್ಯಕಾರ ಪದವಿಯನ್ನು ಕೊಟ್ಟನು. ವೀರರಾಜನಿಗೆ ಈ ಸಮಯದಲ್ಲಿ ಶತ್ರುಗಳ ಬಾಧೆಯು ಬಹಳವಾದುದರಿಂದ ಒಂದು ಸುರಕ್ಷಿತವಾದ ಸ್ಥಳದಲ್ಲಿ ಅರಮನೆಯನ್ನು ಕಟ್ಟಿಸಿ ತನ್ನ ಕುಟುಂಬದವರನ್ನು ಅಲ್ಲಿಡಬೇಕಾಗಿತ್ತು. ಆಗ ಕೇಟುವಳಿ ಅಚ್ಚುವಣ್ಣನು ತಮ್ಮ ಮನೆಯ ಹತ್ತಿರ ಗುಡ್ಡದ ಮೇಲೆ ಅರಮನೆಯನ್ನು ಕಟ್ಟಬಹುದು. ಅಲ್ಲಿಗೆ ಯಾವ ದಿಕ್ಕಿನಿಂದ ಬರಬೇಕಾದರೂ ಅನೇಕ ಹೊಳೆಗಳನ್ನೂ, ಕಾಡುಗಳನ್ನೂ ಗುಡ್ಡಗಳನ್ನೂ ಹತ್ತಿ ಬರಬೇಕು. ಎಂದು ಹೇಳಿದನು. ಅದಕ್ಕೆ ವೀರರಾಜನು ಒಪ್ಪಿ ತಾನು ಕುಟುಂಬ ಸಮೇತ ಪಾಡಿನಾಲ್ಕುನಾಡು ಯವಕಪಾಡಿಯಲ್ಲಿರುವ ಕೇಟುವಳಿ ಮನೆಗೆ ಬಂದನು. ಆಗ ಕುಲ್ಲಟ್ಟಿ ಪೊನ್ನಣ್ಣನು ರಾಜಕುಟುಂಬದವರ ಬೆಂಗಾವಲಿನ ಮುಖ್ಯಸ್ಥನಾಗಿದ್ದನು. ವೀರರಾಜನು ತನ್ನ ಹೆಂಡತಿ ಮಕ್ಕಳನ್ನು ಕೇಟುವಳಿ ಮನೆಯಲ್ಲಿ ಬಿಟ್ಟು ಅರಮನೆಯನ್ನು ಕಟ್ಟಿಸುವ ಏರ್ಪಾಡು ಮಾಡಿ ತಾನು ಕೊಡಗಿನಲ್ಲಿದ್ದ ಮುಸಲ್ಮಾನರನ್ನು ಓಡಿಸುವದಕ್ಕೆ ಕೊಡಗರ ಸೈನ್ಯವನ್ನು ತೆಗೆದುಕೊಂಡು ಸಿದ್ಧೇಶ್ವರ ಬೆಟ್ಟದ ಕಡೆಗೆ ಹೊರಟನು. ಆಗ ಪೊನ್ನಣ್ಣನು ತನ್ನ ಪತ್ನಿಯನ್ನು ವೀರರಾಜನ ಹೆಂಡತಿಯ ಸಖಿಯಾಗಿ ಕೇಟುವಳಿ ಮನೆಯಲ್ಲಿ ಬಿಟ್ಟು ತಾನು ವೀರರಾಜನ ಸಂಗಡ ಹೊರಟನು.

ಸಿದ್ಧೇಶ್ವರ ಬೆಟ್ಟದ ಆಶ್ರಯದಲ್ಲಿ ವೀರರಾಜನು ತನ್ನ ಬಿಡಾರವನ್ನು ಮಾಡಿದ್ದನು. ಈ ವರ್ತಮಾನವನ್ನು ಟಿಪ್ಪುಸುಲ್ತಾನನು ಕೇಳಿ ಗುಲಾಮಲ್ಲಿ ಎಂಬ ಸರ್ದಾರನ ಕೈಕೆಳಗೆ ದೊಡ್ಡ ಸೈನ್ಯವನ್ನು ಕಳುಹಿಸಿದನು. ಗುಲಾಮಲ್ಲಿಯು ಕೊಡಗನ್ನು ಒಳನುಗ್ಗಿ ಕಾಡುಗಳಲ್ಲಿ ಅಡಗಿಕೊಂಡಿದ್ದ ಕೊಡಗರನ್ನೂ, ಅವರ ಕುಟುಂಬ ಮಕ್ಕಳನ್ನೂ ಹಿಡಿಯುವುದಕ್ಕೆ ತನ್ನ ಸೈನ್ಯವನ್ನು ಚಿಕ್ಕ ಚಿಕ್ಕ ತುಕಡಿಗಳಾಗಿ ಮಾಡಿ ಬೇರೆ ಬೇರೆ ದಿಕ್ಕುಗಳಿಗೆ ಕಳುಹಿಸಿದನು. ಈತನ ಸಹಾಯಕ್ಕೆ ಚಿರಕಲ್ ರಾಜನು ಕೆಲವು ನಾಯಮಾರರನ್ನು ಕಳುಹಿಸಿದನು. ಈ ನಾಯಮ್ಮಾರರೂ ಗುಲಾಮಲ್ಲಿಯ ಸೈನಿಕರೂ ಸೇರಿ ಒಟ್ಟಾಗಿ ಪಾಡಿನಾಲ್ಕುನಾಡಿನ ದೇವಸ್ಥಾನಕ್ಕೆ ಹೋದರು. ಅಲ್ಲಿ ಕೊಡಗರು ಇವರೊಡನೆ ಯುದ್ಧ ಮಾಡಲು ನಾಯಮ್ಮಾರರು, ಇವರೊಡನೆ ಯುದ್ಧಮಾಡಲಾರದೆ ಓಡಿಹೋದರು. ಆದರೆ ಓಡಿಹೋಗುವಾಗ ಪಾಡಿನಾಲ್ಕುನಾಡು ದೇವಸ್ಥಾನಕ್ಕೆ ಬೆಂಕಿ ಹಾಕಿ ಸುಟ್ಟುಬಿಟ್ಟರು. ಇತ್ತಲಾಗಿ ಕೊಡಗರು ಗುಲಾಮಲ್ಲಿಯ ಸೈನಿಕರ ಮೇಲೂ ಬಿದ್ದು ಅವರನ್ನು ಸೋಲಿಸಿದರು.

ಪಾನ ನಿರೋಧ ಚಳವಳ.
ಪುರಾತನ ಸಮಸ್ಯೆ.
ಪಾಶ್ಚಿಮಾತ್ಯರ ಸಮ್ಮಿಲನವೇ ಕುಡುಕತನಕ್ಕೆ ಕಾರಣ.
(ಫ್ರೆಡರಿಕ್ ಗ್ರಬ್‌ರವರ ಲೇಖನದ ಆಧಾರದಿಂದ.)

ಭಾರತದಲ್ಲಿ ಈಗ ನಡೆಯುತ್ತಿರುವ ಆಶ್ಚರ್ಯಕರವಾದ ಪಾನನಿರೋಧ ಚಳವಳವು ಜಗತ್ತಿನ ಮದ್ಯಪಾನ ಸಮಸ್ಯೆಯ ವಿವೇಚಕರ ಮನವನ್ನು ತನ್ನ ಕಡೆಗೆ ಆಕರ್ಷಿಸಿದೆ. ಅಭಿವೃದ್ಧಿಗೊಳ್ಳುತ್ತಿರುವ ವಿಶಾಲ ಭಾರತದ ಜನತೆಯ ಮುಂದಿನ ವ್ಯವಸ್ಥಿತ ಸುಖಕೋಸ್ಕರ ಇದು ಅತ್ಯಗತ್ಯ. ಇಂಥಾ ಈ ಸಂದರ್ಭದಲ್ಲಿ ಮನುಷ್ಯ ವರ್ಗದ ಅನೇಕ ಭಾಗಗಳನ್ನು ಆವರಿಸಿಕೊಂಡಿರುವ ಕುಡುಕತನವೆಂಬ ಈ ದುರಭ್ಯಾಸದಿಂದ ಪಾರಾಗಬೇಕೆಂದು ಯತ್ನಿಸಿದ ಭಾರತದ ಈ ಚಳವಳದ ಪೂರ್ವ ಕಥೆಯನ್ನು ಜ್ಞಾಪಕಕ್ಕೆ ತಂದರೆ ಅಸಂಗವಾಗದಿರದು.

ಭಾರತೀಯರು ಪಾಶ್ಚಿಮಾತ್ಯರ ಸಮ್ಮಿಲನದಿಂದ ಈ ಕುಡುಕತನದ ದುಶ್ಚಟಗಳಿಗೆ ಇಳಿದಿರುವರೆಂದರೆ ಅತಿಶಯೋಕ್ತಿಯಾಗಲಾರದು. ಹಿಂದೂ ಪುರಾಣಗಳಲ್ಲಿ ಮದ್ಯಸೇವನೆಗೆ ಆತಂಕವಿರುವುದರಿಂದ ಅನಾದಿಯಿಂದಲೂ ನಿಶಾಸೇವನೆಗೆ ನಿರ್ಬಂಧ ಇತ್ತೆಂದು ಸಕಾರಣವಾಗಿ ಹೇಳಬಹುದು. ವೇದಗಳ ಕಾಲದ ಪುಸ್ತಕಗಳಿಂದ ನಿಶಾಸೇವನೆಯು ಪಂಚ ಮಹಾ ಪಾತಕಗಳಲ್ಲಿ ಎರಡನೆಯದೆಂದೂ, ನಿಶಾಸೇವಿಸುವ ಜನರ ಸಹವಾಸವು ಸಹ ಪಾತಕವೆಂದೂ ತಿಳಿದು ಬರುತ್ತದೆ. ಅನಂತರ ಬಂದ ಬೌದ್ಧ ಧರ್ಮದ ಕಾಲದಲ್ಲಿ ಯಾವ ವಿಧದ ನಿಶಾಸೇವನೆಗೂ ಪೂರ್ಣ ಆತಂಕವಿತ್ತು. ಕ್ರಮೇಣ ಈ ಕಾನೂನುಗಳು ಸಡಿಲವಾಗುತ್ತಾ ಹಿಂದೂ ಮತದ ಈ ನಿಯಮವು ಕಟ್ಟುಕಡವಾಗಿ ಉಪಯೋಗಿಸಲ್ಪಡದಾಯಿತು. ನಂತರ ಮುಸಲ್ಮಾನರ ಆಳ್ವಿಕೆಯಲ್ಲಿ ಕೊರಾನಿನ ವಿಧಿಯಂತೆ ನಿಶಾಸೇವನೆಗೆ ತುಂಬಾ ಅಡಚಣೆ ಇತ್ತು. ಆದರೆ ಮೊಗಲಾಯಿ, ಚಕ್ರವರ್ತಿಗಳ ಕಾಲದಲ್ಲಿ ಅರಸರೂ, ಉದ್ಯೋಗಿಗಳೂ ಆಗಾಗ್ಗೆ ಮದ್ಯಪಾನದಲ್ಲಿ ಸಂಸಕ್ತರಾಗುತ್ತಿದ್ದರೆಂಬುದು ಆ ಕಾಲದ ಬರವಣಿಗೆಗಾರರಿಂದ ವಿಶದವಾಗುತ್ತದೆ.

ಬ್ರಿಟಿಷರು ಮೊದಲು ಭಾರತಕ್ಕೆ ಪ್ರವೇಶಿಸಿದಾಗ ಇಲ್ಲಿ ನಿಶಾಸೇವನೆಗೆ ವಿರೋಧವಾಗಿ ಮತಪ್ರಚಾರವು ನಡೆದಿತ್ತು. ಈಸ್ಟ್ ಇಂಡಿಯಾ ಕಂಪೆನಿಯು ಪ್ರಭುತ್ವಕ್ಕೆ ಬಂದು 25 ವರ್ಷಗಳ ವರೆಗೂ ಈ ನಿಶಾ ಪದಾರ್ಥಗಳ ಮೇಲೆ ಸುಂಕ ಎತ್ತುವ ಕ್ರಮವಿರಲಿಲ್ಲ. ಆದರೆ ಕಂಪೆನಿಯ ಅಧಿಕಾರಿಗಳು ನಿಶಾಪದಾರ್ಥಗಳ ಮೇಲೆ ಕಂದಾಯ ಹಾಕುವದರಿಂದ ಧಾರಾಳ ಹಣ ಸಂಗ್ರಹಿಸಬಹುದೆಂದು ತಿಳಿದು 1790-91 ರಲ್ಲಿ ಮೊದಲನೇ ಅಬ್ಕಾರಿ ಕಾನೂನನ್ನು ತಯಾರಿಸಿದರು. ಇದು ನಂತರ 1858 ರಲ್ಲಿ ಭಾರತವು ಬ್ರಿಟಿಷ್ ಕಿರೀಟದ ಅಧೀನಕ್ಕೆ ಒಳಪಟ್ಟ ನಂತರ ನಿಶಾ ಪದಾರ್ಥದ ಸುಂಕದಿಂದ ಬರುತ್ತಿದ್ದ ಉತ್ಪತ್ತಿಯೂ ಹೆಚ್ಚಾದ ಕಾರಣ ಇದಕ್ಕೆ ಸರಕಾರದವರು ಪ್ರೋತ್ಸಾಹವಿತ್ತು ತಮ್ಮ ಒಂದು ಠರಾವನ್ನಾಗಿಯೇ ಇದನ್ನು ಅಂಗೀಕರಿಸಿದರು. ಇದರಿಂದ ಬಡ ರೈತಾಪಿಗಳ ಜೀವನವು ಭಯಂಕರ ಪರಿಸ್ಥಿತಿಗೀಡಾಯಿತು. ಅನೇಕ ಭಾರತ ಸುಧಾರಕರು ಈ ವಿಚಾರದಲ್ಲಿ ತಮ್ಮ ಅತೃಪ್ತಿಯನ್ನು ವ್ಯಕ್ತಮಾಡಿ ನಿಶಾಸೇವನೆಯನ್ನು ತಗ್ಗಿಸಬೇಕೆಂದು ವಾದಿಸಿದರು. ಕೆಲವರಂತೂ ಸರಕಾರವು ಪ್ರಜೆಗಳಿಗೆ ತನ್ನ ಸಂಕುಚಿತ ಲಾಭದ ದೃಷ್ಟಿಯಿಂದ ಅಹಿತವನ್ನು ಮಾಡುತ್ತದೆ ಎಂದು ಸಾರಿ ಹೇಳಿದರು. ಬಂಗಾಳದ ಕೇಶವ ಚಂದ್ರಸೇನರಂತಹ ಆಗಿನ ಮುಖಂಡರು ನಮ್ಮೊಳಗೆ ಹೊಕ್ಕಿರುವ ಈ ಮಹಾ ಮಾರಿಯನ್ನು ಕಿತ್ತೊಗೆಯಬೇಕೆಂದು ಜನತೆಗೆ ಸಾರಿ ಹೇಳಿದರು. ಇವರು ಇಂಗ್ಲೆಂಡಿಗೆ ಹೋಗಿದ್ದಾಗ ಈ ವಿಚಾರದಲ್ಲಿ ಸರಕಾರದವರು ನಡೆಸುತ್ತಿರುವ ಕೆಲಸವು ಪ್ರಜಾಹಿತದ ದೃಷ್ಟಿಯಿಂದ ಅಸಮಂಜಸ ಮತ್ತು ಧಾರ್ಮಿಕ ವೆಂದು ಘೋಷಿಸಿದರು. ಆ ಕಾಲದಲ್ಲಿ ಯಾವನೊಬ್ಬನು ಕಾಯಿದೆಶಾಸನದ ಪಾಠ್ಯಸಕ್ಕೆ ಬಿದ್ದರೂ ನೀನು ಅವನು ಕ್ರಿಶ್ಚಿಯನ್ ಮತವರ್ಗದವನೆಂದು ಊಹಿಸಲಾಗುತ್ತಿತ್ತು. ಇದರಿಂದಾಗಿ ಕೆಲವು ಪ್ರತಿಷ್ಠಿತ ಮತ ಬೋಧಕರು ಸಹ ಚಂದ್ರಸೇನರನ್ನು ಬೆಂಬಲಿಸಿದರು. ಅದ ಪ್ರಯುಕ್ತ 1893 ರಲ್ಲಿ ನಿಶಾ ವ್ಯಾಪಾರವನ್ನು ಪರಿಶೀಲಿಸಲು ಒಂದು ಕಮಿಷನನ್ನು ಬಂಗಾಳದಲ್ಲಿ ನೇಮಕ ಮಾಡಲಾಯಿತು. ಸರಕಾರದವರು ಜನತೆಯ ಶಾರೀರಿಕ, ಸಾಮಾಜಿಕ ಮತ್ತು ನೈತಿಕ ಕಾರ್ಯಗಳಲ್ಲಿ ನಿಶಾಸೇವನೆಯನ್ನು ಪ್ರೋತ್ಸಾಹಿಸಿದುದರಿಂದ ಈ ಬಾಬಿನ ಉತ್ಪತ್ತಿಯು ಶೇಕಡ 50 ರಷ್ಟು ಏರಲು ಕಾರಣವೆಂದು ಈ ಕಮಿಷನು ವರದಿ ಮಾಡಿತು. ಬಂಗಾಳದ ಈ ಸ್ಥಿತಿಯು ಭಾರತದ ಎಲ್ಲಾ ಭಾಗಕ್ಕೂ ಅನ್ವಯಿಸುವಂತಾದ್ದೇ ಆಗಿರುವದು. ಬ್ರಿಟಿಷರ ಕಾಮನ್ಸ್ ಸಭೆಯ ಸದಸ್ಯರಾದ ಮಿ ವಿಲಿಯಮ್ ಸ್ಪ್ರಾಸ್ಟನ್ ಕೈನ್ ಎಂಬವರೇ ಸರಕಾರದ ಈ ಧೋರಣೆಯನ್ನು ಪ್ರಥಮತಃ ವಿಚಾರಿಸಿದವರು. ಅವರು 1887-88 ರಲ್ಲಿ ಭಾರತಕ್ಕೆ ಬಂದಿದ್ದಾಗ ಬೊಂಬಾಯಿಯ ಮುಖಂಡರು ಈ ವಿಚಾರದಲ್ಲಿ ಅವರಿಗಿತ್ತ ವಿವರಣೆಯು ಅವರ ಚಿತ್ತವನ್ನು ಉದ್ವೇಗಗೊಳಿಸಿತು. ಬೊಂಬಾಯಿಯ ಈ ಪ್ರತಿನಿಧಿಗಳು ನಿಶಾಸೇವನೆಯ ವಿಚಾರ ವಿನಿಮಯ ಬಗ್ಗೆ ಇಂಗ್ಲೆಂಡಿನಲ್ಲಿ ಒಂದು ಸಂಸ್ಥೆಯನ್ನೇರ್ಪಡಿಸಿ ಪಾರ್ಲಿಮೆಂಟಿನವರು ಈ ವಿಚಾರ ತಕ್ಕ ಕ್ರಮ ಕೈಕೊಳ್ಳುವಂತೆಯೂ ಭಾರತದ ನಿಶಾ ನಿಷೇಧದ ಚಳವಳವನ್ನು ಪ್ರೋತ್ಸಾಹಿಸುವಂತೆಯೂ ಸೂಚಿಸಿದರು. ಭಾರತದ ಬಡತನದ ಮಧ್ಯೆ ಅನೇಕ ಕುಟುಂಬಗಳನ್ನು ತೊಂದರೆಗೀಡುಮಾಡುತ್ತಿರುವ ನಿಶಾಸೇವನೆಯನ್ನು ಕಿತ್ತೊಗೆಯಲು ಹೂಡಿರುವ ಭಾರತೀಯರ ಚಳವಳವು ಅವರ ಚಿತ್ತವನ್ನಾಕರ್ಷಿಸಿತು. ಅವರು ಇಂಗ್ಲೆಂಡಿಗೆ ಹಿಂತಿರುಗಿ ತಲುಪಿದೊಡನೇ ಪಾರ್ಲಿಮೆಂಟ್ ಸದಸ್ಯರ ಒಂದು ಮೀಟಿಂಗು ಜರಗಿತು. ಅಲ್ಲಿ ಭಾರತದ ಕುಡುಕತನವನ್ನು ನಿವಾರಿಸುವ ಬಗ್ಗೆ ಒಂದು ಕಮಿಟಿಯು ನೇಮಕವಾಯಿತು. 1889 ರಲ್ಲಿ ಪುನಃ ಸ್ಪ್ರಾಸ್ಟನ್‌ರವರು ಭಾರತದ ಅಬ್ಕಾರಿ ಆಡಳಿತವನ್ನು ಪರಿಶೀಲಿಸಿ ತಿಳಿಯಲು ಬಂದರು. ಇಲ್ಲಿಯ ಆವರ ಆಡಳಿತವು ಎಲ್ಲಾ ಭಾಗಗಳಲ್ಲೂ ಒಂದೇಉದ್ದೇಶದಿಂದ ಸರಕಾರಕ್ಕೆ ಇದರಿಂದ ಕಂದಾಯ ಹೆಚ್ಚಿಗೆ ಬರಬೇಕೆಂಬ ಧ್ಯೇಯದಿಂದ ಆಯಾಯ ಪ್ರಾಂತಗಳ ಪರಿಸ್ಥಿತಿಗನುಸರಿಸಿತ್ತು. ಈ ಧ್ಯೇಯಸಾಧನೆಗೋಸ್ಕರವೇ ನಿಶಾಪದಾರ್ಥಗಳ ಅಂಗಡಿಗಳನ್ನಿಡಲು ವ್ಯಾಪಾರಿಗಳನ್ನು ಅಪರಿಮಿತವಾಗಿ ಕೊಟ್ಟಿತ್ತು. ಇದರಿಂದ ಅಲ್ಲಲ್ಲಿ ವಿಪರೀತ ಅಂಗಡಿಗಳಾದುವಲ್ಲದೆ ಜನರಲ್ಲಿ ಕುಡುಕತನವನ್ನು ಒಂದು ವಿಧದಲ್ಲಿ ಪ್ರೋತ್ಸಾಹಿಸಿದಂತೆಯೇ ಆಯಿತು. ಇದನ್ನು ಕೂಲಂಕುಷವಾಗಿ ಪರಿಶೀಲಿಸಿ ತಿಳಿದ ಸ್ಪ್ರಾಸ್ಟನ್‌ರವರು ಸ್ವದೇಶಕ್ಕೆ ಹಿಂತಿರುಗಿದ ನಂತರ ಈ ವಿಚಾರ ಸರಕಾರದಿಂದ ಬಡ ಪ್ರಜೆಗಳಿಗೆ ಆಗುತ್ತಿರುವ ಅನಾಹುತಗಳ ಬಗ್ಗೆ ಸರಕಾರದ ಧೋರಣೆಯನ್ನು ಖಂಡಿಸಿ ಪಾರ್ಲಿಮೆಂಟಿನಲ್ಲಿ ಠರಾವು ತಂದರು. ಈ ಠರಾವು ಅಲ್ಲಿ ಹತ್ತು ಜನ ಬಹುಮತದಿಂದ ಅಂಗೀಕೃತವಾಯಿತು. ಇದರ ಪರಿಣಾಮವಾಗಿ ಒಂದು ಸುಧಾರಣಾ ಸಂಸ್ಥೆಯು ಏರ್ಪಡಾಯಿತು. ಇದರಿಂದ ಅಲ್ಪ ಸ್ವಲ್ಪ ಸುಧಾರಣೆಗಳಾದರೂ ಪುನಃ ನಿಶಾಸೇವನೆಯ ಹವ್ಯಾಸವು ಬೆಳೆಯತೊಡಗಿತು. ಸ್ಪ್ರಾಸ್ಟನ್ನರ ಪ್ರಯತ್ನದಿಂದ ಭಾರತದಲ್ಲಿ ನಿಶಾನಿಷೇಧಿಸುವ 300 ಸಂಸ್ಥೆಗಳು ಸ್ಥಾಪಿಸಲ್ಪಟ್ಟಿದ್ದರೂ, ನಿಶಾಸೇವನೆಯು ನಿಧಾನವಾಗಿ ಅಭಿವೃದ್ಧಿಗೊಂಡಿತು. 1875 ರಲ್ಲಿ ಭಾರತದ ಒಟ್ಟು ಅಬ್ಕಾರಿ ಇಲಾಖೆಯ ಕಂದಾಯ 1750000 ಪೌಂಡುಗಳಾಗಿತ್ತು. ಆದರೆ 1905 ರಲ್ಲಿ 5861000 ರಷ್ಟು ಏರಿತು. 1929-30 ರಲ್ಲಿ 15000000 ಕ್ಕೆ ಮುಟ್ಟಿತು. ಆದರೆ 1936 ರಲ್ಲಿ ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ನಡೆದ ನಿಶಾನಿಷೇಧ ಪಿಕೆಟಿಂಗಿನಿಂದ ಈ ಕಂದಾಯವು 11285000 ಪೌಂಡುಗಳಿಗೆ ಇಳಿಯಿತು. ಈ ವರ್ಷಗಳಲ್ಲಿ ನಿಶಾಸೇವನೆಯನ್ನು ಬಿಡ್ತಾಯ ನಿಲ್ಲಿಸಲು ಅನೇಕ ಏರ್ಪಾಡುಗಳು ನಡೆದುವು. 1905 ರಲ್ಲಿ ನೇಮಕವಾದ ಒಂದು ಕಮಿಟಿಯು ವರದಿಯ ಮೇರೆ ನಿಶಾಪದಾರ್ಥದ ಅಂಗಡಿಗಳ ವ್ಯಾಪಾರದ ಸಮಯವನ್ನು ನಿಷ್ಕರ್ಷಿಸಲಾಯಿತು. 1907 ಮತ್ತು 1912 ರಲ್ಲಿ ಮುಖ್ಯವಾಗಿ ಶ್ರೀ ಗೋಖಲೆಯವರ ಪ್ರೇರಣೆಯಿಂದ ಭಾರತದ ವಿದೇಶಾಂಗ ಮಂತ್ರಿಗಳಿಗೆ ನಿಶಾನಿಷೇಧದ ವಿಚಾರ ಪೂರ್ಣ ಸುಧಾರಣೆಯಾಗಬೇಕೆಂದು ಡೆಪ್ಯುಟೇಷನ್ ಹೋಯಿತು. ಇದರ ಪರಿಣಾಮವಾಗಿ ಲೈಸೆನ್ಸ್‌ಗಳನ್ನು ಕೊಡುವಾಗ ವಿವೇಚಿಸಿ ಕೊಡಲು ಒಂದು ಸಮಿತಿಯು ಏರ್ಪಾಡಾಯಿತು. ಆದರೆ 1919 ರ ಅಬ್ಕಾರಿ ಇಲಾಖಾ ಕಾನೂನು ಮೇರೆ ಈ ಇಲಾಖೆಯ ಅಧಿಕಾರವನ್ನು ಸ್ಥಳೀಯ ಚುನಾಯಿತ ಮಂತ್ರಿಗಳ ವಶಕ್ಕೆ ಒಪ್ಪಿಸಲಾಯಿತು. ಇದರಿಂದ ಭಾರತೀಯರಿಗೆ ತಮ್ಮೊಳಗಿರುವ ಈ ದುಶ್ಚಟವನ್ನು ಕಿತ್ತೊಗೆಯಲು ಸಾಕಷ್ಟು ಪ್ರಯತ್ನ ಮಾಡಲು ಅವಕಾಶವಾಯಿತು. ಆದರೆ ಈ ಇಲಾಖೆಯಿಂದ ಬರುತ್ತಿದ್ದ ಕಂದಾಯವನ್ನು ಅತಿ ಪ್ರಯೋಜನಕಾರಿಯಾದ ವಿದ್ಯಾ ಮತ್ತು ವೈದ್ಯ ಈ ಇಲಾಖೆಗಳಿಗೆ ಖರ್ಚು ಮಾಡುತ್ತಿದ್ದುದರಿಂದ ನಿಶಾನಿಷೇಧ ಚಳವಳ ಪ್ರಾರಂಭಿಸಿದರೆ ಈ ಇಲಾಖೆಗಳಿಗೆ ಧಕ್ಕೆ ತಗಲುವ ಸಂದರ್ಭವಿತ್ತು. ಆದರೆ ಇಂಡಿಯನ್ ನೇಶನಲ್ ಕಾಂಗ್ರೆಸ್ಸು ಪ್ರಾರಂಭದಿಂದಲೇ ನಿಶಾಸೇವನೆಯನ್ನು ನಿಲ್ಲಿಸಿ ಸುಧಾರಣೆಯನ್ನು ತರಬೇಕೆಂದು ಹಂಬಲಿಸುತ್ತಿತ್ತು. ಕಾಂಗ್ರೆಸಿನ ಪ್ರಧಾನ ಮುಖಂಡರಾದ ಮಹಾತ್ಮ ಗಾಂಧಿಯವರು ಹೀಗೆ ಬರೆದಿರುವರು, 'ಭಾರತದಲ್ಲಿ ನಿಶಾಸೇವನೆಯು ನಿಲ್ಲಬೇಕೆಂಬ ನಂಬಿಕೆಯಿಂದಿರುವವನು ನಾನು. ಮಾನವ ಜಾತಿಯ ಮೇಲೆ ಆವರಿಸಿಕೊಂಡಿರುವ ಕುಡುಕತನವು ಬಂದು ದೊಡ್ಡ ಹಾನಿಕಾರಿಣಿಯೆಂದು ನಂಬಿದೆನು. ಭಾರತವು ಈ ವ್ಯವಹಾರದಿಂದ ತನ್ನ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಗೊಳಿಸುವದಕ್ಕಿಂತ ಅದು ದಿವಾಳಿಯಾಗಿರುವದೇ ಲೇಸು.' ಮಹಾತ್ಮಾ ಗಾಂಧಿಯವರ ಪ್ರೇರಣೆಯಿಂದಲೇ ಕಾಂಗ್ರೆಸ್ ಮುಖಂಡರು ನಿಶಾನಿಷೇಧ ಕಾರ್ಯಕ್ರಮವನ್ನು ಮುಂದಿಟ್ಟು ಕೆಲಸ ಮಾಡ[illegible]ದಾಗಿದೆ. ಈ ಶತಮಾನದ ಆದಿಯಿಂದಲೂ ಭಾರತದ ಎಲ್ಲಾ ಜನಾಂಗಗಳೂ ಈ ಚಳವಳಕ್ಕೆ ತಮ್ಮ ಸಹಾನುಭೂತಿಯನ್ನಿತ್ತಿವೆ. 1919 ರಿಂದ ಅನೇಕ ಮಹಾಸಭೆಗಳು ನಿಶಾನಿಷೇಧವನ್ನು ಪ್ರೋತ್ಸಾಹಿಸಿ ಠರಾವು ಪಾಸುಮಾಡಿರುವವು. ಆದರೆ ಈ ವಿಚಾರದಲ್ಲಿ ಹೆಚ್ಚಿನ ಕಾರ್ಯ ನಡೆಯಬೇಕಿತ್ತು. ಅಂತೆಯೇ 1925 ರಲ್ಲಿ ಭಾರತದ ಲೆಜಿಸ್ಲೇಟಿವ್ ಎಸೆಂಬ್ಲಿಯು ನಿಶಾಪದಾರ್ಥಗಳ ಉತ್ಪತ್ತಿ, ಮಾರಾಟ, ಮತ್ತು ಪರದೇಶದಿಂದ ಆಮದು ಮಾಡುವ ಈ ವಿಚಾರ ನಿಷೇಧಿಸಿ ಒಂದು ಠರಾವು ತಂದಿತು. ಆ ಸಭೆಯಲ್ಲಿದ್ದ 30 ಮಂದಿ ಸರಕಾರದಿಂದ ನೇಮಿತರಾದ ಯುರೋಪಿಯನ್ ಸದಸ್ಯರು ಇದನ್ನು ವಿರೋಧಿಸಿದ್ದರು. ಆದರೂ ಈ ಠರಾವು ಬಹುಮತದಿಂದ ಪಾಸಾಯಿತು. ಇದೇ ಠರಾವನ್ನು 1928 ರಲ್ಲಿ ಕಲ್ಕತ್ತಾದಲ್ಲಿ ಜರಗಿದ ಸಮಸ್ತ ಜನಾಂಗದ ಸಮ್ಮೇಳನವು ಅಂಗೀಕರಿಸಿ ಕಾಂಗ್ರೆಸಿನ ಕಾರ್ಯಭಾಗಗಳಲ್ಲಿ [illegible] ವು ಪ್ರಾಮುಖ್ಯವಾದದೆಂದು ನಿರ್ಣಯಿಸಿತು.

1935 ರಲ್ಲಿ ಬ್ರಿಟಿಷ್ ಪಾರ್ಲಿಮೆಂಟು, ಗವರ್ನ್‌ಮೆಂಟ್ ಆಫ್ ಇಂಡಿಯಾ ಆಕ್ಟನ್ನು ಪಾಸು ಮಾಡಿತು. ಇದರ ಪರಿಣಾಮವಾಗಿ ಹನ್ನೊಂದು ಪ್ರಾಂತಗಳಿಗೆ ಪ್ರಾಂತೀಕ ಸ್ವರಾಜ್ಯವು ಲಭಿಸಿತು. ನಂತರ ಜನಮತವನ್ನು ಪಡೆದ ಜನ ಪ್ರತಿನಿಧಿಗಳು ಮಂತ್ರಿಪದಗಳನ್ನು ಸ್ವೀಕರಿಸಿದ್ದು, ಮದ್ರಾಸು ಪ್ರಾಂತವು ನಿಶಾನಿಷೇಧದ ಕಾರ್ಯಕ್ರಮವನ್ನು ಪ್ರಥಮತಃ ಕೈಕೊಂಡ

(೧೦ ನೇ ಪುಟಕ್ಕೆ ಸಾಗಿದೆ.)

ಈ ಯುದ್ಧಗಳಲ್ಲಿ ಕುಲ್ಲಪ್ಪ ಪೊನ್ನಣ್ಣನ ಅಣ್ಣ ಮೊಣಚ್ಚನು ತನ್ನ ಕಡೆಯ ಜನರನ್ನು ಕರೆದುಕೊಂಡು ಬಂದು ಬಹಳ ಶೌರ್ಯವನ್ನು ತೋರಿಸಿದನು. ಗುಲಾಮಲ್ಲಿಯು ತನ್ನ ಉಳಿದ ಸೈನಿಕರನ್ನು ತೆಗೆದುಕೊಂಡು ಮಲೆಯೊಳಕ್ಕೆ ಹೋದನು.

(ಮುಂದುವರಿಯುವುದು.)

ಕೊಡಗು

ಸೆಪ್ಟೆಂಬರ್ ತಾರೀಕು ೨ನೇ ಶುಕ್ರವಾರ ೧೯೩೮.

ಸೈನಿಕ ಸಂಗ್ರಹದ ಮಸೂದೆ.

ಹಿಂದೂ ದೇಶದ ಕೇಂದ್ರ ಎಸೆಂಬ್ಲಿ ಸಭೆಯಲ್ಲಿ ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಆಕ್ಟ್ ಎಂಬ ಮಸೂದೆಯೊಂದು ಸರ್ಕಾರಿ ಮೆಂಬರರಿಂದ ಸೂಚಿಸಲ್ಪಟ್ಟು, ಮುಸ್ಲಿಂ ಲೀಗಿನವರಿಂದ ಪೋಷಿಸಲ್ಪಟ್ಟು ಬಹುಮತದಿಂದ ಪಾಸಾಯಿತು. ಕಾಂಗ್ರೆಸು ಪಾರ್ಟಿಯವರೂ, ನ್ಯಾಶನಲಿಸ್ಟ್ ಪಕ್ಷದವರೂ ಬಲವಾಗಿ ವಿರೋಧಿಸಿದರೂ ಸಫಲವಾಗಲಿಲ್ಲ. ಮುಸ್ಲಿಂ ಲೀಗಿನ ಮುಂದಾಳಾದ ಮಿ. ಜಿನ್ನಾರವರು ಸರ್ಕಾರಕ್ಕೆ ತಮ್ಮ ಪಾರ್ಟಿಯ ಬೆಂಬಲವನ್ನು ಕೊಡದೆ ಹೋಗಿದ್ದರೆ ಈ ಮಸೂದೆಯು ಪಾಸಾಗುತ್ತಿರಲಿಲ್ಲ. ಬರೇ ಹತ್ತು ಓಟುಗಳ ಬಹುಮತದಿಂದ ಮಸೂದೆಯು ಮಂಜೂರಾದದ್ದಾಗಿದೆ.

ಸೈನ್ಯಕ್ಕೆ ಜನರು ಸೇರಬಾರದೆಂದು ಹೇಳುವವರನ್ನೂ, ಅಥವಾ ಆ ಬಗ್ಗೆ ಪ್ರಚಾರ ಕೆಲಸ ಮಾಡುವವರನ್ನೂ ಶಿಕ್ಷಿಸುವುದೇ ಈ ಮಸೂದೆಯ ಉದ್ದೇಶ. ಈ ಮಸೂದೆಯು ಪ್ರೇರೇಪಣೆಯು ಪಂಜಾಬು ಸರ್ಕಾರದಿಂದ ಹೊರಟದ್ದಾಗಿದೆ. ಪಂಜಾಬಿನಲ್ಲಿ ಸಮಾಜ ಸಮತಾವಾದಿಗಳು ಯುದ್ಧದಲ್ಲಿ ಯಾರೂ ಭಾಗವಹಿಸಬಾರದೆಂದು ಪ್ರಚಾರ ಕೆಲಸ ನಡಿಸುವುದರಿಂದ ಅಲ್ಲಿ ಸೈನ್ಯಕ್ಕೆ ಸೇರುವವರ ಸಂಖ್ಯೆಯು ಕಡಿಮೆಯಾಗುತ್ತಿದೆಯೆಂದೂ, ಈ ತರಹದ ಪ್ರಚಾರ ಕೆಲಸವನ್ನು ತಡೆಯದೆ ಹೋದರೆ ಸರ್ಕಾರಕ್ಕೆ ವಿಪತ್ತು ಸಂಭವಿಸುವದೆಂದೂ ಸರ್ಕಾರಿ ಮೆಂಬರುಗಳ ವಾದವಂತೆ. ಈ ಕಾನೂನಿಂದ ನಿಜಕ್ಕೂ ಜನರ ಸಿವಿಲ್ ಸ್ವಾತಂತ್ರ್ಯಕ್ಕೆ ದೊಡ್ಡ ಧಕ್ಕೆ ತಗಲುತ್ತದೆಂಬುವದರಲ್ಲಿ ಸಂಶಯವಿಲ್ಲ. ಪಂಜಾಬಿನ ಸರ್ಕಾರದವರಿಗೆ ಈ ಕಾನೂನಿನ ಆವಶ್ಯಕತೆ ಇದ್ದಿದ್ದರೆ ಅಲ್ಲಿಯ ಎಸೆಂಬ್ಲಿಯಲ್ಲಿ ಈ ಮಸೂದೆಯನ್ನು ಮಂಜೂರು ಮಾಡಿಸಿಕೊಳ್ಳಬಹುದಿತ್ತು; ಅಥವಾ ಕೇಂದ್ರ ಶಾಸನ ಸಭೆಯಲ್ಲಿ ಚರ್ಚಿಸುವ ಮೊದಲು ಎಲ್ಲಾ ಪ್ರಾಂತೀಕ ಸರ್ಕಾರಗಳ ಅಭಿಪ್ರಾಯ ತೆಗೆಯಬಹುದಾಗಿತ್ತು. ಆದರೆ ಕಾಂಗ್ರೆಸು ಪಕ್ಷವು ಅಧಿಕಾರದಲ್ಲಿರುವ ಪ್ರಾಂತೀಕ ಸರ್ಕಾರಗಳು ಜನತೆಯ ಸಿವಿಲ್ ಹಕ್ಕುಗಳಿಗೆ ಮಣ್ಣು ಹಾಕಲು ಒಪ್ಪುತ್ತಿರಲಿಲ್ಲವೆಂದು ಇಂಡಿಯಾ ಸರ್ಕಾರಕ್ಕೆ ಆಗಾಗಲೇ ಗೊತ್ತಾಗಿದೆ. ಆದುದರಿಂದಲೇ ಈ ಮಸೂದೆಯನ್ನು ಇಷ್ಟು ತುರಿತವಾಗಿ, ದೇಶದ ಜನರ ಅಭಿಪ್ರಾಯವನ್ನು ಸೂಚಿಸಲು ಅವಕಾಶ ಕೊಡಲಿಕ್ಕಾಗಿ ಅದನ್ನು ಪ್ರಕಟಿಸಲೂ ಕೂಡ ಒಪ್ಪದೆ ಎಸೆಂಬ್ಲಿಯಲ್ಲಿ ಪಾಸು ಮಾಡಿಸಿದ್ದಾಗಿದೆಯೆಂದರೆ ತಪ್ಪಾಗಲಾರದು.

ಯುದ್ಧವನ್ನು ಸಂಪೂರ್ಣವಾಗಿ ನಿಲ್ಲಿಸಿದರೇನೇ ಪ್ರಪಂಚದಲ್ಲಿ ಶಾಂತಿ ಸ್ಥಾಪನೆಯಾಗುವುದೆಂದೂ, ಭೂಮಿಯ ಲಾಲಸೆಯಿಂದ ಮನುಷ್ಯರ ರಕ್ತವನ್ನು ಸುರಿಸುವುದು ಪಾಪವೆಂದೂ ನಂಬುವವರು ಅನೇಕರಿರುವರು. ಅಂಥವರು ತಮ್ಮ ಅಭಿಪ್ರಾಯವನ್ನು ಪ್ರಚಾರಗೊಳಿಸಲು ಸೈನ್ಯಕ್ಕೆ ಯಾರೂ ಸೇರಬಾರದೆಂದು ಹೇಳಿದರೆ ಈ ಹೊಸ ಕಾನೂನಿನ ಮೇರೆ ಶಿಕ್ಷೆಗೆ ಗುರಿಯಾಗುವರು. ಆದುದರಿಂದ ಇದು ಮನುಷ್ಯನ ಸಿವಿಲ್ ಹಕ್ಕಿಗೆ ದೊಡ್ಡ ಹಾನಿಯಾಗಿ ಪರಿಣಮಿಸುವುದು. ಒಂದು ವೇಳೆ ಸೈನ್ಯಕ್ಕೆ ಸೇರುವವರ ಸಂಖ್ಯೆಯು ಕಡಿಮೆಯಾಗುತ್ತಿರಬಹುದು. ಇದಕ್ಕಿರುವ ನಿಜವಾದ ಕಾರಣಗಳನ್ನಾದರೂ ಸರಕಾರದವರು ಕಂಡು ಹಿಡಿಯಲು ಪ್ರಯತ್ನಿಸಬೇಕಿತ್ತು. ಇಂಡಿಯನ್ ಸಿಪಾಯಿಗೂ, ಇಂಗ್ಲಿಷ್ ಸೋಲ್ಜರನಿಗೂ ಸರ್ಕಾರದವರು ಮಾಡುತ್ತಿರುವ ವೆಚ್ಚದಲ್ಲಿ ದೊಡ್ಡ ವ್ಯತ್ಯಾಸವಿದೆ. ಹಿಂದೀ ಸಿಪಾಯಿಗೆ ಮಾಡುವ ಖರ್ಚು ಇಂಗ್ಲಿಷ್ ಸೋಲ್ಜರನ ವೆಚ್ಚದ ನಾಲ್ಕರಲ್ಲಿ ಒಂದು ಭಾಗ ಮಾತ್ರ. ಅಲ್ಲದೆ ಈಗ ಹಿಂದೀ ಸೇನೆಯು ಯಾವ ದೃಷ್ಟಿಯಿಂದಲೂ ನಿಜವಾದ ಹಿಂದೀ ಸೇನೆಯಾಗಿಲ್ಲ. ಆದಕಾರಣ ಹಿಂದೀಯರು ಸೈನ್ಯಕ್ಕೆ ಸೇರಲು ಹಿಂಜರಿಯುತ್ತಿರಬಹುದು.

ಹಿಂದೀಯರು ಕಳೆದ ಘೋರ ಯುದ್ಧದಲ್ಲಿ ಕೊಟ್ಟ 650 ಕೋಟಿ ರೂಪಾಯಿ ಧನ ಸಹಾಯಕ್ಕೂ, 36,000 ಜನ ಸಹಾಯಕ್ಕೂ ದೊರೆತ ಪ್ರತಿಫಲ ಏನೆಂಬುದು ಎಲ್ಲರಿಗೂ ಚೆನ್ನಾಗಿ ತಿಳಿದ ವಿಷಯವಾಗಿದೆ. ಇದರಿಂದ ಸಮಾಜ ಸಮತಾವಾದಿಗಳು ಮಾತ್ರವಲ್ಲ, ಇತರ ಕಾಂಗ್ರೆಸಿನವರು ಮುಂದೆ ಸಾಮ್ರಾಜ್ಯ ವಿಸ್ತರಣಾ ಲಾಲಸೆಯಿಂದ ಉಂಟಾಗುವ ಯಾದ ಯುದ್ಧದಲ್ಲೂ ... ಭಾರತೀಯರು ಸಹಾಯವನ್ನು ನೀಡಬಾರದೆಂದು ನಿಶ್ಚಯಿಸಿದ್ದಾರೆ. ಹಿಂದೀಯರಿಗೆ ಇಂದು ತಮ್ಮ ದೇಶದಲ್ಲಿ ಸ್ವಾತಂತ್ರ್ಯವಿಲ್ಲ. ತಮ್ಮ ದೇಶದ ಸೈನ್ಯದ ಮೇಲೆ ತಮಗೆ ಅಧಿಕಾರವಿಲ್ಲ. ತಮ್ಮ ದೇಶದ ರಕ್ಷಣೆಗಾಗಿ ನಡೆಯುವ ವಿಷಯದಲ್ಲೂ ಇಲ್ಲ. ಅಂದ ಮೇಲೆ ಅವರು ಬೇರೆಯವರ ಸಹಾಯಕ್ಕಾಗಿ ಸೇನೆಯನ್ನು ಕಳುಹಿಸುವುದು ಹೇಗೆ? ಈಗಿನ ಪರಿಸ್ಥಿತಿಯಲ್ಲಿ ಭಾರತೀಯರು ತಮ್ಮ ದೇಶದ ಹಿತಕ್ಕಾಗಿಯಲ್ಲದೆ ಬೇರೆ ಯಾವ ಯುದ್ಧದಲ್ಲಿ ಭಾಗಿಗಳಾಗಲಾರರೆಂಬುದು ಬ್ರಿಟಿಷರಿಗೆ ತಿಳಿಯದ್ದಲ್ಲ. ಇದನ್ನು ಅರಿತೂ ಕೂಡ ಜನರ ಮೇಲೆ ಒಂದು ಹೊಸ ತಪ್ಪನ್ನು ಹೊರಿಸುವ ಕಾನೂನನ್ನು ಮಂಜೂರು ಮಾಡಿದ್ದು ದೊಡ್ಡ ಅನ್ಯಾಯವಾಗಿದೆ. ಮುಂದೆ ಬರುವ ಯುದ್ಧದಲ್ಲಿ ಸೇರುವ ಯಾ ಸೇರದಿರುವ ತೀರ್ಮಾನವನ್ನು ಮಾಡುವ ಹಕ್ಕು ಬ್ರಿಟಿಷ್ ಸಾಮ್ರಾಜ್ಯದ ವಸಾಹತುಗಳಿಗಿದೆ. ಆದರೆ ಈ ಕಾನೂನಿನ ಮೇರೆ ಇಂಡಿಯಾದಿಂದ ಈ ಹಕ್ಕನ್ನು ಸಂಪೂರ್ಣ ತೆಗೆದಂತಾಯಿತು. ಭಾರತೀಯರು ತಮ್ಮ ಹಿಂದಿನ ಅನುಭವದಿಂದ ಎಚ್ಚರಗೊಂಡು ಈ ಹಕ್ಕನ್ನು ಸ್ಥಾಪಿಸಲೆತ್ನಿಸುವರೆಂದು ಇಂಡೀ ಸರ್ಕಾರದವರು ಇಷ್ಟು ತುರಿತವಾಗಿ ಈ ಮಸೂದೆಯನ್ನು ಪಾಸು ಮಾಡಿಕೊಂಡದ್ದಾಗಿದೆಯೆಂದು ತೋರುತ್ತದೆ. ಇಲ್ಲವಾದರೆ ಇಂಥಾ ಕಾನೂನು ಮಾಡಲು ಈಗ ಯುದ್ಧವೇನೂ ಇಲ್ಲ; ಮಾತ್ರವಲ್ಲ, ಕಳೆದ ಯುದ್ಧದ ಸಮಯದಲ್ಲೂ ಕೂಡ ಇಂಥಾ ಕಾನೂನನ್ನು ಜಾರಿಗೆ ತಂದಿರಲಿಲ್ಲ.

ಈ ವಿಶೇಷ ಕಾನೂನನ್ನು ಜಾರಿಗೆ ತರಲು ಸರ್ಕಾರದವರು ಮಿ. ಜಿನ್ನಾರವರನ್ನು ಉಪಯೋಗಿಸಿಕೊಂಡರು. ಮಿ. ಜಿನ್ನಾರವರು ಅಧ್ಯಕ್ಷರಾಗಿರುವ ಮುಸ್ಲಿಂ ಲೀಗೊಂದೇ ಮಹಮ್ಮದೀಯರ ನಿಜವಾದ ಪ್ರತಿನಿಧಿ ಸಭೆಯೆಂದು ಕಾಂಗ್ರೆಸಿನವರು ಒಪ್ಪಿಕೊಳ್ಳಲಿಲ್ಲವೆಂಬ ಕಾರಣದಿಂದ ಜಿನ್ನಾರವರಿಗೆ ಇತ್ತೀಚೆಗೆ ಕಾಂಗ್ರೆಸ್ಸಿನ ಮೇಲೆ ವೈಮನಸ್ಸು ಹೆಚ್ಚಾಗಿದೆ. ಇದನ್ನು ಪ್ರದರ್ಶಿಸಲು ಅವರು ಈ ಸಂಧಿಯನ್ನು ಉಪಯೋಗಿಸಿಕೊಂಡರು. ಎಸೆಂಬ್ಲಿಯಲ್ಲಿ ಕಾಂಗ್ರೆಸು ಧುರೀಣರು ಈ ಮಸೂದೆಗೆ ವಿರೋಧವಾಗಿ ಮಾಡಿದ ಭಾಷಣಗಳನ್ನು ಕೇಳಿದ ಮೇಲೆ ತನಗೆ ಈ ಕಾನೂನಿನ ಆವಶ್ಯಕತೆಯ ಕಾರಣವು ಹೊಳೆಯಿತೆಂದು ಹೇಳಿದ ಮಿ. ಜಿನ್ನಾರವರ ಮನೋಭಾವನೆಗೆ ಎಷ್ಟು ವಿಷಾದಿಸಿದರೂ ಸ್ವಲ್ಪವೆ. ಇವರ ಅನಿರೀಕ್ಷಿತವಾದ ಈ ವರ್ತನೆಯಿಂದ ಕಾಂಗ್ರೆಸ್ಸಿನ ಹಾಗೂ ಮುಸ್ಲಿಂ ಲೀಗಿನ ಗುರಿಯಾದ ಹಿಂದೂಸ್ಥಾನದ ಸ್ವಾತಂತ್ರ್ಯಕ್ಕೆ ದೊಡ್ಡ ಅಡಚಣೆಯನ್ನು ತಂದೊಡ್ಡಿರುವರು. ಹಿಂದೂ ದೇಶದ ಹಲವು ಪ್ರಾಂತ್ಯಗಳಲ್ಲಿ 1935 ನೇ ಆಕ್ಟಿನ ಮೇರೆ ಪ್ರಾಂತೀಕ ಸ್ವಾತಂತ್ರ್ಯ ಸರ್ಕಾರವನ್ನು ನಡಿಸಲು ಕಾಂಗ್ರೆಸ್ಸಿನವರ ಸಹಕಾರವನ್ನು ಪಡೆದಿರುವ ಮತ್ತು ಸಂಯುಕ್ತ ರಾಜ್ಯಘಟನೆಯನ್ನು ಜಾರಿಗೆ ತರಲು ಅವರ ಸಹಾನುಭೂತಿಯನ್ನು ಸಂಪಾದಿಸಲು ಯತ್ನಿಸುತ್ತಿರುವ ಈ ಸಮಯದಲ್ಲಿ ಸರ್ಕಾರದವರು ಜನತೆಯ ಸಿವಿಲ್ ಹಕ್ಕಿಗೆ ಅಡ್ಡಿ ಬರುವಂಥ ಈ ಮಸೂದೆಯನ್ನು ಜನರ ಪ್ರತಿನಿಧಿಗಳ ದೊಡ್ಡ ಬಹುಮತಕ್ಕೆ ವಿರುದ್ಧವಾಗಿ ಎಸೆಂಬ್ಲಿಯಲ್ಲಿ ಪಾಸು ಮಾಡಿಸಿದ್ದು ಶೋಚನೀಯ. ಕಾನೂನು ಎಷ್ಟು ಕಠಿಣ ತರದ್ದೇ ಆಗಿರಲಿ, ಜನಜಾಗ್ರತಿಗೊಂಡಿರುವ ಈ ಸಮಯದಲ್ಲಿ ಅದನ್ನು ಜನರ ಅಭಿಮತಕ್ಕೆ ವಿರುದ್ಧವಾಗಿ ಜಾರಿಗೆ ತರುವುದು ಸುಲಭ ಸಾಧ್ಯವಲ್ಲವೆಂಬುವದನ್ನು ಸರ್ಕಾರದವರು ಮರೆಯದಿರಲಿ.

ಭಾರತಕ್ಕೆ ಸಾರ್ವತ್ರಿಕ ಭಾಷೆಯೊಂದರ ಅವಶ್ಯಕತೆ.

ತಾರೀಕು 26-8-38ರಲ್ಲಿ ಮಡಿಕೇರಿ ಹೈಸ್ಕೂಲ್ ಹಾಲ್‌ನಲ್ಲಿ ಉತ್ತರ ಹಿಂದೂಸ್ಥಾನದ ಪಂಡಿತ ಬಾಜಪೇಯಿಯವರು ಮಾಡಿದ ಭಾಷಣದ ಸಾರಾಂಶ:–

ಭಾರತ ದೇಶದ ಐಕ್ಯತೆಗೆ ಒಂದು ಭಾಷೆಯ ಆವಶ್ಯಕತೆಯು ಪೂರಾ ಇದೆ. ಈಗ ಭಾರತದಲ್ಲಿ ಹರಡಿರುವ ಚಳವಳವು ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೂ ನಡೆಯುತ್ತಿರುವುದು. ಹೀಗೆ ಭಾರತದ ಐಕ್ಯತೆಗೆ ಹಲವು ವಿಷಯಗಳ ವಿಚಾರವು ಅವಶ್ಯಕ. ಇಂಥಾ ವಿಷಯಗಳಲ್ಲಿ ಭಾಷೆಯು ಒಂದಾಗಿದೆ. ತನ್ನದೇ ಆಗಿರುವ ಒಂದು ಭಾಷೆಯನ್ನು ರೂಢಿಯೂ ಗಿಟ್ಟಿಕೊಳ್ಳದಿದ್ದರೂ ತನ್ನಷ್ಟಕ್ಕೆ ತಾನೇ ವಿಷಯಗಳನ್ನು ಪರ್ಯಾಲೋಚಿಸುವ ಕಾಲಕ್ಕೆ ವಿದೇಶ ಭಾಷೆಯಲ್ಲಿ ಚರ್ಚೆ ಮಾಡುವ ಸ್ಥಿತಿಯಲ್ಲಿರುವಂಥ ಒಂದು ರಾಷ್ಟ್ರವು ರಾಷ್ಟ್ರವೆನಿಸದು. ನಾನು ಕಳೆದ 20 ವರ್ಷಗಳಿಂದಲೂ ಕೈಕೊಂಡಿರುವ ಬಾಲಚಮು ಸಂಸ್ಥೆಯ ಕಾರ್ಯ ಕಲಾಪಗಳ ನಿಮಿತ್ತ ಪರದೇಶ ಪರ್ಯಟನ ಮಾಡುವ ಸೌಲಭ್ಯ ನನಗೊದಗಿತ್ತು. ಆ ಸಂದರ್ಭದಲ್ಲಿ ಯೂರೋಪಿನ ಚಿಕ್ಕ ಚಿಕ್ಕ ರಾಷ್ಟ್ರಗಳಾದ ಬೆಲ್ಜಿಯಂ, ಸ್ವಿಟ್ಸರ್‌ಲೇಂಡ್ ಮೊದಲಾದುವು ಕೂಡ ತಮ್ಮತಮ್ಮ ರಾಷ್ಟ್ರೀಯ ಭಾಷೆಯಲ್ಲಿ ಮೆರೆಯುತ್ತಿರುವದನ್ನು ನೋಡಿದೆನು. ಅಂಥಾದ್ದರಲ್ಲಿ ನಮ್ಮ ವಿಶಾಲ ಭಾರತಕ್ಕೆ ಒಂದು ಏಕ ಭಾಷೆಯಿಲ್ಲದಿರುವದು ನಾಚಿಕೆಗೇಡಾಗಿದೆ. ಈ ಕಾರಣದಿಂದಲೇ ನಾವು ಪರದೇಶೀಯರ ಪರಿಹಾಸ್ಯಕ್ಕೆ ಒಳಗಾಗಿರುವೆವು. ನಮಗೆ ಹಿಂದಿಯೇ ಆಗಲಿ, ತಮಿಳೇ ಆಗಲಿ ಅಥವ ಉರ್ದುವೇ ಆಗಲಿ ಯಾವದಾದರೊಂದು ರಾಷ್ಟ್ರೀಯ ಭಾಷೆಯು ಅತ್ಯಗತ್ಯ. ಇಂಥಾ ಒಂದು ಧ್ಯೇಯವನ್ನು ಸಾಧಿಸಲು ಸಹಾಯ ಮಾಡುವವರೆಂದರೆ ಕಾಂಗ್ರೆಸ್ಸಿನವರು. ಕಾಂಗ್ರೆಸ್ಸಿನವರು ದೇಶಕ್ಕೆಂದೂ ಅಹಿತವನ್ನು ಬಯಸರು. ಅವರು ಸಹ ಭಾರತಕ್ಕೊಂದು ರಾಷ್ಟ್ರೀಯ ಭಾಷೆ ಬೇಕೆಂದೂ, ಹಿಂದಿಯೇ ಇದಕ್ಕೆ ತಕ್ಕ ಭಾಷೆಯೆಂದೂ ನಿರ್ಧರಿಸಿರುವರು. ಇಂದು ಭಾರತದ 35 ಕೋಟಿ ಜನಸಮುದಾಯದಲ್ಲಿ 22 ಕೋಟಿ ಹಿಂದೀಯನ್ನಾಡುವವರಿರುವರು. ಬಾಕಿ ಉಳಿದಿರುವ ಕೇವಲ 13 ಕೋಟಿ ಜನತೆಯು ಇದನ್ನು ಸುಲಭವಾಗಿ ಕಲಿಯಬಹುದು. ಆದ್ದರಿಂದಲೇ ಕಾಂಗ್ರೆಸ್ಸಿನವರು ಎಲ್ಲೆಲ್ಲಿ ರಾಷ್ಟ್ರೀಯ ಭಾಷಾಭಿವೃದ್ಧಿಗೆ ಅನುಕೂಲವಿದೆಯೋ ಅಲ್ಲಲ್ಲಿ ಹಿಂದೀಯನ್ನೇ ರಾಷ್ಟ್ರೀಯ ಭಾಷೆಯನ್ನಾಗಿ ಕಲಿಸಲು ಪ್ರಯತ್ನಗಳನ್ನು ನಡೆಸುತ್ತಿರುವರು.

ಒಂದು ದೇಶವನ್ನು ಸ್ವಾಧೀನಪಡಿಸಲು ಭಾಷೆ, ವೇಶ ಮತ್ತು ಭಾವವೆಂಬೀ ಮೂರು ವಿಷಯಗಳು ಪೂರಾ ಅಗತ್ಯವಾಗಿದೆ. ಈಸ್ಟ್ ಇಂಡಿಯಾ ಕಂಪೆನಿಯವರು ಭಾರತದಲ್ಲಿ ತಮ್ಮ ವ್ಯವಹಾರವನ್ನು ಸಾಗಿಸುತ್ತಿದ್ದ ಸಮಯದಲ್ಲಿ ಮೆಕಾಲೆ ಸಾಹೇಬರು ಭಾರತದಲ್ಲಿ ಇಂಗ್ಲಿಷ್ ಭಾ

ಅಮೇರಿಕ

'ಪ್ರಜಾಪ್ರಭುತ್ವದ ತತ್ವವನ್ನು ಪ್ರತಿಪಾದನ ಮಾಡುವವರಲ್ಲಿ ಅಮೇರಿಕಗಿಂತಲೂ ಧನಿಕ ಮತ್ತು ಬಲಶಾಲಿಯಾದ ರಾಷ್ಟ್ರ ಬೇರೊಂದಿಲ್ಲ.' ಈ ರೀತಿಯಾಗಿ ಬ್ರಿಟಿಷರು ಅಮೇರಿಕವನ್ನು ಹೊಗಳಿ ಅಟ್ಟಕ್ಕೇರಿಸಲು ಯತ್ನಿಸುತ್ತಾರೆ. ಆದರೆ ಇದೇ ಬ್ರಿಟಿಷರು ಪ್ರಜಾಪ್ರಭುತ್ವಕ್ಕೆ ವಿರೋಧಿಗಳಾದ ಜರ್ಮನಿ-ಇಟಲಿಗಳೊಡನೆ ಸಂಧಾನ ಮಾಡಿ, ಅಬಿಸೀನಿಯಾ, ಸ್ಪೈನ್

ಹಾ ಪ್ರಚಾರಕ್ಕೆ 2 ಲಕ್ಷ ರೂಪಾಯಿಯನ್ನು ಕೇಳಿದರು. ಆದರೆ ಚಳುವಳಿಯವರು ನಿರಾಕರಿಸಲು ಸುಪ್ರಸಿದ್ಧ ಒಬ್ಬ ಬ್ರಿಟಿಷ್ ಆಫೀಸರು ಭಾಷಾ ಪ್ರಚಾರಕ್ಕೋಸ್ಕರ ಹಣ ವಿನಿಯೋಗಿಸುವುದಗತ್ಯವೆಂದು ಇಂಗ್ಲೆಂಡಿಗೆ ಪತ್ರ ಬರೆದರು. ಅವರು ತಮ್ಮ ವಾದವನ್ನು ಸಕಾರಣವಾಗಿಯೇ ಮುಂದರಿಸಿದರು. ರೋಮನರಿಂದ ಇಂಗ್ಲೆಂಡಿನ ಆಕ್ರಮಣ ನಡೆದ ಕಾಲಕ್ಕೆ ಅವರು ಮೊದಲು ತಮ್ಮ ಭಾಷೆಯ ಪ್ರಚಾರ ಕಾರ್ಯವನ್ನು ಮಾಡಿದರು. ನಂತರ ವೇಷ, ಭೂಷಣದ ಪ್ರಚಾರವು ನಡೆಯಿತು. ಇಂಗ್ಲೆಂಡಿನಲ್ಲಿ ಜನರು [illegible] ಗೊಂಡು ರೋಮನರಿಂದ ಸ್ವರಾಜ್ಯ ಪಡೆಯಲು ಹೋರಾಡಿದ ಕಾಲಕ್ಕೆ ಈ ದೇಶಪ್ರೇಮಿಗಳಿಗೆ ವಿರೋಧಿಸಿ ರೋಮನರ ಉಳಿವಿಕೆಯೇ ನಡೆಯಲೆಂದು ಪ್ರಯತ್ನಿಸಿದ ಬ್ರಿಟಿಷರು ಸಹ ಇದ್ದರು. ಅಂಥ ಸ್ಥಿತಿಯಲ್ಲಿ ಭಾಷೆ ಮತ್ತು ವೇಷದ ಪ್ರಚಾರಕ್ಕೆ ಎರಡು ಲಕ್ಷ ರೂಪಾಯಿ ಆಗತ್ಯವೆಂದು ವಾದಿಸಿ ಮಂಜೂರು ಮಾಡಿಸಿದರು.

ಉಡಿಗೆ ತೊಡಿಗೆಯ ವಿಚಾರ ಹೇಳುವದಾದರೆ, ಇಂದು ಭಾರತೀಯರು ನಿರ್ಧರಿಸಿರುವ ತಮ್ಮ ಸರಳ ಉಡುಪನ್ನು ಧರಿಸದೆ ಬಡಬಗ್ಗರು ಅಧಿಕಾರಿಗಳೊಡನೆ ತಮ್ಮ ಸ್ವಭಾಷೆಯಲ್ಲೇ ತಮ್ಮ ಕಷ್ಟ ಪರಂಪರೆಗಳನ್ನು ನಿರ್ಭೀತಿಯಿಂದ ಹೇಳಿಕೊಳ್ಳಬಹುದು. ಆದರೆ ಇಂದಿನ ಪಾಶ್ಚಿಮಾತ್ಯರ ಅನ್ವಿತ ಉಡುಪು ಮತ್ತು ಅವರ ಬಾಯಿಂದ ಬೀಳುವ ತಿಳಿಯಲಶಕ್ಯವಾದ ಮಾತುಗಳ ಕರ್ಕಶ ಶಬ್ದಕ್ಕೆ ಯಾವನೊಬ್ಬ ಬಡಪಾಯಿಯಾದರೂ ಹೆಲಾಲ್ಬ ಸೂತ್ರವನ್ನು ಪಠಿಸಲೇ ಬೇಕಿದೆ. ಅಪ್ಪ ಪರಿಂದ ದೇಶದಲ್ಲಿ ಒಂದು ಸಾರ್ವತ್ರಿಕ ಭಾಷೆ ಮತ್ತು ಏಕತ್ರ ಉಡುಪು ಇರುವದಗತ್ಯ. ಎಂದರೇನೇ ಜನತೆಯಲ್ಲಿ ಐಕ್ಯತೆಯನ್ನು ನೆಲಸುವದಕ್ಕೂ, ಬಡಜೀವಿಗಳ ಕಷ್ಟ ಪರಂಪರೆಗಳನ್ನು ಅರಿತುಕೊಳ್ಳುವದಕ್ಕೂ ಅನುಕೂಲವಾಗುವುದು.

ಯಾವ ಕಾಲದಲ್ಲಿ ನಮ್ಮಲ್ಲಿ ಈ ಭಾಷಾ, ವೇಷ ಮತ್ತು ಭಾವ ಒಂದುಗೂಡಿ ಏಕ್ಯವುಂಟಾಗುತ್ತದೋ, ಆ ಕಾಲಕ್ಕೆ ಯಾವುದೇ ಒಂದು ಸೈನ್ಯಕ್ಕಾದರೂ ನಡೆ ನ [illegible] ಲುಗಾಡಿಸಲು ಸಾಧ್ಯವಾಗಲಾರದು. ಆದುದರಿಂದ 'ಗಿಡವಾಗಿರುವಾಗ ಬಗ್ಗಿಸಬಹುದು, ಮರವಾದರೆ ಕೂಡದು' ಎಂಬ ನಾಣ್ಣುಡಿಯನ್ನು ಮನದಲ್ಲಿಟ್ಟು ಭಾಷಾಭಿಲಾಷೆಯು ನಮ್ಮ ಚಿಕ್ಕ ಮಕ್ಕಳಲ್ಲಿ ಈಗಲೇನೇ ಉತ್ಪನ್ನವಾಗುವಂತೆ ಮಾಡುವದು ನಮ್ಮ ಕರ್ತವ್ಯವಾಗಿದೆ.

ಪರದೇಶಗಳಲ್ಲಿ ನಡೆಯುತ್ತಿರುವುದೇನು?

ಮತ್ತು ಮಾಂಚೂಕೋ ವೃಗಳಲ್ಲಿ ಪ್ರಜಾಪ್ರಭುತ್ವದ ತತ್ವಗಳಿಗೆ ವಿರೋಧವಾದ ಆಚರಣೆಯನ್ನು ಕೈಕೊಂಡ ಪರಿಣಾಮ, ಅಮೇರಿಕದವರಿಗೆ ಬ್ರಿಟನರ ಮೇಲಿದ್ದ ನಂಬಿಕೆಯು ಕಳಚಿ ಹೋಗಿದೆ. ಯುದ್ಧರಿಂದ ಕಳೆದ ದಿನ, ಯುದ್ಧದ ಆಯುಧ ಮಾಡುವಂತೆ ಅಮೇರಿಕವು ಶಸ್ತ್ರ ಓಡುತ್ತದೆ, [illegible] ತ್ತಿರುತ್ತದೆ. ತ ವನ್ನು [illegible] ಯಲ್ಲಿ ಉಚ್ಚರಿಸುತ್ತದೆ. ಪ್ರತಿ ದ್ವಂದ್ವಗಳಿಗೆ ಯುದ್ಧ ಸನ್ನಾಹ [illegible] ಗಳನ್ನು ಒದಗಿಸಿ ದುಡ್ಡು ಕಟ್ಟಿಕೊಳ್ಳುತ್ತಿದೆ. ಅಮೇರಿಕದ ಪ್ರೆಸಿಡೆಂಟರಾದ ರೂಸ್‌ವೆಲ್ಟರೂ ಅವರ ಸೆಕ್ರೆಟರಿ ಕಾರ್ಡೆಲ್ ಹಲ್ಲರೂ ಆಗುವದೆಲ್ಲ ಆಗಲಿ [illegible] ಬಾಯಲ್ಲಿ ಕೊಚ್ಚಿಕೊಳ್ಳುತ್ತಾರೆ. ಆದರೆ ಕಾರ್ಯತಃ ಯಾರನ್ನು ಎದುರಿಸುವ ಗಂಡೆದೆಯಿಲ್ಲ. [illegible] ಗುದ್ದು ಕೈ [illegible] ಕೊಳ್ಳುವ ಈ ನ್ಯಾಯಕ್ಕೆ ಏನೆನ್ನಬೇಕು?

ಜರ್ಮನಿ.

ಜರ್ಮನಿಯು ತನ್ನ ಗಡಿ [illegible] ಗಳಲ್ಲಿರುವ ಯುದ್ಧ ಕಾಲಕ್ಕೆ ಬೇಕಾಗುವ ಕೋಟೆಕೊತ್ತಳಗಳನ್ನು ಬಲದಿಂದ ಸಿದ್ಧಪಡಿಸುತ್ತಿರುವನೆಂಬ ಸುದ್ದಿಯು ಯೂರೋಪಿಯನ್ ರಾಷ್ಟ್ರಗಳನ್ನೆಲ್ಲ ಚಕಿತ [illegible] ಗೊಳಿಸಿರುವದು. ಈಗ ಕೆಲವು ದಿನಗಳಿಂದ ಹಿಟ್ಲರನು ಮಾಡುತ್ತಿರುವ ಗಡಿಬಿಡಿಯನ್ನು ನೋಡಿದರೆ, ಜರ್ಮನಿಯು ಯಾವುದೋ ಯುದ್ಧದ ಸನ್ನಾಹದಲ್ಲಿ ತೊಡಗಿರುವದೆಂದು ವೇದ್ಯವಾಗುವದು. ಈ ಗಡಿಬಿಡಿಗೆ ಕಾರಣವೇನು? ಜರ್ಮನಿಯ ಪಶ್ಚಿಮದಲ್ಲಿ ಫ್ರಾನ್ಸ್ ದೇಶವಿದೆ. ಈ ಎರಡು ದೇಶಗಳ ಮಧ್ಯದಲ್ಲಿರುವ ರೈನ್‌ಲ್ಯಾಂಡ್ ಪ್ರದೇಶವು ಮಹಾ ಯುದ್ಧದ ನಂತರ ನಿಃಶಸ್ತ್ರ ಪ್ರದೇಶವಾಗಿತ್ತು. 1935 ರಲ್ಲಿ ಹಿಟ್ಲರನು ವರ್ಸೇಲ್ಸ್ ಒಪ್ಪಂದವನ್ನು ಧಿಕ್ಕರಿಸಿ ಅಲ್ಲಿ ತನ್ನ ದಂಡುಗಳನ್ನು ನುಗ್ಗಿಸಿ ಅದನ್ನು ವಶಪಡಿಸಿಕೊಂಡನು. ಅನ್ನರಿಂದ ಅದನ್ನು ಚಿರಕಾಲ ತನ್ನ ಅಂಕೆಯಲ್ಲಿಟ್ಟುಕೊಳ್ಳಬೇಕಾದರೆ ಅಲ್ಲಿ ಪ್ರಬಲವಾದ ಕೋಟೆ ಕೊತ್ತಳಗಳು ಬೇಕೆಂದು ಹಿಟ್ಲರನಿಗನಿಸಿದೆ. ಇನ್ನು ಪೂರ್ವದಲ್ಲಿ ಝೆಕೊಸ್ಲೋವಾಕಿಯ, ಆಸ್ಟ್ರೀಯ ಮೊದಲಾದ ದೇಶಗಳಿವೆ. ಝೆಕೊಸ್ಲೋವಾಕಿಯದಲ್ಲಿ ಸುಡೇಟನ್ ದೇಶದ ಜರ್ಮನರಿದ್ದಾರೆ. ಹಿಟ್ಲರನ ಪ್ರೇರಣೆಯಿಂದ ಇವರು ಅಲ್ಲಿ ಸ್ವಾತಂತ್ರ್ಯ ಚಳವಳವನ್ನು ಹೂಡಿದ್ದಾರೆ. ಅದರಿಂದ ಒಂದು ಕಾಲಕ್ಕೆ ಸುಡೇಟನರಿಗೆ ಸಹಾಯ ಮಾಡಬೇಕಾಗಿ ಬಂದರೆ ಇರಲೆಂದು ಈ ದಿಕ್ಕಿನಲ್ಲಿಯೂ ಕೋಟೆ ಕೊತ್ತಳಗಳಾಗುತ್ತಿವೆ. ಅಂತೂ ಜರ್ಮನಿಯು ಸದಾ [illegible] ಯುದ್ಧಕ್ಕೆ ಸಿದ್ಧನಿರುವನೆಂಬುದನ್ನು ವ್ಯಕ್ತಪಡಿಸಿದೆ.

ಫ್ರಾನ್ಸ್.

ಕಳೆದ, ಘೋರ ಯುದ್ಧದ ನಂತರ ಫ್ರಾನ್ಸು, ಆಸ್ಟ್ರೀಯಾ ಮತ್ತು ಪೋಲಂಡ್‌ಗಳನ್ನು ಒಂದು ಕೂಟದೊಳಗೆ [illegible] ಜರ್ಮನಿಯು ಸುತ್ತಲೂ ಒಂದು ಪಂಜರವನ್ನು ಕಟ್ಟಬೇಕೆ: [illegible] ದರೆ ಬ್ರಿಟನ್ನಿನ [illegible] ವಾಗುತ್ತಾ ಬಂತು. ತನ್ನ ಪ್ರಾಬಲ್ಯವನ್ನು ಫ್ರಾನ್ಸು ಈ [illegible] ಯಿಂದ [illegible] ಬಿಡಲಿದೆ ಎಂಬ [illegible] ಬ್ರಿಟನ್ ಬಂದು ಅದು [illegible] ಯುಕ್ತಿ [illegible] ಇದರಿಂದಾಗಿ ಫ್ರಾನ್ಸಿನಲ್ಲಿ ಇಂದಾ [illegible] ರಾಜಕೀಯ ಕೂ [illegible] ಒಮ್ಮತ [illegible] ಎರಡೆರಡು ದಿನಕ್ಕೆ [illegible] ಹೊಂದು [illegible] ಅಧಿಕಾರ [illegible] ವೃದರಿಂದ [illegible] ಅಡಳಿತದಲ್ಲಿ [illegible] ಇಲ್ಲ [illegible] ದರೂ ಅದು ತನ್ನ ಗುಣಗಳನ್ನು [illegible] ಸಲು ಹೇಗಾದರೂ ಪ್ರಾನ್ಸನ್ನು [illegible] ಗಾದರೂ ಮಾಡಿ [illegible] ಹೊಂಗಾರ್ [illegible] ಡವಿದ್ದರೆ ತನ್ನ [illegible] ದೇ [illegible] ನ್ನು ಸುರಕ್ಷಿತ [illegible] ಲವಾಗೀತೆಂಬುದೇ [illegible] ಕತ್ವದ ಮರ್ಮ.

ಇಂಗ್ಲಂಡು.

ಬ್ರಿಟಿಷ [illegible] ಯನ್ನು [illegible] ಯುತ್ತಲಿಲ್ಲ. [illegible] ತನ್ನ [illegible] ದು ಹೇಗೆ ಬರುವ [illegible] ಜರ್ಮನಿಗೆ [illegible] ಅದು ಮಾಡದ [illegible] ನಿ? ಜರ್ಮನಿ [illegible] ಕಿಯಾವನ್ನು [illegible] ನ್ನು ಕಂಕುಳಲ್ಲಿ [illegible] ದ ಫಲನಿಕ್ಷೃದ [illegible] ಉದ್ದೇಶದಿಂದಲೆ [illegible] ಪೂರ್ವದ [illegible] ಮರ್ನರು [illegible] ಕೊಳ್ಳಲಿ [illegible] ರ ಗೊಡವೆ [illegible] ಎಂದು ಬ್ರಿಟನರು ಹೇಳುತ್ತಿರುವರು. ಪಶ್ಚಿಮಕ್ಕೆ [illegible] ವಾದನ್ನು [illegible] ಬ್ರಿಟನರು ಸುಮ್ಮನಿ [illegible] ಅದರ [illegible] ಯನ್ನು [illegible] ಅರ್ಥಗಟ್ಟುತ್ತದೆ. [illegible] ಯಿಂದಲೇ ಜರ್ಮನಿಯೊಡನೇ ಸಂಧಾನ [illegible] ಇಟಲಿಯೊಡನೆ ಸಂಧಾನ, ಜರ್ಮನಿ [illegible] ದಲ್ಲಿ ಅರಿವು [illegible] ಮುಖ್ಯ [illegible] ಬ್ರಿಟನರ ವ್ಯಾಪಾರ ಸಹಿವಾಟು [illegible] ತ್ತಿ ಕ್ರೈಸ್ಟ್ [illegible] ವಾಗಿ ಜಿಬ್ರಾಲ್ಟರ್ ಜಲಸಂಧಿಯನ್ನು ದಾಟಿ, ಸುಯೇಜ್ ಕಾಲುವೆಯನ್ನು [illegible] ಹಿಂದೂಸ್ಥಾನವನ್ನೂ, [illegible] ವಸತಿಗಳನ್ನೂ [illegible] ಲ್ಲಿಂದ ಆಸ್ಟ್ರೇಲಿಯಾ ಮತ್ತು [illegible] ರದ ದ್ವೀಪಗಳ [illegible] ಕ್ತಿ [illegible] ಇವನ್ನ [illegible] ದರಿಯೊದಗಬಾ [illegible] ರ ಮೇಲೆ [illegible] ಗೇನು ಎಂಬು [illegible]

ಚೈನಾ.

ಚೈನಾ [illegible] ಕ್ತ್ರ [illegible] ವರೆಗೆ [illegible] ತ್ತಿದ [illegible] ಯು [illegible] 5000 ಚೈನಿ [illegible] ಯುದ್ಧ [illegible] ರಾಗಿರುವರು. [illegible] ಹಿರಿಶ್ಯಾ [illegible] ಮು ಜಪಾನರ [illegible] ಒಂದನ್ನು [illegible] ಅದನ್ನು [illegible] ಗಳನ್ನು [illegible] ಡಿಸಿಕೊಂಡಿತು. ಆದರೆ ಜಪಾನರ [illegible] ಮೇರೆ ಅವರು ಯೋಗ್ಯಯಿಂದ ಮುಂದರಿದು ಲ್ಯಾಯೂವನ್ನು ವಶಪಡಿಸಿಕೊಂಡಿರುವರೆಂದು ತಿಳಿದುಬರುತ್ತದೆ. ಅಂತೂ ಜಪಾನರು ಧೃತಿಗೆಟ್ಟಿರುವರು, ಚೀನಾಯುದ್ಧದಿಂದ ಬಳಲಿ ಬೆಂದಾಗಿರುವರು. ಚೈನೀಯರು ತಮ್ಮ ಈ ವರೆಗಿನ ವಿಜಯಗಳಿಂದ ಪ್ರೋತ್ಸಾಹಗೊಂಡವರಾಗಿ ದೇಶದ ಅತ್ಯಕ್ಕೆ ಪ್ರಾಣವೊಪ್ಪಿಸಿಯೂ ಮುಂಬರುತ್ತಿರುವರು. ಜಪಾನಿಯರ ಆಶಾಕಾಂಕ್ಷೆಗಳು ಚೀನೀಯರ ಈ ಪ್ರೋತ್ಸಾಹದಿಂದ ಗಾಳಿಗೋಪುರಗಳಾಗಿರುವವು. ತಮ್ಮ ದರ್ಜ್ಯಪಿಪಾಸೆಯಿಂದ ನಿರಪರಾಧಿಯಾದ ಚೈನಾದ ಮೇಲೆರಗಿದ ಜಪಾನರಿಗೆ ತಕ್ಕ ಶಿಕ್ಷೆಯೊಗುತ್ತಿರುವುದರಲ್ಲಿ ತಪ್ಪೇನಿದೆ?

ಗಾಂಧಿಜೀಯವರ ಆಶ್ರಮದಲ್ಲಿ ಸತ್ಯಾಗ್ರಹ.

ಮಧ್ಯಪ್ರಾಂತ್ಯದ ಸರ್ಕಾರದ ಕಾಂಗ್ರೆಸ್ ಮಂತ್ರಿ ಮಂಡಲದಲ್ಲಿ ಹರಿಜನರೊಬ್ಬರನ್ನು ಮಂತ್ರಿಯಾಗಿ ನೇಮಿಸಿಕೊಳ್ಳಬೇಕೆಂದು ನಾಗಪುರದ ಹರಿಜನರು ಕೇಳಿಕೊಂಡರು. ಯೋಗ್ಯರಾದವರೊಬ್ಬರು ದೊರೆತಾಗ್ಗೆ ಹಾಗೆ ಮಾಡಲಾದೀತೆಂದು ಆ ಬಗ್ಗೆ ಉತ್ತರ ಸಿಕ್ಕಿತು. ಅವರು ಇದರಿಂದ ತೃಪ್ತರಾಗದೆ ವಯಗಾಂವ್ ಗ್ರಾಮಕ್ಕೆ ಮಹಾತ್ಮಾ ಗಾಂಧಿಯವರಲ್ಲಿಗೆ ಹೋಗಿ ಅವರನ್ನು ಈ ವಿಚಾರ ಕೇಳಿಕೊಂಡರು. [illegible] ತಮ್ಮಿಂದ ಸಾಧ್ಯವಾಗುವದಿಲ್ಲವೆಂದು ಅವರು ಉತ್ತರವಿತ್ತರು. ಅವರೂ ಆರ್ಥರ್ ಹರಿಜನರು ಮಹಾತ್ಮರ ಆಶ್ರಮದ ಬಾಗಿಲಿಯಲ್ಲಿ ಕಳೆದ ತಾ. 27 ರಿಂದ ಉಪವಾಸವಿದ್ದು ಧಾರಣ ಕೂರಲು ಪ್ರಾರಂಭಿಸಿದರು. ಮಹಾತ್ಮರು ಅವರಿಗೆ ಅಲ್ಲಿ ಬೇಕಾದ ಸ್ಥಳ ಕೊಟ್ಟಿರುವರು.

ಗಾಂಧೀಜಿಯವರು ಅವರಿಗೆ ಹಿಂದಿ ಹರಿಜನದಲ್ಲಿ ಕಳೆದ ತಾ 29 ರಲ್ಲಿ ಈ ಕೆಳಗಿನ ಸಂದೇಶವನ್ನು ಕೊಟ್ಟರು.—'ನೀವು ಕೆಗೆದುಕೊಳ್ಳುವ ಆಹಾರದ ಜೊಂದರೆಗೆ ನಾನು ವ್ಯಥೆಪಡುತ್ತೇನೆ. ನಿಮ್ಮ ಪ್ರತಿಷ್ಠ ತಿಳುವಳಿಕೆ ಹೀನತೆಯಿಂದ ಉಂಟಾದದ್ದು. ನಿಮ್ಮ ಉಪವಾಸವು ನನ್ನ ಅಭಿಪ್ರಾಯವನ್ನು ಬದಲಾಯಿಸಲಾರದು. ಉಪವಾಸದಿಂದ ನಾವು ಯಾರನ್ನೂ ಬಲತ್ಕರಿಸಬಾರದು. ಆದುದರಿಂದ ನೀವು ಉಪವಾಸ ಬಿಟ್ಟು ಬೇರೆ ರೀತಿಯ ಚಳವಳ ನಡಿಸಿ. ಆದರೆ ಯಾವ ಚಳವಳವೂ ಆವಶ್ಯವಿಲ್ಲವೆಂದು ನನ್ನ ಭಾವನೆ. ಯಾ ಕೆಂದರೆ, ಯೋಗ್ಯರಾದವರು ದೊರೆತಾಗ್ಗೆ ಹರಿಜನರೊಬ್ಬರನ್ನು ಮಂತ್ರಿಯಾಗಿ ನೇಮಿಸುವುದು ಕಾಂಗ್ರೆಸು ಮಂತ್ರಿಮಂಡಳದ ಕರ್ತವ್ಯ.'

ಇದನ್ನು ಗಮನಿಸದೆ ಹರಿಜನರು ತಮ್ಮ ಗುಂಪನ್ನು ಆಗಾಗ್ಗೆ ಬದಲಾಯಿಸುತ್ತಾ ಧಾರಣ ಕೂರುವದನ್ನು ಮುಂದರಿಸುತ್ತಿರುವರು. ಹೊಸ ಗುಂಪಿನವರು ನಾಗಪುರದಿಂದ ಬಂದ ಕೂಡಲೆ ಹಳಬರು ಹಿಂತಿರುಗಿ ನಾಗಪುರಕ್ಕೆ ಹೋಗುತ್ತಿದ್ದಾರೆ.

ವರ್ತಮಾನ ಸಂಗ್ರಹ.

ಒಳದೇಶ.

ಗ್ರಾಮಾಭಿವೃದ್ಧಿ ಕಮಿಟಿಯ ಮೀಟಿಂಗೊಂದು ಕಳೆದ ತಾ. 31ರಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ಕಮಿಷನರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಚೀಫ್ ಕಮಿಷನರವರು ಕಳೆದ ತಾ. 29ರಲ್ಲಿ ಮಧ್ಯಾಹ್ನ 2½ ಗಂಟೆಗೆ 'ಬೋವರ್' ಬಂಗ್ಲೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನ ಡಪ್ಯುಟೇಶನಿನವರಿಗೆ ಭೇಟಿಯಿತ್ತಿದ್ದರು.

ಚೀಫ್ ಕಮಿಷನರವರು ತಾರೀಕು 31-8-'38ರ ಬದಲು ತಾ. 2ರಲ್ಲಿ ಮಡಿಕೇರಿಯಿಂದ ಬೆಂಗಳೂರಿಗೆ ಹೋಗುವರೆಂದು ತಿಳಿಯಬರುತ್ತದೆ.

ಮೂರ್ನಾಡಿನವರು ಈ ತಾ. 3ರಲ್ಲಿ ಸಾಂಬಾಜೆ ಮುಂದಿನಲ್ಲಿ ಕೈಲ್ ಪೊಳ್ದ ಹಬ್ಬದ ಆಟೋಟಗಳನ್ನು ಈ ಮೊದಲಿನಂತೆ ನಡಿಸುವರೆಂದು ತಿಳಿಯಬರುತ್ತದೆ.

ಗ್ರಾಮಗಳಲ್ಲಿ ಹಾಲು ದೊರಕಿಸುವ ಯೋಜನೆಯ ಕಮಿಟಿಯ ಮೀಟಿಂಗು ಮಡಿಕೇರಿಯಲ್ಲಿ ಈ ತಾ 1ರಲ್ಲಿ ವ್ಯವಸಾಯ ಇಲಾಖೆಯ ಡೆಪ್ಯುಟಿ ಡೈರೆಕ್ಟರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೈಸೂರಿನ ಕೊಡಗು ಎಸೋಸಿಯೇಶನ್‌ನವರು ಕೊಡಗು ಕೈಲ್ ಮುಹೂರ್ತ ಹಬ್ಬವನ್ನು ಸೆಪ್ಟೆಂಬರ್ 4 ನೇ ಆದಿತ್ಯವಾರ ಮೈಸೂರು ಟಿಪಿಪೆನ್ಸ್ ಬಂಗ್ಲೆಯಲ್ಲಿ ಆಚರಿಸುವರೆಂದು ತಿಳಿಯುತ್ತದೆ.

ಪಿ. ಪಿ. ಡಬ್ಲ್ಯು ಆಫೀಸಿನ ಮ್ಯಾನೇಜರಾದ ಮಿ. ರಾಮಚಂದ್ರ ಅಯ್ಯರವರು ಈ ತಾ. 10 ರಿಂದ ಎರಡು ತಿಂಗಳು ರಜೆಯಲ್ಲಿ ಹೋಗುವರೆಂದೂ, ಅವರ ಬದಲು ಅದೇ ಆಫೀಸಿನ ಮಿ. ಶ್ರೀನಿವಾಸ ಮೂರ್ತಿಯವರು ಮ್ಯಾನೇಜರಾಗಿ ನೇಮಿಸಲ್ಪಟ್ಟಿರುವರೆಂದೂ ತಿಳಿಯುತ್ತದೆ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ 3ನೇ ಫಾರಂನಲ್ಲಿ ಓದುತ್ತಿದ್ದ, ಮಿ. ಚಿಪ್ಪುಡಿರ ಟಿ. ಮುತ್ತಣ್ಣನವರ ಹಿರೇ ಪುತ್ರ ನಂಜಪ್ಪಯ್ಯನವರು ಹೊಟ್ಟೆ ಶೂಲೆಗೆ ಮಡಿಕೇರಿ ಆಸ್ಪತ್ರೆಯಲ್ಲಿ ಶಸ್ತ್ರಕ್ರಿಯೆ ಹೊಂದಿ ಈ ತಾ. 30ರಲ್ಲಿ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮಿ. ಕೋಟೆರ ಚಿಣ್ಣಪ್ಪನವರ ಪುತ್ರಿ ಶ್ರೀಮತಿ ಬೋಜಮ್ಮನವರು ಲೇಡಿ ಇರ್ವಿನ್ ಕಾಲೇಜಿನ 'ಗೃಹಿಣಿ ಶಿಕ್ಷಣ'ದಲ್ಲಿ ಮೂರು ವರ್ಷದ ತರಬೇತನ್ನು ಪೂರೈಸಿ ಡಿಗ್ರಿಯನ್ನೂ, ಟೀಚರ್ಸ್ ಟ್ರೈನಿಂಗ್ ಡಿಪ್ಲೋಮವನ್ನೂ ಪಡೆದಿರುವರಾಗಿ ತಿಳಿಯುತ್ತದೆ. ಇವರಿಗೆ ನಮ್ಮ ಅಭಿನಂದನೆಗಳಿವೆ.

ತಾ. 27-8-38 ರಿಂದ 2-9-38ರ ವರೆಗೆ ಮಡಿಕೇರಿಯಲ್ಲಿ 5 ಇಂಚು 31 ಸೆಂಟು ಮಳೆಯಾಗಿದೆ. ಆಗಸ್ಟ್ 1 ರಿಂದ ಈ ವರೆಗೆ 19 ಇಂಚು 64 ಸೆಂಟು ಮಳೆಯಾಗಿದೆ. ಕಳೆದ ವರ್ಷ 13 ಇಂಚು 84 ಸೆಂಟು ಆಗಿತ್ತು. ಈ ವರ್ಷ ಒಟ್ಟು 111 ಇಂಚು 28 ಸೆಂಟು ಮಳೆಯಾಗಿದೆ. ಕಳೆದ ವರ್ಷ 100 ಇಂಚು 38 ಸೆಂಟು ಆಗಿತ್ತು.

ಕಿತನುತಿಯ ಸುತ್ತಮುತ್ತಲು ಹುಚ್ಚು ಗುಳ್ಳೇ ನರಿಗಳು ತುಂಬಿಹೋಗಿವೆಯೆಂದೂ, ಕಳೆದ ವಾರ ಒಂದು ದಿನ ಬೆಳಿಗ್ಗೆ ಮೊಯಮುಡಿ ಗ್ರಾಮದ ಸಣ್ಣುವಂಡ ಮನೆಯಲ್ಲಿ ಒಂದು ಹುಚ್ಚು ಗುಳ್ಳೆ ನರಿಯು ಒಂದು ಕೋಳಿಯನ್ನೂ, ಸಮೀಪವಿದ್ದ ಮಗುವನ್ನೂ ಕಚ್ಚಿದಾಗ್ಯೂ ಮಗುವಿನ ತಾಯಿಯು ಅದನ್ನು ಓಡಿಸಲೆತ್ನಿಸುವಷ್ಟರಲ್ಲಿ ಅವಳ ಮುಖ, ಮೂಗು ವಗೈರೆ ಕಚ್ಚಿ ಬಲವಾಗಿ ಜಖಂ ಮಾಡಿತೆಂದೂ, ಆವಳು ಅದರ ಕುತ್ತಿಗೆಯನ್ನು ಹಿಸುಕಿ ಅದನ್ನು ಕೊಂದಳೆಂದೂ, ಆವಳು ಈಗ ಗೋಣಿಕೊಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವಳೆಂದೂ ವರ್ತಮಾನ.

ಹಿಂದೂದೇಶ.

ತಿರುವಾಂಕೂರಿನ ಸ್ಟೇಟ್ ಕಾಂಗ್ರೆಸ್ ಮತ್ತು ಅಲ್ಲಿನ ಯುವಜನ ಸಂಘವನ್ನು ಸರಕಾರದವರು ಕಾನೂನು ವಿರುದ್ಧವೆಂದು ಸಾರಿದ್ದಾರೆ.

ಕಾಶಿ ಹಿಂದೂ ವಿಶ್ವ ವಿದ್ಯಾಲಯದ ಸುತ್ತು ಗೋಡೆ ಕಟ್ಟುವ ಉದ್ದೇಶ್ಯ ಬಲರಾಮಪುರದ ಮಹಾರಾಜರು 75000 ರೂಪಾಯಿಗಳ ದಾನ ಮಾಡಿರುವರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೀಟಿಂಗು ಈ ತಾ. 22 ರಲ್ಲಿಯೂ, ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮೀಟಿಂಗು ತಾ. 24 ರಲ್ಲಿಯೂ ಡೆಲ್ಲಿಯಲ್ಲಿ ಜರಗುವವೆಂದು ವಾರ್ತೆ.

ಬಂಗಾಳದ ಕಾಂಗ್ರೆಸ್ ಪಾರ್ಟಿ ಮತ್ತು ಬಂಗಾಳದ ಕಾಂಗ್ರೆಸ್ ಎಸೆಂಬ್ಲಿ ಪಾರ್ಟಿ ಇವೆರಡೂ ಒಂದಾಗಿ, ಅದಕ್ಕೆ 'ಬಂಗಾಳ ಕಾಂಗ್ರೆಸ್ ಪಾರ್ಲಿಮೆಂಟರಿ ಪಾರ್ಟಿ' ಎಂಬ ನಾಮಕರಣವಾಗಿದೆ. ಇದರ ಅಧ್ಯಕ್ಷರು ಶ್ರೀ ಶರಚ್ಚಂದ್ರ ಬೋಸರವರು.

ಬಂಗಾಳ ಮಂತ್ರಿ ಮಂಡಲದಲ್ಲಿ ನಾ. ಹಕ್ಕರವರ ಮನೆಯಲ್ಲಿ ಮಂತ್ರಿಮಂಡಲದ ಸಭೆ ನಡೆದು ಈಗಿರುವ ಮಂತ್ರಿಗಳಲ್ಲಿ ಇಬ್ಬರು ಹಿಂದೂಗಳು ಮತ್ತು ಒಬ್ಬ ಮುಸಲ್ಮಾನ ಹೀಗೆ ಮಂತ್ರಿಗಳು ಹೊರಗೆ ಹೋಗಬೇಕೆಂದು ನಿಶ್ಚಯಿಸಲಾಯಿತೆಂದು ಸುದ್ದಿ.

ಇಷ್ಟ ಬಂದಾಗ ತಮ್ಮ ಡೈರಿಯನ್ನು ಬರೆದು ಅನೇಕ ಅಚಾತುರ್ಯಗಳಿಗೆ ಅವಕಾಶ ಕೊಡುತ್ತಿರುವ ಪೋಲೀಸರ ನೀತಿಯನ್ನು ಖಂಡಿಸಿ, ಮಧ್ಯಪ್ರಾಂತ್ಯದ ಪ್ರಧಾನರು ಇನ್ನು ಮುಂದೆ ಪೋಲೀಸರು, ತಮ್ಮ ಡೈರಿಯನ್ನು ಪ್ರತಿನಿತ್ಯವೂ ಬರೆದು ಒಪ್ಪಿಸಬೇಕೆಂದು ಅಪ್ಪಣೆ ಹೊರಡಿಸಿರುವರು

ರಾಷ್ಟ್ರಪತಿಗಳಾದ ಸುಭಾಷಚಂದ್ರ ಬೋಸರು ಸೆಪ್ಟಂಬರ್ 2 ರಲ್ಲಿ ಮದ್ರಾಸಿಗೆ ತಮ್ಮ ದಕ್ಷಿಣ ಭಾರತ ಪ್ರಯಾಣಾರ್ಥವಾಗಿ ಬರುವರೆಂದೂ ಅವರು ತಮಿಳುನಾಡು, ಕೊಚಿನ್, ಮೈಸೂರು ಮತ್ತು ಟ್ರಾವಂಕೂರ್ ಸಂಸ್ಥಾನಗಳಿಗೆ ಸಂದರ್ಶನವೀಯುವರೆಂದೂ, ಒಟ್ಟು ಮೂರುವಾರ ಅವರು ದಕ್ಷಿಣ ಭಾರತ ಪ್ರವಾಸ ಮಾಡುವರೆಂದೂ ತಿಳಿಯ ಬಂದಿದೆ.

ತ್ರಿಚೂರಿನ ನಾಲ್ಕು ಮಂದಿ ಇಂಟರ್‌ಮೀಡಿಯೇಟ್ ಕಲಿಯುವ ಹರಿಜನ ವಿದ್ಯಾರ್ಥಿಗಳು ತಮಗೆ ಸ್ಟೈಪೆಂಡ್ ಕೊಡಬೇಕೆಂದು ಎರ್ನಾಕುಳಂನಲ್ಲಿ ಮಂತ್ರಿಗಳ ಮನೆಯೆದುರು ನಿರಶನ ವ್ರತ ಕೈಕೊಂಡಿದ್ದಾರೆ. ಸಹಾಯ ಮಾಡಲು ಸಾಧ್ಯವಿಲ್ಲವೆಂದ ಮಂತ್ರಿಗಳ ಮಾತನ್ನು ಕೇಳದೆ ಸತ್ಯಾಗ್ರಹ ನಡೆಸುತ್ತಲೇ ಇದ್ದಾರೆ. ಈ ವಿಚಾರ ಮಂತ್ರಿಗಳಿಂದ ಯೋಚಿಸಲ್ಪಡುತ್ತಿದೆ.

ಮಧ್ಯಪ್ರಾಂತದ ಪ್ರಧಾನರಾದ ನಾ. ರವಿಶಂಕರ ಶುಕ್ಲರು ಡಾ. ಖರೆಯವರ್ ಕಾಂಗ್ರೆಸ್ ಶಿಸ್ತಿಗೆ ಭಂಗ ತಂದು ಕಾಂಗ್ರೆಸ್ಸಿಗೆ ಕಪ್ಪು ಚುಕ್ಕೆಯು ಎತ್ತಿಸಿದರೆಂದೂ ಮತ್ತು ಈಗ ತಮ್ಮ ಮೇಲೆ ನಿರಾಧಾರವಾದ ತಪ್ಪು ಆಕ್ಷೇಪಣೆ ಹೊರಿಸುತ್ತಿರುವರೆಂದೂ, ಒಂದುವೇಳೆ ನಮ್ಮ ತಪ್ಪನ್ನು ಸಿದ್ಧಪಡಿಸಿದರೆ ನಾವು ರಾಜೀನಾಮೆ ಕೊಡಲು ಸಿದ್ಧರಿರುವೆವೆಂದೂ ನಾಗಪುರದ ಒಂದು ಸಭೆಯಲ್ಲಿ ಭಾಷಣಮಾಡುತ್ತಾ ಹೇಳಿದರು.

ಮದ್ರಾಸ್ ಬಸ್ ಮಾಲಕರಿಗೂ ಡ್ರೈವರಿಗೂ ಸಂಬಳ, ಕೆಲಸದ ತಾಸು ಮುಂತಾದುವುಗಳ ವಿಚಾರದಲ್ಲಿ, ಬಹಳ ಕಾಲದಿಂದ ಮನಸ್ತಾಪವಿದ್ದು, ಅಪ್ರಯುಕ್ತ ಸಂಘಾನದ ಪಂಚಾಯತಿಗಳು ನಡೆಯುತ್ತಿದ್ದಂತೆ ಕಳೆದ ವಾರ ಒಂದೇ ಬಾರಿಗೆ 188 ಬಸ್ಸುಗಳು ಮಧ್ಯಾಹ್ನಕ್ಕೆ ಸರಿಯಾಗಿ ಅಲ್ಲಲ್ಲೇ ನಿಂತುಬಿಟ್ಟವು. ಡ್ರೈವರರು, ಕಂಡಕ್ಟರುಗಳೇ ಮೊದಲಾಗಿ 700 ಮಂದಿ ಮುಷ್ಕರ ಹೂಡಿ ಈಗ ಅದು ಮುಗಿದಿದೆ.

ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿಯು ದೆಸೆಯಿಂದ ತಮ್ಮ ಗಾರ್ಡಿಯನ್ ಎಶ್ಯೂರೆನ್ಸ್ ಕಂಪೆನಿಗೆ ಬಹಳ ನಷ್ಟವಿದೆಯೆಂದೂ, ತೊಂದರೆ ಇದೆಯೆಂದೂ ಆ ಕಂಪೆನಿಯವರು ಒಂದು ದಾವೆ ಹೂಡಿದ್ದರು. ಇದರ ಪರಿಣಾಮವಾಗಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಸಂಸ್ಥೆಯವರು, ಇನ್ನು ಮುಂದೆ ತಮ್ಮ ಸಂಸ್ಥೆಯ ಹಿಂದೆ 'ನ್ಯೂ' ಎಂಬುದನ್ನು ಸೇರಿಕೊಳ್ಳುವೆವೆಂದು ರಾಜಿಯಿಂದ ಒಪ್ಪಿದಂತೆ ಹಾಗೆ ತೀರ್ಮಾನವಾಗಿದೆ

ತಿರುವಾಂಕೂರು ನೇಶನಲ್ ಮತ್ತು ಕ್ವಿಲಾನ್ ಬ್ಯಾಂಕಿನ ಪೊಲ್ಲಾಚಿ ಶಾಖೆಯ ಏಜೆಂಟ್ ಟಿ. ಎಂ. ಕೊಳಂದಸ್ವಾಮಿ ಪಿಳ್ಳೆ, ಅಕೌಂಟೆಂಟ್ ವಿ. ಕುರಿಯನ್, ಕ್ಯಾಶಿಯರ್ ಎ ಗೋವಿಂದಪಿಳ್ಳೆ ಈ ಮೂವರೂ ಆ ಬ್ಯಾಂಕಿನ ಪಾಲ್ಘಾಟ್ ಶಾಖೆಯ ಏಜೆಂಟ್ ಸಿ. ಕೆ. ಕೆ. ಮೇನನ್ ರವರೊಡನೆ ಸೇರಿಕೊಂಡು ಜುಲೈ ತಾ. 2 ರಲ್ಲಿ ಪೊಲ್ಲಾಚಿ ಬ್ಯಾಂಕಿನ ಲೆಕ್ಕಪತ್ರಗಳನ್ನೆಲ್ಲಾ ತಿದ್ದಿ ನಂಬಿಕೆದ್ರೋಹ ಮಾಡಿ 11,000 ರೂಪಾಯಿಗಳನ್ನು ದುರುಪಯೋಗಪಡಿಸಿಕೊಂಡಿರುತ್ತಾರೆಂಬ ಆಪಾದನೆಯ ಮೇಲೆ ಆ ನಾಲ್ವರನ್ನೂ ದಸ್ತಗಿರಿ ಮಾಡಿರುತ್ತಾರೆ. ಈಚೆಗೆ ಮಿ. ಮೇನನ್ ರವರನ್ನು ಜಾಮೀನ್ ಮೇಲೆ ಬಿಡುಗಡೆ ಮಾಡಿರುತ್ತಾರೆಂದು ತಿಳಿದು ಬಂದಿದೆ.

ವಿದೇಶ

ನಾಲ್ಕನೇ ಶತಮಾನದ ಆದಿಯಲ್ಲಿ ಆರಂಭವಾಗಿ ಮರದ ಅಕ್ಷರಗಳಲ್ಲಿ ಇದುವರೆಗೂ ಮುದ್ರಿಸಲ್ಪಡುತ್ತಿದ್ದು, ಇದಾಗಲೇ ತನ್ನ ಜೀವನದಲ್ಲಿ ಸಾವಿರಕ್ಕಿಂತ ಮೇಲ್ಪಟ್ಟ ಸಂಪಾದಕರುಗಳ ಜೀವನವನ್ನೂ, ಮರಣವನ್ನೂ ಕಂಡ 'ಪೀಪಿಂಗ್ ಬೂ' ಎಂಬ ಚೀನೀ ವೃತ್ತ ಪತ್ರಿಕೆಯೊಂದು ಈಗ ಸಂಪೂರ್ಣವಾಗಿ ಜಪಾನಿಯರಿಂದ ನಿಲ್ಲಿಸಲ್ಪಟ್ಟು ಮುಂದೆ ಅದು ಎಂದೂ ತಲೆ ಎತ್ತದಂತಾಗಿದೆ. ಇದರ ಸಂಪಾದಕರಾಗಿದ್ದ ಪ್ರತಿಯೊಬ್ಬರೂ ಕೊಲ್ಲಲ್ಪಟ್ಟವರೇ ಹೊರತು ತಾವಾಗಿ ಸತ್ತವರಲ್ಲ.

ಡಿಸ್ಟ್ರಿಕ್ಟ್ ಬೋರ್ಡಿನ ಡೆಪ್ಯುಟೇಶನ್.

ಸರ್ಕಾರದವರು ಕೊಡಗು ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡುತ್ತಿರುವ ಗ್ರ್ಯಾಂಟಿನಲ್ಲಿ ಏಳು ಸಾವಿರ ರೂಪಾಯಿ ಕಡಿಮೆ ಮಾಡುವ ಸಂಭವವನ್ನು ಕುರಿತು ಮಾತಾಡಲಿಕ್ಕಾಗಿ ಡಿಸ್ಟ್ರಿಕ್ಟ್ ಬೋರ್ಡಿನ ಪರ ಮಿ. ಗರದ ಪಿ. ಐ. ಬೆಳ್ಯಪ್ಪನವರು (ಅಧ್ಯಕ್ಷರು) ಯಸ್. ಯನ್. ರಾಮಶೆಟ್ಟಿಯವರು ಮತ್ತು ಮುಂಡೇಪಂಡ ಸೋಮಯ್ಯನವರು-ಈ ಮೂರು ಮೆಂಬರುಗಳು ತಾ. 29-8-38 ರಲ್ಲಿ ಮಧ್ಯಾಹ್ನ 2½ ಗಂಟೆಗೆ ಮಡಿಕೇರಿ 'ಬೋವರ್' ಬಂಗ್ಲೆಯಲ್ಲಿ ಚೀಫ್ ಕಮಿಷನರವರಲ್ಲಿಗೆ ಡೆಪ್ಯುಟೇಶನ್ ಹೋಗಿದ್ದರು. ಅಲ್ಲಿ ಕಮಿಷನರವರೂ ಹಾಜರಿದ್ದರು. ಸುಮಾರು 1½ ಗಂಟೆ ಕಾಲ ಸಂಭಾಷಣೆ ನಡೆಯಿತು.

ಹಣದ ಅಭಾವದಿಂದ ಸರ್ಕಾರ ಇಲಾಖೆಗಳ ಖರ್ಚಿನಲ್ಲಿಯೂ ಖೋತಮಾಡುತ್ತಿರುವುದರಿಂದ, ಬೋರ್ಡಿಗೆ ಕೊಡುವ ಗ್ರ್ಯಾಂಟನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಬೇಕಾಗಿದೆಯೆಂದೂ, ಬೋರ್ಡಿನವರೂ ತಮ್ಮ ಖರ್ಚನ್ನು ಸ್ವಲ್ಪ ಮಟ್ಟಿಗೆ ಖೋತ ಮಾಡುವುದು ಅವಶ್ಯವೆಂದೂ ಮೊದಲಾಗಿ ಚೀಫ್ ಕಮಿಷನರು ಹೇಳಿದರು.

'ಬೋರ್ಡಿನಲ್ಲಿ ಸಿಬ್ಬಂದಿ ಖರ್ಚು ಬಹಳ ಕಡಿಮೆ. ಖರ್ಚು ಖೋತ ಮಾಡುವದೆಂದರೆ ಶಾಲೆ, ಆಸ್ಪತ್ರೆ ಮತ್ತು ಗ್ರಾಮಾಂತರ ರಸ್ತೆಗಳನ್ನು ಮುಚ್ಚಬೇಕಾಗುತ್ತೆ; ಹೀಗೆ ಮಾಡಿದರೆ ಬೋರ್ಡಿನ ಇರುವಿಕೆಯು ನಿಷ್ಪ್ರಯೋಜನವಾಗುವುದು. ಸರ್ಕಾರದವರು ನ್ಯಾಯವಾಗಿಯೂ ಬೋರ್ಡಿಗೆ ಇನ್ನೂ ಹೆಚ್ಚಿನ ಗ್ರ್ಯಾಂಟು ಕೊಡಬೇಕಾಗಿದೆ. ಬೋರ್ಡಿನ ಕೆಲಸಗಳನ್ನು ಕಡಿಮೆ ಮಾಡಿದರೆ ಜನರಲ್ಲಿ ತುಂಬಾ ಅತೃಪ್ತಿ ಉಂಟಾಗುವುದು' ಎಂದು ಮುಂತಾಗಿ ಡೆಪ್ಯುಟೇಶನಿನವರು ಒತ್ತಿ ಹೇಳಿದರು.

ಕಡೆಗೆ ಚೀಫ್ ಕಮಿಷನರವರು—ಬೋರ್ಡಿನ ಖರ್ಚನ್ನು ಎಷ್ಟರ ಮಟ್ಟಿಗೆ ಕಡಿಮೆ ಮಾಡಬಹುದೆಂಬದನ್ನು ಆಜಮಾಯಿಸಲು ಒಂದು ಕಮಿಟಿ ನೇಮಿಸುವುದು ಉತ್ತಮವು. ನಂತರ ಬಾಕಿ ವಿಚಾರ ಆಲೋಚಿಸಬಹುದೆಂದು ಹೇಳಿ ಅಂತ್ಯಗೊಳಿಸಿದರು.

ದೇವದತ್ತ.

ಸಾಮಾಜಿಕ ಕಾದಂಬರಿ.

ಅಧ್ಯಾಯ ೨.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು.)

ಈಗಾಗಲೇ ಪರಿಚಿತರಾದ ನಮ್ಮ ಕಥಾನಾಯಕರ ಪೂರ್ವ ಚರಿತ್ರೆಯ ವಿಷಯ ವಾಚಕರಿಗೆ ಯಾವ ಸಂಗತಿಯೂ ತಿಳಿದಿರುವುದಿಲ್ಲವಾದ ಕಾರಣ, ವಾಚಕರ ಉಪಯೋಗಾರ್ಥವಾಗಿ ಅವರ ವಂಶ ವೃಕ್ಷವನ್ನೂ ಸ್ವಲ್ಪ ಮಟ್ಟಿಗೆ ಇಲ್ಲಿ ವಿವರಿಸುವುದು ಯುಕ್ತವಾಗಿದೆ.

ದೇವದತ್ತ, ಚಾರುದತ್ತ ಇವರಿಬ್ಬರೂ ಒಂದೇ ಮನೆತನಕ್ಕೆ ಸೇರಿದ ಯುವಕರು. ಮೂರನೆಯವನಾದ ರಮೇಶನು ಚಾರುದತ್ತನ ಸೋದರತ್ತೆಯ ಮಗನು. ಆತನ ಸ್ವಂತ ಮನೆಯು ಪಾಠಶಾಲೆಗೆ ಬಹು ದೂರದಲ್ಲಿದ್ದುದರಿಂದ ಅವನು ಚಾರುದತ್ತನ ಮನೆಯಿಂದಲೇ ಶಾಲೆಗೆ ಹೋಗುವ ಹಾಗೆ ಏರ್ಪಡಿಸಿದ್ದರು.

ದತ್ತ ಯುವಕರ ಪೂರ್ವದ ಮುತ್ತಜ್ಜನು ಒಬ್ಬನೇ ಆಗಿದ್ದರೂ ನಮ್ಮ ಕಥಾರಂಭದ ಸಮಯದಲ್ಲಿ ಈ ವಂಶದಲ್ಲಿ ಎರಡು ಮೂರು ಶಾಖೆಗಳಿದ್ದವು. ಈ ಇಬ್ಬರು ಯುವಕರು ಒಂದೊಂದು ಶಾಖೆಯವರಾಗಿದ್ದರು.

ದೇವದತ್ತನ ಶಾಖೆಯು ಅಷ್ಟೊಂದು ಜನಭರಿತವಾಗಿರಲಿಲ್ಲ. ಆತನ ಶಾಖೆಯೆಲ್ಲಾರೂ ಸರ್ಕಾರಿ ನೌಕರಿಯನ್ನು ಕೈಕೊಂಡಿರಲಿಲ್ಲ. ಆತನ ಮುತ್ತಜ್ಜ ಮತ್ತು ತಂದೆ ಇವರು ಸುಗುಣಶಾಲಿಗಳಾಗಿ ಬಹು ವೃದ್ಧಾಪ್ಯದಲ್ಲೇ ಇಹಲೋಕವ್ಯಾಪಾರವನ್ನು ಮುಕ್ತಾಯ ಮಾಡಿದರಾದರೂ ಸಹ ಅವರ ಜೀವನ ಚರಿತ್ರೆಯೂ ಅವರೊಡನೆ ಅಳಿದು ಹೋಯಿತು. ಅವರ ಕೆಲವು ಆಪ್ತರಿಗೂ, ಬಂಧು ಮಿತ್ರರಿಗೂ, ಅವರ ಹೆಚ್ಚಿನ ವಿಷಯ ಗೊತ್ತಿತ್ತೇ ಹೊರತು ದೇಶದಲ್ಲಿ ಇತರರಿಗೆ ಅವರ ಹೆಚ್ಚಿನ ಪರಿಚಿತಿ ಇರಲಿಲ್ಲ.

ಅವರು ಐಶ್ವರ್ಯದಲ್ಲಿ ಒಬ್ಬರಿಗೆ ಕೊಡುವಷ್ಟು ಅನುಕೂಲಸ್ಥರೂ ಆಗಿರಲಿಲ್ಲ. ಒಬ್ಬರಿಂದ ಬೇಡಿ ಜೀವಿಸುವಷ್ಟು ಬಡವರೂ ಆಗಿರಲಿಲ್ಲ.

ಆಧುನಿಕ ಕಾಲದ ಪರ್ಯಾಯವೇ ಪ್ರಕಾರ ಬಿ. ಎ. ಯಂ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದವರನ್ನೂ ಅಥವಾ ಇಂಗ್ಲಿಷ್ ವಿದ್ಯೆ ಕಲಿತು ಸರಕಾರಿ ನೌಕರಿಯಲ್ಲಿರುವವನನ್ನೂ ಮಾತ್ರ ವಿದ್ಯಾವಂತರೆಂದು ಕರೆಯುವುದಾದರೆ ದೇವದತ್ತನ ಪೂರ್ವಿಕರಿಗೆ ಈ ಬಿರುದುಗಳೆಂದೂ ದೊರಕುತ್ತಿರಲಿಲ್ಲ. ಇಂಗ್ಲಿಷ್ ಭಾಷೆಯಲ್ಲಿ ಇವನ ಪೂರ್ವಜರೆಲ್ಲಾ ಮೂಢರೇ ಆಗಿದ್ದರು.

ದೇವದತ್ತನ ತಾಯಿಗೆ ಓದು ಬರಹಗಳೇನೂ ಬರುತ್ತಿರಲಿಲ್ಲವಾದರೂ ಪುರಾಣಗಳಲ್ಲಿ ಅಡಕವಾಗಿರುವ ಪ್ರತಿಯೊಂದು ಕಥೆಯೂ ಆವಳಿಗೆ ಬಾಯಿಪಾಠ ಬರುತ್ತಿತ್ತು. ಯಾವುದನ್ನು ಕೇಳಿದರೂ ನಿರರ್ಗಳವಾಗಿ ಹೇಳುತ್ತಿದ್ದಳು. ಸೀತಾದೇವಿ, ಸಾವಿತ್ರಿ, ಅರುಂಧತಿ ಮೊದಲಾದ ಪತಿವ್ರತಾ ಶಿರೋಮಣಿಯರ ಕಥೆಗಳನ್ನು ಹೇಳುವುದೆಂದರೆ ಅವಳಿಗೆ ಅತೀ ಆನಂದ.

ಇಂಗ್ಲಿಷ್ ವಿದ್ಯೆಯು ಅವರಿಗೆ ಬರುತ್ತಿರಲಿಲ್ಲವಾದಕಾರಣ ಅವರು ಅಲ್ಲಿ ಇಂಗ್ಲಿಷ್ ವಿದ್ಯೆಯ ಅತ್ಯಾಚಾರಗಳಿಗೂ ತುತ್ತಾಗಿರಲಿಲ್ಲ. ಬೆಳಗ್ಗೆ ಕೋಳಿ ಕೂಗುತ್ತಲೇ ಎದ್ದು ಪೂರ್ವ ಪದ್ಧತಿ ಮೀರದೆ ಮನೆಯನ್ನು ಗುಡಿಸಿ, ಸಗಣಿನೀರು ಹಾಕಿ, ರಂಗವಲ್ಲಿಗಳನ್ನು ಚೆಲ್ಲಿ ಸಂಧ್ಯಾವಂದನೆಗಳನ್ನು ತಪ್ಪದೆ ನಡೆಸುತ್ತಿದ್ದರು. ಉಡಿಗೆ ತೊಡಿಗೆಗಳಲ್ಲಾ, ನಡೆನುಡಿಗಳಲ್ಲೂ ಅವರು ಹಿಂದೂ ಆಚಾರ ವಿಚಾರಗಳೇ ಬಹು ಮೇಲೆಂದು ಯೋಚಿಸಿ, ಅವನ್ನು ಬದಲಾಯಿಸಲು ಎಂದೂ ಇಚ್ಛಿಸಲಿಲ್ಲ. ಉಡಿಗೆಯಲ್ಲಿ ದೇಶಕ್ಕೆ ಅಲಂಕಾರಪ್ರಾಯಂತ ಹೆಜ್ಜಿನ ಬಟ್ಟೆಯನ್ನು ಕಟ್ಟುತ್ತಿದ್ದರು.

ಅವರ ನೆಂಟರಿಷ್ಟರೂ ಸ್ವಾಭಾವಿಕ ಇದೇ ನಡವಳಿಕೆಯವರಾಗಿದ್ದರು. ಅವರ್ಯಾರಾದರೂ ಮನೆಗೆ ಬಂದರೆ ಅವರವರಿಗೆ ಸರಿಯಾದ ಸತ್ಕಾರಗಳನ್ನು ಸಮಯೋಚಿತವಾಗಿ ಜರಗಿಸುತ್ತಿದ್ದರು. ರಾತ್ರಿ ಊಟವಾದ ಮೇಲೆ ವರ್ಷದ ಕೃಷಿಯ ವಿಷಯವಾಗಲೀ ಊರ ದೇವಸ್ಥಾನದ ಉತ್ಸವದ ವಿಷಯವಾಗಲೀ ಮಾತಾಡುತ್ತಿದ್ದರು. ಕೆಲವು ವೇಳೆ ದೇವದತ್ತನ ತಂದೆಯು ಹೆಂಗಸರಿಗೂ ಮಕ್ಕಳಿಗೂ ಪುರಾಣ ಶ್ರವಣ ಮಾಡಿಸುತ್ತಿದ್ದನು.

ರಾಜಕೀಯ ವಿಷಯಗಳಲ್ಲಿ ಅವರ ಪಕ್ಷವು ಇಷ್ಟೇ—ಕಲಿ ಒಗ್ಗಿಸಿ ಉಳುವವರಿಗೆ ಕಂದಾಯ ಕೊಡುವುದೆಂದೂ ತಪ್ಪುವುದಿಲ್ಲ—ಆದುದರಿಂದ ಯಾವ ರಾಜನು ಆಳುತ್ತಾನೆ, ಯಾವ ಪಂಗಡದವರು ಚುನಾವಣೆಯಲ್ಲಿ ಜಯಶೀಲರಾಗಿದ್ದಾರೆ ಎಂಬೀ ವಿಷಯಗಳು ಅವರ ಮನಸನ್ನೆಂದೂ ಬಾಧಿಸಲಿಲ್ಲ.

ನವೀನ ನಾಗರೀಕತೆಯಲ್ಲಿ ಅವರಿಗೆ ಅಷ್ಟೊಂದು ಅಭಿಮಾನವಾಗಲೀ, ತಿಳಿವಳಿಕೆಯಾಗಲೀ ಇರಲಿಲ್ಲ. ಅವರೆ ತಮ್ಮ ಮಕ್ಕಳನ್ನು ವಿದ್ಯಾವಂತರಾಗಿ ಮಾಡಿ ಸರಕಾರಿ ನೌಕರಿಯಲ್ಲಿ ಉನ್ನತ ಪದವಿಗೆ ಏರಿಸಬೇಕೆಂಬ ಉತ್ಸಾಹವಿಲ್ಲ. ದೇವದತ್ತನ ತಂದೆಗೆ ತುಂಬಾ ಇತ್ತು. ಇಷ್ಟಕ್ಕೋಸ್ಕರ ತನ್ನ ಪಿತ್ರಾರ್ಜಿತ ಜಮೀನೆಲ್ಲಾ ಮಾರಿಹೋದರೂ ಚಿಂತೆಯಿಲ್ಲ. ಇಂಗ್ಲಿಷ್ ವಿದ್ಯೆಯನ್ನು ಮಾತ್ರ ಅವರು [illegible] ನ್ನುವ ವರೆಗೆ ನಿಲ್ಲಿಸುವುದಿಲ್ಲ' ಎಂಬುದಾಗಿ ಅನೇಕ ವೇಳೆ ತನ್ನ ನೆಂಟರಿಷ್ಟರೆದುರಿನಲ್ಲಿ ಗುರುದತ್ತನು ಹೇಳುತ್ತಿದ್ದನು.

ದೇವದತ್ತನ ತಂದೆಗೆ ಇಬ್ಬರು ಪುತ್ರರು, ಹಿರಿಯವನ ಹೆಸರು ಸೋಮದತ್ತ. ಇವನು ಸಾಧು ಗುಣದವನು. ಹಿರಿಯರಲ್ಲಿ ಬಹು ಭಕ್ತಿ. ಕಿರಿಯರಲ್ಲಿ ಬಹು ಪ್ರೀತಿ. ವಿದ್ಯಾರ್ಜನೆಯಲ್ಲಿ ಅಷ್ಟು ಚುರುಕಾಗಿರಲಿಲ್ಲ. ಗಣಿತ ಶಾಸ್ತ್ರವು ಇವನ ಆಜನ್ಮ ಶತ್ರುವು. ಹಾಗೂ ಹೀಗೂ ಆರನೇ ತರಗತಿಗೆ ಬಂದನು. ಆವರೆ ಆ ಸಮಯದಲ್ಲಿ ತನ್ನ ತಂದೆಯು ಕಾಲಾಂತರವನ್ನೈದುದರಿಂದ ಅವನ ವಿದ್ಯಾಭ್ಯಾಸವು ಅಲ್ಲಿಗೆ ಕೊನೆಗೊಂಡಿತು.

ನಮ್ಮ ಕಥಾನಾಯಕನಾದ ದೇವದತ್ತನೇ ಗುರುದತ್ತನ ಎರಡನೇ ಮಗನು. ತಂದೆಗೆ ಇವನ ಮೇಲೆ ಬಹು ವಾತ್ಸಲ್ಯ. ಹುಟ್ಟುವಾಗಲೇ ಅವನ ಮೈಕಟ್ಟು ಮುಂದಕ್ಕೆ ಇವನು ಒಳ್ಳೆಯ ದೃಢಾಂಗನಾಗುವನೆಂಬ ಕುರುಹನ್ನು ಸೂಚಿಸುವಂತಿತ್ತು. ಹುಬ್ಬಿನ ಮೇಲಿನ ಅದೊಂದು ರೇಖೆಯು ಇವನ ಮುಂದಿನ ಅಭಿವೃದ್ಧಿಯನ್ನು ಮುಂಗಾಣಿಸುವಂತಿತ್ತು. ಪ್ರಾಯವು ಮುಂದುವರಿದ ಹಾಗೆ ಈ ಅಬಾಲ್ಯ ಲಕ್ಷಣಗಳು ಹೆಚ್ಚು ಹೆಚ್ಚಾಗ ತೊಡಗಿದವು. ಅವನ ಹರ್ಷಯುಕ್ತವಾದ ಮುಖವೂ, ತೀಕ್ಷ್ಣವಾದ ಕಣ್ಣುಗಳೂ, ಅಕಲ್ಮಷವಾದ ಮಂದಹಾಸವೂ ತನ್ನ ಗೆಳೆಯರ ಮನಸನ್ನೆಲ್ಲಾ ಸೂರೆಗೊಳಿಸುತ್ತಿತ್ತಾದರೂ, ಅವನ ನಡತೆಯಲ್ಲಿ ಮಾತ್ರ ನಿಗೂಢವಾಗಿದ್ದ ಅದೊಂದು ತರಹದ ಗಂಭೀರತ್ವವು, ಇವನ ಮಿತ್ರರನ್ನಾಗಲೀ, ಇತರರನ್ನಾಗಲೀ, ತನ್ನೆದುರಿನಲ್ಲಿ ಮೇರೆ ಮೀರಿ ಮಾತಾಡದಂತೆಯೂ, ವರ್ತಿಸದಂತೆಯೂ ತಡೆಯುತಿತ್ತು. ಇವನ ಆಪ್ತ ಮಿತ್ರರೂ ಸಹ ಇವನೆದುರಿನಲ್ಲಿ ಕಂಡಾಬಟ್ಟೆ ಮಾತಾಡಲು ಹಿಂಜರಿಯುತ್ತಿದ್ದರು. ಇವನ ಶಾಲಾ ಗೆಳೆಯರು ಏನಾದರೂ ಅಸಭ್ಯವಾದ ಮಾತಾಡುತ್ತಿರುವಾಗ್ಯೆ ದೇವದತ್ತನು ಅಕಸ್ಮಾತಾಗಿ ಅಲ್ಲಿಗೆ ಬಂದನೆಂದರೆ ಅವರ ಮಾತುಗಳೇ ನಿಂತು ಹೋಗುವುವು. ಆದರೆ ದೇವದತ್ತನು ಮಾತ್ರ ತನ್ನ ಈ ತರದ ಮಹತ್ವಕ್ಕೆ ಹೆಮ್ಮೆಪಟ್ಟು ಆ ದೊಡ್ಡಸ್ತಿಕೆಯನ್ನು ಸ್ಥಿರವಾಗಿಟ್ಟುಕೊಳ್ಳಬೇಕೆಂಬ ಕಾಂಕ್ಷೆಯಿಂದ ಎಂದೂ ವರ್ತಿಸುತ್ತಿರಲಿಲ್ಲ. [illegible] ಯೂ, ಸರಳವಾಗಿಯೂ, ಪ್ರೀತಿ [illegible] ನಾಗಿಯೂ ವರ್ತಿಸುತ್ತಿದ್ದನು. [illegible] ರಲಿಲ್ಲ, ಗುರುಗಳಲ್ಲಿ [illegible] ಸ್ನೇಹಿತನು.

[illegible] ಶಾಲೆಯಲ್ಲಿ ತನ್ನ ತರಗತಿಯಲ್ಲಿ ಪ್ರಥಮ ಸ್ಥಾನವನ್ನು [illegible] ದಲ್ಲಿ ಇದೊಂದು [illegible] ಸ್ವಭಾವ. ಒಳ್ಳೆಯ ಜ್ಞಾನ ಶಕ್ತಿ ಇರತಕ್ಕ ವಿದ್ಯಾರ್ಥಿಗಳು ಪ್ರಾಯಶಃ ಮನಸಿಟ್ಟು ಕೆಲಸ ಮಾಡತಕ್ಕವರಾಗಿರುವುದಿಲ್ಲ. ಈ ಲೋಪವು ದೇವದತ್ತನಲ್ಲೂ ದ್ವಿಗುಣಪ್ರಾಯವಾಗಿ ಎಳೆ ವಯಸಿನಲ್ಲಿ ಕಂಡು ಬರುತ್ತಿದ್ದಿತ್ತಾದರೂ ಪ್ರಾಯವು ಮೀರಿದ ಮೇಲೆ ಅವನ ಮುಂದಿನ ಮಹಾ ಕಾಂಕ್ಷೆಯು ಅವನ ಸೋಮಾರಿತನವನ್ನು ನಿರ್ಮೂಲ ಮಾಡಿತು.

ಶಾಲೆಯಲ್ಲಿ ಪ್ರತಿಯೊಬ್ಬ ಉಪಾಧ್ಯಾಯನಿಗೂ ಆತನಲ್ಲಿ ಬಹು ಪ್ರೇಮವಿತ್ತು. ವಾಡಿಕೆಯಾಗಿ ಪ್ರತಿಭಾಶಾಲಿಗಳಾದ ವಿದ್ಯಾರ್ಥಿಗಳು ಉಪಾಧ್ಯಾಯರಿಗೆ ಅವಿಧೇಯರಾಗಿರುವುದು ಸಹಜವಾದ ಸಂಗತಿಯಾಗಿದೆ. ಆದರೆ ದೇವದತ್ತನು ಮಾತ್ರ ಗುರುಹಿರಿಯರಲ್ಲಿ ಭಕ್ತಿಯುಳ್ಳವನೂ, ಮಿತ್ರರಲ್ಲಿ ಅಸಾಧಾರಣವಾದ ಪ್ರೇಮವುಳ್ಳವನೂ ಆಗಿದ್ದನು.

ಶಾಲೆಯಲ್ಲಿ ಯಾವನು ತನ್ನ ವಿದ್ಯಾ ಚಾತುರ್ಯದಿಂದ ಉಪಾಧ್ಯಾಯರ ಪ್ರೀತಿಗೆ ಸಂಪೂರ್ಣ ಪಾತ್ರನಾಗಿರುತ್ತಾನೋ ಅಂತವನು ಮಂದಬುದ್ಧಿಯ ಸೋಮಾರಿಗಳಾದ ಹುಡುಗರ ದ್ವೇಷಕ್ಕೂ ಪಾತ್ರನಾಗಿರುತ್ತಾನೆ. ಇದಲ್ಲದೆ ಪ್ರತಿಭೆಯೂ, ಮತ್ಸರವೂ, ಕೆಲವು ವಿದ್ಯಾರ್ಥಿಗಳಲ್ಲಿ ಅವಳಿಜವಳಿ ಮಕ್ಕಳಂತಿರುವವು. ಆದ್ದರಿಂದ ಅನೇಕ ಪ್ರತಿಭಾಶಾಲಿಗಳು ತಮಗೆ ತಿಳಿದಿರುವ ಸಂಗತಿಗಳನ್ನು ತಮ್ಮ ಮಿತ್ರರಿಗೆ ತಿಳಿಸಲು ಮನಸ್ಕರಾಗದೆ ಇತರರಿಂದ ದೂಷಿಸಲ್ಪಡುತ್ತಾರೆ. ಆದರೆ ದೇವದತ್ತನ ಸ್ವಭಾವದಲ್ಲಿ ಈ ದೋಷಗಳು ಕಂಡು ಬರುತ್ತಿರಲಿಲ್ಲ. ಅವನು ತನಗೆ ಗೊತ್ತಿದ್ದ ಸಕಲ ಸಂಗತಿಯನ್ನೂ ಕೇಳಿದವರಿಗೆಲ್ಲಾ ಮನಃಪೂರ್ವಕವಾಗಿ ಹೇಳಿ ಕೊಡುತ್ತಿದ್ದನು. ಆದರೂ ಇವನಿಗೆ ಶಾಲೆಯಲ್ಲಿ ಶತ್ರುಗಳಿಲ್ಲದೆ ಇರಲಿಲ್ಲ. ಯಾರೂ ಇವನನ್ನು ಬಹಿರಂಗವಾಗಿ ದೂಷಿಸುತ್ತಿರಲಿಲ್ಲವಾದರೂ ಅಂತರಂಗದಲ್ಲಿ ಅವನನ್ನು ಹಳಿಯುತ್ತಿದ್ದವರು ಕೆಲವರಿದ್ದರು. ಈ ತರದ ದ್ವೇಷಕ್ಕೆ ಅಂಥಾ ವಿದ್ಯಾರ್ಥಿಗಳ ಹುಟ್ಟು ದಡ್ಡತನ, ಕೆಲವು ಉಪಾಧ್ಯಾಯರ ಮೇಲೆ ಅವರಿಗಿದ್ದ ದ್ವೇಷ, ಮತ್ತು ಆ ಉಪಾಧ್ಯಾಯರಿಗೆ ದೇವದತ್ತನ ಮೇಲಿದ್ದ ಅತ್ಯಧಿಕವಾದ ಆದರಗಳೇ ಕಾರಣಗಳಾಗಿದ್ದವು.

ಈ ತರದ ಅಸಾಧಾರಣ ಗುಣಗಳಿಗೆ ದೇವದತ್ತನ ತಂದೆ ತಾಯಿಗಳ ಜಾಗರೂಕತೆಯೂ, ಎಳೆ ವಯಸಿನ ತನ್ನ [illegible] ಆದ ಸ್ಥಿತಿಗತಿಗಳೂ ಕಾರಣಗಳಾಗಿದ್ದವು. ಹುಟ್ಟಿದ ತನ್ನ ಸಾಧು ಸಜ್ಜನರಾದ ತಂದೆ ತಾಯಿಗಳ [illegible]

ದೇವದತ್ತನ [illegible] ದಿಂದ ನಮ್ಮ ಎರಡನೇ ನಾಯಕನಾದ ಚಾರುದತ್ತನ ವಿಷಯ ಸ್ವಲ್ಪ ತಿಳಿಸುವುದು ಯುಕ್ತ.

ಚಾರುದತ್ತನ ಅಜ್ಜನೂ, ಅವನ ನಂತರ ಚಾರುದತ್ತನ ತಂದೆಯೂ ಸಣ್ಣ ಸರಕಾರಿ ನೌಕರರಾಗಿದ್ದರು. ಆ ಸಮಯದಲ್ಲಿ ಒಂದು ಸಣ್ಣ ಉದ್ಯೋಗಸ್ಥನೆಂದೆನ್ನಿಸಿಕೊಂಡರೆ ಗ್ರಾಮಗಳಲ್ಲಿ ಅವನಿಗೆ ಸಾವಿರ ಎಕ್ರೆ ಜಮೀನ್ದಾರನಿಗಿಂತಲೂ ಹೆಚ್ಚಾದ ಸನ್ಮಾನವು ದೊರಕುತ್ತಿತ್ತು. ಈ ನೌಕರರು ಸಹ ತಮ್ಮ ಸ್ಥಿತಿಯು ಬಹು ಮಹತ್ತರವಾದದೆಂದೇ ತಿಳಿದೂ ಇದ್ದರು.

ಇವನ ಶಾಖೆಯವರಿಗೆಲ್ಲಾ ಸ್ವಲ್ಪ ಮಟ್ಟಿಗೆ ಇಂಗ್ಲಿಷ್ ವಿದ್ಯೆಯು ಬರುತ್ತಿತ್ತು. ಇಂಗ್ಲಿಷ್ ಕಲಿತು ಸರಕಾರಿ ನೌಕರಿಯನ್ನು ಕೈಕೊಳ್ಳುವವರು ಪ್ರಾಯಶಃ ಇಂಗ್ಲಿಷ್ ಕಲಿತ ಹುಡುಗಿಯರನ್ನೇ ಲಗ್ನ ಮಾಡಿಕೊಳ್ಳುವಂತೆ, ಚಾರುದತ್ತನ ತಂದೆಯೂ ಒಬ್ಬ ಕಾನ್ವೆಂಟಿನಲ್ಲಿ ತರಬೇತು ಹೊಂದಿದ ಯುವತಿಯನ್ನೇ ಮದುವೆಯಾಗಿದ್ದನು. ಚಾರುದತ್ತನ ಮಾತಾಪಿತೃಗಳಿಬ್ಬರೂ ವಿದ್ಯೆಯಲ್ಲೂ, ನಡವಳಿಕೆಯಲ್ಲೂ ದೇವದತ್ತನ ತಾಯಿ ತಂದೆಗಳಿಗೆ ಸ

ರಿ ವಿರೋಧಸ್ಥಾನದಲ್ಲಿದ್ದರು. ತನ್ನ ಆಚಾರ ವಿಚಾರಗಳಲ್ಲೂ, ಗೃಹಕೃತ್ಯಗಳಲ್ಲೂ ಪಾಶ್ಚಿಮಾತ್ಯ ನಡವಳಿಕೆಗಳನ್ನೇ ಅನುಸರಿಸಬೇಕೆಂದು ಅವರು ತ್ವರೆ ಮಾಡುತ್ತಿದ್ದರು.

ಚಾರುದತ್ತನ ತಾಯಿಯು ಪುರಾಣಗಳನ್ನು ಓದುತ್ತಲು, ದೇವಸ್ಥಾನಗಳಿಗೆ ಪುಣ್ಯಪುರಸ್ಕಾರಗಳಿಗೆ ಹೋಗುವುದು, ಜನಾಂಗದ ಪೂರ್ವ ಪದ್ಧತಿಗನುಸಾರವಾಗಿ ನಡೆಯುವುದು ಇವೆಲ್ಲಾ ನವನಾಗರೀಕತೆಯನ್ನರಿಯದ ಗ್ರಾಮವಾಸಿಗಳ ನಡತೆಗಳೆಂದು ಭಾವಿಸಿದ್ದಳು. ನಾವೆಲ್‌ಗಳನ್ನು ಓದುವುದರಲ್ಲಿಯೂ, ಸರ್ಕಸ್, ಕುದುರೆ ಜೂಜು ಮೊದಲಾದ ನೋಟಗಳನ್ನು ನೋಡುವುದರಲ್ಲಿ ಆಕೆಗೆ ಬಹು ಆನಂದ. ಮದುವೆ ಆಗಿ ಗಂಡನ ರಜೆ ತೀರುವ ವರೆಗೆ ಸಹ ಆಕೆಗೆ ಗ್ರಾಮದಲ್ಲಿರಲು ಆಗಲಿಲ್ಲ. ಗ್ರಾಮಸ್ಥರ ನಡವಳಿಕೆಗಳು ಆಕೆಗೆ ಕೇವಲ ಬೇಸರವಾಗಿ ಕಾಣುತ್ತಿದ್ದವು. ಆಕೆಗೆ ಮದ್ರಾಸ್, ಬೊಂಬಾಯಿ, ಲಂಡನ್ ಮೊದಲಾದ ಅನೇಕ ದೂರದ ನಗರಗಳ ಹೆಸರುಗಳು ಬಹು ಸರಾಗವಾಗಿ ಬರುತ್ತಿದ್ದವು. ಆದರೆ ತಾನು ಹುಟ್ಟಿದ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳ ಹೆಸರುಗಳಾಗಲೀ, ತನ್ನ ತಂದೆ ತಾಯಿಗಳ ಅನೇಕ ನೆಂಟರಿಷ್ಟರ ಮನೆಗಳ ಹೆಸರಾಗಲೀ ಆಕೆಗೆ ಬರುತ್ತಿರಲಿಲ್ಲ. ಕೆಲವು ವೇಳೆ ಎಷ್ಟು ಬೇಜಾರಾದರೂ ಅವು ಮನಸ್ಸಿಗೆ ಹಿಡಿಯುವು. ಹಿಡಿದರೂ ಒಂದೆರಡು ದಿವಸಗಳಲ್ಲಿ ಮರೆತು ಹೋಗುವುವು. ಪಟ್ಟಣಗಳಲ್ಲಿ ತನ್ನ ಪತಿಯ ಪ್ರತಿಯೊಬ್ಬ ಸ್ನೇಹಿತರ ಮನೆಗೂ ಹೋಗುತ್ತಿದ್ದಳು. ಆದರೆ ತನ್ನ ಗಂಡನ ಕೆಲವು ಹಿರಿಯರಾದ ನೆಂಟರಿಷ್ಟರ ಮನೆಗೆ ಎಂದೂ ಕಾಲಿಡುತ್ತಿರಲಿಲ್ಲ. ಅವರೆಷ್ಟು ಪ್ರೀತಿ ಪೂರ್ವಕವಾಗಿ ಈ ದಂಪತಿಗಳಿಬ್ಬರನ್ನು ಆಮಂತ್ರಿಸುತ್ತಿದ್ದರೂ ಅವರು ಹೋಗುತ್ತಿರಲಿಲ್ಲ. ಏನಾದರೊಂದು ನೆಪ ಹೇಳಿ ಅವರ ಕೋರಿಕೆಯನ್ನು ಉಲ್ಲಂಘಿಸುತ್ತಿದ್ದರು.

ಚಾರುದತ್ತನು ಇವರ ಓದಿಯು ಗುವನು. ಇವನು ಹುಟ್ಟಿ ಎಂಟು ವರ್ಷಗಳ ವರೆಗೆ ತಂದೆ ತಾಯಿಗಳೊಡನೆ ಪಟ್ಟಣದಲ್ಲೇ ಇದ್ದನು. ಆ ಮೇಲೆ ಅವನ ತಂದೆಯು ಅವನ ಮನೆಯ ಹತ್ತಿರವಿದ್ದ ಪಟ್ಟಕ್ಕೆ ವರ್ಗಾಯಿಸಲ್ಪಟ್ಟದ್ದರಿಂದ ಆವರೆಲ್ಲರೂ ಪಟ್ಟಣವಾಸವನ್ನು ಬಿಟ್ಟು ತಮ್ಮ ಹಳ್ಳಿಯಲ್ಲಿರತಕ್ಕ ಸ್ವಗೃಹಕ್ಕೆ ಬಂದರು. ಆ ಸಮಯದಿಂದ ಚಾರುದತ್ತ ದೇವದತ್ತರ ಮೈತ್ರಿಯೂ ಪ್ರಾರಂಭವಾಯಿತು.

ಸಶೇಷ.]

ಡಾ. ಮೋಶ್ಯಸ್ ಎಬ್ರಹಾಮ್
ದಂತ ವೈದ್ಯರು.
(ಸೀಯರ್ಸ್‌ಲೆಸ್ಲಿ ಬಂಗ್ಲೆ)
(ಸ್ಪೆನ್ಸರ್ಸ್ ಹತ್ತಿರ)
ಮಡಿಕೇರಿ.

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ 52,54,750 ರೂ. ಭರವಸೆಯ 4689 ಪ್ರಪೋಸಲ್‌ಗಳು ಸಿಕ್ಕಿವೆ. ಅವರಲ್ಲಿ ಹಿಂದಿನ ವರ್ಷದ ಪೂರ್ತಿಯಾಗದ 1447 ಪ್ರಪೋಸಲ್‌ಗಳ ಬಾಬ್ತು 40,67,650 ರೂ. ಗಳ ಬಗ್ಗೆ ವರ್ಷಾವಧಿ 2,21,959-6-0 ರೂ. ವಿಮಾ ಕಂತು ಬರುತ್ತೆ. ಕಂಪೆನಿಯಿಂದ ಭರವಸ ಪಡೆದಿರುವ ಹಣ ರೂ. 39,38,150. ಬಾಕಿ ರೂ. 1,29,500 ಪುನಃ ಭರವಸೆ ಕೊಟ್ಟದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುವರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ. 4,13,775 ಹೆಚ್ಚಿದೆ.

ಈ ಕೆಳಗಿನ ಒಳ್ಳೆ ಸಂಗತಿಗಳಿಂದ ಲಭಿಸಿದ ತೃಪ್ತಿಯನ್ನು ಮೆಂಬರುಗಳೊಡನೆ ಅನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯಾ ಸರ್ಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪೆನಿಗಳಿವೆಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಶೂರೆನ್ಸ್ ಈಯರ್ ಬುಕ್' ಎಂಬುವುದರಿಂದ ತಿಳಿದುಬರುತ್ತದೆ. ಈ ಕಂಪನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ವೃದ್ಧಿಯಿಂದ ಮೊದಲಿನ 20 ಕಂಪನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ವರೆಗೆ ಶ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೇಯದಾಗಿದೆ. ಒಂದನೇಯದಾದ ಕಂಪೆನಿಯು ಇದಕ್ಕಿಂತ 25 ವರ್ಷಗಳ ಮುಂದೆ ಸ್ಥಾಪಿಸಲ್ಪಟ್ಟದ್ದಾಗಿದೆ.

ವಿಮಾ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮಾ ಕಂತುಗಳ ಆದಾಯವು (ಪುನಃ ಭರವಸೆ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮಾ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ವರದಿ ವರ್ಷದ ವಿಮಾ ಕಂತಿನ ಆದಾಯವು ರೂ 3,66,198-13-0, ಗತ ವರ್ಷದ್ದು 2,36,767-6-6 ಆಗಿದೆ.

ಜೀವವಿಮಾ ಫಂಡು:—ಈ ಕಂಪೆನಿಯ ಜೀವ ವಿಮಾ ಫಂಡು ರೂ. 75,258-11-9ರಿಂದ, ವ್ಯವಸ್ಥಾ ಕ್ರಮಕ್ಕೆ ಮತ್ತು ಇತರ ಖರ್ಚಿಗಾಗಿ ರೂ 45,037-8-4 ವಜಾ ಕಳೆದು ರೂ. 21,00,421-1-3ಕ್ಕೆ ಏರಿದೆ. ಈ ಕೆಳಗೆ ಅದರ ತಪಶೀಲನ್ನು ಕೊಡಲಾಗಿದೆ

ವರ್ಷಾಂತ್ಯದಲ್ಲಿ.	ವಿಮಾ ಕಂತು	ಜೀವ ವಿಮಾ ಫಂಡು
1ನೇ ವರ್ಷದ	ರೂ 1,46,349	ರೂ 15,619
2ನೇ ವರ್ಷದ	,, 2,36,767	,, 75,259
3ನೇ ವರ್ಷದ	,, 3,66,199	,, 2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪೆನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತ ವಿಮಾ ಕಂಪೆನಿಗಳ ವಾರ್ಷಿಕ ವೃತ್ತಾಂತದಲ್ಲಿ ಹೊಗಳಲ್ಪಟ್ಟದ್ದೇ ಆಗಿದೆ.

ಭಾರತ ಜೀವವಿಮಾ ಕಂಪೆನಿಗಳ ಅಚ್ಚಿನ ಮೇರೆ ದೇವಣಾತಿ:—ಈ ಖಾನೂನು ಮೇರೆ ಠೇವಣಾತಿ ಮಾಡತಕ್ಕದಿದ್ದ ರೂ, 2 ಲಕ್ಷವನ್ನು ಪೂರ್ತಿಯಾಗಿ ಡಿಪಾಜಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷಪೂರ್ವಕರಾಗಿರುವರು.

ಸಿ. ಯಂ. ತಿಮ್ಮಯ್ಯ,

(12-12) ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ

ಯೂನಾನಿ ಫಾರ್ಮಸಿಯ ಉತ್ತಮ ಔಷಧಿಗಳು.

ಉಬ್ಬಸ ಸಂಹಾರಿ (Asthma cure) ಕೆಲವು ದಿನಗಳ ಸೇವನೆಯಿಂದ ಉಬ್ಬಸವನ್ನು ಖಾತ್ರಿಯಾಗಿ ಗುಣಪಡಿಸುತ್ತದೆ. 40 ದಿನದ ಔಷಧಿಗೆ ಕ್ರಯ ರೂ. 5—12—0.

ಅಂಬರ್ ಕೊಡಲೆಣ್ಣೆ, ಸುಗಂಧಯುಕ್ತ ಆಮ್ಲಕೇಶ ತೈಲ ಅಲ್ಲದೆ ಎಲ್ಲಾ ರೋಗಗಳಿಗೂ ರಾಮಬಾಣದಂತಿರುವ ಮಾತ್ರೆಗಳೂ, ಚೂರ್ಣಗಳೂ, ಲೇಹಗಳೂ, ತೈಲಗಳೂ ಮತ್ತು ಕೇಶ ತೈಲಗಳೂ ಸಹ ತಯಾರಿರುವುವು.

ಬೇಗನೆ ಬರೆಯಿರಿ.—

ಯಂ. ಯಂ. ಸಿದ್ದೀಕ್,
ಪ್ರೊಪ್ರೈಟರ್,
26 ಯುನಾನಿ ಔಷಧಶಾಲಾ, ಮಡಿಕೇರಿ, ಕೊಡಗು.

ಖಾನ ನಿರೋಧ ಚಳವಳಿ.

(೩ ನೇ ಪುಟದಿಂದ ಸಾಗಿದ್ದು.)

ದು, ಬಾಕಿ ಸಂಸ್ಥಾನಗಳೂ ಈ ಉದಾಹರಣೆಯನ್ನನುಸರಿಸಿದ್ದು, ಈ ಕಾರ್ಯಕ್ರಮಕ್ಕೆ ಜನತೆಯ ಸಹಾಯವು ಒದಗಿದ್ದು ಇವೆಲ್ಲ ಓದುಗರಿಗೆ ಚೆನ್ನಾಗಿ ವಿಧಿತವಿರುವದು. ಭಾರತವು ಇಂದು ಈ ಪ್ರಸಂಗದಲ್ಲಿ ಮುಂದಿಟ್ಟಿರುವ ಹೆಜ್ಜೆಯು ಭಾರತದ ಸುಖಸಾಧನೆಗೆ ಅಲ್ಲದೇ ಇಡೀ ಲೋಕದ ಜನತೆಯ ಕಲ್ಯಾಣಕ್ಕೂ ಆಧಾರಸ್ಥಂಭವಾಗಿದೆ. ದೂರ ದೇಶದ ಸುಧಾರಕರ ದೃಷ್ಟಿಯು ಪೂರ್ವಾಂತ್ಯದಲ್ಲಿರುವ ಭಾರತದೆಡೆಗೆ ಆಕರ್ಷಿಸಲ್ಪಟ್ಟಿದೆ. ಮಹಾತ್ಮಾ ಗಾಂಧಿಯವರು, 'ಈ ಶತಮಾನದ ಅಮೋಘ ಚಳವಳಿಕ್ಕೆ ಸಮಗ್ರಭಾರತದ ಜನತೆಯ ಸಹಾಯ ಒಂದಲ್ಲ, ಬ್ರಿಟಿಷ್ ಜನಾಂಗದ ಸಹಾಯವಲ್ಲ, ಇಡೀ ಲೋಕದ ಸುಧಾರಿತ ಜನಾಂಗಗಳ ಬೆಂಬಲವು ಖಂಡಿತಾ ಸಿಗುವದೆಂದು ಭಾರತೀಯರು ನಂಬಬಹುದು' ಎಂದು ಹೇಳಿರುವರು. ಹಾಗೆಯೇ ಯೂರೋಪ್, ಅಮೇರಿಕ ಮೊದಲಾದ ಜನಾಂಗಗಳ ಸಮಾನುಭೂತಿಯು ಭಾರತಕ್ಕೆ ಲಭಿಸುವದರಲ್ಲಿ ಅನುಮಾನವಿಲ್ಲ.

ಬಾತ್ಮಿ.

ಅಯ್ಯಾ, ನಿಷ್ಪಕ್ಷ ಪಾತಿಯೇ,

ನಿಮ್ಮ ತಾ 19-8-38 ರ ಬಾತ್ಮಿಯನ್ನು ನೋಡಿದಲ್ಲಿ 'ಕಳ್ಳನ ಮನಸ್ಸು ಉಳ್ಳೊಳಗೆ' ಎಂಬಂತೆ ತೋರುತ್ತೆ. ಬಸ್ಸು ಮಾಲಿಕತನದ ವ್ಯವಹಾರದೊಳಗೆ ಮುಳುಗಿರುವ 'ನಿಷ್ಪಕ್ಷಪಾತಿ'ಗಳಾದ ನೀವೇ ನನ್ನನ್ನು ಬಸ್ಸು ಮಾಲೀಕರ ಸಾಲಿಗೆ ಸೇರಿಸಿರುವಿರಿ, 'ತಾನು ಕಳ್ಳ ಪರರನಂಬ' ಎಂಬಂತೆ ನೀವು ಮಾಡಿರುವ ಭೇಧೋಪಾಯಗಳ ಸಂಭ್ರಮದಲ್ಲಿ ತಾ 12-8-38 ರ ನನ್ನ ಬಾತ್ಮಿಯು ನಿಮ್ಮನ್ನು ಬಹಳ ಭ್ರಾಂತಿಗೊಳಪಡಿಸಿದಂತೆ ತೋರುತ್ತೆ.

ದೇಶದಲ್ಲಿ ಸಣ್ಣ ಪುಟ್ಟ ಬಸ್ಸುಗಳನ್ನು ಒಂದೊಂದಾಗಿ ನುಂಗಿ, ಹೊಟ್ಟೆ ದೊಡ್ಡದು ಮಾಡಿಕೊಳ್ಳಬೇಕೆಂಬ ಸ್ವಾರ್ಥಿಗಳ ಬೆಂಬಲಕ್ಕೆ ಬಂದ ನಿಮ್ಮನ್ನು ದೇಶದವರು ಎಷ್ಟು ವಂದಿಸಿದರೂ ಸಾಲದು. ಅಬಿಸೀನಿಯಾವನ್ನು ಸ್ವಾಹಮಾಡಿದ ಇಟಲಿಯ ಮುಸೋಲಿನಿಯು ಹೇಳುವಂತೆ ನಿಸ್ಸಹಾಯಕರಾದ ಅಬಿಸೀನಿಯರನ್ನು ಉದ್ಧಾರ ಮಾಡಲು ಬಂದ ಇಟಲೀ ಮಹಾತ್ಮರೇ ನೀವು? ಕಾವೇರಿ ಸರ್ವಿಸನ್ನು ಅದರೊಡನೆ ಕೊಡಗಿನ ಇತರ ಚಿಕ್ಕ ಬಸ್ಸು ಸಂಸ್ಥೆಗಳನ್ನು ಸ್ವಾಹಮಾಡಿ ಕೊಡಗಿನ ಪ್ರಯಾಣಿಕರ ಹಿತಕ್ಕೆ ಬರುವ ನಿಮಗೆ ದೇಶದವರು ಋಣಿಗಳಾಗಿರಬೇಕಲ್ಲವೇ? ಇರಲಿ! ದೇಶದವರಿಗೆ ನಿಮ್ಮಂಥ ಭಂಡವಾಳಗಾರರಿಂದ ಜಾಗರೂಕರಾಗಿರಲು ಸೂಚಿಸಿದ ನನ್ನ ಬಾತ್ಮಿಯು ನಿಮ್ಮ ಕಣ್ಣನ್ನು ಕೆಂಪೇರಿಸಿತು. ಹೌದು! ಇಲಿಗಳನ್ನು ಪಾಪವಿಮುಕ್ತರನ್ನಾಗಿ ಮಾಡಲು ಕಾಶಿಗೆ ಒಯ್ದ ಬೆಕ್ಕು ಸನ್ಯಾಸಿಯಂತೆ ಈಗ ಕೊಡಗಿನ ಜನರನ್ನು ಬಸ್ಸು ಪ್ರಯಾಣದ ಅಸೌಕರ್ಯಗಳಿಂದ ಪಾರುಮಾಡಿಸಲು ಬಂದವರ ಸಂಗಡದವರಾದ ನಿಮಗೆ ಸಹಸ್ರ ಪ್ರಣಾಮಗಳು! ನಿಮ್ಮ ಬಾತ್ಮಿ ಪ್ರಕಾರ ಕೊಡಗಿನಲ್ಲಿ ಸ್ವಲ್ಪ ಬಸ್ಸು ಸರ್ವಿಸುಗಳಾಗಿರುವುದಂಬ

THE CANARA BANKING CORPORATION, UDIPI, Ltd.

(Incorporated in British India.)
Estd. 1906.

MEMBER: { RESERVE BANK OF INDIA, & BANKERS' CLEARING HOUSE, MADRAS.

Head Office: UDIPI, S. K.

Paid up Capital	Rs.	3,03,205/-
Reserves	,,	3,86,842/-

Our Deposit Rates.

3 months	2½% p. a.
6 or 9 months	3 % p. a.
12 months	3½% p. a.
SHORT TERM	2 % p. a.

Branches.

1. Udipi, 2. Coondapoor, 3. Car Street, Mangalore, 4. Madras, 5 Shimoga, 6. Bunder, Mangalore, 7. Mercara, 8. Virarajendrapet, 8. Sakleshpur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

BANKING BUSINESS OF EVERY DESCRIPTION TRANSACTED.

Udipi,
8th July 1938.

52-39

V. R. Kamath, B. A., LL. B.,
Manager.

ಭಾವನೆಯು ತೋರಿ ಬರುತ್ತೆ. 'ಸ್ವಾತಂತ್ರ್ಯ'ವೆಂಬ ಶುಭ ನಾಮದೊಡನೆ ನಿಮ್ಮ ಗೂಢ ವಿಚಾರಗಳನ್ನು ಹೊರಗೆಡವುವನ್ನು ತಿಳಿಯುವದು ಅಸಾಧ್ಯವೆಂದು ಭಾವಿಸಿರಬಹುದು. 'ಸ್ವಾತಂತ್ರ್ಯ'ವೆಂಬದೇ ಎಲ್ಲರ ಹಿತಸಾಧನೆಯ ವಿಷಯ, ಎಲ್ಲರ ಹಿತಸಾಧನೆಯ ದೃಷ್ಟಿಯಿಂದಲೂ ಮುಂದಕ್ಕೆ ಚಿಕ್ಕ ಚಿಕ್ಕ ಸಂಸ್ಥೆಗಳನ್ನು ನಾಶಮಾಡಿ ಅನಂತರ ಕೊಳ್ಳೆಯ ಸಂತೆಯಾಗದ ರೀತಿಯಲ್ಲಿ ಎಚ್ಚರಿಕೆ ಕೊಟ್ಟ ನನ್ನ ಟಾಕ್ಕಿಯನ್ನು ಅಕ್ಷರಶಃ ಎತ್ತಿ ಟೀಕೆ ಮಾಡಿರುವಿರಿ, ನಿಜ. ಕಾರಣವರಿತು ಟೀಕೆ ಮಾಡಲು ಬಾರದ ಮೇಲೆ ಅಕ್ಷರ ಮತ್ತು ಶಬ್ದಗಳ ಮೇಲೆ ಯುದ್ಧಮಾಡಿ ಕೆಳಗೆ ಬಿದ್ದರೂ ಮೂಸೆ ಮಣ್ಣಾಗಲಿಲ್ಲಯೆಂದು ಎಣಿಸಿಕೊಳ್ಳಬೇಕಲ್ಲವೇ? ನಾನಂತೂ ನಿಮ್ಮಂತೆ ಮಾತಿಗೆ ಮಾತು ಕಟ್ಟುವವನಲ್ಲ. ದೇಶವವರಿಗೆ ನಿಮ್ಮಂಥ 'ಮುಸೋಲಿನಿ'ಗಳ ವಿಚಾರದಲ್ಲಿ ಎಚ್ಚರದಿಂದಿರುವಂತೆಯೂ ಸ್ಥಳೀಯ ಸಂಸ್ಥೆಗಳನ್ನು ಅಭಿವೃದ್ಧಿಗೊಳಿಸಿ ದೇಶದ ಮೇಲ್ಮೆಯನ್ನು ಬಯಸುವಂತೆಯೂ ಸೂಚನೆ ಕೊಟ್ಟದ್ದಾಗಿದೆ. ಅದೇ ರೀತಿ ದೇಶದವರಲ್ಲಿ ಪುನಃ ಅರಿಕೆ ಮಾಡುವದಾಗಿದೆ.

ಏನೇ ಇರಲಿ ನಾಳೆ 'ಮೂಸೆ ಮಣ್ಣಾದರೂ ಬೀಳಲಿಲ್ಲ'ಯೆಂದು ನೀವು ಹೇಳಲೂ ಬಹುದು, ಆದರೆ ದೇಶವವರಿಗೀ ನಿಜಾಂಶವು ಬೇಗನೆ ತಿಳಿಯದಿರದು; ದೇಶೀಯರು ಜಾಗ್ರತರಾದರೆ ಕಾವೇರಿ ನದಿಯು ಚಿರಕಾಲದಂತೆ ಬಂಗಾಳಕೊಲ್ಲಿಗೆ ಹೋಗಿ ಸೇರುವದೇ ವಿನಹ ನಿಮ್ಮ ಸುಧಾರಿಸಿದ ಭೂಗೋಳದ ಪ್ರಕಾರ ಅರಬಿ ಸಮುದ್ರಕ್ಕೆ ಎಂದೆಂದಿಗೂ ಸೇರುವುದಿಲ್ಲ. ಒಣ ಮಾತಿನ ಮಲ್ಲತನದಲ್ಲಿ, ಪುನೀತೆಯಾದ ಕಾವೇರಿ ನದಿಯು ಅರಬೀಸಮುದ್ರಕ್ಕೆ ಬೀಳುವದೆಂದು ನಿಮ್ಮ ಮೌಢ್ಯವನ್ನು ಪ್ರದರ್ಶಿಸಿದಿರಿ. ಹಾಹ! ನಿಮ್ಮ ಪ್ರಯತ್ನವಾದರೂ ಅದೇ ಇರಬಹುದು. ಅದಕ್ಕೆ ಕಾವೇರಿ ನದಿಯನ್ನು ಒಂದು ಚಿಕ್ಕ ಮುಂಗಲಿರಿಗಾಗಿ ಅರಬೀ ಸಮುದ್ರಕ್ಕೆ ನಿಮ್ಮಂಥವರು ಬೀಳಿಸಬಹುದಾದರೂ ಕಾವೇರಿ ನದಿಯನ್ನು ಅರಬೀಸಮುದ್ರಕ್ಕೆ ಎಂದೆಂದಿಗೂ ಸೇರಿಸಲು ಸಾಧ್ಯವಿಲ್ಲ. ಅಂತೂ ನಿಮ್ಮ ಲೇಖನದಿಂದ ದೇಶದವರಿಗೆ ಯಾರು ಯಾರೆಂಬದು ತಿಳಿಯಿತು.

'ಹಿತಚಿಂತಕ.'

ಗೋಹತ್ಯೆ.

ಅಯ್ಯಾ,

ಚೇರಳ ಶ್ರೀಮಂಗಲ ಗ್ರಾಮದ ರೈತರ ಗೋವುಗಳ ಮರಣವನ್ನು ವರ್ಣಿಸಲು ಸಾಧ್ಯವಿಲ್ಲ.

ಸಾಯಂಕಾಲ ಚೆನ್ನಾಗಿ ಕೊಟ್ಟಿಗೆಗೆ ಕೂಡಿದ ದನಗಳು ಮಾರಣೆ ದಿನ ಬೆಳಿಗ್ಗೆ ನೋಡಿದರೆ ಸತ್ತು ಹೆಣವಾಗಿರುವವು. ಈಗ್ಗೆ 8 ದಿನಗಳಿಂದೀಚೆಗೆ, ಇಪ್ಪತ್ತು ರಾಸಿಗೆ ಕಮ್ಮಿ ಇಲ್ಲದೆ ಸತ್ತು ಸ್ವರ್ಗಕ್ಕೇರಿವೆ. ಒಂದೆರಡು ವರ್ಷಗಳಿಂದ ಲೆಕ್ಕ ಕಟ್ಟಿದರೆ ಒಂದು ನೂರು ರಾಸಿಗೆ ಕಮ್ಮಿಯಾಗಲಾರದು.

ಇಂಥಾ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ರೈತರ ಬೆನ್ನೆಲುಬಾದ, ದನಗಳು ಈ ರೀತಿ ನಾಶವಾದದ್ದಾದರೆ ಬಡ ರೈತರು ಕಂದಾಯ, ಹೊಟ್ಟೆ ಬಟ್ಟೆಗೆ ಸರಿಮಾಡಿಕೊಂಡು ಹೊರಲಾರದ ಸಾಲದ ಹೊರೆಯನ್ನು ಇಳಿಸುವ ಬಗೆ ಹೇಗೆ?

ಈಚೆಗೆ, ಪೆರಂಬಕೊಲ್ಲಿ ತೋಟದಲ್ಲಿ ದನಗಳಿಗೆ ಔಷಧಿ ಹಾಕುವದಾಗಿಯೂ ಈ ವಿಷಯ ಪೋಲೀಸು ವಿಚಾರ ನಡೆಯುವದಾಗಿಯೂ ತಿಳಿದು ಬರುತ್ತೆ. ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯ ಬಡ ರೈತರ ದುಃಖವನ್ನು ಗಮನಕ್ಕೆ ತೆಗೆದುಕೊಂಡು ತಕ್ಕ ಕ್ರಮ ಜರಗಿಸಬೇಕೆಂದೂ, ಮುಂದಕ್ಕೆ ಇಂಥಾ ಅನ್ಯಾಯ ನಡೆಯದಂತೆ ತಕ್ಕ ಬಂದೋಬಸ್ತು ನಡೆಯಿಸುವರೆಂದೂ ಪ್ರಾರ್ಥಿಸುತ್ತೇನೆ.

'ಗ್ರಾಮಸ್ಥ.'

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನ್ನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಬಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಸೀತಜ್ವರ, ಮೋದಾಲಸ್ಯ, ತಲೆನೋವು, ಬಾಯರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಬುಡ್ಡಿಗೆ ರೂ. 1-0-0. ಟಪ್ಪಾಲು ದಾಸಲು ಪ್ರತ್ಯೇಕ.

9 **ಸಿ. ಹೆಚ್. ರಾಮುಣ್ಣಿ ವೈದ್ಯರ್.**

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು,** ಸಾಲ ವಸೂಲದ ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, ಶೇರು ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜನ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರ್ದಾಳು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಶ್ರೀ ರಾಮಕೃಷ್ಣ ಪರಮಹಂಸರು.

ಲೇಖಕ:- ಎಂ. ಎಸ್. ಅನಂತಪದ್ಮನಾಭರಾವ್.

ಗತಿ ೧.

(ಕಳೆದ ವಾರದಿಂದ ಮುಂದುವರಿದದ್ದು)

ಚಂದ್ರದೇವಿಯು ಗರ್ಭ ಧರಿಸಿ ನವ ಮಾಸಗಳ
ವಿವಿಧ ವರ್ತನಗಳಿಂ ಕಳೆಯುತಿರೆ, ಬಂದುದಾ
ಧುಮಸೋತ್ತರ ದಿವ್ಯ ಪುರುಷನ ಜನನವಾಗಲ್ಕೆ
ಧರ್ಮ ತಲೆಯೆತ್ತಿದುದು, ನಗುನೊಗವ ತಾಳಿದುದು,
ಸತ್ಯಶಾಂತಂ ಹರ್ಷ ತನಗೊಬ್ಬ ಸಾಧುವಿಂ
ಸೇವೆ ದೊರೆಯುವುದೆಂದು: ಲೋಕವೇ ನಗುತಿರಲು
ಸತ್ವ ಮರ್ಗ ರವಿಯುದಯಿಮಾದುದಾ ಹಳ್ಳಿಯಲಿ.
ಚಂದ್ರದೇವಿಯು ಜನ್ಮವಿತ್ತಳಾ ಸನ್ಮೂರ್ತಿ
ಲೋಕರೂಪಿಗೆ ಜಗದಿ ಪರಮ ಭಕ್ತಿಯೊಳಂದು,
ಖುದಿರಾಮ ಸೂರ್ಯದಿಯ ಭಕ್ತಿಯಲಿ, ಶಕ್ತಿಯಲಿ
ಬಾಷ್ಪಪೂರಿತನಾಗಿ 'ಹೇ ದೇವ ಬಂದೆಯಾ!
ದೇವ ದೇವನು ನೀನು, ಬಡವನಿಗೆ ಸೌಭಾಗ್ಯ
ವೇನ ಕೊಡುವುದು ಎಂದು ಲೋಕದಲಿ ದಾರಿದ್ರ್ಯ
ಸೌಭಾಗ್ಯವೆಂಬುದಕೆ ನೀನೊಲಿದು ಬಂದೆಯಾ,
ಬರಬೇಡವೆಂಬೆನೇ! ಬರಬೇಕು-ಒಳ್ಳಿತಿದು
ಜಗನೊಡೆಯನಂ ಹಡೆವ ಸತಿಯೆನಿತು ಧನ್ಯಳೋ!
ಲೋಕದೊಳು ನಾರಿಯರ ಜನ್ಮವೇ ಪಾವನವು.
ದೇವನಂ ನವಮಾಸ ಬಸುರಿನಲಿ ಬೆಳೆಸುತ್ತ
ಹೆತ್ತು ಪಾಲಿಸುತುಣಿಸಿ ನಲಿಯಿಸುವ ಭಾಗ್ಯವನು
ಪಡೆವಂಥ ನಾರಿಯರ ದರ್ಶನವೆ ಮಂಗಳವು,
ಆಗಲಾಗಲಿ ಬರಲಿ ದೇವನಾ ಲೀಲೆಗಳ ನೋಡುವೆನು
ನೋಡುತಾನಂದದಿಂ ಸಿತ್ಯನಾಗುವೆ ನಾನು.
ದಿಟ್ಟ, ಲೋಕದೊಳಾನು ಸತ್ಯನೆನಿಸುವೆನಿನ್ನು
ಈ ಸತ್ಯ ಸುಕುಮಾರನಿಂ ಬೆಳಕು ಹರಿಹರಿದು
ಸಪ್ತ ಸಾಗರದಾಚೆ ಬೆಳಗುತಿರಲೆಂದೆಂದು"
ಎನ್ನುತಾ ಖುದಿರಾಮ ಪುಳಕಿತ ಶರೀರದಿಂ
ನವಕುಮಾರನ ಮೊಗವ ನೋಡಿದನು ಪಾಡಿದನು.
ಆಹಾಹಹಾ: ಜಗದೊಡೆಯನೆನಿಸಿಹನು-ಇದನಾರು
ಪೇಳ್ವೆನ! ಸಾಧಿಸುವ ಬಲ್ಲಹನು ಬರಬಹುದು!
ಇವನೇ ಗದಾಧರನು-ರಘುವೀರ ಮೈವೆತ್ತು
ಬೂದಿ ಮುಚ್ಚಿದ ಕೆಂಡವಂತಿಹನು-ಪರಮಾತ್ಮ.

ಪುತ್ರೋತ್ಸವಾದಿಗಳ ಭಕ್ತರುತ್ಸಾಹದಿಂ
ನಡೆಸಿದರು, ನಾಮಕರಣಾದಿಗಳು ವಿಧ್ಯುಕ್ತ
ರೀತಿಯಲಿ ನಡೆದಿರಲು-ಆ ಊರ ಮನೆಮಂದಿ ಸರ್ವ
ರುಂ ನಲಿದು ಕೊಂಡಾಡಿದರು ಪಾಡಿದರು.
ಆರತಿಯನೆತ್ತುತಲಿ 'ಮಾರ್ಗದರ್ಶಕನಾಗು-
ಸಂಸಾರ ಸಾಗರದಿ ಭವ್ಯನೌಕೆಯ ನಡೆಸ
ಅಧಿಕಾರಿ ನೀನಾಗು, ಸುವಿಚಾರಿಗಳಿಗದಿಪ
ಸಚ್ಚರಿತನಾಗೆಂ'ದು ಹರಸಿದರು ಸಾಧ್ವಿಯರು.

ದಿವಸಗಳು-ಮಾಸಗಳು ಭರದಿಂದ ಸಾಗಿದವು.
ವಾತ್ಸಲ್ಯದು ಮತ್ತೊಮ್ಮೆ ಗುತಿಗಲಿದು ತೊಡಗಿದನು.
ಇದುವೆ ಮಾನವನಲೀಲೆಯದರಂತೆ ತೊದಲುಲಿಯ
ತೊಡಗಿದನು-ಲೋಕ ರೂಢಿಯು ಬಿಡದೆಯನುಸರಿಸು
ತದರಂತೆ-ಅಂಬೆಗಾಲಿಕ್ಕಿದನು. ಮತ್ತೊಮ್ಮೆ
ತಪ್ಪು ಹೆಜ್ಜೆಯನಿಡುತ ನಡೆಗಲಿತ-ನುಡಿಗಲಿತ
ಇನ್ನೊಮ್ಮೆ ಪೂರ್ವಾವತಾರಗಳ ಚರಿತೆಗಳ
ಕೇಳಿ ತಿಳಿದನು ದೇವ-ತನ್ನ ಭಕ್ತರ ಕಥೆಯ
ನಿನ್ನುಡಿಯ ಶ್ರದ್ಧೆಯಿಂದಾಲಿಸಿದ ಮುದದಿಂದ
ಸತ್ಕಥಾಶ್ರವಣದಿಂ ಸ್ವಮುಹೃದಯನಾಗುತ್ತ
ಎಳೆಯ ಮನಮಂ ಸಾಧು ವೃತ್ತಿಯೊಳ್ ನಡೆಯಿಸಿದ:
ನೋಡುವುದು ಕೇಳುವುದು-ಹಾಡುವುದು ಕೂಡುವುದು
ಇದುವೆ ಬಾಲನ ವೃತ್ತಿ-ಅರ್ಚನೆಯು ಹಿತವಾಯ್ತು
ವಿಗ್ರಹವ ನಿಜ ಹಸ್ತದಿಂ ರಚಿಸಿ ಮನವೊಪ್ಪಿ
ಶೃಂಗಾರಗಳ ಮಾಡಿ ವಿವಿಧ ರೀತಿಗಳಿಂದ
ಪೂಜಿಪುದು, ಅದರೊಡನೆ ಸಂವಾದ-ವಾಗ್ವಾದ,
ಅದರೊಡನೆಯೇ ಊಟ-ಸಂತೋಷ ಕೂಟಗಳು
ವಿಗ್ರಹವೆ ಸನ್ಮಿತ್ರವದರೊಡನೆಯೇ ಆಟ
ಇದರಿಂದ ತನ್ನನೇ ಮರೆಯುತ್ತಲಾ ಮೂರ್ತಿ
ಯಂ ನೆನೆದು-ಅವರ ಧ್ಯಾನದೊಳಿದ್ದು ಕಳೆಯುವನು.
ಅದರಂತೆ ಎಳೆವರೆಯ ಬಾಲಕರ ಗೆಳೆತನದಿ
ಬಹು ಪ್ರೀತಿ-ಭಕ್ತಿ ಸಾಮ್ರಾಜ್ಯದಲಿ ಬಾಲಕರ
ನೆಳೆತಂದು ಭಕ್ತಿರಸವೂಡಿಸುತಲವರೊಡನೆ
ತಾನೆಲ್ಲ ಪರಮಾತ್ಮನತಿಥಿಗಳು ಲೋಕದಲಿ
ಯಾತ್ರೆಗೋಸುಗ ಬಂದು ಈ ಕ್ಷೇತ್ರದಲಿ ನಿಂದು
ಸೇವೆ ಮಾಡುವೆವೆಂದು ತಿಳಿಹಿಸುತ ಕುಣಿಯುವನು.
ಪರಮಾತ್ಮನಂ ಕಾಣ್ಬ ಹಂಬಲಿಕೆಯಿಂದಲಾ
ಗೆಳೆಯರಂ ಕಾಣುವನು-ಅದಕಿಂತಲಿನ್ನುಡಿಯ
ಹರ್ಷದಲಿ ಬಾಚುವನು, ತಬ್ಬುವನು, ನಲಿಯುವನು.
ಹೊಸಬನೊಬ್ಬರ ಕಾಣ, ಲೋಕದೊಳಗೆಲ್ಲರುಂ
ಹಳಬರಹರಾ ಶಿಶುಗೆ-ಪೂರ್ವಕಾಲದ ಸ್ನೇಹ
ಅದಕಾಗಿ ಸಕಲ ಜೀವಿಯ ಶುಭವ ಬಯಸುವನು.
ಸರ್ವದಾ ಮಂಗಳವ ತೋರುವನು ಸಕಲರಿಗೆ.

ಇಷ್ಟರಲಿ ಕುವರಿಯೋರ್ವಳು ಜನ್ಮವೆತ್ತಿದಳು
ಖುದಿರಾಮ ಚಂದ್ರದೇವಿಯರ ವರಗರ್ಭದಲಿ.
ಸರ್ವ ಮಂಗಳೆಯೆಂಬ ಕುಲಸ ಶೋಭಿಸುವಂಥ
ಶುಭ ಗುಣದ ಖನಿಯಾಗಿ ನಾರಿಯರಿಗನುವಾದ
ಶಾಂತ ಮೃದು ಹೃದಯದಿಂ ಸರ್ವ ಶೋಭಿತೆಯಾಗಿ
ಆ ಸತ್ಯ ಕುಲದಲ್ಲಿ ಸರ್ವ ಮಂಗಳೆಯೆಂಬ
ಶುಭ ನಾಮದಿಂ ಬೆಳಗಿ-ದಂಪತಿಗಳೀರ್ವರಿಗೆ
ಕೊನೆಯ ಮಗಳಾಗುತಲಿ ಬೆಳಗಿದಳು ವಂಶವನು

ಕಾಲಗತಿಯನುಸರಿಸಿ ಖುದಿರಾಮ ಹರೆಯದಲಿ
ಶಕ್ತಿಗುಂದುತ ಬಂದು, ದಂಡಿಸಿ ಶರೀರವನು
ರಘುಪತಿಯ ಸೇವೆಯಲಿ ದಿನಗಳೆಯುತಿರುವಾಗ
ಕೊನೆಗಾಲ ತಾ ಬಂದು ರಘುವರನ ಸನ್ನಿಧಿಗೆ
ಬಾರೆನ್ನುತಕ್ಷತೆಯನೀಯಲ್ಕೆ ಭಕ್ತಮಣಿ
ಇಷ್ಟ ದೈವದ ಕರೆಯನಾಲಿಸುತ ಭೌತಿಕದ
ಕಳೆವರದ ಕಳಚಿಟ್ಟು ದಿವ್ಯ ದೇಹವ ಧರಿಸಿ
ರಘುವೀರನಾಲಯದ ತಾ ಪೊಕ್ಕನಾತುರದಿ.
ತಂದೆಯಗಲಿಕೆಯಿಂದ ಮನನೊಂದು ಬಾಲಕನು
ಪಿತನೆನಿಸಿ ಲೋಕ ಬಾಂಧವರನೆಲ್ಲರಂ
ಪ್ರೀತಿಸುತ ಕೊಂಡೊಯ್ದು ಬಳಲಿಪುದು ನೋಯಿಸುತ
ಎಲ್ಲಿ ತೆರಳುವರಿವರು! ಕಳೆವರದ ಕಳಚಿಟ್ಟು
ಸುತ್ತಲೀತಿಯೊಳಿವರು ಪೋಗುತಿಹ ಗುಟ್ಟೇನು?
ಇವನರಿಯದೇಕಿವರು ಸುಮ್ಮನಳುತಲಿ ಕೊರಗಿ
ಬಾಡುವರು-ಅಯ್ಯಯ್ಯೋ-ಈ ಮರ್ಮವೇನೆಂದು
ನೋಡುವೆನು-ಇರಲಿರಲಿ

ಮುಂದೆ ಸಾಗಿತು ಸಮಯ.

ಯಾತ್ರಿಕರು ನುಗ್ಗಿದರು, ಕ್ಷೇತ್ರದಿಂ ಕ್ಷೇತ್ರಕ್ಕೆ
ನಡೆವಾಗ ನಡುಮಾರ್ಗ ಕಾಮಾರ್ಪುಕೂರದಾ
ಗಿರಲಲ್ಲಿ ಹಗಲೊಂದು ನಿಲ್ಲುವರು ಸಾಧುಗಳು.
ನೋಡಿದ ಗದಾಧರನು ಸಾಧುಗಳ ಯೋಗಿಗಳ
ಕೌಪೀನಧಾರಿಗಳು-ಬೂದಿ ಬಡಕರು ಮತ್ತೆ
ಪರಮಾತ್ಮ ಚಿಂತನೆಯೆ ದಿನಗೆಲಸ ಸಂತರಿಗೆ:
ಬಂದಿವರು ಮಾಮರದ ತೋಪಿನಲಿ ನಿಲ್ಲುವರು.
ತಪ್ಪಿದರೆ ಹಾಳು ಮಸಣದ ಭೂಮಿ ಇವರ ನೆಲೆ.
ಈ ಎರಡು ತಾಣಗಳು ಯೋಗಿಗಳ ಧ್ಯಾನಕ್ಕೆ
ಯೋಗ್ಯ ತಾಣಗಳಹವು-ಅದರಿಂದಲಿ ನಿಕರ
ತಂಗುವುದು.

ಇದ ಗದಾಧರನರಿತು ಮುದದಿಂದ
ಸಾಧುಗಳ ದರ್ಶನಕೆ ಕಾಲ ಭೂಮಿಯ ಸೇರು
ತವರೊಡನೆ ಕಳೆಯುವನು ಕುಡಿಯುತ್ತ ದಿನವೆಲ್ಲ.
ಅವರೆಂದ ಕತೆಗಳನು ಕೇಳುವನು ಶ್ರದ್ಧೆಯಿಂ
ಸೂರ್ಯಾಸ್ತವಾಗುತಲೆ ತಾಯಿಯನು ಸೇರುವನು.
ಒಂದೊಂದು ಸಮಯದಲಿ ಗೋಸಾಯಿಗಳ ಕೂಡೆ
ಭೋಜನವ ಮಾಡುವನು; ಅವರಂತೆ ಕೌಪೀನ
ಧರಿಸುತ್ತ ಬೂದಿಯಂ ಮೈಮುಚ್ಚಿ ಮರಳುವನು.
ಈ ವೇಷವಂ ಕಂಡು ಚಂದ್ರದೇವಿಯು ಭಯದಿ
ಈ ಭೂತಗಳ ಕಾಟದಿಂ ಕುವರಗೇಂ ಭಯವೊ?
ಮಸಣದಲಿ! ಹಾಳು ಗೋಸಾಯಿಗಳ ಸಹವಾಸ!!
ಉಟ್ಟ ಬಟ್ಟೆಯ ಕಳಚಿ ಕೌಪೀನವೊಂದರಲಿ
ಬಂದ ಮಗನನು ಕಂಡು ಹೇಗೆ ಹಿಡಿಯಲಿ ಮಾನವ
ಮಗನೆ ಬಿಡು ಬೈರಾಗಿಗಳ ಗುಂಪು ನಿನಗೇಕೆ?
ನಿನಗಿಲ್ಲಿ ಬೇಕಾದ ಗ್ರಂಥಮಿರೆ ಕಾವ್ಯಮಿರೆ
ಓದಗಲಿಯುತ ನೀನು ಪಠಿಸುತೀ ಗ್ರಂಥಗಳ
ಜ್ಞಾನಭಂಡಾರವನ್ನೊಡೆದು ಸುಜ್ಞಾನವನು
ಸುಲಭದಲಿ ಪಡೆಯುತ್ತಲಿರಬಹುದು, ಮತ್ತವರ
ಗೊಡವೆ ನಿನಗೇತಕ್ಕೆ ಹೋಗಬಾರದು ಕಂದ!
ಎಂದೂಡಾ ನುಡಿಯಿಂದ ಬಲುನೊಂದು ಬೈರಾಗಿ
ಪಡೆಯನ್ನು ಮರುದಿವಸ ತಾ ಕಂಡು ದೈನ್ಯದಲಿ
ನಿಜಮಾತೆಯೊಣತಿಯನರುಹಿದೊಡೆ, ಯೋಗಿಗಳು
ಮುನ್ನಮೇ ಬಾಲಕನ ನೇಹದಲಿ ಮರುಳಾಗಿ
ಅವನ ಮುಗದೊಳು ಸಿಲ್ಕಿ ಬಿಡಲಾರದಿರಲಾಗ
ಚಂದ್ರದೇವಿಯು ಕಂಡು, ತಾಯೆ ಬಿಡು-ಬಿಡು ಭಯವ
ಎಮ್ಮ ಸಹವಾಸದಲಿ ಕೆಡನು ನಿನ್ನೀ ಮಗನು
ಇವ ನಿತ್ಯ ಸನ್ಯಾಸಿ-ಇವನೆಮಗೆ ಪರಮಗುರು,
ಗುರುವ ಕೆಡಿಸುವ ಶಕ್ತಿ ಬೈರಾಗಿಗೆಲ್ಲಿಯದು?
ಲೋಕಕೇ ಗುರು ಇವನು-ಇವನ ದರ್ಶನಕೆಮಗೆ
ಅವಕಾಶವನ್ನಿತ್ತು ಎಮ್ಮ ಜೀವನವನುಳುಹು.
ಎಂದರಾ ವರವನಿತೆ ತೃಪ್ತಿಗೊಳ್ಳುತ ಮನದಿ
ಅವರ ಕೋರಿಕೆಯ ಮನ್ನಿಸುತ ಹಿರಿಹಿಗ್ಗಿದಳು.

ಸಾಧುಸತ್ಸಂಗದಲಿ ಮನವು ಬಹು ಮೃದುವಾಯು
ಪಕ್ವವಾದುದು ಬುದ್ಧಿ, ಪರಮಾತ್ಮ ದರ್ಶನಕೆ
ಉತ್ಸಾಹಗೊಳ್ಳುತಲಿ ಸತತ ಪೂಜಾವಿಧಿಯ
ಕೈಕೊಂಡನಾ ಬಾಲ, ನಿತ್ಯ ಜೀವನ ಪಥವು
ರಘುವೀರನರ್ಚನೆಯ ರೂಪು ತಾಳ್ದುದು ಮತ್ತೆ.
ಅವನುಟ್ಟು, ಅವನುಂಡು ದಣಿವುದೇ ವರಪೂಜೆ
ಭಕ್ತಿ ಸಾಮ್ರಾಜ್ಯದಲಿ ಹಿರಿಯ ಗದ್ದುಗೆಯೇರಿ
ಕುಳಿತಲ್ಲಿ ಆನಂದ ರಸವುಂಬ ಸಾಧುಗಳ
ಮಂತ್ರಿತ್ವದಲಿ ಸಭೆಯ ನಡೆಸುತ ಮೆರೆಯುತಿಹ
ಬಾಲಕನ ಭಾವಗಳು, ನೋಟಗಳು, ಆಟಗಳು,
ಪರಮಾತ್ಮನರ್ಚನೆಯ ರೂಪವನೆ ತಾಳಿದುವು.
ಇದುವೆ ಭಕ್ತರ ಮಾಟ-ಇದು ವಿರಾಗದ ಮಾಟ.

ಊರಿನಾಚೆಯೊಳಿಹುದು ಮೀನಾಕ್ಷಿ ದೇವಾಲ
ಆ ದೇವಿ ದರ್ಶನಕೆ ಹೋಗುವರು ಬಹು ಜನರು
ಮರದ ನೆಳಲಲಿ ನಿಂದು ಚಳಿಗಾಳಿಗಳ ಸಹಿಸಿ
ಗೋವಳರು, ಹರಿಜನರು ಕೊಡುವ ತಿನಿಸುಗಳುಂಡು
ಹಗಲು ರಾತ್ರಿಗಳನ್ನು ಕಳೆಯುತಿರಲಾ ದೇವಿ
ಧನಿಕನೋರ್ವನು ನೋಡಿ ಭವ್ಯ ದೇವಾಲಯವ
ಕಟ್ಟಿಸುತ ದಿನಕೆರಡು ಸಲ ಪೂಜೆ ನಡೆವಂತೆ
ಬ್ರಾಹ್ಮಣನ ನಿಯಮಿಸಲು ಸಾಗಿದುದು ಪೂಜೆಗಳು.
ಅದರಾ ಹರಿಜನರು-ಗೋವಳರು ದೇವಿಯನು
ತಮ್ಮ ಪೂಜೆಗಳಿಂದಲರ್ಚಿಸಲು ಸಾಗದಿರೆ
ಮೊರೆಯಿಟ್ಟು ಕೂಗಿಡಲು ಮೈವೆತ್ತು ಮೀನಾಕ್ಷಿ
ಗೋಡೆಗಳನೊಡೆಯುತ್ತ ಮೊದಲಿನಂತೆಯೆ ಮರದ
ನೆಳಲಿನಲಿ ನಿಂದಿಹಳು-ಸರ್ವರಂ ಸಲಹುವಳು
ಸರ್ವರಿಷ್ಟವ ಸಲಿಸಿ ಕಾಯುತಿಹಳಾ ದೇವಿ.

ಒಂದು ದಿನ ನಾರಿಯರ ಗುಂಪೊಂದು ಹೊರಟಿರಲ
ನೋಡುತ ಗಧಾದರನು ದೇವಿ ದರ್ಶನಕೆಂದು
ತಾನು ಹೊರಡುವೆನೆನೆ ಸರ್ವರೊಪ್ಪಿದರಾಗ
ಮಾತೆಯಂ ನೆನೆಯುತಲೆ ಮರೆತ ದೇಹವನೆಲ್ಲ.
ಪದತಲದ ಮನವನರ್ಪಿಸುತ ಬಾಹ್ಯವನೆಲ್ಲ.
ಮರೆಯುತ ಸಮಾಧಿಯಲಿ ಪೊಂದುತಾನಂದಮಂ
ಸುಖಿಸುತಿರೆ, ಭಯದಿಂದ ನಡುಗಿದರು ನಾರಿಯರು
ಕೊನೆಗವನ ಕಿವಿಯಲ್ಲಿ ಮೀನಾಕ್ಷಿ ನಾಮವ
ನ್ನೊರೆಯಲ್ಕೆ ಕಣ್ದೆರೆದು ಮೊದಲಿನಂತೆಯೇ ನಡೆದು
ನೆನೆವುತಿರ್ದನು ನೆಮ್ಮದಿಯಲಿ ಬಾಲಕ ಮತ್ತೆ.

[ಸಶೇಷ.]

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯೊದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಂಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು. ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52-12 ಬೆಂಗಳೂರು ಸಿಟಿ.

---

೪೨ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೀಕಂಪನಿ

ಸುಪ್ರಸಿದ್ಧ ಜ್ವರದ ಗುಳಿಗೆ

ಇದು ಛಳಿಜ್ವರ, ಚಾತುರ್ಥಿ ಜ್ವರ, ೨ ದಿನಬಿಟ್ಟು ದಿನ ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ನಾನಾತರದ ಜ್ವರಗಳ ಮೇಲೆ ತತ್ಕ್ಷಣವೇ ಗುಣ ಸಂಜೀವಿನಿಯಂತಿದೆ! ಬಾಟ್ಲಿಗೆ 1 ರೂ. 4 ಬಾಟ್ಲಿಗೆ 3 ರೂ. 12 ಬಾಟ್ಲಿಗೆ 8 ರೂ. ವಿ. ಪಿ. ಖರ್ಚು ಬೇರೆ.

ಗಣೇಶ. ರಾಮಚಂದ್ರ ಕರ್ಕಿ.

ಮತ್ತು ಕಂಪೆನಿ,

(52-39) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹಾಶಯರ 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನವ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟೀರ ಜೋಯಪ್ಪನವರು.
ಬಾಚಮ್ಮನ ಕರ್ತಮ್ಮನವರು

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ ಮಂಡೇಪಂಡ ಸೋಮಯ್ಯನವರು,
ಮೆ. ಕೆ ಯಂ. ಸುಬ್ರಾಯನವರು
ಅಮ್ಮತ್ತಿ—ಸಿದ್ಧಾಪುರ— ಮೆ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮೆ ಪಿ. ಕೆ ಮುದ್ದಮ್ಮಯ್ಯನವರು.
ಪಿ. ಬಿರುನಾಣಿ—ಮೆ. ಅಜ್ಜಮಾಡ ಪೂವಪ್ಪನವರು ಮತ್ತು ಮೆ.
ಕೆ ಮಾದಮ್ಮಯ್ಯನವರು.
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಪೂಚಯ್ಯನವರು.
ಸೋಮವಾರಪೇಟೆ—ಮೆ ಕೆ ಮೊಗಪ್ಪನವರು.
ನಾಪೋಕ್ಲು—ಮೆ. ಚೆಟ್ಟಿಮಂಡ ಯಂ. ಪೂಣಚ್ಚನವರು,
(ನಾಪೋಕ್ಲು ಸ್ಟೋರ್ಸ್)

ಸೂಚನೆ.— ಪ್ರಿಂಟಾದ ರಶೀತಿ ಕೊಂಡಿಲ್ಲದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ,

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

The Bombay Mutual Life Assurance Society Ltd.,

Head Office:-BOMBAY. Estd 1871.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರದ ಮೇರೆ 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ 26ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52-26

[ಚಿಕ್ಕ ಡಾಕ್ಟರ್] **ವೇಪ್ರಿನ್** [ರಿಜಿಸ್ಟರ್ಡ್]

ಚರ್ಮವ್ಯಾಧಿಗಳ ವೈರಿ—ಪ್ರತಿ ಒಬ್ಬರ ಸ್ನೇಹಿತ—ಸ್ವದೇಶಿ ವಸ್ತು.

ಇದರ ಲೇಪನದಿಂದ ಕಜ್ಜಿ, ಘಾಯ, ವ್ರಣ, ಇಸಬು, ನಾರು ಹುಣ್ಣು, ಸೂಲವ್ಯಾಧಿ, ಮೆಟ್ಟಿನ ಘಾಯ, ಮುದ್ದಣ(Pimples ಸುಟ್ಟಘಾಯ, ಕತ್ತಿಘಾಯ, ತೊಡವಾಳೆ, ಗಣಕರ್ಣ ಇವು ಮಾಯವಾಗುವವು. ಇದು ಸುರಿಯುತ್ತಿರುವ ರಕ್ತವನ್ನು ನಿಲ್ಲಿಸಿ ನೋವನ್ನು ನಿವಾರಿಸುವುದು. ಅಲ್ಲದೆ ಇಂದ್ರಜಾಲಮೋಪಾದಿಯಲ್ಲಿ ಚೇಳಿನ ವಿಷವನ್ನು ಬಹಿರ್ಗತಪಡಿಸುವುದು. ನಿಮ್ಮಲ್ಲಿ ಒಂದು ಬಾಟ್ಲು ಇದ್ದಲ್ಲಿ ಒಬ್ಬ ಡಾಕ್ಟರೇ ಇದ್ದಂತಾಗುವುದು. ಕ್ರಯ ಬಹಳ ಸುಲಭ.

½ ಔನ್ಸ್ ಬಾಟ್ಲು 1ಕ್ಕೆ ಆಣೆ 0-8-0. ¼ ಔನ್ಸ್ ಬಾಟ್ಲು 1ಕ್ಕೆ ಆಣೆ 0-4-0.

ವಿ. ಸೂ:—ಪೆಟ್ಟು ತಾಗಿದ ಸ್ಥಳದಲ್ಲಿ ವೇಪ್ರಿನ್ ಚೆನ್ನಾಗಿ ತಿಕ್ಕುವುದು. ಇಲ್ಲವೇ ಬಟ್ಟೆಯ ಮೇಲೆ ಸವರಿ ಅಂಟಿಸುವುದು. ನಂತರ ಸಾಬೂನಿನಿಂದ ಕೈ ತೊಳೆಯುವುದು. ಇದಲ್ಲದೆ ಇನ್ನೂ ಅನೇಕ ತರಹದ ಔಷಧಿಗಳು ನಮ್ಮಲ್ಲಿವೆ.

ಲಸ್ಕರ್ ಮ್ಯಾನಿಫ್ಯಾಕ್ಚರಿಂಗ್ ಕಂಪೆನಿ,

ದಿ. ಪೊ. ಬೆಂಗಳೂರು ಸಿಟಿ.

52-4 ಸೋಲ್ ಏಜೆಂಟ್:—ಹರಿದಾಸ್ ನಂಜುಂಡ ಗುಪ್ತ,

ಮಡಿಕೇರಿ, (ಕೊಡಗು).

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆಶೂಲೆಗಳಿಗೂ ಅಮೃತ ಬೆಲೆ 0 1 0, 0-2 0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ ಬೆಲೆ 0-4-0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ ಬೆಲೆ 0-8-0, 0-4-0

ಸುಕುಮಾರತೈಲ

22

ಬಿಸಿಲು ಪೆಟ್ಟಿನ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತರ ನೋವು, ತಲೆ ತಿರುಗುವಿಕೆ ಮೊದಲಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ ಬೆಲೆ 1-0 0

ಪ್ರೊಪ್ರೈಟರ್-ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ ವಿ ಪಂಡಿತ್.

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು

ಕಾಲ.	1 ಪುಟಕ್ಕೆ	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ---	ರೂ 160	ರೂ 55	ರೂ. 35	ರೂ 22
6 ತಿಂಗಳಿಗೆ –	,, 100	,, 35	,, 22	,, 13
3 ತಿಂಗಳಿಗೆ	,, 60	,, 20	,, 13.	,, 8
1 ತಿಂಗಳಿಗೆ—	,, 25	,, 10	,, 6	,, 4

ನಿರ್ಭಯವಾದ ಟೀಕೆ ಟಿಪ್ಪಣಿಗಳೂ ಉದಾತ್ತವಾದ ಲೇಖನಗಳೂ—

ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು **ಆತನ ಮರಣಾನಂತರವೂ ಅಂಥವರು** ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವುದು ಅವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



"ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

61 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಜನರ ಕುಟುಂಬಗಳನ್ನು ಬಡತನದ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಡಮಾಡಬೇಡಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ವಿಶೇಷ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮಾ ಕಂಪನಿ.

ಸ್ಥಾಪಿತವಾದ್ದು 1874] ಹೆಡ್ ಆಫೀಸ್—ಮುಂಬಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವವು.

ಮಿ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು)

ಮಿ. ಎಲ್. ಎಫ್. ಸಿ. ದಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

62-35

ಮಿ. ಡಿ. ಶೇಷಾದ್ರಿ, ಅ. ಇನ್ಸ್‌ಪೆಕ್ಟರು, ಶಿವಮೊಗ್ಗಾ.

Printed & Published by P. I. Belliappa, at 'Kodagu' Press Mercara for 'Kodagu' Ltd.

Reg No. M. 1530

ನಿಮ್ಮ

ಮುದ್ರಣ ಕೆಲಸಗಳನ್ನು

" ಕೊಡಗು "

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಬಿ. ಎ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೯—೯—೧೯೩೮.

ಸಂಪುಟ ೧೮] [ಸಂಚಿಕೆ ೧೫

The Bombay Life Assurance Company Ltd.

(Estd. 1908.)

45 47, Churchgate Street, Fort Bombay.

Progress Proves Its Popularity.

Year.	Business in force.	Claims Paid.	Life Assurance Fund
1931	2.26,82.430	2.91,889	33.24,809
1933	3.07,98,435	3.54,003	50.04,871
1935	4,42,51,214	5,75,198	68.01.501
1937	6,04,70,594	6,00,918	98,68,232

Total Claims Paid Between 1909 and 1937—Rs. 50.22,576

BOMBAY LIFE is a purely India Concern Offering all that is best in Life Assurance.

To Insure or to Represent it pays you to consult us or our Branches,—

KOSHIKAR & BROTHERS Ltd.,
Madras Branch Secretaries,
7 **Post Box No. 337, Mount Road, MADRAS. [Phone No. 8248.]**

Bombay Life Building. Udipi	Gautam Nivas, Charni Road Girgaum Bombay 4	Visweswarapuram Circle Bangalore City	Puthiyara Calicut	Car Street Mangalore	Ottapalam S. Malabar	Central Station Road. Trivandrum

THE CANARA BANKING CORPORATION, UDIPI, Ltd.

(Incorporated in British India.)
Estd. 1906.

MEMBER: RESERVE BANK OF INDIA, & BANKERS' CLEARING HOUSE, MADRAS.

Paid up Capital	Rs.	3,03,205'-
Reserves	,,	3,88,842 -

Our Deposit Rates.

3 months	2½% p. a.
6 or 9 months	3 % p. a
12 months	3½% p. a.
SHORT TERM	2 % p. a.

Head Office: UDIPI, S. K.

Branches.

1. Udipi, 2. Coondapoor, 3. Car Street, Mangalore, 4. Madras, 5. Shimoga, 6. Bunder, Mangalore, 7. Mercara, 8. Virarajendrapet, 8. Saklaspur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

BANKING BUSINESS OF EVERY DESCRIPTION TRANSACTED.

Udipi,
8th July 1938.

52–40

Y. R. Kamath, B. A., LL. B.,
Manager.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ, ಮಡಿಕೇರಿ
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ	ಆ	ಪೈ
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	15,770	0	0
ಜಮೆಯಿಂದ ಠೇವಣಾತಿ	–	2,17,311	5	1
ವಸೂಲಾದ ಕ್ಷೇಮನಿಧಿ	–	1,36,514	1	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	21,304	13	11
ಫಿಕ್ಸ್ಡ ಡಿಪಾಜಿಟ್ಟು	–	35,699	5	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ಫಿಕ್ಸ್ಡ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇವರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವದು. ಫಿಕ್ಸ್ಡ ಡಿಪಾಜಿಟ್ಟು ಹೊಂದಿಕೊಳ್ಳುವದನ್ನು ತಾ 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ಸರ್ಕಾರದ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ತನಿಖೆ ಮಾಡುತ್ತಾರೆ.

ಪ್ರೆಸಿಡೆಂಟ್—ಮಂದಪಂಡ ಎ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್—ಕೌಂಡೀರ ಎ. ಮಂದಣ್ಣನವರು ಬಿ. ಎ., ಬಿ. ಎಲ್.
ಸೆಕ್ರೆಟರಿ—ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ., ಬಿ. ಎಲ್.

ತಾ 1-9-1938

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ

ಪ್ರಕಟಣೆ.

ಕಷ್ಟಕಾಲದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂಥ ಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊಪಿರೇಷನ್ ಕ್ಯಾಷ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80, 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ಪ್ರಯುಕ್ತವಾದ ರೂ 10, 25, 50, 100, 250, 500 ಮತ್ತು 1000 ಗಳು.

ಪಡುವವಾಡಿ ಕೊಡುವ ಕಾಗದಗಳನ್ನು ಗಮನಿಸಿರಿ ಹೆಚ್ಚಿನ ಮಾಹಿತಿಯನ್ನು ನಮ್ಮ ಪ್ರಧಾನ ಆಫೀಸಿನಿಂದ, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-15 — The Agricultural & Industrial Bank Ltd

"ZANDU"

ಝಂಡೂರವರ

ದ್ರಾಕ್ಷಾಸವ ಮತ್ತು ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಅಯೋಡೈಸ್ಡ ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಫ, ಪೆಟ್ಟಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಉಪಯುಕ್ತವಾದದ್ದು

ಕೆಟಲಾಗಿಗೆ ಬರೆಯಿರಿ, ಮುಫ್ತವಾಗಿ ಕಳುಹಿಸಲಾಗುತ್ತೆ

ಮಡಿಕೇರಿ ಸ್ಟಾಕಿಸ್ಟ—
ಡಾ. ಬಿ. ಕೆ. ಸಂಜುಂಡೇಶ್ವರ, ಎಲ್ ಎ ಎಂ ಎಸ್
(52 5) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜಂಟರು-ಕೆ ಕೃಷ್ಣರಾವ್, ವೀರಾಜಪೇಟೆ (ದ ಕೊಡಗು)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ'

ಧಾತುಪುಷ್ಟಿ ಲೇಹ

(ಸುವರ್ಣ, ಪ ಲ ವಿತ್ರಿ, ಕಲ್ಪದ ಮಿಶ್ರ)

ಇದು [illegible] ಶಕ್ತಿವರ್ಧಕ ರಸಾಯನ, ಸ್ವಪ್ನದೋಷ, [illegible] ನಿಂದ ಬರುವ [illegible] ರೋಗ, ಕೈಕಾಲು ಜಡತ್ವ, ಮಲಬದ್ಧತೆ, ಚಳಿಜ್ವರ, ಅಶಕ್ತತೆ ಇವುಗಳನ್ನು ಹೋಗಲಾಡಿಸಿ, ಹಸಿವನ್ನೂ, [illegible] ಹೆಚ್ಚಿಸುವದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ

ಬಾಟ್ಲಿ 1ರ ರೂ 2—8—0

ಮಲೇರಿಯಾ ನಿವಾರಿಣಿ

ಇದು ಚಳಿ ಜ್ವರ, ಚಾತುರ್ಥಿಕ ಜ್ವರ, ದಿನ ಬಿಟ್ಟುಬರುವ ಜ್ವರ, ಮಲೇರಿಯಾ ಜ್ವರ, ಇನ್‌ಫ್ಲುಯೆಂಜಾ ಇತ್ಯಾದಿ ನಾನಾ ತರದ ಜ್ವರಗಳ ಮೇಲೆ ರಾಮಬಾಣ

ಬಾಟ್ಲಿ 1ರ ರೂ 1—8—0; ಸಣ್ಣ ಬಾಟ್ಲಿ ರೂ 0—13—0.

ಸ್ಪ್ಲೀನ್ ಮಿಕ್ಚರ್

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಅಶಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು ಬಾಟ್ಲಿ 1ರ ರೂ 1—2—0

ಬಾಲಗ್ರಹ ಗುಟಿಕೆ

ಮಕ್ಕಳ ಜೇಷ್ಟ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ ಇವುಗಳಿಗೆಲ್ಲ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಷಿಯನ್ಸ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ಮಂಗಳೂರು ಸ್ಟೋರ್ಸ್, ಮಡಿಕೇರಿ. ಎ. ಬಿ. ಕಾಮತ್, ಮಡಿಕೇರಿ. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. ಸುಂದರ್ ಪ್ರಭು, ಸುಳ್ಯ [10]

ವಿ ವಿ ಧ ವಿ ಚಾ ರ.

'ಪ್ರೂವರ್' ಜನ್ಮವಿಲ್ಲವೇ?

ಅಲ್ಲಾಹಾಬಾದು-ಕರ್ನಲ್ ಗಂಜಿನಲ್ಲಿ ಕರೀಮುದುಗಿ ಕಾಣು. ಏಳು ವರ್ಷದವಳು. ಈಗ್ಗೆ ಎರಡು ವರ್ಷಗಳಿಂದ ಆಕೆ ತನ್ನ ಹಿಂದಿನ ಜನ್ಮದ ಮನೆಗೆ ಹೋಗುವುದಾಗಿ ಅಳುತ್ತ. ಆ ಮನೆಯು ಎಲ್ಲಿ ಹೇಗಿದೆ ಎಂಬುದನ್ನೂ ಹಿಂದೆ ಕೆರೆಯ ಬಳಿಯಂತೆ ಎನ್ನುವಳು. ಲಕ್ನೋದಿಂದ ಇತ್ತ ಬಂದ ಹೊಸಕೊಪ್ಪಿನ ವ್ಯಾಪಾರಿಯೊಬ್ಬರು ಇವಳನ್ನು ಕಂಡು, ತನ್ನ ಮನೆಯ ಎದುರಿನ ಮನೆ ಹಾಗೇ ಇದೆ ಎಂದರು. ಕಾಲುಗಳನ್ನು ತಕ್ಕ ಬಿಸುಡಿ ಹಿಂದಿನ ಮನೆ ತಾಯಿಯೊಡನೆ ಮಾತಾಡಲೂ, ಆ ಜನ್ಮದಲ್ಲಿ ನಡೆದುದನ್ನು ತಿಳಿಸಲೂ ಹುಡುಗಿಗೆ ಕುತೂಹಲ. 'ಅಮೃತ ಬಜಾರ್' ಪತ್ರಿಕಾ ಪ್ರತಿನಿಧಿ ಇವಳನ್ನು ಕಂಡು ವೃತ್ತಾಂತ ಬರೆದಿರುವನು.

—:0:—

ಸ್ತ್ರೀಯರುಚ ಚುಟ್ಟಿಯನ್ನು ಸೇದುವವರು!

ಸ್ತ್ರೀಯರು ಸಿಗರೇಟುಗಳನ್ನು ಸೇದುವುದು ಪಾಶ್ಚಾತ್ಯರಲ್ಲಿ ಒಂದು ವಾಡಿಕೆಯಾಗಿ [illegible] ಈ ವರೆಗೆ ಅವರ ಪುರುಷರು ಸೇದುವ ಚುಟ್ಟಿಗಳನ್ನು ಸೇದುತ್ತಿರಲಿಲ್ಲ. ಚುಟ್ಟಿಗಳನ್ನು ಸೇದಲು ಸ್ತ್ರೀಯರಿಗೆ ಸಾಧ್ಯವಿಲ್ಲವೆಂಬುದಾಗಿಯೇ ಅಭಿಪ್ರಾಯವಾಗಿತ್ತು. ಆದರೆ ಜೆಕೊಸ್ಲೊವಾಕಿಯಾದ ಸ್ತ್ರೀಯರು ಚುಟ್ಟಿಗಳನ್ನು ಸೇದುತ್ತಿರುವರಾಗಿ ವಾರ್ತೆಯು ಬಂದಿರುವುದು. ಕೋಪನ್‌ಹೇಗನ್ನಿನಲ್ಲಿ ಸ್ತ್ರೀಯರ ಸ್ಟೋರ್‌ಗಳಲ್ಲಿ ಭಾರಿ ಚುಟ್ಟಿಗಳು ಸಿಗಲಾಗುತ್ತಿವೆ ಎಂದು ತಿಳಿಯುತ್ತದೆ.

ಜಗತ್ತಿನಲ್ಲಿ ಅತ್ಯಂತ ದೊಡ್ಡದಾದ ಸಿಗಾರು, 6 ಅಡಿ ಉದ್ದ, 2 ಅಡಿ ವ್ಯಾಸ ಜರ್ಮನಿಯಲ್ಲಿ ಒಂದೆಡೆ ಮ್ಯೂಜಿಯಮ್ಮಿನಲ್ಲಿ ಇದೆ. ಇದನ್ನು ಸೇದುವವರು ಯಾರು?

—:0:—

ಸರ್ಪದ ವಿಷದ ಉಪಯೋಗ.

ಕೆಲವು ಸೀಮೆಗಳಿಂದ ಮಾನವನಲ್ಲಿ ಭಯಂಕರ ನೋವುಗಳು ಉಂಟಾಗುವುದು ಇರುವುದಷ್ಟೆ. ಈ ನೋವುಗಳ ನಿವಾರಣೆಗಾಗಿ ನ್ಯೂಯೋರ್ಕಿನ ಪ್ರಸಿದ್ಧ ವೈದ್ಯರೊಬ್ಬರು ಒಂದು ಉಪಾಯವನ್ನು ಕಂಡು ಹಿಡಿದಿರುವರು.

ನೋವು ಅಧಿಕವಾಗುವಲ್ಲಿ ರೋಗಿಗೆ ಅಫೀಮಿನ ಸತ್ವವನ್ನು ಇಂಜೆಕ್ಷನ್ ಮೂಲಕ ಪ್ರಯೋಗಿಸಿ ಅತನನ್ನು ಅಮಲು ಸ್ಥಿತಿಯಲ್ಲಿ ಡುವುದು ವೈದ್ಯರ ಸದ್ಯದ ಉಪಾಯವಾಗಿರುತ್ತದೆ.

ಅಲ್ಕೊಹೋಲ್, ಕ್ಲೊರೊಫೋರ್ಮ್, ಎಸಿಟೋನ್ ಮತ್ತು ಸರ್ಪದ ವಿಷವನ್ನು ಬೆರಸಿ ನ್ಯೂಯೋರ್ಕಿನ ಈ ವೈದ್ಯರು ಒಂದು ಔಷಧಿಯನ್ನು ಸಿದ್ಧಪಡಿಸಿರುವರು. ಇದನ್ನು ಇಂಜೆಕ್ಷನ್ ಮೂಲಕ ರೋಗಿಯ ಬೆನ್ನೆಲುಬಿನಲ್ಲಿ ಸೇರಿಸಿಬಿಟ್ಟರೆ, ದೇಹದ, ಯಾವ ಭಾಗದಲ್ಲೂ ಉಂಟಾಗುವ ಯಾವತ್ತೂ ತರದ ನೋವು ಮಾಯವಾಗುವುದಂತೆ.

—:0:—

ಸತ್ತವನು ಬದುಕಿ ಬಂದನು.

ಚೆಂಡನಾಡ ಜಿಲ್ಲೆಯ ಒಂದು ಹಳ್ಳಿಯಲ್ಲಿ ಓರ್ವ ಒಣ ಬ್ರಾಹ್ಮಣನು ಸತ್ತನು [illegible] ಬಂಧುಗಳು ಶವವನ್ನು [illegible] ಸ್ಮಶಾನಕ್ಕೆ ಒಯ್ದು [illegible] ಅವನಿಗೆ ಬೆಂಕಿ ಇಟ್ಟು ಬಂದರು. ಕೆಲವು ತಾಸುಗಳ ನಂತರ ಆ ಶವವು ಎದ್ದು ಹಿಂತಿರುಗಿ ಬಂದು [illegible] ಗುಡಿಸಲಿಗೆ ಬಂದನು. ಆದರೆ ಜನರು ಅವನು ಪಿಶಾಚಿಯೆಂದು ಅಸ್ಪೃಶ್ಯನೆಂದು ಸೇರಿಸಿಕೊಳ್ಳಲಿಲ್ಲ. ದಿವಸಗಳ ನಂತರ ಬಂದು ನನ್ನ ಹೆಂಡತಿಯನ್ನು [illegible] ನ್ಯಾಯಸ್ಥಾನಕ್ಕೆ ಹೋದ [illegible] ಹಿಂದಕ್ಕೆ ಬರಲು ಅವಕಾಶವಿರಬೇಕು [illegible] ಧೂರ್ತನೆಂದು ಊರ ಅಧ್ಯಕ್ಷರು ಹಾಳುಮಾಡಿದರು!

—:0:—

ನಾವೆಲ್ಲರೂ ಹೌದನ್ನ ಇಲ್ಲವೆ ಹೌದನ್ನಗಳು.

ಬ್ರಿಟಿಷ್ ಭಾರತ ಸ್ವಾಧೀನದ ಸುಮಾರು ಅಧಿಕಾರಿಗಳ ಸ್ಥಿತಿ ಪರಿಣಾಮವಾಗುತ್ತದೆ ಬುದ್ಧಿ ನಮಗೆ ಗೊತ್ತಿದೆ. ಹೇಳುವಂತೆ ಕೇಳುವವರು ಬುದ್ಧಿವಂತರಲ್ಲವೆಂದೂ, ಪ್ರಸಿದ್ಧರಾದ ಅನೇಕ ವ್ಯಕ್ತಿಗಳೂ ಹೌದನ್ನಗಳ ಜಾತಿಗೆ ಸೇರಿದವರೆಂದು ಲಂಡನ್ನಿನ ಎ. ಲೇಡ್ಡ್ ಎಂಬ ಮನೋವಿಜ್ಞಾನಿಯು ಹೇಳುತ್ತಾನೆ. ಇದ್ದುದು ನಿಜವಾದುದೆಲ್ಲ ಜಟಿಲವಾದ ನಮ್ಮ ಸ್ವಭಾವ ಸ್ವತಃವಾಗಿ ಹೌದನ್ನ ಇಲ್ಲವೆ ಹೌದನ್ನ ಎಂದು ಹೇಳು. ಬುದ್ಧಿವಂತ ಯಾರೋ ಒಬ್ಬನ ಸ್ವಭಾವ, ಮನಸ್ಸು ಮೊದಲಾದವು ಬದಲಾಗುವುದಿಲ್ಲ ಎಂಬ ಅಭಿಪ್ರಾಯ. ಅವನು ಪತ್ರಿಕೆಗಳನ್ನು ಓದುವಾಗ, ಫಿಲ್ಮ್ ಮೊದಲಾದವುಗಳನ್ನು ನೋಡುವಾಗ, ಸರ್ಕಸ್ಸಿನಲ್ಲಿಯ ಕೌಶಲ್ಯವನ್ನು ವರ್ಣಿಸುವಾಗ, ನಾಟಕ ನೃತ್ಯಗಳಲ್ಲಿ ತಮ್ಮ ಅಭಿಮತವನ್ನು ವ್ಯಕ್ತಪಡಿಸುವಾಗ ಸ್ವತಂತ್ರವಾದ ಅಭಿಪ್ರಾಯವನ್ನು ವ್ಯಕ್ತಗೊಳಿಸುವವನು ಕೇವಲ ಅಪರೂಪ. ಯಾರೋ ಹೊಗಳಿದರೆಂದು ನಾವೂ ಹೊಗಳುವೆವು; ಜರೆಯುವರು ಬೆಗಳುತ್ತಾರೆಂದು ನಾವೂ ಆ ಪತ್ರಿಕೆಯನ್ನು ಕೊಂಡುಕೊಳ್ಳುವೆವು ಈ ವ್ಯಕ್ತಿಗಳಿಗೆ ಹೌದನ್ನ ಹೌದನ್ನಗಳ ವ್ಯಕ್ತಿಯೆನ್ನಬಹುದು. ಅವರ ನಮ್ಮ ಅಭಿಪ್ರಾಯಗಳು ಸ್ವತಂತ್ರವಾದವುಗಳಲ್ಲ ಎಂಬುದನ್ನು ಮಾತ್ರ ಒಪ್ಪುವುದಕ್ಕೆ ವಿನಯವು ನಮ್ಮಲ್ಲಿರುವದಿಲ್ಲ. ಇದು ನಮ್ಮ ಸ್ವತಂತ್ರವಾದ ಅಭಿಪ್ರಾಯವೆಂದು ಪಟ್ಟು ಹಿಡಿಯುವಷ್ಟು ಧೈರ್ಯವಿರುತ್ತದೆ. ಆದುದರಿಂದ ಗುಪ್ತವಾದ ಹೌದನ್ನಗಳೇ ಅಧಿಕವಾಗಿರುವರೆಂದು ಲೇಡ್ಡನ ಅಭಿಪ್ರಾಯವು.

—:0:—

ದಂಡಿಸುವ ಹೊಸ ಸ್ಥಳ; ಆನೆ ಜಗಳ.

[illegible] 3 [illegible]

—:0:—

ನಾಗಮಣಿಯ ಕತೆ.

[illegible] 2 ದಿವಸಗಳ ನಂತರ [illegible] ಹೋಗಿ ನೋಡುವಾಗ [illegible] ತೆಗೆದು ನೋಡುವಾಗ ಅದು ಪ್ರಕಾಶಿಸುವ ನಾಗಮಣಿಯಾಗಿತ್ತು [illegible] ಅದನ್ನು ಕೆಲವರಿಗೆ ತೋರಿಸಿದ [illegible]

ಅದನ್ನು ತೊಲೀಸ್ ಎಂಬ ಒಬ್ಬ ಮನುಷ್ಯ [illegible] ಈ ಮಣಿಯನ್ನು ಮಾರಾಟ ಮಾಡಿ [illegible] ಕೊಟ್ಟಲ್ಲಿ ಮದುವೆ ಮಾಡುವೆನು [illegible] ಮಾಡಲು ವ್ಯಯ ಮಾಡಬೇಕು [illegible] ಕಟ್ಟಿಕೊಳ್ಳುವುದು.

—:0:—

220 ಮಕ್ಕಳ ತಂದೆ.

[illegible] 220 ಮಕ್ಕಳು [illegible]

—:0:—

ಪ್ರತಿಸಲವೂ ಅವಳಿ ಮಕ್ಕಳ ಜನನ.

[illegible]

—:0:—

ಮೋಕ್ಷದ ರಹಸ್ಯ.

ಪ್ರತಿಯೊಂದು ಕೆಲಸದಲ್ಲಿ ನಮ್ಮ [illegible] ಕಾರ್ಯವನ್ನು ಸಾಧಿಸುವ [illegible] ಜನ್ಮದಲ್ಲಿ [illegible] ಪ್ರತಿಯೊಂದು ಕಾರ್ಯವನ್ನು ಏಕಾಗ್ರಬುದ್ಧಿಯಿಂದ ಆತ್ಮವಿಶ್ವಾಸದಿಂದ ಮಾಡುತ್ತ, ಹೋದರೆ ಕಾರ್ಯಸಾಧ್ಯ [illegible] ಆದ ಕೆಲಸದಿಂದ ಮನಸ್ಸಿಗೆ ತೃಪ್ತಿಯೂ ಶಾಂತಿಯೂ ಹೆಚ್ಚು ಶಕ್ತಿಯೂ ದೊರೆಯುವವು.'

—:0:—

ಕೊಡಗಿನ ಚರಿತ್ರೆಯ ಕಥೆಗಳು.

ಕುಲ್ಲಟ್ಟಿ ಪೊನ್ನಣ್ಣ.

(ಲೇಖಕ. ಬಿ. ಎನ್. ಕೃಷ್ಣಯ್ಯ, ಎಂ. ಎ. ಬಿ. ಇಡಿ.)

ಲೇಖನಾಂಕ ೧೩

(ಎಲ್ಲಾ ಹಕ್ಕುಗಳನ್ನು ಕಾಯ್ದಿಡಲ್ಪಟ್ಟಿದೆ)

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಈ ಸಮಯದಲ್ಲಿ ಮಲೆಯಾಳಕ್ಕೆ ಇನ್ನೊಂದು ಮುಸಲ್ಮಾನರ ಸೈನ್ಯವು ಕೊಡಗಿನ ಮಾರ್ಗವಾಗಿ ಹೋಗುತ್ತಿತ್ತು. ಅದನ್ನು ವೀರರಾಜನು ತನ್ನ ಕಾರ್ಯಕಾರರಾದ ಅಪ್ಪನೆರವಂಡ ಅಚ್ಚಯ್ಯ, ಪಟ್ಟಚೆರವಂಡ ಬೋಳುಕ, ಕುಲ್ಲಟ್ಟಿ ಪೊನ್ನಣ್ಣ ಮೊದಲಾದವರ ಸಹಾಯದಿಂದ ಹೆಗ್ಗಳದಲ್ಲಿ ಎದುರಿಸಿ ಸೋಲಿಸಿದನು.

ಟಿಪ್ಪುಸುಲ್ತಾನನು ವೀರರಾಜನು ತನ್ನ ಕಡೆಯವರನ್ನು ಸೋಲಿಸುತ್ತಿರುವುದನ್ನು ನೋಡಿ ಅವನನ್ನು ಪೂರ್ತಿಯಾಗಿ ಅಡಗಿಸುವುದಕ್ಕೂ, ಮಡಿಕೇರಿ, ಭಾಗಮಂಡಲ, ಬೆಪ್ಪುನಾಡು, ಕುಶಾಲ್‌ನಗರ ಕೋಟೆಗಳಿಗೆ ಬೇಕಾದ ಆಹಾರ ಸಾಮಗ್ರಿಗಳನ್ನು ತಲುಪಿಸುವುದಕ್ಕೂ ತನ್ನ ಬಾವ ಮೈದುನನಾದ ಬುರಾನುದ್ದೀನನನ್ನು ಒಂದು ದೊಡ್ಡ ದಂಡು ಕೊಟ್ಟು ಕಳುಹಿಸಿದನು. ಬುರಾನುದ್ದೀನನು ಕುಶಾಲನಗರದ ಕೋಟೆಗಳಿಗೆ ಸಾಮಾನುಗಳನ್ನು ಹಾಕಿ ಮಡಿಕೇರಿಗೆ ಹೋಗುತ್ತಿರುವಾಗ್ಯೆ ವೀರರಾಜನು ಬುರಾನುದ್ದೀನನೊಡನೆ ಯುದ್ಧ ಮಾಡಿದನು. ಆಗ ಬುರಾನುದ್ದೀನನು ಆಹಾರ ಸಾಮಗ್ರಿಗಳನ್ನು ಅರೆವಾಸಿ ಅಲ್ಲಿಯೇ ಬಿಟ್ಟು ಉಳಿದವನ್ನು ಕಷ್ಟದಲ್ಲಿ ಮಡಿಕೇರಿ ಕೋಟೆಗೆ ಸಾಗಿಸಿದನು. ಅನಂತರ ಬುರಾನುದ್ದೀನನು ಶ್ರೀರಂಗಪಟ್ಟಣಕ್ಕೆ ಹಿಂತಿರುಗಿ ಹೋಗಿ ಒಂದು ದೊಡ್ಡ ಸೈನ್ಯವನ್ನೂ ನಾಲ್ಕು ಕೋಟೆಗಳಿಗೆ ಮಳೆಗಾಲಕ್ಕೆ ಬೇಕಾದ ಆಹಾರ ಸಾಮಗ್ರಿಗಳನ್ನೂ ತರುವ ಸಿದ್ಧತೆಯನ್ನು ಮಾಡುತ್ತಿದ್ದನು. ಈ ಸಂಗತಿಯನ್ನು ವೀರರಾಜನು ತಿಳಿದು ಬುರಾನುದ್ದೀನನು ಬರುವ ಮೊದಲೇ ಈ ನಾಲ್ಕು ಕೋಟೆಗಳನ್ನು ಹಿಡಿಯಬೇಕೆಂದು ನಿಶ್ಚಯಿಸಿ 1789ರಲ್ಲಿ ಕುಶಾಲ್‌ನಗರದ ಕೋಟೆಯನ್ನು ಹಿಡಿಯುವುದಕ್ಕೋಸ್ಕರ 1,500 ಕೊಡಗರನ್ನು ತೆಗೆದುಕೊಂಡು ಹೋಗಿ ನಂಜರಾಯಪಟ್ಟಣದ ದೇವಸ್ಥಾನದ ಬಳಿ ಇಳಿದುಕೊಂಡನು. ಅವನ ಸೈನ್ಯಕ್ಕೆ ಕುಲ್ಲಟ್ಟಿ ಪೊನ್ನಣ್ಣನು ಮುಖ್ಯಾಧಿಕಾರಿಯಾಗಿದ್ದನು. ವೀರರಾಜನು ಅಲ್ಲಿ ನಾಲ್ಕು ದಿವಸಗಳಿದ್ದು, ನಾಲ್ಕನೆ ದಿವಸ ಸಾಯಂಕಾಲಕ್ಕೆ ಕುಶಾಲ್‌ನಗರದ ಸಮೀಪದ ಬೈಚನಳ್ಳಿ ಕೆರೆಯ ಹತ್ತಿರದ ಮೈದಾನಕ್ಕೆ ಬಂದನು. ಆ ಸಾಯಂಕಾಲವೇ ರಾಜನು ತನ್ನ ಕಡೆಯ ಸ್ವಲ್ಪ ಜನರನ್ನು ಕೋಟೆಯ ಒಳಗಿನ ಬಲಾಬಲಗಳನ್ನು ತಿಳಿಯಲು ಕೋಟೆಯ ಹತ್ತಿರಕ್ಕೆ ಕಳುಹಿಸಿದನು. ಆಗ ಕೋಟೆಯ ಒಳಗಿದ್ದವರು ಇವರ ಕಡೆಗೆ ಗುಂಡು ಹೊಡೆದು ಇವರನ್ನು ಓಡಿಸಿಕೊಂಡು ಬಂದರು. ಆ ಸ್ವಲ್ಪ ಮಂದಿ ಕೊಡಗರು ಸೋತು ಹಿಂದಕ್ಕೆ ಬಂದರು. ಇದನ್ನು ನೋಡಿ ವೀರರಾಜನು ಸಿಟ್ಟಾಗಿ ಕುಲ್ಲಟ್ಟಿ ಪೊನ್ನಣ್ಣನನ್ನು ಉಳಿದ ಎಲ್ಲಾ ಕೊಡಗರನ್ನು ಕರೆದುಕೊಂಡುಹೋಗಿ ಶತ್ರುಗಳ ಮೇಲೆ ಬಿದ್ದು ಸೋಲಿಸುವಂತೆ ಅಜ್ಞಾಪಿಸಿದನು. ಅದೇ ಮೇರೆ ಕುಲ್ಲಟ್ಟಿ ಪೊನ್ನಣ್ಣನು ತನ್ನ ಜನರನ್ನು ಕರೆದುಕೊಂಡು ಹೋಗಿ ಮುಸಲ್ಮಾನರ ಮೇಲೆ ಬಿದ್ದನು. ಆಗ ಟಿಪ್ಪುಸುಲ್ತಾನನ ಸೈನಿಕರು ಇವರ ಪೆಟ್ಟು ತಾಳಲಾರದೆ ಓಡಿ ಹೋಗಿ ಕೋಟೆಯೊಳಗೆ ಸೇರಿಕೊಂಡರು. ಕುಲ್ಲಟ್ಟಿ ಪೊನ್ನಣ್ಣನು ಸೈನ್ಯ ಸಮೇತ ಅವರನ್ನು ಓಡಿಸಿಕೊಂಡು ಅವರ ಬೆನ್ನ ಹಿಂದೆಯೇ ಕೋಟೆಯನ್ನು ಹೊಕ್ಕು ಅನೇಕರನ್ನು ಕಡಿದು ಹಾಕಿದನು. ಆಗ ಕೋಟೆಯ ಒಳಗೆ ಇದ್ದ 700 ಜನರು ಕೋಟೆ ಬಿಟ್ಟು ಓಡಿ ಹೋಗುವುದಕ್ಕೆ ಪ್ರಾರಂಭಿಸಿದರು. ಆಗ ಕುಲ್ಲಟ್ಟಿ ಪೊನ್ನಣ್ಣನೂ, ಅವನ ಕಡೆಯವರೂ ಅವರನ್ನು ಬೆನ್ನಟ್ಟಿ ನೂರು ಮುನ್ನೂರು ಜನರನ್ನು ತಮ್ಮ ಒಡಿಕತ್ತಿಗಳಿಂದ ಕಡಿದು ಕಾವೇರಿ ನದಿಗೆ ಹಾಕಿಬಿಟ್ಟರು. ಆದರೆ ಕುಶಾಲ್‌ನಗರದ ಕೋಟೆಯ ಕಿಲ್ಲೇದಾರನು ತನ್ನ ಕಡೆ ಉಳಿದ ಜನರ ಸಮೇತ ಬೆಟ್ಟದ ಕಡೆಗೆ ಓಡಿ ಹೋಗುತ್ತಿದ್ದನು. ಕುಲ್ಲಟ್ಟಿ ಪೊನ್ನಣ್ಣನು ಬೆಟ್ಟದ ಶಿರದ ಹತ್ತಿರ ಬೆಳುಗುಂದ ವರೆಗೆ ಅವರನ್ನು ಬೆನ್ನಟ್ಟಿ ಹೋಗಿ ಅಲ್ಲಿ ಕಠಿಣ ಯುದ್ಧ ಮಾಡಿ ಕಿಲ್ಲೇದಾರನ ತಲೆಯನ್ನು ಕಡಿದು ಹಾಕಿದನು. ಅನಂತರ ಆ ತಲೆಯನ್ನು ತೆಗೆದುಕೊಂಡು ಬಂದು ಬೈಚನಳ್ಳಿ ಕೆರೆಯ ಏರಿಯ ಮೇಲೆ ಡೇರೆ ಹೊಡೆದಿದ್ದ ವೀರರಾಜನ ಮುಂದೆ ನಿವಾಳಿಸಿ ಹಾಕಿಬಿಟ್ಟನು. ರಾಜನಿಗೆ ಪೊನ್ನಣ್ಣನ ಶೌರ್ಯವನ್ನು ನೋಡಿ ಹೇಳಲಾರದಷ್ಟು ಆಶ್ಚರ್ಯವೂ, ಸಂತೋಷವೂ ಉಂಟಾದವು. ಆ ಕ್ಷಣವೇ ರಾಜನು ಪೊನ್ನಣ್ಣನಿಗೆ ಅನೇಕ ಬಹುಮಾನಗಳನ್ನು ಕೊಟ್ಟು ಕಿಲ್ಲೇದಾರನ ರುಂಡವನ್ನು ಪೊನ್ನಣ್ಣನು ತಂದಿಟ್ಟ ಸ್ಥಳದಲ್ಲಿ ಒಂದು ಕಲ್ಲನ್ನು ನೆಡಿಸಿ ಅದಕ್ಕೆ 'ಕುಲ್ಲಟ್ಟಿ ಪೊನ್ನಣ್ಣನ ಕಲ್ಲು' ಎಂದು ಹೆಸರಿಟ್ಟನು. ಮಾರಣೆ ದಿವಸ ಬೆಳಿಗ್ಯೆ ವೀರರಾಜನು ವಿಜೃಂಭಣೆಯಿಂದ ಕೋಟೆಯೊಳಗೆ ಪ್ರವೇಶ ಮಾಡಿದನು.

ಇಷ್ಟರಲ್ಲಿ ಮಳೆಗಾಲವು ಪ್ರಾರಂಭವಾಗಲು ರಾಜನು ಎರಡು ತಿಂಗಳು ನಾಲ್ಕುನಾಡು ಅರಮನೆಯಲ್ಲಿ ಸುಮ್ಮನಿದ್ದು ಮಳೆ ಕಡಿಮೆಯಾಗುತ್ತಲೇ ಬೆಪ್ಪುನಾಡಿನ ಕೋಟೆಯನ್ನು ಹಿಡಿದನು. ವೀರರಾಜನು ಕೊಡಗಿನ ಕೋಟೆಗಳನ್ನೆಲ್ಲಾ ಹಿಡಿಯುತ್ತಿರುವುದನ್ನು ಟಿಪ್ಪುಸುಲ್ತಾನನು ಕೇಳಿ ತನ್ನ ಬಾವ ಮೈದುನ ಬುರಾನುದ್ದೀನನನ್ನು ಇನ್ನು ಕೆಲವು ಸೈನ್ಯಾಧಿಕಾರಿಗಳೊಡನೆ ಕಳುಹಿಸಿದನು. ಇವರಲ್ಲಿ ಶೇಕ್ ಅನ್ಸರನು ದಂಡು ಸಮೇತ ಕಾವಾಡಿಯಲ್ಲಿಳಿದನು. ವೀರರಾಜನು ಇವನನ್ನು ಸೋಲಿಸಲು ಅನ್ಸರನು ಭಾಗಮಂಡಲದ ಕೋಟೆಗೆ ಸಾಮಾನು ಸಾಗಿಸುತ್ತಿದ್ದ ಬುರಾನುದ್ದೀನನ ಸೈನ್ಯವನ್ನು ಸೇರಿಕೊಂಡನು. ಬುರಾನುದ್ದೀನನು ಸಾಮಾನುಗಳನ್ನು ಸಾಗಿಸಿಕೊಂಡು ಕಡಿಯತ್ತು ನಾಡಿಗಾಗಿ ಭಾಗಮಂಡಲಕ್ಕೆ ಹೋಗುತ್ತಿದ್ದನು. ಆಗ ಕುಲ್ಲಟ್ಟಿ ಪೊನ್ನಣ್ಣ, ಪಟ್ಟಚೆರವಂಡ ಬೋಳುಕ ಮತ್ತು ಅಪ್ಪನೆರವಂಡ ಅಚ್ಚಯ್ಯ ಮೊದಲಾದ ಕೊಡಗು ವೀರರು ಕಡಿಯತ್ನಾಡಿನಲ್ಲಿ ಬುರಾನುದ್ದೀನನ ಒಂದು ಮುಕಡಿಯ ಮೇಲೆ ಬಿದ್ದು ಅನೇಕ ಜನರನ್ನು ಕೊಂದು ಹಾಕಿದರು. ಆದರೂ ಬುರಾನುದ್ದೀನನು ಹೆದರದೆ ತನ್ನ ದೊಡ್ಡ ಫೌಜು ಸಮೇತ ನೂರಂಬಡದ ಮೈದಾನದಲ್ಲಿ ಇಳಿದನು. ಈ ವರ್ತಮಾನವನ್ನು ಪೊನ್ನಣ್ಣನ ಅಣ್ಣ ಮೊಣ್ಣಪ್ಪನು ಕೇಳಿ ಅಲ್ಲಿ ಅವನ ಮೇಲೆ ಬಿದ್ದನು. ಆದರೆ ಬುರಾನುದ್ದೀನನು ಸೋತು ಅಲ್ಲಿಂದ ಮುಂದಕ್ಕೆ ಹೊರಟು ನಲ್ಕ ಮಾರ್ಗವಾಗಿ ನಾವಟ್ಟಿಗೆ ತಲುಪಿದನು. ಅಲ್ಲಿ ಒಂದು ಅಶ್ವತ್ಥದ ಸ್ಥಳದಲ್ಲಿ ವೀರರಾಜೇಂದ್ರನು ಪೊನ್ನಣ್ಣ, ಅಚ್ಚಯ್ಯ ಮೊದಲಾದವರ ಸಂಗಡ ಕಾದು ನಿಂತಿದ್ದನು. ಅಲ್ಲಿ ಬುರಾನುದ್ದೀನನಿಗೂ, ವೀರರಾಜನಿಗೂ ದೊಡ್ಡ ಯುದ್ಧ ನಡೆದು ಬುರಾನುದ್ದೀನನು ತರಿಸಿದ್ದ ಸಾಮಗ್ರಿಯನ್ನು [illegible] ಕೈಯಿಂದ ಭಾಗಮಂಡಲಕ್ಕೆ ಕಳುಹಿಸಿದನು. ಈ ಸಾಮಾನು ಭಾಗಮಂಡಲದ ಕೋಟೆಯಲ್ಲಿದ್ದ ಜನರಿಗೆ ಸೇರಿದ ಮೇಲೆ ಇಲ್ಲಿಂದ ಬುರಾನುದ್ದೀನನು ತನ್ನ ಕೆಲವು ಸೈನಿಕರನ್ನು ಆಹಾರ ಸಾಮಗ್ರಿಗಳನ್ನು ತರುವುದಕ್ಕೋಸ್ಕರ ತುಳುನಾಡಿಗೆ ತೊಡಿಕಾನ ಮಾರ್ಗವಾಗಿ ಕಳುಹಿಸಿದನು. ಆ ಸೈನಿಕರು ತುಳುನಾಡಿಗೆ ಹೋಗುವಾಗಲೂ, ಹಿಂದಕ್ಕೆ ಆಹಾರ ಸಾಮಗ್ರಿಗಳನ್ನು ತರುವಾಗಲೂ ಪೊನ್ನಣ್ಣನು ತನ್ನ ಕಡೆ ಜನರೊಡನೆ ಪಟ್ಟ ಎಂಬಲ್ಲಿ ಕಾದಿದ್ದು ಅವರ ಮೇಲೆ ಬಿದ್ದು ಅವರು ತರುತ್ತಿದ್ದ ಸಾಮಾನಿನಲ್ಲಿ ಅರ್ಧವನ್ನು ಕಿತ್ತುಕೊಂಡನು. ಇದರ ನಂತರ ವೀರರಾಜನು ಭಾಗಮಂಡಲ ಕೋಟೆ ಮತ್ತು ಮಡಿಕೇರಿ ಕೋಟೆಗಳನ್ನು ಹಿಡಿದುಕೊಳ್ಳುವವರೆಗೆ ಪೊನ್ನಣ್ಣನೂ ಇತರ ಕಾರ್ಯಕಾರರೂ ಬಹಳ ಧೈರ್ಯದಿಂದ ಕಾದಿದರು.

ಈ ಮಧ್ಯೆ ಎಂದರೆ ಕ್ರಿ. ಶ. 1793ರಲ್ಲಿ ವೀರರಾಜನೂ, ಪೊನ್ನಣ್ಣನೂ ನಾಲ್ಕುನಾಡಿಗೆ ಹೋಗುವಾಗ ದಾರಿಯಲ್ಲಿ ಕುಲ್ಲಟ್ಟಿ ಹಳೇ ಮನೆಯ ಹತ್ತಿರ ಒಂದು ರಾತ್ರಿ ಉಳಿದಿದ್ದರು. ಆಗ ವೀರರಾಜನು ನೂರಂಬಡ ಗ್ರಾಮದಲ್ಲಿ ಟಿಪ್ಪುವಿನ ಸೈನಿಕರು ಮಾಡಿದ ಅನಾಹುತವನ್ನೂ ಮತ್ತು ಮೊಣ್ಣಪ್ಪ, ಪೊನ್ನಣ್ಣ ಇವರಿಗೆ ನಿಲ್ಲುವುದಕ್ಕೆ ಒಂದು ನೆರಳೂ ಸಹ ಇಲ್ಲದಿರುವುದನ್ನು ನೋಡಿ ದುಃಖಪಟ್ಟು ಅರಮನೆ ಖರ್ಚಿನಿಂದ ಇವರಿಗೆ ತಾಳು ಡೇರೆ ಹೊಡೆದ ಸ್ಥಳದಲ್ಲಿಯೇ ಪಂಚಾಂಗ ಹಾಕಿಸಿ ಒಂದು ಮನೆಯನ್ನು ಕಟ್ಟಿಸಿ ಕೊಟ್ಟನು.

ಇಷ್ಟರೊಳಗೆ ವೀರರಾಜನಿಗೂ ಈಸ್ಟ್ ಇಂಡಿಯಾ ಕಂಪೆನಿಯವರಿಗೂ ಮೈತ್ರಿಯುಂಟಾಯಿತು. ಕಂಪೆನಿಯವರು ಟಿಪ್ಪುಸುಲ್ತಾನನೊಡನೆ ಮಾಡಿದ ಯುದ್ಧಗಳಲ್ಲಿ ವೀರರಾಜನು ಕಂಪೆನಿಯವರ ಸೈನಿಕರಿಗೆ ಬೇಕಾದ ಆಹಾರ ಸಾಮಗ್ರಿಗಳನ್ನೂ, ಸಾಮಾನು ಸಾಗಿಸುವುದಕ್ಕೆ ಜನರನ್ನೂ ಎತ್ತುಗಳನ್ನೂ ಒದಗಿಸಿಕೊಟ್ಟನು. ಟಿಪ್ಪುಸುಲ್ತಾನನೊಡನೆ ಮಾಡಿದ ಕೊನೆಯ ಯುದ್ಧದಲ್ಲಿ ವೀರರಾಜನು ಪಿರಿಯಾಪಟ್ಟಣದ ಬಳಿ ದಂಡು ಬಿಟ್ಟಿದ್ದ ಜನರಲ್ ಫ್ಲಾಯಿಡ್ ಎಂಬ ಸೈನ್ಯಾಧಿಕಾರಿ ಇದ್ದಲ್ಲಿಗೆ ಹೋಗಿದ್ದನು. ಆಗ ವೀರರಾಜನ ಮೈಗಾವಲಿನವರ ಮುಖ್ಯಸ್ಥನಾಗಿ ಪೊನ್ನಣ್ಣನೂ ಪಿರಿಯಾಪಟ್ಟಣಕ್ಕೆ ಹೋದನು. ವೀರರಾಜನು ಜನರಲ್ ಫ್ಲಾಯಿಡನ ಅತಿಥಿಯಾಗಿ ಒಂದೆರಡು ದಿವಸಗಳಿದ್ದು ಅನಂತರ ಹಿಂದಕ್ಕೆ ಗುಂಡಿ ಪಟ್ಟಣದ ಕಡೆ ಎರಿ ಬಳಿ ಇದ್ದ ಜನರಲ್ ಸ್ಟುವರ್ಟ್ ನಾಹೇಂಬನ ಪಾಳಯಕ್ಕೆ ಬಂದನು. ಅಲ್ಲಿರುವಾಗ ಒಂದು ರಾತ್ರಿ ಪಾಳಯದ ಹತ್ತಿರದ ಕೆರೆಗೆ ಇಳಿಸಲ್ಪಟ್ಟಿದ್ದ ಆನೆಗಳು ಗಾಬರಿಯಾಗಿ ಅಕಸ್ಮಾತ್ತೆ ಓಡುವ ಕಾಲದಲ್ಲಿ ಕೆಲವು ಸಿಪಾಯಿಗಳನ್ನೂ ಕುಲ್ಲಟ್ಟಿ ಪೊನ್ನಣ್ಣನನ್ನೂ ತುಳಿದುಬಿಟ್ಟವು. ಇದರಿಂದ ಪೊನ್ನಣ್ಣನ ಕಾಲು ಮುರಿದು ಹೋಯಿತು. ವೀರರಾಜನು ಪೊನ್ನಣ್ಣನ ಅವಸ್ಥೆಯನ್ನು ನೋಡಿ ವ್ಯಸನಪಟ್ಟು ಕಂಪೆನಿಯವರ ವೈದ್ಯರಿಂದ ಔಷಧಿ ಮಾಡಿಸಿದನು. ಆದರೆ ಪೊನ್ನಣ್ಣನಿಗೆ ಕಾಲು ನೆಟ್ಟಗಾಗಲಿಲ್ಲ. ಅದರಿಂದ ರಾಜನು ಮಡಿಕೇರಿಗೆ ಬಂದ ಕೂಡಲೇ ಅವನು ರಾಜನಿಂದ ಅಪ್ಪಣೆ ಪಡೆದು ತನ್ನ ಮನೆಗೆ ಬಂದು ವಾಸಿಸಿದನು.

ನೂರಂಬಾಡದಲ್ಲಿ ಮೊಣ್ಣಪ್ಪನೂ, ಪೊನ್ನಣ್ಣನೂ ಗ್ರಾಮಸ್ಥರನ್ನು ಸೇರಿಸಿಕೊಂಡು ಟಿಪ್ಪುವಿನ ಸೈನಿಕರು ಹಾಳು ಮಾಡಿದ್ದ ದೇವಸ್ಥಾನವನ್ನು ಕಟ್ಟಿಸಿ ಅಷ್ಟಗಂಧ ಹಾಕಲು ಮಲೆಯಾಳದಲ್ಲಿರುವ ಕಾಳಿಕಾಟು ತಂತ್ರಿಯನ್ನು ಕರೆಸಿದರು. ಅದೇ ಸಮಯದಲ್ಲಿ ಮಕ್ಕಿ ಗ್ರಾಮದವರು ತಮ್ಮ ಗ್ರಾಮದಲ್ಲಿ ಹಾಳು ಬಿದ್ದಿದ್ದ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿ ಅದಕ್ಕೆ ಅಷ್ಟಗಂಧ ಹಾಕಲು ಕಾಳಿಕಾಟು ತಂತ್ರಿಗೆ ಹೇಳಿ ಕಳುಹಿಸಿದರು. ಕಾಳಿಕಾಟು ತಂತ್ರಿಯು ನೂರಂಬಡಕ್ಕೆಂದು ಹೊರಟು ಬರುತ್ತಿರುವಾಗ ಮಕ್ಕಿ ಗ್ರಾಮಸ್ಥರು ಆತನನ್ನು ತಡೆದು ತಮ್ಮ ದೇವಸ್ಥಾನದಲ್ಲಿ ಅವನಿಂದ ಅಷ್ಟಗಂಧ ಹಾಕಿಸಿದರು. ಇದರಿಂದ ಪೊನ್ನಣ್ಣನಿಗೆ ಸಿಟ್ಟು ಬಂದು ಆ ಕ್ಷಣವೇ ಬೇರೆ ತಂತ್ರಿಯನ್ನು ಕರೆಸಿ ಕಕೇರಿ ದೇವಸ್ಥಾನದಲ್ಲಿಯೂ ಅಷ್ಟಗಂಧ ಹಾಕಿಸಿದನು. ಅನಂತರ ಕಾಳಿಕಾಟು ತಂತ್ರಿಯು ಭಾಗಮಂಡಲಕ್ಕೆ ಹೊರಟು ದಾರಿಯಲ್ಲಿದ್ದ ಕುಲ್ಲಟ್ಟಿ ಮನೆಯ ಮುಂಭಾಗದ ಚೇರಮಾನ ಪಟ್ಟಿಯೆಂಬಲ್ಲಿಗೆ ಬಂದನು. ಆಗ ಪೊನ್ನಣ್ಣನು ಆ ತಂತ್ರಿಯ ಪಲ್ಲಕಿಯನ್ನು ತಡೆದು ತನ್ನ ಮುಂದೆ ಆತನು ಪಲ್ಲಕಿಯಲ್ಲಿ ಕುಳಿತುಕೊಂಡು

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ—ಈ ವರ್ಷದಲ್ಲಿ 12,31,750 ರೂ ಬಾಬ್ತಿನ 4680 ಪ್ರಪೋಸಲುಗಳು ಸಿಕ್ಕಿವೆ. ಅವರಲ್ಲಿ ಒಂದನೆ ವರ್ಷದ ಪ್ರೀಮಿಯಂ ಕೊಟ್ಟ 1447 ಪ್ರಪೋಸಲುಗಳ ಬಾಬ್ತು 10,67,650 ರೂ ಗಳ ಬಗ್ಗೆ ವಾರ್ಷಿಕ 2,71,959-6-0 ರೂ ವಿಮಾ ಕಂತು ಬರುತ್ತೆ. ಕಂಪನಿಯಿಂದ ಸ್ವೀಕರಿಸಲ್ಪಡದಿರುವ ಹಣ ರೂ 30,38,150 ಬಾಕಿ ರೂ 1,29,500 ವಾಪಸು ಬರಲು ಕೊಟ್ಟಿದ್ದಾಗಿದೆ. ಬಾಕಿ ಇರುವ ಪ್ರಪೋಸಲುಗಳು ವರ್ಷಾಂತ್ಯದಲ್ಲಿ ತೀರ್ಮಾನಿಸಲು, ಮುಂದುವರಿಸಲು ಇಲ್ಲವೇ ಪೂರ್ತಿಗೊಳಿಸಲು ಕಾಯುತ್ತಿವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ 4,13,775 ಹೆಚ್ಚಿದೆ.

ಈ ಕೆಳಗಿನ ಒಕ್ಕಿ ಸಂಗತಿಗಳಿಂದ ಉಳಿದ ಸ್ಥಿತಿಯನ್ನು ನೋಡಬಹುದು. ಅನುಭವಿಗಳು ವ್ಯಕ್ತಿಗಳು ಇಷ್ಟಪಡುತ್ತಾರೆ.

ಇಂಡಿಯಾ ಸರಕಾರದ ಧೋರಣೆಯಿಂದ ಪ್ರಕಟಿಸಿದ ಸುಮಾರು 215 ಇಂಡಿಯನ್ನರ ಕಂಪೆನಿಗಳಿಗೋಸ್ಕರ ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಶೂರೆನ್ಸ್ ಇಯರ್ ಬುಕ್' ಎಂಬುದರಿಂದ ತಿಳಿದುಬರುತ್ತದೆ. ಈ ಕಂಪನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ವೃದ್ಧಿಯಿಂದ ಮೊದಲಿನ 20 ಕಂಪನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇನ್ನೂ ಹಿಂದಿನ ವರ್ಷಗಳ ವರೆಗೆ ಕ್ರಮಿಸುತ್ತಿರುವ ಸಂಸ್ಥೆಗಳ ಪೈಕಿ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಪೆಟ್ರೋಲಿಯನ್ ಕಂಪನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೆಯದಾಗಿದೆ. ಒಂದನೆಯದಾದ ಕಂಪನಿಯು ಇದಕ್ಕಿಂತ 25 ವರ್ಷಗಳ ಮುಂಚೆ ಸ್ಥಾಪಿಸಲ್ಪಟ್ಟಿದ್ದಾಗಿದೆ.

ವಿಮಾ ಕಂತುಗಳ ಆದಾಯ—ಈ ವರ್ಷದ ಎಲ್ಲಾ ವಿಮಾ ಕಂತುಗಳ ಆದಾಯವು (ಪುನಃ ಬರವನೆ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮಾ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಾದ ವರದಿ ವರ್ಷದ ವಿಮಾ ಕಂತಿನ ಆದಾಯವು ರೂ 3,66,198-13-0, ಗತ ವರ್ಷದ್ದು 2,36,767-6-6 ಆಗಿದೆ.

ಜೀವವಿಮಾ ನಿಧಿ—ಈ ಕಂಪನಿಯ ಜೀವ ವಿಮಾ ನಿಧಿ ರೂ 75,258-11-9ರಿಂದ, ವ್ಯವಸ್ಥಾ ಖರ್ಚಿಗೆ ಮತ್ತು ಇತರ ಖರ್ಚುಗಳಿಗಾಗಿ ರೂ 45,037-8-4 ಹಣ ಕಳೆದು ರೂ 21,00,421 1-3ಕ್ಕೆ ಏರಿದೆ. ಈ ಕೆಳಗೆ ಅದರ ತಖ್ತೆಯನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ	**ವಿಮಾ ಕಂತು.**	**ಜೀವ ವಿಮಾ ನಿಧಿ.**
1ನೇ ವರ್ಷದ	ರೂ 1,16,919	ರೂ 15,619
2ನೇ ವರ್ಷದ	,, 2,36,767	,, 75,259
3ನೇ ವರ್ಷದ	,, 3,66,199	,, 2,00,121

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತ ವಿಮಾ ಕಂಪನಿಗಳ ವಾರ್ಷಿಕ ಪ್ರಕಟಣೆಯಲ್ಲಿ ದಾಖಲಾರ್ಹವಾದದ್ದೇ ಆಗಿದೆ.

ಭಾರತ ಜೀವವಿಮಾ ಕಂಪೆನಿಗಳ ಆಕ್ಟಿನ ಮೇರೆ ಠೇವಣಾತಿ—ಈ ಕಂಪನಿಯು ಮೇರೆ ಠೇವಣಾತಿ ಮಾಡಬೇಕಾಗಿದ್ದ ರೂ, 2 ಲಕ್ಷವನ್ನು ಪೂರ್ತಿಯಾಗಿ ಡಿಪಾಜಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷವುಳ್ಳವರಾಗಿರುವರು.

ಸಿ. ಯಂ ತಿಮ್ಮಯ್ಯ,

(52-14) ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

ಯೂನಾನಿ ಫಾರ್ಮಸಿಯ ಉತ್ತಮ ಔಷಧಿಗಳು.

ಉಬ್ಬಸ ಸಂಹಾರಿ (Asthma cure) ಕೆಲವು ದಿನಗಳ ಸೇವನೆಯಿಂದ ಉಬ್ಬಸವನ್ನು ಖಾತ್ರಿಯಾಗಿ ಗುಣಪಡಿಸುತ್ತದೆ. 40 ದಿನದ ಔಷಧಿಗೆ ಕ್ರಯ ರೂ 5—12—0

ಅಂಬರ್ ಕೂದಲೆಣ್ಣೆ, ಸುಗಂಧಯುಕ್ತ ಆಮ್ಲ ಕೇಶ ತೈಲ ಅಲ್ಲದೆ ಎಲ್ಲಾ ರೋಗಗಳಿಗೂ ರಾಮಬಾಣದಂತಿರುವ ಮಾತ್ರೆಗಳೂ, ಚೂರ್ಣಗಳೂ, ಲೇಹಗಳೂ, ತೈಲಗಳೂ ಮತ್ತು ಕೇಶ ತೈಲಗಳೂ ಸಹ ತಯಾರಿರುವವು.

ಬೇಗನೆ ಬರೆಯಿರಿ:—

ಯಂ. ಯಂ ಸಿದ್ದೀಕ್,

27 ಪ್ರೊಪ್ರೈಟರ್,

ಯುನಾನಿ ಔಷಧಶಾಲಾ, ಮಡಿಕೇರಿ, ಕೊಡಗು.

ಹೋಗತೊಡಗಿದನು, ನಡೆದುಕೊಂಡು ಹೋಗಬೇಕೆಂದನು. ಆ ತಂತ್ರಿಯು ಪಲ್ಲಕ್ಕಿಯಿಂದ ಇಳಿಯಲಿಲ್ಲ. ಆಗ ಪೊನ್ನಣ್ಣನು ಬೋಯಿಗಳನ್ನು ಗದರಿಸಿ ಪಲ್ಲಕ್ಕಿಯನ್ನು ಕೆಳಗೆ ಇಳಿಸಿ ಅವನ್ನು ಕಾಲಿನಿಂದ ಒದ್ದು ಹೊಳಿಸಿದನು. ಇದನ್ನು ನೋಡಿ ತಂತ್ರಿಯು ಸಿಟ್ಟಿನಿಂದ 'ನೀನೇಗಾದರೂ ನಿನ್ನ ವಂಶದವರಿಗಾದರೂ ಒಳ್ಳೆ ಗತಿಯಿಲ್ಲ' ಎಂದು ಶಪಿಸಿದನು. ಈ ಸಂಗತಿಯನ್ನು ಪೊನ್ನಣ್ಣನ ಅಣ್ಣ ಮಾಣಿಕ್ಯನು ಕೇಳಿ ವ್ಯಸನಪಟ್ಟು ಅಲ್ಲಿಗೆ ಬಂದು ಪೊನ್ನಣ್ಣನನ್ನು ಕ್ಷಮಿಸಬೇಕೆಂದು ತಂತ್ರಿಯನ್ನು ಬೇಡಿಕೊಂಡನು. ಪೊನ್ನಣ್ಣನಿಗೂ ಬಹಳ ಹೇಳಿ ತಂತ್ರಿಯ ಕ್ಷಮಾಪಣೆಯನ್ನು ಕೇಳಿಸಿದನು. ಆಗ ತಂತ್ರಿಯು ಸಮಾಧಾನ ಹೊಂದಿ 'ಹಾಕಿದ ಶಾಪವನ್ನು ತೆಗೆಯುವ ಶಕ್ತಿ ಆಗುವುದಿಲ್ಲ. ಆದರೆ ಅದು ಇನ್ನು ಸಂತತಿ ತಗಲುವುದರ ಬದಲು ನಿಮ್ಮ ತಲೆಯ ಮೇಲೆಯೇ ಹೋಗುವ ಹಾಗೆ ಮಾಡುತ್ತೇನೆ' ಎಂದು ಸಾಂತ್ವನ ಹೇಳಿ ಮುಂದಕ್ಕೆ ನಡೆದನು.

ಈ ತಂತ್ರಿಯು ಹೇಳಿದಂತೆ ಕೆಲವು ದಿವಸಗಳಲ್ಲಿ ಪೊನ್ನಣ್ಣನಿಗೆ ದುಃಖ ಪ್ರಾಪ್ತವಾಯಿತು. ವೀರರಾಜನಿಗೆ ಈ ವರ್ತಮಾನವು ತಿಳಿಯಲು ಅವನು ಪೊನ್ನಣ್ಣನ ಕಾವಲಿಗೆ ಅವನ ಮಂದಿಯಲ್ಲಿ ಪೊನ್ನಣ್ಣನ ಆಪ್ತರಾಗಿದ್ದ ಸೋದರನನ್ನು, ಬೊಪ್ಪಂಡ ಉತ್ತಯ್ಯ ಮತ್ತು ಕೊಂಬಂಡ ಕಾಳಯ್ಯ ಎಂಬ ನಾಯಕರು ಸಿಪಾಯಿಗಳನ್ನು ಕಳುಹಿಸಿಕೊಟ್ಟನು. ಪೊನ್ನಣ್ಣನಿಗೆ ದುಃಖ ಸರಿಯಾದ ಕೂಡಲೇ ವೀರರಾಜನು ತನಗೆ ಬಹುಮಾನವಾಗಿ ಕೊಟ್ಟಿದ್ದ ಪದಕ, ಒಡಿಕತ್ತಿ ಮೊದಲಾದವುಗಳನ್ನು ರಾಜನಿಗೆ ಹಿಂದಕ್ಕೆ ಕಳುಹಿಸಿಬಿಟ್ಟನು. ಹೀಗಿರಲು ಒಂದು ದಿನ ಅರ್ಧ ರಾತ್ರಿ ಪೊನ್ನಣ್ಣನು ನಿದ್ದೆಯಿಂದೆಚ್ಚೆತ್ತು ನೋಡಲು ಅವನ ಕಾವಲುಗಾರರು ಗಾಢ ನಿದ್ರೆಯಲ್ಲಿದ್ದರು. ಆಗ ಅವನು ಪಕ್ಕದ ಕೋವಿಯನ್ನು ತೆಗೆದುಕೊಂಡು ಬಂದೂಕಿನಿಂದ 'ನಮ್ಮಕ್ ಹರಾಮಿ' ಎಂದು ಹೇಳಿ ಸೋದರನನ್ನು ಮತ್ತು ಬೊಪ್ಪಂಡ ಉತ್ತಯ್ಯ ಇವರಿಬ್ಬರನ್ನು ಕೊಂದು ಹಾಕಿದನು. ಅಷ್ಟರಲ್ಲಿ ಕೊಂಬಂಡ ಕಾಳಯ್ಯನಿಗೆ ಎಚ್ಚರವಾಗಿ ಅವನು ಬಚ್ಚಲು ಮನೆಯ ಗೋಡೆಯನ್ನು ಕೆಡವಿ ಹಾರಿ ಓಡಿ ಹೋಗಿ ಮಾಣಿಕ್ಯನಿಗೆ ಈ ವರ್ತಮಾನವನ್ನು ತಿಳಿಸಿದನು. ಮಾಣಿಕ್ಯನು ಓಡಿ ಬಂದು ನೋಡುವಾಗ ಪೊನ್ನಣ್ಣನು ತನ್ನ ಹೆಂಡತಿ ಮತ್ತು ಮಗನನ್ನು ಒಳಗೆ ಹಾಕಿ ಬಾಗಿಲು ಹಾಕಿಕೊಂಡು ತಾನು ಕೋವಿಯಿಂದ ಗುಂಡು ಹೊಡೆದುಕೊಂಡು ಸತ್ತುಬಿದ್ದಿದ್ದನು. ಪೊನ್ನಣ್ಣನು ಆತ್ಮಹತ್ಯವನ್ನು ಮಾಡಿಕೊಂಡ ಸಮಾಚಾರವನ್ನು ನಾಲ್ಕುನಾಡು ಅರಮನೆಯಲ್ಲಿದ್ದ ವೀರರಾಜನು ಕೇಳಿ ಬಹಳ ದುಃಖಪಟ್ಟನು.

ಅನಂತರ ವೀರರಾಜನು ತಾನು ಪೊನ್ನಣ್ಣನಿಗೆ ಕೊಟ್ಟಿದ್ದ ಬಹುಮಾನಗಳನ್ನು, ಜಹಗೀರನ್ನು ಮಾಣಿಕ್ಯನಿಗೆ ತೆಗೆದುಕೊಳ್ಳುವುದಕ್ಕೆ ಹೇಳಿದನು. ಆದರೆ ಮಾಣಿಕ್ಯನು 'ತಂದು ಬಾಳ ಪ್ರಾಣದಷ್ಟು ಚಾಕರಿ ಮಾಡಿ ಮೆಚ್ಚಿಸಿ ಪಡೆಕೊಂಡ ಅರಮನೆ ಕೊಡುಗೆ ನಾನು ಮತ್ತು ನನ್ನ ಮಕ್ಕಳು ಅನುಭವಿಸುವದು ಒಳ್ಳೆಯದಾಗಲಿಕ್ಕಿಲ್ಲ' ಎಂದು ಅರಮನೆ ಸಂಬಳ ತನಗೆ ಬೇಡವೆಂದು ತಿರಸ್ಕರಿಸಿಬಿಟ್ಟನು. ಕೊನೆಗೆ ವೀರರಾಜನ ಅಗ್ರಹದಿಂದ ಪೊನ್ನಣ್ಣನಿಗೆ ರಾಜನು ಕಟ್ಟಿಸಿಕೊಟ್ಟಿದ್ದ ಮನೆಯಲ್ಲಿ ವಾಸಿಸಲು ಸಮ್ಮತಿಸಿ, ಪೊನ್ನಣ್ಣನಿಗೆ ಕೊಟ್ಟಿದ್ದ ಉಂಬಳಿ ಜಹಗೀರನ್ನು ಜಮ್ಮಾ ಭೂಮಿ ಮಾಡಿಸಿ ತಾನು ತೆಗೆದುಕೊಂಡನು.

ಇದರ ನಂತರ ಮಾಣಿಕ್ಯನು ಪೊನ್ನಣ್ಣನಿಂದ ಕೊಲ್ಲಲ್ಪಟ್ಟ ಸೋದರನನ್ನು ಮತ್ತು ಬೊಪ್ಪಂಡ ಉತ್ತಯ್ಯನ ಕುಟುಂಬದವರಿಗೂ, ಕೊಂಬಂಡ ಕಾಳಯ್ಯನಿಗೂ ತನ್ನ ಭೂಮಿಯಲ್ಲಿಯೇ ಸ್ವಲ್ಪ ಭೂಮಿ ಕೊಟ್ಟು ಅವರನ್ನು ಅಲ್ಲಿ ನಿಲ್ಲಿಸಿದನು.

ಈ ಕಥೆಯನ್ನು ನಡಿಕೇರಿಯ ಅಪ್ಪಯ್ಯನವರು ಬರೆದಿರುವ ಕೈಬರಹದ ಅವರ ಕುಟುಂಬದ ಚರಿತ್ರೆಯ ಮತ್ತು ರಾಜೇಂದ್ರನಾಮೆಯ ಆಧಾರಗಳಿಂದ ಬರೆದಿದ್ದೇನೆ.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿ ಇರಬೇಕಾದ ರಿಜಿಸ್ಟರುಗಳು ಅಂದರೆ— **ಜಮಾ. ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, ಶೇರು ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ **ಪ್ರತಿ**ಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಶೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಾಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ನಾನಾ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

ಕೊಡಗು

ಸೆಪ್ಟಂಬರ್ ತಾರೀಕು ೯ನೇ ಶುಕ್ರವಾರ ೧೯೩೮.

ತಿರುವಂಕೂರಿನಲ್ಲಿ ದಬ್ಬಾಳಿಕೆ.

ತಿರುವಾಂಕೂರು ಸಂಸ್ಥಾನವು ಪುನಹ ಒಮ್ಮೆ ಹಿಂದೂ ದೇಶದವರ ಗಮನವನ್ನು ಸೆಳೆಯುತ್ತಿದೆ. ಕೆಲವು ಸಮಯದ ಹಿಂದೆ ಈ ಸಂಸ್ಥಾನದ ಹೆಸರು ಇಂಡಿಯಾದ ಎಲ್ಲಾ ಭಾಗಗಳಲ್ಲಿಯೂ ಕೇಳಿಬರುತ್ತಿತ್ತು. ಆಗ್ಗೆ ತಿರುವಾಂಕೂರು ದರ್ಬಾರಿನವರು ಹರಿಜನರ ಪ್ರವೇಶಕ್ಕೆ ದೇವಸ್ಥಾನಗಳನ್ನು ತೆರೆದು ಭಾರತೀಯರ ಹಾಗೂ ಹರಿಜನೋದ್ಧಾರಕರಾದ ಮಹಾತ್ಮ ಗಾಂಧಿಯವರ ಧನ್ಯವಾದಗಳನ್ನು ಪಡೆದರು. ಆಗ ದೇಶಾಭಿಮಾನಿಗಳೆಲ್ಲರೂ ತಿರುವಾಂಕೂರಿನ ಅರಸರನ್ನು ಹೊಗಳಿ, ಅವರು ಇತರ ಸಂಸ್ಥಾನಾಧಿಪತಿಗಳಿಗೆ ಉದಾಹರಣ ಪುರುಷರಂತಿರುವರೆಂದು ಹೇಳತೊಡಗಿದರು. ಹೆಚ್ಚಿನ ಸಮಯವು ದಾಟುವುದರೊಳಗಾಗಿ ಪುನಹ ತಿರುವಾಂಕೂರಿನ ವಿಷಯ ಎಲ್ಲೆಲ್ಲೂ ಕೇಳಿಬರುವಂತಾಗಿದೆ. ಆದರೆ ಈ ಸಾರಿ ಅದರ ಪ್ರಾಶಸ್ತ್ಯದ ವಿಚಾರವಲ್ಲ; ಅದರ ದಬ್ಬಾಳಿಕೆಯ ಖಂಡನೆಯ ಮಾತುಗಳು ಕೇಳಿಬರುತ್ತಿವೆ.

ದಬ್ಬಾಳಿಕೆಯಲ್ಲಿ ಸಂಸ್ಥಾನಗಳು ಒಂದರ ನಂತರ ಒಂದು ತಮ್ಮ ಸರ್ತಿಯನ್ನು ತೆಗೆದುಕೊಳ್ಳುವಂತೆ ತೋರುತ್ತದೆ. ಇದು ಮೈಸೂರಿನ ನಂತರ ತಿರುವಾಂಕೂರಿಗೆ ಹೋಗಿದೆ. ಆದರೆ ಕಾಠಿಣ್ಯದಲ್ಲಿ ತಿರುವಾಂಕೂರು ಮೈಸೂರನ್ನು ಮೀರಿದೆ. ಮೈಸೂರು ದಿವಾನರು ಒಂದು ಕಡೆ ಮೀಟಿಂಗಿನಲ್ಲಿ ಮಾತ್ರ ಜನರ ಮೇಲೆ ಗುಂಡು ಹಾರಿಸಿದ್ದಕ್ಕೆ ಜವಾಬ್ದಾರರಾಗಿದ್ದರು. ಆದರೆ ತಿರುವಾಂಕೂರಿನ ದಿವಾನರ ದರ್ಬಾರಿನಲ್ಲಿ ನಾಲ್ಕು ಮೀಟಿಂಗುಗಳಲ್ಲಿ ಮಿಲಿಟರಿಯವರಿಂದ ಜನಸ್ತೋಮದ ಮೇಲೆ ಗುಂಡು ಹಾರಿಸಲ್ಪಟ್ಟಿತು. ಅಲ್ಲಿ ದಬ್ಬಾಳಿಕೆಯು ಹೆಚ್ಚಿನ ಭೀಕರ ಸ್ವರೂಪವನ್ನು ತಾಳಿದೆ.

ತಿರುವಾಂಕೂರಿನ ಪ್ರಜೆಗಳಲ್ಲಿ ಪ್ರಜಾ ಜವಾಬ್ದಾರಿ ಸರ್ಕಾರದ ಕಾಂಕ್ಷೆಯ ಪ್ರದರ್ಶನವು ಕೆಲವು ಸಮಯದಿಂದಲೇ ನಡೆಯುತ್ತಿದೆ. ತಮ್ಮ ಸುತ್ತಮುತ್ತಲಿನ ಬ್ರಿಟಿಷ್ ಪ್ರಾಂತ್ಯಗಳ ಜನರು ನಡೆಸಿದ ವಿಶೇಷ ಚಳವಳದ ಫಲಿತಾಂಶವಾಗಿ ಅವರಿಗೆ ದೊರೆಯುತ್ತಿರುವ ಹಕ್ಕುಗಳು ಮತ್ತು ಅಧಿಕಾರಗಳು ಸಂಸ್ಥಾನಗಳ ಪ್ರಜೆಗಳನ್ನು ಜಾಗೃತಿಗೊಳಿಸುತ್ತಿವೆ. ಅಲ್ಲಿಯವರೂ ತಮ್ಮ ಪ್ರಾಂತ್ಯದ ಆಡಳಿತೆಯಲ್ಲಿ ತಮಗೆ ಜವಾಬ್ದಾರಿ ಭಾಗವಿರಬೇಕೆನ್ನಲು ಪ್ರಾರಂಭಿಸಿದರು. ಅದನ್ನು ಸಾಧಿಸಲಿಕ್ಕಾಗಿ 'ಸ್ಟೇಟ್ ಕಾಂಗ್ರೆಸ್' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯ ಮೆಂಬರುಗಳು ಅಲ್ಲಿಯ ನ್ಯಾಯವಿಧಾಯಕ ಸಭೆಯ ಒಳಗೂ, ಹೊರಗೂ ಹೋರಾಡಲಾರಂಭಿಸಿದರು. ಇವರ ಶಕ್ತಿಯನ್ನು ಮುರಿಯಲಿಕ್ಕಾಗಿಯೋ ಎಂಬಂತೆ 'ನ್ಯಾಶನಲ್ ಕಾಂಗ್ರೆಸ್' ಎಂಬ ಇನ್ನೊಂದು ಸಂಸ್ಥೆಯು ಹೊರಡಿಸಲ್ಪಟ್ಟಿತು. ಇವೆರಡು ಸಂಸ್ಥೆಗಳ ಉದ್ದೇಶವೂ ಜವಾಬ್ದಾರಿ ಸರ್ಕಾರ ಪಡೆಯುವುದೇ ಆಗಿದೆ. ಆದರೆ ಅಲ್ಲಿಯ ಸರ್ಕಾರದವರ ಓರೆ ದೃಷ್ಟಿಯು 'ಸ್ಟೇಟ್ ಕಾಂಗ್ರೆಸ್ಸಿ'ನ ಮೇಲೆ ಬಿತ್ತು. ಅದು ರಾಜದ್ರೋಹಕ ಸಂಸ್ಥೆಯೆಂದೂ, ಅದಕ್ಕೆ ಅನೇಕ ಜನರು ವಿರುದ್ಧವಿರುವ ಕಾರಣ ಅವರ ಕಾರ್ಯಕಲಾಪಗಳನ್ನು ನಡಿಸಲು ಬಿಟ್ಟರೆ ಸಂಸ್ಥಾನದಲ್ಲಿ ಶಾಂತಿಭಂಗವಾಗುವದೆಂದೂ ಮುಂತಾದ ಕಾರಣಗಳನ್ನು ಹೂಡಿ ಈ ಸಂಸ್ಥೆಯು ಶಾಸನವಿರುದ್ಧವಾದುದೆಂದು ಪ್ರಕಟಿಸಿ, ಅದು ಮೀಟಿಂಗು ವಗೈರೆ ಕಾರ್ಯಗಳನ್ನು ನಡಿಸಕೂಡದೆಂದು ಸರ್ಕಾರದ ಹುಕುಂ ಆಯಿತು. ಆದರೆ 'ನ್ಯಾಶನಲ್ ಕಾಂಗ್ರೆಸ್' ಸಂಸ್ಥೆಗೆ ಇಂಥಾ ಪ್ರತಿಬಂಧಕ ಹುಕುಮುಗಳೇನೂ ಆಗಲಿಲ್ಲ. 'ಸ್ಟೇಟ್ ಕಾಂಗ್ರೆಸ್ಸಿ'ನವರು ಸರ್ಕಾರದ ಈ ತರಹದ ಅನ್ಯಾಯದ ದಬ್ಬಾಳಿಕೆಯನ್ನು ಸಹಿಸಲಾರದೆ ಹುಕುಮನ್ನು ಉಲ್ಲಂಘನೆ ಮಾಡಲು ನಿಶ್ಚಯಿಸಿದರು.

ಅದರಂತೆಯೇ ಕಳೆದ ತಿಂಗಳ ಅಂತ್ಯದಲ್ಲಿ ಕೆಲವು ಸಾರ್ವಜನಿಕ ಸಭೆಗಳನ್ನು ನಡಿಸಿದರು. ಅಧಿಕಾರಿಗಳು ಮೀಟಿಂಗುಗಳಲ್ಲಿ ಭಾಷಣ ಮಾಡಿದವರನ್ನೂ, ಸಹಾಯಕರನ್ನೂ ದಸ್ತಗಿರಿ ಮಾಡಿ, ಶಿಕ್ಷೆಗೆ ಒಳಪಡಿಸಿದರು. ಕೂಡಲೆ ಜನರಲ್ಲಿ ಗಲಿಬಿಲಿ ಎದ್ದು ಲಾಠಿ ಪ್ರಯೋಗವೂ, ಕಲ್ಲುಗಳ ಎಸೆಯೋಣವೂ ನಡೆದವು. ಮಿಲಿಟರಿಯವರು ಜನರ ಮೇಲೆ ಗುಂಡುಗಳನ್ನೂ ಹಾರಿಸಿದರು. ಈ ಪ್ರಕಾರ ನಾಲ್ಕು ಕಡೆ ಮೀಟಿಂಗುಗಳಲ್ಲಾದವು. ಕೆಲವರು ಗುಂಡಿನೇಟಿಗೆ ತುತ್ತಾದರು. ಹಲವರಿಗೆ ಜಖಂ ಆಯಿತು. ಪೊಲೀಸಿನವರ ನೌಕರರಿಗೂ ಗಾಯಗಳಾಗಿವೆ. ಪೊಲೀಸು ಅಧಿಕಾರಿಗಳ ಕಾರುಗಳೂ ಸುಡಲ್ಪಟ್ಟವು.

ದೇಶೀಯ ಸಂಸ್ಥಾನದ ಸರ್ಕಾರವು ಜನರ ಮೇಲೆ ಗುಂಡು ಹಾರಿಸುವಷ್ಟು ಭೀಕರವಾದ ದಬ್ಬಾಳಿಕೆಯನ್ನು ಕೈಕೊಂಡದ್ದು ತುಂಬಾ ವಿಷಾದಕರ. ದೇಶದಲ್ಲಿ ಶಾಂತಿ ಸ್ಥಾಪನೆ ಮಾಡುವ ಕರ್ತವ್ಯವೇನೋ ಸರ್ಕಾರದ್ದೆಂಬುದು ನಿಜ. ಆದರೆ ಅಂಥಾ ಶಾಂತಿ ಭಂಗಕ್ಕೆ ಎಡೆ ಕೊಡುವಂಥಾ ಹುಕುಮುಗಳನ್ನು ಮಾಡಿದ ಜವಾಬ್ದಾರಿಯು ಅಲ್ಲಿಯ ದಿವಾನರ ಮೇಲಿದೆ. ಅಲ್ಲಿಯ 'ಸ್ಟೇಟ್ ಕಾಂಗ್ರೆಸ್ಸಿ'ನವರು ಮಾಡುವ ಭಾಷಣಗಳು ರಾಜದ್ರೋಹಕವಾಗಿದ್ದರೆ ಅವರನ್ನು ಅಲ್ಲಿ ಜಾರಿಯಲ್ಲಿರುವ ದಿನನಿತ್ಯದ ಕಾನೂನಿನ ಮೇರೆ ಶಿಕ್ಷಿಸಬಹುದಾಗಿತ್ತು. ಇದಕ್ಕಾಗಿ ಮೀಟಿಂಗುಗಳನ್ನು ಬಂದ್ ಮಾಡುವ ವಿಶೇಷ ಹುಕುಮನ್ನು ಹೊರಡಿಸುವ ಅವಶ್ಯಕತೆಯೇ ಇರಲಿಲ್ಲ.

ಆದರೆ ಅಲ್ಲಿಯ ಸಭೆಗಳಲ್ಲಿ ನೆರೆದಿದ್ದ ಜನರು ಕಲ್ಲುಗಳನ್ನು ಎಸೆಯುವ ಮೊದಲಾದ ಹಿಂಸಾಕೃತ್ಯಗಳನ್ನು ಕೈಕೊಂಡುದರಿಂದಲೇ ಮಿಲಿಟರಿಯವರು ಅವರ ಮೇಲೆ ಗುಂಡು ಹಾರಿಸಬೇಕಾಯಿತೆಂದು ಅಲ್ಲಿಯ ದಿವಾನರು ತಮ್ಮ ಹೇಳಿಕೆಯನ್ನು ಪ್ರಕಟಿಸಿರುವರು. ಪೊಲೀಸಿನವರು ಜನರನ್ನು ಚದುರಿಸಲು ಲಾಠಿ ಪ್ರಯೋಗ ಮಾಡಿದ ಮೇಲೆ ಕಾಂಗ್ರೆಸೇತರರು ಕೆಲವರು ಕಲ್ಲುಗಳನ್ನು ಎಸೆದಿರುವರಲ್ಲದೆ ಕಾಂಗ್ರೆಸಿನವರಲ್ಲವೆಂದು ಕಾಂಗ್ರೆಸ್ ಮುಖಂಡರ ಹೇಳಿಕೆಯಾಗಿದೆ. ಸಾರ್ವಜನಿಕ ಸಭೆಗಳನ್ನು ನಡಿಸುವದರಿಂದ ನಿರಾಪರಾಧಿಗಳಾದ ಜನರ ಪ್ರಾಣಹಾನಿ ಆಗುತ್ತಿರುವ ಕಾರಣ ತತ್ಕಾಲ ಪಬ್ಲಿಕ್ ಮೀಟಿಂಗುಗಳನ್ನು ನಡಿಸುವುದಿಲ್ಲವೆಂದು ಕಾಂಗ್ರೆಸ್ ಮುಖಂಡರು ನಿಶ್ಚಯಿಸಿರುವುದು ಉಚಿತವಾಗಿದೆ. ಹಿಂಸಾ ಕೃತ್ಯಗಳಿಗೆ ಎಡೆ ಕೊಡುವುದು ಯಾರಿಗೂ ಯೋಗ್ಯವಲ್ಲ. ಆದರೆ ಈಗ ನಡೆದು ಹೋದ ಗೋಳಿಬಾರು ಅನಾವಶ್ಯಕವಲ್ಲಿ ತಪ್ಪಿತಸ್ಥರಾರೆಂದು ಕಂಡು ಹಿಡಿಯುವದು ಅಗತ್ಯವಾಗಿದೆ. ಆದುದರಿಂದ ಕಾರಾಗೃಹದಲ್ಲಿರುವ ಕಾಂಗ್ರೆಸಿನವರನ್ನೆಲ್ಲಾ ಬಿಡುಗಡೆ ಮಾಡಿ ಮತ್ತು ದಬ್ಬಾಳಿಕೆಯ ಹುಕುಮನ್ನು ವಜಾ ಮಾಡಿ, ಗೋಳಿಬಾರಿನ ಕಾರಣಗಳನ್ನು ವಿಚಾರಿಸಲು ಸಂಸ್ಥಾನದ ಹೊರಗಿನ ಒಬ್ಬ ಘನತೆಯವರಿಂದ ಕೂಡಿದ ಒಂದು ನಿಷ್ಪಕ್ಷಪಾತದ ಕಮಿಟಿಯನ್ನು ನೇಮಿಸುವುದು ಉತ್ತಮವೆಂದು ಮಹಾತ್ಮಾ ಗಾಂಧಿಯವರು ಸೂಚನೆ ಮಾಡಿದರು. ಮೈಸೂರಿನಲ್ಲಿ ಈ ತರಹದ ಗಲಭೆ ನಡೆದ ಕಾಲದಲ್ಲಿ ಅಲ್ಲಿಯ ದಿವಾನರು ಈ ರೀತಿ ವರ್ತಿಸಿದ್ದರಿಂದಲೇ ಅಲ್ಲಿ ಕೂಡಲೇ ಶಾಂತಿ ಸ್ಥಾಪನೆಯಾಯಿತು. ಆದರೆ ತಿರುವಾಂಕೂರಿನ ದಿವಾನರಿಗೆ ಈ ಸಲಹೆಯು ಯೋಗ್ಯವಾಗಿ ಕಂಡು ಬಾರದ್ದು ವಿಷಾದಕರ. ಸಂಸ್ಥಾನದೊಳಗೆ ಶಾಂತಿ ಸ್ಥಾಪನೆ ಮಾಡುವುದು ಅಲ್ಲಿಯ ಸರ್ಕಾರದ ಕರ್ತವ್ಯವಾದುದರಿಂದ ಹೊರಗಿನವರ ಸಹಾಯವು ಅವಶ್ಯವಿಲ್ಲವೆಂದು ಅಲ್ಲಿಯ ದಿವಾನರು ಉತ್ತರವಿತ್ತಿರುವರು. ತಮ್ಮ ಮಿಲಿಟರಿಯ ಬಲದಿಂದ ಜನರ ಚಳವಳವನ್ನು ಅಡಗಿಸಿಬಿಡಬಹುದೆಂದೋ ಅಥವಾ ಕಾಂಗ್ರೆಸ್ಸಿನವರು ಸಾರ್ವಜನಿಕ ಸಭೆಗಳನ್ನು ತತ್ಕಾಲ ನಿಲ್ಲಿಸಲು ತೀರ್ಮಾನಿಸಿದ್ದರಿಂದ ಅವರು ಬಗ್ಗಿ ಹೋದರೆಂದೋ ದಿವಾನರಿಗೆ ತೋರಿರಬಹುದು. ಆದುದರಿಂದ ಅವರಿಗೆ ಮಹಾತ್ಮರ ಸಲಹೆಯನ್ನು ತಿರಸ್ಕರಿಸುವಷ್ಟು ಧೈರ್ಯ ಬಂದಿರಬಹುದು. ಆದರೆ ಅಲ್ಲಿಯ ಸ್ಟೇಟ್ ಕಾಂಗ್ರೆಸಿನವರು ಅಹಿಂಸಾ ತತ್ವವನ್ನು ಚೆನ್ನಾಗಿ ಪರಿಪಾಲಿಸುತ್ತ ಸವಿನಯ ಕಾಯಿದೆಭಂಗ ಚಳವಳವನ್ನು ನಡಿಸಿದ್ದೇ ಆದರೆ ಎಷ್ಟು ಬಲಾಢ್ಯ ಸರ್ಕಾರವೇ ಆಗಲಿ ಅದನ್ನು ತಡೆಯಲು ಯಾ ಮುರಿಯಲು ಅದಕ್ಕೆ ಸಾಧ್ಯವಾಗಲಿಕ್ಕಿಲ್ಲವೆಂಬುದನ್ನು ತಿರುವಾಂಕೂರಿನ ದಿವಾನರು ಮರೆಯಬಾರದು. ಮಹಾತ್ಮರು ಹೂಡಿದ ಆತ್ಮಬಲದ ಚಳವಳದ ಮುಂದೆ ಖ್ಯಾತಿಗೊಂಡ ಬ್ರಿಟಿಷ್ ಸರಕಾರವೇ ತಲೆ ಬಾಗುವಂಥ ಸ್ಥಿತಿಗೆ ಬಂದಿರುವಾಗ್ಯೆ ಆತ್ಮಬಲದ ಮೇಲೆ ತುಂಬಾ ವಿಶ್ವಾಸವಿಡುವ ಒಬ್ಬ ಹಿಂದೂ ರಾಜರ ಸಂಸ್ಥಾನದ ಸರ್ಕಾರವು ಅಂಥಾ ಚಳವಳವನ್ನು ಎದುರಿಸಲು ಯತ್ನಿಸುತ್ತಿರುವುದು ಆಶ್ಚರ್ಯವೂ, ವಿಷಾದಕರವೂ ಆಗಿದೆ. ಮೈಸೂರಿನ ದಿವಾನರಂತೆಯೇ ತಿರುವಾಂಕೂರಿನ ದಿವಾನರೂ ಇದರಿಂದ ಒಂದು ಪಾಠವನ್ನು ಬೇಗನೆ ಕಲಿಯದೆ ಇರಲಾರರೆಂದು ನಂಬುತ್ತೇವೆ.

ಸುಡೆಟೆನರಿಗೆ ಸುಧಾರಣೆ.

ಜೆಕೊಸ್ಲೊವೇಕಿಯಾ ಸರ್ಕಾರದವರು ಅವರ ರಾಜ್ಯಾಡಳಿತೆಯಲ್ಲಿರುವ ಜರ್ಮನರಾದ ಸುಡೆಟೆನರಿಗೆ ಹೆಚ್ಚು ಕಡಿಮೆ ಅವರು ಕೇಳಿದ ಸುಧಾರಣೆಗಳನ್ನೆಲ್ಲಾ ಕೊಡಲು ತಯಾರಿರುವರು. ಇವುಗಳಲ್ಲಿ ಮುಖ್ಯವಾದವು–ಪ್ರಾಂತೀಕ ಸ್ವಾತಂತ್ರ್ಯ; ಸರಿಸಮಾನ ಸ್ಥಿತಿ ಮತ್ತು ಭಾಷೆಯ ಸಮಾನತೆ. ಸುಡೆಟೆನರ ಮುಂದಾಳಾದ ಡಾ. ಕುಂಡ್ಟ್‌ರವರು ಸಂಧಾನ ಪ್ರಾರಂಭಿಸುವ ಮೊದಲು ಕೇಳಿದ ಕರಡುಗಳೆಲ್ಲವೂ ಇವುಗಳಲ್ಲಿ ಅಡಗಿವೆ. ಆದರೆ ಇವು ಸಾಲದೆಂದೂ, ಕೂಡಲೇ ಪೋಸ್ಟಲ್ ಮತ್ತು ಪೊಲೀಸು ಇಲಾಖೆಗಳ ಅಧಿಕಾರದ ಸಂಪೂರ್ಣ ದೊರೆಯಬೇಕೆಂದೂ ಸುಡೆಟೆನರು ಅತಿ ಆಶೆ ತೋರುತ್ತಿರುವರು. ಇವಕ್ಕಿಂತಲೂ ಹೆಚ್ಚಾದ ರಿಯಾಯಿತಿ ಕೊಡುವುದಕ್ಕಿಂತಲೂ ಸುಡೆಟೆನರ ಪ್ರಾಂತ್ಯವನ್ನೇ ಜೆಕೊಸ್ಲೊವೇಕಿಯಾದಿಂದ ಪ್ರತ್ಯೇಕಿಸಿ ಬಿಟ್ಟುಬಿಡುವುದು ಉತ್ತಮವೆಂದು ಲಂಡನಿನ 'ಟೈಮ್ಸ್' ಪತ್ರಿಕೆಯ ಸೂಚನೆಯಾಗಿದೆ.

ತನ್ನ ಉದ್ದೇಶಕ್ಕಾಗಿ ಸುಡೆಟೆನರನ್ನು ಉಪಯೋಗಿಸುತ್ತಿರುವ ಜರ್ಮನಿಯ ಹಿಟ್ಲರನು ಜೆಕೊಸ್ಲೊವೇಕಿಯಾ ಸರ್ಕಾರದವರು ಸುಡೆಟೆನರು ಕೇಳಿದ್ದನ್ನೆಲ್ಲಾ ಕೂಡಲೆ ಕೊಡದೆ ಹೋದರೆ, ಈ ತಾ. 10 ರಲ್ಲಿಯೇ ತನ್ನ ಸೈನ್ಯವನ್ನು ಜೆಕೊಸ್ಲೊವೇಕಿಯಾದ ಮೇಲೆ ನಡಿಸಿ, ಆ ದೇಶವನ್ನು ಕೈವಶಮಾಡಿಕೊಳ್ಳುವ ವಿಚಾರದಲ್ಲಿರುವರೆಂದು ಫ್ರೆಂಚ್ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದೆ. ಮುಂದೆ ಏನಾಗುವದೆಂದು ಬ್ರಿಟಿಷ್ ಮತ್ತು ಫ್ರೆಂಚ್ ಸರ್ಕಾರಗಳು ಎದುರು ನೋಡುತ್ತಿವೆ. ಇಂಥಾ ಆಪತ್ತು ಬಂದರೆ ರಷ್ಯಾದವರ ಸಹಾಯ ಕೇಳುವ ಆಲೋಚನೆ ಜೆಕ್ಕರಿಗಿದೆ. ಹೇಗೂ ಯೂರೋಪಿನ ರಾಜಕೀಯ ಪರಿಸ್ಥಿತಿಯು ಬಹು ಬಿಕ್ಕಟ್ಟಾವಸ್ಥೆಯಲ್ಲಿದೆ.

ವರ್ತಮಾನ ಸಂಗ್ರಹ.

ಒಳದೇಶ.

ಈ ತಾ 20ರಿಂದ ತಾ 9ರ ವರೆಗೆ ಮಡಿಕೇರಿಯಲ್ಲಿ 1 ಇಂ. 34 ಸೆಂಟು ಮಳೆಯಾಗಿದೆ

ಕೊಡಗು ವಿದ್ಯಾಭಿವೃದ್ಧಿ ಸಂಘದ ಕಮಿಟಿ ಮೀಟಿಂಗು ಈ ತ 17ರಲ್ಲಿ ಮಡಿಕೇರಿಯಲ್ಲಿ ನಡೆಯುವುದೆಂದು ತಿಳಿಯುತ್ತೇವೆ

ಕಳೆದ ಜುಲೈ ತಿಂಗಳಲ್ಲಿ ಕೊಡಗಿನಲ್ಲಿ 360 ಜನನಗಳೂ, 120 ಮರಣಗಳೂ ಸಂಭವಿಸಿವೆಯೆಂದು ಪ್ರಕಟವಾಗಿದೆ

ಈ ತಾ 11ನೇ ಜಾನುವಾರಿ ಸಾಯಂಕಾಲ 6 ಗಂಟೆಗೆ ಮಡಿಕೇರಿ ಸಂಗೀತ ಸಂಘದಲ್ಲಿ ಮಾ ಪಿ ಕೆ ಸಬ್ಬಯ್ಯನವರು 'ಭಕ್ತ ಶಿರೋಮಣಿ ನಾಗಮಹಾಶಯ' ಎಂಬ ಹರಿಕಥೆಯನ್ನು ಮಾಡುವರಾಗಿ ತಿಳಿಯುತ್ತೇವೆ

ಈ ತ 3ನೇ ಶನಿವಾರ ಮಡಿಕೇರಿಯ ಕೊಡವರು ಮಾನ್ಯ ಕಂಪೌಂಡಿನಲ್ಲಿಯೂ, ಪೊನ್ನಂಪೇಟೆಯವರು ಪಂಚಾಣೆ ಮಂದಿನಲ್ಲಿಯೂ ಕೈಲುಮುಹೂರ್ತ ಹಬ್ಬದ ಸಂಬಂಧ ಆಟೋಟಗಳನ್ನು ನಡಿಸಿದರೆಂದು ತಿಳಿಯಬರುತ್ತದೆ

ಚೆಂಬೆಬೆಳ್ಳೂರು ಗ್ರಾಮದ ಸುತ್ತುಮುತ್ತು ದನಕರುಗಳನ್ನು ಹಿಡಿದು ನಾಶ ಮಾಡುತ್ತಿದ್ದ ಒಂದು ಹುಲಿಯನ್ನು ಸದರಿ ಗ್ರಾಮದ ಮಾ ಬಾರಿಯಂಡ ತಮ್ಮಯ್ಯನವರು ಗುಂಡು ಹೊಡೆದು ಕೊಂದು ಗ್ರಾಮಸ್ಥರಿಗೆ ಉಪಕಾರ ಮಾಡಿದರಾಗಿ ತಿಳಿಯಬರುತ್ತದೆ

ಶನಿವಾರಸಂತೆ ಹೋಬಳಿ ಕೊಡಗರ ಎಸೋಸಿಯೇಶನ ಆಶ್ರಯದಲ್ಲಿ ಅಲ್ಲಿಯ ಕೊಡವ ಬಂಧುಗಳೂ, ಇತರ ಕೆಲವು ಮಹನೀಯರೂ ಸೇರಿ ಈ ತಾ 1ರಲ್ಲಿ ಕೈಲ್ ಮುಹೂರ್ತ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿದರಾಗಿ ವರ್ತಮಾನ

ಈ ತ 7ರಲ್ಲಿ ಇಬ್ನಿವಳವಾಡಿ ಗ್ರಾಮದವರು ಬೇಟೆಯಾಡಲು ಹೋಗಿದ್ದಾಗ್ಯೆ ಅದೇ ಗ್ರಾಮದ ಮಾ ಕೈಪ್ಪಟ್ಟಿರ ಬೋಪಯ್ಯನವರಿಗೆ ಅಕಸ್ಮಾತು ಗುಂಡು ತಗಲಿ, ಅವರು ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರೆಂದು ವರ್ತಮಾನ

ಯರೋಪಿಯನ ಪ್ಲಾಂಟರುಗಳ ವರ ಕೌನ್ಸಿಲು ಮೆಂಬರರಾಗಿದ್ದ ಮಿ ಬಾರ್ಲರವರು ಇಂಗ್ಲೆಂಡಿಗೆ ಹೋಗಲಿಕ್ಕಾಗಿ ತಮ್ಮ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಕಾರಣ, ಅವರ ಬದಲು ಮಿ ಎ ಇ ಶ್ರಿ ನಿಕಲ್ಸರವರು ಕೌನ್ಸಿಲ ಮೆಂಬರಾಗಿ ಚುನಾಯಿಸಲ್ಪಟ್ಟಿರುವರು

1939ನೇ ಜನವರಿ 13ರಲ್ಲಿ ರಿಟೈರು ಆಗಲಿಕ್ಕಿರುವ ವೀರಾಜಪೇಟೆ ಆಸ್ಪತ್ರೆಯ ಡಾಕ್ಟರ್ ಯಂ ಬಿ ನಾಯಡುರವರು ಈಗ ಇರುವ ಆಕ್ಟೀವ ತಾ 10ರಿಂದ 3 ತಿಂಗಳು 11 ದಿವಸ ರಜೆಯಲ್ಲಿ ಹೋಗುವರೆಂದೂ, ಅವರ ಸ್ಥಳಕ್ಕೆ ಸಬ್ ಅಸಿಸ್ಟೆಂಟ್ ಸರ್ಜನರಾದ ಮಾ ಕಾರಬೀನಾಡ ಬಿದ್ದಪ್ಪನವರು ಸೋಮವಾರಪೇಟೆಯಿಂದ ವೀರಾಜಪೇಟೆಗೆ ವರ್ಗಾಯಿಸಲ್ಪಡುವರೆಂದೂ, ಮಾ.

ಎ ಪಿ ವೆಂಕಟಸುಬ್ಬಯ್ಯನವರು ಸೋಮವಾರಪೇಟೆ ಆಸ್ಪತ್ರೆಯಲ್ಲಿ ಸಬ ಅಸಿಸ್ಟೆಂಟ್ ಸರ್ಜನರಾಗಿ ನೇಮಿಸಲ್ಪಡುವರೆಂದೂ ತಿಳಿಯಬರುತ್ತದೆ

ಈ ತಾ 4ರಲ್ಲು ಸಿದ್ದಾಪುರದಲ್ಲಿ 6 ಅಂಗಡಿಗಳನ್ನೂ, ತಾ 6ರ ರಾತ್ರಿ ಸಿದ್ದಾಪುರದಲ್ಲಿ ನಾಲ್ಕು ಅಂಗಡಿಗಳನ್ನೂ ಕಳವು ಮಾಡಿದ ಮುಂಡಾಳ ತನಿಯನೆಂಬ ಹರಿಜನನು ಮಂಗಳೂರಿಗೆ ಬಸ್ ಹತ್ತಲು ಮಡಿಕೇರಿ ಬಸ್ ಸ್ಟ್ಯಾಂಡಿಗೆ ಬಂದಿರುವಾಗ್ಯೆ ಸಂಶಯಗೊಂಡ ಪೊಲಿಸ ಸಬ್ಇನಸ್ಪೆಕ್ಟರು ಮಾ ಅಬ್ದುಲ್ ಗಫೂರವರು ಆತನನ್ನು ಹಿಡಿದರೆಂದೂ ಆತನ ಕೈಯಲ್ಲಿ ಸುಮಾರು 25 ಬೀಗದ ಕೈಗಳಿದ್ದವೆಂದೂ, ಚಿನ್ನ, ಬೆಳ್ಳಿ, ಮತ್ತು ರೂಪಾಯಿ ವಗೈರೆಯಾಗಿ ಸುಮಾರು 150 ರೂಪಾಯಿ ಬೆಲೆಯ ಸಾಮಾನುಗಳು ಸ್ವಾಧೀನದಲ್ಲಿದ್ದುವೆಂದೂ, ಪೋಲೀಸ ತನಿಖೆ ನಡೆಯುತ್ತಿರುವುದೆಂದೂ ವರ್ತಮಾನ

ಹಿಂದೂದೇಶ.

ಅಧಿಕಾರದಲ್ಲಿರುವ ಯೂನಿಯನಿಸ್ಟ್ ಪಾರ್ಟಿಯವರು ಒಂದು ಅನಧಿಕೃತ ಶಾಸನ ಸಭೆಯನ್ನು ಕರೆದಿದ್ದಾರೆಂದು ವರದಿ ಬಂದಿದೆ. ... ಶಾಲೆಗಳಲ್ಲಿ ದಿನಾಚರಣೆಯ ಸಂಬಂಧ ಚರ್ಚೆ ನಡೆಸಲಾಯಿತು ...

ಅಹಿಂಸಾತ್ಮಕ ಯೂನಿಯನ್ ಜ್ಯಾಕ್ ಧ್ವಜದ ಹೆಸರನ್ನು ಬದಲಾಯಿಸಿ ಸಂಸ್ಕೃತದಲ್ಲಿ ಅರ್ಪಣೆ ಮಾಡಿದೆ ... ಅಧಿಕಾರವನ್ನು ಯೂನಿಯನ್ ಧ್ವಜದಂತೆ ... ಸರಕಾರಕ್ಕೆ ಅರ್ಪಣೆ ಮಾಡಿದೆ

ಮದ್ರಾಸು ಪ್ರಾಂತ್ಯದಲ್ಲಿ ಜನ ವೃದ್ಧಿಗಾಗಿ ಹೊಸ ಸ್ಕೀಮನ್ನು ತಯಾರಿಸಿ, ಹೊಸದಾಗಿ 5 ಸಾವಿರ ಗ್ರಂಥಾಲಯಗಳನ್ನು ಆಯಾ ಗ್ರಾಮಗಳ ಜನರಿಗೋಸ್ಕರ ತೆರೆಯಲಿರುವರು

ಮಧ್ಯಪ್ರಾಂತ ಸರಕಾರದವರು ಒಂದು ಪ್ರಕಟಣೆ ಹೊರಡಿಸಿ ತಮ್ಮ ಮಹಾತ್ಮ ಗಾಂಧಿ ಮುಂತಾದವರನ್ನು ಹೀನವಾಗಿ ಬರೆಯುತ್ತಿರುವ ಪತ್ರಿಕೆಗಳನ್ನು ಎಚ್ಚರಿಸಿರುವರು

ತಿರುವಾಂಕೂರಿನ ಕೌನ್ಸಿಲ್ ಸದಸ್ಯರಾದ ಶ್ರೀ ಕೆ ಆರ್ ಎಲಂಕತ್ ಎಂಬವರು ನ್ಯಾಯಾಲಯದಲ್ಲಿ ನಡೆದ ದಬ್ಬಾಳಿಕೆಗೆ ಸಿಟ್ಟಿನಿಂದ ಅಸಮಾಧಾನವನ್ನು ವ್ಯಕ್ತಪಡಿಸುವುದಕ್ಕಾಗಿ ತನ್ನ ಮೆಂಬರುತನಕ್ಕೆ ರಾಜಿನಾಮೆ ಇತ್ತಿರುವರು

ಮಹಾತ್ಮರ 70ನೇ ವರ್ಧಂತಿಯ ದಿವಸ ಮಹಾರಾಷ್ಟ್ರದಲ್ಲಿ 70 ಸಾವಿರ ರೂಪಾಯಿ ಬೆಲೆಯ ಖಾದಿಯನ್ನು ಅಂದರೆ 4 ಲಕ್ಷ ಗಾಂಧಿ ಟೋಪಿಗಳನ್ನು ಮಾರಬೇಕೆಂದು ಮಹಾರಾಷ್ಟ್ರ ಚರಕಾ ಸಂಘದವರು ಯೋಚಿಸಿದ್ದಾರೆ

ಕಲ್ಕತ್ತೆಯಲ್ಲಿ ಶ್ರೀ ಸುಭಾಷ್ ಚಂದ್ರ ಬೋಸರ ಸಹೋದರರ ಮಗ ಶ್ರೀ ಅರವಿಂದ ಬೋಸರು ವಿದ್ಯಾರ್ಥಿ ಸಭೆಯಾಗಿ ನಡೆದುಕೊಳ್ಳಲಿಲ್ಲವೆಂದೂ, ಆದ್ದರಿಂದ ಅವನು ಕಾಲೇಜಿಗೆ ಪ್ರವೇಶಿಸಕೂಡದೆಂದೂ ಸ್ಕಾಟಿಷ್ ಚರ್ಚ್ ಕಾಲೇಜಿನ ಅಧಿಕಾರಿಗಳು ಪ್ರಕಟಿಸಿದ ಕಾರಣ ಅಲ್ಲಿಯ ವಿದ್ಯಾರ್ಥಿಗಳು ಕಾಲೇಜಿಗೆ ಹೋಗದ ಬಹಿಷ್ಕಾರ ಹೂಡಿರುವರು

ದಕ್ಷಿಣ ಭಾರತ ಪ್ರವಾಸವನ್ನು ಇತ್ತೀಚೆಗೆ ಕೈಗೊಳ್ಳಲಿದ್ದ ರಾಷ್ಟ್ರಪತಿ ಸುಭಾಷ್ ಚಂದ್ರಬೋಸರಿಗೆ ಸಿಂಧ್ ಮಂತ್ರಿ ಮಂಡಲದ ವಿಷಯ ಮಾತನಾಡಲು ಬರಬೇಕಾಗಿ ಕಾಂಗ್ರೆಸ್ ಪ್ರಮುಖ, ಸರದಾರ ಪಟೇಲ, ಆಹ್ವಾನ ಇತ್ತುದರಿಂದ ತಂತಿ ಬಂದದ್ದರಿಂದ ಅವರು ದಕ್ಷಿಣ ಭಾರತ ಪ್ರವಾಸವನ್ನು ತತ್ಕಾಲ ಬಾಕಿ ಮಾಡಿರುವರು

ಆ ಪೇಟೆಯಲ್ಲಿ ಪಂಜಾಬು ಕಾಂಗ್ರೆಸ್ ಸೋಶಲಿಸ್ಟ ಪಾರ್ಟಿಯ ಒಂದು ಮೀಟಿಂಗು ನಡೆಯುತ್ತಿದ್ದ ಹಾಗೆ ರಿಕ್ರೂಟ ಮೆಂಟಿನ ವಿರುದ್ಧ ದಿನಾಚರಣೆಯ ಸಂಬಂಧ ಚರ್ಚೆ ನಡೆದು ಗಲಭೆಯಾಗಿ, ಪೋಲೀಸರಿಂದ ಆಗ 12 ಮಂದಿಗೆ ಲಾಠಿ ಪೆಟ್ಟು ಬಿದ್ದು, ಬಳಿಕ ಪೋಲೀಸರು ಬಂದು ಗುಂಪನ್ನು ಚದರಿಸಿದ್ದಾರೆ

ಪಂಜಾಬಿನ ಪ್ರಧಾನ ಮಂತ್ರಿಗಳಾದ ಸರ ಸಿಕಂದರ್ ಹಯಾತ್ ಖಾನರ ಸಾವಿಯ ... ವಿಷಯದ ಸರ ಸಿಕಂದರ್ ಹಯಾತ ... ಆಗಿರುವ ಬೇಗಂ ... ಮಹಮದ ... ಇವರು ರಕ್ತದಾನವನ್ನು ... ಕಲ್ಲದ ... ರ ಜಾತಿಯ ಸಂಪತ್ತಿನ ಬಗ್ಗೆ ಪ್ರಚಾರ ನಡೆಸಲು ರೂ 100 ನ್ನು ಇಡಿಸಲು ... ಗಿ ಒಪ್ಪಿಯೆನಂಗೆ ಕೊಟ್ಟಿರುವರು.

ಸದ್ಯದಲ್ಲಿಯೇ ಯೂರೋಪ್ ಪ್ರವಾಸವನ್ನು ಕೈಕೊಳ್ಳಲಿರುವ ತ್ರಿವಾಂಕೂರು ಮಹಾರಾಣಿಯವರು ... ಮದ್ರಾಸು ಸರಕಾರದ ... ನ್ನು ... ಸಿರಾಜುದ್ದೀನ ... ವೈದ್ಯರುಗಳವರೂ ಜೊತೆ ಬರಬೇಕೆಂದು ... ಹಬ್ಬಿರುವುದನ್ನು ತಿಳಿದು ಮದ್ರಾಸ್ ಸರಕಾರದವರು ಶ್ರೀಮತಿಯವರಿಗೂ, ಅವರ ಮಗನ ಮಹಾರಾಜರ ಪುತ್ರ ಶ್ರೀ ರಾಮಕೃಷ್ಣ ಚಟ್ಟೋಪಾಧ್ಯಾಯರಿಗೂ ಪಾಸ್ ಪೋರ್ಟ ಕೊಟ್ಟಿರುತ್ತದೆಂದು ಪ್ರಕಟಿಸಿರುವರು

ಬಲಸಚಿತ್ರ ಪ್ರಸಾರವನ್ನು ಸಂಜಾಬು ಸರಕಾರದಲ್ಲಿ ಕೆಲಸ ಮಾಡುವವರಲ್ಲಿ ಯಾರೂ ತಗದುಕೊಳ್ಳಕೂಡದೆಂದು ಆಜ್ಞೆ ಮಾಡಿರುವರಷ್ಟೆ. ಎಲ್ಲಾ ಸರಕಾರಗಳೂ, ಹೊಸ ಸರಕಾರ ಬಿಡುಗಡೆಗೆ ನಾಟಕ ಮುಂತಾದ ... ರ, ಸರಕಸು, ಇತ್ಯಾದಿ ಕಲೆಗಳ ಪ್ರಚಾರವನ್ನು ಕೈಕೊಳ್ಳಕೂಡದೆಂದೂ, ... ದವರಿಗೂ, ಅವುಗಳನ್ನು ಹಾಳ್ಮಾಡುವುದು ಶಿಕ್ಷೆ ವಿಧಿಸಲಾಗುವುದು. ಈ ಆಜ್ಞೆಯು ಶಾಲೆಯಲ್ಲಿ ಓದುವ ವಿದ್ಯಾರ್ಥಿಗಳ ವಿಚಾರದಲ್ಲಿ ಯಾವ ಬಗೆಯ ಮಾರ್ಗವನ್ನು ಮಾಡಿಕೊಂಡಿರುವರೆಂದು ಕಂಡುಹಿಡಿಯಲು ಸಾರ್ವಜನಿಕರ ಸಹಾಯವನ್ನು ಕೇಳಿ ... ಪಲ್ಲಿ ಉತ್ಪನ್ನವಾಗಿರುತ್ತದೆ

ವಿದೇಶ

ರಷ್ಯಾ ಡಿಕ್ಟೇಟರರು ಭಂಗಾರದ ತಟ್ಟೆಯಲ್ಲಿ ಆಹಾರವನ್ನು ಸ್ವೀಕರಿಸುತ್ತಿರುವರೆಂದೂ, ಎಲ್ಲಿಗಾದರು ಹೋದಾಗ ತಂಡಕೆಯನ್ನು ಒಂದು ಕೋಣೆಯಲ್ಲಿ ಸೇರಿಸಿ ಬೀಗ ಹಾಕುವರೆಂದೂ ಪತ್ರಿಕೆಗಳು ತಿಳಿಸುತ್ತವೆ

ಬ್ರಿಟಿಷರ ಸ್ವರ್ಗ ಹಾಗೂ ಭಾರತೀಯರ ನರಕವಾದ ಅಂಡಮಾನ್ ದ್ವೀಪಗಳನ್ನು ಕೈಬಿಡಲು ಯೋಗ್ಯವಾಗಿ ಮಾಡುವ ಬದಲು ಸೈನ್ಯವನ್ನಿರಿಸಿ ಬಂಗಾಳದ ಸಮುದ್ರವನ್ನು ಕಾಯಲು ಸ್ಥಳವಾಗಿ ಮಾರ್ಪಡಿಸುವ ಹಂಚಿಕೆ ನಡೆದಿದೆ. ಸುಮಾರು 2 ಲಕ್ಷ ರೂಪಾಯಿಗಳ ವೆಚ್ಚದಿಂದ ವಿಮಾನ ಬಂದರನ್ನು ತೆರೆಯುವುದೆ ಹಂಚಿಕೆ ನಡೆದಿದೆ

ಬ್ರಿಟಿಷ್ ಮುಖ್ಯ ಮಂತ್ರಿಗಳಾದ ಮಿ ಚೇಂಬರ್ಲೇನರು ವಿಶ್ವಾಸದಿಂದ ಅವರ ಸ್ಥಳದಲ್ಲಿ ಸರ್ ಸ್ಯಾಮ್ಯುಯಲ್ ಹೋರ್ ಪ್ರಧಾನ ಮಂತ್ರಿಗಳಾಗುವರೆಂದು ವಾರ್ತೆ. ಕಳೆದ ವಾರದಲ್ಲಿ ಲಂಡನ್ ಪಾರ್ಲಿಮೆಂಟಿನ ಲಾಬಿಯೊಳಗೆ ಕನ್ಸರ್ವೇಟಿವ್ ಪಕ್ಷದವರ ಒಂದು ಗುಪ್ತ ಸಭೆ ಸೇರಿದ್ದು ಈ ಬಗ್ಗೆ ಬಹಳ ಚರ್ಚೆ ನಡೆದು ಚೇಂಬರ್ಲೇನರ ಸ್ಥಾನವನ್ನು ಸರ್ ಜಾನ ಸೈಮನ್ನರಿಗೆ ಕೊಡಲಿಕ್ಕೆ ಮುಖ್ಯ ಮಂತ್ರಿಪದ ಬಿಟ್ಟುಕೊಡಬೇಕೆಂದು ತೀರ್ಮಾನಿಸಿದರೆಂದು ತಿಳಿಯುತ್ತದೆ. ಸರ್ ಜಾನ್ ಸೈಮನ್ನರು ಚೇಂಬರ್ಲೇನರ ಪರರಾಷ್ಟ್ರೀಯ ಧೋರಣೆಯನ್ನು ಮುನ್ನಡೆಸುವ ಕಾರ್ಯದಲ್ಲಿ ಯೋಗ್ಯ ವ್ಯಕ್ತಿಯಾಗುವರೆಂದು ಕನ್ಸರ್ವೇಟಿವ್ ಪಕ್ಷದವರ ಮತ

ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿ,
ಮಡಿಕೇರಿ

ಪ್ರಕಟಣೆ.

ಕೊಡಗು ಕಾಂಗ್ರೆಸಿಗೆ ರೂ 100 ನಿಧಿ ಬೇಕೆಂದು ಕೆಲವು ಕಾಂಗ್ರೆಸಿನವರು ಸಾರ್ವಜನಿಕರಿಂದ ಹಣ ವಸೂಲು ಮಾಡುತ್ತಿರುವರೆಂದೂ ಆದ ಹಣಕ್ಕೆ ಲೆಕ್ಕ ರಶೀತಿ ಕೂಡ ಕೊಡುವುದಿಲ್ಲವೆಂದೂ ಕೆಲವರು ಆಕ್ಷೇಪ ಮಾಡಿ ತಿಳಿಸಿರುತ್ತಾರೆ. ಈ ಬಗ್ಗೆ ಈ ಕಾರಣ ವಿಚಾರ ಸರ್ವರಿಗೂ ತಿಳಿಸುವದೇನೆಂದರೆ ಕೊಡಗು ಕಾಂಗ್ರೆಸಿಗಾಗಿ ಯಾವ ತರದ ನಿಧಿಯನ್ನು ಸಂಗ್ರಹಿಸಲು ಕೊಡಗು ಜಿಲ್ಲಾ ಕಾಂಗ್ರೆಸು ನಿರ್ಧರಿಸಿರುವದಿಲ್ಲ. ಆ ಬಗ್ಗೆ ಹಣ ವಸೂಲಿಗಾಗಿ ಯಾರನ್ನೂ ನಿಯಮಿಸಿರುವುದಿಲ್ಲ. ಕಾಂಗ್ರೆಸ ಸದಸ್ಯರನ್ನು ಮಾತ್ರ ಮಾಡುವ ಕೆಲಸ ಕಾಂಗ್ರೆಸಿನವರು ಮಾಡುತ್ತಿರುವರು. ಒಬ್ಬೊಬ್ಬ ಮೆಂಬರು ವಾರ್ಷಿಕ ಚಂದಾ 0-4-0 ಮಾತ್ರ ಕೊಡಬೇಕಷ್ಟು. ಆ ಹಣಕ್ಕೆ ಪ್ರಿಂಟ ಮಾಡಿದ ಕರ್ನಾಟಕ ಪ್ರಾಂತೀಕ ಸಮಿತಿಯ ಮುದ್ರೆ (ಹಿಂಬದಿಯಲ್ಲಿ) ಇರುವ ರಶೀತಿಗಳನ್ನು ಆಗಲೇ ಕೊಡಲಾಗುವದು. ಇದಲ್ಲದೆ ಕಾಂಗ್ರೆಸ್ ಸಂಸ್ಥೆಗೆ ಏನಾದರು ವಿಶೇಷ ಧನ ಸಹಾಯ ಮಾಡುವವರಿದ್ದರೆ ಅವರು ಕಾಂಗ್ರೆಸ್ ಆಫೀಸಿಗೇ ಕಳುಹಿಸಿಕೊಟ್ಟು ಲೆಕ್ಕ ಪಕ್ಕ ಪ್ರಿಂಟಾದ ರಶೀತಿ ಪಡೆಯತಕ್ಕದ್ದೆಂದು ಈ ಮೂಲಕ ಎಲ್ಲಾ ದೇಶಾಭಿಮಾನಿಗಳಿಗೂ ತಿಳಿಸಲಾಗಿದೆ

ಚೆಪ್ಪುಡೀರ ಪೂಣಚ್ಚ,
ಕಾರ್ಯದರ್ಶಿ,
ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿ.

ಬಾತ್ಮಿ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. [ಕೊ. ಸಂ.

—o0o—

ಸಿಬ್ಬಂದಿ ಖೋತೆ.

ಅಯ್ಯಾ,

ಕೊಡಗಿನ ಸರ್ಕಾರವನ್ನು ಸರಿಯಾಗಿ ನಡೆಸಲು ವಿಶೇಷ ತರಹದ ಸಿಬ್ಬಂದಿ ಖೋತೆ ಮಾಡುತ್ತಾರೆಂಬ ಕೂಗು ದೇಶದ ಎಲ್ಲಾ ಕಡೆ ಹರಡಿ ಜನರ ಮನಸ್ಸನ್ನು ಅಲ್ಲೋಲ ಕಲ್ಲೋಲ ಮಾಡಿದೆ. ತಲೆಭಾರದ ಮತ್ತು ದುಂದುಗಾರಿಕೆಯ ಉದ್ಯೋಗವನ್ನು ತೆಗೆದು ಹಾಕಿ ಬಜೆಟ್ಟನ್ನು ದೇಶದ ಉತ್ಪತ್ತಿಗೆ ಸಮಾನವಾಗಿ ಸರಿಪಡಿಸುವುದರ ಬದಲು ಮುಂದಕ್ಕೆ ಬಾಳಿ ಬದುಕುವ ಯುವಕರ ಮತ್ತು ಕಮ್ಮಿ ತರಗತಿಯ ತಲಬಿನ ಬಡಪಾಯಿಗಳನ್ನು ಮನೆಗೆ ಕಳುಹಿಸಿ, ನಿರುದ್ಯೋಗದ ಸಂಖ್ಯೆಯನ್ನು ಹೆಚ್ಚಿಸುವ ಸಂದರ್ಭವಿದೆಯೆಂದು ಎಲ್ಲೆಲ್ಲಿಯೂ ಕೂಗು. ಇದು ಹೌದಾದರೆ ದೇಶಕ್ಕೆ ದೊಡ್ಡ ನಷ್ಟವಾಗದೆ ಇರದು.

ಅಲ್ಲದೆ ಅನೇಕ ಸ್ಕೂಲುಗಳನ್ನು ಮುಚ್ಚಿ ವಿದ್ಯಾರ್ಥಿಗಳ ಫೀಸನ್ನು ಹೆಚ್ಚು ಮಾಡುತ್ತಾರೆಂಬ ವಾರ್ತೆಯ ಗಾಳಿಯು ಮತ್ತೊಂದು ಕಡೆ ಬಿರುಸಾಗಿ ಬೀಸುತ್ತಿದೆ. ಇದು ನಿಜವಾದರೆ ಕೊಡಗಿನ ಬಡವರ ಮಕ್ಕಳ, ವಿದ್ಯಾಭ್ಯಾಸಕ್ಕೆ ಮಣ್ಣು ಹಾಕಿದಂತೆಯೇ ಸರಿ. ಶಾಲೆಗಳು ಹೆಚ್ಚಿ ಫೀಸು ಬಹಳ ಮಟ್ಟಿಗೆ ಕಡಿಮೆಯೊದ್ದರಿಂದ ಅನೇಕ ಬಡವರ ಮಕ್ಕಳು ವಿದ್ಯೆಯಲ್ಲಿ ಮುಂದರಿದರು. ಹೆಚ್ಚು ಮಾಡಿದ್ದಾದರೆ ಬಡವರ ಮಕ್ಕಳನ್ನು ಶಾಲೆಗೆ ಕಳುಹಿಸುವುದರ ಬದಲು ದನ ಕಾಯಲು ಕಳುಹಿಸಿದಂತಾಗುವುದು. ವಿದ್ಯೆ ಕಮ್ಮಿ ಆಯಿತೆಂದರೆ ದೇಶದಲ್ಲಿ ಎಲ್ಲಾ ಚಳವಳಿ ನಿಂತಂತೆ ಆಗುವುದು. ಜನರನ್ನು ಕೇಳದ ಮನಸ್ಸೋ ಇಚ್ಛೆ ದೇಶವನ್ನು ಆಳಲು ಸರ್ಕಾರಕ್ಕೆ ಹೆಚ್ಚಿನ ಅನುಕೂಲ ಮಾಡಿಕೊಟ್ಟಂತಾಗುವುದು. ಇದಲ್ಲವೇ ಸರ್ಕಾರದವರು ದೇಶೀಯರನ್ನು ಅಜ್ಞಾನವೆಂಬ ಕತ್ತಲೆಯಿಂದ ಜ್ಞಾನವೆಂಬ ಬೆಳಕಿಗೆ ತರಲು ಮಾಡುವ ಪ್ರಯತ್ನ?

ಉಪಕಾರಣ ಕೌನ್ಸಿಲಿನಲ್ಲು ಚರ್ಚಿಸಿ ಈಗ ಯೋಚನೆ ಮಾಡಿರುವ ಸಿಬ್ಬಂದಿ ಖೋತೆಯನ್ನು ಕೌನ್ಸಿಲಿನವರು ಅಂಗೀಕರಿಸದ ವಿನಹ ಜಾರಿಗೆ ತರಕೂಡದೆಂದು ಕಂಠೋಕ್ತವಾಗಿ ಹೇಳಬೇಕಾಗಿದೆ. ಕೌನ್ಸಿಲಿನ ಅಭಿಪ್ರಾಯವನ್ನು ತಿರಸ್ಕರಿಸಿ ಸಿಬ್ಬಂದಿ ಖೋತೆಯನ್ನು ಜಾರಿಗೆ ತರುವ ಸಂದರ್ಭ ಬಂದಲ್ಲಿ ಮೆಂಬರುಗಳು ಕೌನ್ಸಿಲಿನಿಂದ ಹೊರ ಬರುವುದು ಯುಕ್ತವಾಗಿ ತೋರುತ್ತೆ. ಅಥವಾ ಒಂದು ವೇಳೆ ಕೌನ್ಸಿಲಿನಲ್ಲು ಪ್ರಯೋಜನವಾಗದಿದ್ದಲ್ಲಿ ದೇಶದಲ್ಲೆಲ್ಲಾ ಚಳವಳಿ ಎಬ್ಬಿಸಿ ವೈಸರಾಯ್ ಪ್ರಭುಗಳ ಪರಿಯಂತರ ಒಂದು ಡೆಪ್ಯುಟೇಷನು ಹೋಗುವಂತೆ ಜನರಲ್ಲಿ ಪ್ರೋತ್ಸಾಹಿಸಬೇಕಾಗಿದೆ. ಆಗ ತಾನೇ ದೇಶ ಸೇವೆಯ ವ್ಯಾಖ್ಯಾನವನ್ನು ಕಾರ್ಯಕ್ಕೆ ಆಚರಿಸಿದಂತೆ ಆಗುವುದು.

'ದೇಶ ಹಿತೈಷಿ'

ಕೊಡಗು ಮೋಟಾರು ಕೆಲಸಗಾರರ ಸಂಘ, ಮಡಿಕೇರಿ.

ಈ ಸಂಘದ ಜನರಲ್ ಬಾಡಿ ಮೀಟಿಂಗು ತಾ. 6-9-38 ರಲ್ಲು ಮಡಿಕೇರಿಯಲ್ಲಿರುವ ಅಂಬಿಕಾ ಪ್ರೆಸ್ ಕಟ್ಟಡದಲ್ಲಿ ಸಂಘದ ಅಧ್ಯಕ್ಷರಾದ ಮೆ. ಕೆ. ಶಿವಣ್ಣಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತ್ತು. 38 ಮಂದಿ ಸದಸ್ಯರು ಹಾಜರಿದ್ದರು.

(1) ಕಳೆದ ಮಹಾ ಸಭೆಯ ನಡವಳಿಕೆಗಳನ್ನು ಓದಿ ಒಪ್ಪಲಾಯಿತು.

(2) ಈ ವರೆಗೆ ಸದಸ್ಯರಾಗಿರುವವರ ವಿಚಾರವಾಗಿಯೂ, ವಸೂಲಾದ ಚಂದಾ ಹಣದ ವಿಷಯವಾಗಿಯೂ ವರದಿಗಳನ್ನು ಸಭೆಯವರಿಗೆ ತಿಳಿಸಲಾಗಿ ಈ ವರೆಗೆ 60 ಕ್ಕೆ ಮೇಲ್ಪಟ್ಟು ಸದಸ್ಯರುಗಳಾಗಿರುವದಾಗಿಯೂ, ಅವರಿಂದ ರೂ. 12-10-0 ಚಂದಾ ವಸೂಲಾಗಿರುವದಾಗಿಯೂ ಸಭೆಯವರಿಗೆ ತಿಳಿಸಲಾಯಿತು.

(3) ಸಂಘದ ಕರಡು ನಿಯಮಾವಳಿಗಳನ್ನು ಓದಿ ಅನೇಕ ಚರ್ಚೆಗಳಾಗಿ ಪಾಸಾದ ನಿಯಮಾವಳಿಯನ್ನು ಬೇಗನೆ ಪ್ರಿಂಟು ಮಾಡುವಂತೆ ತೀರ್ಮಾನವಾಯಿತು.

(4) ಸಂಘದವರಿಂದ ಚುನಾಯಿಸಲ್ಪಟ್ಟ ಒಬ್ಬ ಸದಸ್ಯನನ್ನು ಕೊಡಗು ಟ್ರಾಫಿಕ್ ಬೋರ್ಡಿಗೆ ಸೇರಿಸಿಕೊಳ್ಳಬೇಕೆಂದು ಕೊಡಗು ಕಮಿಷನರವರಿಗೆ ಬರೆದುಕೊಳ್ಳುವಂತೆ ನಿಶ್ಚಯಿಸಲಾಯಿತು.

(5) ಸಂಘದ ಸದಸ್ಯರಿಂದ ತಿಂಗಳುವಾರು ಚಂದಾವನ್ನು ಬರುವ ಅಕ್ಟೋಬರ್ ತಾ. 1 ರಿಂದ ವಸೂಲು ಮಾಡುವಂತೆಯೂ ಆ ವರೆಗೆ ಹೊಸ ಸದಸ್ಯರನ್ನು ಸೇರಿಸುತ್ತಾ ಪ್ರವೇಶ ಧನವನ್ನು ವಸೂಲುಮಾಡುವಂತೆಯೂ ತೀರ್ಮಾನವಾಯಿತು.

(6) ಸಂಘದ ಹೆಸರಿನಲ್ಲಿ ಒಂದು ಬೋರ್ಡನ್ನು ಬರೆಸಿಡುವಂತೆ ತೀರ್ಮಾನವಾಯಿತು.

ಸಂಘದ ಕೆಲಸ ಕಾರ್ಯಗಳು ಬಹಳ ಉತ್ತೇಜಕವಾಗಿರುವದರಿಂದಲೂ, ನಿರೀಕ್ಷಿಸಿದಕ್ಕಿಂತ ಹೆಚ್ಚಿನ ಸದಸ್ಯರು ಈಗಾಗಲೇ ಸಂಘಕ್ಕೆ ಸೇರಿರುವದರಿಂದಲೂ ಸಂಬಂಧಪಟ್ಟ ಮೋಟಾರು ಕೆಲಸಗಾರರೆಲ್ಲ ಬೇಗನೇ ಸಂಘಕ್ಕೆ ಸೇರಿ ಸಂಘವನ್ನು ಬಲಪಡಿಸಬೇಕೆಂದೂ ವಿನಂತಿಗಳೊಡನೆ ಸಭೆಯು ಮುಕ್ತಾಯಗೊಂಡಿತು.

ಕೆ. ಮುದ್ದಪ್ಪ,
(ಕಾರ್ಯದರ್ಶಿ.)

—o0o—

ಕಥಾ ಕುಂಜ

ಚಂದಾದಾರರಲ್ಲಿ ವಿನಂತಿ.

ಸಂಪಾದಕರು:-

ಹ್ಯಾಟಿ ದ್ಯಾಮಣ್ಣನವರು ಒಂದು ಒಂದೂವರೆ ತಿಂಗಳಿಂದ ಕಾಯಿಲೆಯಿಂದ ನರಳುತ್ತಿದ್ದಾರೆ. ಕಾರಣ ಅವರು ಗುಣವಾಗುವ ವರೆಗೆ ಕಥಾ ಕುಂಜವು ಪ್ರಕಟವಾಗಲಾರದು. ಅವರಿಗೆ ಗುಣವಾದೊಡನೆ ಎಲ್ಲ ಕೂಡಿಸಿ ಹೊರಡಿಸಿ ಚಂದಾದಾರರಿಗೆ ಕಳುಹಿಸಲಾಗುವದು. ಅಲ್ಲಿಯ ವರೆಗಿನ ಈ ವಿಳಂಬಕ್ಕಾಗಿ ಮನ್ನಿಸಬೇಕಾಗಿ ಪ್ರಾರ್ಥನೆ.

ಬೆಳಗಾವಿ, 1-9-38.

ನಾರಾಯಣ ಸೇಟಕರ,
ಮೇನೇಜರ್.

ಮಾರಾಟಕ್ಕಿದೆ.

ಈ ಕೆಳಗೆ ನಮೂದಿಸಿದ ಚಹರೆಯ ಕೊಡಗು ಸರ್ಕಾರದ ಒಂದು ಮುರ್ರಾ ಜಾತಿಯ ಬೀಜದ ಕೋಣವು ಮಾರಾಟಕ್ಕಿದೆ. ಇದು ಗಾಡಿಗೆ ಕಟ್ಟುವುದಕ್ಕೂ, ನೀರು ಸಾಗಿಸುವ ಪಕಾಲಿ ಕೆಲಸಕ್ಕೂ ಬಹಳ ಪ್ರಯೋಜನವಾಗುತ್ತದೆ. ಇದರ ಬೆಲೆ ಹೆಚ್ಚು ಕಡಿಮೆ ಒಂದು ನೂರು ರೂಪಾಗಳು. ಖಾಯಿಸ್‌ದಾರರು ಒಡನೆ ಕೊಡಗು ಡಿಸ್ಟ್ರಿಕ್ಟ್ ವೆಟರಿನರಿ ಆಫೀಸರ್, ಮಡಿಕೇರಿ, ಇವರ ವಿಳಾಸಕ್ಕೆ ಬರೆದುಕೊಳ್ಳಬಹುದು. ಈ ಕೋಣವು ಈಗ ಫ್ರೇಜರ್‌ಪೇಟೆ ಸರ್ಕಾರಿ ಗೂಳಿಗಳನ್ನು ಸಾಕುವ ಫಾರಂನಲ್ಲಿದೆ.

ಇದರ ವಿವರ.

1. ವಯಸು-5 ವರ್ಷ.
2. ಎತ್ತರ-4 ಅಡಿ 5 ಇಂಚು.
3. ದಪ್ಪ-7 ಅಡಿ.
4. ಉದ್ದ-7 ಅಡಿ.
5. ಭಾರ-1,200 ಪೌಂಡುಗಳು.

ಸಿ. ಬಿ. ಸೋಮಣ್ಣ,
ಡಿಸ್ಟ್ರಿಕ್ಟ್ ವೆಟರಿನರಿ ಆಫೀಸರ್,
4-1 ಮಡಿಕೇರಿ.

ಪ್ರಕಟಣೆ.

ಕೊಡಗು ವೀರಶೈವ ಬಾಂಧವರಲ್ಲಿ ವಿನಂತಿ.

ಬಾಂಧವರೇ,

ಉತ್ತರ ಕೊಡಗು ತಾಲೋಕು ಶನಿವಾರಸಂತೆ ಹೋಬಳಿ, ಶನಿವಾರಸಂತೆ ಗುಡುಗಳಲೆ ದೇವಸ್ಥಾನದಲ್ಲಿ, ಪ್ರಾಂತದ ಮಹನೀಯರು ಸೇರಿ ತಾ. 15-8-38ರಲ್ಲು ಶ್ರೀ ಸಂಗಮೇಶ ಸ್ವಾಮಿಗಳು, ಕೊಡ್ಲಿ ಕಲ್ಲುಮಠ, ಇವರ ಅಧ್ಯಕ್ಷತೆಯಲ್ಲು ಸಭೆ ಸೇರಿ ಕೊಡಗು ವೀರಶೈವ 'ತರುಣ ಸಂಘ' ಒಂದನ್ನು ಸ್ಥಾಪಿಸಲಾಯಿತು. ಆದುದರಿಂದ ಕೊಡಗು ದೇಶದ 18 ವರ್ಷಕ್ಕೆ ಮೇಲ್ಪಟ್ಟ ವೀರಶೈವ ಮಹನೀಯರೆಲ್ಲರೂ ನಾಲ್ಕಾಣೆ ಚಂದಾ ಮೊಬಲಗು ಮತ್ತು ಪ್ರವೇಶ ಹಾಸಲು ನಾಲ್ಕಾಣೆ ಒಟ್ಟು ಎಂಟಾಣೆ ಕೊಟ್ಟು ಮೇಲ್ಕಂಡ ಸಂಘಕ್ಕೆ ಸೇರಬೇಕಾಗಿಯೂ ಮತ್ತು ಸಂಘ ಸ್ಥಾಪನೆ ಕುರಿತು ಮುಂದಿನ ನಡವಳಿಕೆಗೆ ಬೇಕಾಗುವ ನಿಬಂಧನೆಗಳನ್ನು ತಯಾರಿಸಬೇಕಾಗಿರುವುದರಿಂದ ಇದಕ್ಕೆ ಬೇಕಾದ ಸಲಹೆಗಳನ್ನು ತಾ. 16-9-38ರ ಒಳಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ ಕೊಟ್ಟು ಸಂಘದ ಅಭಿವೃದ್ಧಿಯನ್ನು ಕೋರಬೇಕಾಗಿಯೂ ಹಾರೈಸುತ್ತೇವೆ.

ಇತಿ

ಎಚ್. ಎಂ. ಮಲ್ಲಪ್ಪ,
ಗೌರವ ಸೆಕ್ರೆಟರಿ, ತರುಣ ಸಂಘ,
ಶನಿವಾರಸಂತೆ, ಉ. ಕೊಡಗು.

ಅಪಪ್ರಚಾರದ ಹಾನಿ.

ದೃಢ ವಿಶ್ವಾಸದಿಂದ ಎಂತಹ ಮಹತ್ಕಾರ್ಯವನ್ನಾದರೂ ಸಾಧಿಸಬಹುದು. ಆದರೆ ದಿಗಿಲಿನ ಮನೋವೃತ್ತಿಯಿಂದ ಸರ್ವ ಸಾಧಾರಣ ಕೈಗೂಡಿಸಲಾಗುವ ಕಾರ್ಯವೂ ಅಸಾಧ್ಯವಾಗುವುದು. ಸುರಕ್ಷಿತತೆಯ ಕುರಿತು ಪ್ರತಿಯೊಬ್ಬನೂ ಪ್ರಥಮವಾಗಿ ಗಮನಕೊಡುವುದು ಸ್ವಾಭಾವಿಕ. ಆದರೆ ಅನಾವಶ್ಯಕವಾದ ಸಂದೇಹ ಭೀತಿಗಳಿಗೆ ಒಮ್ಮೆಯೇ ಮನಸು ಕೊಟ್ಟು ಸರಿಯಾಗಿ ವಿಚಾರಮಾಡದ ದಿಗಿಲುಗೊಳ್ಳುವುದರಿಂದ ಮತ್ತಷ್ಟು ಹಾನಿಯೇ ಹೊರತು ಯಾವ ಪ್ರಯೋಜನವೂ ಇಲ್ಲ. ವಿಶ್ವಾಸವೇ ಯಾವುದಾದರೊಂದು ಸಾರ್ವಜನಿಕ ಸಂಸ್ಥೆಯ ಅಡಿಗಲ್ಲು ಮತ್ತು ಸಂಚಾಲಕ ಶಕ್ತಿ. ಈ ವಿಶ್ವಾಸವೆಂಬ ಭಂಡವಾಳದಿಂದಲೇ ಇಡೀ ಲೋಕದ ವ್ಯವಹಾರ ನಡೆಸಲ್ಪಡುವುದು. ಅದೊಂದು ತಪ್ಪಿದರೆ ಆ ಇಡೀ ಕಟ್ಟಡವೇ ಕುಸಿದು ಬೀಳುವುದು. ಜನತೆಯ ವಿಶ್ವಾಸ ತಪ್ಪಿದರೆ ಲೋಕದ ಎಂತಹ ಪ್ರಚಂಡ ಸಂಸ್ಥೆಯಾದರೂ ಎಷ್ಟೊಂದು ಪ್ರಬಲ ಸರ್ಕಾರವಾದವರೂ ಕ್ಷಣಮಾತ್ರದಲ್ಲೆಂಬಂತೆ ತಳಮಗುಚ್ಚುವುದು.

ಬೇಂಕಿಂಗ್ ಸಂಸ್ಥೆಗಳಿಗಂತೂ ಜನವಿಶ್ವಾಸವೇ ಜೀವಾಳ. ಅದಿಲ್ಲದೆ ಅವು ಒಂದು ಕ್ಷಣವಾದರೂ ಬಾಳಕೊಂಡಿರಲಾರವು. ದಕ್ಷಿಣ ಹಿಂದುಸ್ಥಾನದ ಪ್ರಮುಖ ಬೇಂಕಿಂಗ್ ಸಂಸ್ಥೆಗಳಲ್ಲೊಂದಾದ ತಿರುವಾಂಕೂರು ನೇಶನಲ್ ಮತ್ತು ಕ್ವಿಲೋನ್ ಬೇಂಕು ದುರವಸ್ಥೆಗೊಳಗಾದ ಮೇಲೀಗ ಜನತೆಯಲ್ಲಿ ಬೇಂಕಿಂಗ್ ಸಂಸ್ಥೆಗಳ ಕುರಿತು ಒಂದು ರೀತಿಯ ಸಂಶಯವು ತಲೆದೋರಹತ್ತಿದೆ. ತಿರುವಾಂಕೂರು ನೇಶನಲ್ ಬೇಂಕಿನ ಪತನಕ್ಕೆ ಮೂಲ ಕಾರಣರಾರೆಂಬುದು ಇದೀಗ ಜನಜನಿತ ವಿಷಯ. ಅದು ಇಂದು ಪತನ ಹೊಂದದಿರುತ್ತಿದ್ದರೆ ಸಾವಿರಾರು ಜನರ ಲಕ್ಷಗಟ್ಟಲೆ ಹಣವು ಮುಳುಗುವಂತಾಗುತ್ತಿದ್ದಿಲ್ಲ. ನೂರಾರು ಜನರು ತಮ್ಮ ಉದ್ಯೋಗ ಕಳಕೊಂಡು ಅಡ್ಡಾಡುವ ಅವಸ್ಥೆಗೀಡಾಗುತ್ತಿದ್ದಿಲ್ಲ. ಇದರಿಂದ ಜನರು ತಮ್ಮ ಅವಿಶ್ವಾಸ ಮತ್ತು ದಿಗಿಲಿನಿಂದ ತಮಗೇನೇ ಹಾನಿತಂದುಕೊಳ್ಳುವುದೆಂಬ ಪಾಠ ಕಲಿಯತಕ್ಕದ್ದು.

ತಿರುವಾಂಕೂರು ಬೇಂಕಿನ ಪತನದ ಈ ಸಂದರ್ಭದ ದುರುಪಯೋಗ ಪಡೆದು ತಮ್ಮ ಮೂಗು ಬಿಟ್ಟು ಮುಂದೆ ನೋಡದ ಸಂಕುಚಿತ ಮನೋವೃತ್ತಿಯ ಕೆಲವರು ಬೇಂಕಿಂಗ್ ಸಂಸ್ಥೆಗಳ ಕುರಿತು ಜನತೆಯಲ್ಲಿ ಅನಾವಶ್ಯಕವಾದ ದಿಗಿಲನ್ನೆಬ್ಬಿಸುವ ಹಿತಶತ್ರುಗಳಾಗಿದ್ದಾರೆ. ಕೆಲವರು ಖಾಸಗಿ ದ್ವೇಷಾಸೂಯೆ ಸಾಧಿಸಲು ಇದೇ ಸುಸಂದರ್ಭವೆಂದು ನಾನಾ ಸೋಗುಗಳಿಂದ ಅಪಪ್ರಚಾರಮಾಡಹತ್ತಿದ್ದಾರೆ. ದಕ್ಷಿಣ ಹಿಂದೂಸ್ಥಾನದ ಬೇಂಕಿಂಗ್ ಸಂಸ್ಥೆಗಳ ಕುರಿತು ಅವಿಶ್ವಾಸ ಹುಟ್ಟಿಸುವಂಥ ಅಪಪ್ರಚಾರವು ಬೊಂಬಾಯಿಯಂಥ ದೊಡ್ಡ ಪಟ್ಟಣಗಳಲ್ಲಿ ನಡೆದಿದೆಯೆಂಬುದು ವಿಷಾದಕರವಿದೆ. ದಕ್ಷಿಣ ಹಿಂದೂಸ್ಥಾನದ ಶೆಡ್ಯೂಲ್ ಬೇಂಕುಗಳು ಸುಭದ್ರವಾಗಿವೆ.

ಅವುಗಳ ಕುರಿತು ಜನರು ಯಾವ ಸಂಶಯವನ್ನೂ ಹಚ್ಚಿಕೊಳ್ಳಬಾರದು. ಅವುಗಳಿಗೆ ಸಹಾಯ ಮಾಡಲು ರಿಸರ್ವ್ ಬೇಂಕು ಸದಾ ಸಿದ್ಧವಾಗಿಯೇ ಇದೆಯೆಂದು ಮದ್ರಾಸಿನ ಪ್ರಧಾನ ಮಂತ್ರಿ ಶ್ರೀ ರಾಜಗೋಪಾಲಾಚಾರ್ಯರು ಆಶ್ವಾಸನೆಯಿತ್ತಿರುವರು. ಅಂದಮೇಲೆ ಜನತೆಯು ಶೆಡ್ಯೂಲ್ ಬೇಂಕುಗಳ ಕುರಿತು ಯಾವ ಅಪಪ್ರಚಾರಕ್ಕಾದರೂ ಗಮನಕೊಟ್ಟು ಅವಿಶ್ವಾಸಪಡುವುದರಲ್ಲಿ ಅರ್ಥವೇ ಇಲ್ಲ.

ದಕ್ಷಿಣ ಹಿಂದೂಸ್ಥಾನದ ಹಲವು ಉದ್ಯಮಶೀಲ ಬೇಂಕಿಂಗ್ ಸಂಸ್ಥೆಗಳು ಉತ್ತರ ಹಿಂದೂಸ್ಥಾನಕ್ಕೂ ತಮ್ಮ ಕಾರ್ಯಕ್ಷೇತ್ರವನ್ನು ವ್ಯಾಪಿಸಿವೆ. ಬೊಂಬಾಯಿಯಂಥ ಪಟ್ಟಣಗಳಲ್ಲಿ ತಮ್ಮ ಶಾಖೆಗಳನ್ನು ಸ್ಥಾಪಿಸುವ ಸಾಹಸ ಮಾಡಿವೆ. ಇಡೀ ದೇಶದ ವ್ಯಾಪಾರ ಕೇಂದ್ರವಾದ ಮುಂಬಾಯಿಯಂಥ ಪಟ್ಟಣದೊಡನೆ ದಕ್ಷಿಣ ಹಿಂದೂಸ್ಥಾನವು ಹೆಚ್ಚಿನ ಸಹವಾಸವನ್ನು ನಡೆಸುತ್ತಿದೆ. ಅಂದ ಮೇಲೆ ಅಲ್ಲಿ ನಮ್ಮ ಬೇಂಕಿಂಗ್ ಸಂಸ್ಥೆಗಳು ತಮ್ಮ ಶಾಖೆಗಳನ್ನು ಸ್ಥಾಪಿಸುವುದು ಸ್ವಾಭಾವಿಕ ಮತ್ತು ಆವಶ್ಯಕ. ಇದು ಹೊರತು ಅಮೇರಿಕ ಮತ್ತು ಯೂರೋಪಿನ ದೊಡ್ಡ ದೊಡ್ಡ ಕಂಪೆನಿಗಳು ಇಡೀ ಲೋಕವನ್ನೇ ತಮ್ಮ ವ್ಯವಹಾರ ಕ್ಷೇತ್ರವಾಗಿ ಮಾಡಿಕೊಂಡು ಅಭಿವೃದ್ಧಿಹೊಂದುತ್ತಿರುವಾಗ, ಇಂಡಿಯ ಕಂಪೆನಿಗಳು ಅಖಿಲ ಭಾರತದ ದೃಷ್ಟಿಯಿಂದಾದರೂ ಕೆಲಸ ಮಾಡುವುದು ಅತ್ಯಾವಶ್ಯಕವಲ್ಲವೇ? ಅದು ರಾಷ್ಟ್ರೀಯತೆಗೆ ಪೋಷಕವೂ ಆಗುವುದಿಲ್ಲವೇ? ದಕ್ಷಿಣ ಹಿಂದೂಸ್ಥಾನದ ಈ ಬೇಂಕಿಂಗ್ ಸಂಸ್ಥೆಗಳು ಹಲವು ಈ ವ್ಯಾಪಕ ದೃಷ್ಟಿಯಿಂದ ತಮ್ಮ ವ್ಯವಹಾರ ಕ್ಷೇತ್ರವನ್ನು ಬೆಳಸಿದರೆ ಅದಕ್ಕೆ ಯಾರಾದರೂ ಅಸೂಯೆಪಡುವುದು ಕೇವಲ ಕ್ಷುದ್ರ ಬುದ್ಧಿಯೇ ಸರಿ. ಇಂಥಾ ಸಂಕುಚಿತತೆಯೇ ಹಿಂದೂ ದೇಶದ ಪುರೋವೃದ್ಧಿಯ ಮಾರ್ಗದಲ್ಲಿರುವ ಮುಖ್ಯ ತಡೆ. ಈ ಮನೋವೃತ್ತಿಯಿಂದ ಪ್ರಯೋಜನ ಹೊಂದುವುದು ವಿದೇಶೀ ಸಂಸ್ಥೆಗಳು.

ಎಷ್ಟೊಂದು ದೊಡ್ಡ ಹಾಗೂ ಸ್ಥಿರವಾದ ವಿದೇಶೀ ಸಂಸ್ಥೆಯಾದರೂ ಮೊದಲು ಅತೀ ಚಿಕ್ಕದಾಗಿದ್ದು ಜನವಿಶ್ವಾಸ ಮತ್ತು ಪ್ರೋತ್ಸಾಹದಿಂದಲೇ ಲೋಕವ್ಯಾಪಕವಾಗಿ ಹಬ್ಬಿರುವುದು. ಅಂಥಾ ವಿಶ್ವಾಸ ಮತ್ತು ಪ್ರೋತ್ಸಾಹವನ್ನು ನಾವೂ ನಮ್ಮ ಸಂಸ್ಥೆಗಳಿಗಿತ್ತರೆ ಅವೂ ಲೋಕವ್ಯಾಪಕವಾಗಿ ಬೆಳೆಯಲು ಸಾಧ್ಯವಿದೆ. ವ್ಯಾಪಾರ, ಕೈಗಾರಿಕೆ, ಬೇಸಾಯವೇ ಮೊದಲಾದ ಯಾವ ಉದ್ಯೋಗದ ಅಭಿವೃದ್ಧಿಗಾದರೂ ಹಣವು ಮೊದಲಾಗಿ ಬೇಕಾದುದು. ಅದನ್ನು ಅನುಕೂಲಿಸಿ ಕೊಡುವವು ಬೇಂಕಿಂಗ್ ಸಂಸ್ಥೆಗಳು. ಈ ಸಂಸ್ಥೆಗಳು ಹಣ ಪಡೆಯುವುದು ಜನತೆಯ ಠೇವಣಾತಿಯಿಂದ. ಠೇವಣಾತಿ ಬರುವುದು ವಿಶ್ವಾಸ ಬಲದಿಂದ. ಆದುದರಿಂದ ನಮ್ಮ ಜನರು ದೇಶೀಯ ಬೇಂಕುಗಳ ಕುರಿತು ಅನಾವಶ್ಯಕವಾದ ದಿಗಿಲಿಗೆ ಮನಸ್ಸು ಕೊಡುವುದರಿಂದ ದೇಶಕ್ಕೇನೇ ಎಂಥಾ ಹಾನಿಯುಂಟಾಗುವದೆಂಬುವದನ್ನು ಮನಗಂಡುಕೊಳ್ಳಬೇಕು. ತಮ್ಮ ಶಕ್ತಿಯನ್ನು ತಾವೇ ಕೊಯ್ದುಕೊಳ್ಳುವ ಆತ್ಮಘಾತುಕತನವಿದಂತಪ್ಪು. ಆದುದರಿಂದ ಜನರು ಯಾವ ತರದ ಅಪಪ್ರಚಾರಕ್ಕೂ ಕಿವಿಗೊಡದೆ, ದೃಢ ವಿಶ್ವಾಸದಿಂದ ನಡೆದರೆ ಇತ್ತಲಾಗಿ ತಾನೇ ತಮ್ಮ ಕಾರ್ಯಕ್ಷೇತ್ರವನ್ನು ಬೆಳಸಿ ಬಲಗೊಳ್ಳುತ್ತಿರುವ ನಮ್ಮ ಬೇಂಕಿಂಗ್ ಸಂಸ್ಥೆಗಳು ಇನ್ನೂ ಪ್ರಬಲವಾಗಿ ಬೆಳೆದು ಹೆಚ್ಚೆಚ್ಚು ಜನೋಪಕಾರಿಯಾಗಲು ಬೇಕಾದ ಆಶಯವನ್ನಿತ್ತಂತಾಗುವುದು.

'ನವಯುಗ'

ತಿರುವಾಂಕೂರಿನಲ್ಲಿ

ದಬ್ಬಾಳಿಕೆಯ ಪರಮಾವಧಿ.

ಸೈನಿಕರಿಗೆ ಕಲ್ಲೆ, 12 ಮಂದಿಗಳ ಪ್ರಾಣಾಪಹಾರ.

33 ಮಂದಿ ಪೋಲೀಸರಿಗೆ ಜಖಂ.

ತಿರುವಾಂಕೂರು ಸಂಸ್ಥಾನವು ಮೊದಲು ಹರಿಜನರಿಗೆ ದೇವಸ್ಥಾನ ಪ್ರವೇಶಕ್ಕೆ ಎಡೆಕೊಟ್ಟು ಅಖಿಲ ಸಂಸ್ಥಾನಗಳ ಗೌರವವನ್ನು ಪಡೆದಿತ್ತು. ಆದರೆ ಅದೇ ಸಂಸ್ಥಾನವು ಇಂದು ತನ್ನ ಪೂರ್ವಘನತೆಯನ್ನು ಒದೆಲಾಯಿಸಿ ಕರಾಳ ಸ್ವರೂಪವನ್ನು ತಳೆದಿದೆ. ಕಳೆದ ಆಗೋಸ್ತು ತಾ 28ರಲ್ಲಿ ಅಲ್ಲಿಯ ಕಾಂಗ್ರೆಸ್ ಮುಖಂಡರಿಗೆ ಸರಕಾರವು ಬಹಿಷ್ಕಾರವನ್ನು ಕೊಟ್ಟು ಕಾಂಗ್ರೆಸ್ ಸಂಸ್ಥೆಯನ್ನು ಕಾನೂನು ಬಾಹಿರ ಸಂಸ್ಥೆಯೆಂದು ಘೋಷಿಸಿದ್ದರು. ಅಂತೆಯೇ ಕಾಂಗ್ರೆಸ್ ಕಮಿಟಿಯಿಂದ ನಡೆಯುವ ವರದಿ, ಪತ್ರಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಬಾರದೆಂದೂ, ಸಭೆಗಳನ್ನು ಸೇರಿಸಿ ಭಾಷಣ ಮಾಡಕೂಡದೆಂದೂ ನಿರ್ಬಂಧಾಜ್ಞೆಯನ್ನು ಹೊರಡಿಸಿದ್ದರು.

ಆಗೋಸ್ತು ತಾ 30ರಲ್ಲಿ ಕಾಂಗ್ರೆಸ್ ಮುಖಂಡರ ಭಾಷಣ ಕೇಳಲು ವಣ್ಣ್ಯಗಂಚೇರಿಯಲ್ಲಿ ಸಾವಿರಾರು ಜನರು [illegible] ಮ್ಯಾಜಿಸ್ಟ್ರೇಟರ ಹುಕುಮನ್ನು ಉಲ್ಲಂಘಿಸಿ ನೆರೆದಿದ್ದರು. ಸುಮಾರು 12 ಮಂದಿ ಮುಖಂಡರು ಭಾಷಣ [illegible]ಯಲ್ಲಿ ನಿಂತು ರಾಷ್ಟ್ರ ಧ್ವಜ ಹಾರಿಸಿ ಸಭೆಯನ್ನು ನಡೆಸಲುದ್ಯುಕ್ತರಾಗಿದ್ದರು, ಕೂಡಲೇ ಅವರನ್ನು ಬಂಧಿಸಿ ಸೆರೆಮನೆಗೆ ಕೊಂಡೊಯ್ದರು. ನೆರೆದ ಸಭೆಯನ್ನು ಚದರಿಸಲು ಪೋಲೀಸರು ಲಾಠಿ ಪ್ರಯೋಗ ಮಾಡಿದರು. ಇದರಿಂದ ಉದ್ರೇಕಗೊಂಡ ಜನರು ಪೋಲೀಸರ ಮೇಲೆ ಕಲ್ಲು ಗುಂಡುಗಳನ್ನೆಸೆದು ಗಲಾಟೆ ಎಬ್ಬಿಸಿದರು. ಇದರಿಂದಾಗಿ 33 ಪೋಲೀಸರು ಗಾಯಗೊಂಡಿರುವರು. 15 ಜನರಿಗೆ ವಿಪರೀತ ಜಖಂ ಆದದ್ದರಿಂದ ಅವರನ್ನು ಆಸ್ಪತ್ರೆಗೆ ಸಾಗಿಸಿರುವರು. ಪೋಲೀಸು ಸುಪರಿಂಟೆಂಡೆಂಟರ ಕಾರಿಗೆ ಬೆಂಕಿ ಕೊಟ್ಟು ಭಸ್ಮ ಮಾಡಿದರು. ಪೋಲೀಸರಿಲ್ಲದಕ್ಕಾಗಲಾಗಿ ಎಡೆ ಅಲ್ಲಲ್ಲಿ ಅಂಗಡಿಗಳಲ್ಲಿ ಅಕ್ರಮ ನಡೆಯಬೇಕಾಯಿತು.

ತಾ 31ನೇ ದಿನ ಸಂಸ್ಥಾನ ಕಾಂಗ್ರೆಸ್ಸಿನ ಹೊಸ ಅಧ್ಯಕ್ಷರಾದ ಶ್ರೀ ಎಸ್. ಕೆ. ಪದ್ಮನಾಭ ಪಿಳ್ಳೆಯವರನ್ನು ಕೈದು ಮಾಡಿ ಸಿ. ಐ. ಡಿ. ಪೋಲೀಸು ಸುಪರಿಂಟೆಂಡೆಂಟರು ತಮ್ಮ ಕಾರಿನಲ್ಲೇ ಅವರನ್ನು ತ್ರಿವಂದ್ರಂಗೆ ಸಾಗಿಸುವಾಗ ದಾರಿಯಲ್ಲಿ ನ್ಯೆಯಾಟಿಂಕರದಲ್ಲಿ ಗಲಾಟೆ ಆರಂಭವಾಯಿತು. ಜನರ ತಂಡವು ಅವರನ್ನು ಅಡ್ಡಗಟ್ಟಿ ಕಲ್ಲುಗಳನ್ನೆಸೆದು ಕಾರಿಗೆ ಬೆಂಕಿಕೊಟ್ಟು ಭಸ್ಮಮಾಡಿತು. ಹೊಸ ಅಧ್ಯಕ್ಷರನ್ನು ಪೋಲೀಸರು ತ್ರಿವೇಂದ್ರಮ್ಮಿಗೆ ತಂದು ಅವರಿಗೆ ಸಜೆ ಮತ್ತು ಜುಲ್ಮಾನೆ ವಿಧಿಸಲಾಯಿತು.

ಸರಕಾರದ ಈ ವರ್ತನೆಯನ್ನು ನಿಷೇಧಿಸಿ ಅಲ್ಲಿಯ ವಿದ್ಯಾರ್ಥಿಗಳು ಸಭೆ ಜರಗಿಸಿ ನಿರ್ಣಯಗಳನ್ನು ಮಾಡಿರುವರು. ಕಾಂಗ್ರೆಸ್ ಧ್ವಜ ಸಮೇತ ಅವರು ಮೆರವಣಿಗೆ ಹೊರಟರು. [illegible] ಎಲ್ಲ ಶಾಲಾ ಕಾಲೇಜುಗಳು ಮುಚ್ಚಲ್ಪಟ್ಟವು.

ತಾ. 31ರ ಸಾಯಂಕಾಲ ನ್ಯೆಯಾಟಿಂಕರದಲ್ಲಿ ಗಲಾಟೆಯು ಪ್ರಬಲಿಸಿದ್ದರಿಂದ ಸರಕಾರದವರು ತಿರುವಾಂಕೂರು ಸಂಸ್ಥಾನದ [illegible] ಎರಡು ಲಾರಿ ಸೈನಿಕರನ್ನು ಅಲ್ಲಿಯ [illegible] ಲೆಫ್ಟಿನೆಂಟ್ ಕರ್ನಲ್ ವಾಟ್ಸನರ ಅಧೀನದಲ್ಲಿ ಕಳುಹಿಸಿದರು. ನ್ಯೆಯಾಟಿಂಕರದಲ್ಲಿಯೂ ಬಲರಾಮಪುರದಲ್ಲಿ ಜನರು ತಮ್ಮ ನಿಷೇಧ ವ್ಯಕ್ತಪಡಿಸಲು ಒಟ್ಟುಗೂಡಿ ಸಾವಿರಾರು ಜನರು ತ್ರಿವೇಂದ್ರಮ್ಮಿಗೆ ಬರುತ್ತಿದ್ದರು. ಈ ಜನಸ್ತೋಮವು ಸೈನಿಕರ ದಾರಿಯಲ್ಲಿ ಸಿಕ್ಕಿತು. ಜನಸ್ತೋಮಕ್ಕೆ ಚದರಲು ಆಜ್ಞೆಯಿತ್ತಾಗ ಅವರು ನಿರಾಕರಿಸಿದ್ದರಿಂದ ಮಿಲಿಟರಿಯವರು ಗುಂಡು ಹಾರಿಸಿದರು. ಇದರ ಪರಿಣಾಮವಾಗಿ 5 ಜನರು ಸತ್ತರು, 5 ಜನರಿಗೆ ವಿಶೇಷ ಗಾಯಗಳಾಗಿವೆ. ಈ ಐದು ಜನರಲ್ಲಿ ಇಬ್ಬರು ಇತ್ತೀಚೆಗೆ ಮೃತರಾದರು. ಉಳಿದವರು ಗುಣಮುಖರಾಗುತ್ತಿದ್ದಾರೆ.

ಕ್ವಿಲೋನಿನಲ್ಲಿ ದಬ್ಬಾಳಿಕೆ.

ಕ್ವಿಲೋನಿನಲ್ಲಿ ಸಭೆ ಸೇರಬಾರದೆಂಬ ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಕಾಂಗ್ರೆಸ್ ಮುಖಂಡರು ಮಹಾ ಸಭೆ ಸೇರಿಸಿದ್ದರು. ಸುಮಾರು 10000 ಜನ ಸಂಖ್ಯೆ ನೆರೆದಿತ್ತು. ಪೋಲೀಸರು ಸಭೆಗೆ ಮುಖಂಡರು ಬರುವಾಗ ದಾರಿ ಬಿಡದೆ ಅಡ್ಡಗಟ್ಟಿದರು. ಮುಖಂಡರು ಅಲ್ಲೇ ಕುಳಿತು ಸಭೆಗೆ ಶಾಂತಿಯಿಂದ ಚದರುವಂತೆ ವಿನಂತಿ ಮಾಡಿದರು. ಆದರೆ ಮೈದಾನಿನ ಪೂರ್ವ ಭಾಗದಲ್ಲಿ ಜನರನ್ನು ಬಲಾತ್ಕಾರದಿಂದ ಚದರಿಸಲು ಪೋಲೀಸರು ಲಾಠಿ ಪ್ರಯೋಗವನ್ನಾರಂಭಿಸಿದರು. ಇದರಿಂದ ಜನರು ಪೋಲೀಸರ ಮೇಲೆ ರೇಗಿ ಬಿದ್ದರು. ಪೋಲೀಸರೇ ಜನಸ್ತೋಮದಿಂದ ಪೆಟ್ಟು ತಿಂದು ಹಿಂದೆಗೆಯಬೇಕಾದುದರಿಂದ ಜಿಲ್ಲಾ ಮ್ಯಾಜಿಸ್ಟ್ರೇಟರು ಸೈನಿಕರನ್ನು ಕರೆಯಿಸಿದರು. ಸೈನಿಕರು ಜನಸ್ತೋಮದ ಮೇಲೆ ಗುಂಡು ಹಾರಿಸಿದರು. ಇದರಿಂದ ಇಬ್ಬರು ಸತ್ತರು, ಒಂಭತ್ತು ಜನರಿಗೆ ವಿಶೇಷ ಜಖಂಗಳಾಗಿವೆ. ಇವರ ಪೈಕಿ ಇಬ್ಬರು ಇತ್ತೀಚೆಗೆ ಮರಣ ಹೊಂದಿರುವರು. ಈ ಗಲಾಟೆಯಲ್ಲಿ ಒಟ್ಟಿಗೆ 48 ಪೋಲೀಸರಿಗೆ ಪೆಟ್ಟಾಗಿದೆ.

ಕೊಟ್ಟಾಯಮ್ಮಿನ ಹತ್ತಿರ ಗೋಲಿಬಾರು.

ತಾ. 5ರಲ್ಲಿ ಕೊಟ್ಟಾಯಮ್ಮಿನ ಹತ್ತಿರದ [illegible] ಎಂಬಲ್ಲಿ ಸೈನಿಕರು ಜನಸ್ತೋಮದ ಮೇಲೆ ಗುಂಡು ಹಾರಿಸಿದರು. ಇದರ ಪರಿಣಾಮವಾಗಿ ಒಬ್ಬನು ಮೃತನಾದುದಲ್ಲದೆ 5 ಜನರಿಗೆ ಜಖಂ ಆಗಿದೆ. ಜನರೆಲ್ಲಾ ವಿವಿಧ ಸ್ಥಳಗಳಲ್ಲಿ ಸಭೆಗಳನ್ನು ನಡೆಸತೊಡಗಿದರು. ಭಾಷಣ ಮಾಡುತ್ತಿದ್ದ 2 ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಿದರು. ಪೋಲೀಸರು ಜನಸ್ತೋಮಕ್ಕೆ ಚದರಲಿಕ್ಕೆ ಹೇಳಿ ಲಾಠಿ ಪ್ರಯೋಗವನ್ನು ಕೈಕೊಂಡರು. ಜನರು ಅವರ ಮೇಲೆ ಕಲ್ಲೆಸೆದುದರಿಂದ ಸೈನಿಕರ ಸಹಾಯದಿಂದ ಗುಂಡು ಹಾರಿಸಲಾಯಿತು. 11 ಪೋಲೀಸರಿಗೂ 9 ಸೈನಿಕರಿಗೂ ಜಖಂ ಆಗಿದೆ.

ತ್ರಿವೇಂದ್ರಂ ಸರಕಾರದವರು 100 ಪೋಲೀಸರನ್ನು ಹೊಸದಾಗಿ ನೇಮಿಸಲು ನಿಶ್ಚಯಿಸಿರುವರು. ಈಗಿರುವ ಪೋಲೀಸ್ ದಳಕ್ಕೆ ಅಲ್ಲಿಯ ಗೊಂದಲವನ್ನು ನಿಲ್ಲಿಸಲು ಅಸಾಧ್ಯವಾದ್ದರಿಂದ ಈ ಯೋಚನೆಯೆಂದು ತಿಳಿದು ಬಂದಿದೆ.

ಈ ವಿಚಾರದಲ್ಲಿ ಮಹಾತ್ಮಗಾಂಧಿಯವರು ತಿರುವಾಂಕೂರು ಸರ್ಕಾರಕ್ಕೆ ಈ ಬಿಕ್ಕಟ್ಟಿನ ಸಮಯದಲ್ಲಿ ಯಾರಾದರೂ ಹೊರಗಿನ ಮುಖಂಡರ (ಕಾಂಗ್ರೆಸ್ಸಿನವರನ್ನು ಸೇರಿಸಲು ಆಕ್ಷೇಪವಿದ್ದರೆ ಬೇರೆಯವರ) ಸಹಾಯಪಡೆದು ಟ್ರಾವಂಕೂರಿನ ಈ ಪ್ರಕರಣವನ್ನು ಶಾಂತ ಸ್ಥಿತಿಗೆ ತರಬೇಕೆಂದು ಸೂಚಿಸಿರುವರು.

ಶ್ರೀ ರಾಮಕೃಷ್ಣ ಪರಮಹಂಸರು.

ಲೇಖಕ:- ಎಂ. ಎಸ್. ಅನಂತಪದ್ಮನಾಭರಾವ್

ಗತಿ ೧.

(ಕಳೆದ ವಾರದಿಂದ ಮುಂದುವರಿದದ್ದು)

ಜೋಗಿಗಳ ಮನವೊಕ್ಕು ಒಳಗಿನಿಂದೊಳಗೊಳಗೆ
ಅಡಗಿರುವ ವೈರಾಗ್ಯದೇವತೆಯು ದರ್ಶನವ
ಮೂಡುತಲಿ ನಿತ್ಯ ತಪವನೆಗೈದು ಶೀಘ್ರದಲಿ
ದಹಿಸುತಲಿ ದೇಹಾತ್ಮ ಸಂಬಂಧಗಳನೆಲ್ಲ
ಕಡಿಯುತಲಿ, ವೈರಾಗ್ಯ ಮುಕುಟ ಧರಿಸಿದ ವಿರತಿ,
ಹಾಲ್ಗುಡಿದ ಹಸುಳೆಯೇ ವೈರಾಗ್ಯ ಯುವಯೋಧ.
ಪ್ರಾಕೃತಿಕ ಲೀಲೆಯಲಿ ಸತ್ಯಧರ್ಮವ ಕಂಡು
ಸತ್ಯ ಸುಧೆಯನು ಹೀರಿ ಮಿಥ್ಯಾವಾದವನುಗುಳಿ
ಪರಮಾತ್ಮನೇ ಸತ್ಯ-ಸತ್ಯವೇ ಪರಮಾತ್ಮ
ನೆಂಬುದನು ಮನಗಂಡು ಸುಜ್ಞಾನ ಶಿಖರದಲಿ
ನಿಂದಿರುತ ತೋರಿದನು ಜಗಕೊಂದು ಹೊಸ ಬೆಳಕ
ನಾ ಕಿಶೋರನು ಬೀರಿ-ನೂಕಿದನು ವಿಜ್ಞಾನ

ಇಂತಿರಲು ದಿನವು ಕಳೆಯುತಿರೆ ರೂಢಿಯೊಳು
ಉಪವೀತ ಧಾರಣೆಯ ಮಾಡಿಸುತಲಾ ಮಗುಗೆ
ಗಾಯತ್ರಿಯುಪದೇಶಮುಂ ಮಾಡಿದುದು
ಗಾಯತ್ರಿ ಮೂರ್ತಿಯೊ ದಿವ್ಯ ರೂಪನು ಮಗುವು:
ಧನಿಯಿಂದ ಮೊದಲ ಭಿಕ್ಷವ ಕೊಂಡು ಸತ್ಯವನು
ಪಾಲಿಸಿದ-ಜನ್ಮದಲಿ ಬಂದವಳಿಗೊಲಿಯುತ್ತ
ಮಂಗಳದ ಸಮಯದಲಿ ಜಾತಿ ಗುಣಗಳ ನೂಕಿ
ಮಾತೆಗುಂ ಮಿಗಿಲಾಗಿ ಮನ್ನಿಸುತಲವಳಿಂದ
'ಭವತಿ ಭಿಕ್ಷಾಂ ದೇಹಿ'ಯೆಂದವಳ ಕರದಿಂದ
ಸತ್ಯಭಿಕ್ಷೆಯ ಕೊಂಡ ಧರ್ಮದರ್ಶಕನಂದು

ಅಂದೇ ಖುದಿರಾಮ ವಂಶದಲಿ ಸಂಕರವು
ಏನಿದೇನಿದು ಹೊತ್ತು ಬಂದುದೋ ಕರ್ಮವು
ಬ್ರಾಹ್ಮಣನ ಧರ್ಮಕ್ಕೆ ಕಂಟಕವು ಮೈಯೊಡ್ಡಿ
ಬರಬಹುದೆ! ಕಡಬಹುದೆ!-ಬಾಲಕನ ಮಾತುಗಳ
ಮನ್ನಿಪನು ನೀತಿಯೇನೆಂದು ಕೂಗಿದುದು
ಜಾತಿ ಕಟ್ಟುಗಳಿಂದ ಬಿಗಿದುಕೊಂಡಿಹ ನಿಕರ
ಕಿವಿಯ ಕಿವುಡಾಗಿಸಿದ-ಧನಿಯನೇರಿಸಿ ಹಿರಿಯ
ಧರ್ಮಾಸನದಿ ನಿಲಿಸಿ ಮೊದಲ ಭಿಕ್ಷೆಯ ಕೊಂಡು
ಮೋಕ್ಷ ಸಾಮ್ರಾಜ್ಯಕ್ಕೆ ಕಳುಹಿದನು ಧನಿಯನ್ನು.
ಶಾಸ್ತ್ರ ಸ್ಮೃತಿಗಳು ತಾನು ನೀಡಿದುವು ತಾವಾಗಿ
ಶಂಭು ಚಂದ್ರನ ಕೃತಿಗೆ-ನೋಡಿದರೆ-ಮಾಡಿದುದು
ಹೊಸದುದು, ಕೇಳಿದುದು, ಸಕಲ ಕಾರ್ಯಗಳೆಲ್ಲ
ನಿಯಮಾನುಸಾರವಾಗಿರ್ಮ ಧರ್ಮದ ಮರ್ಮ
ವಿಾರದಿರೆ ಬಾಯ್ಮುಚ್ಚಿ ಶರಣೆಂದು ಬಾಗಿದರು
ಹಂತಕರು-ಇವನ ಮತವನ್ನೊಪ್ಪಿ ತಪ್ಪಿದರು
ನೀತಿ ಮಾರ್ಗದ ಮುದದಿ-

ಏನೇನೊ ಕಟ್ಟುಗಳು:

ಧರ್ಮ ಪುರುಷನೆ ಧರ್ಮ ಸಾರಗಳ ಹೇಳುವರು!
ಸತ್ಯ ಪ್ರಕಾಶನಿಂಗೊರೆವುದೇಂ ಸತ್ಯವನು!!
ವೇದ ಪುರುಷಗೆ ಮಂತ್ರ ತಂತ್ರೋಪದೇಶವೇಂ!!!
ವಾಕ್ಪತಿಯ ವಾಕ್ಪಟುವ ಮಾಡುವವನಾರಿಹನು!!!
ಜಗದ ನಡೆಸುವನಾವ ಜೀವನದ ಸಾಧನೆಯು!
ಸಾಧನೆಯ ಮಾಡಿಸುವನಾವ ತಪಸಿನ ಫಲಮಿದೊ!
ಲೋಕ ಸಂಗ್ರಹಕಾಗಿ ಇವನೆಲ್ಲ ಕೈಕೊಂಡು
ಮೇಲ್ಪಂಕ್ತಿಯಾಗಲ್ಕೆ ಮಾಡಿದನು ಇವನೆಲ್ಲ.
ದೇಹದಲಿ ಬಿದ್ದವನು, ಭೂಮಿಯಲಿ ಬಂದವನು
ಇವುಗಳನು ಮಾಳ್ಪುದೇ ನೀತಿಯೆಂದೊರೆಯುತ್ತ
ಸರ್ವ ಸಾಧನೆಗಳಂ ತಾನೊರ್ವನೇ ಮಾಡಿ
ನಿನಗೆ ಬೇಕಾದುದನು ನೀನಾರಿಸೆನ್ನುತ್ತ
ತನ್ನ ನಂಬಿದರನ್ನು ಪಾಲಿಸಿದ ಸನ್ಮೂರ್ತಿ
ಕಠಿನ ತರ ಬ್ರಾಹ್ಮಣ್ಯ ಧರ್ಮದಲಿ ಕಾಲಿಟ್ಟು
ತಂದೆಗಿನ್ನಡಿಯಾಗಿ ಧರ್ಮವನು ಪಾಲಿಸಿದ:
ಬ್ರಾಹ್ಮವೀರನು ಕೈಯ ದಂಡವನು ಪಿಡಿಯುತ್ತ
ಉಳುಹಿದನು ಬ್ರಾಹ್ಮಣರ ಧರ್ಮಗಳ ಮತ್ತೊಮ್ಮೆ
ಕೃತಿಯಿಂದ ಸೆಳೆತಂದು ಮಾಸಿರುವ ಧರ್ಮವನು
ಹೊಸದಾಗಿರಿಸಿದನು ಶಿಷ್ಯರಿಗೆ ಬೋಧಿಸಲು-
ಪರಮಹಂಸರ ಪದವಿಗೇರುವಾ ಬಾಲಕನು
[illegible]ಗುತಲಿಹನು, ಸೆಳೆತಂದ ಧರ್ಮಗಳ
[illegible]ಗಟ್ಟಿಸಿಯುತಲಿ ಭಾರತ ಭವಿಷ್ಯವನು
[illegible]ಯಲ್ಕೆ ತನುವನ್ನು ಸಾಧನೆಯ ಯಂತ್ರದಲಿ
ಮಸೆಯುತಿಹನರ್ತಿಯಿಂ ಬಾಲಕ ಗದಾಧರನು.

ಗತಿ ೨.

ಇಂತು ಗೆಳೆಯರ ಕೂಡೆ ಪರಮಾತ್ಮ ಚಿಂತೆಯೊಳು
ಕಾಲ ನೂಕುತಲಿಹನು ಶಂಭುಚಂದ್ರನು ಮುದದಿ
ವಿಧಿಯಿಂದ ರಘುವೀರ ಸರ್ಚನೆಯ ಮಾಡುತಲಿ
ದೇಹ ಪುಳಕಿತನಾಗಿ ಚಿತ್ತಶುದ್ಧಿಯ ಪಡೆದ.
ರಘುವೀರಮಯವಾಯ್ತು ಜಗವೆಲ್ಲ-ಮನವೆಲ್ಲ.
ನೋಡಲೆತ್ತೆತ್ತಲುಂ ರಘುವೀರ ದರ್ಶನವು
ತನ್ನೊಳಗೆ ಕಣ್ದೆರದು ನೋಡಿದರೆ ಭಕ್ತಿಯಲಿ
ರಘುವೀರನೇ ತಾನು ಬೇರಲ್ಲವೆಂದೆಂಬ
ಒಳಗೊಳಗೆ ದನಿಯೊಂದು ಕೇಳದು ಬಾಲಕಗೆ

ಇಂತಿರಲ್ಕೊಂದು ದಿನ ಶಿವರಾತ್ರಿಯುತ್ಸವದಿ
ಶಿವಲೀಲೆಗಳ ತೋರ್ಪ ನಾಟಕದಿ ಶಿವಪಾತ್ರ
ಕೈಕೊಂಡ ಪಾತ್ರನಿಗೆ ಕುತ್ತ ಕಾರಣದಿಂದ
ಅಸ್ವಸ್ಥನಾಗಿರಲು ತಿಳಿದವರು ಹೇಳಿದರು
ಸರಿಯಿದಕೆ ಬಾಲಕ ಗದಾಧರನು ಕರೆತಂದು
ಶಿವ ಪಾತ್ರಮಂ ಕೊಡಿರಿ ಕೊಡಿರೆಂದು ಸೂಚಿಸಲು
ಕರೆದೊಯ್ದು ಶಿವನಂತೆ ಶೃಂಗಾರ ಮಾಡಿದರು
ಶಂಕರನು ನೀನಹುದು ನಿಜವೆಂದು ಹೇಳುತಲಿ
ನಾಟಕದ ಮಾತುಗಳ ತಿಳಿಯ ಹೇಳಿದರವರು
ಬಾಲಕ ಗದಾಧರಗೆ-

ನಾಟ್ಯರಂಗಕೆ ಬಂದು

'ಶಿವನಾನು ಶಿವನಾನು' ಎಂಬುದ ಸಮಾಧಿಯಲಿ
ಮುಳುಗಿ ನಿಶ್ಚೇತನದ ಪೊಂದಿದ ಗದಾಧರನು:
ಅಂತರಂಗದ ಕಣ್ಣು ಪೂರ್ಣ ವಿಕಸಿತವಾಗ
ಬಾಹ್ಯ ಶೂನ್ಯದ ನೋಟ ಬರಿದಾಗೆ ಬಯಲಾಗೆ
ಶಿವನೆಂಬ ಚಿದ್ರೂಪ ಕಣ್ಗೆ ತೋರುತಿರ್ದಿರಲು
ನೋಟಕರನೆಲ್ಲರಂ ಶಿವರೂಪಿ ಪರಮಾತ್ಮ
ರೆಂಬ ತತ್ವವನರಿತು, ನುಡಿಯದೊಲ್ಲದೆ ಮರೆತು
ಹೊಸ ಬಗೆಯ ಮಬ್ಬಿನಲ್ಲಿ ನಿಂದಿರಲು, ನೋಡಿದರು
ಸೋತಿಹನೇ ಪಾತ್ರಮಂ ಕೆಡಿಸಿದನೊ ನೋಣು
ಮೋಸದಿಂ ವಂಚನೆಯ ಸಿಂದಿಸಿದನೊ ಮತ್ತೇನೊ?
ಏನೆಂದು ನೋಡಲಿರೆ, ನಿಜವನರಿಯುತಲಾಗ
ಶಿವನ ನಾಟಕದಲ್ಲಿ ಶಿವನೆ ವ್ಯಕ್ತಗೊಂಡಿಹನು
ಇಂದಾಯ್ತು ನೇತ್ರ ಸಾಫಲ್ಯಮುಂ ಪೊಂದಿದವು.
ಇವನಾವ ಬಾಲಕನು! ಶಿವನ ನಾಮಸ್ಮರಣೆ
ಅಪ್ಪಗಳಲಿ ಇದುವೊಂದು-ನೋಡಿದೆವು ಪಾಡಿದೆವು
ಧನ್ಯರಾದೆವು ನೋಡಿ-ಇನ್ನೆಷ್ಟು ಕರುಣೆಯೊ?
ಭಕ್ತರಿಗೆ ವ್ಯಕ್ತವಾಗಿ, ಮೋಕ್ಷನೀಡಲು ಬಂದು
ನಾಟ್ಯರಂಗದಿ ನಿಂತು ಸೌಖ್ಯ ಮುದ್ರೆಯ ತಳೆದು
ಸತ್ಯ ಸ್ವರೂಪವನುಂ ವ್ಯಕ್ತಪಡಿಸಿ ತೋರಿದನು:
ಜಯ ಜಯತು ಶಂಕರನೆ-ಗೌರೀ ಮನೋಹರನೆ
ಜಯ ಜಯತು ಜಯವೆಂದು ಜಯಘೋಷ
ಗಳ ಮಾಡಿ ಪಾಡಿದರು ಮಹಿಮೆಗಳ ಸರ್ವರುಂ
ಬಗೆಬಗೆಯೊಳಸ್ತುತಿಸಿ ಭಕ್ತಿಯಲಿ ಹೊಗಳಿದರು.

ಮುಂದೆ ರಾಮಕುಮಾರ ಪಡೆದನಕ್ಷಯನೆಂಬ
ಪುತ್ರನನು, ಜನನ ಕಾಲದ ದುಸ್ಥಗತಿಯಿಂದ
ಪತ್ನಿ ನಿಜ ಶಿಶುವ ತೊರೆಯುತ್ತಲಸುವನೀ
ಗಿತ್ತಳಂದು; ಬಂಧುಗಳ ಜಗದೊಳಗೆ ಬಿಡುತಂದು
ತೆರಳಿದರೆ ಸಗ್ಗಕ್ಕೆ-ಇದರ ಕಾರಣವೇನು?
ಅಂತೇಕೆ ಸಾಯುವರು ಮಾನವರು ಜಗದಲ್ಲಿ
ಸರುವ ಜೀವಿಗಳಂತು ಬರುವ ಕಾರಣವೇನು?
ಸಾವದೇತಕೆ ಮತ್ತೆ ಬಂದಿಲ್ಲಿ ಸಾಯ್ವುದಕೆ
ದೇಹವೆತ್ತುವುದೇನು? ಇದು ಭಯಂಕರವಹುದು.
ಬಾಳುವುದು ಬದುಕುವುದು ಬರಿದೆ ಸಾಯ್ವುದಕಲ್ಲ:
ಇದಕೆ ಘನ ಕಾರಣವು ಬೇರೊಂದು ಇರಬೇಕು
ಅದನರಿಯದೀ ಜನರು ಇಂತು ನರಳುತ್ತಿಹರು.
ಎಲ್ಲಿಂದ ಬಂದನೀ ಜೀವಾತ್ಮನಿವಗಾವ
ನೆಲೆಯಾಹುದು? ಇವನಾವ ಬಂಧನದಿ ಬೇಯುತಿಹ
ನಿವನಾವ ತಾಣವನುಂ ಸೇರುವನು ಮತ್ತೊಮ್ಮೆ,
ಇವರ ಮರ್ಮವನರಿತು ಲೋಕದೊಳ್ ನಾರಿದರೆ
ಮುಳುಗಿ ಹೋಗಿಹ ವ್ಯಕ್ತಿಗಳು ಜೀವಕಳೆ ಪೊಂದಿ
ಮುಕುರದಲಿ ಮೊಗನೋಡಿ ತಿದ್ದಿಕೊಳ್ಳುವ ತೆರದಿ
ಮನದ ಸೆರೆನಿಡಿಯುತ್ತ ವಂಚಿಸುವ ಗುಣಗಳನು
ಮುರಿಯುತ್ತಲಾತ್ಮನಂ ಕಂಡು ತಿಳಿಯುವರಿಲ್ಲ
'ನಾನು-ನಾನಾರೆ'ಂದು ಮೊದಲಾದ ತರ್ಕಸ್ಯ
ಎನಗೆ ಬಿದ್ದಿಹ ಭಾರವಿದನು ತಿಳಿಯಲ್ಬೇಕು:
ಎಂದಾ ಗದಾಧರನು ಬಾಹ್ಯ ಪ್ರಪಂಚದಲಿ
ವೈರಾಗ್ಯವನು ಪೊಂದಿ ದುಃಖದಲಿ ಕಂದಿದನು
ಪಾಪ ಕೂಪದ ಮುಳುಗಿ ನರಳುತಿಹ ಜೀವಿಗಳ
ಧರ್ಮ ಸಿಂಹಾಸನವನೂರಿದು ಭೋಗವಿಲಾಸ
ಶೃಂಗಾರದಲಿ ಮುಳುಗಿ ಮರಣಭೀತಿಯ ಮರೆತು
ಪಾಪದಿಂ ಪಾಪವನು ಮೂಟೆಗಟ್ಟುತಲಿರುವ
ಜೀವಿಗಳ ಮೋಕ್ಷಕ್ಕೆ ಸಾಧನವನರಸುತ್ತ
ಕಲ್ಲುಗಳಲಿ ಮುಳ್ಳುಗಳಲಿ ಮಲಗುತ್ತ ಶ್ರಮಿಸುತ್ತ
ಕಣ್ಣೀರ ಕಾಲುವೆಯ ಹರಿಸಿದನು ಬಾಲಕನು.
ಮನವ ಮಥಿಸುತ ದಿವ್ಯ ಸುಗುಣ ರಸವನೆ ಕಡೆದು
ಇಂದ್ರಿಯಂಗಳ ಕೇಡು-ಅಂತರಂಗದ ರಸವ
ಸವಿಯುತಲಿ ಸರ್ವಕೊಳಗಾನಂದ ರೂಪಿಯನು
ಕಾಣುವೊಡೆ ಹಣಿಕಿದನು;

ಮತ್ತೆ ಜಗ ಬೇಡಾಯ್ತು

ಜಂಬುವಕೆ ಪ್ರಪಂಚಕೆ? ನಿಜವನರಿಯದ ದೇಹ
ನಿಷ್ಫಲಂ! ನಶ್ವರಂ!! ಬಂದುದಕ್ಕೆ ಬಾಳ್ವುದಕೆ
ಪರ ದರ್ಶನವೊಂದ ಸಾರ್ಥಕವುಮಿಲ್ಲದಿರೆ
ಸುಡು ಶರೀರವ ಬೆಂಕಿಯಲಿ ಹಾಕಿ ಬೇಯಿಸಿದ;
ಇದ ಸಮುದ್ರದಿ ಹಾಕಿ ಮೀನು ಮೊದಲಾದುವಕೆ
ಭೋಜನವ ಮಾಡಿಸುತ ನುಡಿವುದೊಳ್ಳಿತು ಮತ್ತೆ.
ಈ ಮದನವಂ ಮನವು ಮೃದುವಾಯ್ತು ಕರುಣದಿಂ
ಭಕ್ತಿ ರೋಷವು ಹೆಚ್ಚಿ-ಸತ್ಯಕೋಸುಗವೊರಲಿ
ದನುವಲ್ಲನೇರಾಯ್ತು ಗೋಪಿಯರ ಬಗೆಯರಿತು
ನಾರಿಯರ ಹೃದಯದೊಲು ಮೃದುವಾಗಿ ಬಾಗಿದನು,
ಹಿಂದೆ ಗೋಪಿಯರೆಲ್ಲ ಸರ್ವಸ್ವವರ್ಪಿಸುತ
ಶ್ರೀ ಕೃಷ್ಣ ದರ್ಶನ ಸ್ಪರ್ಶನದೊಳಾನಂದ
ರಸವುಂಡ ಬಗೆಯರಿತು-ನಾರಿಯಾಗದೆ ಹೋದೆ!
ಗಂಡುಸಾಗುತಲೀನು ನಾರಿಯರಿಗೊದವಿರುವ
ಸ್ವಾತಂತ್ರ್ಯಗಳ ಕೊಳದೆ ಬಳಲುತಿಹೆನದರಿಂದ,
ಹೆಂಗುಸಾದರೆ ನಾನು ನಿಮಿಷದೊಳು ದೇವನಂ
ಒಡಿತಂದು ಸೆರೆಯಿಟ್ಟು ಲೋಕದಾ ಕಟ್ಟುಗಳ
ಮುರಿಯುತ್ತಿದ್ದೆನು ಮತ್ತೆ:-ನಾರಿಯಾದೊಡನೇನು!
ಬಾಲವಿಧವೆಯ ಜನ್ಮವೆನಗಾಗಬೇಕಿತ್ತು.
ಪತಿಗಾಗಿ ಹಂಬಲಿಸಿ ನಿತ್ಯ ಧ್ಯಾನದೊಳಾನು
ದೇಹವಂ ವೈರಾಗ್ಯ ದೇವತೆಗೆ ನೈವೇದ್ಯ
ಮಾಡುತ್ತ ಹಗಲಿರುಳು ಪತಿ ದೇವತೆಯ ನಾಮ
ರೂಪುಗಳ ನೆನೆಯುತ್ತ-ಇಂದ್ರಿಯಂಗಳ ಮರೆದು
ರೋಮ ರೋಮಕೆ ಸತ್ಯವನ್ನು ತೋರುತಲಿದ್ದೆ.
ಅಕಟಕಟ, ಆ ಪವಿತ್ರತೆಯೆನಗೆ ಬಾರದಿರೆ
ಇನ್ನೆಷ್ಟು ದಿನದಲಿ ಸತ್ಯ ದರ್ಶನವಹುದೋ?
ಹೆಂಗಸೇ ನೀನೆಷ್ಟು ಜನುಮಗಳ ಪುಣ್ಯದಲಿ
ಜನ್ಮವನು ಪಡೆದೆಯೋ ಹೆಣ್ಣಾಗಿ-ಧನ್ಯಳೇ
ನಿನ್ನ ಪುಣ್ಯಗಳೆನಗೆ ನೆರವಾಗವೇನೆಂದು!
ಗೋಕುಲದ ಗೋಪಿಯರು ನಾರಿಯರೆ-ಇದು ತುಚ್ಛ.
ಅವರೆಲ್ಲ ಸತ್ಯಮೂರ್ತಿಯರಹುದು-ಜಗಕೊಂದು
ಸಂದೇಶವನ್ನಿತ್ತ ಸತ್ಯದರ್ಶಕರವರು.
ಹೇ ನಾರಿ, ವರನಾರಿ, ನಾನೆಂದು ಪಡೆಯುವೆನೊ
ಆ ಜನ್ಮ ಅಂದೇನು ಕಾಣುವೆನು ನಿಜವನ್ನು.

[ಸಶೇಷ]

ಚಾರುದತ್ತ-ರಮೇಶ! ನಮ್ಮ ಕಳೆದ ಪರೀಕ್ಷೆಯ ಫಲಿತಾಂಶವು ಈ ದಿವಸವಲ್ಲವೇ ಅರಿಯುವುದು? ಒಡನೆ ಶಾಲೆ ಕಡೆಗೆ ಹೊರಡುವ.

ರಮೇಶ-ದೇವದತ್ತನೂ ಬರಲಿಕ್ಕಿಲ್ಲವೇ?

ಚಾರುದತ್ತ-ಅವನಿಗೆ ಕೆಲವು ದಿವಸಗಳಿಂದ ಅಸ್ವಸ್ಥವಂತೆ. ಅವನಲ್ಲಿಗೆ ನಾನು ಹೋಗದೆ ಅನೇಕ ದಿವಸಲಾದವು. ನಾವು ತಿಳಿದು ಬಂದು ಫಲಿತಾಂಶವನ್ನು ಅವನಿಗೆ ತಿಳಿಸಿದರಾಯಿತ್ತಲ್ಲವೆ?

ಮರುಕ್ಷಣದಲ್ಲೇ ಪೂರ್ವೋಕ್ತ ವಿದ್ಯಾರ್ಥಿಗಳಿಬ್ಬರೂ ಉಂಡುಟ್ಟು ಶಾಲಾಭಿಮುಖರಾಗಿ ತೆರಳಿದರು. ಶಾಲೆಯಲ್ಲಿ ಮುಖ್ಯೋಪಾಧ್ಯಾಯರೂ, ಶಾಲಾ ಗುಮಾಸ್ತರೂ, ಮಾತ್ರ ಇದ್ದರು. ಆಫೀಸಿನ ಎದುರಿನಲ್ಲಿ ಗೋಡೆಗೆ ತೂಗಹಾಕಿದ್ದ ಕಪ್ಪು ಹಲಗೆಯ ಮೇಲೆ ಉದ್ದವಾದ ಕಾಗದಗಳಲ್ಲಿ, ಪರೀಕ್ಷೆಯಲ್ಲಿ ತೇರ್ಗಡೆಯಾದ ಪ್ರತಿ ತರಗತಿಯ ಯುವಕರ ಹೆಸರುಗಳು, ತಾವು ಪರೀಕ್ಷೆಯಲ್ಲಿ ತೋರಿಸಿದ್ದ ಸಾಮರ್ಥ್ಯಕ್ಕನುಸಾರವಾಗಿ ಒಂದರ ಹಿಂದೆ ಒಂದಾಗಿ ಬರೆಯಲ್ಪಟ್ಟಿದ್ದವು.

ಆಗ ಶಾಲೆಯ ಮುಖ್ಯ ದ್ವಾರಕ್ಕೆ ಕಾಣಿಸುತಿತ್ತು. ಅದನ್ನು ನೋಡಿದೊಡನೆ ನಮ್ಮ ವಿದ್ಯಾರ್ಥಿಗಳ ಶರೀರವು ಕಂಪಿಸಲಾರಂಭಿಸಿತು. ಎದೆಯು ಢಬ ಢಬ ಬಡಿಯಿತು 'ಚರಣಕ್ಕೆ ಗರಿಗಟ್ಟಿದಂತೆ' ಬಹು ವೇಗದಿಂದ ಅವರು ಮುಂದಾದರು. ಮರುಕ್ಷಣದಲ್ಲೇ ಬೋರ್ಡಿನ ಎದುರು ನಿಂತರು. ಆತುರದಿಂದ ಅವರ ದೃಷ್ಟಿಯೇ ಮಂದವಾಗಿತ್ತು. ನೋಡಿದೊಡನೆ ತಮ್ಮ ತರಗತಿಯ ಹೆಸರು ಅವರ ದೃಷ್ಟಿಯನ್ನು ಸೆಳೆಯಿತು. ಪಟ್ಟಿಯ ಅಗ್ರಸ್ಥಾನದಲ್ಲಿ ದೇವದತ್ತನ ಹೆಸರು ಬರೆಯಲ್ಪಟ್ಟಿತ್ತು. ಈ ಹೆಸರಿಗೆ ಮತ್ತು ಅದರ ಕೆಳಗೆ ಬರೆಯಲ್ಪಟ್ಟಿದ್ದ ಇನ್ನೆರಡು ಹೆಸರುಗಳ ಎದುರಿನಲ್ಲಿ ಕೆಂಪು ಶಾಯಿಯಿಂದ ' ಈ ಗುರುತುಗಳು ಮಾಡಲ್ಪಟ್ಟಿದ್ದವು.

ನಮ್ಮ ವಿದ್ಯಾರ್ಥಿಗಳು ಅದನ್ನೇನೂ ಲಕ್ಷಿಸಲಿಲ್ಲ. ತಮ್ಮ ಹೆಸರುಗಳನ್ನು ಅತ್ಯಾತುರದಿಂದ ಹುಡುಕುತ್ತಾ ಕೆಳಗೆ ಬಂದರು. ನಲ್ವತ್ತೇಳನೆಯ ಅಂಕೆಯ ಎದುರಿನಲ್ಲಿ ರಮೇಶನ ಹೆಸರು ಬರೆಯಲ್ಪಟ್ಟಿತ್ತು. ಇನ್ನೂ ಕೆಳಗೆ ಬರುತ್ತಲೇ, ಚಾರುದತ್ತನ ಮತ್ತು ಇನ್ನೂ ಐದು ಮಂದಿಯರ ಹೆಸರುಗಳು ಕೆಂಪು ಶಾಯಿಯಲ್ಲಿ ಬರೆಯಲ್ಪಟ್ಟಿದ್ದವು. ಅದರ ಕೆಳಗೆ ಸೂಚನೆ ಎಂದು ಬರೆದು ' ಈ ಗುರುತ ಯಾರ ಹೆಸರಿನ ಎದುರಿನಲ್ಲಿದೆಯೋ ಅವರು ಶಾಲೆ ತೆರೆದು ಐದು ದಿವಸಗಳೊಳಗೆ ಶಾಲಾ ಮುಖ್ಯೋಪಾಧ್ಯಾಯರ ಮೂಲಕ ಇನ್ಸ್‌ಪೆಕ್ಟರಿಗೆ ಸ್ಕಾಲರ್ ಶಿಪ್ಪಿಗೆ ಅರ್ಜಿ ಬರೆದುಕೊಳ್ಳತಕ್ಕದ್ದು. ಒಂದು ದಿನ ಮೀರಿದರೆ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ.

'ಕೆಂಪು ಶಾಯಿಯಲ್ಲಿ ಹೆಸರು ಬರೆಯಲ್ಪಟ್ಟ ವಿದ್ಯಾರ್ಥಿಗಳನ್ನು ಮೇಲಿನ ತರಗತಿಗೆ ಈ ಶಾಲೆಯಲ್ಲಿ ಸೇರಿಸಲಾಗುವುದಿಲ್ಲ. ಅವರು ಬೇರೆ ಶಾಲೆಗಳಿಗೆ ಹೋಗಲಿಚ್ಛಿಸಿದರೆ, ಅವರಿಗೆ ಮೇಲಿನ ತರಗತಿಗೆ ಸರ್ಟಿಫಿಕೇಟುಗಳು ಕೊಡಲಾಗುವುದು' ಎಂಬದಾಗಿ ಬರೆಯಲ್ಪಟ್ಟಿತ್ತು.

ದೇವದತ್ತ.

ಸಾಮಾಜಿಕ ಕಾದಂಬರಿ.

ಅಧ್ಯಾಯ ೩.

ಚಾರುದತ್ತನು ಮಗುವಿನ ಹಾಗೆ ಅಳಲಾರಂಭಿಸಿದನು. ರಮೇಶನು ಅವನನ್ನು ವಿನಯೋಕ್ತಿಗಳಿಂದ ಸಮಾಧಾನಪಡಿಸುತ್ತಾ, ಇಬ್ಬರು ನಿಜಭವನಾಭಿಮುಖರಾಗಿ ತೆರಳಿದರು. ದಾರಿಯುದ್ದಕ್ಕೂ ರಮೇಶನು ಚಾರುವಿಗೆ ಅನೇಕ ಧೈರ್ಯದ ಮಾತುಗಳನ್ನು ಹೇಳಿದನು. 'ಮುಂದಿನ ವರುಷದ ಪರೀಕ್ಷೆಗೆ ಬರಲಿಕ್ಕೆ ಇನ್ನು ದಿನಗಳಿಲ್ಲ ನಮ್ಮ ಮುಂದಿನ ಸುಖಕ್ಕಿಂತ ಚಾರುವಿ ನಾವು ಸಮಧಾನ ಚಿತ್ತರಾಗಬೇಕು. ನಿನಗೇನು ವಯಸ್ಸು ಮೀರಿರುವುದಿಲ್ಲ. ಅದರ ಮೇಲೂ ನಿಮ್ಮ ತಂದೆಯು ಐಶ್ವರ್ಯವಂತನು. ಮುಂದಿನ ತರಗತಿಗೆ ಸರ್ಟಿಫಿಕೇಟು ಸಿಕ್ಕುತ್ತ. ಈ ಹಳ್ಳಿ ಶಾಲೆಯಲ್ಲಿ ಓದುವುದಕ್ಕಿಂತ ರಾಜಧಾನಿಗೆ ಹೋಗುವುದಲ್ಲವೆ ಉತ್ತಮ? ಇಲ್ಲಿ ಮನೆಯಿಂದ ಶಾಲೆಗೆ ಮಳೆಯಲ್ಲೂ, ಬಿಸಿಲಲ್ಲೂ ನಡೆಯಬೇಕು. ಅಲ್ಲಿ ಊರಿನ ಹತ್ತಿರ ಹಾಸ್ಟೆಲ್ಲೇ ಬೋರ್ಡಿಂಗ್ ಇದೆ. ಎಷ್ಟು ಆನಂದ! ನೂರಾರು ಸ್ನೇಹಿತರು. ದೇವರ ಹಾಗೆ ಒಲಿಯುವ ಉಪಾಧ್ಯಾಯರು, ಅಲ್ಲೇ ಇರುವರು. ತಿಳಿಯದ್ದನ್ನು ಬೇಕಾದಾಗ ತಿಳಿದುಕೊಳ್ಳಬಹುದು. ಎಲ್ಲ ಪಕ್ಕದಲ್ಲಿಯೂ ಸಾಮಾನುಗಳು. ನಾನಾ ತರದ ಪಂದ್ಯಾಟಗಳಲ್ಲಿ ಭಾಗಿಯಾಗಬಹುದು. ನಿನಗಾಗಿಯೂ ನಿಸ್ಸಂಶಯ ತೋರಿಕೆಯೂ ನಿನ್ನ ಸುಖಕ್ಕೆ ಒಂದು ದಾರಿ ತೋರುತ್ತದೆ.' ಎಂದು ನಾನಾ ರೀತಿಯಾಗಿ ಸಮಾಧಾನೋಕ್ತಿಗಳನ್ನು ಹೇಳಿದನು.

ಚಾರುದತ್ತ-'ನನಗಲ್ಲ ರಮೇಶ ದೇವದತ್ತನು ಅಗ್ರಸ್ಥಾನದಲ್ಲಿ ತೇರ್ಗಡೆಯಾಗಿರುವಾಗ್ಯೆ ನನಗೆ ಇಂತಹ ಸ್ಥಿತಿಯೊದಗಿತಲ್ಲ? ಇದೇ ನನಗೆ ಬಹಳ ಶೋಕವನ್ನುಂಟುಮಾಡತಕ್ಕ ವಿಷಯವಾಗಿದೆ. ಅವನಿಗೆ ಈ ಸಂಗತಿ ತಿಳಿದರೆ ಎಷ್ಟೊಂದು ಆನಂದವಾದೀತು. ಅವನ ತಂದೆ ತಾಯಿಗಳ ಸಂತೋಷಕ್ಕೆ ಮಿತಿ ಇರಬಹುದೇ? ಅದರ ಮೇಲೂ ಅವನಿಗೆ ಒಂದು ಸ್ಕಾಲರ್‌ಶಿಪ್ ಸಿಕ್ಕುತ್ತದೆ. ಇದೆಲ್ಲಾ ತಿಳಿದರೆ ನನ್ನ ತಾಯಿ ತಂದೆಗಳಿಗೆ ಎಷ್ಟು ವ್ಯಸನವಾದೀತು. ನನ್ನ ಈ ಮುಖವನ್ನು ಅವರಿಗೆ ಹೇಗೆ ತೋರಿಸಲಿ' ಎಂದು ಹೇಳಿ ನೆಲವನ್ನು ನೋಡುತ್ತಾ ನಡೆದನು. ರಮೇಶನು ಕಾರಣಾಂತರದಿಂದ ಮೌನವನ್ನಾಚರಿಸಿದನು.

ಸ್ವಲ್ಪ ದೂರ ಹಾಗೆ ನಡೆದು ಚಾರುದತ್ತನು ಹಟಾತ್ತಾಗಿ ನಿಂತು 'ರಮೇಶ' ಎಂದನು. ರಮೇಶನು ಒಡನೆ ತಿರುಗಿ 'ಏನು?' ಎಂದನು.

'ರಮೇಶ! ನಿನಗೊಂದು ರಹಸ್ಯವನ್ನು ಹೇಳುತ್ತೇನೆ. ನೀನದನ್ನು ಯಾರಿಗೂ ತಿಳಿಯಗೊಡಿಸುವುದಿಲ್ಲವೆಂದು ವಾಗ್ದಾನ ಮಾಡಬೇಕು. ಮತ್ತು ಆ ಕಾರ್ಯಸಾಧನೆಯಲ್ಲಿ ನೀನು ಸಹಾಯ ನಾಗಬೇಕು.' ಎಂದು ಒಂದು ವಿಧವಾದ ನೋಟದಿಂದ ಮುಗುಳು ನಗೆಯನ್ನು ಮುಖದ ಮೇಲೆ ಬಲಾತ್ಕಾರದಿಂದ ತಂದು ಕೊಳ್ಳುತ್ತಾ ಚಾರುದತ್ತನು ಹೇಳಿದನು.

ರಮೇಶನು ಒಳಗಿನದನ್ನು ಮುಚ್ಚುವದರಿಂದ ತಮ್ಮ ಅಭಿಪ್ರಾಯವನ್ನು ಕಾಣಿಸಿಕೊಳ್ಳದೆ ಚಾರುದತ್ತನ ಪಕ್ಷವನ್ನು ಸೇರಿದವನು. ಅವನು ಸ್ವಭಾವದಲ್ಲಿ ಕ್ರೂರನಲ್ಲ. ದುರ್ಗುಣಿಯೂ ಅಲ್ಲ. ಆದರೆ ಚಾರುದತ್ತನೊದರೆ ಅವನ ಸ್ನೇಹ ಅವನನ್ನು ಮೆಚ್ಚಿಸಿ, ಅವನ ಸಂಪೂರ್ಣ ಪ್ರೀತಿಯನ್ನು ಗಳಿಸಲು ತಾನು ಅನೇಕ ರೀತಿ ತನ್ನ ಮನಸ್ಸಿಗೆ ವಿರೋಧವಾದ ಕೆಲಸಗಳಲ್ಲೂ, ಭಾಗಿಯಾಗುತ್ತಿದ್ದನು. ರಜಾ ದಿವಸಗಳಲ್ಲಿ ಚಾರುದತ್ತನ ಸಂಗವನ್ನು ಬಿಡಲಾರದೆ, ತಂದೆ ತಾಯಿಗಳನ್ನು ಸಹ ನೋಡಲು ಹೋಗುತ್ತಿರಲಿಲ್ಲ. ಆದರೆ ಚಾರುದತ್ತನು ಮಾತ್ರ ಅವನ ಮೇಲೆ ಇಷ್ಟು ಬಲವಾದ ಪ್ರೇಮವನ್ನು ತೋರಿಸುತ್ತಿರಲಿಲ್ಲ.

ಈಗ ಚಾರುದತ್ತನಿಗೆ ಉಂಟಾದ ದುಃಖವು ತನಗೆ ಉಂಟಾದ ದುಃಖದ ಹಾಗೆ ರಮೇಶನಿಗಾಗಿತ್ತು. ಆ ಸಮಯದಲ್ಲಿ ಅವನ ಮನಸ್ಸಿಗೆ ಸಮಾಧಾನವನ್ನು ತರಲು ಏನು ಬೇಕಾದರೂ ಮಾಡಲು ಸಿದ್ಧನಿದ್ದನು. ಆದುದರಿಂದ ಚಾರುದತ್ತನ ಇಂಗಿತವೇನಿರಬಹುದೆಂಬುದನ್ನು ಅರಿಯದೆಯೇ ತನ್ನ ಸಮ್ಮತಿಯನ್ನಿತ್ತನು.

ಚಾರುದತ್ತನ ಮುಖದ ಮೇಲೆ ಒಂದು ತರದ ವಿಶ್ವಾಸಘಾತಕ ಸೂಚಕವಾದ ಮುಗುಳು ನಗೆಯು ತಲೆದೋರಿತು. ಅವನು ತಗ್ಗಿದ ಸ್ವರದಿಂದ 'ನಾವಿಂಗ ದಾರಿಗೆ ಬಂದಿದ್ದ ಸಂಗತಿಯನ್ನು ದೇವದತ್ತನಿಗೆ ತಿಳಿಸದೆ ಗುಪ್ತವಾಗಿ ಇಟ್ಟುಬಿಡುವ. ಅವನ ಕಾಯಿಲೆ ವಾಸಿಯಾಗಿ ಶಾಲೆಗೆ ಬರುವುದರೊಳಗೆ ಸ್ಕಾಲರ್ ಶಿಪ್ಪಿಗೆ ಅರ್ಜಿ ಬರೆಯುವ ಸಮಯವು ಮೀರಿ ಹೋಗುವುದು. ನಾನೇನಾದರೂ ಅವನಲ್ಲಿಗೆ ಹೋದರೆ ನೀನಿವರ ವಿಷಯ ಮಾತಾಡಬೇಡ ನಾನೇ ಆಡುತ್ತೇನೆ.' ಎನ್ನುತ್ತಾ ರಮೇಶನ ಮುಖವನ್ನೇ ಏನೆ ಇಚ್ಛೆಯಿಂದ ನೋಡಿದನು.

ರಮೇಶನು ತಲೆಯನ್ನು ಅಲ್ಲಾಡಿಸಿ ತನ್ನ ಒಪ್ಪಿಗೆಯನ್ನಿತ್ತನು. ಆದರೆ ಅವನ ಮುಖದ ಭಾವವು ತನಗೆ ಈ ಕಾರ್ಯದಲ್ಲಿ ಸಂಪೂರ್ಣ ಮನಸ್ಸಿಲ್ಲವೆಂಬುದನ್ನು ಪ್ರಕಟಗೊಳಿಸುತ್ತಿತ್ತು. ಸ್ವಭಾವದಿಂದಲೇ ರಸಿಕನಾದ ಚಾರುದತ್ತನಿಗೆ ರಮೇಶನ ಅಂತರ್ಯದ ಇಂಗಿತವು ತಿಳಿಯಿತು. ಕೂಡಲೇ ಅವನು, ಒಂದು ತರದ ಸುಂದರವಾದ ಮುಗುಳುನಗೆಯನ್ನು ಚೆಲ್ಲುತ್ತಾ, ರಮೇಶನ ಮುಖವನ್ನೇ ಎತ್ತಿ ಅಕ್ಕದ ದೃಷ್ಟಿಯಿಂದ ಅವನ ಕೆನ್ನೆಯ ಮೇಲೆ ಮೆಲ್ಲಗೆ ತಟ್ಟಿದನು. ರಮೇಶನಿಗೆ ಚಾರುದತ್ತನ ಸೌಂದರ್ಯಯುಕ್ತವಾದ ಮುಖಕಮಲವು ಮತ್ತಷ್ಟು ಮೋಹಕರವಾಗಿ ಕಾಣಿಸಿತು. ಕೆನ್ನೆಯ ಮೇಲೆ ತಟ್ಟಿದ ಚಾರುದತ್ತನ ಕೈಯು ಇಂದ್ರಜಾಲ ತನನೂಯುವಂತದಂತೆ ಪರಿಣಮಿಸಿತು. ಆ ನೋಟದವರವರಲ್ಲಿ ರಮೇಶನು ತನ್ನ ಮನಃಪೂರ್ವಕವಾದ ಸಮ್ಮತವನ್ನಿತ್ತನು. ಆ ಮೇಲೆ ಇಬ್ಬರೂ ಏನೋ ರಹಸ್ಯವನ್ನಾಡುತ್ತಾ ಮನೆ ಸೇರಿದರು.

ಚಾರುದತ್ತನ ಮುಖವು ಎಂತಹ ಮಾರ್ಪಾಡನ್ನಾದರೂ ಕ್ಷಣಮಾತ್ರದಲ್ಲಿ ಧರಿಸಬಲ್ಲುದಾಗಿತ್ತು. ತಾಯಿಯ ಮುಖವನ್ನು ಕಂಡೊಡನೆ ಅವನು ದುಃಖಿಸುತ್ತಾ ತನ್ನ ಶಯ್ಯಾಗೃಹವನ್ನು ಪ್ರವೇಶಿಸಿ ಹಾಸಿಗೆಯ ಮೇಲೆ ಬಿದ್ದು ಅಳತೊಡಗಿದನು. ರಮೇಶನು ಪರೀಕ್ಷೆಯ ಫಲಿತಾಂಶವನ್ನು ಚಾರುದತ್ತನ ತಾಯಿಗೆ ತಿಳಿಸಲು, ಅವಳು ಚಾರುದತ್ತನನ್ನು ವಿಧವಿಧೋಕ್ತಿಗಳಿಂದ ಸಮಾಧಾನಪಡಿಸತೊಡಗಿದಳು.

ಸಶೇಷ.]

ಧನ್ವಂತರಿ ಸಹಾಯ ಔಷಧಾಲಯ.

ವೀರರಾಜಪೇಟೆ, (ದ ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನ್ನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಈಚೆಗೆ ಈ ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ರೋಗದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಶೀತಜ್ವರ, ಮೈ ದಾಹ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಾಲೆ, ಬೆನ್ನಿಬುಬು, ಸೊಂಟ, ಮಂಡಿ, ಪಕ್ಕೆಗಳು-ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:-ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

9 ಕೆ. ಜೆಚ್. ರಾಮಣ್ಣ ವೈದ್ಯರ್.

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಡೈರೆಕ್ಟರುಗಳ ಮೀಟಿಂಗು ಕಳೆದ ತಾ. -8-1938 ರಲ್ಲು ಬೆಳಿಗ್ಗೆ 11 ಗಂಟೆ ಬ್ಯಾಂಕು ಆಫಿಸಿನಲ್ಲಿ ಮೆ ಸಾಹೇಬರ ... ಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು

ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು ಮೆ ಗಳಾದ 1 ಸಿ ಐ ಬೆಳ್ಯಪ್ಪನವರು (ಪ್ರೆಸಿಡೆಂಟ್) (2) ಬಿ ಎ ಬೆಳ್ಯಪ್ಪನವರು, 3 ... ಸಿ ... ಯ್ಯಪ್ಪನವರು 4 ಯಂ ಯಂ ಬೆಳ್ಯಪ್ಪನವರು ದಿವಾನ್ ಬಹದೂರ್ ಕೆ ಚೆಂಗಪ್ಪನವರು, 6 ಐ ಸಿ ಸುಬ್ಬಯ್ಯನವರು, 7 ಸಿ ... ಯ್ಯನವರು, 8 ಸಿ ... ಭೀಮಯ್ಯನವರು, 9 ಯಂ ಸಿ ... ಯ್ಯನವರು, 10 ಸಿ ಎ ಮುಂದಣ್ಣನವರು (ಟ್ರೆಜರರ್) 11 ಖಾನ್ ಯಂ ... ಣ್ಣನವರು, 12 ರಾವ್ ಬಹದೂರ್ ... ದೇವಯ್ಯನವರು, 13 ... ಎಸ್ ... ಣ್ಣನವರು, ಮತ್ತು 1 ಪಿ ಜಿ ಐಯ್ಯಪ್ಪನವರು (ಗೌರವ ಕಾರ್ಯದರ್ಶಿ) ಸಹಕಾರಿ ಸಂಘಗಳ ರಿಜಿಸ್ಟ್ರಾರವರೂ ಸೀನಿಯರ್ ಸಾನ್ ಕ್ರೆಡಿಟ್ ಇನ್ಸ್ಪೆಕ್ಟರರೂ ಸಹ ಹಾಜರಿದ್ದರು

ಮೆ ಪಿ ಬಿ ... ಯ್ಯನವರು ಗೈರುಹಾಜರಿದ್ದರು

1 ಕಳೆದ ಮೀಟಿಂಗು ಪ್ರೊಸೀಡಿಂಗ್ಸ ಓದಿ ಒಪ್ಪಲಾಯಿತು

2 ಸುಪರ್ ವಿಜನ್ ಬೋರ್ಡಿನ ಕಳೆದ ಮೀಟಿಂಗು ಪ್ರೊಸೀಡಿಂಗ್ಸ ಓದಿ ರಿಕಾರ್ಡು ಮಾಡಲಾಯಿತು

3 ಕಳೆದ ಜುಲೈ ತಿಂಗಳ ಜಮ ಖರ್ಚಿನ ಪಟ್ಟಿ ಓದಿ ಮಂಜೂರ್ಮಾಡಲಾಯಿತು

ಹಿಂದಿನ ತಿಂಗಳ ಶಿಲ್ಕು	10,705	12	11
ಈ ತಿಂಗಳ ಜಮ	27,857	0	9
ಜುಮ್ಲ	38,562	13	8
ಸದರಿ ತಿಂಗಳ ಖರ್ಚು	29,907	0	0
ತಿಂಗಳಂತ್ಯದ ಶಿಲ್ಕು	8,655	13	8

4 1938-1939 ನೇ ಇಸವಿಯ ಸುಪರ್ ವಿಜನ್ ಬೋರ್ಡಿನ ಬಜೆಟನ್ನು ಪರಿಶೀಲಿಸಿ ಮಂಜೂರ್ಮಾಡಲಾಯಿತು

5 ತಿರುವಾಂಕೂರು ನೇಶನಲ್ ಅಂಡ್ ಕ್ವಿಲನ್ ಬ್ಯಾಂಕಿನ ಕೆಲಸ ಕಾರ್ಯಗಳು ನಿಂತು ಹೋಗಿ ಅದರ ದಸೆಯಿಂದ ಸೆಂಟ್ರಲ್ ಬ್ಯಾಂಕಿಗೂ ಉಂಟಾದ ಹಂಗಾಮಿ ಹಣದ ಅಡಚಣೆಯನ್ನು ನಿವಾರಿಸಲು ತಾ. 25-6-1938 ರಲ್ಲು ನಡೆದ ಡೈರೆಕ್ಟರುಗಳ ಮೀಟಿಂಗಿನಲ್ಲಿ ಸೆಂಟ್ರಲ್ ಬ್ಯಾಂಕಿನ ಕ್ಷೇಮನಿಧಿ ಮೊಬಲಗನ್ನು ಗವರ್ನ್ಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಇಟ್ಟಿದ್ದನ್ನು ಒತ್ತೆಯಿಟ್ಟು ಸಾಲವಾಗಿ ಹಣ ಪಡೆದುಕೊಳ್ಳಬೇಕೆಂದು ತೀರ್ಮಾನವಾದದ್ದನ್ನು ಪುನರಾಲೋಚಿಸಿ ಈಗ ವಾಯಿದೆ ಮುಗಿದ ಠೇವಣಾತಿಗಳನ್ನು ವಾಪಸು ಕೊಡಲು ಹಣದ ಅಭಾವ ಇಲ್ಲದ್ದರಿಂದ ಸದರಿ ಪ್ರಾಮಿಸರಿ ನೋಟುಗಳ ಆಧಾರದ ಮೇಲೆ ಸಾಲ ಹೊಂದಿಕೊಳ್ಳುವ ಆವಶ್ಯವಿಲ್ಲವೆಂದು ಮೆ ಪಿಚ್ಚೈರ ಸುಬ್ಬಯ್ಯನವರು ತಂದ ಠರಾವು ಮಂಜೂರ್ಮಾಡಲಾಯಿತು

ಈ ಪರಿಹಾರದಲ್ಲಿ ಹಣದ ಅಭಾವವುಂಟಾದ ಕೊಡಗಿನಲ್ಲಿ ಪ್ರತ್ಯೇಕ ಸ್ವಂತ ಆದಾಯದ ಬ್ಯಾಂಕನ್ನು ಸ್ಥಾಪಿಸಲು ಸಾಧ್ಯವಿಲ್ಲವೆಂದೂ ಈ ವಿಷಯದಲ್ಲಿ ಸೆಂಟ್ರಲ್ ಬ್ಯಾಂಕೇ ಒಂದು ಶಾಖೆಯನ್ನು ತೆರೆದು ದೀರ್ಘ ಕಂತಿನ ಸಾಲ ಕೊಡಲು ಸಾಧ್ಯವಿದೆಯೆಂದೂ ಕೊಡಗು ಕಮಿಷನರವರಿಂದ ಬಂದ ಪತ್ರವನ್ನು ಓದಿ ಅದೇ ಮೇರೆ ಬ್ಯಾಂಕಿನಲ್ಲಿ ಪ್ರತ್ಯೇಕ ಒಂದು ಶಾಖೆ ತೆರೆದು ಆ ಮೂಲಕ ದೀರ್ಘ ಕಂತುಗಳ ಸಾಲ ಕೊಡುವ ಬಾಬಿನಲ್ಲಿ ತಕ್ಕ ಸಲಹೆಗಳನ್ನು ಕಮಿಷನರವರಿಗೆ ಕೊಡಲು ತಯಾರಿಸಲ್ಪಟ್ಟ ಡೆಪ್ಯುಟೇಷನ್ನಿನವರ ವರದಿಯನ್ನು ಓದಿ ರಿಕಾರ್ಡು ಮಾಡಲಾಯಿತು

6 ಸೌತ್ ಇಂಡಿಯಾ ಕೋಆಪರೇಟಿವ್ ಇನ್ಶೂರೆನ್ಸ್ ಸೊಸೈಟಿಯ ಕೊಡಗು ಲೋಕಲ್ ಬೋರ್ಡಿನ ಕನ್ವೀನರರ ಹೆಸರಿನಲ್ಲಿ ಸೆಂಟ್ರಲ್ ಬ್ಯಾಂಕಿನಲ್ಲಿ ಡಿಪಾಜಿಟ್ಟು ಇಟ್ಟ ಸೇವಿಂಗ್ಸ್ ಬ್ಯಾಂಕು ಡಿಪಾಜಿಟ್ಟು ಹಣವನ್ನು ಸೌತ್ ಇಂಡಿಯಾ ಇನ್ಶೂರೆನ್ಸ್ ಸೊಸೈಟಿಯ ಹೆಸರಿಗೆ ವರ್ಗಾಯಿಸಬೇಕೆಂದು ಸದರಿ ಸಂಘದ ಪ್ರೆಸಿಡೆಂಟರು ರಿಜಿಸ್ಟ್ರಾರರಿಗೆ ಬರೆದಿರುವ ಪತ್ರದ ಮೇರೆ ಅವರಿಂದ ಬಂದ ಎಂಡಾರ್ಸ್ಮೆಂಟನ್ನು ಓದಿ ಚರ್ಚಿಸಲಾಯಿತು

ಸದರಿ ಸೊಸೈಟಿಯ ಪ್ರೆಸಿಡೆಂಟರ ಪತ್ರದಲ್ಲಿ ಸಮೂದಿಸಿರುವ ಮೊಬಲಗು ಕೊಡಗು ಲೋಕಲ್ ಬೋರ್ಡಿನ ಕನ್ವೀನರರ ಹೆಸರಿನಲ್ಲಿ ಬ್ಯಾಂಕಿನಲ್ಲಿ ಡಿಪಾಜಿಟು ಮಾಡಲ್ಪಟ್ಟಿರುವ ಕಾರಣ ಸದರಿ ಲೋಕಲ್ ಬೋರ್ಡಿನ ಸಂಪೂರ್ಣ ಅಧಿಕಾರ ಹೊಂದಿದ ಅಧಿಕಾರಿಯು, ಕೇವಲ ವಿನಹ ಸದರಿ ಮೊಬಲಗನ್ನು ಮತ್ತೆ ಯಾರ ಹೆಸರಿಗೂ ವರ್ಗಾಯಿಸಲಿಕ್ಕಾಗುವುದಿಲ್ಲವೆಂಬ ಸಂಗತಿಯನ್ನು ರಿಜಿಸ್ಟ್ರಾರವರಿಗೆ ತಿಳಿಸುವಂತೆ ತೀರ್ಮಾನವಾಯಿತು

7 ಸುಪರ್ ವಿಜನ್ ಬೋರ್ಡಿನ ರಚನೆ ಮತ್ತು ಅದಕ್ಕಿರುವ ಅಧಿಕಾರಗಳ ವಿಷಯದ ಠರಾವನ್ನು ಸೂಚಿಸುವವರು ಯಾರೂ ಇಲ್ಲದ್ದರಿಂದ ಅದನ್ನು ಚರ್ಚಿಸಲಿಲ್ಲ

8. ಮೆ. ಯಂ. ಯಂ ಬೆಳ್ಯಪ್ಪನವರು ಹೊಂದಿಕೊಂಡ ಮರ್ಯಾದ ಧನವನ್ನು ವಾಪ್ಸು ಪಡೆಯುವ ವಿಷಯ ಚರ್ಚಿಸಲಾಗಿ ಈ ಕೆಳಗಿನ ಮಹನೀಯರುಗಳಿಂದ ಕೂಡಿದ ಸಬ್ ಕಮಿಟಿಯು ಈ ವಿಚಾರವನ್ನು ಕಾನೂನಿನ ದೃಷ್ಟಿಯಿಂದ ವಿಮರ್ಶಿಸಿ ಬರುವ ಮೀಟಿಂಗಿನೊಳಗೆ ರಿಪೋರ್ಟು ಬರೆಯುವಂತೆ ಅವರನ್ನು ಕೇಳಿಕೊಳ್ಳಬೇಕಾಗಿ ತೀರ್ಮಾನವಾಯಿತು ಮೆ. ಗಳಾದ ಸಿ. ಎ. ಮುಂದಣ್ಣನವರು (ಟ್ರೆಜರರ್) ಸಿ. ಯಂ. ಭೀಮಯ್ಯನವರು ಮತ್ತು ಪಿ ಜಿ ಐಯ್ಯಪ್ಪನವರು (ಗೌರವ ಕಾರ್ಯದರ್ಶಿ)

9 ಬ್ಯಾಂಕಿಗೆ ಕಳುಹಿಸಬೇಕಾದ ಸಾಲ ಮೂಲಕ ರಿಜಿಸ್ಟರುಗಳನ್ನು ಕಳುಹಿಸಲು ಅಸಾಧ್ಯವೆಂದು ಪಶ್ಚಿಮಯಾಗಿ ಎ ಸೆನ್ಸಸ್ ನಾಡು ಯೂನಿಯನ್ ಜನರಲ್ ಬಾಡಿ ಮೀಟಿಂಗಿನಲ್ಲಿ ಪ್ರೊಸೀಡಿಂಗ್ಸ್ ಮಾಡಿದ್ದರ ಮೇಲೆ ಇನ್ಸ್ಪೆಕ್ಟರರ ರಿಪೋರ್ಟಿಗನುಸಾರವಾಗಿ ರಿಜಿಸ್ಟ್ರಾರವರಿಂದ ಬಂದ ಪತ್ರವನ್ನು ಆಲೋಚಿಸಲಾಗಿ ಈ ವಿಷಯದಲ್ಲಿ ಡೈರೆಕ್ಟರುಗಳು ತಮ್ಮ ಹೊಂದಿದ ತೀರ್ಮಾನವನ್ನು ನಡೆಸಲು ಯಾವ ಹೊಸ ಕಾರಣಗಳಿಲ್ಲದ್ದರಿಂದ ಅವರ ಕೋರಿಕೆಯನ್ನು ನೆರವೇರಿಸಲಿಕ್ಕಾಗುವುದಿಲ್ಲವೆಂದು ತೀರ್ಮಾನಿಸಲಾಯಿತು

10 ಸೌತ್ ಇಂಡಿಯಾ ಕೋಆಪರೇಟಿವ್ ಇನ್ಶೂರೆನ್ಸ್ ಸೊಸೈಟಿಗೆ ಬ್ಯಾಂಕಿನ ಪರ ಸದಸ್ಯರನ್ನಾಗಿ ಗೌರವ ಕಾರ್ಯದರ್ಶಿಯಾದ ಮೆ ಪಿ ಜಿ ಐಯ್ಯಪ್ಪನವರನ್ನು ಸರ್ವಸಮ್ಮತದಿಂದ ಚುನಾಯಿಸಲಾಯಿತು

11 ಒಬ್ಬ ಮಹನೀಯರು ತಮ್ಮ ಡಿಪಾಜಿಟು ಮೊಬಲಗನ್ನು ಬಡ್ಡಿ ಇಲ್ಲದೆ ಅವಧಿಗೆ ಮುಂಚೆ ವಾಪಸು ಕೊಡಬೇಕೆಂದು ಬರೆಕೊಂಡ ಅರ್ಜಿಯು ಮಂಜೂರಾಗಲಿಲ್ಲ

12 ಒಬ್ಬ ಮಹನೀಯರ ಗಾರಂಟಿಯಲ್ಲಿರುವ ವಿರಾಜಪೇಟೆ ತಾಲೂಕಿನ ಅವಧಿ ಮುಗಿದಿರುವುದರಿಂದ ಸದರಿ ಮೊಬಲಗನ್ನು ಸ್ವಂತಕ್ಕೆ ಸಾಲ ... ಕೊಡಗು ಸಬಾರ್ಡಿನೇಟ ಜಡ್ಜಿಯವರು ವ ... ಸದರಿ ... ಬರೆಕೊಂಡ ಪತ್ರದ ... ಮತ್ತು ಈಚೆಗೆ ಸದರಿ ಪಾರ್ಟಿಯವರ ಬಳಿಗೆ ಸೇರಿಯೂ ರೂ 5,063 9-0 ನ್ನು ಕೊಟ್ಟು ಉಳಿದ ಮೊಬಲಗನ್ನು ಒಂದು ವರ್ಷದ ಠೇವಣಾತಿಯಾಗಿ ಮುಂದರಿಸಬಹುದಂತೆ ತೀರ್ಮಾನಿಸಲಾಯಿತು

13. ಅವಧಿ ಮುಗಿಯುವ ಮೊದಲೇ ತನ್ನ ಡಿಪಾಜಿಟ್ಟು ಮೊಬಲಗನ್ನು ಬಡ್ಡಿ ಇಲ್ಲದೆ ವಾಪಸು ಕೊಡಬೇಕೆಂದು ಬರೆಕೊಂಡ ಒಬ್ಬ ಮಹನೀಯರ ಅರ್ಜಿಯು ಮಂಜೂರು ಮಾಡಲ್ಪಡಲಿಲ್ಲ

14. ಕಳೆದ ಜನರಲ್ ಮೀಟಿಂಗಿನ ಖರ್ಚು ಬೆಚ್ಚಗಳ ಪಟ್ಟಿಯನ್ನು ಆಡಿಟ್ ಮಾಡಿದುದರ ವರದಿಯನ್ನು ಓದಿ ರಿಕಾರ್ಡು ಮಾಡಲಾಯಿತು ಅಲ್ಲದೆ ಆಡಿಟರುಗಳಾದ ಮೆ. ಮಾಚಿಮಾಡ ಎ ಚೆಂಗಪ್ಪನವರಿಗೂ, ಮೆ. ಚೌರೀರ ಮುಂದಣ್ಣನವರಿಗೂ ಅವರ ಉಚಿತಾರ್ಥ ಕೆಲಸಕ್ಕಾಗಿ ವಂದಿಸುವಂತೆ ತೀರ್ಮಾನವಾಯಿತು

15. ಸೌತ್ ಇಂಡಿಯಾ ಇನ್ಶೂರೆನ್ಸ್ ಸೊಸೈಟಿಯಿಂದ ತಮಗೆ ಬರಬೇಕಾದ ಕಮಿಶನ್ ವಗೈರೆ ವಿಷಯವಾಗಿ ಬ್ಯಾಂಕಿನ ಉದ್ಯೋಗಸ್ಥರೂ ಮತ್ತು ಸುಪರ್ವೈಜರುಗಳೂ ಬರೆಕೊಂಡ ಅರ್ಜಿಗಳನ್ನು ಆಲೋಚಿಸಲಾಗಿ, ಹಾಲಿ ಸಿಕ್ಕಬೇಕಾದ ಕಮಿಶನಿಗೆ ಮಾತ್ರ ಬ್ಯಾಂಕಿನ ಮೂಲಕ ಇನ್ಶೂರೆನ್ಸ್ ಸೊಸೈಟಿಯ ಸೆಕ್ರೆಟರಿಗೆ ಪತ್ರ ಬರೆಕೊಳ್ಳುವಂತೆ ಅವರಿಗೆ ತಿಳಿಸಲು ತೀರ್ಮಾನಿಸಲಾಯಿತು

16 ತಿರುವಾಂಕೂರು ನೇಶನಲ್ ಅಂಡ್ ಕ್ವಿಲಾನ್ ಬ್ಯಾಂಕು ಇವರ ಮಡಿಕೇರಿ ಬ್ರಾಂಚಿನ ಮೊಬಲಗನ್ನೂ, ರಿಜಿಸ್ಟ್ರರುಗಳನ್ನೂ, ಕೋರ್ಟು ಆರ್ಡರು ಮೂಲಕ ಸ್ವಾಧೀನ ತೆಗೆಸುವ ವಿಷಯ ಆಲೋಚಿಸಲಾಗಿ, ಈ ವಿಷಯದಲ್ಲಿ ಆ ಬ್ಯಾಂಕಿನಲ್ಲಿ ಒಬ್ಬ ಡಿಪಾಜಿಟ್ಟುದಾರರಾದ ಮೆ ಬಿ. ಎ ಬೆಳ್ಯಪ್ಪನವರು ಸಮ್ಮಂಧಪಟ್ಟ ಕೋರ್ಟಿಗೆ ಅರ್ಜಿ ಹಾಕಿ ಆ ಪ್ರಕಾರ ಮಾಲ್ಕಂಡ ಬ್ರಾಂಚಿನ ಲಿಕ್ವಿಡೇಟರು ಈ ಬ್ಯಾಂಕಿನ ಸ್ವತ್ತುಗಳನ್ನೆಲ್ಲಾ ಸ್ವಾಧೀನಪಡಿಸಿಕೊಳ್ಳುವಂತೆ ಹುಕುಂ ಹೊರಡಿಸುವ ಏರ್ಪಾಡು ತೆಗೆದುಕೊಳ್ಳಬೇಕಾಗಿಯೂ ಅಲ್ಲದ ಈ ಸಮ್ಮಂದವಾಗಿ ಮೆ ಬೆಳ್ಯಪ್ಪನವರಿಗೆ ತಗಲುವ ಖರ್ಚನ್ನೆಲ್ಲಾ ಜನರಲ್ ಬಾಡಿಯವರ ಮಂಜೂರಾತಿ ನಿರೀಕ್ಷಣೆಯಿಂದ ಅವರಿಗೆ ಬ್ಯಾಂಕಿನಿಂದ ಕೊಡುವಂತೆಯೂ, ಸದ್ರಿ ಮೊಬಲಗನ್ನು ಲಿಕ್ವಿಡೇಟರಿಂದ ಸಿಕ್ಕಿದೊಡನೆ ಬೆಳ್ಯಪ್ಪನವರು ಬ್ಯಾಂಕಿಗೆ ವಾಪಸು ಕೊಡುವಂತೆಯೂ ತೀರ್ಮಾನವಾಯಿತು

17 ಬ್ಯಾಂಕಿನ ಮೀಟಿಂಗುಗಳಿಗೆ ದೂರದಿಂದ ಬರುವ ಡೈರೆಕ್ಟರುಗಳಿಗೆ ಏಕ ಪ್ರಕಾರವಾದ ಪ್ರಯಾಣದ ಭತ್ಯವನ್ನು ನಿಷ್ಕರ್ಷೆ ಮಾಡಬೇಕೆಂಬ ಮೆ ಬಿ ಎ ಬೆಳ್ಯಪ್ಪನವರ ಠರಾವೂ, ನಂತರ ಸದರಿ ಡೈರೆಕ್ಟರುಗಳಿಗೆ ಬರುವ ರಸ್ತೆಯಿಂದಲೇ ಬಂದು ಸಮಯಕ್ಕೆ ಸರಿಯಾಗಿ ಮೀಟಿಂಗಿಗೆ ಹಾಜರಾಗಲು ಅನುಕೂಲವಾಗುವಂಥ ಹತ್ತಿರದ ರಸ್ತೆಗಾಗಿ ಮಾತ್ರ ಮೈಲಿಗೆ 1 ಆಣೆಯಂತೆ ಬಸ್ಸು ಚಾರ್ಜು ಕೊಡಬಹುದೆಂಬ ಮೆ ಐ ಸಿ ಸುಬ್ಬಯ್ಯನವರ ಉಪ ಠರಾವೂ ಚರ್ಚಿಸಲ್ಪಟ್ಟು ಸದರಿ ಉಪ ಠರಾವು ಸರ್ವಸಮ್ಮತದಿಂದ ಪಾಸಾಯಿತು

ಸಿ. ಐ. ಬೆಳ್ಯಪ್ಪ,
(ಅಧ್ಯಕ್ಷರು)

ಡಾ. ಮೇತ್ಯುಸ್ ಎಬ್ರಹಾಮ್
ದಂತ ವೈದ್ಯರು.
(ಸೀಯರ್ಸ್ ಲೆಸ್ಲಿ ಬಂಗ್ಲೆ)
(ಸ್ಪೆನ್ಸರ್ಸ್ ಹತ್ತಿರ)
ಮಡಿಕೇರಿ.



ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯೊದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತವೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತವೆ. ಲಂಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು! ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ನಿಸಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ,

52-13 ಬೆಂಗಳೂರು ಸಿಟಿ.

೪೨ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೇಕಂಪನಿ

ಸುಪ್ರಸಿದ್ಧ ಜ್ವರದ ಗುಳಿಗೆ

ಇದು ಛಳಿಜ್ವರ, ಚಾತುರ್ಥಿ ಜ್ವರ, ೩ ದಿನಬಿಟ್ಟು ದಿನ ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ನಾನಾತರದ ಜ್ವರಗಳ ಮೇಲೆ ತಕ್ಷಣವೇ ಗುಣ ಸಂಜೀವಿನಿಯಂತಿವೆ! ಬಾಟ್ಲಿಗೆ 1 ರೂ. 4 ಬಾಟ್ಲಿಗೆ 3 ರೂ. 12 ಬಾಟ್ಲಿಗೆ 8 ರೂ. ವಿ. ಪಿ. ಖರ್ಚು ಬೇರೆ.

ಗಣೇಶ. ರಾಮಚಂದ್ರ ಕರ್ಕೆ.

ಮತ್ತು ಕಂಪನಿ,

(52-40) ಗಿರಗಾಂವ, ಮುಂಬಯಿ ೪,

ಸೂಚನೆ.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಾಗುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ಕಮ್ಮನವರು

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು.

ಮ. ಕೆ. ಯಂ. ಕುಟ್ಟಪ್ಪನವರು.

ಅಮ್ಮತ್ತಿ—ಸಿದ್ದಾಪುರ— ಮ. ಐನಂಡ ಮಾದಪ್ಪನವರು.

ಕೃಷ್ಣರಾಜಪೇಟೆ—ಮ. ಪಿ. ಕೆ. ಮುದ್ದಮ್ಮಯ್ಯನವರು.

ಮಡಿಕೇರಿ—ಮ. ಅಪ್ಪನೇರ ಮಾದಪ್ಪನವರು ಮತ್ತು ಮ.

ಕೆ. ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾದಯ್ಯನವರು.

ಸೋಮವಾರಪೇಟೆ—ಮ. ಕೆ. ಮೊಗಪ್ಪನವರು.

ಶನಿವಾರಸಂತೆ—ಮ. ಬೆಳ್ಯಪಂಡ ಯಂ. ಪೂಣಚ್ಚನವರು.

(ಶಾಪ್‌ಕೀಪರ್ ಸ್ಟೋರ್ಸ್)

ಸೂಚನೆ.— ...ಅದ ರಶೀತಿ ತೆಗೆದುಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ

The Bombay Mutual Life Assurance Society Ltd.,

Head Office:-BOMBAY. Estd. 1871.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರದ ಮೇಲೆ 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಪಾಲುದಾರರಿಗೆ 26ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್

ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52-27

[ಚಿಕ್ಕ ಡಾಕ್ಟರ್] **ವೇಪ್ಸಿನ್** [ರಿಜಿಸ್ಟರ್ಡ್]

ಚರ್ಮವ್ಯಾಧಿಗಳ ವೈರಿ—ಪ್ರತಿ ಒಬ್ಬರ ಸ್ನೇಹಿತ—ಸ್ವದೇಶಿ ವಸ್ತು.

ಇದರ ಲೇಪನದಿಂದ ಕಜ್ಜಿ, ಗಾಯ, ವ್ರಣ, ಇಸಬು, ನಾರುಹುಣ್ಣು, ಮೂಲವ್ಯಾಧಿ, ಸುಟ್ಟಗಾಯ, ಮೊಡವೆ(Pimples ಪೆಟ್ಟುಗಾಯ, ಕತ್ತಿಗಾಯ, ತೊಡೆವಾಳಿ, ಗಣಕರ್ಣ ಇವು ಮಾಯವಾಗುವವು. ಇದು ಸುರಿಯುತ್ತಿರುವ ರಕ್ತವನ್ನು ನಿಲ್ಲಿಸಿ ನೋವನ್ನು ನಿವಾರಿಸುವುದು. ಅಲ್ಲದೆ ಇಂದ್ರಜಾಲದೋಪಾದಿಯಲ್ಲಿ ಚೇಳಿನ ವಿಷವನ್ನು ಬಹಿರ್ಗತಪಡಿಸುವುದು. ನಿಮ್ಮಲ್ಲಿ ಒಂದು ಬಾಟ್ಲು ಇದ್ದಲ್ಲಿ ಒಬ್ಬ ಡಾಕ್ಟರೇ ಇದ್ದಂತಾಗುವುದು. ಕ್ರಯ ಬಹಳ ಸುಲಭ.

½ ಔನ್ಸ್ ಬಾಟ್ಲು 1ಕ್ಕೆ ಆಣೆ 0-8-0. ¼ ಔನ್ಸ್ ಬಾಟ್ಲು 1ಕ್ಕೆ ಆಣೆ 0-4-0.

ವಿ. ಸೂ:—ಪೆಟ್ಟು ತಾಗಿದ ಸ್ಥಳದಲ್ಲಿ ವೇಪ್ಸಿನ್ ಚೆನ್ನಾಗಿ ತಿಕ್ಕುವುದು. ಇಲ್ಲವೇ ಬಟ್ಟೆಯ ಮೇಲೆ ಸವರಿ ಅಂಟಿಸುವುದು. ನಂತರ ಸಾಬೂನಿನಿಂದ ಕೈ ತೊಳೆಯುವುದು. ಇದಲ್ಲದೆ ಇನ್ನೂ ಅನೇಕ ತರಹದ ಔಷಧಿಗಳು ನಮ್ಮಲ್ಲಿವೆ.

ಲಷ್ಕರ್ ಮ್ಯಾನಿಫ್ಯಾಕ್ಚರಿಂಗ್ ಕಂಪೆನಿ,

ಡಿ. ಸ್ಕೊ. ಬೆಂಗಳೂರು ಸಿಟಿ.

52-5 **ಸೋಲ್ ಏಜೆಂಟ್:—ಚರಿದಾಸ್ ನಂಜುಂಡ ಗುಪ್ತ,**

ಮಡಿಕೇರಿ, (ಕೊಡಗು).

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ಬನಾವಣೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುಪರಿಮಳಯುಳ್ಳ ಈ ಮಾತ್ರೆಗಳು ನಿತ್ಯ ಆರೋಗ್ಯ ಕ ರಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ ಪಕ್ಕೆಶೂಲೆಗಳಿಗೂ ಅದ್ಭುತ ಬೆಲೆ 0 1 0, 0 2 0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು ಜ್ವರಗಳಿಗೆ ಬೆಲೆ 0 4 0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ.

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ ಬೆಲೆ 0-8-0, 0-1-0

ಸುಕುಮಾರತೈಲ

23

ಬಿಸಿಲು ಪಟ್ಟದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ಇಂತ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ ಬೆಲೆ 1 0 0

ಪ್ರೊಪ್ರೈಟರ್-ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ ವಿ ಪಂಡಿತ್.

ಉತ್ತಮ ಪ್ರಚಾರ! ಜ್ಞಾನಸಂಚಾರ!

ವ್ಯಾಪಾರಸ್ಥರೇ!

ನಿಮ್ಮ ಸಾಮಾನುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ಣಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು

ಕಾಲ.	1 ಪುಟಕ್ಕೆ	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ 150	ರೂ 55	ರೂ 35	ರೂ 22
6 ತಿಂಗಳಿಗೆ—	„ 100	„ 35	„ 22	„ 13
3 ತಿಂಗಳಿಗೆ—	„ 60	„ 20.	„ 13.	„ 8
1 ತಿಂಗಳಿಗೆ—	„ 25	„ 10	„ 6.	„ 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು ಆತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಬಿಕ್ಕಟ್ಟಿನ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮಿ. ಎಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮಿ. ಎಲ್. ಎಫ್. ಸಿ. ದಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

82-36 ಮಿ. ಡಿ. ಶೇಷಾದ್ರಿ, ಅ! ಇನ್ಸ್‌ಪೆಕ್ಟರು, ಶಿವಮೊಗ್ಗಾ.

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
“ ಕೊಡಗು ”
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1850

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಬಿ. ಜಿ. ಚೆಟ್ಟಿಪ್ಪ. ವಾರ್ಷಿಕ ಚಂದಾ ರೂ. ೩-೮-೦
ತಾ. ೧೬—೭—೧೯೩೮. ಸಂಪುಟ ೧೮] [ಸಂಚಿಕೆ ೧೬

The Bombay Life Assurance Company Ltd.

(Estd. 1908.)
46-47, Churchgate Street, Fort-Bombay.

Progress Proves Its Popularity.

Year.	Business in force.	Claims Paid.	Life Assurance Fund
1931	26,82,130	2,91,880	33,24,809
1933	07,98,135	3,54,003	50,04,871
1935	12,51,214	5,75,198	68,01,501
1937	[illegible]04,70,594	6,00,918	98,68,232

Total Claims Paid Between 1909 and 1937—Rs. 50,22,576.

BOMBAY LIFE is a purely India Concern Offering all that is best in Life Assurance.

To Insure or to Represent it pays you to consult us or our Branches —

KOCHITAR & BROTHERS Ltd.,
Madras Branch Secretaries,
8 Post Box No. 337, Mount Road, MADRAS. [Phone No. 8248.]

Bombay Life Building Udipi	Gautam Nivas, Chami Road Girgaum Bombay 4	Visweswarapuram, Circle, Bangalore City	[illegible] Calicut	Car Street [illegible]	Ottapalam [illegible]	Central Station Road [illegible]

THE CANARA BANKING CORPORATION, UDIPI, Ltd.

(Incorporated in British India.)
Estd. 1906.

MEMBER: RESERVE BANK OF INDIA, & BANKERS' CLEARING HOUSE, MADRAS.

Paid up Capital	.... Rs.	3,03,205/-
Reserves	.... „	3,88,842/-

Our Deposit Rates.

3 months	....	2½ % p. a.
6 or 9 months	....	3 % p. a.
12 months	....	3½ % p. a.
SHORT TERM	....	2 % p. a.

Head Office: UDIPI, S. K.

Branches.

1. Udipi, 2. Coondapoor, 3. Car Street, Mangalore, 4. Madras, 5. Shimoga, 6. Bunder, Mangalore, 7. Mercara, 8. Virarajendrapet, 9. Saklaspur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

BANKING BUSINESS OF EVERY DESCRIPTION TRANSACTED.

Udipi,
8th July 1938.

52-41

V. R. Kamath, B. A., LL. B.,
Manager.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)
(ಸ್ಥಾಪಿತವಾದ್ದು 1921ರಲ್ಲಿ)

		ರೂ.	ಆ.	ಪೈ.
ಷೇರ್ ಬಂಡವಾಳ	–	50,000	0	0
ವಸೂಲಾದ ಷೇರ್ ಮೊಬಲಗು	–	45,770	0	0
ಜಮಾಬಂದ ಠೇವಣಾತಿ	–	2,47,311	5	4
ವಸೂಲಾದ ಕ್ಷೇಮನಿಧಿ	–	1,36,511	1	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	21,304	13	11
ಟ್ರಿಸ್ಟ್ ಡಿಪಾಜಿಟ್ಟು	–	35,699	5	0

ಈ ಬ್ಯಾಂಕಿನಿಂದ ಕೊಡಗು ಸೇರಿದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಬಾಲಿಯೂಸ 3½ ದರದಲ್ಲಿಯೂ, ಮೂರು ಅದಕ್ಕೆ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಬಾಲಿಯೂಸ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ಟ್ರಿಸ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವದು. ಟ್ರಿಸ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ಏರ್ಪಾಡಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟ್:—ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಚೌರೀರ ಎ. ಸುಂದಣ್ಣನವರು ಬಿ. ಎ., ಬಿ. ಎಲ್.
ಸೆಕ್ರೆಟರಿ:—ಪುಲಿಯಂಡ ಜಿ. ಬಿಳ್ಯಪ್ಪನವರು ಬಿ. ಎ., ಬಿ. ಎಲ್.

ತಾ. 1-9-1938

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—'ಲಕ್ಷ್ಮೀನಿವಾಸ' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂಥ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛೆಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-16 **The Agricultural & Industrial Bank Ltd**

"ZANDU"

ಝಂಡೂರವರ	ಝಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝಂಡೂ ಅಯೋಡೈಸ್ಡ್ ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಪ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52-6) ಮತ್ತು ಆಯುರ್ವೇದ ವಿದ್ವಾನ್
ವೀರರಾಜಪೇಟೆಯ ಏಜಂಟರು—ಕೆ. ಕೃಷ್ಣರಾವ್, ವೀರರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಸ್ತೂರಿ ಮಿಶ್ರ)

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟ ನೋವು, [illegible], ಮಲಬದ್ಧತೆ, ಚಳಿಜ್ವರ, ಅಶಕ್ತತೆ ಇವುಗಳನ್ನು ಹೋಗಲಾಡಿಸಿ, ದೇಹವನ್ನು, ಜಠರಾಗ್ನಿಯನ್ನೂ ಹೆಚ್ಚಿಸುವದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ 2—8—0.

ಮಲೇರಿಯಾ ನಿವಾರಿಣಿ

ಇದು ಚಳಿ ಜ್ವರ, ಚಾತುರ್ಥಿಕ ಜ್ವರ, ದಿನ ಬಿಟ್ಟುಬರುವ ಜ್ವರ, ಮಲೇರಿಯಾ ಜ್ವರ, ಇನ್‌ಫ್ಲುಯೆಂಜಾ ಇತ್ಯಾದಿ ನಾನಾ ತರದ ಜ್ವರಗಳ ಮೇಲೆ ರಾಮಬಾಣ.
ಬಾಟ್ಲಿ 1ರ ರೂ. 1—8—0; ಸಣ್ಣ ಬಾಟ್ಲಿ ರೂ. 0—13—0.

ಸ್ಪ್ಲೀನ್ ಮಿಕ್ಸ್ಚರ್

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಅಶಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವದು ಬಾಟ್ಲಿ 1ರ ರೂ. 1—2—0.

ಬಾಲಗ್ರಹ ಗುಟಿಕೆ

ಮಕ್ಕಳ ಅಜೀರ್ಣ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ

ಎಸ್. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ಮಂಗಳೂರು ಸ್ಟೋರ್ಸ್, ಮಡಿಕೇರಿ. ಎ. ಬಿ. ಕಾಮತ್, ಮಡಿಕೇರಿ. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. ಸುಂದರ್ ಪ್ರಭು, ಸುಳ್ಯ. [11]

ಹಿತ್ತಿಲ ಮದ್ದಿಗೆ ಬೆಲೆ ಇಲ್ಲವೆ?

'ಜೀವನ ಸುಖ'ವೆಂಬ ಇಂಗ್ಲೀಷು ಗ್ರಂಥವನ್ನು ಬರೆದ ಆಂಗ್ಲಾಕವಿಯು ಎಲ್ಲರೂ ಓದಬೇಕಾದ ಪ್ರಾಚೀನ ಗ್ರಂಥಗಳಿಂದು ರಾಮಾಯಣ, ಮಹಾಭಾರತ, ಮತ್ತು ಶಾಕುಂತಳ ನಾಟಕದ ಇವು ಮೂರರ ಹೆಸರುಗಳನ್ನು ಸೂಚಿಸಿರುವನು. ಪಾಶ್ಚಿಮಾತ್ಯರಿಗೆ ಇವುಗಳಲ್ಲಿ ಅಪೇಕ್ಷೆ ಇದ್ದರೂ ಭಾರತೀಯರು ಇವುಗಳನ್ನು ಅಲಕ್ಷಿಸುತ್ತಿರುವದು ವಿಷಾದಕರವೇ!

—೦()೦—

ತಂತಿಗಳಿಲ್ಲದೆಯೇ ವಿದ್ಯುತ್ ಪ್ರವಾಹ.

ತಂತಿ ಮೂಲಕ ವಿದ್ಯುತ್ ಪ್ರವಾಹವು ಹರಿದು ದೀಪಗಳು ಉರಿಯುವದು ಸಾಧಾರಣವಾಗಿ ಸಕಲರಿಗೂ ತಿಳಿದ ಅಂಶವಾಗಿದೆ. ಟೆಲಿಫೋನ್, ಟೆಲಿಗ್ರಾಫ್, ಮುಂತಾದುವೂ ಅಷ್ಟೆ. ಆದರೆ 'ವೈರ್ ಲೆಸ್' (ತಂತಿಗಳಿಲ್ಲದೆ) ಸಮಾಚಾರಗಳು ಬರುವಂತೆ (ರೇಡಿಯೋ) ವಿದ್ಯುತ್‌ಕಿರಣಗಳು ಬರುವವು. ಅವುಗಳನ್ನು ಉಪಯೋಗಿಸಿಕೊಂಡು ದೀಪಗಳನ್ನು ಉರಿಸಬಹುದಾಗಿದೆ. ಈ ರೀತಿಯಾದ ಪ್ರದರ್ಶನವು ಇತ್ತೀಚೆಗೆ ಜರ್ಮನಿಯಲ್ಲಿ ನಡೆದುದಾಗಿ ವರ್ತಮಾನವೊಂದು ತಿಳಿಸುತ್ತದೆ.

—೦()೦—

ಶತಾಯುಗಳ ಜನಾಂಗ.

ಯುರೋಪ್ ಖಂಡಕ್ಕೆ ಬಲ್ಗೇರಿಯಾ ದೇಶವು ಸೇರಿದೆ. ಬಲ್ಗೇರಿಯನರ ಜನಾಂಗಕ್ಕೆ ಶತಾಯುಗಳ ಜನಾಂಗವೆಂಬ ಹೆಸರು ಕೊಡಲ್ಪಟ್ಟಿದೆ. ಈ ಹೆಸರು ಅವಕ್ಕೆ ಒಪ್ಪುತ್ತದೆ. ಇದಕ್ಕೆ ಕಾರಣವೇನು ಬಲ್ಲಿರಾ? ಬಹಳ ಈಚೆಗೆ ಸಂಗ್ರಹಿಸಿದ ಅಂಕೆ ಸಂಖ್ಯೆಗಳಿಗನುಸಾರವಾಗಿ ಅದೇ ದೇಶದಲ್ಲಿ 4000 ಮಂದಿ ನೂರು ಮತ್ತು ಅದಕ್ಕಿಂತ ಅಧಿಕ ಪ್ರಾಯದವರಾಗಿರುವ ಪ್ರಜೆಗಳು ಇರುವರು. ಈ ವೃದ್ಧ ಶತಾಯುಗಳು ಹೆಚ್ಚಿನವರು ಗ್ರಾಮಗಳಲ್ಲಿಯೂ ಅಥವಾ ಪರ್ವತ ಪ್ರಾಂತ್ಯಗಳಲ್ಲಿಯೂ ಇದ್ದುಕೊಂಡು ಅತ್ಯಂತ ಪುರಾತನ ರೀತಿಯ ಜನರ ನಡವಳಿಕೆಗಳನ್ನು ಅನುಸರಿಸುವರಂತೆ.

ನಮ್ಮ ದೇಶದ ಜನರು ಹೆಚ್ಚಾಗಿ ವ್ಯವಸಾಯ ವೃತ್ತಿಯನ್ನೆ ಅನುಸರಿಸುವವರಾದರೂ ಇತ್ತೀಚೆಗೆ ಹಳ್ಳಿಗಳಿಂದ ಪೇಟೆಗಳಿಗೆ ಬಂದು ನೆಲಸುವವರ ಸಂಖ್ಯೆಯು ಹೆಚ್ಚುತ್ತಿದೆ. ಪಟ್ಟಣಗಳಲ್ಲಿ ಅಧಿಕ ಜನರು ಗುಂಪು ಕಟ್ಟಿ ನೆಲೆಸುವುದರಿಂದ ಆರೋಗ್ಯಕ್ಕೆ ಬಲಿಬಿದ್ದು ಅನೇಕ ತರದ ರೋಗಗಳಿಗೆ ತುತ್ತಾಗಿ ಅಲ್ಪಾಯುಗಳಾಗಿ ಹೋಗುವರು. ಆದ್ದರಿಂದ ವಿದ್ಯಾವಂತರೂ ಸರಕಾರಿ ಉದ್ಯೋಗಗಳಿಂದ ನಿವೃತ್ತರಾದವರೂ ನಗರಗಳಿಂದ ಹಳ್ಳಿಗಳಿಗೆ ಹೋಗಿ ನೆಲಸಿ ಅಲ್ಲಿ ಹಳ್ಳಿಯ ಜನರಿಗೆ ಉತ್ತಮ ಜೀವನದ ದಾರಿಯನ್ನು ತಿಳಿಸಿ ನಗರಗಳಿಗೆ ಅವರು ನುಗ್ಗದಂತೆ ಅವರುಗಳಿಗೆ ತಿಳಿಸಬೇಕು. ಈ ರೀತಿಯಾಗಿ ಅವರು ಹಳ್ಳಿಯಲ್ಲಿಯೇ ಆರೋಗ್ಯವನ್ನು ಪಡೆದು ಸುಖಜೀವನ ಮಾಡಿಕೊಳ್ಳುವುದು ಎಷ್ಟು ಮೇಲು ಎಂಬುದನ್ನು ಅವರಿಗೆ ತಿಳಿಸಿದರೆ ದೇಶಕ್ಕೆ ಬಹಳ ಪ್ರಯೋಜನವಾದೀತು.

—೦()೦—

ವಿ ವಿ ಧ ವಿ ಚಾ ರ .

ವಿ ಸು ನಂ ಬಿ ಕೆ !

ಮಹಾಯುದ್ಧ ಸಂಭವಿಸುವ ಕಾಲ ದೂರದಲ್ಲಿಲ್ಲವೆಂದು, ಯುರೋಪಿನ ಸಕಲ ರಾಷ್ಟ್ರಗಳಿಗೂ ತಿಳಿದಿದೆ. ಬ್ರಿಟಿಷ್ ಸರಕಾರ, ಹಾರಾಟದಲ್ಲಿ ತನ್ನ ಜನರನ್ನು ತರಬೇತಿ ಮಾಡುತ್ತಿದೆ. ಹಾಗೇ, ಒಂದೂ ದೇಶದ ಮಂದಿಯನ್ನು ಆಹುತಿ ಕೊಡಲೂ, ಸೈನ್ಯವನ್ನು ಇಲ್ಲಿ ಹೆಚ್ಚಿಸಲು ಯೋಚಿಸಿದೆ. ಇದೀಗ, ಡಾಕ್ಟರರಿಗೂ ಕರೆ ಬಂದಿದೆ. ಯುದ್ಧ ಕಾಲದಲ್ಲಿ ಗಾಯಗೊಂಡವರ ಚಿಕಿತ್ಸೆಗೆ ಮುಂದಾಗುವವರು, ಹೆಸರು ಕೊಡಬೇಕೆಂದು ಸೂಚಿಸಿದುದೇ ತಡ: ಬ್ರಿಟನಿನ ಶೇ. 80 ರಷ್ಟು ಅಂದರೆ 40 ರಿಂದ 50 ಸಾವಿರದ ವರೆಗೆ ಡಾಕ್ಟರರು ಈ ಸಹಾಯಕ್ಕೆ ಮುಂದಾಗಿದ್ದಾರೆ. ಇವರೆಲ್ಲ, ಪ್ರತಿಫಲ ಪಡೆಯದೆ ಕೆಲಸ ಮಾಡಲು ಒಪ್ಪಿರುವರು. ಇವರದೊಂದು ಪಟ್ಟಿಯು, ಗುಪ್ತವಾಗಿ ತಯಾರಾಗುತ್ತಿದೆ. ಬಣ್ಣದ ದೆಸೆಯಿಂದ, ಭಾರತೀಯರಿಗೆ, ಹೋಟೇಲುಗಳಲ್ಲಿ ಪ್ರವೇಶವೂ ಇಂದು ಬ್ರಿಟನ್ನಿನಲ್ಲಿ ದೊರೆಯುತ್ತಿಲ್ಲ. ಹಾಗಿರಲು, ಈ ಡಾಕ್ಟರರು ನಮ್ಮ ಸೈನಿಕರ ಶುಶ್ರೂಷೆಗೆ ಮುಂದೆ ಮುಂದಾದಾರೆ?

—೦()೦—

ಮಾನವನು ಮಾಂಸಾಹಾರಿಯಲ್ಲ.

ಮಾನವನು ಸ್ವಭಾವಿಕವಾಗಿ ಮಾಂಸಾಹಾರಿಯಲ್ಲವೆಂಬುದು ಸಿದ್ಧಾಂತಗೊಳಿಸಲ್ಪಟ್ಟಿದೆ. ಮಾದಲನೆಯದಾಗಿ ಅವನ ಬಾಹ್ಯ ಶರೀರವೇ ಇದಕ್ಕೆ ಸಾಕ್ಷಿ. ಅವನಿಗೆ ಬಾಗಿದ ಕೊಕ್ಕುಗಳೂ, ಚೂಪಾದ ಬಲವಾದ ನಖಗಳೂ, ಚೂಪಾದ ಹಲ್ಲುಗಳೂ ಇರುವುದಿಲ್ಲ. ಸದಾ ಹಸಿವೆಯಿಂದ ಬಾಧಿಸಲ್ಪಡುವ ಹೊಟ್ಟೆಯಾಗಲಿ, ಗಟ್ಟಿಯಾದ ಮಾಂಸವನ್ನು ಮೃದುಮಾಡಿ ಅದನ್ನು ಜೀರ್ಣಿಸಿಕೊಳ್ಳುವಂತೆ ಮಾಡುವ ಅನುಕೂಲವಾದ ಬಿಸಿ ರಕ್ತವೂ ಅವನಿಗಿಲ್ಲ. ಸೋಲೆ ಮೇಳಿದವುಗಳ ಸ್ಥಾನದಲ್ಲಿ ಅವನಿಗಿರುವುದು ನಯವಾದ ಹಲ್ಲುಗಳು, ಸಣ್ಣ ಬಾಯಿ, ಮೃದುವಾದ ನಾಲಿಗೆ ಮತ್ತು ನಿಧಾನವಾಗಿ ಜೀರ್ಣಿಸಲು ಅನುಕೂಲವಾದ ಜೀರ್ಣಾಂಗಗಳು. ಈ ರೀತಿಯ ಅಂಗಗಳನ್ನು ಕೊಟ್ಟು ಪ್ರಕೃತಿಯು ಮಾನವನನ್ನು ಮಾಂಸವನ್ನು ಭುಂಜಿಸದ ಹಾಗೆ ತಡೆಗಟ್ಟಿದೆ.

ಈಗ ಮನುಷ್ಯರು ಮಾಂಸವನ್ನು ಪ್ರಕೃತಿಯ ನೀತಿಗೆ ವಿರುದ್ಧವಾಗಿ ತಿನ್ನುತ್ತಾರೆ. ಇತ್ತೀಚೆಗೆ ವನಸ್ಪತಿಗಳನ್ನು ತಿನ್ನುವವರು ಹೆಚ್ಚು ಶಕ್ತಿಯುಕ್ತರಾಗಿಯೂ ಆರೋಗ್ಯವಂತರಾಗಿಯೂ ಬಾಳುತ್ತಾರೆಂಬುದನ್ನು ಶಾಸ್ತ್ರಜ್ಞರು ಶೋಧಗಳನ್ನು ನಡೆಸಿ ಕಂಡು ಹಿಡಿದಿದ್ದಾರೆ. ಆದ್ದರಿಂದ ಮಾನವನು ಇತರ ಪ್ರಾಣಿಗಳನ್ನು ಕೊಂದು ತಿಂದು ತಾನು ಬದುಕುವುದು ಸರಿಯಲ್ಲವೆಂಬ ಅಭಿಪ್ರಾಯವನ್ನು ಮೇಲಿನ ವಿಷಯವು ಸ್ಪಷ್ಟೀಕರಿಸುತ್ತದಲ್ಲವೆ?

—೦()೦—

ಚಿರಬಾಳಿಕೆಯ ಚಿನ್ನದ ಬಟ್ಟೆ.

ರೇಶ್ಮೆ ವಸ್ತ್ರಗಳಿಗೆ ಬಂಗಾರದ ಮುಲಾಮನ್ನು ಹಚ್ಚುವ ಒಂದು ನೂತನ ವಿಧಾನವನ್ನು ಪ್ರೊಫೆಸರ್ ಚಾರ್ಲ್ಸ್ ಎಸ್. ಗಿಬ್ಬನ್ಸ್ ಎಂಬವರು ಕಂಡು ಹಿಡಿದಿರುವರು. ಇಂತಹ ವಸ್ತ್ರದ ಗಜ ಒಂದಕ್ಕೆ 10 ಶಿಲ್ಲಿಂಗು ಬೆಲೆಯಾಗಬೇಕೆಂದು ಅಂದಾಜು ಮಾಡಲಾಗಿದೆ.

ವಸ್ತ್ರಗಳಿಗೆ ಬಣ್ಣ ಕೊಡುವ ವಿಧಾನದಂತೆಯೇ ಈ ವಸ್ತ್ರಗಳ ತಯಾರಿಯ ಕ್ರಮವಂತೆ. ಇಂತಹ ವಸ್ತ್ರದ ಉಡುಪನ್ನು ತೊಟ್ಟುಕೊಂಡು ಬೇಸರಿಕೆ ಆದಾಗ ಅದನ್ನು ಒಂದರಿಗೆ ಕೊಟ್ಟು ಚಿನ್ನವನ್ನು ಮರಳಿ ಪಡೆಯಲು ಬರುತ್ತದಂತೆ. ಇರಲಿ, ವಿಲಾಸಿನಿಯರು ಸ್ವರ್ಣಸುಂದರಿಯರಾಗುವಂತಾಯಿತು!

—೦()೦—

ವಿ ಚಿ ತ್ರ ಕೊ ಲೆ .

ಯಮುನಾ ನದಿಯಲ್ಲಿ ಒಂದು ಕೋಣದ ಶವವು ತೇಲುತ್ತಿತ್ತು. ಅಲ್ಲಿಯ ಕೆಲವು ಜನರು ಅದನ್ನು ದಂಡೆಗೆ ತಂದರು. ಹೀಗೆ ಅದನ್ನು ತಂದು ಪರೀಕ್ಷಿಸಿದಾಗ್ಯೆ ಅದರ ಹೊಟ್ಟೆಯಲ್ಲಿ ಗೋಲಿಗೆಯ ಚಿಹ್ನೆ ಕಾಣಿಸಿತು. ಅದರಿಂದ ಚಕಿತರಾದ ಪ್ರೇಕ್ಷಕರು ಅದರ ಹೊಟ್ಟೆಯನ್ನು ಬಗೆದು ನೋಡಲು ಕಂಡದ್ದಾದರೂ ಏನು? ರುಂಡ ಮುಂಡಗಳು ಬೇರ್ಪಟ್ಟ ಯುವಕನ ಶರೀರ. ಈ ಘೋರಾವಿಷ್ಕಾರಕ್ಕೆ ಏನೆನ್ನ ಬೇಡ? ಆಧುನಿಕ ಯುಗದ ಹೊಸ ಉಪಾಯವೆಂದೆನ್ನೋಣವೇ? ಅಥವ ಕರುಣರಹಿತವಾದ ನಾಗರೀಕತೆಯ ಪರಮಾವಧಿ ಎಂದು ಕರೆಯೋಣವೇ?

—೦()೦—

ವಾಶಿಂಗ್ಟನ್‌ರ ಮೂಢ ನಂಬಿಕೆ.

ಪೆನ್‌ಸಿಲ್ವೇನಿಯಾದ ರೈತರಿಗೆ ಬಕಪಕ್ಷಿಯು ತಮ್ಮ ಮಾಡಿನ ಮೇಲೆ ಗೂಡು ಕಟ್ಟಿದರೆ ಶುಭಕರವೆಂದೆಂಬ ಒಂದು ನಂಬಿಕೆ. ಆದರೆ ಬಕಪಕ್ಷಿಗಳು ಸಾಮಾನ್ಯವಾಗಿ ಗೂಡು ಕಟ್ಟುವುದಿಲ್ಲ ಸೋಮಾರಿಗಳು. ಆದುದರಿಂದ ಮಾಡುಗಳಲ್ಲಿ ಅವು ಗೂಡು ಕಟ್ಟುವದು ಅಪರೂಪವಿತ್ತು. ಆದರೆ ಈಗ ಜರ್ಮನಿಂದ್ ಎಂಬಲ್ಲಿ ಈ ಪಕ್ಷಿಗಳಿಗೆ ಗೂಡುಗಳನ್ನು ತಯಾರಿಸಲಿಕ್ಕಾಗಿಯೇ ಒಂದು ಕಾರ್ಖಾನೆಯನ್ನು ತೆರೆದಿರುವರಂತೆ. ರೈತರು ಇಲ್ಲಿ ತಯಾರಾದ ಗೂಡುಗಳನ್ನು ಕ್ರಯಕ್ಕೆ ಪಡೆದು ತಮ್ಮ ಮಾಡಿನ ಮೇಲಿಡುತ್ತಾರೆ. ಯಾವ ಶ್ರಮವೂ ಇಲ್ಲದೆ ಸೊಗಸಾದ ಗೂಡು ಸಿಗುತ್ತಿರುವದರಿಂದ ಬಕಪಕ್ಷಿಗಳು ಮಾಡಿನಲ್ಲೇ ವಾಸಮಾಡುತ್ತಿವೆ. ಇದರಿಂದಾಗಿ ತಮಗೆ ಶುಭವೆಂದು ರೈತರ ನಂಬಿಕೆ. ಅಂತು ಇದು ಲಾಭದಾಯಕವೆಂದೇ ಹೇಳಬಹುದು. ಅನೇಕ ನಿರುದ್ಯೋಗಿಗಳಿಗೆ ಕಾರ್ಖಾನೆಯಲ್ಲಿ ಕೆಲಸ ಸಿಕ್ಕಿರಬಹುದು.

—೦()೦—

ಮೀನು ಹಿಡಿಯಲು ಸುಲಭೋಪಾಯ.

ಸ್ವೀಜ್‌ಲೆಂಡಿನಲ್ಲಿ ಒಬ್ಬ ಬೆಸ್ತನು ಮೀನನ್ನು ಹಿಡಿಯಲು ಒಂದು ಹೊಸ ವಿಧಾನವನ್ನು ಕಂಡು ಹಿಡಿದಿದ್ದಾನೆ. ಯಿಪ್ಟನ್ ಎಂಬ ಗಿಡದ ಬೇರುಗಳನ್ನು ತೆಗೆದು ಜಜ್ಜಿ ಮೀನಿರುವ ಹೊಳೆ ಅಥವ ಕೆರೆಗೆ ಹಾಕಿದರೆ ಸರಿ. ಮೀನುಗಳು ಅದರಿಂದ ಆಕರ್ಷಿಸಲ್ಪಡುವವು. ಹೀಗೆ ಮೀನುಗಳೆಲ್ಲಾ ಅದರ ಸುತ್ತು ಮುಂಕು ಹಿಡಿದು ಸ್ತಬ್ಧವಾಗಿರುವಾಗ ಬೆಸ್ತನು ಸುಲಭವಾಗಿ ಅವುಗಳನ್ನು ಹಿಡಿದುಕೊಳ್ಳುವನು. ಅಂತೂ ಮರಣ ಪ್ರಯೋಗವೇ ಮೊದಲಾದ ಹಿಂಸಾಕಾರ್ಯದ ಸಾಧನಗಳನ್ನು ಸಾಧಿಸುವವರಲ್ಲಿ ಇತರ ದೇಶದವರು ನಿಸ್ಸೀಮರೆನ್ನಲಡ್ಡಿಯಿದೆಯೇ?

—೦()೦—

ದೇವರ ಮೇಲೆ ಮಾನವನ ನಿರಂಕುಶ ವರ್ತನೆಯೋ?

ರಷ್ಯಾವು ಇಂದು ಆಧುನಿಕ ನಾಗರೀಕತೆಯ ತುತ್ತತುದಿಗೇರಿದೆ. ಮೋಸ್ಕೋದಲ್ಲಿ ಕೊನೆಯದಾಗಿ ಉಳಿದಿದ್ದ ಒಂದೇ ಒಂದು ಇಗರ್ಜಿಯಾದ 'ಸೈಂಟ್ ಪೀಟರ್' ಎಂಬುದನ್ನು ಇದೀಗ ರಾಜಕೀಯ ಕೈದಿಗಳನ್ನಿಡಲು ಸರಕಾರದವರು ವಹಿಸಿಕೊಂಡಿರುವರು. ಈಗ ರಷ್ಯಾದಲ್ಲಿ ಯಾವದೊಂದು ದೇವಸ್ಥಾನ ಯಾ, ಇಗರ್ಜಿಗಳಿಲ್ಲ. ದೇವರಿಗ ರಷ್ಯಾದಲ್ಲಿ ಜಾಗವೇ ಇಲ್ಲದಾಗಿದೆ. ಮಾಸ್ಕೋದಲ್ಲಿ ಒಬ್ಬನೇ ಒಬ್ಬ ಪಾದರಿಯು ದೊರಗಿಲ್ಲ. ಎಲ್ಲರೂ ತುರಂಗವಾಸವನ್ನನುಭವಿಸುತ್ತಿದ್ದಾರೆ. ಅಂತು ದೈವಭಕ್ತಿಯ ಸುಳಿವೇ ಇಲ್ಲದಾಗಿ ರಷ್ಯಾವು ಇಂದು ಶೋಭಿಸುತ್ತದೆ. ಇದು ನವೀನ ನಾಗರೀಕತೆಯ ಪರಮಾವಧಿಯಲ್ಲವೇ? ಇಂಥಾ ನಾಗರೀಕತೆಯ ಮೋಹ ಜಾಲಕ್ಕೆ ಮರುಳಾಗಿ ಕುಣಿಯುವದು ಹೇಯವಲ್ಲವೇ? ಭಾರತೀಯರೆ! ಎಚ್ಚರಿಕೆ!!

—೦()೦—

ಕುರುಡರು ಹೆದರಲಗತ್ಯವಿಲ್ಲ.

ಅಮೇರಿಕೆಯು 250 ಸಾವಿರ ಕುರುಡರನ್ನು, ಕಣ್ಣಿರುವವರನ್ನಾಗಿ ಮಾಡುವ ಯೋಜನೆಗೆ, ಅಲ್ಲಿನ ವಿಜ್ಞಾನಿಗಳೂ, ಡಾಕ್ಟರರೂ ಮುಂದಾಗಿದ್ದಾರೆ. ಸತ್ತ 24 ತಾಸಿನೊಳಗೆ, ಸತ್ತವರ 'ಕೋರ್ನಿಯಾ' ಎಂಬ ಕಣ್ಣಿನ ಒಂದು ಭಾಗವನ್ನು ತೆಗೆದು, ಕಣ್ಣಿಲ್ಲದವನ ಕಣ್ಣಿಗೆ ಹೊಂದಿಸಿ, ಹೊಲಿದು ಬಿಟ್ಟರೆ ಸರಿ! ಕುರುಡನ ದೃಷ್ಟಿ ಸರಿಯಾಗುವುದಂತೆ. ಹಲ ಕೆಲವು ಇಂತಹ ಓಪರೇಶನ್‌ಗಳು, ಫಲಕಾರಿಯಾಗಿ ಕಂಡು ಬಂದುದರಿಂದ, ಈಗ ಲಕ್ಷ ಗಟ್ಟಲೆ ಮಂದಿಯ ಮೇಲೆ, ಶಸ್ತ್ರಚಿಕಿತ್ಸೆ ಮಾಡುವ ಯೋಜನೆ! ಈ ಯೋಜನೆಯು ಆಶ್ಚರ್ಯಕರವಾದದ್ದೇ ಸರಿ. ಶ್ರೀಕೃಷ್ಣನು ಕೌರವರಲ್ಲಿ ಸಂಧಾನ ಮಾಡಲು ಹೋಗಿದ್ದಾಗ ತನ್ನ ವಿಶ್ವರೂಪವನ್ನು ನೋಡಲು ಧೃತರಾಷ್ಟ್ರನಿಗೆ ಕಣ್ಣು ದಯಪಾಲಿಸಿದ್ದ. ಆದರೆ ಇಂದಿನ ಆಧುನಿಕ ನಾಗರೀಕತೆಯಲ್ಲಿ ಕಣ್ಣಿನ ಕೃಷಿಯೇ ನಡೆದಿರುವದೆಂದರೆ ಪ್ರಪಂಚದ ಮಟ್ಟ ಎಲ್ಲಿಗೆ ತಲಪಿದೆ ನೋಡಿ!

—೦()೦—

ಹಳ್ಳಿಗಳಲ್ಲಿ ಜನಜಾಗ್ರತಿಯಾಗಬೇಕು.

ಅಂದೇ

ಬಡತನದ ಪರಿಹಾರ, ಜನತೆಯ ಉದ್ಧಾರ.

ಭಾರತಕ್ಕೆ ಶ್ರೇಯಸ್ಕರ, ನಿರಂಕುಶ ಪ್ರಭುತ್ವಕ್ಕೆ ಸಂಚಕಾರ.

ಭಾರತವು ಕೃಷಿಕರ ಭೂಮಿ. ಭಾರತದ ಜನರು ಹೆಚ್ಚಾಗಿ ಹಳ್ಳಿಗಳಲ್ಲಿಯೇ ವಾಸವಾಗಿರುವರು. ಆದ್ದರಿಂದ ಭಾರತದ ಭವಿಷ್ಯ, ಆಶೆ ಭರವಸೆಗಳು ಹಳ್ಳಿಗರ ಕೈಯಲ್ಲಿಯೆಂದು ಧಾರಾಳವಾಗಿ ಹೇಳಬಹುದು. ಹಳ್ಳಿವಾಸಿಗಳು ಸುಶಿಕ್ಷಿತರಾದರೇನೇ ದೇಶದ ಕಲ್ಯಾಣವಾಗುವುದು. ಹಳ್ಳಿಗಳಲ್ಲಿ ಯಥೇಚ್ಛ ಕಾರ್ಯಗಳು ಜರಗಬೇಕು. ಹಳ್ಳಿಗರ ಜೀವನಾಕ್ರಮವು ಪಲ್ಲಟವಾಗಬೇಕು. ಹಳ್ಳಿಗಳು ದೇಶದ ಜೀವಾಳವಾಗಿರುವುವು. ಆದ್ದರಿಂದಲೇ ಇಂದು ಸ್ವಾತಂತ್ರ್ಯಕ್ಕಾಗಿ ಕಾದುವ ಕಾದಾಳುಗಳ ಲಕ್ಷ್ಯವು ಹಳ್ಳಿಯ ಕಡೆಗೆ ತಿರುಗಿದೆ. ಎಲ್ಲಿ ನೋಡಿದರೂ 'ಹಳ್ಳಿಯ ಕಡೆಗೆ ತಿರುಗಿ' ಎಂಬ ವಾಣಿಯು ಕೇಳಬರುತ್ತಿರುವದಾದರೂ ಇದರ ಪರಿಣಾಮ ಕಾಣಿಯೇ! ಆದರೆ ಹಳ್ಳಿಗಳಲ್ಲಿ ಜನಜಾಗ್ರತಿ ಹೇಗಾಗಬೇಕೆಂಬುದು ಒಂದು ದೊಡ್ಡ ಸಮಸ್ಯೆಯಾಗಿದೆ.

ಆಧುನಿಕ ಶಿಕ್ಷಣಕ್ರಮವನ್ನನುಸರಿಸಿ ಈಗ ಕೊಡಲ್ಪಡುತ್ತಿರುವ ಶಿಕ್ಷಣವು ಪ್ರಾಣಹೀನವಾಗಿದೆ. ಅದರೊಂದಿಗೆ ಅದು ಬಹು ಖರ್ಚಿನದ್ದಾಗಿರುವದರಿಂದ ಅದನ್ನು ಪಡೆಯುವುದು ಸಹಾ ಅಸಾಧ್ಯವೆನಿಸಿದೆ. ಶಾಲಾ ಫೀಸು ಮತ್ತು ಪುಸ್ತಕಾದಿಗಳಿಗೆ ಹಣ ಕೊಟ್ಟು ಬಿವಾಳಿಯಾದ ಕುಟುಂಬಗಳನ್ನು ನೋಡದಿರುವವರು ವಿರಳ. ಇಷ್ಟಾಗಿ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಉತ್ತೀರ್ಣರಾದರೂ ಅವರು ಬಟ್ಟ ಭಂಡಾರವಾಗುವರಲ್ಲದೆ ಫ್ಯಾಶನ್‌ವಾಸರಾಗಿ, ಡಾಂಬಿಕತನ ಮತ್ತು ಸ್ವಾರ್ಥತೆಯಲ್ಲಿ ಮುಳುಗಿ ಹೋಗುವರೇ ವಿನಹ ಅವರಿಂದ ಬೇರೇನೂ ಸಾಧ್ಯವಾಗಲಾರದು. ವಿಶ್ವವಿದ್ಯಾಲಯಗಳ ದೊಡ್ಡ ದೊಡ್ಡ ಡಿಗ್ರಿಗಳನ್ನು ಪಡೆದುಕೊಂಡರೂ ತಮ್ಮ ಜೀವನೋದ್ದೇಶವನ್ನು ನಿರ್ಣಯಿಸಿಕೊಳ್ಳಲಿಕ್ಕೆ ಅಸಮರ್ಥರಾಗುವರು. ಆದ್ದರಿಂದಲೇ ಇಂದು ಅನೇಕಾನೇಕ ಪದವೀಧರರು ನಿರುದ್ಯೋಗಿಗಳಾಗಿ ಕಷ್ಟಪರಂಪರೆಗಳಿಗೆ ಬಲಿಯಾಗುತ್ತಿದ್ದಾರೆ. ಇದು ಅವರ ತಪ್ಪೇನು? ಖಂಡಿತಾ ಅಲ್ಲ. ಇದು ಕಲಿಸಲ್ಪಡುತ್ತಿರುವ ವಿದ್ಯೆಯ ನ್ಯೂನತೆ. ಆದ ಪ್ರಯುಕ್ತವೇ ರಾಜಕೀಯ ಮುಖಂಡರು ಇಂದಿನ ವಿದ್ಯೆಯು ಸಮರ್ಪಕವಾಗಿಲ್ಲವೆಂದು ಸಾರಿ ಹೇಳಿದ್ದಲ್ಲದೆ, ನವೀನ ವ್ಯಾಸಂಗ ಕ್ರಮ ಒಂದನ್ನು ರಚಿಸಿರುವರು.

ಹಳ್ಳಿಗಳಲ್ಲಿ ವಿದ್ಯಾ ಪ್ರಸಾರವು ನಡೆಯಬೇಕು. ಪ್ರಾಥಮಿಕ ಶಿಕ್ಷಣ ಕ್ರಮದಲ್ಲಿ ಸುಧಾರಣೆಗಳಾಗಬೇಕು. ಜೀವನ ಸಮಸ್ಯೆಯನ್ನು ಬಿಡಿಸುವ ಉಪಾಯವನ್ನು ಅದು ಕಲಿಸಿಕೊಡಬೇಕು. ಪುಸ್ತಕೀಯ ಶಿಕ್ಷಣದ ಬದಲು ವೃತ್ತಿಶಿಕ್ಷಣಾಕ್ರಮವು ನಡೆಯಬೇಕು. ಕಲಿಸಿದ್ದು ಸ್ಥಾಯಿಯಾಗಿ ಉಳಿಯುವಂತೆ ಶಿಕ್ಷಣವನ್ನು ಕೊಡಬೇಕು. ಭಾರತವು ಕೃಷಿಕರ ದೇಶವಾದ್ದರಿಂದ ಇಲ್ಲಿ ಕೃಷಿ ಶಿಕ್ಷಣವು ಅತ್ಯಾವಶ್ಯಕ. ಕೃಷಿ ಶಿಕ್ಷಣವು ಸಾಂಗವಾಗಿ ಪ್ರತಿ ಹಳ್ಳಿಗನಿಗೂ ದೊರೆತರೆ ಜೀವನ ಸಾಫಲ್ಯವನ್ನು ನಮ್ಮ ಕೈಮುಷ್ಟಿಯೊಳಗಿಟ್ಟಂತಾಗುವುದು. ಗ್ರಾಮ ಜೀವನವು ಸುಖಮಯವಾದದ್ದೆಂದು ಪ್ರತಿಯೊಬ್ಬನ ಚಿತ್ತಭಿತ್ತಿಯಲ್ಲಿ ಕೆತ್ತಲ್ಪಡಬೇಕು.

ಹೈಸ್ಕೂಲ್ ವಿದ್ಯಾಭ್ಯಾಸವೂ ಮಾರ್ಪಡಬೇಕು. ಇಂದಿನ ಹೈಸ್ಕೂಲ್ ವಿದ್ಯಾಭ್ಯಾಸವು ನಮ್ಮನ್ನು ಸುಧಾರಿಸುವದರ ಬದಲು ಹಾಳುಮಾಡುತ್ತಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಇಂದಿನ ಹೈಸ್ಕೂಲ್ ವಿದ್ಯಾಭ್ಯಾಸವು ಲೋಪದೋಷಗಳಿಂದ ಪರಿಪೂರ್ಣವಾಗಿದೆ. ಈ ಶಿಕ್ಷಣವನ್ನು ಪಡೆದ ವಿದ್ಯಾರ್ಥಿಯು ತನ್ನ ವರಿಜ್ಞಾನವನ್ನು ದೊಡ್ಡ ಅಂತಸ್ತಿನಿಂದ ಆಳಿಯುವವನಾದರೂ ಸ್ವಾಭಾವಿಕವಾಗಿ ಅವನ ಪ್ರಯೋಜನವು ಬಹಳ ಕಡಿಮೆ ಇರುತ್ತದೆ. ಇಂದಿನ ಬಾಲಕರೇ ಮುಂದಿನ ಜನಾಂಗವಾದಪ್ರಯುಕ್ತ ದೇಶೋನ್ನತಿಗಾಗಿ ಪ್ರಯತ್ನಿಸುವ ಮನವನ್ನು ಇಂದಿನ ಮಕ್ಕಳ ಶಿಕ್ಷಣದಲ್ಲಿ ನಿಗದಿಪಡಿಸಬೇಕು. ಪ್ರತಿಯೊಬ್ಬ ಹೈಸ್ಕೂಲ್ ವಿದ್ಯಾರ್ಥಿಯಲ್ಲಿಯೂ, ಗ್ರಾಮೋನ್ನತಿಗೆ ಹಾಗೂ ಸಮಾಜಾಭಿವೃದ್ಧಿಗೆ ಸೇವೆ ಮಾಡುವುದು ಆದ್ಯ ಕರ್ತವ್ಯವೆಂಬ ಭಾವನೆಯು ಹುಟ್ಟಬೇಕು. ಆಗ ಮಾತ್ರ ಹಳ್ಳಿಯ ಹಾಗೂ ರಾಷ್ಟ್ರದ ಉದ್ಧಾರವಾದಂತಾಯಿತು.

ಭಾರತದ ಸಭ್ಯತೆ, ಸಂಸ್ಕೃತಿಗಳು ಬಹು ಪ್ರಾಚೀನವಾದವುಗಳು. ಅವುಗಳ ಆರಂಭವು ಹಳ್ಳಿಗಳಿಂದಲೇ ಆಗಿದ್ದರೂ ಈಗಿನ ಹಳ್ಳಿಗಳ ವಿಪನ್ನಾವಸ್ಥೆಯು ಹೃದಯ ದ್ರಾವಕವಿರುವುದು. ಹಳ್ಳಿಗರಿಗೆ ರಾಜಕೀಯ, ನೈತಿಕ, ಧಾರ್ಮಿಕ ಮತ್ತು ಸಾಮಾಜಿಕ ಶಿಕ್ಷಣವು ದೊರೆಯಬೇಕು. ಶಾರೀರಕ, ಮಾನಸಿಕ ಮತ್ತು ಆತ್ಮೀಕ ರೀಗೆ ಪ್ರತಿಯೊಂದರಲ್ಲಿಯೂ ಅವನತಿಯುಂಟಾಗಿರುವುದರಿಂದ ಅವರು ಕಷ್ಟಪರಂಪರೆಗೆ ಸಿಲುಕಿದ್ದಾರೆ. ಅದ್ದರಿಂದ ಭಾರತವು ಸ್ವತಂತ್ರನಾಗಿ ತನ್ನ ಕಾಲಿನ ಮೇಲೆ ತಾನು ನಿಲ್ಲುವಂತಾಗಬೇಕಾದರೆ ಜನ ಮುಖಂಡರು ಹಳ್ಳಿಹಳ್ಳಿಗಳ ಸ್ಥಿತಿಗತಿಗಳನ್ನು ಸುಧಾರಿಸಲಿಕ್ಕೆ ಬಹು ವಿಧ ಪ್ರಯತ್ನಪಡಬೇಕು.

ಕಳೆದ ಎರಡು ಶತಮಾನಗಳಿಂದ ಬ್ರಿಟಿಷರು ಇಂಡಿಯಾವನ್ನು ಭದ್ರಮುಷ್ಟಿಯಿಂದ ಆಳುತ್ತಿರುವರಾದರೂ ಹಳ್ಳಿಗಳ ಸ್ಥಿತಿಯು ಸುಧಾರಿಸಲ್ಪಡಲಿಲ್ಲ. ತತ್ಪರಿಣಾಮವಾಗಿ ಇಂದು ಹಳ್ಳಿ ಜೀವನವೆಂದರೆ ಅಲ್ಪವಾಗಿ ಎಣಿಸಲ್ಪಡುತ್ತಿದೆ. ಆದುದರಿಂದ ಹಳ್ಳಿಯ ಜೀವನದ ಮನೋಹರತೆಯನ್ನು ಮನದಟ್ಟು ಪಡಿಸಬೇಕು. ಅತರಳ ಹೃದಯದ ಹಳ್ಳಿಗರು ಪ್ರಾಚೀನ ಋಷಿಮುನಿಗಳಂತೆ, ಕರ್ಮಯೋಗಿಗಳಂತೆ, ಸುಖ ದುಃಖ, ಆರಾಮ ಕಷ್ಟ ಯಾದವಕ್ಕೂ ಮನಕೊಡದೆ ತಮ್ಮ ಕಾರ್ಯಗಳಲ್ಲಿ ನಿರತರಾಗುವದನ್ನು ಕಂಡು ಯಾರ ಹೃದಯವು ತಾನೇ ಉಲ್ಲಸಿತವಾಗುವದಿಲ್ಲ? ವಿದೇಶೀಯರ ದೃಷ್ಟಿಯಿಂದ ಹಳ್ಳಿ ಜೀವನವು ಅಯೋಗ್ಯವಾಗಿ ಕಾಣಬಹುದು. ಆದರೆ ನಾವು ಭಾರತೀಯರು, ನಮ್ಮ ಸ್ಥಿತಿಗತಿಗಳನ್ನು ನಾವು ಆಲೋಚಿಸಬೇಕು. ಗ್ರಾಮವಾಸಿಗಳನ್ನು ಸಬಲರೂ, ಸುಶಿಕ್ಷಿತರೂ ಆದ ಪಟ್ಟಣವಾಸಿಗಳು ಅಲಕ್ಷಿಸಿ, ತಿರಸ್ಕರಿಸಿ ದೂರವಿರಿಸಿದ್ದಾರೆ. ಇದರಿಂದ ಭಾರತದ ಅಭಿವೃದ್ಧಿಯು ಆಗಲಾರದೆಂದು ಪ್ರತಿಯೊಬ್ಬ ನಾಗರೀಕನೂ ತಿಳಿಯಬೇಕು. **ಹಳ್ಳಿಗಳ ಉದ್ಧಾರವೇ ರಾಷ್ಟ್ರದ ಮೇಲ್ಮೆ. ಆದ್ದರಿಂದ ಇಂದು ಭಾರತದ ಉದ್ಧಾರವಾಗಬೇಕಾದರೆ ಹಳ್ಳಿಗಳೇ ಉಗಮಸ್ಥಾನಗಳೆಂಬುದರಲ್ಲಿ ಸಂದೇಹವೇನು?**

ಕಾಂಗ್ರೆಸಿನ ಶುದ್ಧೀ ಸಂಸ್ಕಾರ.

ಮಹಾತ್ಮರ ಸಂತಾಪಪೂರ್ಣ ಸೂಚನೆ.

ನಾನು ನಿಮ್ಮ ಆಳು; ನಿಮ್ಮ ಅನುಭವಪೂರ್ಣ ಮುಂದಾಳು. ಸತ್ಯಶೂನ್ಯವಹಾರದಿಂದ ಕಾಂಗ್ರೆಸು ಕೆಡುತ್ತಿದೆ ಎಂದು ತಿಳಿದಿರುವೆನು. ಚುನಾವಣೆಗಳಲ್ಲಿ ಹಿಂಸೆ ತೋರುತ್ತದೆ. ಕಾಂಗ್ರೆಸಿಗೆ ಸಿಕ್ಕಿರುವ ಅಧಿಕಾರವನ್ನು ಜೀರ್ಣಿಸಿಕೊಂಡು ಪೋಷಣೆ ಹೊಂದಲು ನಿಮಗೆ ತಿಳಿದಿಲ್ಲವಾಗಿ ಊಹಿಸಿರುವೆನು. ಪ್ರತಿಯೊಬ್ಬರೂ ಅಧಿಕಾರದ ಸವಿಯನ್ನುಣ್ಣಬೇಕಾಗಿ ಚಡಪಡಿಸುವಂತಿದೆ. ಕಮಿಟಿಗಳಲ್ಲಿ ಸೇರಲು ನಾನಾ ವಿಧಾನಗಳಿಂದ ಸ್ಪರ್ಧೆ ಮಾಡುತ್ತಿರುವುದು ಸೊಗಸಲ್ಲ.

ಸ್ವರಾಜ್ಯವನ್ನು ಗಳಿಸಿಕೊಳ್ಳುವ ಉಪಾಯವು ಇದಲ್ಲ; ಅಧಿಕಾರ ಸ್ವೀಕಾರದ ಕಾರ್ಯಕ್ರಮವೂ ಇದಲ್ಲ. ಸೇವೆಗಾಗಿ ಮಾತ್ರ ಅಧಿಕಾರ ಸ್ವೀಕಾರ. ಸ್ವತೀಯ ಲಾಭಕಲ್ಲ. ಸಾಮಾನ್ಯ ಜೀವನದಲ್ಲಿ 25 ರೂಪಾಯಿಗಳಲ್ಲಿ ತೃಪ್ತಿಹೊಂದಿರತಕ್ಕವನು ಮಂತ್ರಿಯಾದ ಕೂಡಲೇ 250 ರೂಪಾಯಿಗಳನ್ನು ನಿರೀಕ್ಷಿಸುವುದೂ ಅಥವಾ ಇತರ ಸರಕಾರಿ ಹುದ್ದೆಗಾಗಿ ಹಾತೊರೆವುದೂ ಸರಿಯಲ್ಲ. ಎಷ್ಟೋ ವ್ಯವಸ್ಥಿತ ಖಾಸಗಿ ಸಂಸ್ಥೆಗಳಲ್ಲಿ ೭೦ ರೂಪಾಯಿ ಪಡೆದು ಗೌರವಾರ್ಹ ಸೇವೆ ಮಾಡುತ್ತಿರುವವರು ಮಂತ್ರಿಗಳಾಗಿಯೂ ಸೇವೆ ಮಾಡಲು ಯೋಗ್ಯರಾಗಿಯೇ ಇದ್ದಾರೆ.

ಅಲ್ಪ ಸಂಬಳಕ್ಕಾಗಿ ಬಂಗಾಳ ಮಹಾರಾಷ್ಟ್ರಗಳಲ್ಲಿ ದೇಶಸೇವಾನಿರತರಾಗಿರುವವರೆಷ್ಟೋ ಮಂದಿ ಮಹನೀಯರಿರುವರು. ಅವರು ತಮ್ಮ ಗೌರವ ಕಾರ್ಯಗಳನ್ನು ಮಾಡುತ್ತಿರಲಿ. ಆದ ಅವರ ಮಜ್ಜೆನದು. ಅತ್ಯುತ್ತಮರು ದೆಟ್ಟದ ಮಟ್ಟಿಗೆ ಮಂತ್ರಿಗಳೇ ಇತ್ಯಾದಿ ಹುದ್ದೆಗಳನ್ನು ಅಪೇಕ್ಷಿಸುವುದಿಲ್ಲ. ಹಾಗೆಂದು ಅವರು ಸ್ವಾರ್ಥರಹಿತರಾಗಿ ಲಂಚಕ್ಕೊಳಪಡದೆ ಇರುವರಾದರೆ ಮಾತ್ರ ಸ್ವರಾಜ್ಯವು ಸಾಧ್ಯವಾಗಿದೆ. ಕಾಂಗ್ರೆಸು ಕಮಿಟಿಗಳಲ್ಲಿ ಜಟ್ಟೆಕಾಳಗ ನಡೆಯುತ್ತ ಅತಿ ಹಿಂಸಾಪರರೇ ಗೆಲ್ಲುವಂತಾದರೆ ಉತ್ತಮ ಮಂತ್ರಿಗಳಾದರೂ ನಮಗೆ ಎಲ್ಲಿಂದ ತಾನೆ ದೊರೆಯಬಹುದು?

ಕಾಂಗ್ರೆಸು ಕುಂಬಾ ನಿರ್ಮಲವಾಗಿರಬೇಕು. ನಾಲ್ಕಾಣೆ ಕೊಟ್ಟು ಕಾಂಗ್ರೆಸಿನ ತತ್ವಗಳಂತೆ ನಡೆಯಲು ಪ್ರಾಗ್ದಾನ ಮಾಡಿದವನು ಸದಸ್ಯನಾಗುವನು. ಸ್ವರಾಜ್ಯಸಿಗಬೇಕಾದರೆ ಸತ್ಯವನ್ನೂ, ಅಹಿಂಸೆಯನ್ನೂ ಖಂಡಿತವಾಗಿ ಮೂಲ ತತ್ವಗಳೆಂದು ಗ್ರಹಿಸಬೇಕೆಂದು ತಿಳಿಯದೆ ಹೇಗೆ ಸದಸ್ಯರಾಗುವದಲ್ಲಿ ಪ್ರಯೋಜನವೇನಿದೆ? ಸತ್ಯ ಮತ್ತು ಅಹಿಂಸೆ ಎಂದರೆ ನ್ಯಾಯ ಮತ್ತು ಶಾಂತಿ ಎಂಬರ್ಥವಿದೆ. ಈ ಮಾತುಗಳಲ್ಲ ಇತರ ಅರ್ಥವೇನೂ ಬರಲಾರದು.

ಮಹಾತ್ಮ

ಅಸತ್ಯವಾದುದು ನ್ಯಾಯವೆನಿಸದು; ಹಿಂಸಾತುರತೆ ಶಾಂತಿ ಎನಿಸದು. ಇವೆರಡು ಗುಣಗಳಿಲ್ಲದವರಿಗೆ ಕಾಂಗ್ರೆಸಿನಲ್ಲಿ ಎಡೆ ಸಿಗಲಾರದು.

ಪ್ರತಿನಿತ್ಯವೂ ಖಾದಿ ಉಡದವರು ಕಾಂಗ್ರೆಸ್ ಕಮಿಟಿಗಳಲ್ಲಿರಕೂಡದು. ವರ್ಕಿಂಗ್ ಕಮಿಟಿಯ ನಿರ್ಣಯಗಳನ್ನು ಜಾರಿಗೆ ತರದವರಿಗೆ ಇದು ಅನ್ವಯಿಸುತ್ತದೆ.

ಈ ಮೂಲ ಶರತುಗಳಿಗೆ ವಿರುದ್ಧರಾದವರು ಆಗಲೇ ಕಾಂಗ್ರೆಸ್ ಸದಸ್ಯತೆಯಿಂದ ಮುಕ್ತರಾಗಬೇಕು. ಇದು ದಂಡನೆಯಲ್ಲ, ಇದು ಯಥಾರ್ಥ ಪರಿಣಾಮ; ಸ್ವಾಭಾವಿಕ ಫಲ ಹೊರತು ಯಾವನೊಬ್ಬನು ಹೊರಿಸುವ ದಂಡನೆಯಲ್ಲ.

ಹೀಗೆಲ್ಲಾ ಶರ್ತುಗಳಾದಲ್ಲಿ ಪ್ರಜಾಪ್ರಭುತ್ವ ಎಲ್ಲಿದೆ ಎನ್ನಬಹುದು. ನಮ್ಮಲ್ಲಿನ ಪ್ರಜಾಪ್ರಭುತ್ವದ ರೀತಿಯೂ, ತತ್ವವೂ ಪಾಶ್ಚಾತ್ಯರಲ್ಲಿನದಂತಹದಲ್ಲ. ಎಲ್ಲಾ ಹಿಂಸೆಯ ಕಾರಣಗಳೂ, ಭಾವನೆಗಳೂ ಅಳಿದು ಹೋದರೆ ಕಳ್ಳಾಟಿಕೆಯು ಕೃತಿಗಳು ಮುಗಿದರೆ ಆಗ ಮಾತ್ರ ನಮ್ಮಲ್ಲಿ ಯೋಗ್ಯ ರೀತಿಯ ಪ್ರಜಾಪ್ರಭುತ್ವ ಉಂಟಾಗಲು ಅವಕಾಶವಿದೆ.

ರಿಜಿಸ್ಟರಾದ ಹತ್ತು ಮಿಲಿಯ ಸದಸ್ಯರಲ್ಲಿ ಹಿಂಸೆ, ಅಸತ್ಯ ಇನ್ನೂ ಇದ್ದರೆ ಅಲ್ಲಿಗೆ ಸ್ವರಾಜ್ಯ ದೊರೆಯುವ ಆಸೆಯೇ ಬೇಡ. ಹತ್ತು ಸಾವಿರವೇ ಸದಸ್ಯರಿದ್ದರೂ

ಸತ್ಯ ಅಹಿಂಸಾಭರಿತರಾದರೆ ಸ್ವರಾಜ್ಯವು ನಿಶ್ಚಿತ; ಇವರ ಜೊತೆಯಲ್ಲಿ ಅರ್ಧಸುರ್ಧ ಇತರ ಸದಸ್ಯರಿರಬಾರದು.

ಇದು ವರೆಗೆ ಕಾಂಗ್ರೆಸು ತ್ಯಾಗ ಸ್ಥೈರ್ಯ ಸಹನೆ ಒಕ್ಕಟ್ಟು ಶಿಸ್ತುಗಳನ್ನು ಪರಿಪಾಲಿಸಿ ಜಗತ್ತನ್ನು ಬೆರಗು ಮಾಡಿದೆ. ಇದಕ್ಕಿಂತ ಹೆಚ್ಚಾಗಿ ಈ ಗುಣಗಳನ್ನು ನಾವು ಪ್ರದರ್ಶಿಸದೆ ಹೋದರೆ ಇನ್ನು ಕೆಲವರ್ಷಗಳಲ್ಲಿ ನಾವು ಸ್ವರಾಜ್ಯ ಹೊಂದಬಾರದು.

ಪ್ರತಿಯೊಬ್ಬನಲ್ಲಿ ಈ ಸದ್ಗುಣಗಳಿದ್ದಲ್ಲಿ ಅತೀ ತ್ವರೆಯಾಗಿ ನಮಗೆ ಸ್ವರಾಜ್ಯ ಸಿಗುವುದು.

ನಮಗೆ ಸ್ವರಾಜ್ಯ ಸಿಗುವಂತಾಗಲೆಂದು ಬ್ರಿಟಿಷರಿಗೆ ಬಾಳೆಲೆಸಕೂಡದು. ಅಹಿಂಸಾತ್ಮಕ ಯುದ್ಧದಲ್ಲಿ ಮಗೆಗೂ ಬಾಳೆಲೆಸಬಾರದು. ತನ್ನ ಬಲವೇ ತನಗೆ ಆಧಾರವಾಗಿರಬೇಕು, ವಿರೋಧಿಯ ಅಶಕ್ತಿಯಲ್ಲ.

ಆದುದರಿಂದ ಕಾಂಗ್ರೆಸ್ ಸದಸ್ಯರು-ಇಲ್ಲವೇ ಈ ತತ್ವಗಳನ್ನು ಆಚರಿಸಬೇಕು, ಇಲ್ಲವೇ ತಾವಾಗಿ ಕಾಂಗ್ರೆಸಿನಿಂದ ತೊಲಗಬೇಕು. ಹೀಗೆ ಮಾಡದಿದ್ದರೆ ತನ್ನ ದೌರ್ಬಲ್ಯದ ಭಾರದಿಂದಲೇ ಕಾಂಗ್ರೆಸು ಕುಸಿದು ಬಿದ್ದೀತೆಂಬ ಹೆದರಿಕೆ ನನಗಿದೆ.

'ಸ್ವ. ಮಾ'

ಭತ್ತದ ಬೆಳೆಗಳಿಗೆ ಕ್ರಿಮಿಗಳಿಂದ ಬರುವ ಹಾನಿ.

ದಕ್ಷಿಣ ಕೊಡಗಿನ ಕೆಲವು ಭಾಗಗಳಲ್ಲಿ ಬೆಳೆಗೆ ಒಂದು ತರಹದ ಕ್ರಿಮಿಯು ತುಂಬಾ ನಷ್ಟ ಉಂಟುಮಾಡುತ್ತಿರುವುದು. ಈ ಕ್ರಿಮಿಗಳು ಬಹಳವಾಗಿ ಅಭಿವೃದ್ಧಿಗೊಳ್ಳುತ್ತಿರುವುದರಿಂದ ಈಗಲೇ ಇವುಗಳ ಹಾವಳಿಯನ್ನು ತಪ್ಪಿಸಲು ತಕ್ಕ ಏರ್ಪಾಡುಗಳನ್ನು ಮಾಡದ ಪಕ್ಷ ಇವುಗಳ ಹಾವಳಿಯಿಂದ ಅಪರಿಮಿತ ನಷ್ಟ ಸಂಭವಿಸುವದು ಖಂಡಿತ.

ಈ ಹುಳಗಳ ಹಾವಳಿಗೆ ಸಿಕ್ಕಿದ ಬೆಳೆಯ ಎಲೆಗಳು ಬಿಳುಪು ಬಣ್ಣ ಉಳ್ಳದಾಗಿ ಸುರುಳಿ ಸುರುಳಿಯಾಗಿ ಸುತ್ತಿಕೊಂಡಿರುತ್ತವೆ. ಅಲ್ಲದೆ ಸಣ್ಣ ಹಸುರು ಮತ್ತು ನೀಲಿ ಮಿಶ್ರಿತವಾದ ಬಣ್ಣದ ಹುಳಗಳು ಅವುಗಳ ಕೋಶಾವಸ್ಥೆಯಲ್ಲಿರುವ ಸುರಿಗಗಳೂ ಎಲೆಗಳಲ್ಲಿ ಕಾಣಬರುತ್ತವೆ.

ಇವುಗಳ ನಿವಾರಣೋಪಾಯದ ಬಗ್ಗೆ ಮೈಸೂರು ಕೀಟಕವಿಜ್ಞಾನ ಪರಿಶೋಧನಾಲಯದವರು ಈ ಸೂಚನೆಯನ್ನು ಕೊಡುತ್ತಾರೆ-ಈ ಮುಳಗಳ ಆಹುತಿಗೆ ಒಳಗಾದ ಗದ್ದೆಗಳಿಗೆ 'ಪ್ಯಾರಿಸ್-ಗ್ರೀನ್' ಎಂಬ ಪದಾರ್ಥವನ್ನು ಅದರ ಎರಡು ಅಥವಾ ಮೂರು ಪಾಲಿನಷ್ಟು ಸುರದ ಬೂದಿ ಸೇರಿಸಿ ಚೆಲ್ಲಬೇಕು. ಈ ಹುಡಿ ಚೆಮುಕಿಸಿದ ನಂತರ ಉದ್ದವಾದ ಒಂದು ಕೋಲಿನ ಸಹಾಯದಿಂದ ಬೆಳೆಯನ್ನು ಅಲ್ಲಾಡಿಸಿ ಕ್ರಿಮಿಗಳು ನೀರಿಗೆ ಬೀಳುವಂತೆ ಮಾಡಬೇಕು. ಹುಳಗಳು ನೀರಿನಲ್ಲಿ ಜೀವಿಸಲಾರದೆ ಸತ್ತುಹೋಗುವವು.

ಎ. ಕೆ. ಸುಬ್ರಮಣಿಯಮ್,
(ತೋ. ಕೃ. ಶಾಸ್ತ್ರಜ್ಞ.)

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್.

ಭಾರತದ ಪ್ರಮುಖ ವಿಮಾ ಸಂಸ್ಥೆಗಳಲ್ಲೊಂದಾದ 'ಜನರಲ್ ಅಶ್ಯೂರೆನ್ಸ್ ಸೊಸೈಟಿಯು ಕಳೆದ 30 ವರ್ಷಗಳಿಂದಲೂ ಅಭಿವೃದ್ಧಿಗೊಳ್ಳುತ್ತಾ ಭಾರತದಲ್ಲೆಲ್ಲಾ ತನ್ನ ಶಾಖೆಗಳನ್ನು ಹರಡುತ್ತಿದೆ. ಭಾರತೀಯ ವಿಮಾ ಉದ್ಯಮದ ಮುನ್ನಡೆಗೆ ಈ ಸಂಸ್ಥೆಯು ಸಲ್ಲಿಸಿರುವ ಸೇವೆಯು ಅನುಪಮವಾದದು. ಈ ಸಂಸ್ಥೆಯು 1937 ನೇ ಡಿಸೆಂಬರ್ ಅಂತ್ಯಕ್ಕೆ ಮುಕ್ತಾಯವಾಗುವ ವಾರ್ಷಿಕ ವರದಿಯಿಂದ ಇದರ ಪ್ರಗತಿಯು ಹೇಗಿದೆ ಎಂದು ಸ್ಪಷ್ಟವಾಗುವುದು.

ಈ ವರದಿಯ ವರ್ಷದಲ್ಲಿ ಹಿಂದಿನ ವರ್ಷಕ್ಕಿಂತ ರೂ. 4,04,000ರ ಹೊಸ ಉದ್ಯಮವು ನಡೆದಿದೆ. ವರದಿಯ ವರ್ಷದಲ್ಲಿ 'ಸೊಸೈಟಿಗೆ' ಒಟ್ಟು ಉತ್ಪನ್ನವು 20,33,001–11–1 ರೂ. ಗಳು. ಹಿಂದಿನ ಸಾಲಿಗಿಂತ ಪ್ರೀಮಿಯಂ ಉತ್ಪತ್ತಿಯು 11,736–3–6ರಷ್ಟು ಹೆಚ್ಚಾಗಿರುವದು. ವರದಿಯ ಸಾಲಿನಲ್ಲಿ ಸೊಸೈಟಿಯ ವೆಚ್ಚವು 14,61,774–13–11 ರೂ. ಗಳು. ಈ ಖರ್ಚು ಕಳೆದು ಜೀವ ವಿಮಾ ನಿಧಿಗೆ 5,71,226–13–2 ರೂ. ಗಳು ಸೇರಿಸಿದೆ ಎಂಬುವುದು ಸಂತೋಷದ ವಿಚಾರ. ತಾ. 31–12–1937ರಲ್ಲಿ 77,32,991–7–2 ರೂ ಜೀವ ವಿಮೆ ನಿಧಿ ಇರುವದು ಕಂಪನಿಯ ಭದ್ರತೆಯನ್ನು ವ್ಯಕ್ತಪಡಿಸುತ್ತದೆ. ಇದರ ಒಟ್ಟು ಆಸ್ತಿಯು 85,82,973–13–11 ರೂ. ಗಳು ಇದ್ದಿತು. ಇದನ್ನು ಸುರಕ್ಷಿತ ಕಡೆಗಳಲ್ಲಿ ವಿನಿಮಯಿಸಿದೆ.

ಈ ಸೊಸೈಟಿಯು ವರದಿಯು ಎಲ್ಲಾ ವಿಧಗಳಿಂದಲೂ ಅಭಿವೃದ್ಧಿಯನ್ನು ತೋರಿಸುತ್ತದೆ. ಹೊಸ ಉದ್ಯಮ, ಉತ್ಪತ್ತಿ, ಕಡಿಮೆ ಖರ್ಚು ಪ್ರಮಾಣ ಮೊದಲಾದ ಎಲ್ಲಾ ವಿಚಾರಗಳಲ್ಲಿ ಶ್ಲಾಘನೀಯವಾದದ್ದಿದೆ. ಹೀಗೆಯೇ ಮುಂದಕ್ಕೂ ಸೊಸೈಟಿಯು ಉತ್ತಮವಾದ ಅಭಿವೃದ್ಧಿಯನ್ನು ಪಡೆಯಲೆಂದು ಹಾರೈಸುತ್ತೇವೆ.

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ.

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೦೧,೭೩೮— ೭—೧
ಏಜಂಟರಿಗೆ ಸಾಲ ಮತ್ತು ಆಸ್ತಿಯ ಒತ್ತೆ	೩,೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೭೦,೨೯,೩೮೫— ೦—೦
ಭವನದ ಆಸ್ತಿಗಳು	೧೦,೬೩,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೫
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು.
೧೯೨೭ ———— ೨೧,೩೫,೨೩೪ ರೂಗಳು.
೧೯೩೭ ———— ೮೫,೮೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ
ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್, ಬ್ರಾಂಚ್ ಮ್ಯಾನೇಜರ್, **ಚಾಮರಾಜಪೇಟೆ, ಬೆಂಗಳೂರು ಸಿಟಿ.**

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ. ಅಫಿಷಿಯೇಟಿಂಗ್ ಜನರಲ್ ಮ್ಯಾನೇಜರ್, **ಅಜ್ಮೀರ್.**

12-1

ಕೊಡಗು

ಸೆಪ್ಟಂಬರ್ ತಾರೀಕು ೧೬ನೇ ಶುಕ್ರವಾರ ೧೯೩೮.

ಯೂರೋಪಿನ ಬಿಕ್ಕಟ್ಟಿನ ಪರಿಸ್ಥಿತಿ.

ಇಂದು ಯೂರೋಪಿನಲ್ಲಿ ಯುದ್ಧ ಅಥವಾ ಶಾಂತಿ ಜರ್ಮನಿಯ ಸರ್ವಾಧಿಕಾರಿಯಾದ ಹರ್ ಹಿಟ್ಲರನ ಕೈಯ್ಯಲ್ಲಿದೆ. ಆದುದರಿಂದಲೇ ಎಲ್ಲರೂ ಹಿಟ್ಲರನ ಈ ತಾ. 12ರ ನ್ಯೂರಂಬರ್ಗಿನ ಭಾಷಣವನ್ನು ಕುತೂಹಲದಿಂದ ಎದುರು ನೋಡುತ್ತಿದ್ದರು. ಆದರೆ ಅವರ ಈ ವಿಶೇಷ ಭಾಷಣವು ನಿಶ್ಚಿತವಾದ ತೀರ್ಮಾನವನ್ನು ಸೂಚಿಸಲಿಲ್ಲ. ಯುದ್ಧವನ್ನೇನೋ ಪ್ರಾರಂಭಿಸಲಿಲ್ಲ; ಆದರೂ ಶಾಂತಿ ಸ್ಥಾಪನೆಯ ಭರವಸೆಯನ್ನೂ ಕೊಡಲಿಲ್ಲ. ಸುಡೆಟನ್ನರ ಪೂರ್ತಿ ಹಕ್ಕುಗಳನ್ನು ಕೊಡಲೇಬೇಕೆಂದು ಜೆಕೊಸ್ಲೊವಾಕಿಯಾದವರನ್ನು ಎಚ್ಚರಿಸಿರುವನು. ಆದರೆ ಈ ಹಕ್ಕುಗಳನ್ನು ಯಾವ ರೀತಿಯಲ್ಲಿ ಕೊಡಬೇಕೆಂಬುವುದನ್ನು ಸ್ಪಷ್ಟವಾಗಿ ಹೇಳಿರುವುದಿಲ್ಲ. ಆದುದರಿಂದ ಹಿಟ್ಲರನು ಯುದ್ಧದ ಕಹಳೆಯನ್ನು ಊದದಿದ್ದರೂ ಜೆಕೊಸ್ಲೊವಾಕಿಯಾದವರಿಗೂ, ಸುಡೆಟನರಿಗೂ ನಡೆಯುವ ಸಂಧಾನಗಳು ಸರಾಗವಾಗಿ ನಡೆಯ್ಯದಂತೆ ಮಾಡಿರುವರು. ಸುಡೆಟನರು ಕೇಳುವ ಕೂಡಲೇ ಹಕ್ಕುಗಳನ್ನೆಲ್ಲಾ ಕೊಟ್ಟುಬಿಡಬೇಕೆಂಬ ಅರ್ಥದ ಮಾತುಗಳನ್ನೇ ಉಪಯೋಗಿಸಿರುವರು. ಇದೆಂದೂ ನ್ಯಾಯವಲ್ಲ.

ಸುಡೆಟನರ ಪ್ರಾಂತ್ಯವು ಜೆಕೊಸ್ಲೊವಾಕಿಯ ರಿಪಬ್ಲಿಕ್ ಸರ್ಕಾರಕ್ಕೆ ಅಡಗಿದ್ದಾಗಿದೆ. ಸುಡೆಟನರು ಜರ್ಮನ್ ಜನಾಂಗದವರು. ಜರ್ಮನಿಯ ನಾಜಿಗಳ ಪ್ರಚಾರವು ಅಲ್ಲಿಗೂ ಹರಡಿ, ಆವಾಗ ಪೂರ್ತಿ ಸ್ವಾತಂತ್ರ್ಯಕ್ಕೆ ಹೋರಾಡುತ್ತಿದ್ದಾರೆ. ಸುಡೆಟನರ ಮುಂದಾಳುಗಳಿಗೂ ಜೆಕೊಸ್ಲೊವಾಕಿಯಾ ಸರ್ಕಾರದ ಅಧ್ಯಕ್ಷರಿಗೂ ಭಿನ್ನಾಭಿಪ್ರಾಯವುಂಟಾಗಿ ಕೆಲವು ದಿವಸಗಳಿಂದ ಸಂಧಾನಗಳು ನಡೆಯುತ್ತಾ ಇವೆ. ಇದನ್ನು ರಾಜಿ ತೀರ್ಮಾನದಿಂದ ಸರಿಪಡಿಸಲು ಬ್ರಿಟನ್ನಿನ ಪ್ರತಿನಿಧಿಗಳಾದ ಲಾರ್ಡ್ ರನ್ಸಿಮ್ಯಾನರು ಆ ರಾಜ್ಯಕ್ಕೆ ಹೋಗಿ ತಕ್ಕ ಪ್ರಯತ್ನಗಳನ್ನು ನಡಿಸುತ್ತಾ ಇದ್ದರು. ಸುಡೆಟನರಿಗೆ ಜರ್ಮನಿಯ ಹಿಟ್ಲರನ ಬೆಂಬಲವಿರುವುದು ಜೆಕೊಸ್ಲೊವಾಕಿಯಾದವರಿಗೆ ಗೊತ್ತಿದೆ. ಆದುದರಿಂದ ಈ ಚಿಕ್ಕ ರಿಪಬ್ಲಿಕನ್ ಸರ್ಕಾರವು ಪ್ರಜಾಪ್ರತಿನಿಧಿ ಪ್ರಭುತ್ವವಿರುವ ಬೇರೆ ರಾಜ್ಯಗಳ ಸಹಾಯ ನಿರೀಕ್ಷಣೆಗೆ ಮಾಡಬೇಕಾಯಿತು. ಜರ್ಮನರು ಒಂದು ಗುಂಡೂ ಸಹ ಹಾರಿಸದೆ ಆಸ್ಟ್ರಿಯಾವನ್ನು ಕೈವಶಮಾಡಿಕೊಂಡಂತೆ ಸುಡೆಟನರ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡರೆ, ಕ್ರಮೇಣ ಚಿಕ್ಕ ಚಿಕ್ಕ ರಾಜ್ಯಗಳೆಲ್ಲವೂ ಹಿಟ್ಲರನ ಮಿಲಿಟರಿಯ ಪಶುಬಲದ ಬೆದರಿಕೆಗೆ ತುತ್ತಾಗುವವೆಂಬುದು ಫ್ರಾನ್ಸ್, ಬ್ರಿಟನ್ ಮೊದಲಾದ ಜನಾಂಗಗಳಿಗೆ ಚೆನ್ನಾಗಿ ಗೊತ್ತಾಗಿದೆ. ಆದುದರಿಂದ ಜರ್ಮನಿಯ ಈ ತರಹದ ಬೆದರಿಕೆಗೆ ಅವಕಾಶ ಕೊಡಬಾರದೆಂದು ಈ ಜನಾಂಗಗಳ ಅಭಿಪ್ರಾಯವಾಗಿದೆ. ಜರ್ಮನಿಯ ಶಕ್ತಿ ಪ್ರದರ್ಶನವನ್ನು ಎದುರಿಸಲು ಫ್ರಾನ್ಸ್ ಮಿಲಿಟರಿಯನ್ನೂ, ಕೋಟೆ ಕೊತ್ತಳಗಳನ್ನೂ ಸಜ್ಜುಗೊಳಿಸಿದೆ. ಬ್ರಿಟನು ಫ್ರಾನ್ಸಿನ ಬೆಂಬಲಕ್ಕೆ ಬರುವನೆಂದು ಸೂಚಿಸಿದೆ. ರೂಮೇನಿಯಾವು ಬ್ರಿಟನನ್ನು ಹಿಂಬಾಲಿಸುವುದು. ಹಾಗೆಯೇ ಇನ್ನಿತರ ಕೆಲವು ಜನಾಂಗಗಳು ರೊಮೇನಿಯಾದಂತೆ ವರ್ತಿಸಲು ತಯಾರಿರುವವು. ರಷ್ಯಾವು ಈ ವಿಚಾರದಲ್ಲಿ ಮೌನವನ್ನು ತಾಳಿದ್ದರೂ, ಜರ್ಮನಿಯ ಜನ್ಮ ಶತ್ರುವಾದ ಕಾರಣ ಅದು ಯಾವ ಕಡೆ ಸೇರುವದೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಆದರೆ ಇಟಲಿಯು ಮಾತ್ರ ಜರ್ಮನಿಯ ಸಹಾಯಕ್ಕೆ ಹೋಗುವುದು. ಅಮೇರಿಕಾದ ಪತ್ರಿಕೆಗಳೂ ಹಿಟ್ಲರನ ಭಾಷಣವನ್ನು ತೀವ್ರವಾಗಿ ಖಂಡಿಸಿರುವವು.

ಸುಡೆಟನರು ಕೇಳಿದ ಪ್ರಾಮುಖ್ಯ ವಿಷಯಗಳೆಂದರೆ ಪ್ರಾಂತೀಕ ಸ್ವಾತಂತ್ರ್ಯ, ಸರಿ ಸಮಾನ ಸ್ಥಿತಿ ಮತ್ತು ಭಾಷೆಯ ಸಮಾನತೆ—ಈ ಸುಧಾರಣೆಗಳನ್ನು ಕೊಡಲು ಜೆಕೊಸ್ಲೊವಾಕಿಯಾ ಸರ್ಕಾರದವರು ಒಪ್ಪಿರುವರು. ಆದರೆ ಸುಡೆಟನರು ಇದರಿಂದ ತೃಪ್ತರಾಗದೆ [illegible] ಪೊಲೀಸು [illegible] ಪಡೆ ಕೊಡಬೇಕೆಂದು [illegible] ದಕ್ಕೆ ಸಂಪೂರ್ಣವಾಗಿ ಹಿಟ್ಲರನ [illegible] ಆಯಿತು. ಇದರಿಂದ ಸುಡೆಟನರ ಕೋರಿಕೆಗಳಿಗೆ ಬಲ ಹೆಚ್ಚಾಯಿತು. ಹಿಟ್ಲರನ ಮಾತಿನ ಸಾರ ಸುಡೆಟನರಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟರೆ, ಅವರ ಪ್ರಾಂತ್ಯವು ಜೆಕೊಸ್ಲೊವಾಕಿಯಾದ ರಿಪಬ್ಲಿಕ್ ಸರ್ಕಾರದಿಂದ ಪ್ರತ್ಯೇಕಿಸಲ್ಪಡುವದು; ಅಂದರೆ ಜರ್ಮನಿಯ ಸರ್ಕಾರದ ಅಧೀನಕ್ಕೆ ಬರಬೇಕಾಗುವುದು. ಹೀಗಾದರೆ ಜರ್ಮನಿಯು ಯುದ್ಧ ಮಾಡದೇನೇ ಈ ಪ್ರಾಂತ್ಯವನ್ನು ತನ್ನ ಸ್ವಾಧೀನಪಡಿಸಿಕೊಂಡಂತಾಗುವುದು. ಯುದ್ಧ ಪ್ರಾರಂಭಿಸಿದರೆ ಹಲವು ಪ್ರಾಂತ್ಯಗಳು ಒಂದಾಗಿ ತನಗೆ ವಿರುದ್ಧ ನಿಲ್ಲಬಹುದೆಂಬ ಕಾರಣದಿಂದ ಹಿಟ್ಲರನು ತನ್ನ ಮಿಲಿಟರಿ ಶಕ್ತಿಯ ಬೆದರಿಕೆಯಿಂದಲೇ ತನ್ನ ಉದ್ದೇಶವನ್ನು ಸಾಧಿಸಿಕೊಳ್ಳಲು ಯತ್ನಿಸುವಂತೆ ಕಾಣುತ್ತದೆ.

ಹಿಟ್ಲರನ ನ್ಯೂರೆಂಬರ್ಗಿನ ಭಾಷಣವಾದ ಮೇಲೆ ಸುಡೆಟನರ ವರ್ತನೆಯು ಹೇಗಾಗುವದೆಂದು ನೋಡಬೇಕಾಗಿದೆ. ಈ ತಾ. 15ರಲ್ಲಿ ಸುಡೆಟನರ ಮಹಾಸಭೆಯೊಂದು ನಡೆಯಲಿರುವುದು. ಅದರಲ್ಲಿ ಅವರ ಮುಂದಿನ ವರ್ತನೆಯು ನಿಷ್ಕರ್ಷಿಸಲ್ಪಡಬಹುದು. ಈಗ ಎಲ್ಲಾ ರಾಷ್ಟ್ರಗಳ ದೃಷ್ಟಿಯು ಈ ಸಭೆಯ ಕಡೆ ತಿರುಗಿದೆ. ಜೆಕ್-ಸುಡೆಟನರ ಸಮಸ್ಯೆಯು ರಾಜಿಯಿಂದ ತೀರ್ಮಾನಿಸಲ್ಪಡದೆ ಹೋದರೆ ಯೂರೋಪಿನಲ್ಲಿ ಯುದ್ಧವು ಅನಿವಾರ್ಯವಾಗುವುದು. ಹಿಟ್ಲರನು ಯೂರೋಪಿನ ರಣರಂಗದಲ್ಲಿ ಪ್ರಥಮದ ಗುಂಡು ಹಾರಿಸಲು ತಕ್ಕ ಸಮಯ ಕಾಯುತ್ತಿರುವನೋ ಅಥವಾ ನಿಜವಾಗಿಯೂ ಯೂರೋಪಿನ ಶಾಂತಿಯನ್ನು ಕಾಪಾಡಲು ಯತ್ನಿಸುವನೋ ಎಂಬುದು ಕೆಲವು ದಿವಸಗಳಲ್ಲಿ ಗೊತ್ತಾಗದೆ ಇರದು. ಹೇಗೂ ಯೂರೋಪಿನಲ್ಲಿ ಯುದ್ಧದ ಭೀತಿಯು ದಿನೇ ದಿನೇ ಹೆಚ್ಚಾಗುತ್ತಿದೆ.

ಅಸ್ಸಾಮಿನ ಮಂತ್ರಿ ಮಂಡಳಿ.

ಅಸ್ಸಾಮಿನ ಪ್ರಧಾನ ಮಂತ್ರಿಯಾದ ಸರ್ ಮಹಮ್ಮದ್ ಸಾದುಲ್ಲಾರವರ ಮೇಲೆ ಅವಿಶ್ವಾಸದ ಠರಾವು ಅಲ್ಲಿಯ ಎಸೆಂಬ್ಲಿಯಲ್ಲಿ ಈ ತಾ. 13ರಲ್ಲಿ [illegible]ಲ್ಪಟ್ಟಿತ್ತು. ಆದರೆ ಅದಕ್ಕೆ ಮುಂಚಿತವಾಗಿ ಅವರು ತಮ್ಮ ಮಂತ್ರಿಮಂಡಳಿಯೊಂದಿಗೆ ರಾಜಿನಾಮೆಯನ್ನು ಗವರ್ನರಿಗೆ ಕಳುಹಿಸಿರುವರು. ಎಸೆಂಬ್ಲಿಯಲ್ಲಿ ತನ್ನ ಪಾರ್ಟಿಗೆ ಬಲವು ಕಡಿಮೆಯಾಗುತ್ತಿರುವುದೇ ಕಾರಣವಂತೆ. ಇವರು 1937ನೇ ಏಪ್ರಿಲಿನಲ್ಲಿ ತಮ್ಮ ಮಂತ್ರಿ ಮಂಡಳಿಯನ್ನು ರಚಿಸಿದರು. ಈ ವರ್ಷ ಪ್ರಾರಂಭದಲ್ಲಿ ತಮ್ಮ ಪದವಿಗೆ ರಾಜಿನಾಮೆಯನ್ನಿತ್ತು, ಪುನಃ ಹೊಸ ಮಂತ್ರಿ ಮಂಡಳಿಯನ್ನು ಅವರೇ ರಚಿಸಿದರು. ಈಗ ಅವರ ಪಕ್ಷದ ಬಲವು ಕಡಿಮೆಯಾಗುತ್ತಿರುವುದರಿಂದ ಅವರು ಪದವಿಯನ್ನು ಬಿಡಬೇಕಾಯಿತು. ಈಗ ಅಲ್ಲಿಯ ಎಸೆಂಬ್ಲಿಯಲ್ಲಿ ದೊಡ್ಡ ಪಕ್ಷವೆಂದರೆ ಕಾಂಗ್ರೆಸ್ ಪಕ್ಷ. ಅಲ್ಲಿ 108 ಸದಸ್ಯರುಗಳಲ್ಲಿ 35 ಕಾಂಗ್ರೆಸ್ ಪಕ್ಷದವರು. ಉಳಿದ ಪಕ್ಷಗಳೆಲ್ಲವೂ ಚಿಕ್ಕ ಚಿಕ್ಕ ಪಕ್ಷಗಳು. ಅವುಗಳಲ್ಲಿ ಅತೀ ದೊಡ್ಡ ಪಾರ್ಟಿಯಾದ ಸ್ವತಂತ್ರ ಮುಸ್ಲಿಂ ಪಕ್ಷದಲ್ಲಿ 14 ಸದಸ್ಯರುಗಳಿರುವರು. ಆದಕಾರಣ ಮಂತ್ರಿಮಂಡಳಿಯನ್ನು ಏರ್ಪಡಿಸಲು ಕಾಂಗ್ರೆಸ್ ಮುಂದಾಳನ್ನೇ ಗವರ್ನರು ಆಹ್ವಾನಿಸಬೇಕಾಗಿದೆ. ಆದರೆ ಕಾಂಗ್ರೆಸು ಮುಂದಾಳು ಸಂಪೂರ್ಣ ಕಾಂಗ್ರೆಸು ಮಂತ್ರಿ ಮಂಡಳಿಯನ್ನೇ ಏರ್ಪಡಿಸಲು ಸಾಧ್ಯವಾಗಲಿಕ್ಕಿಲ್ಲ. ಇತರ ಪಾರ್ಟಿಗಳೊಂದಿಗೆ ಜೊತೆ ಸೇರಿ ಆದಷ್ಟು ಮಟ್ಟಿಗೆ ಕಾಂಗ್ರೆಸ್ಸಿನ ತತ್ವಗಳನ್ನೇ ಅನುಸರಿಸಿ ನಡೆಯುವಂಥ ಮಂತ್ರಿ ಮಂಡಳಿಯನ್ನು ನೇಮಿಸಬೇಕಾಗುವುದು. ಕಾಂಗ್ರೆಸು ಮುಂದಾಳು ಇಲ್ಲಿಯ ಮಂತ್ರಿ ಮಂಡಳಿಯ ಅಧಿಕಾರದ ಜವಾಬ್ದಾರಿಯನ್ನು ವಹಿಸಿಕೊಂಡರೆ ಇದು ಎಂಟನೇ ಕಾಂಗ್ರೆಸು ಮಂತ್ರಿ ಮಂಡಳಿಯಾಗುವುದು. ಹಿಂದೂ ದೇಶದ 11 ಪ್ರಾಂತ್ಯಗಳಲ್ಲಿ 8 ಕಾಂಗ್ರೆಸ್ ಪಕ್ಷದ ಅಧಿಕಾರಕ್ಕೆ ಬಂದಂತಾಗುವುದು. ಇನ್ನು ಉಳಿದಿರುವುದು ಬಂಗಾಳ, ಪಂಜಾಬು ಮತ್ತು ಸಿಂಧ್ ಮಾತ್ರ. ಸಿಂಧ್‌ನ ಮಂತ್ರಿಮಂಡಳಿಯಲ್ಲಿಯೂ ಬದಲಾವಣೆಯ ಚಳವಳವು ನಡೆಯುತ್ತಿದೆ.

ಯುದ್ಧವಾಗುವುದೇ ?

ನಮ್ಮ ಅಗ್ರ ಲೇಖನವನ್ನು ಬರೆದ ಮೇಲೆ ಬಂದ ಯೂರೋಪಿನ ವಾರ್ತೆಯು ಆಶಾಜನಕವಾಗಿಲ್ಲ. ಕೆಲವು ಗಂಟೆಗಳಲ್ಲಿಯೇ ಯುದ್ಧ ಪ್ರಾರಂಭವಾಗುವಂತೆ ತೋರುತ್ತದೆ. ಹಿಟ್ಲರನ ಭಾಷಣದ ನಂತರ ಸುಡೆಟನರು ಅಲ್ಲಲ್ಲಿ ಸರ್ಕಾರಿ ಉದ್ಯೋಗಸ್ಥರ ಮೇಲೆ ಗುಂಡು ಹಾರಿಸುತ್ತಲೂ, ಪೋಲೀಸು ಮತ್ತು ಪೋಸ್ಟಾಫೀಸುಗಳನ್ನು ಕೈವಶ ಮಾಡಲು ಪ್ರಯತ್ನಿಸುತ್ತಲೂ ಇದ್ದ ಕಾರಣ ಜೆಕೊಸ್ಲೋವಾಕಿಯದ ಸರ್ಕಾರದವರು ಎಂಟು ಜಿಲ್ಲೆಗಳಲ್ಲಿ ದಂಡಿನ ಕಾಯಿದೆ (ಮಾರ್ಷಲ್ ಲಾ)ಯನ್ನು ಜಾರಿಗೆ ತಂದರು. ಈ ವಿಶೇಷ ಶಾಸನವನ್ನು ಆರು ಗಂಟೆಯೊಳಗೆ ವಾಪಸು ತೆಗೆಯಬೇಕೆಂದು ಸುಡೆಟನರು ಸರ್ಕಾರಕ್ಕೆ ಕಡೆಯ ಮಾತನ್ನು ಹೇಳಿದರು. ಸುಡೆಟನರು ಶಾಸನ ಕಾಯಿದೆಗಳನ್ನು ಹಿಂಬಾಲಿಸುತ್ತಾ ಶಾಂತರಾಗಿರುವರಾದರೆ, ವಿಶೇಷ ಶಾಸನವನ್ನು ವಾಪಸು ತೆಗೆಯಲಾಬೇಕೆಂದು ಸರ್ಕಾರದವರು ಉತ್ತರವಿತ್ತರು. ಇದರಿಂದ ಸುಡೆಟನರು ತೃಪ್ತರಾಗದೆ ಅವರಿಗೂ, ಸರ್ಕಾರದವರಿಗೂ ನಡೆಯುತ್ತಿದ್ದ ಸಂಧಾನಗಳನ್ನು ನಿಲ್ಲಿಸಿಬಿಟ್ಟಿರುವರು. ರಾಜಿಗಾಗಿ ಬ್ರಿಟಿಷ್ ಪ್ರತಿನಿಧಿಯು ಅವಿಶ್ರಾಂತ ಪ್ರಯತ್ನಮಾಡುತ್ತಿರುವನು. ಅದ್ಯೈಗು ಯತ್ನದಲ್ಲಿ ರಾಜಿಯಾಗಬಹುದೋ ಎಂಬ ಆಸೆಯು ಕೆಲವರಿಗೆ ಇನ್ನೂ ಇದೆ. ಆದರೆ ಜರ್ಮನಿಯವರೂ ಹಾಗೂ ಸುಡೆಟನರು ಯುದ್ಧರಂಗಕ್ಕೆ ಧುಮುಕಲು [illegible]ತ್ತರಾಗಿರುವರು. ಇದನ್ನು ನೋಡಿ, ಫ್ರಾನ್ಸ್ ಜೆಕೊಸ್ಲೊವಾಕಿಯಾಕ್ಕೆ ಸಹಾಯ ಮಾಡಲು ತಯಾರಾಗಿ ನಿಂತಿದೆ. ಬ್ರಿಟನೂ, ರಷ್ಯಾ, ರೊಮೇನಿಯಾ ಮೊದಲಾದ ರಾಷ್ಟ್ರಗಳೂ ಫ್ರೆಂಚರ ಹಾಗೆಯೇ ಸಿದ್ಧತೆಯನ್ನು ಸೂಚಿಸಿವೆ. ಇಟಲಿ ಮತ್ತು ಜಪಾನು ಜರ್ಮನರ ಬೆಂಬಲಕ್ಕಿರುವರು. ಜೆಕೊಸ್ಲೊವಾಕಿಯಾದ ಸೈನ್ಯಬಲವು ಕಡಿಮೆ ಏನೂ ಇಲ್ಲ. ಅವರ ಈಗ ಸಿದ್ಧವಾಗಿರುವ 350,000 ಸೈನ್ಯವನ್ನು ನೂರು ದಿನಗಳಲ್ಲಿ ಒಂದು ಮಿಲಿಯಕ್ಕಿಂತ ಹೆಚ್ಚಿಸಬಹುದಂತೆ. ಎಲ್ಲವೂ ಯುದ್ಧಕ್ಕೆ ಸಿದ್ಧವಾಗಿದೆ. ಒಂದು ವೇಳೆ ಈ ಲೇಖನವು ಪ್ರಿಂಟಾಗುವುವರೊಳಗೆ ಯುದ್ಧವು ಪ್ರಾರಂಭವಾಗಿರಲೂಬಹುದು. ಹಾಗಾಗಿದ್ದರೆ ಅದರ ಅನಿಷ್ಟ ಪರಿಣಾಮ ಇಡೀ ಪ್ರಪಂಚಕ್ಕೆ ತಗಲದೆ ಇರದು.

ಸುಡೆಟನ್—ಝೆಕ್ಕರೊಳಗೆ ಅಂತಯುದ್ಧ.

ಇದು ಘೋರ ಯುದ್ಧವಾಗಿ ಪರಿಣಮಿಸೀತೆ?

ಹೇಬರ್ಸ್ಬ್ರಿಕ್ ಎಂಬಲ್ಲಿ ಝೆಕ್-ಸುಡೇಟನರಲ್ಲಿ ಕಲಹವಾಗಿ ಝೆಕ್ ಪೋಲೀಸರು ಗುಂಡುಗಳನ್ನು ಹಾರಿಸಿದರು. ಪರಿಣಾಮವಾಗಿ 3 ಸುಡೆಟನರು ಸತ್ತರು. ಹಾಲ್‌ಬೇಕ್ ಎಂಬಲ್ಲಿ ಝೆಕ್ ಸರ್ಕಾರದ ಅಧಿಕಾರಿಗಳು ಸುಡೆಟನರ ಒಂದು ಕಾರಿಗೆ ಗುಂಡು ಹಾರಿಸಿದ್ದರಿಂದ ಒಬ್ಬನು ಮೃತನಾದನು. ಇವರ ಗುಂಡುಗಳಿಂದಾಗಿ ಅನೇಕ ಸುಡೆಟನರು ಜಖಂಗೊಂಡಿರುವರು. ಝೆಕ್ ಅಧಿಕಾರಿಯೊಬ್ಬನು ಸುಡೇಟನರಿಂದ ಕೊಲ್ಲಲ್ಪಟ್ಟನು. ಈ ಅಂತಯುದ್ಧವು ಪ್ರಾರಂಭಿಸಿದಂದಿನಿಂದ ತಾ. 14ರ ವರೆಗೆ 8 ಝೆಕ್ಕರೂ 4 ಸುಡೆಟನರೂ ಮೃತರಾಗಿರುವರು. ಈ ಅಂತಯುದ್ಧವು ಮಹಾ ಯುದ್ಧವಾಗಿ ಸಂಭವಿಸಬಹುದೆಂಬುದಾಗಿ ಅಭಿಪ್ರಾಯಪಡುತ್ತಾರೆ. ಝೆಕರು ತಮ್ಮ ಎಲ್ಲಾ ಸೈನ್ಯಗಳಿಗೂ ಟೆಲಿಫೋನಿನ ಮುಖಾಂತರ ಈ ಅವ್ಯವಸ್ಥೆಯ ವಿಚಾರವನ್ನು ತಿಳಿಸುತ್ತಿರುವರು. ಎಲ್ಲರೂ ರಣರಂಗಕ್ಕೆ ದುಮುಕಲು ತಯಾರಿರುವರು. ಈಗ ಬೇಕಾದದ್ದು ಒಂದೇ ಒಂದು ಅಪ್ಪಣೆ!

ಒಳದೇಶ.

ತಾರೀಕು 10-9-38 ರಿಂದ 16-9-38 ರ ವರೆಗೆ ಮಡಿಕೇರಿಯಲ್ಲಿ 56 ಸೆಂಟು ಮಳೆಯಾಗಿದೆ.

ತಾರೀಕು 11-9-38 ರಲ್ಲಿ ಮಡಿಕೇರಿ ಕೊಡವ ಸಂಘದ ಕೈಲು ಪೊಳ್ದು ಔತಣವು ಜಮೀನ್ದಾರರ ಸಂಘದ ಹಾಲ್‌ನಲ್ಲಿ ನಡೆಯಿತು.

ರಜೆಯಲ್ಲಿದ್ದ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾದ ರಾವು ಸಾಹೇಬ್ ಮಂಡೇಪಂಡ ಮಂದಣ್ಣನವರು ತಮ್ಮ ಹುದ್ದೆಯ ಚಾರ್ಜನ್ನು ತಾ. 15-9-38 ರಲ್ಲಿ ತೆಗೆದು ಕೊಂಡಿರುವರಾಗಿ ತಿಳಿಯುತ್ತೇವೆ.

ಬೊಂಬಾಯಿಯ ಕೊಡಗು ಸಂಘದವರು ಈ ತಾರೀಕು 4 ಲ್ಲಿ ಕೈಲು ಮುಹೂರ್ತ ಹಬ್ಬವನ್ನು ಮಿ. ಮೂಕಂಡ ಕಾರ್ಯಪ್ಪನವರ ಭವನದಲ್ಲಿ ಬಹು ವಿಜೃಂಭಣೆಯಿಂದ ನಡೆಸಿದರೆಂದು ತಿಳಿಸುತ್ತಾರೆ.

ಶ್ರೀ ಕಾವೇರಿ ಬಸ್ ಸರ್ವಿಸಿನ ಶೇರುದಾರರ ವಾರ್ಷಿಕ ಮಹಾಸಭೆಯು ತಾ. 30-9-38 ರಲ್ಲೂ, ಅವರ ವಿಶೇಷ ಮಹಾಸಭೆಯೊಂದು ತಾ. 1-10-38 ರಲ್ಲೂ ಕಂಪೆನಿಯ ರಿಜಿಸ್ಟರ್ಡ್ ಆಫೀಸಿನಲ್ಲಿ ನಡೆಯುವದಾಗಿ ತಿಳಿದು ಬರುತ್ತದೆ.

ಸಲಿವಾರಣೆ ಬೋರ್ಡಿನ ಮೀಟಿಂಗುಗಳು ಈ ತಾ. 11 ರಲ್ಲಿ ಗೋಣಿಕೊಪ್ಪಲಲ್ಲಿಯೂ, ತಾ. 12 ರಲ್ಲಿ ಹುದಿಕೇರಿಯಲ್ಲಿಯೂ, ತಾ 13 ರಲ್ಲಿ ಅಮ್ಮತ್ತಿಯಲ್ಲಿಯೂ ಮತ್ತು ತಾ. 14 ರಲ್ಲಿ ಮಡಿಕೇರಿಯಲ್ಲಿಯೂ ನಡೆದವಾಗಿ ತಿಳಿಯಬರುತ್ತದೆ.

ಕೊಡಗಿನ ಡಿಸ್ಟ್ರಿಕ್ಟ್ ಬೋರ್ಡ್ ಆಸ್ಪತ್ರೆಗಳನ್ನು ಸಂತೆ ದಿನಗಳಲ್ಲಿ ಬೆಳಿಗ್ಯೆ 8 ಗಂಟೆಯಿಂದ ಮಧ್ಯಾಹ್ನ 12 ಗಂಟೆ ವರೆಗೂ, ಮಧ್ಯಾಹ್ನದ ಮೇಲೆ 1½ ಗಂಟೆಯಿಂದ ಸಾಯಂಕಾಲ 5 ಗಂಟೆ ವರೆಗೂ ತೆರೆದಿಡುವಂತೆ ಹುಕುಂ ಆಗಿದೆಯಾಗಿ ತಿಳಿಯ ಬರುತ್ತದೆ.

ಹುಲಿ ಉಗುರಿಗೆ ಚಿನ್ನ ಕಟ್ಟಿ ನಾಲ್ಕು ಕೆಂಪು ಮೆಟ್ಟಿರುವ ಒಂದು ಬ್ರೋಚು ವೀರಾಜಪೇಟೆಯಲ್ಲಿರುವ ಮೆ. ಕೋಡಿರ ಮಂದಣ್ಣನವರಲ್ಲಿರುವ ಜಾನ್ ಪ್ರೋನ್ಸ್ಯನೆಂಬ ಹುಡುಗನಿಗೆ ಬಿದ್ದು ಸಿಕ್ಕಿರುವದೆಂದೂ, ಅದನ್ನು ವೀರಾಜಪೇಟೆ ಪೊಲೀಸ್ ಸ್ಟೇಷನಿಗೆ ಅವರು ಹಾಜರುಪಡಿಸಿರುತ್ತಾರಾಗಿಯೂ, ಅದರ ಹಕ್ಕುದಾರರು ಅದನ್ನು ಅಲ್ಲಿಂದ ಪಡೆಕೊಳ್ಳಬಹುದಾಗಿಯೂ ತಿಳಿಸುತ್ತಾರೆ.

ಕೊಡಗಿನ ಸರ್ಕಾರದ ಸಿಬ್ಬಂದಿಯೋಜನೆಯ ಯೋಜನೆಯಲ್ಲಿ 11 ನಾಡು ಬಿಟ್ಟೀಗಳ ಸೈಕಿ ಎರಡನ್ನು ತೆಗೆದು ಹಾಕುವರೆಂಬ ವರ್ತಮಾನ ಕೇಳಿ, ಅಮ್ಮತ್ತಿ ನಾಡಿನವರು ಈ ತಾ. 13 ರಲ್ಲಿ ಮೆ ಕೇಚಂಡ ನಂಜಪ್ಪನವರ ಅಧ್ಯಕ್ಷತೆಯಲ್ಲಿ ಅಮ್ಮತ್ತಿಯಲ್ಲಿ ಸಭೆ ಸೇರಿ, ಗ್ರಾಮದ ರೈತರಿಗೆ ನಾಡುಬಿಟ್ಟೀಗಳು ಬಹು ಉಪಯುಕ್ತವಾಗಿರುವ ಕಾರಣ ಅವುಗಳನ್ನು ಖಂಡಿತವಾಗಿಯೂ ತೆಗೆದು ಹಾಕಕೂಡದೆಂದು ಚೀಫ್ ಕಮಿಷನರನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತೆಂದು ತಿಳಿಯುತ್ತೇವೆ

ಹಿಂದೂದೇಶ.

ಮೈಸೂರು ಸಂಸ್ಥಾನದಲ್ಲಿ, 'ಸ್ಟೇಟ್ ಕಾಂಗ್ರೆಸನ್ನು' ಸರಕಾರವು ಅದು ಒಂದೇ ಮತದವರದಾದುದರಿಂದ, ನ್ಯಾಯವಿರುದ್ಧವಾದುದೆಂದು ತೀರ್ಮಾನಿಸಿ ಬಹಿಷ್ಕರಿಸಿದೆ

ಕಾಂಗ್ರೆಸ್ ಪ್ರಾಂತಗಳ ನೈಗಾರಿಕೆ ಮಂತ್ರಿಗಳ ಸಮ್ಮೇಳನವು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೀಟಿಂಗಿನ ಸಮಯದಲ್ಲಿ ದೆಹಲಿಯಲ್ಲಿ ನಡೆಯುವದಾಗಿ ತಿಳಿಯಬರುತ್ತೆ.

ಡಾ. ಖರೆಯವರ ಭಾಷಣ ಲೇಖನಗಳು ಕಾಂಗ್ರೆಸ್ ಪ್ರತಿಷ್ಟೆಗೆ ಕುಂದುಕವನ್ನುಂಟುಮಾಡುತ್ತಿರುವದರಿಂದ ಶಿಸ್ತು ಭಂಗದ ದಂಡನೆಯನ್ನು ಅವರ ಮೇಲೆ ವಿಧಿಸಬೇಕೆಂದು ನಾಗಪುರ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸೂಚನೆ.

ಮಧ್ಯಪ್ರಾಂತಗಳ ಪ್ರಧಾನರಾದ ಪಂಡಿತ ರವಿಶಂಕರ ಶುಕ್ಲರು ಒಂದು ಹುಕುಮನ್ನು ಹೊರಡಿಸಿ ಇನ್ನು ಮುಂದೆ ಗಾಂಧಿಜಿಯವರ ವಿಷಯ ಅಧಿಕಾರಿಗಳು ಬರೆಯುವಾಗ 'ಮಹಾತ್ಮಗಾಂಧಿ'ಯೆಂದೇ ಬರೆಯಬೇಕೆಂದು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದಾರೆ.

ರಜದ ಮೇಲೆ ಇಂಗ್ಲೆಂಡಿಗೆ ಪ್ರಯಾಣ ಮಾಡಿರುವ ಹಿಂದುಸ್ಥಾನದ ವೈಸರಾಯರಾದ ಲಾರ್ಡ್ ಲಿನ್‌ಲಿತ್ಗೋರವರು ಪತ್ನಿ ಸಮೇತರಾಗಿ ಅಕ್ಟೋಬರ್ ತಾ. 21 ಕ್ಕೆ ಹಿಂದೂಸ್ಥಾನಕ್ಕೆ ವಾಪಸು ಬಯನೂಡಿ ತಮ್ಮ ಅಧಿಕಾರಗಳನ್ನು ಸ್ವೀಕರಿಸುವರೆಂದು ತಿಳಿಯುವುದು.

ಬರುವ ಅಖಿಲ ಭಾರತ ಕಾಂಗ್ರೆಸಿನ ಮಹಾಸಭೆಯು ಮಹಾಕೋಸಲದಲ್ಲಿ ನಡೆಯುವದಿದ್ದು, ಅದನ್ನು ನೋಡಬರಲ್ಲಿರುವ ಅತಿಥಿಗಳಿಗಾಗಿ, ಪ್ರತಿನಿಧಿಗಳಿಗಾಗಿ, ಪ್ರೇಕ್ಷಕರಿಗಾಗಿ 100 ಗುಡಿಸಲುಗಳು ಈಗಾಗಲೇ ತಯಾರಾಗುತ್ತಿವೆ. ಗುಡಿಸಲುಗಳ ಗೋಡೆ, ಮಾಡುಗಳು ಬಿದಿರಿನ ತಡಿಕೆಗಳದ್ದು.

ಟ್ರಾವಂಕೂರು ನೇಶನಲ್ ಕಾಂಗ್ರೆಸಿಗೆ ಸಂಬಂಧಿಸಿದ ಒಂದು ವ್ಯಂಗ್ಯ ಚಿತ್ರವುಳ್ಳ 'ಸ್ಟೇಟ್ ಕಾಂಗ್ರೆಸ್ ಸಂಸೆ' ಎಂಬ ಹೆಸರಿನ ಒಂದು ಲೇಖನ ಇವುಗಳನ್ನು ಪ್ರಕಟಿಸಿದ ಆರೋಪದ ಮೇಲೆ, 'ಆರ್ಯ ಕೇರಳ' ಎಂಬ ಪತ್ರಿಕೆಯ 'ಪ್ರೆಸನ್ನು' ರದ್ದುಮಾಡಲಾಗಿದೆ. ಇದು ಆಚ್ಚಾಗುತಿದ್ದ ಮುದ್ರಾಲಯವೂ 'ಏಟ್ಯಾಚ್' ಮಾಡಲ್ಪಟ್ಟಿದೆ. ಇದು ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಆಕ್ಟಿನ ಪ್ರಕಾರದ ಕಾರ್ಯಕ್ರಮ.

ಟ್ರಾವಂಕೂರು ನೇಶನಲ್ ಎಂಡ್ ಕ್ವಿಲನ್ ಬ್ಯಾಂಕ್ ಲಿಕ್ವಿಡೇಶನ್‌ಗಾಗಿ ನೇಮಿಸಲ್ಪಟ್ಟ ಲಿಕ್ವಿಡೇಟರ ಅರ್ಜಿಯ ಪ್ರಕಾರ, ಕ್ವಿಲನಿನ ಜಡ್ಜರು, ಆ ಬ್ಯಾಂಕಿನ ಅಧಿಕಾರಿಗಳಾದ ಕೆ. ಸಿ. ಮಮ್ಮೆನ್ ಮಾಪಿಳ್ಳೆ (ಚೆಯರ್‌ಮ್ಯಾನ್,) ಸಿ. ಪಿ. ಮಾಥೆನ್ (ಮೆನೇಜಿಂಗ್ ಡೈರೆಕ್ಟರ್) ಕೆ. ಸಿ. ಈಪನ್ ಇವರುಗಳು ಕೋರ್ಟಿನ ಮುಂದೆ ಹಾಜರಾಗಿ ಉತ್ತರ ಕೊಡಲು ನೋಟೀಸು ಕೊಟ್ಟಿರುವರು.

'ಬಂಗಾಲದ ಕಾಂಗ್ರೆಸ್ ನಾಯಕತ್ವವು, ಏಕೀಭಾವದಿಂದ, ಕರ್ತವ್ಯದಕ್ಷತೆಯಿಂದಿದ್ದರೆ, ಅಲ್ಲಿ ಹಿಂದೂ ಮುಸ್ಲಿಮ ವಿಭಾಗವೆಂದಿಗೂ ಬಾರದು. ಅಲ್ಲದೆ ಸದ್ಯದಲ್ಲೇ ಯುರೋಪಿಯನರ ಓಟುಗಳ ಅಗತ್ಯವೇ ಇರದ ಸಂಪೂರ್ಣ ಕಾಂಗ್ರೆಸ್ ಮಂತ್ರಿಮಂಡಲ ರಚಿತವಾಗುವದರಲ್ಲಿ ಸಂದೇಹವಿಲ್ಲ' ಎಂದು ಬಂಗಾಳದ ಪರಿಸ್ಥಿತಿಯ ಬಗ್ಗೆ ತಮ್ಮ ಅಭಿಪ್ರಾಯವನ್ನು, ಶ್ರೀ. ಸತ್ಯಮೂರ್ತಿಗಳು ಒಬ್ಬ ಪತ್ರಿಕಾ ಪ್ರತಿನಿಧಿಗೆ ಸಿಮ್ಲಾದಲ್ಲಿ ವ್ಯಕ್ತಪಡಿಸಿದರು.

'ಇಂಗ್ಲೆಂಡು ಯುದ್ಧದ ಗೊಂದಲದಲ್ಲಿ ಸಿಕ್ಕುಬಿದ್ದದೆ. ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಇಂಗ್ಲೆಂಡು ಇಂದು ಹೋರಾಡುತ್ತಿದೆ. ಕೇಂದ್ರ ಶಾಸನಸಭೆಯಲ್ಲಿ ವಿರೋಧಗಳನ್ನು ಮನ್ನಿಸದೆ, ಬಲಾತ್ಕಾರವಾಗಿ 'ಆರ್ಮಿ ಬಿಲ್ಲ'ನ್ನು ತಂದು ಪಾಸು ಮಾಡಿದ ಕಾರಣವೂ ಇದೇ. ಆದುದರಿಂದ, ಸ್ವಾತಂತ್ರ್ಯವನ್ನು ಪಡೆಯಲು ಸರ್ವಶ್ರೇಷ್ಠ ಸಮಯವಾದ ಇಂದಿನ ಕಾಲವನ್ನು ಕಳೆದುಕೊಳ್ಳಬಾರದು' ಎಂದು ರಾಷ್ಟ್ರಪತಿಗಳು, ಹಾರ್ಡಿಂಗ್‌ನಲ್ಲಿ ಮಾಡಿದ ಭಾಷಣದಲ್ಲಿ ಅಭಿಪ್ರಾಯಪಟ್ಟರು.

ಪಂಜಾಬಿನ ಉಸ್ತಾದ್ ಹುಲಿಯೆಂಬ ಅನರ್ಘನಾಮವನ್ನು ಪಡೆದಿರುವ 'ಡಾಲು' ಎಂಬಾತನು ಆಸ್ಟ್ರೇಲಿಯ, ಸಂಯುಕ್ತ ಅಮೇರಿಕ ಯೂರೋಪು ಈ ಪ್ರಾಂತ್ಯಗಳಲ್ಲೆಲ್ಲಾ ಕುಸ್ತಿಯನ್ನು ಮಾಡಿ ಜಯಶೀಲನಾಗಿ ಈಗ ಇಂಗ್ಲೆಂಡಿಗೆ ಬಂದಿರುವನು. ಈತನು ಆರಡಿ ಎತ್ತರದ ಆಳು, 235 ಪೌಂಡು ತೂಕ ಇರುತ್ತಾನೆ. ಅಂತೂ ಸಂತೋಷದ ಹೇಳಿಕೆಯ ವಿಚಾರವೇನೆಂದರೆ-ಮಲ್ಲಯುದ್ಧದಲ್ಲಿ ಭಾರತೀಯರ ಹೆಸರು ಪ್ರಸಿದ್ಧಿ ಹೊಂದಿವೆ. ಹಾ! ಭಾರತ ಮಾತೆ, ನೀನಲ್ಲವೇ ಧನ್ಯಳು!

ತ್ರಿವೇಂಡ್ರಮಿನಲ್ಲಿ ತಾ. 11 ನೇ ರಾತ್ರೆ 3-30 ಮತ್ತು 3 45 ರ ಮಧ್ಯೆ ಸುಮಾರು 10 ಸೆಕೆಂಡುಗಳ ತನಕ ಭೂಕಂಪವಾಯಿತು. ವಿಶೇಷ ಶಬ್ದ ಮಾತ್ರವಲ್ಲದೆ ಬೇರೆ ಯಾವ ತೊಂದರೆಯೂ ಆಗಲಿಲ್ಲ. ಪುನಃ 3-45 ಕ್ಕೆ ಭೂಕಂಪವು ಸ್ವಲ್ಪ ಜೋರಾಗಿಯೇ ಸಂಭವಿಸಿತು. ಪ್ರಾಣಹಾನಿಯಾಗಲಿ ಇತರ ನಷ್ಟವಾಗಲಿ ಆಗಲಿಲ್ಲ. ತಿರುವಾಂಕೂರು ಸಂಸ್ಥಾನದಲ್ಲಿ ಇತ್ತೀಚೆಗಿನ ಇತಿಹಾಸದಲ್ಲಿ ಇದೇ ಮೊದಲನೆಯ ಭೂಕಂಪವೆಂದು ತಿಳಿದು ಬರುತ್ತದೆ. ತಿನ್ನವೆಲ್ಲಿ, ಪುದುಕೋಟೆ ಮತ್ತು ಕೊಲಂಬೋದಲ್ಲಿ ಕೂಡಾ ಈ ಭೂಕಂಪ ತೋರಿಬಂದಿದೆ.

ವಿದೇಶ

ಜರ್ಮನಿಯು ಝೆಕೊಸ್ಲೋವಾಕಿಯಾದ ಮೇಲೆ ಮುಂದರಿದರೆ ನಾವು ಝೆಕೊಸ್ಲೋವಾಕಿಯಕ್ಕೆ ಸಹಾಯ ಮಾಡುವೆವೆಂದು ಬ್ರಿಟಿಷರು ಜರ್ಮನಿಗೆ ಎಚ್ಚರಿಕೆ ಕೊಟ್ಟಿರುವರು.

ಇಟೆಲಿಯ ಸರ್ವಾಧಿಕಾರಿಯಾದ ಮುಸಲೋನಿಯು ಯೆಹೂದಿಯರಿಗೆ ಹೊಸ ಧರ್ಮದ ದಾರಿ ತೋರಿಸುತ್ತಿದ್ದಾನೆ. ಅವರನ್ನು ಅಬಿಸೀನಿಯಕ್ಕೆ ಕಳುಹಿಸುವ ಹಾಗೂ, ಅಲ್ಲಿ ಅವರಿಗೆ ಸ್ಥಳ ಕೊಡುವ ಹಾಗೂ ಯೋಚಿಸಲಾಗುವದಂತೆ.

ಝೆಕೊಸ್ಲೋವಾಕಿಯಾದಲ್ಲಿರುವ ಸುಡೆಟನರಿಗೆ ಕೊಟ್ಟ ರಿಯಾಯಿತಿಗಳು ಪರಮಾವಧಿಯನ್ನು ಮುಟ್ಟಿರುತ್ತವೆಂದೂ, ಇನ್ನೂ ಅವರನ್ನು ಜರ್ಮನರು ಒತ್ತಾಯಪಡಿಸುವದು ನ್ಯಾಯವಲ್ಲವೆಂದೂ, ಜರ್ಮನರು ಹಾಗೆ ಒತ್ತಾಯಪಡಿಸಿದರೆ ಫ್ರಾನ್ಸು ಜರ್ಮನರ ಬಲಾತ್ಕಾರವನ್ನು ಎದುರಿಸುವದೆಂದೂ ಫ್ರೆಂಚರ ಅಭಿಪ್ರಾಯ.

ಮಧ್ಯಯೂರೋಪಿನ ಸಮಸ್ಯೆಯ ವಿಚಾರ ಹಿಟ್ಲರನ ಭಾಷಣ.

ಮಧ್ಯಯೂರೋಪಿನ ಸಮಸ್ಯೆಗಳಲ್ಲಿ ಹಿಟ್ಲರನ ಅಭಿಪ್ರಾಯವೇನಿದೆ ಎಂಬವನ್ನು ತಿಳಿಯಲು ಪ್ರಪಂಚದ ಅತ್ಯಂತದಲ್ಲೂ ಜನರು ಕುತೂಹಲದಿಂದ ನಿರೀಕ್ಷಿಸುತ್ತಿದ್ದರು. ಅಂತೆಯೇ ಹಿಟ್ಲರನು ತಾ. 12ರಲ್ಲಿ ತನ್ನ ಭಾಷಣವನ್ನು ಮಾಡಿದನು. ಆತನ ಭಾಷಣದಲ್ಲಿ ಜರ್ಮನಿಯ ವಿಚಾರದಲ್ಲಿ ಇತರ ಜನಾಂಗಗಳು ಕೃತಘ್ನತೆಯಿಂದ ವರ್ತಿಸುತ್ತಾರೆಂದು ಎಲ್ಲರನ್ನೂ ದೂಷಿಸಿದರು. ಜೆಕೊಸ್ಲೊವಾಕಿಯಾ ಪ್ರಜಾಪ್ರಭುತ್ವ ಸರ್ಕಾರವು ತನ್ನ ದೇಶದಲ್ಲಿರುವ ಅಲ್ಪ ಸಂಖ್ಯಾಕರಾದ ಸುಡೆಟನ್ ಜರ್ಮನರನ್ನು ಹಿಂಸಿಸುತ್ತಾರೆಂದು ಹೇಳಿದರು. ಜೆಕೊಸ್ಲೊವಾಕಿಯಾದಲ್ಲಿ ಅಲ್ಪಸಂಗಡದವರನ್ನು ಹಿಂಸೆಗೆ ಗುರಿಪಡಿಸುವುದನ್ನು ಜರ್ಮನಿಯು ಎಂದೂ ಸಹಿಸಲಾರದೆಂದು ಉದ್ಘೋಷಿಸಿದನು. ಜರ್ಮನಿಯ ರಕ್ಷಣಾಬಲದ ಮತ್ತು ವಿಮಾನ ಸೈನ್ಯದ ಶಕ್ತಿ ಸಂಖ್ಯಾದಿಗಳು ಈಚಿನ ಕೆಲವು ತಿಂಗಳಲ್ಲಿ ಹೆಚ್ಚಿ ಹೋಗಿರುವುದನ್ನೂ, ಜರ್ಮನಿಯು ತನ್ನ ಪಶ್ಚಿಮ ಗಡಿಯಲ್ಲಿ ಕೋಟೆ ಕೊತ್ತಳಗಳನ್ನು ಭದ್ರಪಡಿಸಿಕೊಂಡಿರುವುದನ್ನೂ ಅವರು ಪ್ರಪಂಚದ ಇತರ ರಾಷ್ಟ್ರಗಳ ಸ್ಮೃತಿಪಥಕ್ಕೆ ತಂದರು. ಜೆಕೊಸ್ಲೊವಾಕಿಯದಲ್ಲಿರುವ ಮೂವತ್ತೈದು ಲಕ್ಷ ಮಂದಿ ಜರ್ಮನರಿಗೆ ಅವರು ವಾಸ ಮಾಡುತ್ತಿರುವ ಪ್ರದೇಶಗಳಲ್ಲಿ ಅವರಿಗೆ ಇಷ್ಟಬಂದ ರೀತಿಯ ಸರ್ಕಾರವನ್ನು ರಚಿಸಿಕೊಳ್ಳಲು ಅಧಿಕಾರವನ್ನು ಕೊಡಬೇಕೆಂದು ಕೇಳಿದರು. ಅಂಥಾ ಸುಧಾರಣೆಗಳಲ್ಲದೆ ಅವರನ್ನು ಹಿಂಸಿಸುವುದು ಅಯೋಗ್ಯವೆಂದು ಜೆಕೊಸ್ಲೊವಾಕಿಯ ಸರ್ಕಾರಕ್ಕೆ ತಿಳಿಸಿರುವರು.

ಜರ್ಮನಿಯ ಪಶ್ಚಿಮ ಗಡಿಯಲ್ಲಿ 278,000 ಜನರು ಕೋಟೆಕೊತ್ತಳಗಳ ಕೆಲಸದಲ್ಲಿ ತೊಡಗಿರುವರೆಂದೂ, ಇದಕ್ಕೆ ಸಹಾಯಕರಾಗಿ 184,000 ಜನರಿರುವರಲ್ಲದೆ ಯುದ್ಧ ಸೈನ್ಯಗಳೂ, ವಿಮಾನ ಪಡೆಯು ತಯಾರಿರುವವೆಂದು ಸೂಚಿಸಿದರು. ಅಲ್ಲದೆ ತಮ್ಮ ಪಾರ್ಟಿ ತತ್ವದ ಮೇಲೆ ಜರ್ಮನರ ಚಳವಳವು ಜರ್ಮನರೆಲ್ಲಿರುವರೋ ಅಲ್ಲಿ ಹರಡಬೇಕೆಂಬ ಉತ್ಕಟೇಚ್ಛೆಯಿಂದಿರುವ ಕಾರಣ ಝೆಕೊಸ್ಲೋವಾಕಿಯದಲ್ಲಿರುವ ಜರ್ಮನರ ಸಹಾಯಕ್ಕೆ ನಾವು ಹೋಗುವದು ನಮ್ಮ ಹಕ್ಕು ಎಂದು ನುಡಿದರು. ಅಲ್ಲದೆ ಫ್ರಾನ್ಸು ಮತ್ತು ಬ್ರಿಟನ್ನು ತಮ್ಮ ಸುರಕ್ಷಿತೆಗಾಗಿ ಝೆಕೊಸ್ಲೋವಾಕಿಯಕ್ಕೆ ಸಹಾಯ ಮಾಡುವದಾದರೆ ನಮಗೆ ನಮ್ಮ ಸಂಗಡದವರಾದ ಸುಡೆಟನರ ಸುರಕ್ಷಿತೆಗಾಗಿ ಹೋರಾಡದೆ ಗತ್ಯಂತರವಿಲ್ಲವೆಂದೂ ಅದಕ್ಕಾಗಿ ಏನೇ ತೊಂದರೆ ಬಂದರೂ ಅದನ್ನು ಎದುರಿಸಬೇಕಾಗುವದೆಂದೂ ಹೇಳಿದರು. ಈ ಸೊವಲು ಝೆಕೊಸ್ಲೋವಾಕಿಯಾ ಪ್ರಾಂತೀಕ ಚುನಾವಣೆಯ ಸಂದರ್ಭದಲ್ಲಿ ಜರ್ಮನರು ತಮ್ಮ ಸೈನ್ಯಗಳನ್ನು ಉಪಯೋಗಿಸಿದರೆಂಬ ಆರೋಪಣೆಯನ್ನು ನಮ್ಮಂಥ ಪ್ರಬಲರಾಷ್ಟ್ರದ ಮೇಲೆ ಹೊರಿಸಿರುವದನ್ನು ಖಂಡಿತ ಸಹಿಸಲಸಾಧ್ಯವಾಗಿದೆಯೆಂದೂ, ಇಂಥಾ ಆರೋಪಗಳು ಬಂದದ್ದರಿಂದಲೇ ಮೇ ತಾ. 28ರಿಂದ ನಮ್ಮ ಸೈನ್ಯಬಲವನ್ನು ಹೆಚ್ಚಿಸಬೇಕಾಯಿತೆಂದೂ, ಝೆಕೊಸ್ಲೊವಾಕಿಯದಲ್ಲಿರುವ 35000 ಸುಡೆಟನರನ್ನು ಹಿಂಸಿಸುದೆಂದರೆ ಜರ್ಮನಿಗೆ ಪ್ರತ್ಯಕ್ಷ ಅವಮಾನ ಮಾಡಿದಂತಾಗುವದರಿಂದ ಈ ವಿಚಾರದಲ್ಲಿ ಜರ್ಮನರು ತಮ್ಮ ಗೌರವವನ್ನುಳಿಸಲು ಹೋರಾಡುವದು ಯುಕ್ತವೆಂದೂ ನುಡಿದರು.

ಚಾತ್ಮಿ.

ಚಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. [ಕೊ. ಸಂ.

ಕಂದಾಯ ಬಾಕಿಗಾಗಿ ಭೂಮಿ ಹರಾಜು.

ಸರ್ಕಾರದವರಲ್ಲಿ ವಿನಂತಿ.

ಕಂದಾಯ ಬಾಕಿಗಾಗಿ ಹರಾಜು ಮಾಡಲ್ಪಡುವ ಭೂಮಿಯನ್ನು ಸರ್ಕಾರದವರು ಹರಾಜಿನಲ್ಲಿ ವಹಿಸಿಕೊಳ್ಳುತ್ತಿದ್ದ ಪದ್ಧತಿಗೆ ರೆವಿನ್ಯೂ ರೆಗ್ಯುಲೇಶನ್ ಪ್ರಕಾರ ಮಂಜೂರಾತಿ ಇಲ್ಲವೆಂದು ಅವಗಾಹನೆಗೆ ಬಂದುದರ ಮೇಲೆ ಮದ್ರಾಸಿನವರು ಅನುಸರಿಸುತ್ತಿರುವ ಕ್ರಮವನ್ನು ಅನುಸರಿಸಬಹುದೆಂದು ತೋರಿ ಬಂದ ಮೇರೆ 1937 ನೇ ಇಸವಿಯ (ತಿದ್ದುಪಡಿಯಾದ) ಕೊಡಗು ಲ್ಯಾಂಡ್ ಮತ್ತು ರೆವಿನ್ಯೂ ರೆಗ್ಯುಲೇಶನ್ ಬಿಲ್ಲನ್ನು ಕುರಿತ ಟೀಕೆಗಳಿಗೆ ಉತ್ತರವಾಗಿ ಸರ್ಕಾರದವರು ಪ್ರಕಟಪಡಿಸಿದ ಜಾಹಿರಾತಿನಲ್ಲಿ ಕೊನೆಯದಾಗಿ ಕಂದಾಯ ಬಾಕಿಯ ವಸೂಲಿಯ ಇತರ ಎಲ್ಲಾ ವಿಧಾನಗಳು ನಿಷ್ಪ್ರಯೋಜನವಾಗಿ ಸರ್ಕಾರದವರು ಭೂಮಿಯನ್ನು ಕೊಂಡುಕೊಳ್ಳುವ ಸಂದರ್ಭದಲ್ಲಿ ಮಾತ್ರ ಈ ತಿದ್ದುಪಡಿಯಂತೆ ಭೂಮಿಯನ್ನು ಕೊಂಡುಕೊಳ್ಳುವುದರಿಂದ ರೈತರಿಗೆ ಯಾವ ಬಗೆಯ ತೊಂದರೆಯ ಅನುಭವವು ಆಗಲಾರದೆಂಬದನ್ನು ತಿಳಿವಿರತಕ್ಕದ್ದು. ಕಂದಾಯ ವಸೂಲು ಮಾಡುವದರ ಮೂಲ ಸ್ವರೂಪವೇನೆಂಬದನ್ನು ತಿಳಿದುಕೊಳ್ಳದೆ, ಅನುಚಿತವಾದ ವಿವರಣೆಗಳನ್ನು ಪ್ರಸಿದ್ಧಗೊಳಿಸಿ ಸರ್ಕಾರದ ಮೇಲಿನ ವಿಶ್ವಾಸದ ವಿಷಯದಲ್ಲಿ ಜನರ ಮನಸಿನಲ್ಲಿ ತಪ್ಪು ಅಭಿಪ್ರಾಯಗಳನ್ನು ಹುಟ್ಟಿಸತಕ್ಕದು ಬಾಹ್ಯಾಡಂಬರದ ವಿನಂತಿಯೇ ಹೊರತು ಬೇರೆಯಲ್ಲವೆಂಬದಾಗಿ ಹೊರಡಿಸಿರುವ ಪ್ರಕಟನೆಯ ಅಂಶಗಳೆಲ್ಲಾ ನ್ಯಾಯಸಮ್ಮತವಾದವಲ್ಲವೆಂದು ಯಾರೂ ಹೇಳುವಂತಿಲ್ಲ.

ಮೊದಲನೆಯದಾಗಿ ಈ ಪ್ರಕಟಣೆಯಂತೆ ವಸೂಲಾತಿಯ ಕ್ರಮವನ್ನೆಲ್ಲ ನಡಿಸಿ ವಸೂಲಾತಿಗೆ ರಹ ಇಲ್ಲವೆಂಬವನ್ನು ದೃಢೀಕರಿಸಿ ಭೂಮಿಯನ್ನು ಹರಾಜಿಗೆ ಇಡುತ್ತಾರೋ ಇಲ್ಲವೋ ಎಂಬದನ್ನು ತಿಳಿದುಕೊಳ್ಳಬೇಕಾದರೆ ಈಗಾಗಲೇ ತಿದ್ದುಪಡಿಯನ್ನನುಸರಿಸಿ ಭೂಮಿಯನ್ನು ಕೊಂಡುಕೊಳ್ಳುವ ವಿಧಾನವನ್ನು ಆಚರಣೆಗೆ ತರಲುದ್ಯುಕ್ತರಾಗಿರುವದು ನ್ಯಾಯವೇ? ಹೇಳುವದೊಂದು ಮಾಡುವದೊಂದು ಆದರೆ ನ್ಯಾಯವೆಲ್ಲಿ? ರೈತನ ನೆಮ್ಮದಿಗೆ ಅವಕಾಶವೆಲ್ಲಿ? ಎಂಬದು ಗೊತ್ತಾಗುವದಿಲ್ಲ.

ಭೂಮಿಯು ರೈತನದೇ ಹೊರತು ಸರ್ಕಾರದಲ್ಲವೆಂಬದನ್ನು ಯಾರೂ ಅಲ್ಲಗಳೆಯಲಾರರು. ಸರ್ಕಾರಕ್ಕೆ ಅದರ ಉತ್ಪತ್ತಿಯ ಒಂದು ಭಾಗವನ್ನು ದೇಶದ ಹಾಗೂ ಜನರ ಹಿತರಕ್ಷಣೆಗಾಗಿ ಸಲ್ಲಿಸಬೇಕಾದ ಭಾಗವನ್ನು ಎತ್ತಾವಳಿ ಮೊದಲು ತಕ್ಕ ಖಾನೂನು ಕಾಯಿದೆಗಳು ಜಾರಿಯಲ್ಲಿರತಕ್ಕದ್ದು ನ್ಯಾಯ ಮತ್ತು ಧರ್ಮಸಮ್ಮತವಾಗಿದೆ. ಫಸಲಿನ ಉತ್ಪತ್ತಿ ಮತ್ತು ಚರಜಿಂದಗೆಗಳು ಯಾವುದೊಂದೂ ಇಲ್ಲವೆಂಬದನ್ನು ದೃಢೀಕರಿಸಿದ ನಂತರ ಭೂಮಿಯನ್ನು ಕೊಂಡುಕೊಳ್ಳುವುದು ಅಥವಾ ವಹಿಸಿಕೊಳ್ಳುವುದು ನ್ಯಾಯವೇ ಆಗಿದೆ. ಹಾಗಿಲ್ಲದೆ ತಮ್ಮ ಕೆಲಸವನ್ನು ಸರಾಗವಾಗಿ ನಡೆಸಿಕೊಳ್ಳಲು ಭೂಮಿಯನ್ನು ಹರಾಜಿಗೆ ಇಡುವುದರಿಂದ ರೈತರ ನೆಮ್ಮದಿಗೆ ತುಂಬಾ ಭಂಗವಾಗದಿರಲಾರದು.

ಮದ್ರಾಸಿನಲ್ಲಿ ಹಿಡುವಳಿಯ ನಿಬಂಧನೆಗಳಿಗೂ ಮತ್ತು ಹಕ್ಕು ಬಾಧ್ಯತೆಗಳಿಗೂ ಇಲ್ಲಿಯದಕ್ಕೂ ಒಂದಕ್ಕೊಂದು ಹೋಲಿಕೆ ಇದೆಯೋ ಇಲ್ಲವೋ ಎಂಬದು ತಿಳಿಯದು.

ಇಲ್ಲಿಯಾದರೋ ಇತ್ತೀಚೆಗೆ ಜೀವನಾಂಶದ ಪಾಲುದಾರಿಕೆಯ ಪದ್ಧತಿ ಜಾರಿಗೆ ತರಲ್ಪಟ್ಟು ಕುಟುಂಬದ ಆಸ್ತಿಗಳು ಛಿನ್ನಭಿನ್ನವಾಗಿ ಒಂದು ಪಟ್ಟೆಗೆ ಹತ್ತಾರು ಜನರು ಕಂದಾಯಕೊಡುತ್ತಾರೆ. ಅದರಂತೆ ಸರ್ಕಾರದವರು ಕಟ್ಟಿಸಿಕೊಳ್ಳುವುದು ಮಾತ್ರವಲ್ಲ, ಜಮಾಬಂದಿಯ 6 ನೇ ಕಲಂನಲ್ಲು ಅನುಭವದಾರರ ಹೆಸರುಗಳನ್ನು ಸಹ ದಾಖಲು ಮಾಡಿರುತ್ತಾರೆ. ಅಂದಮೇಲೆ ಸರ್ಕಾರಕ್ಕೂ, ಜನತೆಗೂ ಉಂಟಾಗುವ ತೊಂದರೆಯನ್ನು ತಪ್ಪಿಸುವಂತೆ ವಸೂಲಾತಿಯ ಬಗ್ಗೆ ಇಟ್ಟುಕೊಳ್ಳುವ ಪುಸ್ತಕದಲ್ಲು (ಡಿ. ಸಿ. ಬಿ.) ಭಾಗದಾರರ ಹೆಸರನ್ನೆಲ್ಲ ಬರಾಯಿಸಿಕೊಂಡು ಅವರವರಿಂದ ಬರಬೇಕಾದ ಕಂದಾಯ ಇಂತಿಷ್ಟೆಂಬದನ್ನು ಸಹ ನಿರ್ಧರಿಸಿ ವಸೂಲಾತಿಯ ಕ್ರಮವನ್ನು ಜಾರಿಗೆ ತರಬಾರದೇಕೆ?

ವಸೂಲಾತಿಗೆ ನ್ಯಾಯವಾದ ಕಾರ್ಯಕ್ರಮ ಇಟ್ಟುಕೊಳ್ಳದೆ ಯಾರು ಬೇಕಾದರು ಕಂದಾಯ ಕಟ್ಟಿದಲ್ಲಿ ರಶೀತಿ ಕೊಟ್ಟು ಕಟ್ಟಿಸಿಕೊಳ್ಳುತ್ತಾರೆ. ಬಾಕಿಯಾದರೆ ಮಾತ್ರ ಯಾರಿಂದ ಏನೆಂಬ ವಿಚಾರವಿಲ್ಲದೆ ಪಟ್ಟೆದಾರನಿಗೆ ಮಾತ್ರ ನೋಟೀಸ್ ಕೊಟ್ಟು ಕಂದಾಯ ಕಟ್ಟದವನ ಹಿಸೆಯ ಭೂಮಿಯನ್ನು ಅವನ ತಿಳವಳಿಕೆಗೆ ಬಾರದೇನೆ ಹರಾಜು ಮಾಡುವದಲ್ಲವೆಂತ ಹೇಳಲಿಕ್ಕಾಗುವದಿಲ್ಲ.

ಬಾಕಿಯ ವಸೂಲಾತಿಗೆ ಪಟ್ಟೆದಾರರಿಗೆ ನೋಟೀಸ್ ಕೊಡುವಾಗಲಾದರು ಭಾಗದಾರರು ಇಂತಿಂಥವರಿಂದ ಇಷ್ಟಿಷ್ಟು ಮೊಬಲಗು ಬಂದಿದೆ ಎಂಬ ವಿವರ ಒಂದೂ ಇಲ್ಲದೆ ಒಟ್ಟು ಕಂದಾಯ ಇಂತಿಷ್ಟು ಬಾಕಿ ಎಂಬದಾಗಿ ಮಾತ್ರ ಕೊಡುವದರಿಂದ ಪಟ್ಟೆದಾರರು ಯಾರಿಂದ ಎಷ್ಟೆಂಬದನ್ನು ಹೇಗೆ ತಾನೆ ತಿಳಿದುಕೊಂಡು ವಸೂಲಾತಿಗೆ ಸಹಾಯಕರಾಗುವ ಬಗೆ ಹೇಗೆಂಬದು ತಿಳಿಯದವರಾಗುವದರಿಂದ ತುಂಬಾ ತೊಂದರೆಗೆ ಈಡಾಗಬೇಕಾಗಿದೆ.

ಹರಾಜು ಇಸ್ತಿಹಾರನ್ನು ಆ ತಾಲೋಕಿನ ಸರಹದ್ದಿನೊಳಗೆ ವಾಸಿಸುವ ಭಾಗದಾರರ ಮೇಲೆ ಜಾರಿಯಾದರೂ ಮಾಡತಕ್ಕದೆಂಬ ನಿಬಂಧನೆಯನ್ನು ಇಟ್ಟುಕೊಳ್ಳದಿರುವದರಿಂದ ಕಂದಾಯ ಪಾವತಿ ಮಾಡಿದವರ ಭಾಗದ ಭೂಮಿಯು ಹರಾಜು ಮಾಡಲ್ಪಡುವಂತಾಗಿ ಅನೇಕರು ತುಂಬಾ ಕಷ್ಟ ನಷ್ಟಗಳಿಗೆ ಒಳಗಾಗುತ್ತಾರೆ.

ಉದಾಹರಣೆಗಾಗಿ ನಮ್ಮ ಕುಟುಂಬದ ಭೂಮಿಯು ಜಂಟಿ ಜಮಾಬಂದಿಯಾಗಿ ದಾಖಲು ಮಾಡಲ್ಪಟ್ಟಿರುತ್ತೆ. ಇದರಲ್ಲಿ 14 ಭಾಗದಾರರು ಇದ್ದೇವೆ. ಕೆಲವರು ದೇಶದಿಂದ ಹೊರಗೆ ಇರುತ್ತಾರೆ. ಕೆಲವರು ಬೇರೆ ತಾಲೋಕಿನಲ್ಲಿ ವಾಸಿಸುತ್ತಾರೆ. ಮತ್ತೆ ಕೆಲವರು ತಾಲೋಕಿನೊಳಗೂ ಭೂಮಿ ಇರುವ ನಾಡಿನಲ್ಲಿ ವಾಸವಿದ್ದಾರೆ. ಕೆಲವರು ಸರಿಯಾಗಿ ಕಂದಾಯ ಪಾವತಿ ಮಾಡುತ್ತಾರೆ. ಭೂಮಿ ತೀರ ನಾಗುವಳಿಯಾಗುತ್ತಲಿದೆ. ಎಲ್ಲರಿಗೂ ಚರಜಿಂದಿಗೆಗಳಿವೆ. ಹೀಗಿದ್ದರೂ ಕೆಲವರು ಹಿಂದೇ ವರ್ಷದ ಕಂದಾಯವನ್ನು ಸಹ ಪಾವತಿ ಮಾಡಲಿಲ್ಲವೆಂದರೆ, ರೆವಿನ್ಯೂ ಅಧಿಕಾರಿಗಳ ಅಜಾಗ್ರತೆಯೇ ಸರಿ. ಈ ರೀತಿ ಕಂದಾಯ ಬಾಕಿ ಆದದಕ್ಕಾಗಿ ಜಂಟಿ ಪಟ್ಟೆದಾರರ ಪೈಕಿ ಒಬ್ಬರ ಭಾಗದ 500 ಭಟ್ಟಿ ಭೂಮಿಯು ಹರಾಜು ಮಾಡಲ್ಪಟ್ಟು ಯಾರೂ ಕೊಂಡುಕೊಳ್ಳದ್ದರಿಂದ ಸರಕಾರದವರು ಕೊಂಡುಕೊಂಡ ಕಾರಣ ತಾವು ಬಾಕಿದಾರರ ಚರಜಿಂದಿಗಳ ಜಪ್ತಿಯಿಂದ ಕಂದಾಯ ಭರ್ತಿಮಾಡಿಕೊಂಡು ಭೂಮಿಯನ್ನು ಉಳಿಸಿಕೊಡಬೇಕೆಂತ ಅರ್ಜಿಬರಕೊಂಡ ಮೇರೆ ಚರಜಿಂದಿಗೆ ಜಪ್ತಿಗೆ ಅರ್ಹವಾಗಿದೆ ಎಂಬದಾಗಿ ಪಟ್ಟೆದಾರರು ಹೇಳಿದ್ದು ಕೇಳಿ ತುಂಬಾ ಆಶ್ಚರ್ಯವಾಯಿತು.

ಒಂದೋ ಸರಕಾರದವರು ಕುಟುಂಬದ ಕಂದಾಯ ವಸೂಲಾತಿಗಾಗಿ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕು. ಇಲ್ಲವಾದರೆ ಜೀವನಾಂಶದ ಪಾಲುದಾರಿಕೆ ಪದ್ಧತಿಯನ್ನು ರದ್ದು ಮಾಡಬೇಕು. ಹಾಗಿಲ್ಲದೆ ತಮಗೆ ತೋಚಿದಂತೆ ವರ್ತಿಸುವದಾದರೆ ಕುಟುಂಬದ ಆಸ್ತಿಗಳು ಕಂಡಾಬಟ್ಟೆ ಆಗುವದು ಮಾತ್ರವಲ್ಲ, ಭಾಗದಾರರು ತುಂಬಾ ಕಷ್ಟ ನಷ್ಟಗಳಿಗೆ ಈಡಾಗಲೇಬೇಕಾಗುತ್ತದೆಂಬದನ್ನು ಸರಕಾರದವರು ಮರೆಯಬಾರದು.

'ಭಾಗದಾರ.'

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ 52,54,750 ರೂ. ಬಾಬಿನ 4689 ಪ್ರಪೋಸಲ್‌ಗಳು ಸಿಕ್ಕಿವೆ. ಅವರಲ್ಲಿ ಹಿಂದಿನ ವರ್ಷದ ಪ್ರಪೋಸಲ್‌ಗಳ 1447 ಪ್ರಪೋಸಲ್‌ಗಳ ಬಾಬ್ತು 40,67,650 ರೂ. ಗಳ ಒಪ್ಪಿಗೆಯಾಗಿ ವಾರ್ಷಿಕವಾಗಿ 2,21,959-6-0 ರೂ. ವಿಮಾ ಕಂತು ಬರುತ್ತೆ. ಕಂಪನಿಯಿಂದ ಭರವಸೆ ಪಡೆದಿರುವ ಹಣ ರೂ. 39,38,150. ಬಾಕಿ ರೂ. 1,29,500 ಪುನಃ ಭರವಸೆ ಕೊಟ್ಟದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ವಿಲೇವಾರಿಯಾಗದೆ, ಮುಂದುವರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತಿವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ. 4,13,775 ಹೆಚ್ಚಿದೆ.

ಈ ಕೆಳಗಿನ ಒಳ್ಳೆ ಸಂಗತಿಗಳಿಂದ ಲಭಿಸಿದ ತೃಪ್ತಿಯನ್ನು ಮೆಂಬರುಗಳೊಡನೆ ಅನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯಾ ಸರ್ಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪೆನಿಗಳಲ್ಲೊಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಶೂರೆನ್ಸ್ ಇಯರ್ ಬುಕ್' ಎಂಬುವುದರಿಂದ ತಿಳಿದುಬರುತ್ತದೆ. ಈ ಕಂಪೆನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪೆನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ವರೆಗೆ ಶ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೆಯದಾಗಿದೆ. ಒಂದನೆಯದಾದ ಕಂಪನಿಯು ಇದಕ್ಕಿಂತ 25 ವರ್ಷಗಳ ಮುಂಚೆ ಸ್ಥಾಪಿಸಲ್ಪಟ್ಟದ್ದಾಗಿದೆ.

ವಿಮಾ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮಾ ಕಂತುಗಳ ಆದಾಯವು (ಪುನಃ ಭರವಸೆ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮಾ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ಸರಬ ವರ್ಷದ ವಿಮಾ ಕಂತಿನ ಆದಾಯವು ರೂ. 3.66,198-13-0. ಗತ ವರ್ಷದ್ದು 2,36,767-6-6 ಆಗಿದೆ.

ಜೀವವಿಮಾ ಫಂಡು:—ಈ ಕಂಪನಿಯು ಜೀವ ವಿಮಾ ಫಂಡು ರೂ. 75,258-14-9ರಿಂದ. ವ್ಯವಸ್ಥಾ ಕ್ರಮಕ್ಕೆ ಮತ್ತು ಇತರ ಖರ್ಚಿಗಾಗಿ ರೂ. 45,037-8-4 ವಜಾ ಕಳೆದು ರೂ. 21,00,421-1-3ಕ್ಕೆ ಏರಿದೆ. ಈ ಕೆಳಗೆ ಅದರ ತಪಶೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿಮಾ ಕಂತು	ಜೀವ ವಿಮಾ ಫಂಡು
1ನೇ ವರ್ಷದ	ರೂ. 1,46,949	ರೂ. 15,619
2ನೇ ವರ್ಷದ	„ 2,36,767	„ 75,259
3ನೇ ವರ್ಷದ	„ 3,66,199	„ 2,00,421

ಈ ಮೇಲಿನ ಅಂಕೆ ಸಂಖ್ಯೆಗಳು ಕಂಪನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತ ವಿಮಾ ಕಂಪನಿಗಳ ವಾರ್ಷಿಕ ವೃತ್ತಾಂತದಲ್ಲಿ ಹೊಗಳಲರ್ಹವಾದದ್ದೇ ಆಗಿದೆ.

ಭಾರತ ಜೀವವಿಮಾ ಕಂಪೆನಿಗಳ ಜಟ್ಟಿನ ಮೇರೆ ಠೇವಣಾತಿ:—ಈ ಜಾಮೀನು ಮೇರೆ ಠೇವಣಾತಿ ಸಂಬಂಧಪಟ್ಟದ್ದು ರೂ. 2 ಲಕ್ಷವನ್ನು ಪೂರ್ತಿಯಾಗಿ ಡಿಪಾಜಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷವುಳ್ಳವರಾಗಿರುವರು.

ಸಿ. ಯಂ. ತಿಮ್ಮಯ್ಯ,

(52-15) ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

ಯೂನಾನಿ ಫಾರ್ಮಸಿಯ ಉತ್ತಮ ಔಷಧಿಗಳು.

ಉಬ್ಬಸ ಸಂಹಾರಿ (Asthma cure) ಕೆಲವೇ ದಿನಗಳ ಸೇವನೆಯಿಂದ ಉಬ್ಬಸವನ್ನು ಖಾತ್ರಿಯಾಗಿ ಗುಣಪಡಿಸುತ್ತದೆ. 40 ದಿನದ ಔಷಧಿಗೆ ಕ್ರಯ ರೂ. 5—12—0.

ಅಂಬರ್ ಕೂವಲಿಸ್ಟೆ, ಸುಗಂಧಯುಕ್ತ ಆಮ್ಲ ಕೇಶ ತೈಲ ಅಲ್ಲದೆ ಎಲ್ಲಾ ರೋಗಗಳಿಗೂ ರಾಮಬಾಣದಂತಿರುವ ಮಾತ್ರೆಗಳೂ, ಚೂರ್ಣಗಳೂ, ಲೇಹಗಳೂ, ತೈಲಗಳೂ ಮತ್ತು ಕೇಶ ತೈಲಗಳೂ ಸಹ ತಯಾರಿರುತ್ತವೆ.

ಬೇಗನೆ ಬರೆಯಿರಿ:—

ಯಂ. ಯಂ. ಸಿದ್ದೀಕ್,

ಪ್ರೊಪ್ರೈಟರ್,

28 **ಯುನಾನಿ ಔಷಧಶಾಲೆ, ಮಡಿಕೇರಿ, ಕೊಡಗು.**

ಯೂರೋಪಿನಲ್ಲಿ

ಮಹಾ ಯುದ್ಧವೇ?

ಫ್ರಾನ್ಸ್ ಯುದ್ಧಕ್ಕೆ ತಯಾರಾಯಿತು.

ಯೂರೋಪಿನ ದೃಷ್ಟಿಯೆಲ್ಲಾ ಈಗ ಚೆಕೊಸ್ಲೋವಾಕಿಯದ ಮೇಲೆ ನಿಂತಿದೆ. ಜರ್ಮನರು ಒಂದು ವೇಳೆ ಚೆಕೊಸ್ಲೋವಾಕಿಯದ ಮೇಲೆ ಮುಂದುವರಿದರೆ ಫ್ರಾನ್ಸ್ ಯುದ್ಧ ಕ್ಷೇತ್ರಕ್ಕೆ ಧುಮುಕುವ ದೆಂಬುದಕ್ಕೆ ಸಂಶಯವೇ ಇಲ್ಲ. ಇಂಗ್ಲೆಂಡಿನವರ ಧೋರಣೆಯನ್ನು ಕಾಯದೆ ಏಕಾಂಗಿಯಾಗಿ ಯುದ್ಧ ಪ್ರಾರಂಭಿಸಲು ಸಿದ್ಧವಾಗಿರುವರು. ರಜೆಯಲ್ಲಿದ್ದ ತಮ್ಮ ಸೇನಾ ನೌಕರನ್ನೆಲ್ಲಾ ಫ್ರಾನ್ಸ್ ಇಂದು ಕಾರ್ಯಕ್ಕೆ ಕರೆಸಿದೆ. ಈ ವಿಚಾರವನ್ನೆಲ್ಲಾ ಫ್ರಾನ್ಸು ಇಂಗ್ಲೆಂಡಿಗೆ ತಿಳಿಸಿದೆ.

ರಜರ್ವಿನಲ್ಲಿದ್ದ ಸಾವಿರಾರು ಸೈನಿಕರು ಯುದ್ಧ ಸನ್ನದ್ಧರಾಗಿದ್ದಾರೆ. ಮೆಗಿನೊಟ್ ಗಡಿ ಭದ್ರಕ್ಕೊ ಒಂದು ಲಕ್ಷ ಸೈನ್ಯವಿರಿಸಿದ್ದಾರೆ. ಇದರ ಬೆಂಬಲದಲ್ಲಿ ಪುನಃ ಇಮ್ಮಡಿ ಸೈನ್ಯವಿರಿಸಿರುವರಾಗಿ ವರ್ತಮಾನ. ಇತರ ಸೈನ್ಯಗಳೂ ಯುದ್ಧ ಸನ್ನದ್ಧರಾಗಿಯೇ ಇರುವವು.

ಈ ಮಧ್ಯೆ ಬ್ರಿಟಿಷರು ಫ್ರಾನ್ಸು ಯುದ್ಧರಂಗಕ್ಕಿಳಿದರೆ ನಾವು ಇಳಿಯದೆ ನಿರ್ವಾಹವಿಲ್ಲವೆಂದು ಜರ್ಮನಿಗೆ ತಿಳಿಸುವ ಅಭಿಪ್ರಾಯ ಪಡುತ್ತಿದ್ದಾರೆ. ಅಂತು ಯುದ್ಧದ ಕಾರ್ಮೋಡಗಳು ಒಟ್ಟಾಗಿ ಯೂರೋಪಿನಲ್ಲಿ ಕತ್ತಲೆ ಕವಿದಿದೆ. ಪರಿಣಾಮವೇನೆಂದು ನಿರೀಕ್ಷಿಸುವ.

ಚೈನಾ—ಜಪಾನ್ ಯುದ್ಧದ ಮುನ್ನಡೆ.

ಹಾಂಕೋ ನಗರದ ಸ್ವಾಧೀನತೆಗಾಗಿ ಘೋರ ಯುದ್ಧವು ನಡೆಯಿತು. ಇಂಥಾ ಭಯಂಕರ ಕದನವು ಈ ವರೆಗೆ ನಡೆದಿಲ್ಲವೆಂದು ಹೇಳುವರು. ಕಳೆದ 15 ದಿನಗಳಿಂದ 20 ಸಾವಿರ ಚೀನೀಯರು ಹತರಾಗಿರುವರೆಂದು ಜಪಾನರು ಹೇಳುತ್ತಾರೆ.

ಚೀನೀ ಸೈನ್ಯವು ಹಿಂದಕ್ಕೆ ಸರಿಯುವುದಕ್ಕಾಗಿ ಒಂದಷ್ಟು ದಿನದಿಂದ ಚೀನೀಯರು ಒಪ್ಪುತ್ತಾರೆ. ಆದರೆ ಚೆಯಾಂಗ್ ಕೈಶೆಕರ ಸೈನ್ಯಾಧಿಕಾರಿಯೊಬ್ಬರ ಅಧೀನದಲ್ಲಿ ಸೈನ್ಯಗಳು ಶೇಖರಿಸಲ್ಪಡುತ್ತಿವೆ. ಕ್ವಾಂಗ್ಸಿ ವಿಭಾಗದಲ್ಲಿಯೂ ಚೀನೀ ಸೈನ್ಯಗಳು ಜಪಾನರನ್ನು ಎದುರಿಸುತ್ತಿವೆ.

ಜಪಾನರಿಗೆ ಹೊಸ ಸೈನ್ಯ.

ಉತ್ತರ ಭಾಗಗಳಲ್ಲಿ ಚೀನೀಯರ ಗೊರಿಲ್ಲಾ ಯುದ್ಧ ಕ್ರಮವನ್ನು ಅಡಗಿಸುವ ಮತ್ತು ಹಾಂಕೋ ಪ್ರಾಂತದ ಸ್ವಾಧೀನತೆಗಾಗಿ ಹೋರಾಡುವ ಸೈನಿಕರ ಸಹಾಯಕ್ಕಾಗಿ ಜಪಾನಿನಿಂದ ಹೊಸ ಸೈನ್ಯಗಳನ್ನು ತರಿಸುತ್ತಿದ್ದಾರೆ. ಜಪಾನಿಯರು ತಮಗಾಗಿ ಯುದ್ಧ ಮಾಡಲು ತರಬೇತು ಮಾಡಿದ ಚೀನೀ ಸೈನ್ಯದವರು ಜಪಾನ್ ಪಕ್ಷದಿಂದ ಓಡಿ ಹೋಗಿ ಚೀನೀಯರ ಕಡೆಯಿಂದ ಯುದ್ಧ ಮಾಡುತ್ತಿದ್ದಾರೆ.

ಈ ವಾರದ ಆದಿ ಭಾಗದಲ್ಲಿ ಕ್ವಾಂಗ್ಸಿಯು ಜಪಾನರ ವಶವಾಯಿತು. ಆದರೆ ಚೀನೀಯರ ಪುನಃ ಅದನ್ನು ವಶಪಡಿಸಿಕೊಂಡಿರುವರು. ಇದರಿಂದ **ಹಾಂಕೋ** ಕಡೆಗೆ ಧಾವಿಸುತ್ತಿದ್ದ **ಜಪಾನು ಸೈನ್ಯಕ್ಕೆ** ಮುಂದುವರಿಯಲಸಾಧ್ಯವಾಗಿದೆ.

ಭಯಂಕರ ಕಾಳಗ.

ಜೊನ್‌ವೆಯೂ ಎಂಬಲ್ಲಿ ಜಪಾನರು ಹೆಚ್ಚಿನ ನಷ್ಟಕ್ಕೊಳಗಾಗಿ ಹಿಂದಕ್ಕೆ ಸರಿಯಬೇಕಾಗಿ ಬಂತು. **ಯೇಕಿಹಾಸ್ತಿ ಪರ್ವತ ಪ್ರದೇಶದಲ್ಲಿ ಇತ್ತಂಡದವರೊಳಗೆ ಘೋರ ಸಂಗ್ರಾಮ ನಡೆಯುತ್ತಿವೆಯೆಂದು ಜಪಾನು ಪಕ್ಷದ ವಾರ್ತೆಯಿಂದ ತಿಳಿದು ಬರುತ್ತದೆ.**

ಸ್ವೀಕಾರ.

ಅಮಾತ್ಯನಂದಿನಿ.

ಕೊಡಗಿನ ಶ್ರೀ ಭಾರತೀಸುತ ಕೊಡ್ಲಿಪೇಟೆ ಇವರಿಂದ ರಚಿತವಾದ **ಮತ್ತು** ಶೇಷಾಚಲ ಗ್ರಂಥಮಾಲೆಯ **ಪ್ರಕಾಶಕರಾದ ಶ್ರೀ** ಬಿ. ವಿ. ಕಾಳೆಯವರಿಂದ ಪ್ರಕಾಶಿಸಲ್ಪಟ್ಟ 'ಅಮಾತ್ಯನಂದಿನಿ' ಎಂಬ ಕಾದಂಬರಿಯನ್ನು ಸಾದರದಿಂದ ಸ್ವೀಕರಿಸಿರುತ್ತೇವೆ. ಕ್ರೌನ್ 1/8 ಸೈಜು, ಪೇಜುಗಳು 300. ಬೆಲೆ ರೂ. 1-4-0.

ಅಂತರಂಗ.

ಪ್ರತಿ ಆದಿತ್ಯವಾರ ಉಡುಪಿಯಿಂದ ಶ್ರೀ. ಎಸ್. ಯು. ಪಣಿಯಾಡಿಯವರ ಸಂಪಾದಕತ್ವದಲ್ಲಿ ಮೊದಲು ಶ್ರೀ. ವಿ. ವೆಂಕಟರಮಣಾಚಾರ್ಯರಿಂದ ಪ್ರಕಟಿಸಲ್ಪಡುವ 'ಅಂತರಂಗ' ಪತ್ರಿಕೆಯ ಈ ತಾ. 4 ಮತ್ತು 11 ರ ಎರಡು ಸಂಚಿಕೆಗಳನ್ನು ಆದರದಿಂದ ಸ್ವೀಕರಿಸಿರುತ್ತೇವೆ. ಸೈಜು 1/4 ಕ್ರೌನ್. ಪುಟ 50. ವಾರ್ಷಿಕ ಚಂದಾ ರೂ. 3-0-0.

ಮಾರಾಟಕ್ಕಿದೆ.

ಈ ಕೆಳಗೆ ನಮೂದಿಸಿದ ಚಹರೆಯ ಕೊಡಗು ಸರ್ಕಾರದ ಒಂದು ಮುರ್ರಾ ಜಾತಿಯ ಬೀಜದ ಕೋಣವು ಮಾರಾಟಕ್ಕಿದೆ. ಇದು ಗಾಡಿಗೆ ಕಟ್ಟುವುದಕ್ಕೂ, ನೀರು ಸಾಗಿಸುವ ಏತಾಲಿ ಕೆಲಸಕ್ಕೂ ಬಹಳ ಪ್ರಯೋಜನವಾಗುತ್ತದೆ. ಇದರ ಬೆಲೆ ಹೆಚ್ಚು ಕಡಿಮೆ ಒಂದು ನೂರು ರೂಪಾಗಳು. ಖಾಯಿಷ್‌ದಾರರು ಒಡನೆ ಕೊಡಗು ಡಿಸ್ಟ್ರಿಕ್ಟ್ ವೆಟರಿನರಿ ಆಫೀಸರ್, ಮಡಿಕೇರಿ, ಇವರ ನಿವಾಸಕ್ಕೆ ಬರೆದುಕೊಳ್ಳಬಹುದು. ಈ ಕೋಣವು ಈಗ ಫ್ರೇಜರ್‌ಪೇಟೆ ಸರ್ಕಾರಿ ಗೋವುಗಳನ್ನು ಸಾಕುವ ಫಾರಂನಲ್ಲಿದೆ.

ಇದರ ವಿವರ.

1. ವಯಸು—5 ವರ್ಷ.
2. ಎತ್ತರ—4 ಅಡಿ 5 ಇಂಚು.
3. ದಪ್ಪ—7 ಅಡಿ.
4. ಉದ್ದ—7 ಅಡಿ.
5. ಭಾರ—1,200 ಪೌಂಡುಗಳು.

ಸಿ. ಬಿ. ಸೋಮಣ್ಣ,

ಡಿಸ್ಟ್ರಿಕ್ಟ್ ವೆಟರಿನರಿ ಆಫೀಸರ್,

4-2 **ಮಡಿಕೇರಿ.**

ದೇವದತ್ತ.

ಸಾಮಾಜಿಕ ಕಾದಂಬರಿ.

ಅಧ್ಯಾಯ ೪.

ದೇವದತ್ತನಿಗೆ ಎರಡು ದಿವಸಗಳಿಂದ ಜ್ವರವಿಲ್ಲ. ಆದರೆ ಶರೀರವು ಬಹಳ ಮಟ್ಟಿಗೆ ಕ್ಷೀಣವಾಗಿದೆ. ಡಾಕ್ಟರರ ಅಭಿಪ್ರಾಯದಂತೆ ಅವನನ್ನು ಹೊರಗೆ ತಿರುಗಾಡಲು ಗುಣವತಿಯು ಬಿಡಲಿಲ್ಲ. ಆದುದರಿಂದ ಅವನು ತನ್ನ ಮಲಗುವ ಕೋಣೆಯ ಗವಾಕ್ಷವನ್ನು ಅಗಲವಾಗಿ ತೆರೆದು ಕೊಂಡು ಹೊರಗಿನ ಪ್ರಕೃತಿಯ ಸೌಂದರ್ಯವನ್ನು ತನ್ನ ಕ್ಷೀಣವಾದ ನೇತ್ರಗಳಿಂದ ಪಾನಮಾಡುತ್ತಾ ಆನಂದಿಸುತ್ತಿದ್ದನು.

ವಸಂತಕಾಲ. ಸುಮಾರು ಹತ್ತು ಗಂಟೆಯ ಸಮಯವಾಗಿತ್ತು. ನೀಲಾಕಾಶದಲ್ಲಿ ದಿನಮಣಿಯು ಮೇಲಮೇಲಕ್ಕೇರಿದಂತೆ ನೈಸರ್ಗಿಕ ಸೌಂದರ್ಯವು ಇಮ್ಮಡಿಸುತ್ತಿತ್ತು. ನಿಬಿಡವಾದ ಹಸುರೆಲೆ, ಚಿಗುರೆಲೆಗಳಿಂದ ಕೂಡಿದ ಗಿಡಮರಗಳ ಗೆಲ್ಲುಗಳು, ಮಂದಾನಿಲನ ಬೀಸಾಟದಿಂದ ನರ್ತನಕ್ಕಾರಂಭಿಸಿದ್ದುವು. ಬಿಸಿಲಿನ ತಾಪವು ಹೆಚ್ಚಾದ ಹಾಗೆ ಪಕ್ಷಿ ಸಮೂಹವು ಬಯಲು ಪ್ರದೇಶಗಳನ್ನು ಬಿಟ್ಟು ನೇರ್ಪರಗಳ ಕೊಂಬೆಗಳಲ್ಲಿ ಮಧುರ ಗಾನ ಮಾಡುತ್ತಾ ನಲಿದಾಡುತ್ತಿದ್ದುವು. ಸುತ್ತುಮುತ್ತಲಿನ ತರುಲತೆಗಳ ಪುಷ್ಪಗಳಿಂದ ಮಕರಂದವನ್ನು ಹೀರುತ್ತಿದ್ದ ದುಂಬಿಗಳ ಝೇಂಕಾರವು ಕರ್ಣಾನಂದಕರವಾಗಿತ್ತು.

ಇವನ್ನೆಲ್ಲಾ ಅನುಭವಿಸುತ್ತಾ ಇದ್ದ ಹಾಗೆ ದೇವದತ್ತನಿಗೆ ಒಮ್ಮೆಯೇ ಚಾರುದತ್ತನ ಯೋಚನೆಯಾಯಿತು. 'ಪರೀಕ್ಷೆಗೆ ಮೊದಲು ದಿವಸಕ್ಕೆ ನಾಲ್ಕು ಸಾರಿ ನನ್ನ ಮನೆಗೆ ಬರುತ್ತಾ ನನ್ನ ಆಪ್ತಮಿತ್ರನಂತೆ ನಟಿಸುತ್ತಿದ್ದವನು, ನನಗೆ ಇಷ್ಟು ಕಾಯಿಲೆಯಾದಾಗ್ಯೂ ಒಂದು ಸಾರಿಯಾದರೂ ಬಂದು ನೋಡಲಿಲ್ಲವಲ್ಲ. ಎಂತಹ ನಟನೆ! 'ನಿನ್ನನ್ನು ಒಂದು ದಿವಸ ಕಾಣದಿದ್ದರೆ ನನಗೆ ಒಂದು ವರ್ಷವಾದ ಹಾಗೆ ಆಗುತ್ತದೆ. ಎಂದು ಹೇಳಿದನಲ್ಲವೇ? ಎಂತಹ ಚಟಪಟಿಕೆಯ ಮಾತು! ನಾನವನ ಮಾತುಗಳನ್ನು ಸತ್ಯವೆಂದೇ ನಂಬಿದೆನಲ್ಲಾ! ಆ ದಿವಸವೇ'.........ಎಂದು ಯೋಚಿಸುವಷ್ಟರಲ್ಲಿ ಹೊರಗೆ ಯಾರೋ ಒಬ್ಬರು ದೇವದತ್ತನ ತಾಯಿಯನ್ನು ಕುರಿತು 'ಅಮ್ಮಾ! ದೇವದತ್ತನ ಜ್ವರವು ಈಗ ಹೇಗಿದೆ?' ಎಂದು ಕೇಳುವುದು ಕೇಳಿಬಂತು. ಸ್ವರದಿಂದಲೇ ಚಾರುದತ್ತನೆಂಬುವುದು ದೇವದತ್ತನಿಗೆ ಗೊತ್ತಾಯಿತು.

ತಾಯಿ—'ಈಗ ಎರಡು ದಿವಸಗಳಿಂದ ಜ್ವರವಿಲ್ಲ. ಆದರೆ ಶರೀರವು ಬಹಳ ಇಳಿದು ಹೋಗಿದೆ' ಎನ್ನುತ್ತಿದ್ದ ಹಾಗೆ ಚಾರುದತ್ತನು ದೇವದತ್ತನು ಮಲಗಿದ್ದ ಕೋಣೆಯನ್ನು ಪ್ರವೇಶಿಸಿದನು. ಚಾರುದತ್ತನು ಅವನ ಸ್ವಭಾವಿಕ ಗುಣಕ್ಕನುಸಾರವಾಗಿ ನಗುಮುಖದಿಂದ 'ಏನು ಜ್ವರವೆ? ನಾಚಿಕೆಯಾಗುವುದಿಲ್ಲವೇ ನಿನಗೆ ಸಣ್ಣ ಮಕ್ಕಳ ಹಾಗೆ ಕಾಯಿಲೆಯಾಗಿ ಮಲಗಿಕೊಳ್ಳುವುದಕ್ಕೆ?' ಎಂದು ಹಾಸ್ಯಮಾಡುತ್ತಾ ರೋಗಿಯ ವಕ್ಷಸ್ಥಳವನ್ನು ಮುಟ್ಟಿನೋಡಿ 'ಈಗ ಜ್ವರವಿಲ್ಲವಷ್ಟೇ? ದೇವರು ಒಳ್ಳೆದು ಮಾಡಿಯಾನು. ನನಗೂ ಈಗ ಕೆಲವು ದಿವಸಗಳಿಂದ ಸ್ವಲ್ಪ ಅಸ್ವಸ್ಥ. ಎರಡು ಮೂರು ಸಾರಿ ಬರಬೇಕೆಂದು ಯೋಚಿಸಿದೆ. ರಾತ್ರಿ ಜ್ವರ ಬರುತ್ತಿತ್ತು. ಕಾಯಿಲಸ್ತರು, ಕಾಯಿಲಸ್ತರನ್ನು ಕಾಣಲು ಹೋಗಬಾರದೆಂದು ಯೋಚಿಸಿ ಬರಲೇ ಇಲ್ಲ. ಅಷ್ಟರಲ್ಲಿ ನನ್ನ ನಾಚಿಕೆಗೇಡಿನ ಪರೀಕ್ಷಾ ಫಲಿತಾಂಶವು ತಿಳಿಯಿತು. ಆ ಲಾಗಾಯತಿನಿಂದ ನಾನು ಹೊರಹೊರಡಲೇ ಇಲ್ಲ. ನಾಳೆ ನಾನು ರಾಜಧಾನಿಗೆ ಹೋಗುತ್ತೇನೆ. ನಿನ್ನನ್ನು ಕಂಡು ನಿನಗೆ ತಿಳಿಸಿ ಹೋಗಲು ಬಂದಿರುವೆನು.' ಎಂದು ಹೇಳಿದನು.

ದೇವದತ್ತನಿಗೆ ಕ್ಷೀಣದಿಂದ ಸರಾಗವಾಗಿ ಮಾತಾಡಲು ಆಗುತ್ತಿರಲಿಲ್ಲ. ಅವನು ಈ ನೋವಲೇ ಮಾತನಾಡಲು ಪ್ರಯತ್ನಿಸಿದನು. ಆದರೆ ಚಾರುದತ್ತನು ಅವನಿಗೆ ಮಾತಿಗೆ ಎಡೆಕೊಡಲಿಲ್ಲ.' ಅವನ ಮಾತು ಮುಗಿದೊಡನೆಯೇ ಪರೀಕ್ಷಾ ಫಲಿತಾಂಶವು ತಿಳಿಯಿತೇ? ನಿನಗಾದ ನಾಚಿಕೆಗೇಡೇನೆಂದು ಪ್ರಶ್ನೆ ಮಾಡಿದನು.

ಚಾರುದತ್ತ—'ಇನ್ನೂ ನಿನಗೆ ಗೊತ್ತಿಲ್ಲವೇ? ನೀನು ಪಾಸಾಗಿರುವಿಯಂತೆ, ರಮೇಶನೂ ಪಾಸಾಗಿರುವನಂತೆ. ನನಗೆ ಮಾತ್ರ ಬೇರೆ ಶಾಲೆಗೆ ಹೋಗುವದಾದರೆ, ಮೇಲಿನ ತರಗತಿಗೆ ಸರ್ಟಿಫಿಕೇಟ್ ಕೊಡುತ್ತಾರಂತೆ, ನಾನಿನ್ನೂ ಶಾಲೆಗೆ ಹೋಗಿಲ್ಲ. ಇದು ನಮ್ಮ ಮಾವನವರು ತಿಳಿಸಿದ ವರ್ತಮಾನವಾಗಿದೆ. ನಾನು ನಾಳೆ ಶಾಲೆಗೆ ಹೋಗಿ ಸರ್ಟಿಫಿಕೇಟ್ ತೆಗೆದುಕೊಂಡು ರಾಜಧಾನಿಗೆ ಕಲಿಯಲು ಹೋಗುತ್ತೇನೆ.'

ದೇವದತ್ತ—'ಅಯ್ಯೋ! ನಿನ್ನ ಹೀನ ದೈವವೇ? ಅಷ್ಟೆಲ್ಲಾ ಕಷ್ಟಪಟ್ಟುದಕ್ಕಾ....'
........ಎನ್ನುವಷ್ಟರಲ್ಲಿ ಚಾರುದತ್ತನು, ಮಧ್ಯದಲ್ಲೇ 'ನನಗೇನು ವ್ಯಸನವಿಲ್ಲ. ರಾಜಧಾನಿಗೆ ಹೋಗಬೇಕೆಂದು ಆಸೆಯು ನನಗೆ ಮೊದಲಿಂದಲೇ ಇತ್ತು. ಪಾಸಾಗಿದ್ದರೆ ಅಲ್ಲಿಗೆ ಕಳುಹಿಸುವ ಸಂಭವವಿರಲಿಲ್ಲ. ಹೀಗಾದದ್ದು ನನಗೆ ಸಂತೋಷವೇ' ಎಂದನು.

'ಹಾಗಾದರೆ ಸರಿ. ಅಲ್ಲಿಯಾದರೆ ಎಲ್ಲಾ ವಿಷಯಗಳಲ್ಲೂ ಬೇಕಾದಷ್ಟು, ಅನುಕೂಲಗಳಿವೆ. ಓದಲಿಕ್ಕೂ, ಆಡಲಿಕ್ಕೂ, ಯಾವುದೊಂದು ಅಡಚಣೆಯೂ ಇಲ್ಲ. ಆದರೆ ಹೋದವನು ನಮ್ಮನ್ನೆಲ್ಲಾ ಮರೆತುಬಿಡಬೇಡ. ಕಾಗದ ಪತ್ರಗಳನ್ನು ಬರೆಯುತ್ತಿರು' ಎಂದು ದೇವದತ್ತನು ಹೇಳಿದನು.

ಚಾರುದತ್ತ—ಮರೆಯುವುದುಂಟೇ, ನೀವು ಮರೆಯಬಾರದು. ನೀನು ಮಾತ್ರ ಸರಿಯಾದ ಚಿಕಿತ್ಸೆಯನ್ನು ತೆಗೆದುಕೊಳ್ಳಬೇಕು. ಎರಡು ವಾರದ ವರೆಗೆ ಶಾಲೆಗೆ ಹೋಗಬೇಡ. ಸರಿಯಾದ 'ರೆಸ್ಟು' ತೆಗೆದುಕೋ. ಈಗ ಸ್ಕೂಲ್‍ನಲ್ಲೇನೂ ಪಾಠಗಳು ಪ್ರಾರಂಭವಾಗುವುದಿಲ್ಲ. ಶರೀರವಿದ್ದರೆ ಎಲ್ಲಾ ಇದೆ (Health is wealth) ನಿನ್ನ ಶರೀರವು ಬಹಳ ಇಳಿದು ಹೋಗಿದೆ. ಎರಡು ವಾರ ಕಳೆದೇ ಶಾಲೆಗೆ ಹೋದರೆ ಸಾಕು' ಎನ್ನುವಷ್ಟರಲ್ಲಿ ಗುಣವತಿಯು ಅಲ್ಲಿಗೆ ಬಂದಳು. ಚಾರುದತ್ತನು ಅವಳನ್ನು ಕುರಿತು 'ಅಮ್ಮಾ' ಇವನನ್ನು ಎರಡು ವಾರಗಳ ವರೆಗೆ ಶಾಲೆಗೆ ಬಿಡಬೇಡ. ಈಗ ಶಾಲೆಯಲ್ಲಿ ಪಾಠವೇನೂ ನಡೆಯುವುದಿಲ್ಲ. ಸುಮ್ಮನೆ ಹೋಗುವುದು, ಬರುವುದು ಅಷ್ಟೇ. ಸರಿಯಾಗಿ ಕಾಯಿಲೆಯು ವಾಸಿಯಾದ ನಂತರ ಹೋದರೆ ಸಾಕು ನಾನು ನಾಳೆ ಮುಖ್ಯೋಪಾಧ್ಯಾಯರಿಗೆ ಇವನಿಗೆ ಕಾಯಿಲೆ ಎಂದು ತಿಳಿಸಿ ಎರಡು ವಾರದ ರಜೆ ಕೊಡುವಂತೆ ಹೇಳುತ್ತೇನೆ' ಎಂದನು.

ಗುಣವತಿಯು ಅದಕ್ಕೆ ಸಮ್ಮತಿಸಿದಳು. ಚಾರುದತ್ತನು ದೇವದತ್ತನಿಂದ ಬೀಳ್ಕೊಂಡು, ಗುಣವತಿಯ ಆಶೀರ್ವಾದವನ್ನು ಪಡೆದು ಹೊರಟು ಹೋದನು.

ಸಾಧು ಸ್ವಭಾವಿಯಾದ ದೇವದತ್ತನು, ಚಾರುದತ್ತನ ಮನಸ್ಸಿನ ಆಳವನ್ನು ಕಂಡು ಹಿಡಿಯಲಾರದಾದನು. ಅವನು ನಿಜವಾಗಿಯೂ ಚಾರುದತ್ತನು ತನ್ನ ಕಷ್ಟ ಸಮಯಗಳಲ್ಲಿ ಸಹಾಯಕ ಎಂದು ಭಾವಿಸಿ, ಅವನ ನಡತೆಯ ವಿಷಯ ತಾನು ಮೊದಲು ಮಾಡಿದ್ದ ವೈಮನಸ್ಸನ್ನು ಬಿಟ್ಟು, ಅವನ ಸಂಗವನ್ನು ಕಳೆದುಕೊಂಡದಕ್ಕೆ ವ್ಯಸನಪಟ್ಟನು

(ಮುಂದುವರಿಯುವುದು.)

ಅಖಿಲ ಕೊಡಗು ಗೌಡ ಸಭೆಯ ಮೀಟಿಂಗಿನ ನಡವಳಿಕೆಗಳು.

ಅಖಿಲ ಕೊಡಗು ಗೌಡ ಸಭೆಯ ಮೀಟಿಂಗೊಂದು ಈ ತಾರೀಕು 9 ನೇ ಶುಕ್ರವಾರ ಅಪರಾಹ್ನ 1½ ಗಂಟೆಗೆ ಗೌಡ ರೀಡಿಂಗ್ ರೂಂನಲ್ಲಿ ಮು ಕುಂಬುಗೌಡನ ಉತ್ತಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು.

ಇಂದಿನ ಮೀಟಿಂಗಿಗೆ ಕೊಡಗಿನ ಎಲ್ಲಾ ಭಾಗಗಳಿಂದ ಸಾಧಾರಣ 200 ಜನರು ಹಾಜರಿದ್ದರು.

ಬೊಂಬಾಯಿ ಮೊದಲಾದ ಪರಸ್ಥಳಗಳಲ್ಲಿರುವ ಗೌಡ ಮಹನೀಯರುಗಳಿಂದ ಬಂದ ಶುಭ ಸಂದೇಶಗಳನ್ನು ಓದಲಾಯಿತು. ಕಲ್ಲುಡ ಮು. ಚಿಟ್ಟಿಮಾಡ ಬಿಯ್ಯಣ್ಣನವರು ಮತ್ತು ಕೆದಂಬಾಡಿ ಮುದ್ದಪ್ಪ ಬಿ. ಎ., ಯವರು 'ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆಂದು ತಮ್ಮ ಅಭಿಪ್ರಾಯಗಳನ್ನು ಪತ್ರ ಮುಖೇನ ಬರೆದು ಕಳುಹಿಸಿದ್ದನ್ನು ಸಭೆಯ ಮುಂದೆ ಓದಲಾಯಿತು.

ಕೊಡಗಿನ ಆರ್ಥಿಕ ಸ್ಥಿತಿಯನ್ನೂ, ಜನಾಂಗದ ಏಳಿಗೆಯನ್ನೂ, ಜನಾಂಗದ ಗೊತ್ತುಗುರಿ ಏನಿರಬೇಕೆಂಬುದು ಮೊದಲಾದುವನ್ನೂ, ಕೂಲಂಕುಶವಾಗಿ ಸಭೆಯಲ್ಲಿ ಚರ್ಚಿಸಿದ ನಂತರ ಈ ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದುವು.

1. 'ಕೊಡಗು ದೇಶದ ಗೌಡ ಜನಾಂಗದ ಪರವಾಗಿ ಈ ಮಹಾ ಸಭೆಯು ಕೊಡಗಿನ ಭವಿಷ್ಯತ್ತನ್ನು ಕುರಿತು ಕಾಂಗ್ರೆಸ್ ಮಹಾ ಸಭೆಯು ಹರಿಪುರದಲ್ಲಿ ಪಾಸು ಮಾಡಿದ ಠರಾವಿಗಾಗಿ ಕಾಂಗ್ರೆಸ್ ಮಹಾ ಸಭೆಯನ್ನು ಅಭಿನಂದಿಸುತ್ತದೆ. ಅಲ್ಲದೆ ಆ ಠರಾವಿಗೆ ಈ ಸಭೆಯು ತನ್ನ ಸಂಪೂರ್ಣ ಬೆಂಬಲವನ್ನು ಕೊಡುತ್ತದೆ.'

2. 'ಕೊಡಗಿನ ಈಗಿನ ಹೀನ ಸ್ಥಿತಿಯನ್ನು ಹೋಗಲಾಡಿಸಲು ಕೊಡಗು ಸರ್ಕಾರಕ್ಕೆ ಆರ್ಥಿಕ ದುಸ್ಥಿತಿಯಿಂದ ಸಾಧ್ಯವಾಗದಿರುವ ಕಾರಣ ಕೊಡಗು ಜನರ ಅಭಿವೃದ್ಧಿಗೆ ಅವಕಾಶವೇ ಇಲ್ಲದ್ದಾಗಿದೆ. ಆದ್ದರಿಂದ ಈ ಪ್ರಾಂತ್ಯವನ್ನು ಸಮ್ಯಕ್ ಕರ್ನಾಟಕದ ಪ್ರಾಂತೀಕರಣವಾಗುವ ವರೆಗೆ ಮದ್ರಾಸು ಪ್ರಾಂತ್ಯಕ್ಕೆ ಸೇರಿಸಿ ಜವಾಬ್ದಾರಿ ಸರಕಾರದ ಆಡಳಿತಕ್ಕೆ ಒಳಪಡಿಸಬೇಕೆಂದು ಇಂಡಿಯಾ ಸರಕಾರವನ್ನು ಈ ಸಭೆಯು ಕೇಳಿಕೊಳ್ಳುತ್ತದೆ.'

3. 'ಕೊಡಗಿನ ಭವಿಷ್ಯತ್ತಿನ ವಿಷಯ ಕಾಂಗ್ರೆಸ್ಸಿನ ಠರಾವು ಪ್ರಕಾರ ಕೊಡಗನ್ನು ಪ್ರತ್ಯೇಕವಾಗಿ ಇರಿಸಕೂಡದೆಂದಿದ್ದರೂ, ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಕೊಡಗನ್ನು ಪ್ರತ್ಯೇಕವಾಗಿ ಇಡಬೇಕೆಂದು ತಾರೀಖು 20-8-38 ರಲ್ಲಿ ಪಾಸು ಮಾಡಿದ ಠರಾವನ್ನು ಜಾರಿಯಲ್ಲಿ ತರಬಾರದೆಂದು ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯವರನ್ನು ಈ ಸಭೆಯು ಕೇಳಿಕೊಳ್ಳುತ್ತದೆ.'

ಸೂಚಕರು—ತೆಕ್ಕಡ ಪೂವಯ್ಯನವರು, ಅನುಮೋದಕರು—ಯಂಕನ ಮಾದಯ್ಯನವರು.

ಮೇಲಿನ ನಿರ್ಣಯಗಳನ್ನು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಗೂ, ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಗೂ, ಕೊಡಗಿನ ಚೀಫ್ ಕಮಿಷನರವರಿಗೂ ಮತ್ತು ವೈಸರಾಯಿಯವರಿಗೂ ಕಳುಹಿಸುವಂತೆ ತೀರ್ಮಾನಿಸಲಾಯಿತು.

ಈಗ ಜಾರಿಯಲ್ಲಿ ಬರಲಿಕ್ಕಿರುವ ಸಿಬ್ಬಂದಿ ಯೋಜನೆಯ ವಿಷಯವನ್ನು ಅವಲೋಕಿಸಿ, ಸಣ್ಣ ಪುಟ್ಟ ಉದ್ಯೋಗಗಳನ್ನೂ, ನಾಡು ಕಚೇರಿಗಳನ್ನೂ ಮತ್ತು ಶಾಲೆಗಳನ್ನು ವಜಮಾಡುವುದರ ಬದಲು ಅನಾವಶ್ಯದ ದೊಡ್ಡ ಉದ್ಯೋಗಗಳನ್ನು ವಜಮಾಡುವುದು ಉತ್ತಮವೆಂತಲೂ ಈ ಸಭೆಯು ಇಚ್ಛಿಸುತ್ತದೆ.

ಪ್ರಕಟಣೆಗೋಸ್ಕರ ಕೊಡಗಿನ ಎರಡು ಪತ್ರಿಕೆಗಳಿಗೂ ಇತರ ಪತ್ರಿಕೆಗಳಿಗೂ ಕಳುಹಿಸಿಕೊಡುವಂತೆಯೂ ತೀರ್ಮಾನಿಸಲಾಯಿತು.

ಓ. ಯಂ. ಪೂವಯ್ಯ
(ಗೌ. ಸೆಕ್ರೆಟರಿ.)

ಪರದೇಶಗಳಲ್ಲಿ ನಡೆಯುತ್ತಿರುವುದೇನು?

ಚೀಣಾ ಮತ್ತು ಜಪಾನ್.

ಪೂರ್ವಾಂತ್ಯದಲ್ಲಿ ಹ್ಯಾಂಕೋನಗರದ ಸುತ್ತಮುತ್ತ ಜಪಾನರು ತಮ್ಮ ವ್ಯೂಹವನ್ನು ಚೆನ್ನಾಗಿ ರಚಿಸಿ ಆಧುನಿಕ ಶಸ್ತ್ರೋಪಕರಣಗಳ ಮೂಲಕ ಘೋರ ಕದನವನ್ನು ಹೂಡಬೇಕೆಂದು ನಿರ್ಧರಿಸಿರುವರು. ಆದರೆ ಈಗ ಜಪಾನವು ತನ್ನ ಈ ಅಮೋಘ ಸಲಕರಣೆಗಳಿದ್ದರೂ ಅಪಜಯವನ್ನು ಕೈಕೊಳ್ಳಲೇ ಬೇಕಾಯಿತು. ಆದ್ದರಿಂದ ಇಂದು ಜಪಾನಿಗೆ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಯಾವುದೊಂದು ರಾಷ್ಟ್ರವನ್ನು ಬಗ್ಗು ಬಡಿಯುವದು ಅಸಾಧ್ಯವೆಂಬುದು ಮನವರಿಕೆಯಾಗಿದೆ. ಜಪಾನು ಜಗತ್ತಿನಲ್ಲೇ ವಿಖ್ಯಾತವಾದ ರಾಷ್ಟ್ರವೆಂದೂ, ಅದರಷ್ಟು ಒಗ್ಗಟ್ಟು ಮತ್ತು ಕಸುವಿರುವ ರಾಷ್ಟ್ರವು ಬೇರೊಂದಿಲ್ಲವೆಂದೂ, ಆದ್ದರಿಂದ ಅದು ಇತರ ಅಬಲ ರಾಷ್ಟ್ರಗಳ ಮೇಲೆ ಕೈಮಾಡಿ ತಮ್ಮ ಪ್ರಗತಿಯನ್ನು ಹೆಚ್ಚಿಸಬಹುದೆಂದು ತಿಳಿದಿತ್ತು. ಆದರೆ ಇಂಥಾ ಸ್ವಾರ್ಥತೆಗೆ ಇಂದಿನ ವರೆಗೆ ಎಲ್ಲಾದರೂ ಎಡೆ ಸಿಕ್ಕಿದೆಯೇ? ಪ್ರಸಿದ್ಧವಾದ ರೋಮನ್ ರಾಜ್ಯದ ಪಾಡೇನು? ನಿರಂಕುಶ ಸಾಮ್ರಾಜ್ಯವನ್ನು ಸ್ಥಾಪಿಸಬೇಕೆಂದು ಪ್ರಯತ್ನಿಸಿದ ಜಗದ್ವಿಖ್ಯಾತನಾದ ನೆಪೋಲಿಯನನ ಗತಿಯೇನು? ಈ ವಿಚಾರವನ್ನು ಜಪಾನು ಮನಸ್ಸಿಗೆ ತೆಗೆಯದೆ ತನ್ನ ಹಿತಸಂರಕ್ಷಣೆಗೆಂದು ಚೀನೀಯರನ್ನು ಕೆಣಕಿ ಪರಿದು ಹಂಚಿ ನುಂಗಲೆತ್ನಿಸುವ ತನ್ನ ಧ್ಯೇಯವನ್ನು ಸಾಧಿಸೀತೆ? ಏಸ್ಯಾಖಂಡವೆಲ್ಲಾ ಜಪಾನದ್ದೇ ಆಗಬೇಕೆಂದು ಬಯಸಿದ ಜಪಾನರ ಸಾಮ್ರಾಜ್ಯ ವಿಸ್ತರಣಾದಾಹಕ್ಕೆ ತಕ್ಕ ನೀರೆರೆಯಲ್ಪಟ್ಟಿದೆ ಎಂದರೆ ತಪ್ಪಾದೀತೆ? ಮಂಚೂಕೋದಲ್ಲಿ ಜಪಾನು ರಷ್ಯನರಿಗೆ ದಾಣಿ ಹೊಡೆದು ಬದುಕಿಕೊಂಡಿತು. ಈ ಅವಮಾನದಿಂದ ನೊಂದ ಜಪಾನು 40 ಕೋಟಿ ಪ್ರಜೆಗಳಿಂದ ತುಂಬಿದ ಚೈನಾದ ಮೇಲೆ ರೇಗಿ ಬಿದ್ದು ಈ ಅವಮಾನವನ್ನು ಪರಿಹರಿಸಬೇಕೆಂದು ಹವಣಿಸಿತು. ಆದರೆ ರಷ್ಯನರಿಂದ ಜಪಾನರಿಗಾದ ಅವಮಾನದ ಬೊಕ್ಕೆಯ ಮೇಲೆ ಚೈನಾವು ಬರೆ ಎಳೆದಿತು. ಅಂತೂ ಜಪಾನು ಕೆಣಕಿ ಕೆಣಸುವದು ಸರಿಯಲ್ಲವೆಂಬ ಪಾಠ ಕಲಿಯುವ ಪ್ರಸಂಗ ಬಂದಿದೆ.

ಇವರೊಂದಿಗೆ ಜಯುಚಾಂಗ್ ಪಟ್ಟಣದಲ್ಲಿ ಚೀನೀಯರು ಜಪಾನರನ್ನು ಸೋಲಿಸಿ ಅತಿ ದೊಡ್ಡ ಜಯವನ್ನು ಹೊಂದಿರುವರು. ಜಪಾನು ಸೈನ್ಯಗಳನ್ನು ನಾಲ್ಕು ಮೈಲುಗಳ ವರೆಗೆ ಹಿಂದಕ್ಕೋಡಿಸಿದ್ದಾರೆ. ಜಪಾನರ 4000 ಸೈನ್ಯ ನಷ್ಟವಾಗಿದೆ. 700 ರೈಫಲುಗಳು ಅನೇಕ ಮೆಶಿನ್‌ಗನ್‌ಗಳೂ ಚೀನಿಯರ ವಶವಾಗಿವೆ. ಅಲ್ಲದೆ ಜಪಾನದಲ್ಲಿ ಭಯಂಕರ ಬಿರುಗಾಳಿಯು ಬೀಸಿಯಿಂದ ಮುಖ್ಯ ಪಟ್ಟಣಗಳಾದ ಟೋಕಿಯೊ, ಯೊಕೊಹಾಮ ಇವು ಈ ಭಯಂಕರ ಮಾರುತನ ಪ್ರಚಂಡ ದಾವಣೆಗೆ ತುತ್ತಾದವು. ಬಿರುಗಾಳಿಯು ಗಂಟೆಗೆ 70 ಮೈಲಿನಂತೆ ಬೀಸುತಿತ್ತು. ಇದರಿಂದಾಗಿ ಟೋಕಿಯೋ ನಗರದಲ್ಲಿ ದೀಪಗಳನ್ನುರಿಸಲು ಅಸಾಧ್ಯವಾಯಿತು. ಯೊಕೋಹಾಮವು ಕತ್ತಲೆಯಲ್ಲಿ ಮುಳುಗಿತು. ಎಷ್ಟೋ ಮನೆ ಮರಗಳು ಹಾರಿ ಹೋದವು. ಅನೇಕ ಜನರು ಮೃತರಾದರು. ಟೋಕಿಯೋದಲ್ಲಿ 12000 ಜನರು ಗುಡಿಸಲುಗಳಲ್ಲಿ ವಾಸಮಾಡುತ್ತಿರುವರು. 730 ಮನೆಗಳು ನೆಲಸಮವಾದವು. ಸುಮಾರು 4000 ಮನೆಗಳಿಗೆ ಧಕ್ಕೆ ತಗಲಿತು. ಯೊಕೊಹಾಮದಲ್ಲಿ ಹಡಗುಗಳು ಮುಳುಗಿ ಹೋದ್ದರಿಂದ ಅದರಿಂದಾದ ನಷ್ಟ 5000000 ಎನ್ನುಗಳೆಂದು ಪರಿಗಣಿಸಲ್ಪಟ್ಟಿದೆ. ಟೋಕಿಯೋ ಒಂದು ಜಿಲ್ಲೆಯಲ್ಲಿಯೇ 30000 ಮನೆಗಳನ್ನುರುಳಿಸಿ ಬಿರುಗಾಳಿಯು ಸಮುದ್ರದತ್ತ ಹಾದು ಹೋಯಿತು. ಇಂಥ ಭಯಂಕರ ಬಿರುಗಾಳಿಯು 1905 ರಿಂದ ಈಚೆಗೆ ಬರಲಿಲ್ಲವೆಂದು ಹೇಳುತ್ತಾರೆ. ಹೀಗೆ ಜಪಾನಿಗೆ ಒಂದೆಡೆ ರಶಿಯಾದಿಂದ ಅವಮಾನ, ಚೀನಿಯರಿಂದ ಪರಾಜಯ ಮತ್ತು ಪ್ರಕೃತಿಯಿಂದ ಸಂಭವಿಸಿದ ವಿಪರೀತ ನಷ್ಟ ಇವುಗಳಿಂದಾಗಿ ದಿಕ್ಕು ತೋಚದಾಗಿದೆ. ಈ ವರೆಗೆ ಜಪಾನರ ಹಿತೈಷಿಗಳೆಂದು ಸಾರುತ್ತಿದ್ದ ಜರ್ಮನಿ, ಇಟಲಿಗಳು ಕಷ್ಟ ಪರಂಪರೆಗಳಲ್ಲಿ ಬಳಲಿ ಬೆಂಡಾಗಿರುವ ಜಪಾನಕ್ಕೆ ಬಾಯುಪಚಾರವನ್ನು ಮಾಡುತ್ತಿವೆ. ಜಪಾನರು ಇನ್ನು ಚೈನೀಯರೊಡನೆ ಹೆಚ್ಚು ಕಾಲ ಕಾದಲಾರರು. ಚೈನೀಯರು ಹೀಗೆಯೇ ಇನ್ನೆರಡು ವರ್ಷ ಯುದ್ಧವನ್ನು ಮುಂದರಿಸಿದ್ದೇ ಆದರೆ ವಿಜಯಲಕ್ಷ್ಮಿಯು ಅವರಿಗೊಲಿಯುವುದರಲ್ಲಿ ಸಂಶಯವಿಲ್ಲ.

(ಜರ್ಮನಿಯ ಭಾಗ್ಯವಿಧಾತ ಹಿಟ್ಲರ್)

ಜರ್ಮನಿ.

ಪುರಾತನ ಕಾಲದಿಂದಲೇ ತನ್ನ ಸುತ್ತಮುತ್ತಲಿನ ಹಂಗೇರಿ, ರುಮೇನಿಯ, ಬೊಹೇಮಿಯಾ ಮೊದಲಾದ ಸಣ್ಣ ಪುಟ್ಟ ರಾಜ್ಯಗಳನ್ನು ವಶಪಡಿಸಿಕೊಂಡು ತನ್ನದೇ ಆದ ಒಂದು ವಿಶಾಲ ಸಾಮ್ರಾಜ್ಯವನ್ನು ಸ್ಥಾಪಿಸಬೇಕೆಂದು ಜರ್ಮನರ ಹಂಬಲವಿತ್ತು. ಈಗ ಹಿಟ್ಲರನು ಆ ಪುರಾತನ ವಿಚಾರವನ್ನು ತನ್ನ ಧ್ಯೇಯವನ್ನಾಗಿಟ್ಟುಕೊಂಡು ರಾಷ್ಟ್ರ ರಾಷ್ಟ್ರಗಳಲ್ಲಿಯೇ ಅಂತಃಕಲಹ ಹರಡಿ ರಕ್ತದ ಹನಿಯನ್ನೇ ಸುರಿಸದೆ ಅದನ್ನು ಸಾಧಿಸುತ್ತಿರುವನು. ಎಲ್ಲೆಲ್ಲಿ ಜರ್ಮನಿಯರಿರುವರೋ ಅಲ್ಲೆಲ್ಲಾ ಸಂಘಟನೆಯನ್ನು ಮಾಡಿ ಜಗತ್ತನ್ನೇ ಜರ್ಮನಿಮಯವಾಡಬೇಕೆನ್ನುವ ಹಿಟ್ಲರನ ಈ ಮಹತ್ವಾಕಾಂಕ್ಷೆಯು ಜಪಾನರೊಂಬಗೆ ಸರಿದೋಗುವದಲ್ಲವೇ?

ಸದ್ಯಕ್ಕೆ ಹಿಟ್ಲರನ ದೃಷ್ಟಿಯು ಝೆಕೊಸ್ಲೋವಾಕಿಯಾದ ಮೇಲೆ ಹರಿದಿದೆ. ಅಲ್ಲಿರುವ ಸುಡೆಟಾನರೆಂಬ ಜರ್ಮನರನ್ನು ತನ್ನ ಕುಟಿಲತನದಿಂದ ತನ್ನವರನ್ನಾಗಿ ಮಾಡಿಕೊಂಡು ಝೆಕೊಸ್ಲೋವಾಕಿಯಾದಲ್ಲಿ ಅಂತಃಕಲಹವನ್ನು ಬಿತ್ತಿರುವನು. ಅಲ್ಲಿಯ ಮುಖಂಡನಾದ ಹೆನ್ಲಿನನನ್ನು ಕಟ್ಟಿಕೊಂಡು ಹಿಟ್ಲರನು ಸುಡೇಟಾನರಿಗೆ ಝೆಕ್ಕರಿಂದ ವಿಶೇಷ ಹಕ್ಕುಬಾಧ್ಯತೆಗಳನ್ನು ಪಡೆಯಲು ಯತ್ನಿಸಿರುವನು. ಆದರೆ ಝೆಕೊಸ್ಲೋವಾಕಿಯಾದಲ್ಲಿ ತಾವೇ ತಾವಾಗಿರಬೇಕೆಂಬ ಸುಡೆಟಾನರ ಬೇಡಿಕೆಯನ್ನು ಝೆಕ್ಕರು ಎಂದೂ ಮನ್ನಿಸಲಾರರು. ಅಂದರೆ ಯುದ್ಧವು ಅನಿವಾರ್ಯವೇ ಸರಿ. ಇಂಥಾ ದರ್ಪದ ಮತ್ತು ಉದ್ಧಟತನದ ಧೋರಣೆಗಳು ನಡೆದರೆ ಯುದ್ಧವಲ್ಲದೆ ಮತ್ತೇನು? ಹಿಟ್ಲರನು ಈ ವಿಚಾರದಲ್ಲಿ ಇಷ್ಟು ಯೋಚಿಸುತ್ತಲೇ ಇರಲಿಲ್ಲ. ಝೆಕೊಸ್ಲೋವಾಕಿಯು ಒಂದೇ ಯುದ್ಧಕ್ಕೆ ಬರುವದಾದ್ದರೆ ಅದನ್ನು ಮುರಿದು ಎಂದೋ ಮೂಡಿ ಗುಂಡಾಗಿ ಮಾಡಿಸುತ್ತಿದ್ದನು. ಆದರೆ ಅತ್ತ ರಶಿಯಾ, ಇತ್ತ ಫ್ರಾನ್ಸ್ ಇವರಿಬ್ಬರೂ ಝೆಕೊಸ್ಲೋವಾಕಿಯಾದ ನೆರೆ ರಾಷ್ಟ್ರಗಳಾದ್ದರಿಂದ ಅವು ಝೆಕೊಸ್ಲೋವಾಕಿಯದ ಸಹಾಯಕ್ಕೆ ಬರದೆ ಇರುವದಿಲ್ಲ. ಆದ್ದರಿಂದಲೇ ಇಂದು ಹಿಟ್ಲರನು ಝೆಕೊಸ್ಲೋವಾಕಿಯಾದ ಮೇಲೆ ಕೈಮಾಡದೆ ಯೋಚನಾಪರಂಗಗಳಲ್ಲಿ ಸಿಕ್ಕಿರುವನು. ಈ ಮಧ್ಯೆ ಝೆಕೊಸ್ಲೋವಾಕಿಯಾದ ಸುತ್ತುಮುತ್ತಲಿರುವ ಚಿಕ್ಕ ಸ್ವತಂತ್ರ ರಾಷ್ಟ್ರಗಳು ತಮ್ಮ ತಮ್ಮೊಳಗಿನ ಅಂತಃಕಲಹಗಳನ್ನು ಮರೆತು ಹಿಟ್ಲರನ ಪ್ರಾಬಲ್ಯವನ್ನು ಇದಿರಿಸುವ ಮಂತ್ರ ನಡೆಸಕ್ಕೆ ಪ್ರಾರಂಭಿಸಿರುವವು. ಝೆಕೊಸ್ಲೋವಾಕಿಯಾವಾದರೂ ನಾಲ್ಕು ಮೇರೆಗಳಿಂದ ಸುತ್ತಿರುವ ರಾಷ್ಟ್ರ. ಜರ್ಮನಿಯು ಝೆಕೊಸ್ಲೋವಾಕಿಯಕ್ಕಿಂತ ವಿಶಾಲ ರಾಷ್ಟ್ರ. ಅಂದಾದ್ದರಲ್ಲಿ ಜರ್ಮನಿಯ ಭಾಗ್ಯವಿಧಾತನಾದ ಹಿಟ್ಲರನು ಆಸ್ಟ್ರಿಯವನ್ನು ನುಂಗಿದ ಮತ್ತಿನಲ್ಲಿ ಝೆಕೊಸ್ಲೋವಾಕಿಯವನ್ನು ಗಂಟಲಿಗಿಳಿಸುವೆನೆಂದು ಗರ್ಜಿಸಲು 'ಬಾಯನ್ನಂತೂ ತೆರೆ ನಿನ್ನನ್ನು ಬಾಯಿಯಿಂದಲೇ ಸೀಳಿ ಒಗೆಯುವೆವ'ಂದು ಪ್ರತಿ ಗರ್ಜಿಸಿದ ಕೆಚ್ಚೆದೆಯ ಕಟ್ಟಾಳುಗಳ ರಾಷ್ಟ್ರವಾದ ಝೆಕೊಸ್ಲೋವಾಕಿಯವು ಆಸ್ಟ್ರಿಯದಂತೆ ಹಿಟ್ಲರನ ಸುಳಿಗಾಳಿಗೆ ಭಯಗೊಳ್ಳುವಂತಿಲ್ಲ. ಅಂದಬಳಿಕ ಜರ್ಮನಿಯು ಪರಿಸ್ಥಿತಿಯನ್ನು ಅರಿಯದೆ ರಣರಂಗಕ್ಕೆ ದುಮುಕಿದರೆ ಜಪಾನರ ಇಂದಿನ ಪರಿಸ್ಥಿತಿಗೀಡಾಗುವುದೆಂಬುದರಲ್ಲಿ ಸಂದೇಹವೇನು?

(ಅಬಿಸೀನಿಯದ ಮಾಜಿ ಚಕ್ರವರ್ತಿ)

ಅಬಿಸೀನಿಯಾ.

ಅಬಿಸೀನಿಯಾವನ್ನು ಜಯಿಸಿದ ಇಟಲಿಯು ಈಗ ಅದನ್ನು ವಶದಲ್ಲಿಟ್ಟುಕೊಳ್ಳಬಲ್ಲುದೋ ಎಂಬ ಪ್ರಶ್ನೆಗೆ ಉತ್ತರವು ಸದ್ಯಕ್ಕೆ ದೊರೆಯಲಾರದು. ಅಬಿಸೀನಿಯಾದಲ್ಲಿ ಏನು ನಡೆಯುತ್ತಿದೆ ಎಂಬ ವಿಚಾರ ಯಾರಿಗೂ ತಿಳಿಯುವ ಹಾಗಿಲ್ಲ. ಇಟಲಿ ಹಿತೈಷಿ ಪತ್ರಿಕೆ ಅಥವ ಜನತೆಗೆ ಮಾತ್ರ ಅಲ್ಲಿಗೆ ಪ್ರವೇಶವಿದೆ. ಆದರೂ ವರ್ತಮಾನಗಳು ಹೇಗಾದರೂ ದೊರಬೀಳುವದು ಸಾಧ್ಯವಷ್ಟೆ! ಅಂತೆಯೇ ಇಟಲಿಗ ಅಬಿಸೀನಿಯಾದಲ್ಲಿ ನೆಲೆನಿಲ್ಲುವ ಸಾಧ್ಯತೆ ಇರುವುದಿಲ್ಲವೆಂದು ತಿಳಿದುಬರುವದು. ಅಬಿಸೀನಿಯವನ್ನು ಜಯಿಸಿದುದಕ್ಕಿಂತಲೂ ಅದನ್ನು ವಶದಲ್ಲಿಟ್ಟುಕೊಳ್ಳುವದು ಅವರಿಗ ಕಠಿಣವಾಗಿ ಪರಿಣಮಿಸಿದೆ. ಸ್ವದೇಶ ಪ್ರೇಮಿಗಳಾದ ಅಬಿಸೀನಿಯರು ಶರಣಾಗುವ ಚಿಹ್ನವೇ ಕಂಡುಬರುವದಿಲ್ಲ. ಶಾಂತವಾಗುವಂತೆ ಮಾಡುವ ಸಾಮರ್ಥ್ಯವೂ ಇಟಲಿಗಿಲ್ಲ. ಅಬಿಸೀನಿಯವು ಅಂಧಾಕಾರಮಯವಾಗಿದೆ. ಅಲ್ಲಿ 'ಇಟಲಿ' ಎನ್ನುವವನಿಗೆ ಒಂದು ಕಾಲ ಬದುಕುವೆನೆಂಬ ಧೈರ್ಯವಿಲ್ಲ. ಯುದ್ಧಕಾಲದಲ್ಲಿ ಸತ್ತ ಇಟಾಲಿಯನರಿಗಿಂತ ಯುದ್ಧ ಮುಗಿದಂದಿನಿಂದೀಚೆಗೆ ಸತ್ತವರ ಸಂಖ್ಯೆಯೇ ಹೆಚ್ಚಾಗಿದೆ. ಅಬಿಸೀನಿಯಾ ದೇಶವನ್ನು ಫಲಭರಿತವಾದ ತಮ್ಮದೊಂದು ವಸಾಹತಾಗಿ ಮಾಡಲು ಪ್ರಯತ್ನಪಡುತ್ತಿರುವ ಮುಸಲೋನಿಯ ಯತ್ನಗಳು ಫಲಕಾರಿಯಾಗಲಾರವೆಂದು ಹೇಳಬಹುದು.

ಡಾ. ಮೇಥ್ಯೂಸ್ ಎಬ್ರಹಾಮ್
ದಂತ ವೈದ್ಯರು.
(ಪೀಯರ್ಸ್‌ಲೆಸ್ಲಿ ಬಂಗ್ಲೆ)
(ಪ್ಲೆನ್ಯರ್ಸ್ ಹತ್ತಿರ)
ಮಡಿಕೇರಿ.

ಶ್ರೀ ರಾಮಕೃಷ್ಣ ಪರಮಹಂಸರು.

ಲೇಖಕ:- ಎಂ. ಎಸ್. ಅನಂತಪದ್ಮನಾಭರಾವ್.

ಗತಿ ೨.

(ಕಳೆದ ವಾರದಿಂದ ಮುಂದುವರಿದದ್ದು)

ಇದು ಗದಾಧರಗಾಯ್ತು ನಿತ್ಯ ಜಪತಪದಿಂದ
ಆಹಾದ ಮಸ್ತಕವು ನಾರಿಯರ ಗುಣವರಿತು
ವರ್ತಿಸಲು ತೊಡಗಲಾಯ್ತು ಇವರಲ್ಲಿ ಸುಳ್ಳಿಲ್ಲ.
ಇದು ಪ್ರಕೃತಿಯ ಮಾಟ-ತಾವಾಗಿ ದೇಶ್ಶಾಗಿ
ಮಾಧುರ್ಯ ಭಾವವನು ತಂದೊಡ್ಡಿ ಬಾಲನಂ
ಸಲಹಿದುವು ಸುಕರೀರದಿಂದ್ರಿಯಂಗಳು ನೆರೆದು-
ಇವರಿಂದ ನಾರಿಯರ ಸ್ವಂಪದಲಿ ಸಲಗಿದನು.
ಅವರ ಕುಲಕಿವನೊಬ್ಬ ನಕ್ಷತ್ರದಂತಾದ
ಅವರ ಹೃದಯವ ಹೊಕ್ಕು ವಿಕಸಿತವ ಮಾಡಿದನು
ಇವನ ದರ್ಶನದಿಂದ ಮನವು ನಿರ್ಮಲವಾಯ್ತು
ಇವನ ಸಹವಾಸದಲಿ ಸತ್ಯ ಪದಪೂರುವರೆ
ಧರ್ಮ ನಗುತಲಿ ಹೆಣ್ಣು ಕುಲವ ಸುಪಥದಿ ನಡೆಸಿ
ಅಲ್ಲೊಂದು ಬೃಂದಾವನವು ರೂಪುಗೊಂಡಂತೆ
ತೋರಿಸುದು
ನಾರಿಯರ ವೇಷದಲಿ ಮೆರೆಯುವನು.
ಗಂಡು ದೇಹವ ಪೂರ್ತ್ತಿಯನು ಮರೆತು ನೆಂಗರುಳ
ಮರುಕದಲಿ ನಡೆಯುತ್ತಲಂತರಂಗದ ಗುಟ್ಟ
ನರಿವುದಕೆ ಹೊಂಚುಹಾಕುವುದರಿಲ್ಲನವರತ
ಇವನ ಮಹಿಮೆಗಳಿಂದ ನಾರಿಯರು ನಲಿದಾಡಿ
ಹಿಗ್ಗಿದರು-ಅವನ ದರ್ಶನದಿಂದ ಹಿಗ್ಗಿಹಿಗ್ಗಿ
ಅಗಲದಾದರು ಮರೆಯದಾದರು ಗದಾಧರನ.
ವೈಷ್ಣವರ ಮಧ್ಯದಲಿ ವೀರವೈಷ್ಣವನಾಗಿ
ಕೃಷ್ಣನಂ ಕರೆಯುತಿಹ ಗೋಪ ಬಾಲಕರಂಗ
ನಲಿಯುತಿಹ ನೇರಿ ಹಲಧರ ಪುರವ ನಡೆಸುವನು.
ಅಲ್ಲಿ ಸೀತಾನಾಥ ಹಾಯಿನಿಯ ಗೃಹದಲ್ಲಿ
ತರಳೆಯರ ಗೆಳೆತನದಿ ಮುಚ್ಚು ಹಿಡಿಸಿದನವರ.
ಅಲ್ಲೊಂದು ಗೋಷ್ಠಿಯನು ಸೃಷ್ಟಿಸಿದನಾ ಭಕ್ತ
ಭಕ್ತರಿಗೆ ಯಾತ್ರೆಯನು ಮಾಡುವೊಡೆನೆಲೆಯಾಯ್ತು,
ಅವನ ಕಾಣದ ದಿನವೆ ಶೂನ್ಯವಾದುದು ಅಲ್ಲಿ;
ಅವನು ಬಾರದ ದಿವಸ ತರಳೆಯರು ನೋಗುವರು,
ಕಾರಣವನರಿಯುತ್ತ-ಇಷ್ಟ ಪ್ರ ಸ್ತ ನುಡಿದು
ನಗೆಮೊಗದೊಳಿಹುದೆಂದು ತಿಳಿದಿಹನೆ ಸಂತೋಷ
ವನು ಪಡೆದು ನಸ್ನುಡಿಯುಗೊಳ್ವರು ಬಾಲೆಯರು.
ಹಲವರೀ ಮಾರ್ಗವನು ಖಂಡಿಸುತ ತೆಗಳಿದರು.
ಹುಡುಗಿಯರ ಮಧ್ಯದಲಿ ಗಂಡು ಹುಡುಗನ ಬರವ
ಛೀಗಳೆದು ದೂರಿದರು-ನೀತಿಯುಳ್ಳವರೆಂದು
ಮೊಗದರುಹಿ ನೂಕಿದನ, ತರವಲ್ಲ ತರಳೆಯರ
ಗೆಳೆತನಕೆ ಇವಗಾವ ಹಕ್ಕಿಹುದು ಬೇಡೆಂದು
ತಡೆಯುತಿರೆ,
ನಾರಿಯರ ರೂಪದಿಂದಾ ಜನರ
ಮೋಹವನು ಬಿಡಿಸಲ್ಕೆ ಸಜನವಾದುದೊಂದುದಿನ
ಮುಂದಹೆರೆಯ ಹೆಂಗುಸಿನ ರೂಪದಲಿ ನಂಬಿಯಲಿ
ಸಾರಿ ದುರ್ಗಾದಾಸ ಹಾಯಿನಿಯ ಮನೆಯಲ್ಲಿ
ಹೆಂಗುಸರ ನೆರೆಯಲ್ಲಿ ಮಲಗಿದ್ದು ದನ್ನಿರವ
ತೋರುತಿರೆ-ಇದು ತನ್ನ ತಪ್ಪನ್ನು ತೊಡೆದಿಪನು
ಬಾಗಿ ದುರ್ಗಾದಾಸನನ್ನಿವನು ಬಾಲಕನ.
ಹದಿನಾರು ವರುಷ,ಕಾಲಿಸ್ಮೃತಿರೆ ಧ್ಯಾನಕ್ಕೆ
ಮನವೊಲಿದು ಸಾಗಿತ್ತು-ಹಿಡು ಬಿನದದ ಗೊಡವೆ
ಬೇಡವಾದುದು ಮತ್ತೆ-ಈ ತಿರದ ಜೀವನದ
ಬಾಳನ್ನು ಮುರಿದಿಡುವ ನಿಸ್ಸಾರ ವಿದ್ಯೆಗಳ
ನೊಲ್ಲದೆಯೆ-ಅಂತರಂಗದ ವಾಣಿಯನು ತಿಳಿದು
ಮನ್ನಿಸುತ ಸತತ ಜಾನದ ನಿಷ್ಠೆಯಲಿ ನಿಂದು
ದೇಹ ಸಂಬಂಧವಾಗಿರುವ ಗುಣಗಳ ಬಗೆದು
ಕರ್ಮವದು ಜಗದಲ್ಲಿ ಸತ್ವಗುಣಗಳ ಕಂಡು
ಬಾಳಬೇಕೆಂಬುದೇ ಗುರಿಯಾಗಿ ಕಪದಲ್ಲಿ
ದೇಹಮಂ ಬೆಳಗಿಸಲು ಮನಸಾಗತೊಡಗಿತ್ತು.
ಅವನ ನಡೆನುಡಿ ನೋಟಗಳ ಬೇರೆ ಬಗೆಯಾಗೆ
ನರನಾಡಿ ರಕ್ತ ನಾಳಗಳೆಲ್ಲ ಸತ್ಯವನೆ
ಹುಡುಕುತಿರೆ ಸತ್ಯದೊಳ ಒಳಹೊಕ್ಕು ತಿರುಳನ್ನೆ
ಕರುವುದಕೆ ಸಾಧನೆಯ ಮಾಡುತಿರಲೊಮ್ಮೊಮ್ಮೆ
ಪಡೆವನು ಸಮಾಧಿಯನು-ಅದ ಕಂಡು ತರಳೆಯರು
ಇವನೆ ಶ್ರೀ ಕೃಷ್ಣನೋ ಗೌರಾಂಗನಹುದಹುದು
ಪರಮಾತ್ಮನಿವನೆಂದು ಪೂಜಿಸುತ ಚರಣವನು
ಹೃದಯ ನೈರ್ಮಲ್ಯವನು ಪಡೆದು ಸುಖಿಸುವರವರು.
ಪರಮಾತ್ಮ ಜಾನದಲಿ ಸಾಧುಗಳ ವೇಷದಲಿ
ಪರಮಾತ್ಮನವತಾರ ರೂಪುಗಳ ಧರಿಸುತಲಿ
ಮತ್ತೊಮ್ಮೆ ಗೋಪಿಯೊಲು ತೊಡುಗೆಗಳ ಧರಿಸುತಲಿ
ಮತ್ತೊಮ್ಮೆ ಸುಂದರಿಯ ರೂಪದಲಿ ಕೃಷ್ಣನಂ
ಹುಡುಕುತ್ತ ಕಂಬನಿಯುಗರೆಯುತ್ತ ವಿರಹದಲಿ
ಮತ್ತೊಮ್ಮೆ ಮುಳುಗುತ ಸಮಾಧಿಯಲಿ ಸಾನಂದ
ಸುಧೆಯುಂಡು ನಲಿಯುವುದು ಮತ್ತೊಡನೆಯೆಚ್ಚತ್ತು
ಗೆಳೆಯರೊಳು ಕೂಡುವುದು ನಿತ್ಯ ನಾಟಕವಾಯ್ತು.
ಕಾಮಾರ್ಪುಕೂರದಲಿ ಪಸರಿಸಿತು ಮಹಿಮೆಗಳು
ಇವರ ಮನೆಯೇ ಒಂದು ಪಾವನ ಸ್ಥಳವಾಯ್ತು
ದಿನಾದಿನದೊಂದೊಂದು ನೆವದಿಂ ಬರುತಲ್ಲಿ
ದರ್ಶನವ ಮಾಡುವರು ನೆಮ್ಮದಿಯ ಪಡೆಯುವರು.
ಓದುವುದು ಬರೆಯುವುದು ರುಚಿಸದಾದುದು ಕೊನೆಗೆ
ಗೆಳೆಯರೆಲ್ಲರು ಕೂಡಿ ನಾಟ್ಯ ಶಾಲೆಯ ಮಾಡಿ
ರಾಮ ಕೃಷ್ಣರ ವಿವರ ಕತೆಗಳನು ತೋರಿದರು
ಮಾಮರದ ತೋಪಿನಲಿ ಅಭ್ಯಾಸ ಮಾಡುವರು
ದೇವತಾ ಶಾಸ್ತ್ರಗಳ ಪಠಿಸುತ ಗದಾಧರನು
ಆ ದೇವತೆಯ ಪದವಿ ನೆಲೆಗೊಂಡು ಮೆರೆಯುವನು
ಲೋಕವೆಲ್ಲವ ತಾನು. ಸ್ನೇಹಿತರು ನೋಡುತಿದ
ತೊರೆಯುವಂದರು ಅವನ-ಅವನ ನೆಳಲನೊಳಹುದಿ
ತವಗೊಂದು ಸೌಭಾಗ್ಯವಹುದೆಂದು ತಿಳಿಯುತ್ತ
ಅವನ ಸಹವಾಸದಲಿ ಪುಣ್ಯವೆಮಗಾಗುತಿರೆ
ಸರ್ವರುಂ ಪರಮಾತ್ಮ ರೂಪಿಗಳು-ಭಗವಂತ
ನೊಬ್ಬೊಬ್ಬನೊಳಗೊಂದು ರೂಪದಿಂ ಕಾಣುವನು,
ಲೋಕದೊಳಗೊಂದೊಂದು ಕಾರ್ಯವನು ಮಾಡುವಲಿ
ಲೀಲೆಯನು ತೋರುವನು ನೋಡಿರೆಂದವನಾಗ
ಗೆಳೆಯರಿಗೆ ತೋರುವನು:
ಇವರಿಂದಲೇ ಬಾಹ್ಯ
ಜೀವನವ ಸಾಧಿಸುವ ಬಯಲ ವಿದ್ಯವ ಬಿಟ್ಟು
ಅಂತರಂಗದ ಸಾಧನೆಯ ಮಾಡತೊಡಗಿದನು.
ನಿಪುಣನವ ವಿಗ್ರಹವ ರಚಿಸುವುದರಲ್ಲವನು
ಮಾಡುತಲಿ ಪೂಜಿಪನು-ಮಣ್ಣಿನಿಂ ಮೂರ್ತಿಯನು
ಮಾಡುತಲಿ ಸಿಂಗರಿಸಿ ಮನವೊಲಿದು ನರ್ತಿಪನು.
ಅವರೊಡನೆಯೇ ಊಟ, ಆಟಪಾಠಾದಿಗಳು.
ಅವರಂ ಮಲಗಿಸಿ ಮತ್ತೆ ತಾನೊಮ್ಮೆ ಮಲಗುವನು.
ಇಂತಿರಲು ಸಂಸಾರ ಮಾರ್ಗದಲಿ ತೊಳಲುತಿಹ
ಹಿರಿಯ ರಾಮಕುಮಾರ ಕಲಿಕತ್ತೆಯಲ್ಲಿರುತ
ಬರುವ ವರಮಾನದಲಿ ಸಾಕಲಾರದೆ ದಿನವ
ತನಗೆ ನೆರವಾಗಲ್ಕೆ ಶಂಭುಚಂದ್ರನ ಕರೆಸಿ
ಪಣಾವರೊಂದು ಕರ್ತವ್ಯದಲಿ ನಿಲಿಸುತ್ತ
ಜೀವನದ ಹಾದಿಯನು ತೋರಲ್ಕೆ ಮನಮಾಡಿ
ಕಾಮಾರ್ಪುಕೂರವನು ಸೇರಿದನು ಹಿರಿಯಣ್ಣ.
ತಾಯಿ ತಮ್ಮಂದಿರನು ಒಪ್ಪಿಸಿ ಗದಾಧರನ
ಕರೆಯಲ್ಕೆ, ಕಲಿಕತ್ತೆಯಲಿ ನಿಬಲು ನನ್ನುಡಿಸಿ
ಪೊರಮಡಲು ಸಿದ್ಧವಾಗಲು ಪುರದ ಜನರೆಲ್ಲ
ಮರುಗಿದರು ತೊರೆಯಲಾರದೆ ವಿರಹ ದುಃಖದಲಿ;
ಶುಭ ಮುಹೂರ್ತವ ನೋಡಿ ಮಾತೆಯಾಣತಿ ಪಡೆದು
ರಘುವರ ಸ್ಮರಣೆಯಿಂ ಕಲಿಕತ್ತವನು ಸೇರಿ
ನೆರವಾದನಣ್ಣನಿಗೆ
ಸಂಸಾರಿಗಳ ಮನೆಯ
ದೇವತಾರಾಧನೆಯ ಮಾಡುವುದು ನಿತ್ಯದಲಿ
ಶಂಭುಚಂದ್ರನ ಕೆಲಸವಾದುದಕೆ ಮನದಲ್ಲಿ
ಸಂತಸವ ತಾಳಿದನು. ಅವನ ಪೂಜೆಯ ಬಗೆಯೆ
ಬೇರೊಂದು ರೀತಿಯದು-ಅವನ ನೀತಿಯೆ ಬೇರೆ.
ಅವನ ನಡೆ ನುಡಿಗಳನು ಸತ್ಯದರ್ಶನ ಮಾಡಿ
ಮನೆಯವರು ನೆರೆಯಾದರವನೊಳಗೆ ಸಲುಗೆಯಿಂ
ಅವನ ಕೀರ್ತನೆಗಳನು ಕೇಳುತಲಿ ಮನಕರಗಿ,
ಅವನು ಮಾಡುವ ಕೃತ್ಯಗಳಿಗೆ ಸಂತೋಷಿಸುತ
ಹೆಂಗುಸರು ಗಂಡುಸರು ಮನೆಮಂದ ಮಕ್ಕಳುಂ
ಹೊಸ ಪೂಜಕನ ಬಿಡದೆ-ಅವನ ನೇಹಿಗರಾಗಿ
ಬಾಳುತಿಹ ಪರಿಯಾಯ್ತು; ಕಲಿಕತ್ತೆಯಲಿ ನಿಂದು
ಮತ್ತೊಂದು ವೃತ್ತವಂ ಕಲ್ಪಿಸುತ ನಲಿಯುತ್ತ
ಕಾಮಾರ್ಪುಕೂರದಲಿ ಬಿಟ್ಟಿಹರ ಮರೆಯುತ್ತ
ಹೊಸ ಊರಿನಲಿ ಹಳೆಯ ಗೆಳೆಯ ಗುಂಪನು ಮಾಡಿ
ತನ್ನ ಕೃತಿ ಚರಿತೆಗಳ ತೋರುತಲಿ ಮರೆವಿರಲು
ಮುಂದೆ ಜೀವನ ಮಾರ್ಗವಾವುದನು ಚಿಂತಿಸದೆ
ಕಲಿಯುವುದ ಮರೆತಿರುವ ತಮ್ಮನಂ ಒತ್ತಿಡೆಗೆ
ಕರೆದು ರಾಮ ಕುಮಾರ ತಮ್ಮ ನೀನಿಂತಿಹುದು
ತರವಲ್ಲ ಬಾಲಕನ ಬಾಡುತಲಿ ತಾರುಣ್ಯ
ಕಾಲಿಡಲು ಕಾದಿಹುದು, ಸಂಸಾರದಲಿ ನಿನಗೆ
ಮುಂದೆ ಕಷ್ಟವು ಬಹುದು-ಅದರಿಂದ ವಿದ್ಯೆಯನು
ಕಲಿಯುತ್ತ ಜೀವನದ ಸಾಧನವ ಗಳಿಸುವುದು
ಯೋಗ್ಯವೆನೆ
ಕೇಳಿದನು ಮೌನದ ತಾಳಿದನು:
ಅನ್ನವನು ಗಳಿಸುವೀ ವಿದ್ಯದಿಂದೇನನಂ
ಮಾಡುವುದು? ಅಣ್ಣನಾಸೀ ವಿದ್ಯವಂ ಕಲಿತು
ಸುಜ್ಞಾನ ಸಂಪದವ ಸೂರೆಗೊಳಬಹುದೇನು?
ನೀತಿಯೆಂಬುದನರಿಯಲೀ ವಿದ್ಯ ಸಾಧನವೆ?
ತತ್ವವುಸಿಯರಿಯಲ್ಕೆ ಸುಲಭವೇನಿದರಿಂದ?
ನಾನು ನೀನೆಂಬುವರ ತಾರತಮ್ಯದ ತಿಳಿಯೆ
ಈ ವಿದ್ಯ ಮಾರ್ಗವಂ ತೋರುವುದೆ? ಹೇಳಣ್ಣ:
ಇಲ್ಲವಾದೊಡೆ ನರಕ ಲೋಕದಲಿ ಬದುಕುವುದ
ಕಲಿಸುವೀ ವಿದ್ಯದಿಂ ಎಮಗಾವ ಸುಖವಿಹುದು?
ಸುಜ್ಞಾನ ಜ್ಯೋತಿಯನು ತೋರುವಾ ವಿದ್ಯೆಯನು
ಗಳಿಸುವೆನು, ಬೇಡೆನಗೆ ಉಪ್ಪು ಹುಳಿ ಬೇಳೆಗಳ
ಸಂಪಾದನೆಯ ವಿದ್ಯೆ-ಇದಕ್ಕಿಂತ ಲೋಕದೊಳ
ಗಿಂತೆನಿಸ ವಿದ್ಯೆಯುಳ್ಳದ ಬದುಕು ಲೇಸಹುದು;
ಬಿಡು ಬಿಡೆನೆ-ತಮ್ಮನಾ ಧೈರ್ಯ ನುಡಿಗಳ ಕೇಳಿ
ಮತ್ತೊಮ್ಮೆ ನುಡಿಸದಿಯೆ-ಅವನಿರುವ ಮಾರ್ಗದಲಿ
ಸಾಗುತಿರಲವನೆಂದು-ಅವನ ಗೂಢದ ಹಾದಿ
ಗಳನರಿತು ಸುಮ್ಮನಿರೆ-ಅಣ್ಣನಿಗೆ ಮಾನ್ಯಡಿದ
ದನಿಗಾಗಿ ಮರುಗುತ್ತ ಎನ್ನಿಂದ ತಪ್ಪಾಯ್ತು
ಎನ್ನ ಮಾರ್ಗವು ಸರಿಯೆ! ಎನೆ 'ಹೌದು-ಹೌದೆ'ಂದು
ಅಂತರಂಗದ ಧ್ವನಿ ಉತ್ತರದ ನೀಡಿದುದು.
ಪುರುಷಾರ್ಥ ಸದ್ವಸ್ತು ದೇವತಾ ಕಾರುಣ್ಯ
ಗಳು ದೊರೆವುದೇನಿದನು ಗಳಿಸಿದೊಡವೆನುತಿರಲು
'ಇಲ್ಲ'ವೆಂದುದು ವಾಣಿ-ಹಿತವಂತೆ ಪರಿಶುದ್ಧ
ದೃದ ಭೀತಿಯೊಳಿಹುದು ಸಾಧ್ಯವೇನೆನೆ 'ಅಗ
ದೆಂದುದಂತರದ ನುಡಿ-ಇಂದ್ರಿಯಗಳ ತೃಪ್ತಿಯ
ತರದಿಡುತ ಪರಮಾತ್ಮ ದರ್ಶನವ ಮಾಡುತ್ತ
ಜಗದೊಳೀ ಬಂಧನವ ಹರಿಯಲ್ಕೆ ಸಾಧನವೆ
'ಇಲ್ಲ'ವೆಂಬುವುದೆ ವಾಣಿ-ಅಂತಾಗೆ ಪರಮಾರ್ಥ
ಸಾಧನಕೆ ಒದಗದೀ ವಿದ್ಯೆಯಿಂದೆನಗೇನು?
ಇದರಿಂದ ಲೋಕದಲಿ ಕರ್ಮ ಬಂಧನದಲ್ಲಿ
ಸಿಲ್ಕಿ ನರಳುವುದೇಕೆ? ನಿತ್ಯ ವ್ಯಾಪಾರದಲಿ
ಲಾಭ ಪಡೆವಾಸೆಯಲಿ ಸತ್ಯ ಮರೆಯುವುದೇಕೆ?
ಇದಕಿಂತಲೀ ವಿದ್ಯವಿಲ್ಲದಿರುವುದೆ ಲೇಸು!
ಲೋಕದೀ ಕೃತಿಗಳಿಂ ದೂರವಿರ್ಪುದೆ ಲೇಸು!
ಎನುವ ತಮ್ಮನ ಚರಿತೆಯರಿತು ರಾಮಕುಮಾರ
ರಘುವೀರ ನಡೆಸಿದಂತಾಗಲೆನ್ನುತ್ತ
ಸುಮ್ಮನಾದನು.
ಇಂತು ಸಾಗಿದುವು ವರ್ಷಗಳು
ಸಂಸಾರ ನಡೆವುದಕೆ ಸಂಪಾದನೆಯು ಕಡಿಮೆ
ಯಾಗುತಿರೆ ಬಳಲಿದನು-ದೇವರ ಪರೀಕ್ಷೆಯಲಿ
ಸಿಲುಕಿದನು ಒಂದೆಡೆ ಗದಾಧರನಬಗೆಗಳನು
ನೆನೆದು ಚಿಂತಿಸುತಿಹನು ಸಂಸಾರ ಕಷ್ಟಗಳ
ನೆನೆಯುತ್ತ ಚಿಂತಿಸುವನೊಂದು ಕಡೆ ಹಿರಿಯಣ್ಣ
ಜೀವನದೊಳೀರಿಳಿತ ಸಾಮಾನ್ಯ ರೀತಿಯವು
ಇದನೇಕೆ ಚಿಂತಿಸುತ ಬಾಡುವುದು ಬಳಲುವುದು
ಎನ್ನುತ ಸಮಾಧಾನ ಪಡೆವ ರಾಮ ಕುಮಾರ.

[ಸಶೇಷ.

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯೊದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತವೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತವೆ. ಲಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ,

52–14 ಬೆಂಗಳೂರು ಸಿಟಿ.

೪೨ ವರ್ಷಗಳಿಂದ ಅನುಭವಸಿದ್ಧ ಪ್ರಖ್ಯಾತಿ ಹೊಂದಿದ

ಕರ್ಕೇ ಕಂಪನಿ

ಸುಪ್ರಸಿದ್ಧ ಜ್ವರದ ಗುಳಿಗೆ

ಇದು ಛಳಿಜ್ವರ, ಚಾತುರ್ಥಿ ಜ್ವರ, ೩ ದಿನಬಿಟ್ಟು ದಿನ ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ನಾನಾತರದ ಜ್ವರಗಳ ಮೇಲೆ ತತ್ಕ್ಷಣವೇ ಗುಣ ಸಂಜೀವಿನಿಯಂತಿದೆ! ಬಾಟ್ಲಿಗೆ 1 ರೂ. 4 ಬಾಟ್ಲಿಗೆ 3 ರೂ. 12 ಬಾಟ್ಲಿಗೆ 8 ರೂ. ವಿ. ಪಿ. ಖರ್ಚು ಬೇರೆ.

ಗಣೇಶ. ರಾಮಚಂದ್ರ ಕರ್ಕೇ.

ಮತ್ತು ಕಂಪನಿ,

(52–41) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಬೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಾದೇಪಂಡ ಸೋಮಯ್ಯನವರು,

ಮೆ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು.

ಪೊನ್ನಂಪೇಟೆ—ಮೆ. ಪಿ. ಜಿ. ಮುದ್ದಮ್ಮಯ್ಯನವರು.

ಮಡಿಕೇರಿ—ಮೆ. ಅಜ್ಜಮಾಡ ನಾಣಪ್ಪನವರು ಮತ್ತು ಮೆ. ಕೆ. ಮಾದಮ್ಮಯ್ಯನವರು.

ಕುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮೆ. ಕೆ. ತೊಗಪ್ಪನವರು.

ನಾಪೋಕ್ಲು—ಮೆ. ಬಿಳ್ಳಿಪಂಡ ಯಂ. ಪೂಣಚ್ಚನವರು.

(ನಾಪೋಕ್ಲು ಸ್ಟೋರ್ಸ್)

ಸೂಚನೆ.—ಪ್ರಿಂಟು ಆದ ರಶೀತಿ ತೆಗೆದುಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಸೋಘನಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರದ ಮೇರೆ 1000ಕ್ಕೆ ವರ್ಷಕ್ಕೆ 21 ರಂತೆಯೂ, ಹೋಲ್ ಲೈಫ್ ವಿಮಾ ಬರಾರುಗಳಿಗೆ 26 ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್

ಸೊಸೈಟಿ ಲಿಮಿಟೆಡ್,

12, ಸೌತ್ ಪರೇಡ್, ಬೆಂಗಳೂರು.

52–28

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯಶಾಲೆಯು ಕಾಯಿಲೆಯವರನ್ನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕಳುಹಿಸಿ ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಅನುಭವಿಯಾದ ವೈದ್ಯಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಶೀತಜ್ವರ, ಮೈಯಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಾಲೆ, ಬೆನ್ನುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಸೀಸೆಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

10 **ಸಿ. ಹೆಚ್. ರಾಮಣ್ಣ ವೈದ್ಯರ್.**

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ಮದನ ಭಂಡಾರಗಳಲ್ಲಿ ಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, ಶೇರು ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ **ಪ್ರತಿ**ಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, **ರಶೀತಿ ಪುಸ್ತಕ**ಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ಮದನಭಂಡಾರದ ಖಿರಾದು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಚ್ಚಾಗಿ ಸುಂದರವಾದ ಕಾಗದದಲ್ಲಿ ಮಾರಲ್ಪಡುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರಸಿಗೆ ಬರೆಯಿರಿ.

ಮೇನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆಶೂಲೆಗಳಿಗೂ ಅದ್ಭುತ ಬೆಲೆ 0-4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ 0-4-0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ.

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ. ಬೆಲೆ 0-8-0, 0-4-0.

ಸುಕುಮಾರತೈಲ

24

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ಇಂತ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ. ಬೆಲೆ 1-0 0

ಪ್ರೊಪ್ರೈಟರ್—ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ ವಿ ಪಂಡಿತ್.

ಉತ್ತಮ ಪ್ರಚಾರ! ಜ್ಞಾನಭಂಡಾರ!!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ 55	ರೂ. 35.	ರೂ. 22
6 ತಿಂಗಳಿಗೆ—	„ 100	„ 35	„ 22.	„ 13
3 ತಿಂಗಳಿಗೆ—	„ 60	„ 20	„ 13.	„ 8
1 ತಿಂಗಳಿಗೆ—	„ 25	„ 10	„ 6.	„ 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—

ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ತನ್ನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

6; ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವ್ರಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮಿ. ಎಂ. ಜೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮಿ. ಎಲ್. ಎಚ್. ಸಿ. ಹಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

ಮಿ. ಜಿ. ಕೇಶಾದ್ರಿ, ಆ. ಇನ್ಸ್‌ಪೆಕ್ಟರು, ಶಿವಮೊಗ್ಗ.

೩೨-೩೭

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1530

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:— ಪಿ. ಐ. ಬೆಳ್ಯಪ್ಪ. ವಾರ್ಷಿಕ ಚಂದಾ ರೂ. ೩-೮-೦

ತಾ. ೨೪—೯—೧೯೩೮. ಸಂಪುಟ ೧೮] [ಸಂಚಿಕೆ ೧೭

The Bombay Life Assurance Company Ltd.

(Estd. 1908.)
45-47, Churchgate Street, Fort-Bombay.

Progress Proves Its Popularity.

Year	Business in force	Claims Paid	Life Assurance Fund
1931	2,26,82,430	2,91,880	33,24,809
1933	3,07,98,435	3,54,003	50,04,871
1935	4,42,51,214	5,75,198	68,01,501
1937	6,04,70,594	6,00,918	98,68,232

Total Claims Paid Between 1909 and 1937—Rs. 50,22,576.

BOMBAY LIFE is a purely India Concern Offering all that is best in Life Assurance.

To Insure or to Represent it pays you to consult us or our Branches—

KOCHIKAR & BROTHERS Ltd.,
Madras Branch Secretaries,
9 **Post Box No. 337, Mount Road, MADRAS. [Phone No. 8248.]**

Bombay Life Building Udipi	Gentram Nivas, Charni Road Girgaum Bombay 4	Visweswarapuram Circle, Bangalore City	Puthiyara Calicut	Car Street Mangalore	Ottapalam S. Malabar	Central Station Road Trivandrum

THE CANARA BANKING CORPORATION, UDIPI, Ltd.

(Incorporated in British India.)
Estd. 1906.

MEMBER: { RESERVE BANK OF INDIA, & BANKERS' CLEARING HOUSE, MADRAS.

Head Office: UDIPI, S. K.

Paid up Capital .. .. Rs.	3,03,205,-
Reserves .... ,,	3,88,842,-

Our Deposit Rates.

3 months	2½% p. a.
6 or 9 months	3 % p. a.
12 months	3½% p. a.
SHORT TERM	2 % p. a.

Branches.

1. Udipi, 2. Coondapoor, 3 Car Street, Mangalore, 4. Madras, 5 Shimoga, 6. Bunder, Mangalore, 7. Mercara, 8. Virarajendrapet, 8 Saklaspur, 10. Tellicherry. 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

BANKING BUSINESS OF EVERY DESCRIPTION TRANSACTED.

Udipi,
8th July 1938. 52-42 **V. R. Kamath, B. A., LL. B.,**
Manager.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,770	0	0
ಜಮೂಬಂದ ಠೇವಣಾತಿ	–	2,47,311	5	4
ವಸೂಲಾದ ಕ್ಷೇಮನಿಧಿ	–	1,36,514	1	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	21,304	13	11
ಟ್ರಸ್ಟ್ ಡಿಪಾಜಿಟ್ಟು	–	35,699	5	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ **ಹೆಚ್ಚಾಗಿ** ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಬಾಲಿಯೂಸ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಬಾಲಿಯೂಸ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ಟ್ರಸ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇವರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ಟ್ರಸ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ **ಆಜಮಾಯಿಸಿಕೆ ಮಾಡುತ್ತಾರೆ.**

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಚೌರೀರ ಎ. ಮಂದಣ್ಣನವರು ಬಿ. ಎ., ಬಿ. ಎಲ್.
ಸೆಕ್ರೆಟರಿ:—ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ., ಬಿ. ಎಲ್.

ತಾ. 1-9-1938

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಷ್ಟಪಟ್ಟಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚೆನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೃದ್ಧಿಯಾಗಿ ಆಗುವ ರೂ 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ಕೇಳಿಕೊಳ್ಳಬಹುದು.

52-17

The Agricultural &
Industrial Bank Ltd

"ZANDU"

ಝಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸ ರೋಗಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಆಯೋಡೈಸ್ಡ್

ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಧ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು

ಕೆಟಲಾಗಿಗೆ ಬರೆಯಿರಿ, ಮುಫ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. **ಕೆ. ಸಂಜುಂಡೇಶ್ವರ,** ಎಲ್. ಎ. ಎಂ. ಎಸ್

(52-7) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು–ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಒಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನು ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ. 2—8—0.

ಮಲೇರಿಯಾ ನಿವಾರಿಣಿ

ಇದು ಚಳಿ ಜ್ವರ, ಚಾತುರ್ಥಿ ಜ್ವರ, ದಿನ ಬಿಟ್ಟುಬರುವ ಜ್ವರ, ಮಲೇರಿಯಾ ಜ್ವರ, ಇನ್‌ಫ್ಲುಯೆಂಜಾ ಇತ್ಯಾದಿ ನಾನಾ ತರದ ಜ್ವರಗಳ ಮೇಲೆ ರಾಮಬಾಣ.

ಬಾಟ್ಲಿ 1ರ ರೂ. 1—8—0; ಸಣ್ಣ ಬಟ್ಲಿ ರೂ. 0—13—0.

ಸ್ಪ್ಲೀನ್ ಮಿಕ್ಸ್ಚರ್

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಅಶಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುತ್ತದೆ. ಬಾಟ್ಲಿ 1ರ ರೂ. 1—2—0.

ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. **ಕೆಟಲಾಗಿಗೆ ಬರೆಯಿರಿ.**

ಎಸ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥ ಬೀದಿ, ಮಂಗಳೂರು.

ಔಷಧ ಸಿಕ್ಕುವ ಸ್ಥಳ:—ಮಂಗಳೂರು ಸ್ಟೋರ್ಸ್, ಮಡಿಕೇರಿ. ಎ. ಬಿ. ಕಾಮತ್, ಮಡಿಕೇರಿ. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. ಸುಂದರ್ ಪ್ರಭು, ಸುಳ್ಯ. [12]

ವಿವಿಧ ವಿಚಾರ.

ನಿಮಗೆ ಜ್ವರ ಬರಬೇಕೆ? ಹಾಗಾದರೆ ಈ ಯಂತ್ರವನ್ನು ಕೊಂಡುಕೊಳ್ಳಿ.

ರೋಗಿಗಳ ದೇಹದಲ್ಲಿನ ವಿಷಕ್ರಿಮಿಗಳನ್ನು ನಾಶಪಡಿಸಲು, ದೇಹದ ಶಾಖವನ್ನು ಹೆಚ್ಚಿಸುವುದಕ್ಕೆ ಮಲೇರಿಯ ಮುಂತಾದ ಇಂಜೆಕ್ಷನ್ ಕೊಡಲಾಗುತ್ತಿತ್ತಷ್ಟೆ. ಇದಕ್ಕೆ ಬದಲು ಅಮೇರಿಕದ ಇಂಜಿನೀಯರೊಬ್ಬರು ಒಂದು ಯಂತ್ರವನ್ನು ಕಂಡು ಹಿಡಿದಿರುವರು. ಇವರ ಸಹಾಯದಿಂದ ದೇಹಕ್ಕೆ ಯಾವ ಬಾಧೆಯೂ ಇಲ್ಲದೆ, ದೇಹದ ಶಾಖವನ್ನು ಹೆಚ್ಚಿಸಿ ವಿಷಕ್ರಿಮಿಗಳನ್ನು ನಾಶಪಡಿಸಬಹುದಾಗಿದೆ.

—o0o—

ಭೂಮಿಯ ಕೊನೆ 20 ವರ್ಷಗಳಲ್ಲಿ.

20 ವರ್ಷಗಳಲ್ಲಿ ಸೂರ್ಯನು ಕಾಣದಾಗುತ್ತಾನೆ ಭೂಮಿಯ ಉಷ್ಣ ನೂರು ಡಿಗ್ರಿ ಇಳಿದು ಬಿಡುವುದು ಭೂಮಿಯೇ ನಾಶವಾಗಿ ಬಿಡುವುದು. ಇದು ಕೆಲವು ಜ್ಯೋತಿಷ್ಕರ ಮತ. 1941 ರ ನವಂಬರದಲ್ಲಿ ಹೊಸತೊಂದು ನಕ್ಷತ್ರವು ಕಾಣಿಸಿಕೊಂಡು, ಅದು 1943 ರ ಮೇ ತಿಂಗಳ ಸುಮಾರಿಗೆ ಬರಿ ಕಣ್ಣಿಗೆ ಗೋಚರವಾಗುವುದು. 10 ವರ್ಷಗಳೊಳಗೆ, ಅದು ಚಂದ್ರನಿಂದಲೂ ಹತ್ತು ಪಾಲು ಗಾತ್ರ ಬೆಳೆದು, ಭೂಮಿಯ ಬಳಿ ಬರುವುದು. ಇದರಿಂದ ನೆರೆ, ಉತ್ಪಾತ, ಬಿರುಗಾಳಿ, ಭೂಕಂಪಗಳು ಉಂಟಾಗುವವು. ಈ ಹೊಸ ನಕ್ಷತ್ರದ ಪೆಸೆಯಿಂದ ಸೂರ್ಯನ ಗಾತ್ರ ಅರ್ಧಕ್ಕರ್ಧ ಕುಂದುವುದು. ಇದು 1954 ರಲ್ಲಿ. ಅದಃ 1957 ರಲ್ಲಿ, ಸೂರ್ಯನೇ ಕಾಣದಾಗಿ ಇಡೀ ಜಗತ್ತೇ ಕತ್ತಲೆಯಲ್ಲಿ ಬಿದ್ದು ಬಿಡುವುದು ಇದು ಜ್ಯೋತಿಷ್ಕರ ಮತ. ಇಂತಹ ಹಲವರು ಇದೀಗ ತಮ್ಮ ಆಯುಷ್ಯವನ್ನೇ ತಿಳಿಯದೆ, ಜಗತ್ತಿನ ಭವಿಷ್ಯವನ್ನು ಹೇಳಿ ಹಣ ಗಳಿಸಹತ್ತಿದ್ದಾರೆ. ಇವರಿಗೆ ಉತ್ತರ ಹಿಂದೂ ಜ್ಯೋತಿಷ್ಕರೇ ಕೊಡಬೇಕಷ್ಟೆ!

—o0o—

ನೆಲಮಾಳಿಗೆಯೊಳಗೆ ಒಂದು ವರ್ಷ.

ಥರ್‌ಫರ್‌ಕಾರ್ ಜಿಲ್ಲೆಯಲ್ಲಿ ಈಗ ಒಂದು ವರ್ಷದ ಹಿಂದೆ ಓರ್ವಳು ಹಿಂದೂ ಸ್ತ್ರೀಯು ಕಾಣೆಯಾಗಿದ್ದಳು. ಪತ್ತೆಯಲ್ಲಿ ಪೊಲೀಸರ ಸಕಲ ಪ್ರಯತ್ನವೂ ವಿಫಲವಾಯಿತು. ಮೊನ್ನೆ ತಾನೆ ಅಲ್ಲಿಯ ಪೊಲೀಸನಿಗೊಬ್ಬನಿಗೆ ವರ್ಗವಾಯಿತು. ಅವನ ಮನೆಗೆ ವಾಸಿಸಲು ಒಬ್ಬ ಹೊಸಬನು ಬಂದಾಗ ಆ ಮನೆಯ ಕೋಣೆಯೊಂದರ ನೆಲದಡಿಯಲ್ಲಿ ಅಡಗಿಸಿಡಲ್ಪಟ್ಟ (ಕಾಣೆಯಾದ) ಸ್ತ್ರೀಯು ದೊರೆತಳು! ವರ್ಗವಾದ ಪೊಲೀಸನೇ ಅವಳನ್ನಪಹರಿಸಿ ಬಚ್ಚಿಟ್ಟಿದ್ದನಂತೆ. ಅವನಿಗೆ ಒಡನೆ ವರ್ಗವಾದ್ದರಿಂದ ಈಕೆಯ ವಿಚಾರ ಬೇರೆ ಏರ್ಪಾಡು ಮಾಡಲಾಗಲಿಲ್ಲವಂತೆ. 'ಬೇಲಿಯೇ ಹೊಲವನ್ನು ಮೇಯಿತು' ಎಂಬ ಹಾಗಾಯಿತಲ್ಲವೆ?

—o0o—

ಮೀನಿನ ಉಣ್ಣೆ!

ಮೀನಿನ ಎಲೋಳೆಯಿಂದ ಉಣ್ಣೆ ಬಟ್ಟೆಯನ್ನು ತಯಾರುಮಾಡಬಹುದಂತೆ. ಬಹು ಸೊಗಸಾದ ದಾರವನ್ನು ತೆಗೆಯಬಹುದಾಗಿ ಜರ್ಮನಿಯ ನೇಯಿಗೆ ಕೆಲಸದ ಪರಿಶೋಧನಾ ಸಂಘದವರು ತಿಳಿಯಪಡಿಸಿರುವರು.

ಇತರ ಬಟ್ಟೆಗಳಿಗೆ ಬಣ್ಣಗಳನ್ನು ಹಾಕುವ ವಿಧಾನದಲ್ಲಿಯೇ ಇವಕ್ಕೂ ಬಣ್ಣ ಹಾಕಬಹುದಾಗಿಯೂ, ವೆಚ್ಚವೂ ಸಹ ಬಹು ಕಡಿಮೆ ಎಂದೂ ತಿಳಿಸಿದ್ದಾರೆ

—o0o—

ಬೆಕ್ಕಿಗೆ ಆಟ ಇಲಿಗೆ ಪ್ರಾಣಸಂಕಟ.

ಡಿಪೋನ್ ಎಂಬಲ್ಲಿ ದಂಡಿನ ಸೈನಿಕನೊಬ್ಬನ ಹುಚ್ಚಾಟದ ಕಥೆಯಿದು. ಸಿರಪರಾಧಿ ದಾರಿಗನೊಬ್ಬನನ್ನು ಗುಂಡು ಹಾಕಿ ಕೊಂದ ಅಪಾದನೆಯ ಮೇಲೆ ಅವನು ಕೋರ್ಟಿಗೆಳೆಯಲ್ಪಟ್ಟಿದ್ದನು. ಅವನ ಡಿಫೆನ್ಸ್ ಹೀಗಿತ್ತು. 'ಗುರಿಯಿಟ್ಟು ಹೊಡೆಯುವ ಅಭ್ಯಾಸವನ್ನು ಹೆಚ್ಚಿಸಲು ನಾನು ಹೀಗೆ ಮಾಡಿದ್ದು, ಜೀವಂತ 'ಕೋಳಿ'ಯನ್ನು ಹೀಗೆ ಹೊಡೆಯುವುದರಿಂದ ತರಬೇತಿಗೆ ಹುರುಪು ಬರುತ್ತದೆಂದು ನನ್ನ ನಂಬಿಕೆ.' ದಂಡಿನ ದಳಪತಿಯು ಕೂಡ ಈ ಸೈನಿಕನು ಚುರುಕೂ, ಸೇವಾಪಟುವೂ ಇರುವನು ಎಂದು ಅಪಾದಕನನ್ನು ಹೊಗಳಿದನಂತೆ 'ಬೆಕ್ಕಿಗೆ ಆಟ ಇಲಿಗೆ ಪ್ರಾಣ ಸಂಕಟ' ಅಲ್ಲವೇ?

—o0o—

ಕಲ್ಲಿನ ಎದೆಯ ಮನುಷ್ಯ!

ಆಸ್ಟ್ರೇಲಿಯದ ಮೆಲ್ಬೋರನ್ ನಿವಾಸಿಯಾದ ಆಲಿಕ್ ಮಾರ್ಟಿಮರ್ ವ್ಯಾಟ್‌ಕಿನ್‌ಸರ್‌ನು ತನ್ನ ಎದೆಯಲ್ಲಿ ಕಲ್ಲು ಇರುವುದಾಗಿ ಡಾಕ್ಟರ್ ಒಬ್ಬರಿಂದ ತಿಳಿದುಕೊಂಡು ಅಮೇರಿಕಾದ ಪ್ರಸಿದ್ಧ ಶಸ್ತ್ರಚಿಕಿತ್ಸಾಲಯವೊಂದರಲ್ಲಿ ಚಿಕಿತ್ಸೆ ಪಡೆಯಲು 8000 ಮೈಲಿ ಪ್ರಯಾಣ ಮಾಡಿದ. ಈತನಿಗೆ ಅಲ್ಲಿ ಶಸ್ತ್ರ ಚಿಕಿತ್ಸೆಯು ಬಹು ಎಚ್ಚರಿಕೆಯಿಂದ ನಡೆಯಿತು. ಮೂರು ನಿಮಿಷ ಕಾಲದ ವರೆಗೂ ಆತನ ಎದೆಗೂಡನ್ನು ಬಿಚ್ಚಿ, ಅದರೊಳಗೆ ಹುದುಗಿದ್ದ ಕಲ್ಲನ್ನು ಪ್ರಯಾಸದಿಂದ ತೆಗೆದು ಪುನಃ ಎದಗೂಡನ್ನು ಹೊಲಿದು ಬಟ್ಟೆ ಸುತ್ತಿ ಮೂರು ನಿಮಿಷದ ಕಾಲ ಹಾಗೆಯೇ ಸೂರ್ಯನ ಪ್ರಕಾಶಕ್ಕೆ ಬಿಟ್ಟಿದ್ದು ವೈದ್ಯರು ಚಿಕಿತ್ಸೆ ನಡೆಸಿದರು. ಈಗ ಆತನು ಗುಣಮುಖನಾಗಿ ಮೆಲ್ಬೋರ್‌ನಿಗೆ ಹಿಂತಿರುಗುವನಂತೆ. ಮುಂಚಿನ ವೈದ್ಯರು ಈತನಿಗೆ ಕೇವಲ ಆರೇ ಆರು ತಿಂಗಳು ಆಯುಷ್ಯವೆಂದು ನುಡಿದಿದ್ದರಂತೆ!

—o0o—

ಕೋರ್ಟಿನಲ್ಲಿ ಮೃಗಗಳ ವಿಚಾರಣೆ!!

ಮಾನವ ಅಪರಾಧಿಗಳನ್ನು ಕೋರ್ಟ್ ವಿಚಾರಣೆಗೆ ಗುರಿಪಡಿಸುವಂತೆ ಮೃಗಗಳನ್ನು ವಿಚಾರಣೆಗೆ ಗುರಿಪಡಿಸಿರುವ ಅಂಶಗಳು ಸಾರ್ವಜನಿಕರನೇಕರಿಗೆ ತಿಳಿಯದ ವಿಷಯವಾಗಿರಬಹುದು. ಆದ್ದರಿಂದ ಈ ಸುದ್ದಿಯನ್ನಿಲ್ಲಿ ಕೊಡಲಾಗಿದೆ.

ಸಿಲೋನ್ ಕಾಡಿನಲ್ಲಿ ಆನೆಯೊಂದು ಎಂಟು ಮಂದಿಯನ್ನು ಕೊಂದದ್ದಕ್ಕಾಗಿ ಕಾನೂನು ಪ್ರಕಾರ ವಿಚಾರಣೆಗೊಳಪಟ್ಟು ಮರಣ ದಂಡನೆ ಶಿಕ್ಷೆಗೆ ಗುರಿಯಾಯಿತು.

ಲಂಡನ್ನಿನಲ್ಲಿ ಮುನಿಸಿಪಲ್ ಹುಲ್ಲನ್ನು ಎತ್ತೊಂದು ಬಹಳವಾಗಿ ಮೇಯುತ್ತಿದ್ದುದರಿಂದ ಅಲ್ಲಿಯ ಮುಖ್ಯಾಧಿಕಾರಿಗಳು ಅದನ್ನು ಹಿಡಿದು ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿದರಂತೆ!

ಫ್ರೆಂಚ್ ಸರ್ಕಸ್ ಒಂದಕ್ಕೆ ಸೇರಿದ ಆನೆಯೊಂದು ಒಬ್ಬನ ಜೇಬಿನೊಳಗಿದ್ದ ಹಣದ ಚೀಲವನ್ನು ಕದ್ದು ಅದನ್ನು ನುಂಗಿತಂತೆ! ಅದರೊಳಗೆ ಸುಮಾರು ಮುನ್ನೂರು ಫ್ರಾಂಕ್ ಇತ್ತಂತೆ ಇದನ್ನು ಕಂಡು ಹಣದ ಮಾಲಿಕನಿಗೆ ಕೋಪ ಬಂದು ಆನೆಯ ಮಾಲಿಕನ ಮೇಲೆ ವ್ಯವಹಾರ ಹೂಡುವುದು ಬಿಟ್ಟು ಆನೆಯ ಮೇಲೆ ವ್ಯವಹಾರ ನಡೆಸಿದನಂತೆ; ಆ ಪುಣ್ಯಾತ್ಮ!

—o0o—

ವರನಿಗೆ 80; ಕನ್ಯೆಗೆ 16!! ವರಸಾಮ್ಯ ಚೆನ್ನಾಗಿದೆಯಲ್ಲವೆ?

ಮಧ್ಯ ಪ್ರಾಂತ್ಯದಿಂದ ಬಂದ ಸೋಜಿಗದ ಸುದ್ದಿಯಿದು-ಸುಮಾರು ಮೂವತ್ತು ಜನರನ್ನು ತ್ಯಜಿಸಿ ಈಗ 31 ನೆಯವಳೆಂದು ಹೇಳಲ್ಪಟ್ಟ ಕೇವಲ 16 ವಯಸ್ಸಿನ ತರುಣಿಯೋರ್ವಳನ್ನು 80 ವರ್ಷದ ಮುದುಕನೊಬ್ಬನು ಈಗ ವಿವಾಹವಾಗಲಿರುವನು

ಈತನು ತನ್ನ ಅನೇಕ ಹೆಂಡತಿಯರಲ್ಲಿ 27 ಜನರನ್ನೂ ವಿವಾಹ ವಿಚ್ಛೇದನ ಪದ್ಧತಿಯ ಮೂಲಕ ತ್ಯಜಿಸಿದನಂತೆ! ಈಗ ಇವನ ಅಂತಃಪುರದಲ್ಲಿ ಕೇವಲ ಮೂರೇ ಮೂರು ಜನರು ಇರುವರಂತೆ. ಹೀಗಿರುವಾಗ ಆ ಮೂವರು ವಿಶ್ವ ಪ್ರಯತ್ನಪಟ್ಟರೂ ಈತನು ಬೇರೆ ವಿವಾಹವಾಗುವುದನ್ನು ಬಿಡಲಿಲ್ಲವಂತೆ. ಇದನ್ನು ಕಂಡು ಕೋರ್ಟಿಗೂ ಸಹ ಆ ಮೂವರು ದೂರನ್ನಿಯ್ದರು ಆಗ ಈತನು ಕೋರ್ಟಿನಲ್ಲಿ ಈ ರೀತಿ ಹೇಳಿದನಂತೆ.

'ನನ್ನ ಹೆಂಡತಿಯರನ್ನು ಸಾಕಲು ನನಗೆ ಶಕ್ತಿಯಿರುವ ವರೆಗೂ, ನನ್ನನ್ನು ವಿವಾಹವಾಗಲು ಇಚ್ಛಿಸುವ ಹುಡುಗಿಯರಿರುವವರೆಗೂ ನಾನು ಏತಕ್ಕಾಗಿ ವಿವಾಹ ಮಾಡಿಕೊಳ್ಳದೆ ನನ್ನ ಹಕ್ಕನ್ನು ಕಳೆದುಕೊಳ್ಳಬೇಕು?' ಎಂದು ಪ್ರಶ್ನಿಸಿದನಂತೆ. ಆಗ ಮದುವೆಯಾಗಲಿದ್ದ ತರುಣಿಯು ತನ್ನ ಪ್ರೇಮವನ್ನು ವೃದ್ಧನನ್ನ ಅಪ್ಪಿಬಿಗಿ ಹಿಡಿಯುವುದರ ಮೂಲಕ ವ್ಯಕ್ತಪಡಿಸಿದಳಂತೆ.

—o0o—

ಮರಗಳ ಮೇಲೆ ಮನೆಗಳು.

ಈ ಸುದ್ದಿಯನ್ನು ಯಾರಿಗಾದರೂ ತಿಳಿಸಿದರೆ ಅಥವ ಯಾರಾದರು ಕೇಳಿದರೆ ಅವರುಗಳಿಗೆ ಸಯಾಂ, ಜಪಾನ್ ಮುಂತಾದ ದೇಶಗಳ ನೆನಪು ಬರಬಹುದು. ಯಾಕೆಂದರೆ ಈ ಸುದ್ದಿಯು, ಮರಗಳ ಮೇಲೆ ಕಟ್ಟಲ್ಪಡುವ ಮನೆಗಳಿಗೆ ಸಂಬಂಧಿಸಿದ್ದು. ಅದೂ ಕಾಡಿನಲ್ಲಲ್ಲ! ಮಹಾನಗರದ ಒಂದು ಮಧ್ಯ ಪ್ರದೇಶದಲ್ಲಿ; ವಾಹಕ ಸಂಚಾರ ಅಧಿಕವಾಗಿರುವ ಪ್ರದೇಶದಲ್ಲಿ.

ಬೊಂಬಾಯಿಯ ಎಸ್‌ಪ್ಲನೇಡ್ ರಸ್ತೆಯ ಉತ್ತರ ಭಾಗದ ಕೊನೆಯು ಸಾಧಾರಣವಾಗಿ ಜನಗಳ, ವಾಹನಾದಿಗಳ ಓಡಾಟದಿಂದ ಕೂಡಿದ್ದಾಗಿಯೇ ಇರುತ್ತೆ. ಹೀಗಿದ್ದರೂ ಇಲ್ಲಿ ದೊಡ್ಡದಾಗಿ ಬೆಳೆಯಲ್ಪಟ್ಟಿರುವ ಮರಗಳ ಮೇಲೆ ಕೊಟ್ಟಡಿಗಳ ಕೋಪಾಯಿಯಲ್ಲಿ ರಕ್ಷ ನಿವೇಶನಗಳಲ್ಲಿ ಜನರು ವಾಸಿಸಲು ಕಾತುರರಾಗಿದ್ದಾರಂತೆ ಗ್ರಾಮವಾಸವು ಪಟ್ಟಣ ವಾಸಕ್ಕಿಂತ ಮೇಲು ಎಂದು ಹೇಳುವುದುಂಟು. ಆದರೆ ಏಕಕಾಲದಲ್ಲಿ ಎರಡನ್ನು ಅನುಭವಿಸಬಹುದಾಗಿದೆ ಈ ಮರದ ಮೇಲಿನ ಗೂಡುಗಳಲ್ಲಿ ವಾಸಮಾಡಿಕೊಂಡು ಈ ಗೂಡುಗಳನ್ನು ತಕ್ಕ ರೀತಿಯಲ್ಲಿ ಮಾರ್ಪಡಿಸಿಕೊಂಡು ಧಾರಾಳವಾಗಿ ಒಬ್ಬರು ಬೇಕಾದ ಸೌಕರ್ಯಗಳನ್ನು ಕಲ್ಪಿಸಿಕೊಂಡು ವಾಸ ಮಾಡಬಹುದಂತೆ!

ಪ್ರಕೃತಿ ಸೌಕರ್ಯಗಳನ್ನು ತನ್ನ ಉಪಯೋಗಕ್ಕೆ ಬೇಕಾದ ಹಾಗೆ ಮಾರ್ಪಡಿಸಿಕೊಳ್ಳುವುದು ಮಾನವನ ಲಕ್ಷಣವಲ್ಲವೆ?

—o0o—

ಪುರೋಹಿತರಿಗೆ ರುಸುಮೆಷ್ಟು?

ಮದುವೆಯ ಸಮಾರಂಭದಲ್ಲಿ ಪೌರೋಹಿತ್ಯ ನಡೆಸಿದ ಪುರೋಹಿತರಿಗೆ ಶಾಸ್ತ್ರಸಮ್ಮತವಾದ ಕ್ರಿಯಾ ದಕ್ಷಿಣೆ ಎಷ್ಟು? ಶಾಸ್ತ್ರೋಕ್ತಕ್ಕಿಂತ ಹೆಚ್ಚು ದುಡ್ಡನ್ನು ಅವರು ಪಡೆದಿದ್ದರೆ ಅದನ್ನವರು ಇಟ್ಟುಕೊಳ್ಳಲು ಅವರಿಗೆ ಅಧಿಕಾರವಿದೆಯೇ? ಹೈದರಾಬಾದಿನ ನ್ಯಾಯಸ್ಥಾನವೊಂದರಲ್ಲಿ ಇವುಗಳ ಇತ್ಯರ್ಥವಾಗಲಿದೆ ವಾದಹೂಡಿದವರು ಸಾಮಾನ್ಯರಲ್ಲ. ಅಲ್ಲಿಯ ನಿವೃತ್ತ ಸಬ್ ಜಡ್ಜರೊಬ್ಬರು ತಮ್ಮ ಪುತ್ರನ ಮದುವೆಯಲ್ಲಿ [ಪುರೋಹಿತ] ಪ್ರತಿವಾದಿಗೆ ಶಾಸ್ತ್ರೋಕ್ತವಾದ ದಕ್ಷಿಣೆಗಿಂತ ರೂ. 4-6-6 ಹೆಚ್ಚು ಸಂದಿದೆ; ಹೀಗಾಗಿ ವಾದಿಯು ಕೋರ್ಟು ಖರ್ಚು ಸಮೇತ ಈ ಹೆಚ್ಚಿಗೆ ಸಂದ ಮೌಲ್ಯದ ವಸೂಲಿಗೆ ಕೋರ್ಟಿನ ಡಿಕ್ರಿಯನ್ನು ಅಪೇಕ್ಷಿಸಿದ್ದಾರೆ ಪ್ರತಿವಾದಿಯ ಕಡೆಯಿಂದ ಓರ್ವ ಪ್ಲೀಡರರು ವಕಾಲತು ವಹಿಸಿರುವರಂತೆ. 'ಈ ಹಣವು ಒತ್ತಾಯದಿಂದ, ಮೋಸದಿಂದ ಬಂದುದಲ್ಲ; ವಾದಿಯು ತನ್ನ ಖುಷಿ ವಾಶಿಯಿಂದಲೇ ಕೊಟ್ಟಿದ್ದಾಗಿದೆ' ಎಂದು ಪ್ರತಿವಾದಿಯ ಡಿಫೆನ್ಸ್. ಅಂತೂ ಬಹಳ ಸ್ವಾರಸ್ಯವಾಗಿದೆ ಈ ದಾವೆ.

—o0o—

ಶಿಕ್ಷಣದಲ್ಲಿ ಪರಿವರ್ತನೆ.

ಶಾಲೆಗೆ ಮಕ್ಕಳು ಯಾಕೆ ಬರುವುದಿಲ್ಲ?

ಯಂ. ಕೆ. ಚೆಣ್ಣಪ್ಪ, | ಲೇಖಕ: | ಉಪಾಧ್ಯಾಯ, ಶಾಲೇರಿ.

'ಎಷ್ಟು ಹೇಳಿದರೂ, ಯಾವ ಆಶೆ ತೋರಿಸಿದರೂ ಶಾಲೆಗೆ ಮಕ್ಕಳು ಬರುವುದೇ ಇಲ್ಲ, ಬಂದ ಮಕ್ಕಳು ಕೂಡ ಶಿಕ್ಷಣವು ಮುಗಿಯುವ ಮೊದಲು ಅರ್ಧವಲ್ಲಿಯೇ ಬಿಟ್ಟು ಹೋಗುತ್ತಾರೆ' ಎಂಬ ಮಾತು ಉಪಾಧ್ಯಾಯ ವರ್ಗದಲ್ಲಿಯೂ, ವ್ಯವಹಾರಿಕ ಸ್ಥಾನವನ್ನರಿತ ಪ್ರತಿಯೊಬ್ಬನಲ್ಲಿಯೂ ಕೇಳಿ ಬರುತ್ತಿದೆ ಈ ರೀತಿ ಆಕ್ಷೇಪವು ಬರಲಿಕ್ಕೇನು ಕಾರಣ? ಹೆತ್ತವರಿಗೆ ತಮ್ಮ ಮಕ್ಕಳು ಶಿಕ್ಷಿತರಾಗುವುದು ಬೇಡವೇ? ಅಥವಾ ಅವರು ಶಿಕ್ಷಣದ ಮಹತ್ವವನ್ನು ತಿಳಿದಿರುವುದಿಲ್ಲವೇ? ಎಂಬುದನ್ನು ನಾವು ಆಲೋಚಿಸಬೇಕಾಗಿದೆ

ವರ್ಷಂಪ್ರತಿ ಲಕ್ಷಗಟ್ಟಿ ರೂಪಾಯಿಗಳನ್ನು ವೆಚ್ಚ ಮಾಡಿಯೂ ಜನತೆಗೆ ಯಾವುದೇ ತರಹದ ಪ್ರಯೋಜನವನ್ನು ಕೊಡದೆ ಇರುವ ಏನಾದರೂ ಕಾರ್ಯಕ್ರಮವಿರುವುದಾದರೆ ಅದು ನಮ್ಮ ಶಾಲೆಗಳಲ್ಲಿ ದೊರೆಯುವ ಪ್ರಾಥಮಿಕ ಶಿಕ್ಷಣವಲ್ಲದೆ ಬೇರೆ ಯಾವುದೂ ಅಲ್ಲ ಪ್ರಾಥಮಿಕ ಶಿಕ್ಷಣವು ವ್ಯರ್ಥವಾಗಿದೆ ಎಂದು ಹೇಳಿದ ಬಳಿಕ ಅದರ ಆಧಾರದ ಮೇಲೆ ನಿಂತಿರುವ ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣವೂ ಕೂಡ ಹಾಗೆಯೇ ಅಪ್ರಯೋಜನವಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ ಆರ್ಥಿಕ ದೃಷ್ಟಿಯಿಂದ ನಮಗೆ ದೊರೆಯುವ ಶಿಕ್ಷಣವು ಸ್ವಾವಲಂಬಿಯಾಗುವುದಕ್ಕೆ ಸಹಾಯವಾಗದು. ಅಷ್ಟೇ ಅಲ್ಲದೆ, ಅದು ವಿದ್ಯಾರ್ಥಿಯ ಶಾರೀರಕ, ನೈತಿಕ ಮತ್ತು ಮಾನಸಿಕ ಶಕ್ತಿಯನ್ನು ಬೆಳೆಸಿ ಉನ್ನತನನ್ನಾಗಿ ಮಾಡುವುದರ ಬದಲು, ಅವನ ಅಮೂಲ್ಯವಾದ ಸಮಯದ ದುರುಪಯೋಗವನ್ನು ಮಾಡಿ, ಅವನು ಅವನತಿಯನ್ನು ಹೊಂದುವಂತೆ ಮಾಡುವಂಥಾದ್ದೂ ಆಗಿದೆ.

ಈಗ ಶಾಲೆಗಳಲ್ಲಿ ಮಗುವಿನ ಆತ್ಮೋನ್ನತಿಗೆ ಕಾರಣವಾದ ನೈತಿಕ ಶಿಕ್ಷಣವು ಸಾಕಷ್ಟಿಲ್ಲ ಶಾರೀರಕ ಶಿಕ್ಷಣವು ಅಷ್ಟಷ್ಟೇಯಾಗಿ ದೊರೆಯುವುದು ಆದ್ದರಿಂದ ಇವುಗಳನ್ನು ಹೊಂದಿಕೊಂಡಿರುವ ಮಾನಸಿಕ ಶಿಕ್ಷಣವು ಫಲಕಾರಿಯಾಗುವುದಿಲ್ಲ .

'ಶಾಲೆಗೆ ನಿಮ್ಮ ಮಕ್ಕಳನ್ನು ಏಕೆ ಕಳುಹಿಸುವುದಿಲ್ಲ?' ಅಥವಾ 'ನಿಮ್ಮ ಮಕ್ಕಳನ್ನು ಶಾಲೆಯಿಂದ ಏಕೆ ಬಿಡಿಸಿದ್ದೀರಿ?' ಎಂದು ಮಕ್ಕಳ ಹೆತ್ತವರನ್ನು ಪ್ರಶ್ನಿಸಿದರೆ ಅವರು ಸ್ವಾರಸ್ಯವಾದ ಉತ್ತರವನ್ನು ಕೊಡುತ್ತಾರೆ. 'ಶಾಲೆಗೆ ಹೋದ ಮೇಲೆ ಮಕ್ಕಳು ಸಂಪೂರ್ಣ ಪರಿವರ್ತನೆಯನ್ನು ಹೊಂದುತ್ತಾರೆ. ಅವರಿಗೆ ತಮ್ಮ ಹಿರಿಯರ ವೃತ್ತಿ ಉದ್ಯೋಗಗಳಲ್ಲಿ ಅಂದ ಶ್ರದ್ಧೆಯನ್ನು ತೋರಿಸುತ್ತಾರೆ. ಕಲಿತ ಮಕ್ಕಳು ನಮ್ಮ ವೃತ್ತಿ ಉದ್ಯೋಗಗಳನ್ನು ಅವಲಂಭಿಸುವುದಿಲ್ಲ, ಬೇರೆ ವೃತ್ತಿ ದೊರೆಯುವುದಿಲ್ಲ. ಅವರು 'ತತೋ ಭ್ರಷ್ಟಃ ತತೋ ಭ್ರಷ್ಟಃ' ಆಗುತ್ತಾರೆ. ಅಂದ ಬಳಿಕ ನಿರುದ್ಯೋಗ ಸಮಸ್ಯೆಗೆ ಕಾರಣ ಬೇರೆ ಹುಡುಕಬೇಕೇ? ಅವರು ನಮಗೆ ಮತ್ತೆ ಹೊರಲಿಕ್ಕಾಗದ ಒಂದು ಹೊರೆಯಾಗುತ್ತಾರೆ? ..... ಎಂದು ಅವರು ತಮ್ಮ ಮನಸ್ಸಿನಲ್ಲಿದ್ದುದನ್ನು ಬಿಚ್ಚಿ ಹೇಳಬಹುದು. ಇದನ್ನು ಸುಳ್ಳೆಂದು ಅಲ್ಲಗಳೆಯಲು ಆಗುತ್ತದೆಯೇ?

'ಶಿಕ್ಷಣವು ಮಗುವಿನ ಜೀವನ ನಿರ್ವಾಹಕ್ಕೆ ಸಾಧಕವಾಗಿರಬೇಕು' ಎಂದು ಫ್ರೋಬೆಲನು ವಾದಿಸುತ್ತಾನೆ. ಆದರೆ ಅದು ನಮ್ಮ ಶಾಲೆಗಳ ವಿದ್ಯಾರ್ಥಿಗಳಿಗೆ ಒಂದು ಬಾಧಕವಾಗಿ ಪರಿಣಮಿಸಿದೆ ನೇಗಿಲಯೋಗಿಯ ಮಕ್ಕಳು ಉತ್ತಮ ಕೃಷಿಕರಾಗಲಿಕ್ಕೆ, ಕಮ್ಮಾರ ಮಕ್ಕಳು ಉತ್ತಮ ಕಮ್ಮಾರರಾಗಲಿಕ್ಕೆ, ಬಡಗಿ ಮಕ್ಕಳು ನುರಿತ ಬಡಗಿಯರಾಗಲಿಕ್ಕೆ ಅಥವಾ ಬೇರೆ ಯಾವುದಾದರೂ ಇತರ ಕೈಗಾರಿಕೆಗಳನ್ನು ಪಡೆಯಲಿಕ್ಕೆ ಈಗಿನ ಶಿಕ್ಷಣವು ಸಹಕಾರಿಯಲ್ಲವೆಂದು ಕಂಠೋಕ್ತವಾಗಿ ಹೇಳಬಹುದು. ಇಂಥ ಶಿಕ್ಷಣವನ್ನು ಪಡೆದರೆ 'ಇದ್ದದು ಹೋಯಿತು ಬೇರೆ ಪ್ರಾಪ್ತವಾಗಲಿಕ್ಕಿಲ್ಲ' ಎಂಬಂತಾಗುತ್ತದೆ ಹಳ್ಳಿಗರಲ್ಲಿ ಅಳಿದುಳಿದ ಏನಾದರೂ ಹಸ್ತಕೌಶಲ್ಯ, ಬುದ್ಧಿ ಚಾತುರ್ಯಗಳು ಇದ್ದರೆ ಇಂಥಹ ಶಿಕ್ಷಣದ ಪ್ರಚಾರದಿಂದ ಅವು ನಷ್ಟವಾಗಿಬಿಡುತ್ತಿವೆ ಹಳ್ಳಿಗಳಲ್ಲಿ ಜೀವನ ನಿರ್ವಾಹಕ್ಕೆ ಇರುವ ಒಂದೆರಡು ಮಾರ್ಗಗಳಾದರೂ ಮುಚ್ಚಿ ಹೋಗುತ್ತಿವೆ ಏಕೆ? ಹಳ್ಳಿಯ ಸನ್ನಿವೇಶಕ್ಕೂ ಶಾಲೆಯಲ್ಲಿಯ ಶಿಕ್ಷಣಕ್ಕೂ ಸಂಬಂಧವೇ ಇಲ್ಲ

ಆದ್ದರಿಂದ ಇಂಥಹ ಶಿಕ್ಷಣವು ನಾಡಿನ ರೈತರಿಗೆ ಸಹಾಯಕವಾಗುವುದಿಲ್ಲ ಇಂತಿರುವಾಗಲೇ ಹೆತ್ತವರು ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ ಏಕೆಂದರೆ ಇದು ಮಗುವಿನ ಜೀವಮಾನದ ಅಮೂಲ್ಯ ಸಮಯವನ್ನು ವ್ಯರ್ಥ ಮಾಡುವುದು ನಮ್ಮ ಶಾಲೆಗಳಲ್ಲಿ ಪರಭಾಷೆಯನ್ನು ಕಲಿಸುವುದೂ ಇದೆ ಇದರಿಂದಾಗಿ ವಿದ್ಯಾರ್ಥಿಯ ಅಭಿವೃದ್ಧಿಯನ್ನು, ಅವನ ಸ್ವಾಭಾವಿಕ ಶಕ್ತಿಗಳ ವಿಕಾಸವನ್ನು ನಿರೀಕ್ಷಿಸುವುದು ಸಾಧ್ಯವಿಲ್ಲ. ಏಕೆಂದರೆ ಮಗುವಿಗೆ ಸ್ವಭಾಷೆಯ ಪರಿಜ್ಞಾನವೇ ಪರಿಪೂರ್ಣತೆಯನ್ನು ಹೊಂದದಿರುವಾಗ, ಪರ ಭಾಷೆಯನ್ನು ಅವನ ತಿರುಕಲೆಯಲ್ಲಿ ಅದುವಿ ಅದರ ಮೂಲಕ ಗಣಿತ, ಭೂಗೋಳ, ಖಗೋಳ ಮತ್ತು ವಿಜ್ಞಾನವೇ ಮೊದಲಾದ ಶಾಸ್ತ್ರಗಳನ್ನು ಕಲಿಸುವುದರಿಂದ ಏನೂ ಪ್ರೌಢಿಮೆ ತೋರಿಸಿದಂತಾಗಲಿಲ್ಲ. ವಿದೇಶೀ ಮಾಧ್ಯಮದ ಮೂಲಕ ಶಿಕ್ಷಣವನ್ನು ಪಡೆಯುವದೆಂದರೆ ಸಮಯ ವ್ಯರ್ಥ.

ಇಷ್ಟಾಗಿಯೂ ನಮ್ಮ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಸಾಕಷ್ಟು ಇದೆ ಪ್ರಾಥಮಿಕ ಶಿಕ್ಷಣವು ಸರ್ವತ್ರ ಪ್ರಚಾರವಾಗಿ ಅದು ಫಲಕಾರಿಯಾಗಬೇಕಾದರೆ ಈಗಿರುವ ಶಾಲೆಗಳ ಸಂಖ್ಯೆಗಳನ್ನು ಹೆಚ್ಚಿಸಿದರೆ ಸಾಲದು; ಒಬ್ಬಿಬ್ಬ ಉಪಾಧ್ಯಾಯರು ಕೆಲಸ ಮಾಡಿಕೊಂಡಿರುವ, ನಾಲ್ಕು ತರಗತಿ ಮಾತ್ರ ಇರುವ ಅಪೂರ್ಣ ಮತ್ತು ಅಶಿಕ್ಷಿತರ ಶಾಲೆಗಳನ್ನು ಮುಚ್ಚಿದರೆ ಸಾಲದು; ಒಂದು ಶಾಲೆಯಿಂದ ವಿದ್ಯಾರ್ಥಿಯು ಇನ್ನೊಂದು ಶಾಲೆಗೆ ಹೋಗುವಾಗ ದಾಖಲು ಬಗ್ಗೆ ದೊಡ್ಡ ರಿಕಾರ್ಡು ಶೀಟುಗಳನ್ನು ಬರೆದಿಟ್ಟುಕೊಂಡರೆ ಸಾಲದು ಈಗಿನ ಶಿಕ್ಷಣ ಕ್ರಮದಲ್ಲಿ ಸಂಪೂರ್ಣ ಪರಿವರ್ತನೆಗಳಾಗುವುದು ಅಗತ್ಯವಾಗಿದೆ

ಶಿಕ್ಷಣದ ಪರಿವರ್ತನೆ ಎನ್ನುವಾಗ ಅಮೇರಿಕಾದ ಮಹಾ ಅಧ್ಯಾಪಕ ಡಾಕ್ಟರ್ ಸದರ್‌ಲ್ಯಾಂಡರ ಮಾಡಿಶನ್ ಕಾಲೇಜಿನ ಶಿಕ್ಷಣ ವ್ಯವಸ್ಥೆಯು ನೆನಪಿಗೆ ಬರುವುದು ಇವರು ಅಲ್ಲಿಯ ಒಂದು ಕಾಲೇಜಿನಲ್ಲಿ ಮೊದಲು ಮುಖ್ಯೋಪಧ್ಯಾಯರಾಗಿದ್ದರು ನಮ್ಮ ದೇಶದ ಶಿಕ್ಷಣ ಕ್ರಮದಂತೆ ಅಲ್ಲಿಯೂ ಒಂದು ಕಾಲದಲ್ಲಿ ಇಂಥಾ ಶಿಕ್ಷಣ ಕ್ರಮವಿತ್ತು ಇಂಥಾ ಶಿಕ್ಷಣವು ರಾಷ್ಟ್ರದ ಅವನತಿಗೆ ಕಾರಣವೆಂದು ತಿಳಿದು ರಾಷ್ಟ್ರದ ಮೇಲ್ಮೆಗಾಗಿ ತನ್ನ ಪದವಿಗೆ ರಾಜಿನಾಮೆಯನ್ನಿತ್ತರು ತನ್ನ ಸಹದ್ಯೋಗಿಗಳೊಂದಿಗೆ ಸ ವಿರಗಟ್ಟಿ ಎಕರು ಜಮೀನನ್ನು ಕೊಂಡುಕೊಂಡರು ಅಲ್ಲಿ ಅವರು ಪ್ರಾಥಮಿಕ, ಮಾಧ್ಯಮಿಕ ಪ್ರೌಢ ಶಾಲೆಗಳನ್ನು ತೆರೆದರು ಅನೇಕ ಶಾಲೆಗಳು ಮಕ್ಕಳಿಂದಲೇ ಕಟ್ಟಲ್ಪಟ್ಟವು ವ್ಯವಸಾಯಕ್ಕೆ ಸಂಬಂಧಪಟ್ಟ ಇಪ್ಪತ್ತೇಳು ಶಾಲೆಗಳು ಈಗ ಅಲ್ಲಿವೆ ವಿದ್ಯಾರ್ಥಿಗಳಿಗೆ ಭೋಜನ ಗೃಹ, ವಾಸಗೃಹಗಳೂ ಇವೆ ಏಳು ಸಾವಿರಕ್ಕೆ ಮಿಕ್ಕಿ ವಿದ್ಯಾರ್ಥಿಗಳಿದ್ದಾರೆ ವಿದ್ಯಾರ್ಥಿಗಳ ಊಟಉಪಚಾರಕ್ಕೆ ಬೇಕಾಗುವ ಗೋಧಿ, ಕಾಯಿಪಲ್ಯ, ಹಣ್ಣು ಹಂಪಲುಗಳು ವೈಜ್ಞಾನಿಕ ರೀತಿಯಲ್ಲಿ ಅವರಿಂದಲೇ ಬೆಳೆಯಲ್ಪಡುವುದು ವ್ಯವಸಾಯದ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕೃಷಿಗೆ ಸಂಬಂಧಪಟ್ಟ ಆದುನಿಕ ಶಿಕ್ಷಣವು ಕೊಡಲ್ಪಡುವುದು ಕೈಗಾರಿಕೆಗೆ ಸಂಬಂಧಪಟ್ಟ ಶಾಲೆಗಳಲ್ಲಿ ಗುಂಡು ಸೂಜಿಯಿಂದ ಹಿಡಿದು ಆ ಮೋಘ ಯಂತ್ರದ ವರೆಗಿನ ಶಿಕ್ಷಣವು ವಿದ್ಯಾರ್ಥಿಗಳಿಗೆ ದೊರೆಯುವುದು ಮಕ್ಕಳು ಕಾಯಿಲೆ ಬಿದ್ದರೆ ಅವರಿಗೆ ತಕ್ಕಂತೆ ವೈದ್ಯಕೀಯ ಸಹಾಯವನ್ನೀಯಲು, ಸದರ್‌ಲ್ಯಾಂಡರು ಸ್ವತಹ ದೊಡ್ಡ ವೈದ್ಯಕೀಯ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾಗಿರುವರು ಈಗ ಮಾಡಿಶನ್ ಕಾಲೇಜಿನಲ್ಲಿ ವಿಧವಿಧ ಆಸ್ಪತ್ರೆಗಳಿವೆ ಈ ವೃತ್ತಿಯಲ್ಲಿಯೂ ಶಿಕ್ಷಣವು ವಿದ್ಯಾರ್ಥಿಗಳಿಗೆ ಲಭಿಸುವುದು. ಹೊರಗಿನಿಂದ ವರ್ಷಕ್ಕೆ ಸರಾಸರಿ ಮೂವತ್ತು ನರ್ಸುಗಳು ಇಲ್ಲಿಯ ಆಸ್ಪತ್ರೆಗಳಲ್ಲಿ ತರಬೇತು ಹೊಂದಿ ಹೋಗುವರು. ಡಾ. ಸದರ್‌ಲ್ಯಾಂಡರು ಇಷ್ಟೆಲ್ಲಾ ಮಾಡಿದುದು ಮಾಡಿಶನ್ ಕಾಲೇಜಿನಲ್ಲಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲಿಕ್ಕೆ. ಇಲ್ಲಿ ತರಬೇತು ಹೊಂದಿದ ವಿದ್ಯಾರ್ಥಿಯು ಸ್ವಾವಲಂಭಿಯಾಗಿ ತನ್ನ ಮುಂದಿನ ಜೀವನವನ್ನು ಸುಖಮಯವಾಗಿ ನಿರ್ವಹಿಸುವನು ಈಗ ಇಡೀ ಅಮೇರಿಕವೇ ಡಾಕ್ಟರಿಗೆ ಚಿರಋಣಿಯಾಗಿದ್ದಾರೆ.

ಇವರ ಶಿಕ್ಷಣ ಕ್ರಮವೇ ನಮಗೂ ಬೇಕಾಗುವ ಶಿಕ್ಷಣ ಕ್ರಮವು ಶಿಕ್ಷಣ ಕ್ರಮವು ಈ ರೀತಿಯಾಗಿ ಸಂಪೂರ್ಣ ಪರಿವರ್ತನೆಯನ್ನು ಹೊಂದಬೇಕು ಇದರಿಂದಲೇ ಶಾರೀರಿಕ, ಮಾನಸಿಕ, ಆತ್ಮಿಕ ಶಕ್ತಿಯು ವಿದ್ಯಾರ್ಥಿಯಲ್ಲಿ ವಿಕಾಸವಾಗುವುದು.

ಮಹಾತ್ಮಾಜೀಯವರ ವಾರ್ಧಾ ಶಿಕ್ಷಣ ಯೋಜನೆಯಾದರೂ ಇದೇ ಧ್ಯೇಯದ್ದಾಗಿರುವದು. ಯಾವುದಾದರೊಂದು ಗ್ರಾಮೋದ್ಯೋಗವನ್ನು ಸುತ್ತುವರಿಸಿಕೊಂಡು ಮಾತೃಭಾಷೆಯ ಮಾಧ್ಯಮದ ಮೂಲಕ ಶಿಕ್ಷಣ ಪ್ರಚಾರ ಮಾಡುವ ಉದ್ದೇಶದಿಂದ ವಾರ್ಧಾ ಶಿಕ್ಷಣ ಕ್ರಮದ ಉಪಯುಕ್ತ ಸಲಹೆಯನ್ನು ಅವರು ಕೊಟ್ಟಿರುತ್ತಾರೆ ಈ ಶಿಕ್ಷಣ ಕ್ರಮದಲ್ಲಿ ಯೋಗ್ಯ ಮಕ್ಕಳ ಯೋಗ್ಯತೆಯನ್ನು ಬೆಳೆಯಲಿಕ್ಕೆ ಅವಕಾಶವಿರುವದು ಮಾತ್ರವಲ್ಲದೆ ಅಯೋಗ್ಯ ಮಕ್ಕಳು ಯೋಗ್ಯತೆಯನ್ನು ಹೊಸದಾಗಿ ಪಡೆಯುವ ಸಂಭವವೂ ಇರುತ್ತದೆ ಗ್ರಾಮೋದ್ಯೋಗಗಳಿಗೆ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಪ್ರೋತ್ಸಾಹವು ದೊರೆತು ಅವುಗಳ ಅಭಿವೃದ್ಧಿಯಾಗುವುದಲ್ಲದೆ ವಿದ್ಯಾರ್ಥಿಗಳಿಗೆ ವ್ಯಕ್ತಿ ಅಥವಾ ಔದ್ಯೋಗಿಕ ಶಿಕ್ಷಣವನ್ನು ಪಡೆಯುವ ಸಂದರ್ಭದಲ್ಲಿ ಸ್ಥಾನೀಕ ವೃತ್ತಿಗಾರರು ಮತ್ತು ಉದ್ಯೋಗಗಳಿಗೆ ವಂಶಪಾರಂಪರ್ಯದಿಂದ ಬಂದ ಹಸ್ತಕೌಶಲ್ಯ ಬುದ್ಧಿ ಚಾತುರ್ಯಗಳ ಪ್ರಯೋಜನವು ದೊರೆಯುವ ಅನುಕೂಲತೆ ಇರುತ್ತದೆ

ಶಿಕ್ಷಣ ಕ್ರಮದಲ್ಲಿರುವ ದೋಷಗಳಿಂದಾಗಿ ನಮ್ಮ ಶಾಲೆಗೆ ಮಕ್ಕಳು ಬರುವುದಿಲ್ಲ ಅವರು ಶಾಲೆಗಳನ್ನು ತುಂಬಿಕೊಳ್ಳಬೇಕಾದರೆ ಮೇಲೆ ಹೇಳಿದ ರೀತಿ ಶಿಕ್ಷಣ ಕ್ರಮದಲ್ಲಿ ಪರಿವರ್ತನೆಗಳಾಗಬೇಕು

ಬಿಕಾನೇರ್ ಮಹಾರಾಜರ ರಾಜಭಕ್ತಿ.

'ಅಂತರರಾಷ್ಟ್ರೀಯ ಪರಿಸ್ಥಿತಿ ದಿನದಿನಕ್ಕೂ ಕೆಡುತ್ತ ನಡೆದಿರುವುದರಿಂದ್ಯ ನಾವು, ನಮ್ಮ ಸೈನ್ಯ, ನಮ್ಮ ಸಂಸ್ಥಾನದ ಉತ್ಪನ್ನ, ಇವೆಲ್ಲವುಗಳನ್ನು ಯಾವ ಶರಾರಿಲ್ಲದೆ ನಮ್ಮ ಪ್ರಜಾವತ್ಸಲ ಬ್ರಿಟಿಷ್ ಸಾರ್ವಭೌಮರ ಪಾದತಲದಲ್ಲಿ ಅರ್ಪಿಸುವೆವು ಒಂದು ವೇಳೆ ಯುದ್ಧ ಸುರುವಾದುದಾದರೆ ಅದರಲ್ಲಿ ಧುಮುಕಿ ನಮ್ಮ ಚಕ್ರವರ್ತಿಗಳಿಗೆ ಸೇವೆ ಸಲ್ಲಿಸುವವನ್ನು ತಪ್ಪಿಸಬೇಡಿ 1914 ರಲ್ಲಿ ಇದ್ದುದಕ್ಕಿಂತ ಮುದುಕರಾಗಿರುವೆವೆಂದು ಭಾವಿಸಿ ನಮ್ಮನ್ನು ಮರೆಯಬೇಡಿ' ಎಂದು ಮಹಾರಾಜರು ವೈಸರಾಯರಿಗೆ ತಂತಿ ಮೂಲಕ ತಿಳಿಸಿರುತ್ತಾರೆ.

ಅಸ್ಸಾಮಿನ ಮಿಶ್ರ ಮಂತ್ರಿ ಮಂಡಳ ರಚನೆ.

ಅಸ್ಸಾಮಿನ ಈ ಮೊದಲಿನ ಮಂತ್ರಿ ಮಂಡಳದ ಮುಖ್ಯ ಮಂತ್ರಿಯವರ ಮೇಲೆ ಅವಿಶ್ವಾಸ ಠರಾವನ್ನು ತಂದದ್ದರಿಂದ ಅವರು ತನ್ನ ಸಹಚಾರಿಗಳೊಡನೆ ತನ್ನ ಮಂತ್ರಿಪದಕ್ಕೆ ರಾಜಿನಾಮೆಯನ್ನಿತ್ತರು. ಆದ ಪ್ರಯುಕ್ತ ಗವರ್ನರು ಕಾಂಗ್ರೆಸ್ ಪಾರ್ಟಿಯ ಮುಂದಾಳಾದ ಶ್ರೀಮಾನ್ ಗೋಪಿನಾಥ್ ಬಾರ್ಡೋಲಿಯವರನ್ನು ಹೊಸಮಂತ್ರಿ ಮಂಡಳ ರಚಿಸುವಂತೆ ಆಹ್ವಾನಿಸಬೇಕಾಯಿತು. ಅದೇ ಮೇರೆಗೆ ಶ್ರೀ. ಬಾರ್ಡೋಲಿಯವರು ಒಪ್ಪಿ ಈ ವಿಚಾರದಲ್ಲಿ ರಾಷ್ಟ್ರಪತಿಗಳ, ಅಬ್ದುಲ್ ಕಲಂ ಆಜಾದ ಮೌಲಾನವರ ಒಪ್ಪಿಗೆಯನ್ನು ಪಡೆದು ಅಲ್ಲಿ ಒಂದು ಮಿಶ್ರ ಮಂತ್ರಿ ಮಂಡಳವನ್ನು ರಚಿಸುವ ಕಾರ್ಯ ಕೈಕೊಂಡರು. ಅಸ್ಸಾಮಿನ ಕಾಂಗ್ರೆಸ್ ಪಾರ್ಲಿಮೆಂಟರಿ ಪಾರ್ಟಿಯಲ್ಲಿ ಮಂತ್ರಿ ಮಂಡಳದಲ್ಲಿ ಎಂಟು ಸದಸ್ಯರಿರಬೇಕೆಂದೂ, ಅವರಲ್ಲಿ 5 ಹಿಂದುಗಳು 3 ಮುಸಲ್ಮಾನರೂ ಆಗಿರಬೇಕೆಂದೂ ಮೊದಲು ಹಿಂದುಗಳ ಹೆಸರುಗಳನ್ನು ಬರೆದು ಗವರ್ನರಿಗೆ ಕಳುಹಿಸಬೇಕೆಂದೂ, ನಂತರ ಪ್ರಾಂತ್ಯದ ಮುಸಲ್ಮಾನರ ಅಭಿಪ್ರಾಯ ತೆಗೆದು ಬಾಕಿ ಮೂವರ ಹೆಸರನ್ನು ಕಳುಹಿಸುವಂತೆಯೂ ತೀರ್ಮಾನಿಸಿದ ಮೇರೆ ಶ್ರೀ. ಬಾರ್ಡೋಲಿಯವರು ಈ ಕೆಳಗಿನ 5 ಹೆಸರುಗಳನ್ನು ಗವರ್ನರರಿಗೆ ಕಳುಹಿಸಿರುರು. (1) ಶ್ರೀಮಾನ್ ಗೋಪಿನಾಥ ಬಾರ್ಡೋಲಿ (ಮುಖ್ಯ ಮಂತ್ರಿ), (2) ಶ್ರೀ. ಕಾಮಿನಿ ಕುಮಾರಸೇನ್, (3) ಶ್ರೀ. ಅಕ್ಷಯಕುಮಾರ ದಾಸ್, (4) ಶ್ರೀ. ರೂಪನಾಥ್ ಬ್ರಹ್ಮ ಮತ್ತು (5) ಶ್ರೀರಾಮನಾಥ ದಾಸ್.

ಮುಸಲ್ಮಾನರ ಸ್ಥಳಕ್ಕಾಗಿ ಮೂರು ಜನರನ್ನು ಸೂಚಿಸಬೇಕಾಗಿ ಶ್ರೀ. ಬಾರ್ಡೋಲಿಯವರು ಅಲ್ಲಿಯ ಮುಸ್ಲಿಮರಿಗೆ ವಿನಂತಿಸಿರುವರು.

ಆದರೆ ಇತ್ತೀಚೆಗಿನ ವಾರ್ತೆಯಂತೆ ಮುಸ್ಲಿಂ ಪಕ್ಷದವರು ಕಾಂಗ್ರಸಿಗೂ ಮತ್ತು ಮುಸ್ಲಿಂ ಲೀಗಿಗೂ ಯಾವದೊಂದು ಒಪ್ಪಂದವಾಗದ ವಿನಹ ತಮ್ಮ ಪ್ರತಿನಿಧಿಗಳನ್ನು ಶ್ರೀ. ಬಾರ್ಡೋಲಿಯವರ ಕೇಳಿಕೆ ಮೇರೆ ಅನುಮೋದಿಸಲು ನಿರಾಕರಿಸಿರುವರು. ಅಸ್ಸಾಂ ಎಸೆಂಬ್ಲಿಯ 34 ಮುಸ್ಲಿಂ ಸದಸ್ಯರ ಪೈಕಿ 31 ಜನರು ಸರ್ ಮಹಮ್ಮದ್ ಸಾದುಲ್ಲಾರವರ ಮುಖಂಡತ್ವದಲ್ಲಿ ಒಟ್ಟಾಗಿ ಇದನ್ನು ವಿರೋಧಿಸಿರುವರು.

ಗವರ್ನರರು ಮೇಲ್ಕಂಡ 5 ಮಂದಿ ಮಂತ್ರಿಗಳನ್ನು ಅಂಗಿಕರಿಸಿರುವರು. ಪರಿಸ್ಥಿತಿಹೇಗಾಗುವದೆಂದು ನೋಡಬೇಕಾಗಿದೆ.

ಖಾರೆ ಪ್ರಕರಣ

ಮಧ್ಯಪ್ರಾಂತ್ಯದ ಪ್ರಧಾನಮಂತ್ರಿಯಾಗಿದ್ದ ಡಾ. ಖರೆಯವರು ಕಾಂಗ್ರೆಸಿನ

ಪ್ರಗತಿಗೆ ಕುಂದು ತರುವಂಥಾ ವರ್ತನೆಗಳನ್ನು ಮಾಡಿದ್ದರಿಂದ ಅವರನ್ನು ಕಾಂಗ್ರೆಸಿನ ಯಾವ್ಯದೊಂದು ಜವಾಬ್ದಾರಿ ಅಧಿಕಾರಕ್ಕೆ ಅಯೋಗ್ಯರು ಎಂದು ಬಹಿಷ್ಕರಿಸಲಾಯಿತು. ಈ ರೀತಿ ಅವರ ಮೇಲೆ ಶಿಸ್ತಿನ ಕಾರ್ಯಕ್ರಮ ನಡೆಸಿದ್ದು ದೇಶ ಹಿತದಿಂದಲ್ಲದೆ ಬೇರೆ ಇಲ್ಲ. ಕಾಂಗ್ರೆಸಿನಲ್ಲಿ ಒಡಕನ್ನು ನಿರೀಕ್ಷಿತ್ತಿರುದ್ದವರಿಗೆ ಒಂದು ಸಂಧಿಯನ್ನು ಏರ್ಪಡಿಸಿ ಕಾಂಗ್ರೆಸ್ ಪ್ರಶಸ್ತಿಗೆ ಕುಂದು ತರಲು ಪ್ರಯತ್ನಿಸಿದ್ದು ಅಕ್ಷಮ್ಯ ಅಪರಾಧವೇ ಸರಿ. ಈಗಲೂ ಅವರು ಅಪರೋಕ್ಷವಾಗಿನಡೆಸುತ್ತಿರುವ ಕಾರ್ಯಗಳು ಅವರ ಪ್ರಗತಿಯನ್ನು ಮುಂದಕ್ಕೆ ತರುವಂತವಲ್ಲ. ಕಾಂಗ್ರೆಸ್ ತನ್ನ ಶಿಸ್ತನ್ನು ಯಾವ ಧುರೀಣರ ಮೇಲೂ ಅವರ ತಪ್ಪಿಗನುಸಾರ ಪ್ರಯೋಗಿಸುವದು. ಹಿಟ್ಲರನ ಬಲಗೈಯಂತಿದ್ದು 3 ಲಕ್ಷ ಸ್ವಯಂ ಸೇವಕರ ನಂಬಿಗೆಯಾಗಿದ್ದ ಕೆಪ್ಟನ್ ರೋಯಮ ನಾಜಿ ಪಕ್ಷದ ಶಿಸ್ತನ್ನು ಉಲ್ಲಂಘಿಸಿದುದಕ್ಕಾಗಿ ಹಿಟ್ಲರನು ಪಾಸಿ ಶಿಕ್ಷೆ ಕೊಡಿಸಿದನು. ಶಿಸ್ತು ಉಲ್ಲಂಘನೆಯು ಸಹಿಸಲಾಗದ ಅಪರಾಧ. ಇದು ಖಾರೆಯವರಿಗೆ ಮಾತ್ರವಲ್ಲ, ಇನ್ನಾವ ಕಾಂಗ್ರೆಸ್ ಸೇವಕನಾಗಲೀ ಶಿಸ್ತನ್ನುಲ್ಲಂಘಿಸಿದ್ದೇ ಆದರೆ ಅವನಿಗೂ ಶಿಕ್ಷೆಯು ಖಡಾಖಂಡಿತವೆಂದು ರಾಷ್ಟ್ರಪತಿ ಬೋಸರು ವಾರ್ಧಾಗಂಜಿನ ತಮ್ಮ ಸಾರ್ವಜನಿಕ ಭಾಷಣದಲ್ಲಿ ನುಡಿದರು.

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೦೫,೭೩೮— ೭—೦
ಏಜಂಟರಿಗೆ ಸಾಲ ಮತ್ತು ಆಸ್ತಿಯ ಒತ್ತೆ	೨೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೫,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೬,೧೯೫— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು

೧೯೨೭ ———— ೨೧,೩೫,೨೩೪ ರೂಗಳು

೧೯೩೭ ———— ೮೫,೩೨,೯೭೩ ರೂಗಳು.

ಚಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ

ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್, ಬ್ರಾಂಚ್ ಮ್ಯಾನೇಜರ್,— **ಚಾಮರಾಜಪೇಟೆ, ಬೆಂಗಳೂರು ಸಿಟಿ.**

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ. ಆಫಿಷಿಯೇಟಿಂಗ್ ಜನರಲ್ ಮ್ಯಾನೇಜರ್, **ಅಜ್ಮೀರ್.**

12-2

ಕೊಡಗು

ಸೆಪ್ಟಂಬರ್ ತಾರೀಕು ೨೩ನೇ ಶುಕ್ರವಾರ ೧೯೩೮.

ಯೂರೋಪಿನ ಪರಿಸ್ಥಿತಿ.

ಯೂರೋಪಿನಲ್ಲಿ ಯುದ್ಧವಾಗುವುದು ನಿಶ್ಚಯವೆಂತ ಕಳೆದ ವಾರದ ಅಂತ್ಯದಲ್ಲಿ ತೋರುತ್ತಿತ್ತು. ಆದರೆ ಈ ವಾರದಲ್ಲಿ ಯೂರೋಪಿನ ಮುಖ್ಯ ರಾಜ್ಯಾಧಿಕಾರಿಗಳೊಳಗೆ ನಡೆದ ಸಲ್ಲಾಪಗಳಿಂದ ತತ್ಕಾಲ ಯುದ್ಧವಾಗುವ ಸಂಭವವು ತಪ್ಪಿದಂತೆ ತೋರುತ್ತದೆ. ಯುದ್ಧವಾಗುವುದು ಖಂಡಿತವೆಂಬ ವಾತಾವರಣವು ಯೂರೋಪಿನಲ್ಲಿ ಹಬ್ಬಿದಾಗ ಬ್ರಿಟಿಷ್ ಮಂತ್ರಿಯಾದ ಚೇಂಬರ್‌ಲೆಯಿನ್‌ರವರು ಹರ್ ಹಿಟ್ಲರನೊಂದಿಗೆ ಸಂಭಾಷಣೆಗಾಗಿ ಜರ್ಮನಿಗೆ ವಿಮಾನದ ಮೂಲಕ ಹೋದರು. ಅಲ್ಲಿ ಸಂಭಾಷಣೆ ಮಾಡಿಕೊಂಡು ಶೀಘ್ರದಲ್ಲೇ ವಾಪಸು ಇಂಗ್ಲೆಂಡಿಗೆ ಬಂದು ತನ್ನ ಮಂತ್ರಿ ಮಂಡಲಿಯಲ್ಲಿ ಹರ್ ಹಿಟ್ಲರರವರ ಸಲಹೆಗಳ ಕುರಿತು ಆಲೋಚಿಸಿ, ಅನಂತರ ಫ್ರೆಂಚ್ ಮಂತ್ರಿಗಳನ್ನು ಸಹ ಕರೆಸಿಕೊಂಡು ಆಲೋಚಿಸಿದ ನಂತರ ಈ ಎರಡು ರಾಜ್ಯಗಳ ಮಂತ್ರಿ ಮಂಡಲಿಯೊಳಗೆ ಒಪ್ಪಿತವಾದ ತೀರ್ಮಾನ [illegible] ಹರ್ ಹಿಟ್ಲರರವರು ಸೂಚಿಸಿದ ಸಲಹೆಗಳೇನೆಂತ ಸಂಬಂಧಪಟ್ಟ ಸರಕಾರಗಳಿಂದ ಬಹಿರಂಗಪಡಿಸಲ್ಪಡದಿದ್ದರೂ ಸ್ವತಂತ್ರ ಪತ್ರಿಕೆಗಳು ಈ ಕೆಳಗಿನ ಕರಾರುಗಳು ಜರ್ಮನ್ ಸರ್ವಾಧಿಕಾರಿಗೂ ಬ್ರಿಟಿಷ್ ಮತ್ತು ಫ್ರೆಂಚ್ ಮಂತ್ರಿಮಂಡಲಿಗೂ ಒಪ್ಪಿಗೆಯಾದ ಕರಾರುಗಳು ಎಂತ ಪ್ರಕಟಿಸಿದೆ.

1 ಜನಸಂಖ್ಯೆಯಲ್ಲಿ ಶೇಕಡ 75 ಕ್ಕಿಂತ ಮೇಲ್ಪಟ್ಟು ಜರ್ಮನರು ಇರುವ ಭಾಗಗಳನ್ನು ಜರ್ಮನಿಗೆ ಬಿಟ್ಟುಕೊಡಬೇಕು.

೨. ಜೆಕೋಸ್ಲೊವಾಕಿಯದ ಹೊಸ ಸರಹದ್ದುಗಳನ್ನು ಕಾಪಾಡಲು ಬ್ರಿಟನ್, ಫ್ರಾನ್ಸ್ ಮತ್ತು ಜರ್ಮನಿಯು ಜಾಮೀನಾಗಬೇಕು.

3 ಜೆಕ್ ಸರಕಾರವು ಇತರ [illegible] ರಾಜ್ಯಗಳೊಡನೆ ಮಾಡಿಕೊಂಡಿರುವ ಯುದ್ಧ ಸಂಬಂಧವಾದ ಕರಾರುಗಳನ್ನು ರದ್ದು ಮಾಡಲು ಒಪ್ಪಬೇಕು.

ಈ ಕರಾರುಗಳಿಗೆ ಜೆಕ್ ಸರಕಾರವೂ ಸಹ ಒಪ್ಪಿಗೆ ಕೊಟ್ಟಿದೆಯೆಂತ ವರ್ತಮಾನ ಬಂದಿದೆ.

ಸಂಬಂಧಪಟ್ಟ ಎಲ್ಲಾ ಸರಕಾರಗಳು ಒಪ್ಪಿಗೆ ಕೊಟ್ಟಿರುವಾಗ ದೂರ ಪ್ರಾಂತ್ಯದಲ್ಲಿರುವ ನಾವು ಈ ವಿಚಾರವಾಗಿ ಟೀಕಿಸುವುದು ಅವಶ್ಯವಿಲ್ಲವಾದರೂ ಪ್ರಪಂಚದಲ್ಲಿ ಪಶುಬಲಕ್ಕೆ ಗೆಲುವಾಗಿ ನ್ಯಾಯಕ್ಕೂ, ಧರ್ಮಕ್ಕೂ ಅಪಜಯವಾಗುವುದನ್ನು ನೋಡಿ ಟೀಕಿಸದೆ ಇರಲು ಸಾಧ್ಯವಿಲ್ಲ. ಜೆಕೋಸ್ಲೊವಾಕಿಯಾ ಎಂಬ ಒಂದು ಹೊಸ ರಾಷ್ಟ್ರವು ಕಳೆದ ಮಹಾ ಯುದ್ಧದ ಅಂತ್ಯದಲ್ಲಿ ಸ್ಥಾಪಿತವಾದರೂ ಈ ದೇಶಕ್ಕೆ ಒಳಪಟ್ಟ ಜನಾಂಗಗಳೆಲ್ಲವೂ ಸುಮಾರು ಒಂದು ಸಾವಿರ ವರ್ಷಗಳಿಗಿಂತ ಹೆಚ್ಚಾಗಿ ಒಗ್ಗಟ್ಟಿನಿಂದ ಒಮ್ಮನಸ್ಸಿನಿಂದ ಬಾಳಿದ್ದರು. ಮಗ್ಗುಲು ರಾಜ್ಯವಾದ ಜರ್ಮನಿಯ ಮುಖ್ಯಾಧಿಕಾರಿಯು ಪ್ರೇರಣೆಯಿಂದ ಜರ್ಮನರು ಈ ಸುಡೆಟೆನ್ ಜನರ ಮನಸ್ಸಿನಲ್ಲಿ ಅಸೂಯೆ ದ್ವೇಷಗಳನ್ನು ಹುಟ್ಟಿಸುವವರೆಗೆ ಆ ರಾಜ್ಯದ ಜನರೆಲ್ಲರೂ ಅನ್ಯೋನ್ಯವಾಗಿಯೂ ಸುಖವಾಗಿಯೂ ಇರುತ್ತಿದ್ದರು. [illegible] ಒಗ್ಗಟ್ಟಿನಲ್ಲಿ ನಡೆಯುತ್ತಿರುವ ರಾಜ್ಯದಲ್ಲಿ ಕಲಹವನ್ನೆಬ್ಬಿಸುವವರು [illegible] ಅವರ ಮನಸ್ಸು [illegible] ಒಂದೇ ರಾಜ್ಯದಲ್ಲಿ ಕಲಹವಿಲ್ಲದೆ [illegible] ಸಾಧ್ಯವಿಲ್ಲ. ಆಗ ಈ ಸುಡೆಟೆನ್ ಜರ್ಮನರು ಜೆಕೋಸ್ಲೊವಾಕಿಯದ ಇತರ ಜನಾಂಗಗಳೊಡನೆ [illegible] ಬೆಳೆಯುತ್ತಾ ಒಂದು ರೀತಿ ಜೆಕೋಸ್ಲೊವಾಕಿಯಾ ರಾಜ್ಯವು ಪರಿಣಮಿಸಿದೆ.

ಜೆಕ್ ಸರಕಾರವು ಮೇಲೆ ಸೂಚಿಸಿದ ರಾಜಿ ಕರಾರುಗಳಿಗೆ ಒಪ್ಪಿಗೆ ಕೊಟ್ಟಿದ್ದರೂ [illegible] ಒಪ್ಪಿಯ [illegible] ಮನಸ್ಸಿನಿಂದ [illegible] ಆಗ [illegible] ಹೀಗೆ [illegible] ರಾಜ್ಯದ [illegible] ಸಮಾಧಾನ [illegible] ಸಮಾಯದಿಂದ ತನ್ನ ರಾಜ್ಯದ ಒಗ್ಗಟ್ಟನ್ನು ಉಳಿಸಿಕೊಳ್ಳಲು ಶಕ್ತಿ ಇಲ್ಲ. [illegible]

[illegible]

ನ ದಕ್ಷಿಣ [illegible] ಆ ಪ್ರಾಂತ್ಯದ ಸರಹದ್ದಿನಲ್ಲಿ [illegible] ಇದ್ದ [illegible] ಮತ್ತು [illegible] ಪ್ರಯೋಜನಕರವಾದ [illegible] ಗಳೂ, ಕಾರ್ಖಾನೆಗಳೂ [illegible] ಪ್ರಯೋಜನಗಳೆಲ್ಲಾ ಬಿಟ್ಟುಕೊಡಲು [illegible] ಸರಕಾರವು ಏಂದೂ ಸಂತೋಷದಿಂದ ಒಪ್ಪಿರಲಾರದು.

ಈ ಕರಾರುಗಳನ್ನು ಫ್ರೆಂಚ್ ಸರಕಾರದಿಂದ ಫ್ರಾನ್ಸಿನಲ್ಲಿದ್ದ ಜೆಕೋಸ್ಲೊವಾಕಿಯದ ರಾಯಭಾರಿಗೆ ತಿಳಿಸಿದಾಗ ಅವನು ಕಂಬನಿ ಸುರಿಸಿಕೊಂಡು ಹೊರಟನಂತೆ. ಫ್ರಾನ್ಸಿನ ಮೊದಲಿನ ಮಂತ್ರಿಯಾಗಿದ್ದ ಮ. ಬ್ಲಮ್ ಎಂಬವರು ಈ ಕರಾರುಗಳನ್ನು ತಿಳಿದ ಕೂಡಲೆ ಎಚ್ಚರಿಕೆಯಿಲ್ಲದೆ ಎಂಬ ಸಮಾಧಾನವಾದರೂ ನಾಚಿಕೆಯಿಂದಲೂ, ಹೇಡಿತನದಿಂದಲೂ ತಾನು ತಲೆ ಕೆಳಗೆ ಮಾಡಬೇಕಾಗಿದೆ ಎಂತ ಹೇಳಿದನಂತೆ. ಯುದ್ಧದಿಂದ ಆಗಬಹುದಾದ ಜನಹಾನಿ, ಸಂಪತ್ತು ನಾಶ ಮುಂತಾದ್ದು ತಪ್ಪಿತೆಂಬದಕ್ಕೆ ಸರ್ವರೂ ಸಂತೋಷಪಡಬೇಕಾದ್ದೇ—ಆದರೆ ಬಲಹೀನ ಜನಾಂಗವನ್ನು ಹರ್ ಹಿಟ್ಲರನಿಗೆ ಬಲಿಕೊಟ್ಟು ಶಾಂತಿಯನ್ನು ತತ್ಕಾಲ ಉಳಿಸಿಕೊಂಡಂತಾಯಿತು. ಆದರೆ ಹರ್ ಹಿಟ್ಲರನ ಕಾರ್ಯಕ್ರಮವು ಇನ್ನೂ ತುಂಬಾ ಇದೆ. ಅವನ ಕಾರ್ಯಕ್ರಮವನ್ನು ಈ ವರೆಗೂ ಜಯಪ್ರದವಾಗಿಯೇ ನಡಿಸುತ್ತಾ ಬಂದಿದ್ದಾನೆ. ಇನ್ನು ಮೇಲೆ ಸಹ ಹಾಗೆಯೇ ನಡಿಸುತ್ತಾ ಬರುತ್ತಾನೆ. ಹಾಗೆ ತನ್ನ ಕಾರ್ಯಕ್ರಮವನ್ನು ನಡಿಸುವಾಗ ವಿಶೇಷ ಸಮಯ ಕಳೆಯುವ ಮುಂಚೆ ಫ್ರೆಂಚರಿಗೂ ಜರ್ಮನರಿಗೂ ಯುದ್ಧವಾಗದೆ ಇರಲು ಸಾಧ್ಯವೇ ಇಲ್ಲ.

ಬ್ರಿಟಿಷ್ ಸರಕಾರವು ಜರ್ಮನರ ಸಂಗಡ ಸ್ನೇಹಭಾವವನ್ನು ತೋರಿಸದೆ ಸುಡೆಟೆನ್ ಜನರಿಗಾಗಿ ಜರ್ಮನಿಯು ಯುದ್ಧ ಮಾಡಿದರೆ ಬ್ರಿಟಿಷರು ಖಂಡಿತವಾಗಿಯೂ ಜರ್ಮನಿಯ ಮೇಲೆ ಯುದ್ಧಕ್ಕೆ ಸೇರುತ್ತಾರೆಂದ ಹರ್ ಹಿಟ್ಲರನಿಗೆ ತಿಳಿಸಿದರೆ ಒಂದು ತೊಟ್ಟು ರಕ್ತ ಚೆಲ್ಲದನೇ ಜೆಕೋಸ್ಲೊವಾಕಿಯದ ಬಿಕ್ಕಟ್ಟು ಅಂತ್ಯವಾಗುತ್ತಿತ್ತು. ಸ್ಪೈಯಿನ್ ದೇಶದ ಸಂಬಂಧವಾಗಿಯೂ ಬ್ರಿಟಿಷ್ ಸರಕಾರವು ಅನೇಕ ನುಣುಚಿದ್ದರಿಂದ ಅಲ್ಲಿನ ಯುದ್ಧವು ಇನ್ನೂ ನಡೆಯುತ್ತಲೇ ಇದೆ. ಬ್ರಿಟಿಷ್ ಸರಕಾರವು ಸ್ಪೈನ್ ಸರಕಾರದ ಮೇಲೆ ಕತ್ತಿಯ ಕಟ್ಟಿದ ಫ್ರಾಂಕೋಗೆ ಸಂಪೂರ್ಣ ಸಹಾಯ ಕೊಡುವುದು ನಿಶ್ಚಯವೆಂದ ತಿಳಿಸಿದ್ದರೆ ಬ್ರಿಟಿಷರ ಗೌರವವೂ ಉಳಿಯುತ್ತಿತ್ತು. [illegible] ಬಲಹೀನ ಜೆಕೋಸ್ಲೊವಾಕಿಯವು ಉಳಿದುಕೊಳ್ಳುತ್ತಿತ್ತು.

ಜೆಕೋಸ್ಲೊವಾಕಿಯಾ ರಾಜ್ಯದ ಅನ್ಯಗಳು ಈ ತೀರ್ಮಾನದಿಂದ ಅಂತ್ಯವಾಗುವುದಿಲ್ಲ. ಸುಡೆಟೆನರಂತೆಯೇ ಅಲ್ಲಿ ಸಂಖ್ಯಾತ ಜನಾಂಗಗಳಾದ ಹಂಗೇರಿಯನರೂ ಪೋಲೆಂಡಿನವರೂ ಮತ್ತು ಇತರರೂ ಜೆಕೋಸ್ಲೊವಾಕಿಯದಲ್ಲಿ ಇದ್ದಾರೆ. ಅವರೂ ತಮ್ಮನ್ನು ಸಹ ಈ ಚೆಕ್ಕ ರಾಜ್ಯದಿಂದ ಬಿಡುಗಡೆ ಮಾಡಿಕೊಡಬೇಕೆಂತ ಕೇಳಿಕೊಂಡಿದ್ದಾರೆ. ಅಲ್ಲದೆ ಇನ್ನು ಮೇಲೆ ಈ ರಾಜ್ಯದ ಮೇಲೆ ಜರ್ಮನ್ ಹಿಟ್ಲರನು ಆಕ್ರಮಿಸುವುದಿಲ್ಲವೆಂತ ಭರವಸೆ ಏನು? ರಾಜಿ ಕರಾರುಗಳಿಗೆ ಎಷ್ಟು ಬೆಲೆ ಕೊಡಬೇಕೆಂತ ಹಿಟ್ಲರನು ಇನ್ನು ಮೇಲೆ ಅಂಥಾ ಕರಾರುಗಳಿಗನುಸಾರವಾಗಿ ನಡೆದುಕೊಳ್ಳುತ್ತಾನೆಂತ ಭರವಸೆ ಏನಿದೆ?

ಯುದ್ಧವಿಲ್ಲನಂತಾಯಿತು. ಹಿಟ್ಲರನಿಗೆ ಜಯವಾಯಿತು. ಜೆಕೋಸ್ಲೊವಾಕಿಯಾ ರಾಜ್ಯದ ಪ್ರಾಮುಖ್ಯತೆ ಹೋಯಿತು. ಫ್ರೆಂಚ್ ಬ್ರಿಟಿಷ್ ಜನಾಂಗಗಳ ಗೌರವವು ನೆಲಕ್ಕುರುಳಿತು. ಮುಂದೆ ಹಿಟ್ಲರನು ಯಾವ ಕಡೆ ಮುಂದುವರಿಯುತ್ತಾನೆಂತ ಎದುರು ನೋಡುವುದೇ ಉಳಿದಿದೆ.

ನಿರುದ್ಯೋಗಿಗಳಿಗೆ ಸಹಾಯದ ಏರ್ಪಾಡು.

ಮದ್ರಾಸ್ ಸರಕಾರವು ವಿದ್ಯಾವಂತರಾದ ನಿರುದ್ಯೋಗಿಗಳ ಕಷ್ಟ ನಿವಾರಣೆಗೆ ಸಹಾಯದ ಒಂದು ಏರ್ಪಾಡನ್ನು ಮಾಡುವ ಆಲೋಚನೆಯಲ್ಲಿದ್ದಾರೆಂತ ಅಲ್ಲಿಯ ಕೈಗಾರಿಕೆಯ ಮಂತ್ರಿಯವರು ತಿಳಿಸಿದ್ದಾರೆ. ಇದು ಏನೆಂದರೆ.—ಪ್ರತಿಯೊಂದು ಜಿಲ್ಲೆಯಲ್ಲಿಯೂ 500 ಏಕರೆ ಜಮೀನನ್ನು ಇವರಿಗಾಗಿ ಬೇರ್ಪಡಿಸಿ ಇಟ್ಟು ಅಲ್ಲಿ ಒಂದು ಆಶ್ರಮವನ್ನು ಏರ್ಪಾಡು ಮಾಡಿ ಆ ಆಶ್ರಮದಲ್ಲಿ ಅಂಥಾ ನಿರುದ್ಯೋಗ ಯುವಕರಿಗೆ ವ್ಯವಸಾಯ, ಗ್ರಾಮದ ಕೈಗಾರಿಕೆ ಮುಂತಾದ ಉಪಯುಕ್ತ ವಿಷಯಗಳನ್ನು ಕಲಿಸಿ ಕೊಟ್ಟು ಅವರ ಜೀವನವನ್ನು ಅವರೇ ನಡಸಿಕೊಳ್ಳುವಂತೆ ಮಾಡಿಕೊಡುವುದು. ಅಂಥಾ ಆಶ್ರಮದ ಖರ್ಚಿಗೆ ಸರಕಾರಿ ಉದ್ಯೋಗಸ್ಥರೂ ಮತ್ತು ಇತರ ಸಂಬಳ ಬರುವವರೂ ತಿಂಗಳಿಗೆ ಒಂದು ರೂಪಾಯಿಯಂತೆ ವಂತಿಕೆ ಕೊಡಬೇಕು. ಈ ಏರ್ಪಾಡಿನಿಂದ ಎಲ್ಲಾ ವಿದ್ಯಾವಂತ ನಿರುದ್ಯೋಗಿಗಳಿಗೂ ಸಹಾಯ ದೊರಕುತ್ತದಂತಾಗಲೀ, ಇದು ತೃಪ್ತಿಕರವಾದ ಏರ್ಪಾಡಂತಾಗಲೀ ನಾವು ಒಪ್ಪುವುದಿಲ್ಲ. ಆದರೆ ನಿರುದ್ಯೋಗ ವಿದ್ಯಾವಂತರಿಗೆ ಸಹಾಯ ಮಾಡುವ ಆಲೋಚನೆ ಮಾಡಿದ್ದು ಪ್ರೋತ್ಸಾಹಕರವಾಗಿದೆ. ಅನೇಕ ಯುವಕರು [illegible] ಮಾಡಿ ಎಷ್ಟು ಸಂಪಾದನೆ ಮಾಡಿ ಏನೂ ಕಸುಬು ಇಲ್ಲದೆ [illegible] ಯನ್ನು [illegible] ಕೊಳ್ಳಲು ಸಾಧ್ಯವಿಲ್ಲದೆ ಅಲೆದಾಡುತ್ತಿರುವುದು ನಮ್ಮ ಗಮನಕ್ಕೆ ಇಲ್ಲದೆ ಇಲ್ಲ. ಅಂಥಾ ಯುವಕರ ಕಷ್ಟ ನಿವಾರಣೆಗೆ ಸರ್ಕಾರವು ಒಂದು ಇಷ್ಟು ಅವರ [illegible] ಯೋಜನೀಯವಾಗದ

ಅಂಥಾ ಯುವಕರಿಗೆ ಸಮಾಜದ ರಚನೆಯ ಮೇಲೆ ಅತೃಪ್ತಿಯುಂಟಾಗಿ ಸಾಮ್ಯವಾದ ಪಥವಾ ಕಮ್ಯೂನಿಸಂ ಮತಕ್ಕೆ ಸೇರುವುದು. ಸಾಮ್ಯವಾದ ಅಥವಾ ಕಮ್ಯೂನಿಸಂ ಎಂದರೆ [illegible] ಶ್ರೀಮಂತರಾಗಿಯೂ, ಇತರರು ಬಡವರಾಗಿಯೂ ಇರಕೂಡದು. ದೇಶದ ಜಮೀನು ಮತ್ತು ಇತರ ಸಂಪತ್ತುಗಳು ಎಲ್ಲಾ ಜನರಿಗೂ ಸಮಾನವಾಗಿ ಪ್ರಯೋಜನವಾಗುವಂತೆ ಹಂಚಲ್ಪಡಬೇಕೆಂಬುದೇ ಈ ಪಕ್ಷದ ಮುಖ್ಯ ಅಭಿಪ್ರಾಯ. ಈ ತರಹದ ಸಮಾಜ ರಚನೆಯ ಗುಣದೋಷಗಳನ್ನು ಕುರಿತು ಇಲ್ಲಿ ವಿವರಿಸಲು ಹೋಗುವುದಿಲ್ಲ. ಆದರೆ ಈ ಪಾರ್ಟಿಯವರು ಇಡೀ ಹಿಂದೂಸ್ಥಾನದಲ್ಲಿ ಈಗ ನಡಿಸುತ್ತಿರುವ ಚಳವಳಿಯಿಂದ ಕಾಂಗ್ರೆಸ್ ಮುಂದಾಳುಗಳಿಗೆ ಸಹ ಕಷ್ಟವಾಗಿದೆ. ಈ ತರಹದ ಸಮಾಜ ರಚನೆಯಾಗಬೇಕಾದರೆ ದೇಶದಲ್ಲಿ ಕ್ರಾಂತಿಯೇ ಆಗಬೇಕು. ಸಮಾಜವನ್ನು ಶಾಂತ ರೀತಿಯಿಂದ ಮುಂದರಿಸಿಕೊಂಡು ಹೋಗಲು ಅಸಾಧ್ಯವಾಗುತ್ತದೆ. ಆದ್ದರಿಂದ ಸಮಾಜದಲ್ಲಿ ಶಾಂತಿಯೂ, ತೃಪ್ತಿಯೂ ಇರುವಂತೆ ಎಲ್ಲಾ ವಿದ್ಯಾವಂತರಿಗೂ ಜೀವನೋಪಾಯವ

ಝೆಕೊಸ್ಲೊವಾಕಿಯೊವು ಒಪ್ಪಂದಕ್ಕೆ ಸಮ್ಮತಿಸಲಿಲ್ಲ.

ಬ್ರಿಟಿಷ್ ಮತ್ತು ಫ್ರೆಂಚ್ ಪೌರೋಹಿತ್ಯವು ನಿಷ್ಫಲ.

ಬ್ರಿಟನ್ ಮತ್ತು ಫ್ರಾನ್ಸು ಸೇರಿ ಮಧ್ಯ ಯೂರೋಪಿನ ಬಿಕ್ಕಟ್ಟನ್ನು ಪರಿಹರಿಸಲು ಒಂದು ಯೋಜನೆಯನ್ನು ತಯಾರಿಸಿ ಝೆಕೊಸ್ಲೊವಾಕಿಯವು ಕೆಲವು ಪ್ರದೇಶಗಳನ್ನು ಒಪ್ಪಿ ಒಪ್ಪಂದವನ್ನು ಮಾಡಿಕೊಳ್ಳಬೇಕೆಂದು ಬೋಧಿಸಿತು. ಆದರೆಯೂ ಝೆಕೊಸ್ಲೊವಾಕಿಯವು ಶರತುಗಳಿಗೆ ಒಪ್ಪಿದೆಯೆಂದು ವರ್ತಮಾನ ಹರಡಿತ್ತು. ಆದ ಇತ್ತೀಚೆಗಿನ ವಾರ್ತೆಯಂತೆ ಝೆಕೊಸ್ಲೊವಾಕಿಯವು ಸಂಧಾನ ಕಾರ್ಯಕ್ಕೆ ಒಪ್ಪಲಿಲ್ಲವೆಂದು ತಿಳಿದು ಬಂದಿದೆ. ಫ್ರೆಂಚ್ ಮತ್ತು ಬ್ರಿಟಿಷ್ ಮಂತ್ರಿಮಂಡಲಗಳ ಸಂಧಾನದ ಪ್ರಯತ್ನ ಜರ್ಮನಿಯಲ್ಲಿ ನಡೆಯುತ್ತಿರುವಾಗ ಝೆಕೊಸ್ಲೊವಾಕಿಯವು ತಮ್ಮ ಅಭಿಪ್ರಾಯವಿಲ್ಲದೆ ಅವರು ಮಾಡುವ ಯಾವ ಸಂಧಾನ ಶರತುಗಳನ್ನೂ ಒಪ್ಪಲಿಕ್ಕಿಲ್ಲ ಎಂದು ತಿಳಿಸಿತ್ತು. ಹಾಗೆಯೇ ತಾ. 20ರಲ್ಲಿ ಹಿಟ್ಲರ್ ಮಂತ್ರಿ ಮಂಡಳವು ಸಭೆ ಸೇರಿ 'ಮಾರ್ಷಲ್ ಲಾ' ವನ್ನು ಇನ್ನೂ ಮೂರು ಜಿಲ್ಲೆಗಳಲ್ಲಿ ಜಾರಿ ತಂದಿದ್ದಲ್ಲದೆ, ಯಾವ ಝೆಕೊಸ್ಲೊವಾಕಿಯದ ಶರತ್ತು ಜರ್ಮನಿ ಫ್ರೆಂಚ್ ಮತ್ತು ಬ್ರಿಟಿಷರ ಸೈನ್ಯಭಾಗದ ಶರತುಗಳನ್ನು ಒಪ್ಪಲಿಕ್ಕಿಲ್ಲೆಂದೂ, ಅದಕ್ಕಿಂತ ಯುದ್ಧಕ್ಕೆ ಅಕ್ರಮಿಸಿ ಹೋರಾಡುವುದು ಮೇಲ್ಮೆಂದೂ ಪ್ರಕಟಿಸಿದುದರಿಂದ ಇಂದು ಮಧ್ಯಯೂರೋಪಿನ ಸಮಸ್ಯೆಯು ಅತಿಶಯ ಬಿಕ್ಕಟ್ಟಾವಸ್ಥೆಗೆ ತಿರುಗಿದೆ.

ನ್ನು ಪೋಷಿಸಿಕೊಡಬೇಕಾದದ್ದು ಸರಕಾರದ ಪ್ರಥಮ ಕರ್ತವ್ಯವಾಗಿದೆ.

ನಮ್ಮ ನಾಡಿನಲ್ಲಿ ಕೃಷಿಗೆ ಯೋಗ್ಯ ವಾದ ಗದ್ದೆಗಳು ಸರಕಾರದ ಕೈಕೆಳಗೆ ಎಷ್ಟೋ ಇವೆ. ಇಂಥವುಗಳನ್ನು ಉದ್ದೇಶವುಳ್ಳ ವಿದ್ಯಾವಂತ ಯುವಕರಿಗೆ ಬಿಟ್ಟುಕೊಟ್ಟು ಸಹಕಾರಿ ಕ್ರಮದಲ್ಲಿ ಗದ್ದೆ, ತೋಟಗಳನ್ನೂ ಬೆಳೆಸಿಕೊಳ್ಳುವ ಏರ್ಪಾಡು ಮಾಡಬಹುದು. ಸರಕಾರಿ ಉದ್ಯೋಗಸ್ಥರೂ, ಇತರ ಸಂಬಳದವರೂ ಮಾತ್ರ ಹವಣಿಕೆ ಕೊಟ್ಟರೆ ಸಾಲದು. ಸರಕಾರವು ಇಂಥಾ ಹಿಸಾಬಿನ ಬಳಕೆಗೆ ಹಣ ಕೊಡಬೇಕು. ಇದಕ್ಕಾಗಿ ... ನ್ನು ಹುಟ್ಟಿಸಲು ... ಅದನ್ನು ... ಭಾಗದ ... ಯೋಜನೆಯಿಂದ ನಡೆಸಿಕೊಂಡು ಹೋಗುವುದು ... ಕರ್ತವ್ಯವಾಗಿದೆ ... ನ್ನು ... ಪ್ರತಿನಿಧಿ ... ನಡೆಸುವ ಹಕ್ಕು ಬೇಕೆಂದು ... ಜನರ ... ಸ್ಥಿತಿಯನ್ನು ಹೆಚ್ಚಿಸಿಕೊಂಡು ಹೋಗಿ ... ಅನ್ನ ವಸ್ತ್ರಗಳಿಂದ ಬದುಕಿ ... ಸಾಧ್ಯವಾಗುವಂತೆ ಮಾಡಿಕೊಳ್ಳುವುದಕ್ಕಾಗಿಯೇ ನ್ಯಾಸಿನಲ್ಲಿ ಪ್ರಾಂತಿಕ ಸ್ವಾತಂತ್ರ್ಯ ಕೆಲವು ಸುಧಾರಣೆಗಳನ್ನೂ ಶಾಸನ ಪ್ರತಿನಿಧಿಗಳಿಗೆ ದೊರಕಿರುವವರಿಂದ ನಿರುದ್ಯೋಗಿಗಳಿಗೆ ಸಹಾಯ ಮಾಡಲು ಯೋಚಿಸಿರುವುದು ಯುಕ್ತವಾಗಿಯೇ ಇದೆ. ನಮ್ಮ ದೇಶದಲ್ಲಿ ಪ್ರಜಾಪ್ರತಿನಿಧಿ ಸರಕಾರ ಏರ್ಪಡುವವರೆಗೆ ಇದರ ನಿರುದ್ಯೋಗಿಗಳ ಕಷ್ಟ ನಿವಾರಣೆಗೆ ಸದ್ಯ ಯಥೋಚಿತ ಏರ್ಪಾಡನ್ನು ಸರ್ಕಾರದ ಕರ್ತವ್ಯವಾಗಿದೆ.

ಈಗ ಆಡಳಿತ ನಿಟ್ಟಿನಿಂದ ಪೋಲೀಸರು ... ಕ್ರಮದಿಂದ ನಡೆಯುತ್ತಿರುವಾಗ ಈ ಸಮಸ್ಯೆಗೆ ಸರಕಾರವು ಮನಸ್ಸು ಕೊಡದಿದ್ದರೆ ಮುಂದೆ ಬಹಳ ಗಲಭೆಗೆ ಕಾರಣವಾಗಬಹುದು. ಸರಕಾರಿ ಉದ್ಯೋಗಗಳ ಸಮಸ್ಯೆ ... ಯಾಗಬೇಕೆಂದರೆ ... ಸಂಸ್ಥೆ ... ನಿರುದ್ಯೋಗಿಗಳು ... ಬೈದು ... ಹಣದ ಒಂದಂಶವನ್ನು ನಿರುದ್ಯೋಗಿಗಳಿಗೆ ಉದ್ಯೋಗ ... ಒಪ್ಪಿ ... ಕ್ಷಾದವೇತನವನ್ನು ನ್ಯಾಯವಾಗಿ ... ಗಿದೆ.

ಒಳದೇಶ.

ತಾರೀಕು 16-9-38 ರಿಂದ 22-9-38 ರ ವರೆಗೆ ಇಲ್ಲಿ 1 ಇಂಚು 18 ಸೆಂಟು ಮಳೆಯಾಗಿದೆ.

ಚಿಕ್ಕಮಗಳೂರಿನ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೀಟಿಂಗಿಗೆ ಶ್ರೀ ಮಾನ್ ಸಿ. ಯಂ. ಪೂಣಚ್ಚನವರು ಹೋಗಿರುವರು.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ 1939 10ನೇ ವರ್ಷದ ಫೈನಾನ್ಸ್ ಕಮಿಟಿಯು ಅಕ್ಟೋಬರ್ ತಾರೀಕು 20ರಲ್ಲಿ ಆರಿಸಲ್ಪಡುವುದು.

ಶ್ರೀ ಬೆಳಗೋಡ ಸುಬ್ರಾಯನವರ ಸಂಪಾದಕತ್ವದಲ್ಲಿ 'ಕೊಡಗು ಚಂದ್ರಿಕೆ' ಎಂಬೊಂದು ನೂತನ ಪತ್ರಿಕೆಯು ಬರುವ ಆ. 15 ರಿಂದ ಹೊರಡಲಿದೆಯಾಗಿ ವರ್ತಮಾನ.

ಇದೇ ತಾ. 24ನೇ ... ದಿಂದ 10 ದಿನಗಳ ವರೆಗೆ ಪ್ರತಿ ಸಾಯಂಕಾಲ 6 ಗಂಟೆಗೆ ... ನವರಾತ್ರಿ ಉತ್ಸವವನ್ನು ಜರಗಿಸುವುದಾಗಿಯೂ, ಎಲ್ಲರಿಗೂ ಆಹ್ವಾನವಿದೆಯೆಂದೂ ತಿಳಿಸುತ್ತಾರೆ.

ತಾ. 22-9-38 ರಲ್ಲು ಮಡಿಕೇರಿ ಸ್ಪೆನ್ಸರ್ ಹಾಲ್‌ನಲ್ಲಿ ಶ್ರೀಮಾನ್ ಬಿ. ಯಂ. ಶ್ರೀಕಂಠಯ್ಯನವರು ಮತ್ತು ಶ್ರೀ ಪಿ. ... ನವರು ಕರ್ನಾಟಕ ಸಂಘದ ಆಶ್ರಯದಲ್ಲಿ 'ಕನ್ನಡ ಭಾಷೆ' ಯ ವಿಚಾರ ಸ್ವಾರಸ್ಯವಾದ ಉಪನ್ಯಾಸ ಮಾಡಿದರು.

ಈ ದಿನ ಮಡಿಕೇರಿಯ ಜಮೀನ್ದಾರರ ಸಂಘದ ಹಾಲ್‌ನಲ್ಲಿ ರಾ. ಬ. ಕೆ. ... ನವರ ಅಧ್ಯಕ್ಷತೆಯಲ್ಲಿ ಸಭೆ ... ಮೀಟಿಂಗಿನಲ್ಲಿ ಕೊಡಗನ್ನು ಪ್ರತ್ಯೇಕವಾಗಿ ಟ್ಟುಕೊಳ್ಳಲು ... ಪ್ರಾಂತ್ಯಕ್ಕೆ ಸೇರಿಸುವುದು ಒಳ್ಳೆಯದೆಂದು ತೀರ್ಮಾನಿಸಿರುವರಾಗಿ ವರ್ತಮಾನ.

ಕೊಡಗು ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟರ ಆಫೀಸಿನಲ್ಲಿ ಸೇರಿಸಲ್ಪಟ್ಟ ರೆಸಿಡೆಂಟ್ ಟ್ರೆಜರ್ ... ಎಂಬ ... 30-9-38 ರಲ್ಲಿ ಅವರ ಆಫೀಸಿನ ಮುಂದುಗಡೆ 12 ಗಂಟೆಗೆ ಹರಾಜು ಮಾಡಲ್ಪಡುತ್ತವೆ. ಕೊಳ್ಳಬೇಕಾದವರು ಅವುಗಳನ್ನು ಪರೀಕ್ಷಿಸಿ ಬಹಿರಂಗ ಹರಾಜಿನಲ್ಲಿ ಪಡೆಕೊಳ್ಳಬಹುದೆಂತಲೂ ತಿಳಿಸುತ್ತಾರೆ.

1936-37 ನೇ ವರ್ಷದ ಕೊಡಗಿನ ಸರ್ಕಾರದ ಲೆಕ್ಕಗಳನ್ನು ಆಡಿಟ್ ಮಾಡಿಯಿದ ಲು ಕಮಿಷನರರವರು (ಅಧ್ಯಕ್ಷರು), ಟ್ರೆಜರಿ ಆಫೀಸರರವರು, ಪಿ. ಕರ್ನಲ್ ಎಚ್. ಯೂ. ಮೂರ್ಲೆಂಡ್‌ರವರು ಮತ್ತು ಸಿ. ಬಿ. ಬಿಳ್ಳಪ್ಪನವರು ಪಬ್ಲಿಕ್ ಎಕೌಂಟ್ಸ್ ಕಮಿಟಿಯ ಮೆಂಬರುಗಳಾಗಿ ನೇಮಿಸಲ್ಪಟ್ಟಿರುವರೆಂದು ತಿಳಿದು ಬರುತ್ತದೆ.

ಈ ತಾರೀಕು 23 ರಿಂದ ದಿಲ್ಲಿಯಲ್ಲಿ ನಡೆಯುತ್ತಿರುವ ಇಂಡಿಯನ್ ನ್ಯಾಷನಲ್ ಕಾಂಗ್ರೆಸಿನ ವರ್ಕಿಂಗ್ ಕಮಿಟಿಯವರಿಗೆ ಕೊಡಗಿನ ಭವಿಷ್ಯತ್ತನ್ನು ಕುರಿತು ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಠರಾವುಗಳನ್ನು ವಿವರಿಸಿ ಹೇಳಲು ಇಲ್ಲಿಯ ಜಿಲ್ಲಾ ಕಾಂಗ್ರೆಸ್ ಕಮಿಟಿಯ ತೀರ್ಮಾನದಂತೆ ಮ. ಗಳಾದ ಪಂದ್ಯಂಡ ... ನವರು, ಕೊಳ್ಳಿಮಾಡ ಕರುಂಬಯ್ಯನವರು, ಎಚ್. ಯಂ. ಪುಟ್ಟಣ್ಣನವರು, ಬೆಳ್ಳಿಯಪ್ಪನವರು ಸಿ. ಐ. ಬಿ. ... ತಾ. 17 ರಲ್ಲಿ ಡೆಲ್ಲಿಗೆ ಡೆಪ್ಯುಟೇಶನ್ ಹೋಗಿ ಹೋದರೆಂದು ತಿಳಿಯುತ್ತೇವೆ.

ಹೊರದೇಶ.

ತಿರುವಾಂಕೂರಿನಲ್ಲಿ ಆಜ್ಞೋಲ್ಲಂಘನೆ ರಭಸದಿಂದ ನಡೆಯುತ್ತಿದೆ. ವಸ್ತುಗಳು ಮತ್ತು ಚಿಕ್ಕೆಯೂ ಜೋರಾಗಿದೆ.

ಸಂಸ್ಥಾನಿಕರಲ್ಲಿದ ಇಬ್ಬರು ಹೊರಗಿನವರನ್ನು ನ್ಯಾಯಾಲಯದಲ್ಲಿ ನೇಮಿಸಿದ ನಿಮಿತ್ತ ಫೋರ್ಸ್ಕಾಲ್ ಸಂಸ್ಥಾನದ ಪ್ರಜೆಗಳು ಆಂದೋಲನವನ್ನಾರಂಭಿಸಿದ್ದಾರೆ. ಅವರ ನಮ್ಮಲ್ಲಿ ?

ತಾ. 14 ರಂದು ಶ್ರೀ. ... ನಾಯಕರವರ ಅಧ್ಯಕ್ಷತೆಯಲ್ಲಿ ಜರುಗಿದ ಮಹಾಜನ ಸಭೆಯಲ್ಲಿ ಶಿಮೋಗಾ ನಂತೆ ತಿರುವಾಂಕೂರಿಗೆ ಜಾನಸಭೆಗ ... ಳಲ್ಲಿ ಭಾಗವಹಿಸಲು ತಾ. 16 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಸ್ವಯಂಸೇವಕ ದಳ ಒಂದನ್ನು ಕಳುಹಿಸಿರುವರು.

ಭಾರತೀಯರ ಹಾಗೂ ಮುಸಲ್ಮಾನರ ಮುಖಕ್ಕೆ ಮಸಿ ಬಳೆಯುತ್ತಿರುವ 'ಸಿ ದ್ರಮ್' ಎಂಬ ಬ್ರಿಟಿಷ್ ಚಲನ ಚಿತ್ರವನ್ನು ಪ್ರದರ್ಶಿಸಬಾರದೆಂದೂ, ಜನರು ಪ್ರದರ್ಶನ ಮಂದಿರವನ್ನು ಪ್ರವೇಶಿಸಬಾರದೆಂದೂ ಮುಂಬಯಿಯಲ್ಲಿ ಪ್ರಬಲವಾದ ಪಿಕೆಟಿಂಗ್ ನಡೆಯುತ್ತಿದೆ. ಅನೇಕರ ಕೈದಿಯಾಗಿದ್ದು.

ಇನ್ನು ಕೆಲವು ತಿಂಗಳಲ್ಲಿ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ಸುಭಾಷ್ ಬೋಸರ ಆತ್ಮ ಚರಿತ್ರೆಯು 'ಭಾರತವು ಮತ್ತು ನನ್ನ ಜೀವನ' ಎಂಬ ನಾಮದಿಂದ ಹೊರಬೀಳುವುದಿದೆ. ಅದರ ಬೆಲೆ ರೂ. 6-6-0 ಎಂದು ಗೊತ್ತಾಗಿದೆ. ಇಂಗ್ಲೆಂಡಿನಲ್ಲಿಯೂ ಮತ್ತು ಭಾರತದಲ್ಲಿಯೂ ಅದು ಒಂದೇ ಕಾಲದಲ್ಲಿ ಹೊರಬೀಳುವುದು.

ಮಹಾತ್ಮ ಗಾಂಧಿಯವರು ತನಗೆ ಬರುತ್ತಿರುವ ಪತ್ರ ಮತ್ತು ತಂತಿ ವ್ಯವಹಾರಗಳನ್ನೆಲ್ಲಾ ಪರಿಶೀಲಿಸಿ ತಿರುವಾಂಕೂರು ಸಂಸ್ಥಾನದವರು ದಬ್ಬಾಳಿಕೆಯ ವಿವರವನ್ನು ವಿಚಾರಿಸಲಿ, ವಿಚಾರಣೆ ಮಾಡದಿರಲಿ ಸಂಸ್ಥಾನದ ಕಾಂಗ್ರೆಸಿನವರು ಸರಕಾರದವರು ನ್ಯಾಯಕೋರಿಸುವ ತನಕ ಸತ್ಯಾಗ್ರಹ ಚಳವಳವನ್ನು ಮುಂದುವರಿಸಲೇ ಬೇಕೆಂದು ತಿಳಿಸಿರುವರು.

ಕಾಂಗ್ರೆಸು ಮಂತ್ರಿ ಪದವಿಯನ್ನು ... ಮಂಡಲ ಚಟುವಟಿಕೆಗಳೇ ಹೆಚ್ಚಾಗಿ ಸಾಗುತ್ತಿರುವುದನ್ನು ಕಂಡು ಮಹಾತ್ಮ ಗಾಂಧಿಯವರು ಕಾಂಗ್ರೆಸಿನ ಚರ್ಚೆ ವಿಧಾಯಕ ಕಾರ್ಯಕ್ರಮವನ್ನು ಸಾಗಿಸುವದಕ್ಕಾಗಿ ತಮ್ಮದೊಂದು ಹೊಸ ಪಕ್ಷವನ್ನು ಸ್ಥಾಪಿಸಲಿರುವರೆಂದು ತಿಳಿಯುತ್ತದೆ. ಈ ಪಕ್ಷದಲ್ಲಿ ಸುಮಾರು 10,000 ಜನರು ಸೇರಬಹುದೆಂದು ಅಂದಾಜು ಮಾಡಲಾಗಿದೆ.

ಅಸ್ಸೆಂಬ್ಲಿಯ ಸಾರ್ವಜನಿಕ ಭಾಷಣದಲ್ಲಿ ಚೌಧರಿ ಜಫರುಲ್ಲಖಾನರು, 'ಮುಸ್ಲಿಂ ಲೀಗಿನವರು ಸ್ವೇಚ್ಛೆ ವಿರೋಧ ಪ್ರಚಾರ ಮಾಡುವಲ್ಲಿ ಸಹಾಯ ಮಾಡಿದ್ದು ಮತ್ತು ಪರೆಸ್ಪಾಕ್ಕಿನಲ್ಲಿ ಬ್ರಿಟಿಷ್ ಧೋರಣೆಯನ್ನು ಕುರಿತು ಆಳಲಾರಂಭಿಸಿದರು. 'ಶಕ್ತಿ ಗುಂಪನ್ನು ಕೊಂದು ಬೆಳಗಾದ ಮೇಲೆ ಆಳುತ್ತಿರುವ ಪೆಂಡತಿಯಂತೆ ಲೀಗು ವರ್ತಿಸಿತು' ಎಂದರು.

ಮದ್ರಾಸ್ ನಗರದಲ್ಲಿ ಪ್ರಕಟವಾಗುತ್ತಿದ್ದ 'ಸಂಡೇ ಟೈಮ್ಸ್' ಎಂಬ ಇಂಗ್ಲಿಷ್ ವಾರ ಪತ್ರಿಕೆಯ ಸಂಪಾದಕರಾದ ಮಿ. ಸುಬ್ಬರಾಯ ಕಾಮತ್‌ರವರು ತಮ್ಮ 46 ನೇ ವಯಸ್ಸಿನಲ್ಲಿ ಕಳೆದ ಬುಧವಾರ ಮದ್ರಾಸಿನಲ್ಲಿ ತೀರಿ ಹೋದರೆಂದು ತಿಳಿದು ವಿಷಾದಿಸುತ್ತೇವೆ. ಪ್ರಧಾನ ಸಚಿವರಾದ ಮ. ಸಿ. ರಾಜಗೋಪಾಲಾಚಾರಿಯರವರೂ, ಮ. ಟಿ. ಪ್ರಕಾಶಂರವರೂ ಮೃತರವರ ಮನೆಗೆ ಹೋಗಿ ತಮ್ಮ ಸಂತಾಪವನ್ನು ಅವರ ಬಂಧುವರ್ಗದವರಿಗೆ ತಿಳಿಸಿದರು.

ಕೊಡಗಿನ ಭವಿಷ್ಯತ್ತಿನ ವಿಚಾರ.

ಠರಾವಿನ ತಿದ್ದುಪಡಿಗೆ ಸೋಲು.

ಮಡಿಕೇರಿ ಜಮೀನ್ದಾರರ ಸಂಘದ ಹಾಲ್‌ನಲ್ಲಿ ಈ ತಾ. 23 ರಲ್ಲು ಕೊಡಗಿನ ಭವಿಷತ್ತನ್ನು ಕುರಿತು ಚರ್ಚಿಸಲು ಹತ್ತು ಜನರಿಂದ ಕರೆಸಲ್ಪಟ್ಟ ಒಂದು ಮೀಟಿಂಗು ನಡೆಯಿತು. ಕೊಡಗನ್ನು ಮದ್ರಾಸಿಗೆ ಸೇರಿಸಕೂಡದಾಗಿ ಅನೇಕರು ಭಾಷಣ ಮಾಡಿದರೂ, ಕಡೆಗೆ ಮದ್ರಾಸಿಗೆ ಸೇರಿಸಬೇಕೆಂದಿದ್ದ ಪಂಗಡದವರು ತಂದಿದ್ದ ಠರಾವಿನಲ್ಲಿ ಕೆಲವು ತಿದ್ದುಪಡಿಯನ್ನು ಮೆ. ಪುಲಿಯಂಡ ಐಯ್ಯಪ್ಪನವರು ಸೂಚಿಸಿದ್ದನ್ನು ಮದ್ರಾಸಿಗೆ ಸೇರಿಸಲು ಠರಾವು ತಂದ ಪಾರ್ಟಿಯವರು ಒಪ್ಪದ್ದರಿಂದ ಸಂಯೋಜನೆಗೆ ವಿರೋಧವಿದ್ದ ಪಾರ್ಟಿಯವರೆಲ್ಲಾ ಸಭೆಯಿಂದ ಹೊರಗೆ ಹೋದರು. ಆ ಮೇಲೆ ಅಮಾಲ್ಗಮೇಶನ್ ಪಾರ್ಟಿಯವರೇ ಓಟು ಮಾಡಿಕೊಂಡರು.

ಓರಿಯಂಟಲ್ ಜೀವವಿಮಾ ಕಂಪೆನಿ.

1937 ನೇ ವಾರ್ಷಿಕ ವರದಿ.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿಯ ಕಳೆದ ವರ್ಷದ ವಾರ್ಷಿಕ ವರದಿಯೂ, ಅವರ ಅಧ್ಯಕ್ಷರಾದ ಸರ್ ಪುರುಷೋತ್ತಮದಾಸ್ ಠಾಕೂರ್‌ದಾಸರವರು ಈ ವರ್ಷದ ಮಹಾ ಸಭೆಯಲ್ಲಿ ಮಾಡಿದ [illegible] ಸೇರಿದೆ.

ಆರ್ಥಿಕ ಮುಗ್ಗಟ್ಟಿನಲ್ಲಿ ಜನತೆಯು ತೊಳಲಿ ಬಳಲುತ್ತಿರುವ ಈ ಸಮಯದಲ್ಲಿ ಅದು 55,228 ಪಾಲಿಸಿಗಳನ್ನೊಳಗೊಂಡು ರೂ. 9,97,93,558 ರ ಹೊಸ ಜೀವ ವಿಮೆಯನ್ನು ಮಾಡಿದ್ದು ಈ ಸಂಸ್ಥೆಯು ಭಾರತದ ವಿಮಾ ಪ್ರಪಂಚದಲ್ಲಿ ಪಡೆದಿರುವ ಭದ್ರತೆ ಮತ್ತು ಘನತೆಯನ್ನು ತೋರಿಸುತ್ತದೆ. ಕಳೆದ ವರ್ಷದ ಅಂತ್ಯಕ್ಕೆ 3,60,034 ಪಾಲಿಸಿಗಳು ಜಾರಿಯಲ್ಲಿದ್ದು 73,26,80,258 ರೂಪಾಯುಗಳಿಗೆ ವಿಮಾ ಮೊಬಲಗು ಏರಿದೆ. ಈ ಕಂಪೆನಿಯು ಭಾರತದ ವಿಮಾ ಸಾಮ್ರಾಜ್ಯದಲ್ಲಿ ಅಗ್ರ ಸ್ಥಾನವನ್ನು ಪಡೆದಿರುವದಲ್ಲದೆ ಬ್ರಿಟಿಷ್ ಸಾಮ್ರಾಜ್ಯದ ಜೀವ ವಿಮಾ ಕಂಪೆನಿಗಳಲ್ಲಿ 5 ನೇ ಸ್ಥಾನವನ್ನು ಪಡೆದಿದೆ ಎಂಬುದು ಭಾರತದ ವಿಮಾ ಪ್ರಗತಿಯನ್ನು ಸೂಚಿಸುತ್ತದೆ. ಈ ಕಂಪೆನಿಯ ಬಂಡವಾಳವು 23,82,20,674 ರೂಪಾಯಿಗಳಿಗೆ ಏರಿದೆ. ಹೆಚ್ಚೇಕೆ? ಈ ಕಂಪೆನಿಯ ವರದಿಯು ಸರ್ವ ವಿಧದಲ್ಲೂ ಶ್ಲಾಘನೀಯವಾದದ್ದೆಂದು ಹೇಳಬಹುದು.

ಕಂಪೆನಿಯ ಅಧ್ಯಕ್ಷರಾದ ಸರ್ ಪುರುಷೋತ್ತಮದಾಸರು, ಡೈರೆಕ್ಟರುಗಳ ವರದಿಯನ್ನು ಪ್ರಶಂಸಿಸುತ್ತ—ಕಂಪೆನಿಯು ಮಾಡಿದ ಕೆಲಸವು ಶ್ಲಾಘನೀಯವಾದದೆಂದೂ, ಕಂಪೆನಿಯ ಬೋನಸ್ಸು ಕಡಿಮ್ಮೆಯಾಗಿದ್ದರೂ ಪಬ್ಲಿಕ್ ಮಹಾಜನರು ಹೆಚ್ಚು ವಿಶ್ವಾಸದಿಂದ ಸಹಾಯಮಾಡಿರುವರೆಂದೂ, ಹಣ ಕಟ್ಟದೆ ಪಾಲಿಸಿಯನ್ನು ಕಳೆಕೊಳ್ಳುವವರ ಸಂಖ್ಯೆಯು ಕಡಿಮೆಯಾಗುತ್ತಿರುವುದೆಂದೂ ಹೇಳಿರುವರು.

ಓರಿಯಂಟಲ್ ಕಂಪೆನಿಯು ಇಂಡಿಯಾದಲ್ಲಿ ಮಾಡುತ್ತಿರುವ ಕೆಲಸಗಳನ್ನು ನಾವು ವಾಚಕರ ಅವಗಾಹನೆಗೆ ಆಗಾಗ್ಗೆ ತರುತ್ತಿದ್ದೇವೆ. ಇಡೀ ಭಾರತದ ಹಳ್ಳಿಪಳ್ಳಿಗಳಿಗೂ ಹೊಕ್ಕು ಜನಾದರಣೆಯನ್ನು ಪಡೆದಿರುವ ಈ ಕಂಪೆನಿಯು ಪ್ರಪಂಚಕ್ಕೆ ಆದರ್ಶವಾಗಿ ಭಾರತೀಯರ ಸೇವೆ ಮಾಡಿ ಪಾಲಿಸಿದಾರರಿಗೆ ಅನೇಕ ತರಹದ ಸೌಕರ್ಯಗಳನ್ನು ಕಲ್ಪಿಸಿ ತನ್ನ ಪ್ರಗತಿ ಪಥದಲ್ಲಿ ಮುನ್ನಡೆಯಲೀ ಎಂದು ಹಾರೈಸುತ್ತೇವೆ.

ಬ್ರಿಟನು ಸೈನ್ಯ ಖರ್ಚನ್ನು ವಹಿಸಬೇಕು.

ಸಾರ್ವಭೌಮ ಸರಕಾರದವರು ಇಂಡಿಯಾದಲ್ಲಿರುವ ಸೈನ್ಯದ ಖರ್ಚಿಗಾಗಿ ಈಗ ಕೊಡಲು ನಿಶ್ಚಯಿಸಿರುವ ಹಣ ಸಹಾಯವನ್ನು ಟೀಕಿಸಿ ಶ್ರೀಮಾನ್ ಸುಬೆದಾರರು ಮಾಡಿದ ಪ್ರಕಟಣೆ—

ಇಂಡಿಯಾವು ತನ್ನಿಂದ ಹೊರಲಾರದಷ್ಟು ದೊಡ್ಡದಾದ ಸೈನ್ಯಖಾತೆಯ ಖರ್ಚನ್ನು ಹೊತ್ತಿದೆ. ಹೀಗೆ ವ್ಯಯಮಾಡಿ ಇಟ್ಟಿರುವ ಸೈನ್ಯದಿಂದ ಯಾವ ಪ್ರಯೋಜನವೂ ಭಾರತಕ್ಕಿಲ್ಲ. ಸಾರ್ವಭೌಮ ಸರಕಾರದ ಭದ್ರತೆಗಾಗಿ ಬಡ ಜನರಾದ ಭಾರತೀಯರ ಖರ್ಚಿನಿಂದ ಪೋಷಿಸುತ್ತಿರುವ ಈ ಸೈನ್ಯದ ಮೇಲೆ ಭಾರತಕ್ಕೆ ಯಾವ ಅಧಿಕಾರವೂ ಇಲ್ಲ. ಕಳೆದ ಘೋರ ಯುದ್ಧದಲ್ಲಿ ಭಾರತೀಯರಿಗೆ ಕೊಡಬೇಕಾಗಿದ್ದ ಷರತುಗಳನ್ನು ಕೊಡದೆ ಬರೀ ಬಾಯಿಮಾತಿನಿಂದ ಕಾಲ ನೂಕಿ ಅದನ್ನು ನಿರಾಕರಿಸಿ ಮೂಲೆ ಸೇರಿಸಲಾಯಿತು. ಕಳೆದ ಮೂರು ನಾಲ್ಕು ವರ್ಷಗಳಿಂದ ಇಲ್ಲಿಯ ಸೈನ್ಯದ ಖರ್ಚನ್ನು ವಿಪರೀತ ಏರಿಸಿ, ಈಗ ಈ ಬಿಕ್ಕಟ್ಟಿನ ಸಂದರ್ಭದಲ್ಲಿ 'ಬ್ರಿಟಿಷರು ಅಪೂರ್ಣವಾದ ತಮ್ಮ ಈಗಿನ ಸಹಾಯದಿಂದ ಭಾರತೀಯರ ಕಣ್ಣು ಕಟ್ಟಲು ಪ್ರಯತ್ನಿಸುತ್ತಿರುವರು. ಆದರೆ ಈ ಕೋರಿಕೆಯ ಸಹಾಯದಿಂದ ಭಾರತೀಯರನ್ನು ಸಮಾಧಾನಗೊಳಿಸಲು ಸಾಧ್ಯವಿಲ್ಲದ ಸಂಗತಿ.

ಬ್ರಿಟಿಷ್ ಸರಕಾರವೂ, ಭಾರತವೂ ಸ್ನೇಹದಿಂದಿರಬೇಕಾದರೆ ಭಾರತದಲ್ಲಿರುವ ಬ್ರಿಟಿಷ್ ಸೈನ್ಯದ ಖರ್ಚನ್ನೆಲ್ಲಾ ಬ್ರಿಟನೇ ಹೊರಬೇಕು. ಇದರಿಂದ ಉಳಿತಾಯವಾಗುವ ಹಣದಿಂದ ಭಾರತದ ಹಿತವೃದ್ಧಿಯ ಕಾರ್ಯಗಳು ನಡೆಯಲು ಸಾಧ್ಯವಾಗುವದು. ಭಾರತಕ್ಕೆ ಸ್ವಂತ ಸೈನ್ಯಬಲವಿಲ್ಲದೆ ಅದು ಇಂದು ಪರರಾಷ್ಟ್ರಗಳ ಉಪದ್ರವನ್ನು ನಿಲ್ಲಿಸಲು ಶಕ್ತಿಯುತವಾಗಿಲ್ಲ. ಆದ್ದರಿಂದ ಈ ಉಳಿತಾಯದಿಂದ ಈ ಕುಂದಕವನ್ನು ಸರಿಪಡಿಸಬಹುದು.

ಜಪಾನಿನಲ್ಲಿ ಅವರ ಎಲ್ಲಾ ಸೈನ್ಯಗಳಿಗೂ ಸೇರಿ 30 ಕೋಟಿ ರೂಪಾಯಿಗಳ ಖರ್ಚಾಗುತ್ತಿದೆ. ಇದರಲ್ಲಿ ಅವರ ಸಂರಕ್ಷಣೆಗೆ ಮಾತ್ರವಲ್ಲ; ಇತರ ಜನಾಂಗಗಳ ಮೇಲೆ ದಾಳಿ ನಡೆಸಲು ತಯಾರು ಮಾಡುವ ಸೈನ್ಯದ ಖರ್ಚೂ ಸೇರಿದೆ. ಅಂದ ಮೇಲೆ ಭಾರತದಲ್ಲಿ ಸೈನ್ಯ ಸನ್ನಾಹಕ್ಕೆ 45 ಕೋಟಿ ಖರ್ಚಾಗುತ್ತಿರುವದರ ಗುಟ್ಟೇನು? ಇಷ್ಟು ವ್ಯಯಮಾಡಿದರೂ ಜಪಾನ ಸೈನ್ಯದ ಒಂದು ಅಂಶದಷ್ಟು ಸಹ ಭಾರತದ ಸೈನ್ಯವಿರುವದಿಲ್ಲ. ಇದರ ಕಾರಣವೇನು? ಹೀಗೆಯೇ ಭಾರತದ ಆರ್ಥಿಕ ಸ್ಥಿತಿಯನ್ನು ಸೂರೆಗೊಳ್ಳುವ ಸೈನ್ಯಪಡೆಯ ಪುರುಷಾರ್ಥವೇನು? ಈ ವಿಚಾರದಲ್ಲಿ ಬ್ರಿಟಿಷರು ತಕ್ಕ ಎಚ್ಚರಿಕೆಯಿಂದ ವರ್ತಿಸಲು ಸಿದ್ಧರಾಗಬೇಕು. ಇಲ್ಲವೇ ಅವರಿಗೆ ಈಗ ಭಾರತದ ಕೆಲವೆಡೆಗಳಲ್ಲಿರುವ ಸಹಾಯವು ಸಹ ಮಾಯವಾಗುವದು ನಿಶ್ಚಯ. ಆದ್ದರಿಂದ ಬ್ರಿಟಿಷರು ಇಲ್ಲಿರುವ ತಮ್ಮ ಸೈನ್ಯದ ಖರ್ಚನ್ನು ತಾವೇ ಹೊತ್ತು ಭಾರತದ ಬಡ್ಜೆಟ್ಟಿನಲ್ಲಿ ಹಣ ಉಳಿಯುವಂತೆ ಮಾಡಿದರೆ ಭಾರತವು ತನ್ನ ಸ್ಥಿತಿಯನ್ನು ಅಭಿವೃದ್ಧಿಪಡಿಸುವದು. ಇದರಿಂದ ಭಾರತಕ್ಕೂ, ಬ್ರಿಟನಿಗೂ ಶ್ರೇಯಸ್ಕರವಿರುವದು.

Coorg Civil Surgeon's Office.
Mercara, the 15th Sept. 1938

WANTED.

Four Midwives will be trained at Mercara Civil Hospital for the benefit of rural areas for six months.

(1) Each will be given a stipend of Rs.-15 per mensem for six months.

(2) Uniform allowance of Rs. 10 each for full course.

(3) Rs 20 each is provided to supply them with instruments and appliances after the training is over.

The candidates must have completed Lower Secondary Examination and must be atleast 25 years of age, middle aged widows living in the villages will be given preference.

Applications with educational qualification certificates must reach the Civil Surgeon on or before 10-10-1938 and selection will take place on 15-10-1938 and classes will start immediately at the Mercara hospital. Selected candidates must be prepared to undergo the course of training at the Civil hospital, Mercara starting on 15-10-1938.

On completion of the course, they will be furnished with certificates whereupon they will be required to execute a bond binding them to settle and practice in their own villages.

—oOo—

ಪ್ರಕಟಣೆ.

ಕೊಡಗು ಮುಜರಾಯಿ ಇಲಾಖೆಯಿಂದ.

ಸನ್ 1938 ನೇ ಇಸವಿ ಅಕ್ಟೋಬರ್ ತಾರೀಕು 17 ನೇ ಸೋಮವಾರ ದಿನ ಹಗಲು ಸೂರ್ಯೋದಯಾದಿ ಘಳಿಗೆ 14 ವಿಘಳಿಗೆ 8 ಕ್ಕೆ ಸರಿಯಾದ ಘಂಟೆ 11 ನಿಮಿಷ 39 ಕ್ಕೆ ಸರಿಯಾಗಿ ತುಲಾ ಕಾವೇರಿ ಸಂಕ್ರಮಣ ತೀರ್ಥೋದ್ಭವ ಪುಣ್ಯ ಕಾಲ ಶುಭ ಮುಹೂರ್ತ.

ತಾ. 17–9–38.

ಕೆ. ಕಾಳಪ್ಪ,
(ಪ್ರೆಸಿಡೆಂಟ್.)

—oOo—

The South India Co-operative Isurance Society Ltd., Madras.

Office of the Inpcetor of Municipal Councils and Local Boards Mount Road Madras

D Dis No 15438-32 dated 6th June 1932

Subject,—The South India Co-operative Insurance Society Ltd Recognition of the Society by local bodies as approved 'Life Office' Commended to all Local Bodies

Ref,—Tha Registrar of Co-operative Societies C. No 2.82/32 dated 10th May 1932.

CIRCULAR.

The Registrar of Co-operative Societies has brought to my notice that a Co-operative Life Insurance Society by name "The South India Co-operative Insurance Society Ltd" has been registered recently and started on work at Madras. The minimum amount for which a life assurance policy may be taken in that Society is Rs 300 and the maximum amount is Rs 10 000. The existence of the Society is hereby brought to the notice af all Chairman, Municipal Councils & Presidents of Local Boards and they are requested to recognise this Society as an approved life assurance office for the purpose of G. O. No. 3290 L and M. dated 12th July 1929 and to see that the Society gets encouragement from their employees.

(Sd.) K. Mallikharjunam.
Personal Assistant

To all Chairman M Councils
" Presidents District Board
" " Taluk Boards
Copy to the Registrar of Co-operative Societies

Wanted Reliable Agents.

For the particulars apply to Branch Office Mercara

ಪರದೇಶಗಳಲ್ಲಿ ನಡೆಯುತ್ತಿರುವುದೇನು?

ಬ್ರಿಟನ, ಜರ್ಮನಿ ಮತ್ತು ಝೆಕೊಸ್ಲೋವಾಕಿಯ.

ಕಳೆದ ವಾರದಂತೆಯೇ ಈ ವಾರ ಪ್ರಾರಂಭದಲ್ಲಿ ಮಹಾ ಯುದ್ಧ ಸಂಭವಿಸುವದೋ ಎಂಬ ಸಂಶಯವು ಹಾಗೇ ಉಳಿದಿದೆ. ಆದರೆ ಈ ಲೇಖನವನ್ನು ಬರೆಯುವಾಗ ಕೆಲವು ವಿಚಾರಗಳು ಮಾತ್ರ ವಿಶದವಾಗಿದ್ದವು. ಈಚೆಗೆ ನಡೆದ ವಿಚಾರವನ್ನು ಬೇರೆ ಪುಟದಲ್ಲಿ ಕೊಟ್ಟಿರುವೆವು.

[illegible] ತಾ. 12 ನೇ [illegible] ನ್ಯೂರೆಂಬರ್ಗಿನ ಹಿಟ್ಲರನ ಭಾಷಣವನ್ನು ಎದುರು ನೋಡುತ್ತಿದ್ದು ಹಿಟ್ಲರನ ಭಾಷಣದಿಂದಲೂ [illegible] ಸ್ಥಿತಿಯು ಬದಲಾಗಲಿಲ್ಲ. ಹಿಟ್ಲರನು [illegible] ಬ್ರಿಟನದ [illegible] ಪ್ರಧಾನರಾದ ಮಿ. ಚೇಂಬರ್ಲೇನರ ನಾಟಕೀಯ ಪ್ರದರ್ಶನವು ರಾಷ್ಟ್ರಗಳ ಕಣ್ಣನ್ನು ಆಕ್ಷರ್ಷಿಸಿತು. ಆದರೆ ಈ ದರ್ಶನದ ಗುಟ್ಟು ಇನ್ನೂ ರಟ್ಟಾಗಿರುವದಿಲ್ಲ. ಈ ದರ್ಶನದ ಪರಿಣಾಮವಾಗಿ ಉಸಿರಿತ್ತಲು ಅವಕಾಶವಿಲ್ಲದಂತಿದ್ದ ಯೂರೋಪಿನ ರಾಷ್ಟ್ರಗಳಿಗೆ ಸ್ವಲ್ಪ ಸಮಯ ದೊರೆತಂತಾಯಿತು. ಹಿಟ್ಲರನು ಪ್ರಜಾಪ್ರಭುತ್ವ ಸರಕಾರಗಳು ಯುದ್ಧಕ್ಕೆ ಹೆದರುತ್ತಿರುವ ಈ ಸಂದರ್ಭವನ್ನು ಚೆನ್ನಾಗಿ ಉಪಯೋಗಿಸಿಕೊಳ್ಳುತ್ತಿರುವನು. ಚೇಂಬರ್ಲೇನ್ ಮತ್ತು ಹಿಟ್ಲರನೊಡನಾದ ಸಂಭಾಷಣೆಯ ಪರಿಣಾಮವಾಗಿ ಚೇಂಬರ್ಲೇನರು ಇಂಗ್ಲೆಂಡಿಗೆ ಮರಳಿ ತಲ್ಲಿಯ [illegible] ಅಭಿಪ್ರಾಯ [illegible] ಹಿಟ್ಲರನ [illegible] ಚೇಂಬರ್ಲೇನರ [illegible] ಹಿಟ್ಲರನಿಂದ ಪುರಸ್ಕಾರ ಸಿಗಲಿಲ್ಲವೆಂದು [illegible] ಝೆಕೊಸ್ಲೊವಾಕಿಯಾದಲ್ಲಿ ಅಡಗಿರುವ ಜರ್ಮನರ [illegible] ಪ್ರಾಂತಕ್ಕೆ [illegible] ಆಗದೇ ಹೋದರೆ [illegible] ಯುದ್ಧವು [illegible] ಎಂಬದಾಗಿ [illegible] ತಿಳಿಸಿರುವನು.

ಇದರಿಂದ ಈ ಬಿಕ್ಕಟ್ಟಿನ ಸಂದರ್ಭದಲ್ಲಿ ಸಂಧಿ ಮಾಡಲು ಪ್ರಯತ್ನಿಸುತ್ತಿರುವ ಬ್ರಿಟನಿಗೆ ಸೋಲಾದರೆಯಾಗಿದೆ. ಬ್ರಿಟನದ ಮುಖಂಡರು [illegible] ಫ್ರಾನ್ಸಿನ [illegible] ಯ ಜತೆಗೋಡಿ ವಿಚಾರ ವಿನಿಮಯ ನಡೆಸಿ [illegible] ಆದರೆ ಝೆಕೊಸ್ಲೊವಾಕಿಯಾ [illegible] ಇಲ್ಲದೆ ಇಂಥ ಬಿಕ್ಕಟ್ಟಿನ ವಿಚಾರದಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡು ಮಾಡಿದ ಯಾವ ತೀರ್ಮಾನಕ್ಕೂ ತಾನು ಒಪ್ಪುವದು ಅಸಾಧ್ಯವೆಂದು ಕಂಠೋಕ್ತವಾಗಿ ಹೇಳಿರುವರು. ಅವರು ತಮ್ಮ ಪ್ರಾಂತವಾಗಿ [illegible] ಆಂತರ್ಯದ್ದವನ್ನು [illegible] ಎದುರಿಸಲು ಸಿದ್ಧರಾಗಿರುವರು.

ಈ ಸಂದರ್ಭದಲ್ಲಿ ಒಂದು ಸ್ವಾರಸ್ಯ ವಿಚಾರವೆಂದರೆ ಝೆಕೊಸ್ಲೊವಾಕಿಯಾದಲ್ಲಿರುವ ಸುಡೆಟನರೆಲ್ಲ ಹಿಟ್ಲರನ ಪಕ್ಷವನ್ನು ವಹಿಸುವದಾಗಿಲ್ಲ. ಒಂದು ಪಕ್ಷವು ಝೆಕರಿಂದ ಹೊರೆತ ಸುಧಾರಣೆಗಳಿಂದಲೇ ತೃಪ್ತಿಗೊಂಡಿರುವದಾಗಿ ತಿಳಿದುಬರುತ್ತಿದೆ. ಹೀಗಿರುವಾಗ ಮಿ. ಚರ್ಚಿಲ್ಲರ ಸೂಚನೆಯಂತೆ ಬ್ರಿಟನ್, ಫ್ರಾನ್ಸ್, ಮತ್ತು ರಷ್ಯಾ ಇವು ಸೇರಿ ಹಿಟ್ಲರನು ಝೆಕೊಸ್ಲೊವಾಕಿಯಾ ಮೇಲೆ ಮುಂದುವರಿದರೆ ನಾವು ಅವನ್ನು ಎದುರಿಸುವೆನೆಂದು ಬೆದರಿಕೆ ಹಾಕುವುದು ಉತ್ತಮ. ಆದರೆ ಬ್ರಿಟನು ರಷ್ಯಾದೊಡನೆ ಸೇರಿ ವರ್ತಿಸುವದಾಗಲೀ, ಜರ್ಮನಿಗೆ ಇಂಥಾ ಕಂಠೋಕ್ತ ಎಚ್ಚರಿಕೆ ಕೊಡುವದಾಗಲೀ ಅಸಂಭವವೇ ಹೌದು. 'ಎಂದೂ ಮುಳುಗದ ಸೂರ್ಯ' ಸಾಮ್ರಾಜ್ಯವುಳ್ಳ ಬ್ರಿಟನು ಸರ್ವಾಧಿಕಾರಿಗಳ ತಾಳಕ್ಕೆ ಸರಿಯಾಗಿ ಇಂದು ವರ್ತಿಸುತ್ತಿರುವನು. ಇಂದು ಇಂಗ್ಲೆಂಡಿನ ಪರರಾಷ್ಟ್ರ ನೀತಿಯು ಬಗ್ಗೆ ಝೆಕರಿಗೆ ಸಂಶಯ ಬಂದಿದೆ. ತಮ್ಮ ಸಂರಕ್ಷಣೆಯು [illegible] ಬರೆದಿಟ್ಟ [illegible] ಪ್ರಯತ್ನಿ ಸುವದು ಯಾವ ರಾಜನೀತಿ? ಹಿಟ್ಲರನ ಸೂಚನೆಗಳನ್ನು [illegible] ಝೆಕರಿಗೆ [illegible] ಇಂಥಾ [illegible] ಝೆಕರ [illegible] ಫ್ರಾನ್ಸ್ ಮತ್ತು ರಷ್ಯಾ [illegible] ಝೆಕರನ್ನು [illegible] ಬಂದಿತೆ.

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ 52,54,750 ರೂ. ಭರವಸೆಯ 4689 ಪ್ರಪೋಸಲ್‌ಗಳು ಸಿಕ್ಕಿದ್ದು ಅವರಲ್ಲಿ ಹಿಂದಿನ ವರ್ಷದ ಪೂರ್ತಿಯಾಗದ 1417 ಪ್ರಪೋಸಲ್‌ಗಳ ಬಾಬ್ತು 40,67,650 ರೂ. ಗಳ ಬಗ್ಗೆ ಪಹಾರಗಳ 2,21,959-6-0 ರೂ. ವಿಮಾ ಕಂತು ಬರುತ್ತ ಕಂಪನಿಯಿಂದ [illegible] ಬರುವ ಹಣ ರೂ. 39,38,150 ಬಾಕಿ ರೂ 1,29,500 ವುನಡೆ [illegible] ಕೊಟ್ಟದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ಪರ್ಷಾಂತ್ಯದಲ್ಲಿ ತೀರ್ಮಾನಿಸಲು, ಮುಂದುವರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತವೆ. ಈ ವರ್ಷದ ಹೊಸ ಉದ್ಯೋಗವು ಹಿಂದೆ ವರ್ಷದ ಹೊಸ ಉದ್ಯೋಗಕ್ಕಿಂತ ರೂ 1,13,775 ಹೆಚ್ಚಿದೆ.

ಈ ಕೆಳಗಿನ ಬಿಲ್ಲಿ ಸಂಗತಿಗಳಿಂದ [illegible] ತೃಪ್ತಿಯನ್ನು [illegible] ಅನುಭವಿಸಲು ಡೈರೆಕ್ಟರುಗಳು ಇಚ್ಛಿಸುತ್ತಾರೆ.

ಇಂಡಿಯಾ ಸರಕಾರದ [illegible] ಕೆಲಸ ಮಾಡುವ 215 ಇಂಡಿಯನರ ಕಂಪೆನಿಗಳಿಂದಾದ [illegible] 'ಇಂಡಿಯನ್ ಇನ್ಶೂರೆನ್ಸ್ ಈಯರ್ ಬುಕ್' ಎಂಬುದರಲ್ಲಿ [illegible] ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗದ ದೃಷ್ಟಿಯಿಂದ [illegible] 20 ಕಂಪನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. [illegible] ಇಪ್ಪತ್ತು ಐದಕ್ಕೆ ವರ್ಷಗಳ ವರೆಗೆ ಪ್ರತಿನಿತ್ಯ [illegible] ಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ [illegible] ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೇಯದಾಗಿದೆ. ಒಂದನೇಯದಾದ ಕಂಪನಿಯು ಇಪ್ಪತ್ತು [illegible] ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟದ್ದಾಗಿದೆ.

ವಿಮಾ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮಾ ಕಂತುಗಳ ಆದಾಯವು (ಹೊಸದ ಭರವಸೆ [illegible]) ಕಳೆದ ವರ್ಷದ ವಿಮಾ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ಈ ವರ್ಷದ ವಿಮಾ ಕಂತಿನ ಆದಾಯವು ರೂ. 3,66,198-13-0, ಗತ ವರ್ಷದ್ದು 2,36,767-6-6 ಆಗಿದೆ.

ಜೀವವಿಮಾ ಫಂಡು:—ಈ ಕಂಪನಿಯ ಜೀವ ವಿಮಾ ಫಂಡು ರೂ. 75,258-14-9ರಿಂದ, ಖರ್ಚುಗಳ ಕ್ರಮಕ್ಕೆ ಮತ್ತು ಇತರ ಖರ್ಚಿಗಾಗಿ ರೂ 45,037-8-4 ವಜಾ ಕಳೆದು ರೂ. 2,00,421-1-3ಕ್ಕೆ ಏರಿದೆ. ಈ ಕೆಳಗೆ ವಿವರ ಕೋಷ್ಟಕವನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿಮಾ ಕಂತು	ಜೀವ ವಿಮಾ ಫಂಡು.
1ನೇ ವರ್ಷದ	ರೂ. 1,46,949	ರೂ 15,610
2ನೇ ವರ್ಷದ	,, 2,36,767	,, 75 259
3ನೇ ವರ್ಷದ	,, 3,66,199	,, 2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪನಿಯ ಅಭಿವೃದ್ಧಿಗೆ ಸಾಕ್ಷಿಯಾಗಿವೆ. ಈ ಅಭಿವೃದ್ಧಿಯು ಭಾರತ ವಿಮಾ ಕಂಪನಿಗಳ ಚರಿತ್ರೆಯಲ್ಲಿ ಹೊಗಳತಕ್ಕ ಹೆಜ್ಜೆಯಾಗಿದೆ.

ಭಾರತ ಜೀವವಿಮಾ ಕಂಪನಿಗಳ ಅಕ್ಟಿನ ಮೇರೆ ಠೇವಣಾತಿ.—ಈ ವಿಮಾ ನೂತನ ಮೇರೆ ಠೇವಣಾತಿ ಮಾಡತಕ್ಕಬೇಕಾದ ರೂ, 2 ಲಕ್ಷವನ್ನು ಪೂರ್ತಿಯಾಗಿ ಠೇವಣಿ ಇಟ್ಟು ಮಾಡಲಾಗಿದೆ ಎಂಬುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷವುಳ್ಳವರಾಗಿರುವರು.

ಸಿ ಯಂ. ತಿಮ್ಮಯ್ಯ,
(52-15). ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

ಮಾರಾಟಕ್ಕಿದೆ.

ಈ ಕೆಳಗೆ [illegible] ಕುದುರೆಯು ಸರಕಾರ [illegible] ಒಂದು [illegible] ದೊರಕಿದ್ದು [illegible] ಗಾಡಿಗೆ ಕಟ್ಟುವದಕ್ಕೂ, [illegible] ಕೆಲಸಕ್ಕೂ ಬಹಳ ಪ್ರಯೋಜನವಾಗುತ್ತದೆ. ಇದರ ಬೆಲೆ [illegible] ಬರೆದು [illegible] ಪಶುವೈದ್ಯಶಾಲೆ [illegible] ಬಹುದು. [illegible] ಅದಕ್ಕೆ ಯಾರು ಹೆಚ್ಚು ಬೆಲೆ ಕೊಡುವ ಕಾರಣಕ್ಕಲ್ಲದೆ.

ಇದರ ವಿವರ.

1. ವಯಸ್ಸು -5 ವರ್ಷ.
2. ಎತ್ತರ-4 ಅಡಿ 5 ಇಂಚು.
3. ಬಣ್ಣ-7 [illegible]
4. ಉದ್ದ-7 ಅಡಿ
5. ಭಾರ 1,200 ಪೌಂಡುಗಳು.

ಸಿ ಬಿ. ಸೋಮಣ್ಣ,
ಡಿಸ್ಟ್ರಿಕ್ಟ್ ವೆಟರಿನರಿ ಆಫೀಸರ್,
4-3 ಮಡಿಕೇರಿ.

ಶ್ರೀ ರಾಮಕೃಷ್ಣ ಪರಮಹಂಸರು.

ಲೇಖಕ:-ಎಂ. ಎಸ್. ಅನಂತಪದ್ಮನಾಭರಾವ್.

ಗತಿ ೩.

(ಕಳೆದ ವಾರದಿಂದ ಮುಂದುವರಿದದ್ದು)

ರಾಜಚಂದ್ರನ ಮಡದಿ ರಾಸಮಣಿ ಎಂಬವಳು
ರಾಣಿಯೆಂದವಳನ್ನು ರೂಢಿಯಲಿ ಕರೆಯುವರು
ಚಿಕ್ಕಂದಿನಲಿ ಪತಿಯನಗಲಿದಳು ದುರ್ದೈವಿ
ಅದರಿಂದೆ ದೈವ ಭಕ್ತಿಯಲಿ ಕಾಲಿಕ್ಕಿದಳು
ಶಕ್ತಿ ಭಕ್ತಿಯ ಪಡೆದು ಮಾತೆಯಾರಾಧನೆಯ
ನಿತ್ಯ ಮಾಡುವಳವಳು, ಮಾತೆಯಾಣತಿಯಂತೆ
ವರ್ತಿಸುತ ದೊರೆತ ಐಶ್ವೈರ್ಯಗಳ ಸೂರೆ
ಮಾಡುತಿರೆ ಸೇವೆಗೋಸುಗವೆಂಬ ಬಗೆಯಿಂದ
ನೂರ್ಮಡಿಯ ಸಂಪದವು ಕೈಗೂಡಿ ಬರುತಿಹುದು
ಜಾಮಾತ ಮಥುರನಾಥಗೆ ಕೊನೆಯ ಮಗಳಿತ್ತು
ಎರಡನೆಯ ಲಗ್ನವನು ಮಾಡಿದಳು-ಸಂಗಡಲಿ
ಅವಳ ಕರ್ತವ್ಯದಲಿ ನೆರವಾಗಲಿರುತಿಹನು
ಸಂತಾನವಿಲ್ಲದಿರೆ ರಾಣಿಗವ ಮಗನಂತೆ
ಸುಪ್ರೀತಿಯಿಂದಿಹನು-ಅವಳ ಗುಣಕೊರೆಯಂತೆ
ಸುಹೃದಯನು ಮಧುರಬಾಬುವು ಕರುಣಿ ನಿಷ್ಕಪಟಿ.

ಇಂತಿರಲು ಕಾಶಿಯಾತ್ರೆಯ ಮಾಡೆ ಮನವಾಯ್ತು
ರಾಣ್ಮಣಿಗೆ-ಹಲವುದೋಣಿಗಳನು ತರಿಸುತಲಿ
ಸಿದ್ಧ ಮಾಡಿದಳವಳು-ಬಡಬಗ್ಗರಿಗೆ ದಾನ
ಮಾಡಲ್ಕೆ ಸಾಮಗ್ರಿಗಳ ತರಿಸಿ ಪೂರಯಿಸಲು
ಅಣಿಮಾಡುತಿರಲಾಗ ನಿದ್ದೆಯಲಿ; ಕನಸೊಂದ
ಕಂಡಳಾ ರಾಸಮಣಿ ನಿದ್ರೆಯಿದಿ ಮರೆಗುತ್ತ,
'ಎಲೆ ರಾಣಿ ನಿನಗೇಕೆ ಯಾತ್ರೆಗಳ ತೊಡಕಾಯ್ತು
ಇಲ್ಲೆ ದರ್ಶನವಿತ್ತೆ-ಇವ ತೊರೆಯುತೆನಗೊಂದು
ದೇವಾರವಂ ರಚಿಸು, ನಿನಗಕ್ಕು ಸನ್ಮುಕ್ತಿ,
ರಚಿಸು ಗಂಗಾತೀರದಲಿ ಚಿತ್ರತರವಾದ
ದೇವಿ ಭವನವ'ನೆಂದು ವಾಣಿ ಕೇಳ್ಬುದು ಮೊಳಗಿ
ಆ ದಿವ್ಯ ದರ್ಶನದ ಮಾಡುತ್ತಲಾ ವರದು
ವಾಣಿಯನುಭವದಿಂದ ಸಂತೋಷಗೊಳ್ಳುತಲಿ
ಕಾಶಿಯಾತ್ರೆಯ ತಡೆದು ಮಾತೃಭವನವ ರಚಿಸೆ
ಸಂಕಲ್ಪ ಮಾಡಿದಳು; ಹಗಲಿರುಳು ಸರ್ವದಾ
ಮಾತೃ ಚಿಂತನೆಯಲ್ಲಿ-ಈ ಕಷ್ಟ ಭಾರವನು
ಸಾಗಿಸುವ ಬಗೆಯೆಂತು! ಇದನೋಳ್ವ ಸುಮುಹೂರ್ತ
ವೆಂದು ಬರ್ಪುದೊ ತಾಯೆ! ಕಾಣೆನೆನುತಲಿ ಮರುಗಿ
ಹರಕೆಗಳ ಕಟ್ಟಿದಳು.

ದಕ್ಷಿಣೇಶ್ವರದಲ್ಲಿ
ಭಾಗೀರಥಿ ತೀರದಲಿ ಪವಿತ್ರದ ಭೂಮಿ
ಯನು ಕೊಂಡು ಲಕ್ಷಧನವನು ವೆಚ್ಚ ಮಾಡುತಲಿ
ಕಾಳಿ ದೇವಾರವನು ಕಟ್ಟಿಸಿದಳವಳಾಗ.
ಬಹುಭವ್ಯವಾಗಿಹುದು, ಕಣ್ತೆರೆದು ನಾಲವಾ
ಮಾತೃಮಂದಿರ ನೋಡೆ, ಮುಂದಿವಾ ಲೋಕಗುರು
ನೆಲೆಯಾದ ಮಾತೃಮಂದಿರವನ್ನು ಲೋಕ ಸುಖ
ಗೋಸುಗನೆ ನಿರ್ಮಿಸಿದಳಾಮಾತೆ ರಾಣಿಯಿಂ:

ಪಶ್ಚಿಮಕೆ ಜಾಹ್ನವಿಯು, ದಕ್ಷಿಣೋತ್ತರಗಳಲಿ
ಹನ್ನೆರಡು ಶಿವನಿಲಯು, ಪೂರ್ವದಲಿ ಎಡಗಡೆಗೆ
ರಾಧಾಪತಿಯ ನಿಲಯು, ಬಲಗಡೆಗೆ ನಿಂದಿಹುದು
ಲೋಕಮಾತೆಯ ಭವ್ಯ ಮಂದಿರವು ರಂಜಿಸುತ
ಮಲಗಿರುವಶಿವನೆದೆಯ ಮೆಟ್ಟುತಲಿ ನಿಂದಿಹಳು
ಭವತಾರಿಣಿಯು ಲೋಕಸಂಗ್ರಹವ ಮಾಡಿಸಲು
ದೇವಿ ನೆಲೆಸಿದಳಲ್ಲಿ ತಾನೊಲಿದು.

ಸುಮುಹೂರ್ತ
ದಲಿ ದೇವಿಯರ್ಚನೆಯ ಮಾಡಿಸಲು ನಿಶ್ಚಯಿಸಿ
ಮನದ ಒಯಕೆಯು ಪೂರ್ಣವಾದುದಕೆ ಹಿಗ್ಗುತಲಿ
ಸಂತಸಸಮಾಧಿಯಲಿ ಮುಳುಗಿ ತೇಲಾಡಿದಳು.
ಕಣ್ಣಾಣೆಯೆ ಮಾತೃ ಭಜನೆಯ ಮಾಳ್ಪ ಸತ್ಸಮಯ
ಬಂತೆಂದು ಹಿಗ್ಗಿದಳು ಮನವರಳಿ ಹಿರಿದಾಯ್ತು
ಅಚಲ ಸಂತೋಷದಲಿ ಮುಳುಗಿರಲು ತೊಡಕೊಂದು
ನಾಕಿತಾ ಹಿಗ್ಗನ್ನು ಕ್ಷಣಕಾಲ ರಾಣಿಯಲಿ:
ಶೂದ್ರರಿಗೆ ನೈವೇದ್ಯ ಮಾಡುವುದು ಭಕ್ತರಿಗೆ
ಮನಕೊಲಿದ ನೀತಿಯಾಗಿರಲದನು ಪಾಲಿಸಲು
ರಾಣಿಗಡಚಣೆಯಾಯ್ತು, ಮನದ ಸಿಂಗರಿಸಿರುವ
ಮಾತೆಗೆ ನಿವೇದನವ ಮಾಡುವುದೆ ತಪ್ಪಾಗಿ
ತೋರಿದುದು, ಈ ದಾರಿಯಂ ಸುಲಭ ರೀತಿಯೊಳು
ದಾಂಟಲ್ಕೆ ಮನಮಾಡಿ ಶಾಸ್ತ್ರಕೋವಿದರನ್ನು
ಕೇಳಿದಳು-ನಿಷ್ಠಬ್ರಾಹ್ಮಣನಿಂದ ಪೂಜೆಗಳ
ಸಲ್ಲಿಸಲು ಮನದಿಷ್ಟವಾಗಿರಲು ತೊಡಕಾಗೆ
ಆ ಭೂಮಿಯನ್ನೆಲ್ಲ ಯೋಗ್ಯನಹನೊಬ್ಬನಿಗೆ
ದಾನ ಮಾಡಿದರಾಯ್ತು-ಅದರಿಂದಲಾಸ್ವತ್ತು
ದ್ವಿಜನ ಸಂಪದವಾಯ್ತು ಮತ್ತೆ ಪೂಜಾದಿಗಳ
ನಡೆಸಲ್ಕೆ ಅಡ್ಡಿಯೇನಿಹುದೆಂದು ಹೇಳಿದನು.
ಶಾಸ್ತ್ರಗಳ ನೋಡಿ ರಾಮಕುಮಾರ ಧೈರ್ಯದಿಂ;
ಸರ್ವಸಮ್ಮತವಾಯ್ತು:ಅದರಂತೆ ನಿಷ್ಕಪಟ
ಮನುತೆಯಲಿ ಧಾರೆಯೆರೆದಿತ್ತಳಾ ಸಕಲವನು.
ದೇವಿಯಂ ಪೂಜಿಸುವ ಯೋಗ್ಯತೆಯನ್ನುಳ್ಳವರ
ಕಾಣದೆಯೆ-ನೇಹಿಗರ ಮುಖದಿಂದ ಕರೆಸಿದಳು
ಪ್ರೇಮದಿಂ ರಾಣಿ ರಾಮಕುಮಾರನಂ ಕಡೆಗೆ
ಪೂಜಿಸುತ ಕೇಳಿದರೆ ಈ ಮಹಾಕಾರ್ಯಕ್ಕೆ
ವಿಘ್ನವೊದ್ದದೆ ನಿಂದು ದೇವಿ ಪೂಜೆಯ ಮಾಡಿ
ಕೃತಕೃತ್ಯನಾದನಾ ಖುದಿರಾಮ ಸತ್ಪುತ್ರ.
ದೇವಿಯಾರಾಧನೆಗೆ ಲಕ್ಷಗಟ್ಟಲೆ ಧನವ
ವೆಚ್ಚ ಮಾಡುತ ಹಲವು ಬಡವರಂ ತಣಿಸಿದಳು.
ನಿತ್ಯ ಪೂಜೆಯು ನಡೆಯೆ ಬೇಕಾದ ಸಾಹಿತ್ಯ
ಗಳ ಕೊಂಡು ದೇವಿಗರ್ಪಿತಗೈದು ನೆಮ್ಮದಿಯ
ಪಡೆದಳಾ ರಾಸ್ಮಣಿಯು-ಇಂತವಳ ಕನಸೆಲ್ಲ
ಸಂಪೂರ್ಣ ಕಾರ್ಯರೂಪದಿ ನಿಂದು ಲೋಕದಲಿ
ಶಾಶ್ವತದ ಕೃತಿಯಾಯ್ತು. ಲೋಕಧರ್ಮದ ಮೂಲ
ಕಾರಾಗಾರವಾದತ್ತು-ಮಾತೃಮಂದಿರವಾಯ್ತು:
ಅಂದಿನಿಂ ದಕ್ಷಿಣೇಶ್ವರವೊಂದು ಸುಖಭವನ
ನವನಾಕವಾದತ್ತು-ಹಲವು ಸಂಪರ್ಕದಿಂ
ಪರಿಶುದ್ಧ ತರುಗಳಿಂ ತೀವಿರುವ ವನರಾಜಿ
ಜಾಹ್ನವಿಯ ಪರಿಶುದ್ಧ ಸತ್ಯತನು ಸದ್ವಾಸ,
ದೇವಾಂಶ ಸಂಭೂತನಾವಾಸವಾಗಲ್ಕೆ
ಸಿದ್ಧವಾದುದು ನೆಲೆಯು ರಾಣಿ ಹಸ್ತದಿ ಮೊಳೆತು
ಲೋಕಕೊಂದವತಾರವಂ ತೋರೆ ಮಾತೆ ತಾ
ರೂಪವೆತ್ತಿಹಳಲ್ಲಿ ಭರತಮಾತೆಗೆ ಭಕ್ತ
ಪುತ್ರನನ್ನೊದಗಿಸಲು ದಕ್ಷಿಣೇಶ್ವರದಲ್ಲಿ
ನೆಲೆ ನಿಂದಳಾ ದೇವಿ-ಸತ್ಯದಲಿ ಸತ್ಯವನು
ಧರ್ಮದಲಿ ಧರ್ಮವನು-ದೇವರಲಿ ದೇವರನು
ತೋರುವಾ ಪುರುಷ ಧೀರುಂಡನಂ ತೋರಲ್ಕೆ
ಮೈವೆತ್ತು ಕಲಿಯುಗದ ಯುವಕರಿಗೆ ಭಕ್ತಿರಸ
ಪೂಡಿಸುತ ಕ್ರಾಂತಿಯನ್ನೆಬ್ಬಿಸಲು ತಾನಾಗಿ
ಬಂದಿಹಳು ಭರತ ಪುತ್ರಿಯ ದಿವ್ಯ ತೀರದಲಿ
ಭೂಶಕ್ತಿ ತನಗೊಂದು ಮನೆಕಟ್ಟಿಕೊಂಡಿಹಳು.

ಶಂಭುಚಂದ್ರನು ಮಾತೆ ದರ್ಶನವ ಮಾಡಿದನು.
ಆ ದಿವಸದುತ್ಸವದಿ ಭಾಗಿಯಾಗಿರ್ದೊಡಂ
ಪಿತನ ನಿಷ್ಠೆಯ ನೆನೆದು ಕೊಳದೆ ಪ್ರಸಾದವನು
ಮರಳಿದನು ನಿಜಗ್ರಹಕೆ-ಅಣ್ಣ ಬರದಿರೆ ಮರಳಿ
ಮರುದಿವಸ ದಕ್ಷಿಣೇಶ್ವರಕೆ ಬಂದನಣ್ಣನಂ
ಬಾರೆನಲು ಬರಲೊಲ್ಲದಿರಲುತ್ಸವಾದಿಗಳ
ಸಂಪೂರ್ಣಗೊಳಿಸುತ್ತ ಬರುವನೋ ಎನೆಂದು
ನೋಡುತಿರೆ ಬರಲಿಲ್ಲ ಕೊನೆಗೆ ತಾನೇ ಬಂದು
ಕೇಳಿದರೆ ಮಾತೃ ಪೂಜೆಯ ಮಾಡೆ ನೆಲೆನಿಂತ
ಹಿರಿಯಣ್ಣನೆಂದರಿತು ಮನಕೊಪ್ಪದಾದುದಿದು:
ಎಲ್ಲಿ ಹೋದುದು ವಂಶದಾ ಧರ್ಮ ನೀತಿಗಳು
ಜಾತಿ ಬಾಹಿರರಿತ್ತ ದಾನಕ್ಕೆ ಕೈನೀಡಿ
ದೇಹಿ ಎಂಬುದು ನಮ್ಮ ವಂಶಕ್ಕೆ ಸಮ್ಮತವೆ?
ಬೇಡ ಬೇಡೆನುತಿರಲು ತಮ್ಮನಂ ಸಂತವಿಸಿ
ಶಾಸ್ತ್ರ ಸಾಕ್ಷ್ಯಗಳಿತ್ತು ನೀತಿ ಸಮ್ಮತವಿದುವು
ನೋಡೆಂದು ವಿಧ ವಿಧದಿ ಬೋಧಿಸಿದನರ್ತಿಯಿಂ
ಆದೊಡಂ ಊಟಗಳನೊಲ್ಲದೆಯೆ ನಿಜಹಸ್ತ
ದಿಂ ಪಾಕಗಳ ಮಾಡುತುಂಬುವ ಗದಾಧರನು,
ಜಾಹ್ನವಿಯ ಪರಿದುವ ವಾರಿಯಲಿ ಬೆಂದುದಿದು
ಲೋಕಮಾತೆಗೆ ಬಂದ ನೈವೇದ್ಯ ಮತ್ತಿದುವು
ಈ ವಿಧದಿ ಪಾವನದ ಪರಿಪಕ್ವ ಭೋಜನದ
ಕೊಟ್ಟನ್ನವು ಧರ್ಮ ಸಮ್ಮತ ತಪ್ಪು ಕೇಳೆನಲು
ಮನದ ಧೃಢತೆಯ ಬಿಡದೆ ನಿಷ್ಠೆಯಿಂದಿರುತಿರುವ
ತಮ್ಮನಿಗೆ ಜಾಹ್ನವಿಯ ತೀರದಲಿ ತಿನಸುಗಳ
ನಣಿಮಾಡುತುಂಬುದೆನೆ ಅವಕೊಪ್ಪಿ ಬಾಲಕನು-
ದಕ್ಷಿಣೇಶ್ವರದಲ್ಲಿ ನೆಲಸಿದನು ತಾಂ ಮುಂದೆ
ನಿಜ ಧರ್ಮವನೆ ನಂಬಿ ನಡೆವವನು ನಿಷ್ಠೆಯನು
ಬಿಡದೆ ಪಾಲಿಸಿದ ಪಿತನಿತ್ತಿರುವ ಮೇಲ್ಪಂಕ್ತಿ
ಯನು ತಿಳಿದು ವರ್ತಿಸಿದ-ಇದೆ ಮೊದಲ ಸಾಧನೆ;
ಅಂದಿನಿಂ ರಾಮಕೃಷ್ಣಾಂಕಿತದಿ ಕಾಳಿನೆಲೆ
ಯಲ್ಲಿರ್ದ ಲೋಕ ಧರ್ಮದ ನವಿದ ಯತಿವರನು.

ಗತಿ ೪.

ಮಥುರನಾಥನು ರಾಮಕೃಷ್ಣರನೊಂದು ದಿನ
ನೋಡಿದನು ಮಂಗಳಾಕಾರನಂ ವೀರನಂ
ವೈರಾಗ್ಯ ಪೂರನಂ ಕಂಡು ಪುಳಕಿತನಾಗಿ
ನೋಡಲ್ಕೆ ನುಡಿಸಲ್ಕೆ ಮನಮೋಹಾತುರವಾಯ್ತು'
ಈ ಭಕ್ತ ಈ ರಕ್ತನಾರೆಂಬ ಶಂಕೆಯಲಿ
'ಇವರು ರಾಮಕುಮಾರಸೋದರರು' ಎಂದೆಂಬ
ವಾರ್ತೆಯಂ ತಿಳಿಯುತ್ತ ಮನಕೆ ನೆಮ್ಮದಿಯಾಯ್ತು:
ಇಮ್ಮಡಿಯ ಸಂತಸದಿ ಧರ್ಮ ಮೂರ್ತಿಯ ಕಂಡು
ಶಿರವೆರಗಿ ಪಾದದಲಿ ನುಡಿಸುತೊಲಿಸಿದನವರ
ವರನು ಸಂತೋಷದಲಿ:

ಈ ಸಮಯದಲ್ಲವರ
ಸೇರಿದನು ಬಂದಲ್ಲಿ ಹೃದಯರಾಮೆಂಬವನು,
ಖುದಿರಾಮ ಸೋದರಿಯ ಪುತ್ರ ಹೇಮಾಂಗಿನಿಯ ಮ
ಗನಿವನು, ಜೀವನವ ಸಾಗಿಸುವ ಬಗೆಗಳನು
ಚಿಂತಿಸುತ ದಕ್ಷಿಣೇಶ್ವರಕಾಗಿ ಬರುತಿರಲು
ರಾಮಕೃಷ್ಣರ ನೆಲೆಯನರಿಯುತ್ತ ಸೇರಿದನು.

ಕ್ಷೇತ್ರನಾಥನು ಒಂದು ದಿನ ರಾಧಕೃಷ್ಣ
ಮೂರ್ತಿಯನೊಯ್ಯುತಿರೆ ಕೈತಪ್ಪಿ ವಿಗ್ರಹವು
ಬೀಳಲ್ಕೆ ವಿಗ್ರಹದ ಕಾಲೊಂದು ಬೇರ್ಪಟ್ಟು
ಮುರಿದುಹೋಗಲು ದುಷ್ಟ ಶಕುನವೆನ್ನುತ ರಾಣಿ
ವ್ಯಸನದಿಂ ಕೋಪದಿಂ ಬೆಂದು ಮರುಗಿದಳಾಕೆ
ಮನಕೆ ಬೇಸರವಾಯ್ತು ಮತ್ತೇನು ಬೇಡಾಯ್ತು
ಮುಂದೇನು ಗತಿಯೆಂದು ಹಾತೊರೆಯುತಿರುವಾಗ
ಭಿನ್ನವಾದೀ ಮೂರ್ತಿ ಪೂಜೆ ಮಾಡಲು ತರವೆ!
ಬೇಡೆಂದು ಹೇಳುತ್ತಿರಲದ ಕೇಳಿ ಹೇಳಿದರು
ಶ್ರೀರಾಮಕೃಷ್ಣರವರಂ ನೋಡಿ 'ಎಂ ಮಾತು!
ನಿಮ್ಮ ಮಗು ದಾರಿ ಕಾಣದೆ ಬಿದ್ದು ಕಾಲೊಂದ
ಮುರಿದುಕೊಂಡರೆ ಬಿಸುಟು ಹೊಸಮಗುವ ತರುವಿರೇ?
ಇದು ನಮ್ಮ ಮಗುವಷ್ಟೆ ಮರ್ದಾಡಿ ಮಗುವನ್ನು
ಸಲಹುವಂತೆಯೆ ಇವನು ಸರಿ ಮಾಡಿ ಪೂಜಿಸಿ'
ಎನ್ನುವಾ ನುಡಿಕೇಳಿ ಮನಕೆ ಸಂತಸವಾಯ್ತು.
ಮೊದಲಿಗಿರ್ಮಡಿಯಾಗಿ ಸೊಗಸಿನಿಂ ಮೂರ್ತಿಯಂ
ರಾಮಕೃಷ್ಣರು ತಾವೆ ಸರಿಮಾಡಿ ತೋರಲ್ಕೆ
ಮುಂದೆ ರಾಧಾಕೃಷ್ಣ ಪೂಜೆ ಸಾಗಿತು ಮುದದಿ.
ಕ್ಷೇತ್ರನಾಥನ ಬಿಡಿಸಿ ಕಳುಹಿದಳು ರಾಸ್ಮಣಿಯು.
ಮತ್ತೆ ಪೂಜೆಗೆ ರಾಮಕೃಷ್ಣರಂ ನಿಯಮಿಸಿದ
ಕಾರಣ: ಇವರ ಪೂಜೆಯ ಬಗೆಯ ಬೇರಾಯ್ತು
ಮಂತ್ರಗಳ ಹೇಳುತಿರೆ ಆ ಮಂತ್ರಗಳು ಕಣ್ಗೆ
ಕಾಣುವವು ಭಕ್ತರಿಗೆ, ಮಂತ್ರ ದೇವತೆಗಳಾ
ಭಕ್ತಂಗೆ ದರ್ಶನವ ನೀಡಿವರು ಪದುಳದಲಿ.

[ಸಶೇಷ

ಜನಾಂಗಗಳ ಕೂಟ.

ಅದರ ಕರ್ತವ್ಯ ಭ್ರಷ್ಟತೆಯೇ ಇಂದಿನ ಕೋಲಾಹಲಕ್ಕೆ ಕಾರಣ.

ಕಳೆದ ಘೋರ ಯುದ್ಧವು ವರ್ಸೇಲ್ಸ್ ಒಪ್ಪಂದದ ಪರಿಣಾಮವಾಗಿ ಕೊನೆಗೊಂಡ ನಂತರ ಇಂದಿಗೆ ಇಪ್ಪತ್ತು ವರ್ಷಗಳಾದವು. ಈ ಅವಧಿಯಲ್ಲಿ ಸಂಗ್ರಾಮದಲ್ಲಿ ಭಾಗವಹಿಸಿ ತಮ್ಮ ಆರ್ಥಿಕ, ಸಾಮಾಜಿಕ ಮತ್ತು ನೈತಿಕ ಬಲದಲ್ಲಿ ಚ್ಯುತಿಗೊಂಡಿದ್ದ ರಾಷ್ಟ್ರಗಳು ಚೇತರಿಸಿಕೊಂಡಿವೆ. ಯಾವಾಗ ರಾಷ್ಟ್ರಗಳು ಅಭಿವೃದ್ಧಿಗೊಂಡು ಮುಂದುವರಿಯಲು ತೊಡಗುವವೋ ಅಂದೇ ಆ ರಾಷ್ಟ್ರಗಳ ಮನಸಿನಲ್ಲಿ ರಾಜ್ಯವಿಸ್ತರಣಾಕಾಂಕ್ಷೆಯು ಬೇರೂರಿ ತನ್ನ ಈ ಲಾಲಸೆಯನ್ನು ಸಫಲಪಡಿಸಲು ಅದು ನಿರಪರಾಧಿ ರಾಷ್ಟ್ರಗಳ ಮೇಲೆ ಕೈ ಮಾಡುತ್ತಿರುವುದು ಅನುಭವದ ಮಾತು. ಈ ಅನುಭವವು ಕಳೆದ ಘೋರ ಯುದ್ಧಕ್ಕೆ ಮೋದಲೇ ಇತ್ತು. ಆದ್ದರಿಂದ ಜಗತ್ತಿನ ರಾಷ್ಟ್ರಗಳು ಸೇರಿ ಜನಾಂಗಗಳ ಕೂಟವನ್ನೇರ್ಪಡಿಸಿ ರಾಜ್ಯವಿಸ್ತರಣಾ ದಾಹದಿಂದ ನಿರಪರಾಧಿ ರಾಷ್ಟ್ರಗಳನ್ನು ತೊಂದರೆಗೀಡು ಮಾಡುವ ರಾಷ್ಟ್ರಗಳ ವರ್ತನೆಗಳನ್ನು ಖಂಡಿಸಲು ನಿಶ್ಚಯಿಸಿದುವು. ಜಗತ್ತಿನ ಶಾಂತಿಗಾಗಿ ಹೋರಾಡಲು ಸ್ಥಾಪಿಸಿದ ಈ ಕೂಟವು ಶಾಂತಿ ರಕ್ಷಣೆಯ ಪ್ರಸಂಗಗಳು ಬಂದೊದಗಿದಾಗ ಮೌನವ್ರತವನ್ನಾಚರಿಸಿತು. ಇಟೆಲಿಯ ಸರ್ವಾಧಿಕಾರಿ ಮುಸಲೋನಿಯು ಅಬಿಸೀನಿಯಾದ ಮೇಲೆ ಕೈ ಮಾಡುವಾಗ ಈ ಕೂಟವು ಮಾಡಿದ್ದೇನು? ಸ್ಪೈನಿನಲ್ಲಿ ಜರ್ಮನಿಯ ಹಿಟ್ಲರ್ ಮತ್ತು ಇಟೆಲಿಯ ಮುಸಲೋನಿಯಿಂದ ಪ್ರೇರೇಪಿತನಾದ ಫ್ರಾಂಕೋವು ಬಂಡಾಯವೆಬ್ಬಿಸಿ ಸರಕಾರ ಪಕ್ಷವನ್ನು ಮೂಲೆಗೊತ್ತುತಿರಲು ಈ ಕೂಟವು ಏನು ಮಾಡಿತು? ಜರ್ಮನಿಯ ಹಿಟ್ಲರನು ಆಸ್ಟ್ರೀಯವನ್ನು ಬರೇ ತನ್ನ ಗೊಡ್ಡು ಬೆದರಿಕೆಯಿಂದ ವಶಪಡಿಸಿಕೊಂಡಾಗ ಈ ರಾಷ್ಟ್ರ ಇಂಫವು ಈ ವಿಚಾರ ಪರ್ಯಾಲೋಚಿಸಿತೇ? ನಲ್ವತ್ತು ಕೋಟಿ ಜನಸಂಖ್ಯೆಯಿಂದ ಕೂಡಿದ ಚೈನಾವನ್ನು ಬರೇ 7 ಕೋಟಿ ಜನರಿಂದ ಕೂಡಿದ ಜಪಾನು ಪರಿಪರಿಯಿಂದ ತೊಂದರೆಗೀಡುಮಾಡಿ ನಾಶ ಮಾಡುತ್ತಿರುವಾಗಲೂ ಈ ಕೂಟವು ತಾಟಸ್ಥ್ಯಭಾವವನ್ನು ತಾಳಿತು. ಜನಾಂಗ ಕೂಟಕ್ಕೆ ತನ್ನ ಅಧಿಕಾರವನ್ನು ಚಲಾಯಿಸಿ ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸಸಲು ಇಂಥಾ ಪ್ರಸಂಗಗಳು ಒದಗಿದ್ದರೂ ತನ್ನ ಕರ್ತವ್ಯ ಶೂನ್ಯತೆಯಿಂದ ಅದು ಇಂದಿನ ಈ ವರ್ತನೆಗಳಿಗೆ ಒಂದು ವಿಧದಲ್ಲಿ ಪ್ರೋತ್ಸಾಹವಿತ್ತಂತೆಯೇ ಆಯಿತು. ಮಹಾಪ್ರಭುತ್ವಗಳೆಂದೆನಿಸಿದ ರಾಷ್ಟ್ರಗಳು ಮೇಲೆ ಹೇಳಿದಂತೆ ಬಡ ಜನಾಂಗಗಳ ಮೇಲೆ ತಮ್ಮ ನಿರಂಕುಶ ವರ್ತನೆಯನ್ನು ಚಲಾಯಿಸದಿದ್ದ ಪಕ್ಷ ಜಗತ್ತಿನಲ್ಲಿ ಇಂದಿನ ಕೋಲಾಹಲ ಉಂಟಾಗುತ್ತಿರಲಿಲ್ಲ.

ಇವನ್ನೆಲ್ಲಾ ವಿಮರ್ಶಿಸಿಯೇ ಹಿಟ್ಲರನು ಇಂದು ಝೆಕೊಸ್ಲೊವಾಕಿಯಾದಲ್ಲೂ ತನ್ನ ಅಧಿಕಾರವನ್ನು ಸ್ಥಾಪಿಸಲು ಒಂದು ವಿಧದಿಂದ ಪ್ರಯತ್ನಿಸುತ್ತಿರುವನು. ಆದ ಪ್ರಯುಕ್ತ ಇಡೀ ಜಗತ್ತಿನ ದೃಷ್ಟಿಯೇ ಝೆಕೊಸ್ಲೊವಾಕಿಯಾದ ಮೇಲೆ ನಿಂತಿದೆ. ಕಳೆದ ಘೋರ ಯುದ್ಧದಿಂದ ಚೇತರಿಸಿಕೊಂಡಿರುವ ರಾಷ್ಟ್ರಗಳು ಇಂದು ಜರ್ಮನರ ಈ ವರ್ತನೆಯಿಂದ ಒಂದನ್ನೊಂದು ಎದುರಿಸಬೇಕಾಗಿ ಮಹಾ ಸಂಗ್ರಾಮವು ಪರಿಣಮಿಸಬಹುದೋ ಎಂಬ ಭೀತಿಯು ಎಲ್ಲೆಲ್ಲೂ ಹರಡಿದೆ. ಆದ್ದರಿಂದಲೇ ಸಣ್ಣ ಪುಟ್ಟ ರಾಷ್ಟ್ರಗಳು ಸಹ ತಮ್ಮ ಸ್ವಸಂರಕ್ಷಣೆಗೋಸ್ಕರ ಶಕ್ತಿಮೀರಿ ಧನ ವ್ಯಯ ಮಾಡಿ ಯುದ್ಧ ಸಾಮಗ್ರಿಗಳನ್ನು ತಯಾರುಗೊಳಿಸುತ್ತಿವೆ. ಇಂಥಾ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಈಗ ಜನಾಂಗ ಕೂಟವು ತನ್ನ ಅಧಿಕಾರವನ್ನು ಚಲಾಯಿಸಲು ಯತ್ನಿಸುತ್ತಿದೆ. ಆದರೆ 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ?' ಎಂಬ ನಾಣ್ಣುಡಿಯಂತೆ ಈ ವರೆಗೆ ಪರರಾಷ್ಟ್ರಗಳು ಅಬಲ ರಾಷ್ಟ್ರಗಳ ಆಕ್ರಮಣ ಮಾಡುವ ಕಾಲಕ್ಕೆ ತನ್ನ ಅಧಿಕಾರ ದರ್ಪದಿಂದ ಅದನ್ನು ಬಹಿಷ್ಕರಿಸದೆ ನಿರ್ಲಕ್ಷಿಸಿದ ಜನಾಂಗಗಳ ಕೂಟಕ್ಕೆ ಜರ್ಮನಿಯ ಅಧಿಕಾರಿ ಹಿಟ್ಲರನನ್ನೂ, ಇಟೆಲಿಯ ಮುಸಲೋನಿಯನ್ನೂ ಈಗ ತಮ್ಮ ಶಾಂತಿಸಾಧಕತ್ವದಿಂದ ಹದ ಮಾಡುವದು ಸುಲಭವಾದ ಕೆಲಸವಲ್ಲ. ಆದ್ದರಿಂದ ಯುದ್ಧವು ಅನಿವಾರ್ಯವೆಂದೆನ್ನಬಹುದು. ಹೀಗೆ ಯುದ್ಧವು ಪ್ರಾರಂಭವಾದರೆ ಅನೇಕ ರಾಷ್ಟ್ರಗಳು ಇದರಲ್ಲಿ ಭಾಗ ವಹಿಸಬೇಕಾಗುವುದರಿಂದ ಇದು ಘೋರ ಯುದ್ಧವಾಗಿಯೇ ಪರಿಣಮಿಸುವುದು. ಈ ಪರಿಣಾಮವಾಗಿ ರಾಷ್ಟ್ರಗಳು ಎಂದಿನಂತೆ ತಮ್ಮ ಅಧೋಗತಿಗೆ ಬರಬೇಕಾಗುವುದು.

ಝೆಕೊಸ್ಲೊವಾಕಿಯ.

ದೇಶಪ್ರೇಮದಿಂದ ತುಂಬಿ ತುಳುಕುತ್ತಿರುವ ರಾಷ್ಟ್ರ.

ಇಂದಿನ ವಾತಾವರಣದಲ್ಲಿ ಝೆಕೊಸ್ಲೊವಾಕಿಯಾದ ಹೆಸರು ಪ್ರತಿಯೊಬ್ಬನ ಕಿವಿಗೂ ಮುಟ್ಟಿರುವುದು. ಹೀಗೆ ಇದಕ್ಕೆ ಪ್ರಾಮುಖ್ಯತೆ ಬರಲು ಕಾರಣವೇನೆಂದು ಎಲ್ಲರಿಗೂ ವಿದಿತವಿರುವದು. ಝೆಕೊಸ್ಲೊವಾಕಿಯಾದ ಸ್ಥಿತಿ ಇಂದು ಹೇಗಿದೆ, ಎಂಬ ವಿಚಾರ ಈ ಪುಟ್ಟಲೇಖನಿಯಲ್ಲಿ ವಿವರಿಸಲಾಗಿದೆ.

1917ನೇ ಅಕ್ಟೋಬರ್ 28ರಲ್ಲಿ ಈ ರಾಜ್ಯವು ಸ್ಥಾಪಿತವಾಯಿತು. ಇದು ಇಂಗ್ಲೆಂಡ್ ಮತ್ತು ಸ್ಕಾಟ್ಲೇಂಡಿನಷ್ಟು ವಿಸ್ತಾರವುಳ್ಳದ್ದಾಗಿ ಪ್ರಜಾಪ್ರಭುತ್ವವುಳ್ಳ ಸ್ವತಂತ್ರ ರಾಷ್ಟ್ರವಾಗಿದೆ. ಅದರಲ್ಲಿ ಒಟ್ಟು 30 ಲಕ್ಷ ಸುಡೆಟನರೆಂಬ ಜರ್ಮನರಿರುವರು. ಅನಾದಿ ಕಾಲದಿಂದಲೂ ಇಲ್ಲಿಯ ಜರ್ಮನರಿಗೂ-ಝೆಕ್ಕರಿಗೂ ಅವಿಚ್ಛಿನ್ನವಾದ ನಿಕಟ ಸಂಬಂಧವು ಇರುವದು. ಕಳೆದ ಘೋರ ಸಮರದ ನಂತರ ಒಪ್ಪಂದವಾದ ಮೇಲೆ ಝೆಕ್ಕರು ತಮ್ಮ ದೇಶದಲ್ಲಿರುವ ಅಲ್ಪ ಸಂಖ್ಯಾಕ ಜನಾಂಗಗಳಿಗೆ ವಿಶೇಷ ಸ್ವಾತಂತ್ರ್ಯಾನುಕೂಲಗಳನ್ನು ಕೊಟ್ಟಿತು. ಯೂರೋಪಿನ ಇತರ ರಾಷ್ಟ್ರಗಳಲ್ಲಿಯ ಅಲ್ಪ ಸಂಖ್ಯಾಕ ಜನಾಂಗಗಳಿಗೆ ಸಿಕ್ಕಿದ ರಿಯಾಯಿತಿಗಳಿಗಿಂತ ಝೆಕೊಸ್ಲೊವೇಕಿಯಾವು ಅಲ್ಲಿಯ ಜನಾಂಗಗಳಿಗೆ ಕೊಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಹೀಗಿರುತ್ತಾ ಇಂದು ಆ ಸುಡೆಟನರು ಸ್ವಾಸಹ ಹೆಚ್ಚು ಸುಧಾರಣೆಗಳನ್ನು ಕೇಳುವುದರ ಅರ್ಥವೇನು? ಹಿಟ್ಲರನು ಇದರಲ್ಲಿ ಇಷ್ಟು ಆಸಕ್ತಿಯನ್ನು ತೋರಿಸಲು ಕಾರಣವೇನೆಂಬುವುದು ನಮ್ಮ ವಾಚಕ ಮಹಾಶಯರಿಗೆ ತಿಳಿದೇ ಇರುವದು. ಅಪರೋಕ್ಷವಾಗಿ ಸುಡೆಟನರನ್ನು ಒಲ್ಲೈಸಿ ಝೆಕ್ಕರೊಡನೆ ಆತಂಕಲಹವನ್ನೆಬ್ಬಿಸಿ ಈ ಕಾರಣದಿಂದ ಸುಡೆಟನರ ಸಹಾಯಕ್ಕೆ ಬಂದು ಝೆಕೊಸ್ಲೊವೇಕಿಯವನ್ನು ಮುರಿದು ತನ್ನ ಅಧಿಕಾರಕ್ಕೆ ಒಳಪಡಿಸಬೇಕೆಂಬುವುದೇ ಹಿಟ್ಲರನ ಇಚ್ಛೆ ಎನ್ನಬಹುದು.

ಝೆಕೊಸ್ಲೊವೇಕಿಯವು ಯೂರೋಪಿನ ಮಧ್ಯಸ್ಥಳದಲ್ಲಿರುವುದರಿಂದ ಹಿಟ್ಲರನ ಕಾಂಕ್ಷೆಯು ಹೀಗಾಗುವುದಾದರೆ ಝೆಕೊಸ್ಲೊವಾಕಿಯಾದ ಸಮಸ್ಯೆಯು ಇಡೀ ಯೂರೋಪಿನ ಸಮಸ್ಯೆಯಾಗಿ ಪರಿಣಮಿಸುವುದು. ಝೆಕೊಸ್ಲೊವಾಕಿಯವು ಸ್ವತಃ ಬಲಯುತವಾದ ರಾಷ್ಟ್ರ. ತನ್ನ ರಕ್ಷಣೆಗಾಗಿ ಅದು ಅನೇಕಾನೇಕ ಆಧುನಿಕ ಯುದ್ಧೋಪಕರಣಗಳನ್ನು ಸಂಗ್ರಹಿಸಿಟ್ಟಿದೆ. ತನ್ನ ರಾಜ್ಯದ ಪ್ರಜೆಗಳಿಗೆ ಸೈನ್ಯ ತರಬೇತನ್ನು ಕೊಟ್ಟಿದೆ. ಝೆಕೊಸ್ಲೊವಾಕಿಯಾದ ತರುಣಿಯರು ತಮ್ಮ ಸಂಘಟನೆ ಮಾಡಿಕೊಂಡು ಯುದ್ಧ ಶಾಸ್ತ್ರವನ್ನಭ್ಯಾಸಮಾಡಿ ಇಂದು ಬಲಯುತವೂ, ಅಭೇದ್ಯವೂ ಆದ ಸೈನ್ಯವನ್ನು ರಚಿಸಿರುವರು. ಹೀಗೆ ತಮ್ಮ ರಾಷ್ಟ್ರದ ಹಿತಚಿಂತನೆಗೆ ತಮ್ಮ ರಕ್ತ ಧಾರೆಗಳನ್ನು ಸುರಿಸಲು ತಯಾರಿರುವ ಝೆಕ್ಕರ ನಿಶ್ಚಯವನ್ನು ಕಂಡು ಯಾವ ರಾಷ್ಟ್ರವಾದರೂ ಬೆರಗಾಗದಿರದು. ಇಂಥಾ ಸೈನ್ಯ ಸಂಘಟನೆ ಇರುವದರಿಂದಲೇ ಝೆಕೊಸ್ಲೊವಾಕಿಯಾವು ತನ್ನ ಇಂದಿನ ರಕ್ಷಣಗಾಗಿ ತನ್ನ ಮೈತ್ರಿಯ ರಾಷ್ಟ್ರಗಳ ಮೇಲೆ ಜವಾಬ್ದಾರಿಯನ್ನು ಹಾಕುವ ಆವಶ್ಯಕತೆ ಇರುವುದಿಲ್ಲ.

'ಝೆಕೊಸ್ಲೊವೇಕಿಯಾದ ಸೈನ್ಯ ಬಲವು ಬ್ರಿಟಿಷ್ ಸೈನ್ಯ ಬಲದ ಮೂರರಷ್ಟು ಬಲಶಾಲಿಯಾಗಿರುವುದಲ್ಲದೆ ಇಟೆಲಿಯ ಮೂರರಷ್ಟು ಸಂಗ್ರಾಮ ಸಲಕರಣೆಗಳನ್ನೊಳಗೊಂಡದ್ದಾಗಿದೆ' ಎಂದು ಶ್ರೀ. ವಿನ್‌ಸ್ಟನರು ಮೊನ್ನೆ ಈ ನೇ ತಿಳಿಸಿರುವರು. ಆದ್ದರಿಂದ ಝೆಕೊಸ್ಲೊವೇಕಿಯಾವು ಜರ್ಮನರ ಬಾಯಿ ಮಾತಿಗೆ ಹೆದರಿ ಹಿಂಜರಿಯಲಾರದು. ಅದನ್ನು ನಡೆಬಡಿಯುವದು ಜರ್ಮನರಿಗೆ ಸುಲಭಸಾಧ್ಯವೇನೂ ಅಲ್ಲ. ಏನೆಂದರೂ ಕಮ್ಮಿ ಪಕ್ಷ 30 ಲಕ್ಷ ಜನರನ್ನು ಬಲಿಕೊಡದೆ ಝೆಕ್ಕರನ್ನು ಬಗ್ಗು ಬಡೆಯುವದು ಅಸಾಧ್ಯ.

ಝೆಕೊಸ್ಲೊವಾಕಿಯಾವು ಸಂಗ್ರಾಮ ಕೈಗಾರಿಕೆಯನ್ನು ಸ್ವತಃ ಮಾಡಿಕೊಳ್ಳಬಲ್ಲುದು. ಈ ಕೈಗಾರಿಕೆಯಲ್ಲಿ ಇದು ಇಟೆಲಿಯನ್ನು ಮೀರಿಸಿದೆ. ರಷ್ಯಾವನ್ನು ಬಿಟ್ಟರೆ ಯೂರೋಪಿನ ಆರು ಮುಖ್ಯ ಕೈಗಾರಿಕೋದ್ಯಮ ಕೇಂದ್ರಗಳೊಳ್ಳೊಂದಾಗಿದೆ. ಹೀಗಿರುವದರಿಂದ ಜರ್ಮನಿಯು ವಿವೇಚಿಸದೆ ರಣರಂಗಕ್ಕೆ ಧುಮುಕಿದರೆ ಅದರಿಗೆ ಕೇಡಾಗದಿರದು. ಝೆಕೊಸ್ಲೊವಾಕಿಯವು ಸಣ್ಣ ರಾಷ್ಟ್ರವಾದರೂ ತನ್ನ ನಿಶ್ಚಲವಾದ ದೇಶಪ್ರೇಮದ ಪ್ರೇರಣೆಯಿಂದ ಇಂದು ಮಹಾ ಬಲಯುತವಾದ ಜರ್ಮನಿಯನ್ನು ಲಕ್ಷ್ಯಕ್ಕೆ ತಾರದೆ ಸ್ಥಿರವಾಗಿರುವದು.

ಯೂನಾನಿ ಫಾರ್ಮಸಿಯ ಉತ್ತಮ ಔಷಧಿಗಳು.

ಉಬ್ಬಸ ಸಂಹಾರಿ (Asthma cure) ಕೆಲವು ದಿನಗಳ ಸೇವನೆಯಿಂದ ಉಬ್ಬಸವನ್ನು ಖಾತ್ರಿಯಾಗಿ ಗುಣಪಡಿಸುತ್ತದೆ. 40 ದಿನದ ಔಷಧಿಗೆ ಕ್ರಯ ರೂ. 5—12—0.

ಅಂಬರ್ ಕೂದಲೆಣ್ಣೆ, ಸುಗಂಧಯುಕ್ತ ಆಮ್ಲಕೇಶ ತೈಲ ಅಲ್ಲದೆ ಎಲ್ಲಾ ರೋಗಗಳಿಗೂ ರಾಮಬಾಣದಂತಿರುವ ಮಾತ್ರೆಗಳೂ, ಚೂರ್ಣಗಳೂ, ಲೇಹಗಳೂ, ತೈಲಗಳೂ ಮತ್ತು ಕೇಶ ತೈಲಗಳೂ ಸಹ ತಯಾರಿರುವುವು.

ಬೇಗನೆ ಬರೆಯಿರಿ:—

ಯಂ. ಯಂ. ಸಿದ್ದೀಕ್,
ಪ್ರೊಪ್ರೈಟರ್,
ಯುನಾನಿ ಔಷಧಶಾಲಾ, ಮಡಿಕೇರಿ, ಕೊಡಗು.

29

ಏನು ದೇವದತ್ತ, ಕಾಯಿಲೆಯು ಸಂಪೂರ್ಣ ವಾಸಿಯಾಯಿತೇ ?

ದೇವದತ್ತ–ಈಗ ಒಂದು ವಾರದಿಂದ ಜ್ವರವೇನೂ ಇಲ್ಲ. ಆದರೆ ಶರೀರವು ಬಹು ಕ್ಷೀಣವಾಗಿರುವುದರಿಂದ ಆರೋಗ್ಯ ಸಂಪಾದನೆಯ ಸಲುವಾಗಿ ಸ್ವಲ್ಪ ವಿರಾಮ ತೆಗೆದುಕೊಂಡೆನು. ಶಾಲೆಗೆ ಗೈರಾಜರಾದುದಕ್ಕೆ ಕ್ಷಮಿಸಬೇಕು.

ಉಪಾಧ್ಯಾಯರು–ಕ್ಷಮಿಸಿಯೇ ಇರುವೆನು. ಸ್ಕಾಲರ್ ಶಿಪ್ಪಿಗೆ ಅರ್ಜಿ ಬರೆದೆಯೊ ?

ದೇವದತ್ತ–ಇಲ್ಲ, ಅದರ ಸಂಗತಿಯೇ ನನಗೆ ತಿಳಿಯದು.

ಉಪಾಧ್ಯಾಯರು–ಚಾರುದತ್ತನು ತಿಳಿಸಲಿಲ್ಲವೆ ಅವನು ಆ ದಿನಸವೇ ಬಂದು ನೋಡಿ ಹೋದನಲ್ಲಾ. ಬಹುಶಃ ಅವನು ನಿನ್ನನ್ನು ಕಾಣಲಿಲ್ಲವೇನೊ?

ದೇವದತ್ತ–ಇಲ್ಲ ಬಂದಿದ್ದನು. ಆವನು ರಾಜಧಾನಿಗೆ ಹೋಗುವುದಕ್ಕೆ ಒಂದು ದಿವಸಕ್ಕೆ ಮೊದಲು ನನ್ನನ್ನು ಬೀಳ್ಕೊಳ್ಳಲು ಬಂದಿದ್ದನು. ಆದರೆ 'ನಾನು ಶಾಲೆಗೆ ಹೋಗಲೇ ಇಲ್ಲವೆ'ಂಬದಾಗಿ ಹೇಳಿದನು. ಅಷ್ಟರಲ್ಲಿ ಒಬ್ಬ ಅಪರಿಚಿತ ಗೃಹಸ್ಥನು ಆಫೀಸಿಗೆ ಬಂದುದರಿಂದ, ದೇವದತ್ತನು ಹೊರಗೆ ದಾಟಿದನು. ಆ ಕೂಡಲೆ ಶಾಲಾ ಗಂಟೆಯಾದುದರಿಂದ ದೇವದತ್ತನು ಕ್ಲಾಸಿಗೆ ಹೋದನು.

ಕ್ಲಾಸಿನ ಹೊಸ್ತಿಲನ್ನು ದಾಟುತ್ತಲೇ ಆವನ ಸಂಗಾತಿಗಳು ಆವನನ್ನು ಬಹು ಆನಂದದಿಂದ ಇದಿರುಗೊಂಡರು. ಅಷ್ಟರಲ್ಲಿ ಶಾಲಾ ಮುಖ್ಯೋಪಾಧ್ಯಾಯರು ಒಬ್ಬ ಗೃಹಸ್ಥನನ್ನೂ, ಒಬ್ಬ ಹುಡುಗಿಯನ್ನೂ ಕರೆದುಕೊಂಡು ಕ್ಲಾಸಿಗೆ ಪ್ರವೇಶಿಸಿದರು. ಹುಡುಗರೆಲ್ಲಾ ಶಾಲಾ ಮರ್ಯಾದೆಗನುಸಾರವಾಗಿ ಎದ್ದು ನಿಂತರು. ಉಪಾಧ್ಯಾಯರು ಅವರನ್ನೆಲ್ಲಾ ಕುಳ್ಳಿರಲು ಅಪ್ಪಣೆ ಇತ್ತು, ಆ ಯುವತಿಗೆ ಒಂದು ಪ್ರತ್ಯೇಕಾಸನವನ್ನು ತೋರಿಸಿ, ಬಂದಿದ್ದ ಗೃಹಸ್ಥನಿಗೆ 'ಇದು ಫೋರ್ಥ್ ಫಾರಂ' ಎಂದು ಹೇಳಿ ಗೃಹಸ್ಥನೊಡನೆ ಇತರ ತರಗತಿಗಳನ್ನು ಸಂದರ್ಶಿಸಲು ಹೊರಟು ಹೋದರು.

ಪೂರ್ವೋಕ್ತ ಹುಡುಗಿಯ ಪ್ರಥಮಾಗಮನವು ಶಾಲೆಯಲ್ಲೆಲ್ಲಾ ವಿದ್ಯುಚ್ಛಕ್ತಿಯೋಪಾದಿಯಲ್ಲಿ ಹರಡಿದು. ಅವಳು ಸೇರಿದ ನಾಲ್ಕನೆ ತರಗತಿಯಲ್ಲಂತೂ ಅವಳ ಆಗಮನದಿಂದಾದ ಮಾರ್ಪಾಡು ವಿವರಿಸಲಶಕ್ಯವಾಗಿತ್ತು.

ಕೆಲವು ಹುಡುಗರು ಅವರ ಟೋಪಿಗಳನ್ನು ತೆಗೆದು ಟೈಕಾಲರಗಳನ್ನು ಸರಿಮಾಡಿಕೊಳ್ಳತೊಡಗಿದರು. ಒಬ್ಬನು ತನನ್ನು ಖಿನ್ನನಾಗಿ ಬೆಂಚಿನ ಮೇಲೆ ನಿಂತು, ದೂರದ ಬೆಂಚಿನಲ್ಲಿ ಕೂತಿದ್ದ ಇನ್ನೊಬ್ಬ ಸಂಗಾತಿಯನ್ನು ಬಲವಾಗಿ ಕರೆದು ತನಗವಶ್ಯವಿಲ್ಲದ ಒಂದು ಪುಸ್ತಕವನ್ನು ಕೇಳಿದನು. ಇನ್ನೊಬ್ಬನು ತನ್ನ ಸಮೀಪದ ವಿದ್ಯಾರ್ಥಿಯೊಬ್ಬನನ್ನು ಆಂಗ್ಲಭಾಷೆಯಲ್ಲಿ ಗಟ್ಟಿಯಾಗಿ ಬೈಯುತ್ತಾ, ಆಗಂತುಕಳ ಮುಖವನ್ನೇ ದೃಷ್ಟಿಸುತ್ತಾ ಅವನ ಕೆನ್ನೆಗೆ ಬಲವಾಗಿ ಹೊಡೆದನು. ಪೆಟ್ಟು ತಿಂದವನಿಗೆ ಹೊಸ ವಿದ್ಯಾರ್ಥಿನಿಯ ಮುಂದೆ ನಡೆದ

ದೇವದತ್ತ.

ಸಾಮಾಜಿಕ ಕಾದಂಬರಿ.

ಅಧ್ಯಾಯ ೫.

ದರಿಂದ ನಾಚಿಕೆಯು ಇಮ್ಮಡಿಯಾಯಿತು. ಅವನು ತನ್ನ ಸ್ಥಿತಿಯನ್ನು ಸರಿಮಾಡಿಕೊಳ್ಳಲು ಹೊಡೆದವನಿಗೆ ಒಂದು ಬಲವಾದ ಪೆಟ್ಟನ್ನು ಇತ್ತನು. ಆದರೆ ಶತ್ರುವು ತನಗಿಂತಲೂ ಬಲವಂತನಿದ್ದ ಕಾರಣ, ಅವನ ಪೆಟ್ಟನ್ನು ದಾರಿಯಲ್ಲೇ ತಡೆದು, ತಿರಸ್ಕಾರವಾಗಿ ನಕ್ಕು, ಅವನ ಕೈಗಳೆರಡನ್ನೂ ಹಿಡಿದು ಪುನಃ ನಾಲ್ಕಾರು ಹೊಡೆದನು. ಮತ್ತೊಬ್ಬ ವಿದ್ಯಾರ್ಥಿಯು ತನ್ನ ನೆರೆ ವಿದ್ಯಾರ್ಥಿಯ ಟೊಪ್ಪಿಯನ್ನು ತೆಗೆದು, ಉಪಾಧ್ಯಾಯರ ಮೇಜಿನ ಮೇಲೆ ಎಸೆದನು. ಇನ್ನೊಬ್ಬನು ಎದ್ದು ನಿಂತು ಸೈಲೆನ್ಸ್ (silence) ಎಂದು ಗಟ್ಟಿಯಾಗಿ ಹೇಳಿ ಕುಳಿತುಕೊಂಡನು. ಈ ಅನೇಕ ತರಹದ ಚೇಷ್ಟೆಗಳನ್ನು ನಡಿಸುತ್ತಿದ್ದವರ ದೃಷ್ಟಿಯೆಲ್ಲಾ, ಆ ಹೊಸ ವಿದ್ಯಾರ್ಥಿನಿಯ ಮುಖದ ಮೇಲೆಯೇ ಇತ್ತು.

ಕೆಲವರು ಬಹು ಸಾಧು ಸಜ್ಜನರಂತೆ ನಟಿಸುತ್ತಾ, ಓದುಗಾರಿಕೆಯಲ್ಲೇ ನಿರತರಾಗಿದ್ದರು. ಆದರೆ ಅವರು ಏನು ಓದುತ್ತಿದ್ದರೆಂಬುವುದು ಅವರಿಗೇನೇ ತಿಳಿಯುತ್ತಿತ್ತೋ ಏನೊ, ಯಾರಿಂದಲೂ ಹೇಳಲು ಸಾಧ್ಯವಿಲ್ಲ. ಆದರೆ ಯಾರೊಬ್ಬನೂ ತಾನು ತೆರೆದಿಟ್ಟಿದ್ದ ಹಾಳೆಯನ್ನು ಗಂಟೆ ಅಂತ್ಯವಾಗುವ ವರೆಗೂ ಪೂರ್ತಿಮಾಡಿ ಮಗುಚಿದ್ದು ಕಂಡು ಬರಲಿಲ್ಲ. ಪ್ರತಿ ನಿಮಿಷಕೊಮ್ಮೆ ಪ್ರತಿಯೊಬ್ಬನು ತನ್ನ ಸಂಗಾತಿಗಳಿಗೆ 'ಮಾತಾಡಬೇಡಿ, ಯಾತಕ್ಕೆ ಓದುವವರನ್ನು ತೊಂದರೆಗೊಳಿಸುವುದು' ಎಂದು ಹೇಳುವ ನಿಮಿತ್ತ, ತಮ್ಮ ದೃಷ್ಟಿಯನ್ನು ಮೇಲಕ್ಕೆತ್ತಿ ಹಾಗೆಯೇ ಹೊಸ ವಿದ್ಯಾರ್ಥಿನಿಯ ಮುಖವನ್ನೊಮ್ಮೆ ನೋಡಿ ಪುನಃ ಮನಸ್ಸಿಲ್ಲದ ತಮ್ಮ ದೃಷ್ಟಿಯನ್ನು ಪುಸ್ತಕದ ಮೇಲೆ ನೆಡಲು ಪ್ರಯತ್ನಿಸುತ್ತಿದ್ದರು.

ಈ ಮಧ್ಯೆ ದೇವದತ್ತನು–ಶಾಲಾ ಮುಖ್ಯೋಪಾಧ್ಯಾಯನಿಂದ ಕರೆಯಲ್ಪಟ್ಟು ಆಫೀಸಿಗೆ ಹೋದನು. ನವಬಾಲಿಕೆಯ ಪ್ರಥಮ ಸಂದರ್ಶನವೇ, ಕದಲದೆ ಶಟಿಸವಾಗಿದ್ದ ದೇವದತ್ತನ ಮನಸ್ಸನ್ನು ಒಂದು ರೀತಿಯಲ್ಲಿ ಕದಲಿಸಿತು. ಅಷ್ಟರ ವರೆಗೆ ಆತನು ಎಷ್ಟೊ ಹುಡುಗಿಯರನ್ನು ನೋಡಿದ್ದನು. ಅವರೊಡನೆ ಮಾತಾಡುವುದಾಗಲೀ, ಆಡುವುದಾಗಲೀ ಅವನಿಗೆ ಒಗ್ಗುತ್ತಿರಲಿಲ್ಲ. ಅದರ ಮೇಲೂ, ಆ ಶಾಲೆಯಲ್ಲಿ ತಾನಿದ್ದ ಕ್ಲಾಸೊಂದರಲ್ಲಲ್ಲದೆ ಇತರ ತರಗತಿಗಳಲ್ಲಿ ಅನೇಕ ವಿದ್ಯಾರ್ಥಿನಿಯರಿದ್ದರು. ಅವರ್ಯಾರ ನಡವಳಿಕೆಯೂ ಇವನ ಮನಸ್ಸಿನಲ್ಲಿ ಏನೊಂದು ತರಹದ ಮಾರ್ಪಾಡನ್ನು ಮಾಡಿರಲಿಲ್ಲ. ಆದರೆ ಈ ದಿವಸ ಆ ಬಾಲೆಯ ಆಗಮನವು ಅವನ ಅಂತರ್ಯದಲ್ಲಿ ಒಂದು ವಿಶೇಷ ತರದ ಕಲ್ಪನೆಯನ್ನುಂಟುಮಾಡಿತು.

ಇವನು ಆಫೀಸಿಗೆ ಹೋದನು. ಅಲ್ಲಿ ಉಪಾಧ್ಯಾಯರು ಆ ದಿವಸ ಅವರಾನ ನಡೆಯಬೇಕಾಗಿದ್ದ ಶಾಲಾ ಕೂಟದ ವಿಷಯ ಅನೇಕ ಪ್ರಶ್ನೆಗಳನ್ನು ಕೇಳಿದರು. ಪ್ರಾರಂಭದಲ್ಲಿ ದೇವದತ್ತನು ಆ ಅಲ್ಪ ಪ್ರಶ್ನೆಗಳಿಗೂ ಸಹ ಯೋಚಿಸಿ ಉತ್ತರವೀಯುತ್ತಿದ್ದನು. ಆ ಮೇಲೆ ತನ್ನ ಸ್ಥಿತಿಯನ್ನು ಸರಿಪಡಿಸಿಕೊಂಡು, ಉಪಾಧ್ಯಾಯರೊಡನೆ ಮಾಡಬೇಕಾಗಿದ್ದ ಕೆಲಸವನ್ನು ತೀರಿಸಿ ಕ್ಲಾಸಿಗೆ ಬಂದನು.

ಬರುವಾಗಲೆಲ್ಲಾ ಆ ವಿದ್ಯಾರ್ಥಿನಿಯ ಮುಖವೇ ಅವನ ಕಣ್ಣುಗಳ ಮುಂದೆ ಪ್ರತಿಬಿಂಬಿಸಿದಂತೆ ಕಾಣುತ್ತಿತ್ತು. ಅವಳನ್ನೊಮ್ಮೆ ನೋಡಲು ಅತ್ಯಾತುರವುಳ್ಳವನಾಗಿ ಕ್ಲಾಸಿಗೆ ಪ್ರವೇಶಿಸಿದನು. ಆ ಯುವತಿಯು ಬಾಗಿಲಿನ ಬದಿಯಲ್ಲಿ ಕುಳಿತ್ತಿದ್ದಳು. ನೆರಳು ಕ್ಲಾಸಿಗೆ ಬಿದ್ದುದನ್ನು ನೋಡಿ ಯಾರು ಬಂದವರು ಎಂಬದಾಗಿ ಅವಳು ಕತ್ತೆತ್ತಿ ಬಾಗಿಲ ಕಡೆ ನೋಡಿದಳು. ದೇವದತ್ತನ ಆತುರದ ಕಣ್ಣುಗಳ ಕುತೂಹಲವು ಫಲಕಾರಿಯಾದವು. ಇಬ್ಬರು ನಾಚಿಕೆಯಿಂದ ಮುಖಗಳನ್ನು ತಿರುಗಿಸಿದರು. ದೇವದತ್ತನು ತನ್ನ ಆಸನದಲ್ಲಿ ಕುಳಿತನು. ಆದರೆ ದೈವವಶಾತ್ ಅವಳ ಆಸನವು ದೇವದತ್ತನ ಆಸನಕ್ಕೆ ಎದುರಾಗಿಯೇ ಇತ್ತು. ಅವನು ಕತ್ತೆತ್ತಿದನೆಂದರೆ ಅವಳ ಮುಖವನ್ನೇ ನೋಡಬೇಕಾಗಿದ್ದಿತು. ಅವಳ ಸ್ಥಿತಿಯು ಸಹ ಈ ಅವಸ್ಥೆಗೆ ಒಳಪಟ್ಟಿತ್ತು.

ನಮ್ಮ ಶಾಲೆಗೆ ಈ ದಿವಸ ಬಂದ ವಿದ್ಯಾರ್ಥಿನಿಯ ಹೆಸರು ಕಮಲೆ. ಈಗ ತಾನೆ ಅರಸು ಪುರಕ್ಕೆ ಸಬ್ ಜಡ್ಜಿಯಾಗಿ ವರ್ಗಾಯಿಸಲ್ಪಟ್ಟಿದ್ದ ಹರೇಂದ್ರನಾಥರ ಒಂಟಿ ಮಗಳು.

ಕಮಲೆಗೆ ಸುಮಾರು ಹದಿನಾಲ್ಕು ವರ್ಷ ಪ್ರಾಯವಿರಬಹುದು. ನೋಡಲು ಬಹು ರೂಪವತಿ. ಅವಳ ಅಮೂಲ್ಯ ವಸ್ತ್ರಾಲಂಕಾರಗಳು, ಅವಳ ಸ್ವಾಭಾವಿಕ ಲಕ್ಷಣಗಳನ್ನು ಇಮ್ಮಡಿಸುವಂತಿದ್ದವು. ಅವಳು ತನ್ನ ವಯಸ್ಸಿಗಿಂತಲೂ ಮೀರಿದ ಶರೀರ ದಾರ್ಢ್ಯವುಳ್ಳವಳಾಗಿದ್ದಳು. ವಿದ್ಯೆಯಲ್ಲೂ ಬಹು ಮುಂದಾಗಿದ್ದಳು. ಅನೇಕ ವರ್ಷಗಳ ವರೆಗೆ ಹರೇಂದ್ರನಾಥರಿಗೆ ಕಮಲೆಯಲ್ಲದೆ ಬೇರೆ ಮಕ್ಕಳಿರಲಿಲ್ಲ. ಕಮಲೆಯ ತಾಯಿಯು ಬಹು ವಿದ್ಯಾವಂತೆಯಾಗಿದ್ದುದರಿಂದ ಕಮಲೆಯನ್ನು ಮನೆಯಲ್ಲೇ ತರಬೇತುಮಾಡಿ ಅವಳ ಏಳನೆಯ ವಯಸ್ಸಿನಲ್ಲಿ ಪ್ರಥಮತ ಐದನೆ ತರಗತಿಗೆ ಸೇರಿಸಿದರು.

ಹುಟ್ಟಿದಾರಭ್ಯ ತಂದೆಯೊಡನೆ ನಗರದಲ್ಲಿ ಕಾನ್ವೆಂಟಿನಲ್ಲೇ, ಇದ್ದವಳಾದ ಕಾರಣ, ಕಮಲೆಗೆ, ನಾಡು ನಡವಳಿಕೆಗಳೇನೂ ಸರಿಯಾಗಿ ತಿಳಿದಿರಲಿಲ್ಲ. ಶಾಲೆಯ ಇತರ ಹುಡುಗಿಯರ ಹಾಗೆ ಅವಳು ಕ್ಲಾಸಿನಲ್ಲಿ ತಲೆಯನ್ನು ಬಗ್ಗಿಸಿಯೇ ಕೂರುತ್ತಿರಲಿಲ್ಲ. ಹುಡುಗರ ಹಾಗೆ ಕತ್ತೆತ್ತಿ ಕೂರುತ್ತಿದ್ದಳು. ಪಾಠವು ನಡೆಯುತ್ತಿದ್ದ ಹಾಗೆ ಏನಾದರೂ ಹಾಸ್ಯಾಸ್ಪದದ ಸಂಗತಿಗಳು ಬಂದವೆಂದರೆ ತನ್ನ ತರಗತಿಯ ಇತರ ಸಹೋದರರೊಡನೆ ಬಹಿರಂಗವಾಗಿ ನಗುತ್ತಿದ್ದಳು. ನಟನೆಯ ನಾಚಿಕೆಯನ್ನು ಅವಳೆಂದೂ ತೋರ್ಪಡಿಸುತ್ತಿರಲಿಲ್ಲ. ಪಾಠದ ಸಮಯದಲ್ಲಿ ಏನಾದರೂ ಅಂಶಗಳು ಅವಳಿಗೆ ತಿಳಿಯದೆ ಹೋದರೆ ಒಡನೆ ಎದ್ದು ನಿಂತು ಕೇಳುವಳು. ಉಪಾಧ್ಯಾಯರು ಏನಾದರೂ ಪ್ರಶ್ನೆ ಮಾಡಿದರೆ ಧೈರ್ಯವಾಗಿ ಅವರ ಮುಖವನ್ನೇ ನೋಡುತ್ತಿದ್ದಳು. ಉಪಾಧ್ಯಾಯರೇನಾದರೂ ಪ್ರಶ್ನಾಕರ್ತನನ್ನು ಹಿಯ್ಯಾಳಿಸಿದುದಾದರೆ, ಇತರರೊಡನೆ ತಾನೂ ನಗುವಳು.

ಇಷ್ಟಾದರೂ ಅವಳ ಮಾತುಗಳಲ್ಲಾಗಲೀ, ನಡವಳಿಕೆಯಲ್ಲಾಗಲೀ ಏನೊಂದು ತರಹದ ಅಸಭ್ಯಭಾವನೆಯ ಅಂಶಗಳು ಕಂಡು ಬರುತ್ತಿರಲಿಲ್ಲ. ಆಕೆಯು ತನ್ನ ಶಾಲಾ ಮಿತ್ರರೊಡನೆ ಅಷ್ಟು ಸಹೋದರ ಭಾವದಿಂದ ವರ್ತಿಸಿದರೂ, ಅವರಾರಿಗೂ, ಅವಳೊಡನೆ ಮೇರೆ ಮೀರಿ ವರ್ತಿಸಲು ಧೈರ್ಯಬರುತ್ತಿರಲಿಲ್ಲ. ಆಕೆಯ ನಡವಳಿಕೆಯು ಎಷ್ಟು ಸ್ನೇಹಭಾವದ್ದಾಗಿದ್ದರೂ ಸಹ ಅವರಲ್ಲಿ ಇತರರ ದೃಷ್ಟಿಗೆ ಅಗೋಚರವಾದ ಒಂದು ತರಹದ ಸ್ವಾಭಾವಿಕ ಗಂಭೀರ ಗುಣವಿತ್ತು. ಈ ಗುಪ್ತವಾದ ಗುಣದ ಮಹಿಮೆಯು ಆಕೆಯ ಪುರುಷ ಸಂಗಾತಿಗಳ ಮನಸ್ಸಿನಲ್ಲಿ ಆಕೆಯ ಮೇಲೆ ಒಂದು ತರಹದ, ಅಭಿಮಾನವನ್ನು ಹುಟ್ಟಿಸುತಿತ್ತಲ್ಲದೆ, ಆಕೆಯೊಡನೆ ಅಸಭ್ಯ ರೀತಿಯಲ್ಲಿ ವರ್ತಿಸಲು ತಡೆಯುತ್ತಿತ್ತು. ಎಲ್ಲಾ ವಿದ್ಯಾರ್ಥಿಗಳಿಗೂ ಆಕೆಯ ಮೇಲೆ ಮಹತ್ತರವಾದ ಪ್ರೇಮವಿತ್ತು.

ಕಮಲೆಯ ಆಗಮನವು ದೇವತ್ತನ ಜೀವನದಲ್ಲಿ ಒಂದು ತರಹದ ಮಾರ್ಪಾಡನ್ನೇ ಉಂಟು ಮಾಡಿತು. ಆಕೆಯ ಪ್ರಥಮ ಸಂದರ್ಶನವೇ ಅವನ ಮನಸ್ಸಿನಲಿ ಒಂದು ಅಸಾಧಾರಣವಾದ ನವೀನ ಭಾವನೆಯನ್ನು ಹುಟ್ಟಿಸಿತ್ತು. ಆ ದಿವಸವೆಲ್ಲಾ ಅವನ ಅಂತರ್ಯವನ್ನು ಒಂದು ತರಹದ ಹೇಳಲಸಾಧ್ಯವಾದ ಸಂತೋಷವು ಆವರಿಸಿದ್ದಿತು. ಆತನ ನಡತೆಯಲ್ಲೂ ಒಂದು ತರಹದ ಬದಲಾವಣೆಯು ಅಂಕುರಿಸಿತು.

ಡಾ. ಮೇತ್ಯುಸ್ ಎಬ್ರಹಾಮ್
ದಂತ ವೈದ್ಯರು.
(ಹಿಯರ್ಸ್‌ಲೆಸ್ಲಿ ಬಂಗ್ಲೆ)
(ಸ್ಪೆನ್ಸರ್ಸ್ ಹತ್ತಿರ)
ಮಡಿಕೇರಿ .

ಇಂಡಿಯಾದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ ಲಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52-15 ಬೆಂಗಳೂರು ಸಿಟಿ.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಸಾಧಾರಣವಾದ ಕೆಲಸ ಕಾರ್ಯಗಳನ್ನು ಮಾಡಿದೆ ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣಗಳನ್ನೊಳಗೊಂಡಿರುತ್ತದೆ

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರದ ಮೇರೆ 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಪತ್ರಗಳಿಗೆ 26ರಂತೆಯೂ ಬೋನಸು ಹಂಚಲಾಗಿದೆ

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪರೇಡ್, ಬೆಂಗಳೂರು.

52-29

೪೨ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೆ ಕಂಪನಿ

ಸುಪ್ರಸಿದ್ಧ ಜ್ವರದ ಗುಳಿಗೆ

ಇದು ಛಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ದಿನ ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ನಾನಾತರದ ಜ್ವರಗಳ ಮೇಲೆ ತತ್ಕ್ಷಣವೇ ಗುಣ ಸಂಜೀವಿನಿಯಂತಿದೆ! ಬಾಟ್ಲಿಗೆ 1 ರೂ 4 ಬಾಟ್ಲಿಗೆ 3 ರೂ 12 ಬಾಟ್ಲಿಗೆ 8 ರೂ ವಿ ಪಿ ಖರ್ಚು ಬೇರೆ.

ಗಣೇಶ ರಾಮಚಂದ್ರ ಕರ್ಕೆ.
ಮತ್ತು ಕಂಪನಿ,
(52-42) ಗಿರಗಾಂವ, ಮುಂಬಯಿ ೪,

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷದಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ ನಮ್ಮ ವೈದ್ಯ ಶಾಲೆಯು ಕಾಯಿಲಸ್ತರನು ಪರೀಕ್ಷಾ ಮಾಡಿ ಔಷಧಿ ಕೊಟ್ಟು ಕಲವು ಮಹನೀಯರಿಂದ ಸರ್ಟಿಫಿಕೇಟ್ ಪಡದಿರುತ್ತದ ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ 12 ವರ್ಷದ ಆಗಿ ಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ

ಜ್ವರ ಸಂಹಾರ ಸುದರ್ಶನ.

ಈ ಔಷದಿಯು ತ್ರಿದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ 13 ಪ್ರಕಾರದ ಸನ್ನಿಯನ್ನೂ, ಶೀತಜ್ವರ, ಮಾಲಾಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಾಲೆ, ಬಸ್ನೆಲುಬು, ಸೊಂಟ, ಮಂಡಿ, ಪಕ್ಕಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು

ಉಪಯೋಗದ ಕ್ರಮ.—ವೇದ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು 8 ಔನ್ಸುಗಳ ಬುಡ್ಡಿಗೆ ರೂ 1-0-0 ಟಪ್ಪಾಲು ಹಾಸಲು ಪ್ರತ್ಯೇಕ

11 ಸಿ ಹೆಚ್ ರಾಮಣ್ಣ ವೈದ್ಯರ್

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮಿ ಮುಕ್ಕಾಟಿರ ಜೋಯಪ್ಪನವರು
ಬಾಚಮ್ಮನ ಕರ್ತಮ್ಮನವರು

ಸಬ್ ಏಜೆಂಟರುಗಳು

ವೀರಾಜಪೇಟೆ—ಮಿ ಮುಂಡಂಡ ಸೋಮಯ್ಯನವರು.
ಮಿ ಕೆ ಯಂ ಸುಬ್ರಾಯನವರು
ಅಮ್ಮತ್ತಿ—ಸಿದ್ದಾಪುರ— ಮಿ ಐನಂಡ ಮಾದಪ್ಪನವರು
ಪೊನ್ನಂಪೇಟೆನಾಡು—ಮಿ ಪಿ ಕೆ ಮುದ್ದಮ್ಮಯ್ಯನವರು.
ಮಡಿಕೇರಿ—ಮಿ ಅಜ್ಜಮಾಡ ಮಾದಪ್ಪನವರು ಮತ್ತು ಮಿ ಕೆ ಮಾದಮ್ಮಯ್ಯನವರು.
ಸುಂಟಿಕೊಪ್ಪ—ಮಿ ಅಪ್ಪಚೆಟ್ಟೋಳಂಡ ಮಾಚಯ್ಯನವರು
ಸೋಮವಾರಪೇಟೆ—ಮಿ ಕೆ ಮೊಗಪ್ಪನವರು
ಶಾಪೋಕ್ಲು—ಮಿ ಚೆಪ್ಪುಡಿರ ಯಂ ಪೂಣಚ್ಚನವರು (ನಾಪೋಕ್ಲು ಸ್ಟೋರ್ಸ್)

ಸೂಚನೆ — ಪ್ರಿಂಟಾದ ರಶೀತಿ ತೆಗೆದುಕೊಳ್ಳದೆ ಯಾರೂ ಚಂದಾ ಕೊಡಕೂಡದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘದ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಕರಾರು, ಸ್ಟೋರ್ ಕೀಪರ್ ಬಾಂಡು ಮತ್ತು ನಾನಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ ದುಡ್ಡು ಬರಲಿಕ್ಕೆ ಸಂಭವವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಲ್ಲದೆ, ಮಕ್ಕಳ ಕೆಮ್ಮು. ನೆಗಡಿ, ಜ್ವರ, ಪಕ್ಕೆರೋಗಗಳಿಗೂ ಅಮೃತ. ಬೆಲೆ 0-4-0, 0-2 0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ 0-4-0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ.

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಪಡಿಸುವ ಅದ್ಭುತ ಶಕ್ತಿಯುಳ್ಳ ಮಾತ್ರೆ. ಬೆಲೆ 0-8-0, 0-4-0.

ಸುಕುಮಾರತೈಲ

25

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ಇಂತ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ. ಬೆಲೆ 1-0 0

ಪ್ರೊಪ್ರೈಟರ್-ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ ಪಂಡಿತ್.

ಉತ್ತಮ ಪ್ರಚಾರ! **ಜ್ಞಾನಭಂಡಾರ!!**

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22.
6 ತಿಂಗಳಿಗೆ—	,, 100.	,, 35.	,, 22.	,, 13
3 ತಿಂಗಳಿಗೆ—	,, 60.	,, 20.	,, 13.	,, 8.
1 ತಿಂಗಳಿಗೆ—	,, 25.	,, 10.	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

61 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮೆ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಎಲ್. ಎಫ್. ಸಿ. ವಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

ಮೆ. ಡಿ. ಶೇಷಾದ್ರಿ, ಅ. ಇನ್ಸ್‌ಪೆಕ್ಟರು, ಶಿವಮೊಗ್ಗಾ.

62-38

Printed & Published by P. I. Belliappa, at 'Kodagu' Press Mercara for 'Kodagu' Ltd.

Reg No. M. 1850

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಸಿ. ಐ. ಬೆಳ್ಯಪ್ಪ,

ತಾ. ೨೦—೯—೧೯೩೮.

ವಾರ್ಷಿಕ ಚಂದಾ ರೂ. ३-೮-೦

ಸಂಪುಟ ೧೮] [ಸಂಚಿಕೆ ೩೭

ನಿಮ್ಮ ಮುದ್ರಣ ಕೆಲಸಗಳನ್ನು "ಕೊಡಗು" ಪ್ರೆಸ್ಸಿನಲ್ಲೇ ಮುದ್ರಿಸಿರಿ.

The Bombay Life Assurance Company Ltd.

(Estd. 1908.)

45-47, Churchgate Street, Fort-Bombay.

Progress Proves its Popularity.

Year	Business in force	Claims Paid	Life Assurance Fund
1931	2,26,82,430	2,91,880	33,21,809
1933	3,07,98,435	3,54,008	50,04,871
1935	4,42,51,214	5,75,198	68,01,501
1937	6,04,70,594	6,00,918	98,68,232

Total Claims Paid Between 1909 and 1937—Rs. 50,22,576

BOMBAY LIFE is a purely India Concern Offering all that is best in Life Assurance.

To Insure or to Represent it pays you to consult us or our Branches—

KOCHIKAR & BROTHERS Ltd.,
Madras Branch Secretaries,
Post Box No. 337, Mount Road, MADRAS. [Phone No. 8248.]

9

Bombay Life Building Udipi	Gautam Nivas, Charni Road Girgaum, Bombay 4	Visweswarapuram Circle, Bangalore City	Puthivara Calicut	Car Street Mangalore	Ottapalam S. Malabar	Central Station Road Trivandrum

THE CANARA BANKING CORPORATION, UDIPI, Ltd.

(Incorporated in British India.)
Estd. 1906.

MEMBER: { RESERVE BANK OF INDIA, & BANKERS' CLEARING HOUSE, MADRAS.

Head Office: UDIPI, S. K.

Paid up Capital	.... Rs.	3,03,205
Reserves	....	3,88,842

Our Deposit Rates.

3 months	2½% p. a.
6 or 9 months	3 % p. a.
12 months	3½% p. a.
SHORT TERM	2 % p. a.

Branches.

1. Udipi, 2. Coondapoor, 3. Car Street, Mangalore, 4. Madras, 5 Shimoga, 6. Bunder, Mangalore, 7. Mercara, 8. Virarajendrapet, 8. Saklaspur, 10. Tellicherry. 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

BANKING BUSINESS OF EVERY DESCRIPTION TRANSACTED.

Udipi,
8th July 1938.

52-43

V. R. Kamath, B. A., LL. B.,
Manager.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ	ಆ	ಪೈ
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಬಂಡವಾಳ	-	45,770	0	0
ಜಮೆಯಿಂದ ಠೇವಣಾತಿ	-	2,17,311	5	4
ವಸೂಲಾದ ಕ್ಷೇಮನಿಧಿ	–	1,36,514	1	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	21,304	13	11
ಟ್ರಿಸ್ಟ್ ಡಿಪಾಜಿಟ್ಟು	–	35,699	5	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅದಕ್ಕೆ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ಟ್ರಿಸ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ ಇವರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕಿನ [illegible] ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು [illegible] ಟ್ರಿಸ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವವರನ್ನು ತಾ 1-4-1937 ರಲ್ಲಿ ಸಿಲ್ಲಿಸಿದ್ದನ್ನು ಪುನಃ ತಾ 1-9-1938ರಿಂದ ಹೊಂದಿಕೊಳ್ಳುವಂತೆ [illegible] ಮಾಡಿಸಲಾಗಿದೆ

ವರ್ಷಕ್ಕೊಂದಾವರ್ತಿ [illegible] ಆಡಿಟ್ [illegible] ಲೆಕ್ಕ ಆಡಿಟ್ ಮಾಡುತ್ತಾರೆ

ಪ್ರೆಸಿಡೆಂಟ್:—ಪಂದ್ಯಂಡ ಐ ಬೆಳ್ಯಪ್ಪನವರು ಎಂ ಎಲ್ ಸಿ
ಟ್ರೆಜರರ್—ಚೌರೀರ ಎ. ಮಂದಣ್ಣನವರು ಬಿ ಎ, ಬಿ ಎಲ್
ಸೆಕ್ರೆಟರಿ.—ಪುಲಿಯಂಡ ಜಿ ಐಯ್ಯಪ್ಪನವರು ಬಿ ಎ, ಬಿ ಎಲ್

ತಾ 1-9-1938 ———

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದೂಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—"ಲಕ್ಷ್ಮೀನಿವಾಸ್" ಬಿಲ್ಡಿಂಗ್ಸ್, ಕುಂದಾಪುರ, ದ. ಕ

ಪ್ರಕಟಣೆ.

ಕಷ್ಟಪಟ್ಟಲ್ಲಿ ಸಂಪಾದಿಸಿದ ಹಣವನ್ನು ಲಾಭದಾಯಿ ಯಾದ ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂಪಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊಮೊಸೀಷನ್ ಕ್ಯಾಷ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80, 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ಪೈಯಿತ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮುಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ಶಿರ್ಸಿ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-18

The Agricultural &
Industrial Bank Ltd

"ZANDU"

ಝಂಡೂರವರ	ಝಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ**	**ಕೇಸರಿ ಜೀವನ್**
ಇದು ರಕ್ತವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ	ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ
	ಝಂಡೂ ಆಯೋಡೈಸ್ಡ ಸೇರಸಪರಿಲ್ಲಾ
	ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯೂ, ಪೋರ್, ಪೆಟ್ಟಿನಿಂದ ಉಂಟಾದ ಗಾಯ, ವಿಸ್ಫೋಟಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು

ಕೆಟಲಾಗಿಗೆ ಬರೆಯಿರಿ, ಮುಫತ್ತಾಗಿ ಕಳುಹಿಸಲಾಗುತ್ತೆ

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್ ಎ ಎಂ ಎಸ್

(53 6) ಮತ್ತು ಆಯುರ್ವೇದ ಸಿದ್ಧಾಂತ

ವೀರಾಜಪೇಟೆಯ ಏಜಂಟರು-ಕೆ ಕೃಷ್ಣರಾವ್, ವೀರಾಜಪೇಟೆ (ದ. ಕೊಡಗು)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ'

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯುತ್ತಮವಾದ ವೀರ್ಯವರ್ಧಕ ರಸಾಯನ, ಸ್ವಪ್ನದೋಷ, [illegible]ರದ ಊಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಜಡ್ಡುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನು ರೋಗಗಳಿಂದಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ 2—8—0.

ಮಲೇರಿಯಾ ನಿವಾರಿಣಿ

ಇದು ಚಳಿ ಜ್ವರ, ಚಾತುರ್ಥಿ ಜ್ವರ, ದಿನ ಬಿಟ್ಟುಬರುವ ಜ್ವರ, ಮಲೇರಿಯಾ ಜ್ವರ, ಇನ್‌ಫ್ಲುಯೆಂಜಾ ಇತ್ಯಾದಿ ನಾನಾ ತರದ ಜ್ವರಗಳಿಗೆ ರಾಮಬಾಣ

ಬಾಟ್ಲಿ 1ರ ರೂ 1—8—0, ಸಣ್ಣ ಬಾಟ್ಲಿ ರೂ 0—13—0.

ಸ್ಪ್ಲೀನ್ ಮಿಕ್ಶ್ಚರ್

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಅಶಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ರಕ್ತವನ್ನು ಉಂಟುಮಾಡುವುದು ಬಾಟ್ಲಿ 1ರ ರೂ. 1—4—0

ಬಾಲಗ್ರಹ ಗುಟಿಕೆ

ಮಕ್ಕಳ ಕೆಮ್ಮು, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೊದಲಾದ ಕಷ್ಟಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0

ಎಲ್ಲಾ ನಮೂನೆಯ ಔಷಧಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ಮಂಗಳೂರು ಸ್ಟೋರ್ಸ್, ಮಡಿಕೇರಿ ವಿ. ಬಿ. **ಕಾಮತ್, ಮಡಿಕೇರಿ. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. ಸುಂದರ್ ಪ್ರಭು, ಸುಳ್ಯ** [13]

ವಿವಿಧ ವಿಚಾರ.

ಕುದುರೆಯು ಸವಾರಿ ಮೋಟಾರಲ್ಲಿ!

ಎಲ್ಲರೂ ಕುದುರೆಯ ಮೇಲೆ ಸವಾರಿ ಮಾಡಿದರೆ ಕುದುರೆ ಏತರ ಮೇಲೆ ಸವಾರಿ ಮಾಡಬೇಕು? ಈ ಪ್ರಶ್ನೆಗೆ ಉತ್ತರ ಕೊಡುವುದು ಕಷ್ಟವಾದರೂ ಇದಕ್ಕೆ ಉತ್ತರವು ಈಗ ದೊರೆತಿದೆ. 'ಬಿಟ್ ಬಿಟ್' ಎಂಬುವ ಷೆಟ್ಲೆಂಡ್ ಕುದುರೆ ಮರಿಯು ಇಂಗ್ಲೆಂಡಿನಲ್ಲೆಲ್ಲಾ ಅತ್ಯಂತ ಚಿಕ್ಕದಂತೆ! ಕೇವಲ 29 ಇಂಚು ಎತ್ತರ; ಹುಟ್ಟಿ ಆರು ವರ್ಷವಾದರೂ ಕೇವಲ ಕೆಲವು ಇಂಚುಗಳ ಬೆಳವಣಿಗೆ ಮಾತ್ರ ಕಂಡು ಬಂದಿದೆಯಂತೆ. ಇದು ಒಂದು ಮೋಟಾರಿನಲ್ಲಿ ಸವಾರಿ ಹೋಗುತ್ತದೆಯಂತೆ!

—o0o—

ನವಯುಗದ ಕುಂಭಕರ್ಣ!

ವಿಲಿಯಂ ಹರ್ಟ್‌ವಿಟ್ಜ್ ಎಂಬಾತನು ಲಂಡನ್ನಿನ ಮೋಟಾರು ಡ್ರೈವರುಗಳ ಪೈಕಿ ಒಬ್ಬನು. ಈತನು ಕಾರು ಬಿಟ್ಟು ಕೊಂಡು ಹೋಗುತ್ತಿದ್ದ, ಹಾಗೆಯೇ ನಿದ್ರಾದೇವಿಯು ಈತನ ಕಣ್ಣುಗಳನ್ನು ಚುಂಬಿಸಿದಳು. ಆಗ ಮೋಟಾರು ರಸ್ತೆ ಬಿಟ್ಟು 50 ಅಡಿ ದೂರದಲ್ಲಿದ್ದ ಕಟಕಟೆಯನ್ನು ಮೀರಿ ಹೋಗಿ, ಸುಮಾರು 9 ಸಿಮೆಂಟ್ ಕಂಬಗಳನ್ನು ಉರುಳಿಸಿ, ಟೆಲಿಗ್ರಾಫ್ ಕಂಭಕ್ಕೆ ಢಿಕ್ಕಿ ಹೊಡೆದರೂ ಈತನಿಗ ಎಚ್ಚರವಾಗಲಿಲ್ಲವಂತೆ. ಆಗ ದಾರಿಯಲ್ಲಿ ಹೋಗುತ್ತಿದ್ದ ಮತ್ತೊಬ್ಬ ಡ್ರೈವರನು ಈತನನ್ನು ಎಚ್ಚರಿಸಿದನಂತೆ. ಪಾಪ! ನಿದ್ರಾದೇವಿಯನ್ನು ಬಿಟ್ಟು ಬರಲು ಮನಸ್ಸು ಬಾರಲಿಲ್ಲವೋ ಏನೋ ಈ ನವಯುಗದ ಕುಂಭಕರ್ಣನಿಗೆ!

—o0o—

ಗೊರಕೆ, ಕಳ್ಳರಿಗೆ ಕೆಟ್ಟದ್ದು.

ಸಿಲ್ವೆಸ್ಟರ್ ಕಾಟೋನಿಯೋ ಎಂಬವ ಕಳ್ಳತನ ಪ್ರಾರಂಭಿಸಿದ-ಇನ್ನೂ ಅದರಲ್ಲಿ ಪಳಗಿರಲಿಲ್ಲ.

ಕೆಲವು ದಿನಗಳ ಹಿಂದೆ ಅವನು ಪ್ಯಾರಿಸಿನ ಹತ್ತಿರದ ಒಂದೂರಿನ ಮನೆಯಲ್ಲಿ ಕಳ್ಳತನಕ್ಕೆ ಹೋಗಿದ್ದಾಗ ಆ ಮನೆಯ ಅಡಿಗೆಯವಳ ಕಪಾಟಿನಲ್ಲಿದ್ದ 150 ಫ್ರಾಂಕ್ಸ್ (ಫ್ರೆಂಚ್ ನಾಣ್ಯ) ಗಳನ್ನು ಹಾರಿಸಿದ. ಅಷ್ಟರೊಳಗೆ ನೋಮಿ ಎಂಬಾ ಅಡಿಗೆಯವಳು ಬಂದೇ ಬಿಟ್ಟಳು.

ಆಗಲೇ ಮಧ್ಯ ರಾತ್ರಿಯಾಗಿದ್ದರಿಂದ ನೋಮಿಯು ಮಲಗಿದಾಕ್ಷಣ ಜಾರಿಬಿದ್ದೋಣವೆಂದುಕೊಂಡು ಕಳ್ಳ ಕಾಟೋನಿಯು ಹಾಸಿಗೆ ಮಂಚದ ಮೂಲೆಯಲ್ಲಿ ಅವಿತುಕೊಂಡ. ಅವನ ದುರಾದೃಷ್ಟಕ್ಕೆ ಅವನಿಗೆ ಅಲ್ಲಿಯೇ ನಿದ್ರೆಬಿತ್ತು. ಅಷ್ಟೆ ಅಲ್ಲ ಗೊರಕೆ ಹೊಡೆಯಲು ಪ್ರಾರಂಭಿಸಿದ. ಆಗಲೇ ಮಲಗಿದ್ದ ನೋಮಿಯು ತನ್ನ ಹಾಸಿಗೆ ಪಕ್ಕದಲ್ಲಿ ಗೊರಕೆ ಕೇಳಿಬರುವುದನ್ನು ಕಂಡು ಗಾಬರಿಯಾಗಿ ಬೊಬ್ಬಿಟ್ಟಳು. ಪೋಲೀಸರು ಬಂದು 150 ಫ್ರಾಂಕ್ಸ್‌ಗಳನ್ನು ಕೈಯಲ್ಲಿ ಹಿಡಿದು ಮಲಗಿದ್ದ ಕಳ್ಳನನ್ನು ಎಚ್ಚರಿಸಿ ಒಯ್ದರು-ಸ್ಟೇಶನಿಗೆ.

—o0o—

ಹೆಂಡತಿಗಾಗಿ ಬಿಟ್ಟ.

ಸರ್ ಆರ್ಥರ್ ಕೊನನ್ ಡೊಯ್ಲ್‌ರ ಮಗ, ಆಡ್ರಿಯನ್ ಕೊನನ್ ಡೊಯ್ಲ್ ಮೋಟಾರು ಸವಾರಿ ಮಾಡುತಿದ್ದ. ಆದರೆ ಆತ ಮೋಟಾರ್ ಓಡಿಸುವುದನ್ನು ಕಂಡರೆ, ಆತನ ಹೆಂಡತಿಗೆ ಅತ್ಯಪ್ರಿಯಾಗುತಿತ್ತು. ಆದುದರಿಂದ, ಆಕೆ ಗಂಡನ ಕಾರು ನಡೆಸುವಿಕೆಯನ್ನು ವಿರೋಧಿಸಿದಳು. ಗಂಡ ಹೆಂಡತಿಯ ಅನುಮೋದನೆ ದೊರೆಯದಿದ್ದುದರಿಂದ, ಇದೀಗ ಕಾರನ್ನು ನಡೆಸುವುದು ಮಾತ್ರವೇ ಅಲ್ಲದೆ, ಕಾರನ್ನೂ, ಬಿಟ್ಟು ಬಿಟ್ಟಿದ್ದಾನೆ. ಸತಿವ್ರತಾಶಿರೋಮಣಿ ಎಂದು ಇವನನ್ನು ಕರೆಯಬಹುದೇ?

—o0o—

ಗಣೇಶೋತ್ಪತ್ತಿ.

ಮೊನ್ನೆ ತಾನೆ ಗಣೇಶನ ಹಬ್ಬ ಮುಗಿಯಿತು. ಗಣೇಶನನ್ನು ಕೆರೆಯಲ್ಲೋ ಭಾವಿಯಲ್ಲೋ ಮುಳುಗಿಸಿದ್ದೂ ಆಯಿತು. ಈಗ ಬರೋಡಾ ಜಿಲ್ಲೆಯ ರಘೋಪುರ ಎಂಬಲ್ಲಿ ವಿಘ್ನೇಶ್ವರನು ಮಾನವ ಕುಲದಲ್ಲಿ ಜನಿಸಿರುವನೆಂದು ವರ್ತಮಾನ.

ರಘೋಪುರದಲ್ಲಿ ಒಬ್ಬ ಠಾಕುರ್ ಸ್ತ್ರೀಯು ಗರ್ಭಿಣಿ ಇದ್ದಳು. ಪ್ರಸವಿಸುವುದಕ್ಕೆ ಕೆಲವು ದಿವಸಗಳ ಮುಂಚೆ ತಾನು ತ್ರಿವಳಿಯನ್ನು ಹೆರುವುದಾಗಿಯೂ, ಅದರಲ್ಲಿ ಒಂದು ಮಗು ಗಣೇಶರೂಪದಲ್ಲಿರುವುದಾಗಿಯೂ ಆಕೆಯು ಸ್ವಪ್ನದಲ್ಲಿ ತಿಳಿದಳು. ಆ ಕನಸಿನಂತೆಯೇ ಹುಟ್ಟಿದ ತ್ರಿವಳಿಗಳಲ್ಲಿ ಒಂದು ಮಗುವಿಗೆ ಸೊಂಡಲಿದೆ. ಆ ಸೊಂಡಲಿನಿಂದ ಉಸಿರಾಡುತ್ತಿದೆಯಂತೆ. ಈ ಮಗುವು ಜೀವಿಸಿದ್ದು ಸುತ್ತ ಮುತ್ತಲಿನ ಅನೇಕರು ಬಂದು ಈ ಆಶ್ಚರ್ಯವನ್ನು ತಮ್ಮ ಕಣ್ಣಿನಿಂದ ನೋಡುತ್ತಿರುವರು.

—o0o—

ಕಾಹಿಲೆಯವರ ಗಡಿಯಾರ.

ಕಾಹಿಲೆ ಬಂದಿದ್ದು ಮಲಗಿದ ರೋಗಿಗೆ, ಅತ್ತಿತ್ತ ಅಲುಗಾಡಲು ಬಾರದಿದ್ದರೂ, ಗಂಟೆ ನೋಡಬೇಕೆಂಬ ಆಸೆಯೂ ಬರೆ. ಏನು ಮಾಡಬೇಕು? ಗಂಟೆ ಕೇಳಿ ತಿಳಿದುಕೊಳ್ಳಲು ಹತ್ತಿರ ಯಾರೂ ಇಲ್ಲವೆಂದು ತಿಳಿದುಕೊಳ್ಳೋಣ. ಅದಕ್ಕಾಗಿ ಈಗ ಮ್ಯೂನಿಚ್‌ನ ಒಬ್ಬ ವಿಜ್ಞಾನಿ, ಒಂದು ಶೋಧ ನಡೆಸಿದ್ದಾನೆ. ಇದಕ್ಕೆ ರೋಗಿಯ ಗಡಿಯಾರವೆಂದು ಹೆಸರು. ಮಲಗಿದ ರೋಗಿ, ತನ್ನ ಬಳಿ ಇದ್ದ ಒಂದು ಗುಂಡಿಯನ್ನೊತ್ತಿ ಬಿಟ್ಟರೆ ಸರಿ! ಕೂಡಲೇ, ಗಡಿಯಾರವು ಎಲ್ಲೇ ಇದ್ದರೂ, ಅದರ ನೆರಳು ರೋಗಿಯ ಮೇಲ್ಗಡೆ, ಅಟ್ಟದ ಮೇಲೆ ಬೀಳುವುದು. ಅದೂ ಬಹಳ ಗಾತ್ರವುಳ್ಳದ್ದಾಗಿದೆ. ಇದರಿಂದ ರೋಗಿ ಸುಲಭವಾಗಿ ಗಂಟೆ ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಹೀಗೇ ಇನ್ನೊಂದು ಶೋಧ ಬೇಕಾಗಿದೆ. ತರುಣ ರೋಗಿಗಳಿಗೆ ತಮ್ಮ ಪ್ರಣಯಿಗಳನ್ನು ತೋರುವ ಶೋಧ!

—o0o—

ಗಾಂಧೀಜಿಯವರಿಗೆ ಕಾಯಿಕಲ್ಪವೇ?

ಕೆಲವು ಸ್ವದೇಶ ಪತ್ರಿಕೆಗಳಲ್ಲೂ, ವಿದೇಶ ಪತ್ರಿಕೆಗಳಲ್ಲೂ ಮಹಾತ್ಮಜಿಯವರು ಕಾಯಿಕಲ್ಪ ಚಿಕಿತ್ಸೆಯನ್ನು ತೆಗೆದುಕೊಳ್ಳುವರೆಂದು ಪ್ರಕಟವಾಗಿತ್ತು. ಈ ಪ್ರಕಟಣೆಯನ್ನು ವಿರೋಧಿಸುತ್ತಾ ಶ್ರೀ ಮಹದೇವ ದೇಸಾಯಿಯವರು ಈ ರೀತಿ ಬರೆಯುತ್ತಾರೆ.

'ಇವೆಲ್ಲವೂ ಬರೀ ಕಟ್ಟು ಕಥೆಗಳು. ತಮ್ಮ ವಯಸ್ಸಿಗಿಂತ ಹೆಚ್ಚು ವೃದ್ಧರಾಗಿಲ್ಲದುದರಿಂದಲೂ, ತಾವಿರುವುದಕ್ಕಿಂತ ಹೆಚ್ಚು ಯುವಕರಾಗಿರಲು ಅಪೇಕ್ಷೆ ಇಲ್ಲದಿರುವುದರಿಂದಲೂ ಗಾಂಧೀಜಿಯವರು ಇಂತಹ ಚಿಕಿತ್ಸೆಗಳಿಗೆ ಎಂದೂ ತಮ್ಮ ಒಪ್ಪಿಗೆ ಕೊಟ್ಟಿಲ್ಲ. ಮೊದಲಿನಿಂದಲೂ ಅವರು ಪ್ರಾಕೃತಿಕ ಚಿಕಿತ್ಸೆಯಲ್ಲಿ ನಂಬಿಕೆಯುಳ್ಳವರಾಗಿರುವರು.

—o0o—

ದುಡ್ಡು ಕೊಟ್ಟು ಗಂಡನನ್ನು ಪಡೆದಳು.

ಕಳೆದ ಎಂಟು ವರ್ಷಗಳ ಹಿಂದೆ, ಆಂಡ್ರೀ ಜಾಯ್ನ್ ಎಂಬ ಫ್ರೆಂಚ್ ಯುವಕನು ಒಬ್ಬ ಫ್ರೆಂಚ್ ಯುವತಿಯನ್ನು ಮದುವೆ ಮಾಡಿಕೊಂಡಿದ್ದನಂತೆ

ಕೆಲವು ಕಾಲವಾದ ಮೇಲೆ ಆನೇ ಯುವಕನನ್ನು ಒಬ್ಬ ಇಂಗ್ಲೀಷ್ ಯುವತಿಯು ಪ್ರೀತಿಸಲಾರಂಭಿಸಿದಳು. ಇದಕ್ಕಾಗಿ ಒಂದು ದಿನ ಮೊದಲನೇ ಹೆಂಡತಿಗೂ, ಈಕೆಗೂ ಮಾತುಕತೆ ನಡೆಯಿತು ಫ್ರೆಂಚ್ ಯುವತಿಯು ತಿಂಗಳಿಗೆ ಮೂರು ಸಾವಿರ ಪೌಂಡುಗಳನ್ನು ಕೊಡುವುದಾದರೆ ತನ್ನ ಗಂಡನನ್ನು ನೀನು ಮದುವೆಯಾಗಬಹುದು ಎಂದು ಕರಾರು ಮಾಡಿದಳು.

ಅದರಂತೆಯೇ ಆ ಎರಡನೇ ಹೆಂಡತಿಯು ದುಡ್ಡು ಕೊಡಲು ಒಪ್ಪಿ ಮದುವೆಯಾಗಿ ಸಂಸಾರಮಾಡಿಕೊಂಡು ಪ್ರತಿ ತಿಂಗಳೂ ತಪ್ಪದೆ ಆಕೆಗೆ ದುಡ್ಡನ್ನು ಸಲ್ಲಿಸುತ್ತಿದ್ದಳಂತೆ.

ಈಗ ಕೆಲವು ತಿಂಗಳುಗಳಿಂದ ದುಡ್ಡು ಕೊಡುವುದನ್ನು ನಿಲ್ಲಿಸಿದಳು. ಮೊದಲನೇ ಹೆಂಡತಿಗೆ ಕಣ್ಣು ಕೆಂಪಾಯಿತು. ಒಬ್ಬ ವಕೀಲನನ್ನು ಹಿಡಿದು ನೋಟೀಸ್ ಕೊಡಿಸಿದಳು.

'ಆದರೆ ಅದಕ್ಕೆ ಆಕೆಯು ಈಗ ಗಂಡಂದಿರ ಬೆಲೆ ಬಹಳ ಇಳಿದಿರುವುದರಿಂದ ಅಷ್ಟು ದುಡ್ಡು ಕೊಡಲು ಸಾಧ್ಯವಿಲ್ಲ'ವೆಂದು ಉತ್ತರವಿತ್ತಳು.

ಅದಕ್ಕೆ ಆಕೆಯು ಸುಮ್ಮನಿರುವಳೇ? ಪಾರಿಸ್ಸಿನ ಮ್ಯಾಟ್ರಿ ಮೋನಿಯಲ್ ಕೋರ್ಟಿನಲ್ಲಿ ವಾದ ಹೂಡಿರುತ್ತಾಳೆ; ಕೇಸನ್ನು ತೀರ್ಮಾನಿಸುವುದಕ್ಕೆ ಬಂದಿದೆ, ಜಡ್ಜಿಗಳ ಪ್ರಾಣಕ್ಕೆ!

—o0o—

ಕೋಳಿಗೆ ರಾಜ ಮರ್ಯಾದೆ.

ಜಪಾನಿನಲ್ಲಿ ಉದ್ದ ಬಾಲದಂತಾಗರಿಗಳನ್ನು ಬೀರುವ ಕೋಳಿಗಳಿವೆ. ಇವುಗಳ 'ಬಾಲ'ಗಳು ಸುಮಾರು 20 ಅಡಿಗಳಷ್ಟು ಬೆಳೆಯುತ್ತದೆಯಂತೆ.

ಹಿಂದಿನ ಜಪಾನರು ಈ ಕೋಳಿಯ 'ಬಾಲ'ವನ್ನು ತಮ್ಮ ಈಟಿಗಳಿಗೆ ಸಿಕ್ಕಿಸುತ್ತಿದ್ದರು. ಅದಕ್ಕಾಗಿ ಅವುಗಳನ್ನು ಜಾಗ್ರತೆಯಿಂದ ಪೋಷಿಸುತ್ತಲೂ ಇದ್ದರು.

ಅದರ ಮನೆ ಮರದ ಮೇಲೆ-'ಬಾಲ' ಹಾಳಾಗದಂತೆ. ಈ ಕೋಳಿಗಳನ್ನು ಆಗಾಗ್ಗೆ ಸಂಚಾರಕ್ಕೆ ಕೊಂಡೊಯ್ಯುತ್ತಿದ್ದರು. ಈ ಸಮಯದಲ್ಲಿ ಅವುಗಳ ಬಾಲಗಳನ್ನು ಎತ್ತಿ ಹಿಡಿದು ಹಿಂದೆ ಬರುವವರೇ ಬೇರೆ ಇದ್ದರಂತೆ. ಹೀಗೆ ಕೋಳಿಗಳ ಬಾಲ ನೆಲಕ್ಕೆ ಮುಟ್ಟುವದೆಂದು ಈ ರೀತಿ ಎಚ್ಚರ ತೆಗೆದುಕೊಂಡು ತಮ್ಮ ಲಾಭಕ್ಕಾಗಿ ಪ್ರಯತ್ನಿಸುತ್ತಿರುವ ಆ ಜನಾಂಗವು ತನ್ನ ಲಾಭ ದೃಷ್ಟಿಯಿಂದ ಹೇಗೆ, ಮತ್ತು ಎಂಥಾ ಕೆಲಸಗಳನ್ನು ಮಾಡುತ್ತಿವೆ ನೋಡಿರಿ' ಅಂದ ಒಳಿತ ಅವರು ತಮ್ಮ ಸುಖಕ್ಕಾಗಿ ಇತರ ರಾಷ್ಟ್ರಗಳ ಮೇಲೆ ಬಿದ್ದುದರಲ್ಲಿ ಆಶ್ಚರ್ಯವಿದೆಯೇನು?

—o0o—

ಸೂಜಿ ತೇಲಬೇಕು, ಮದುವೆಯಾಗಬೇಕು.

ನೂರಾರು ಫ್ರೆಂಚ್ ಹುಡುಗಿಯರು ತಮ್ಮ ಮದುವೆ ಭವಿಷ್ಯ ತಿಳಕೊಳ್ಳಲು ಪೊನ್ಟೆನ್ ಬಿಟ್ಟಿ ಪ್ರಾಂತ್ಯಕ್ಕೆ ಹೋಗುತ್ತಾರೆ. ಅಲ್ಲಿನ ಒಂದು ನೀರು ತೊರೆಯಲ್ಲಿ ಎಲ್ಲರೂ ಒಂದೊಂದು ಗುಂಡು ಸೂಜಿಯನ್ನು ಬಿಸಾಡುವರು. ಯಾರ ಸೂಜಿಯು ಮುಳುಗದೆ ತೇಲುವುದೂ ಅವರಿಗೆ ಒಂದು ವರ್ಷದಲ್ಲೆ ಮದುವೆಯಾಗುತ್ತದೆಂದು ಅವರ ನಂಬಿಕೆ.

ಈ ನಂಬಿಕೆಗೆ ಬಹಳ ಹಿಂದಿನ ಸಂಗತಿಯೊಂದು ಆಧಾರಕ್ಕಿದೆ. ಕೆಲವು ಶತಮಾನಗಳ ಹಿಂದೆ ಹನ್ಸ್ ಜನರು ಫ್ರಾನ್ಸ್ ದೇಶದ ಮೇಲೆ ದಾಳಿ ನಡೆಸಿದಾಗ ಗುರುಮಠದಲ್ಲಿದ್ದ ತರುಣಿಯೋರ್ವಳನ್ನು ಒಬ್ಬ ಹನ್ಸ್ ದಾಳಿಕಾರನು ಓಡಿಸಿಕೊಂಡು ಬಂದು ಅವಳು ಕೈತಪ್ಪಿದ್ದರಿಂದ ತನ್ನ ಕೊಡಲಿಯನ್ನು ಅವಳ ಮೇಲಕ್ಕೆ ಎಸೆದನಂತೆ. ಆಗ ಅದಾವುದೂ ಒಂದು ಗೂಢ ಶಕ್ತಿಯು ಅವನಾ ಕೊಡಲಿಯನ್ನು ಬೇರೊಂದು ದಿಕ್ಕಿಗೆ ಹೋಗುವಂತೆ ಮಾಡಿ ಕಡೆಗೊಂದು ನೀರು ತೊರೆಯಲ್ಲಿ ಅದು ಬಿದ್ದು ತೇಲಿ ಹೋಯಿತಂತೆ.

ಆ ಸ್ಥಳದಲ್ಲಿ ಸೈಂಟ್ ಸೆಬ್ಯಾನ್ ಎಂಬ ಗುಡಿಯನ್ನು ಕಟ್ಟಿ ಈಗ ವರ್ಷಂಪ್ರತಿ ಅಲ್ಲಿ ನಡೆಯುವ ಹಬ್ಬದ ದಿನ ತರುಣಿಯರು ಗುಂಡುಸೂಜಿಯಿಂದ ತಮ್ಮ ಅದೃಷ್ಟ ನೋಡುತ್ತಾರೆ.

—o0o—

ದೇವದತ್ತ.

ಸಾಮಾಜಿಕ ಕಾದಂಬರಿ.

ಅಧ್ಯಾಯ ೬.

ಮನುಷ್ಯರ ಸ್ಥಿತಿಗತಿಯು ಬದಲಾಯಿಸಿದ ಹಾಗೆ ಅವರ ರೂಪ ಸೌಂದರ್ಯಗಳೂ ಬದಲಾಗುವವು. ನಿಜವಾಗಿಯೂ ಅಂತಹ ಮಾರ್ಪಾಟುಗಳಾಗದಿದ್ದರೂ ಅವರಲ್ಲಿ ಅಭಿಮಾನವಿರತಕ್ಕವರ ದೃಷ್ಟಿಗಾದರೂ ಅವರು ಆ ರೀತಿಯಲ್ಲಿ ಗೋಚರಿಸುವರು.

ಕುರೂಪಿಗಳಲ್ಲದಿದ್ದರೂ ಯಾವ ರೀತಿಯಲ್ಲೂ ಸುಂದರರೆನ್ನಿಸಿಕೊಳ್ಳಲು ಅಯೋಗ್ಯರಾದ ಎಷ್ಟೋ ಮನುಷ್ಯರು ಕ್ರಮೇಣ ಉನ್ನತ ಪದವಿಗೆ ಬಂದದ್ದಾದರೆ ಇತರರ ದೃಷ್ಟಿಗೆ ಅವರು ಪೂರ್ವದ ಸ್ಥಿತಿಯಲ್ಲಿ ಗೋಚರಿಸುವುದೇ ಇಲ್ಲ. ಅದಯಲ್ಲಿ ಸುಲಕ್ಷಣರಾದವರೂ ಸಹ ತಮ್ಮ ಉನ್ನತ ಸ್ಥಿತಿಯಿಂದ ಅಧೋಗತಿಗೆ ಬಿದ್ದದ್ದಾದರೆ ಕುರೂಪಿಗಳಿಗಿಂತಲೂ ಅಧಿಕವಾದ ಅಸಹ್ಯ ಭಾವನೆಯನ್ನು ಇತರರ ಮನಸ್ಸಿನಲ್ಲಿ ಹುಟ್ಟಿಸುತ್ತಾರೆ. ಆದುದರಿಂದಲೇ 'ಸೌಂದರ್ಯವು ವಸ್ತುವಿನಲ್ಲೋ, ಪ್ರೇಕ್ಷಕನ ನಯನಗಳಲ್ಲೋ ಅಥವಾ ಮನುಷ್ಯನ ಭಾವನೆಯಲ್ಲೋ' ಎಂದು ಹೇಳಲು ಆಗುವದಿಲ್ಲ.

ನಮ್ಮ ಕಥಾ ನಾಯಕನಾದ ದೇವದತ್ತನ ಸೌಂದರ್ಯವೂ ಮುಖದಲ್ಲಿ ತುಂಬಿ ತುಳುಕಾಡುತ್ತಿದ್ದ ಪುರುಷ ಲಕ್ಷಣವೂ, ಎಂದಿನಿಂದ ಅವನ ಅಸಾಧಾರಣ ಜ್ಞಾನಶಕ್ತಿಯೂ ಅವನಿಗೆ ಶಾಲಾಕಾಲೇಜುಗಳಲ್ಲೆಲ್ಲಾ ಅದ್ವಿತೀಯ ಸ್ಥಾನವನ್ನಾರ್ಜಿಸತೊಡಗಿತೋ ಅಂದಿನಿಂದ ಮತ್ತಷ್ಟು ಉಚ್ಚಸ್ಥಾನವನ್ನಾಕ್ರಮಿಸತೊಡಗಿದವು. ಆತನ ಮಿತ್ರರಿಗಂತೂ ಅವನ ಶಿಕ್ಷಣವೂ, ಗುಣ ನಡತೆಗಳೂ ಆರಾಧ್ಯಯೋಗ್ಯವಾಗಿದ್ದವು.

ನಮ್ಮ ಕಥಾನಾಯಕಿಯಾದ ಕಮಲೆಗೆ ಪ್ರಥಮದಲ್ಲಿ ಶಾಲೆಯಲ್ಲಿ ಯಾರೊಬ್ಬನನ್ನೂ ತಿಳಿದಿರಲಿಲ್ಲ. ದೇವದತ್ತನ ಮುಖವು [illegible] ಆಕೆಯ ಮನಸ್ಸಿನಲ್ಲಿ ಏನೊಂದು ತರದ ವಿಶೇಷ ಪರಿಣಾಮವನ್ನುಂಟುಮಾಡಲಿಲ್ಲ. ಆದರೆ ಒಂದು ದಿವಸ ನಡೆದ ಶಾಲಾ ವಾರ್ಷಿಕೋತ್ಸವದಲ್ಲಿ ದೇವದತ್ತನು [illegible] ಪ್ರಶ್ನೆಗಳಿಗೆ ಉತ್ತರಗಳನ್ನು ಕೊಟ್ಟ [illegible] ಕಮಲೆಯ ಮನಸ್ಸಿನಲ್ಲಿ ಆತನ [illegible]ಲವಾದ ಅಚ್ಚನ್ನು ಹುಟ್ಟಿಸಿತು. ಅದೇ ದಿವಸ ಅಪರಾಹ್ನ ಕಮಲೆಯ ತಂದೆಯ ಅಧ್ಯಕ್ಷತೆಯಲ್ಲಿ ನಡೆದ ಶಾಲಾ ಕೂಟದಲ್ಲಿ, ದೇವದತ್ತನು, ತನ್ನ ಅಸಾಧಾರಣ ವಾಕ್ಚಾತುರ್ಯದಿಂದ ಪರೇಂದ್ರನಾಥನನ್ನೂ ನೆರೆದಿದ್ದ ಉಪಾಧ್ಯಾಯರನ್ನೂ ಸಂಗಾತಿಗಳನ್ನೂ ವಿಸ್ಮಯಗೊಳಿಸಿದ ಹಾಗೆ ಕಮಲೆಯ ಮನಸ್ಸಿನಲ್ಲಿ ಮೊದಲೇ ಉತ್ಪತ್ತಿಸಿದ ತನ್ನ ಮುಖಬಿಂಬದ ಅಚ್ಚನ್ನು ಎಂದೂ ಅಳಿಸದ ಚಿತ್ರವನ್ನಾಗಿ ಮಾಡಿದನು. ಆ ದಿವಸದಿಂದಲೇ ಕಮಲೆಗೆ ದೇವದತ್ತನಲ್ಲಿ ಒಂದು ತರಹದ ಭಕ್ತ್ಯ ಪ್ರೇಮವು ಉಂಟಾಯಿತು.

ಪ್ರಥಮದಲ್ಲಿ ಈ ರೀತಿಯಾಗಿ ಜನಿಸಿದ ಪ್ರೀತಿಯು ಸಮಯವು ಹೋದ ಹಾಗೆ ಹೆಚ್ಚೆಚ್ಚಾಗುತ್ತಾ ಬಂದಿತು. ದೇವದತ್ತನ ಅದ್ವಿತೀಯವಾದ ವಿದ್ಯಾನೈಪುಣ್ಯವೂ ಅಕಳಂಕವಾದ ಸ್ವಭಾವ ನಡವಳಿಕೆಗಳೇ ಇವಕ್ಕೆ ಮುಖ್ಯ ಕಾರಣ. ಆತನ ನಡತೆಯಲ್ಲಿ ಆಕೆಗೆ ಏನೊಂದು ಲೋಪವೂ ಕಂಡುಬರುತ್ತಿರಲಿಲ್ಲ.

ದೇವದತ್ತನ ಪ್ರೀತಿಯು ಬಹು ಕಠಿಣವಾಗತೊಡಗಿತು. ಆದರೆ ಅದನ್ನು ಅವನು ತನ್ನ ಕೇವಲ ಆಪ್ತ ಮಿತ್ರರಿಗೂ ಸಹ ತಿಳಿಸಲಿಲ್ಲ. ಇತರರು ತನ್ನನ್ನು [illegible]ಸಿಯಾರು ಎಂಬುದೇ ಈ ತರದ ಗುಪ್ತ ವ್ಯಾಪಾರಕ್ಕೆ ಕಾರಣವಾಗಿತ್ತು. ಅವನ ಪ್ರೀತಿಯು ಕೇವಲ ಸೋದರಭಾವದ್ದಾಗಿರಲಿಲ್ಲವಾದರೂ ಅದು ಯಾವ ರೀತಿಯಲ್ಲೂ ನೀಚ ತರಗತಿಯದಾಗಿರಲಿಲ್ಲ. ಎಲ್ಲಿ ಹೋದರೂ ಅವನಿಗೆ ಕಮಲೆಯ ಯೋಚನೆಯೆ. ವಾರದಲ್ಲಿ ರಜಾ ದಿವಸಗಳನ್ನು ಕಳೆಯುವುದು ಕೇವಲ ಅಸಾಧ್ಯವಾಗಿ ಕಾಣುತ್ತಿತ್ತು. ಆದರೂ ಒಂದು ದಿವಸವಾದರೂ ಅವನು ಇತರ ಅನೇಕ ವಿದ್ಯಾರ್ಥಿಗಳ ಹಾಗೆ ಕಮಲೆಯ ಮನೆಯ ಸಮೀಪಕ್ಕಾಗಿ ತಿರುಗಾಡಲಿಕ್ಕೂ ಸಹ ಹೋಗುತ್ತಿರಲಿಲ್ಲ. ಆಕೆಯೊಡನೆ ಕಾಗದ ಪತ್ರಗಳನ್ನು ನಡೆಸಲಿಲ್ಲ. ಅವಶ್ಯವಿಲ್ಲದೆ ಒಂದು ದಿವಸವಾದರೂ ಮಾತಾಡಲಿಲ್ಲ. ಆಕೆಯು ಸಮೀಪದಲ್ಲಿದ್ದರೆ ಸಾಕು. ಅದೇ ಅವನಿಗೆ ಸಂತೋಷ. ಕ್ಲಾಸಿನಲ್ಲಿಯೂ ಸಹ ಇತರ ಹುಡುಗರ ಹಾಗೆ ಆಕೆಯ ಮುಖವನ್ನು ಆಗಾಗ್ಯೆ ನೋಡುತ್ತಿರಲಿಲ್ಲ. ಅವಳ ದೃಷ್ಟಿಯನ್ನೂ ತನ್ನ ಕಡೆಗೆ ಎಳೆಯಲು ಪ್ರಯತ್ನಿಸುತ್ತಿರಲಿಲ್ಲ. ಆ ರೀತಿಯಲ್ಲಿ ಅವನು ಕಾರ್ಯತಃ ಮಹತ್ತರವಾದ ನಿಸ್ಸಂದೇಹವನ್ನು ತೋರ್ಪಡಿಸುತ್ತಿದ್ದರೂ ಅವನ ಮನಸ್ಸು ಮಾತ್ರ ಆ ವಿಷಯದಲ್ಲಿ ಶಾಂತವಾಗಿರಲಿಲ್ಲ.

ಕಮಲೆಯ ಪ್ರೀತಿಯು ಮಾತ್ರ ಕೇವಲ ಸಹೋದರಭಾವದ್ದಾಗಿತ್ತು. ದೇವದತ್ತನನ್ನು ಕಂಡರೆ ಆಕೆಗೆ ಬಹು ಸಂತೋಷವಾಗುತ್ತಿತ್ತು. ಅವನಿಂದ [illegible] ಮಾರ್ಗವನ್ನು ತಿಳಿಯಲು ಬಹಳ ಕುತೂಹಲ ತೋರಿಸುತ್ತಿದ್ದಳು. ಆಕೆಗೆ ಅವನ ಮೇಲಿದ್ದ ಅಭಿಮಾನದ ಅರ್ಥ ಸಹ ಇತರ ವಿದ್ಯಾರ್ಥಿಗಳ ಮೇಲೆ ಇರಲಿಲ್ಲ. ಅವನ ಮನಸ್ಸಿಗೆ ಯಾವ ರೀತಿಯಿಂದಾದರೂ ವ್ಯಸನ ಉಂಟಾದದ್ದು ಆಕೆಗೆ ತಿಳಿದದ್ದಾದರೆ, ಅವಳೂ ಅದರಲ್ಲಿ ಭಾಗಿಯಾಗುತ್ತಿದ್ದಳು. ಆದರೆ ಈ ಅಂತರವನ್ನು ದೇವದತ್ತನಿಗೆ ತಿಳಿಸುತ್ತಿರಲಿಲ್ಲ. ಏನಾದರೂ ಪುಸ್ತಕಗಳು ಬೇಕಾಗಿದ್ದರೆ ಅವನಿಂದ ಏನೊಂದು ಸಂಕೋಚವಿಲ್ಲದೆ ತೆಗೆದುಕೊಳ್ಳುತ್ತಿದ್ದಳು. ತನ್ನಲ್ಲಿರುವ ಪುಸ್ತಕಗಳನ್ನು ದೇವದತ್ತನಿಗೂ ಓದಲು ಕೊಡುತ್ತಿದ್ದಳು. ಇಷ್ಟಾದರೂ ಅವಳು ಒಂದು ದಿವಸವಾದರೂ ದೇವದತ್ತನೊಡನೆ ಹೆಚ್ಚು ಮಾತಾಡಲಿಲ್ಲ. ಪುಸ್ತಕಗಳನ್ನು ಕೇಳುವುದು; ಇಲ್ಲವೇ ಕೊಡುವುದು; ಇಷ್ಟಲ್ಲದೆ ಅವಶ್ಯವಿಲ್ಲದ ಮಾತುಗಳನ್ನು ಅವನೆದುರಿಗೆ ಎತ್ತಲು ಸಹ ಆಕೆಗೆ ಧೈರ್ಯ ಬರುತ್ತಿರಲಿಲ್ಲ.

ಕಮಲೆಯ ಸ್ವಭಾವದಲ್ಲಿ ಒಂದು ತರಹದ ಲೋಪವಿತ್ತು. ಐಶ್ವರ್ಯದಲ್ಲೇ ಜನಿಸಿ, ಐಶ್ವರ್ಯದಲ್ಲೇ ಬೆಳೆದಿದ್ದವಳಾದ ಕಾರಣ, ಆಕೆಯು ತನ್ನ ಮುಂದಿನ ಜೀವಮಾನವನ್ನು ಒಬ್ಬ ಶ್ರೀಮಂತನ ಪಾದತಲದಲ್ಲೇ ಧಾರೆ ಎರೆಯಬೇಕೆಂಬ ಕಾಂಕ್ಷೆಯುಳ್ಳವಳಾಗಿದ್ದಳು. ದೇವದತ್ತನನ್ನು ತನ್ನ ಒಬ್ಬ ಅಣ್ಣನ ಹಾಗೆ ಭಾವಿಸಿದ್ದಳೇ ಹೊರತು ಅನ್ಯಥಾ ಯೋಚಿಸಲು ಅವಳ ಮನಸ್ಸಿಗೆ ಒಗ್ಗುತ್ತಿರಲಿಲ್ಲ. ಅವನ ಗುಣ ನಡತೆಗಳಿಗೆ ಮೆಚ್ಚಿ ಅವನಲ್ಲಿ ಅಭಿಮಾನವುಳ್ಳವಳಾಗಿದ್ದಳೇ ಹೊರತು ಪ್ರೇಮವುಳ್ಳವಳಾಗಿರಲಿಲ್ಲ. ದೇವರು ಆತನನ್ನು ಹೇಗಾದರೂ ಮಾಡಿ ತನ್ನ ಒಬ್ಬ ಸಹೋದರನನ್ನಾಗಿ ಮಾಡಿದ್ದರೆ ಅವಳು ದೈವವನ್ನು ಎಂದೂ ಮರೆಯುತ್ತಿರಲಿಲ್ಲ. ಆದರೆ ಆತನನ್ನು ತನ್ನ ಪತಿಯನ್ನಾಗಿ ಮಾಡಿಕೊಳ್ಳಲು ಎಂದೂ ಆಕೆಗೆ ಮನಬಾರದು. ಅವನ ಮನಸ್ಸಿಗೆ ನೋವುಂಟಾಗದ ಹಾಗೆ ನಡೆಯಬೇಕೆಂಬುದೇ ಆಕೆಯ ಮನಸ್ಸು. ಆದರೆ ಅವನನ್ನು ಮದುವೆಯಾಗುವುದೆಂದರೆ ಅವಳ ಮನಸ್ಸು ಒಪ್ಪದು. ಇದಕ್ಕೆ ಕಾರಣವೇನಿರಬಹುದೆಂದು ಆಕೆಯು ಕೆಲವೇಳೆ ತನ್ನ ಮನಸ್ಸನ್ನು ಪರಿಶೋಧಿಸುತ್ತಿದ್ದಳು. ಪರೀಕ್ಷಿಸಿದಾಗಲೆಲ್ಲಾ ಅವನೊಬ್ಬ ಶ್ರೀಮಂತನ ಮಗನಲ್ಲವೆಂಬುದೇ ಕಾರಣವಾಗಿತ್ತು. ಅವನೇನಾದರೂ ಉಚ್ಚ ಸ್ತರದ ಪದವಿಗೆ ಬಂದದ್ದಾದರೆ ಕಮಲೆಯು ತನ್ನ ಸರ್ವಸ್ವವನ್ನೂ ಅವನಿಗೆ ಒಪ್ಪಿಸಲು ಸಿದ್ಧಳಾಗಿದ್ದಳು.

ದೇವದತ್ತನ ಮನಸ್ಸಿನಲ್ಲಿ ಅನೇಕ ಯೋಚನೆಗಳು ಹುಟ್ಟುತ್ತಿದ್ದವು. ಕಮಲೆಯ ನಮ್ರ ಸ್ವಭಾವವೂ, ಆಕೆಯು ಇವನ ಮನಸ್ಸಿಗೆ ನೋವುಂಟಾಗಬಾರದೆಂದು ವರ್ತಿಸುತ್ತಿದ್ದ ರೀತಿಯೂ, ಇವನ ಪ್ರೀತಿಯನ್ನು ಇಮ್ಮಡಿಸಿದ್ದವು. ಕಮಲೆಯ ಪ್ರೀತಿಯು ಯಾವ ತರದ್ದಾಗಿರಬಹುದೆಂಬುದನ್ನು ತಿಳಿಯಲಾರದೆ ಹೋದನು. ಆದರೂ ಸಹ ಅವನು ತನ್ನ ಸ್ಥಿತಿಯನ್ನು ತಿಳಿಯದೆ ಇರಲಿಲ್ಲ. ಒಂದು ವೇಳೆ ಕಮಲೆಯು 'ನಿನ್ನನ್ನು ಈಗಲೇ ಮದುವೆಯಾಗುತ್ತೇನೆ' ಎಂದು ಹೇಳಿದ್ದರೆ ಅವನು ಅದಕ್ಕೆ ಎಂದೂ ಸಮ್ಮತಿಸುತ್ತಿರಲಿಲ್ಲ. ಅಥವಾ ಇನ್ನಾರಾದರೂ ಕಮಲೆಯನ್ನು ಆ ಸಮಯದಲ್ಲೇ ಮದುವೆಯಾಗಿದ್ದರೆ ದೇವದತ್ತನ ಜೀವನ ಚರಿತ್ರೆಯು ಬಹಳ ಶೋಚನೀಯವಾದ ಮಾರ್ಗವನ್ನೇ ಹೊಂದುತ್ತಿತ್ತು. ಅವನು ಪ್ರಾಣತ್ಯಾಗ ಮಾಡುತ್ತಿದ್ದನು. ಇಲ್ಲವೇ ಸನ್ಯಾಸವನ್ನೇ ಕೈಕೊಳ್ಳುತ್ತಿದ್ದನು.

ಕೆಲಸವಿಲ್ಲದ ಸಮಯದಲ್ಲೆಲ್ಲಾ ಅವನಿಗೆ ಕಮಲೆಯ ಯೋಚನೆಯೇ. ಕೆಲವು ವೇಳೆ ಅವಳನ್ನು ಮರೆತುಬಿಡಲು ಪ್ರಯತ್ನಿಸುವನು. 'ನನಗೇತಕ್ಕೆ ಅಂತಹ ಶ್ರೀಮಂತನ ಮಗಳ ಯೋಚನೆ? ಅವಳೆಂದಾದರೂ ನನ್ನನ್ನು ಮದುವೆಯಾಗಲು ಒಪ್ಪುವುದುಂಟೇ? ಒಂದು ವೇಳೆ ಅವಳೊಪ್ಪಿದರೂ ಅವಳ ತಂದೆಯೊಪ್ಪುವುದುಂಟೇ! ಇವರೆಲ್ಲಾ ಸಮ್ಮತಿಸಿದರೂ ಸಹ ನಾನದಕ್ಕೆ ನನ್ನ ಈ ಸ್ಥಿತಿಯಲ್ಲಿ ಸಮ್ಮತಿಸುವದುಂಟೇ? ಅದೆಂದಿಗೂ ಆಗಲಾರದು. ಐಶ್ವರ್ಯದಲ್ಲೇ ಜನಿಸಿ, ಐಶ್ವರ್ಯದಲ್ಲೇ ಬೆಳೆದ ಆ ಕೋಮಲಾಂಗಿಯನ್ನು ನಾನು ಈ ಸ್ಥಿತಿಯಲ್ಲಿ ಮದುವೆಯಾದುದಾದರೆ ನಮ್ಮೊಳಗೆ ಸರಿಯಾದ ದಾಂಪತ್ಯ ಪ್ರೇಮವು ಜನಿಸುವುದಿದೆಯೇ? ಒಂದು ವೇಳೆ ಅವಳ ಮನಸ್ಸಿಗೆ [illegible] ನನ್ನ ಸ್ಥಿತಿಯಲ್ಲಿ ತೃಪ್ತಿ ಪಟ್ಟವಳಂತೆ ವರ್ತಿಸಿದಾಗ್ಯೂ ಅದು ನಟನಮಾತ್ರವಾದೀತಲ್ಲದೆ ನಿಜವಾಗಿಯೂ ಆಕೆಯ ಅಂತರ್ಯದಲ್ಲಿ ವ್ಯಸನವಿರದಿರಲಾರದು. ಅದೂ ಸಹ ಇಲ್ಲದಿದ್ದರೂ ನನಗೆ ಸಂಪೂರ್ಣ ಸಂತೋಷವಿರುವುದುಂಟೇ?'

'ಜನಿಸಿದಾರಭ್ಯ ಪಾಕಪಾತ್ರಗಳನ್ನು ಮುಟ್ಟದ ಅವಳ ಕದಳೀದಳ ಕೋಮಲವಾದ ಕರತಳದಿಂದ ಅವಳೆನ್ನ ಮನೆಯ ಗೃಹಕೃತ್ಯಗಳನ್ನು ನಡೆಸುವುದುಂಟೇ? ಎಂದಿಗೂ ಆಗಲಾರದು. ಅವಳಿಗೆ ನನ್ನಲ್ಲಿ ಎಷ್ಟಂತ ಪ್ರೇಮವಿದ್ದಾಗ್ಯೂ ಸಹ, ನಾನು ನನ್ನ ಸ್ಥಿತಿಯನ್ನು ಅವಳ ಪದವಿಗೆ ಸರಿಯಾಗಿ ತಂದ ಹೊರತು ನಾನವಳನ್ನು ಮದುವೆಯಾಗಬಾರದು. ಇಲ್ಲವಾದರೆ ಪೂರ್ತಿಯಾದ [illegible] ಸುಖಗಳನ್ನೆಂದೂ ಅನುಭವಿಸಲು ಸಾಧ್ಯವಾಗಲಾರದು.'

'ಆದರೂ ಕಮಲೆಯನ್ನಲ್ಲದೆ ಮತ್ತಾರನ್ನೂ ವರಿಸಲಾರೆನು. ಆದರೆ ಆಕೆಯನ್ನು ವ್ಯಸನಕ್ಕೆ ಗುರಿಮಾಡಿಸದೆ ಮದುವೆಯಾಗುವುದು ತಾನೇ ಹೇಗೆ? ಅವಳನ್ನು ಮರೆತು ಬಿಡುವುದೆಂತೂ ಕೇವಲ ಅಸಾಧ್ಯವೇ ಸರಿ. ನನ್ನ ಸ್ಥಿತಿಯು ಬದಲಾಗುವ ಸಂಭವವಿದೆಯೇ? ಬದಲಾದರೂ ಅನರ್ಘ್ಯಕ್ಕಲ್ಲದೆ ಉನ್ನತಕ್ಕಾಗುವ ದಾರಿಯೇ ಕಾಣುವುದಿಲ್ಲ. ಅಯ್ಯೋ, ದೇವರು ಕಮಲೆಯನ್ನೇಕೆ ನಮ್ಮ ಬಳಿಗೆ ಕಳುಹಿಸಿದನು? ಕಳುಹಿಸಿದರೂ ನನಗೇತಕ್ಕೆ ಅವಳಲ್ಲಿ ಇಂತಹ ಮೋಹ? ಯಾರಿಗಾದರೂ ಈ ರಹಸ್ಯವು ತಿಳಿದದ್ದಾದರೆ ನಾನೆಂತಹ ಅಪಹಾಸ್ಯಕ್ಕೆ ಗುರಿಯಾದೇನು? ಛೀ! ನಾಚಿಕೆಗೇಡಿನ ಯೋಚನೆ! ತೊಲಗು! ನನ್ನ ಮನಸ್ಸಿನಿಂದ! ಅಸಾಧ್ಯವನ್ನೆಂದೂ ಯೋಚಿಸಬಾರದು, ಕಮಲೆ ಯಾರು? ನಾನ್ಯಾರು? ಅವಳೇನೋ ನನ್ನೊಡನೆ ಸರಳವಾಗಿ ವರ್ತಿಸುವಳೆಂದರೆ ನಾನದನ್ನು ಈ ನೀಚ ರೀತಿಯಲ್ಲಿ ಭಾವಿಸುವುದೇ' ಎಂದು ಕೆಲ ವೇಳೆ ತನ್ನನ್ನೆ ತಾನು ಜರೆದುಕೊಳ್ಳುತ್ತಾ ಕಮಲೆಯ ಯೋಚನೆಯನ್ನು ಸ್ವಲ್ಪ ಹೊತ್ತು ಬಿಟ್ಟು ಬಿಡುವನು.

ಮರುಕ್ಷಣದಲ್ಲೇ ಅದು ಪುನಃ ತಲೆದೋರುವುದು 'ಕಮಲೆಗೆ ಸುಮಾರು ಹದಿನಾಲ್ಕು ವರ್ಷ ಪ್ರಾಯವಿರಬಹುದು. ದೈವವಶದಿಂದ ವರ್ಷಂಪ್ರತಿ ಪಾಸಾಗುತ್ತಾ

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೬ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೦೧,೩೩೮— ೬—೦
ಏಜಂಟರಿಗೆ ಸಾಲ ಮತ್ತು ಆಸ್ತಿಯ ಬಗ್ಗೆ	೩೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು . . .	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೫೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೧೫೩— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೬ ———— ೩,೨೫,೧೩೩ ರೂಗಳು.

೧೯೨೬ ———— ೨೧,೩೫,೨೩೪ ರೂಗಳು.

೧೯೩೬ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ

ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ. ಎಸ್‌ಸಿ., ಎಲ್‌ಎಲ್. ಬಿ.
ಅಫಿಷಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12-3

ಹೋದಾಗ್ಯೂ ನಾನು ಬಿ. ಎ. ಪಾಸಾಗುವ ಮೊದಲೇ ಅವಳು ಮದುವೆಯಾಗಲು ಯೋಗ್ಯಳಾದ ಯುವತಿಯಾಗುವಳು. ಒಂದು ವೇಳೆ ನಾನು ಬಿ. ಎ. ಪಾಸಾಗುವವರೆಗೆ ಅವಳು ಮದುವೆಯಾಗದೆ ಇದ್ದರೂ, ಆಗ ನನ್ನ ಸ್ಥಿತಿಯು ಈಗ ಇರುವುದಕ್ಕಿಂತ ಯಾವ ವಿಧದಲ್ಲೂ ಒಳ್ಳೆಯ ಸ್ಥಿತಿಯನ್ನು ಹೊಂದಲಾರದು. ಒಂದು ವೇಳೆ ನನಗೊಂದು ಸರಕಾರೀ ನೌಕರಿಯು ಸಿಕ್ಕಿತೆಂದರೂ ನಾಲ್ಕೈದು ವರ್ಷಗಳಲ್ಲದೆ ನಾನು ಮದುವೆಯಾಗುವ ಸಂಭವವಿದೆಯೇ? ಅಷ್ಟರ ವರೆಗೆ ಕಮಲೆಯು ಕಾದಿರುವಳೇ? ಎಂದೂ ಇರಲಾರಳು. ನನ್ನಿಂದ ಕಮಲೆಯನ್ನು ವರಿಸಿ ಸುಖಿಸುವುದಕ್ಕೆಂದೂ ಆಗಲಾರದು' ಎಂದು ಭಗ್ನಮನೋರಥನಾಗಿ ಉಚ್ಚರಿಸುವನು.

ಈ ರೀತಿ ಅನೇಕ ಸಾರಿ ದೀಪದತ್ತನು ತನ್ನ ಮನೋರಥವನ್ನು ಕೈಗೂಡಿಸತಕ್ಕ ದಾರಿಯನ್ನು ಹುಡುಕುವುದರಲ್ಲೇ ಮಗ್ನನಾಗುತ್ತಿದ್ದನು. ಒಂದಾನೊಂದು ಸಾರಿ, ಹೀಗೆ ಸಮಾಧಿಸ್ಥನಾಗಿ ಯೋಚಿಸುತ್ತಿರುವಾಗ ಅವನಿಗೆ ಒಂದು ದಾರಿಯು ತೋರಿತು. ಅದರೆ ಅದೂ ಕೇವಲ ಸುಸಾಧ್ಯವಾದ ಮಾರ್ಗವಾಗಿ ಕಂಡು ಬರಲಿಲ್ಲ.

'ನನಗೆ ಹೇಗಾದರೂ, ಬಿ. ಎ. ಪಾಸಾದ ಮೇಲೆ ವಿಲಾಯಿತಿಗೆ ಓದಲಿಕ್ಕೆ ಹೋಗಲು ಅನುಕೂಲವು ದೊರೆತದ್ದಾದರೆ, ಅಲ್ಲಿಂದ ಹಿಂದಿರುಗಿದೊಡನೆ ನನಗೊಂದು ಯೋಗ್ಯವಾದ ಪದವಿಯು ಸಿಕ್ಕಬಹುದು. ಆ ಮೇಲೆ ಕಮಲೆಯನ್ನು, ವರಿಸಲು ಯೋಗ್ಯನಾಗುವೆನು. ವಿಲಾಯಿತಿಗೆ ಹೋಗುವ ಭರವಸೆಯು ಸಿಕ್ಕಿದೊಡನೆ ಕಮಲೆಗೆ ನನ್ನನ್ನು ಕಾಯಲು ಪತ್ರ ಬರೆಯಬಹುದು. ಅವಳೂ ಅದಕ್ಕೆ ಸಮ್ಮತಿಸಿದೊಳು. ಹರಿಂಪ್ರಸಾದನೂ ಅದಕ್ಕೆ ಒಪ್ಪುವನು. ಆದರೆ ವಿಲಾಯಿತಿಗೆ ಹೋಗುವುದಾದರೂ ಹೇಗೆ? ನನ್ನ ಆಸ್ತಿಗಳನ್ನೆಲ್ಲಾ ಮಾರಬೇಕು. ಅದು ಸಾಧ್ಯವೇ? ಇತರರಾರಾದರೂ ನನಗೆ ಹಣಕೊಟ್ಟದ್ದಾದರೆ, ಆ ಮೇಲೆ, ಅವರು ತಮ್ಮ ಮಗಳನ್ನು ಮದುವೆಯಾಗದೆ ಇತರರನ್ನು ವರಿಸಲು ಸಮ್ಮತಿಸಿಯಾರೇ? ಎಂದೂ ಆಗದು' ಎಂದು ಭಗ್ನಮನೋರಥನಾಗಿ ನಿಟ್ಟುಸಿರು ಬಿಡುವನು. ಅವರೂ ಈ ದಾರಿಯು ತೋರಿದನಂತರ ಅವನ ಮನಸ್ಸಿನ ಶಾಂತತೆಯನ್ನು ಎರಡು ಯೋಜನೆಗಳು ಕೆಡಿಸತೊಡಗಿದವು. ಅವನು ವಿರಾಮಸಮಯಗಳನ್ನೆಲ್ಲಾ, ವಿಲಾಯಿತಿಗೆ ಹೋಗುವುದಕ್ಕೆ ದಾರಿ ಹುಡುಕುವುದರಲ್ಲಿಯೂ, ಕಮಲೆಯನ್ನು ಮದುವೆಯಾಗಿ ಸುಖಿಸುವುದರಲ್ಲಿಯೂ ಕಳೆಯುತ್ತಿದ್ದನು.

ಡಾ. ನೋಕ್ಸ್ ಎಬ್ರಹಾಮ್
ದಂತ ವೈದ್ಯರು.
(ಸೀಯರ್ಸ್ ಲೆಸ್ಲಿ ಬಂಗ್ಲೆ)
(ಸ್ಪೆನ್ಸರ್ಸ್ ಹತ್ತಿರ)
ಮಡಿಕೇರಿ

ಯೂನಾನಿ ಫಾರ್ಮಸಿಯ ಉತ್ತಮ ಔಷಧಿಗಳು.

ಉಬ್ಬಸ ಸಂಹಾರಿ (Asthma cure) ಕೆಲವು ದಿನಗಳ ಸೇವನೆಯಿಂದ ಉಬ್ಬಸವನ್ನು ಖಾತ್ರಿಯಾಗಿ ಗುಣಪಡಿಸುತ್ತದೆ. 40 ದಿನದ ಔಷಧಿಗೆ ಕ್ರಯ ರೂ. 5—12—0.

ಅಂಬರ್ ಕೂದಲೆಣ್ಣೆ, ಸುಗಂಧಯುಕ್ತ ಅಮ್ಲಕೇಶ ತೈಲ ಅಲ್ಲದೆ ಎಲ್ಲಾ ರೋಗಗಳಿಗೂ ರಾಮಬಾಣದಂತಿರುವ ಮಾತ್ರೆಗಳೂ, ಚೂರ್ಣಗಳೂ, ಲೇಹಗಳೂ, ತೈಲಗಳೂ ಮತ್ತು ಕೇಶ ತೈಲಗಳೂ ಸಹ ತಯಾರಿರುವುವು.

ಬೇಗನೆ ಬರೆಯಿರಿ:—

ಯಂ. ಯಂ ಸಿದ್ದೀಕ್,
ಪ್ರೊಪ್ರೈಟರ್,
ಯುನಾನಿ ಔಷಧಶಾಲಾ, ಮಡಿಕೇರಿ, ಕೊಡಗು.

30

ಕೊಡಗು

ಸೆಪ್ಟಂಬರ್ ತಾರೀಕು ೩೦ನೇ ಶುಕ್ರವಾರ ೧೯೩೮.

ಪ್ರಜಾ ಸ್ವಾತಂತ್ರ್ಯವೋ ಅನಾಯಕತ್ವವೋ?

'ಪ್ರಜಾ ಸ್ವಾತಂತ್ರ್ಯವಿರಬೇಕೆಂಬ ಪದದಿಂದ ದೇಶದಲ್ಲಿ ಕೆಲವರು ಕೊಲೆ, ಲೂಟಿ, ಮತ್ತು ಹಿಂಸಾ ಯುಕ್ತವಾದ ಸಮಾಜದ ಹೋರಾಟ ಮುಂತಾದ್ದನ್ನು ಬೋಧಿಸುತ್ತಲೂ, ಪತ್ರಿಕೆಗಳಲ್ಲಿ ಬರೆಯುತ್ತಲೂ ಇರುವುದರಿಂದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ಈಗ ತಾನೇ ಡೆಲ್ಲಿಯಲ್ಲಿ ನಡೆದ ಅಧಿವೇಶನದಲ್ಲಿ ಅಂತಹ ಹಿಂಸೆಯ ಬೋಧನೆಯು ಪ್ರಜಾಸ್ವಾತಂತ್ರ್ಯದಲ್ಲಿ ಅಡಕವಾಗಿಲ್ಲವೆಂತಲೂ, ಹಾಗೆ ಹಿಂಸೆಯ ಬೋಧನೆಯ ಮೂಲಕ ಪರರ ಜೀವಕ್ಕೂ ಆಸ್ತಿಗಳ ಭದ್ರತೆಗೂ ಬರುವ ಅಪಾಯವನ್ನು ನಿಲ್ಲಿಸಲಿಕ್ಕಾಗಿ ಕಾಂಗ್ರೆಸ್ ಪ್ರತಿನಿಧಿಗಳಿಂದ ನಡೆಸಲ್ಪಡುತ್ತಿರುವ ಪ್ರಾಂತೀಕ ಸರ್ಕಾರಗಳು ಮಾಡಬೇಕಾಗುವ ಕಾರ್ಯಗಳಿಗೆ ಕಾಂಗ್ರೆಸ್ ವತ್ತಾಸೆ ಕೊಡುತ್ತದೆ' ಎಂಬ ಠರಾವನ್ನು ಮಂಜೂರು ಮಾಡಿ ಜನತೆಯನ್ನು ಹಿಂಸಾ ಮಾರ್ಗಕ್ಕೆ ಹೋಗದಂತೆ ಎಚ್ಚರಿಸಿದೆ.

ಮೇಲೆ ಕೊಟ್ಟಿರುವುದು ಠರಾವಿನ ಅಭಿಪ್ರಾಯ ಮಾತ್ರವಾಗಿದೆ, ಠರಾವಿನ ವಾಕ್ಯಗಳೇ ಅಲ್ಲ. ಪ್ರಜಾ ಜನರಿಗೆ ಇರುವ ಭಾಷಣ ಮತ್ತು ಲೇಖನ ಸ್ವಾತಂತ್ರ್ಯಗಳಿಗೆ ಅಡಚಣೆ ಮಾಡಬಾರದೆಂಬ ತತ್ವವನ್ನು ಕಾಂಗ್ರೆಸಿನವರು ಒಪ್ಪಿದ್ದಾರೆಂಬ ಧೈರ್ಯದಿಂದ ಕಾಂಗ್ರೆಸ್ ಪ್ರತಿನಿಧಿಗಳು ಸರ್ಕಾರವನ್ನು ನಡೆಸುತ್ತಿರುವ ಪ್ರಾಂತ್ಯಗಳಲ್ಲಿ ಅನೇಕರು ಹಿಂಸೆಯ ದಾರಿಗಳನ್ನು ಬೋಧಿಸುತ್ತಲಿದ್ದಾರೆಂತ ಮದ್ರಾಸ್, ಬಿಹಾರ್, ಸಂಯುಕ್ತ ಪ್ರಾಂತ್ಯ ಮುಂತಾದ ಕಡೆಗಳಿಂದ ಕಾಂಗ್ರೆಸಿಗೆ ತಿಳಿದು ಬಂದುದರಿಂದ ಈ ತರಹದ ಠರಾವನ್ನು ಮಾಡಬೇಕಾಯಿತು. ಸಮತಾವಾದ ಅಥವಾ ಸಾಮ್ಯವಾದವೆಂಬ ತತ್ವವನ್ನು ಬೋಧಿಸುತ್ತಿರುವ ಪಾರ್ಟಿಯವರು ಕಾಂಗ್ರೆಸಿಗೆ ಸೇರಿದವರೂ, ಸೇರದವರೂ ಸಹ ಈ ತರಹದ ಬೋಧನೆಯನ್ನು ಮಾಡುತ್ತಿರುವದಾಗಿದೆ ಎಂದು ಪತ್ರಿಕೆಗಳಿಂದ ತಿಳಿಯಬಂದಿದೆ. ಈ ಪಾರ್ಟಿಯವರು ಬಹಳ ಬಹಿರಂಗವಾಗಿ ಹಿಂಸಾ ರೀತಿಯನ್ನು ಬೋಧಿಸುತ್ತಿದ್ದಾರೆಂದು ನೆರೆಜಿಲ್ಲೆಗಳಿಂದ ವರ್ತಮಾನವಿದೆ. ಈ ವರ್ತಮಾನಗಳು ನಿಜವಿರಬೇಕೆಂಬುದರ ನಿದರ್ಶನವಾಗಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಲ್ಲಿ ಈ ಠರಾವನ್ನು ಈ ಪಾರ್ಟಿಯವರೇ ವಿರೋಧಿಸಿದ್ದೂ ಅಲ್ಲದೆ ಈ ಪಾರ್ಟಿಗೆ ಸೇರಿದ ಶ್ರೀ. ಕಮಲಾದೇವಿ ಚಟ್ಟೋಪಾಧ್ಯಾಯ ಮುಂತಾದ ಕೆಲವರು ಸಭೆಯಿಂದ ಹೊರಟು ಹೋದರು. ಈ ತರಹದ ಠರಾವನ್ನು ಸಭೆಯ ಮುಂದೆ ತರಬಾರದಿತ್ತೆಂತಲೂ ಹೀಗೆ ಹಿಂಸೆಯನ್ನು ಕಾಂಗ್ರೆಸ್ ಮೆಂಬರುಗಳು ಯಾರಾದರೂ ಬೋಧಿಸುತ್ತಿರುವುದು ಕಂಡುಬಂದರೆ ಅಂಥವರ ಮೇಲೆ ಕಾಂಗ್ರೆಸ್ ಸಭೆಗಳು ಏನಾದರೂ ಶಿಕ್ಷೆ ಮಾಡಬೇಕೇ ಹೊರತು, ಸರ್ಕಾರವು ಶಿಕ್ಷೆ ಕೊಡಬಾರದೆಂದು ಮುಂತಾಗಿ ಈ ಪಾರ್ಟಿಯವರು ವಾದಮಾಡಿದರು.

ನಮ್ಮ ದೇಶದಲ್ಲಿ ಸಮತಾವಾದದ ಬೋಧನೆಯಾಗಲೀ, ಆ ತತ್ವವನ್ನು ಬೋಧಿಸುವವರಲ್ಲಿ ಹಿಂಸಾ ಮಾರ್ಗವನ್ನು ಅವಲಂಬಿಸಬಹುದೆಂಬ ಬೋಧನೆಯಾಗಲೀ ಇನ್ನೂ ಪ್ರಾರಂಭವಾಗಿಲ್ಲ. ಇಲ್ಲಿ ಕಾಂಗ್ರೆಸ್ ಸರ್ಕಾರವೂ ಇಲ್ಲ. ಅಂಥಾ ಬೋಧನೆಯನ್ನು ಮಾಡಲು ಸರ್ಕಾರವೂ ಬಿಡುವುದಿಲ್ಲ. ಆದರೆ ಕೊಡಗಿನಲ್ಲಿ ಕಾಂಗ್ರೆಸ್ ಚಳವಳಿ ನಡೆಸುವವರು ಕಾಂಗ್ರೆಸಿನ ಸಹಾಯಕ್ಕಾಗಿ ಹೊರಗಿನಿಂದ ಕಾಂಗ್ರೆಸ್ ಕೆಲಸಗಾರರನ್ನು ಕರೆಸುವ ಪದ್ಧತಿ ಇದೆ. ಹಾಗೆ ಕರೆಸಲ್ಪಡುವ ಮುಂದಾಳುಗಳಿಗೆ ಅಹಿಂಸಾ ತತ್ವದಲ್ಲಿ ನಂಬಿಕೆ ಇದೆಯೋ, ಇಲ್ಲವೋ ಎಂದು ನೋಡಿಕೊಳ್ಳುವುದು ಅವಶ್ಯವಿದೆ. ಇಲ್ಲವಾದರೆ ಬಹಿರಂಗವಾಗಿ ಅಹಿಂಸಾ ದಾರಿಯನ್ನು ಬೋಧಿಸಿದರೂ ಕೆಲಸಗಾರರ ಚಿಕ್ಕ ಕೂಟಗಳಲ್ಲಿ ಹಿಂಸಾ ರೀತಿಗಳನ್ನು ಗುಪ್ತ ರೀತಿಯಿಂದ ಬೋಧಿಸಬಹುದು. ಅಂಥಾ ಬೋಧನೆಗಳಿಂದ ಹಿಂಸಾ ಭಾವನೆಯು ಯುವಕರಲ್ಲಿ ಬೇರೂರಬಹುದು. ಸಮಾಜದಲ್ಲಿ ಬಡವ, ದೊಡ್ಡವ ಎಂಬ ಭೇದವಿರುವ ವರೆಗೂ ಬಡವರ ಕಷ್ಟನಿವಾರಣೆಗೆ ಬೋಧಿಸುವ ಯಾವ ತತ್ವವೇ ಆದರೂ ರುಚಿಕರವಾಗಬಹುದು. ಆದರೆ ಹಿಂಸಾ ಮಾರ್ಗದಿಂದ ದೊರಕುವ ಸಮತೆಯೇ ಆಗಲೀ, ರಾಜ್ಯ ಕಾರ್ಯದ ಸ್ವಾತಂತ್ರ್ಯವೇ ಆಗಲೀ ಜನಾಂಗಕ್ಕೆ ಹಿತಕರವಾಗುವುದಿಲ್ಲ. ಆದ್ದರಿಂದ ಕಾಂಗ್ರೆಸ್ ಕೆಲಸದಲ್ಲಿ ತಿಳಿದಾಗಲೀ, ತಿಳಿಯದೇ ಆಗಲೀ ಹಿಂಸೆಯು ಪ್ರವೇಶಿಸದಂತೆ ನೋಡಿಕೊಳ್ಳತಕ್ಕದ್ದು ಕಾಂಗ್ರೆಸಿನವರ ಮಾತ್ರವಲ್ಲ, ದೇಶದ ಕರ್ತವ್ಯವಾಗಿದೆ.

ಕಾಂಗ್ರೆಸ್ ಸಭೆಯು ಅಹಿಂಸಾ ತತ್ವವನ್ನು ಅಂಗೀಕರಿಸಿಕೊಂಡಿದೆ. ಅದರಿಂದ ದೇಶಕ್ಕೂ ಹಿತವಿದೆಯೆಂದು ನಮ್ಮ ನಂಬಿಕೆಯೂ ಆಗಿದೆ. ಅಹಿಂಸಾ ತತ್ವವನ್ನು ಅಂಗೀಕರಿಸಿಕೊಂಡಿರುವಾಗ ಅವಶ್ಯಬಿದ್ದಾಗ ಹಿಂಸೆಯನ್ನೂ ಉಪಯೋಗಿಸಬಹುದೆಂದು ಬೋಧಿಸುವುದು ನ್ಯಾಯವಲ್ಲ. ಅಂಥಾ ಹಿಂಸಾ ಮಾರ್ಗವನ್ನು ಖಂಡಿಸುವುದು ಕಾಂಗ್ರೆಸ್ ಸರ್ಕಾರವೇ ಆದರೂ ಅಂಥಾ ಸರ್ಕಾರದ ಕರ್ತವ್ಯವೂ ಆಗಿದೆ. ಕಾಂಗ್ರೆಸಿನ ಧ್ಯೇಯಗಳನ್ನು ಸಾಧಿಸಲು ಅಹಿಂಸಾ ಮಾರ್ಗವು ಸಾಲದು ಹಿಂಸೆಯೂ ಬೇಕಾಗುತ್ತದೆಯೆಂದು ಕಾಂಗ್ರೆಸಿಗೆ ತೋರಿಬಂದಾಗ ಅಹಿಂಸಾ ತತ್ವವನ್ನು ಬಿಡಬಹುದು. ಅಂಥಾ ಕಾಲ ಬರಲಾರದೆಂದು ನಮ್ಮ ಆಶೆಯೂ ನಂಬಿಕೆಯೂ ಇದೆ. ಹೇಗೂ ಅಹಿಂಸಾ ತತ್ವವು ಕಾಂಗ್ರೆಸಿನ ಧರ್ಮವಾಗಿರುವಾಗ ಹಿಂಸಾ ಮಾರ್ಗವನ್ನು ಖಂಡಿಸುವದರಲ್ಲಿಯೂ, ಹಿಂಸಾ ಮಾರ್ಗ ಹಿಡಿವವರನ್ನು ಕಾಂಗ್ರೆಸ್ ಸರ್ಕಾರಗಳು ಶಿಕ್ಷಿಸುವುದರಲ್ಲಿಯೂ ಅನ್ಯಾಯವೇನೂ ಇಲ್ಲ.

ಮೈಸೂರಿನಲ್ಲಿ ಪ್ರೈಮರಿ ವಿದ್ಯಾಭ್ಯಾಸ.

ಮೈಸೂರು ದೇಶದಲ್ಲಿ ಈ ಶತಮಾನದ ಪ್ರಾರಂಭದಲ್ಲಿ ಸುಮಾರು 1930ನೇ ಇಸವಿಯ ವರೆಗೂ ಪ್ರೈಮರಿ ವಿದ್ಯಾಭ್ಯಾಸ ಹೆಚ್ಚುತಲೇ ಬಂತೆಂತಲೂ 1930ರಲ್ಲಿ ಈ ವಿದ್ಯಾ ಪ್ರಸಾರದ ಸಂಬಂಧವಾಗಿ ಹೊಸ ಕಾನೂನು ಮೂಲಕ ಹೊಸ ರೀತಿಗಳನ್ನು ತಯಾರಿಸಿದ ಮೇಲೆ ಪ್ರೈಮರಿ ವಿದ್ಯಾಭ್ಯಾಸವು ಹೆಚ್ಚದೆ ಇರಲು ಕಾರಣವೇನೆಂಬದನ್ನು ಕಂಡು ಹಿಡಿದು ಹೆಚ್ಚುವಂತೆ ಮಾಡಲು ಸಲಹೆ ಕೊಡಲು ಒಂದು ಕಮಿಟಿಯು ನೇಮಕವಾಗಿತ್ತು. ಆ ಕಮಿಟಿಯ ವರದಿಯು ಈಗ ತಾನೇ ಪ್ರಕಟವಾಗಿದೆ. 1930ನೇ ಇಸವಿಯ ಕಾನೂನು ಮೇರೆ ಪ್ರೈಮರಿ ವಿದ್ಯಾಭ್ಯಾಸದ ಅನುಕೂಲತೆಗಳನ್ನು ಮಾಡಿ ಕೊಡುವ ಜವಾಬ್ದಾರಿಯನ್ನು ಸ್ಥಳೀಯ ಸ್ವರಾಜ್ಯ ಸಂಸ್ಥೆಗಳಾದ ಡಿಸ್ಟ್ರಿಕ್ಟ್ ಬೋರ್ಡ್ ಮುನ್ಸಿಪಾಲಿಟಿಗಳಿಗೂ ಮತ್ತು ಸರ್ಕಾರಕ್ಕೂ ವಹಿಸಿತ್ತು. ಡಿಸ್ಟ್ರಿಕ್ಟ್ ಬೋರ್ಡ್, ಮುನ್ಸಿಪಾಲಿಟಿಗಳು ಈ ಕೆಲಸವನ್ನು ಮಾಡದಿದ್ದರೆ ಸರಕಾರವೇ ಮಾಡಬೇಕು ಎಂತ ಇತ್ತು.

ಸ್ಥಳೀಯ ಸ್ವರಾಜ್ಯ ಸಂಸ್ಥೆಗಳಲ್ಲಿ ಹಣವಿಲ್ಲದ್ದರಿಂದ ಶಾಲೆಗಳನ್ನು ಹೆಚ್ಚಿಸಬೇಕಾದರೆ ವಿದ್ಯಾಭ್ಯಾಸದ ಖರ್ಚಿನ ಬಗ್ಗೆ ಹೆಚ್ಚಿನ ತೆರಿಗೆ ಹಾಕಬೇಕಾಗುತ್ತಿತ್ತು. ಆದರೆ ದೇಶದ ಜನರ ಆರ್ಥಿಕ ಸ್ಥಿತಿಯು ಕೀಳು ಸ್ಥಿತಿಯಲ್ಲಿರುವಾಗ ಅವರ ಮೇಲೆ ಹೆಚ್ಚಿಗೆ ಹೊರೆ ಹೊರಿಸಲು ಡಿಸ್ಟ್ರಿಕ್ಟ್ ಬೋರ್ಡುಗಳು ತಯಾರಿಲ್ಲದೆ ಇದ್ದದ್ದು ಪ್ರೈಮರಿ ವಿದ್ಯಾಭ್ಯಾಸದ ಬಡಾವಣೆಯು ಆಗದಿರಲು ಕಾರಣವೆಂತ ಆ ವರದಿಯಲ್ಲಿ ನಮೂದಿಸಲ್ಪಟ್ಟಿದೆ.

ಆದರೆ ಈ ವರೆಗೆ ಪ್ರೈಮರಿ ವಿದ್ಯಾಭ್ಯಾಸದ ಬೆಳವಣಿಗೆಯು ಆಗದಿರಲು ಕಾರಣವು ಯಾವುದೇ ಇರಲಿ, ಇನ್ನು ಮೇಲಾದರೂ ಪ್ರೈಮರಿ ವಿದ್ಯಾಭ್ಯಾಸವನ್ನು ಕೂಡಲೇ ಹೆಚ್ಚಿಸಬೇಕೆಂತಲೂ ಬೈಲು ಪ್ರಾಂತ್ಯದಲ್ಲಿ 500 ಜನರಿರುವ ಪ್ರತಿಯೊಂದು ಗ್ರಾಮಕ್ಕೂ, ಮಲನಾಡು ಪ್ರಾಂತ್ಯದಲ್ಲಿ 300 ಜನಸಂಖ್ಯೆ ಇರುವ ಪ್ರತಿಯೊಂದು ಗ್ರಾಮಕ್ಕೂ ಒಂದು ಶಾಲೆಯನ್ನು ಸ್ಥಾಪಿಸಬೇಕೆಂತಲೂ, ನಾಲ್ಕು ವರ್ಷಗಳೊಳಗೆ 1000 ಶಾಲೆಗಳು ಹೆಚ್ಚಬೇಕೆಂತಲೂ ಕಮಿಟಿಯು ಶಿಫಾರಸು ಮಾಡಿದೆ. ಇದರ ಖರ್ಚಿನ ಬಗ್ಗೆ ಜನರ ಮೇಲೆ ಕಂದಾಯದ ರೂಪಾಯಿ ಒಂದಕ್ಕೆ ಆರು ಕಾಸಿನಂತೆ ವಿದ್ಯಾ ತೆರಿಗೆ ಹಾಕಬಹುದೆಂತ ಸಲಹೆ ಇದೆ. ಹಾಗೆ ಅರ್ಧ ಆಣೆ ತೆರಿಗೆ ಹಾಕಿದರೆ ಮೂರು ಲಕ್ಷ ರೂಪಾಯಿ ಉತ್ಪತ್ತಿಯಾಗುತ್ತದೆಯಂತೆ. ಈ ಸಲಹೆಗೆ ಕಮಿಟಿಯಲ್ಲಿ ಸರಕಾರಿ ಉದ್ಯೋಗವಿಲ್ಲದ ಮೆಂಬರುಗಳು ಒಪ್ಪಿಗೆ ಕೊಟ್ಟಿರುವುದಿಲ್ಲ.

ಮಂತ್ರಿ ಮಂಡಲಿಯಲ್ಲಿ ಒಬ್ಬರು ಈ ಕಮಿಟಿಯ ಅಧ್ಯಕ್ಷರು. ಇಂಥಾ ಕಮಿಟಿಯೇ ಪ್ರೈಮರಿ ವಿದ್ಯಾಭ್ಯಾಸವು ಇಷ್ಟೊಂದು ಧಾರಾಳವಾಗಿ ಬಡಾವಣೆಯಾಗಬೇಕೆಂತ ಶಿಫಾರಸು ಮಾಡಿದೆ. ಮಂತ್ರಿಗಳಲ್ಲಿ ಒಬ್ಬರು ಅಧ್ಯಕ್ಷರಾಗಿ ಇರುವ ಈ ಕಮಿಟಿಯ ಶಿಫಾರಸ್ಸನ್ನು ಸರಕಾರವೂ ಅಂಗೀಕರಿಸದೆ ಇರಲಾರದು. ಅಲ್ಲದೆ ದೇಶದಲ್ಲಿ ಪ್ರಜಾಸ್ವಾತಂತ್ರ್ಯದ ಹೋರಾಟವು ಹೆಚ್ಚಾಗಿ ಜನರಿಗೆ ಜಾಗ್ರತಿಯಾಗಿರುವಾಗ ಪ್ರಜಾಜನರನ್ನು ಅಕ್ಷರಸ್ಥರನ್ನಾಗಿ ಮಾಡಲು ಕೊಟ್ಟಿರುವ ಈ ಸಲಹೆಗಳು ಜಾರಿಗೆ ಬರದೆ ಇರಲು ಸಾಧ್ಯವೇ ಇಲ್ಲ. ಹೀಗೆ 'ನಿರಂಕುಶ ಪ್ರಭುತ್ವ'ವಿರುವ ರಾಜ್ಯದಲ್ಲಿ ವಿದ್ಯಾಭ್ಯಾಸವನ್ನು ಹೆಚ್ಚಿಸಿಕೊಳ್ಳಲು ಯೋಚನೆ ನಡೆಯುತ್ತಿರುವಾಗ ಮುಂದುವರಿದ ಬ್ರಿಟಿಷ್ ಸರಕಾರಕ್ಕೆ ಒಳಪಟ್ಟ ನಮ್ಮ ಈ ಕೊಡಗು ದೇಶದಲ್ಲಿ ಪ್ರೈಮರಿ ವಿದ್ಯಾಭ್ಯಾಸದ ಭವಿಷ್ಯತ್ತು ಹೇಗಿದೆ? ಈಗ ಖರ್ಚು ಕಡಿಮೆ ಮಾಡಬೇಕೆಂಬ ಸರಕಾರಿ ಹುಕುಂ ಜಾರಿಗೆ ಬಂದರೆ ಡಿಸ್ಟ್ರಿಕ್ಟ್ ಬೋರ್ಡಿನ ಅನೇಕ ಶಾಲೆಗಳು ಮುಚ್ಚಬೇಕಾಗಬಹುದು. ಇನ್ನೂ ಅನೇಕ ಶಾಲೆಗಳಲ್ಲಿ ಮಾಸ್ತರುಗಳನ್ನು ಕಡಿಮೆ ಮಾಡಬಹುದು. ಹೀಗೆ ಆಗದಂತೆ ಡಿಸ್ಟ್ರಿಕ್ಟ್ ಬೋರ್ಡಿನವರು ಹೋರಾಡದೆ ಇರುವುದಿಲ್ಲ. ಶಾಲೆಗಳು ಕಡಿಮೆಯಾಗಲಾರವಾದರೂ ಪ್ರೈಮರಿ ವಿದ್ಯಾಭ್ಯಾಸವು ಹೆಚ್ಚಲು ಅನುಕೂಲತೆಗಳು ದೊರೆಯುವ ಸಂಭವವು ಲೇಶ ಮಾತ್ರವೂ ಇಲ್ಲ. ದೇಶೀಯ ರಾಜ್ಯದ ಮಾದರಿಯನ್ನಾದರೂ ನೋಡಿ ಬ್ರಿಟಿಷರಿಂದ ನಡೆಸಲ್ಪಡುವ ನಮ್ಮ ಸರಕಾರವು ಡಿಸ್ಟ್ರಿಕ್ಟ್ ಬೋರ್ಡಿನವರು ನಡಿಸುವ ಪ್ರೈಮರಿ ವಿದ್ಯಾಭ್ಯಾಸದ ಕೆಲಸಕ್ಕೆ ಅಡ್ಡಿ ಬರಬಾರದೆಂತ ಹಾರೈಸುತ್ತೇವೆ.

ಯೂರೋಪಿನ ಸ್ಥಿತಿ.

ಯೂರೋಪಿನ ಯುದ್ಧದ ವಾತಾವರಣವು ಗಂಟೆ ಗಂಟೆಗೆ ಬದಲಾಗುತ್ತಿದೆ. ಆದರಿಂದ ನಮ್ಮ ಲೇಖಗಳು ವಾರ ವಾರ ಬಣ್ಣ ಬದಲಾಗುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಕಳೆದ ವಾರದಲ್ಲಿ ಬ್ರಿಟಿಷ್ ಸರಕಾರವು ತನ್ನ ಗೌರವಕ್ಕೆ ಕೊರತೆ ತಂದುಕೊಂಡಾದರೂ ಯುದ್ಧವನ್ನು ತಪ್ಪಿಸುವುದರಲ್ಲಿ ಇದೆಯೆಂತ ಬರೆದಿದ್ದೆವು. ಅನಂತರ ಬ್ರಿಟನಿನ ಜನತೆಯೂ ಒಟ್ಟು ಪ್ರಪಂಚವೂ ಬ್ರಿಟಿಷರೂ ಫ್ರೆಂಚರೂ ಜೆಕೋಸ್ಲೋವೋಕಿಯಾ ದೇಶವನ್ನು ಬಲವಂತದಿಂದ ತನ್ನ ದೇಶದ ಕೆಲವು ಭಾಗವನ್ನು ಜರ್ಮನಿಗೆ ಬಿಟ್ಟುಕೊಡುವಂತೆ ಮಾಡುವುದು ಧರ್ಮವಲ್ಲವೆಂತ ಕೂಗಿಕೊಂಡರು. ಜರ್ಮನಿಯ ಸರ್ವಾಧಿಕಾರಿಯಾದ ಹಿಟ್ಲರನು ಜೆಕೋಸ್ಲೋವೋಕಿಯಾ ರಾಜ್ಯದ ಕೆಲವು ಭಾಗವು ತನಗೆ ಸಿಕ್ಕಬೇಕೆಂತ ಹೇಳಿದ್ದೂ ಅಲ್ಲದೆ ಅಕ್ಟೋಬರ್ 1 ನೇ ತಾರೀಕಿನೊಳಗೆ ಆ ದೇಶವು ತನ್ನ ಅಧೀನಕ್ಕೆ ಸಿಕ್ಕಬೇಕೆಂತಲೂ ಜೆಕೋಸ್ಲೋವೋಕಿಯಾ ರಾ-

ಜ್ಯದಲ್ಲಿ ಅಲ್ಪ ಸಂಖ್ಯಾತರಾಗಿರುವ ಪೋಲೆಂಡ್ ಜನರೂ, ಹಂಗೇರಿಯಾ ಜನರೂ ಇರುವ ಪ್ರಾಂತ್ಯಗಳನ್ನು ಆಯಾ ರಾಜ್ಯಗಳಿಗೆ ಬಿಡಬೇಕೆಂತಲೂ ಹಿಟ್ಲರ್ ಹೊಸ ಶರತ್ತುಗಳನ್ನೂ ಹಾಕಿದನು. ಇಂಗ್ಲೆಂಡ್ ಮತ್ತು ಫ್ರಾನ್ಸ್ ಸರಕಾರಗಳು ಜೆಕೊಸ್ಲೋವಾಕಿಯಾ ರಾಜ್ಯದ ಸಹಾಯಕ್ಕೆ ಬರದಿದ್ದರೂ ತಾವು ಸಹಾಯ ಮಾಡುವುದು ಖಂಡಿತವೆಂತ ರಷ್ಯಾ ಸರಕಾರವು ಪ್ರಕಟಿಸಿತು. ಈ ಕಾರಣಗಳಿಂದ ಬ್ರಿಟಿಷ್ ಮಂತ್ರಿಯು ಜರ್ಮನಿಯು ಅಪೇಕ್ಷಿಸಿದಂತೆಲ್ಲಾ ಜೆಕೊಸ್ಲೋವಾಕಿಯವನ್ನು ಹರಿದು ಹಂಚಲು ಒಪ್ಪಲಿಲ್ಲ. ಆದ್ದರಿಂದ ಅಕ್ಟೋಬರ್ ಒಂದನೇ ತಾರೀಕಿನೊಳಗೆ ಜೆಕೊಸ್ಲೋವಾಕಿಯಾ ದೇಶವು ಜರ್ಮನ್ ಜನರಿರುವ ಪ್ರಾಂತ್ಯವನ್ನು ಜರ್ಮನಿಗೆ ಬಿಟ್ಟುಕೊಡದಿದ್ದರೆ ಆ ದೇಶದ ಮೇಲೆ ತಾನು ಆಕ್ರಮಿಸುತ್ತೇನೆಂಬ ಮಾತೇ ಈಗ ಉಳಿದಿದೆ. ಆದ್ದರಿಂದ ಯುದ್ಧವು ಆಗಲೇ ಬೇಕೆಂಬ ಸ್ಥಿತಿಗೆ ತಲಪಿರುವಂತೆ ಕಾಣುತ್ತದೆ. ಈ ಪತ್ರಿಕೆಯು ಜನರ ಕೈ ಸೇರುವ ಮುಂಚೆ ಯುದ್ಧ ಪ್ರಾರಂಭವಾಗುತ್ತದೊ ಎಂಬ ಸಂಶಯವಿದೆ.

ಯುದ್ಧವಾಗಿ ಜನಸಂಹಾರವಾಗಬೇಕೆಂತ ನಮ್ಮ ಆಶೆಯೇನೂ ಇಲ್ಲ. ಜೆಕೊಸ್ಲೋವಾಕಿಯಕ್ಕೆ ಫ್ರೆಂಚರು ಕೊಟ್ಟ ವಾಗ್ದಾನದಂತೆ ನಡೆದುಕೊಳ್ಳುವುದು ಖಂಡಿತವೆಂತಲೂ ಫ್ರೆಂಚರ ಸಹಾಯಕ್ಕೆ ಬ್ರಿಟಿಷರು ಸೇರುವುದು ನಿಶ್ಚಯವೆಂತಲೂ ಈ ಎರಡು ದೇಶಗಳ ಸರಕಾರಗಳು ಮೊದಲಿನಿಂದಲೇ ಘಂಟಾಘೋಷವಾಗಿ ತಿಳಿಸಿದ್ದರೆ ಹಿಟ್ಲರನ ಬಲ ಜೋರಾಗಲೇ ಮುದುರಿಕೊಳ್ಳುತ್ತಿತ್ತು. ಅವನ ಬೆದರಿಕೆಗಳ ಭಿಣಿಭಿಣಿ ಶಬ್ದಕ್ಕೆ ಈ ಎರಡು ಸರಕಾರಗಳೂ ಬೆದರಿ ಜೆಕೊಸ್ಲೋವಾಕಿಯವನ್ನು ಬಲಿಕೊಡಲು ಮಾಡಿದ ಪ್ರಯತ್ನವನ್ನು ನಾವು ಖಂಡಿಸಬೇಕಾಯಿತು. ಈಗ ಈ ಎರಡು ಸರಕಾರಗಳು ಘಟ್ಟಿಯಾಗಿ ನಿಂತಿದ್ದಾವೆಯೆಂತ ತಿಳಿದಿರುವುದರಿಂದ ಹಿಟ್ಲರನು ಯುದ್ಧ ಮಾಡಲು ಕೊಂಚ ಹಿಂದು ಮುಂದು ನೋಡುತ್ತಿದ್ದಾನೆ. ಅದೇ ಕಾರಣದಿಂದ ಯುದ್ಧವಾಗದೆ ಇರಲೂಬಹುದು.

ಜೆಕೊಸ್ಲೋವಾಕಿಯಾದಲ್ಲಿ ಜರ್ಮನ್ ಜನರು ಇರುವ ಭಾಗ ಮಾತ್ರ ತನಗೆ ಸಿಕ್ಕಿದರೆ ಯೂರೋಪಿನಲ್ಲಿ ಹೆಚ್ಚಿನ ರಾಜ್ಯವನ್ನು ತಾನು ಅಪೇಕ್ಷಿಸುವುದಿಲ್ಲವೆಂತ ಹಿಟ್ಲರನು ಆಡಿದ ಮಾತಿಗೆ ಬೆಲೆ ಕೊಡಲು ಸಾಧ್ಯವಿಲ್ಲವಾಗಿದೆ. ಇಲ್ಲವಾದರೆ ಜರ್ಮನ್ ಜನರಿರುವ ಭಾಗಗಳನ್ನು ಜರ್ಮನಿಗೆ ಬಿಟ್ಟುಕೊಡಬೇಕೆಂಬ ಕೋರಿಕೆಯನ್ನು ಸರ್ವರೂ ಒಪ್ಪಿಕೊಳ್ಳಬಹುದಾಗಿತ್ತು. ಫ್ರಾನ್ಸಿನ ಮಗ್ಗುಲಲ್ಲಿ ರೈನ್‌ನದಿ ಹರಿಯುವ ಪ್ರಾಂತ್ಯವನ್ನು ಆಕ್ರಮಿಸಿಕೊಂಡರೆ ನನಗೆ ಇನ್ನು ಹೆಚ್ಚಿನ ರಾಜ್ಯ ಬೇಡವೆಂತ ಹೇಳಿದನು. ಆಸ್ಟ್ರಿಯಾವನ್ನು ಆಕ್ರಮಿಸಿಕೊಂಡಾಗಲೂ ಇದೇ ಮಾತನ್ನು ಹೇಳಿದನು. ಹಾಗೆ ಹೇಳಿದ ನಂತರ ಪ್ರಸ್ತುತ ಆಗಿರುವ ಆಕ್ರಮಣ ನಡಸಿದ್ದು ಗೊತ್ತಿದೆ. ಅವನ ವಿಸ್ತಾರವು ಹೆಚ್ಚಿದ ಮೇಲೆ ಪ್ರಪಂಚವನ್ನೇ ಆಕ್ರಮಿಸಲು ಹುಚ್ಚು ಹಿಡಿಯದೆ ಇರಲು ಸಾಧ್ಯವೇ ಇಲ್ಲ. ಆದ್ದರಿಂದ ಆ ಜನಾಂಗವು ಪ್ರಪಂಚದ ಶಾಂತತೆಗೆ ಹಾನಿಕಾರಿಯಾಗುವ ಮುಂಚೆಯೇ ಅವನ ಗರ್ವವನ್ನು ಮುರಿಯುವುದು ಅವಶ್ಯ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಕೊಡಗಿನ ಡೆಪ್ಯುಟೇಶನ್.

ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯ ತೀರ್ಮಾನದಂತೆ ಈ ಕೆಳಗಿನ ನಾವು ಐದು ಜನರು ಡೆಲ್ಲಿಯಲ್ಲಿ ಈ ತಾ. 22ರಲ್ಲಿ ಪ್ರಾರಂಭವಾದ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿ ಮೀಟಿಂಗಿಗೆ ಡೆಪ್ಯುಟೇಶನ್ ಹೋಗಿದ್ದೆವು. ಈ ತಾ. 17ರಲ್ಲಿ ಕೊಡಗಿನಿಂದ ಹೊರಟ ನಮಗೆ ತಾ. 19ರಲ್ಲಿ ವಾರ್ಧಾ ಸ್ಟೇಷನಿನಲ್ಲಿ ಮಹಾತ್ಮ ಗಾಂಧಿಯವರ ದರ್ಶನವಾಯಿತು. ಮಹಾತ್ಮರು ಅವರ ಸಂಗಡಿಗರೊಂದಿಗೆ ಅದೇ ಟ್ರೈನಿನಲ್ಲಿಯೇ ಡೆಲ್ಲಿಗೆ ಪ್ರಯಾಣ ಮಾಡಿದರು. ನಾವು ಮಹಾತ್ಮರ ಭೇಟಿಗೆ ಪ್ರಯತ್ನಿಸಿದೆವು. ಆದರೆ ಅವರು ದಣಿದಿದ್ದುದರ ಕಾರಣ ವಿಶ್ರಾಂತಿ ತೆಗೆಯುತ್ತಿದ್ದುದರಿಂದಲೂ ಮತ್ತು ಮೌನ ವ್ರತದಲ್ಲಿದ್ದುದರಿಂದಲೂ ಅವರೊಂದಿಗೆ ಮಾತಾಡಲು ಸಾಧ್ಯವಿಲ್ಲವೆಂದು ಅವರ ಸೆಕ್ರೆಟರಿಯವರಾದ ಶ್ರೀಯುತ ಪ್ಯಾರಿಲಾಲರು ತಿಳಿಸಿದ ಮೇಲೆ, ಪ್ಯಾರಿಲಾಲರೊಂದಿಗೆ ಕೊಡಗಿಗೆ ಸಂಬಂಧಿಸಿದ ಹರಿಪುರ ಕಾಂಗ್ರೆಸಿನ ಠರಾವನ್ನು ಕುರಿತು ವಿವರವಾಗಿ ಮಾತಾಡಲಾಯಿತು. ಅವರು ಅವಕಾಶ ದೊರೆತಾಗ್ಯೆ ಮಹಾತ್ಮರೊಂದಿಗೆ ಈ ವಿಚಾರ ಹೇಳುವೆನೆಂದರು.

ನಾವು ಡಿಲ್ಲಿಗೆ ತಾ. 20ರಲ್ಲಿ ತಲುಪಿದ ಮೇಲೆ ಹರಿಜನ ಕಾಲನಿಯಲ್ಲಿ ಮಹಾತ್ಮ ಗಾಂಧೀಜೀಯವರನ್ನು ಭೇಟಿಯಾಗಿ, ಅವರಿಗೆ ಕೊಡಗಿನ ಜೇನು ಮತ್ತು ಜೇನು ಸಂಘದಿಂದ ತಯಾರಿಸಲ್ಪಟ್ಟ, ಸ್ವಾಮಿ ಶಂಭುನಾಥನವರವರು ಕೊಟ್ಟಿದ್ದ ಅಹಿಂಸಾ ಜೇನನ್ನು ಕೊಟ್ಟು, ಅದರ ತಯಾರಿಕೆಯನ್ನು ವಿವರಿಸಿ ಹೇಳಲಾಯಿತು. ಅದು ಗ್ರಾಮ ಕೈಗಾರಿಕೆಯ ಉತ್ಪತ್ತಿಯೆಂದು ಮೊದಲಾಗಿ ಕೇಳಿ ನಗಾಡುತ್ತಾ ಅವರು ತಮ್ಮ ಸಂತೋಷವನ್ನು ಸೂಚಿಸಿದರು. ಮೌನ ವ್ರತದ ಕಾರಣ ಮಾತಾಡಲಿಲ್ಲ. ಆದರೆ ಕೂಡಲೇ ಅವರ ಸೆಕ್ರೆಟರಿಯವರಾದ ಪ್ಯಾರಿಲಾಲರು-ತಾನು ಕೊಡಗಿನ ಭವಿಷ್ಯತ್ತಿನ ವಿಚಾರ ಮಹಾತ್ಮರಿಗೆ ತಿಳಿಸಿದೆನು. ಅದನ್ನು ವರ್ಕಿಂಗ್ ಕಮಿಟಿಯ ಮುಂದಿಡುವುದು ಯುಕ್ತವೆಂದು ಅವರು ತಿಳಿಸಿದರೆಂದು ನಮಗೆ ಹೇಳಿದರು.

ಅನಂತರ ವರ್ಕಿಂಗ್ ಕಮಿಟಿಯ ಮೆಂಬರುಗಳಾದ ಖಾನ್ ಅಬ್ದುಲ್ ಗಫಾರ್ ಖಾನರು, ಶಂಕರರಾವ್ ದೇವ್‌ರವರು, ಡಾ. ಪಟ್ಟಾಭಿ ಸೀತಾರಾಮಯ್ಯನವರು, ಬಾಬು ರಾಜೇಂದ್ರ ಪ್ರಸಾದ ಮೊದಲಾದವರ ಸಂಗಡ ನಾವು ಡೆಪ್ಯುಟೇಶನ್ ಹೋದ ಉದ್ದೇಶವನ್ನು ಕುರಿತು ಸವಿಸ್ತಾರವಾಗಿ ವಿವರಿಸಿ ಹೇಳಿದೆವು. ತಾ. 23ರಲ್ಲಿ ವರ್ಕಿಂಗ್ ಕಮಿಟಿಯ ಮೀಟಿಂಗು ನಡೆಯುತ್ತಿದ್ದ ಹೊಸ ಡೆಲ್ಲಿಯಲ್ಲಿರುವ 'ಬಿರ್ಲಾ'ರವರ ಕಟ್ಟಡಕ್ಕೆ ಹೋಗಿ ಅಲ್ಲಿ ಜನರಲ್ ಸೆಕ್ರೆಟರಿಯಾದ ಶ್ರೀಯುತ ಕೃಪಲಾನಿಯವರನ್ನು ಕಂಡು ಮಾತಾಡಿದೆವು. ನಂತರ ವರ್ಕಿಂಗ್ ಕಮಿಟಿಯವರು ಈ ವಿಚಾರ ತಮ್ಮ ಮೀಟಿಂಗಿನಲ್ಲಿ ಚರ್ಚಿಸಿದರು. ಮೀಟಿಂಗು ಮುಗಿದ ಮೇಲೆ ಈ ಕೆಳಗಿನ ವಿಚಾರ ಡೆಪ್ಯುಟೇಶನಿನವರಿಗೆ ತಿಳಿಸಲಾಯಿತು.

'ಕೊಡಗಿನ ಭವಿಷ್ಯತ್ತಿನ ಸಂಬಂಧ ಹರಿಪುರ ಕಾಂಗ್ರೆಸ್ಸಿನಲ್ಲಿ ಪಾಸಾದ ಠರಾವು ಕೊಡಗಿನ ಕಾಂಗ್ರೆಸು ಜನರ ಮೇಲೆ ಬಿಡ್ಡಾಯವಾದುದಲ್ಲ. ಅದು ಅವರ ಇಚ್ಛಾನುಸಾರ ಮಾಡಲು ಬಿಡುವಂಥಾದ್ದು, ಆದ ಕಾರಣ ಕೊಡಗಿನ ಮುಂದಿನ ರಾಜ್ಯಾಡಳಿತ ಸ್ಥಿತಿಯನ್ನು ಕುರಿತು ಕೊಡಗಿನವರು ತಮ್ಮ ಅಭಿಪ್ರಾಯದಂತೆ ವರ್ತಿಸಲು ಯಾವ ಅಭ್ಯಂತರವೂ ಇಲ್ಲ.'

ಐ. ಪಿ. ಕಾರ್ಯಪ್ಪ,
ತಾರೀಕು, ಕೆ. ಸಿ. ಕರುಂಬಯ್ಯ,
30-9-38. ಬಿ. ಎಂ. ಕಾರ್ಯಪ್ಪ,
ಹೆಚ್. ಎಂ. ಪುಟ್ಟಣ್ಣ,
ಪಿ. ಐ. ಬೆಳ್ಯಪ್ಪ.

ವ್ಯವಸಾಯ ಟಿಪ್ಪಣಿಗಳು.

ಕಿತ್ತಳೆ ಸಸಿಗಳ ಬೇರು.

ಕೊಡಗಿನಲ್ಲಿ ಕಿತ್ತಳೆ ವ್ಯವಸಾಯ ಮಾಡುವ ಕೃತಾಪಿ ಜನಗಳಿಗೆಲ್ಲಾ, ಬೇರಿನಿಂದ ಉಂಟಾಗುವ ನಷ್ಟವನ್ನು ಕುರಿತು ಹೆಚ್ಚಿನದು ಹೇಳುವುದು ಅವಶ್ಯವಿಲ್ಲ. ಈ ರೋಗದ ಹಾವಳಿಯಿಂದ ಸಾವಿರಾರು ರೂಪಾಯಿ ಬೆಲೆ ಬಾಳುವ ಫಸಲು ನಷ್ಟವಾಗಿ ಹೋಗಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಬೇರು ಕಿತ್ತಳೆ ತೋಟದಲ್ಲಿ ತಲೆದೋರಿತೆಂದರೆ ಒಂದೇ ಒಂದು ವಾರದೊಳಗೆ ಶೇಕಡ 50%ರ ವರೆಗೆ ಫಸಲು ಬಿದ್ದು ಹೋಗುವುದುಂಟು. ಎಳೆಗಳು ಉಳ್ಳ ಗಿಡಗಳು ಕ್ಷೀಣವಾಗಿ ಕೆಲವು ವರ್ಷಗಳಲ್ಲಿ ಸತ್ತು ಹೋಗುವುದುಂಟು. ಈ ಮಹಾ ರೋಗವನ್ನು ಹತೋಟಿಗೆ ತರುವ ವಿಚಾರದಲ್ಲಿ ಲಕ್ಷ್ಯ ಕೊಡುವುದು ಅವಶ್ಯಕ.

ಈ ರೋಗ ನಿವಾರಣೋಪಾಯಗಳಲ್ಲಿ ಮೈಲುತುತ್ತ ಸುಣ್ಣ ದ್ರಾವಕವನ್ನು ಬೇರು ತಲೆದೋರುವ ಗಿಡಗಳ ಮೇಲೆ ಹಾರಿಸುವುದು ಒಂದು ಅನುಕೂಲ್ಯವಾದ ವಿಧಾನ.

ಮುಂಚಿತವಾಗಿ ಸಾಯಂಕಾಲ 5 ರಾತಲು ಮೈಲು ತುತ್ತನ್ನು ಒಂದು ಮಣ್ಣಿನ ಅಥವಾ ತಾಮ್ರದ ಪಾತ್ರೆಯಲ್ಲಿ ಒಂದು ಗೆಲನ್ (6 ಬುಪ್ಪಿ) ನೀರಿನಲ್ಲಿ ಕರಗಿಸಲಿಡುವುದು. ಇನ್ನೊಂದು ಪಾತ್ರೆಯಲ್ಲಿ 5 ರಾತಲು ಅಚ್ಚ ಸುಣ್ಣವನ್ನು ಒಂದು ಗೆಲನ್ ನೀರಿನಲ್ಲಿ ಕರಗಿಸಲಿಡುವುದು. ಈ ಎರಡು ದ್ರಾವಕಗಳನ್ನು ಮರುದಿನ ಸೋಸಿ 48 ಗೆಲನ್ (12 ಟಿನ್ನು) ನೀರು ಮಿಶ್ರ ಮಾಡಿ, ಅದೇ ದಿನ ಗಿಡಗಳಿಗೆ ಹಾರಿಸತಕ್ಕದ್ದು. ಹೆಚ್ಚು ದಿವಸವಿಟ್ಟಲ್ಲಿ ದ್ರಾವಕದ ಶಕ್ತಿಯು ಕಡಿಮೆಯಾಗಿ ಹೋಗುವುದು. ಈ ದ್ರಾವಕವನ್ನು ಹಾರಿಸುವುದಕ್ಕಿಂತ ಮುಂಚಿತವಾಗಿ ನಿರ್ಮಲವಾದ ಚಾಕಿನ ಅಲಗನ್ನು ಒಂದು ನಿಮಿಷ ಮುಳುಗಿಸಿ, ತೆಗೆದು ಪರೀಕ್ಷೆ ಮಾಡತಕ್ಕದ್ದು. ಮೈಲು ತುತ್ತ ಹೆಚ್ಚಾದಲ್ಲಿ ಅಲಗು ಕೆಂಪು ವರ್ಣವನ್ನು ಹೊಂದುವುದು. ಈ ಸಂದರ್ಭದಲ್ಲಿ ಇನ್ನು ಸ್ವಲ್ಪ ಸುಣ್ಣ ದ್ರಾವಕವನ್ನು ಇದಕ್ಕೆ ಮಿಶ್ರ ಮಾಡತಕ್ಕದ್ದು. ಮೈಲುತುತ್ತ ಹೆಚ್ಚಾದಲ್ಲಿ ಎಲೆಗಳು ಬೆಂದು ಹೋಗುವವು. ಈ ದ್ರಾವಕವು ಗಿಡಗಳಿಗೆ ಸರಿಯಾಗಿ ವ್ಯಾಪಿಸಿ ಅಂಟಿಕೊಳ್ಳಬೇಕಾದರೆ ಒಂದು ಸೇರು ಹರಳೆಣ್ಣೆ ವ ಎಳ್ಳೆಣ್ಣೆಯನ್ನು ಮಿಶ್ರ ಮಾಡತಕ್ಕದ್ದು.

ಮೈಲು ತುತ್ತ-ಸುಣ್ಣ ದ್ರಾವಕವನ್ನು ಮುಂಗಾರು ಮಳೆ ಹಿಡಿಯುವುದಕ್ಕೆ ಒಂದು ವಾರ ಮುಂಚಿತವಾಗಿಯೂ ಮತ್ತು ಐನ್ ಮಳೆ ಹಿಡಿಯುವ ಕಾಲದಲಿಯೂ, ಮಳೆ ನಿಂತ ಸಮಯವನ್ನು ನೋಡಿ ಹಾರಿಸತಕ್ಕದ್ದು.

ಈ ದ್ರಾವಕವನ್ನು ಹಾರಿಸಲು ಹೆಚ್ಚು ವೆಚ್ಚ ಬೀಳುವುದಿಲ್ಲ. 12 ಟಿನ್ನು ದ್ರಾವಕವನ್ನು ನೂರು ಗಿಡಗಳಿಗೆ ಎರಚಬಹುದು.

ಮೈಲು ತುತ್ತ 5 ರಾತಲು ಕ್ರಯ		1-8-0
ಸುಣ್ಣ 5 ರಾತಲು	,,	0-4-0
ಎಣ್ಣೆ 1 ಸೇರು	,,	0-8-0
ಎರಡು ಆಳುಗಳ ಕೂಲಿ		1-0-0
ಜುಮ್ಲ		3-4-0
ವರ್ಷಕ್ಕೆ 2 ಸಲ ಹೊಡೆಯುವ ವೆಚ್ಚ		7-8-0
ಗಿಡ ಒಂದರ ಖರ್ಚು		0-1-2

ದ್ರಾವಕವನ್ನು ಹಾರಿಸುವ ಒಂದು ಚಿಕ್ಕ ಯಂತ್ರಕ್ಕೆ ಕ್ರಯ 10-0-0

ಹೆಚ್ಚಿನ ಮಾಹಿತಿ ಹೊಂದಲು ವ್ಯವಸಾಯ ಇಲಾಖೆಯವರನ್ನು ಕೇಳಿಕೊಳ್ಳಿರಿ.

Coorg Civil Surgeon's Office.
Mercara, the 15th Sept. 1938

WANTED.

Four Midwives will be trained at Mercara Civil Hospital for the benefit of rural areas for six months.

(1) Each will be given a stipend of Rs. 15 per mensem for six months.

(2) Uniform allowance of Rs. 10 each for full course.

(3) Rs 20 each is provided to supply them with instruments and appliances after the training is over.

The candidates must have completed Lower Secondary Examination and must be atleast 25 years of age, middle aged widows living in the villages will be given preference.

Applications with educational qualification certificates must reach the Civil Surgeon on or before 10-10-1938 and selection will take place on 15-10-1938 and classes will start immediately at the Mercara hospital. Selected candidates must be prepared to undergo the course of training at the Civil hospital, Mercara, starting on 15-10-1938.

On completion of the course, they will be furnished with certificates whereupon they will be required to execute a bond binding them to settle and practice in their own villages.

—:0:—

ಒಳದೇಶ.

ಮಡಿಕೇರಿಯಲ್ಲಿ ಈ ವಾರ ಏಲಕ್ಕಿ ಮಣಕ್ಕೆ ರೂ. 22 ಕಾಫಿ ಖಂಡಿಗೆ ರೂ. 140 ಕ್ರಯವಿರುತ್ತೆ.

ಶನಿವಾರಸಂತೆ ಹೋಬಳಿ ಕಾಂಗ್ರೆಸ್ ಕಮಿಟಿಗಳೂ, ಹಿತೈಷಿಗಳೂ ತಾರೀಕು 1-10-38 ನೇ ಶನಿವಾರ ಮಹಾತ್ಮಾ ಗಾಂಧಿಯವರ ಜಯಂತ್ಯುತ್ಸವನ್ನು ಜರುಗಿಸುವರಾಗಿ ತಿಳಿಯುತ್ತೇವೆ.

ಹರಿಪುರ ಠರಾವಿನ ವಿಚಾರದಲ್ಲಿ ವರ್ಕಿಂಗ್ ಕಮಿಟಿಗೆ ತಮ್ಮ ಅಭಿಪ್ರಾಯವನ್ನು ತಿಳಿಸಲು ಡೆಪ್ಯುಟೇಶನ್ ಹೋಗಿದ್ದ ಕಾಂಗ್ರೆಸ್ ಪ್ರತಿನಿಧಿಗಳು ತಾ. 30 ರಲ್ಲಿ ಬಂದಿರುವರು.

ತಾ. 29-9-38 ರಲ್ಲಿ ಮಡಿಕೇರಿ ಕೊಡವ ಬೋರ್ಡಿಂಗ್ ಮನೆಯಲ್ಲಿ ಶಾರದಾ ಪೂಜೆಯನ್ನು ವಿಜೃಂಭಣೆಯಿಂದ ನಡೆಸಿದರೆಂದೂ, ಶ್ರೀ ಚೆಕ್ಕೆರ ಅಪ್ಪಯ್ಯನವರು ಸಂಗೀತ ಏಟೇರಿ ನಡೆಸಿದರೆಂದೂ ತಿಳಿಯಬರುತ್ತದೆ.

ಕೊಡಗು ಫಾರೆಸ್ಟು ಇಲಾಖೆಯಲ್ಲಿ ಹಂಗಾಮಿ ಕೆಲಸ ಮಾಡುತ್ತಿರುವ ಫಾರೆಸ್ಟರು ಗಾರ್ಡುಗಳಿಗೆ ಸಿಬ್ಬಂದಿ ಕೋತೆಯ ಪರಿಣಾಮವಾಗಿ ಅಕ್ಟೋಬರ್ 1 ರಿಂದ ನಿವೃತ್ತರಾಗಬೇಕೆಂದು ನೋಟೀಸು ಕೊಟ್ಟಿರುವರಾಗಿ ವಾರ್ತೆ.

ತಾ. 29-9-38 ರಲ್ಲಿ ಪೊನ್ನಂಪೇಟೆಯ ಕಮರ್ಶಿಯಲ್ ಸ್ಟೋರಿನ ಮಹಡಿಯ ಮೇಲೆ ಶ್ರೀ ಸಣ್ಣುವಂಡ ಮುದ್ದಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ ಗಾಂಧಿ ಜಯಂತ್ಯೋತ್ಸವವನ್ನು ವಿಜೃಂಭಣೆಯಿಂದ ನಡೆಸಿದರೆಂದು ತಿಳಿಯುತ್ತೇವೆ.

ಗಾಂಧಿ ಜಯಂತ್ಯೋತ್ಸವವು ತಾ. 1-10-38 ರಲ್ಲಿ ಮಡಿಕೇರಿಯಲ್ಲು-(ಜಮೀನ್ದಾರರ ಸಂಘದ ಹಾಲಿನಲ್ಲಿ ಮಧ್ಯಾಹ್ನ 2 ಗಂಟೆಗೆ ಸಾರ್ವಜನಿಕ ಸಭೆ) ತಾ. 2-10-38 ರಲ್ಲಿ ಸೋಮವಾರಪೇಟೆಯಲ್ಲಿಯೂ ನಡೆಯುತ್ತದಾಗಿಯೂ ಸರ್ವರೂ ಬಂದು ಭಾಗವಹಿಸಬಹುದಾಗಿಯೂ ತಿಳಿಸುತ್ತಾರೆ.

ತಾ. 24-9-38 ರಿಂದ 30-9-38 ರ ವರೆಗೆ ಮಡಿಕೇರಿಯಲ್ಲಿ 9 ಇಂಚು 97 ಸೆಂಟು ಮಳೆಯಾಗಿದೆ. ತಾ. 28 ಮತ್ತು 29 ರಲ್ಲಿ ಜೋರಾಗಿ ಮಳೆ ಬಿದ್ದಿದೆ. ಈ ವರ್ಷ ಒಟ್ಟು 125 ಇಂಚು 27 ಸೆಂಟು ಮಳೆಯಾಗಿದೆ. ಕಳೆದ ವರ್ಷ 107 ಇಂಚು 56 ಸೆಂಟು ಮಳೆಯಾಗಿದ್ದಿತು.

ಬೊಂಬಾಯಿಯಲ್ಲಿ ಶ್ರೀ ಕೆ. ಎಫ್. ನರಿಮನರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾಗಿರುವ 'ದಿ ಬೊಂಬೆ ಯುತ್ಸ್ ಲಿಟರರಿ, ಎಂಡ್ ಡಿಬೇಟಿಂಗ್ ಅಸೋಸಿಯೇಷನ್' ಎಂಬ ಸಂಸ್ಥೆಯ ಜಾಯಿಂಟ್ ಗೌರವ ಕಾರ್ಯದರ್ಶಿಗಳಲ್ಲಿ ಕೊಡಗಿನ ಶ್ರೀ ಪಿ. ಎಸ್. ಮಂದಣ್ಣನವರು ಒಬ್ಬರಾಗಿರುವರೆಂದು ತಿಳಿಯುತ್ತೇವೆ.

ಬಿ. ಬಿ. ಮತ್ತು ಸಿ. ಐ. ರೈಲ್ವೆಯ ಎಂಪ್ಲಾಯೀಸ್ ಕೋಅಪರೇಟಿವ್ ಬ್ಯಾಂಕಿನಲ್ಲಿರುವ ಶ್ರೀ ಚೇಕೆರ ಮಾಚಯ್ಯನವರು ಕಳೆದ ಮೇ ತಿಂಗಳಲ್ಲಿ ನಡೆದ ಲಂಡನ್ ಚೇಂಬರ್ ಆಫ್ ಕಾಮರ್ಸಿನ, ಬುಕ್ ಕೀಪಿಂಗ್ ಮತ್ತು ಎಕೌಂಟೆನ್ಸಿ, ಬ್ಯಾಂಕಿಂಗ್ ಮತ್ತು ಕರೆನ್ಸಿ ಅಲ್ಲದೆ ಕಮರ್ಶಿಯಲ್ ಲಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವರೆಂದು ತಿಳಿಯುತ್ತೇವೆ.

ವೀರಾಜಪೇಟೆಯ ಸಬ್ ಮೇಜಿಸ್ಟ್ರೇಟರು ತಾ. 1-10-38 ರಿಂದ 2½ ತಿಂಗಳು ರಜೆಯಲ್ಲಿ ಹೋಗುವರೆಂದೂ, ಸಿಬ್ಬಂದಿ ಕೋತೆಯ ನಿಮಿತ್ತ ವೀರಾಜಪೇಟೆ ಸಬ್ ಮೇಜಿಸ್ಟ್ರೇಟ್ ಕೋರ್ಟು ತಾ. 1-10-38 ರಿಂದ ಬರಖಾಸ್ತು ಮಾಡಲ್ಪಡುವದೆಂದೂ, ಇಲ್ಲಿಯ ಕೆಲಸಗಳನ್ನು ಇನ್ನು ಅಲ್ಲಿಯ ಮುನ್ಸೀಫ್ ಮೇಜಿಸ್ಟ್ರೇಟರು ನೋಡುವರೆಂದೂ ಪ್ರಕಟವಾಗಿದೆ.

ರೈತರ ಹಳೇ ಸಾಲಗಳನ್ನು ತೀರ್ಮಾನಿಸಲು ಸರಕಾರದವರು ದೀರ್ಘ ಕಂತಿನ ಸಾಲಗಳನ್ನು ಎಗ್ರಿಕಲ್ಚರಲ್ ಲೋನ್ಸ್ ಆಕ್ಟಿನ ಮೇರೆ ಕೊಡಲು ತೀರ್ಮಾನಿಸಿರುವರು. ಈ ಸಾಲಗಳನ್ನು ಪಡೆಯಲಿಚ್ಛಿಸುವವರು ತಾ. 31-10-38 ರೊಳಗೆ ಅರ್ಜಿ ಮಾಡಬೇಕೆಂತಲೂ, ಇದಕ್ಕೆ ಬೇಕಾದ ಪ್ರಿಂಟಾದ ಅರ್ಜಿ ಫಾರಂಗಳು ಆಯಾಯಾ ತಾಲೂಕಿನ ನಾಡುಕಚೇರಿಗಳಲ್ಲಿ ಉಚಿತವಾಗಿ ಸಿಗುತ್ತವೆಂತಲೂ, ಮೇಲ್ಕಂಡ ತಾರೀಕಿನಂತರ ಬಂದ ಅರ್ಜಿಗಳು ಅಂಗೀಕರಿಸಲ್ಪಡುವದಿಲ್ಲವೆಂತಲೂ ಕಮಿಷನರು ತಿಳಿಸುತ್ತಾರೆ.

ತಾ. 22 ನೇ ಗುರುವಾರ ಮಡಿಕೇರಿ ಹೈಸ್ಕೂಲ್ ಬೋರ್ಡಿಂಗಿನ ವಿದ್ಯಾರ್ಥಿಗಳು ಪೊನ್ನಂಪೇಟೆಗೆ ವಿಹಾರಾರ್ಥ ಸಂಚಾರ ಹೋಗಿ ಹುದಿಕೇರಿಯ ಟೀ ಕಾರ್ಖಾನೆಯನ್ನೂ, ಮತ್ತು ಬೆಟ್ಟತ್ತುನಾಡಿನ 'ತುಂದದ ಬೆಟ್ಟ'ವನ್ನೂ ಸಂದರ್ಶಿಸಿದರೆಂದೂ, ಈ ಸಂದರ್ಭದಲ್ಲಿ ಶ್ರೀ ಗಳಾದ ಗುಮ್ಮಟಿರ ಸುಬ್ಬಯ್ಯನವರು, ಮದ್ರಿರ ಬೆಳ್ಯಪ್ಪನವರು, ಬಾಳೆಯಡ ಬೆಳ್ಯಪ್ಪನವರು ಕೊಂಗಂಡ ಪೊನ್ನಪ್ಪನವರು ಮತ್ತು ಪುಚ್ಚಿಮಾಡ ಪೂವಯ್ಯನವರು ತಿಂಡಿ ತೀರ್ಥಗಳಿಂದ ಬಾಲಕರನ್ನು ಸತ್ಕರಿಸಿದರೆಂದು ತಿಳಿಯುತ್ತೇವೆ. ಅಲ್ಲದೆ ಪೊನ್ನಂಪೇಟೆ ಆಶ್ರಮದಲ್ಲಿ ಸ್ವಾಮಿ ದೇಶಿಕಾನಂದಜೀಯವರು ಇವರಿಗೆ ತಕ್ಕ ಬೋಧನೆ ಮಾಡಿದರೆಂದೂ ತಿಳಿಯುತ್ತೇವೆ.

ಹಿಂದೂದೇಶ.

ಮಿ. ಜಿನ್ನಾರವರು ದೇಹಾಸ್ವಸ್ಥತೆಯ ನಿಮಿತ್ತ ರಾಜಕೀಯ ರಂಗದಿಂದ ನಿವೃತ್ತರಾಗುವರೆಂದು ಒಂದು ವಾರ್ತೆ.

ಒಂದು ತೊಲೆ ಗಾಂಜಾ ಇದ್ದಿತೆಂಬ ಆರೋಪದ ಮೇಲೆ ಸೇಲಂ ಸಬ್ ಮೇಜಿಸ್ಟ್ರೇಟರು ರಾಮಲಿಂಗಂ ಚೆಟ್ಟಿ ಎಂಬಾತನನ್ನು 3 ತಿಂಗಳ ಸಜೆಗೆ ಗುರಿಪಡಿಸಿದರು.

ಹೈದರಬಾದು ಕಾಂಗ್ರೆಸಿನ ಮೇಲೆ ಹೊರಿಸಿರುವ ಪ್ರತಿಬಂಧವು ಸದ್ಯದಲ್ಲೇ ಹಿಂತೆಗೆಯಲ್ಪಡುವದೆಂದು ಸರ್ ಅಕ್ಬರ್ ಹೈದರಿ ಕಾಂಗ್ರೆಸು ಮುಖಂಡರೊಳಗಾದ ಮಾತುಕತೆಗಳಿಂದ ತಿಳಿದುಬರುತ್ತದೆ.

'ಸೇವೆಯೇ ನಿಮ್ಮ ಕರ್ತವ್ಯದ ಧ್ಯೇಯವಾಗಿರಬೇಕು. ನೀವು ಸಾರ್ವಜನಿಕ ದಾಸಾನುದಾಸರು; ದೊರೆಗಳಲ್ಲ.' ಎಂಬ ಸಾರಾಂಶದ ಸುದೀರ್ಘ ಮನವಿಯೊಂದನ್ನು ಅಸ್ಸಾಮಿನ ಪ್ರಧಾನರು ಸಂಸ್ಥಾನದ ಪೊಲೀಸರಿಗೆ ಹಂಚಿರುವರು.

ಮದ್ರಾಸ್ ಸರ್ಕಾರವು ರಂಗೂನ್ ಅಕ್ಕಿ, ಮರ, ಪೆಟ್ರೋಲ್ ಮುಂತಾದ ಬರ್ಮಾದಿಂದ ಬರತಕ್ಕ ಸಾಮಾನುಗಳ ಬಹಿಷ್ಕಾರ ಮಾಡುವ ಯೋಜನೆಯಲ್ಲಿದೆಯೆಂಬುದನ್ನು ಕೇಳಿ ಬರ್ಮಾವು ಭಯಗ್ರಸ್ತವಾಗಿ ಹಾಗೆ ಮಾಡಬಾರದೆಂದು ತಿಳಿಸಿದೆ.

ವಿಮಾನ ಧಾಳಿಯಿಂದ ರಕ್ಷಿಸಿಕೊಳ್ಳುವುದರ ಕುರಿತಾಗಿ ಕರಾಚಿ ಪೊಲೀಸರಿಗೆ ಬೇಗನೆ ಭಾಷಣಗಳನ್ನು ಕೊಡಲಾಗುವದೆಂದೂ, ಅಲ್ಲದೆ ಬೇಕಾದ ವ್ಯವಸ್ಥೆಯನ್ನು ಪೊಲೀಸರಿಗೂ, ಅಲ್ಲಿನ ಆಸ್ಪತ್ರೆಯ ದಾದಿಗಳಿಗೂ ಒದಗಿಸಲಾಗುವದೆಂದೂ ತಿಳಿದುಬಂದಿದೆ.

ಹಿಂದೂ ದೇಶದಿಂದ ಹೊರ ತಳ್ಳಲ್ಪಟ್ಟು, ಇದೀಗ 27 ವರ್ಷಗಳಿಂದ ಅನ್ಯದೇಶಗಳಲ್ಲಿರುವ ಡಾ. ಹರ್‌ದಯಾಲ್‌ರವರನ್ನು ತಾನು ರಾಜಕೀಯ ವಿಚಾರವಾವುದರಲ್ಲೂ ಕೈಯಿಕ್ಕುವುದಿಲ್ಲೆಂದು ಒಪ್ಪಿಗೆ ಕೊಟ್ಟುದರಿಂದಾಗಿ ಭಾರತಕ್ಕೆ ಬರಲು ಸರ್ಕಾರವು ಬಿಡಲಿದೆಯೆಂದಾಗಿ ತಿಳಿದುಬಂದಿದೆ.

ಡಾ. ಖರೆಯವರು ಒಂದು ಪ್ರಕಟನೆಯನ್ನು ಹೊರಡಿಸಿ ತಾವು ಕಾಂಗ್ರೆಸಿನಲ್ಲಿಯೇ ಕಾಂಗ್ರೆಸ್ ಡೆಮೊಕ್ರ್ಯಾಟಿಕ್ ಪಾರ್ಟಿ ಎಂಬ ಪಕ್ಷವನ್ನು ಪ್ರಾರಂಭಿಸುವದಾಗಿ ತಿಳಿಯುತ್ತೇವೆ. ಈ ಪಕ್ಷವು ಕಾಂಗ್ರೆಸ್ ಸಮತಾವಾದಿ ಪಕ್ಷ ಮತ್ತು ಕಾಂಗ್ರೆಸ್ ರಾಷ್ಟ್ರೀಯ ಪಕ್ಷಗಳಂತೆ ಕೆಲಸನೂಡುವದಂತೆ.

ಮಧ್ಯ ಪ್ರಾಂತ್ಯದ ಮಂತ್ರಿ ಮಂಡಲಿಯಲ್ಲಿ ಹರಿಜನರ ಪ್ರತಿನಿಧಿಗೆ ಒಂದು ಸ್ಥಾನವನ್ನು ಕೊಡಿಸಬೇಕೆಂದು ನಾಗಪುರದ ಕೆಲವು ಮಂದಿ ಹರಿಜನರು ಮಹಾತ್ಮ ಗಾಂಧಿಯವರು ವಾಸವಾಗಿರುವ ಸೇಗಾವ್ ಎಂಬ ಗ್ರಾಮದಲ್ಲಿ ಅವರ ಮನೆಯ ಬಳಿ ಉಪವಾಸ ಮಾಡುತ್ತಿದ್ದಾರೆಂದು ಈ ಮೊದಲು ತಿಳಿಸಿದ್ದೆವಷ್ಟೆ. ಮಹಾತ್ಮರು ಈಗ ಆ ಗ್ರಾಮದಿಂದ ದೆಹಲಿಗೆ ಹೊರಟು ಹೋಗಿರುತ್ತಾರೆ. ಇನ್ನೂ ಕೆಲವು ತಿಂಗಳ ವರೆಗೆ ಅವರು ವಾಪಸು ಆ ಗ್ರಾಮಕ್ಕೆ ಹೋಗುವವರಾಗಿಲ್ಲ. ಅದಕ್ಕಾಗಿ ಹರಿಜನರು ತನ್ನು ಸತ್ಯಾಗ್ರಹವನ್ನು ಮುಕ್ತಾಯಗೊಳಿಸಿ ವಾಪಸು ನಾಗಪುರಕ್ಕೆ ಹೊರಟು ಹೋಗಿರುತ್ತಾರೆ.

ವಿದೇಶ

ಅಮೇರಿಕದ ರ್‍ಹೋಡ ದ್ವೀಪದಲ್ಲಿ ಸಂಭವಿಸಿದ ಸುಂಟರಗಾಳಿಯ ಅನಾಹುತದಲ್ಲಿ ಒಟ್ಟು 441 ಜನರು ಮರಣ ಹೊಂದಿರುವರೆಂದು ಈ ವರೆಗಿನ ಸುದ್ದಿಗಳಿಂದ ತಿಳಿಯುತ್ತದೆ.

'ಜನಸಂಖ್ಯೆ ಮತ್ತು ಬುದ್ಧಿನ ದೃಷ್ಟಿಯಲ್ಲಿ ಅನ್ಯ ರಾಷ್ಟ್ರಗಳಿಗಿಂತ ಹಿಂದೂದೇಶವು ಲೀಗ್ ಅಸೆಂಬ್ಲಿಗೆ ಹೆಚ್ಚಿಗೆ ಪುರಸ್ಕಾರ ದ್ರವ್ಯ ಕೊಡುತ್ತಿದೆ. ಅದನ್ನಿಳಿಸಬೇಕಾಗಿ ಎಷ್ಟೋ ಬಾರಿ ಬೇಡಿದ್ದಾಯಿತು. ಈಗಲಾದರೂ ತಕ್ಕ 'ಇಳಿತಾಯವಾಗಲೇಬೇಕು' ಎಂದು ಸರ್ ಷಣ್ಮುಖಂ ಚೆಟ್ಟಿಯಾರರು ಜಿನೇವಾದ ಲೀಗ್ ಎಸೆಂಬ್ಲಿಯಲ್ಲಿ ನುಡಿದರು.

ವಿದೇಶಗಳಲ್ಲಿ ಸಂಚರಿಸುತ್ತಿರುವ ಕಾಂಗ್ರೆಸ್ ಸಭೆಯ ಮಾಜಿ ಅಧ್ಯಕ್ಷರಾದ ಪಂಡಿತ ಜವಾಹರ್‌ಲಾಲ್ ನೆಹರುರವರು ಕಳೆದ ತಾ. 23 ರಲ್ಲಿ ಜೆನೀವಾ ನಗರದಲ್ಲಿದ್ದಾಗ ಮಿ. ಲಿಟ್ವಿನೋಫ್, ಮಿ. ಡಿವೇಲರಾ, ಮಿ. ಆರ್. ಎ. ಬಟ್ಲರ್ ಇವರುಗಳನ್ನೂ ಈಜಿಪ್ಟಿನ ವಾಫ್ದ್ ಪಕ್ಷದ ನಾಯಕರಾದ ನಹಾಸ್ ಪಾಷಾರವರನ್ನು ಭೇಟಿ ಮಾಡಿ ದೀರ್ಘ ಕಾಲ ಅವರೊಡನೆ ಸಮಾಲೋಚನೆ ನಡೆಸಿದರು. ಪಂಡಿತರು ಇಷ್ಟರಲ್ಲಿಯೇ ರಷ್ಯಾ ದೇಶಕ್ಕೆ ಪ್ರಯಾಣ ಮಾಡುವವರಾಗಿದ್ದಾರೆ.

'ಲಿಬರಲ್ ಮತ್ತು ಲೇಬರ್ ಪಕ್ಷದವರು ಈಗ ಪಾರ್ಲಿಮೆಂಟ್ ಸಭೆ ಸೇರಿಸಬೇಕೆಂದು ಕೇಳುವುದರಲ್ಲಿ ನ್ಯಾಯವಿದೆ. ಜೆಕೊಸ್ಲೋವಾಕಿಯದ ವಿಭಜನೆಗೆ ಒಪ್ಪಿಗೆ ಕೊಡುವುದೆಂದರೆ ಪಶ್ಚಿಮದ ಪ್ರಜಾಪ್ರಭುತ್ವದ ರಾಜ್ಯಗಳು ನಾಜಿ ಬಲಾತ್ಕಾರಕ್ಕೆ ಪೂರ್ಣ ಬಗ್ಗಿದಂತೆಯೇ ಸರಿ. ಈ ರೀತಿ ಪ್ರತೀ ಸಾರಿ ನಾವು ಹಿಂದೆ ಸರಿಯುತ್ತಾ ಹೋದರೆ ಕೊನೆಗೆ ಮಿತಿಯಿಲ್ಲದ ಗಲಿಬಿಲಿಯಲ್ಲಿ ಬೀಳುವುದೇ ಸರಿ. ಯಾವಾಗಲಾದರೊಮ್ಮೆ ನಾವು ವಿರೋಧವನ್ನು ಕಟ್ಟಿಕೊಳ್ಳದೆ ನಿವೃತ್ತಿಯಿಲ್ಲ. ಆಗಶಕ್ಕ ಸಮಯವು ದಾಟಿ ಹೋಗದಿದ್ದರೆ ಸಾಕೆಂದು ಪ್ರಾರ್ಥಿಸುತ್ತೇವೆ.' ಎಂದು ಈಡನರು ಮತ್ತು ವಿ. ಚರ್ಚಿಲರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವರು.

ಮಾರಾಟಕ್ಕಿದೆ.

ಈ ಕೆಳಗೆ ನಮೂದಿಸಿದ ಚಹರೆಯ ಕೊಡಗು ಸರ್ಕಾರದ ಒಂದು ಮೈಸೂರು ಜಾತಿಯ ಬೀಜದ ಕೋಣವು ಮಾರಾಟಕ್ಕಿದೆ. ಇದು ಗಾಡಿಗೆ ಕಟ್ಟುವುದಕ್ಕೂ, ನೀರು ಸಾಗಿಸುವ ಪಕಾಲಿ ಕೆಲಸಕ್ಕೂ ಬಹಳ ಪ್ರಯೋಜನವಾಗುತ್ತದೆ. ಇದರ ಬೆಲೆ ಹೆಚ್ಚು ಕಡಿಮೆ ಒಂದು ನೂರು ರೂಪಾಗಳು. ಖಾಯಿಸ್‌ದಾರರು ಒಡನೆ ಕೊಡಗು ಡಿಸ್ಟ್ರಿಕ್ಟ್ ವೆಟರಿನರಿ ಆಫೀಸರ್, ಮಡಿಕೇರಿ, ಇವರ ವಿಳಾಸಕ್ಕೆ ಬರೆದುಕೊಳ್ಳಬಹುದು. ಈ ಕೋಣವು ಈಗ ಫ್ರೇಜರ್‌ಪೇಟೆ ಸರ್ಕಾರಿ ಗೂಳಿಗಳನ್ನು ಸಾಕುವ ಫಾರಂನಲ್ಲಿದೆ.

ಇದರ ವಿವರ.

1. ವಯಸು-5 ವರ್ಷ.
2. ಎತ್ತರ 4 ಅಡಿ 5 ಇಂಚು.
3. ದಪ್ಪ-7 ಅಡಿ.
4. ಉದ್ದ-7 ಅಡಿ.
5. ಭಾರ-1,200 ಪೌಂಡುಗಳು.

ಸಿ. ಬಿ. ಸೋಮಣ್ಣ,
ಡಿಸ್ಟ್ರಿಕ್ಟ್ ವೆಟರಿನರಿ ಆಫೀಸರ್,
4-3 ಮಡಿಕೇರಿ.

ಸೂಚನೆ:-ನಮ್ಮ ಕೈ ಸೇರಿದ ಕೆಲವು ವಾರ್ತೆ ಮತ್ತು ಪ್ರಬಂಧಗಳು ತಡವಾಗಿ ಸಿಕ್ಕಿದ್ದರಿಂದ ಈ ವಾರ ಪ್ರಕಟಿಸಲಾಗಲಿಲ್ಲ.

[ಸಂ. ಕೊ.]

ಮಧ್ಯಯೂರೋಪದ ಸಮಸ್ಯೆಯು ಘೋರ ಯುದ್ಧವಾಗಿ ಪರಿಣಮಿಸಿದರೆ ಯಾವ ಯಾವ ಜನಾಂಗಗಳು ಒತ್ತಟ್ಟಿಗೆ ನಿಲ್ಲುವವು ಮತ್ತು ಅವುಗಳ ಬಲಾಬಲಗಳು ಹೇಗಿವೆ?

ಮಧ್ಯಯೂರೋಪಿನ ಇಂದಿನ ಪರಿಸ್ಥಿತಿಯು ವಿಷಮಾವಸ್ಥೆಗೆ ತಿರುಗಿ ಕೆಲವು ದಿನಗಳಲ್ಲಿಯೇ ಘೋರ ಯುದ್ಧವನ್ನು ಕಾಣುವ ಪ್ರಸಂಗ ಬರಬಹುದು. ಈಗಾಗಲೇ ರಣ ಕಹಳೆಯ ಕೂಗು ದೆಸೆದೆಸೆಗಳಲ್ಲಿಯೂ ಕೇಳುತ್ತಿದೆ. ಹೀಗಿರುವಾಗ ಯೂರೋಪದ ಪ್ರಮುಖ ರಾಷ್ಟ್ರಗಳು ಯಾವ ಯಾವ ಕಡೆ ಸೇರುವವು? ಮತ್ತು ಅವುಗಳ ಬಲಾಬಲಗಳು ಹೇಗಿವೆ? ಎಂಬುದನ್ನು ಅರಿತುಕೊಳ್ಳುವದಗತ್ಯ.

ಜರ್ಮನಿ.

ಝೆಕೊಸ್ಲೋವಾಕಿಯಾದ ಬಿಕ್ಕಟ್ಟಾದ ಸ್ಥಿತಿಗೆ ಕಾರಣಭೂತವಾದ ಜರ್ಮನಿಯಲ್ಲಿ 6,71,05,000 ಜನರಿರುವರು ಈ ಜನ ಸಂಖ್ಯೆಯಲ್ಲಿ 13,000,000 ಜನರು ಯುದ್ಧ ತರಬೇತು ಪಡೆದವರಿದ್ದಾರೆ. ಇವರ ಸೈನ್ಯದಲ್ಲಿ 1,000.000, ಜನರಿದ್ದಾರೆ. ನೌಕಾಪಡೆಯಲ್ಲಿ ಆರು ದೊಡ್ಡ ಹಡಗುಗಳೂ ಆರು ಕ್ರೋಜರುಗಳೆಂಬ ದೊಡ್ಡ ದೋಣಿಗಳೂ, 35 ಟಾರ್ಪೆಡೊ ದೋಣಿಗಳೂ, 36 ಸಬ್ ಮೆರೀನ್‌ಗಳೂ ಇವೆ. ಇನ್ನೂ ಅನೇಕ ಹಡಗುಗಳನ್ನು ಕಟ್ಟುತ್ತಿರುವರು. 2600 ವಿಮಾನಗಳಿವೆ. 130,000 ವೈಮಾನಿಕರಿರುವರು

ಇಟೆಲಿ.

ಇಂದು ಜರ್ಮನಿಯ ಸರ್ವಾಧಿಕಾರಿ ಹಿಟ್ಲರನ ವರ್ತನೆಗೆ ಕೈಗುಟ್ಟುತ್ತಿರುವ ಇಟೆಲಿಯಲ್ಲಿ 42,801,000 ಜನರಿರುವರು. ಇದರಲ್ಲಿ ಸುಮಾರು 8,000,000 ಜನರು ಯುದ್ಧಕ್ಕೆ ಸಿದ್ಧರಿರುವರು. ಇಟೆಲಿಯ ಸೈನ್ಯದಲ್ಲಿ 65,000 ಜನರಿದ್ದಾರೆ. ನೌಕಾಪಡೆಯಲ್ಲಿ 4 ದೊಡ್ಡ ಹಡಗುಗಳೂ, 22 ಕ್ರೂಜರುಗಳು, 114 ಜಲಾಂತರ್ಗಾಮಿ ಮೋಟಾರುಗಳೂ, 81 ಸಬ್‌ಮೆರೀನುಗಳೂ ಇವೆ. 2 ಯುದ್ಧದ ಹಡಗುಗಳೂ 42 ಜಲಾಂತರ್ಗಾಮಿ ದೋಣಿಗಳು 30 ಸಬ್ ಮೆರೀನ್‌ಗಳೂ ಕಟ್ಟಲ್ಪಡುತ್ತಿವೆ. ಇವರಲ್ಲಿ 50000 ವೈಮಾನಿಕರಿರುವರು.

ಝೆಕೊಸ್ಲೋವಾಕಿಯಾ.

ಜರ್ಮನರ ಮಾರಣ ಹೋಮಕ್ಕೆ ಯಜ್ಞಪಶುವಾಗಿ ಕಟ್ಟಿರುವ ಪ್ರದೇಶವೇ ಇದು. ಇದರಲ್ಲಿ 15,187,000 ಜನರಿದ್ದಾರೆ. ಇವರಲ್ಲಿ 2,500,000 ಜನರು. ಯುದ್ಧಕ್ಕೆ ಸಿದ್ಧರಿರುವರು. ಸೈನ್ಯದಲ್ಲಿ 171,850 ಸೈನಿಕರಿರುವರು. 8500 ವೈಮಾನಿಕರಿಂದ ಕೂಡಿದ 500 ವಿಮಾನಗಳಿವೆ.

ರಷ್ಯಾ.

ಅಧುನಿಕ ನಾಗರೀಕತೆಯ ತುತ್ತತುದಿಗೇರಿಯುವ ರಷ್ಯಾದಲ್ಲಿ 170,000,000 ಜನರಿರುವರು. ಇವರಲಿ 35,000,000 ಜನರು ಯುದ್ಧಕ್ಕೆ ತಯಾರಿರುವರು ಇವರ ಪ್ರಕೃತ ಸೈನ್ಯದಲ್ಲಿ 1,300,000 ಸೈನಿಕರಿದ್ದಾರೆ. ಹಡಗು ಪಡೆಯಲ್ಲಿ 4 ದೊಡ್ಡ ಹಡಗುಗಳೂ, 4 ಕ್ರೂಜರುಗಳೂ 25 ಜಲಾಂತರ್ಗಾಮಿ ಮೋಟಾರುಗಳೂ 150 ಸಬ್‌ಮೆರಿನ್‌ಗಳೂ ಇವೆ. ಇದಲ್ಲದೆ ಜಗತ್ತಿನಲ್ಲೆಲ್ಲಾ ಶ್ರೇಷ್ಠತರವಾದ ವಿಮಾನ ಪಡೆಯು ಇವಕ್ಕಿರುವದು ಇವರಲ್ಲಿ ಸುಮಾರು 4,500 ವಿಮಾನಗಳೂ 10,000 ವೈಮಾನಿಕರೂ ಇದ್ದಾರೆ.

ಬ್ರಿಟನ್.

ಮಧ್ಯಯೂರೋಪಿನ ಸಣ್ಣ ಸಣ್ಣ ರಾಷ್ಟ್ರಗಳನ್ನು ಕಬಳಿಸುತ್ತಿರುವ ಸರ್ವಾಧಿಕಾರಿಗಳನ್ನು ಕಂಡೂ ಕಂಡು ಶಾಂತಿ ಸಾಧನೆಯಲ್ಲಿ ತಲ್ಲೀನರಾಗಿರುವ ಬ್ರಿಟನಿನಲ್ಲಿ ಸುಮಾರು 47,008,000 ಜನರಿದ್ದಾರೆ. ಸುಮಾರು 9,000,000 ಮಂದಿ ಯುದ್ಧ ತರಬೇತು ಪಡೆದಿರುವರು. ಸೈನ್ಯವು 1,15,000 ಇದೆ. ಜಗತ್ತಿನಲ್ಲಿ ಒಂದನೆಯದಾದ ನೌಕಾಪಡೆಯು ಇದಕ್ಕಿದೆ. 18 ದೊಡ್ಡ ಹಡಗುಗಳೂ, 59 ಕ್ರೂಜರುಗಳೂ, 129 ಜಲಾಂತರ್ಗಾಮಿಗಳೂ, 60 ಸಬ್‌ಮರಿನ್‌ಗಳೂ ಇವೆ. 5 ದೊಡ್ಡ ಹಡಗುಗಳೂ 33 ಯುದ್ಧ ನೌಕೆಗಳೂ, 18 ಸಬ್ ಮೆರೀನುಗಳೂ, ಕಟ್ಟಲಾಗುತ್ತಿವೆ. ವಿಮಾನ ಪಡೆಯಲ್ಲಿ 2,000 ವಿಮಾನಗಳೂ 65,000 ವೈಮಾನಿಕರೂ ಇದ್ದಾರೆ.

ಫ್ರಾನ್ಸ್.

ಎಲ್ಲಾ ರಾಷ್ಟ್ರಗಳ ಬಲಾಬಲಗಳನ್ನು ನೋಡೆ 'ಗಟ್ಟಿಯಾದರೆ ರೊಟ್ಟಿ, ತೆಳ್ಳಗಾದರೆ ದೋಸೆ' ಎಂಬ ನಾಣ್ಣುಡಿಗನುಸಾರ ವರ್ತಿಸುತ್ತಿರುವ ಫ್ರಾನ್ಸಿನಲ್ಲಿ 41,906,000 ಜನರಿದ್ದಾರೆ. ಇವರಲ್ಲಿ 8,900.000 ಜನರು ಯುದ್ಧಕ್ಕೆ ಸಿದ್ಧರಾಗಬಹುದು. ಸೈನ್ಯದಲ್ಲಿ 560,000 ಜನರಿರುವರು. ನೌಕಾಪಡೆಯಲ್ಲಿ 6 ದೊಡ್ಡ ಹಡಗುಗಳೂ 69 ಜಲಾಂತರ್ಗಾಮಿಗಳೂ 75 ಸಬ್‌ಮೆರಿನ್‌ಗಳೂ ಇವೆ. ಅನೇಕ ಹಡಗುಗಳು ಕಟ್ಟಲ್ಪಡುತ್ತಿವೆ. ಸುಮಾರು 1500 ವಿಮಾನಗಳೂ 50,000 ವೈಮಾನಿಕರೂ ಇರುವರು.

ಝೆಕೊಸ್ಲೋವಾಕಿಯಾದ ಸಮಸ್ಯೆಯು ಘೋರ ಯುದ್ಧವಾಗ ಪರಿಣಮಿಸಿದರೆ ಜರ್ಮನಿ, ಇಟೆಲಿ ಮತ್ತು ಜಪಾನು ಒಂದು ಕಡೆಯಲ್ಲೂ, ಝೆಕೊಸ್ಲೋವಾಕಿಯ, ರಷ್ಯ ಮತ್ತು ಫ್ರೆಂಚ್ ಇನ್ನೊಂದು ಕಡೆಯಲ್ಲೂ ನಿಲ್ಲಬಹುದು. ಬ್ರಿಟನರು ಝೆಕೊಸ್ಲೋವಾಕಿಯಕ್ಕೆ ಈ ಮೊದಲು ಮಾತು ಕೊಟ್ಟಂತೆ ಸಹಾಯ ಮಾಡಬಹುದು. ಅಥವಾ ಈಗಿನ ಧೋರಣೆಯಂತೆ ತಟಸ್ಥ ಉಳಿಯಲೂ ಬಹುದು.

ಝೆಕೊಸ್ಲೋವೇಕಿಯಾದ ಪರಿಸ್ಥಿತಿ.

ಹಿಟ್ಲರನ ಹೊಸ ಕೇಳಿಕೆಗಳು.

ಮಧ್ಯ ಯೂರೋಪದ ಈ ಬಿಕ್ಕಟ್ಟಿನ ಸಮಯದಲ್ಲಿ ಬ್ರಿಟಿಷ್ ಮತ್ತು ಫ್ರೆಂಚ್ ರಾಷ್ಟ್ರಗಳು ವಿಚಾರ ವಿಮರ್ಶೆ ಮಾಡಿ ಶಾಂತಿ ರಕ್ಷಣಾರ್ಥವಾಗಿ ಝೆಕೊಸ್ಲೋವಾಕಿಯ ಸರ್ಕಾರವನ್ನು ಹಿಟ್ಲರನಿಗೆ ಅಡುತಿಕೊಡಲು ಹವಣಿಸಿದವು. ಆದರೆ ಝೆಕ್ ಸರ್ಕಾರವು ಬ್ರಿಟಿಷ್ ಮತ್ತು ಫ್ರೆಂಚರ ಈ ದೈನ್ಯಭಾವದ ಸಂಧಾನ ಶರತುಗಳಿಗೆ ಒಪ್ಪುವದಕ್ಕಿಂತ ನಾವು ಯುದ್ಧವನ್ನೇ ಬಯಸುವವೆಂದು ಸಾರಿ ಹೇಳಿತು. ಇದರಿಂದಾಗಿ ಕಳವಳಗೊಂಡ ಬ್ರಿಟಿಷ್ ಮತ್ತು ಫ್ರೆಂಚ್ ಮಂತ್ರಿ ಮಂಡಳಗಳು ಪುನಃ ಸಂಧಾನ ಪ್ರಯತ್ನಗಳಿಗೆ ತೊಡಗಿದವು. ಅದೇ ವೇಳೆ ಬ್ರಿಟಿಷ್ ಪ್ರಧಾನರಾದ ನೇವಿಲ್ ಚೇಂಬರ್ಲೇನರು ಹಿಟ್ಲರನನ್ನು ಕಾಣಲು ತಾ. 22 ರಲ್ಲಿ ಜರ್ಮನಿಗೆ ಹೋದರು. ಅಲ್ಲಿ ಇವರಿಬ್ಬರಿಗೆ ದೀರ್ಘ ಸಂಭಾಷಣೆಗಳು ನಡೆದ ನಂತರ ಸುಡೆಟಾನ್ ಪ್ರದೇಶದ ಬಗ್ಗೆ ಜರ್ಮನರ ಧೋರಣವೇನಿದೆ ಎಂಬದನ್ನು ತಿಳಿಸುವ ಪತ್ರ ಒಂದನ್ನು ಮಿ. ಚೆಂಬರ್ಲೇನರಿಗೆ ಕೊಡಲಾಯಿತೆಂದು ತಿಳಿಯುತ್ತದೆ. ಚೆಂಬರ್ಲೇನರು ಪುನಃ ಇಂಗ್ಲೆಂಡಿಗೆ ಹಿಂತಿರುಗಿ ತನ್ನ ಸಹದ್ಯೋಗಿಗಳೊಡನೆ ವಿಚಾರ ವಿನಿಮಯ ಮಾಡುತ್ತಿರುವರು. ಈ ಎರಡನೇ ಸಾರಿಯ ಸಂದರ್ಶನದಲ್ಲಿ ಹರ್ ಹಿಟ್ಲರನು ಕಠಿಣತರವಾದ ಶರತುಗಳನ್ನಿಟ್ಟಿರುವನೆಂದೂ, ಆ ಶರತುಗಳ ಮೇರೆ ಝೆಕ್ ಸೈನ್ಯದಲ್ಲಿರುವ ಸುಡೆಟಾನ್ ಅಧಿಕಾರಿಗಳನ್ನೆಲ್ಲಾ ಬಿಡುಗಡೆ ಮಾಡಬೇಕೆಂದೂ, ಜರ್ಮನ್ ಜನಾಂಗದ ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕೆಂದೂ, ಅಲ್ಲದೆ ಝೆಕರಿಗೆ ನಕ್ಷೆಯ ಮುಖಾಂತರ ತೋರಿಸಿದ ಕೆಲವು ಪ್ರಾಂತಗಳನ್ನು ಅಕ್ಟೋಬರ್ ತಾ. 1 ರೊಳಗೆ ಜರ್ಮನರಿಗೆ ಬಿಟ್ಟುಕೊಡಬೇಕೆಂತಲೂ ಕೇಳಿರುವರು. ಈಗ ಹಿಟ್ಲರನು ಝೆಕೊಸ್ಲೋವಾಕಿಯಾದವರಿಗೆ ಅಕ್ಟೋಬರ್ ತಾರೀಕು 1 ರ ವರೆಗೆ ಯಾವ ತೀರ್ಮಾನವನ್ನೂ ಮಾಡಿಕೊಳ್ಳುವ ಬಗ್ಗೆ ಸಮಯ ಕೊಟ್ಟಿರುವನು.

ಝೆಕ್-ಸುಡೆಟನರೊಳಗೆ ತಿಕ್ಕಾಟ.

ಈ ಮಧ್ಯೆ ಅಂದರೆ ತಾ. 23 ರಲ್ಲಿ ಸುಡೆಟಾನ್ ಜರ್ಮನರ ಮತ್ತು ಝೆಕರೊಳಗೆ ತಿಕ್ಕಾಟಗಳು ನಡೆದವು. ಸುಡೆಟಾನ್ ಜರ್ಮನರ ವಶವಿದ್ದ ಆಷ್ ಎಂಬ ನಗರವು ಝೆಕ್ ಅಧಿಕಾರಿಗಳ ವಶಕ್ಕೆ ಬಂತು. ಝೆಕರು ಅಲ್ಲಿದ್ದ ನಾಜಿ ಚಿಹ್ನೆಗಳನ್ನೆಲ್ಲಾ ತೆಗೆದು ಹಾಕಿರುವರು. ಸ್ಲೋಕೇನಾನ ಜಿಲ್ಲೆಯಲ್ಲಿ ಸುಡೆಟಾನರು ಝೆಕ್ ಪ್ರಾಂತದೊಳಗೆ ನುಗ್ಗುತ್ತಿರುವರೆಂದು ತಿಳಿದು ಬಂದಿದೆ. ವಿರಾವಿಯೊ ಎಂಬಲ್ಲಿ ನಾಲ್ಕು ಮಂದಿ ಝೆಕರು ಕೊಲ್ಲಲ್ಪಟ್ಟಿರುವರು. 12 ಜನರಿಗೆ ಜಖಂಗಳಾಗಿವೆ ಪ್ರೇಗ್, ರೋಂ, ವಿಯನ್ನ ಮತ್ತು ಬರ್ನ ಮೊದಲಾದ ಊರುಗಳಿಗೆ ಹಾಕಿರುವ ತಂತಿಯ ಕಂಬಗಳು ಜರ್ಮನ್ ಪ್ರದೇಶದಲ್ಲಿ ಕತ್ತರಿಸಲ್ಪಟ್ಟಿವೆ ಎಂಬದನ್ನು ಝೆಕ್ ಸರಕಾರವು ತಿಳಿದು ಝೆಕೊಸ್ಲೋವಾಕಿಯಾದಲ್ಲಿರುವ ಜರ್ಮನಿ ತಂತಿ ಕಂಬಗಳನ್ನು ಕತ್ತರಿಸಿ ಹಾಕುವೆವೆಂದು ಬೆದರಿಕೆ ಹಾಕಿರುವದು. ಜರ್ಮನಿಯಿಂದ ಝೆಕೊಸ್ಲೋವಾಕಿಯಾದ ಕಡೆ ಹೋಗುವ ರೈಲ್ವೆ ಮಾರ್ಗದಲ್ಲಿ ಅಲ್ಲಲ್ಲಿ ಸುರಂಗಗಳನ್ನು ತೋಡಿ, ಮದ್ದಿನ ಸ್ಫೋಟನಕ್ಕೆ ಏರ್ಪಾಡುಮಾಡುತ್ತಿರುವದರಿಂದ ಅಲ್ಲಿಯ ರೈಲ್ವೆ ಸಂಚಾರವನ್ನು ನಿಲ್ಲಿಸಲಾಗಿದೆಯಂತೆ.

ಡಾ. ಬೀನ್ಸರ ಘೋಷಣೆ.

ಝೆಕೊಸ್ಲೋವಾಕಿಯಾದ ಅಧ್ಯಕ್ಷರಾದ ಡಾ. ಬೀನ್ಸರು ಒಂದು ಮಹತ್ವದ ಘೋಷಣೆಯನ್ನು ಹೊರಡಿಸಿ ಎಲ್ಲಾ ಝೆಕ್ ದಂಡುಗಳು ರಣರಂಗಕ್ಕೆ ಹೊರಡಲು ಸಿದ್ಧವಾಗಬೇಕೆಂದೂ, ಸೈನಿಕರು ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಬೇಕೆಂದೂ ಹುಕುಂ ಮಾಡಿದ್ದಾರೆ.

ಝೆಕ್ಕರಿಗೆ ಫ್ರೆಂಚ್ ಸಹಾಯ.

ಫ್ರೆಂಚ್ ಮುಖ್ಯ ಮಂತ್ರಿಯಾದ ಎಂ. ದಲಾಡಿಯರ್ ಎಂಬವರು ಈಗ ನಡೆಯುತ್ತಿರುವ ಸಂಧಾನ ಪ್ರಯತ್ನಗಳೆಲ್ಲವೂ ವಿಫಲವಾಗಿ ಝೆಕ್ಕರು ಜರ್ಮನಿಯ ಭಾಗ್ಯವಿಧಾತ ಹಿಟ್ಲರನು ಮಾಡಲೆಳಸಿರುವ ಮಾರಣ ಹೋಮಕ್ಕೆ ತುತ್ತಾದದ್ದೇ ಆದರೆ ನಾವು ಝೆಕ್ಕರಿಗೆ ಖಂಡಿತವಾಗಿಯೂ ಸಹಾಯ ಮಾಡುವೆವು ಎಂದು ಪ್ರಕಟಿಸುವದಲ್ಲದೆ ತನ್ನ ಪ್ರಜೆಗಳಲ್ಲಿ ಸೈನ್ಯ ತರಬೇತನ್ನು ಪಡೆದವರನ್ನೆಲ್ಲಾ ಪುನಹ ಸೈನ್ಯಕ್ಕೆ ಸೇರಬೇಕೆಂಬದಾಗಿ ಆಹ್ವಾನಿಸಿರುವರು.

ರಷ್ಯಾದವರ ಸಹಾಯದ ಭರವಸೆ.

ರಷ್ಯಾದ ವಿದೇಶಾಂಗ ಮಂತ್ರಿಗಳಾದ ಯಂ. ಲಿಟ್ವಿನೋಫರು ತಾವು ಝೆಕ್ಕರಿಗೆ ಸಹಾಯವೀಯುವುದಾಗಿ ಭರವಸೆ ಇತ್ತಿದ್ದಾರೆ ಅಲ್ಲದೆ ರಷ್ಯಾದವರು ಪೋಲೆಂಡಿನವರಿಗೆ ಒಂದು ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಪೋಲೇಂಡು ಒಂದು ಸ್ವತಂತ್ರ ರಾಷ್ಟ್ರ. ಅದು ಝೆಕೊಸ್ಲೋವಾಕಿಯಾದಲ್ಲಿರುವ ತನ್ನ ಜನಾಂಗಗಳು ಅಂದರೆ 'ಪೋಲಿಷ್' ಜನರು ಎಲ್ಲಿ ಬಹುಮತದಿಂದಿರುವರೋ ಆ ಪ್ರಾಂತಗಳನ್ನು ತಮಗೆ ಬಿಟ್ಟುಕೊಡಬೇಕೆಂದೂ, ಇಲ್ಲವೇ ಸಂಗ್ರಾಮ ಸನ್ನಾಹ ಮಾಡಲ್ಪಡುವದೆಂದೂ ಝೆಕೊಸ್ಲೋವಾಕಿಯಕ್ಕೆ ತಿಳಿಸಿದೆ. ಅದಕ್ಕೆ ರಷ್ಯಾನರು ಪೋಲೇಂಡ್ ಮತ್ತು ರಷ್ಯಾದೊಳಗಾದ ಒಪ್ಪಂದಕ್ಕೆ ವ್ಯತಿರಿಕ್ತವಾಗಿ ಪೋಲೇಂಡು ಝೆಕೊಸ್ಲೋವಾಕಿಯಾದ ಮೇಲೆ ಮುಂದುವರಿದದ್ದೇ ಆದರೆ ರಷ್ಯಾವು ಪೋಲೇಂಡನ್ನು ನುಗ್ಗದಿರದು ಎಂದು ಎಚ್ಚರಿಸಿರುವರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆ.

ಆಶ್ರಿತ ಸಂಸ್ಥಾನಗಳ ಪ್ರಶ್ನೆ, ಅಹಿಂಸಾ ಧ್ಯೇಯದ ಜಾರಿ.

ಭಾವೀ ಯುದ್ಧದಲ್ಲಿ ಭಾರತದ ಸ್ಥಾನ.

ಕೊಡಗಿನ ಬಗ್ಗೆ ಹರಿಪುರ ಠರಾವಿನ ವಿಚಾರ.

ತಾ. 22 ನೇ ದಿನ ಬೆಳಗ್ಗೆ 8 ಗಂಟೆಗೆ ಡೆಲ್ಲಿಯಲ್ಲಿ ಸಭೆ ಸೇರಿತು. ಇಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಲ್ಲಿನ ಕಾರ್ಯಕ್ರಮವನ್ನು ಚರ್ಚಿಸಲಾಯಿತು. ಖಾಸಗಿ ಸದಸ್ಯರು ಕಳುಹಿಸಿದ ಗೊತ್ತುವಳಿಗಳನ್ನು ವಿಚಾರ ಮಾಡಲಾಯಿತು. ಮಧ್ಯಪ್ರಾಂತದ ಮಂತ್ರಿ ಮಂಡಳದ ಬಿಕ್ಕಟ್ಟಾವಸ್ಥೆಯ ಸಂದರ್ಭದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಕೈಕೊಂಡ ಕಾರ್ಯಕ್ರಮದ ವಿಚಾರವನ್ನು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ಮಂಜೂರ್ಮಾಡುವದೇ ಬೇಕಾಗುವ ಠರಾವನ್ನು ವರ್ಕಿಂಗ್ ಕಮಿಟಿಯು ನಿರ್ಣಯಿಸಿತು. ಆಶ್ರಿತ ಸಂಸ್ಥಾನಗಳಲ್ಲಿ ಒಂದರ ಹಿಂದೆ ಒಂದರಂತೆ ನಡೆಯುತ್ತಿರುವ ದಬ್ಬಾಳಿಕೆಯ ವಿಚಾರ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮುಂದೆ ಯಾವ ವಿಧದ ಠರಾವನ್ನಿಡಬೇಕೆಂದೂ ಚರ್ಚೆ ನಡೆಯಿತು.

ಸುಡೆಟೆನ್ ಮುಖಂಡನಾದ ಹೆನ್ಲಿನನ ಉದ್ಗಾರ.

ಝೆಕೊಸ್ಲೊವಾಕಿಯಾದ ಅಧ್ಯಕ್ಷರಾದ ಡಾ. ಬೀನ್ಸರು ತಮ್ಮ ಸೈನ್ಯ ಸನ್ನಾಹಕ್ಕೆ ಅಪ್ಪಣೆ ಕೊಡಿಸಿದ್ದನ್ನು ವಿರೋಧಿಸಿ ಸುಡೆಟಾನರ ಮುಖಂಡ ಮತ್ತು ಹಿಟ್ಲರನ ಬಲಗೈಯಂತಿರುವ ಹೆನ್ಲಿನನು ಇದಕ್ಕೆ ವಿರೋಧವಾಗಿ ಪ್ರಕಟಣೆಯೊಂದನ್ನು ಹೊರಡಿಸಿರುವನು. ಆ ಪ್ರಕಟಣೆಯಲ್ಲಿ ಡಾ. ಬೀನ್ಸರು ತಮ್ಮ ಮದದಲ್ಲಿ ಸ್ವೇಚ್ಛಾಚಾರವನ್ನು ನಡೆಸಿರುವರೆಂದೂ; ಸ್ವತಹ ಜರ್ಮನರೇ ಆದ ಸುಡೆಟಾನರು ಇವರ ಘೋಷಣೆಯನ್ನು ಅಂಗೀಕರಿಸಲಾರರೆಂದೂ, ಜರ್ಮನರ ವಿರುದ್ಧ ಜರ್ಮರು ಗುಂಡು ಹಾರಿಸಲಾರರೆಂದೂ, ಈ ರೀತಿ ಒತ್ತಾಯ ಮಾಡಲಿಕ್ಕೆ ಬೀನ್ಸರಿಗೆ ಅಧಿಕಾರವಿಲ್ಲವೆಂದೂ ಉದ್ಗಾರವೆತ್ತಿರುವರು.

ಜರ್ಮನರ ಹೊಸ ಕೋರಿಕೆಗಳನ್ನು ಸಲ್ಲಿಸಲಾಗುವುದಿಲ್ಲ.

ಬ್ರಿಟಿಷ್ ಪ್ರಧಾನರಾದ ನೆವಿಲ್ ಚೇಂಬರ್ಲೇನರು ಹಿಟ್ಲರನ ಎರಡನೇ ಭೇಟಿ ತೆಗೆದುಕೊಂಡಾಗ ಹಿಟ್ಲರನು ಹಾಕಿದ ಶರತುಗಳನ್ನು ಝೆಕ್ಕರಿಗೆ ತಿಳಿಸಿದ್ದರಷ್ಟೆ. ಅದರ ಈಗ ಝೆಕ್ಕರು ಹಿಟ್ಲರನ ಮೊದಲಿನ ಶರತುಗಳಿಗೆ ನಾವು ಒಪ್ಪಿ, ಚೇಂಬರ್ಲೇನರು ಅದನ್ನು ಹಿಟ್ಲರನ ಮುಂದಿಡಲು ಅದು ಸಾಲದೆಂದು ಈಗ ಹಾಕಿರುವ ಹೊಸ ಶರತುಗಳನ್ನು ಸಲ್ಲಿಸಲಾಗುವುದಿಲ್ಲನೆಂದು ಹೇಳಿದರು.

ಝೆಕ್ಕರು ಈ ವರೆಗೆ ಒಳಗೊಳಗೆ ನಡೆದ ಅಂತರ್ಯುದ್ಧವನ್ನೆಲ್ಲಾ ಸ್ಥಿಮಿತಕ್ಕೆ ತಂದಿರುವರಲ್ಲದೆ ಮುಂದೆ ಎಂಥಾ ತೊಂದರೆಯೊದಗಿದರೂ ಅದನ್ನು ಎದುರಿಸಲು ತಯಾರಿರುವರು.

ಸದಸ್ಯರನ್ನು ಸೇರಿಸುವ ಅವಧಿ ಹೆಚ್ಚಿಸಲಾಯಿತು.

ಕಾಂಗ್ರೆಸ್ ಸದಸ್ಯರನ್ನು ಸೇರಿಸುವ ಕೊನೆಯ ದಿನ ಸಪ್ಟಂಬರ್ 30 ಕ್ಕೆ ಇದ್ದದ್ದನ್ನು, ಮುಂದರಿಸಬೇಕೆಂದು ಎಲ್ಲಾ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಕೇಳಿಕೊಂಡ ಮೇರೆ ಈ ತಾರೀಕನ್ನು ಮುಂದರಿಸಿ ಅಕ್ಟೋಬರ್ ತಾರೀಕು 31 ರ ವರೆಗೆ ಅವಧಿ ಕೊಡಲಾಯಿತು.

ಸಂಸ್ಥಾನಗಳ ಪ್ರಶ್ನೆ.

ಹಿಂದೀ ಸಂಸ್ಥಾನಗಳ ಕುರಿತು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮುಂದಿಡಬೇಕಾದ ನಿರ್ಣಯದ ವಿಚಾರ ಚರ್ಚೆ ನಡೆಯಿತು. ಈಗ ತಯಾರಾಗಿರುವ ನಿರ್ಣಯವು ಕಾಶ್ಮೀರ, ಹೈದರಾಬಾದ್, ತಿರುವಾಂಕೂರ್, ಮತ್ತು ಒರಿಸ್ಸಾ ಸಂಸ್ಥಾನಗಳಲ್ಲಿಯ ಈಗಿನ ದಬ್ಬಾಳಿಕೆಗಳನ್ನು ನಿಷೇಧಿಸಿ ಅಲ್ಲಿಯ ಪ್ರಜಾವರ್ಗದ ಮೇಲೆ ಸಹಾನುಭೂತಿಯನ್ನು ವ್ಯಕ್ತಪಡಿಸಿ ಅಹಿಂಸೆಯನ್ನು ಬಿಡದೆ ವರ್ತಿಸಬೇಕಾಗಿ ಅವರನ್ನು ಎಚ್ಚರಿಸುವಂತಾದ್ದಾಗಿದೆ.

ಶಾಂತಿ ಸೈನ್ಯದ ಯೋಜನೆ.

ಕಾಂಗ್ರೆಸಿನ ಮುಖ್ಯತತ್ವವಾದ ಅಹಿಂಸೆಯನ್ನು ಮಹಾತ್ಮ ಗಾಂಧಿಯವರು ಯಾವ ದೃಷ್ಟಿಯಿಂದ ತಿಳಿಯುತ್ತಾರೋ, ಅದೇ ರೀತಿಯಿಂದ ಕಾಂಗ್ರೆಸಿನವರು ತಿಳಿಯುತ್ತಿಲ್ಲನೆಂದೂ ಆದ್ದರಿಂದ ಕಾಂಗ್ರೆಸಿನ ಅಹಿಂಸಾ ಧ್ಯೇಯವನ್ನು ಜಾರಿಗೆ ತರುವ ವಿಚಾರದಲ್ಲಿ ನಿಗವಿಡದಿದ್ದರೆ, ಕಾಂಗ್ರೆಸು ಹಿಂಸೆಯತ್ತ ತಿರುಗುವದೆಂದೂ, ಈ ಸಲ್ಲದ ದಾರಿಗಳನ್ನು ಕೂಡಲೇ ತಡೆಗಟ್ಟದಿದ್ದರೆ ಕಾಂಗ್ರೆಸ್ ಹಾಳಾಗಬಹುದಾದ್ದರಿಂದ ಗಾಂಧಿಯವರು ಒಂದು ಶಾಂತಿ ಸೈನ್ಯವನ್ನು ಸ್ಥಾಪಿಸಬೇಕೆಂದಿರುವ ಈ ವಿಚಾರವನ್ನು ವರ್ಕಿಂಗ್ ಕಮಿಟಿಯವರು ಖಿನ್ನು ತಿಳಿಸಿದರು.

ಫೆಡರೇಶನಿನ ವಿಚಾರ ನಿರ್ಣಯ.

ಫೆಡರೇಷನಿಗೆ ಭಾರತದಲ್ಲಿ ಸ್ಥಳವಿಲ್ಲ. ಫೆಡರೇಶನನ್ನು ಕಾಂಗ್ರೆಸ್ ಕೈಬಿಟ್ಟಿದೆ. ಅನ್ಯ ರಾಷ್ಟ್ರೀಯರ ಪಾರುಪತ್ಯವಿಲ್ಲದೆ ಇಡೀ ಭಾರತದ ಜನತೆಯ ಚುನಾವಣೆಯಿಂದಾದ ಅಧಿಕೃತ ಅಸೆಂಬ್ಲಿಯಿಂದ ಸ್ವಾತಂತ್ರ್ಯದ ತಳಹದಿಯಿಂದ ಜನತೆಯ ಹಿತದೃಷ್ಟಿಯಲ್ಲಿ ರಚಿಸಲ್ಪಡುವ ಹೊಸ ರಾಜ್ಯರಚನೆಯೇ ಭಾರತಕ್ಕೆ ಬೇಕಾಗಿದೆ. ಈಗಿನ ಫೆಡರಲ್ ಯೋಜನೆಯಿಂದ ಭಾರತವು ಸಾಮ್ರಾಜ್ಯ ಶಾಹಿಯ ಅಂಕೆಗೆ ಇನ್ನಷ್ಟು ಬಲವಾಗಿ ಕಟ್ಟು ಬೀಳುವವರೀವ ಭಾರತದ ಹಿತದೃಷ್ಟಿಯಿಂದ ಅದು ಸಲ್ಲದು ಎಂಬರ್ಥದ ಠರಾವು ಮಂಜೂರಾಯಿತು.

ಮಹಾ ಯುದ್ಧವು ಸಂಭವಿಸಿದರೆ ಭಾರತವು ಏನು ಮಾಡಬೇಕು?

ಯೂರೋಪಿನ ಸಮಸ್ಯೆಯು ಘೋರ ಯುದ್ಧವಾಗಿ ಪರಿಣಮಿಸಿ ಬ್ರಿಟನು ಇದರಲ್ಲಿ ಕೈಯಿಕ್ಕುವಂತಾದರೆ ಪರಾಧೀನವಾಗಿರುವ ತಕನ ಭಾರತವು ಯಾವ ಸಹಾಯವನ್ನೂ ಮಾಡಲಾರದು. ಈ ವಿಚಾರದಲ್ಲಿ ಸಮಯ ಒದಗಿದಂತೆ ನಿರ್ಣಯಿಸಿ ವರ್ತಿಸಲು ವರ್ಕಿಂಗ್ ಕಮಿಟಿಗೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಅಧಿಕಾರವಿತ್ತಿದೆ.

ಕೊಡಗಿನ ಡಿಪ್ಯುಟೇಶನಿನವರಿಗೆ ಉತ್ತರ

ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆಂಬ ಹರಿಪುರ ಠರಾವನ್ನು ಸದ್ಯಕ್ಕೆ ಅಮಾನತ್ತು ನಿಲ್ಲಿಸಬೇಕೆಂದು ವರ್ಕಿಂಗ್ ಕಮಿಟಿಯನ್ನು ಕೇಳಲು ಹೋಗಿದ್ದ ಕೊಡಗಿನ ಡೆಪ್ಯುಟೇಷನಿನವರ ಹೇಳಿಕೆಯನ್ನು ಕೇಳಿ, ಹರಿಪುರ ಠರಾವು ವಿಧಾಯಕವಾದದ್ದಲ್ಲವೆಂದೂ, ಬರೀ ಒಂದು ಶಿಫಾರಸಿಗೆಯ ರೂಪದ್ದೆಂದೂ ತಿಳಿಸಿರುವರು. ಅಲ್ಲದೆ ಕೊಡಗಿನ ಕಾಂಗ್ರೆಸಿನವರು ಈ ವಿಚಾರದಲ್ಲಿ ದೇಶದಲ್ಲಿ ಯಾವ ವಿಧವಾದ ರಾಜಕೀಯ ಚಳವಳವನ್ನು ಮಾಡಬಹುದೆಂದೂ, ಹರಿಪುರದ ಠರಾವು ಅವರಿಗೆ ಯಾವ ವಿಧದಿಂದಲೂ ಬಾಧಕವಾಗುವದಿಲ್ಲವೆಂದೂ ಸೂಚಿಸಿರುವರು.

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ 52,54,750 ರೂ. ಭರವಸೆಯ 4689 ಪ್ರಪೋಸಲ್‌ಗಳು ಸಿಕ್ಕಿವೆ ಅದರಲ್ಲಿ ಹಿಂದಿನ ವರ್ಷದ ಪೂರ್ತಿಯಾಗದ 1447 ಪ್ರಪೋಸಲ್‌ಗಳ ಬಾಬ್ತು 40,67,650 ರೂ. ಗಳ ಬಗ್ಗೆ ವರ್ಷಾವಧಿ 2,21,959-6-0 ರೂ. ವಿಮಾ ಕಂತು ಬರುತ್ತೆ. ಕಂಪೆನಿಯಿಂದ ಭರವಸೆ ಪಡೆದಿರುವ ಹಣ ರೂ. 39,38,150. ಬಾಕಿ ರೂ. 1,29,500 ಪುನಹ ಭರವಸೆ ಕೊಟ್ಟದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುವರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತಿವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ. 4,13,775 ಹೆಚ್ಚಿದೆ.

ಈ ಕೆಳಗಿನ ಒಳ್ಳೆ ಸಂಗತಿಗಳಿಂದ ಲಭಿಸಿದ ತೃಪ್ತಿಯನ್ನು ಮುಂಬರುಗಳೊಡನೆ ಅನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯಾ ಸರ್ಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪೆನಿಗಳಿವೆಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಶೂರೆನ್ಸ್ ಇಯರ್ ಬುಕ್' ಎಂಬುವುದರಿಂದ ತಿಳಿದುಬರುತ್ತದೆ. ಈ ಕಂಪೆನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪೆನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ವರೆಗೆ ಶ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೇಯದಾಗಿದೆ. ಒಂದನೇಯದಾದ ಕಂಪೆನಿಯು ಇದಕ್ಕಿಂತ 25 ವರ್ಷಗಳ ಮುಂದೆ ಸ್ಥಾಪಿಸಲ್ಪಟ್ಟದ್ದಾಗಿದೆ.

ವಿಮಾ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮಾ ಕಂತುಗಳ ಆದಾಯವು (ಪುನಹ ಭರವಸ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮಾ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ಪ್ರಕೃತ ವರ್ಷದ ವಿಮಾ ಕಂತಿನ ಆದಾಯವು ರೂ. 3,66,198-13-0, ಗತ ವರ್ಷದ್ದು 2,36,767-6-6 ಆಗಿದೆ.

ಜೀವವಿಮಾ ಫಂಡು:—ಈ ಕಂಪೆನಿಯ ಜೀವ ವಿಮಾ ಫಂಡು ರೂ. 75,258-11-9ರಿಂದ, ವ್ಯವಸ್ಥಾ ಪ್ರಾಜೆಕ್ಟ್ ಮತ್ತು ಇತರ ಖರ್ಚಿಗಾಗಿ ರೂ. 45,037 8-4 ವಜಾ ಕಳೆದು ರೂ. 21,00,421-1-3ಕ್ಕೆ ಏರಿದೆ. ಈ ಕೆಳಗೆ ಅದರ ತಪಶೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿಮಾ ಕಂತು	ಜೀವ ವಿಮಾ ಫಂಡು.
1ನೇ ವರ್ಷದ	ರೂ. 1,46,949	ರೂ. 15,619
2ನೇ ವರ್ಷದ	„ 2,36,767	„ 75,259
3ನೇ ವರ್ಷದ	„ 3,66,199	„ 2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತ ವಿಮಾ ಕಂಪೆನಿಗಳ ವಾರ್ಷಿಕ ವೃತ್ತಾಂತದಲ್ಲಿ ಹೊಗಳಲರ್ಹವಾದದ್ದೇ ಆಗಿದೆ.

ಭಾರತ ಜೀವವಿಮಾ ಕಂಪೆನಿಗಳ ಆಕ್ಟಿನ ಮೇರೆ ಠೇವಣಾತಿ:—ಈ ಖಾನೂನು ಮೇರೆ ಠೇವಣಾತಿ ಮಾಡತಕ್ಕದಿದ್ದ ರೂ, 2 ಲಕ್ಷವನ್ನು ಪೂರ್ತಿಯಾಗಿ ಡಿಪಾಜಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷವುಳ್ಳವರಾಗಿರುವರು.

ಸಿ ಯಂ. ತಿಮ್ಮಯ್ಯ,

(52-16) ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

ತಿರುವಾಂಕೂರಿನ ದಬ್ಬಾಳಿಕೆಯ ಪರಮಾವಧಿ.

ಗೋಳಿಬಾರು ನಿಲ್ಲುವಂತಿಲ್ಲ.

ಆದ್ದರಿಂದ ಶಾಲೆಗೆ ಮಕ್ಕಳು ಹೋಗುವಂತಿಲ್ಲ. ಸರ್ಕಾರವು ತನ್ನ ಧೋರಣೆಯನ್ನು ಬದಲಾಯಿಸುವಂತಿಲ್ಲ. ಮಹಾತ್ಮ ಗಾಂಧಿಯವರೇ ಮೊದಲಾದ ಹಿರಿಯರ ಹಿತೋಕ್ತಿ ಫಲಕಾರಿಯಾಗುವಂತಿಲ್ಲ.

ತಿರುವಾಂಕೂರು ದಬ್ಬಾಳಿಕೆಯು ದಿನೇ ದಿನೇ ಬಿಕ್ಕಟ್ಟಾವಸ್ಥೆಯನ್ನು ತಳೆಯುತ್ತಿದೆ. ಈ ವರೆಗೆ ಆರು ಬಾರಿ ಜನತೆಯ ಮೇಲೆ ಗುಂಡಿನ ಮಳೆಗರೆದಾಯಿತು.

ತಾ. 23 ರಲ್ಲಿ ತ್ರಿವೇಂಡ್ರಮಿನಲ್ಲಿ ಸ್ಟೇಟ್ ಕಾಂಗ್ರೆಸಿನ ಆಶ್ರಯದಲ್ಲಿ ಮಹಾಸಭೆ ಸೇರಿತ್ತು. ಸುಮಾರು ಹತ್ತು ಸಾವಿರ ಜನರು ನೆರೆದಿದ್ದರು. ಪೋಲೀಸರೂ, ಮಿಲಿಟರಿಯೂ ಬಂದಿತ್ತು. ಜನರು ಪೋಲೀಸರ ಮೇಲೆ ಕಲ್ಲೆಸೆದರೆಂದೂ, ಉತ್ತರವಾಗಿ ಅವರು ಗುಂಡು ಹಾರಿಸಿದರೆಂದೂ, ಇದರಿಂದ ಮೂರು ಜನ ಸತ್ತರೆಂದೂ ತಿಳಿದು ಬಂದಿದೆ.

ಆಲಪ್ಪಿಯಿಂದ ತುಸು ದೂರದಲ್ಲಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ಸಭೆ ಸೇರಿತ್ತು. ಇಲ್ಲಿಗೂ ಮಿಲಿಟರಿಯೂ, ಪೋಲೀಸರೂ, ಬಂದಿದ್ದರು. ಲಾಠಿಪ್ರಹಾರವು ನಡೆಯಿತು. ಮತ್ತು ಅದರ ಜೊತೆಗೆ ಗೋಳಿಬಾರನ್ನು ಕೈಕೊಂಡರು. ಇಲ್ಲಿ ಪೋಲೀಸರನ್ನೂ, ಅಧಿಕಾರಿಗಳನ್ನೂ ಜನರು ಹಿಂಸಿಸಿದ್ದರಿಂದ ತಮ್ಮ ರಕ್ಷಣಾರ್ಥವಾಗಿ ಗುಂಡು ಹಾರಿಸಲಾಯಿತೆಂದು ತಿಳಿದುಬಂದಿದೆ.

ತ್ರಿವೇಂಡ್ರಮ್ಮಿನ 20 ಮೈಲುಗಳ ದೂರದಲ್ಲಿ ಅಟ್ಟಿಂಗಲ್ ಎಂಬ ಸ್ಥಳವಿದೆ. ಇಲ್ಲಿಯೂ ಸ್ಟೇಟ್ ಕಾಂಗ್ರೆಸಿನವರ ಆಶ್ರಯದಲ್ಲಿ ಮಹಾಸಭೆ ಸೇರಿತ್ತು. ಜನತೆಯು ಜಯಕಾರವನ್ನು ಮಾಡುತ್ತಾ ಮೆರವಣಿಗೆ ಹೊರಟಿತ್ತು. ಇದಕ್ಕೆ ಮಿಲಿಟರಿಯೂ ಬಂದಿತ್ತು. ಜನರನ್ನು ಚದರುವಂತೆ ಪೋಲೀಸರು ಆಜ್ಞೆ ಕೊಟ್ಟರು. ಆದರೆ ಜನತೆಯು ಇದನ್ನು ಲಕ್ಷಿಸದ್ದರಿಂದ ಗುಂಡುಹಾರಿಸಬೇಕಾಯಿತೆಂದು ಸರಕಾರದ ಹೇಳಿಕೆ. ಇಲ್ಲಿ ಐದು ಜನರಿಗೆ ತೀವ್ರ ಗಾಯಗಳಾಗಿವೆ, ಪೋಲೀಸರಿಗೂ ಜಖಂ ಆಗಿದೆಯಂತೆ.

ಕೊಟ್ಟಾಯಮ್ಮಿನಲ್ಲಿ ಎರಡು ಸಾವಿರಕ್ಕೂ ಮೀರಿ ವಿದ್ಯಾರ್ಥಿಗಳು ಜಯಘೋಷವನ್ನು ಮಾಡುತ್ತಾ ಬೀದಿಗೆ ಹೊರಟಿದ್ದರು. ಮಹಾ ಬೀದಿಗಳಲ್ಲಿ ಜನಸ್ತೋಮವು ಕಿಕ್ಕಿರಿದು ವಿದ್ಯಾರ್ಥಿಗಳನ್ನು ಹಿಂಬಾಲಿಸಿ ಹೋಗುತ್ತಿತ್ತು. ಪೋಲೀಸರು ವಿದ್ಯಾರ್ಥಿಗಳನ್ನು ಚದರಿಸಿ ಬಿಡಿರಿ ಎಂದು ಹೇಳಿದರು. ಆದರೆ ವಿದ್ಯಾರ್ಥಿಗಳು ಚದರದೆ ರಸ್ತೆಯಲ್ಲೇ ಕುಳಿತುಬಿಟ್ಟರು. ಅದನ್ನು ಕಂಡು ಪೋಲೀಸರು ಒತ್ತಾಯ ನಡೆಸಿದರಂತೆ. ಇದರಿಂದ ರೇಗಿದ ಮಹಾ ಜನರು ಪೋಲೀಸರ ಮೇಲೆ ಕಲ್ಮಳೆ ಸುರಿಸಿದರೆಂದೂ, ಪೋಲೀಸರು ಸಿಕ್ಕಾಬಟ್ಟೆ ಲಾಠಿ ಪ್ರಯೋಗ ಮಾಡಿದರೆಂದೂ ತಿಳಿದು ಬರುತ್ತದೆ. **ಇದರಿಂದ ತಿರುವಾಂಕೂರಿನ ಎಲ್ಲಾ ಕಡೆಗಳ ಕಾಲೇಜು, ಹೈಸ್ಕೂಲುಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಮುಷ್ಕರ** ತೊಟ್ಟಿರುವರು. ಆ ಪ್ರಯುಕ್ತ ಎಲ್ಲಾ ಶಾಲಾ ಕಾಲೇಜುಗಳೂ ಮುಚ್ಚಲ್ಪಟ್ಟಿರುವವು.

ವಿದ್ಯಾರ್ಥಿಗಳು ದೃಢ ನಿಶ್ಚಯದಿಂದ ತಮ್ಮ ಒಗ್ಗಟ್ಟನ್ನು ಪ್ರದರ್ಶಿಸಿರುವರು. ಶಾಲಾ ಕಾಲೇಜುಗಳಲ್ಲಿ ಪರೀಕ್ಷೆಯೆಂದು ನಿಶ್ಚಯಿಸಲ್ಪಟ್ಟಿತ್ತು. ಆದರೆ ವಿದ್ಯಾರ್ಥಿಗಳು ಕ್ಲಾಸಿನಲ್ಲಿರುವರೇ? "ಸರ್ಕಾರದ ಧೋರಣೆಯನ್ನು ಖಂಡಿಸುತ್ತೇವೆ. ಸ್ವಾತಂತ್ರ್ಯ ಸಂಪಾದನೆಗೆ ಪ್ರಯತ್ನಿಸುತ್ತೇವೆ. ಸ್ಟೇಟ್ ಕಾಂಗ್ರೆಸಿನ ಕೋರಿಕೆಯನ್ನು ಮನ್ನಿಸುತ್ತೇವೆ. ಜವಾಬ್ದಾರಿ ಸರ್ಕಾರವನ್ನು ಬಯಸುತ್ತೇವೆ. ಸ್ಟೇಟ್ ಕಾಂಗ್ರೆಸಿನ ಬೆಂಬಲಕ್ಕೆ ನಾವು ಹೋಗುತ್ತೇವೆ" ಎಂದು ಒಂದು ಶಾಲೆಯ ಮಕ್ಕಳು ಜಯಘೋಷ ಮಾಡುತ್ತಾ ಇನ್ನೊಂದು ಕಡೆ ನಡೆದರೆ ಇವರನ್ನು ಕಂಡೊಡನೆ ಆ ಶಾಲೆಯ ಮಕ್ಕಳು ಇವರನ್ನು ಹಿಂಬಾಲಿಸುವರು. ಹೀಗೆ ವಿದ್ಯಾರ್ಥಿಗಳೆಲ್ಲ ಒಂದಾಗಿ ಕಲಹ ಹೂಡುವ ಹಠಕ್ಕೆ ಕಂಕಣಬದ್ಧರಾಗಿರುವರು.

ತಿರುವಾಂಕೂರು ದಬ್ಬಾಳಿಕೆಯು ದಿನೇ ದಿನೇ ಭೀಕರ ಸ್ವರೂಪವನ್ನು ತಾಳುತ್ತಿದ್ದರೂ ಆ ಬಗ್ಗೆ ಮಹಾತ್ಮ ಗಾಂಧಿಯವರೂ ಮೊದಲಾದ ಹಿರಿಯ ನಾಯಕರು ಹಿತೋಕ್ತಿಗಳನ್ನು ಸೂಚಿಸಿದ್ದರೂ ದಿವಾನರಾದ ಸಿ. ಪಿ ರಾಮಸ್ವಾಮಿಯವರ ಕಿವಿ ಇದಕ್ಕೆ ಮುಚ್ಚಿ ಹೋಗಿದೆ. ಸಂಸ್ಥಾನದ ಕಾಂಗ್ರೆಸಿನ ಮೇಲೆ ಇಲ್ಲದ ಸಲ್ಲದ ಆರೋಪಗಳನ್ನು ಸರ್ಕಾರವು ಹೊರಿಸುತ್ತಿದೆ. ದಬ್ಬಾಳಿಕೆಯ ಸತ್ಯಾಸತ್ಯತೆಗಳನ್ನು ತಿಳಿಯಲು ವಿಚಾರಣಾ ಸಮಿತಿಯನ್ನೇರ್ಪಡಿಸಲು ಸರ್ಕಾರವು ಹಿಂಜರಿಯುತ್ತಿದೆ. ಈ ದಬ್ಬಾಳಿಕೆಯಲ್ಲಿ ಸತ್ತವರೆಷ್ಟೋ! ಕೇಳುವವರಾರು? ಸರ್ಕಾರದವರು ಹೇಳಿದ್ದೇ ಸತ್ಯ. ಕಾಂಗ್ರೆಸಿನ ಮೇಲೆ ಹಿಂಸೆಯ ಆಪಾದನೆ ಹೊರಿಸಲ್ಪಟ್ಟಿರುವದು. ಸತ್ಯವನ್ನು ಹುಡುಕುವವರಾರು? ನಿರ್ದಾಕ್ಷಿಣ್ಯ, ನಿಷ್ಪಕ್ಷಪಾತ ವಿಚಾರಣೆ ಇಂದಿನ ತಿರುವಾಂಕೂರು ಸಂಸ್ಥಾನದಲ್ಲಿ ಅಸಂಭವನೀಯವಾಗಿರುವಂತಿದೆ. ಹೀಗೆ ಪ್ರಜಾಹಿತವನ್ನು ಬಯಸುವ ರಾಜ, ಮಂತ್ರಿಗಳೇ ಜನರ ಕೋರಿಕೆಯನ್ನು ತಳ್ಳಿದರೆ, ಈ ರೀತಿ ತಮ್ಮ ಮನಸ್ವೇಚ್ಛೆಯಿಂದ ವರ್ತಿಸುವರ ಗುಟ್ಟೇನಿರಬಹುದು. ಇದರಲ್ಲಿ ಬೇರೆ ಯಾವುದಾದರೂ ಶಕ್ತಿಯ ಕೈಚಳಕ ನಡೆಯುತ್ತಿದೆಯೋ ಎಂಬ ಸಂದೇಹವು ಉಂಟಾಗಿದೆ. ಅಂತೂ ದೇಶೀಯರಾದ, ದೇಶೀಯ ಅಧಿಕಾರಿಗಳು ದೇಶೀಯರನ್ನೇ ಹೀಗೆ ಹಿಂಸಿಸುತ್ತಿರುವದು ಶೋಚನೀಯವ ಸಂಗತಿಯಾಗಿರುವುದು.

ಅಸ್ಸಾಂ ಮಂತ್ರಿಮಂಡಲದ ಬಿಕ್ಕಟ್ಟಾವಸ್ಥೆ.

೫೬ ಅವಿಶ್ವಾಸದ ಠರಾವುಗಳು.

ಅಸ್ಸಾಮಿನ ಮಂತ್ರಿ ಮಂಡಳದ ಪ್ರಧಾನರಾಗಿದ್ದ ಸರ್ ಮಹಮ್ಮದ್ ಸಾದುಲ್ಲಾರವರ ಮೇಲೆ ಅವಿಶ್ವಾಸದ ಠರಾವನ್ನು ತಂದ ಪ್ರಯುಕ್ತ ಸಾದುಲ್ಲಾರವರು ತಮಗೆ ಅಸೆಂಬ್ಲಿಯಲ್ಲಿ ಬಹುಮತವಿಲ್ಲವೆಂದು ತಮ್ಮ ಸಹಕಾರಿಗಳೊಡನೆ ರಾಜೀನಾಮೆಯನ್ನು ಕೊಟ್ಟರು. ನಂತರ ಅಲ್ಲಿ ಬಾಕಿ ಇರುವ ಪಾರ್ಟಿಗಳಲ್ಲಿ ಕಾಂಗ್ರೆಸು ಪ್ರಮುಖವಾದ್ದರಿಂದ ಗವರ್ನರರು ಕಾಂಗ್ರೆಸು ಪಾರ್ಟಿಯ ಮುಖಂಡರಾದ ಶ್ರೀ ಗೋಪಿನಾಥ ಬಾರ್ಡೋಲಿಯವರನ್ನು ಮಂತ್ರಿ ಮಂಡಳವನ್ನು ರಚಿಸಬೇಕೆಂದು ಕೇಳಿಕೊಂಡರು. ಅಂತೆಯೇ ಶ್ರೀ ಬಾರ್ಡೋಲಿಯವರು ರಾಷ್ಟ್ರಪತಿ, ಅಬುಲ್ ಕಲಾಂ ಆಜಾದ್ ಇವರೇ ಮೊದಲಾದ ರಾಷ್ಟ್ರೀಯ ಧುರೀಣರ ಸಲಹೆಯಂತೆ ಅಲ್ಲಿ ಒಂದು ಮಿಶ್ರ ಮಂತ್ರಿ ಮಂಡಳವನ್ನು ರಚಿಸುವಂತೆ ಒಪ್ಪಿಕೊಂಡರು.

ಅಸ್ಸಾಂ ನ್ಯಾಯವಿಧಾಯಕ ಸಭೆಯಲ್ಲಿ 108 ಸದಸ್ಯರಿರುವರು. ಇವರಲ್ಲಿ 33 ಜನರು ಕಾಂಗ್ರೆಸ್ಸಿನವರು. ಆದರೆ ಇತ್ತೀಚೆಗೆ 25 ಸದಸ್ಯರು ಕಾಂಗ್ರೆಸ್ ತತ್ವವನ್ನು ಹಿಡಿದದ್ದರಿಂದ ಕಾಂಗ್ರೆಸ್ ಬಲವು 58 ಕ್ಕೆ ಏರಿತ್ತು. ಆದ್ದರಿಂದಲೇ ಶ್ರೀ ಗೋಪಿನಾಥ ಬಾರ್ಡೋಲಿಯವರು ತಮಗೆ ಬಹುಮತವಿದೆಯೆಂಬ ಭರವಸೆಯಿಂದ ಮಿಶ್ರ ಮಂಡಳವನ್ನು ರಚಿಸಿ ಐದು ಜನ ಮಂತ್ರಿಗಳ ಹೆಸರನ್ನು ಗವರ್ನರರಿಗೆ ಕಳುಹಿಸಿ ಅದು ಅಂಗೀಕೃತವಾಗಿರುವದು. ಉಳಿದ ಸ್ಥಳಗಳಿಗೆ ಮೂರು ಮಹಮ್ಮದೀಯರನ್ನು ನೇಮಿಸುವ ತೀರ್ಮಾನವಿತ್ತು. ಆದರೆ ಇದು ಇನ್ನೂ ಆಗಿರುವದಿಲ್ಲ.

ಅಸ್ಸಾಂಮಿನಲ್ಲಿ 34 ಮಿಲಿಯ ಹಿಂದೂಗಳು 24 ಮಿಲಿಯ ಮಹಮ್ಮದೀಯರು ಇರುವರು. ಈ ಮೊದಲಿನ ಸಾದುಲ್ಲಾ ಮಂತ್ರಿ ಮಂಡಳದಲ್ಲಿ ಮೂರು ಮುಸಲ್ಮಾನರೂ, ಒಬ್ಬ ಕ್ರೈಸ್ತ ಮತ್ತು ಎರಡು ಹಿಂದೂಗಳು ಮಂತ್ರಿಗಳಾಗಿದ್ದರು. ಈ ಜನ ಸಂಖ್ಯೆಯ ದೃಷ್ಟಿಯಿಂದ ಸಮಂಜಸವಿಲ್ಲವೆಂದು ಎಲ್ಲರಿಗೂ ತಿಳಿಯುತ್ತದೆ. ಆ ಪ್ರಯುಕ್ತವೇ ಈಗಿನ ಮಿಶ್ರ ಮಂತ್ರಿ ಮಂಡಳದಲ್ಲಿ ಎಂಟು ಮಂತ್ರಿಗಳಿರಬೇಕೆಂದೂ ಅದರಲ್ಲಿ ಮೂರು ಸ್ಥಳ ಮಹಮ್ಮದೀಯರಿಗೆ ಕೊಡಲ್ಪಡುವದೆಂದೂ ತೀರ್ಮಾನಿಸಿದರು.

ಆದರೆ ಇತ್ತೀಚೆಗೆ ನ್ಯಾಯವಿಧಾಯಕ ಸಭೆಯ ಯೂರೋಪಿಯನ್ ಮೆಂಬರುಗಳು ಮುಸ್ಲಿಂ ಮೆಂಬರುಗಳೊಡನೆ ಸಂಧಾನ ಮಾಡಿಕೊಂಡು ಕಾಂಗ್ರೆಸ್ ಪ್ರತಿನಿಧಿಗಳೊಡನೆ ಹೋರಾಡುತ್ತಿರುವರು. ಮುಸ್ಲಿಂ ಪಾರ್ಟಿಯ ಮುಖಂಡರಾದ ಸರ್ ಸಾದುಲ್ಲಾರವರು ಮುಸ್ಲಿಂ ಲೀಗಿನ ಪ್ರಭಾವಶಾಲಿ ಸದಸ್ಯರಿರುವರು. **ಮುಸ್ಲಿಂ ಲೀಗಿನ ಅಧ್ಯಕ್ಷರಾದ ಜಿನ್ನಾರವರು ತಮ್ಮ ಸಂಸ್ಥೆಗೆ ಆಧಾರದಂತಿದ್ದ ಸಾದುಲ್ಲಾರವರ ಮಂತ್ರಿ ಮಂಡಳ ಮುಕ್ತಾಯಗೊಂಡದ್ದಕ್ಕೆ ಬೇಸರಪಟ್ಟಿರಬೇಕು.** ಈ ಮೊದಲು ಮುಸ್ಲಿಂ ಲೀಗಿನವರು ಸೈನ್ಯ ಸಂಗ್ರಹ ಮಸೂದೆಗೆ ಸಹಾಯವನ್ನಿತ್ತಂತೆಯೇ ಈಗ ಯೂರೋಪಿಯನರನ್ನು ಆದರಿಸಿ ಕಾಂಗ್ರೆಸ್ ಪಕ್ಷದವರನ್ನು ವಿರೋಧಿಸಲು ಪ್ರಯತ್ನಿಸುತ್ತಿರುವರು. ಈಗ ಅವರು ಹೊಸ ಮಿಶ್ರ ಮಂತ್ರಿ ಮಂಡಳದ ಮೇಲೆ ಅವಿಶ್ವಾಸದ ಠರಾವನ್ನು ಕಳುಹಿಸಿರುವರು. ಸಾದುಲ್ಲಾರವರ ಮಂತ್ರಿ ಮಂಡಳದ ಕೈಕೆಳಗೆ ಕೆಲಸ ಮಾಡಲು ಇಷ್ಟಪಡುವ 60 ಜನರು ಈ ಠರಾವಿಗೆ ಒತ್ತಾಸೆ ಇತ್ತಿದ್ದರು. ಆದ ಪ್ರಯುಕ್ತ ವಿರೋಧ ಪಕ್ಷದವರಿಗೆ ಬಹುಮತವಿರುವದು. ಈ ಸಂದರ್ಭದಲ್ಲಿ ರಾಷ್ಟ್ರಪತಿ ಸುಭಾಷ ಬೋಸರೂ, ಅಬುಲ್ ಕಲಾಂ ಆಜಾದರೂ ಬಂದು ಕೆಲವರಿಗೆ ಕಾಂಗ್ರೆಸ್ ಪಕ್ಷೋಪದೇಶ ಮಾಡಿದ್ದರಿಂದ ನಾಲ್ಕು ಜನರು ವಿರೋಧ ಪಾರ್ಟಿಯನ್ನು ಬಿಟ್ಟು ಕಾಂಗ್ರೆಸ್ ಪಕ್ಷಕ್ಕೆ ತಿರುಗಿರುವರು. ಅಂತೂ ವಿರೋಧ ಪಕ್ಷದಲ್ಲಿ 56 ಸದಸ್ಯರಿರುವದರಿಂದ ಅವರಿಗೆ ಬಹುಮತವಿರುವದು. ತಾ. 19 ರಲ್ಲಿ ಅಸ್ಸಾಂ ಮಂತ್ರಿ ಮಂಡಳವು ಸಭೆ ಸೇರಿದ್ದಾಗ ಕೆಲವು ಯೂರೋಪಿಯನ್ ಮತ್ತು ಇತರ ಪಂಗಡದವರಿಂದ ಹೊಸ ಮಂತ್ರಿ ಮಂಡಳದ ಮೇಲೆ ಅವಿಶ್ವಾಸ ಠರಾವು ಬಂದಿತ್ತು. ಆದರೆ ವಿಧಾಯಕ ಸಭೆಯ ಸ್ಪೀಕರರು ಇವರ ಠರಾವನ್ನು ಅಂಗೀಕರಿಸದೆ ಸಭೆಯನ್ನು ಮುಕ್ತಾಯ ಮಾಡಿದರು.

ಈಗ ವಿರೋಧ ಪಕ್ಷದವರು ಒಂದಾಗಿ ನ್ಯಾಯವಿಧಾಯಕ ಸಭೆಯ ಅಧಿವೇಶನವನ್ನು ಒಡನೆ ಕರೆಯಬೇಕೆಂದು ಕೇಳಿಕೊಂಡಿರುವರು. ಈ 56 ಸದಸ್ಯರೂ 56 ಅವಿಶ್ವಾಸ ಠರಾವುಗಳನ್ನು ಸ್ಪೀಕರರಿಗೆ ಕಳುಹಿಸಿರುವದಲ್ಲದೆ ಇವುಗಳ ನಕಲುಗಳನ್ನು ಗವರ್ನರರಿಗೂ ಕಳುಹಿಸಿರುವರು. ನ್ಯಾಯವಿಧಾಯಕ ಸಭೆಯ ಸ್ಪೀಕರರಾದ ಶ್ರೀ ಬಸಂತ ಕುಮಾರದಾಸರು ಸಭೆಯನ್ನು ಅಕ್ಟೋಬರ್ ತಿಂಗಳಲ್ಲಿ ಕರೆಯಲಾಗುವದೆಂತಲೂ, ನಿಶ್ಚಿತ ತಾರೀಖನ್ನು ಹಿಂದನಿಂದ ತಿಳಿಸಲಾಗುವದೆಂತಲೂ ಪ್ರಕಟಿಸಿರುವರು.

ಭಾರತದ ಹನ್ನೊಂದು ಪ್ರಾಂತಗಳ ಪೈಕಿ ಏಳು ಪ್ರಾಂತಗಳಲ್ಲಿ ಕಾಂಗ್ರೆಸು ಅಧಿಕಾರ ಸೂತ್ರವನ್ನು ಕೈಯಲ್ಲಿ ತಳೆದು ಸರಕಾರ ನಡೆಸುತ್ತಿದೆ. ಉಳಿದ ನಾಲ್ಕು ಪ್ರಾಂತಗಳ ಪೈಕಿ ಸಿಂಧು ಮತ್ತು ಅಸ್ಸಾಂಮಿನಲ್ಲಿ ಹೋರಾಟ ನಡೆಯುತ್ತಿದೆ. ಬಂಗಾಳದಲ್ಲಿಯೂ ಚಳವಳಿಗಳು ನಡೆಯುತ್ತಿವೆ. ಈ ಮೂರು ಪ್ರಾಂತಗಳು ಕಾಂಗ್ರೆಸಿನ ಹಿಡಿತಕ್ಕೆ ಬಂದವೇ ಅವರ ವಿಶಾಲ ಭಾರತದ ಐಕ್ಯತೆಯು ಕಾಂಗ್ರೆಸ್ಸಿನ ಧ್ಯೇಯವಾಗಿದೆ. ಆದ್ದರಿಂದ ಕೋಮುವಾರು ಭಾವನೆಯನ್ನಿಟ್ಟುಕೊಂಡು ಕಾಂಗ್ರೆಸನ್ನು ವಿರೋಧಿಸಿ ಭಾರತದ ಹಿತವನ್ನು ಅಲಕ್ಷಿಸುವದು ಸರಿಯಲ್ಲ. **ಈ ಮೂರು ಪ್ರಾಂತಗಳೂ ಕಾಂಗ್ರೆಸ್ ಅಧಿಕಾರಕ್ಕೆ ಒಳಗಾಗುವಂತೆ ಪ್ರಯತ್ನಿಸುವದು ಪ್ರತಿಯೊಬ್ಬನ ಆದ್ಯಕರ್ತವ್ಯವಲ್ಲವೇ?**

ಶ್ರೀ ರಾಮಕೃಷ್ಣ ಪರಮಹಂಸರು.

ಲೇಖಕ:-ಎಂ. ಎಸ್. ಅನಂತಪದ್ಮನಾಭರಾವ್.

ಗತಿ ೮.

(ಕಳೆದ ವಾರದಿಂದ ಮುಂದುವರಿದದ್ದು)

ಇವರ ಮನದಾಳವನು ವೈರಾಗ್ಯ ಮಾರ್ಗವನು
ತಿಳಿಯ ರಾಮಕುಮಾರ ಬಾಳ ಪ್ರಪಂಚವ್ವಲಿ
ಅಂಕವಿದು ಸರಿಯಪ್ಪುದೆಂದೆನುತಲೆಣಿಸುವರೆ
ದಿನದಿನಕೆ ವೈರಾಗ್ಯ ಪೆರ್ಚುವುದು ಬೆಳೆಬೆಳೆದು
ಶಕ್ತಿ ಮಂತ್ರೋಪದೇಶದಲಿ ಮಾತಾಪೂಜೆ
ಮನದೊಳೇ ಸಾಗಿತ್ತು ಶ್ರೀರಾಮಕೃಷ್ಣರಿಗೆ
ಗುರುವು ಕೇನಾರಾಮರೆಂಬವರು ಮುದದಿಂದ
ಉಪದೇಶವಿತ್ತರಾ ಮಂತ್ರವನು, ಭಕ್ತಿಯಲಿ
ಪಠಿಸುತಿರೆ ಮಾತೃ ಸನ್ನಿಧಿಯೊದಗಿ ಸ್ವಪ್ನದಲಿ
ದರ್ಶನವ ನೀಡಿದರು ಹಿಗ್ಗಿದರು ಹರ್ಷದಲಿ,
ಆ ಮೇಲೆ ಮಥುರನಾಥನ ಬಯಕೆಯಂ ತಿಳಿದು
ಸಿಂಗಾರದೊಡವೆಗಳ ಭಾರವನು ಹೃದಯನಿಂ
ಗೊಪ್ಪಿಸುತ ಕಾಳಿ ಮಾತೆಯ ಪೂಜೆಯಂ ಮಾಡೆ
ಮನ ಮಾಡಿದರು ಭರದಿ-ಆ ಮಾತೃ ಸನ್ನಿಧಿಯ
ಧ್ಯಾನವೊಂದೇ ನಿತ್ಯ.

ಇಂತಿರುವ ಸಮಯದಲಿ
ಪೊರಟು ರಾಮಕುಮಾರ ಕಾಮಾರ್ಪುಕೂರವಂ
ಪಯಣದಲಿ ಪೋಗುತಿರೆ ಶ್ಯಾಮ ನಗರಕೆ ಬಂದು
ವಿಧಿವಶದಿ ಪರಲೋಕಗತನಾದನಾ ಭಕ್ತ
ಇದರಿಂದ ಚತರಜಿಯ ವಂಶವೇ ದುಃಖದಲಿ
ಮುಳುಗಿ ಹೋದುದು ಮತ್ತೆ.

ಹಿರಿಯಣ್ಣನಾಮೃತಿಯ
ರಾಮಕೃಷ್ಣರ ಮನದ ಕಲಕಿಬಿಟ್ಟಿದು ಬದುಕ
ಇವರಿಂದಲೇ ಲೋಕವಂ ತಿಳಿವ ಹಿರಿಯಾಸೆ
ಬೆಳೆ ಬೆಳೆದು ಹಿರಿದಾಯ್ತು-ಏಕಾಂತವಾಸವೇ
ಇಷ್ಟವಾಯ್ತಿರಿಸಿಗೆ-ನಿದ್ರೆಯನು ತೊರೆಯುತಾ
ಸಾಧುವರ ರಾತ್ರಿಯಲಿ ಕಿರುಮನೆಯ ಬಿಡುತೈದಿ
ರವಿಯುದಯವಾಗುತಿರೆ ಮರಳುವನು ಕಿರುಮನೆಗೆ;
ಹೃದಯನಿದ ಕಾಣುತ್ತಲೊಂದುದಿನ ಬೆನ್ನಟ್ಟಿ
ನೋಡಲ್ಕೆ ಪಂಚವಟಿಯಲ್ಲವರು ಕುಳಿತಿಹರು
ಆ ಮಲಕ ಮರವಡಿಯ ನೆಳಲಲ್ಲಿ ತಪಸಿನಲಿ
ಮಗ್ನರಾಗಿಹರವರು-ಇವರ ಮನವಂ ಸೆಳೆಯೆ
ಕಲ್ಲುಗಳನೆಸೆಯುತ್ತ ಮರೆಯಲ್ಲಿ ನಿಂದಿಹನು;
ಮತ್ತೆ ಮತ್ತೆಸೆಯುತಿರೆ ನೋಡಲಾಯಿತು ಪರ್ಯೆ
ತನ್ನ ಜ್ಞಾನದೊಳಿಪರು-ತಾಯಿಯಂ ಕಾಣುವಾ
ಬಯಕೆಯೊಟ್ಟಿಪ್ಪ ಪೆರ್ಚಿ ಕಾಡುತಿರಲೀ ಭಯದ
ಕೃತ್ಯಗಳ ಲೆಕ್ಕವಿದೆ! ತಾಯಿಗೋಸುಗ ಅತ್ತು
ಕಣ್ಣೀರ ಕಾಲುವೆಯ ಹರಿಸಿದರು ವನದಲ್ಲಿ.

ತಾಯಿಯಾಮರಲಿ ನಿಂದು ಮೊದಲುಂಬುವರು ತಾವು
ಪುಷ್ಪಗಂಧಗಳನ್ನು ಮೊದಲು ತೊಡುವರು ತಾವು
ಅವುಗಳನ್ನಾ ಮೇಲೆ ತಾಯಿಗೀವರು ಮುದದಿ
ಅಳುತಳುತ ನುಡಿಸುವರು, ಮರುಗುವರು, ಕೊರಗುವರ್
'ನಾನುಂಡುದಾಯ್ತೊಯ್ದು ನಿನಗಿರಲಿ ತೆಗೆದುಕೋ'
ಎನ್ನುವರು, ಕರ್ಪೂರದಾರತಿಯ ಮಾಡುವರು
ನೊಸಲಲ್ಲಿ-ಮನಕೆ ತೋರಿದ ತೆರದಿ ಮಾಡುವರು;
ಇವಕಂಡು ಅಧಿಕಾರ ವರ್ಗದವರೆಲ್ಲ ಕಿವಿ
ಕಿಡಿಯಾಗಿ ಮಥುರ ಬಾಬುಗೆ ತಿಳುಹಲಾ ಮಥುರ
ನಿವರ ಬಗೆಯೆಲ್ಲವನು ತಾ ನೋಡಲೆ ತಿಳಿದಿಹನು,
ಅದರಿಂ ತಿಳುಹದಿಹೆ ಪೂಜೆಯಾಗುವ ಸಮಯ
ವನ್ನರಿತರಿತು ಬಂದಲ್ಲಿ ನೋಡಿದ ಗದಾಧರರ
ಅವಳ ಪದತಳದಲ್ಲಿ ಮಲಗಿ ಪೂಜಿಸುತಿರುವ
ಪರಮ ಭಕ್ತರ ಕಂಡು ರೋಮ ಪುಳಕಿತನಾಗಿ
ರಾಮಕೃಷ್ಣರ ಪದದ ಧಾರಿಯೆರೆದನು ತನ್ನ
ಜೀವನಾಸವನ್ನೆಲ್ಲ-ಅವರಿಷ್ಟದಲಿ ಮಾತೆ
ಪೂಜೆಗಳು ಸಾಗಲೆಂದಾಣತಿಯ ತಾನಿತ್ತು
ಮರಳಿದನು. ಆ ಪ್ರೇಮಭಕ್ತಿಯನು ಪರಿಕಿಸುತ
ಲವರ ಗೂಢವನರಿತು ಆ ಸಾಧು ಮರ್ಮವಂ
ತಿಳಿದವನು ಅವನೊಬ್ಬ: ತನ್ನ ತನುಮನ ಧನವ
ಧಾರೆಯೆರೆಯುತಲವರ ಪದತಲದ, ಮನದೊಳಗೆ
ಹಿಗ್ಗಿದನು.

ಇಂತಿರುವ ಸಮಯದಲಿ ಮೈಯೆಲ್ಲ
ಉರಿಯೆದ್ದು ಮುಸುಗಳನು ಮೈಮುಟ್ಟಿ ಕಾಡುತಿರೆ
ಕೆಂಗಣ್ಣನೋರ್ವ ನೆರನುದಿಸಿದನು ದೇಹದಿಂ
ಮತ್ತೊಮ್ಮೆ ದಿವ್ಯಮಯ ನರನೊಬ್ಬನುದಿಸುತ್ತ
ಕೆಂಗಣ್ಣನಂ ಕೊಲಲು ಮೈಯುರಿಯು ಶಾಂತಮಾ

ದುಮರಿಸಿಗೆ-ಆ ಪಾಪ ಪುರುಷಗಾಗಲು ಕೊನೆಯು
ಮಾತೆಯನು ನೋಡಿದರು ನಿಜ ಕಣ್ಗಳಿಂದವರು.
ಐದು ಬಗೆ ಭಕ್ತಿಯಲಿ ದೇವರನ್ನೊಲಿಸಿದರು
ಶಾಂತ ದಾಸ್ಯ ಸಖ್ಯ ವಾತ್ಸಲ್ಯ ಮಧುರ ಭಾ
ವಂಗಳಿಂ ದೇವರಂ ದರ್ಶನವ ಮಾಡಿದರು:
ಹನುಮಂತ ರೂಪಿನಿಂ ಮರದಿಂದ ಮರಕೆರಗಿ
ಸೀತೆಯನ್ನೊಲಿಸಿದರು-ಆ ಮೇಲೆ ರಘುವರನ
ಹಂಬಲಿಕೆಯಿಂದವರು ರಾಮರಂ ನೋಡಿದರು
ನಿತ್ಯ ಪೂಜಾ ವಿಧಿಯ ಹೃದಯ ರಾಮಗೆ ಬಿಟ್ಟು
ಪೂಜೆಯಾಗುವ ವೇಳೆ ನಿಂತು ನೋಳ್ಪರು ತಾವು.
ಇದುವೆ ಪರಮಾನಂದ-ಅವರ ನಿತ್ಯಾನಂದ.

ತಮ್ಮ ತಪಕೋಸುಗವೆ ವಿರಚಿಸಿದರಾಶ್ರಮವ
ಸಾಧುಗಳನುಪಚರಿಸೆ ಮಾಡುತನುಕೂಲವಂ
ಮಥುರನಾಥನ ವಿಮಲ ಸಖ್ಯ ಸಹವಾಸದಲಿ
ಸಾಧುಮಯ ಭಕ್ತಿಮಯ ಮಾಡಿದರು ನೆಲವನ್ನು
ಬಿಳಿಯ ಮೇಣ್ ಕೆಂಪು ಬಣ್ಣದ ಹೂಗಳನು ತೋರಿ
ದರು ಒಂದೆ ಗಿಡದಲ್ಲಿ-ದೈವ ಲೀಲೆಯ ತೋರಿ
ದೇವರಿಚ್ಛೆಯಿದೆಂದು ಸಾರಿದರು ಹೊಗಳಿದರು.

ಇವರ ವೈರಾಗ್ಯವನು ಪರಿಕಿಸಲ್ಕೊಂದುದಿನ
ಮಥುರ ಬಾಬುವು ಹಲವು, ರೂಪು ಯೌವ್ವನಗಳಿಂ
ತುಂಬಿರುವ ಯುವತಿಯರ ಮಧ್ಯದಲಿ ನಮಿಪರನ
ನೂಕಿದನು-ಮೋಹಜಾಲದೊಳವರ ಕೆಡಹಿದನು;
ಅದರೇಂ? ಮೋಹಾದಿಗಳ ದಾಟಿ ಬ್ರಹ್ಮಾಂಡ
ವೆಲ್ಲಮಂ ದೈವ ರೂಪದಿ ನೋಳ್ಪ ಸಾಧುವಂ
ಮಾಯದೊಳು ಪರಿಕಿಪುದೆ! ಅವರೊಳಗೆ ತಾಪಸರು
ನೋಡಿದರು ಲೋಕಮಾತೆಯ ದಿವ್ಯ ಮೂರ್ತಿಯನು
ಅವಕಂಡು ಭಕ್ತಿಯಿಂ ಹೊಗಳಿದರು ತಾಯಿಯರ
ಇದರಿಂದ ಲೋಕವೇ ತತ್ತರಿಸಿ ಹೋಗಿತ್ತು
ಈ ಪರೀಕ್ಷೆಯು ಜಗವನುದ್ಧಾರ ಮಾಡಿದುದು

ಹಲಧಾರಿಯೆಂಬವನು ರಾಮಕೃಷ್ಣರನರಸಿ
ದಕ್ಷಿಣೇಶ್ವರ ಹೊಕ್ಕು ಕೆಲಕಾಲ ಮಾತೆಯನು
ಸೇವಿಸುತ, ಪಶುಹತ್ಯೆಯಿಂ ನೊಂದು ಕಂದಿದನು
ಇದರಿಂದ ಮಾತೃ ಕೋಪಕೆ ಸಿಲ್ಕಿ ಹಲಧಾರಿ
ಮಗನ ಮರಣದ ನೋವು: ಅವನ ದಿನಚರ್ಯೆ ತಡೆಯೆ
ಬಾಯಿಂದ ರಕ್ತವನು ಕಾರೆಂದು ಶಾಪವುಂ
ತಡೆದರಾ ದುಷ್ಟನಿಂ ರಾಮಕೃಷ್ಣರು ಮತ್ತೆ.
ಈ ಶಾಪ ಸಾಧನೆಯು ಕಾಲದಲಿ ಅವರಸುವ
ನುಳುಹಿದುದು, ಜಗದ ಕಾರ್ಯವನಾಗ ಮಾಡಿದುದು.
ರಾಮಕೃಷ್ಣರ ಭಕ್ತಿ ವೈರಾಗ್ಯಗಳ ಕಂಡು
ಹಲಧಾರಿ ತನ್ನಣಕೆ ಮಾಡುತಿರಲೊಂದು ದಿನ
ಕಾಳಿಯನ್ನರ್ಚಿಸಿ ಪ್ರಸಾದವಂ ಕೈಕೊಂಡು
ಹಲಧಾರಿ ಹಗಲೇರಿ ಮೈಮರೆತು ಋಷಿವರರು
ಏನ ಹೇಳುವೆ ನೋಡು ನೋಡೆ'ನಲು ತಾಯಿಯಾ
ನಿಜರೂಪ ಮಹಿಮೆಗಳನವರಲ್ಲಿ ನೋಡಿದನು,
ಮಹತಾಯಿ ಕ್ಷಮಿಸೆಂದು ಪ್ರಾರ್ಥಿಸಿದನವರನ್ನು.
ಅನುಭವ ಜ್ಞಾನವದು, ಹಲಧಾರಿ ಶ್ರುತಿ ಶಾಸ್ತ್ರ
ಗಳನೋದಿ ಹೇಳಿದರೆ ಸಾಧನಾ ಕ್ರಮದಿಂದ
ಸತ್ಯವಂ ಸಾರುವರು ರಾಮಕೃಷ್ಣರು ಜಗದಿ
ಭಕ್ತರುಚ್ಛಿಷ್ಟವಂ ಸೇವಿಸುವ ಋಷಿವರರ
ಹೀನೈಸೆ, ಕೋಪದಿಂ 'ನೀನೋದಿ ತಿಳಿದಿರುವ
ಶ್ರುತಿ ಶಾಸ್ತ್ರ ಉಚ್ಛಿಷ್ಟವಲ್ಲವೇ ತಿಳಿ'ಯೆನಲು
ಮಾರ್ನುಡಿಯನಾಡಲಾರದೆ ಸೋತ ಹಲಧಾರಿ.

ಇಂತಿರುವ ಮನವೆಲ್ಲ ದೇವರನು ಕಾಣುವಾ
ತೃಷೆಯಿಂದ ಹುಚ್ಚರಂತಾದಿದುದು-ಈ ವಾರ್ತೆ
ಕಾಮಾರ್ಪುಕೂರವಂ ಮುಟ್ಟಿದುದು ನಿಮಿಷದಲಿ:
ಕೇಳಿ ಚಂದ್ರಾದೇವಿ ಮರುಗಿದಳು, ಮಗನನ್ನು
ನೋಡಲ್ಕೆ ಹಾತೊರೆದು ಬಯಸಿದಳು, ಬೇಡಿದಳು.
ತಾಯಿಯಾ ಕರುಳು ನುಡಿ ಕೇಳಿದೊಲು ಋಷಿವರರು
ತಾಯೂರ ಸೇರಲ್ಕೆ ಒಯ್ಯುತ್ತ ದಾಟಿದರು
ಮತ್ತೊಮ್ಮೆ ಹಳೆಯ ನೇಹಿಗರೊಡನೆ ಕೂಡಿದರು.
ಇವರ ದೇಹದ ಜಾಡ್ಯವಂ ನೋಡಿ ಪಥ್ಯವಂ
ಮಾಡಿದರು ಭೇಷಜರ ಕರೆಯಿಸುತ ವಿಧವಿಧದಿ;
ಗುಣವಾದ ರೀತಿಯೊಲು ತೋರಿದುದು ನಿತ್ಯದಲಿ.
ಆ ಊರ ಮಸಣದಲಿ ತಪ ಮಾಡುತಿರ್ದರಾ
ಯೋಗಿಗಳು, ನರಿಗಳಂ ನೆರೆಯಿಸುತ ಸಡಗರದಿ
ಅವುಗಳೊಳು ದೈವ ಸ್ವರೂಪವಂ ಕಾಣುತ್ತ
ಅವರೊಡನೆ ಭೋಜನವ ಮಾಡಿದರು ಮೋದದಿಂ:
ಈ ಹುಚ್ಚು ಹೋಗದಿರೆ ಮದುವೆಯಂ ಮಾಡಿಸಲು
ಪರಮಾತ್ಮನಂ ಕಾಣ್ಬ ಮರುಳೆಲ್ಲ ತೊಲಗುವುದು
ಹೆಣ್ಣ ಮೋಹಕೆ ಸಿಲ್ಕಿ ಪರಮಾತ್ಮನ ಮಲಿನಿಂ
ದಿಳಿದು ಸಂಸಾರದಲಿ ತಿರುಗುವನು ನೋಡೆಂದು
ಚಂದ್ರದೇವಿಗೆ ಪೇಳೆ ಮದುವೆಗಳನರಸಿದಳು
ರಿಸಿಯಿವನು ತಿಳಿಯುತ್ತ ಜಯರಾಮವಾಟಿಯೊಳು
ರಾಮಚಂದ್ರನ ಮಗಳ ಕೇಳಿರೆನೆ-ಅವರಂತೆ
ಶಾರದಾಮಣಿ ದೇವಿಯಂ ತಂದು ವೈವಾಹ
ಮಾಡಿದರು ಸಡಗರದಿ.

ಕೆಲ ಮಾಸಗಳ ಕಳೆದು
ದಕ್ಷಿಣೇಶ್ವರಕೆಂದು ತೆರಳಿದರು ಮತ್ತೊಮ್ಮೆ.
ಪರಮಾತ್ಮನಂ ಕಾಣ್ಬ ಪುಚರ್ಪ ಹಿಡಿದುದು ಬಹಳ,
ಈ ಸುತ್ತದಿಂದವರು ಬಳಲುತಿರೆ ನಿತ್ಯದಲಿ
ಚಂದ್ರದೇವಿಯು ಕೇಳಿ ರುದ್ರನಂ ಭಜಿಸಿದಳು
ಪಲವಿಧದಿ ಬೇಡಿದಳು: ಮೈವೆತ್ತು ಶಂಕರನು
ಅಭಯವಂ ನೀಡಿದನು-'ತರಳೆ ಬಿಡು ಭಯಗಳಂ
ದೈವ ರೂಪಿಯು ನಿನ್ನ ಸತ್ಪುತ್ರ ಸಾಧನದಿ
ಲೋಕ ಸಂಗ್ರಹಕಾಗಿ ಬಳಲುತಿಹನಲ್ಲದೊಡೆ
ಹುಚ್ಚುಪಿತ್ತಗಳವನ ಕಾಡಬಲ್ಲುವೆ? ಪೇಳು
ನಡೆ'ಯೆಂದು ದಿವ್ಯದೃಷ್ಟಿಯನಿತ್ತು ಕಳುಹಿದರೆ
ಮನಕೆ ಶಾಂತಿಯ ಪಡೆದು ತೆರಳಿದಳು ನಿಜನೆಲೆಗೆ.

ಇತ್ತಲಾ ಯೋಗಿವರ ದೈವರೂಪವ ಧರಿಸಿ
ಯೋಗ ನಿದ್ರೆಯೊಳಿರುತ ಬೇರೆ ನಾರಿಯರೊಳಗೆ
ಮಾತೆಯಂ ಕಾಣುವನು, ಸಂಚರಿಪ ಸರ್ಪರಲಿ
ದೈವ ಸ್ವರೂಪವಂ-ಸರ್ವಸ್ವದೊಳಗೊಂದೆ
ಪರಮಾತ್ಮನಂ ಕಂಡು ಆ ರೂಪ ಸುಧೆಯುಂಡು
ಅತ್ತ ತಿರುಗಿದ ಕಣ್ಣ ನಿತ್ತ ಹೊರಳಿಸಲಿಲ್ಲ;
ಬಾಹ್ಯ ಜಡವಾಗುತಿರೆ ವೈರಾಗ್ಯ ಬೆಳೆ ಬೆಳೆದು
ಹಿರಿದಾಯ್ತು, ಅವರಿರುವ ನೆಲವೆಲ್ಲ ಪಾವಿತ್ರ್ಯ
ಮಯವಾಯ್ತು, ಖಗಮೃಗವೆ ಬಳಗಗಳು ಬಂಧುಗಳು.
ಹೃದಯದಿಂ ತರುಣ ಸನ್ಯಾಸಿ ಜನಿಸುತ ಮತ್ತೆ
ಪಾಪ ಪುರುಷನ ನೂಕೆ ಹೃದಯ ವಿಕಸಿತವಾಯ್ತು.
ಜಾಹ್ನವಿಯ ತೀರದಲಿ ಹೊನ್ನು ಮಣ್ಣನು ಬಡಿದು
ಇವಕೆ ಬೆಲೆಯಿಲ್ಲೆಂದು ಹಾಕಿದರು ನೀರಿನಲಿ.
ರಸನೆಯಲಿ ಮಲವೆತ್ತುತಭಿಮಾನವ ನೀಗಿದರು.
ಮುಖದಿ ಮಾತೆಯ ರೂಪ, ಬೆನ್ನಿನಲಿ ಶಿವರೂಪ
ಗಳ ತೋರಿದರು ಮಥುರ ಬಾಬುವಿಗೆ ಯೋಗಿಗಳು,
ಇದರಿಂದ ಬಹುಭಕ್ತಿ ಮಾಡಿದುದು ಬಾಬುವಿಗೆ
ಈ ಸಮಯದಲಿ ರಾಣಿ ಜಗದಂಬೆ ನಾಮವಂ
ಸ್ಮರಿಸುತ್ತ ಭೌತಿಕ ಕಳೇವರವ ನೀಗಿದಳು.
ಮುಂದೆ ಸೇವೆಗೆ ನಿಂದ ಮಥುರನಾಥನು ತಾನೆ.
ಎಡೆಬಿಡದೆ ಪರಮ ಹಂಸರ ಪಾದ ಪೂಜೆಯಲಿ
ನಿರತನಾಗಿರಲದನು ಕುಲ ಪುರೋಹಿತ ಚಂದ್ರ
ಹಲಧರನು ತಿಳಿಯುತಲಸೂಯೆಯಿಂದೊಂದು ದಿನ.
ಮಥುರನಾಥನ ಮನೆಗೆ ಬಂದಿರುವ ಹಂಸರಂ
ಎದೆಯ ಮೇಲೊದೆಯುತ್ತ ಸೇಡು ತೀರಿಸಿಕೊಂಡ.
ತನಗೆ ದೊರೆಯುವ ಮನ್ನಣೆಗೆ ಸಾಧು! ಬಹನೇಟು
ರೋಷದಲಿ ರಾಮಕೃಷ್ಣರ ನಿಂತು ಕಾಡಿಸಿದ.
ಈ ಮಾತನಾ ಮೇಲೆ ಬಹು ದಿವಸಗಳು ಕಳೆಯೆ
ಒಂದು ದಿನ ಹೇಳಿದರು ಮಥುರ ಬಾಬುವಿನೊಡನೆ
ಇಂತವರ ಸಹಜ ಶಾಂತಿಯ ಗುಣವು ಮಾಡಿತ್ತು.

ಇಂಡಿಯಾದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಶುಲಬಲಹೀನತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಂಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು. ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52-16 ಬೆಂಗಳೂರು ಸಿಟಿ.

---

೪೨ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ

ಸುಪ್ರಸಿದ್ಧ ಜ್ವರದ ಗುಳಿಗೆ

ಇದು ಛಳಿಜ್ವರ, ಚಾತುರ್ಥಿ ಜ್ವರ, ಎರಡು ದಿನಬಿಟ್ಟು ದಿನ ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ನಾನಾತರದ ಜ್ವರಗಳ ಮೇಲೆ ತಕ್ಷಣವೇ ಗುಣ ಸಂಜೀವಿನಿಯಂತಿದೆ! ಬಾಟ್ಲಿಗೆ 1 ರೂ. 4 ಬಾಟ್ಲಿಗೆ 3 ರೂ. 12 ಬಾಟ್ಲಿಗೆ 8 ರೂ. ವಿ. ಪಿ. ಖರ್ಚು ಬೇರೆ.

ಗಣೇಶ. ರಾಮಚಂದ್ರ ಕರ್ಕ.

ಮತ್ತು ಕಂಪನಿ,

(52-43) ಗಿರಗಾಂವ್, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹಾಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ಸಹಿ, ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು,

ಮ. ಕೆ. ಯಂ. ಸುಬ್ಬಯ್ಯನವರು.

ಅಮ್ಮತ್ತಿ—ಸಿದ್ದಾಪುರ— ಮ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮ. ಪಿ. ಜಿ. ಮುದ್ದಪ್ಪಯ್ಯನವರು.

ಮಡಿಕೇರಿ—ಮ. ಅಜ್ಜಮಾಡ ಮಾದಪ್ಪನವರು ಮತ್ತು ಮ. ಕೆ. ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮ. ಕೆ. ನಾಗಪ್ಪನವರು.

ಸಾತೋಕ್ಲು—ಮ. ಬಿಳ್ಳಿಯಂಡ ಯಂ. ಪೂವಯ್ಯನವರು.

(ಸಾತೋಕ್ಲು ಸ್ಟೋರ್ಸ್)

ಸೂಚನೆ.— ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್.

'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರದ ಮೇಲೆ 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಪಾಲಸಿಗಳಿಗೆ 26ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್

ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52-30

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯಶಾಲೆಯು ಕಾಯಿಲಸ್ತರನ್ನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದಿಂದ ಈ ವೈದ್ಯಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಶೀತಜ್ವರ, ಮೈಆಲಸ್ಯ, ತಲೆನೋವು, ವಾಯಿಕರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಾಲೆ, ಬೆನ್ನು ಉಳುಕು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಉಪಯೋಗಿಸಿಕೊಳ್ಳುವದು. ೬ ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

12 **ಸಿ. ಹೆಚ್. ರಾಮುಣ್ಣಿ ವೈದ್ಯರ್.**

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿ ಇರಬೇಕಾದ ರಿಜಿಸ್ಟರುಗಳು ಅಂದರೆ—ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರು, **ಸಾಲದ** ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜನ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಕರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾನಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. **ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.**

ಮೇನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಸಕ್ಕೆ ಶೀತಗಳಿಗೂ ಅಮೃತ. ಬೆಲೆ 0-4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಬೇಧ, ಅಜೀರ್ಣ, ದಾಯಲು, ಜ್ವರಗಳಿಗೆ. ಬೆಲೆ 0-4-0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಪಡಿಸುವ ಅದ್ಭುತ ಶಕ್ತಿಯುಳ್ಳ ಮಾತ್ರೆ ಬೆಲೆ 0-8-0, 0-4-0.

ಸುಕುಮಾರತೈಲ

26

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ಇಂತ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ ಬೆಲೆ 1 0 0

ಪ್ರೊಪ್ರೈಟರ್-ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ ವಿ ಪಂಡಿತ್.

ಉತ್ತಮ ಪ್ರಚಾರ! ಜ್ಞಾನಭಂಡಾರ!!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ **ಬೇಕೇ ?**

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

" ಕೊಡಗು "

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ. 180	ರೂ 55	ರೂ 35.	ರೂ 22
6 ತಿಂಗಳಿಗೆ—	,, 100	,, 35	,, 22.	,, 13
3 ತಿಂಗಳಿಗೆ—	,, 60	, 20	,, 13.	,, 8
1 ತಿಂಗಳಿಗೆ—	,, 25	,, 10	,, 6.	,, 4

ನಿರ್ಭಯವಾದ ಟೀಕ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—

ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು ?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಅಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪ್ರೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮಿ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮಿ. ಎಲ್. ಎಫ್. ಸಿ. ಪಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

62-39

ಮಿ. ಡಿ. ಶೇಷಾದ್ರಿ, ಅ. ಇನ್ಸ್‌ಪೆಕ್ಟರು, ಶಿವಮೊಗ್ಗಾ.

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ

ಮುದ್ರಣ ಕೆಲಸಗಳನ್ನು

" ಕೊಡಗು "

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

Reg No. M. 1880

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ. ವಾರ್ಷಿಕ ಚಂದಾ ರೂ. ೩-೮-೦

ತಾ. ೭—೧೦—೧೯೩೮. ಸಂಪುಟ ೧೮] [ಸಂಚಿಕೆ_೧೭

The Bombay Life Assurance Company Ltd.

(Estd. 1908.)

45-47, Churchgate Street, Fort-Bombay.

Progress Proves Its Popularity.

Year	Business in force	Claims Paid	Life Assurance Fund
1931	2,26,84,450	2,91,880	33,24,809
1933	3,07,98,435	3,51,003	50,04,871
1935	4,42,51,214	5,75,198	68,01,501
1937	6,04,70,594	6,00,918	98,68,232

Total Claims Paid Between 1909 and 1937—Rs. 50,22,576.

BOMBAY LIFE is a purely India Concern Offering all that is best in Life Assurance.

To Insure or to Represent it pays you to consult us or our Branches—

KOCHIKAR & BROTHERS Ltd.,
Madras Branch Secretaries,
Post Box No. 337. Mount Road, MADRAS. [Phone No. 8248.]

9

Bombay Life Building Udipi	Gautam [illegible] Chami R[illegible] Guntur [illegible]	[illegible]	[illegible]mbyara [illegible] Calicut	Car Street [illegible] Mangalore	Ottapalam S. Malabar.	Central Station Road, Trivandrum

THE CANARA BANKING CORPORATION, UDIPI, Ltd.

(Incorporated in British India.)
Estd 1906.

MEMBER: { RESERVE BANK OF INDIA, & BANKERS' CLEARING HOUSE, MADRAS.

Paid up Capital	Rs.	3,03,205/-
Reserves	"	3,88,842/-

Our Deposit Rates.

3 months	2½% p. a.
6 or 9 months	3 % p. a
12 months	3½% p. a.
SHORT TERM	2 % p. a.

Head Office: UDIPI, S. K.

Branches.

1. Udipi, 2. Coondapoor, 3. Car Street, Mangalore, 4. Madras, 5 Shimoga, 6. Bunder, Mangalore, 7. Mercara, 8. Virarajendrapet, 8. Saklaspur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

BANKING BUSINESS OF EVERY DESCRIPTION TRANSACTED.

Udipi,
8th July 1938.

52-44

V. R. Kamath, B. A., LL. B.,
Manager.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ	ಅ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,770	0	0
ಜಮಾಬಂದ ಠೇವಣಾತಿ	–	2,45,269	2	4
ವಸೂಲಾದ ಕ್ಷೇಮನಿಧಿ	–	1,36,696	8	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	19,598	4	11
ಟ್ರಿಸ್ಟ್ ಡಿಪಾಜಿಟ್ಟು	–	31,431	6	1

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ಟ್ರಿಸ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ ಇವರ ನಿಯಮ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ಪ್ರತ್ಯೇಕವಾಗಿ ಬರೆದು ತಿಳಿಸಲಾಗುವುದು. ಟ್ರಿಸ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ ಎಲ್. ಸಿ
ಟ್ರೆಜರರ್:—ಚೌರೀರ ಎ. ಮಂದಣ್ಣನವರು ಬಿ ಎ, ಬಿ ಎಲ್
ಸೆಕ್ರೆಟರಿ:—ಪುಲಿಯಂಡ ಜಿ ಐಯ್ಯಪ್ಪನವರು ಬಿ ಎ, ಬಿ ಎಲ್

ತಾ. 1-10-1938

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ

ಪ್ರಕಟಣೆ.

ಕಷ್ಟಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚೆನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80, 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-19

The Agricultural & Industrial Bank Ltd

"ZANDU"

ಝಂಡೂರವರ	ಝಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝಂಡೂ ಅಯೋಡೈಸ್ಡ್ ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಧ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು

ಕೆಟಲಾಗಿಗೆ ಬರೆಯಿರಿ, ಮುಫ್ತತ್ತಾಗಿ ಕಳುಹಿಸಲಾಗುತ್ತೆ

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್

(52 9) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು–ಕೆ ಕೃಷ್ಣರಾವ್, ವೀರಾಜಪೇಟೆ. (ದ ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಒಡ್ಡುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನು ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ. 2—8—0.

ಮಲೇರಿಯಾ ನಿವಾರಿಣಿ

ಇದು ಚಳಿ ಜ್ವರ, ಚಾತುರ್ಥಿ ಜ್ವರ, ದಿನ ಬಿಟ್ಟುಬರುವ ಜ್ವರ, ಮಲೇರಿಯಾ ಜ್ವರ, ಇನ್‍ಪ್ಲುಯೆಂಜಾ ಇತ್ಯಾದಿ ನಾನಾ ತರದ ಜ್ವರಗಳ ಮೇಲೆ ರಾಮಬಾಣ.

ಬಾಟ್ಲಿ 1ರ ರೂ 1—8—0, ಸಣ್ಣ ಬಟ್ಲಿ ರೂ 0—13—0.

ಸ್ಪ್ಲೀನ್ ಮಿಕ್ಚರ್

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಅಶಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು ಬಾಟ್ಲಿ 1ರ ರೂ. 1—2—0

ಬಾಲಗ್ರಹ ಗುಟಿಕೆ

ಮಕ್ಕಳಚೇಷ್ಟ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ಮಂಗಳೂರು ಸ್ಟೋರ್ಸ್, ಮಡಿಕೇರಿ. ವಿ. ಬಿ. ಕಾಮತ್, ಮಡಿಕೇರಿ. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. ಸುಂದರ್ ಪ್ರಭು, ಸುಳ್ಯ. [14]

ವಿವಿಧ ವಿಚಾರ.

ಅನಾರೋಗ್ಯದ ಕಾಲ.

ಮಾನವನ ಜೀವನದಲ್ಲಿ ಹನ್ನೊಂದನೇ ವರ್ಷವು ಬಹಳೇ ಆರೋಗ್ಯದಿಂದ ತುಂಬಿಕೊಂಡಿರುವ ಜೀವಿತದ ಕಾಲಭಾಗವೆಂದು ಪ್ರಜ್ಞರು ಗಣನೆಮಾಡಿದ್ದಾರೆ.

ಆ ಹನ್ನೊಂದನೆ ವರ್ಷದಲ್ಲಿ ಮಗು ಆರೋಗ್ಯದ ಶಿಖರದಿಂದ ಸುಖ ಪ್ರಪಂಚವನ್ನು ನೋಡುತ್ತದೆಂದು ಅವರು ಸಾರುತ್ತಾರೆ. ಇದರ ಮೇಲೂ, ಇದರ ನಂತರವೂ ಆ ಮಗು ಅಷ್ಟು ಉತ್ತಮ ತರದ ಆರೋಗ್ಯ ಸ್ಥಿತಿಯನ್ನು ಹೊಂದಿರುವುದಿಲ್ಲವೆಂದು ಖಚಿತವಾಗಿ ತಿಳಿದು ಬಂದಿದೆ.

ಆ ಹನ್ನೊಂದನೇ ವಯಸ್ಸಿನಲ್ಲಿ ಮಕ್ಕಳಿಗೆ ಯಾವ ತರದ ರೋಗ ರುಜಿಯು ತೊಂದರೆ ಬರುವುದಲ್ಲವಂತೆ. ಆ ಸಮಯದಲ್ಲಿ ಅವುಗಳು ಸಾಯುವುದು ಹೆಚ್ಚಾಗಿ ಏನಾದರೂ ಅಪಘಾತಗಳಿಂದಲೇ ಆಗುತ್ತದೆ.

ಈ ಸಮಯದಲ್ಲಿ ಮಕ್ಕಳ ಮನಸ್ಸು ಬಾಲ್ಯಾವಸ್ಥೆಯ ಅಜ್ಞಾನದಿಂದಾಗಲೀ, ತಾರುಣ್ಯಾವಸ್ಥೆಯ ಕಳವಳದಿಂದಾಗಲೀ ತುಂಬಿರದೆ ಇರುವುದರಿಂದ ದೇಹಪ್ರಕೃತಿಯು ಆರೋಗ್ಯವಾಗಿರಲು ಸಹಾಯವಾಗುತ್ತದೆ. ಇಂತಹ ಕಾಲದಲ್ಲಿ ಏನಾದರೂ ಅಪಘಾತಗಳು ಸಂಭವಿಸದಂತೆ ನೋಡುವುದು ಕರ್ತವ್ಯ.

—oOo—

ಅರ್ಧ ಹೆಣ್ಣು ! ಅರ್ಧ ಗಂಡು !

ಲಂಡನಿನ ಜೋನ್ ಜೋಯಿಂಟನೆಂಬವನು ಸ್ತ್ರೀಯೋ ಪುರುಷನೋ ಎಂಬುದೇ ನಿಶ್ಚಯವಾಗಿ ತಿಳಿಯದೆ ಅವನು ಬಹು ಕಾಲದ ವರೆಗೆ ತೀವ್ರ ಚಿಂತೆಗೊಳಗಾಗಿದ್ದನು. ಈಗ ಅವನು ಸ್ತ್ರೀಯೆಂದು ಡಾಕ್ಟರರು ನಿಶ್ಚಯವಾಗಿ ಹೇಳುತ್ತಾರೆ. ಜೋನನ ವಯಸ್ಸೀಗ 27. ಕಳೆದ ಕೆಲವು ವರ್ಷಗಳಿಂದ ಡಾಕ್ಟರರಿಗೆ ಈತನನ್ನು ಪರೀಕ್ಷಿಸಿ ಅವನ ಲಿಂಗವು ಇಂತಹದೇ ಎಂದು ನಿಶ್ಚಯವಾಗಿ ಹೇಳಲು ಸಾಧ್ಯವಾಗಿರುವುದಿಲ್ಲ. ಅವನು ಅರ್ಧ ಹೆಣ್ಣು ಅರ್ಧ ಗಂಡೆಂದಾಗಿ ಬಹಳ ನಾಚಿಕೆಪಟ್ಟು ಅಜ್ಞಾತನಾಗಿ ಬಹಳ ವ್ಯಥೆಯಿಂದ ಜೀವನ ಕಳೆಯಬೇಕಾಯಿತು. ಆ ಮೇಲೆ ಡಾಕ್ಟರರು ಜೋನನನ್ನು ಪರೀಕ್ಷಿಸಿ ಅವನು ಹೆಣ್ಣೆಂದು ಅಭಿಪ್ರಾಯವಿತ್ತು ಜೋನನು ಹನ್ನಾ ಜೋಯಿಂಟ್ ಎಂಬ ಹೆಸರಿನಿಂದ ಸ್ತ್ರೀಯಾಗಿ ಕೆಲಸಮಯ ಜೀವಿಸಿದನು. ತಿರುಗಿ ತಜ್ಞರು ಹನ್ನಳನ್ನು ಪರೀಕ್ಷಿಸಿ ಅವಳು ಗಂಡೆಂದು ಹೇಳಿ ಅವಳು ಜೋನನಾಗಿ ಜೀವಿಸಹತ್ತಿದಳು. ಜೋನನು ದೊಟ್ಟಿನ ಅಂಗಡಿಯೊಂದರಲ್ಲಿ ಕೆಲಸ ಮಾಡುವಾಗ ಅವನು ಹೆಂಗಸೆಂದು ಹುಡುಗರು ತಮಾಷೆಮಾಡುವರು. ಹನ್ನಳಾಗಿ ಕೆಲಸಮಾಡುವಾಗ ಗಂಡಸೆಂದು ಪರಿಹಾಸ್ಯಮಾಡುವರು. ಹೀಗೆ ಜೋನನಿಗೆ ಜೀವನವೇ ಅಸಹ್ಯಪೀಡೆಯಾಗಿತ್ತು. ಕಡೆಗೆ ಎಪೆಂಡಿಸೈಟಿಸ್ ರೋಗಕ್ಕಾಗಿ ಜೋನನಿಗೆ ಒಪರೇಶನ್ ಮಾಡಿದಾಗ ಅವನು ನಿಶ್ಚಯವಾಗಿಯೂ ಸ್ತ್ರೀಯೆಂದು ಸಿದ್ಧವಾಯಿತು. ಈಗ ಸ್ತ್ರೀಯಾಗಿಯೇ ಇರುವನು.

—oOo—

ಸಾಗರ ತಳದಲ್ಲಿ ಭೀಕರ ಸಂಚಾರ.

ಭೀಕರ ಅರಣ್ಯಗಳ ಮಧ್ಯದಿಂದ ಹಾದು ಹೋಗುವ ಅನುಭವವು ನಿಮಗೆಂದಾದರೂ ಆಗಿದೆಯೋ? ಹಾಗಾದರೆ ನೀವು ಪಾತಾಳಲೋಕದ ನಿಬಿಡಾರಣ್ಯದ ವಿಚಾರ ತಿಳಕೊಳ್ಳುವುದು ಇನ್ನೂ ಸ್ವಾರಸ್ಯವಾಗಿರುತ್ತದೆ. ಸಾಗರಗಳ ತಳದಲ್ಲಿ ನಿಬಿಡವಾಗಿ ವಿಚಿತ್ರ ಸಸ್ಯಗಳಿಂದ ಕೂಡಿದ ಅರಣ್ಯಗಳಿವೆ.

ಇಂತಹ ಅರಣ್ಯವೊಂದನ್ನು ಸಂಚರಿಸುವ ಭಾಗ್ಯವು ಆಸ್ಟ್ರೇಲಿಯದ ಜಾನ್ ಜ್ಯಾಲ್ಡ್ಸ ಎಂಬವನಿಂದಾಯಿತು. ಇವನ ಕಸಬು ನೀರಿನಲ್ಲಿ ಮುಳುಗಿ ಮುತ್ತು, ಚಿಪ್ಪು, ವಜ್ರ ವೈಡೂರ್ಯಗಳನ್ನು ಶೋಧ ಮಾಡುವುದು

ಕಂಬರ್‌ಲ್ಯಾಂಡ್ ಎಂಬ ಹಡಗವು ಬಂಗಾರದ ಗಟ್ಟಿಗಳನ್ನು ಸಾಗಿಸುವಾಗ ಆಸ್ಟ್ರೇಲಿಯದ ಪಶ್ಚಿಮ ಭಾಗದ ಸಮುದ್ರದಲ್ಲಿ ಮುಳುಗಿತು. ಅದು ಪಾತಾಳದನ್ನು ಸೇರಿದ ಜಾಗವನ್ನು ಹುಡುಕಲು ಸಾಹಸಿಗನಾದ ಜಾನ್ ಜ್ಯಾಲ್ಡ್ಸ ಒಪ್ಪಿಕೊಂಡನು.

ಸಮುದ್ರದ ಅಡಿಯಲ್ಲಿ ಮುಳುಗಲು ಬೇಕಾದ ಕವಚವನ್ನು ತೊಟ್ಟು ಜಾನ್‍ನು ಸಾಗರವನ್ನು ಹೊಕ್ಕನು. ಆಕಸ್ಮಾತ್ತಾಗಿ ಅವನು ನೀರಡಿಯ ಒಂದು ಮರಳು ದಿನ್ನೆಯಲ್ಲಿ ಬಂದಿಳಿದನು. ಅಲ್ಲಿಂದ ನೋಡಲು ತುಸು ದೂರದಲ್ಲಿ ಜಲಸಸ್ಯಗಳಿಂದ ನಿಬಿಡವಾಗಿ ಬೆಳೆದ ಭೀಕರ ಅರಣ್ಯವೊಂದು ಅವನ ಕಣ್ಣಿಗೆ ಬಿತ್ತು. ಈ ಜಲ ಸಸ್ಯಗಳು ದೊಡ್ಡ ದೊಡ್ಡ ಮರಗಳ ಆಕೃತಿಯುಳ್ಳವುಗಳಾಗಿದ್ದವು.

ಈ ಪಾತಾಳ ಅರಣ್ಯವನ್ನು ಅವನು ಹೊಕ್ಕನು ಕೂಡಲೇ ಭಾರೀ ಆಕೃತಿಯ ಜಲಜಂತುಗಳು ಅವನನ್ನು ಮುತ್ತಿದವು. ಗರಗಸಹಲ್ಲಿನ ಮೀನುಗಳು, ಅಷ್ಟಪಾದಗಳ ಪ್ರಾಣಿಗಳು, ಮತ್ತನೇಕ ತರದ ಭಯಾನಕ ಸ್ವರೂಪದ ಜಲಜಂತುಗಳು ಅವನನ್ನು ಎದುರ್ಗೊಂಡವು.

ಅಲ್ಲಿ ಹುಡುಕಲು ಒಂದು ದೊಡ್ಡ ಹಡಗಿನ ಭಾಗವು ಕಾಣಿಸಿತು. ಅವರೆ ಅದರ ಭಾಗಗಳನ್ನು ಮೇಲಕ್ಕೆ ಕಳುಹಿಸಲು ಅದು ತಾನು ಹುಡುಕ ಬಂದ ಕಂಬರ್‌ಲ್ಯಾಂಡ್ ಹಡಗಿನದಲ್ಲವೆಂದು ತಿಳಿಯಿತು. ಅದೇ ಇನ್ನೊಂದು ಕಡೆಯಲ್ಲಿ ಅವನಿಗೆ ಶತಮಾನಗಳ ಹಿಂದೆ ಮುಳುಗಿದ ಹಡಗಿನ ಪತ್ತೆ ಸಿಕ್ಕಿತು. ಇದು ಕೂಡ ಅದೇ ರೀತಿ ಬೇರೆ ಯಾವುದೋ ಒಂದು ಹಡಗಿನದಾಗಿತ್ತು.

—oOo—

ಪಟಾಕಿಗೆ ಬಹಿಷ್ಕಾರ.

ದೀಪಾವಳಿ ಬಂತೆಂದರೆ ಸರಿ ಪಟಾಕಿಗಳ ಮೂಲಕ ಬಡ ಭಾರತೀಯರ ಹಣದ ಸೂರೆಗೆ ಪ್ರಾರಂಭ. ಹಬ್ಬದ ದಿನಗಳಲ್ಲಿ ಸುಖ ಸಂತೋಷದಿಂದಿರುವುದಕ್ಕೆ ಬದಲು ಪಟಾಕಿಯೇ ಮೊದಲಾದ ಸ್ಫೋಟಕ ವಸ್ತುಗಳನ್ನು ಸುಟ್ಟು ಪರದೇಶಗಳಿಗೆ ಹಣವನ್ನು ರವಾನಿಸುತ್ತೇವೆ. ಹಣ ಹೋಗುವುದಲ್ಲದೆ ಅನೇಕ ಭಯಂಕರ ಪ್ರಕರಣಗಳೂ ಸಂಭವಿಸುತ್ತವೆ. ಇದನ್ನು ತಪ್ಪಿಸುವುದು ಅಬಾಲವೃದ್ಧರ ಕರ್ತವ್ಯವಲ್ಲವೆ?

ನಮ್ಮ ದೇಶದಲ್ಲಿ ಸಂಪತ್ತು ಪರದೇಶಗಳಿಗೆ (ಅದರಲ್ಲಿಯೂ ಹಿಂಸಾಯುತ ಕಾರ್ಯಗಳಲ್ಲಿ ನಿರತರಾಗಿರುವ ಜಪಾನ್ ಮೊದಲಾದ ದೇಶಗಳಿಗೆ) ಹೋಗಗೊಡದಂತೆ ಮಾಡಬೇಕೆಂಬ ಉದ್ದೇಶದಿಂದ ಮುಂಬಯಿ ಸರಕಾರದವರು ಪಟಾಕಿಗಳ ಮೇಲೆ ಬಹಿಷ್ಕಾರ ಹಾಕುವ ಅತಿ ಶ್ಲಾಘನೀಯ ಕಾರ್ಯವನ್ನು ಕೈಕೊಳ್ಳಲಿರುವರೆಂದು ತಿಳಿಯಲು ಬಹಳ ಸಂತೋಷವಾಗುತ್ತದೆ. ಈ ಸಂಬಂಧದಲ್ಲಿ ಶಾಸನವೂ ಸಹ ಜಾರಿಗೆ ಬರಲಿರುವುದಂತೆ. ಈ ಘನ ಉದ್ದೇಶವನ್ನು ಎಲ್ಲರೂ ಅನುಸರಿಸುವುದು ಶ್ರೇಯಸ್ಕರವಲ್ಲವೆ?

—oOo—

ಸತ್ತವನನ್ನು ಬದುಕಿಸುವ ಯತ್ನ.

ಕಬ್ಬಿಣದ ಶ್ವಾಸಕೋಶಗಳ ಸಮಾಚಾರವನ್ನು ಆಗಲೇ ಮರೆಯಲಿಕ್ಕೆ ಸಾಧ್ಯವಿಲ್ಲ. ಈಗ ಇನ್ನೂ ವಿಚಿತ್ರ ಸಂಗತಿ ತಿಳಿಯ ಬಂದಿದೆ. ಅದು ಸತ್ತವರನ್ನು ಬದುಕಿಸುವುದು.

ಸೆಂಟ್ ಗಿಲ್ಡಾಸ್ ಬ್ರಿಟನ್ನಿನ ಸಮುದ್ರ ತೀರದಲ್ಲಿರುವ ಒಂದು ದ್ವೀಪ. ಅದೇ ನೆ ಹೃದಯ ತಯಾರಿಕೆಯ ಸ್ಥಳ. ನೋಬೆಲ್ ಬಹುಮಾನವನ್ನು ಪಡೆದ ಪ್ರಖ್ಯಾತ ವಿಜ್ಞಾನಿಗಳಾದ ಡಾ. ಅಲೆಕ್ಸಿಸ್ ಕ್ಯಾರೆಲ್‍ರವರು ಅನೇಕ ದಿವಸಗಳಿಂದ ಜೀರ್ಣವಾದ ಹೃದಯಗಳಿಗೆ ಬದಲು ಮಾನವ ಕೃತಕ ಹೃದಯ ಸ್ಥಾಪನೆ ಮಾಡುವ ಸಂಶೋಧನೆಯನ್ನು ನಡಸಿದ್ದಾರೆ. ನಮ್ಮ ಈಗಿನ ಜೀವ ಮಾನವನ್ನು ದ್ವಿಗುಣಮಾಡಬಹುದೆಂದು ಅವರು ಅಭಿಪ್ರಾಯಪಡುತ್ತಾರೆ.

ಕರ್ನಲ್ ಲಿಂಡ್ ಬರ್ಗರು ಸತ್ತಪ್ರಾಣಿಯನ್ನು ಬದುಕಿಸಿ ಜಗತ್ತನ್ನೇ ವಿಸ್ಮಯಪಡಿಸಿದ್ದು ಅನೇಕರ ಜ್ಞಾಪಕದಲ್ಲಿರಬಹುದು.

ಈಗ ಡಾ. ಕ್ಯಾರೆಲ್‍ರವರು ಮರಣೋನ್ಮುಖವಾಗಿ ಬಹುಳಕಾಲ ಗತಿಸಿದ ಪ್ರಾಣಿಗಳನ್ನು ಬದುಕಿಸುವ ಪ್ರಯೋಗವನ್ನು ನಡೆಸುತ್ತಿದ್ದಾರೆ. ತಮ್ಮ ಸಂಶೋಧನೆಯ ಫಲವು ಒಂದಲ್ಲಾ ಒಂದು ದಿನ ಮಾನವ ವರ್ಗದ ಮೇಲೂ ಪ್ರಯೋಗವಾಗುವುದೆಂದು ಅವರು ಭರವಸೆಯುಳ್ಳವರಾಗಿದ್ದಾರೆ.

—oOo—

ನವೀನ ಲೇಪನದ್ರವ್ಯ.

ಇಂಗ್ಲೆಂಡಿನಲ್ಲಿ ಈಗ ನವೀನವಾದ ಒಂದು ಲೇಪನ ದ್ರವ್ಯವು ಉಪಯೋಗಕ್ಕೆ ಬರುತ್ತಿದೆ. ಅದು ಹಾವುಗಳ ಚರ್ಬಿಯಿಂದ ಅಥವಾ ಕೊಬ್ಬಿನಿಂದ ತಯಾರಿಸಲ್ಪಟ್ಟದ್ದಾಗಿದೆ. ಅದನ್ನು ಮೈಮೇಲೆಲ್ಲಾ ಹಚ್ಚಿಕೊಂಡು ತಿಕ್ಕಿದರೆ ಅದು ಚರ್ಮವನ್ನು ಉತ್ತಮಗೊಳಿಸಿ ನೆರಿಬಿದ್ದ ಚರ್ಮವನ್ನು ಸಹ ಎಳೆ ಯುವಕರ ಚರ್ಮದಂತೆ ಮಾಡುವುದು. ಈ ಲೇಪನ ದ್ರವ್ಯದ ಹುಟ್ಟೂರು ಹಿಂದುಸ್ಥಾನ. ಈ ದೇಶದಲ್ಲಿ ಅದು ಅನೇಕ ಶತಮಾನಗಳಿಂದಲೂ ಪ್ರಚಾರದಲ್ಲಿದೆ. ಇಂಗ್ಲೆಂಡಿನಲ್ಲಿ ಅದರ ಉಪಯೋಗವು ಸದ್ಯದಲ್ಲಿ ಐಶ್ವರ್ಯವಂತರ ಪಟ್ಟಿಗೆ ಸಾಧ್ಯವಾಗಿದೆ. ಏಕೆಂದರೆ ಅದರ ಅತ್ಯಲ್ಪ ಪಾಕಕ್ಕೆ ಸುಮಾರು 80 ಪವನುಗಳಷ್ಟು ಬೆಲೆಯಿದೆ.

—oOo—

ಓದ ಬಲ್ಲ ನಾಯಿ.

ನಾಯಿಯು ಮಾತನಾಡಬಲ್ಲುದೆಂಬ ವರ್ತಮಾನವು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಬಹುದು. ಆದರೆ ಕೆನಡದಲ್ಲಿನ ಹ್ಯಾನ್ಸ್ ಎಂಬ ಒಂದು ಅಲ್ಸೇಷನ್ ನಾಯಿಯು ಮಾತನಾಡಬಲ್ಲುದು. ಶ್ವಾನಕುಲದಲ್ಲಿ ಅಥವಾ ಪ್ರಾಣಿವರ್ಗದಲ್ಲಿ ಈ ಕಾರ್ಯವು ನಡೆದಿರುವುದು ಇದೇ ಪ್ರಥಮ. ಹ್ಯಾನ್ಸ್ ತನ್ನ ಯಜಮಾನನಾದ ಕಾರ್ಲ್ ಎಂಪ್‌ಸ್ಲೇ ಎಂಬುವನೊಂದಿಗೆ ಟೊರೆಂಟೋದಲ್ಲಿ ವಾಸಿಸುತ್ತದೆ. ಕೇಳಿದ ಸಾಮಾನುಗಳನ್ನು ತಂದುಕೊಡುವುದಲ್ಲದೇ, ಯಜಮಾನನು ಪೇಟೆಗೆ ಹೋದಾಗ ಡಬ್ಬಗಳ ಮೇಲಿನ ಚೀಟಿಯ ಸಹಾಯದಿಂದ ತನ್ನ ಯಜಮಾನನಿಗೆ ಬೇಕಾದ ಸಾಮಾನನ್ನು ತೋರಿಸಿಕೊಡುತ್ತದೆ. ಆ ಚೀಟಿಗಳನ್ನು ಓದಲೂ ಬಲ್ಲುದು.

—oOo—

7 ಮೈಲು ಮೇಲಿಂದ ನೆಲಕ್ಕೆ ಹಾರಿದ.

ಜೇಮ್ಸ್ ವಿಲಿಯಮ್ಸ್ ಎಂಬ ಫ್ರೆಂಚ್ ವೈಮಾನಿಕನೊಬ್ಬನು 35,075 ಅಡಿ ಅಂದರೆ ಸುಮಾರು 7 ಮೈಲು ಮೇಲಕ್ಕೆ ವಿಮಾನಮೂಲಕ ಹಾರಿ ಅಲ್ಲಿಂದ ವಾಯುಕೊಡೆ ಹಿಡಕೊಂಡು ಕೆಳಗೆ ಧುಮುಕಿ ಸುರಕ್ಷಿತವಾಗಿ ನೆಲಕ್ಕೆ ಮುಟ್ಟಿರುವನು. ವಿಲಿಯಮ್ಸನು ಎರಡು ವಾಯುಕೊಡೆ ಹಿಡಕೊಂಡಿದ್ದರೂ ಅವುಗಳನ್ನು ನೆಲದಿಂದ 650 ಅಡಿ ಎತ್ತರವಿರುವಾಗ ಮಾತ್ರ ಉಪಯೋಗಿಸಿದನು. ಅಷ್ಟು ಜನಕ ವಾಯುಸಂಗ್ರಹವನ್ನೂ ತನ್ನೊಂದಿಗೊಯ್ದಿದ್ದನು. ಆಧುನಿಕ ಯುಗದ ಮಹಿಮೆ ಎಂಥಾದ್ದು ನೋಡಿರಿ. ಮಾನವನ ಶಕ್ತಿಯಾವರೂ ಎಷ್ಟು ವಿಪರೀತದ್ದಿದೆ ಎಂಬುದನ್ನು ತಿಳಿಯಿರಿ. ನೆಲದಲ್ಲಿ ವಾಯುವೇಗದಿಂದ ಸಂಚರಿಸಬಲ್ಲ. ಆಕಾಶದಲ್ಲಿ ಹಾರಬಲ್ಲ. ಸಮುದ್ರಾಂತರಾಳವನ್ನು ಹೊಕ್ಕು ಅಲ್ಲಿರುವ ಗುಟ್ಟನ್ನು ಭೇದಿಸಬಲ್ಲ. ಇಂತು ಮಾನವ ಶಕ್ತಿಗೆ ಎಲ್ಲಿದೆಯೋ ?

—oOo—

ಯೂರೋಪಿನ ಬಿಕ್ಕಟ್ಟು ಬಗೆಹರಿಯಿತು.

ಸರ್ವಾಧಿಕಾರಿಗಳ ದರ್ಪಕ್ಕೆ ಬ್ರಿಟನು ಬೆದರಿತು. ಅವರ ಪ್ರೀತಿ ಸಂಪಾದನೆಗಾಗಿ ಇಂಗ್ಲೆಂಡು ಮತ್ತು ಫ್ರಾನ್ಸು ಪ್ರಜಾಪ್ರಭುತ್ವವನ್ನು ಬಲಿಕೊಟ್ಟಿತು. ಇದರಿಂದಾಗಿ ಬ್ರಿಟನು ಯೂರೋಪಿನ ಶಾಂತಿ ಹಾಗೂ ತನ್ನ ಸಾಮ್ರಾಜ್ಯರಕ್ಷಣೆ ಮಾಡಿಕೊಂಡಿತು. ಹಿಟ್ಲರನ ಕಸವರಿಕೆಯು ಜಯಪ್ರದವಾಯಿತು.

ಕಳೆದ ವಾರ ಯೂರೋಪಿನ ಪರಿಸ್ಥಿತಿ ಎಂಥಾ ಬಿಕ್ಕಟ್ಟಾವಸ್ಥೆಯಲ್ಲಿದ್ದಿತೆಂದು ನಮ್ಮ ವಾಚಕ ಮಹಾಶಯರಿಗೆ ತಿಳಿದಿರುವುದು. ಇಂಥಾ ವಿಷಮ ಪರಿಸ್ಥಿತಿಯನ್ನು ಹೋಗಲಾಡಿಸಲು ಕಂಕಣಬದ್ಧರಾದ ಬ್ರಿಟಿಷ್ ಪ್ರಧಾನ ಮಿ. ಚೇಂಬರ್‌ಲೇನರ ನಾಟಕೀಯ ಪ್ರದರ್ಶನಗಳು ತಿಳಿಯದೆ ಇಲ್ಲ. ಇದರಿಂದೆಲ್ಲಾ ವಿಫಲರಾದ ಚೇಂಬರ್‌ಲೇನರು ಜರ್ಮನಿ, ಫ್ರಾನ್ಸ್, ಮತ್ತು ಇಟೆಲಿಯ ಸಹಾಯವನ್ನು ಕೋರಿ ಮ್ಯೂನಿಚ್‌ನಲ್ಲಿ ಸಭೆ ಸೇರಿಸಿ ತಮ್ಮ ಆತ್ಮರಕ್ಷಣೆಗಾಗಿ ಬಡಪಾಯಿಯಾದ ಝೆಕೊಸ್ಲೊವಾಕಿಯಾದ ಅಂತಿಮ ಕಾಲವನ್ನು ಆಹ್ವಾನಿಸಿದರು. ಇವರ ಯೋಜನೆಯಂತೆ ಸೆ. ತಾ. 30 ರಲ್ಲಿ ಮ್ಯೂನಿಚ್‌ನಲ್ಲಿ ಈ ನಾಲ್ಕು ಪ್ರಬಲ ರಾಷ್ಟ್ರಗಳ ಸಭೆ ಸೇರಿತು.

ಒಪ್ಪಂದದ ಮುಖ್ಯ ಶರತುಗಳು.

ಝೆಕೊಸ್ಲೊವಾಕಿಯಾದಲ್ಲಿ ನೂರಕ್ಕೆ 50 ಕ್ಕಿಂತ ಹೆಚ್ಚು ಸುಡೆಟನರಿರುವ ಪ್ರದೇಶಗಳನ್ನು ಜರ್ಮನಿಗೆ ಕೊಡಿಸಬೇಕು. ಜರ್ಮನರೇ ಹೆಚ್ಚಾಗಿರುವ ಪ್ರದೇಶಗಳನ್ನು ಜರ್ಮನ್ ಸೈನ್ಯವು ತಾ. 1 ರಿಂದ ಪ್ರವೇಶ ಮಾಡಬಹುದು. ಈ ಮೇಲ್ಕಂಡ ಯೋಜನೆಯನ್ನು ಜಾರಿಗೆ ತರಲು ಒಂದು ಅಂತರರಾಷ್ಟ್ರೀಯ ಕಮಿಟಿಯು ನೇಮಕವಾಗಿರುವುದು. ಇದು ಝೆಕ್ ಮತ್ತು ಸುಡೆಟನ್ ಗಡಿಗಳನ್ನು ನಿರ್ಧರಿಸುವುದು. ಝೆಕ್ ಸರ್ಕಾರವು ಸೆರೆಯಲ್ಲಿಟ್ಟಿರುವ ಎಲ್ಲಾ ಸುಡೆಟನ್ ಜರ್ಮನರನ್ನು ನಾಲ್ಕು ವಾರಗಳೊಳಗೆ ಬಿಡುಗಡೆ ಮಾಡಬೇಕು. ಮತ್ತೇಕೆ? ಮಿ. ಚೇಂಬರ್‌ಲೇನರು ಎರಡನೇ ಸಾರಿ ಹಿಟ್ಲರರ ದರ್ಶನಕ್ಕೆ ಹೋಗಿದ್ದಾಗ ಅವರು ಹಾಕಿದ ಶರತುಗಳನ್ನೆಲ್ಲಾ ಈ ಪರಿಷತ್ತು ಅನುಮೋದಿಸಿರುವುದು. ಆ ನಂತರ ಬ್ರಿಟನು ಮತ್ತು ಜರ್ಮನಿಯು ತಮ್ಮೊಳಗೆ ಪರಸ್ಪರ ಸ್ನೇಹ ಸಂಬಂಧವು ಅತ್ಯಗತ್ಯವಾಗಿದೆಯೆಂದೂ ನಾವು ಒಬ್ಬರ ಮೇಲೊಬ್ಬರು ಯುದ್ಧ ಮಾಡುವುದಿಲ್ಲವೆಂದೂ ಒಪ್ಪಂದ ಮಾಡಿಕೊಂಡರು.

ಮ್ಯೂನಿಚ್ ಯೋಜನೆಗೆ ಝೆಕ್ಕರ ಒಪ್ಪಿಗೆ.

ಮ್ಯೂನಿಚಿನಲ್ಲಾದ ಒಪ್ಪಂದದ ಶರತುಗಳ ಒಂದು ಪ್ರತಿಯನ್ನು ಬ್ರಿಟಿಷ್ ರಾಯಭಾರಿಯಾದ ಸರ್ ನ್ಯೂಟನರು ಝೆಕ್ ಸರ್ಕಾರಕ್ಕೆ ಕೊಟ್ಟರು ಮತ್ತು ಇದಕ್ಕೆ ಬೇಗನೆ ಉತ್ತರ ಕೊಡಬೇಕೆಂದೂ ತಿಳಿಸಿದರು. ಈ ಪ್ರತಿಯ ಜೊತೆಗೆ ಚೇಂಬರ್ಲೇನರು ಒಂದು ಪತ್ರದಲ್ಲಿ ಈ ಶರತುಗಳ ಬಗ್ಗೆ ಅದೇ ದಿನ ಮಧ್ಯಾಹ್ನದೊಳಗೆ ಉತ್ತರ ಕೊಡಬೇಕೆಂದೂ ತಿಳಿಸಿದರು. ಇಷ್ಟು ಒತ್ತಾಯಪಡಿಸಿ ಇಂಥಾ ಮಹತ್ವದ ಪ್ರಶ್ನೆಯ ಬಗ್ಗೆ ಒಡನೆ ಉತ್ತರಕೊಡಬೇಕೆಂದು ಬ್ರಿಟಿಷರು ಕೇಳುತ್ತಿರುವುದು ಆಶ್ಚರ್ಯಕರವೆಂದು ಝೆಕ್ಕರು ತಿಳಿಸಿದರಂತೆ. ಅಂತು ಈ ಸಮಸ್ಯೆಯ ವಿಚಾರ ಬಗ್ಗೆ ಝೆಕ್ ಮಂತ್ರಿ ಮಂಡಳವು ಸೇರಿತು. ಈ ವರೆಗೆ ಫ್ರೆಂಚ್ ಮತ್ತು ಬ್ರಿಟನರ ಸಹಾಯ ಸಿಗುವದೆಂಬ ಭಾವನೆಯಿಂದ ಹಿಟ್ಲರನ ಘೋಷಣೆಯನ್ನು ತೃಣೀಕರಿಸುತ್ತಿದ್ದ ಝೆಕೊಸ್ಲೊವಾಕಿಯಾವನ್ನು ಫ್ರೆಂಚ್ ಮತ್ತು ಬ್ರಿಟನ್ ರಾಷ್ಟ್ರಗಳೇ ಹಿಟ್ಲರನ ಶರತುಗಳನ್ನು ಅಂಗೀಕರಿಸಬೇಕೆಂದು ಒಪ್ಪಲೊಲ್ಲದ ಝೆಕ್ಕರ ಗಂಟಲಲ್ಲಿ ತುರುಕಿದರೆ, ಬಡ ರಾಷ್ಟ್ರವಾದ ಝೆಕೊಸ್ಲೊವಾಕಿಯಾವು ಒಪ್ಪದೆ ಗತ್ಯಂತರವಿಲ್ಲದಾಯಿತು. ಹಾಗೆಯೇ ಅವರ ಸಭೆಯಲ್ಲಿ ಮ್ಯೂನಿಚ್ ಶರತುಗಳನ್ನು ಒಪ್ಪುವ ಠರಾವುಗಳಾಗಬೇಕಾಯಿತು.

ಸದ್ಯಕ್ಕೆ ಯೂರೋಪಿನಲ್ಲಿ ಶಾಂತಿ ಸ್ಥಾಪನೆಯಾಯಿತು.

ಈ ರೀತಿ ಒಪ್ಪಂದಕ್ಕೆ ಝೆಕೊಸ್ಲೊವಾಕಿಯಾವು ವಿಧಿ ಇಲ್ಲದೆ ಒಪ್ಪಿಕೊಂಡಿರುವದರಿಂದ ಯೂರೋಪಿನಲ್ಲಿ ತತ್ಕಾಲಕ್ಕೆ ಶಾಂತಿ ಸ್ಥಾಪನೆಯಾಯಿತು. ಆದರೆ ಮನೆ ಮುಂದೆ ಬಂದು ನಿಂತಿದ್ದ ಘೋರ ಸಂಗ್ರಾಮವೆಂಬ ಮಹಾಮಾರಿಯನ್ನು ದೂರ ಮಾಡಿದ ಕೀರ್ತಿಯು ಯಾರಿಗೆ ಸಲ್ಲುವುದು? ಬ್ರಿಟಿಷ್ ಮಹಾ ಪ್ರಧಾನರಾದ ಚೇಂಬರ್ಲೇನರಿಗಲ್ಲವೇ? ಮಾರಿಗೆ ಕುರಿಯನ್ನರ್ಪಿಸಿದಂತೆ ಎದುರು ಬಿದ್ದಿದ್ದ ಸಂಗ್ರಾಮ ಗಂಡಾಂತರಕ್ಕೆ ಝೆಕೊಸ್ಲೊವಾಕಿಯಾವನ್ನು ಬಲಿಕೊಟ್ಟು ಆತ್ಮಸಂರಕ್ಷಣೆ ಮಾಡಿದ ಆ ಕೀರ್ತಿ ಚೇಂಬರ್ಲೇನರಿಗೆ ಸಲ್ಲತಕ್ಕದ್ದು. ಹೋಮಕ್ಕೆ ಬಲಿಯನ್ನರ್ಪಿಸುವಾಗ ವಧಿಸಲ್ಪಡುವ ಪ್ರಾಣಿಗಳನ್ನು ಕೇಳುವ ಸಂಪ್ರದಾಯವಿದೆಯೇ? ಹಾಗೆ ಇಲ್ಲವೋ, ಅದೇ ರೀತಿ ಮ್ಯೂನಿಚಿನಲ್ಲಿ ಹೋಮದ ಸಂಭಾರಗಳನ್ನು ಸಿದ್ಧಗೊಳಿಸಿದ ಪುರೋಹಿತರು ಝೆಕೊಸ್ಲೊವಾಕಿಯಾದ ಅಭಿಪ್ರಾಯವನ್ನು ತಮ್ಮ ಸಂಘಟನೆಯಲ್ಲಿ ಕೇಳುವುದು ಅಸಮಂಜಸವಾದದ್ದೇ ಹೌದು. ಹೀಗೆ ಯೂರೋಪಿನ ಇಂದಿನ ಸಮಸ್ಯೆಗೆ ಮೂಲ ಕಾರಣವಾಗಿದ್ದ ಝೆಕೊಸ್ಲೋವಾಕಿಯಾವನ್ನು ಬಲಾತ್ಕಾರದಿಂದ ತಮ್ಮ ಶರತುಗಳಿಗೆ ಒಪ್ಪಿಸಿ ಆತ್ಮರಕ್ಷಣೆ ಮಾಡಿಕೊಂಡ ಪ್ರಬಲ ರಾಷ್ಟ್ರಗಳಿಗೆ ಮಂಗಳವಾಗಲಿ! ಬ್ರಿಟಿಷ್ ಪ್ರಧಾನರಾದ ಮಿ. ಚೇಂಬರ್ಲೇನರು ಇದು ಅಹಿಂಸಾವಾದವೆಂದು ಘೋಷಿಸಬಹುದು. ಅವರಿಗೆ ಇದಕ್ಕೆ ಆ ಹೆಸರು ಸಲ್ಲುವದೇ? ಅನ್ಯಾಯಕ್ಕೆ ಹೆದರಿ ಈ ಅಹಿಂಸಾವಾದವೇ? ಅಲ್ಲ; ಹಿಟ್ಲರನ ಪ್ರತಿಸ್ಪರ್ಧಿಗಳಾಗಿ ರಣಾಂಗಕ್ಕೆ ಇಳಿದರೆ ಹೇಗಾದೀತೋ ಎಂಬ ಭಯದಿಂದ ಈ ವಾದವಲ್ಲವೇ? ಅಂತೂ 'ಬೆಕ್ಕಿಗೆ ಆಟ, ಇಲಿಗೆ ಪ್ರಾಣ ಸಂಕಟ' ಎಂಬ ನಾಣ್ಣುಡಿಯಂತೆ ಈ ರಾಷ್ಟ್ರಗಳ ಬಾಹ್ಯಾಡಂಬರದ ಮಾತುಗಳ ಸುರಿಮಳೆಯು ಮುಗಿಯುವದರೊಳಗಾಗಿ ಝೆಕೊಸ್ಲೊವಾಕಿಯಾವು ನಿರ್ನಾಮವಾಯಿತು. ಯೂರೋಪಿನಲ್ಲಿ ಶಾಂತಿಯಾಯಿತು. ಚೇಂಬರ್ಲೇನರ ಪ್ರಯತ್ನವು ಫಲಕಾರಿಯಾಯಿತು.

ಹಿಟ್ಲರನದು ತಪ್ಪೇನು?

ಹಿಟ್ಲರನು ಮಾಡಿದ್ದು ತಪ್ಪೇ? ಎಂಬ ಪ್ರಶ್ನೆಯೊಂದಿದೆ. ಆದರೆ ಸಮುದ್ರದ ನೀರು ಆವಿಯಾಗಿ ಹೋದರೂ ಪುನಃ ಮಳೆಯಾಗಿ ಜಲಧಿಯನ್ನೆ ಆಶ್ರಯಿಸುವ ರೀತಿ ಒಂದು ಕಾಲಕ್ಕೆ ಅಖಂಡ ರಾಷ್ಟ್ರವೆಂದು ಮೆರೆದ ಜರ್ಮನಿಯು ಕಳೆದ ಘೋರ ಸಂಗ್ರಾಮದ ಪರಿಣಾಮದಿಂದ ಛಿನ್ನಭಿನ್ನವಾಗಿ ಇತರ ರಾಷ್ಟ್ರಗಳಲ್ಲಿ ಮಿಳಿದು ಹಂಚಿಹೋಗಿದ್ದು. ಹೀಗೆ ಕಳೆದ ಘೋರ ಯುದ್ಧದಲ್ಲಿ ಸೋತ ಜರ್ಮನಿಯನ್ನು ಇತರ ರಾಷ್ಟ್ರಗಳು ಸೇರಿ ಅದರ ಕಾಲು ಕೈಗಳನ್ನು ಕತ್ತರಿಸಿ ಪರ ರಾಷ್ಟ್ರಗಳಿಗೆ ಸೇರಿಸಿದವು. ಆದರೆ ಇಂದು ಜರ್ಮನಿಯು ಸ್ವಸಾಹಸದಿಂದ ಕಳೆದು ಹೋದ ತನ್ನ ಅಂಗಾಂಗಗಳನ್ನು ಸೇರಿಸಿಕೊಳ್ಳುತ್ತಿದೆ. ಆಸ್ಟ್ರಿಯವಾಯಿತು! ಝೆಕೊಸ್ಲೊವಾಕಿಯಾದ ಪ್ರಾಂತವೂ ಆಯಿತು!! ಹೀಗೆ ಆ ಕಾಲದಲ್ಲಿ ಚೂರು ಚೂರಾಗಿ ಬಿಸುಡಲ್ಪಟ್ಟ ಪ್ರಾಂತಗಳು ಒಟ್ಟುಗೂಡುವದರಲ್ಲಿ ಆಶ್ಚರ್ಯವೇನು? ಆಶ್ಚರ್ಯವು ಒಂದ! ಈ ಪ್ರಾಂತಗಳು ಜರ್ಮನರದ್ದೇ ಎಂಬ ಸತ್ಯನುಡಿಯನ್ನು ನೆನೆಸಿ ಯಾವ ತೊಂದರೆಯನ್ನೂ ಮಾಡದೆ ಅವನಿಗೆ ಉದಾರ ಹಸ್ತದಿಂದ ಕೊಡುತ್ತಿರುವ ಪ್ರಾಮಾಣಿಕತನಕ್ಕೆ ಆಶ್ಚರ್ಯಪಡಬೇಡವೇ?

ಪ್ರಜಾ ಪ್ರಭುತ್ವವೆಲ್ಲಿ?

ಇಂದು ಜಗತ್ತಿನಲ್ಲಿ ಹೋರಾಟ ನಡೆಯುತ್ತಿರುವದು ಪ್ರಜಾಪ್ರಭುತ್ವಕ್ಕೆ. ಭಾರತದ ಇಂದಿನ ಸಂಗ್ರಾಮವೂ ಅದಕ್ಕಾಗಿಯೇ. ಝೆಕೊಸ್ಲೊವಾಕಿಯಾವು ಪ್ರಜಾಪ್ರಭುತ್ವವೆಂಬ ಭಾಗ್ಯಾಕಾಶದಲ್ಲಿ ವಿರಾಜಿಸುತ್ತಿರುವ ದೇಶ. ಬ್ರಿಟನ್ ರಾಷ್ಟ್ರವಾದರೂ ಪ್ರಜಾಪ್ರಭುತ್ವ ಸರಕಾರವುಳ್ಳದ್ದೇ ಆಗಿದೆ. ಅಲ್ಲದೆ ಪ್ರಜಾ ಪ್ರಭುತ್ವವನ್ನೆ [illegible] ಯೆಂದು ವಾದಿಸುವಂತಾದ್ದೂ ಆಗಿದೆ. ಆದರೆ ಇಂದು ಮಾತ್ರ ಅದು ಸರ್ವಾಧಿಕಾರಿಗಳ ಘರ್ಜನೆಗೆ ತಲೆ ತಗ್ಗಿಸಬೇಕಾಯಿತು. ಇದೇನು ಬ್ರಿಟನರಿಗೆ ಶಕ್ತಿ ಸಾಲದೆಂದೇ? ಪ್ರಜಾ ಪ್ರಭುತ್ವದ ರಕ್ಷಣೆ ಬಗ್ಗೆ ಯುದ್ಧ ಮಾಡುವದಾದರೆ ಅವರ ಸಹಾಯಕ್ಕೆ ಅನೇಕ ರಾಷ್ಟ್ರಗಳಿರುವವು. ಆದರೆ ಇದು ಪರೋಕ್ಷವಾಗಿ ಸರ್ವಾಧಿಕಾರಕ್ಕೆ ಅನುಕೂಲರಿದ್ದೇವೆ ಎಂದು ಒಪ್ಪುವಂತಾಗಿದೆ. ಅಂತು ಝೆಕೊಸ್ಲೊವಾಕಿಯಾದ ಸ್ವಾತಂತ್ರ್ಯ ನಾಶಕ್ಕೆ ಕಾರಣರಾರು? ಬ್ರಿಟನಿನಲ್ಲಿ ಫ್ಯಾಸಿಸಮ್ ಹುಲಿಯು ಪ್ರಜಾಪ್ರಭುತ್ವವೆಂಬ ವಸನದ ತೊಗಲನ್ನು ಹೊದ್ದುಕೊಂಡು ಆಳುತ್ತಿದೆಯೆಂದೂ, ಸಾಮ್ರಾಜ್ಯವಾದಿಗಳಲ್ಲಿ ನ್ಯಾಯ ರೀತಿಗಳನ್ನು ಕಂಡುಕೊಳ್ಳುವದು ಅಸಾಧ್ಯವೆಂದೂ ತಿಳಿದುಬರುತ್ತದೆ.

ಕುಲ್ಲಟ್ಟಿ ಪೊನ್ನಣ್ಣನ ಕಥೆಯಲ್ಲೊಂದು ತಿದ್ದುಪಡಿ.

ಕಳೆದ ತಿಂಗಳು 2 ನೇ ಮತ್ತು 9 ನೇ ತಾರೀಕುಗಳ 'ಕೊಡಗು' ಪತ್ರಿಕೆಗಳಲ್ಲಿ ಪ್ರಕಟವಾದ ಕುಲ್ಲಟ್ಟಿ ಪೊನ್ನಣ್ಣನ ಕಥೆಯ ಕೊನೆ ಭಾಗದಲ್ಲಿ 'ಇವರ ನಂತರ ಕುಲ್ಲಟ್ಟಿ ಪೊನ್ನಣ್ಣನ ಅಣ್ಣ ಮಾಣಿಚ್ಚನು ಪೊನ್ನಣ್ಣನಿಂದ ಕೊಲ್ಲಲ್ಪಟ್ಟ ಮೇದುವಮ್ಮ ಮತ್ತು ಬೊಪ್ಪಂಡ ಉತ್ತಚ್ಚ ಇವರ ಕುಟುಂಬದವರಿಗೂ, ಕೊಂಬಂಡ ಕಾಳೈಯ್ಯನಿಗೂ ತನ್ನ ಭೂಮಿಯಲ್ಲಿ ಸ್ವಲ್ಪ ಭೂಮಿ ಕೊಟ್ಟು ನಿಲ್ಲಿಸಿದನು' ಎಂದು ಬರೆದಿದ್ದೇನೆ. ಆದರೆ ಈಗ ವಿಚಾರಿಸುವಾಗ ಮಾಣಿಚ್ಚನು ಮೇದುವನ್ನು, ಬೊಪ್ಪಂಡ ಉತ್ತಚ್ಚ ಇವರ ಕುಟುಂಬದವರಿಗೂ, ಕೊಂಬಂಡ ಕಾಳೈಯ್ಯ ಇವರಿಗೆ ಭೂಮಿ ಕೊಟ್ಟಿದ್ದಕ್ಕೂ, ಇವರು ಭೂಮಿ ಹೊಂದಿಕೊಂಡದಕ್ಕೂ ಯಾವ ದಾಖಲೆಗಳೂ ಇಲ್ಲವೆಂದೂ, ಮೇದುವಮ್ಮ, ಬೊಪ್ಪಂಡ ಉತ್ತಚ್ಚ ಮತ್ತು ಕೊಂಬಂಡ ಕಾಳೈಯ್ಯ ಇವರು ನೂರಂಬಡ ನಾಡಿನಲ್ಲಿ ಬಹು ಪೂರ್ವದಿಂದಲೇ ಭೂಮಿವಂತರಾಗಿದ್ದರೆಂದೂ, ಅವರು ಆ ಊರಿನವರಾಗಿದ್ದುದರಿಂದಲೇ ವೀರರಾಜನು ಅವರನ್ನು ಪೊನ್ನಣ್ಣನ ಎಚ್ಚರ ನೋಡುವುದಕ್ಕೆ ಕಳುಹಿಸಿದ್ದನೆಂದೂ ತಿಳಿಯುತ್ತೇನೆ. ಆದುದರಿಂದ ನಾನು ಈ ಮೂಲಕ ಮೊದಲು 'ಮಾಣಿಚ್ಚನು ಇವರಿಗೆ ಭೂಮಿಕೊಟ್ಟು ನಿಲ್ಲಿಸಿದನು.' ಎಂದು ಬರೆದದ್ದನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ. ವಾಚಕರು ನಾನು ಬರೆದ ಕಥೆಯಲ್ಲಿ ಆ ವಾಕ್ಯ ಬೃಂದವು ಇಲ್ಲವೆಂದು ಭಾವಿಸಬೇಕು. ಇದಲ್ಲದೆ ಈ ಸಂಬಂಧವಾಗಿ ಮೇದುವನ್ನು, ಬೊಪ್ಪಂಡ ಉತ್ತಚ್ಚ ಮತ್ತು ಕೊಂಬಂಡ ಕಾಳೈಯ್ಯ ಇವರ ಕುಟುಂಬದವರ ಮನಸ್ಸು ನೊಂದಿರುವುದು ಎಂದು ನಾನು ತಿಳಿಯುವುದರಿಂದ ಅವರ ಕ್ಷಮಾಪಣೆಯನ್ನು ಈ ಪತ್ರಿಕೆಯ ಮೂಲಕ ಕೇಳಿಕೊಳ್ಳುತ್ತೇನೆ. ಮೊದಲು ಬರೆದಂಥ ವಾಕ್ಯಗಳು ಮಿ. ಅಚ್ಚಪ್ಪನವರ ಕೈಬರಹದ ಪುಸ್ತಕದಲ್ಲಿದ್ದುದನ್ನು ನಾನು ತಪ್ಪಾಗಿ ಗ್ರಹಿಸಿ ಬರೆದದ್ದಾಗಿದೆ. ಇದರ ಪೂರ್ಣ ಜವಾಬ್ದಾರಿಯು ನನ್ನ ಮೇಲಲ್ಲದೆ ಮಿ. ಕುಲ್ಲಟ್ಟಿರ ಅಚ್ಚಪ್ಪನವರ ಮೇಲಾಗಲೀ, ಅವರ ಕುಟುಂಬದವರ ಮೇಲಾಗಲೀ ಇರುವುದಿಲ್ಲ ಮತ್ತು ಇದನ್ನು ಯಾವ ದುರುದ್ದೇಶದಿಂದ ಬರೆದಿರುವುದೂ ಇಲ್ಲವೆಂದು ಈ ಮೂಲಕ ವ್ಯಕ್ತಪಡಿಸುತ್ತೇನೆ.

ಇದಲ್ಲದೆ ಸೆಪ್ಟಂಬರ್ 28 ನೇ ತಾರೀಕಿನ 'ಜನ್ಮಭೂಮಿ' ಪತ್ರಿಕೆಯಲ್ಲಿ ನೂರಂಬಡ ನಾಡಿನವರು ಬರೆದ ಲೇಖೆಯಲ್ಲಿ ಮೇಲಿನ ವಿಷಯವಲ್ಲದೆ ಇತರ ಸಂಗತಿಗಳಿಗೆ ಇನ್ನೂ ಒಂದೆರಡು ವಾರಗಳಲ್ಲಿ ಸಮಾಧಾನವನ್ನು ಕೊಡುವೆನು.

ಡಿ. ಯಸ್. ಕೃಷ್ಣಯ್ಯ.

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.,
ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೦೧,೭೩೮— ೭—೦
ಏಜಂಟರಿಗೆ ಸಾಲ ಮತ್ತು ಆಸ್ತಿಯ ಒತ್ತೆ	೩೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೩,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೨೮— ೩—೪
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು

೧೯೨೭ ———— ೨೧,೩೫,೨೩೪ ರೂಗಳು.

೧೯೩೭ ———— ೪೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ

ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.
ಆಫಿಸಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12-4

ಕೊಡಗು ವಿದ್ಯಾಭಿವೃದ್ಧಿ ಫಂಡಿನ ಕಮಿಟಿ ಮೀಟಿಂಗ್ ನಡವಳಿಕೆ.

ಕಳೆದ ತಾ. 17 ರಲ್ಲಿ ಈ ಫಂಡಿನ ಅಧ್ಯಕ್ಷರಾದ ರಾ. ಸಾ. ಯಂ. ಯಸ್. ಮಂದಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಅಂದಾಜು ಬಡ್ಜೆಟ್ಟನ್ನು ಅಂಗೀಕರಿಸಲಾಯಿತು.

ವಿದ್ಯಾರ್ಥಿ ವೇತನಕ್ಕೂ, ಸಾಲಕ್ಕೂ ಬಂದ ಅರ್ಜಿಗಳನ್ನು ಈ ರೀತಿ ಮಂಜೂರು ಮಾಡಲಾಯಿತು.

ಶಿವರುದ್ರಯ್ಯನವರ 10 ರೂ. ಗಳ 2 ವಿದ್ಯಾರ್ಥಿ ವೇತನಗಳಲ್ಲಿ ಒಂದನ್ನು ಶ್ರೀ ಚೇಂದಂಡ ಸಿ. ಕರುಂಬಯ್ಯನವರಿಗೆ ಅವರು ತಮ್ಮ ಅಭಿವೃದ್ಧಿಯ ವಿಚಾರ ಕಾಲೇಜಿನ ಮುಖ್ಯೋಪಾಧ್ಯಾಯರಿಂದ ತೃಪ್ತಿಕರವಾದ ರಿಪೋರ್ಟು ಹಾಜರುಪಡಿಸುವ ಭರವಸೆ ಮೇರೆ ಅವರಿಗೆ ಕೊಡುತ್ತಿದ್ದ 10 ರೂ. ಗಳ ವೇತನವನ್ನು 8 ತಿಂಗಳ ವರೆಗೆ ಮುಂದರಿಸಲಾಯಿತು.

ಶ್ರೀ ಕುಪ್ಪಂಡ ಕೆ. ಮಾದಯ್ಯನವರಿಗೆ ಪ್ರಾಂತ ವಿದ್ಯಾರ್ಥಿ ವೇತನ ಸಿಕ್ಕದ [illegible] ಕೊಡುವಂತೆಯೂ, ಸಿಕ್ಕಿದರೆ ಬಾಕಿ ಉಳಿದ ಅರ್ಜಿದಾರರ ಪೈಕಿ ಪೆ. ತೀತಿರ ಗಣಪತಿಯವರು ಅರ್ಹರಾಗಿರುವದರಿಂದ ಅವರಿಗೆ 8 ತಿಂಗಳ ವರೆಗೆ ಕೊಡುವಂತೆಯೂ ಮಂಜೂರಾಯಿತು.

ಈ ಕೆಳಗಿನ ವಿದ್ಯಾರ್ಥಿಗಳಿಗೆ ಸಾಲಗಳು ಮಂಜೂರು ಮಾಡಲಾಯಿತು.

ಶ್ರೀಯುತರುಗಳಾದ (1) ಕೊಡಂದೆರ ಪಿ. ಕಾಳಪ್ಪ ರೂ. 60, (2) ಬಿದ್ದಂಡ ಯಸ್. ಬೋಪಯ್ಯ ರೂ. 60, (3) ಪಟ್ಟಮಾಡ ಡಿ. ಕಾಳಪ್ಪ ರೂ. 60, (4) ಕೋದಂಡಎಂ.ಬೆಳ್ಯಪ್ಪ ರೂ.60, (5)ಚೆಂಬಾಂಡ ಯಂ. ಕಾರ್ಯಪ್ಪ ರೂ. 60, (6) ಕೊರವಂಡ ಯಂ. ಸೋಮಣ್ಣ ರೂ. 60, (7) ಕೊಳ್ಳಿಮಾಡ ಅಚ್ಚಯ್ಯ ರೂ, 60, (8) ಕುಂಬೆರ ಕೆ. ಪೂವಯ್ಯ ರೂ. 40, (9) ಕೂತಂಡ ಜೆ. ಮಾಚಯ್ಯ ರೂ. 40, (10) ಅಮ್ಮಣಿಚಂಡ ಕೆ. ದೇವಯ್ಯ ರೂ. 40, (11) ಉದಿಯಂಡ ಎ. ದೇವಯ್ಯ ರೂ. 40, (12) ಕೇಳಪಂಡ ಬಿ. ಮುದ್ದಪ್ಪ ರೂ. 40, (13) ಕೋಡಿಮಣಿಯಂಡ ಬಿ. ಚಂಗಪ್ಪ ರೂ. 40, (14) ಕೊಕ್ಕಲೆರ ಟಿ. ಅಚ್ಚಯ್ಯ ರೂ. 40, (15) ಅಲ್ಲಪಂಡ ಸಿ. ಕಾರ್ಯಪ್ಪ ರೂ. 40, (16) ಐಚೆಟ್ಟಿರ ಎ. ಐಯ್ಯಮ್ಮ ರೂ. 50 ಮತ್ತು (17) ಮುಂಡಾಂದಿರ ಎ. ಸೋಮಣ್ಣ ರೂ. 40.

(18) ಶ್ರೀ ಕೋಡಿಮಣಿಯಂಡ ಕೆ. ಕಾರ್ಯಪ್ಪನವರು 1938 ನೇ ಅಕ್ಟೋಬರಿನಲ್ಲಿ ಜರಗುವ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರೆ ಅವರಿಗೆ ರೂ. 60 ಸಾಲ ಕೊಡಬಹುದೆಂದು ಮಂಜೂರಾಯಿತು.

(19) ಪ್ರಾಂತೀಕ ವಿದ್ಯಾರ್ಥಿ ವೇತನ ಸಿಕ್ಕದ ಪಕ್ಷ ಶ್ರೀ ಕೀತಿಯಂಡ ಸಿ. ಗಣಪತಿಯವರಿಗೆ ರೂ. 60 ಸಾಲಕೊಡಬಹುದೆಂದು ಮಂಜೂರಾಯಿತು.

(20) ಶ್ರೀ ಅಜ್ಜಮಾಡ ಬಿ. ಬೆಳ್ಯಪ್ಪನವರು ಕಾಲೇಜಿನ ಮುಖ್ಯೋಪಾಧ್ಯಾಯರಿಂದ ಅಭಿವೃದ್ಧಿ ಸೂಚಕ ರಿಪೋರ್ಟನ್ನು ಹಾಜರ್‌ಪಡಿಸಿದರೆ ಅವರಿಗೆ ರೂ. 60 ಸಾಲ ಕೊಡಲು ಮಂಜೂರಾಯಿತು.

(21) ಶಿವರುದ್ರಯ್ಯನವರ ವಿದ್ಯಾರ್ಥಿ ವೇತನವು ಶ್ರೀ ತೀತಿರ ಗಣಪತಿಯವರಿಗೆ ಸಿಕ್ಕದ ಪಕ್ಷ ಅವರಿಗೆ ರೂ. 40 ಸಾಲ ಕೊಡುವಂತೆ ಮಂಜೂರುಮಾಡಲಾಯಿತು.

ಬಾಕಿ ಉಳಿದ 11 ಅರ್ಜಿಗಳನ್ನು ಕೆಲವರು ಬೇರೆ ವಿದ್ಯಾರ್ಥಿ ವೇತನ ಪಡೆಯುವವರಾದ್ದರಿಂದಲೂ, ಬಾಕಿಯವರು ಸಮಂಜಸವಾಗಿ ಕರತುಗಳನ್ನು ಕೊಡದ್ದರಿಂದಲೂ ತಿರಸ್ಕರಿಸಲಾಗಿದೆ.

ಸಾಲ ಕೊಟ್ಟವರಲ್ಲಿ ಹಣ ಬಾರದೆ ನಿಂತಿರುವ ಬಾಕಿದಾರರ ಮೇಲೆ ವಸೂಲಾತಿ ಬಗ್ಗೆ ಕ್ರಮ ಜರುಗಿಸಲು ತೀರ್ಮಾನವಾಯಿತು.

ಸಿ. ಕೆ. ಗಣಪತಿ,
(ಗೌರವ ಕಾರ್ಯದರ್ಶಿ.)

ಡಾ. ಮೇತ್ಯೂಸ್ ಎಬ್ರಹಾಮ್.
ದಂತ ವೈದ್ಯರು.
(ಪೀಯರ್ಸ್‌ಲೆಸ್ಲಿ ಬಂಗ್ಲೆ)
(ಸ್ಪೆನ್ಸರ್ಸ್ ಹತ್ತಿರ)
ಮಡಿಕೇರಿ.

ಕೊಡಗು

ಅಕ್ಟೋಬರ್ ತಾರೀಕು ೬ನೇ ಶುಕ್ರವಾರ ೧೯೩೮.

ಯೂರೋಪಿನಲ್ಲಿ ಶಾಂತಿ.

ಯೂರೋಪಿನಲ್ಲಿ ಇಂದೋ, ನಾಳೆಯೋ ಯುದ್ಧವು ಪ್ರಾರಂಭವಾಗುವ ಪರಿಸ್ಥಿತಿಯುಂಟಾಗಿತ್ತೆಂದು ಕಳೆದ ವಾರ ಬರೆಯಲಾಗಿತ್ತು. ಎಲ್ಲವೂ ಯುದ್ಧಕ್ಕೆ ತಯಾರಾಗಿತ್ತು. ಆದರೆ ಬ್ರಿಟನಿನ ಪ್ರಧಾನ ಮಂತ್ರಿಯವರು ಪುನಹ ಒಮ್ಮೆ ಪದ್ಧತಿಯನ್ನೂ, ಸ್ವಾಭಿಮಾನವನ್ನೂ ಮರೆತು ಇಟಲಿಯ ಸರ್ವಾಧಿಕಾರಿಯಾದ ಮುಸಲೋನಿಯವರ ಮೂಲಕ ರಾಜಿಗೆ ಪ್ರಯತ್ನಿಸಿದರು. ಇಷ್ಟರ ವರೆಗೆ ವಿರೋಧ ಪಕ್ಷದಲ್ಲಿ ನಿಂತಿದ್ದ ಬ್ರಿಟನ್ನಿನ ಬೇಡಿಕೆಯನ್ನು ಇಟಲಿಯ ಸರ್ವಾಧಿಕಾರಿಯು ಮನ್ನಿಸಿ, ಮ್ಯೂನಿಚ್ ಪಟ್ಟಣದಲ್ಲಿ ಜರ್ಮನಿ, ಫ್ರಾನ್ಸ್ ಇಟಲಿ ಮತ್ತು ಬ್ರಿಟಿಷ್ ರಾಜ್ಯಗಳ ಪ್ರತಿನಿಧಿಗಳ ಕೂಟವನ್ನು ಏರ್ಪಡಿಸಿ ತತ್ಕಾಲ ಯುದ್ಧವನ್ನು ನಿಲ್ಲಿಸಿದರು. ಇದನ್ನು 'ಗೌರವಯುಕ್ತವಾದ ಶಾಂತಿ'ಯೆಂದು ಬ್ರಿಟನಿನ ಪ್ರಧಾನರು ಹೇಳಿರುವರು. ಆದರೆ ಇದರಲ್ಲಿ ಗೌರವವೂ ಇಲ್ಲ ಮತ್ತು ನ್ಯಾಯಯುತವಾದ ಶಾಂತಿಯೂ ಇಲ್ಲವೆಂದೇ ಹೇಳಬೇಕಾಗಿದೆ. ಯಾಕೆಂದರೆ, ಮ್ಯೂನಿಚ್ ಒಪ್ಪಂದದಲ್ಲಿ ಜರ್ಮನಿಯ ಹಿಟ್ಲರನು ಮೊದಲು ಕೇಳಿದ ಶರತ್ತುಗಳಿಗೆಲ್ಲಾ ಬ್ರಿಟನೂ, ಫ್ರಾನ್ಸೂ ಸಮ್ಮತಿಸಿವೆ. ಅಲ್ಲದೆ ಈ ವಿವಾದಕ್ಕೆ ಇನ್ನೊಂದು ಭಾಗದವರಾದ ಜೆಕೊಸ್ಲೊವಾಕಿಯಾದವರನ್ನು ಈ ಒಪ್ಪಂದಕ್ಕೆ ಸೇರಿಸಿಕೊಳ್ಳಲೇ ಇಲ್ಲ. ಈ ಚಿಕ್ಕ ರಾಜ್ಯವು-ಬ್ರಿಟನೂ ಮತ್ತು ಫ್ರಾನ್ಸೂ ತಮಗಿದ್ದ ಒಪ್ಪಂದದ ಮೇರೆ ತನಗೆ ಸಹಾಯ ಮಾಡುವವೆಂದು ಸಂಪೂರ್ಣ ನಂಬಿತ್ತು. ಆದರೆ ಇವೆರಡು ಪ್ರಜಾಸತ್ತಾತ್ಮಕ ಸರ್ಕಾರಗಳು ತಮ್ಮ ಈ ಮೊದಲಿನ ಒಪ್ಪಂದವನ್ನು ಮೂಲೆಗೊತ್ತಿ, ಜೆಕೊಸ್ಲೊವಾಕಿಯಾದ ಸ್ವಾತಂತ್ರ್ಯವನ್ನು ಜರ್ಮನಿಯ ಸರ್ವಾಧಿಕಾರಿಯ ಹಿಂಸಾತ್ಮಕ ಬೆದರಿಕೆಗೆ ಬಲಿಕೊಟ್ಟು ಯೂರೋಪಿನಲ್ಲಿ ತಾತ್ಕಾಲಿಕ ಯುದ್ಧ ನಿವಾರಣೆ ಮಾಡಿದ್ದೆಂದಿಗೂ ಗೌರವಯುಕ್ತವಾದುದಲ್ಲ. ಇದನ್ನು ಹೇಡಿತನದ ಮತ್ತು ನಾಚಿಕೆಗೇಡಿನ ಶಾಂತಿಯೆಂದೇ ಎನ್ನಬೇಕಾಗಿದೆ. ಜರ್ಮನಿಯ ಶಕ್ತಿಗೆ ಹೆದರಿಯೋ ಅಥವಾ ಯುದ್ಧದಿಂದ ಉಂಟಾಗಬಹುದಾದ ಅನರ್ಥಗಳಿಗೆ ಭಯಪಟ್ಟೋ ಬ್ರಿಟನು ಹೇಗಾದರೂ ಮಾಡಿ ಯುದ್ಧವನ್ನು ನಿವಾರಿಸಲು ನಿಶ್ಚಯಿಸಿತು. ಅದಕ್ಕಾಗಿ ಪ್ರಜಾಸತ್ತಾತ್ಮಕ ಸರ್ಕಾರ ಪದ್ಧತಿಯ ಮುಂದಾಳಾಗಿರುವ ಬ್ರಿಟನು ಪ್ರಜಾಪ್ರತಿನಿಧಿತ್ವವನ್ನು ಹೀಯಾಳಿಸುತ್ತಿರುವ ಸರ್ವಾಧಿಕಾರಿಗಳಾದ ಹಿಟ್ಲರ್ ಮತ್ತು ಮುಸಲೋನಿಯವರನ್ನು ಅಂಗಲಾಚಿ ಬೇಡಿಕೊಂಡಿತು. ಪ್ರಜಾಸತ್ತಾತ್ಮಕ ಸರ್ಕಾರಗಳ ಬಲಹೀನತೆಯನ್ನು ನೋಡಿ ಜರ್ಮನಿಯ ಸರ್ವಾಧಿಕಾರಿಯು ತನ್ನ ಉದ್ದೇಶವನ್ನು ಏನೊಂದೂ ಶ್ರಮವಿಲ್ಲದೆ ಸಾಧಿಸಿಕೊಂಡನು; ತನ್ನ ದರ್ಪವನ್ನೂ, ಶಕ್ತಿಯನ್ನೂ ಹೆಚ್ಚಿಸಿಕೊಂಡನು. ಜೆಕೊಸ್ಲೊವಾಕಿಯಾವನ್ನು ಮ್ಯೂನಿಚ್ ಒಪ್ಪಂದಕ್ಕೆ ಸೇರಿಸಿಕೊಳ್ಳದಿದ್ದರೂ, ಬ್ರಿಟನು ಮತ್ತು ಫ್ರಾನ್ಸು ತನ್ನ ಕೈಬಿಟ್ಟ ಕಾರಣ ಅದು ಇವರು ಮಾಡಿದ ತೀರ್ಪಿಗೆ ತಲೆ ಬಗ್ಗಿಸಬೇಕಾಯಿತು. ಯೂರೋಪಿನ ಶಾಂತಿಗೂ, ಪ್ರಜಾಸತ್ತಾತ್ಮಕ ಸರ್ಕಾರ ಪದ್ಧತಿಯ ಪ್ರತಿಷ್ಠೆಗೂ ಬ್ರಿಟನು ಮತ್ತು ಫ್ರಾನ್ಸಿನಷ್ಟೇ ಪ್ರಾಮುಖ್ಯವಾದ ರಷ್ಯ ಜನಾಂಗವನ್ನು ಈ ಒಪ್ಪಂದಕ್ಕೆ ಸೇರಿಸದೆ ಇದ್ದದ್ದು ದೊಡ್ಡ ಅನ್ಯಾಯವಾಗಿದೆ. ಇದರಲ್ಲಿಯೂ ಸರ್ವಾಧಿಕಾರಿಗಳು ತಮ್ಮ ಇಚ್ಛೆಯನ್ನು ನೆರವೇರಿಸಿಕೊಂಡಿರುವರು.

ತತ್ಕಾಲ ಯುದ್ಧವು ನಿವಾರಿಸಲ್ಪಟ್ಟಿತೆಂಬುದು ಎಲ್ಲಾ ಜನಾಂಗಗಳಿಗೂ ಸಮಾಧಾನವನ್ನುಂಟುಮಾಡಿರಬಹುದು. ಆದರೆ ಈ ಶಾಂತಿಯು ದೀರ್ಘಕಾಲ ನಿಲ್ಲುವುದೋ ಎಂಬ ಸಂಶಯವು ಹಲವರನ್ನು ಬಾಧಿಸದೆ ಇರದು. ಹಿಟ್ಲರನು ಈಗ ಹೇಳುವಂತೆಯೇ ಈ ಮೊದಲು ರೈನ್‌ಲ್ಯಾಂಡನ್ನೂ, ನಂತರ ಆಸ್ಟ್ರಿಯಾವನ್ನೂ ಸ್ವಾಧೀನಪಡಿಸಿಕೊಂಡಾಗ ಇನ್ನು ಮುಂದೆ ತಾನು ಹೆಚ್ಚಿನ ದೇಶವನ್ನು ಆಕ್ರಮಿಸಲು ಇಚ್ಛಿಸುವುದಿಲ್ಲವೆಂದು ಹೇಳಿದ್ದನು. ಆದರೆ ಆ ಮಾತನ್ನು ಮುರಿದು ಇಂದು ಹೇಗೆ ಸುಡೆಟನ್ ಪ್ರದೇಶವನ್ನು ಆಕ್ರಮಿಸಲು ಮುಂದುವರಿದನೋ, ಹಾಗೆಯೇ ಇನ್ನು ಮುಂದಕ್ಕೂ ಮಾಡುವನೆಂಬುವುದರಲ್ಲಿ ಸಂಶಯವಿಲ್ಲ. ದಿನೇ ದಿನೇ ಅವನ ಶಕ್ತಿಯು ಹೆಚ್ಚುತ್ತಿದೆ. ಇನ್ನು ಮುಂದಕ್ಕೂ ಹೀಗೆಯೇ ಅವನು ಹೇಡಿಗಳೆಂದು ಭಾವಿಸಿರುವ ಯೂರೋಪಿನ ರಾಷ್ಟ್ರಗಳನ್ನು ತನ್ನ ಶಕ್ತಿ ಪ್ರದರ್ಶನದಿಂದ ಬೆದರಿಸಿ ತನ್ನ ಸಾಮ್ರಾಜ್ಯ ಲಾಲಸೆಯನ್ನು ಸಾಧಿಸಿಕೊಳ್ಳುವನು. ಯೂರೋಪಿನ ಹೊರಗೂ ಜರ್ಮನಿಗೆ ಮೊದಲಿದ್ದ ವಸಾಹತುಗಳನ್ನೂ ಮರಳಿ ಪಡೆಯದೆ ಇರನು. ಮಾತ್ರವಲ್ಲ ಪ್ರಜಾಸತ್ತಾತ್ಮಕ ರಾಜ್ಯಗಳನ್ನು ಮಟ್ಟಹಾಕಲು ಯತ್ನಿಸದೆ ಇರನು. ಇದನ್ನು ತಡೆಯಬೇಕಾದರೆ ಇಂದಲ್ಲದಿದ್ದರೂ, ಕೆಲ ಕಾಲದ ನಂತರವಾದರೂ ಹಿಟ್ಲರನ ಶಕ್ತಿಯನ್ನೂ ಸರ್ವಾಧಿಕಾರಿತನವನ್ನೂ ಮುರಿಯಲು ಯುದ್ಧವನ್ನು ಮಾಡಲೇಬೇಕಾಗುತ್ತದೆ. ಅಲ್ಲದೆ ಕೋಟಿಗಟ್ಟಲೆ ದ್ರವ್ಯ ಖರ್ಚು ಮಾಡಿ ಸಾಕಲ್ಪಡುತ್ತಿರುವ ದೊಡ್ಡ ವಿಮಾನ, ಸೈನ್ಯ ಮತ್ತು ನೌಕಾ ಪಡೆಗಳು ರಣರಂಗದಲ್ಲಿ ರಕ್ತ ಚೆಲ್ಲಾಟ ಮಾಡದೆ ತೃಪ್ತಿಗೊಳ್ಳಲಾರವು. ಒಂದು ವೇಳೆ ಅವರನ್ನೆಲ್ಲಾ ಬಿಡುಗಡೆ ಮಾಡುವದೆಂದರೆ ನಿರುದ್ಯೋಗತನದಿಂದ ದೇಶದಲ್ಲಿ ಅಸಮಾಧಾನ ಯಕತ್ವವು ಮಿತಿಮೀರುವುದೆಂಬುದರಲ್ಲಿ ಸಂಶಯವಿಲ್ಲ.

ಮ್ಯೂನಿಚ್ ಒಪ್ಪಂದದಿಂದ ಯೂರೋಪಿನ ಹಾಗೂ ಪ್ರಪಂಚದ ಶಾಂತಿಯನ್ನು ಕಾಪಾಡುವ ಅಧಿಕಾರವು ಜನಾಂಗಗಳ ಕೂಟಕ್ಕಲ್ಲ, ಯೂರೋಪಿನ ಬರೇ ನಾಲ್ಕು ರಾಷ್ಟ್ರಗಳಿಗೆ ಇದೆ ಎಂದಂತಾಯಿತು. ಈ ನಾಲ್ಕು ಜನಾಂಗಗಳು ಜೊತೆಸೇರಿ ಏನೂ ಮಾಡಿಕೊಳ್ಳಬಹುದೆಂದಾದರೆ ಚಿಕ್ಕ ಚಿಕ್ಕ ರಾಷ್ಟ್ರಗಳ ಸ್ವಾತಂತ್ರ್ಯವೇನಾಗಬೇಕು? ಅಂತರರಾಷ್ಟ್ರೀಯ ಒಪ್ಪಂದಗಳೇನಾಗಬೇಕು? ಇದರಿಂದ ಯೂರೋಪಿನಲ್ಲಿ ಚಿರಕಾಲ ಶಾಂತಿಸ್ಥಾಪನೆಯಾಗುವದಾದರೂ ಹೇಗೆ? ಈ ಒಪ್ಪಂದದಿಂದ 'ಬಲಾಢ್ಯನದೇ ನ್ಯಾಯ'ವೆಂಬಂತಾಗಿದೆ. ಇದರಿಂದ ಯೂರೋಪಿನ ಹಾಗೂ ಪ್ರಪಂಚದ ನಾಗರೀಕತೆಗೂ, ಶಾಂತಿಗೂ ದೊಡ್ಡ ಅಪಾಯ ಸಂಭವಿಸದೆ ಇರದು.

ಗಾಂಧಿ-ಜನ್ಮೋತ್ಸವದ ವಿನೋದ.

ಲಂಡನಿನಲ್ಲಿ ಈ ವರ್ಷ ಮಹಾತ್ಮ ಗಾಂಧಿಯವರ ಜನ್ಮದಿನೋತ್ಸವವು ಹಿಂದಿನ ವರ್ಷಗಳಿಂದ ಹೆಚ್ಚಾದ ಉತ್ಸಾಹದಿಂದ ಆಚರಿಸಲ್ಪಟ್ಟಿತು. ಈ ಸಂಬಂಧ ಇಂಡಿಯನ್ ವಿದ್ಯಾರ್ಥಿಗಳ ಹಾಸ್ಟೆಲಿನಲ್ಲಿ ನಡೆದ ಮೀಟಿಂಗಿನಲ್ಲಿ ಡಾ. ಎಡ್ವರ್ಡ್ ತಾಮ್ಸನರವರು ಮಹಾತ್ಮರ ತತ್ವವನ್ನು 'ಯಾವುದಕ್ಕೂ ವಿರೋಧಿಸದೆ ಇರುವ' ತತ್ವವೆಂದು ತಪ್ಪಾಗಿ ವಿವರಿಸಿದ್ದನ್ನು ಕೇಳಿ ಪಂಡಿತ ಜವಾಹಿರ್‌ಲಾಲ್ ನೆಹರೂರವರು ಹೀಗೆಂದರು:—

'ಗಾಂಧಿಯವರು ಕಾಂಗ್ರೆಸ್ಸನ್ನು ಬಿಟ್ಟಿದ್ದರೂ ಅವರು ಕಾಂಗ್ರೆಸಿಗಿಂತ ದೊಡ್ಡವರು. ಸ್ವಾತಂತ್ರ್ಯಕ್ಕಾಗಿ ಅವರು ಮಾಡಿದ ಪ್ರಯತ್ನವು ಯಾವ ಸಂಸ್ಥೆಯದಕ್ಕಿಂತಲೂ ಹೆಚ್ಚಿನದು, ಅವರು ತಮ್ಮ ಬುದ್ಧಿವಾದವನ್ನು ಇನ್ನೂ ಕೊಡುತ್ತಲಿರುವರು. ಈ ಕೆಲವು ದಿವಸಗಳಲ್ಲಿ ಯೂರೋಪಿನಲ್ಲಿ 'ಅಂಧ ತತ್ವವು' ಜಾರಿಯಲ್ಲಿತ್ತು. ಹಿಂಸಾತತ್ವದ ಮಹಾ ಜಯವಾಗಿದೆ. ಮಹಾತ್ಮರ ಜೀವನದ ಉದ್ದೇಶವೇ ಇದಕ್ಕೆ ಪೂರ್ತಿ ವಿರೋಧ. ಗಾಂಧಿಯವರು ಯಾವಾಗಲೂ ಕೆಡುಕು ಮತ್ತು ಅನ್ಯಾಯದ ಕಡು ವಿರೋಧಿಗಳು. ಬ್ರಿಟನ್ ಮತ್ತು ಫ್ರಾನ್ಸು ಸರ್ವಾಧಿಕಾರಿಗಳಿಗೆ ಶಿಲೆ ಬಾಗಿದಂತೆ ಇಂಡಿಯಾದ ರಾಷ್ಟ್ರೀಯ ಚಳವಳವು ಎಂದೂ ಮಾಡಲಾರದು. ಯೂರೋಪಿನಲ್ಲಿ ಇಂದು ಪಶುಬಲದ ಕಾಡಿನ ಖಾನೂನು ಮಾತ್ರ ಜಾರಿಯಲ್ಲಿದೆ. ಆದರೆ ಇಂಡಿಯಾದಲ್ಲಿ ಮಹಾತ್ಮರು ಸಂಪೂರ್ಣ ಬೇರೆ ತತ್ವವನ್ನು ಹರಡಿರುವರು. ಅವರು 'ಯಾವುದಕ್ಕೂ ವಿರೋಧಿಸದೆ ಇರುವವರು' ಅಲ್ಲ. ಅವರು ಸುಮ್ಮನೆ ಕುಳಿತುಕೊಂಡು ಕೇಡನ್ನು ಸಹಿಸುವವರಲ್ಲ; ಕೇಡನ್ನು ಯಾವಾಗಲೂ ಬಲವಾಗಿ-ಶಾಂತಿಯುಕ್ತವೂ, ಅಹಿಂಸಾಮಯವೂ ಆದ ರೀತಿಯಲ್ಲಿ—ವಿರೋಧಿಸುವವರು. ಮಹಾತ್ಮರ ತತ್ವ ವಿಚಾರಗಳು ಪ್ರಪಂಚದ ಇತರ ದೇಶಗಳಲ್ಲಿ ಎಷ್ಟರ ಮಟ್ಟಿಗೆ ಹರಡಿದೆಯೆಂದು ತಾನು ಹೇಳಲಾರದಿದ್ದರೂ ನೈತಿಕ ಬಲಕ್ಕೆ ಬೆಲೆ ಕೊಡಬೇಕೆಂಬ ವಿಚಾರ ಹರಡುತ್ತಿದೆ.'

ಅಧ್ಯಕ್ಷರಾಗಿದ್ದ ಡಾ. ಭಂಡಾರಿಯವರು—'ಮಹಾತ್ಮರ ಅಹಿಂಸಾ ತತ್ವವು ಮಾನವ ವರ್ಗದ ಅಭಿವೃದ್ಧಿಗೆ ಹಲವು ಶತಮಾನಗಳಿಂದ ಮಾಡಿದ ಪ್ರಯತ್ನಗಳಿಗಿಂತೆಲ್ಲಾ ದೊಡ್ಡದು' ಎಂದು ವಿವರಿಸಿದರು.

ಫೆಡರೇಶನ್.

1935 ನೇ ಆಕ್ಟಿನ ಫೆಡರೇಶನಿಗೆ ಕಾಂಗ್ರೆಸು ಸಂಸ್ಥೆಯು ತನ್ನ ವಿರೋಧವನ್ನು ಸ್ವಲ್ಪವೂ ಕಡಿಮೆ ಮಾಡಿರುವುದಿಲ್ಲ. ಕಾಂಗ್ರೆಸು ಅಧಿಕಾರಕ್ಕೆ ಬಂದಿರುವ ಪ್ರಾಂತ್ಯಗಳೆಲ್ಲವೂ ಈ ಫೆಡರಲ್ ರಚನೆಗೆ ವಿರೋಧವಾಗಿ ಠರಾವುಗಳನ್ನು ಪಾಸುಮಾಡಿವೆ. ಮೊನ್ನೆ ಡೆಲ್ಲಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸು ಕಮಿಟಿಯವರೂ ಫೆಡರೇಶನಿನ ಕಡೆ ತಮ್ಮ ವಿರೋಧ ಅಭಿಪ್ರಾಯವನ್ನು ಸ್ವಲ್ಪವೂ ಬದಲಾಯಿಸಿರುವುದಿಲ್ಲ. ಮಾತ್ರವಲ್ಲ, ಈಗಿನ ಮಧ್ಯವರ್ತಿ ಎಸೆಂಬ್ಲಿಯ ಅವಧಿಯನ್ನು ಅನಾವಶ್ಯವಾಗಿ ಮುಂದರಿಸಬಾರದೆಂದು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಟ್ಟಿದೆ. ಆದ ಕಾರಣ ಫೆಡರಲ್ ರಚನೆಯನ್ನು ಆಗುವಷ್ಟು ಬೇಗನೆ ಜಾರಿಗೆ ತರುವ ಪ್ರಯತ್ನಗಳು ನಡೆಯದೆ ಇರವು.

ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೌರವರು ಇಂಗ್ಲೆಂಡಿನಿಂದ ಈ ತಾರೀಕು 24 ರಲ್ಲಿ ಇಂಡಿಯಾಕ್ಕೆ ವಾಪಸು ಬರಲಿರುವರು. ಆಗ್ಯೆ ಸಂಸ್ಥಾನಾಧಿಪತಿಗಳನ್ನು ಫೆಡರೇಶನಿಗೆ ಸೇರಿಸಲು ಹೊಸ ಶರತ್ತುಗಳನ್ನು ತರಲಿಕ್ಕಿರುವರೆಂದೂ, ರಾಜರುಗಳು ತಮ್ಮ ಅಭಿಪ್ರಾಯವನ್ನು ಬರುವ ಮಾರ್ಚಿನೊಳಗೆ ನಿಶ್ಚಿತವಾಗಿ ತಿಳಿಸಬೇಕೆಂದು ಅವರನ್ನು ಕೇಳಿಕೊಳ್ಳಲಾಗುವುದೆಂದೂ ವರ್ತಮಾನ. ಹೆಚ್ಚಿನ ರಾಜರುಗಳು ಫೆಡರೇಶನಿಗೆ ಸೇರುವರೆಂದೂ ಊಹಿಸಲಾಗಿದೆ. ಕಾಂಗ್ರೆಸಿನವರ ಮಟ್ಟಿಗೆ ವೈಸರಾಯರು ಕೆಲವು ಬದಲಾವಣೆಗಳನ್ನು ಸೂಚಿಸಲಿರುವರೆಂದೂ ಸುದ್ದಿ ಇದೆ. ಹೀಗೂ 1939 ನೇ ಅಕ್ಟೋಬರಿನಲ್ಲಿ ಇಂಡಿಯಾ ಎಸೆಂಬ್ಲಿಯ ಅವಧಿಯು ಮುಗಿದ ಕೂಡಲೆ ಫೆಡರಲ್ ಎಸೆಂಬ್ಲಿಯ ಚುನಾವಣೆ ನಡೆಸಿ, 1940 ನೇ ಇಸವಿಯ ಪ್ರಾರಂಭದಲ್ಲಿ ಫೆಡರೇಶನನ್ನು ಜಾರಿಗೆ ತರುವ ನಿಶ್ಚಿತ ಅಭಿಪ್ರಾಯದಿಂದ ಲಾರ್ಡ್ ಲಿನ್‌ಲಿತ್‌ಗೌರವರು ಮರಳಿ ಬರುವರೆಂದು ತಿಳಿಯಬರುತ್ತದೆ. ಮುಂದೆ ಏನಾಗುವದೆಂದು ನೋಡಬೇಕಷ್ಟೆ.

ಆಂಗ್ಲೋ-ಫ್ರೆಂಚ ಒತ್ತಾಯದಿಂದ ಪ್ರೇಗ್ ಸರಕಾರವು ಅವಮಾನದ ಕರಾರುಗಳಿಗೆ ಒಪ್ಪಿಕೊಡಬೇಕಾಯಿತಾದುದರಿಂದ, ಬ್ರಿಟಿಷ ಲೇಬರ ಚಳವಳದ ಕಾರ್ಯಕಾರೀ ಪ್ರತಿನಿಧಿಗಳು ಆಂಗ್ಲ-ಫ್ರೆಂಚ ಮುತ್ಸದ್ದಿಗಳ ಲಜ್ಜಾಸ್ಪದ ಧೋರಣೆಯನ್ನು ಖಂಡಿಸಿ, ಘೋಷಣ ಪತ್ರಿಕೆಯನ್ನು ಹೊರಡಿಸಿರುತ್ತಾರೆ.

ಗಾಂಧೀ ಜಯಂತಿ.

ಮಡಿಕೇರಿ.

ಮಡಿಕೇರಿ ತಾಲೋಕು ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಈ ತಾ. 1 ನೇ ಶನಿವಾರ ಗಾಂಧಿ ಜಯಂತಿಯು ಮು. ನಿಡ್ಯಮಲೆ ಸೋಮಣ್ಣನವರ ಅಧ್ಯಕ್ಷತೆಯಲ್ಲಿ ಕೊಡಗು ಜಮೀನ್ದಾರರ ಸಂಘದ ಹಾಲ್‍ನಲ್ಲಿ ನಡೆಯಿತು. ಶ್ರೀ. ಗಳಾದ ಕೆ. ಕಾಳಯ್ಯ, ಬಿ ಡಿ ಗಣಪತಿ, ಪಿ ಜಿ ಐಯ್ಯಪ್ಪ, ಸಿ. ಐ. ಬೆಳ್ಯಪ್ಪ, ಬಿ. ಕೆ. ಎನ್. ಈಶ್ವರ ಇವರು ಮಾತಾಡಿದರು. ನಂತರ ಈ ಕೆಳಗಿನ ಠರಾವು ಸರ್ವಾನುಮತದಿಂದ ಮಂಜೂರಾಯಿತು.

'ಒಂದೂ ದೇಶದ ಸ್ವರಾಜ್ಯ ಹೋರಾಟದ ಈ ಬಿಕ್ಕಟ್ಟಿನ ಸಮಯದಲ್ಲಿಯೂ ಮತ್ತು ಪ್ರಪಂಚದ ಶಾಂತಿಗೆ ಭಂಗ ಉಂಟಾಗಬಹುದಾದ ಈಗಿನ ವಿಷಮಾವಸ್ಥೆಯಲ್ಲಿಯೂ ಲೋಕ ಪೂಜ್ಯರೂ, ಅಹಿಂಸಾತತ್ವಪ್ರತಿಪಾದಿಗಳೂ ಆಗಿರುವ ಮಹಾತ್ಮ ಗಾಂಧಿಯವರ ಸಲಹೆಗಳೂ, ಸಹಾಯವೂ ಅತ್ಯಗತ್ಯವಾಗಿವೆ. ಆದುದರಿಂದ ಪೂಜ್ಯ ಮಹಾತ್ಮರಿಗೆ ಚಿರಕಾಲ ಆಯುರಾರೋಗ್ಯವನ್ನು ದಯಪಾಲಿಸಲೆಂದು ಈ ಸಭೆಯು ಭಗವಂತನನ್ನು ಪ್ರಾರ್ಥಿಸುತ್ತದೆ.'

ಅಧ್ಯಕ್ಷರ ಭಾಷಣದ ನಂತರ ಅಧ್ಯಕ್ಷರಿಗೂ, ನೆರೆದ ಮಹನೀಯರಿಗೂ ಧನ್ಯವಾದಗಳನ್ನರ್ಪಿಸಿ ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು.

ಸುಂಟಿಕೊಪ್ಪ.

ತಾರೀಕು 2 ನೇ ಆದಿತ್ಯವಾರ ಸುಂಟಿಕೊಪ್ಪದಲ್ಲಿಯೂ ಗಾಂಧಿ ಜಯಂತ್ಯೋತ್ಸವವು ಶ್ರೀ ದಾಸಂಡ ಮಾದಪ್ಪನವರ ಮಹಡಿಯಲ್ಲಿ ಶ್ರೀಮಾನ್ ಕುಟ್ಟಂಡ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಶ್ರೀ. ಗಳಾದ ಸಿ. ಯಂ. ಪೂಣಚ್ಚ, ಡಾ. ನಂಜುಂಡೇಶ್ವರ, ಕೋರನ ದೇವಯ್ಯನವರು ಮತ್ತು ಶ್ರೀಮತಿ ಬಿ ಟಿ. ಜಿ. ಕೃಷ್ಣಾ ಇವರು ಭಾಷಣ ಮಾಡಿದರು. ಮೇಲ್ಕಂಡ ಠರಾವೇ ಇಲ್ಲಿಯೂ ಸರ್ವಸಮ್ಮತದಿಂದ ಅಂಗೀಕರಿಸಲ್ಪಟ್ಟಿತು. ಅಧ್ಯಕ್ಷರು ಭಾಷಣ ಮಾಡಿದ ನಂತರ ಅಧ್ಯಕ್ಷರಿಗೂ, ಸ್ಥಳಕೊಟ್ಟ ಮಹನೀಯರಿಗೂ ಮತ್ತು ನೆರೆದ ಸಭಿಕರಿಗೂ ವಂದನೆಗಳನ್ನರ್ಪಿಸಿ ಸಭೆಯು ಬರಕಾಸ್ತಾಯಿತು.

ಬಾತ್ಮಿ.

ಫ್ರೇಜರ್‌ಪೇಟೆ ನೋಟಿಫೈಡ್ ಏರಿಯ.

ಅಯ್ಯಾ,

'ಜನ್ಮಭೂಮಿ'ಯ ತಾ. 21-9-38 ರ ಸಂಚಿಕೆಯಲ್ಲಿ ನನ್ನ ಹೆಸರಿನಲ್ಲಿ ಪ್ರಕಟಿಸಿರುವ ಬಾತ್ಮಿಯು ಪೂರಾ ಸುಳ್ಳು. ನಾನು ಅಂಥಾ ಬಾತ್ಮಿಯನ್ನು ಬರೆಯಲೂ ಇಲ್ಲ. ನನಗೆ ಆ ವಿಷಯವಾಗಿ ಏನೊಂದೂ ತಿಳಿಯದು. ನೋಟಿಫೈಡ್ ಏರಿಯಾದ ವಿಷಯದಲ್ಲೇ ಆಗಲಿ, ಪ್ರೆಸಿಡೆಂಟರ ವರ್ತನೆಯಲ್ಲೇ ಆಗಲಿ, ಯಾವ ವಿಧವಾದ ಅತೃಪ್ತಿಯೂ ಇಲ್ಲ. ಪ್ರತಿ ಮೀಟಿಂಗಿನಲ್ಲೂ ಹಿಂದಲ ತಿಂಗಳಿನ ಜಮಾಖರ್ಚಿನ ಲೆಕ್ಕವನ್ನು ಓದುತ್ತಾ ಇದ್ದರು. ಇವರು ಬಂದಂದಿನಿಂದ ಎಲ್ಲಾ ವಿಷಯಗಳಲ್ಲೂ ತುಂಬಾ ತೊಂದರೆ ತೆಗೆದುಕೊಳ್ಳುತ್ತಲೂ ಮೆಂಬರುಗಳ ಹೇಳಿಕೆಗೆ ನಿಗನಿದುತ್ತಾ ಸಹಕರಿಸುತ್ತಾ ಇದ್ದಾರೆ. ಹೀಗಿರುವಲ್ಲಿ ಯಾರೋ ವಿರೋಧಿಗಳು ನನ್ನ ಹೆಸರನ್ನು ದುರುಪಯೋಗಪಡಿಸಿ ಈ ರೀತಿ ನಿಜವಲ್ಲದ ವಿಷಯವನ್ನು ಪ್ರಕಟಿಸಿದ್ದಕ್ಕೆ ವಿಷಾದಿಸುತ್ತೇನೆ. ಈ ಸಂಗತಿಯನ್ನು 'ಜನ್ಮಭೂಮಿ'ಯ ಸಂಪಾದಕರಿಗೂ ಬರೆದು ತಿಳುಹಿಸಿರುತ್ತೇನೆ.

ಇಸ್ಮಾಯಿಲ್ ರಾವುತರ್.

ಮಲೆದೇವಸ್ಥಾನದ ಭಂಡಾರ.

ಅಯ್ಯಾ,

ಇದೇ ಕಳೆದ ತಾ. 13 ರ 'ಸ್ವತಂತ್ರ ಭಾರತ' ಪತ್ರಿಕೆಯಲ್ಲಿ ಲೇಖಕ ಬಿ. ಎಂ. ಕಾರ್ಯಪ್ಪನವರು ಕೊಡಗಿನ ಕಡಿಯತ್ತುನಾಡು ಮಲೆದೇವಸ್ಥಾನದ ಭಂಡಾರದ ವಿಷಯ ಬರೆದ ಟೀಕೆಯನ್ನು ಪ್ರಕಟಿಸಿದ್ದನ್ನು ಓದಿ ನೋಡಲಾಯಿತು. ಭಂಡಾರದ ಆಡಳಿತವು ಜನಪ್ರೀತಿಗೆ ಸರಿಯಾಗಿಲ್ಲವೆಂಬುದೇನೋ ಸಹಜ. ಇದರ ಫಲಿತಾಂಶವಾಗಿ ಈಗ್ಗೆ ಕಳೆದ ನಾಲ್ಕೈದು ವರ್ಷಗಳ ಹಿಂದೆ ವೃತ್ತಾಂತ ಪತ್ರಿಕೆಗಳ ಮೂಲಕ ಪತ್ರವ್ಯವಹಾರ ನಡೆಯಿತು. ಅದೇ ಸಂದರ್ಭದಲ್ಲಿ ಆಗಿನ ಮಾಜಿ ಪೋಲೀಸ್ ಸುಪರಿಂಟೆಂಡೆಂಟರಾದ ಮು. ನಡಿಕೇರಿಯಂಡ ಕಾಳಪ್ಪನವರು ನಾಡವರಿಗೂ, ಊರವರಿಗೂ ತತ್ಕಾಲದ ಸಮಜಾಯಿಸಿಕೆಯಿಂದ ಲೆಕ್ಕಾಚಾರ ಅಜಮಾಯಿಸಿದಲ್ಲದೆ ಜಮೆ ಇದ್ದ 6,000 ರೂಪಾಯಿಗಳನ್ನು ಟ್ರಸ್ಟರುಗಳ ಮೂಲಕ ಡಿಪಾಜಿಟ್ಟಾಗಿ ಇಡುವಂತೆಯೂ, ಜಾತ ಲೆಕ್ಕಾಚಾರಗಳನ್ನು ನ್ಯಾಯವಾದ ಗವರ್ನಮೆಂಟ್ ಸರ್ಟಿಫೈಡ್ ಆಡಿಟರುಗಳಿಂದ ಅಜಮಾಯಿಸುವಂತೆಯೂ ಒಪ್ಪಿ ಮೇಲ್ಕಂಡ ಹಣವನ್ನು ಕೊಡಗಿನ ಸೆಂಟ್ರಲ್ ಬ್ಯಾಂಕ್ ಮತ್ತು ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್ ಕಂಪನಿಯಲ್ಲಿ ದಿವಂಗತ ನಡಿಕೇರಿಯಂಡ ಕಾಳಪ್ಪನವರ ಮತ್ತು ಭಂಡಾರ ತಕ್ಕರ ಚಿಟ್ಟಿಯಂಡ ಐಯ್ಯಪ್ಪನವರನ್ನು ಟ್ರಸ್ಟರುಗಳನ್ನಾಗಿ ನೇಮಿಸಿ ಇಡಲಾಯಿತು. ಜಾತ ಲೆಕ್ಕಾಚಾರಗಳನ್ನು ಆಡಿಟ್ ಮಾಡಿಸಿ ಆಡಿಟ್ ರಿಪೋರ್ಟನ್ನು ವೃತ್ತಾಂತ ಪತ್ರಿಕೆಗಳಲ್ಲಿ ಪ್ರಕಟಿಸುತ್ತೇನೆಂದು ದಿವಂಗತ ರಾ. ಸಾ. ಎನ್. ಕಾಳಪ್ಪನವರು ಸೂಚಿಸಿದ್ದರ ಮೇರೆ ನಾಡವರು, ಊರವರು ಸಮ್ಮತಿಯನ್ನಿತ್ತರು. ಈ ಭರವಸೆಯಿಂದ ಊರವರು, ನಾಡವರು ಇಂದು-ನಾಳೆ ಎಂದು ಕಾಯುತ್ತಾ ಇದ್ದೆವು. ಅಷ್ಟರಲ್ಲಿ ಮು. ಕಾಳಪ್ಪನವರ ಅಕಾಲ ಮರಣದಿಂದ ಸ್ವರ್ಗಸ್ಥರಾದುದ್ದಕ್ಕೆ ಊರವರು ನಾಡವರು ದುಃಖವನ್ನು ಸೂಚಿಸುತ್ತೇವೆ. ಇದರಂತೆಯೇ ಭಂಡಾರ ತಕ್ಕರಾದ ಮು. ಐಯ್ಯಪ್ಪನವರು ಗತಿಸಿದ್ದಕ್ಕೆ ವ್ಯಸನ ಸೂಚಿಸುತ್ತೇವೆ. ಅಲ್ಲದೆ ಮೇಲ್ಕಂಡ ಭಂಡಾರದ ಉತ್ಪತ್ತಿಯು ನನಗೀಗ 80 ವರ್ಷ ಪ್ರಾಯವಾದರೂ ನನ್ನ ಹಿರಿಯ ಹಿರಿಯರಿಂದ ಅಂದರೆ ಸಾಧಾರಣ ಒಂದೂವರೆ ಶತಮಾನದಿಂದೀಚೆಗೆ ಕಡಿಮೆ ಪಕ್ಷ ಚಿನ್ನ, ಬೆಳ್ಳಿ, ಆಭರಣಗಳಲ್ಲದೆ ಅಂದಾಜು 50-60 ಸಾವಿರ ರೂಪಾಯಿಗಳು ಉತ್ಪತ್ತಿ ಇರಬಹುದೆಂದು ತಿಳಿದಿದ್ದೇನೆ. ಈ ಭಂಡಾರದ ಉತ್ಪತ್ತಿಯಿಂದ ತಾಜಲ್ ವರೆಗೆ ಯಾವದಾದರೊಂದು ಶುಭ ಕೆಲಸಕ್ಕೆಂದರೆ ಗ್ರಾಮೋದ್ಧಾರಕ್ಕಾಗಲೀ, ಇಲ್ಲವೇ ಕರಡ ಗ್ರಾಮದ ಬಡ ಮಕ್ಕಳ ಇಲ್ಲವೇ ನಾಡಿನಲ್ಲಿರುವ ಗರೀಬರಾದ ಮಕ್ಕಳ ವಿದ್ಯಾಭ್ಯಾಸಂಗಕ್ಕಾಗಲೀ ವ್ಯಯ ಮಾಡಿದ್ದು ಸಹ ಕಂಡು ಬರುವುದಿಲ್ಲ. ಇಲ್ಲವೇ ಹಿಂದುಳಿದ ಕರಡ ಗ್ರಾಮದ ಒಂದು ಕುಳವಿನಹ ಬಾಕಿಯವರನ್ನು, ಗರೀಬರಾಗಲಿ, ವಿದ್ಯಾಹೀನರಾಗಲೀ ಬೇರೆ ಯಾವ ಗ್ರಾಮದಲ್ಲೂ ಇರಲಿಕ್ಕಿಲ್ಲವೆಂದು ಒತ್ತಿ ಹೇಳಬೇಕಾಗಿಲ್ಲ. ಇದರ ಜೀರ್ಣೋದ್ಧಾರಕ್ಕೆ ಸಹ ಯಾವುದೊಂದು ವ್ಯಯವು ಕಾಣುವುದಿಲ್ಲ. ಹೀಗಿದ್ದು ಸಹ ಮೇಲ್ಕಂಡ ದೇವರ ಭಂಡಾರದ ಹಣವು ಬರೇ ನಡಿಕೇರಿಯಂಡ ಒಂದು ಕುಟುಂಬದವರ ಜನ್ಮ ಹಕ್ಕೆಂದು ತಿಳಿದು ತಾಜಲ್ ವರೆಗೂ ಯಾವುದೊಂದು ಲೆಕ್ಕಾಚಾರ ಅಜಮಾಯಿಸುವಿಕೆಗೆ ಸಿಗ ಇಡದ್ದು ನೋಡುವಾಗ ಬಹು ಜನ ಅಭಿಪ್ರಾಯದ ಮೇರೆ ಅವರ ದಾಯಾದಿಗಳಿಗೂ, ನೆಂಟರಿಷ್ಟರಿಗೂ ಮನೋಇಚ್ಛೆಯಂತೆ ಉಪಯೋಗಪಡಿಸುವ ರೀತಿ ಸಹ ಕಂಡು ಬರುತ್ತೆ. ಈ ಕಾರಣಗಳಿಂದೆಲ್ಲಾ ಊರವರು, ನಾಡವರು ಸೇರಿ ಮೇಲ್ಕಂಡ ಹಣದ ಹಾಲಿ ಡಿಪಾಜಿಟ್ಟು ಇರುವ ಹಣಕ್ಕೂ, ಹಿಂದುಳಿದ ಲೆಕ್ಕಾಚಾರಗಳನ್ನು ಅಜಮಾಯಿಸಲಿಕ್ಕೂ ಮೇಲ್ಕಂಡ ಕರಡ ಗ್ರಾಮದಿಂದ 4 ಜನರಂತೆಯೂ ಮೂರು ನಾಡು ತಕ್ಕರಿಂದ ಮೂರು ಜನರಂತೆಯೂ, ನಾಡಿನಲ್ಲಿ ವಿದ್ಯಾವಂತರಾದ ಮತ್ತು ಅನುಭವಸ್ಥರಾದ 2 ಜನರಿಂದಲೂ ಜುಮ್ಲಾ 9 ಜನರಿಂದ ಕೂಡಿದ ಒಂದು ನಿಬಂಧನೆಯಿಂದ ಮೇಲಣ 9 ಜನರು ಟ್ರಸ್ಟರುಗಳಾಗಿ ಅವರ ಮೂಲಕ ಹಾಲಿ ಡಿಪಾಜಿಟ್ಟು ಹಣಕ್ಕೂ, ಹಿಂದುಳಿದ ಲೆಕ್ಕ ಅಜಮಾಯಿಸಲಿಕ್ಕೂ ತಕ್ಕ ನಿಗ ಇಡದಿದ್ದರೆ ಅಲ್ಪಾವಧಿಯಲ್ಲೇ ಇದು ನಾಶವಾಗುವುದೇನೋ ಖಂಡಿತ. ಅದೂ ಅಲ್ಲದೆ ಬ್ಯಾಂಕಿನಲ್ಲಿ ಡಿಪಾಜಿಟ್ಟು ಇಟ್ಟ ಹಣದ ಜವಾಬ್ದಾರಿಕೆಯು ದಿವಂಗತ ಮು. ಕಾಳಪ್ಪನವರ ಮತ್ತು ಐಯ್ಯಪ್ಪನವರ ಹೆಸರಿನಲ್ಲಿ ಇದ್ದದ್ದು ಇಬ್ಬರು ಗತಿಸಿದನಂತರ ಅಲ್ಪ ಸಂಖ್ಯಾತರಿಂದ ಒಂದು ಅರ್ಜಿಯನ್ನು ತಯಾರಿಸಿ ಮೇಲಣ ಡಿಪಾಜಿಟ್ಟು ಹಣವನ್ನು ನಡಿಕೇರಿಯಂಡ ಮು. ನಂಜಪ್ಪನವರು ಹೊಂದಲು ನಡೆಯುವ ಸಂದರ್ಭವು ತಿಳಿದಿರುವದರಿಂದ ಮೇಲಣ ಎರಡು ಬ್ಯಾಂಕುಗಳಿಗೂ ತಕ್ಕರೂ, ಊರು ಸಮ್ಮಂಧಪಟ್ಟವರೂ ತಡೆ ಅರ್ಜಿ ಸಹ ಹಾಕಿರುತ್ತೇವೆ. ಇದೀ ಇಂಡಿಯಾ ದೇಶವಲ್ಲೇ ದೇವಸ್ಥಾನಗಳ ಮತ್ತು ಮಠಾಧಿಕಾರಿಗಳ ಬಗ್ಗೆ ಸರ್ಕಾರದವರೇ ಟೆಂಪಲ್ ಕಮಿಟಿಯವರಿಂದ ನಡೆಸುವ ಉಸ್ತುವಾರಿಕೆಯು ಭರದಿಂದ ಸಾಗುತ್ತಿದೆ. ಇಂಥಾ ಸುಸಂದರ್ಭದಲ್ಲಿ ಊರು, ನಾಡವರಾದ ನಾವು ಗಾಢಾ ನಿದ್ರೆಯಲ್ಲಿರುವುದು ಪೂರಾ ನಾಚಿಕೆಗೇಡುತನ. ಈ ಕಾರಣ ನಡಿಕೇರಿಯಂಡ ಮನೆಯವರ ನಿರಂಕುಶ ಪ್ರಭುತ್ವದ ಆಡಳಿತಕ್ಕೆ ಆಸ್ಪದ ಕೊಡದೆಯೂ ಒಮ್ಮನಸಿನಿಂದ ಕೈಕೊಳ್ಳಬೇಕಾದ ಕರ್ತವ್ಯವಾಗಿದೆ. ಈ ವಿಷಯಕ್ಕೆ ಈಗಿನ ಹಾಲಿ ನಡಿಕೇರಿಯಂಡ ಮು. ನಂಜಪ್ಪನವರು ಊರು ಮತ್ತು ನಾಡಿನ ಏಳಿಗೆಗೆ ಮನವಿಟ್ಟು ದೇಶದವರಿಗೂ ಇತರ ಜನಾಂಗಕ್ಕೂ ಅಸಹ್ಯ ಆಸ್ಪದ ಕೊಡದೆ ಒಡನೆ ಒಂದು ಸ್ಥಳ ನಿಷ್ಕರ್ಷೆಯಿಂದ ಊರು ನಾಡವರ ಬಹುಮತದ ಮೇರೆ ಜರಗುವ ಮೀಟಿಂಗನ್ನು ಏರ್ಪಡಿಸಿ ಮುಂದಿನ ಸಂಪತಭ್ಯುದಯಕ್ಕೆ ಪಾತ್ರರಾಗಿ ಭಾಗವಹಿಸುವಂತೆಯೂ ಈ ಮೂಲಕ ಪತ್ರಿಕೆಯಲ್ಲಿ ಪ್ರಕಟಿಸಿರುವ,

ಅಪ್ಪನೆರವಂಡ ಐಯ್ಯಣ್ಣ,
ನಾಡುತಕ್ಕ.

Coorg Civil Surgeon's Office.
Mercara, the 15th Sept. 1938

WANTED.

Four Midwives will be trained at Mercara Civil Hospital for the benefit of rural areas for six months.

(1) Each will be given a stipend of Rs. 15 per mensem for six months.

(2) Uniform allowance of Rs. 10 each for full course.

(3) Rs 20 each is provided to supply them with instruments and appliances after the training is over.

The candidates must have completed Lower Secondary Examination and must be atleast 25 years of age, middle aged widows living in the villages will be given preference.

Applications with educational qualification certificates must reach the Civil Surgeon on or before 10-10-1938 and selection will take place on 15-10-1938 and classes will start immediately at the Mercara hospital. Selected candidates must be prepared to undergo the course of training at the Civil hospital, Mercara, starting on 15-10-1938.

On completion of the course, they will be furnished with certificates whereupon they will be required to execute a bond binding them to settle and practice in their own villages.

ವರ್ತಮಾನ ಸಂಗ್ರಹ.

ಒಳದೇಶ.

ಈ ವಾರ ವೀರಾಜಪೇಟೆಯಲ್ಲಿ ಭತ್ತ ಗಾಡಿಗೆ 44 ರೂಪಾಯಿಯೂ, ಮಡಿಕೇರಿಯಲ್ಲಿ ಯಾಲಕ್ಕಿ ಮಣಕ್ಕೆ ರೂ. 22 ರ ವರೆಗೂ ಕ್ರಯವಿತ್ತಾಗಿ ವರ್ತಮಾನ.

ಕೊಡಗು ಪ್ರಾಂತ್ಯದಲ್ಲಿ ಲೇವಾದೇವಿಯನ್ನು ಕ್ರಮಗೊಳಿಸಲು ಏರ್ಪಡಿಸಿರುವ ಮಸುವಿದಾ ಆಕ್ಟನ್ನು ಸರ್ಕಾರದವರು ಬರುವ ಕೌನ್ಸಿಲು ಮೀಟಿಂಗಿನಲ್ಲಿ ಚರ್ಚೆಗೆ ತರಲಿರುವರು.

ಸ್ವಂತ ಉಪಯೋಗಕ್ಕಾಗಿ ಮರಳು ಸಾಗಿಸಲು ಲೈಸನ್ಸಿಗಾಗಿ ಹಾಕುವ ಅರ್ಜಿಗೆ ಇನ್ನು ಮುಂದೆ ಎರಡಾಣೆ ಸ್ಟಾಂಪು ಹಚ್ಚಿದರೆ ಸಾಕೆಂದು ಚೀಫ್ ಕಮಿಷನರು ಪ್ರಕಟಿಸಿರುವರು.

ಗಾಂಧಿ ಜಯಂತಿ ಸಂಬಂಧ ಈ ತಾ. 1 ರಲ್ಲಿ ಮಡಿಕೇರಿಯಲ್ಲಿಯೂ, ತಾ. 2 ರಲ್ಲಿ ಗೋಣಿಕೊಪ್ಪಲು ಮತ್ತು ಸುಂಟಿಕೊಪ್ಪಲಲ್ಲಿಯೂ ಸಾರ್ವಜನಿಕ ಸಭೆಗಳು ನಡಿಸಲ್ಪಟ್ಟವು.

ಗ್ರಾಮ ಪಟೇಲರುಗಳಿಗೆ ಕೊಡುವ ಸಂಬಳದ ದರವನ್ನು ಕುರಿತ ತಿದ್ದುಪಡಿಯ ಕರಡು ನಿಬಂಧನೆಗಳು ಈ ತಿಂಗಳ ಗಜೆಟಿನಲ್ಲಿ ಪ್ರಕಟಿಸಲ್ಪಟ್ಟವೆ. ಇವುಗಳಿಗೆ ವಿರೋಧ ಯಾ ಪರ ಸಲಹೆಗಳಿದ್ದರೆ 60 ದಿವಸಗಳೊಳಗೆ ಚೀಫ್ ಕಮಿಷನರಿಗೆ ತಿಳಿಸಬಹುದು.

ದಸರಾ ಸಮಯದಲ್ಲಿ ಮೈಸೂರಿನಲ್ಲಿ ನಡೆದ ಸಹಕಾರಿ ಪರಿಷತ್ತಿಗೆ ರಿಜಿಸ್ಟ್ರಾರಾದ ಮೆ. ಕೆ. ಚಂಗಪ್ಪನವರೂ, ಸೀನಿಯರ್ ನಾನ್‌ಕ್ರೆಡಿಟ್ ಇನ್‌ಸ್ಪೆಕ್ಟರಾದ ಮೆ. ಪಿ. ಯಂ. ಚಂಗಪ್ಪನವರೂ ಮತ್ತು ಸಹಕಾರಿ ಸೀನಿಯರ್ ಇನ್‌ಸ್ಪೆಕ್ಟರಾದ ಮೆ. ಪಿ. ಯಂ. ಪೊನ್ನಪ್ಪನವರೂ ಹೋಗಿದ್ದರೆಂದು ತಿಳಿಯಬರುತ್ತದೆ.

ಕೊಡಗಿನ ಆಸ್ಪತ್ರೆಗಳಲ್ಲಿ ಖಾಸಗಿ ಜನರಿಂದ ವಸೂಲ್ಮಾಡಬಹುದಾದ ಫೀಸನ್ನು ಕುರಿತ ತಿದ್ದುಪಡಿಯ ಕರಡು ನಿಬಂಧನೆಗಳು ಈ ತಿಂಗಳ ಗಜೆಟಿನಲ್ಲಿ ಪ್ರಕಟವಾಗಿವೆ. ಅವುಗಳಿಗೆ ಆಕ್ಷೇಪಣೆ ಯಾ ತಿದ್ದುಪಡಿಗಳಿದ್ದರೆ 60 ದಿವಸಗಳೊಳಗೆ ಚೀಫ್ ಕಮಿಷನರಿಗೆ ಕಳುಹಿಸಬಹುದೆಂದು ಸೂಚಿಸಲಾಗಿದೆ.

ಮಡಿಕೇರಿ.

ಮೆ. ಕರವಂಡ ಚಂಗಪ್ಪನವರು ಕೌನ್ಸಿಲು ಮೆಂಬರುತನಕ್ಕೆ ಕೊಟ್ಟ ರಾಜಿನಾಮೆಯು ಅಂಗೀಕರಿಸಲ್ಪಟ್ಟಿದೆ.

ಈ ತಾ. 3 ರಲ್ಲಿ ಮಡಿಕೇರಿಯಲ್ಲಿ ದಸರಾ ಮೆರವಣಿಗೆಯು ಎಂದಿನಂತೆ ಸಂಭ್ರಮದಿಂದ ನಡೆಯಿತು.

ಗ್ರಾಮಗಳಲ್ಲಿ ಹಾಲು ಸರಬರಾಯಿ ಏರ್ಪಾಡಿನ ಕಮಿಟಿಯ ಮೀಟಿಂಗೊಂದು ಈ ದಿನ ಮಡಿಕೇರಿಯಲ್ಲಿ ನಡೆಯಿತು.

ಕೊಡಗಿನಲ್ಲಿ ಕಳೆದ ಆಗೋಸ್ತು ತಿಂಗಳಲ್ಲಿ 370 ಜನನಗಳೂ 330 ಮರಣಗಳೂ ಸಂಭವಿಸಿರುವದಾಗಿ ಪ್ರಕಟವಾಗಿದೆ.

ತಾ. 1-10-38 ರಿಂದ 7-10-38 ರ ವರೆಗೆ ಇಲ್ಲಿ 7 ಇಂಚು 39 ಸೆಂಟು ಮಳೆಯಾಗಿದೆ. ಈ ವರ್ಷ ಒಟ್ಟು ಈ ವರೆಗೆ 132 ಇಂಚು 66 ಸೆಂಟು ಮಳೆಯಾಗಿರುತ್ತದೆ.

ಮೈಸೂರಿನ ಪ್ರಸಿದ್ಧ ಭಾರತ ವಾಚಕರಾದ ಶ್ರೀಮಾನ್ ಕೃಷ್ಣರಾಯರು ತಾ. 6-10-38 ರಲ್ಲಿ ಮಡಿಕೇರಿ ಹೈಸ್ಕೂಲ್ ಹಾಲಿನಲ್ಲಿ ಸುಶ್ರಾವ್ಯವಾಗಿ ಭಾರತ ವಾಚನ ಮಾಡಿದರು.

ತಿರುವಾಂಕೂರು ನ್ಯಾಶನಲ್ ಮತ್ತು ಕ್ವಿಲಾನ್ ಬ್ಯಾಂಕಿನ ಮಡಿಕೇರಿ ಶಾಖೆಗೆ ಅದರ ಈ ಮೊದಲಿನ ಏಜೆಂಟರನ್ನೇ ಸರಕಾರಿ ಲಿಕ್ವಿಡೇಟರವರ ಪ್ರತಿನಿಧಿಯಾಗಿ ನೇಮಿಸಲಾಗಿದೆಯೆಂದು ವರ್ತಮಾನ.

ಆದಿ ಶ್ರೀ ಕಾವೇರಿ ಬಸ್ಸ್ ಸರ್ವಿಸ್ ಕಂಪೆನಿಯ ಸಾಮಾನ್ಯ ಜನರಲ್ ಮೀಟಿಂಗು ಕಳೆದ ತಾ. 30 ರಲ್ಲಿಯೂ, ವಿಶೇಷ ಜನರಲ್ ಮೀಟಿಂಗು ಈ ತಾ. 1 ರಲ್ಲಿಯೂ ಮಡಿಕೇರಿಯಲ್ಲಿ ನಡೆದವು.

ಅಸಿಸ್ಟೆಂಟ್ ಕಮಿಷನರು ಮತ್ತು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾದ ರಾ. ಸಾ. ಮುಂಡೇಪಂಡ ಮುಂದಪ್ಪನವರು ಕಳೆದ ಸೆಪ್ಟೆಂಬರು 15 ರಿಂದ ಕೌನ್ಸಿಲು ಮೆಂಬರಾಗಿಯೂ, ಮತ್ತು ಸೆಕ್ರೆಟರಿಯಾಗಿಯೂ ನೇಮಿಸಲ್ಪಟ್ಟಿರುವರು.

ಜಿಲ್ಲಾ ಪಟೇಲಿನ ಆಫೀಸರಾಗಿದ್ದ ಮೆ. ಕೋದಂಡ ಸೋಮಣ್ಣನವರು ಈ ತಾ. 1 ರಲ್ಲಿ ಪಟೇಲಿನ ಅಸಿಸ್ಟೆಂಟ್ ಸರ್ಜನರಾದ ಮೆ. ಅಜ್ಜಮಾಡ ಬೋಪಯ್ಯನವರಿಗೆ ಚಾರ್ಜು ಕೊಟ್ಟು, ಉದ್ಯೋಗದಿಂದ ನಿವೃತ್ತರಾದರು.

ಫ್ರೇಜರ್‌ಪೇಟೆ.

ಹಿಂದೂಗಳಲ್ಲದ ಅಲ್ಪ ಸಂಖ್ಯಾಕರ ಪರವಾಗಿಯೂ, ದಲಿತ ವರ್ಗದವರ ಪರವಾಗಿಯೂ ಮೆ. ಬಲಗ್ಗೆ ಕೆಂಚನವರು ಸೋಮವಾರಪೇಟೆ ನೋಟಿಫೈಡ್ ಏರ್ಯಾದ ಕಮಿಟಿಗೂ, ಮೆ. ಬಲಗ್ಗೆ ಮರಿಯ ಮೇಸ್ತ್ರಿಯವರು ಫ್ರೇಜರ್‌ಪೇಟೆ ನೋಟಿಫೈಡ್ ಏರ್ಯಾದ ಕಮಿಟಿಗೂ ಮತ್ತು ಮೆ. ಡಿ. ಮಂಜಯ್ಯಶೆಟ್ಟರು ಕೊಡ್ಲಿಪೇಟೆ ನೋಟಿಫೈಡ್ ಏರ್ಯಾದ ಕಮಿಟಿಗೂ ಮೆಂಬರುಗಳಾಗಿ ಸರ್ಕಾರದವರಿಂದ ನೇಮಿಸಲ್ಪಟ್ಟಿರುವರು.

ವೀರಾಜಪೇಟೆ.

ಸ್ವಲ್ಪ ದಿವಸಗಳ ಹಿಂದೆ ವೀರಾಜಪೇಟೆಯ ಪೊಲೀಸ್ ಸ್ಟೇಶನ್ ಬಳಿ ಇರುವ ಹಿಂದೂಸ್ಥಾನಿ ಶಾಲೆಯ ಹಿಂದುಗಡೆಯಲ್ಲಿ ಒಬ್ಬನನ್ನು ಕೊಂದು ಒಂದು ಮಡಕ್ಕೆ ತೂಗಹಾಕಲ್ಪಟ್ಟಿದ್ದು, 2 ದಿವಸಗಳ ನಂತರ ಆ ಶವವು ಯಾರಿಗೂ ತಿಳಿಯದೆ ಹೂಣಲ್ಪಟ್ಟಿತ್ತೆಂದು ವಗೈರೆಯಾಗಿ ರುಜುವಿಲ್ಲದ ಅರ್ಜಿಯೊಂದು ಕಮಿಷನರಿಗೆ ತಲಪಿತ್ತೆಂದೂ, ಈ ಬಗ್ಗೆ ಉತ್ತರ ಕೊಡಗಿನ ಪೊಲೀಸ್ ಸರ್ಕಲ್ ಇನ್‌ಸ್ಪೆಕ್ಟರವರು ವಿಚಾರಿಸಿದಲ್ಲಿ ಅದರಲ್ಲಿ ನಿಜವೇನೂ ಇಲ್ಲವೆಂಬುದು ಕಂಡುಬಂತೆಂದೂ ವರ್ತಮಾನ.

ಸರ್ಕಾರದವರು ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡುತ್ತಿರುವ ವಾರ್ಷಿಕ ವಂತಿಗೆಯಲ್ಲಿ ರೂ. 7000 ಕಡಿಮೆ ಮಾಡುವ ಸಂಭವವಿರುವುದರಿಂದ ಬೋರ್ಡಿನವರು ಹೊಸ ಕೆಲಸಗಳಿಗೇನೂ ಖರ್ಚು ಮಾಡಕೂಡದೆಂತಲೂ, ಬೋರ್ಡಿನ ವೆಚ್ಚವು ಆದಾಯವನ್ನು ಮೀರಿರುವುದರಿಂದ ಅದನ್ನು ಬೇಗನೆ ಸರಿಪಡಿಸಬೇಕೆಂತಲೂ ಚೀಫ್ ಕಮಿಷನರವರು ಪತ್ರ ಬರೆದಿರುವರೆಂದೂ, ಈ ಬಗ್ಗೆ ಬೋರ್ಡಿನ ಮೀಟಿಂಗೊಂದು ಬೇಗನೆ ನಡಿಸಲ್ಪಡುವದೆಂದೂ ತಿಳಿಯಬರುತ್ತದೆ.

ಶ್ರೀಮಂಗಲ.

ನಾಟಿಕೆಲಸದ ಸಮಯದಲ್ಲಿ ಮಳೆಯಿಲ್ಲದೆ ತೊಂದರೆಗೊಳಗಾಗಿ ಎಷ್ಟೋ ನೀರಿಲ್ಲದ ಭೂಮಿಯು ಇಲ್ಲಿ ಬಿಟ್ಟು ಹೋಯಿತೆಂದೂ, ಆದರೆ ಈಗ ಜೋರು ಮಳೆ ಪ್ರಾರಂಭವಾದ್ದರಿಂದ 'ಕೊಲ್ಲಿ' ಭೂಮಿಯು ಮುಚ್ಚಿ ಹೋಗಿ ನಾಟಿಯು ಸಂಪೂರ್ಣ ನಷ್ಟವಾಗುವ ಸಂದರ್ಭದಲ್ಲಿದೆಯೆಂದೂ ತಿಳಿಯಬರುತ್ತದೆ.

ಭಾಗಮಂಡಲ.

ಚೇರಂಬಾಣೆ ಸಿದ್ಧಾಶ್ರಮದಲ್ಲಿ ಈ ತಾ. 14 ನೇ ಶುಕ್ರವಾರ ದಿನ ಬೆಳಗ್ಗೆ 3 ಗಂಟೆಗೆ ಸಪ್ತಾಹ ಪ್ರಾರಂಭವಾಗಿ ನಿತ್ಯ ಅನ್ನ ಸಂತರ್ಪಣೆ, ಬ್ರಹ್ಮಜಿಜ್ಞಾಸ, ಅಹೋರಾತ್ರಿ ಭಜನೆ, ಕೀರ್ತನೆ ಈ ಪ್ರಕಾರ ನಡೆದು 21 ನೇ ಶುಕ್ರವಾರಕ್ಕೆ ಸಪ್ತಾಹ ಸಮಾಪ್ತಿಯಾಗುವದೆಂದೂ, ಎಲ್ಲರಿಗೂ ಆಹ್ವಾನವಿದೆಯೆಂದೂ ತಿಳಿಯುತ್ತೇವೆ.

ಈ ತಾರೀಕು 17 ನೇ ಸೋಮವಾರ ದಿನ ಹಗಲು 11 ಗಂಟೆ 39 ನಿಮಿಷಕ್ಕೆ ಆಗುವ ತೀರ್ಥೋದ್ಭವದ ತುಲಾ ಕಾವೇರಿ ಸಂಕ್ರಮಣದ ಸಮಯದಲ್ಲಿ ಅಂದರೆ ಈ ತಾ. 6 ರಿಂದ ತಾ. 22 ರ ವರೆಗೆ ಪ್ಲೇಗು ಮತ್ತು ವಾಂತಿಭೇದಿ ಕಾಯಿಲೆಗಳಿರುವ ಸ್ಥಳಗಳಿಂದ ಬರುವ ಜನರನ್ನು ಜಾತ್ರೆಗೆ ಬಿಡುವುದಿಲ್ಲವಾಗಿ ಪ್ರಕಟವಾಗಿದೆ.

ಹಿಂದೂದೇಶ.

ವೈಮಾನಿಕ ವಿದ್ಯೆಯಲ್ಲಿ ತರಬೇತಿಗಾಗಿ ಭಾರತೀಯರಿಗೆ ವಿದ್ಯಾರ್ಥಿವೇತನವನ್ನು ಕೊಡಲಾಗುವುದೆಂದು ಇಂಡಿಯಾ ಸರಕಾರವು ತಿಳಿಸುತ್ತದೆ.

ಕರಾಚಿಯಲ್ಲಿ ಗಾಂಧಿ ಜಯಂತಿಯ ಸಮಾರಂಭದಲ್ಲಿ 25,000 ರೂಪಾಯಿಗಳ ಖಾದಿ ಬಟ್ಟೆ ವಿಕ್ರಯಿಸಲ್ಪಟ್ಟಿದೆ ಎಂಬ ವಾರ್ತೆ.

ತಲಚೇರಿಯ ಪ್ರಸಿದ್ಧ ಕಾಂಗ್ರೆಸ್ ಮುಂದಾಳಾದ ಮೆ. ಎಲ್. ಎಸ್. ಪ್ರಭುರವರು ಉತ್ತರ ಮಲಬಾರಿನ ಪಬ್ಲಿಕ್ ಪ್ರಾಸಿಕ್ಯೂಟರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ.

ಮಧ್ಯ ಪ್ರಾಂತದ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಖಾರೆಯವರು ಕಾಂಗ್ರೆಸಿನ ಪ್ರಗತಿಗೆ ಕುಂದು ತರುವಂತೆ ವರ್ತಿಸುತ್ತಿರುವ ಪ್ರಯುಕ್ತ ಅವರನ್ನು ಕಾಂಗ್ರೆಸ್ ಶಿಸ್ತಿನಂತೆ ಕಾಂಗ್ರೆಸಿನಿಂದ ಹೊರಹಾಕಿರುವರು.

ಬರ್ದವಾನಿನಲ್ಲಿ ರಾಜಕೀಯ ಕೈದಿಯಾಗಿ ಈಗ ಬಿಡುಗಡೆ ಹೊಂದಿದ್ದ ಶ್ರೀ ಅನುಕೂಲ್ಯ ಕುಮಾರ್ ಮುಜುಮ್ದಾರ ಎಂಬವನು ತಾ. 4 ರಲ್ಲಿ ಆರ್ಥಿಕ ಕಷ್ಟ ಪರಂಪರೆಗೋಸ್ಕರ ಪ್ರಾಣತ್ಯಾಗ ಮಾಡಿಕೊಂಡಿರುವನಾಗಿ ತಿಳಿಯುತ್ತೆ.

ಗಡಿನಾಡಿನ ಪ್ರವಾಸವನ್ನು ಕೈಕೊಂಡಿರುವ ಪೂಜ್ಯ ಗಾಂಧೀಜಿಯವರು ತಾ 5 ರಲ್ಲಿ ಶ್ರೀ ಪ್ಯಾರಿಲಾಲ್, ಡಾ. ಸುಶೀಲಾದೇವಿ, ಕನ್ಯಾಲಾಲ್ ಗಾಂಧಿ, ಮತ್ತು ಬ್ರಿಜ್‌ಕಿಸನ್ ಚಂಡಿಲಾಲರೊಡನೆ ಗಡಿನಾಡಿಗೆ ಹೊರಟು ಹೋದರು.

ತಿರುವಾಂಕೂರಿನ ಸ್ಟೇಟ್ ಕಾಂಗ್ರೆಸಿನ ಪ್ರಥಮ ಸ್ತ್ರೀ ಅಧ್ಯಕ್ಷೆಯರಾದ ಶ್ರೀಮತಿ ಕುರ್ವಿಲರವರಿಗೆ 18 ತಿಂಗಳ ಸಜೆ ವಿಧಿಸಲ್ಪಟ್ಟಿದೆ. ಸ್ಟೇಟ್ ಕಾಂಗ್ರೆಸಿನ ಅಧ್ಯಕ್ಷತೆ ವಹಿಸಿ ಜೈಲಿಗೆ ಹೋದವರಲ್ಲಿ ಇವರು ಐದನೆಯವರು. ಈಗ ಸ್ಟೇಟ್ ಕಾಂಗ್ರೆಸಿನ ಅಧ್ಯಕ್ಷರು ಶ್ರೀ ಪಿ. ಕೆ. ಕುಮಾರನ್ ಯಂ. ಎಲ್. ಎ. ಆಗಿರುವರು.

ತಿರುವಾಂಕೂರಿನಲ್ಲಿ ಅತ್ಯಾಚಾರಗಳು ನಡೆಯುತ್ತಲೇ ಇವೆ. ವಿದ್ಯಾರ್ಥಿಗಳು ತೀವ್ರತರ ಚಳವಳ ಮಾಡುತ್ತಿರುವರು. ಶಾಲೆಗಳಲ್ಲಿ ಪಿಕೆಟ್ ನಡೆಯುತ್ತಿದೆ. ಲಾಠಿ ಪೆಟ್ಟುಗಳನ್ನು ಲಕ್ಷಿಸದೆ ಮುಂದರಿಯುತ್ತಿರುವರು. ಚೆಂಗನ ಚೇರಿ ಎಂಬಲ್ಲಿ ಪಿಕೆಟಿಂಗ್ ಮಾಡುತ್ತಿದ್ದ ಸ್ತ್ರೀ ವಿದ್ಯಾರ್ಥಿಗಳಿಗೆ ಬೆತ್ತದಿಂದ ಹೊಡೆದರೆನ್ನುತ್ತಾರೆ. ಅಂತು ಸರ್ವತ್ರ ಅಲ್ಲೋಲ ಕಲ್ಲೋಲವು ನಡೆದಿದೆ.

ಸಿಂಧೂ ಅಧಿಪತ್ಯದ ಪ್ರಧಾನ ಸಚಿವರಾದ ಖಾನ್‌ಬಹದ್ದೂರ್ ಅಲ್ಲಾಬಕ್ಸ್‌ರವರು ಕಳೆದ ತಾ. 26 ನೇ ಸೋಮವಾರ ಕರಾಚಿಯಲ್ಲಿ ಖಾದಿ ಬಟ್ಟೆಯನ್ನು ಮಾರಾಟಮಾಡಲು ಹೊರಟಾಗ ವಿದೇಶಿ ಸಾಮಾನುಗಳನ್ನು ಮಾರುತ್ತಿದ್ದ ವರ್ತಕರೆಲ್ಲರಿಗೂ ಅತ್ಯಾಶ್ಚರ್ಯವಾಯಿತು. ಪ್ರಧಾನ ಸಚಿವರು ಅಂಗಡಿ ಅಂಗಡಿಗೂ ಹೋಗಿ ಉಪಾಯೋಕ್ತಿಗಳಿಂದ ಪ್ರತಿಯೊಬ್ಬರೂ ಸುಮಾರು ಹತ್ತು ರೂಪಾಯಿನ ಖಾದಿ ಬಟ್ಟೆ ಕೊಂಡುಕೊಳ್ಳುವಂತೆ ಮಾಡಿದರು. ಆ ಒಂದೇ ದಿನ ಅವರು ಸುಮಾರು 10,000 ರೂಪಾಯಿನ ಖಾದಿಯನ್ನು ವಿಕ್ರಯಿಸಿದರು. ವರ್ತಕರೆಲ್ಲರೂ ಸಚಿವರನ್ನು ಆದರಿಸಿ ಅವರಿಗೆ ಪುಷ್ಪಮಾಲಿಕೆಗಳನ್ನರ್ಪಿಸಿ ವಂದಿಸಿದರು.

ವಿದೇಶ

ಝೆಕ್ ಪ್ರಾಂತವನ್ನು ನುಂಗಿದ ಹಿಟ್ಲರನು ಈಗ ತನ್ನ ವಸಾಹತುಗಳನ್ನು ಬಿಟ್ಟುಕೊಡಬೇಕೆಂಬ ಶರತ್ತು ಬ್ರಿಟಿಷರಿಗೆ ಹಾಕಿರುವನಾಗಿ ಪತ್ರಿಕೆಗಳು ಸಾರುತ್ತಿವೆ.

ಚೈನಾದ ಯುದ್ಧ ಕೇಂದ್ರವಾದ ಚುಂಗ್‌ಕಿಂಗಿನ ಮೇಲೆ ತಾ. 4 ರಲ್ಲಿ ಜಪಾನಿ ವೈಮಾನಿಕರು ಬಾಂಬೆಸೆದರು. ಜಪಾನರು ಈಗ ಯುದ್ಧದಲ್ಲಿ ವಿಷಗಾಳಿಯನ್ನು ಉಪಯೋಗಿಸುತ್ತಿರುವರು. ಅದ್ದರಿಂದ ಚೈನೀಯರ ತೊಂದರೆಯು ವಿಪರೀತವಾಗಿದೆ.

ಮಧ್ಯ ಯೂರೋಪಿನ ಸಮಸ್ಯೆಯಲ್ಲಿ ಬ್ರಿಟನರು ಕೈಕೊಂಡ ಅಂತರರಾಷ್ಟ್ರೀಯ ತತ್ವವು ಸಮಂಜಸವಲ್ಲವೆಂದೂ, ಬ್ರಿಟಿಷರ ಪ್ರಗತಿಗೆ ಕುಂದು ತರುವಂಥಾದ್ದೆಂದೂ, ಮಿ. ಚೇಂಬರ್ಲೇನರ ವರ್ತನೆಯು ತನಗೆ ಯುಕ್ತ ಕಾಣುವುದಿಲ್ಲವೆಂದೂ ಬ್ರಿಟಿಷ್ ಮಂತ್ರಿಗಳಾದ ಮಿ. ಡಫ್ ಕೂಪರರು ತನ್ನ ಮಂತ್ರಿಪದಕ್ಕೆ ರಾಜಿನಾಮೆಯನ್ನಿತ್ತಿರುವರು.

'ಟನ್, ಟನ್, ಟನ್' ಎಂದು ಶಾಲಾ ಘಂಟೆಯು ಹೊಡೆಯಲ್ಪಟ್ಟಿತು. ರಾಜಧಾನಿಯ ಶಾಲೆಯ ಅಂಗಳಗಳಲ್ಲೂ, ಮರಗಳ ಮೇಲೂ, ಇತರ ತರಗತಿಗಳಲ್ಲೂ ಓಡಾಡುತ್ತಿದ್ದ ಹುಡುಗರು ಮರುಕ್ಷಣದಲ್ಲೇ ಮಾಯವಾಗಿ ತರಗತಿಗಳಲ್ಲಿ ಸೇರಿದರು. ಉಪಾಧ್ಯಾಯರು ಬಂದಿಲ್ಲವಾದ ಕಾರಣ ಪ್ರತಿ ತರಗತಿಯಲ್ಲೂ ಹುಡುಗರು ಗಜಬಿಜ ಮಾಡುತ್ತಿದ್ದರು.

ಶಾಲೆಯ ಒಂಭತ್ತನೇ ತರಗತಿ. ಕೆಲವರು ಆಸನಗಳಲ್ಲಿ ಕುಳಿತಿದ್ದರು. ಕೆಲವರು ಬೆಂಚುಗಳ ಎದುರಿನ ಡೆಸ್ಕುಗಳ ಮೇಲೆ ನಿಂತಿದ್ದರು. ಒಬ್ಬನು ಉಪಾಧ್ಯಾಯರ ಕುರ್ಚಿಯ ಮೇಲೆ ಕುಳಿತು, ಹತ್ತಿರದಲ್ಲಿ ಕುಳಿತಿದ್ದ ಹುಡುಗರನ್ನು ಒಬ್ಬ ಉಪಾಧ್ಯಾಯರ ಸ್ವರವನ್ನು ನಡೆಸುತ್ತಾ ಗದರಿಸುತ್ತಿದ್ದನು. ಕೆಲವರು ಆ ನಟನಾ ಶಿಕ್ಷಣವನ್ನು ಧೈರ್ಯದಿಂದ ಖಂಡಿಸುತ್ತಿದ್ದರು. ಕೆಲವರು ನಗುತ್ತಿದ್ದರು. ಕೆಲವರು ಕಪ್ಪು ಹಲಿಗೆಯ ಮೇಲೆ ಏನೇನೋ ಬರೆಯುತ್ತಿದ್ದರು. ಎಲ್ಲೆಲ್ಲೂ ಶಬ್ದ, ಎಲ್ಲೆಲ್ಲೂ ಕೂಗು, ಎಲ್ಲೆಲ್ಲೂ ನಗೆಯೇ ಕೇಳಿಸುತ್ತಿತ್ತು. ಆ ಕೋಣೆಯೆಲ್ಲ ಅರ್ಥರಹಿತವಾದ ಗಲಿಬಿಲಿಯಿಂದ ಸೇರಿ ಸಂತೆ ಮಾಳವನ್ನು ಜ್ಞಾಪಕಗೊಳಿಸುತ್ತಿತ್ತು. ಅವರ ಒಂದು ಭಾಗವು ಮಾತ್ರ ಕೆಲವು ಯುವತಿಯರಿಂದ ಅಲಂಕರಿಸಲ್ಪಟ್ಟಿದ್ದ ಕಾರಣ ಕೆಲವು ಮಟ್ಟಿಗೆ ಶಾಂತಿಯುಕ್ತವಾಗಿತ್ತು.

ಅಷ್ಟರಲ್ಲಿ ಮೂವರು ವಿದ್ಯಾರ್ಥಿಗಳು ಮನಸ್ಸಿಲ್ಲದವರ ಹಾಗೆ ಕೋಣೆಯನ್ನು ಪ್ರವೇಶಿಸಿದರು. ಅವರ ಆಗಮನವು ತುಂಬಿಕೊಂಡಿದ್ದ ಅರ್ಥರಹಿತವಾದ ಘೋಷವನ್ನು ಸ್ವಲ್ಪ ಮಟ್ಟಿಗೆ ಶಮನಗೊಳಿಸಿತು. ನೆರೆದಿದ್ದ ಯುವಕರೆಲ್ಲಾ ಆ ಮೂವರಲ್ಲಿ ಒಬ್ಬನನ್ನು ಆತುರದಿಂದ ಪ್ರಶ್ನಿಸಿ ಅವರೊಡನೆ 'ಇವನಾರೆಂದು' ವಿಚಾರಿಸತೊಡಗಿದರು.

ಆಗತಾನೇ ಪ್ರವೇಶಿಸಿದ ನವೀನ ವಿದ್ಯಾರ್ಥಿಯು ವಯಸ್ಸಿನಲ್ಲಿ ಹದಿನಾಲ್ಕಕ್ಕೆ ಮೀರಿರಲಿಲ್ಲ. ಅಮೂಲ್ಯವಾದ ವಸ್ತ್ರಗಳನ್ನು ಧರಿಸಿದ್ದನು. ನೋಡಲು ಬಹು ಲಕ್ಷಣವಂತನಾಗಿದ್ದನು. ಮುಖದ ಮೇಲೆ ಪುರುಷ ಲಕ್ಷಣದ ಕುರುಹುಗಳು ಇನ್ನೂ ತಲೆದೋರಿರಲಿಲ್ಲವಾದಕಾರಣ ಅವನು ಒಬ್ಬ ಸುಂದರಿಯಾದ ಕನ್ಯೆಯು ವೇಷಾಂತರವನ್ನು ಧರಿಸಿದ ಹಾಗೆ ತೋರುತ್ತಿದ್ದನು.

ಅವರು ಮೂವರೂ ತರಗತಿಯ ಕಡೆಯ ಬೆಂಚಿನಲ್ಲಿ ಕುಳಿತರು. ಮರುಕ್ಷಣದಲ್ಲೇ ಉಪಾಧ್ಯಾಯರು ಪ್ರವೇಶಿಸಿದರು. ವಿದ್ಯಾರ್ಥಿಗಳೆಲ್ಲಾ ಮರ್ಯಾದೆಪೂರ್ವಕವಾಗಿ ಎದ್ದು ನಿಂತು, ಉಪಾಧ್ಯಾಯರು ತನ್ನ ಆಸನವನ್ನು ಅಲಂಕರಿಸಿದೊಡನೆ ತಾವೂ ಕುಳಿತರು. ಕಡೇ ಸಾಲಿನಲ್ಲಿ ಕುಳಿತ ಮೂವರ ಪೈಕಿ ನಮ್ಮ ಹೊಸ ವಿದ್ಯಾರ್ಥಿಯು ಮಾತ್ರ ಶಾಲೆಯ ಮರ್ಯಾದೆಯನ್ನು ನಡೆಸಿದನು. ಇನ್ನಿಬ್ಬರು ಏಳಲೇ ಇಲ್ಲ. ಎದ್ದವರನ್ನು ಅವರು ಉಪಾಧ್ಯಾಯರು ಕೂರುವ ವರೆಗೆ ನಿಲ್ಲಲೂ ಬಿಡಲಿಲ್ಲ. ಎಳೆದು ಕುಳ್ಳಿರಿಸಿದರು.

ದೇವದತ್ತ.

ಸಾಮಾಜಿಕ ಕಾದಂಬರಿ.

ಅಧ್ಯಾಯ ೭.

ಈ ಉಪಾಧ್ಯಾಯರ ಹೆಸರು ವಸಂತಚಂದ್ರ. ಪ್ರಾಯವು ಸುಮಾರು ಮೂವತ್ತು ಇರಬಹುದು. ನೋಡಲು ಸುಲಕ್ಷಣರು. ಇನ್ನೂ ಮದುವೆಯಾಗಿರಲಿಲ್ಲ. ಇವರು 9 ನೇ ತರಗತಿಯ (IV Form) ಆಂಗ್ಲಭಾಷಾ ಶಿಕ್ಷಕರಾಗಿದ್ದರು. ರಜೆ ಕಳೆದು ಶಾಲೆಯು ತೆರೆದ ಪ್ರಥಮ ದಿವಸವಾದುದರಿಂದ, ಉಪಾಧ್ಯಾಯರು ಆ ದಿವಸ ಎಂದಿನಂತೆ ಪಾಠ ಪ್ರಾರಂಭಿಸಲಿಲ್ಲ. ಹುಡುಗರಿಗೆ ಸರಿಯಾದ ಆಸನಗಳನ್ನು ಕೊಡುವುದು, ಅವರ ಪರಿಚಿತಿಯನ್ನು ಮಾಡಿಕೊಳ್ಳುವುದು ಇವೇ ಮೊದಲಾದ ಕೆಲಸಗಳಲ್ಲಿ ಆ ದಿವಸವನ್ನು ಕಳೆಯುತ್ತಿದ್ದರು.

ಆ ಕ್ರಮಕ್ಕನುಗುಣವಾಗಿ, ವಸಂತಚಂದ್ರನು ತನ್ನ ಉನ್ನತ ಆಸನದಿಂದ ನೆರೆದಿರುವ ವಿದ್ಯಾರ್ಥಿಗಳನ್ನೆಲ್ಲಾ ಒಮ್ಮೆ ನೋಡಿದನು. ಒಬ್ಬೊಬ್ಬರ ಮುಖವನ್ನೇ ಅವಲೋಕಿಸುತ್ತಾ ಹೋದ ಹಾಗೆ ಅವರ ಮುಖದ ಭಾವವು ಬದಲಾಗುತ್ತಿತ್ತು. ಕೆಲವರನ್ನು ನೋಡಿ ನಕ್ಕನು. ಕೆಲವರೊಡನೆ ಮಂದಹಾಸಮಿಶ್ರಿತವಾದ ಒಂದೆರಡು ಮಾತುಗಳನ್ನಾಡಿದನು. ಕೆಲವರ ಮುಖವು ಅವರ ಮುಖದ ಮೇಲಿದ್ದ ಉಲ್ಲಾಸವನ್ನು ಓಡಿಸುತ್ತಿತ್ತು. ಹಾಗೆ ನೋಡುತ್ತಾ ಹೋದ ಹಾಗೆ ಕಡೆಯ ಬೆಂಚಿನಲ್ಲಿ ಕೂತಿದ್ದ ನವಯುವಕನ ಮುಖವು ವಸಂತಚಂದ್ರನ ನೇತ್ರಯುಗಗಳನ್ನು ಬಲವಾದ ಬಂಧನದಲ್ಲಿರಿಸಿತು.

ವಸಂತಚಂದ್ರ:—ಯಾರಪ್ಪ ನೀನು? ಯಾವ ಶಾಲೆಯಿಂದ ಬಂದಿರುತ್ತೀ?

ಚಾರುದತ್ತ:—ನನ್ನ ಹೆಸರು ಚಾರುದತ್ತ. ಅರಸುಪುರದ ಹೈಸ್ಕೂಲಿನಿಂದ ಇಲ್ಲಿಗೆ ಬಂದಿರುತ್ತೇನೆ.

ವಸಂತಚಂದ್ರ:—ಓಹೋ! ದತ್ತರ ಮನೆತನದವನೇ? ನಿನ್ನ ತಂದೆಯ ಹೆಸರೇನು?

ಚಾ:—ಮನೋಹರದತ್ತರೆಂದು.

ವ:—ಮನೋಹರನ ಮಗನೋ? ನನಗೆ ಅವರನ್ನು ಗೊತ್ತು. ಎಲ್ಲಿ ನಿನ್ನ ಸರ್ಟಿಫಿಕೇಟು? ಇಲ್ಲಿ ತಾ.

ಚಾರುದತ್ತನು ನಡಗುತ್ತಾ ಉಪಾಧ್ಯಾಯನ ಸನ್ನಿಧಿಗೆ ಬಂದು ಸರ್ಟಿಫಿಕೇಟನ್ನು ಕೊಟ್ಟನು. ಅದನ್ನು ನೋಡಿ, ಮಂದಹಾಸಪೂರಿತವಾದ ಮುಖದಿಂದ 'ನಿನಗೆ ಇಂಗ್ಲೀಷಿನಲ್ಲಿ ಸ್ವಲ್ಪ ಕಡಿಮೆ ಮಾರ್ಕು ಸಿಕ್ಕಿದೆ, ಚೆನ್ನಾಗಿ ಓದಬೇಕು. ತಿಳಿಯಿತೋ? 'ಇರುವುದೆಲ್ಲಿ?'

ಚಾರುದತ್ತ:—ಬೋರ್ಡಿಂಗಿನಲ್ಲಿ.

ವಸಂತ:—ಹಾಗಾದರೆ ನೀನು ಯಾವಾಗಲೂ ನನ್ನಿಂದ ರಾತ್ರಿ ಇಂಗ್ಲೀಷಿನಲ್ಲಿ ಸ್ವಂತ ತರಬೇತು ತೆಗೆದುಕೊಳ್ಳಬಹುದು. ನಾನೇ ಬೋರ್ಡಿಂಗಿನ ಮುಖ್ಯಾಧಿಕಾರಿ. ತಿಳಿಯಿತೋ? ಈ ದಿವಸ ರಾತ್ರಿ ನನ್ನ ಕೋಣೆಗೆ ಬಾ, ಹೆಚ್ಚಿನ ಸಂಗತಿ ಅಲ್ಲಿ ತಿಳಿಸುವೆನು. ಹೋಗು ಕುಳಿತುಕೊ.

ಇಷ್ಟಾದ ಮೇಲೆ ವಸಂತಚಂದ್ರನು ಹುಡುಗರಿಗೆ ಕಾಯಂ ಆಗಿ ಕೂರಲು ಸ್ಥಳ ನಿಯಮಿಸತೊಡಗಿದನು. ಆ ನಿಮಿತ್ತವಾಗಿ ಎಲ್ಲರನ್ನೂ ಒಮ್ಮೆ ನೋಡಿ ಎದುರಿನ ಸಾಲಿನಲ್ಲಿ ಕುಳಿತಿದ್ದವರ ಪೈಕಿ ಏಳು ಜನರನ್ನು ಎದ್ದು ನಿಲ್ಲಲು ಹೇಳಿದನು. ಆ ಮೇಲೆ ಹಿಂದಿನ ಬೆಂಚುಗಳಿಂದ ಏಳು ಜನರನ್ನು ಆಯ್ದು ಎದುರಿನ ಬೆಂಚಿನಲ್ಲಿ ಕುಳಿತುಕೊಳ್ಳುವಂತೆ ಸೌಂಜ್ಞೆ ಮಾಡಿದನು. ಅವರ ಪೈಕಿ ಚಾರುದತ್ತ ಒಬ್ಬ. ಮೊದಲು ನಿಂತುಕೊಳ್ಳಲು ಹೇಳಿದ ಹುಡುಗರನ್ನು ಕಾಠಿಣ್ಯ ಸ್ವರದಿಂದ ಹಿಂದಿನ ಬೆಂಚುಗಳಲ್ಲಿ ಕುಳಿತುಕೊಳ್ಳಲು ಅಪ್ಪಣೆ ಮಾಡಿದನು.

ಈಗಿನ ಶಾಲೆಯಲ್ಲಿ ಹುಡುಗರಿಗೆ ಶಾಲಾ ಪ್ರಥಮ ದಿವಸ ಸ್ಥಳಗಳನ್ನು ಕೊಡುವಾಗ ಉಪಾಧ್ಯಾಯರುಗಳು ಕೆಲವು ನೇಮವನ್ನನುಸರಿಸುತ್ತಾರೆ. ವಾಡಿಕೆಯಾಗಿ ಗ್ಯಾಲರಿಗಳಿಲ್ಲದ ಶಾಲೆಯಲ್ಲಿ ಎತ್ತರವಾದ ಹುಡುಗರನ್ನು ಹಿಂದಿನ ಬೆಂಚುಗಳಲ್ಲೂ, ಕುಳ್ಳರನ್ನು ಎದುರಿನ ಸಾಲುಗಳಲ್ಲೂ ಕೂಡಿಸುತ್ತಾರೆ. ಗೇಲರಿಗಳಿರುವ ಶಾಲೆಗಳಲ್ಲಿ ಜ್ಞಾನೇಂದ್ರಿಯಗಳ ಪೈಕಿ ಯಾರ ಕರ್ಣ ಮತ್ತು ನೇತ್ರಗಳು ತಮ್ಮ ಕೆಲಸಗಳನ್ನು ಸರಿಯಾಗಿ ಮಾಡುವುದಿಲ್ಲವೋ ಅವರನ್ನೆಲ್ಲಾ ಎದುರಿನಲ್ಲಿ ಕೂಡ್ರಿಸಿ, ಇತರರನ್ನು ಅವರ ಹೆಸರಿನ ಪ್ರಥಮಾಕ್ಷರಕ್ಕನುಗುಣವಾಗಿ ಹಿಂದೆ ಹಿಂದೆ ಕೂಡ್ರಿಸುತ್ತಾರೆ. ಇನ್ನು ಕೆಲವು ಶಾಲೆಗಳಲ್ಲಿ ಉಪಾಧ್ಯಾಯರು ದಡ್ಡರನ್ನೆಲ್ಲಾ ಎದುರಿನಲ್ಲೂ, ಚುರುಕಿನವರನ್ನು ಹಿಂದಿನ ಸಾಲಿನಲ್ಲೂ ಕುಳ್ಳಿರಿಸುತ್ತಾರೆ. ಯಾಕಂದರೆ-ಒಂದನೆ, ದಡ್ಡರು ಹಿಂದಿನ ಬೆಂಚುಗಳಲ್ಲಿದ್ದರೆ ಪಾಠ ನಡೆಯುತ್ತಿರುವಾಗ ನಿದ್ರೆ ಮಾಡುವರು. ಎರಡನೆ, ಶಾಲಾ ಇನ್ಸ್‌ಪೆಕ್ಟರು ಶಾಲೆಯ ಹುಡುಗರನ್ನು ಪರೀಕ್ಷಿಸಲು ಬಂದಾಗ್ಯೆ ವಾಡಿಕೆಯಾಗಿ ಹಿಂದಿನ ಬೆಂಚುಗಳಲ್ಲಿರತಕ್ಕ ಹುಡುಗರನ್ನೇ ಪ್ರಶ್ನೆ ಮಾಡುತ್ತಾರೆ. ಅಂತಹ ಸಮಯಗಳಲ್ಲಿ ಇನ್ಸ್‌ಪೆಕ್ಟರರ ಮನಸ್ಸಿನಲ್ಲಿ ಶಾಲಾ ಉಪಾಧ್ಯಾಯರ ಕೆಲಸಗಳನ್ನು ಕುರಿತು ಒಳ್ಳೆಯ ಅಭಿಪ್ರಾಯ ಹುಟ್ಟಿಸಲು ಈ ಉಪಾಯಗಳನ್ನು ಮಾಡುವುದೂ ಉಂಟು.

ಆದರೆ ನಮ್ಮ ವಸಂತಚಂದ್ರ ಮಹಾಶಯರು ಮಾತ್ರ ಹುಡುಗರಿಗೆ ಸ್ಥಳ ಹಂಚುವುದರಲ್ಲಿ ಈ ತರಹದ ಯಾವುದೊಂದು ನಿಯಮನಿಷ್ಠೆಯನ್ನು ಅನುಸರಿಸುತ್ತಿರಲಿಲ್ಲ. ಅವರ ನಡವಳಿಕೆಯೇ ಬೇರೆ. ಇವರ ಆಡಳಿತದಲ್ಲಿ ಪ್ರಥಮ ಸಾಲಿನ ಬೆಂಚುಗಳನ್ನಲಂಕರಿಸುವ ಹಕ್ಕು ಹುಡುಗರ ಪೂರ್ವಾರ್ಜಿತ ಕರ್ಮಫಲಗಳ ಮೇಲೆ ನಿಂತಿತ್ತು. ಒಂದೋ ಒಳ್ಳೆ ಸೌಂದರ್ಯಯುಕ್ತವಾದ ಮುಖ ಲಕ್ಷಣಗಳಿಂದ ಕೂಡಿರಬೇಕು, ಇಲ್ಲವಾದರೆ ತನಗೆ ತಿಳಿದ ಒಬ್ಬ ಐಶ್ವರ್ಯವಂತನ ಮಗನಾಗಿರಬೇಕು. ಈ ಎರಡು ಗುಣಗಳು ಪ್ರಥಮಾಸನವನ್ನಾರ್ಜಿಸಲು ಬೇಕಾದ ಯೋಗ್ಯತೆಗಳಾಗಿದ್ದವು. ಪ್ರಕೃತಿಯ ಬದಲಾವಣೆಯಿಂದ ಯಾವನಾದರೂ ಕೃಷ್ಣವರ್ಣದವನೋ, ಸುಲಕ್ಷಣ ಮುಖಚ್ಛಾಯೆ ಇಲ್ಲದವನೋ ಆದರೆ ಅವನು ಕುರುಡನೇ ಆಗಲಿ, ಕಿವುಡನೇ ಆಗಲಿ ವಸಂತಚಂದ್ರನ ಸಮೀಪದಲ್ಲಿ ಕುಳ್ಳಿರಲು ಅವನಿಗೆ ಹಕ್ಕಿರದು. ಅಂತವರ ಮುಖವನ್ನು ಸಹಿಸಲು ಅವರಿಗೆ ಆಗುವುದಿಲ್ಲ. ಆದ ಕಾರಣ, ಅಂಥಾ ವಿದ್ಯಾರ್ಥಿಗಳು ವಸಂತಚಂದ್ರನಿಗೆ ಸಮೀಪವಾಗದ ರೀತಿಯಲ್ಲಿ ಎದುರಿನ ಸಾಲಿನಲ್ಲಿ ಕುಳಿತುಕೊಳ್ಳುವ ದಾರಿಯನ್ನು ಕಂಡು ಹಿಡಿದು ಕುಳಿತುಕೊಂಡದ್ದಾದರೆ, ಇದಕ್ಕೆ ವಸಂತಚಂದ್ರನ ಅಡ್ಡಿ ಏನೂ ಇರಲಿಲ್ಲ.

ಯಾರಾದರೂ ಒಬ್ಬನು ಹಟದಿಂದ, ಆ ಆಸನವನ್ನು ಪಡೆದದ್ದಾದರೆ, ಅವನಿಗೆ ನರಕದ ಶಿಕ್ಷೆಯು ಸತ್ತ ಮೇಲೆ ಎಂದು ಕಠಿಣವಾಗಿ ಕಾಣಲಾರದು. ಶಾಲಾ ಕಲೆಗಳಲ್ಲಿ ಉತ್ತೀರ್ಣತೆಯನ್ನು ಪಡೆಯುವ ಆಶೆಯು ಅಲ್ಲಿಗೆ ಕೊನೆಗೊಂಡಿತೆಂದು ಭಾವಿಸಿಯೇ ಆ ಕೆಲಸಕ್ಕಿಳಿಯಬೇಕು.

ಈ ಸ್ವಭಾವದಿಂದ ಕೂಡಿದ ಗುರುವು ತನ್ನ ಕ್ಲಾಸಿನ ಹುಡುಗರಿಗೆ ಸ್ಥಳಗಳನ್ನು ಏರ್ಪಡಿಸಿ, ಕೆಲವರ ಪರಿಚಿತಿಯನ್ನು ಸಂಪಾದಿಸಿಕೊಳ್ಳುವಷ್ಟರಲ್ಲಿ ಶಾಲೆಯ ಪ್ರಥಮ ಗಂಟೆಯಾದುದರಿಂದ ಅವರು ಎದ್ದು ಹೊರಟು ಹೋದರು. ಪ್ರಥಮ ದಿವಸವಾದುದರಿಂದ ಅಲ್ಲಿಗೆ ಆ ದಿವಸದ ಕೆಲಸವು ಪರಿಸಮಾಪ್ತಿಯಾಯಿತು.

ಸಶೇಷ.]

ಯೂನಾನಿ ಫಾರ್ಮಸಿಯ ಉತ್ತಮ ಔಷಧಿಗಳು.

ಉಬ್ಬಸ ಸಂಹಾರಿ (Asthma cure) ಕೆಲವು ದಿನಗಳ ಸೇವನೆಯಿಂದ ಉಬ್ಬಸವನ್ನು ಖಾತ್ರಿಯಾಗಿ ಗುಣಪಡಿಸುತ್ತದೆ. 40 ದಿನದ ಔಷಧಿಗೆ ಕ್ರಯ ರೂ. 5—12—0.

ಅಂಬರ್ ಕೂದಲೆಣ್ಣೆ, ಸುಗಂಧಯುಕ್ತ ಆಮ್ಲಕೇಶ ತೈಲ ಅಲ್ಲದೆ ಎಲ್ಲಾ ರೋಗಗಳಿಗೂ ರಾಮಬಾಣದಂತಿರುವ ಮಾತ್ರೆಗಳೂ, ಚೂರ್ಣಗಳೂ, ಲೇಹಗಳೂ, ತೈಲಗಳೂ ಮತ್ತು ಕೇಶ ತೈಲಗಳೂ ಸಹ ತಯಾರಿರುವುವು.

ಬೇಗನೆ ಬರೆಯಿರಿ:—

ಯಂ. ಯಂ. ಸಿದ್ದೀಕ್,
ಪ್ರೊಪ್ರೈಟರ್,
ಯುನಾನಿ ಔಷಧಶಾಲಾ, ಮಡಿಕೇರಿ, ಕೊಡಗು.

31

ಬಾತ್ಮಿ.

—o0o—

ವೀರಾಜಪೇಟೆ ಸ್ಕೂಲುಗಳ ವಿಚಾರ.

ವೀರಾಜಪೇಟೆ ಮೋಡಲ್ ಮತ್ತು ಹುಡುಗಿಯರ ಶಾಲೆಗಳಲ್ಲಿ ಈಗ ಕೆಲವು ದಿನಗಳಿಂದ ಮಕ್ಕಳಿಗೆ ದಿನಕ್ಕೆ ಎರಡಾವರ್ತಿ ಕೊಯಿನ ಗುಳಿಗೆ ಕೊಡಲು ಆರಂಭಿಸಿರುವರಾಗಿ ತಿಳಿಯುತ್ತೇನೆ. ಎರಡು ಗುಳಿಗೆ ಅಂದರೆ ದಿನಕ್ಕೆ ಎರಡು ಗ್ರೈಯಿನ್ ಆಯಿತು ಕೊಯಿನ ತೆಗೆದುಕೊಂಡರೆ ಯಥೇಚ್ಛವಾಗಿ ಹಾಲು ಉಪಯೋಗಿಸಬೇಕೆಂದು ವಿದ್ಯಾ ಇಲಾಖೆಯವರ ಬುದ್ಧಿವಾದ. ಈಗ ನಾಡಿಕೆಯೊಗಿ ಗ್ರಾಮಗಳಲ್ಲಿ ನೂರರಲ್ಲಿ ಎರಡು ಮಕ್ಕಳಿಗೆ ಕುಡಿಯಲಿಕ್ಕೆ ಸರಿಯಾಗಿ ಹಾಲು ಸಿಕ್ಕುವುದಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ನೂರರಲ್ಲಿ ೯೮ ಮನೆಗಳಲ್ಲಿ ಕರೆಯಲಿಕ್ಕೆ ಇಲ್ಲವೆಂದರೆ ಆಶ್ಚರ್ಯವಾಗಲಾರದು. ಹೀಗಿರುವಾಗ ಮಕ್ಕಳಿಗೆ ದಿನಕ್ಕೆ ಎರಡು ಗುಳಿಗೆ ಕೊಡಿಸುವದು ಯುಕ್ತವಲ್ಲ. ಜ್ವರ ಗೆಡ್ಡೆಯನ್ನು ಹೋಗಲಾಡಿಸಲು ಔಷಧಿಯನ್ನು ಕೊಟ್ಟು ಚಳಿಯನ್ನು ತಂದುಕೊಳ್ಳುವಂತೆ ಮಾಡುವದರಿಂದ ಪ್ರಯೋಜನವಿಲ್ಲ. ಈ ಎರಡು ಶಾಲೆಗಳಲ್ಲಿ ಅನೇಕ ಸಣ್ಣ ಮಕ್ಕಳು ಇದ್ದಾರೆ. ಅಂತವರು ಎರಡು ಗುಳಿಗೆಯನ್ನು ಸಹಿಸಲಾರರು. ವಾರಕ್ಕೆ ಒಂದು ಯಾ ಎರಡು ಸಲ ಕೊಡುವಲ್ಲಿ ಅಡ್ಡಿ ಇಲ್ಲ. ಸಮ್ಮಂಧಪಟ್ಟ ಅಧಿಕಾರಿಗಳು ಒಡನೆ ಇದನ್ನು ನಿಲ್ಲಿಸಿ ಯೋಗ್ಯ ರೀತಿಯಲ್ಲಿ ಕೊಡಿಸುವಂತೆ ಆಯಾಯ ಶಾಲೆಗಳಿಗೆ ಹುಕುಂ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

'ಮಕ್ಕಳ ತಂದೆ.'

ಮಡಿಕೇರಿ ಮೀಟಿಂಗು.

ತಾ 23-9-38ರ ಕೊಡಗು ಪತ್ರಿಕೆಯಲ್ಲಿ 'ಮಡಿಕೇರಿ ಜಮಾನ್ದಾರರ ಸಂಘದ ಹಾಲ್‌ನಲ್ಲಿ ಈ ತಾ. 25ರಲ್ಲಿ ಕೊಡಗಿನ ಭವಿಷ್ಯತ್ತನ್ನು ಕುರಿತು ಚರ್ಚಿಸಲು ಹತ್ತು ಜನರಿಂದ ಕರೆಸಲ್ಪಟ್ಟ ಒಂದು ಮೀಟಿಂಗು ನಡೆಯಿತು. ಕೊಡಗನ್ನು ಮದ್ರಾಸಿಗೆ ಸೇರಿಸಕೂಡದಾಗಿ ಅನೇಕರು ಭಾಷಣ ಮಾಡಿದರೂ ಕಡೆಗೆ ಮದ್ರಾಸಿಗೆ ಸೇರಿಸಬೇಕೆಂದಿದ್ದ ಠರಾವಿನಲ್ಲಿ ಕೆಲವು ತಿದ್ದುಪಡಿಯನ್ನು ಮಿ. ಪುಲಿಯಂಡ ಐಯ್ಯಪ್ಪನವರು ಸೂಚಿಸಿದ್ದನ್ನು ಮದ್ರಾಸಿಗೆ ಸೇರಿಸಲು ಠರಾವು ತಂದ ಪಾರ್ಟಿಯವರು ಒಪ್ಪದ್ದರಿಂದ ಸಂಯೋಜನೆಗೆ ವಿರೋಧವಿದ್ದ ಪಾರ್ಟಿಯವರೆಲ್ಲಾ ಸಭೆಯಿಂದ ಹೋದರು. ಆ ಮೇಲೆ ಅಮಾಲ್ಗಮೇಶನ್ ಪಾರ್ಟಿಯವರೇ ಓಟು ಮಾಡಿದರು' ಎಂದು ಪ್ರಕಟಿಸಿರುವರು. ಇದು ನಿಜವಲ್ಲದ ಸಂಗತಿಯಾಗಿದೆ. ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆಂಬ ಠರಾವನ್ನು ಯಾರೂ ಸಭೆಯ ಮುಂದೆ ಇಟ್ಟಿರುವುದಿಲ್ಲ. ಅಮಾಲ್ಗಮೇಶನ್ ಮಾಡಕೂಡದೆಂದು ನಾಲ್ಕು ಜನರು ಮಾತ್ರ ಮಾತಾಡಿರುವರಲ್ಲದೆ ಮದ್ರಾಸಿನೊಂದಿಗೆ ಸೇರಿಸುವದಾಗಲೀ ಅಥವಾ ಕೂಡದು ಎಂದಾಗಲೀ ಯಾರೂ ಮಾತಾಡಲಿಲ್ಲ. ಓಟು ಮಾಡುವಾಗ ವಿರೋಧವಿದ್ದ ಪಾರ್ಟಿಯವರೆಲ್ಲಾ ಸಭೆಯಿಂದ ಹೊರಗೆ ಹೋದರು ಎಂಬದು ನಿಜವಲ್ಲ. ಓಟು ಮಾಡುವಾಗ ಅಮಾಲ್ಗಮೇಶನಿಗೆ ವಿರೋಧವಿದ್ದವರು ಹಾಜರಿದ್ದರೂ ಯಾರ ವಿರೋಧವಿಲ್ಲದೆ ಸರ್ವ ಸಮ್ಮತಿಯಿಂದ ಠರಾವು ಮಂಜೂರಾಯಿತು. 'ಕೊಡಗು' ಪತ್ರಿಕೆಯ ಸಬ್ ಎಡಿಟರು ಹಾಜರಿದ್ದರು. ಜನರನ್ನು ತಪ್ಪು ಅಭಿಪ್ರಾಯಕ್ಕೆ ಎಳೆಯುವುದಕ್ಕೆ ಉದ್ದೇಶ್ಯದಿಂದ ನಿಜವಲ್ಲದ ಪ್ರಕಟಣೆಯನ್ನು ಮಾಡಿದ್ದಾಗಿದೆ. ಇದು ಪತ್ರಿಕಾ ಕರ್ತರ ನೀತಿ ಮತ್ತು ಧರ್ಮವಾಗಿ ಕಾಣುವುದಿಲ್ಲ ಎಂದು ಹೇಳಲು ನಾನು ವ್ಯಸನಪಡುತ್ತೇನೆ

ಕೆ. ಸುಬ್ಬಯ್ಯ.

ಡಿಸ್ಟ್ರಿಕ್ಟ್ ಬೋರ್ಡು ಆಸ್ಪತ್ರೆ.

ವಾಚಕ ಮಹಾಶಯರೆ,

ಕಾಂಗ್ರೆಸ್ ಪಾರ್ಟಿಯವರು ಡಿ. ಬೋರ್ಡು ಆಡಳಿತ ಕೈಗೊಂಡ ಮೇಲೆ ಜನರ ಕಷ್ಟ ಸುಖವನ್ನರಿತು ಸಂತೆ ನಡೆಯುವ ಸ್ಥಳಗಳಲ್ಲಿರುವ ಆಸ್ಪತ್ರೆಗಳ ಸಮಯದ ನಿರ್ಣಯವನ್ನು ಜನರ ಹಿತಕ್ಕನುಸಾರವಾಗಿ ಸಂತೆ ಕೂಡುವ ದಿವಸಗಳಲ್ಲಿ ಬದಲಾವಣೆ ಮಾಡಲ್ಪಟ್ಟಿರುವದು ತಿಳಿದು ಯಾರಿಗೆ ತಾನೆ ಸಂತೋಷವಾಗದಿರದು. ಇದರಂತೆಯೆ ಇನ್ನೂ ಕೆಲವು ತೊಂದರೆಗಳ ಪರಿಹಾರಕ್ಕೆ ಗಮನಕೊಡಬೇಕಾಗಿ ಕೋರುತ್ತೇವೆ.

ಒಬ್ಬರೇ ಒಬ್ಬರು ಸಬ್ ಅಸಿಸ್ಟೆಂಟ್ ಸರ್ಜನರು ಇರುವ ಆಸ್ಪತ್ರೆಗಳಲ್ಲಿ ಅವರಿಗೆ ಒಂದು ದಿನಕ್ಕಿಂತ ಹೆಚ್ಚಿನ ರಜೆ ಕೊಡುವಾಗ ಬದಲಿಗೆ ಒಬ್ಬರು ಚಾರ್ಜನಲ್ಲಿ ಇಲ್ಲದೆ ಹೋಗುವದರಿಂದ ಇವರನ್ನು ನಂಬಿ ಗ್ರಾಮಾಂತರಗಳಿಂದ ಬರುವ ರೋಗಿಗಳು ಮತ್ತು ಹೆರಿಗೆ ಹೆಂಗಸರು ತುಂಬಾ ಕಷ್ಟ ಮತ್ತು ತೊಂದರೆಗಳಿಗೆ ಈಡಾಗುತ್ತಲಿದ್ದಾರೆ.

ನಾಡುಗಳಿರುವ ಆಸ್ಪತ್ರೆಗಳಲ್ಲೂ ಕೂಡ ಸಬ್ ಅಸಿಸ್ಟೆಂಟ್ ಸರ್ಜನರು ರಜೆಯಲ್ಲಿ ಹೋಗುವಾಗ ಬದಲಿಗೆ ಒಬ್ಬರ ನೇಮಕ ಮಾಡದೆ ಹೋಗುವದರಿಂದ ವಾರ್ಡನಲ್ಲು ಇರುವ ಕಾಯಿಲಸ್ಥರು ಇರಬೇಕೆಂದು ಬಂದವರು ಮತ್ತು ಹೆರಿಗೆಗೆ ಬಂದ ಹೆಂಗಸರು ಸಹ ತುಂಬಾ ತೊಂದರೆ ಮತ್ತು ಕಷ್ಟಕ್ಕೆ ಈಡಾಗುತ್ತಲಿರುವದರಿಂದ ಮುಂದಕ್ಕಾದರು ಇಂಥಾ ತೊಂದರೆಗಳಿಗೆ ಈಡಾಗದಂತೆ ಮಾಡುವರೆ?

ನರಸುಗಳು (ಸೂಲಗಿತಿಯರು) ಹೆರಿಗೆ ಕಾಲದಲ್ಲಿ ಇವರ ಸಹಾಯ ಅಪೇಕ್ಷಿಸಿದರೆ ಚಾರ್ಜು ಕೊಡಬೇಕೋ? ಬೇಡವೋ? ಎಂಬದನ್ನು ತಿಳಿಯದು. ಬಡ ಗ್ರಾಮವಾಸಿಗಳು, ಇವರ ಸಹಾಯ ಅವಶ್ಯವಿದ್ದರೂ ಪಡೆಯಲು ಹಿಂಜರಿದು ಹೆರಿಗೆ ಕಾಲದಲ್ಲಿ ಮುಂದಕ್ಕಾದರು ಯಾವ ವಿಧದಲ್ಲಿ ಇವರ ಸಹಾಯ ಪಡೆಯಬಹುದೆಂಬ ವಿವರಗಳನ್ನು ಜನತೆಗೆ ತಿಳಿಯಪಡಿಸಿ ತನ್ಮೂಲಕ ಸೂಲಗಿತ್ತಿಯರ ಸಹಾಯ ಪಡೆಯುವಂತೆ ಮಾಡಬೇಕಾಗಿ ಹಾರೈಸುತ್ತೇವೆ. ಸೂಲಗಿತ್ತಿಯರ ಸಹಾಯಗಳನ್ನು ಅಪೇಕ್ಷಿಸಿದ ಅನುಕೂಲಸ್ಥರಿನ್ನು ಕೇಳಿದರೆ ಬಹುಮಾನಾರ್ಥವಾಗಿಯೋ ಏನೋ ಎಂಬಂತೆ ಚಾರ್ಜುಗಳು ಕೊಡಬೇಕೆಂದು ಹೇಳುವದು ಕೇಳಬರುತ್ತೆ. ಇದರ ಪರಿಣಾಮವಾಗಿ ಎಂಥಾ ಕಷ್ಟಕಾಲದಲ್ಲೂ ಕೂಡ ಗರೀಬರು ಅವರ ಸಹಾಯ ಕೋರಲು ಹೋಗದೆ ಮರಣಕ್ಕೆ ತುತ್ತಾಗುವ ಸಂದರ್ಭವು ಸಹ ಇಲ್ಲವೆಂತ ಹೇಳಲಿಕ್ಕಾಗುವದಿಲ್ಲ.

' ಹಿತೈಷಿ.'

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ 52,54,750 ರೂ. ಭರವಸೆಯ 4689 ಪ್ರಪೋಸಲ್‌ಗಳು ಸಿಕ್ಕಿವೆ. ಅವರಲ್ಲಿ ಹಿಂದಿನ ವರ್ಷದ ಪೂರ್ತಿಯಾಗದ 1447 ಪ್ರಪೋಸಲ್‌ಗಳ ಬಾಬ್ತು 40,67,650 ರೂ. ಗಳ ಬಗ್ಗೆ ವರ್ಷಾವಧಿ 2,31,959-6-0 ರೂ. ವಿಮಾ ಕಂತು ಬರುತ್ತೆ. ಕಂಪೆನಿಯಿಂದ ಭರವಸೆ ಪಡೆದಿರುವ ಹಣ ರೂ. 39,38,150. ಬಾಕಿ ರೂ. 1,29,500 ಪುನಹ ಭರವಸೆ ಕೊಟ್ಟದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುವರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತಿವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ 4,13,775 ಹೆಚ್ಚಿದೆ

ಈ ಕೆಳಗಿನ ಒಳ್ಳೆ ಸಂಗತಿಗಳಿಂದ ಲಭಿಸಿದ ತೃಪ್ತಿಯನ್ನು ಮೆಂಬರುಗಳೊಡನೆ ಅನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ

ಇಂಡಿಯಾ ಸರ್ಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪೆನಿಗಳಿವೆಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಶೂರೆನ್ಸ್ ಇಯರ್ ಬುಕ್' ಎಂಬುವುದರಿಂದ ತಿಳಿದುಬರುತ್ತದೆ ಈ ಕಂಪೆನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪೆನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ವರೆಗೆ ಶ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೇಯದಾಗಿದೆ ಒಂದನೇಯದಾದ ಕಂಪೆನಿಯು ಇದಕ್ಕಿಂತ 25 ವರ್ಷಗಳ ಮುಂಚೆ ಸ್ಥಾಪಿಸಲ್ಪಟ್ಟದ್ದಾಗಿದೆ.

ವಿಮಾ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮಾ ಕಂತುಗಳ ಆದಾಯವು (ಪುನಹ ಭರವಸೆ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮಾ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ವರದಿ ವರ್ಷದ ವಿಮಾ ಕಂತಿನ ಆದಾಯವು ರೂ 3,66,198-13-0, ಗತ ವರ್ಷದ್ದು 2,36,767-6-6 ಆಗಿದೆ

ಜೀವವಿಮಾ ಫಂಡು:—ಈ ಕಂಪೆನಿಯ ಜೀವ ವಿಮಾ ಫಂಡು ರೂ. 75,258-14-9ರಿಂದ, ವ್ಯವಸ್ಥಾ ಕ್ರಮಕ್ಕೆ ಮತ್ತು ಇತರ ಖರ್ಚುಗಾಗಿ ರೂ. 45,037-8-4 ವಜಾ ಕಳೆದು ರೂ. 21,00,421-1-3ಕ್ಕೆ ಏರಿದೆ. ಈ ಕೆಳಗೆ ಅದರ ತಪಶೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿಮಾ ಕಂತು	ಜೀವ ವಿಮಾ ಫಂಡು.
1ನೇ ವರ್ಷದ	ರೂ. 1,46,949	ರೂ. 15,619
2ನೇ ವರ್ಷದ	,, 2,36,767	,, 75,259
3ನೇ ವರ್ಷದ	,, 3,66,199	,, 2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪೆನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ ಈ ಅಭಿವೃದ್ಧಿಯು ಭಾರತ ವಿಮಾ ಕಂಪೆನಿಗಳ ವಾರ್ಷಿಕ ವೃತ್ತಾಂತದಲ್ಲಿ ಹೊಗಳಲಿಕ್ಕಾದದ್ದೇ ಆಗಿದೆ.

ಭಾರತ ಜೀವವಿಮಾ ಕಂಪೆನಿಗಳ ಅಕ್ಟಿನ ಮೇರೆ ಠೇವಣಾತಿ:—ಈ ಖ್ಯಾನೂನು ಮೇರೆ ಠೇವಣಾತಿ ಮಾಡತಕ್ಕದಿದ್ದ ರೂ, 2 ಲಕ್ಷವನ್ನು ಪೂರ್ತಿಯಾಗಿ ಡಿಪಾಜಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷವುಳ್ಳವರಾಗಿರುವರು.

ಸಿ ಯಂ. ತಿಮ್ಮಯ್ಯ,

(52-17) ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟು.

ಮಾರಾಟಕ್ಕಿದೆ.

ಈ ಕೆಳಗೆ ನಮೂದಿಸಿದ ಚಹರೆಯ ಕೊಡಗು ಸರ್ಕಾರದ ಒಂದು ಮುರಾ ಜಾತಿಯ ಬೀಜದ ಕೋಣವು ಮಾರಾಟಕ್ಕಿದೆ. ಇದು ಗಾಡಿಗೆ ಕಟ್ಟುವುದಕ್ಕೂ, ನೀರು ಸಾಗಿಸುವ ಪಕಾಲಿ ಕೆಲಸಕ್ಕೂ ಬಹಳ ಪ್ರಯೋಜನವಾಗುತ್ತದೆ. ಇದರ ಬೆಲೆ ಹೆಚ್ಚು ಕಡಿಮೆ ಒಂದು ನೂರು ರೂಪಾಗಳು. ಖಾಯಿಸ್‌ದಾರರು ಒಡನೆ ಕೊಡಗು ಡಿಸ್ಟ್ರಿಕ್ಟ್ ವೆಟರಿನರಿ ಆಫೀಸರ್, ಮಡಿಕೇರಿ, ಇವರ ವಿಳಾಸಕ್ಕೆ ಬರೆದುಕೊಳ್ಳಬಹುದು. ಈ ಕೋಣವು ಈಗ ಫ್ರೇಜರ್‌ಪೇಟೆ ಸರ್ಕಾರಿ ಗೂಳಿಗಳನ್ನು ಸಾಕುವ ಫಾರಂನಲ್ಲಿದೆ.

ಇದರ ವಿವರ.

1. ವಯಸ್ಸು-5 ವರ್ಷ.
2. ಎತ್ತರ-4 ಅಡಿ 5 ಇಂಚು.
3. ದಪ್ಪ-7 ಅಡಿ.
4. ಉದ್ದ-7 ಅಡಿ.
5. ಭಾರ-1,200 ಪೌಂಡುಗಳು

ಸಿ. ಪಿ. ಸೋಮಣ್ಣ,
ಡಿಸ್ಟ್ರಿಕ್ಟ್ ವೆಟರಿನರಿ ಆಫೀಸರ್,
4-4 ಮಡಿಕೇರಿ

ಮಡಿಕೇರಿ ಮೀಟಿಂಗು.

ತಾ. 23-9-38ರಲ್ಲು ಮಡಿಕೇರಿಯಲ್ಲಿರುವ ಜಮೀನ್ದಾರರ ಸಂಘದ ಹಾಲ್‌ನಲ್ಲು ಒಂದು ಪಬ್ಲಿಕ್ ಮೀಟಿಂಗು ನಡೆಯಿತು. ಮಾಜಿ ಮತ್ತು ಈಗಿನ ಕೌನ್ಸಿಲು ಮೆಂಬರುಗಳು, ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳು, ಮುನ್ಸಿಪಲ್ ಮೆಂಬರುಗಳು, ನೋಟಿಫೈಡ್ ಏರಿಯದ ಮೆಂಬರುಗಳು, ಗೌರವ ಮೇಜಿಸ್ಟ್ರೇಟರುಗಳು, ರಾಜಕೀಯ ವಿಚಾರದಲ್ಲಿ ಮುತುವರ್ಜಿ ಇರುವವರು ಮತ್ತು ಇತರ ಮಹನೀಯರುಗಳಿಗೆ ಆಮಂತ್ರಣ ಕಳುಹಿಸಿದ ಮೇರೆ ಕೊಡಗಿನ ಎಲ್ಲಾ ಕಡೆಗಳಿಂದ ಅನೇಕ ಮಹನೀಯರುಗಳು ಮೀಟಿಂಗಿಗೆ ಬಂದಿದ್ದರು. ಕಾರಣಾಂತರದಿಂದ ಮಂಗಳೂರಿನ ಶ್ರೀಯುತ ಕಾರಂತ ಎಂ ಎಲ್ ಎ ಯವರು ಬರಲು ಅನಾನುಕೂಲವಾದ್ದರಿಂದ ರಾ. ಬಾ. ಕೋಡಿಮಣಿಯಂಡ ಸುಬ್ಬಯ್ಯನವರು ಸರ್ವಸಮ್ಮತದಿಂದ ಅಧ್ಯಕ್ಷಸ್ಥಾನವನ್ನು ವಹಿಸಿದರು. ಅಧ್ಯಕ್ಷರು ಸಭಿಕರಿಗೆ ವಂದಿಸಿ, ಇಂದಿನ ಕಾರ್ಯಕ್ರಮವನ್ನು ಸಾಂಗವಾಗಿ ನಡಿಸಲು ಸಭೆಯವರು ಸಹಾಯ ಕೊಡಬೇಕೆಂದು ಹೇಳಿ ಮೀಟಿಂಗಿನ ಉದ್ದೇಶವನ್ನು ಸಭೆಯವರಿಗೆ ಹೇಳಬೇಕೆಂದು ಕೇಳಿಕೊಂಡರು. ಮ ಯಸ್ ಸೋಮಣ್ಣನವರು ಮೀಟಿಂಗಿನ ಉದ್ದೇಶವನ್ನು ವಿವರಿಸಿ ಹೇಳಿದರು.

ಕಾಂಗ್ರೆಸ್ ಮಹಾಸಭೆಯು ಹರಿಪುರದಲ್ಲಿ ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆಂದು ತೀರ್ಮಾನ ಮಾಡಿದರೂ ಆ ವಿಷಯ ಕೊಡಗಿನ ಜನರ ಅಭಿಪ್ರಾಯವನ್ನು ಕೇಳದೆ ಮಾಡಿದ್ದು ಸರಿಯಲ್ಲ. ಈ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಕೇಳದೆ ತೀರ್ಮಾನ ಮಾಡಿದ್ದು ನಮಗೆ ವ್ಯಾಪಿಸುತ್ತದೋ ಮತ್ತು ನಮ್ಮ ಅಭಿಪ್ರಾಯವನ್ನು ಕಾಂಗ್ರೆಸಿಗೆ ತಿಳಿಸುವ ಹಕ್ಕು ನಮಗಿಲ್ಲವೋ ಎಂಬದನ್ನು ತಿಳಿಸಬೇಕಾಗಿ ಬಿದ್ದಂಡ ಸುಬ್ಬಯ್ಯನವರು ಕೇಳಿದರು.

ಕೊಡಗನ್ನು ಪ್ರತ್ಯೇಕವಾಗಿ ತೆಗೆದುಕೊಂಡು ಮದ್ರಾಸಿಗೆ ಸೇರಿಸಬೇಕೆಂದು ಕಾಂಗ್ರೆಸಿನವರು ತೀರ್ಮಾನ ಮಾಡಿರುವದಿಲ್ಲ. ಬ್ರಿಟಿಷ್ ಇಂಡಿಯಾದಲ್ಲಿ ಗವರ್ನರುಗಳ ಮತ್ತು ಚೀಫ್ ಕಮೀಷನರುಗಳ ಆಡಳಿತಕ್ಕೊಳಪಟ್ಟಿರುವ ಪ್ರಾಂತಗಳು ಇವೆ. ಗವರ್ನರುಗಳ ಪ್ರಾಂತ್ಯಗಳಲ್ಲಿ ಪ್ರಾಂತೀಕ ಸ್ವರಾಜ್ಯವು 1935ನೇ ಆಕ್ಟು ಪ್ರಕಾರ ಜಾರಿಗೆ ಬಂದಿರುವದು. ಚೀಫ್ ಕಮೀಷನರುಗಳ ಆಡಳಿತದಲ್ಲಿರುವ ಚಿಕ್ಕ ಪ್ರಾಂತ್ಯಗಳಲ್ಲಿ ಪ್ರಾಂತೀಕ ಪ್ರಜಾ ಜವಾಬ್ದಾರಿ ಆಡಳಿತವು ಜಾರಿಗೆ ಬಂದಿರುವದಿಲ್ಲ. ಬ್ರಿಟಿಷ್ ಇಂಡಿಯಾದಲ್ಲಿ ಎರಡು ತರದ ಆಡಳಿತಗಳು ಇರುವದರಿಂದ ಬ್ರಿಟಿಷ್ ಇಂಡಿಯಾದ ಒಗ್ಗಟ್ಟಿಗೆ ಕೊರತೆ ಬರುವದರಿಂದ 1937ರಲ್ಲಿ ಫೈಜಪುರದಲ್ಲಿ ಕಾಂಗ್ರೆಸ್ ಮಹಾಸಭೆಯು ಬ್ರಿಟಿಷ್ ಇಂಡಿಯಾದಲ್ಲಿರುವ ಎಲ್ಲಾ ಚಿಕ್ಕ ಪ್ರಾಂತ್ಯಗಳಿಗೆ ಅನ್ವಯಿಸುವಂತ ಜನರಲ್ ಪಾಲಿಸಿಯನ್ನು ಅನುಸರಿಸಿ ಚೀಫ್ ಕಮಿಷನರುಗಳ ಆಡಳಿತದಲ್ಲಿರುವ ಪ್ರಾಂತ್ಯಗಳು ಇರಕೂಡದೆಂದು ತೀರ್ಮಾನ ಮಾಡಿದರು. ಫೈಜಪುರದಲ್ಲಿ ನಡೆದ ಮಹಾ ಸಭೆಗೆ ಕೊಡಗಿನಿಂದ ಮೆ. ಗಳಾದ ಪಂದ್ಯಂಡ ಬೆಳ್ಯಪ್ಪನವರು ಮತ್ತು ಅಪ್ಪಚೆಟ್ಟೋಳಂಡ ಮೊಚಯ್ಯನವರು ಪ್ರತಿನಿಧಿಗಳಾಗಿ ಹೋಗಿದ್ದರು. ಕಾಂಗ್ರೆಸಿನ ಈ ತೀರ್ಮಾನಕ್ಕೆ ಕೊಡಗಿನ ಕೆಲವು ಕಾಂಗ್ರೆಸ್ಸಿನವರು ಅವರ ಸ್ವಂತ ಅರ್ಥವನ್ನು ಕೊಟ್ಟು ಜನರಲ್ಲಿ ತಪ್ಪು ಅಭಿಪ್ರಾಯವನ್ನು ಹರಡುತ್ತಿದ್ದರು. ಚಿಕ್ಕ ಪ್ರಾಂತ್ಯಗಳ ಕುರಿತು ಫೈಜಪುರದಲ್ಲಿ ಕಾಂಗ್ರೆಸು ಮಾಡಿದ ಉದ್ದೇಶವೇನು ಎಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರನ್ನು ಕೇಳಿದುದರ ಮೇಲೆ ಬ್ರಿಟಿಷ್ ಇಂಡಿಯಾದಲ್ಲಿರುವ ಎಲ್ಲಾ ಚಿಕ್ಕ ಪ್ರಾಂತ್ಯಗಳಿಗೆ ಅನ್ವಯಿಸುವ ಜನರಲ್ ಪಾಲಿಸಿಯನ್ನು ಅನುಸರಿಸಿ ಬ್ರಿಟಿಷ್ ಇಂಡಿಯಾದಲ್ಲಿ ಎರಡು ತರದ ಆಡಳಿತಗಳು ಇರಕೂಡದು, ಇವು ಒಡಕನ್ನುಂಟು ಮಾಡಲು ಆಸ್ಪದ ಕೊಡುತ್ತವೆ. ಪ್ರಾಂತೀಕ ಜವಾಬ್ದಾರಿ ಸರಕಾರವನ್ನು ಈ ಚಿಕ್ಕ ಪ್ರಾಂತ್ಯಗಳಲ್ಲಿ ಸ್ಥಾಪಿಸಲು ಸಾಧ್ಯವಿಲ್ಲ. ಆದ್ದರಿಂದ ಇನ್ನು ಮುಂದೆ ಚೀಫ್ ಕಮಿಷನರು ಇರುವ ಪ್ರಾಂತ್ಯಗಳು ಇರಕೂಡದೆಂದೂ, ಅಜ್ಮೀರ್, ಮೆರವಾರ್ ಪ್ರಾಂತ್ಯಗಳು ಸಂಯುಕ್ತ ಪ್ರಾಂತ್ಯದೊಡನೆಯೂ, ಕೊಡಗು ಭಾಷಾವಾರು ತತ್ವದ ಮೇರೆ ಆಗಬೇಕಾದ ಕರ್ನಾಟಕ ಪ್ರಾಂತ್ಯ ಆಗುವವರೆಗೆ ಮದ್ರಾಸಿನೊಂದಿಗೆ ಸೇರಬೇಕೆಂದು ತೀರ್ಮಾನ ಮಾಡಿರುವದಲ್ಲದೆ ಕೊಡಗನ್ನು ಪ್ರತ್ಯೇಕವಾಗಿ ತೆಗೆದುಕೊಂಡು ಈ ತೀರ್ಮಾನ ಮಾಡಿರುವದಿಲ್ಲವೆಂದೂ, ಕಾಂಗ್ರೆಸಿನ ತೀರ್ಮಾನವು ಎಲ್ಲಾ ಚಿಕ್ಕ ಪ್ರಾಂತ್ಯಗಳಿಗೆ ಅನ್ವಯಿಸುವ ಜನರಲ್ ಪಾಲಿಸಿಯ ಮೇಲೆ ಆಗಿರುವದೆಂದು ಮ. [illegible] ಚಂಡ ಬೆಳ್ಯಪ್ಪನವರು ವಿವರಿಸಿ ಹೇಳಿದರು. ಹರಿಪುರದ ತೀರ್ಮಾನವು ಕೊಡಗಿನ ಮ[illegible]ಟ್ಟಿಗೆ [illegible] ಎಂದೂ, ಚಿಕ್ಕ ಪ್ರಾಂತ್ಯಗಳಿಗೆ [illegible] ತೀ[illegible] [illegible] ಪ್ರಾತಿನಿಧಿ[illegible] [illegible] ಮಹನೀ[illegible] [illegible]ರು.

ಕೊಡಗಿನ ರಾಜಕೀಯ ಭವಿಷ್ಯತ್ತನ್ನು [illegible] ತೀರ್ಮಾನಿಸ[illegible]ಲು ಈ ಮೀಟಿಂಗು ಸೇರಿಸಲ್ಪಟ್ಟಿದೆ. ಈಗಿನ ಆರ್ಥಿಕ ಸ್ಥಿತಿಗೆ ಪ್ರಕಾರ ಕೊಡಗನ್ನು ಪ್ರತ್ಯೇಕವಾಗಿ ಪ್ರಜಾ ಜವಾಬ್ದಾರಿ ಸರ್ಕಾರ ನಡಿಸಲು ಸಾಧ್ಯವೇ, ಅಥವಾ ಆಡಳಿತವನ್ನು [illegible] ಪ್ರಯೋಜನವಾಗುವ ರೀತಿಯಲ್ಲಿ ನಡಿಸಲು ಸಾಧ್ಯವೋ, ಅದನ್ನು ಅ[illegible] ಮಾಡಿದರೆ ಕೈತನಿಗೆ ಕ್ಷೇಮ ದೊರಕುವದೇ ಎಂಬವನ್ನು ತಕ್ಕ ಕಾರಣ ಕೊಟ್ಟು ಚರ್ಚಿಸಿ ತೀರ್ಮಾನಕ್ಕೆ ಬರಬೇಕಾಗಿದೆ ಎಂದು ಅಧ್ಯಕ್ಷರು ತಿಳಿಸಿದರು.

ಮೀಟಿಂಗು ನೋಟೀಸಿನಲ್ಲಿ ಬರೆದಿರುವ ಕೆಲವು ಶಬ್ದಗಳನ್ನು ತೆಗೆಯಬೇಕು, ಕೊಡಗಿನ ಭವಿಷ್ಯತ್ತನ್ನು ಕುರಿತು ಮೀಟಿಂಗು ಮಾಡಲು ಇಷ್ಟು ತುರಿತವೇನು. ಹರಿಪುರದಲ್ಲಿ ಕಾಂಗ್ರೆಸು ಮಂಜೂರು ಮಾಡಿದ ತೀರ್ಮಾನವನ್ನು ರದ್ದು ಮಾಡಬೇಕೆಂದು ಕೇಳಲು ಕೊಡಗಿನಿಂದ ಡೆಪ್ಯುಟೇಷನ್ ಹೋಗಿಲ್ಲ, ಕೊಡಗನ್ನು ಪ್ರತ್ಯೇಕವಾಗಿಟ್ಟು, ಪ್ರಜಾ ಜವಾಬುದಾರಿ ಆಡಳಿತ ನಡಿಸುವ ವಿಷಯದಲ್ಲಿ ಜನರ ಅಭಿಪ್ರಾಯ ಕೇಳಲು ಅನುಮತಿ ಕೊಡಬೇಕೆಂದು ಕೇಳಲು ಹೋಗಿರುವದೆಂದು ಮೆ. ಪಿ. ಜಿ. ಐಯ್ಯಪ್ಪನವರು ಮತ್ತು ಬಿದ್ದಂಡ ಸುಬ್ಬಯ್ಯನವರು ಹೇಳಿದರು. ಮೆ. ಯಸ್ ಸೋಮಣ್ಣನವರು ಇದಕ್ಕೆ ಜವಾಬಾಗಿ ತಾ. 22-7-38ರ ಕೊಡಗು ಪತ್ರಿಕೆಯಲ್ಲಿ ಕೊಡಗು ಜಿಲ್ಲಾ ಕಾಂಗ್ರೆಸು ಕಮಿಟಿ ಮೀಟಿಂಗಿನ ನಡವಳಿಕೆಗಳನ್ನು ಓದಿದರು.

1 'ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆಂಬ ಕೋರಿಕೆ ಕೊಡಗಿನ ಜನರಲ್ಲಿಲ್ಲದಿದ್ದರೂ ಇಲ್ಲಿಯ ಜನರ ಈ ತರಹದ ಕೋರಿಕೆಗೆ ಕಾಂಗ್ರೆಸು ಸಭೆಯು ಹರಿಪುರ ಅಧಿವೇಶನದಲ್ಲಿ ಒತ್ತಾಯಿಸುತ್ತಿದ್ದಕ್ಕೆ ಈ ಕಮಿಟಿಯು ವಿಷಾದಿಸುತ್ತದೆ, ಮತ್ತು ಈ ಠರಾವನ್ನು ರದ್ದು ಮಾಡಬೇಕೆಂದು ಕಾಂಗ್ರೆಸ್ ಸಭೆಯನ್ನು ಅತಿ ವಿನಯದಿಂದ ಕೇಳಿಕೊಳ್ಳುತ್ತದೆ.

2 ಕೊಡಗಿನ ಪೂರ್ಣ ಪ್ರಾಂತೀಕ ಸರ್ಕಾರ ಪಡೆಯಲು ಕೂಡಲೆ ಚಳವಳಿ ಹೂಡಬೇಕೆಂದೂ, ಈ ಚಳವಳಿಯನ್ನು ಯಾವ ರೀತಿ ನಡಿಸಬೇಕೆಂಬ ವಿಚಾರದಲ್ಲಿ ಕಾಂಗ್ರೆಸು ವರ್ಕಿಂಗ್ ಕಮಿಟಿಯ ಬುದ್ಧಿವಾದ ಕೇಳಬೇಕೆಂದೂ,' ಮತ್ತು ತಾ. 26-8-38ರ ಕೊಡಗು ಪತ್ರಿಕೆಯಲ್ಲಿ ಪ್ರಕಟವಾದ ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯ ತೀರ್ಮಾನಗಳನ್ನು ಓದಿ ಡೆಪ್ಯುಟೇಷನಿನ ಉದ್ದೇಶವನ್ನು ವಿವರಿಸಿ ಹೇಳಿದರು.

ಕೊಡಗು ಪ್ರತ್ಯೇಕವಾಗಿರುವದು ಒಳ್ಳೇದು. ಬೇರೆ ಪ್ರಾಂತ್ಯದೊಂದಿಗೆ ಸೇರಿದರೆ ಕೇಡಾಗುತ್ತದೆ. ನಮ್ಮ ಮನೆಯಲ್ಲಿ ಇರಲು ಸಾಧ್ಯವಿಲ್ಲದೆ ಬೇರೊಬ್ಬರ ಮನೆಯಲ್ಲಿ ನಮಗೆ ಸುಖ ಸಿಕ್ಕಿಯಾತೇ? ಪರದೇಶಗಳಲ್ಲಿ ಕಾಣುವಂತೆ ಇಲ್ಲಿಯ ಜನರು ಭಿಕ್ಷೆ ಬೇಡಿ ಜೀವನ ಮಾಡುತ್ತಿಲ್ಲ. [illegible] ಸೇರಿದರೆ ನಮ್ಮ ಹೆಸರೇ ಇಲ್ಲದಾಗಿ ನಮಗೆ ಕೇಡಾಗುತ್ತದೆಂದೂ [illegible] ಮದ್ರಾಸಿನವರಿಗೆ [illegible] ಇಲ್ಲವೆಂದೂ ಮೆ. ಕೇಚಂಡ[illegible] [illegible]ಣ್ಣನವರು ಮಾತಾಡಿದರು. ಮೆ. ಬಿದ್ದಂಡ ಸುಬ್ಬಯ್ಯನವರು ಮತ್ತು ಪುಲಿಯಂಡ ಐಯ್ಯಪ್ಪನವರು ಕೊಡಗು ಪ್ರತ್ಯೇಕವಾಗಿ ಇರಬೇಕೆಂದೂ ಅಮಾಲ್ಗಮೇಷನ್ [illegible]ಡವೆಂದೂ, ಕೆಲವು ಕಾರಣಗಳ ಕೊಟ್ಟು ಮಾತಾಡಿದರು. ಮೆ. [illegible]ಚಂಡ ಪೆಮ್ಮಯ್ಯನವರು ಜನರ ಅಭಿಪ್ರಾಯವನ್ನು ಕೇಳಿ ನಂತರ ತೀರ್ಮಾನ ಮಾಡಬೇಕೆಂದರು. ಮೆ. ಕೀರಿಯಂಡ ಕಾಳಪ್ಪನವರು ನಂತರ ಮುಂದೆ ಮಾತಾಡಿದ್ದರೂ, ಅಮಾಲ್ಗಮೇಷನ್ ಮಾಡಕೂಡದೆಂಬ ತಮ್ಮ ಅಭಿಪ್ರಾಯವನ್ನು ಸೂಚಿಸುತ್ತಿದ್ದರು.

ಕೊಡಗು ಪ್ರತ್ಯೇಕ ಪ್ರಾಂತ್ಯವಾಗಿಟ್ಟು ಆಡಳಿತವನ್ನು ಜನರಿಗೆ ಪ್ರಯೋಜನವಾಗುವ ರೀತಿಯಲ್ಲಿ ನಡಿಸಲು ಸಾಧ್ಯವಿಲ್ಲ. ಹೆಚ್ಚಿಗೆ ಸಬ್ವೆನ್ಶನು ಕೊಡಲಾಗುವದಿಲ್ಲವೆಂದು ಮೊನ್ನೆ ಡಿಲ್ಲಿಯಲ್ಲಿ ನಡೆದ ಕೌನ್ಸಿಲ್ ಆಫ್ ಸ್ಟೇಟ್ ಮೀಟಿಂಗಿನಲ್ಲಿ ಇಂಡಿಯಾ ಸರಕಾರವು ಹೇಳಿರುವದು. ಆದ್ದರಿಂದ ಕೊಡಗನ್ನು ದೊಡ್ಡ ಪ್ರಾಂತ್ಯದೊಂದಿಗೆ ಸೇರಿಸಬೇಕು. ಯಾವ ಪ್ರಾಂತ್ಯದೊಂದಿಗೆ ಸೇರಿಸಬೇಕೆಂಬದನ್ನು ಜನರ ಅಭಿಪ್ರಾಯ ಕೇಳಿ ಹಿಂದಳಿಂದ ತೀರ್ಮಾನಿಸಬಹುದು. ಕೊಡಗು ಬೇರೆ ದೊಡ್ಡ ಪ್ರಾಂತ್ಯದೊಂದಿಗೆ ಸೇರಬೇಕೆಂದು ತಕ್ಕ ಕಾರಣಗಳನ್ನು ಕೊಟ್ಟು ಮೆ. ಗಳಾದ ಮನೆಯಪಂಡ ಬೆಳ್ಯಪ್ಪನವರು, [illegible]ದ ಮುತ್ತಣ್ಣನವರ, ರಾ. ಸಾ. [illegible] ಐಯ್ಯಣ್ಣನವರು, [illegible] [illegible]ಪ್ಪನವರು, [illegible]ರಿಯಂಡ ಮಾದಪ್ಪನವರು, ನಡಿಕೇರಿಯಂಡ ಸೋಮಯ್ಯನವರು, ಕೊಂಗೆಟ್ಟಿರ ಅಪ್ಪಯ್ಯನವರು, [illegible] ಯಂ [illegible]ರವರು, ಐ [illegible] ಸುಬ್ಬಯ್ಯನವರು ಮತ್ತು ಇನ್ನೂ ಕೆಲವು ಮಹನೀಯರುಗಳು ಮಾತಾಡಿದರು. ನಂತರ ಸಭೆಯವರ ಮುಂದೆ ಈ ಕೆಳಗಿನ ಠರಾವು ಇಡಲ್ಪಟ್ಟಿತು.

ಕೊಡಗಿನ ರಾಜಕೀಯ ಭವಿಷ್ಯತ್ತನ್ನು ಕುರಿತು ಚರ್ಚಿಸಲು ಕೊಡಗು ಜಮೀನ್ದಾರ ಸಂಘದ ಹಾಲಿನಲ್ಲು ಲೆಜಿಸ್ಲೇಟಿವ್ ಕೌನ್ಸಿಲು ಮೆಂಬರುಗಳು, ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳು, ಮಾಜಿ ಕೌನ್ಸಿಲು ಮತ್ತು ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳು, ಮುನಿಸಿಪಲ್ ಮೆಂಬರುಗಳು, ನೋಟಿಫೈಡ ಏರಿಯಾದ ಮೆಂಬರುಗಳು, ಗೌರವ ಮೇಜಿಸ್ಟ್ರೇಟರುಗಳು ಮತ್ತು ಇತರ ದೇಶಹಿತೈಷಿಗಳು-ಇವರುಗಳಿಗೆ ಕೊಟ್ಟ ಆಮಂತ್ರಣದ ಮೇರೆ ತಾ. 23 9 38ರಲ್ಲು ಸೇರಿದ ಈ ಸಾರ್ವಜನಿಕ ಸಭೆಯು ಕೊಡಗು ದೇಶದ ಉತ್ಪತ್ತಿಯು ದಿನೇ ದಿನೇ ಕಡಿಮೆಯಾಗಿ ಖರ್ಚು ಹೆಚ್ಚಾಗಿ ಹಣದ ಅಭಾವದಿಂದಲೂ, ಮಧ್ಯವರ್ತಿ ಸರಕಾರದಿಂದ ಹೆಚ್ಚಿನ ಹಣ ಸಹಾಯವು ದೊರೆಯುವ ಸಂದರ್ಭ ಇಲ್ಲದ್ದರಿಂದಲೂ, ದೇಶವು ವಿಸ್ತೀರ್ಣ ಮತ್ತು ಜನ ಸಂಖ್ಯೆಯಲ್ಲಿ ಅತಿ ಚಿಕ್ಕದಾಗಿದ್ದು ಜನಸಮುದಾಯದ ಪ್ರಯೋಜನಕ್ಕನುಗುಣವಾಗಿ ಪ್ರಜಾ ಜವಾಬುದಾರಿ ಸರಕಾರವನ್ನು ನಡಿಸಲು ಸಾಧ್ಯವಿಲ್ಲದೆ ಇರುವದರಿಂದಲೂ, ಕೊಡಗನ್ನು ಎಷ್ಟು ಮಾತ್ರಕ್ಕೂ ಪ್ರತ್ಯೇಕ ಪ್ರಾಂತ್ಯವಾಗಿಟ್ಟುಕೊಳ್ಳಲು ಸಾಧ್ಯವಿಲ್ಲವಾಗಿ ಅಭಿಪ್ರಾಯಪಡುತ್ತದೆ. ಆದ್ದರಿಂದ ಕೊಡಗು ದೇಶವನ್ನು ದೊಡ್ಡ ಪ್ರಾಂತ್ಯಕ್ಕೆ ಸೇರಿಸಲು ತಕ್ಕ ಏರ್ಪಾಡು ಮಾಡಬೇಕೆಂದು ಸಮ್ಮಂಧಪಟ್ಟ ಅಧಿಕಾರಿಗಳನ್ನು ಈ ಮಹಾ ಸಭೆಯು ಕೇಳಿಕೊಳ್ಳುತ್ತದೆ. ಠರಾವನ್ನು ಅಖಿಲಭಾರತ ಕಾಂಗ್ರೆಸಿನ ಅಧ್ಯಕ್ಷರಿಗೆ ಕಳುಹಿಸಿಕೊಡಬೇಕೆಂದು ಈ ಸಭೆಯು ತೀರ್ಮಾನಿಸಿದೆ.

ಮೆ. ಪುಲಿಯಂಡ ಐಯ್ಯಪ್ಪನವರು ಈ ಠರಾವಿಗೆ ಕೆಲವು ತಿದ್ದುಪಡಿಯನ್ನು ಮಾಡಬೇಕೆಂದರು. 'ನಿಮ್ಮ ತಿದ್ದುಪಡಿಯನ್ನು ಉಪಠರಾವಾಗಿ ತಂದು ಸಭೆಯ ಮುಂದಿಡಿ. ಓಟು ಮಾಡಲಿ' ಎಂದು ಅಧ್ಯಕ್ಷರು ಹೇಳಿದರು. ಉಪಠರಾವು ಬರಲಿಲ್ಲ. ಠರಾವನ್ನು ಓಟಿಗೆ ಹಾಕಿದರು. ಅಮಾಲ್ಗಮೇಷನ್ ಮಾಡಕೂಡದೆಂದು ಹೇಳಿದವರು ಓಟಿನ ಸಮಯದಲ್ಲಿ ಹಾಜರಿದ್ದಾಗ್ಯೂ ಕೂಡ ಠರಾವಿಗೆ ಯಾರೂ ವಿರೋಧವಾಗಿ ಓಟು ಮಾಡದ್ದರಿಂದ ಸರ್ವಾನುಮತದಿಂದ ಠರಾವು ಮಂಜೂರಾಯಿತು.

ಕೆ. ಸುಬ್ಬಯ್ಯ.

ಶ್ರೀ ರಾಮಕೃಷ್ಣ ಪರಮಹಂಸರು.

ಲೇಖಕ:- ಎಂ. ಎಸ್. ಅನಂತಪದ್ಮನಾಭರಾವ್.

ಗತಿ ೪, ೫.

(ಕಳೆದ ವಾರದಿಂದ ಮುಂದುವರಿದುದು)

ಭೈರವಿ ಬ್ರಾಹ್ಮಣಿಯು ಜಾಹ್ನವಿಯ ತೀರದಲಿ
ಹಡಗಿನಿಂದಿಳಿಯುತಿರಲದನರಿತು ಹೃದಯನಂ
ಕರೆಯುತ್ತ ರಾಮಕೃಷ್ಣರು ಕಳುಹಿ ಭೈರವಿಯ
ನಾನರಿದೆನೆನ್ನುತ್ತ ಕರೆತಹುದು ಹೋಗೆಂದು
ಕಳುಹಿದರೆ, ಬಹು ತೋಷದಿಂ ಬಂದು ನೋಡಿದಳು.
ಆ ಮಹಾ ಭಾವಗಳನರಿಯುತ್ತ ವಾತ್ಸಲ್ಯ
ದಿಂದವರ ಕಾಣುತ್ತ ತಾಂತ್ರಿಕದ ರೀತಿಗಳ
ನುಪದೇಶ ಮಾಡಿದಳು-ಅಣಿಮಾದಿ ಸಿದ್ಧಿಗಳ
ಕರಗತವ ಮಾಡಿದಳು. ಮನದ ಸಂಶಯಗಳನು
ಪರಿಹರಿಸುತವತಾರ ಪುರುಷ ನೀಹುದೆಂದು
ಏಕವಾಣಿಯೊಳವಳು ಸಾರಿ ಹೇಳಿದಳಲ್ಲಿ

ಈ ಸಾಧನೆಯ ಬಲದಿ ಮೈ ಬೆಂಕಿ ಬಲವಾಯ್ತು,
ಶ್ರೀಗಂಧವಂ ಬಳಿದು ಪರಿಮಳದ ಕುಸುಮಗಳ
ಹಾರವಂ ಧರಿಸಲ್ಕೆ ಆ ಬೆಂಕಿಯಾರುವುದು.
ಇದರಿಂದ ತಡೆಯಲಾರದ ಹಸಿವು ಮೂಡಿದರೆ
ದಿನ ಮೂರು ಎಡೆಬಿಡದೆ ಭೋಜನವ ಮಾಡಿದರು.
ಭೈರವಿಯು ಹಂಸರಲಿ ದೈವತಾ ರೂಪುಗಳ
ದರ್ಶನವ ಮಾಡಿದಳು. ದಿಗ್ದಂತಿ ಪಂಡಿತರು
ಏಕ ಕಂಠದೊಳೊಪ್ಪಿ ಚರಣಗಳನಪ್ಪಿದರು.
ತಪ್ಪೊಪ್ಪುಗಳು ಸಮವು ಮತ್ತೆ ಶುದ್ಧಾಶುದ್ಧ
ವೆರಡು ಸಮ, ಬೈಗುಳವು ಅಕ್ಕರದ ಗುಂಪಾಯ್ತು,
ಬೀದಿ ನಾರಿಯೊಳಿಹಳು ಜಗದಂಬೆಯಿದರಲ್ಲಿ
ಅಪವಿತ್ರ ಪಾವನದ ಭೇದವಾವುದು ತಿಳಿಯೆ;
ಪ್ರತಿಯೊಂದು ಅಕ್ಕರವು ತಾಯಿ ಸಂಬೋಧನೆಯು.
ಇದರೊಳವಹೇಳನದ ನುಡಿಗಳನೆ ಕಾಣಾರ
ಮಂಗಳಾತ್ಮಕರು ಸತತ. ಭೈರವಿಯ ಶಿಷ್ಯರಲಿ
ಪಲವರನು ದರ್ಶನವ ಮಾಡಿದರು ಯೋಗಿಗಳು.

ಸಾಧು ಸಂತರ ವರ್ಗ ಬರುವುದಕೆ ಮೊದಲಾಗೆ
ಆ ತಂಡದುಪಚಾರ ಮಾಡಲ್ಕೆ ಮಥುರನಂ
ಕರೆಯುತ್ತ ಹೇಳಿದರೆ ಬೇಕಾದ ಸಾಮಗ್ರಿ
ಗಳನಿರಿಸಿ ಪರಮ ಭಕ್ತಿಯೊಳವನು ನೆರವಾದ.
ಸಾಧು ಗೋಷ್ಠಿಯು ನೆರೆದು ನಿತ್ಯ ಚರ್ಚೆಯ ನಡೆಸಿ
ಪರಮಾತ್ಮನಿರವನ್ನು ವರ್ಣಿಸುತ ಕಳೆಯುತಿರೆ

ಈ ಸಮಯದಲಿ ಬಂದ ಪಾವನ ಜಟಾಧಾರಿ
ರಾಮಲಾಲನ ಭಕ್ತ: ಕೌಸಲ್ಯೆಯೊಲು ಕಂಡು
ದೇವನಂ ಪೂಜಿಪುದನುಪದೇಶ ಮಾಡಿದರೆ
ರಾಮಲಾಲನ ನಿತ್ಯಪೂಜಿಸುತ್ತಲಿರಿಯುತ್ತ
ವಾತ್ಸಲ್ಯದಿಂದವನ ಸೇವೆಯಂ ಸಲ್ಲಿಸಲು
ತೊರೆಯದಾದನು ರಾಮ ರಾಮಕೃಷ್ಣರ ಸಂಗ.

ಮತ್ತೊಮ್ಮೆ ಮಧುರ ಭಾವವು ಮೂಡಿ ನೆರ್ಚುತಲಿ
ನೆನೆದೊಡನೆ ರಾಧೆಯಾ ಪ್ರೇಮವುದಯಿಸಲು
ಹೃದಯ ಪ್ರವೇಶವಂ ಮಾಡಿದುದು ಮರೆಯಿಸುತ.
ಹೆಣ್ಣಾಗಿ ಸತತ ಶ್ರೀ ಕೃಷ್ಣ ಧ್ಯಾನದಿ ನಿಲಲು
ಮಧುರನನುಕೂಲಗಳ ಮಾಡಿದನು ಸಾಧನೆಗೆ.
ಮಥುರನಾಥನ ಮನೆಯ ನಾರಿಯರ ಗಮನದಲಿ
ಕಾಲವಂ ನೂಕುತಿರಲಿಲ್ಲಿಟ್ಟ ಕೃಷ್ಣನಂ
ಕಾಣುತಲಿ ಕೃಷ್ಣನಾ ಹಂಬಲಿಂ ನೋಡಿದರು
ಸರ್ವಾತ್ಮ ರೂಪನಂ ತನ್ನೊಳಗೆ ಕಾಣುತ್ತ.
ಶ್ರೀಕೃಷ್ಣಮಯನಾಗಿ ಹೆಣ್ಣ ಜನ್ಮವ ಕಳೆದು
ಬ್ರಹ್ಮ ರೂಪವ ತಾಳಿ ಹಿಗ್ಗಿದರು ಹಿರಿದಾಗಿ.

ಗತಿ ೫.

ಪರಮಾತ್ಮನಂ ತಿಳಿದು ಹಲವು ಮಾರ್ಗಗಳಿಂದ
ನಿತ್ಯ ದರ್ಶನ ಸುಖದಿ ಮುಳುಗಲಿಷ್ಟವಗೊಳಲು
ದೇವರಾಣತಿಯಿಂದ ಸಂತತಾನಂದವನು
ಪಡೆವ ಹಾದಿಯ ತೋರ್ಪ ಪರಮ ಗುರು ಕಾಣಿಸಿದ
ನವನೆ ತೋತಾಪುರಿಯು. ದಕ್ಷಿಣೇಶ್ವರದಲ್ಲಿ
ಸತ್ಯ ದರ್ಶಕನೊಬ್ಬನಿಹನೆಂದು ತಿಳಿಯುತ್ತ
ಆ ಮಹಾತ್ಮನ ನೋಡೆ ಒಂದಲ್ಲಿ ಹರುಷದಿಂ
ವೇದಾಂತ ಮಾರ್ಗಮನ್ನುಪದೇಶಮಾಡಿದನು.
ರಾಮಕೃಷ್ಣರು ತಾಯಿಯಾಣತಿಯ ಪಡೆಯುತ್ತ
ಸನ್ಯಾಸವಂ ಕೊಂಡು ಸರ್ವಸ್ವವಂ ಬಿಸುಟು
ಸಿದ್ಧರಾದರು. ನಿರ್ವಿಕಲ್ಪನಾಮ ಸಮಾಧಿ
ಯಂ ತಿಳಿಯಲಾರಂಭದಲಿ ಕಷ್ಟವಾಗಲ್ಕೆ
ಗಾಜಿನಿಂ ನಡೆಯನ್ನು ಕೊರೆದು ರಕ್ತವ ಸುರಿಸಿ
'ನಿಲಿಸೀಗ ದಿಟ್ಟಿಯಂ ನಿಜವನ್ನು ನೋಡೆ'ನಲು
ಪಡೆದರು ಸಮಾಧಿಯಂ ತಿಳಿದು ಬ್ರಹ್ಮಾನಂದ
ದನುಭವವ ಪಡೆಯುತ್ತಲಿರ್ದರಾ ಪರಿಯಲ್ಲಿ
ಮೂರು ದಿನಗಳು ಕಳೆಯಲೆಚ್ಚರವ ಪಡೆಯುತಲಿ.

ಸಂಚಾರ ಮಾಡುತಿಹ ತೋತಪುರಿಯುಚ್ಚರಿಯು
ಮೂಡುತಲಿ ಹೋಗಲಾರದೆ ಬಿಟ್ಟು ನಿಂದನಾ
ಕ್ಷೇತ್ರದಲಿ ಹನ್ನೊಂದು ಮಾಸಗಳು-ಆ ಮೇಲೆ
ತಲೆನೋವಿನ ರೋಗಗಳು ಸಹಿಸಲಾರದೆ ಬೇಸೆ
ಜಾಹ್ನವೀ ಬಸಿರಲ್ಲಿ ಹರಣ ನೀಗುವೆನೆಂದು
ರಾತ್ರಿ ಇಳಿದನು ನೀರ್ಗೆ-ನಡೆ ನಡೆದು ಸೇರಿದನು
ಆಚೆ ದಡವಂ ಬಂದು, ಮುಳುಗಿ ಸಾಯ್ವುದಕಲ್ಲಿ
ತಾಣ ದೊರೆಯದೆ ಹೋಯ್ತು, ಹಿಂದಿರುಗಿ ವಾರ್ತೆಯಂ
ಪೇಳುತಲಿ ತನ್ನ ಕಾರ್ಯವು ಸಿದ್ಧಿಯಾಯ್ತೆಂದು
ರಾಮಕೃಷ್ಣರ ಹೊಗಳಿ ಬೀಳ್ಕೊಂಡನಾ ಗುರುವು.
ಮಾತೆಯಾ ಸತ್ಯವನು ಮನಗಂಡು ತೆರಳಿದನು
ಮನದಿ ಶಾಂತಿಯ ಪೊಂದಿ ನಂಬಿ ತಾಯಿಯ ಇರವ
ಅವರಿಗಿವ ಗುರುವಾಗಿ ಅವರಿವಗೆ ಗುರುವಾಗಿ
ಗುರುಶಿಷ್ಯ-ಶಿಷ್ಯಗುರುವಿರ್ವರುಂ ತಾವಾಗಿ
ನಿಜವ ನೋಡಿದರೆಂದು ಸತತ ಸಾನಂದವಂ
ಅನುಭವದಿ ಪೊಂದಿದರು.

ಇದ ನೋಡಿ ಭೈರವಿಯು
ಸಹಿಸದಾದಳು ಮನದಿ, ಸಂತವಿಸುತವಳನ್ನು
ಕಾರ್ಯ ಸಾಧನೆಗಳನು ಮುಂದೊತ್ತಿ ಸಾಗಿದರು,
ರಾಮಕೃಷ್ಣರು ತಾವು ಮತ್ತಾ ಸಮಾಧಿಯಲಿ
ಆರು ಮಾಸಗಳಿದ್ದು ಆನಂದವನುಭವವ
ನೂರಿಗೊಬ್ಬರತ ಪರಮ ಹಂಸರಾ ಸಾಧನೆಯ
ಪರಮೋಪಯೋಗವನು ಮಾಡಿಕೊಂಡರು ತಾವು.

ಮಹಮದನ ಧರ್ಮಗಳನರಿವ ಬಯಕೆಗಳಿಂದ
ಮುಸಲಮಾನರ ಗುರುವ ಸೇರಿದರು. ತಾವಾಗಿ
ಅವರ ನಡೆನುಡಿ ಧರ್ಮಗಳ ಕೊಂಡು ಸಾಧನೆಯ
ಮಾಡುತಲಿ ದಿನ ಮೂರು ಸಾಗುತಿರೆ ಮಹಮದನ
ದರ್ಶನವ ಮಾಡಿದರು, ಅವರ ಧರ್ಮದ ಸತ್ಯ
ಗಳ ತಿಳಿದು, ಏಕಮಾತ್ರನು ದೇವನೆಂಬುದನು
ಮನಗಂಡು; ಕ್ರೈಸ್ತದೇವರ ಸತ್ಯವನು ತಿಳಿಯ
ಲಾತುರದಿ ಕ್ರೈಸ್ತ ಗುರುಗಳ ಸೇರಿ ಭಕ್ತಿಯಿಂ
ದವರಂತೆ ವರ್ತಿಸುತ ದಿನ ಮೂರು ಕಳೆಯುತಲಿ
ಅವರ ಧರ್ಮದ ರೂಪ, ಅವರ ಸತ್ಯದ ರೂಪ
ನಿರುವುಗಳನು ತಿಳಿಯುತ್ತ, ಮತ್ತೆ ಮತ್ತಿಹ ಬೇರೆ
ಧರ್ಮಗಳ ಮರ್ಮಗಳ ಸತ್ಯವನ್ನರಿಯುತ್ತ
ಲಾತ್ಮನಂ ತಿಳಿವುದಕೆ ವಿವಿಧ ಮಾರ್ಗಗಳೆಂದು
'ಇವುಗಳೆಲ್ಲವು ಸತ್ಯ ಶಕ್ತ್ಯಾನುಸಾರದಲಿ
ಈ ಮಾರ್ಗಗಳ ನಡೆದು ನಿಜವ ಕಾಣಲುಬಹುದು'
ಎಂದವರು ಮುಕ್ತ ಕಂಠದಿ ಕೂಗಿ ಹೇಳಿದರು.
ಅಭಯ ಹಸ್ತವನೆತ್ತಿ 'ಸರ್ವ ಮತಗಳು ಸತ್ಯ,
ಪರಮಾತ್ಮನಂ ಸೇರೆ ಹಲವು ಮಾರ್ಗಗಳಿಹವು.
ಮತಗಳೆಲ್ಲವು ತಿಳಿಯಲಾ ಮಾರ್ಗಗಳು ನಿಜವು;
ವೇದಾಂತ ಧರ್ಮವಿದು ಮರ್ಮವಿದು ಸತ್ಯವೆಂ
ದಾ ಪರಮ ಋಷಿವರ್ಯರೀ ಸಾರಿ ಹೇಳಿಹರು.

ಇಂತಿವರು ಅದ್ಭುತದ ಸಾಧನೆಯ ಮಾರ್ಗದಲಿ
ಪರಿಪೂರ್ಣರಾಗುತ್ತ ನಿಂದಲ್ಲಿ ನಡೆದಲ್ಲಿ
ನೋಡಿದರೆ ಸರ್ವರೊಳು ಪರಮಾತ್ಮಮಯರಾಗಿ
ಸಂಚರಿಸಿ ಜಗದ ವಾತಾವರಣವೆಲ್ಲಮಂ
ದೇವತಾ ವಾಣಿಯಲಿ ಪರಿಶುದ್ಧ ಮಾಡಿದರು.

ಭೈರವಿಯುವೆರಸುತ್ತ ಕಾಮಾರ್ಪುಕೂರವಂ
ಮತ್ತೊಮ್ಮೆ ಸೇರಿದರು: ಶಾರದಾಮಣಿದೇವಿ
ಪತಿ ದೇವರಂ ನೋಡೆ ತವರು ಮನೆಯಂ ಬಿಟ್ಟು
ಅತ್ತೆಯೂರಿಗೆ ಬಂದು ಪತಿ ಪಾದ ಸೇವೆಯಂ
ಮಾಡುತಿರಲೀ ಸ್ನೇಹ ತರವಲ್ಲವೆನ್ನುತ್ತ
ಅಗ್ನಿಯಾದಳು ಬಂದು ಭೈರವಿಯು ಕಿಚ್ಚಿನಿಂ.
ದುರ್ಗುಣಕೆ ದೂರವಾಗಿರುವ ಹಂಸರು ನಕ್ಕು
ಪತ್ನಿಯಂ ಮನ್ನಿಸಿದರಾದರದಿ ನಗುಮೊಗದಿ.
ಆರು ಮಾಸಗಳಿದ್ದು ಮರಳಿದರು ದಕ್ಷಿಣೇ
ಶ್ವರದೆಡೆಗೆ, ಭೈರವಿಯು ರಾಮಕೃಷ್ಣರ ಬಿಟ್ಟು
ಪಯಣದಲಿ ಸಾಗಿದಳು.

ಇವರ ಸಹವಾಸದಲಿ
ಮಥುರನಾಥನು ವಿರತಿಯಂ ಪಡೆದು ಪ್ರೀತಿಯಂ
ಸೇವಿಸುತ ಚಿತ್ರತರ ದರ್ಶನವ ತಾ ಕಂಡ
ಹೃದಯವಿಕಸಿತನಾಯ್ತು ಗುರುವೆಂದೆ ಮಾಡಿದನು.
ಪರಮಹಂಸರ ಕೂಡಿ ಕಾಶೀಯಾತ್ರೆಯ ಮಾಡಿ
ಮಾರ್ಗದಲಿ ಸಾಧುಗಳ ಹಸಿವನಾರಿಸಿ ಮುದದಿ
ವಿಶ್ವನಾಥನ ಕಂಡು ನೆಮ್ಮದಿಯ ಪೊಂದಿದನು.
ಬೃಂದಾವನವ ಪೊಕ್ಕು ಮತ್ತಯೋಧ್ಯಾಪುರವ
ಸೇರುತಲಿ ಪಯಣದಲಿ ಹಲವು ಸುಕ್ಷೇತ್ರಗಳ
ತಿರು ತಿರುಗಿ ವಿಮಲ ಮಾನಸರಾಗಿ ಭಕ್ತರಂ
ದರ್ಶನವ ಮಾಡುತಲಿ ಸುವಿಚಾರದಿಂ ಮನವ
ಪಕ್ವ ಮಾಡಿದರವರು.

ಭಕ್ತರೊಳು ಕೂಡುವುದು
ಭಕ್ತರಂ ನೋಡುವುದು, ಭಕ್ತರಂ ಹೊಗಳುವುದು
ರಾಮಕೃಷ್ಣರ ನಿತ್ಯ ಕರ್ತವ್ಯವಾಗಿತ್ತು.
ಮಧುರಬಾಬುವಿನೊಡನೆ ಸಂತ ದರ್ಶನ ಮಾಡೆ
ಒಂದು ಸಲ ತಿರುಗುತಲಿ ಚೈತನ್ಯ ತಾಣವಂ
ಸೇರುತಲಿ, ರಾಮಕೃಷ್ಣರು ತಮ್ಮ ಮರೆಯುತಲಿ
ಚೈತನ್ಯ ರೂಪದಿಂದಾ ಪೀಠವನ್ನೇರಿ
ಕುಳಿತು ಗೌರಾಂಗನಂದದಲಿ ತೋರಿದರವರು.

ಆವಾವ ದೇವರಂ ನೆನೆದೊಡನೆ ಆ ರೂಪ
ದಲಿ ತಾವೆ ಮಾರ್ಪಟ್ಟು ಹೋಗುವರು ಸತ್ಯದಿಂ.
ಇದ ತಿಳಿದು ಜನರೆಲ್ಲ ನಿಂದಿಸಿರವರನ್ನು.
ಭಗವಾನದಾಸನೆಂಬುವ ಸಾಧು ತಿಳಿದದನು
ಖಂಡಿಸುತಲಿರಲೊಂದು ದಿನ ಪರಮ ಹಂಸರುಂ
ಭಗವಾನದಾಸನಂ ಸೇರುತಲಿ ಮಮಕಾರ
ಮಂ ಮುರಿದು, ಪ್ರತಿಯೊಬ್ಬ ಮಾನವನು ಲೋಕದಲ
ದೈವತಾ ರೂಪಮೆಂಬುದ ತೋರಿ, ಅವನವನೆ
ಅವನವಗೆ ಗುರುವಲ್ಲವನ್ಯರಾರಾಗರೆಂ
ದಾ ಯೋಗಿ ಸಾರಿದರು.

ಇಂತಿರುವಸಮಯದಲಿ
ಮಥುರನಾಥನು ರೋಗ ಪೀಡೆಯಿಂ ನರಳುತಲಿ
ರಾಮಕೃಷ್ಣರ ಭಾವವಂ ನೆನೆದು ಲೋಕವಂ
ತ್ಯಜಿಸುತ್ತ ಮಾತೆಯಂ ಸೇರಿದನು-ಬುವಿ ಬಿಟ್ಟು,
ಆ ದಿವಸ ಪರಮಹಂಸರು ಸಮಾಧಿಯೊಳಿದ್ದು
ಸೂಕ್ಷ್ಮದಲಿ ಮಥುರನಂ ಸೇರುತ್ತ ಕಾಣಿಸುತ
ಮಾತೆಯಡಿಗಳ ಸೇರಿಸಿದರು ಶಿಷ್ಯನ ಮುದದಿ.
ಇದರಿಂದ ರಾಮಕೃಷ್ಣರ ಪರಿಯ ಹೊಸಮಾರ್ಗ
ಮಂ ಹಿಡಿದು ಸಾಗಿತ್ತು.

[ಸಶೇಷ.]

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯೊದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕನಾಗಿರುತ್ತದೆ. ಲಂಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52–17 ಬೆಂಗಳೂರು ಸಿಟಿ.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937 ರಲ್ಲಿ ಹೊಸದಿದ ಉದ್ಯೋಗ ರೂ. 2,53,15,500.

1937 ರಲ್ಲಿ ಪೂರ್ತಿಯಾಗ ಉದ್ಯೋಗ ರೂ. 2,02,02,000.

ಎಂಡೋಮೆಂಟ್ ವಿಮಾ ಪತ್ರದ ಮೇರೆ 1000ಕ್ಕೆ ವರ್ಷಕ್ಕೆ 21 ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ 26 ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್
ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52–31

೪೨ ವರ್ಷಗಳಿಂದ ಅನುಭವಸಿದ್ಧ ಪ್ರಖ್ಯಾತಿ **ಹೊಂದಿದ**

ಕರ್ಕೀಕಂಪನಿ

ಸುಪ್ರಸಿದ್ಧ ಜ್ವರದ ಗುಳಿಗೆ

ಇದು ಛಳಿಜ್ವರ, ಚಾತುರ್ಥಿ ಜ್ವರ, ಒಂದು ದಿನಬಿಟ್ಟು ದಿನ ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ನಾನಾತರದ ಜ್ವರಗಳ ಮೇಲೆ ತಕ್ಷಣವೇ ಗುಣ ಸಂಜೀವಿನಿಯಂತಿದೆ! ಬಾಟ್ಲಿಗೆ 1 ರೂ. 4 ಬಾಟ್ಲಿಗೆ 3 ರೂ. 12 ಬಾಟ್ಲಿಗೆ 8 ರೂ ವಿ. ಪಿ. ಖರ್ಚು ಬೇರೆ.

ಗಣೇಶ. ರಾಮಚಂದ್ರ ಕರ್ಕೀ.
ಮತ್ತು ಕಂಪೆನಿ,

(52–44) ಗಿರಗಾಂವ, ಮುಂಬಯಿ ೪,

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನು, ಸೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗಿಸಡ ಕ್ರಮ:- ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔ... [illegible] ತೆಗೆದುಕೊಳ್ಳುವದು 8 ಔನ್ಸುಗಳ ಕುಪ್ಪಿಗೆ ರೂ. 1-0-0. [illegible] ... ಪ್ರತ್ಯೇಕ.

13 ಸಿ. ಹೆಚ್. ರಾಮುಣ್ಣಿ ವೈದ್ಯರ್.

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಬೋಯಪ್ಪನವರು.
ಬಾಚಮ್ಮನ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ. ಸುಬ್ರಾಯನವರು
ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮೆ ಪಿ. ● ಮುದ್ದಮ್ಮಯ್ಯನವರು.
ಮಡಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಕೆ. ಮಾದಮ್ಮಯ್ಯನವರು.
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮೆ ಕೆ ಮೊಗಪ್ಪನವರು.
ಸಾಪೋಕ್ಲು—ಮೆ. ಬಿಳ್ಳಿಕಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)

ಸೂಚನೆ.— [illegible] ಕೊಡಲಾರದಾಗಿ [illegible] ಗಿದೆ

[illegible],
'ಕೊಡಗು' [illegible], ಮಡಿಕೇರಿ

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿ ಇರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, ಶೇರು ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಉಂಟಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆಶೂಲೆಗಳಿಗೂ ಅಮೃತ ಬೆಲೆ 0-4 0, 0-2 0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ ಬೆಲೆ 0-4-0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ ಬೆಲೆ 0-8-0, 0-4-0

ಸುಕುಮಾರತೈಲ

27

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ಇಂತ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ ಬೆಲೆ 1 0 0

ಪ್ರೊಪ್ರೈಟರ್—ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ ವಿ ಪಂಡಿತ್.

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು

ಕಾಲ	1 ಪುಟಕ್ಕೆ	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ 180	ರೂ 55	ರೂ 35	ರೂ 22
6 ತಿಂಗಳಿಗೆ—	„ 100	„ 35	„ 22	„ 13
3 ತಿಂಗಳಿಗೆ—	„ 60	„ 20	„ 13	„ 8
1 ತಿಂಗಳಿಗೆ—	„ 25	„ 10	„ 6	„ 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವುದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

61 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಆಪ್ಪುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮೆ. ಎಂ. ಹೆಚ್. ಕೃಷ್ಣಮೂರ್ತಿ, (ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಎಲ್. ಎಫ್. ಸಿ. ಪಾಸ್, (ಇನ್ಸ್‌ಪೆಕ್ಟರ್, ಮಡಿಕೇರಿ.)

ಮೆ. ಡಿ. ಶೇಷಾದ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗಾ.

82-40

Printed & Published by P. I. Belliappa, at 'Kodagu' Press Mercara for 'Kodagu' Ltd.

Reg No. M. 1550

ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.
ಸಂಪಾದಕ:—ಸಿ. ಬಿ. ಬೆಳ್ಯಪ್ಪ. ವಾರ್ಷಿಕ ಚಂದಾ ರೂ. ೩-೮-೦
ತಾ. ೧೪—೧೦—೧೯೩೮. ಸಂಪುಟ ೧೮] [ಸಂಚಿಕೆ ೨೭

The Bombay Life Assurance Company Ltd.

(Estd. 1908.)
45-47, Churchgate Street, Fort-Bombay.

Progress Proves Its Popularity.

Year	Business in force	Claims Paid	Life Assurance Fund
1931	2,26,82,430	2,91,880	33,24,809
1933	3,07,98,435	3,54,003	50,04,871
1935	4,42,51,214	5,75,198	68,01,591
1937	6,04,70,594	6,00,918	98,68,232

Total Claims Paid Between 1909 and 1937—Rs. 50,22,576.

BOMBAY LIFE is a purely Indian Concern Offering all that is best in Life Assurance.

To Insure or to Represent it pays you to consult us or our Branches,—

KOCHIKAR & BROTHERS Ltd.,
Madras Branch Secretaries,
10 Post Box No. 337, Mount Road, MADRAS. [Phone No. 6248.]

Bombay Life Building Udipi	Gautam Niwas Charni Road Girgaum, Bombay 4	Visvesvarapuram Circle Bangalore City	Puthiyara [illegible]	Car Street [illegible]	Ottapalam S. Malabar	Central Station Road Trivandrum

THE CANARA BANKING CORPORATION, UDIPI, Ltd.

(Incorporated in British India.)
Estd 1906.

MEMBER: RESERVE BANK OF INDIA. & BANKERS' CLEARING HOUSE, MADRAS.

Paid up Capital	Rs.	3,08,205 -
Reserves	,,	3,88,842 -

Our Deposit Rates.

3 months	2½% p. a.
6 or 9 months	3 % p. a.
12 months	3½% p. a.
SHORT TERM	2 % p. a.

Head Office: UDIPI, S. K.

Branches.

1. Udipi, 2. Coondapoor, 3. Car Street, Mangalore, 4. Madras, 5. Shimoga, 6. Bunder, Mangalore, 7. Mercara, 8 Virarajendrapet, 9. Saklaspur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

BANKING BUSINESS OF EVERY DESCRIPTION TRANSACTED.

Udipi,
8th July 1938.

52-45

V. R. Kamath, B. A., LL. B.,
Manager.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,770	0	0
ಜಮೊಬಂದ ಠೇವಣಾತಿ	–	2,45,269	2	4
ವಸೂಲಾದ ಕ್ಷೇಮನಿಧಿ	–	1,36,696	8	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	19,598	4	11
ತ್ರಿಫ್ಟ್ ಡಿಪಾಜಿಟ್ಟು	–	34,431	6	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇವರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಷಿ ಮಾಡುತ್ತಾರೆ.

ಪ್ರಸಿಡೆಂಟ್:—ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಚೌರೀರ ಎ. ಮಂದಣ್ಣನವರು ಬಿ ಎ., ಬಿ. ಎಲ್.
ಸೆಕ್ರೆಟರಿ:—ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ., ಬಿ. ಎಲ್.

ತಾ. 1-10-1938

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ!   **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-20   **The Agricultural & Industrial Bank Ltd**

"ZANDU"

ಝಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಆಯೋಡೈಸ್ಡ
ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52-10)   ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯುತ್ಕೃಷ್ಟವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನು ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ. 2—8—0.

ಮಲೇರಿಯಾ ನಿವಾರಿಣಿ

ಇದು ಚಳಿ ಜ್ವರ, ಚಾತುರ್ಥಿಕ ಜ್ವರ, ದಿನ ಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ, ಇನ್‌ಫ್ಲುಯೆಂಜಾ ಇತ್ಯಾದಿ ನಾನಾ ತರದ ಜ್ವರಗಳ ಮೇಲೆ ರಾಮಬಾಣ.

ಬಾಟ್ಲಿ 1ರ ರೂ. 1—8—0; ಸಣ್ಣ ಬಟ್ಲಿ ರೂ. 0—13—0.

ಸ್ಪ್ಲೀನ್ ಮಿಕ್ಸ್ಚರ್

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಅಶಕ್ತತೆ. ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು. ಬಾಟ್ಲಿ 1ರ ರೂ. 1—2—0.

ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ಮಂಗಳೂರು ಸ್ಟೋರ್ಸ್, ಮಡಿಕೇರಿ. ವಿ. ಬಿ. ಕಾಮತ್, ಮಡಿಕೇರಿ. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. ಎ. ಎಸ್. ಮಾಚಯ್ಯ, ಪುಂಟಿಕೊಪ್ಪ. ಸುಂದರ್ ಪ್ರಭು, ಸುಳ್ಯ. [15]

ನಂಬುವಿರೋ ಬಿಡುವಿರೋ?

ಪಿತೃಪಕ್ಷದಲ್ಲಿ ಗತಿಸಿದ ಪಿತೃಗಳ ಜ್ಞಾಪಕಾರ್ಥವಾಗಿ ಕೆಲವು ಕರ್ಮಗಳನ್ನು ಮಾಡುವುದು ಸರಿಯಷ್ಟೆ. ಕಳೆದ ಪಕ್ಷದಲ್ಲಿ ನೈನಿಟಾಲಿನಲ್ಲಿ ನಡೆದ ಒಂದು ವಿಚಿತ್ರ ಸುದ್ದಿಯು ಅನೇಕರಿಗೆ ಆಶ್ಚರ್ಯವನ್ನುಂಟುಮಾಡಿದೆ. ಅಲ್ಲಿಯ ಒಬ್ಬ ವರ್ತಕ, ತನ್ನ ತಂದೆಯ ಶ್ರಾದ್ಧ ಮಾಡಲು ಮನೆಯಲ್ಲಿ ಹೆಂಗಸರಿಲ್ಲದೆ ಇದ್ದುದರಿಂದ ಶ್ರಾದ್ಧದ ಹಿಂದಿನ ದಿನ ಬಹಳ ವ್ಯಸನದಲ್ಲಿದ್ದ. ಇದೇ ಯೋಚನೆಯಲ್ಲಿದ್ದ ಆತನಿಗೆ ಆ ರಾತ್ರಿ 2 ಗಂಟೆಯ ಹೊತ್ತಿಗೆ ಒಬ್ಬ ಯುವತಿಯು ಆ ಮನೆಗೆ ಪ್ರವೇಶಿಸುವುದನ್ನು ಮನೆಯವರು ನೋಡಿದರು.

ತಾನಾರೆಂದು ಪ್ರಶ್ನಿಸಲಾಗಿ ಆಕೆಯು ಮನೆಯವರ ಸಂಬಂಧೀಕಳೆಂದೂ, ಶ್ರಾದ್ಧಕ್ಕಾಗಿ ಎಲ್ಲ ಸಿದ್ಧತೆಗಳನ್ನೂ ಮಾಡಲು ಬಂದಿರುವುದಾಗಿಯೂ, ಎಲ್ಲರೂ ಸುಖವಾಗಿ ನಿದ್ರೆ ಮಾಡುವಂತೆಯೂ ತಿಳಿಸಿದಳು. ಎಲ್ಲವನ್ನೂ ಸಿದ್ಧಪಡಿಸಿ ಬೆಳಗಿನ ಝಾವ 5 ಗಂಟೆಯೊಳಗಾಗಿ ಮಾಯವಾಗಿ ಬಿಟ್ಟಿದ್ದಳು. ಇದು ಒಂದು ಭೂತದ ಚಮತ್ಕಾರವೆಂದು ಭಾವಿಸಲಾಗಿದೆ.

—:0:—

ಆಗ ತಾನೆ ಜನಿಸಿದ ಮಕ್ಕಳನ್ನು ಸ್ವಚ್ಛ ಮಾಡಬೇಕೇ?

ಆಗ ತಾನೆ ಜನಿಸಿದ ಮಕ್ಕಳನ್ನು ತೊಳೆಯುವದು ಅನಾವಶ್ಯಕ. ಅವುಗಳು ನಿರ್ಮಲವಾಗಿರಲು ಪ್ರಕೃತಿಯೇ ಎಲ್ಲ ಸಿದ್ಧತೆಯನ್ನು ಮಾಡಿದೆ, ಎಂದು ಯುನೈಟೆಡ್ ಸಂಸ್ಥಾನದ ಡಾ. ವಿಲಿಯಮ್ ಎಫ್. ಪ್ರೆಟ್ರೈರ್ ಎಂಬುವರು ತಿಳಿಸುತ್ತಾರೆ.

1931 ರಲ್ಲಿ ಅವರು ನಡೆಸಿದ ಸಂಶೋಧನೆಯಲ್ಲಿ, ಅನೇಕ ಆಗ ತಾನೇ ಹುಟ್ಟಿದ ಮಕ್ಕಳನ್ನು ತೊಳೆಯದೇ ಹಾಗೆಯೇ 2 ವಾರಗಳ ವರೆಗೆ ಬಿಟ್ಟು ಪರೀಕ್ಷಿಸಿದ್ದಲ್ಲಿ ಅವುಗಳು ಚರ್ಮ ರೋಗದ ಸೋಂಕಿಗೆ ತಗಲದಂತಾಗಿದ್ದವು.

ಯುನೈಟೆಡ್ ಸಂಸ್ಥಾನದ ಅನೇಕ ಆಸ್ಪತ್ರೆಗಳು ಈ ಹೊಸ ವಿಧಾನವನ್ನು ಆಚರಣೆಗೆ ತಂದಿವೆ. ಪ್ರತಿ ದಿನವೂ ಥರ್ಮಾಮೀಟರ್ ನ್ನು ಒರೆಸುವುದು, ಬಟ್ಟೆಗಳನ್ನು ಬದಲಾಯಿಸುವದರ ವಿನಹ ಇನ್ನಾವ ಶುದ್ಧಿ ಕಾರ್ಯಗಳು ಮಾಡುವುದಿಲ್ಲ.

ಮಕ್ಕಳು ಜನಿಸಿದ 12 ಗಂಟೆಗಳೊಳಗಾಗಿ ಅವುಗಳ ಚರ್ಮವು ಸ್ವಚ್ಛವಾಗುತ್ತದೆ; ಅವುಗಳ ಮೈಮೇಲಿನ 'ವೆರಿನ' ಎಂಬ ಪೊರೆಯು ಕಾಣದಂತಾಗುವುದು! ಈ ವೈಚಿತ್ರವನ್ನು ಗಣನೆಗೆ ತಾರದವರಿಗೆ ಚರಂಡಿಯಲ್ಲಿ ಬಿದ್ದಿದ್ದಂತೆ ಕಾಣುವ ಮಕ್ಕಳು ದುರ್ವಾಸನೆಯಿಂದ ನಾರುವುದಿಲ್ಲವೇ? ಎಂದು ತೋರಬಹುದು. ಆದರೆ ಕೆಲವು ಗಂಟೆಗಳ ಕಾಲ ಹಾಗೆಯೇ ಬಿಟ್ಟು ನೋಡಿದ್ದಲ್ಲಿ ಅವರ ಯೋಚನೆಗೆ ವಿರುದ್ಧವಾಗಿ ಚೊಕ್ಕಟವಾದ ಮಕ್ಕಳನ್ನು ನೋಡುವರು ಎಂದು ಲ್ಯಾಂಡನ್ ಹೌವಾರ್ಡ್ ಸ್ಮಿತ್ ರವರು ಅಭಿಪ್ರಾಯ ಪಡುತ್ತಾರೆ.

—:0:—

ವಿವಿಧ ವಿಚಾರ.

ಒಂದು ತಾಸು.

'ಒಂದು ತಾಸಿನಲ್ಲಿ ಏನಯ್ಯ ಆಗುತ್ತೆ' ಎಂದು ಯಾರಾದರೂ ಯೋಚಿಸಿದರೆ, 'ಸಾಮಾನ್ಯ ಅಂತಹದೇನೂ ಆಗುವುದಿಲ್ಲವೆಂದು' ಅನೇಕರಿಗೆ ತಿಳಿದು ಬರಬಹುದು. ದುಃಖದಲ್ಲಿ ಮುಳುಗಿರುವವರಿಗೂ, ಜೀವನದಲ್ಲಿ ಕಾರಣಾಂತರಗಳಿಂದ ನಿರಾಶರಾಗಿರುವವರಿಗೂ ಕೇವಲ ಒಂದು ತಾಸು ಒಂದು ಯುಗವಾಗಿ ಕಾಣಬಹುದು. ಅದೇ ಒಂದು ತಾಸು ಸುಖ ಸಾಗರದಲ್ಲಿ ತೇಲುತ್ತಿರುವವರಿಗೆ ಒಂದು ನಿಮಿಷದಂತೆ ಕಾಣಬಹುದು.

ಆದರೆ ಅಮೇರಿಕದ ಗಣಿತಜ್ಞರು, ಪ್ರಪಂಚದಲ್ಲೆಲ್ಲಾ ಒಂದು ತಾಸಿನಲ್ಲಿ ನಡೆಯಬಹುದಾದುದುಗಳನ್ನು ಬಹಳ ಎಚ್ಚರಿಕೆಯಿಂದ ಅಧ್ಯಯನ ಮಾಡಿ ತಿಳಿಸುವ ಫಲಿತಾಂಶವು ಎಲ್ಲರನ್ನೂ ವಿಸ್ಮಯಚಕಿತರನ್ನಾಗಿ ಮಾಡುವುದು. ಹಾಗಾದರೆ ಅವರ ಕ್ರಮದ ಫಲಿತಾಂಶಗಳು ಏನೆಂಬುದನ್ನು ನೋಡೋಣ.

ಒಂದು ಗಂಟೆಯೊಳಗಾಗಿ ಈ ಪ್ರಪಂಚದಲ್ಲಿ 14000 ತಂತಿ ವರ್ತಮಾನವನ್ನು ಕಳುಹಿಸಲಾಗುವುದು; 11,41,000 ಪೋಸ್ಟ್ ಕಾರ್ಡುಗಳು, ಲಕೋಟೆಗಳು, ಮತ್ತು ಪಾರ್ಸಲ್ ಗಳನ್ನು 'ಪೋಸ್ಟ್' ಮಾಡಲಾಗುವುದು. ಒಂದು ತಾಸಿನಲ್ಲಿ 6,00,00,000 ವೃತ್ತಪತ್ರಿಕೆಗಳನ್ನು ಛಾಪಿಸಲಾಗುವುದು; 1,250 ವಿವಾಹಗಳಾಗುವುವು; 7 ಕೋಟಿ ಪೌಂಡುಗಳ (ತೂಕದ)ಷ್ಟು 'ಬ್ರೆಡ್ಡು' ಅಷ್ಟೇ ಅಕ್ಕಿಯೂ 5 ಕೋಟಿ ಪೌಂಡುಗಳಷ್ಟು ಆಲೂಗೆಡ್ಡೆಯೂ, 80 ಲಕ್ಷ ಪೌಂಡುಗಳಷ್ಟು ಮಾಂಸವೂ ಒಂದೇ ಒಂದು ತಾಸಿನಲ್ಲಿ ಮಾನವನ ಉದರ ಪೋಷಣೆಗಾಗಿ ಹೋಗುವುದು.

ಪ್ರಪಂಚದಲ್ಲೆಲ್ಲಾ ಒಂದು ಗಂಟೆಯೊಳಗಾಗುವ ಜನನ ಮರಣಗಳೆಷ್ಟು ಗೊತ್ತೆ? ಪ್ರತಿಯೊಂದು ತಾಸಿನಲ್ಲಿ 5,440 ಮಕ್ಕಳು ಹುಟ್ಟುವರು; 4,650 ಜನರು ಪರಲೋಕಕ್ಕೆ ಪ್ರಯಾಣಮಾಡುವರು. (ಯುದ್ಧದ ವಿಷಯವನ್ನು ಬಿಟ್ಟು ಬಿಡಿ) ಹೀಗೆ ಸಾಯುವರಲ್ಲನೇಕರೂ ರಸ್ತೆಗಳಲ್ಲಾಗುವ ಘಟನೆಯಿಂದಲೋ ಇಲ್ಲಾ ಅಲ್ಪಾಯಸ್ಸಿನಿಂದಲೋ ಸಾಯುವರು.

ಬ್ರಿಟಿಷ್ ಇಂಡಿಯಾ ಒಂದರಲ್ಲೇ ಮಲೇರಿಯಾದಿಂದ ಒಂದೆ ಗಂಟೆಯಲ್ಲಿ 120 ಜನರು ಸಾಯುವರು.

—:0:—

ಮಾನಿನಿಯನ್ನೇ ನೋಡದವ.

ಜೀವನದಲ್ಲಿ ಸ್ತ್ರೀ ವ್ಯಕ್ತಿಯ ದರ್ಶನವನ್ನು ಮಾಡದವರಿದ್ದರೆಂದರೆ ಆಶ್ಚರ್ಯವೆನಿಸಬಹುದು. ಆದರೆ ಅಥೆನ್ಸಿಂದ ಬಂದ ಸುದ್ದಿಯು ನಂಬುವಂತೆ ಮಾಡುತ್ತದೆ.

ಮೌಂಟ್ ಅಥಾಸ್ ಎಂಬುದೊಂದು ಪಾದ್ರಿಗಳ ಮಠ ಅಲ್ಲಿ ಮಿಹೈಲೊ ಟೊಲೊಟೊ ಎಂಬ ಸನ್ಯಾಸಿಯು ಕಳೆದ 82 ವರ್ಷಗಳಿಂದ ಅಲ್ಲಿಯೇ ಇದ್ದ. ಈತನ ಜನನವಾದ ಕೂಡಲೇ ಈತನ ತಾಯಿಯು ತೀರಿಹೋಗಲು ಸ್ತ್ರೀಯರ ಪ್ರವೇಶವೇ ಇಲ್ಲದ ಮೌಂಟ್ ಅಥಾಸ್ ಮಠದಲ್ಲಿಯೇ ಪಾಲನೆ ಪೋಷಣೆಯನ್ನು ಪಡೆದು ಅಲ್ಲಿಯೇ ಪಾದ್ರಿ ಸನ್ಯಾಸಿಯಾಗಿ ಜೀವಿಸುತ್ತಿದ್ದನು. ಈತನ 82 ವರ್ಷ ಆಯುಷ್ಯದಲ್ಲಿ ಒಬ್ಬ ಸ್ತ್ರೀಯ ಮುಖವನ್ನೂ ಸಹ ನೋಡದೆ ಪರಲೋಕಯಾತ್ರೆಯನ್ನು ನಡಿಸಿದ ಈತನ ವಿಷಯದಲ್ಲಿ ಏನೆನ್ನುವಿರಿ?

—:0:—

ಮೂಳೆ ಮುರಿಯುವವೆಂದರೆ ಎಷ್ಟು ಸಲ?

ಎದೆಯ ಸಂಬಂಧದ ಮೂಳೆಗಳು ಮುರಿದರೆ ಬದುಕಬಹುದೆ? 23 ಸಲ ಪಕ್ಕೆಲುಬು ಮುರಿದುಕೊಂಡ ಪ್ರಖ್ಯಾತ ಚಲನ ಚಿತ್ರ ನಟ ಸಾಹಸಿಯು ಈಗ ಇಂಗ್ಲೆಂಡಿಗೆ ಬಂದಿದ್ದಾನೆ.

ಕುದುರೆ ಸವಾರಿಯಲ್ಲಿ ಟಾಂ ಮಿಕ್ಸ್ ನ ಹೆಸರು ಕೇಳದ ಚಲಚಿತ್ರ ಪ್ರಿಯರಿಲ್ಲ. ಇವನು ಚಿಕ್ಕಂದಿನಲ್ಲಿ ಕುದುರೆಗಳನ್ನು ಮೇಯಿಸಿಕೊಂಡಿದ್ದರಿಂದ ಹಾಲಿವುಡ್ಡಿನ ಚಲಚಿತ್ರ ಸಂಸ್ಥೆಯವರು ಇವನನ್ನು ಆಹ್ವಾನಿಸಿ ತರತರದ ಚಿತ್ರವೆತ್ತಿದರು.

ಟಾಂ ಮಿಕ್ಸ್ ನು 55 ವರ್ಷ ಪ್ರಾಯದ ವರೆಗೆ ಚಲಚಿತ್ರಗಳಲ್ಲಿ ಪಾತ್ರವಹಿಸಿದ್ದಾನೆ. ಒಟ್ಟಿಗೆ ಇವನ 400 ಬೇರೆ ಬೇರೆ ಚಿತ್ರಗಳನ್ನೆತ್ತಲಾಗಿದೆ.

ಚಲಚಿತ್ರ ಜೀವನದಲ್ಲಿ ಟಾಂ ಮಿಕ್ಸ್ ನು 23 ಸಾರಿ ತನ್ನ ಪಕ್ಕೆಲುಬನ್ನು ಮುರಿದುಕೊಂಡಿರುವನಲ್ಲದೆ, ಬಲಗೈಯನ್ನು 5 ಸಾರಿಯೂ ಎಡಗೈಯನ್ನು 3 ಸಾರಿಯೂ ಮುರಿದುಕೊಂಡಿದ್ದಾನೆ. ನಾಲ್ಕು ಸಾರಿ ಇವನ ಕಾಲು ಕತ್ತರಿಸಿ ಹೋಗಿದೆ. ಶರೀರದ ವಿವಿಧ ಭಾಗಗಳಲ್ಲಿ ಒಟ್ಟು 56 ಶಸ್ತ್ರಚಿಕಿತ್ಸೆ ಪಡೆದ ಗುರುತುಗಳಿವೆ.

'ಈಗಿನ ಚಲಚಿತ್ರ ನಟರು ಮುಖ ವಿಕಾರ ಮಾಡಬಲ್ಲರೇ ವಿನಾ ಕುದುರೆ ಹತ್ತಬೇಕಾದರೆ ಬೇರೆಯವರ ಸಹಾಯ ಬೇಕು ಅವರಿಗೆ' ಎಂದು ಲೇವಡಿಯ ಧಾಟಿಯಲ್ಲಿ ಹೇಳುತ್ತಾನೆ ಟಾಂ ಮಿಕ್ಸ್.

—:0:—

ತನ್ನ ನಾಲಿಗೆಯನ್ನು ಮಗನಿಗಾಗಿ ಅರ್ಪಿಸಿದನು.

ನಾಸ್ತಿಕತ್ವವು ಹೆಚ್ಚುತ್ತಿರುವಂತೆ ಕಂಡು ಬಂದರೂ, ಆಸ್ತಿಕತ್ವವು ಅಳಿಯಲಾರದು. ಲಕ್ನೋದಲ್ಲಿ ಸಿತ್ಲಾದೇವಿಯ ಗುಡಿಯಿದೆ. ಅದೇ ಊರಿನಲ್ಲಿ ಚಂದ್ರಿಕ ತೆಲಿ ಎಂಬುವನ ಮಗನಿಗೆ ಬಹಳ ಕಾಯಿಲೆಯಾಗಿ, ಮಗನನ್ನು ಉಳಿಸಿದರೆ ತನ್ನ ನಾಲಿಗೆಯನ್ನು ಆ ದೇವಿಗೆ ಸಮರ್ಪಿಸುವುದಾಗಿ ಹರಕೆ ಹೊತ್ತಿದ್ದನು. ಪೂಜಾರಿಯು ಅಡ್ಡಿ ಬರುವುದರೊಳಗಾಗಿ ಚಂದ್ರಿಕನು ತನ್ನ ನಾಲಿಗೆಯನ್ನು ಬಂದು ಕತ್ತರಿಸಿ ದೇವಿ ಪಾದಗಳಲ್ಲಿಟ್ಟು ಮೂರ್ಛೆ ಹೋಗಿದ್ದನೆಂಬ ವರ್ತಮಾನವು ಲಕ್ನೋದಿಂದ ಬಂದಿದೆ. ಅವನು ಈಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾನೆ.

—:0:—

ಗ್ಯಾಲನ್ನಿಗೆ ನೂರು ಮೈಲಿ.

'ಗ್ಯಾಲನ್ನಿಗೆ ನೂರು ಮೈಲಿ' ಎಂದು ಕೇಳಿದೊಡನೆಯೇ ಅನೇಕ ಮಂದಿ ಮೋಟಾರು ಮಾಲೀಕರುಗಳ ಕಿವಿ ನೆಟ್ಟಗಾಗುತ್ತದೆ. ತಮ್ಮ ಮೋಟಾರುಗಳು ಗ್ಯಾಲನ್ ಪೆಟ್ರೋಲಿಗೆ ಒಂದು ನೂರು ಮೈಲಿ ಓಡುವುದಾದರೆ, ತಮಗೆ ಎಷ್ಟೋ ಉಳಿತಾಯವಾಗುವುದೆಂದು ನಂಬುವರು. ಏಕೆಂದರೆ ಪ್ರಕೃತ ಉಪಯೋಗದಲ್ಲಿರುವ ಮೋಟಾರುಗಳು ಹೆಚ್ಚು ಹೆಚ್ಚೆಂದರೆ ಗ್ಯಾಲನ್ನಿಗೆ ಮೂವತ್ತೈದು ಮೈಲಿಗಿಂತ ಹೆಚ್ಚಾಗಿ ಓಡುವುದಿಲ್ಲ. ಗ್ಯಾಲನ್ನಿಗೆ ನೂರಾದರೆ ಒಂದಕ್ಕೆ ಮೂರರಷ್ಟು ಲಾಭವಾಯಿತು.

ಗ್ಯಾಲನ್ನಿನ ನೂರರ ಕಥೆ ಅಷ್ಟಕ್ಕೇ ನಿಲ್ಲುವಂತಿಲ್ಲ. ಇಷ್ಟು ಸ್ವಲ್ಪ ಖರ್ಚಿನಿಂದ ಓಡುವ ಮೋಟಾರಿನ ಬೆಲೆ, ಬರೀ ಆರನೂರ ಎಪ್ಪತ್ತೈದು ರೂಪಾಯಿ! ಈ ಅಲ್ಪ ಬೆಲೆಯ ಮೋಟಾರು ಗಂಟೆಗೆ 62 ಮೈಲಿಯ ವರೆಗೆ ಓಡಬಲ್ಲುದು!

ಇಂತಹ ಅನುಕೂಲವಾದ ಮೋಟಾರನ್ನು ತಿಂಗಳಿಗೆ ನೂರು ರೂಪಾಯಿ ಕಂತಿನಿಂದ ಒಡಿದು, ಹದಿನೈದು ರೂಪಾಯಿನ ಕಂತಿನ ಮೇಲೆ ಕೊಳ್ಳಬಹುದು!

ಇವನ್ನೆಲ್ಲಾ ಓದಿ, ಇದು ಬರೀ ಬುಡವಿಲ್ಲದ ಬೊಗಳೆ ಎಂದು ಯಾರೂ ಭಾವಿಸಬಾರದು. ಜರ್ಮನಿಯಲ್ಲಿ ಹಿಟ್ಲರನು ಕೆಲಸಗಾರರಿಗೆಲ್ಲಾ ಒಂದೊಂದು ಸ್ವಂತ ಮೋಟಾರಿರುವಂತಾಗಬೇಕೆಂದು ಬಯಸಿ ಕೂಲಿಕಾರರ ಸಮಾಜದ ಆಶ್ರಯದಲ್ಲಿ ನಿರ್ಮಿಸಿರುವ ದೊಡ್ಡ ಮೋಟಾರು ಕಾರ್ಖಾನೆಯಲ್ಲಿ ಮೇಲೆ ಹೇಳಿದ ವಿವರಗಳಿಗೆ ಸರಿಹೋಗುವ ಮೋಟಾರು ತಯಾರಾಗುತ್ತದೆ. 'ಜರ್ಮನಿಯಲ್ಲಿ ಮೋಟಾರುಗಳನ್ನು ಚಾಕು ಕತ್ತರಿಗಳಷ್ಟು ಸರ್ವ ಸಾಮಾನ್ಯವಾಗಿ ಮಾಡುತ್ತೇನೆ' ಎಂದು ಹಿಟ್ಲರನು ಹೇಳಿಕೊಂಡಿದ್ದಾನೆ.

—:0:—

"ಕುಲ್ಲಟ್ಟಿ ಪೊನ್ನಣ್ಣ"ನ ಮೇಲಿನ ಟೀಕೆಗೆ ಉತ್ತರ.

ಮೊಟ್ಟ ಮೊದಲು ಈ ಟೀಕೆಯ ಲೇಖಕರು ನನ್ನ ಕಥೆಗಳಲ್ಲಿ ಬಾಯಿಮಾತಿನ ಕರಟೆಗಳು ಚರಿತ್ರಾಂಶಕ್ಕಿಂತ ಹೆಚ್ಚಾಗಿವೆ ಎಂದು ಬರೆದಿರುವರು. ಈ ಸಂಗತಿಯು ಅವರಿಗೆ ಕುಲ್ಲಟ್ಟಿ ಪೊನ್ನಣ್ಣನ ಕಥೆಯ ಆಧಾರದಿಂದ ತಿಳಿದ ಹಾಗೆ ತೋರುತ್ತದೆ. ನಾನು ಬರೆಯುವ ಕಥೆಗಳು ಪೂರ್ಣಯಾಗಿ ಚರಿತ್ರೆಯಲ್ಲ. ಚರಿತ್ರೆಯ ಕಥೆಗಳು ಎಂದರೆ ಚರಿತ್ರೆಯಲ್ಲಿ ನಡೆದಂತ ಕೆಲವು ಮುಖ್ಯ ಸಂಗತಿಗಳನ್ನು ತೆಗೆದುಕೊಂಡು ಅವನ್ನು ಮನೋರಂಜಕವಾಗಿ ಬರೆಯುವುದು. ಇದರಿಂದ ಚರಿತ್ರೆಯಲ್ಲಿ ನಡೆದ ಸಂಗತಿಗಳ ನಿಜತ್ವವು ಕೆಡುವುದಿಲ್ಲ. ಅದರ ಕೆಲವು ವಿವರಣೆಗಳು ಸೇರಿ ಅವು ಹೆಚ್ಚು ಜನಪ್ರಿಯವಾಗುತ್ತವೆ. ಚರಿತ್ರೆಯ ಎಲ್ಲಾ ಅಂಶಗಳಿಗೆ ಬರವಣಿಗೆಯ ಆಧಾರಗಳಿವೆಯೆಂದೆನ್ನುವುದಕ್ಕೆ ಸಾಧ್ಯವಿಲ್ಲ. ಮೊದಲು ಕೊಡಗಿನಲ್ಲಿ ಓದುಬರಹವನ್ನು ಬಲ್ಲ ಜನವು ಬಹಳ ಕಡಿಮೆ ಇದ್ದುದರಿಂದ ಯಾವುದೊಂದು ನಡೆದ ಸಂಗತಿಗೂ ಬರವಣಿಗೆಯ ಸಾಕ್ಷಿಗಳು ಅಪರೂಪವಾಗಿದ್ದವು. ಎಲ್ಲಾ ವಿಷಯಗಳೂ ಪರಂಪರಾನುಗತವಾಗಿ ಹೇಳಲ್ಪಡುತ್ತಿದ್ದವು. ಇಷ್ಟುಮಾತ್ರದಿಂದ ಅವು ಸುಳ್ಳೆಂದು ಹೇಳಲಾಗುವುದಿಲ್ಲ. ಪ್ರತಿಯೊಂದು ದೇಶದ ಚರಿತ್ರೆಯಲ್ಲಿಯೂ ಬಹಳ ಹಿಂದಿನ ಕಾಲದಲ್ಲಿ ನಡೆದ ಸಂಗತಿಗಳಿಗೆ ಬರವಣಿಗೆಯ ಆಧಾರಗಳು ಸಿಗುವುದಿಲ್ಲ. ಅಂಥಾ ಸಂದರ್ಭಗಳಲ್ಲಿ ಪರಂಪರಾನುಗತವಾಗಿ ಬಂದ ಹೇಳಿಕೆಯ ಕಥೆಗಳೂ, ಅಂಥಾ ಕಥೆಗಳನ್ನು ಬರೆದಿಟ್ಟ ಪುಸ್ತಕಗಳೂ ಬಹಳ ಸಹಾಯವಾಗುತ್ತವೆ. ಈ ಕಥೆಗಳಲ್ಲಿ ಚರಿತ್ರೆಯ ಸಂಗತಿಗಳನ್ನೇ ಹೆಕ್ಕಿ ತೆಗೆಯುವುದು ಲೇಖಕರ ಕರ್ತವ್ಯ. ಹಿಂದೂ ದೇಶದ ಇತಿಹಾಸವಲ್ಲದೆಯೂ ಕ್ರಿ. ಪೂರ್ವದ ಅನೇಕ ಸಂಗತಿಗಳಿಗೆ ಬಾಯಿಂದ ಬಾಯಿಗೆ ಬಂದ ಕಥೆಗಳೇ ಆಧಾರವಾಗಿವೆ. ಆದುದರಿಂದ ಐತಿಹಾಸಜ್ಞರು ಚರಿತ್ರೆಯನ್ನು ಬರೆಯುವುದಕ್ಕೆ ಸಹಾಯವಾಗುವ ಆಯ ಆಧಾರಗಳಲ್ಲಿ ಪರಂಪರಾನುಗತವಾದ ಕಥೆಗಳನ್ನೂ (tradition) ಸೇರಿಸಿದ್ದಾರೆ.

ಎರಡನೇ, ಚರಿತ್ರೆಯ ಕಥೆಗಳಲ್ಲಿ ವರ್ಣನೆಗಳು ಇರಬಾರದೆಂತಲ್ಲ. ಲೋಕಪ್ರಖ್ಯಾತಿಯನ್ನು ಹೊಂದಿದ ಷೇಕ್ಸ್‌ಪಿಯರಿನ ಐತಿಹಾಸಿಕ ನಾಟಕಗಳಲ್ಲಿಯೂ ಇಂಗ್ಲಿಷ್ ಮತ್ತು ಇತರ ಭಾಷೆಗಳಲ್ಲಿರುವ ಐತಿಹಾಸಿಕ ಕಾದಂಬರಿಗಳಲ್ಲಿಯೂ ವರ್ಣನೆಗಳೂ ಪ್ರಣಯ ಪ್ರಸಂಗಗಳೂ ಇತರ ಅನೇಕ ಸನ್ನಿವೇಶಗಳೂ ತುಂಬಿ ತುಳುಕುತ್ತವೆ. ಅಷ್ಟುಮಾತ್ರದಿಂದ ಅವನ್ನು ಐತಿಹಾಸಿಕವಲ್ಲವೆಂದು ಹೇಳುವುದಕ್ಕೆ ಸಾಧ್ಯವಿಲ್ಲ.

ಇನ್ನು ಕುಲ್ಲಟ್ಟಿ ಪೊನ್ನಣ್ಣನ ಕಥೆಯಲ್ಲಿ ಕಾಲಗಣನೆಯ ವಿಚಾರ. ಈ ಕಥೆಯಲ್ಲಿ ಕಥಾನಾಯಕನು ಕುಲ್ಲಟ್ಟಿ ಪೊನ್ನಣ್ಣನು. ಆದುದರಿಂದ ಆತನ ಹಿಂದಿನವನ ಹೆಸರು ಮತ್ತು ಜೀವಿಸಿದ ಕಾಲವನ್ನು ವಿಶದವಾಗಿ ಬರೆಯುವ ಅಗತ್ಯವಿರುವುದಿಲ್ಲ. ಪೊನ್ನಣ್ಣನ ಚರಿತ್ರೆ ಬರೆಯುವಾಗ ಅವನ ಕುಟುಂಬದ ಮೂಲವನ್ನು ಸಂಕ್ಷೇಪವಾಗಿ ತಿಳಿಸಿದರೆ ಸಾಕು. ನೂರಂಬಡ ನಾಯಕನು ಹಾಲೇರಿ ಅರಸರ ಆಳ್ವಿಕೆಯ ಮೊದಲೇ ಇದ್ದನು. ಆತನನಂತರ ಅವನ ಪರಂಪರೆಯಲ್ಲಿ ಕ್ರಿ. ಶ. 1762 ರಲ್ಲಿ ಪೊನ್ನಣ್ಣನು ಜನಿಸಿದನು. ಇವರ ನಡುವೆ ಅನೇಕ ತಲೆಗಳು ಕಳೆದಿರಬಹುದು. ಇವರಲ್ಲಿ ಎಲ್ಲರ ಹೆಸರನ್ನು ಹಾಕಲಿಲ್ಲವೆಂಬಮಾತ್ರಕ್ಕೆ ಆ ಕಥೆಯ ಕಾಲಗಣನೆಯು ಸರಿಯಾಗಿಲ್ಲವೆಂಬುದು ಸಮಂಜಸವಾಗಿ ತೋರುವುದಿಲ್ಲ. ಟೀಕಾಕರ್ತರು ಪೊನ್ನಣ್ಣನು ಬರೀ ಇಪ್ಪತ್ತೈದು ವರ್ಷಗಳು ಜೀವಿಸಿದ್ದನೆಂದು ಹಿರಿಯರು ಹೇಳುತ್ತಾರೆಂದು ಹೇಳಿರುವರು. ಇದಾದರೂ ಹೇಳಿಕೆಯ ಮಾತೇ ಆಗಿರುವುದು. ಇವರು ಪೊನ್ನಣ್ಣನು 1780 ರಷ್ಟಕ್ಕೆ ಜನಿಸಿದನೆಂದು ಭಾವಿಸಬೇಕಾಗಿದೆಯೆಂದು ಬರೆದಿರುವರು. ಈ ಇಸವಿಯು ಅವರಿಗೆ ಯಾವ ಕಾಲಗಣನೆಯ ಮೇರೆ ಸಿಕ್ಕಿತೋ ನನಗೆ ತಿಳಿಯುವುದಿಲ್ಲ. ಒಂದು ವೇಳೆ ಅವರು ಹೇಳುವ ಹಾಗೆ 1780 ರಷ್ಟಕ್ಕೆ ಜನಿಸಿದ್ದರೆ 1789 ರಲ್ಲಿ ಕುಶಾಲನಗರದ ಕೋಟೆಯ ಕಿಲ್ಲೇದಾರನ ತಲೆಯನ್ನು 9, 10 ವರ್ಷದ ಬಾಲಕನಿಗೆ ಕಡಿಯಲು ಸಾಧ್ಯವಿತ್ತೇ ಎಂಬ ಪ್ರಶ್ನೆಯು ಬರುತ್ತದೆ. ಕುಶಲ್‌ನಗರದ ಕೋಟೆಯನ್ನು 1790 ರಲ್ಲಿ ವೀರರಾಜನು ಹಿಡಿದದ್ದಾಗಿ ನಿಶಾನಿ ಹೈದರಿಯಲ್ಲಿ ಜೆಯಾಗಿ ಟೀಕಾಕರ್ತರು ಬರೆಯುವರು. ಕುಶಲ್‌ನಗರದ ಕೋಟೆಯನ್ನು ಹಿಡಿದ ಇಸವಿಯನ್ನು ಕಂಡುಹಿಡಿಯುವುದಕ್ಕೆ ಕಿರ್ಮಾನಿಯ ನಿಶಾನಿ ಹೈದರಿಯು ಬೇಕಾಗಿಲ್ಲ. ಅವರಲ್ಲಿ ಅವರು ಕಂಡು ಹಿಡಿದ 1790 ನೇ ಇಸವಿಯೂ ಸರಿಯಲ್ಲ. ಕೋಟೆಯನ್ನು ಹಿಡಿದದ್ದು ನನ್ನ ಕಥೆಯಲ್ಲಿ ಬರೆದ ಹಾಗೆ 1789 ರಲ್ಲಿ. ಈ ಇಸವಿಯು ರಾಜೇಂದ್ರನಾಮೆಯ ಹಿಂದೂ ಕಾಲಗಣನೆಗೆ ಸರಿಯಾಗಿದೆ. ಆದುದರಿಂದ ಪೊನ್ನಣ್ಣನು 1780 ರಲ್ಲಿ ಜನಿಸಿರುವುದು ಅಸಂಭವ.

ಇವರು ಕಲಿಯಾಟಂಡ ಪೊನ್ನಪ್ಪನು ಪೊನ್ನಣ್ಣನ ತಮ್ಮ ಇದ್ದ ಎಂಬುದನ್ನು ಆಕ್ಷೇಪಿಸಿ ಎಂದು ಹೇಳಿರುವರು. ಕಲಿಯಾಟಂಡ ಪೊನ್ನಪ್ಪನೆಂದರೆ ಅಜ್ಜಪ್ಪನೆಂದೂ ಪೂಜಿಸಲ್ಪಡುವ ಪೊನ್ನಪ್ಪನೇ ಆಗಿರಬೇಕು. ಯಾಕೆಂದರೆ ಕಲಿಯಾಟಂಡ ಮನೆಯಲ್ಲಿ ಪೊನ್ನಪ್ಪನೆಂಬ ಹೆಸರಿನವರು ಅಜ್ಜಪ್ಪನಿಂದ ಇತ್ತಲಾಗಿ ಯಾರೂ ಇಲ್ಲವೆಂದು ಕಲಿಯಾಟಂಡ ಮನೆಯವರಿಂದಲೇ ನಾನು ತಿಳಿದಿದ್ದೇನೆ. ಹಾಗಿದ್ದರೆ ಪೊನ್ನಪ್ಪನು ಪೊನ್ನಣ್ಣನ ತಮ್ಮ ಇರುವನನ್ನು ಕೊಲ್ಲುವುದು ಹೇಗೆಂದು ನನಗೆ ತಿಳಿಯುವುದಿಲ್ಲ. ಅಜ್ಜಪ್ಪನು ಜೀವಿಸಿದ್ದು ಕರ್ಣಂಬಾಡು ನಾಯಕನ ಕಾಲದಲ್ಲಿ ಎಂದರೆ ಕ್ರಿ. ಶ. 1633 ರ ಹಿಂದೆ. ಪೊನ್ನಣ್ಣನು ಇದ್ದದ್ದು ಕ್ರಿ. ಶ. 1762 ರ ನಂತರ. ಆದುದರಿಂದ ಇನ್ನೊಬ್ಬರ ಕಾಲಗಣನೆಯಲ್ಲಿ ತಪ್ಪು ಕಂಡುಹಿಡಿಯುವುದರ ಬದಲು ತಮ್ಮ ಕಾಲಗಣನೆಯಲ್ಲಿ ಎಚ್ಚರವಿಡುವುದು ಉತ್ತಮ.

ಕುಲ್ಲಟ್ಟಿ ಮನೆ ಹೆಸರು ಬಂದ ವಿಚಾರ ಅವರು ಬರೆಯುವುದೂ ಹೇಳಿಕೆ ಮಾತಿನ ಆಧಾರದಿಂದ. ಆದುದರಿಂದ ಅದಾದರೂ ಸ್ವಕಪೋಲಕಲ್ಪಿತ ಏಕಾಗಿರಬಾರದು?

ಇನ್ನು ನಾಯಕರ ವಿಷಯ-ಹಾಲೇರಿ ಅರಸರ ಮೊದಲು ಕೊಡಗನ್ನು ನಾಯಕರು ಆಳುತ್ತಿದ್ದರೆಂಬುದು ನಿರ್ವಿವಾದವಾದದ್ದು. ಕೊಡಗು ಆಗ ಹನ್ನೆರಡು ಕೊಂಬುಗಳಾಗಿಯೂ, ಮೂವತ್ತೈದು ನಾಡುಗಳಾಗಿಯೂ ವಿಭಾಗಿಸಲ್ಪಟ್ಟಿತ್ತು. ಈ ನಾಡುಗಳನ್ನು ಎಷ್ಟು ಜನ ನಾಯಕರು ಆಳುತ್ತಿದ್ದರೆಂದು ತಿಳಿಯುವುದಿಲ್ಲ. ಆದರೆ ಹ್ಯಾಗೂ ಪಾಡಿನಾಲ್ಕುನಾಡನ್ನು ಅಥವಾ ಅದರಲ್ಲಿ ಸೇರಿರುವ ಚಿಕ್ಕ ಚಿಕ್ಕ ನಾಡುಗಳನ್ನು ಯಾರಾದರೂ ನಾಯಕರು ಆಳುತ್ತಿದ್ದಿರಬೇಕು. ನನಗೆ ತಿಳಿದ ಸಂಗತಿ ಮೇರೆ ನೂರಂಬಡ ನಾಡಿನಲ್ಲಿ ನೂರಂಬಡ ನಾಯಕನು ಆಳುತ್ತಿದ್ದನು. ಈತನು ಆಳುತ್ತಿದ್ದುದು ಹಾಲೇರಿ ಅರಸರ ಕಾಲಕ್ಕೆ ಮೊದಲೇ ಎಂದು ನಾನು ಬರೆದಿರುವೆನು. ನೂರಂಬಡ ನಾಯಕನು ಇದ್ದನೆಂಬುದಕ್ಕೆ ಬರವಣಿಗೆಯ ಆಧಾರವಿಲ್ಲದಿರಬಹುದು ಆದರೆ ಆ ಕಾಲದಲ್ಲಿ ಪಾಡಿನಾಲ್ಕುನಾಡಿನ ಯಾವ ನಾಯಕನ ಆಳ್ವಿಕೆಗೂ ಬರವಣಿಗೆ ಆಧಾರ ಇದ್ದಂತೆ ತೋರುವುದಿಲ್ಲ. ಇನ್ನು 1788 ರಲ್ಲಿ ನಾಯಕರಿರಲಿಲ್ಲವೆಂಬ ವಿಚಾರ. ಆಗ ದೇಶವು ಅನಾಯಕವಾಗಿತ್ತು ನಿಜ. ಎಂದರೆ ದೇಶದಲ್ಲಿ ಒಬ್ಬನೇ ಒಬ್ಬ ಬಲಶಾಲಿಯಾದ ರಾಜನು ಇರಲಿಲ್ಲ. ಅಂಥಾ ಸಮಯದಲ್ಲಿಯೇ ಊರಿಗೊಂದು, ಕೇರಿಗೊಂದು ನಾಯಕ ಎಂದರ ಯಜಮಾನರಿರುವುದು. ಇವರ ಅಧಿಕಾರವು ಕೆಲವು ದಿವಸಗಳೇ ನಡೆಯಬಹುದು ಅಥವಾ ಹೆಚ್ಚು ದಿವಸಗಳು ನಡೆಯಬಹುದು. ಯಾವಾಗ ರಾಜನ ಅಧಿಕಾರವು ಚೆನ್ನಾಗಿ ಸ್ಥಾಪಿಸಲ್ಪಡುವುದೋ ಆಗ ಈ ಊರು ಕೇರಿಗಳ ನಾಯಕರು ಮಾಯವಾಗುವರು. ಇಂಥಾ ಉಥ-ಹಂಗೆಗಳು ಪ್ರತಿಯೊಂದು ದೇಶದ ಇತಿಹಾಸದಲ್ಲಿಯೂ ಬೇಕಾದಷ್ಟು ಸಿಗುವವು.

ಗುಲಾಮುಲ್ಲಿಯೊಡನೆ ಮತ್ತು ಬುರಾನುದ್ದೀನನೊಡನೆ ಮಾಡಿದ ಯುದ್ಧಗಳಲ್ಲಿ ಪೊನ್ನಣ್ಣನೊಬ್ಬನೇ ವೀರನಾಗಿದ್ದನೋ ಎಂದು ಬರೆದಿರುವರು. ಗುಲಾಮುಲ್ಲಿಯೊಡನೆ ಮಾಡಿದ ಯುದ್ಧದಲ್ಲಿ ಪೊನ್ನಣ್ಣನ ಹೆಸರನ್ನೇ ನಾನು ಹಾಕಿರುವುದಿಲ್ಲ. ಇತರ ಯುದ್ಧಗಳಲ್ಲಿ ಅಪ್ಪನೆರವನ ಅಚ್ಚಯ್ಯ, ಪಟ್ಟಚೆರವನ ಬೋಳುಕ, ಕುಲ್ಲಟ್ಟಿ ಪೊನ್ನಣ್ಣ ಮೊದಲಾದ ಕಾರ್ಯಗಾರರು ಅಥವಾ ವೀರರು ಭಾಗ ವಹಿಸಿದರೆಂದು ನಾನು ಬರೆದಿರುವೆನು. ಇದರಿಂದ ಪೊನ್ನಣ್ಣನೊಬ್ಬನೇ ಅಥವಾ ಅಚ್ಚಯ್ಯ, ಬೋಳುಕ ಮತ್ತು ಪೊನ್ನಣ್ಣ ಇವರು ಮೂರು ಜನರೇ ವೀರರೆಂದು ಹೇಗೆ ಅರ್ಥವಾಗುವುದೋ ನನಗೆ ತಿಳಿಯುವುದಿಲ್ಲ. ಇವರೇ ಮೊದಲಾದವರು ಎಂದರೆ ಇವರಲ್ಲದೆ ಬೇರೆಯವರೂ ಇದ್ದರೆಂದು ವ್ಯಕ್ತವಾಗುವುದಿಲ್ಲವೇ? ರಾಜೇಂದ್ರನಾಮೆಯಲ್ಲಿ ಕಡಿಯತ್ನಾಡು ಪಾಡಿನಾಲ್ಕುನಾಡುಗಳಿಗಾಗಿ ಇವರ ಮೂರು ಜನರ ಹೆಸರಲ್ಲದೆ ಕೇಟುವಳಿ ಅಚ್ಚುವಣ್ಣ ಮತ್ತು ಬೋಪು (ಬಿದ್ದಂಡ) ಇವರ ಹೆಸರು ಇದೆ. ಬೋಪ್ಪುವು ಆಗ ಇನ್ನೂ ಚಿಕ್ಕವನಾಗಿದ್ದುದರಿಂದ ಅವರ ಹೆಸರನ್ನು ಹಾಕಲಿಲ್ಲ. ಬೇರೆ ವೀರರ ಹೆಸರುಗಳು ರಾಜೇಂದ್ರನಾಮೆಯಲ್ಲಿದ್ದಿದ್ದರೆ ಅವರ ಹೆಸರನ್ನು ಸಂತೋಷದಿಂದ ಹಾಕಬಹುದಿತ್ತು. ಟೀಕಾಕರ್ತರು ಬೇರೆ ವೀರರ ಹೆಸರನ್ನು ಆಧಾರ ಸಮೇತವಾಗಿ ತಿಳುಹಿಸಿದರೆ ಅವರಿಗೆ ನಾನು ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇನೆ. ಕೆಲವು ಮನೆತನಗಳನ್ನೇ ಹೊಗಳಿ ಬರೆಯಬೇಕೆಂಬ ಉದ್ದೇಶವು ನನಗಿಲ್ಲ. ಕುಲ್ಲಟ್ಟಿ ಪೊನ್ನಣ್ಣನು ಕುಶಾಲ್‌ನಗರ ಕೋಟೆಯ ಕಿಲ್ಲೇದಾರನ ತಲೆಯನ್ನು ಕಡಿದನೆಂಬುವುದು ಒಂದೇ ರಾಜೇಂದ್ರನಾಮೆಯಲ್ಲಿ ಇದೆಯೆಂದು ಬರೆದಿರುವರು. ಹಾಗಾದರೆ ಆ ಕಿಲ್ಲೇದಾರನ ತಲೆಯನ್ನು ಕಡಿದ ಮೇಲೆ ಪೊನ್ನಣ್ಣನು ಯಾವ ಯುದ್ಧಗಳನ್ನು ಮಾಡಲಿಲ್ಲ, ಮನೆಗೆ ಹೋಗಿ ಸುಮ್ಮನೆ ಕುಳಿತುಕೊಂಡುಬಿಟ್ಟನು ಎಂದು ಅರ್ಥವಾಗುತ್ತದೋ? ಕಿಲ್ಲೇದಾರನ ತಲೆಯನ್ನು ಕಡಿದು ರಾಜನಿಂದ ಮೆಚ್ಚಿಕೆಯನ್ನು ಪಡೆದವನು ಇನ್ನೂ ಹೆಚ್ಚಿನ ಉತ್ಸಾಹದಿಂದ ಮುಂದಿನ ಯುದ್ಧಗಳಲ್ಲಿ ಕಾದುವುದು ಸ್ವಾಭಾವಿಕವಲ್ಲವೇ?

ಇನ್ನು ಪೊನ್ನಣ್ಣನು ಏಕ ಕಾಲದಲ್ಲಿ ಅನೇಕ ಕದನಗಳಲ್ಲಿ ಹೇಗೆ ಕಾದಾಡಿದನು ಎಂದು ಕೇಳಿರುವರು. ಬುರಾನುದ್ದೀನನು ಸೋತು ತೆಗೆದುಕೊಂಡು ಹೋಗುವಾಗ ಮಾರ್ಗದಲ್ಲಿ ಅಲ್ಲಲ್ಲಿ ಪೊನ್ನಣ್ಣನು ಅವರ ಮೇಲೆ ಬಿದ್ದು ಯುದ್ಧ ಮಾಡಿದನೆಂದು ಬರೆದಿರುವೆನು. ಈ ಯುದ್ಧಗಳು ಒಂದರ ನಂತರ ಒಂದು ಆದವು ...ಕ ಕಾಲದಲ್ಲಿ ನಡೆದವುಗಳಲ್ಲ. ಆದುದರಿಂದ ಪೊನ್ನಣ್ಣನು ಆ ಯುದ್ಧಗಳಲ್ಲಿ ಭಾಗವಹಿಸಿದ್ದನೆಂಬುದು ಅಸಂಭವ ಎಂದು ಹೇಳುವುದು ಹೇಗೆ?

ಕೇಟೋಳಿರ ಮನೆಯಲ್ಲಿ ರಾಣಿಯು ಸಖಿಯಾಗಿ ಪೊನ್ನಣ್ಣನ ಹೆಂಡತಿಯನ್ನು ಬಿಟ್ಟಿದ್ದರಲ್ಲಿ ಸೋಜಿಗವೇನೂ ಇಲ್ಲ. ಆ ಸಮಯದಲ್ಲಿ ರಾಜನೂ ಪೊನ್ನಣ್ಣ ಮೊದಲಾದವರೂ ಟಿಪ್ಪುವಿನ ಸೈನ್ಯದೊಡನೆ ಯುದ್ಧ ಮಾಡುತ್ತಿದ್ದರು. ಮತ್ತು ... ರಾಜನು ಪರಸ್ತ್ರೀ ಕಾಮುಕನೆಂದು ಚರಿತ್ರೆಯಿಂದ ತಿಳಿಯುವುದಿಲ್ಲ.

ತಂತ್ರಿಯ ವಿಷಯದಲ್ಲಿ ಪೊನ್ನಣ್ಣನು ಕಾಲು ಕುಂಟಾಗಿದ್ದು, ಹೇಗೆ ಒದ್ದನು! ಎಂದು ಕೇಳಿರುವರು. ಪೊನ್ನಣ್ಣನು ಕಾಲು ಕುಂಟಾಗಿತ್ತು ಎಂದರೆ ಕಾಲು ಮುರಿದು ತುಂಡಾಗಿತ್ತು ಎಂದು ಅಭಿಪ್ರಾಯವಲ್ಲ. ನೆಟ್ಟಗೆ ನಡೆಯುವುದಕ್ಕೆ ಮಾತ್ರ ಆಗುತ್ತಿರಲಿಲ್ಲವೆಂದು ತಿಳಿಯಬೇಕು.

ರಾಜ ಕಾರ್ಯಗಳಲ್ಲಿ ಪೊನ್ನಣ್ಣನ ಹೇಳಿಕೆ ಮೇರೆ, ನೂರಂಬಡದವರು ನಡೆ

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ.

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೦೧,೭೩೮— ೭—೨
ಏಜಂಟರಿಗೆ ಸಾಲ ಮತ್ತು ಆಸ್ತಿಯ ಒತ್ತೆ	೬೦,೯೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೧೫೩— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು

೧೯೨೭ ———— ೨೧,೩೫,೭೩೪ ರೂಗಳು.

೧೯೩೭ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೫೫,೯೭,೦೪೦ ರೂಗಳಿಗೆ ಮೇಲೆ

ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎಸ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.
ಅಫಿಷಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12–5

ಯುತ್ತಿದ್ದರು ಎಂದರೆ ತಮ್ಮ ನಾಡಿನ ಸಾಮಾಜಿಕ ಅಥವಾ ಧಾರ್ಮಿಕ ಸಂಗತಿಗಳಲ್ಲಿ ನಾಡಿನವರಿಗೆ ಭಿನ್ನಾಭಿಪ್ರಾಯಗಳಿರಬಾರದೆಂದಿಲ್ಲ. ದೇವಸ್ಥಾನದಲ್ಲಿ ಅಷ್ಟಬಂಧ ಮಾಡಿಸುವುದು ರಾಜಕಾರ್ಯವಲ್ಲ, ಪೊನ್ನಣ್ಣನು ಕಾಲುಕುಂಟಾಗಿ ಮನೆಗೆ ಬಂದ ಮೇಲೆ ಅವನಿಗೆ ರಾಜಕಾರ್ಯವೆಲ್ಲಿಯದು.

ತಂತ್ರಿಗಳ ಹುಕುಂ ಇಲ್ಲದೆ ಬೇರೆ ಯಾವ ಬ್ರಾಹ್ಮಣರೂ ತಂತ್ರಿತ್ವವನ್ನು ಮಾಡಬಾರದೆಂಬುದು ಸರಿ. ಆದರೆ ತಂತ್ರಿಗಳೇ ತಾನು ಮಕ್ಕಿ ದೇವಸ್ಥಾನಕ್ಕೆ ಅಷ್ಟಬಂಧ ಮಾಡಿ ಬರುವುದರೊಳಗೆ ಕಕ್ಕೇರಿ ದೇವಸ್ಥಾನದಲ್ಲಿ ಅಷ್ಟಬಂಧ ಮಾಡಿಸುವುದಕ್ಕೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ಮಾಡುವುದಕ್ಕೆ ತನ್ನ ಪರಿವಾರದ ತಂತ್ರಿತ್ವ ಗೊತ್ತಿದ್ದ ಬ್ರಾಹ್ಮಣರನ್ನು ಯಾತಕ್ಕೆ ಆಗಲೇ ಕಳುಹಿಸಿರಬಾರದು? ಆ ಬ್ರಾಹ್ಮಣರಿಂದಲೇ ತಂತ್ರಿಯು ಬರುವ ಮೊದಲೇ ಪೊನ್ನಣ್ಣನು ಬಲಾತ್ಕಾರದಿಂದ ಅಷ್ಟಬಂಧ ಯಾತಕ್ಕೆ ಮಾಡಿಸಿರಬಾರದು? ಆ ಸಮಯದಲ್ಲಿ ಸಿಟ್ಟಿನ ಭರದಲ್ಲಿ ಪೊನ್ನಣ್ಣನಿಗೆ ನ್ಯಾಯಾನ್ಯಾಯ ವಿಮರ್ಶೆಯಿಲ್ಲದಿರಬಹುದು.

ಪೊನ್ನಣ್ಣನಿಗೆ ಉಂಬಳಿ ಜಹಗೀರುಗಳನ್ನು ಕೊಟ್ಟಿದ್ದಕ್ಕೆ ಯಾವ ದಾಖ್ಲೆಗಳೂ ಇಲ್ಲನೆಂದು ಬರೆದಿದ್ದಾರೆ. ದೊಡ್ಡ ವೀರರಾಜನ ಕಾಲದಲ್ಲಿ ಯಾರಿಗೆ ಭೂಮಿ ಕೊಟ್ಟಿದ್ದಕ್ಕೂ ದಾಖ್ಲೆಗಳಿದ್ದ ಹಾಗೆ ಕಾಣುವುದಿಲ್ಲ. ಯಾಕೆಂದರೆ ಶಿಸ್ತು ನಿರೂಪ ಮೊದಲಾದವು ಲಿಂಗರಾಜನ ಕಾಲದಲ್ಲಿ ಬಂದದ್ದು, ಇದಲ್ಲದೆ ದೊಡ್ಡ ವೀರರಾಜನ ಕಾಲದಲ್ಲಿಯೇ ಜಹಗೀರು ಕೊಟ್ಟಿದ್ದೆಂದು ಪ್ರಸಿದ್ಧಿಯಿರುವ ಮೂರ್ನಾಡು, ಕುಂದ, ಬಿಳುಗುಂದ ಜಹಗೀರುದಾರರ ಜಹಗೀರು ನಿರೂಪಗಳು, 1820 ನೇ ಇಸವಿ ಮತ್ತು ಇತ್ತಲಾಗಿನವು. ಕೊಡಗಿನಲ್ಲಿ ಉಂಬಳಿ, ಜಹಗೀರು ಮುಂತಾದವುಗಳ ದಾಖ್ಲೆಗಳು ಕ್ರಿ. ಶ. 1809 ಕ್ಕೆ ಮೊದಲಿನವು ಇಲ್ಲವೆಂದು ಮ. ಕೊಡಂದೇರ ಬೋಪೈಯ್ಯನವರು ಸಂಗ್ರಹಿಸಿ ಅಚ್ಚು ಮಾಡಿಸಿದ 'List of awards and Pensions granted by the late Raja and the British' ಎಂಬ ಪುಸ್ತಕದಿಂದ ತಿಳಿಯುತ್ತದೆ. ಈ ಪುಸ್ತಕದಲ್ಲಿ 1805 ನೇ ಇಸವಿಯಲ್ಲಿ ಶಿರಂಗಾಲದಲ್ಲಿ ಒಂದು ಭೂಮಿಯನ್ನು ಉಂಬಳಿಯಾಗಿ ಕೊಟ್ಟದ್ದು ಮಾತ್ರ ಬರೆದಿದೆ.

ಕುಲ್ಲಟ್ಟಿರ ಪೊನ್ನಣ್ಣನಿಗೆ ಕೊಂಬುಕೊಪ್ಪಿ ಸಿಕ್ಕಿದ ಪ್ರಸ್ತಾಪವಿಲ್ಲ; ಆದ್ದರಿಂದ ಆತನು ಕಾರ್ಯಗಾರನಲ್ಲವೆಂದು ಬರೆದಿರುವರು. ಪ್ರತಿಯೊಬ್ಬ ಕಾರ್ಯಕಾರನಿಗೂ ಕೊಂಬುಕೊಪ್ಪಿ ಸಿಕ್ಕಿದ ಪ್ರಸ್ತಾಪವಿಲ್ಲ. ಇಡೀ ಕೊಡಗಿನಲ್ಲಿ ರಾಜರ ಕಾಲದಲ್ಲಿ ಮೂರು ನಾಲ್ಕು ಕೊಂಬು ಕೊಪ್ಪಿಗಳು ಮಾತ್ರ ಸಿಕ್ಕಿದ ಪ್ರಸ್ತಾಪವಿದೆ. ಇದಲ್ಲದೆ ರಾಜೇಂದ್ರನಾಮೆಯಲ್ಲಿ ಒಬ್ಬ ಕಾರ್ಯಕಾರರ ಹೆಸರು ಬರೆದಿದೆ. ಅವರಿಗೆ ಕೊಂಬುಕೊಪ್ಪಿ ಸಿಕ್ಕಿದ ಪ್ರಸ್ತಾಪವಿರುವುದಿಲ್ಲ. ಆದರೆ ಶಾಲು ಮೊದಲಾದ ಇತರ ಬಹುಮಾನಗಳು ದೊರೆತಿವೆ. ಆದ್ದರಿಂದ ಎಲ್ಲಾ ಕಾರ್ಯಕಾರರಿಗೂ ಕೊಂಬುಕೊಪ್ಪಿ ಸಿಕ್ಕಲೇಬೇಕೆಂದು ಹೇಳುವುದಕ್ಕೆ ಅವಕಾಶವಿಲ್ಲ.

ಪೊನ್ನಣ್ಣನು ಗುಂಡು ಹೊಡೆದುಕೊಂಡಾಗ ಮಾಣಚ್ಚನು ಪೊನ್ನಣ್ಣನ ಮನೆಯ ಹತ್ತಿರವೇ ಒಂದೆರಡು ಫರ್ಲಾಂಗುಗಳ ದೂರದಲ್ಲಿ ಇನ್ನೊಂದು ಮನೆಯಲ್ಲಿ ವಾಸವಿದ್ದನೆಂದು ತಿಳಿಯುತ್ತೇನೆ.

ಮಾಣು ಎಂಬವನಲ್ಲಿ, ಮಾಣಚ್ಚನು ಪೊನ್ನಣ್ಣನ ನಂತರ ಆ ಮನೆಯಲ್ಲಿ ವಾಸವಿದ್ದನು. ಮಾಣಚ್ಚನನ್ನೇ ಊರಿನ ಹಿರಿಯರು ಮಾಣು ಎಂದು ಕರೆಯುತ್ತಿದ್ದು ಕೆಲವರಿಗೆ ಆ ಹೆಸರೇ ವಾಡಿಕೆಯಾಗಿರಬಹುದು.

ಕೊನೆಯಲ್ಲಿ ನನ್ನ ಕಥೆಗಳಲ್ಲಿ ನ್ಯೂನೋಕ್ತ ವಚನ ದೋಷಗಳು ಇವೆಯೆಂದು ಬರೆದಿರುವರು. ಅವರು ಬರೆದಿರುವ ಯಾವ ದೋಷವೂ ನನ್ನ ಕಥೆಗಳಲ್ಲಿ ಕಾಣುವುದಿಲ್ಲ. ಒಟ್ಟಾರೆ ಈ ಟೀಕೆಯು ನಿಷ್ಪಕ್ಷಪಾತ ದೃಷ್ಟಿಯಿಂದ ಬರೆದಂತೆ ತೋರುವುದಿಲ್ಲ. ಬರೇ ದೋಷಗಳನ್ನು ಹುಡುಕಿ ತೋರಿಸಬೇಕೆಂದು ಬರೆದಂತೆ ತೋರುತ್ತದೆ. ಚರಿತ್ರೆ ಕಥೆಗಳೆಂದರೆ ಏನೆಂದು ನಾನು ಮೊದಲೇ ವಿವರಿಸಿರುವುದರಿಂದ ನನ್ನ ಕಥೆಗಳಿಗೆ ಹೆಸರು ಬದಲಾಯಿಸುವ ಅಗತ್ಯವಿರುವುದಿಲ್ಲ.

ಡಿ. ಯನ್. ಕೃಷ್ಣಯ್ಯ.

ಡಾ. ಮೇಕ್ಸ್ಮಸ್ ಎಬ್ರಹಾಮ್
ದಂತ ವೈದ್ಯರು.
(ಪೀಯರ್ಸ್‌ಲೆಸ್ಲಿ ಬಂಗ್ಲೆ)
(ಸ್ಪೆನ್ಸರ್ಸ್ ಹತ್ತಿರ)
ಮಡಿಕೇರಿ.

ಕೊಡಗು

ಅಕ್ಟೋಬರ್ ತಾರೀಕು ೧೪ನೇ ಶುಕ್ರವಾರ ೧೯೩೮.

ಕೊಡಗನ್ನು ಕುರಿತ ಹರಿಪುರ ಕಾಂಗ್ರೆಸು ಠರಾವು.

ಈ ವರ್ಷದ ವರೆಗೆ ಕೊಡಗನ್ನು ಕುರಿತು ಕಾಂಗ್ರೆಸು ಮಹಾ ಸಭೆಯಲ್ಲಿ ಗೊತ್ತುವಳಿ ಏನೂ ಆಗಿರಲಿಲ್ಲ. ಆದರೆ ಈ ವರ್ಷ ಫೆಬ್ರವರಿ ತಿಂಗಳಲ್ಲಿ ಹರಿಪುರದಲ್ಲಿ ನಡೆದ ಕಾಂಗ್ರೆಸು ಸಭೆಯಲ್ಲಿ ಕೊಡಗನ್ನು ಮದ್ರಾಸು ಪ್ರಾಂತ್ಯದ ಕರ್ನಾಟಕಕ್ಕೆ ಸೇರಿಸಬಹುದೆಂಬ ಇಲ್ಲಿಯ ಜನರ ಕೋರಿಕೆಗೆ ಕಾಂಗ್ರೆಸು ಒತ್ತಾಸೆಯನ್ನೀಯುತ್ತದೆಂಬ ಠರಾವು ಪಾಸುಮಾಡಲ್ಪಟ್ಟಿತು. ಕಾಂಗ್ರೆಸು ವರ್ಕಿಂಗ್ ಕಮಿಟಿಯಲ್ಲಿ ಪ್ರಥಮತಃ ತಯಾರಾದ ಠರಾವಿನಲ್ಲಿ ಕೊಡಗಿನ ವಿಚಾರವೇನೂ ಇರಲಿಲ್ಲವಾಗಿ ತಿಳಿಯಬರುತ್ತದೆ. ಆದರೆ, ನಂತರ ಅಖಿಲ ಭಾರತ ಕಾಂಗ್ರೆಸು ಕಮಿಟಿಯ ಮೀಟಿಂಗಿನಲ್ಲೋ ಯಾ ಕಾಂಗ್ರೆಸು ಮಹಾ ಸಭೆಯಲ್ಲೋ ಕೊಡಗಿನ ವಿಚಾರ ಸೇರಿಸಲ್ಪಟ್ಟಿಂತೆ ತೋರುತ್ತದೆ. ಹೀಗೆ ಸೇರಿಸಲು ಕಾರಣಭೂತರು ಯಾರೋ ತಿಳಿಯದು. ಕೊಡಗಿನಿಂದ ಹೋಗಿದ್ದ ಒಬ್ಬನೇ ಪ್ರತಿನಿಧಿಯು ಈ ವಿಚಾರ ತನಗೆ ಗೊತ್ತಿಲ್ಲವೆಂದು ಹೇಳಿದರು. ಕರ್ನಾಟಕ ಪ್ರಾಂತೀಯ ಕಾಂಗ್ರೆಸು ಕಮಿಟಿಯವರ್ಯಾರಾದರೂ ಇದಕ್ಕೆ ಜವಾಬ್ದಾರರೋ ಎಂಬುದೂ ತಿಳಿಯದು. ಹೇಗೂ ಕೊಡಗಿನ ಕಾಂಗ್ರೆಸು ಕಮಿಟಿಯವರು ಕೊಡಗಿನ ಭವಿಷ್ಯತ್ತನ್ನು ಕುರಿತು ಹರಿಪುರ ಕಾಂಗ್ರೆಸು ಸಭೆಯಲ್ಲಿ ಠರಾವು ಪಾಸುಮಾಡಬೇಕೆಂದು ಬರೆದು ಕೇಳಿಕೊಂಡಿರಲೂ ಇಲ್ಲ; ಯಾರಿಗೂ ಈ ತರಹದ ಜವಾಬ್ದಾರಿಯನ್ನು ಕೊಟ್ಟಿರಲೂ ಇಲ್ಲ. ಮಾತ್ರವಲ್ಲ, ಕೊಡಗು ಪ್ರಾಂತ್ಯದಲ್ಲಿ ಈಗ ನಾಲ್ಕೈದು ವರ್ಷಗಳಿಂದೀಚೆಗೆ ಕೊಡಗನ್ನು ಸೀದಾ ಮದ್ರಾಸಿಗೆ ಸೇರಿಸಬೇಕೆಂಬ ತೀರ್ಮಾನವು ಸಾರ್ವಜನಿಕ ಸಭೆಯಲ್ಲಾಗಲೀ, ಯಾವದೊಂದು ಪಬ್ಲಿಕ್ ಸಂಸ್ಥೆಯಲ್ಲಾಗಲೀ ಅಥವಾ ಕೌನ್ಸಿಲು ಸಭೆಯಲ್ಲಾಗಲೀ ಪಾಸಾಗಿರಲಿಲ್ಲ. ಆದುದರಿಂದ ಹರಿಪುರದ ಠರಾವು ಕೊಡಗಿನಲ್ಲಿ ಹಲವರಿಗೆ ಆಶ್ಚರ್ಯವನ್ನುಂಟುಮಾಡಿತು. ಆದರೆ ಕೂಡಲೆ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯಲ್ಲಿ ದೇಶೀಯರು ಮಗ್ನರಾದ ಕಾರಣ ಈ ಗೊತ್ತುವಳಿಯ ವಿಚಾರದಲ್ಲಿ ಜನರ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸಾಧ್ಯವಾಗಲಿಲ್ಲ. ಈ ಚುನಾವಣೆಯ ಕೆಲಸವು ಮುಗಿದ ನಂತರ ಇಲ್ಲಿಯ ಜಿಲ್ಲಾ ಕಾಂಗ್ರೆಸು ಕಮಿಟಿಯು ಸಭೆ ಸೇರಿ, ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆಂಬ ಕೋರಿಕೆಯು ಇಲ್ಲಿ ಇಲ್ಲದೆ ಇರುವಾಗ್ಗೆ ಹರಿಪುರದಲ್ಲಿ ಇಂಥಾ ಠರಾವನ್ನು ಪಾಸು ಮಾಡಿದಕ್ಕೆ ವ್ಯಸನವನ್ನು ಸೂಚಿಸಿ, ಅದನ್ನು ಬದಲಾಯಿಸುವಂತೆ ಕಾಂಗ್ರೆಸು ವರ್ಕಿಂಗ್ ಕಮಿಟಿಯನ್ನು ಕೇಳಿಕೊಂಡಿತು. ಮಾತ್ರವಲ್ಲ, ಈ ವಿಚಾರ ತಪಸೀಲಾಗಿ ವಿವರಿಸಿ ಹೇಳಲು ವರ್ಕಿಂಗ್ ಕಮಿಟಿಗೆ ಒಂದು ಡೆಪ್ಯುಟೇಶನನ್ನೂ ಕಳುಹಿಸಲು ತೀರ್ಮಾನಿಸಿತು.

ಈ ತೀರ್ಮಾನವನ್ನನುಸರಿಸಿ ಐದು ಜನರ ಡೆಪ್ಯುಟೇಶನೊಂದು ಕಳೆದ ತಾ. 22 ರಲ್ಲಿ ಡೆಲ್ಲಿಯಲ್ಲಿ ಕೂಡಿದ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿ ಮೀಟಿಂಗಿಗೆ ಹೋಗಿ ಎಲ್ಲಾ ವಿಚಾರವನ್ನು ಕೂಲಂಕುಶವಾಗಿ ವರ್ಕಿಂಗ್ ಕಮಿಟಿ ಮೆಂಬರುಗಳಿಗೆ ತಿಳಿಸಿದ ಮೇಲೆ, ಹರಿಪುರದ ಈ ಠರಾವು ಕೊಡಗಿನ ಕಾಂಗ್ರೆಸ್ಸಿನವರ ಮೇಲೆ ಖಡ್ಡಾಯವಾದದ್ದಲ್ಲವೆಂತಲೂ, ಅದು ಇಲ್ಲಿಯ ಜನರ ಇರಾದೆಯಂತೆ ನಡೆಯಲು ಬಿಡುವಂಥಾದ್ದೆಂತಲೂ ಮತ್ತು ಇಲ್ಲಿಯವರು ಕೊಡಗಿನ ಭವಿಷ್ಯತ್ತಿನ ವಿಚಾರವಾಗಿ ಯಾವ ತರಹದ ಅಭಿಪ್ರಾಯವನ್ನಾದರೂ ಪ್ರಚುರಗೊಳಿಸುವ ಸ್ವಾತಂತ್ರ್ಯವಿದೆಯೆಂತಲೂ ವರ್ಕಿಂಗ್ ಕಮಿಟಿಯವರು ಡೆಪ್ಯುಟೇಶನಿನವರಿಗೆ ತಿಳಿಸಿದರೆಂದು ಈ ಮೊದಲು ಪ್ರಕಟವಾಗಿದೆ. ಪ್ರತಿಯೊಂದು ಪ್ರಾಂತ್ಯದ ಆಡಳಿತೆಯ ವಿಚಾರ ತೀರ್ಮಾನಿಸುವ ಹಕ್ಕು ಅಲ್ಲಿಯ ಜನರಿಗೆ ಇರಬೇಕೆಂಬ ತತ್ವದ ಮೇಲೆ ಸ್ವಾತಂತ್ರ್ಯ ಹೋರಾಟವನ್ನು ನಡಿಸುತ್ತಿರುವ ಕಾಂಗ್ರೆಸು ಸಂಸ್ಥೆಯ ವರ್ಕಿಂಗ್ ಕಮಿಟಿಯವರು ಕೊಡಗಿನ ಭವಿಷ್ಯತ್ತಿನ ವಿಚಾರದಲ್ಲಿ ನ್ಯಾಯವಾದ ತೀರ್ಮಾನವನ್ನೇ ಕೊಟ್ಟಿರುವರೆಂಬುವದರಲ್ಲಿ ಸಂಶಯವಿಲ್ಲ.

ಚೀಫ್ ಕಮಿಷನರವರ ಆಡಳಿತೆಯಲ್ಲಿರುವಂಥ ಚಿಕ್ಕ ಪ್ರಾಂತ್ಯಗಳನ್ನೆಲ್ಲಾ ದೊಡ್ಡ ಪ್ರಾಂತ್ಯಗಳಿಗೆ ಸೇರಿಸಬಹುದೆಂಬುದೇ ಕಾಂಗ್ರೆಸ್ಸಿನ ತತ್ವ, ಅದನ್ನನುಸರಿಯೇ ಕೊಡಗನ್ನೂ ಮದ್ರಾಸು ಪ್ರಾಂತ್ಯಕ್ಕೆ ಸೇರಿಸಬೇಕೆಂದು ಹರಿಪುರದಲ್ಲಿ ತೀರ್ಮಾನಿಸಿದ್ದೆಂದು ಕೆಲವರ ಅಭಿಪ್ರಾಯವಾಗಿದೆ. ಆದರೆ ಇದು ತಪ್ಪು ಅಭಿಪ್ರಾಯವೆಂದು ಹೇಳದೆ ಇರಲಾರೆವು. ಯಾಕೆಂದರೆ—ಫೈಜಪುರ ಕಾಂಗ್ರೆಸಿನಲ್ಲಿ—'ಚೀಫ್ ಕಮಿಷನರುಗಳ ಪ್ರಾಂತ್ಯಗಳಿಗೆ ಸುಧಾರಣೆಯೇನೂ ಕೊಡದೆ ಪ್ರತ್ಯೇಕವಾಗಿ ಇಟ್ಟಿರುವುದು ಅಲ್ಲಿಯ ಜನರ ಹಿತದ ದೃಷ್ಟಿಯಿಂದಲ್ಲ; ಆಳುವವರ ಲಾಭದ ದೃಷ್ಟಿಯಿಂದಾಗಿದೆ. ಇದರಿಂದ ಸ್ವಾತಂತ್ರ್ಯ ಹೋರಾಟಕ್ಕೂ ಅಡಚಣೆಯಾಗುತ್ತದೆ; ಆದುದರಿಂದ ಹಿಂದೂ ದೇಶದ ಪ್ರತಿಯೊಂದು ಭಾಗಕ್ಕೂ ಒಂದೇ ತರಹದ ಸ್ವರಾಜ್ಯ ಆಡಳಿತ ಕ್ರಮವು ಕೊಡಲ್ಪಡಬೇಕು' ಎಂಬರ್ಥದ ಠರಾವು ಪಾಸು ಮಾಡಲ್ಪಟ್ಟಿತು. ಹಿಂದು ಬಿದ್ದಿರುವ ಕೊಡಗು ಪ್ರಾಂತ್ಯಕ್ಕೆ ಕಾಂಗ್ರೆಸಿನವರು ಯಾವ ಸಹಾಯವನ್ನು ಮಾಡಲಿಲ್ಲವೆಂದು ಹೇಳಿದಾಗ್ಯೆ ಆಗಿನ ರಾಷ್ಟ್ರಪತಿಗಳಾದ ಪಂಡಿತ ಜವಾಹರ್‌ಲಾಲ್ ನೆಹರುರವರೂ—ಕೊಡಗಿನಂಥ ಚಿಕ್ಕ ಪ್ರಾಂತ್ಯಗಳಿಗೆ ಸುಧಾರಣೆ ಕೊಡಬೇಕೆಂದು ಪಾಸು ಮಾಡಿದ ಫೈಜಪುರದ ಮೇಲಿನ ಠರಾವನ್ನೇ ಎತ್ತಿ ತೋರಿಸಿದರು. ಈ ಠರಾವೇ ಹರಿಪುರದ ಕಾಂಗ್ರೆಸಿನಲ್ಲಿಯೂ ಪಾಸು ಮಾಡಲ್ಪಟ್ಟಿದೆ. ಅಲ್ಲದೆ ಹರಿಪುರದಲ್ಲಿ—ಅಜ್‌ಮೀರ್—ಮೇರವಾರವನ್ನು ಸಂಯುಕ್ತ ಪ್ರಾಂತ್ಯಕ್ಕೂ, ಕೊಡಗನ್ನು ಮದ್ರಾಸಿಗೂ ಸೇರಿಸಬಹುದೆಂಬ ಅಲ್ಲಿಯ ಜನರ ಕೋರಿಕೆಗೆ ಕಾಂಗ್ರೆಸು ಒತ್ತಾಸೆಯನ್ನೀಯುತ್ತದೆಂಬ ಗೊತ್ತುವಳಿಯನ್ನೂ ಪಾಸುಮಾಡಿದರು. ಆದರೆ ಇತರ ಚೀಫ್ ಕಮಿಷನರ ಪ್ರಾಂತ್ಯಗಳಾದ ಡೆಲ್ಲಿ ಮತ್ತು ಬ್ರಿಟಿಷ್ ಬಲೂಚಿಸ್ಥಾನ್—ಇವುಗಳ ವಿಚಾರ ಅಂಥಾ ತೀರ್ಮಾನವನ್ನೇನೂ ಮಾಡಿರುವುದಿಲ್ಲ. ಆದುದರಿಂದ ಅಜ್‌ಮೀರ್—ಮೇರವಾರ್ ಮತ್ತು ಕೊಡಗು, ಇವೆರಡು ಪ್ರಾಂತ್ಯಗಳ ಜನರ ಕೋರಿಕೆ—ದೊಡ್ಡ ಪ್ರಾಂತ್ಯಗಳಿಗೆ ಸೇರಿಸಬಹುದೆಂದು ಇರಬೇಕೆಂದು ತಿಳಿದು (ಕೊಡಗಿನ ಮಟ್ಟಿಗೆ ಮೇಲೆ ಕಾಣಿಸಿದಂತೆ ಇದು ತಪ್ಪು ತಿಳುವಳಿಕೆಯಾಗಿದೆ.) ಈ ತರಹದ ಠರಾವು ಪಾಸು ಮಾಡಿದ್ದಲ್ಲದೆ ಚಿಕ್ಕ ಪ್ರಾಂತ್ಯಗಳನ್ನೆಲ್ಲಾ ದೊಡ್ಡ ಪ್ರಾಂತ್ಯಗಳಿಗೆ ಸೇರಿಸಬಹುದೆಂಬ ತತ್ವವನ್ನನುಸರಿಸಿಯಲ್ಲವೆಂಬುದು ವಿಶದವಾಗುತ್ತದೆ.

ಹೇಗೂ ಕಾಂಗ್ರೆಸು ವರ್ಕಿಂಗ್ ಕಮಿಟಿಯವರು—ಕೊಡಗಿನ ವಿಚಾರದ ಹರಿಪುರ ಠರಾವಿನ ಅರ್ಥವನ್ನು ವಿಶದಪಡಿಸಿ ಕೊಟ್ಟಿದ್ದಾರೆ. ಕೊಡಗಿನ ಭವಿಷ್ಯತ್ತನ್ನು ಕುರಿತು ಇಲ್ಲಿಯ ಕಾಂಗ್ರೆಸಿನವರು ತಮ್ಮ ಅಭಿಪ್ರಾಯದಂತೆ ವರ್ತಿಸಲು ಸ್ವಾತಂತ್ರ್ಯ ಕೊಟ್ಟಿರುವರು. ಆದುದರಿಂದ ದೇಶೀಯರು ಕೊಡಗಿನ ಜನರ, ಮುಖ್ಯವಾಗಿ ರೈತರ ಮುಂದಿನ ಹಿತದ ದೃಷ್ಟಿಯಿಂದ ಕೊಡಗಿನ ಭವಿಷ್ಯತ್ತನ್ನು ಯಾವ ರೀತಿ ರೂಪಿತಗೊಳಿಸಬೇಕೆಂಬುದರ ಸಲುವಾಗಿ ತಮ್ಮ ಅಭಿಪ್ರಾಯಗಳನ್ನು ನಿರ್ಭೀತಿಯಿಂದ, ನಿರ್ದಾಕ್ಷಿಣ್ಯದಿಂದ, ವ್ಯಕ್ತಿದೂಷಣೆಗಳನ್ನು ಬಿಟ್ಟು, ಪ್ರಚುರಪಡಿಸುವರಾಗಿ ನಂಬುತ್ತೇವೆ.

ಮುಖಂಡರ ನೀತಿ.

ಮಿ. ಜಿನ್ನಾರವರು.

ಈಗ ಕೆಲವು ದಿನಗಳ ಹಿಂದೆ ಮುಸ್ಲಿಂ ಲೀಗಿನ ಅಧ್ಯಕ್ಷರಾದ ಮಹಮ್ಮದಾಲಿ ಜಿನ್ನಾರವರು ಸರಕಾರದ ಸೈನ್ಯ ಸಂಬಂಧವಾದ ಮಸೂದೆಗೆ ತಮ್ಮ ಬೆಂಬಲವನ್ನಿತ್ತು ಸರಕಾರದ ಕೃಪಾಛತ್ರಿಯ ನೆರಳಿಗೆ ಸೇರಿಕೊಂಡಿದ್ದರು. ಆದರೆ ಈಗ ಅವರು ತಮ್ಮ ಕರಾಚಿಯ ಭಾಷಣದಲ್ಲಿ ಮುಸಲ್ಮಾನರ ಬಗ್ಗೆ ಇರುವ ಧೋರಣವನ್ನು ಸರಕಾರವು ಬದಲಾಯಿಸಬೇಕೆಂದು ಸರಕಾರಕ್ಕೆ ಎಚ್ಚರಿಕೆ ಕೊಟ್ಟಿರುವರು. ಸಾಹೇಬರ ಚಿತ್ತವೃತ್ತಿಗೇನೆನ್ನಬೇಕು. ಗಾಳಿಗೊಡ್ಡಿದ ದೀಪದ ಕುಡಿಗೆ ಹೋಲಿಸಬಹುದೇ?

ಗಡೀನಾಡಿನಲ್ಲಿ ಗಾಂಧಿಯವರು.

ಪೂಜ್ಯ ಗಾಂಧೀಯವರು ಗಡೀನಾಡಿನಲ್ಲಿ ಸಂಚರಿಸುತ್ತಿರುವರು. ಗಡೀನಾಡೆಂದರೆ ಪಾಶವೀಶಕ್ತಿಯ ಜಗ್ಗಾಟಕ್ಕೆ ಕುಗ್ಗದ ಕೆಚ್ಚೆದೆಯ ಕಟ್ಟಾಳುಗಳ ಪ್ರದೇಶ. ಅದರಿಂದ ಅದು ಬ್ರಿಟನರ ಎದೆಯಲ್ಲಿ ಒಂದು ತರದ ಅಂಜಿಕೆಯನ್ನು ಹುಟ್ಟಿಸಿದೆ. ವರ್ಷದ ದಬ್ಬಾಳಿಕೆಗೆ ಮಣಿಯುವ ಆ ವೀರರು ಇಂದು ಪ್ರೇಮಕ್ಕೆ ತಾವು ಶರಣು ಹೋಗುವೆವೆಂಬುವದನ್ನು ಖ್ಯಾತಪಡಿಸಿದ್ದಾರೆ. ಎಲ್ಲಿ ನೋಡಿದರೂ ಗಾಂಧೀಯವರಿಗೆ ಅಭೂತಪೂರ್ವ ಸ್ವಾಗತ. ಎಲ್ಲೆಲ್ಲಿಯೂ ಗಾಂಧೀಯವರ ಆಶೀರ್ವಾದ ವಚನಗಳಿಗೆ ತಲೆ ತಗ್ಗಿಸಿ ನಿಲ್ಲುವ ಆ ಮಂಗಳದಾಯಕವಾದ ಆ ದೃಶ್ಯವು ಯಾವಾತನ ಹೃದಯದಲ್ಲಿ ಪ್ರೇಮವನ್ನು ಹುಟ್ಟಿಸದಿರದು. ಅಂತೂ ಗಾಂಧಿಯವರ ಈ ಪ್ರವಾಸವು ಜಯಪ್ರದವಾಗಿ ಭಾರತದ ಮೇಲ್ಮೆಗೆ ಸಹಕಾರಿಯಾಗಲೆಂಬೇ ಬಯಕೆ.

ಮಹಾ ಪ್ರಧಾನ ಚೆಂಬರ್ಲೇನರು.

ಒಂದು ಕಾಲದಲ್ಲಿ ಬ್ರಿಟನದ ವಿದೇಶಾಂಗ ನೀತಿಯು [illegible]ವಾಗಿತ್ತು. ಜಗತ್ತಿನ ರಾಷ್ಟ್ರಗಳಿಗೆ ಮಾರ್ಗದರ್ಶಿಯಾಗಿತ್ತು. ಆದರೆ ಇಂದು ಹೇಗಿದೆ? ಯಾರು ಏನಾದರೂ ತಾವು ಸುರಕ್ಷಿತರಿರಬೇಕೆಂಬ ಮಂತ್ರವು ಬ್ರಿಟನರ ಬಾಯಲ್ಲಿದೆ. ಅದರಿಂದಲೇ ಬ್ರಿಟನನನ್ನು ನಂಬಬಾರದವರಿಲ್ಲವೆಂದು ಎಲ್ಲಾ ಜನಾಂಗಗಳಿಗೂ ತಿಳಿದು ಹೋಯಿತು. ಅದರಿಂದ ಕಡಲರಾಣಿಯು ಮಂತ್ರ ಜಪಿಸುತ್ತ ಸುಮ್ಮನಿದ್ದಳು. ಆದರೆ ಅಷ್ಟಕ್ಕೆ ಬಿಡುವರೇ? ಅತ್ತ ರಷ್ಯಾದ ರಭಸ, ಜಪಾನರ ಜರ್ಭ, ಇತ್ತ ಹಿಟ್ಲರನ ಹೆಗ್ಗಳಿಕೆ, ಇಟಲಿಯ ದರ್ಪ, ಫ್ರಾಂಕೋವಿನ ಪರಾಕ್ರಮ, ಇವುಗಳಿಂದ ಪ್ರಧಾನರಾದ ಚೆಂಬರ್ಲೇನರ ಎದೆ ಬಿರಿಯಿತು. ಇಂಗ್ಲೆಂಡಾದರೆ ಭಾರತದ ಯೋಚನೆ ಗಾಳಿಗೋಪುರವೆಂಬುದು ಅವರಿಗೆ ತಿಳಿಯಿತು. ಅದರಿಂದ ಸರ್ವಾಧಿಕಾರಿಗಳಿಗೆ ಝೆಕ್ಕರನ್ನು ಬಲಿಕೊಡಲೋಸುಗ ಅವರ ಶರತುಗಳಿಗೆ ಸಹಿಮಾಡಿದರು. ಹೊಟ್ಟೆಗಾಗಿ ಜೀವನ ನಡೆಸುವದೊಂದೇ ಮಾನವನ ಧ್ಯೇಯವಾದರೆ ಮಾನಾವಮಾನದ ಗಣನೆ ಅಗತ್ಯವಿಲ್ಲ. ಅಂತೆಯೇ ಮಾನಾವಮಾನದ ಪ್ರಶ್ನೆಗೆ ಇಂದಿನ ಬ್ರಿಟನರ ವಿದೇಶ ನೀತಿಯಲ್ಲಿ ಎಡೆಯಿಲ್ಲ. ಒಂದು ಕಾಲಕ್ಕೆ ತನ್ನ ಅಭಿಮಾನವನ್ನೇ ಮುಖ್ಯ ಧ್ಯೇಯವನ್ನಾಗಿರಿಸಿಕೊಂಡಿದ್ದ ಬ್ರಿಟನು ಇಂದು ಫ್ರಾಂಕೋವಿನ ಪ್ರಹರಗಳನ್ನು ತಾಳಿತು. ಜಪಾನರ ಪಾದಾಘಾತವನ್ನು ಸಹಿಸಿತು. ಇವಕ್ಕೇ ಅನ್ನ ಬೇಕಾದ್ದು ದೈವೇಚ್ಛೆ ಎಂದು.

ಸೈನ್ಯವು ಬಂದು ಜಪಾನರನ್ನು ಹೊಡೆದೋಡಿಸಬೇಕು, ಇಲ್ಲವೇ ರಣರಂಗದಲ್ಲಿ ಪ್ರಾಣವನ್ನು ನೀಗಬೇಕೆಂಬ ದೃಢ ನಿಶ್ಚಯದಿಂದ ಯುದ್ಧ ಮಾಡಿತು. ಜಪಾನರನ್ನು ಆವರಿಸಿ ಚೈನೀಯರು ವಿಪರೀತ ನಷ್ಟಪಡಿಸಿದ್ದಾರೆ. ಜಪಾನ ಸೈನ್ಯದಲ್ಲಿ ಕೆಲವೇ ಜನರು ಜೀವಂತರಾಗಿ ತಪ್ಪಿಸಿಕೊಂಡರು. ಈ ಯುದ್ಧದಲ್ಲಿ 20,000 ಜಪಾನರು ಸತ್ತಿರುವರಾಗಿ ತಿಳಿಯಬರುತ್ತದೆ. ಅಲ್ಲದೆ ಜಪಾನರ ವಶದಲ್ಲಿದ್ದ ಲ್ಯೂಲಿನ್ ಎಂಬ ಪಟ್ಟಣವು ಚೈನೀಯರ ವಶವಾಗಿದೆ. ಪೈಪಿಂಗ್ ಹಾಂಕೋ ರೈಲ್ವೆ ಉತ್ತರದ ಮುಖ್ಯ ಪಟ್ಟಣವಾದ [illegible] ಎಂಬುದು ಜಪಾನರ ವಶ[illegible]ದೆಂದು ಪ್ರಕಟವಾಗಿದೆ.

ಗ್ರಾಮಾಭಿವೃದ್ಧಿ ಕಮಿಟಿ ಮೀಟಿಂಗು.

ಕೊಡಗು ಪ್ರಾಂತೀಯ ಗ್ರಾಮಾಭಿವೃದ್ಧಿ ಕಮಿಟಿಯ 6ನೇ ಮೀಟಿಂಗು ತಾ 31-8-38 ರಲ್ಲಿ ಮಡಿಕೇರಿಯಲ್ಲಿ ಕೊಡಗು ಕಮೀಷನರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಭಾಗಮಂಡಲದಿಂದ ಚೆಂಬುಗ್ರಾಮಕ್ಕೆ ಹೋಗುವ ಕಾಲುದಾರಿಯನ್ನು ದುರಸ್ತಿ ಮಾಡಿಸುವ ವಿಷಯ ಆಲೋಚಿಸಬೇಕೆಂದು ರಾ. ಬ. ಶ್ರೀಪತಿರಾಯರು ಕೇಳಿಕೊಂಡರು. ಇದನ್ನು ಪರ್ಯಾಲೋಚಿಸಲಾಗುವದೆಂದು ಅಧ್ಯಕ್ಷರು ತಿಳಿಸಿದರು.

ಹಣ್ಣುಗಳ ರಸವನ್ನು ತೆಗೆದು ಅದನ್ನು ಕೆಡದಂತೆ ಕೆಲವು ಕಾಲ ಇಡಲು ಒಂದು ಕಾರ್ಖಾನೆಯನ್ನಿಡಲಿಕ್ಕಾಗಿ ಎಲ್ಲಾ ತರದ ಅಜಮಾಯಿಸಿಕೆ ಮಾಡಲು ಸರ್ಕಾರದ ಒಬ್ಬ ಉದ್ಯೋಗಸ್ಥರನ್ನು ನಿಯೋಗಿಸುವಂತೆ ಸರ್ಕಾರವನ್ನು ಕೇಳಿಕೊಳ್ಳಲು ತೀರ್ಮಾನಿಸಲಾಯಿತು.

ನಾಪೋಕ್ಲಿನಿಂದ ಸೇರೂರಿಗಾಗಿ ಭಾಗಮಂಡಲಕ್ಕೆ ಹೋಗುವ ರಸ್ತೆ ರಿಪೇರಿ ಮಾಡಬೇಕೆಂದೂ, ಬೇಂಗೂರಿನಲ್ಲಿ ಹರಿಜನರಿಗಾಗಿ ಒಂದು ಬಾವಿ ತೋಡಬೇಕೆಂದೂ ರಾ. ಬ. ಶ್ರೀಪತಿರಾಯರು ಸೂಚಿಸಿದ್ದನ್ನು ಅಜಮಾಯಿಸುವಂತೆ ತೀರ್ಮಾನವಾಯಿತು.

ಬಿಳಿಗೇರಿ, ಕೂತಿ, ಹೊಸಬೀಡ ಗ್ರಾಮಗಳಲ್ಲಿ ಬಾವಿಗಳನ್ನು ತೋಡಬೇಕೆಂದು ಮೆ. ಡಿ. ಎಚ್. ದಾಸಪ್ಪನವರು ಸೂಚಿಸಿದರು. ಇವು ಈ ವರ್ಷದ ಕೆಲಸಗಳಲ್ಲಿ ಅಡಗಿವೆ ಎಂದು ಅಧ್ಯಕ್ಷರು ಉತ್ತರವಿತ್ತರು.

ನಾಲ್ಕೇರಿ ಗ್ರಾಮದಲ್ಲಿ ಕುಂಬಾರಕೇರಿಗೆ ಒಂದು ಬಾವಿ ತೋಡಲು ರೂ. 150 ಕೊಡಬೇಕೆಂದೂ, ಕುಂಜಿಲಗೇರಿಯಲ್ಲಿ ಒಂದು ಬಾವಿ ತೋಡಲು ರೂ. 200 ಕೊಡಬೇಕೆಂದೂ, ಕೆದಮುಳ್ಳೂರಿನಿಂದ ಪಾಲಂಗಾಲಕ್ಕಾಗಿ ಕರಡಕ್ಕೆ ಹೋಗುವ ರಸ್ತೆ ರಿಪೇರಿಗೆ 500 ರೂಪಾಯಿ ಕೊಡಬೇಕೆಂದೂ ಮುತ್ತಾರುಮುಡಿ ಗ್ರಾಮದ ಪಾಚಿಬಾಣೆ ಕೆರೆಯನ್ನು ದುರಸ್ತಿಪಡಿಸಲು ರೂ. 400 ಕೊಡಬೇಕೆಂದೂ, ಬೆಳ್ಳುಮಾಡು ಗ್ರಾಮದಲ್ಲಿ ಅಲ್ಲಿಯ ಶಾಲೆ ಬಳಿ ಇರುವ ಕೆರೆ ರಿಪೇರಿಗೆ 100 ರೂ ಕೊಡಬೇಕೆಂದೂ, ಕಾಕೋಟು ಪರಂಬು ಬೆಳ್ಳುಮಾಡು ರಸ್ತೆಯ ಸಮೀಪ ಕಾಕೆಕಡು ಎಂಬಲ್ಲಿ ಒಂದು ಸೇತುವೆ ಕಟ್ಟಲು ರೂ. 100 ಕೊಡಬೇಕೆಂದೂ, ನೆಲಜಿಯಿಂದ ಬಲ್ಲಮಾವಟಿಗೆ (ಭಾಗಮಂಡಲ ರಸ್ತೆಗೆ ಸೇರಿಸಲು) ಒಂದು ರಸ್ತೆ ಮಾಡಲು ರೂ. 300 ಕೊಡಬೇಕೆಂದೂ, ತಂಡ್ರವದಿಗೆ ಸೇರೂರಿನಲ್ಲಿ ಕಟ್ಟಿರುವ ಕಟ್ಟೆಯನ್ನು ಎತ್ತರಿಸಲು ರೂ. 150 ಕೊಡಬೇಕೆಂದೂ, ಬೆಳ್ಳುಮಾಡು ಶಾಲೆ ಮಕ್ಕಳಿಗೆ ಒಂದು ಬಾವಿ ತೋಡಿಸಲು ರೂ. 100 ಕೊಡಬೇಕೆಂದೂ, ಮೆ. ಬಿದ್ದಂಡ ಕಾರ್ಯಪ್ಪನವರು ಸೂಚನೆ ಮಾಡಿದರು. ಇವುಗಳನ್ನು ಅಜಮಾಯಿಸುವಂತೆ ತೀರ್ಮಾನಿಸಲಾಯಿತು.

ಬೆಂಬಳೂರು, ನಿಡ್ತ ಮತ್ತು ದೊಡ್ಡಭಂಡಾರ ಗ್ರಾಮಗಳಲಿ ಒಂದೊಂದು ಬಾವಿಯನ್ನು ತೋಡಿಸಲು ರೂ. 200 ರಂತೆ ಕೊಡಬೇಕು; ಪೊನ್ನಂಪೇಟೆ ಕಾನೂರು ರಸ್ತೆಯಿಂದ ನಡಿಕೇರಿ ಗ್ರಾಮಕ್ಕೆ ರಸ್ತೆ ಮಾಡಿಸಲು ರೂ. 50 ಕೊಡಬೇಕು; ಮಬಕೇರಿಯಲ್ಲಿ ಒಂದು ಬಾವಿ ತೋಡಿಸಲು 200 ರೂ. ಕೊಡಬೇಕು; ತಾವಳಗೇರಿ ಹರಿಜನರಿಗೆ ಒಂದು ಬಾವಿಗೆ ರೂ 200 ಕೊಡಬೇಕು; ಬಲ್ಯಮುಂಡೂರು ಗ್ರಾಮದ ಮಚ್ಚಮಾಡ ಮಂಡಿ ಕಡವಿಗೆ ಒಂದು ಕಬ್ಬಿಣದ ತಂತಿಗೆ ರೂ. 100 ಕೊಡಬೇಕು; ಪೊನ್ನಂಪೇಟೆ ಹುದಿಕೇರಿ ರಸ್ತೆಯಿಂದ ಬೇಗೂರು ಗ್ರಾಮಕ್ಕೆ ರಸ್ತೆ ಮಾಡಿಸಲು ರೂ. 500 ಕೊಡಬೇಕು; ಅಮ್ಮತ್ತಿ ಗೋಣಿಕೊಪ್ಪಲು ರಸ್ತೆಯಲ್ಲಿ ಕಲ್ತೋಡು ಬಳಿ ಸೇತುವೆ ಕಟ್ಟಲು ರೂ. 150 ಕೊಡಬೇಕು, ಕುತ್ತುನಾಡಿನಲ್ಲಿ ಬಿ. ಶೆಟ್ಟಿಗೇರಿ ಗ್ರಾಮದಿಂದ ಕೊಂಗಣ ಗ್ರಾಮಕ್ಕೆ ರಸ್ತೆ ಮಾಡಿಸಲು ರೂ. 50 ಕೊಡಬೇಕು; ರುದ್ರಗುಪ್ಪೆ ಹೊಳೆಗೆ ಕಬ್ಬಿಣದ ಪಾಲ ಹಾಕಲು ರೂ. 200 ಕೊಡಬೇಕು, ಎಂಬ ಡಿ. ಬೋ. ಅಧ್ಯಕ್ಷರಾದ ಮೆ. ಸಿ. ಐ. ಬೆಳ್ಯಪ್ಪನವರ ಸೂಚನೆಗಳನ್ನು ಅಜಮಾಯಿಸುವಂತೆ ನಿಶ್ಚಯಿಸಲಾಯಿತು.

ನಾಪೋಕ್ಲು ಆಸ್ಪತ್ರೆಯಲ್ಲಿ ಕಾಯಿಲೆಯವರನ್ನಿಡಲು ಒಂದು ವಾರ್ಡ್ ಕಟ್ಟಲು ರೂ. 2000 ಮಂಜೂರ್ಮಾಡಬೇಕೆಂದು ಮೆ. ಸಿ ಐ ಬೆಳ್ಯಪ್ಪನವರು ಸೂಚಿಸಿದ್ದನ್ನು ಇದು ಗ್ರಾಮಾಭಿವೃದ್ಧಿ ಫಂಡಿನ ಉದ್ದೇಶ್ಯದೊಳಗೆ ಅಡಗುವದಿಲ್ಲವಾದ ಕಾರಣ ಇದಕ್ಕೆ ಹಣವನ್ನು ಕೊಡಲಿಕ್ಕಾಗುವದಿಲ್ಲವೆಂದು ತೀರ್ಮಾನಿಸಲಾಯಿತು.

ಪೊನ್ನಂಪೇಟೆ ಬಾಳೆಲೆ ರಸ್ತೆಯಲ್ಲಿ ನಲ್ಲೂರು ಹೊಳೆಗೆ ಸೇತುವೆ ಕಟ್ಟಬೇಕೆಂದು ಮೆ. ಸಿ. ಐ. ಬೆಳ್ಯಪ್ಪನವರು ಸೂಚನೆ ಮಾಡಿ ಒಂದು ಕಾ[illegible] ಸೇತುವೆ ಕಟ್ಟಲು 3600 ರೂ. ಬೇಕೆಂದು ಇಂಜಿನಿಯರರು ಅಂದಾಜು ಮಾಡಿರುವರಾಗಿ ತಿಳಿಸಿದರು. ಇದನ್ನು ಸಿಮೆಂಟಿನಿಂದ ಸುಮಾರು 2500 ರೊಳಗೆ ಮಾಡಿಸಬಹುದೆಂದು ಎಕ್ಸಿಕ್ಯುಟಿವ್ ಇಂಜಿನಿಯರರು ಸೂಚಿಸಿದರು. ರೂ. 2500ರ ಒಳಗೆ ಆಗುವದಾದರೆ ಇದು ಮಾಡಬೇಕಾದ ಕೆಲಸವೆಂದು ಅಧ್ಯಕ್ಷರು ಅಭಿಪ್ರಾಯಪಟ್ಟರು.

ಗ್ರಾಮಾಂತರಗಳಲ್ಲಿ ಒಳ್ಳೆ ನೀರಿನ ಸರಬರಾಯಿ ಮಾಡಲಿಕ್ಕೂ, ಕೊಕ್ಕೆಹುಳ ಮುಂತಾದ ಕಾಯಿಲೆಗಳನ್ನು ನಿವಾರಿಸಲು ಗ್ರಾಮಾಂತರಗಳಲ್ಲಿ ಮಿತವ್ಯಯವಾದ ಕಕ್ಕಸುಗಳನ್ನೇರ್ಪಡಿಸಬೇಕೆಂತಲೂ, ಹುಚ್ಚು ಹರಡುವದನ್ನು ತಡೆಯಲು ಗ್ರಾಮಾಂತರಗಳಲ್ಲಿ ನಾಯಿಗಳನ್ನು ನಾಶಪಡಿಸಬೇಕೆಂದೂ, ಒಂದು ಎಂಬ್ಯುಲೆನ್ಸ್ ಕಾರನ್ನು ತೆಗೆಯಲು ಅರ್ಧ ಖರ್ಚು ಎಂದರೆ 2000 ರೂ. ಕೊಡಬೇಕೆಂದೂ ಸಿವಿಲ್ ಸರ್ಜನರು ಸೂಚನೆಗಳನ್ನು ಕಳುಹಿಸಿದ್ದರು. ಆದರೆ ಅವರು ಮೀಟಿಂಗಿನಲ್ಲಿ ಹಾಜರಿಲ್ಲದ ಕಾರಣ ಇವುಗಳನ್ನು ಇನ್ನೊಂದು ಮೀಟಿಂಗಿನಲ್ಲಿ ಚರ್ಚಿಸುವಂತೆ ಮುಂದರಿಸಲಾಯಿತು.

ಗಾರೆ ಕೆಲಸನ್ನೊಳಗೊಂಡ ಕಟ್ಟೆ, ಸೇತುವೆ ಮುಂತಾದ ಕೆಲಸಗಳನ್ನು ರೆವಿನ್ಯು ಆಫೀಸರುಗಳ ಮೂಲಕ ಮಾಡಿಸುವದಕ್ಕಿಂತ ಡಿ. ಪಿ. ಡಬ್ಲ್ಯು. ಇಲಾಖೆಯ ಮೂಲಕ ಮಾಡಿಸುವದು ಉತ್ತಮವೆಂದು ರಾ. ಬ. ಶ್ರೀಪತಿರಾಯರು ಸೂಚಿಸಿದ್ದನ್ನು ಕಮಿಟಿಯವರು ಒಪ್ಪಿದರು.

ಈ ಗ್ರಾಮಾಭಿವೃದ್ಧಿ ಕಮಿಟಿಯ ಉದ್ದೇಶ ಮತ್ತು ಅಧಿಕಾರ; ಇಂಡಿಯಾ ಸರಕಾರವು ಇದಕ್ಕೆ ಕೊಟ್ಟಿರುವ ಒಟ್ಟು ಮೊಬಲಗು; ಅದರಿಂದ ಖರ್ಚಾಗಿರುವ ಮೊಬಲಗು; ಇನ್ನು ಮುಂದೆ ಖರ್ಚಿಗೆ ಸಿಕ್ಕಬಹುದಾದ ಮೊಬಲಗು, ಇವುಗಳನ್ನು ಕಮಿಟಿ [illegible] ತಿಳಿಸುವದು ಉತ್ತಮವೆಂದು ಮೆ. ಬಿ. ಎಂ. ಕಾರ್ಯಪ್ಪನವರು ಸೂಚಿಸಿದ್ದನ್ನು ಅಧ್ಯಕ್ಷರು ಒಪ್ಪಿಕೊಂಡರು.

ಈ ಫಂಡಿನಿಂದ ಮಾಡಿಸುವ ಕೆಲಸಗಳಿಗೆ ಸಮ್ಮಂಧಪಟ್ಟ ಗ್ರಾಮದ ಜನರು ಮೂರರಲ್ಲಿ ಒಂದು ಭಾಗ ವಂತಿಗೆಯನ್ನು, ಗ್ರಾಮಸ್ಥರ ವಂತಿಗೆ ಎಂದು ಎಣಿಸಬಹುದೋ ಎಂದು ಸಿ. ಐ. ಬೆಳ್ಯಪ್ಪನವರು ಪ್ರಶ್ನಿಸಿದರು.

ಹಾಗೆ ಎಣಿಸಬಹುದೆಂದು ಸರ್ಕಾರದ ಹುಕುಂ ಇದೆಯೆಂದೂ, ಮದರಾಸಿನ ಜಿಲ್ಲೆಗಳಲ್ಲಿ ಹೀಗೆಯೇ ಜಾರಿಯಲ್ಲಿದೆಯೆಂದೂ ಎಕ್ಸಿಕ್ಯೂಟಿವ್ ಇಂಜಿನೀಯರು ತಿಳಿಸಿದರು. ಸರ್ಕಾರದ ಹುಕುಮಿನ ನಕಲನ್ನು ಕಮಿಟಿಯ ಮುಂದಿಡುವಂತೆ ಎಕ್ಸಿಕ್ಯೂಟಿವ್ ಇಂಜಿನೀಯರನ್ನು ಕೇಳಿಕೊಳ್ಳಲು ತೀರ್ಮಾನವಾಯಿತು.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ, ಲಿಮಿಟೆಡ್
ವೀರರಾಜೇಂದ್ರಪೇಟೆ.

ನೋಟೀಸು.

ಈ ಕೆಳಗೆ ಕಾಣಿಸಿದ ಹೆಸರಿನವರು, ಚಿನ್ನಾಭರಣಗಳ ಲದವಿನ ಮೇಲೆ ಪಡೆದ ಸಾಲಗಳ ಅಸಲು ಬಡ್ಡಿ ವಗೈರೆಗಳನ್ನು ರಿಜಿಸ್ಟ್ರಿ ನೋಟೀಸು ಕೊಟ್ಟರೂ, ಕೆಲವರು ಕೊಡದೆ ಇದ್ದುದರಿಂದಲೂ, ಕೆಲವರು ಪೌತಾದ್ದರಿಂದಲೂ, ಕೆಲವರು ರಿಜಿಸ್ಟ್ರಿ ನೋಟೀಸನ್ನು ತಿರಸ್ಕರಿಸಿದ್ದರಿಂದಲೂ, ಸದರಿ ಸಾಲಗಳಲ್ಲಿ ಜವಾಬ್ದಾರಿ ಇರುವ ಚಿನ್ನಾಭರಣಗಳನ್ನು, ಇದೇ ತಿಂಗಳ 29ನೇ ತಾರೀಕು ಶನಿವಾರ ಮಧ್ಯಾಹ್ನ 1 ಗಂಟೆಗೆ, ಅಥವಾ ಬ್ಯಾಂಕಿಗೆ ಯುಕ್ತ ತೋರುವ ಬೇರೆ ದಿವಸಗಳಲ್ಲಿ ಪುನಹ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವವು. ವಿಸ್ತಾರ ವಿವರಗಳನ್ನು ಸ್ವತಃ ಬಂದು ಬ್ಯಾಂಕಿನ ಆಫೀಸಿನಿಂದ ತಿಳಿದುಕೊಳ್ಳಬಹುದು.

ಜ. ನಂ.	ಸಾಲದ ನಂಬರು.	ಸಾಲಗಾರರ ಹೆಸರು.	ಅಸಲು ರೂಪಾಯಿ.
(1)	281/37	ಎರ್ಮಕಾಕ, S/o. ಕುಞಮ್ಮದೆ, ದೇವಣಗೇರಿ	30-0-0
(2)	1005/36	ಸಿ. ಕಣ್ಣನ್, S/o. ಮಾರಿಕಣ್ಣನ್, ಪಳಿಯಂಡ	35-0-0
(3)	660/37	ಪುಚ್ಚಿಮಾಡ ಪೂವಯ್ಯ, S/o. ಪಿ. ಪೊನ್ನಪ್ಪ, ಪೊನ್ನಂಪೇಟೆ	75-0-0
(4)	879/37	ಕಕ್ಕೆಂಗಳ ಅಚ್ಚಯ್ಯ, S/o. ಕಾಳಯ್ಯ, ಹೈಸೊಡ್ಲೂರು, ಹುದಿಕೇರಿ	50-0-0
(5)	272/38	do. do.	100-0-0
(6)	845/36	ಮದ್ದಿಯಂಡ ಚಕ್ರಹಾಜಿ, ನಲ್ವತೊಕ್ಲು, ಅಮ್ಮತ್ತಿ	25-0-0

ವೀರರಾಜೇಂದ್ರಪೇಟೆ ಆಫೀಸು,
ತಾರೀಕು 10-10-1938.

ಬಿ. ಉಮೇಶ್ ರಾವ್,
ಏಜೆಂಟ್.

The South India Co-operative Insurance Society, Ltd., Madras.

OPINIONS.

(1) Opinion of Dr. B. Pattabhi Sitaramayya, B A., M. B. C. M., Masulipatam.

The concern being Co-operative all profits are the monopoly of the Policy-holders and the notably cheaper rates thus made possible virtually by mean bonusses—that are immediate and certain not remote and doubtful. Further a "Co-op" makes management efficient and economic and control effective The concern is within easy reach of the poor making their policies cheap safe and profitable while at the same time it equally serves the well-to-do providing how ever no room for grab or greed,

(Sd.) B. Pattabhi Sitaramayya.

Wanted Reliable Agents.

For the particulars apply to Branch Office Mercara

ವರ್ತಮಾನ ಸಂಗ್ರಹ.

ಒಳದೇಶ.

ಮೈಸೂರು ದಸರಾ ಪ್ರದರ್ಶನದಲ್ಲಿ ಡಗಿನ ಜೇನು ಮತ್ತು ಮೇಣ ಸಂಘ ರು ಪ್ರದರ್ಶಿಸಿದ ಜೇನು ಮತ್ತು ಮೇ ಕ್ಕೆ ಚಿನ್ನದ ಪದಕ ಬಹುಮಾನ ಸಿಕ್ಕಿತೆಂ ು ತಿಳಿಸಲು ಸಂತೋಷಪಡುತ್ತೇವೆ.

ಮದರಾಸು ಪ್ರೆಸಿಡೆನ್ಸಿ ಕಾಲೇಜಿನ ದ್ಯಾರ್ಥಿಗಳ ಸಂಗಡ ಒಂದು ಪ್ರೊಫೆಸ ್ರೀ ರಾಮನಾಥರವರೊಡಗೂಡಿ ಕೊ ಗಿಗೆ ಬಂದು ಮೂವ್ವರಕೂಟ, ವೀರಾಜಪೇ , ಮಡಿಕೇರಿ, ಸಂಪಾಜೆ, ಭಾಗಮಂಡ ೂವಲಾದ ಸ್ಥಳಗಳನ್ನು ಸಂದರ್ಶಿಸಿ ಈ . 13 ರಲ್ಲಿ ವಾಪಸು ಹೋದರೆಂದು [illegible].

ಇಂಡಿಯಾ ಸರ್ಕಾರದ ಮೆಡಿಕಲ್ ರೂ ಆಫೀಸರಾದ ಮಿ. ಕೂವೆಲ್‌ರವರು, ೆಂಗಳೂರು ಕಂಟೋನ್ಮೆಂಟಿನ ರೆಸಿ ೆನ್ಸಿ ಸರ್ಜನರಾದ ಕರ್ನ ್ ಹ್ಯಾನ್ಸ್‌ರವರು ಈ ತಾ. 6 ರಲ್ಲಿ ಕೊ ಗಿಗೆ ಬಂದು ಸಿವಿಲ್ ಸರ್ಜನರ ಸಮೇತ ೊಡಗಿನ ಆರೋಗ್ಯ ಇಲಾಖೆಯವರು ಕೆ ಸ ಮಾಡುತ್ತಿರುವ ಕೆಲವು ಗ್ರಾಮಗಳ ್ನೂ, ಶಾಲೆಗಳನ್ನೂ ಸಂದರ್ಶಿಸಿ ತಾ. 10 ಲ್ಲಿ ವಾಪಸು ಹೋದರೆಂದು ತಿಳಿಯಬ ುತ್ತದೆ.

ಮಡಿಕೇರಿ.

ಮಡಿಕೇರಿಯಲ್ಲಿ ಯಾಲಕ್ಕಿ ಮಣಕ್ಕೆ 22 ರೂಪಾಯಿ ವರೆಗೆ ಕ್ರಯವಿತ್ತೆಂದು ತಿ ಳಿಯುತ್ತೇವೆ.

ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗು ಈ ತಾ. 31ನೇ ಸೋಮವಾರ ಮಡಿಕೇರಿ ಕೌನ್ಸಿಲ್ ಹಾಲ್‌ನಲ್ಲಿ ನಡೆಯುವುದೆಂದು ತಿಳಿಯುತ್ತೇವೆ.

ಶ್ರೀ. ಭಾಗಮಂಡೇಶ್ವರಿ ಬಸ್ಸ್ ಸರ್ವಿಸ್ ಈ ತಾ. 10ರಿಂದ ಮಡಿಕೇರಿಯಿಂದ ಮೂರ್ನಾಡಿಗಾಗಿ ಭಾಗಮಂಡಲಕ್ಕೆ ಹೋ ಗುತ್ತಿದೆಯಾಗಿ ತಿಳಿಯುತ್ತೇವೆ.

ತಾ. 10-10-38 ರಲ್ಲಿ ಹೈಸ್ಕೂಲ್ ಹಾಲಿನಲ್ಲಿ ಮೈಸೂರಿನ ಆಕಾಶವಾಣಿ ಸಂ ಗೀತಗಾರರಾದ ಶ್ರೀ ಎನ್. ಮಹಲಿಂಗ ಭಟ್ ಗುಂಪೆ ಇವರು ಸುಶ್ರಾವ್ಯವಾದ ಸಂಗೀತ ಕಚೇರಿ ನಡಿಸಿದರು

ಮಡಿಕೇರಿಯ ಕೆಲವು ಮಹನೀಯ ರು ಸೇರಿ 'ಕೊಹಿನೂರ್ ಟಾಕೀಸ್' ಎಂಬ ಹಾಕ್ಷಲಿನ ಚಿತ್ರ ಕಂಪೆನಿಯನ್ನು ಸ್ಥಾಪಿಸಿ ರುವರಾಗಿಯೂ, ಮಡಿಕೇರಿಯಲ್ಲಿ ನವಂ ಬರು ತಿಂಗಳ ಮೊದಲನೇ ವಾರದಿಂದ ಚಿ ತ್ರ ಪ್ರದರ್ಶನ ಪ್ರಾರಂಭಿಸುವರೆಂದೂ ತಿ ಳಿಯುತ್ತೇವೆ.

ಮಹದೇವಪೇಟೆ ದೇವಾಂಗದ ಪುಟ್ಟ ಯ್ಯಶೆಟ್ಟಿ ಎಂಬವರು ತನ್ನ ಮನೆಗೆ ಬೀಗ ಹಾಕಿ ಮೈಸೂರಿಗೆ ಹೋದ ಸಮಯದಲ್ಲಿ ಈ ತಾ. 7 ರ ರಾತ್ರಿ ಅವರ ಮನೆಯ ಹಿಂ ದುಗಡೆ ಹಂಚು ತೆಗೆದು ಒಳಗೆ ನುಗ್ಗಿ ಸು ಮಾರು ರೂ. 500 ಮತ್ತು 300 ರೂಪಾ ಯಿ ಕ್ರಯದ ಚಿನ್ನದ ಸಾಲುಗಳನ್ನೂ ಯಾರೋ ಕಳವು ಮಾಡಿದರಾಗಿಯೂ, ಪೋ ಲೀಸಿನವರು ತನಿಖೆ ನಡಿಸುತ್ತಿರುವರಾಗಿ ಯೂ ವರ್ತಮಾನ.

ಸಿದ್ದಾಪುರ.

ಅಚ್ಚಿನಾಡು ಗ್ರಾಮದ ಪುದಿಯತ್ತಂ ಡ ಜೋಯಪ್ಪನವರ ಹೆಂಡತಿ ಮಾಚವ್ವ ನವರು ಈ ತಾ: 3 ರಿಂದ ಕಾಣೆಯಾಗಿ ದ್ದು ತಾ. 9 ರಲ್ಲಿ ಅಚ್ಚಿನಾಡು ಹೊಳೆ ಯಲ್ಲಿ ಅವರ ಶವವು ಕಾಣಲಾಯಿ ತಾಗಿಯೂ, ಪೋಲೀಸಿನವರು ತನಿಖೆ ನಡಿಸಿ ದರಾಗಿಯೂ ವರ್ತಮಾನ.

ವೀರಾಜಪೇಟೆ.

ಈ ವಾರ ವೀರಾಜಪೇಟೆಯಲ್ಲಿ ಭತ್ತ ಗಾಡಿಗೆ 46 ರೂಪಾಯಿ ಕ್ರಯವಿತ್ತೆಂದು ತಿಳಿಯುತ್ತೇವೆ.

ವ್ಯಾರತನ್ ರೇಸಿನಲ್ಲಿ ಇನಾಮಾಗಿ ಪಡೆದ ಒಂದು ಬೆಳ್ಳಿಯ ಬಟ್ಟಲು, ಒಂದು ಇಸ್ತ್ರಿ ಪೆಟ್ಟಿಗೆ ಮತ್ತು ಕೆಲವು ಉಡುಗೆಗಳು ವ ಚಿತ್ತನ ಟೇಲಪ್ಪರವರು ಈಗ ಹಲವು ದಿ ವಸಗಳಿಂದ ವೀರಾಜಪೇಟೆ ಸ್ಟಾರ್ ಆಟ್ಟ್ ಲ್ ಬಾದರ್ ಸಾಹೇಬ್, ಹಸನ್ ಸಾಹೇ ಬ್ & ಸನ್ಸ್ ರವರ ಅಂಗಡಿಯಲ್ಲಿ ಟ್ಟೆಂ ದೂ, ವಾರೀಸುದಾರರು ಬಂದು ತಕ್ಕ ರು ಜುವಾತಿನಿಂದ ಹೊಂದಿಕೊಂಡು ಹೋಗ ಬಹುದೆಂದೂ ಆ ಅಂಗಡಿಯ ಮಾಲೀಕರು ತಿಳಿಸುತ್ತಾರೆ.

ಗೋಣಿಕೊಪ್ಪಲು.

ಈ ತಾ. 6ರಲ್ಲಿ ಕೈಕೇರಿ ಗ್ರಾಮದ ಜಮ್ಮಡ ದಿವಂಗತ ಮಾದಪ್ಪನವರ ಪತ್ನಿ ತಂಗಮ್ಮನವರು ಶಿವಾಧೀನರಾದರೆಂದು ತಿ ಳಿಸಲು ವ್ಯಸನಪಡುತ್ತೇವೆ.

ಪೊನ್ನಂಪೇಟೆ.

ಆಯುರ್ವೇದಿಕ್ ವಿದ್ವಾನ್ ಮಿ. ಮರುಗಂಡ ಕಾರ್ಯಪ್ಪನವರು ಈ ತಾ. 7 ರಲ್ಲಿ ಪೊನ್ನಂಪೇಟೆಯಲ್ಲಿ ಒಂದು ಆ ಯುರ್ವೇದಿಕ್ ಆಸ್ಪತ್ರೆಯನ್ನು ತೆರೆದಿರು ವರಾಗಿ ತಿಳಿಯುತ್ತೇವೆ.

ಶನಿವಾರಸಂತೆ.

ಗ್ರಾಮ ಪಟೇಲರುಗಳಿಗೆ ಕೊಡುವ ಸಂಬಳದ ಕುರಿತ ತಿದ್ದುಪಡಿಯ ಕರಡು ನಿಬಂಧನೆಗಳ ಬಗ್ಗೆ ವಿಚಾರ ವಿನಿಮಯ ಮಾಡಲೋಸುಗ ಈ ತಾ. 17 ರಲ್ಲಿ ಇಲ್ಲಿ ಯ ಗುಡುಗಳಲೆ ಜಯದೇವ ಬಾಣೆಯ ಲ್ಲಿ ಪಟೇಲರುಗಳ ಮೀಟಿಂಗೊಂದು ನಡೆ ಡೆಯುತ್ತದಾಗಿ ವರ್ತಮಾನ.

ಇಲ್ಲಿಯ ಗುಡುಗಳಲೆ ಜಯದೇವ ಬಾಣೆಯಲ್ಲಿ ತಾ. 1-11-38ರಿಂದ ತಾ. 7-11-38 ರ ವರೆಗೆ ಜಾನುವಾರಗಳ ಜಾತ್ರೆಯು ನಡೆಯುತ್ತದಾಗಿಯೂ, ಆ ಬಗ್ಗೆ ಪ್ರಯಾಣಿಕರಿಗೂ, ಜಾನುವಾರುಗ ಳಿಗೂ ಎಲ್ಲಾ ಸೌಕರ್ಯ ಮಾಡಿರುವದಾ ಗಿಯೂ ತಿಳಿಯಬರುತ್ತದೆ.

ಈ ತಾ. 1 ರಲ್ಲಿ ಪೂಜ್ಯ ಗಾಂಧಿಜೀ ಯವರ ಜಯಂತ್ಯುತ್ಸವವನ್ನು ಇಲ್ಲಿ ಮೆ ರವಣಿಗೆ, ಧ್ವಜವಂದನೆಗಳೊಡಗೂಡಿ ನಡೆಸಿದರೆಂದೂ, ಬಿದರೂರು ದೇವಸ್ಥಾನ ದಲ್ಲಿ ಹರಿಜನರೊಡಗೂಡಿ ಫಲಹಾರ ಹಂಚಲಾಯಿತೆಂದೂ ತಿಳಿದುಬರುತ್ತದೆ.

ಹಿಂದೂದೇಶ.

ಅಫಘಾನಿಸ್ಥಾನಕ್ಕೆ ಜರ್ಮನಿಯಿಂ ದ ತುಂಬಾ ಯುದ್ಧ ಸಾಮಗ್ರಿಗಳು ಬಂದಿ ವೆ. ಇವೆಲ್ಲಾ ಕರಾಚಿ ಬಂದರದಲ್ಲಿ ಇ ಳಿಸಲ್ಪಟ್ಟವೆಯಂತೆ.

ರಾಷ್ಟ್ರಪತಿ ಸುಭಾಷ್ಚಂದ್ರ ಬೋಸ ರು ಮುಂದುವರಿಸಿದ್ದ ತಮ್ಮ ದಕ್ಷಿಣ ಭಾ ರತ ಪ್ರವಾಸವನ್ನು ಇದೇ ತಿಂಗಳ ಅಂತ್ಯ ಭಾಗದಲ್ಲಿ ಆರಂಭಿಸುವರೆಂದು ತಿಳಿದುಬ ರುತ್ತದೆ.

ಗಾಂಧಿ ಜಯಂತಿ ವಾರದಲ್ಲಿ ಪುರೂ ಲಿಯದ ಅಧ್ಯಕ್ಷರೂ, ಉಪಾಧ್ಯಕ್ಷರೊ, ಮುನ್ಸಿಪಲ್ ಕಮಿಷನರ್ ಮತ್ತು ಕಾಂ ಗ್ರೆಸ್ ಕೆಲಸಗಾರರೊಡನೆ ಮಾರ್ಗವನ್ನು ಗುಡಿಸಿ ಚರಂಡಿಗಳನ್ನು ಶುಧ್ಧಪಡಿಸಿದ ರು. ಅನೇಕ ಬ್ರಾಹ್ಮಣ ಮತ್ತು ಮಾ ರ್ವಾರಿ ತರುಣರೂ ಇದರಲ್ಲಿ ಭಾಗವಹಿ ಸಿದ್ದರು.

ಮದ್ರಾಸು ಮುನಿಸಿಪಲ್ ಚುನಾವ ಣೆಯಲ್ಲಿ ಕಾಂಗ್ರೆಸು ಉಮೇದುವಾರರ [illegible] ಕಾಂಗ್ರೆಸ್ ಪಕ್ಷದ ಅಲ್ಲಿ ಯ ಎಸೆಂಬ್ಲಿ ಮೆಂಬರರಾದ ಶ್ರೀ ಜಿ. ಸ ಲ್ಪವತಿ ಚೆಟ್ಟಿಯವರಿಗೆ ಅಸೆಂಬ್ಲಿ ಸದ ಸ್ಯತನಕ್ಕೆ ರಾಜಿನಾಮೆ ಕೊಡಬೇಕೆಂದು ಕಾಂಗ್ರೆಸು ಪಾರ್ಟಿಯ ಮುಖಂಡರು ತಿಳಿ ಸಿರುವರಂತೆ.

ಅದಾರೋ ಮೂರ್ಖರು ಹಿಂದುಗ ಳಿಂದ ಪಳ್ಳಿಗಳೆಲ್ಲ ನಾಶಪಡಿಸಲ್ಪಡುತ್ತಿವೆ ಯೆಂಬ ಸುಳ್ಳು ಸುದ್ದಿ ಹರಡಿಸಿದ ಪರಿಣಾ ಮವಾಗಿ ಸಿಲ್‌ಹೆತ್ ಎಂಬಲ್ಲಿಗೆ ಆರು ಸಾ ವಿರ ಮಂದಿ ಮುಸಲ್ಮಾನರು ಹಳ್ಳಿಗಳಿಂದ ಬಂದರು. ಅವರನ್ನು ಪೋಲೀಸರು ತಡೆ ದು ನಿಲ್ಲಿಸಿದರೂ ಅವರು ಸಿಟ್ಟೆದ್ದು ಸಿಕ್ಕಸಿ ಕ್ಕವರನ್ನು ತಿವಿದು ಹಲವರನ್ನು ಕೊಂದು ಅನೇಕರನ್ನು ಗಾಯಗೊಳಿಸಿದರು.

ಕಾಂಗ್ರೆಸಿನ ಶಿಸ್ತುಭಂಗ ಮಾಡಿದ್ದ ಕ್ಕಾಗಿ ಶ್ರೀ ಖಾರೆಯವರನ್ನು ಕಾಂಗ್ರೆಸಿ ನಿಂದ ಎರಡು ವರ್ಷಗಳ ಮಟ್ಟಿಗೆ ಹೊರ ಹಾಕಿರುವರಷ್ಟೆ. ಆ ಪ್ರಕಾರ ಕಾಂಗ್ರೆ ಸು ಪ್ರತಿನಿಧಿಯಾಗಿ ಅಸೆಂಬ್ಲಿಯಲ್ಲಿರುವ ತನ್ನ ಸದಸ್ಯತ್ವಕ್ಕೆ ರಾಜಿನಾಮೆ ಕೊಡಬೇ ಕೆಂದು ಕಾಂಗ್ರೆಸು ವರ್ಕಿಂಗ್ ಕಮಿಟಿ ಯ ಗೊತ್ತುವಳಿಗೆ, ತಾನು ಅಸೆಂಬ್ಲಿ ಸದ ಸ್ಯತ್ವಕ್ಕೆ ರಾಜಿನಾಮೆ ಕೊಡಬಾರದಾಗಿ ನಿಶ್ಚಯಿಸಿದ್ದೇನೆಂದೂ ಮತದಾರರಿಗೆ ಕೊ ಟ್ಟ ಅಭಿವಚನ ವಿರುದ್ಧ ಎಂದೂ ನಡೆ ಯುವವನಲ್ಲವೆಂದೂ, ಕಾಂಗ್ರೆಸ್ ಸದಸ್ಯ ತ್ವದಿಂದ ಹೊರತಳ್ಳಿದ್ದರಲ್ಲಿ ತನಗೆ ಖೇದವಿ ಲ್ಲೆಂದೂ ಸೂಚಿಸಿ ತಮ್ಮ ಉದ್ದಾಮತನವ ನ್ನು ವ್ಯಕ್ತಪಡಿಸಿರುವರು.

ಬರೈಲಿಯ ಡಿ. ಬೋರ್ಡು ಅಧ್ಯಕ್ಷ ರು ಕಂಟ್ರಾಕ್ಟುದಾರರಿಬ್ಬರಿಗೆ ಸ್ಥಳೀಯ ಆಖಾಖಾನೆಯ ಕಂಟ್ರಾಕ್ಟು ಕೊಡಬೇಕಿ ದ್ದರೆ ತನಗೆ ಒಂಬೈನೂರು ರೂಪಾಯಿಗಳ ಲಂಚ ಕೊಡಬೇಕೆಂದು ಆ ಕಂಟ್ರಾಕ್ಟು ದಾರರನ್ನು ಕೇಳಿದರು. ಇದರಿಂದ ಕಂ ಟ್ರಾಕ್ಟುದಾರರು ಜಿಲ್ಲಾ ಕಲೆಕ್ಟರರನ್ನು ಕಂ ಡು ಈ ವಿಚಾರ ತಿಳಿಸಲು ಅವರು ಕಂ ಟ್ರಾಕ್ಟುದಾರರು ಲಂಚವಾಗಿ ಕೊಡಲಿದ್ದ ನೋಟಿನ ನಂಬರುಗಳನ್ನು ಬರೆದುಕೊಂ ಡು ಅವನ್ನೇ ಡಿ. ಬೋರ್ಡು ಅಧ್ಯಕ್ಷರಿ ಗೆ ಕೊಡುವಂತೆ ಹೇಳಿದರು. ಅವರಿಂದ ಲಂಚ ತೆಗೆದುಕೊಂಡು ಕಂಟ್ರಾಕ್ಟು ಬರೆ ಯುತ್ತಿದ್ದ ಕೆಲ ನಿಮಿಷಗಳಲ್ಲೇ ಪೋಲೀಸ್ ಸುಪರಿಂಟೆಂಡೆಂಟರು ಅಧ್ಯಕ್ಷರ ಆಫೀಸು ಜಪ್ತಿ ನಡೆಸಿ, ನೋಟಿನ ನಂಬರುಗಳನ್ನು ತಮ್ಮ ಬಳಿಯಿದ್ದ ನಂಬರುಗಳಿಗೆ ಹೋಲಿ ಸಿ ಅದು ಸರಿಬಂದದ್ದರಿಂದ ಅವರನ್ನು ಸೆರೆ ಹಿಡಿದಿರುವರು.

ಡಾಕ್ಟರರ ಸಲಹೆಯಂತೆ ಮಿ. ಚೇಂ ಬರ್ಲೇನರು ಪತ್ನೀಸಹಿತರಾಗಿ ಸ್ಕಾಟ್ ಲೇಂಡಿಗೆ ತೆರಳಿ ವಿರಾಮ ಪಡೆಯಲಿರುವ ರೆಂದು ತಿಳಿದುಬಂದಿದೆ.

'ಯೆಹೂದಿಯರನ್ನು ನಾವು ಏಕಪ್ರ ಕಾರ ನೋಡುತ್ತಿದ್ದೇವೆ. ಅದೇ ರೀತಿ ನೀವೂ ನೋಡಬೇಕು. ಅವರನ್ನು ಕ್ರೂ ರ ರೀತಿಯಿಂದ ನೋಡಬಾರದು' ಎಂದು ಅಮೇರಿಕೆಯು ಇಟೆಲಿ ಜರ್ಮನಿಗಳಿಗೆ ಪ ತ್ರ ಬರೆದಿದೆ.

ದೇಶದ ಕೆಲ ಭಾಗವನ್ನು ಬಿಟ್ಟುಕೊ ಟ್ಟುದರ ಹಾಗೂ ಕೊಡುವುದರ ಪರಿಣಾ ಮವಾಗಿ ಝೆಕೊಸ್ಲೋವಾಕಿಯೊದಲ್ಲಿ ಸು ಮಾರು 76 ಸಾವಿರ ಮಂದಿ ನಿರುದ್ಯೋ ಗಿಗಳಾಗುವರೆಂದು ಪ್ರಕಟಿಸಲಾಗಿದೆ. ಇ ದು ಒಟ್ಟು ಉದ್ಯೋಗಿಗಳ 1/3 ಅಂಶ.

ಚೈನಾ-ಜಪಾನ್ ಯುದ್ಧ.

ಮಧ್ಯ ಯೂರೋಪಿನ ಬಿಕ್ಕಟ್ಟಿನ ಪ ರಿಣಾಮದಿಂದಾಗಿ ಪೂರ್ವಾಂತ್ಯದಲ್ಲಿ ನಡೆ ಯುತ್ತಿರುವ ಚೈನಾ ಜಪಾನ್ ಯುದ್ಧದ ಗೋಚರವು ಬಿಟ್ಟು ಹೋಗಿತ್ತು. ನಮ್ಮ ದೃಷ್ಟಿಯು ಆ ಕಡೆ ಹರಿಯದಿದ್ದರೂ ಯು ದ್ಧವು ನಡೆದೇ ಇದೆ.

ಚೀನೀಯರು ತಮ್ಮ ರಾಷ್ಟ್ರರಕ್ಷಣೆ ಗಾಗಿ ಜೀವವನ್ನು ತೃಣ ಪ್ರಾಯವಾಗಿ ಕಂಡು ಘೋರ ಯುದ್ಧ ಮಾಡುತ್ತಿರುವ ರು. ಹಾಂಕೋ ನಗರವನ್ನು ಹಿಡಿಯ ಲು ಜಪಾನಿ ಸೇನೆಯು ಮುಂದೊತ್ತುತಿ ರುವಾಗ ಇತ್ತ ಚೀನಿ ಸೇನೆಯು ಈ ನಗ ರದಿಂದ 600 ಮೈಲು ದಕ್ಷಿಣಕ್ಕಿರುವ ವೌತಾಯಿಗಿರಿಯ ಮೇಲೇರಿ ಯುದ್ಧಕ್ಕಾ ಗಿ ತಯಾರುಗೊಳ್ಳುತ್ತಿದೆ. ಚೀನಿಯರು ಜಪಾನ ಸೇನೆಯನ್ನೆದುರಿಸಲು ಸಿದ್ಧರಾಗಿ ರುವದಲ್ಲದೆ ಈ ಪ್ರದೇಶದ ಬಂಗಾರದ ಹಾಗೂ ಖನಿಜ ಸಂಪತ್ತಿನ ಜವಾಬುದಾ ರಿಯ ಮೇಲೆ ಪರರಾಷ್ಟ್ರಗಳಿಂದ ಸಾಲಪ ಡೆದು ರಾಷ್ಟ್ರವನ್ನುಳಿಸಲು ಕಂಕಣಬದ್ಧ ರಾಗಿರುವರು.

ಉತ್ತರ ಯಾಂಗತ್ಸೆ ನದಿಯ ಮೂಲಕ ಪಶ್ಚಿಮಕ್ಕೆ ಜಪಾನ ಸೇನೆಯು ಸಾಗುತ್ತಿ ದ್ದು ಹಾಂಕೋನಗರವನ್ನು ಮುತ್ತುವ ಏ ರ್ಪಾಡಿನಲ್ಲಿರುವದು. ಅವರ ಒಂದು ತುಂಡು ಸೈನ್ಯವು ಹಾಂಕೋದಿಂದ ಎಂಭ ತ್ತು ಮೈಲು ದೂರದಲ್ಲಿ ಬಂದಿಳಿದಿರುವ ದು. ಆದರೆ ಯಾಂಗತ್ಸೆ ನದಿಯ ನೆರೆಯು ಇನ್ನೂ ಇಳಿದಿಲ್ಲವಾದ್ದರಿಂದ ಸೇನೆಯು ತ ಡೆಯಲ್ಪಟ್ಟಿದೆ.

ಆಗಸ್ಟು 20ರಿಂದ ಸೆಪ್ಟೆಂಬರು 3ರ ವ ರೆಗೆ ಯುದ್ಧದಲ್ಲಿ 68,737 ಮಂದಿ ಚೈ ನೀಯರು ಮಡಿದಿರುವರೆಂದೂ, 2,000 ಜನರು ಸೆರೆ ಹಿಡಿಯಲ್ಪಟ್ಟಿರುವರೆಂದೂ, 3675 ರೈಫಲುಗಳೂ, 204 ಮಿಶಿಗನ್‌ಗ ಳೂ ಜಪಾನರ ವಶವಾಗಿರುವದಲ್ಲದೆ ಇ ನ್ನೂ ಅನೇಕ ಯುದ್ಧ ಸಾಮಗ್ರಿಗಳು ಅ ವರ ವಶವಾಗಿರುವದಾಗಿ ಜಪಾನರು ಪ್ರ ಕಟಿಸಿರುವರು. ಇದೇ ಅವಧಿಯಲ್ಲಿ 11,750 ಜಪಾನರು ಯುದ್ಧದಲ್ಲಿ ಹತ ರಾಗಿರುವರೆಂದೂ ತಿಳಿಸುತ್ತಾರೆ.

ದಕ್ಷಿಣ ಯಾಂಗತ್ಸೆ ಗಡಿಯ ಟೇಹಾ ನ್ ಎಂಬಲ್ಲಿ ಇಕ್ಕಡೆಯವರು ಘೋರ ಯುದ್ಧವನ್ನು ಮಾಡಿದರು. ಜನರಲ್ ಕ್ಯಾವಯ್ಯಾಯವರ ನೇತೃತ್ವದಲ್ಲಿ ಚೀನೀ

ಸಾಮಾಜಿಕ ಕಾದಂಬರಿ. — ಅಧ್ಯಾಯ ೮.

ದೇವದತ್ತ

ಶಾಲಾ ಗಂಟೆಯಾದೊಡನೆ ಅಲ್ಲಲ್ಲಿ ತಿರುಗಾಡುತ್ತಿದ್ದ ವಿದ್ಯಾರ್ಥಿಗಳೆಲ್ಲಾ ತಂತಮ್ಮ ತರಗತಿಗಳನ್ನು ಸೇರಿ ಆಸನಗಳನ್ನಲಂಕರಿಸಿದರು. ಮರು ಕ್ಷಣದಲ್ಲಿಯೇ ಉಪಾಧ್ಯಾಯರು ಪ್ರವೇಶಿಸಿದರು.

ಶಾಲೆಯ ಪ್ರತಿ ತರಗತಿಗಳಲ್ಲಿ ನಡೆಯತಕ್ಕ ಪಾಠಗಳನ್ನು ನಾವು ಏಕಕಾಲದಲ್ಲಿ ಪರಿಶೀಲಿಸಲಾರದಿದ್ದುದರಿಂದ, ನಮ್ಮ ಕಥಾನಾಯಕರಿರುವಂಥ ನಾಲ್ಕನೇ ತರಗತಿಯನ್ನು ಮಾತ್ರ ನಮ್ಮ ರಂಗಸ್ಥಳವಾಗಿ ಭಾವಿಸೋಣವಾಗಿದೆ.

ಶಾಲಾ ನಿಯಮಕ್ಕನುಗುಣವಾಗಿ ಪ್ರಥಮ ಘಂಟೆಯಲ್ಲಿ ಗಣಿತ ಶಿಕ್ಷಣವಾಗಿತ್ತು. ಉಪಾಧ್ಯಾಯರು ಪ್ರವೇಶಿಸಿದೊಡನೆ ಹುಡುಗರ ಹಾಜರಾತಿಯನ್ನು ಪಾಕ್ಲೆ ಮಾಡಿ ತಮ್ಮ ದಿವಸದ ಕಾರ್ಯವನ್ನು ಕೈಕೊಂಡರು. ಹುಡುಗರೆಲ್ಲಾ ಉಪಾಧ್ಯಾಯರು ಕೊಟ್ಟ ಲೆಕ್ಕವನ್ನು ಮಾಡತೊಡಗಿದರು. ಆ ಸಮಯಕ್ಕೆ ಸರಿಯಾಗಿ ಇಬ್ಬರು ವಿದ್ಯಾರ್ಥಿಗಳು ಕಂಕುಳಲ್ಲಿ ಪುಸ್ತಕಗಳನ್ನು ಹಿಡಿದುಕೊಂಡು, ತರಗತಿಯ ಹೊಸ್ತಿಲಿನಲ್ಲಿ ನಿಂತು ಉಪಾಧ್ಯಾಯರನ್ನು ಕುರಿತು 'ಅಯ್ಯಾ ನಾವು ಒಳಗೆ ಬರಬಹುದೋ' (May we get in sir) ಎಂದು ಕೇಳಿದರು.

ಉಪಾಧ್ಯಾಯರು ಅಪ್ಪಣೆ ಇತ್ತೊಡನೆ, ಇಬ್ಬರೂ ಒಳಹೊಕ್ಕು, ಯಾವುದನ್ನೂ ಗಣಿಸದೆ ಮುಂದಗಮನದಿಂದ ತರಗತಿಯ ಕಡೇ ಬೆಂಚನ್ನು ಸೇರಿ ಕ್ಲಾಸಿನಲ್ಲಿ ಉಪಾಧ್ಯಾಯರೇ ಇಲ್ಲದ ಹಾಗೆ ನರ್ತಿಸುತ್ತಾ ಅಲ್ಲಿ ಕುಳಿತಿರುವ ವಿದ್ಯಾರ್ಥಿಯ ಪುಸ್ತಕವನ್ನೆಳೆದು, 'ಸರಿ! ಬಹು ಗಟ್ಟಿಗ! ನಮ್ಮನ್ನು ಬಿಟ್ಟು ಬಂದೆಯಾ'? ಎಂದು ಒಬ್ಬನು ಹೇಳಿದನು.

ತಮ್ಮ ಕೆಲಸದಲ್ಲೇ ಮಗ್ನರಾಗಿದ್ದ ವಿದ್ಯಾರ್ಥಿಗಳೆಲ್ಲಾ, ಇವರ ಆಗಮನದಿಂದ ಎಚ್ಚತ್ತು, ಅವರ ಮುಖವನ್ನೇ ನೋಡುತ್ತಾ ಕುಳಿತರು. ವಿದ್ಯಾರ್ಥಿಗಳಿಬ್ಬರ ಅವಿಧೇಯತೆಯ ನಡತೆಯು ನಮ್ಮ ಗಣಿತ ಶಿಕ್ಷಕರಿಗೇನೂ ನವೀನ ಸಂಗತಿಯಾಗಿರಲಿಲ್ಲ. ಆದರೂ ಅಷ್ಟು ವಿದ್ಯಾರ್ಥಿಗಳ ಎದುರಿನಲ್ಲಿ ಅವರಿಬ್ಬರು ತನ್ನನ್ನು ಅಷ್ಟು ತಿರಸ್ಕಾರ ರೀತಿಯಲ್ಲಿ, ಗಣಿಸಿದ್ದನ್ನು ಅವರು ಸಹಿಸಲಾರದೆ ಹೋದರು. ಕೂಡಲೇ ಆ ವಿದ್ಯಾರ್ಥಿಗಳನ್ನು ಕುರಿತು 'ಆನಂದ ಪ್ರಸಾದ ಸುಮ್ಮನೆ ಕುಳಿತುಕೋ' ಎಂದು ಘರ್ಜಿಸಿದರು. ಆನಂದನು ಒಂದು ಅಲಕ್ಷ್ಯಭಾವದ ಮುಗುಳುನಗೆಯನ್ನು ತೋರ್ಪಡಿಸುತ್ತಾ, ತನ್ನನ್ನೇ ಅಭಿಮಾನದ ದೃಷ್ಟಿಯಿಂದ ನೋಡುತ್ತಿದ್ದ [illegible] ಹುಡುಗನಿಗೆ ಕಣ್ಣು ಮುಚ್ಚಿ ಕುಳಿತನು. ಉಪಾಧ್ಯಾಯರ ಮನಸು ಸಿಟ್ಟಿನಿಂದ ಕುದಿಯುತ್ತಿದ್ದರೂ ಅದನ್ನು ಮನಸಿನಲ್ಲೇ ತಣ್ಣೀರಿಸುತ್ತಾ ಕುಳಿತರು.

ಆನಂದನು ತನ್ನ ಸಂಗಾತಿಯೊಡನೆ ಏನೋ ಗುಸುಗುಟ್ಟತೊಡಗಿದನು. ಉಪಾಧ್ಯಾಯರಿಗೆ ಸಹಿಸಲಾರದಾಯಿತು. ಅವರು ಎದ್ದು ನಿಂತು, 'ಬಾಯಿ ಮುಚ್ಚುವಿಯೋ ಅಥವಾ ಹೊರಗೆ ಕಳುಹಿಸಬೇಕೋ' ಎಂದರು. ಆನಂದನು ಒಡನೆಯೇ 'ಅದು ನಿಮಗೆ ದುಸ್ಸಾಧ್ಯ ಸಾರ್' ಎಂದು ಹೇಳಿ ತಿರಸ್ಕಾರ ಸೂಚಕವಾಗಿ ನಕ್ಕನು. ಉಪಾಧ್ಯಾಯರಿಗೆ ಸಹಿಸಲಸಾಧ್ಯವಾಯಿತು. ಅವರು ಸಿಟ್ಟಿನಿಂದ ನಡುಗುತ್ತಾ, 'ಏನು, ಅಸಾಧ್ಯವೇ? ಅಸಾಧ್ಯವೋ, ಸುಸಾಧ್ಯವೋ ನೋಡುವನು' ಎನ್ನುತ್ತಾ ಹತ್ತಿರ ಸರಿದರು. ಆನಂದನು ಎದ್ದು ಗಟ್ಟಿಯಾಗಿ ನಿಂತು 'ನನ್ನನ್ನೇನಾದ್ರೂ ಮುಟ್ಟಿದ್ದೇ ಆದರೆ ಪರಿಣಾಮವು ವಿಪರೀತವಾದೀತು' ಎಂದನು. ಆತ್ಮಗೌರವದಲ್ಲಿ ಲಕ್ಷ್ಯವಿಟ್ಟ ಉಪಾಧ್ಯಾಯರಿಗೆ ಹುಡುಗನನ್ನು ಮುಟ್ಟಲು ಧೈರ್ಯ ಬರಲಿಲ್ಲ. ಅವರಿಗೆ ಏನು ಮಾಡಲಿಕ್ಕೂ ತೋರಲಿಲ್ಲ. ಒಡನೆಯೇ ಅವರು ತರಗತಿಯನ್ನು ಬಿಟ್ಟು ಹೊರಗೆ ಹೋದರು. ಹುಡುಗರೆಲ್ಲಾ ತಮ್ಮ ಕೆಲಸವನ್ನು ಬಿಟ್ಟು ಆನಂದನನ್ನೇ ನೋಡತೊಡಗಿದರು. ಕೆಲವರು, 'ಹೆದರಬೇಡ' ಎಂಬ ಸೂಚನೆಯನ್ನು ತಮ್ಮ ಕಣ್ಣಿನ ಸಂಜ್ಞೆಗಳಿಂದ ತೋರಿಸುತ್ತಿದ್ದರು. ಗಣಿತ ಶಾಸ್ತ್ರದಲ್ಲಿ ದಡ್ಡರಾದ ಹುಡುಗರು ಗಣಿತ ಶಿಕ್ಷಕರ ಮೇಲಿನ ಸೇಡನ್ನು ತೀರಿಸಿಕೊಳ್ಳಲು ಇದೇ ಸುಸಂದರ್ಭವೆಂದು ತಿಳಿದು ಆನಂದನನ್ನು ಆಗುವಷ್ಟು ಪ್ರೋತ್ಸಾಹಿಸತೊಡಗಿದರು. ಆನಂದನಿಗೆ ಅಂತರಂಗದಲ್ಲಿ ಹೆದರಿಕೆಯುಂಟಾದರೂ, ತನ್ನ ಸಂಗಾತಿಗಳ ಹೊಗಳಿಕೆಗೆ ಪಾತ್ರನಾಗಬೇಕೆಂಬ ಕುತೂಹಲವು ಅದಕ್ಕಿಂತಲೂ ಮಿಗಿಲಿದ್ದ ಕಾರಣ, ತನ್ನ ಅಂತರ್ಭಾವವನ್ನು ಅಡಗಿಸಲು, ಒಂದು ಬಲತ್ಕಾರದ ನಗೆಯನ್ನು ಮುಖದ ಮೇಲೆ ತಂದು, ತನ್ನ ಸಮೀಪದ ವಿದ್ಯಾರ್ಥಿಯ ಬೆನ್ನಿನ ಮೇಲೆ ತಟ್ಟಿ 'ಇವನದೊಂದು ಚೇಷ್ಟೆ! ಇವನ ಕರ್ತವ್ಯ ಮಾಡಿ ಹೊರಟು ಹೋಗಬೇಕಲ್ಲದೆ, ಒಬ್ಬ ಶಾಲೆಯಾದ ಹೊತ್ತಿಗೆ ಬರುತ್ತಾನೆ. ಅವನು ಕಲಿಯುತ್ತಾನೋ ಇಲ್ಲವೋ, ಈ ಸಂಗತಿಯೆಲ್ಲಾ ಏತಕ್ಕೆ? ಸಂಬಳಕ್ಕೆ ಸರಿಯಾದ ಕೆಲಸ ಮಾಡಬೇಕು; ಹೊರಟು ಹೋಗಬೇಕು. ನಮ್ಮ ನಮ್ಮ ಕರ್ತವ್ಯಗಳು ನಮಗೆ ಗೊತ್ತಿಲ್ಲವೋ? ಎನ್ನುವಷ್ಟರಲ್ಲಿ ಕೆಲವು ವಿದ್ಯಾರ್ಥಿಗಳು ಅದಕ್ಕೆ ಅನುಮೋದಿಸುತ್ತಿರಲು ಶಾಲಾ ಹೆಡ್ಮಾಸ್ತರು ಗಣಿತ ಶಿಕ್ಷಕರೊಡನೆ ಕೋಪೋದ್ರಿಕ್ತರಾಗಿ ತರಗತಿಯನ್ನು ಸೇರಿದರು.

ಹೆ. ಮಾಸ್ತರು ಸಿಟ್ಟಿನಿಂದ ನಡುಗುತ್ತಾ, 'ದಾಟು ಹೊರಗೆ' ಎಂದು ಆನಂದನಿಗೆ ಘರ್ಜಿಸಿದರು. ಆನಂದನು ತನ್ನ ಸಂಗಾತಿಗಳ ಮುಖವನ್ನು ನೋಡಿದನು. ಎಲ್ಲರೂ ಮೌನವಾಗಿ ತಲೆ ಬಾಗಿದರು. ಹೆ. ಮಾಸ್ತರವರು 'ನೋಡುವುದೇನು? ಹೊರಡುತೀಯೋ ದೂಡಬೇಕೋ?' ಎಂದು ಮತ್ತೊಮ್ಮೆ ಸಿಂಹನಾದವನ್ನು ಮಾಡಿದರು. ಆನಂದನು ಮರು ಮಾತನಾಡದೆ ಪುಸ್ತಕಗಳನ್ನು ಕಂಕುಳಲ್ಲಿ ಇರುಕಿ ಹೊರಟು ಹೋದನು.

ಹೆ. ಮಾಸ್ತರವರು ಹೊರಟುಹೋದರು. ಗಣಿತ ಶಿಕ್ಷಕರು ತನಗುಂಟಾದ ಅವಮರ್ಯಾದೆಯನ್ನು ಯೋಚಿಸುತ್ತಾ, ಕುರ್ಚಿಯ ಮೇಲೆ ಕುಳಿತರು. ಉಪಾಧ್ಯಾಯರ ಆ ಸ್ಥಿತಿಯನ್ನು ನೋಡಿ ವಿದ್ಯಾರ್ಥಿಗಳಿಗ್ಯಾರಿಗೂ ಅವರನ್ನು ಮಾತಾಡಿಸಲು ಧೈರ್ಯ ಬರಲೇ ಇಲ್ಲ. ಸ್ವಲ್ಪ ಹೊತ್ತಿನಲ್ಲೇ ಘಂಟೆಯಾದುದರಿಂದ ಅವರು ಎದ್ದು ಹೊರಟು ಹೋದರು,

ಮರುಕ್ಷಣದಲ್ಲಿ ಚರಿತ್ರಾ ಶಿಕ್ಷಕರು ಪ್ರವೇಶಿಸಿದರು. ಹುಡುಗರೆಲ್ಲಾ ಎದ್ದು ನಿಂತು ಉಪಾಧ್ಯಾಯರು ಅಪ್ಪಣೆ ಇತ್ತೊಡನೆ ಕುಳಿತರು. ಕೂಡಲೇ ಆನಂದ ಪ್ರಸಾದನು ಬಂದು ತನ್ನ ಆಸನದಲ್ಲಿ ಕುಳಿತನು. ಶಿಕ್ಷಕರು ಪಾಠ ಪ್ರಾರಂಭಿಸಿದರು. 'ಈಗ ನೋಡಿ, ಚರಿತ್ರೆಯಲ್ಲಿ ನೀವು ಹೆಚ್ಚಾಗಿ ತಲೆ ಕೆಡಿಸಿಕೊಳ್ಳುವುದರಿಂದ ಪ್ರಯೋಜನವಿಲ್ಲ. ಇದರಿಂದ ನಿಮ್ಮ ಜೀವನಮಾರ್ಗದಲ್ಲಿ ಯಾವುದೊಂದು ಪ್ರಯೋಜನವೂ ಇಲ್ಲ' .... ಅಷ್ಟರಲ್ಲಿ ಆನಂದ ಪ್ರಸಾದನು ಎದ್ದು ನಿಂತು, 'ಸಾರ್, ಹಾಗಾದರೆ ವಿದ್ಯಾ ಖಾತೆಯವರು ಅದನ್ನು ಒಂದು ಪಾಠವಾಗಿ ಇಟ್ಟದ್ದೇಕೆ? ಅವರೇನು ಹುಚ್ಚರೋ?'

ಈ ಉಪಾಧ್ಯಾಯರಿಗೆ ಆನಂದನನ್ನು ವಿರೋಧಿಸುವಷ್ಟು ಧೈರ್ಯವಿರಲಿಲ್ಲ. ಇದರ ಮೇಲೂ ಇವರು ಚರಿತ್ರೆಯ ವಿಷಯದಲ್ಲಿ ತಾವು ಬಾಯಲ್ಲಿ ಬೋಧಿಸುತ್ತಿದ್ದ ತತ್ವವನ್ನು ಕಾರ್ಯತಃ ಮಾಡಿ ತೋರಿಸುವವರಾಗಿದ್ದರು. ವಿಷಯವನ್ನಾರ್ಜಿಸುವದರಲ್ಲಿ ಇವರ ಮತವೇನೆಂದರೆ 'ಪರೀಕ್ಷೆಗೆ ಯಾವ ಯಾವ ಸಂಗತಿಗಳು ಬರುತ್ತವೋ ಅವನ್ನು ಮಾತ್ರ ನಾವು ಕಲಿತುಕೊಳ್ಳಬೇಕು. ಪರೀಕ್ಷೆ ಆದನಂತರ ಆ ತಿಳುವಳಿಕೆಯಿಂದ ಯಾವ ಪ್ರಯೋಜನವೂ ಇಲ್ಲದ್ದರಿಂದ ಅವುಗಳನ್ನು ಮರೆತುಬಿಡಬಹುದು.' ಈ ತತ್ವವನ್ನೇ ಅವರು ತಮ್ಮ ಬಾಳ ನಡವಳಿಕೆಯಲ್ಲಿ ಅಭ್ಯಾಸಿಸುವಂತೆ ಕಾಣುತ್ತಿತ್ತು. ಇವರೇನೋ ಬಿ. ಎ. ಪರೀಕ್ಷೆಯಲ್ಲಿ ಪಾಸಾಗಿದ್ದರು. ಆದರೆ ಆ ಮೇಲೆ ಅವರು ತಾವು ಕಲಿತ ಸಂಗತಿಗಳನ್ನು ತಾವಾಗಿ ಮರೆತುಬಿಟ್ಟರೋ ಅಲ್ಲ ಆ ಸಂಗತಿಗಳು ಇವರನ್ನು ಮರೆತು ದೂರ ಹೋದವೋ; ಅಂತು ಅವರಿಗೆ ಮಾತ್ರ ಚರಿತ್ರಾ ಶಿಕ್ಷಣದಲ್ಲಿ ನ್ಯಾಯವಾದ ಜ್ಞಾನವಿರಲಿಲ್ಲ. ಕೆಲವೇಳೆಯಲ್ಲಿ ಅಜ್ಞಾನಭರಿತವಾದ ತಪ್ಪುಗಳನ್ನು ಸಹ ಮಾಡಿಬಿಡುತ್ತಿದ್ದರು. ತಮಗೆ ಗೊತ್ತಿಲ್ಲದ ಸಂಗತಿಗಳನ್ನೇನಾದರೂ, ಯಾರಾದರೂ ಕೇಳಿದ್ದರೆ, ಏನೇನೋ ಹೇಳಿ ತಪ್ಪಿಸಿಕೊಳ್ಳುತ್ತಿದ್ದರು. ಓಡುವ ನಾಯಿಯನ್ನು ಕಂಡರೆ, ಅಟ್ಟುವ ನಾಯಿಯು ಬಹಳವಂತೆ. ಅದಕ್ಕೆ ಸರಿಯಾಗಿ, ಇತರ ಉಪಾಧ್ಯಾಯರ ಎದುರಿನಲ್ಲಿ ಕೇಳಿದ ಪ್ರಶ್ನೆಗೆ ಉತ್ತರ ಕೊಡಲಿಕ್ಕೂ ಸಹ ಹೆದರುತ್ತಿದ್ದ ವಿದ್ಯಾರ್ಥಿಗಳೆಲ್ಲರೂ ನಿರ್ಭಯದಿಂದ ಎದ್ದು ನಿಂತು ಇವರನ್ನು ಇಲ್ಲ ಸಲ್ಲದ ಪ್ರಶ್ನೆ ಕೇಳುತ್ತಿದ್ದರು. ಅಂಥಾ ಸಂದರ್ಭಗಳಲ್ಲಿ ಈ ಉಪಾಧ್ಯಾಯರು ಪ್ರಶ್ನಾಕರ್ತನ ಅಂತರ್ಯವನ್ನು ತಿಳಿದು, ಕಾಟೋಬಂದ ಉತ್ತರಗಳನ್ನು ಕೊಡುತ್ತಿದ್ದರು. ಕೆಲವು ವೇಳೆ ಕೇಳಿದ ಪ್ರಶ್ನೆಗೆ ಏನೊಂದು ಉತ್ತರವು ತನಗೆ ಗೊತ್ತಿಲ್ಲದಿದ್ದರೂ ಪ್ರಶ್ನೆಯ ಸ್ಥಿತಿಯನ್ನು ನೋಡಿ, ಅದಕ್ಕೆ ಸರಿಯಾದ ಉತ್ತರವು ಕೇಳಿದವನಿಗಾಗಲೀ, ಇತರ ವಿದ್ಯಾರ್ಥಿಗಳಿಗಾಗಲೀ ತಿಳಿದಿರಲಿಕ್ಕಿಲ್ಲವೆಂಬ ಸಂಗತಿಯು ನಿಶ್ಚಯವಾದೊಡನೆ ಧೈರ್ಯವನ್ನು ತಳೆದು ಏನೊಂದೂ ಸಂಕೋಚವಿಲ್ಲದೆ, ಬಲವಾದ 'ಗಪ್'ವನ್ನು ಒಟ್ಟು ಬಿಡುತ್ತಿದ್ದರು. ಇಲ್ಲವೇ ಪ್ರಶ್ನಿಸುವ ವಿದ್ಯಾರ್ಥಿಯ ಬಾಯಿ ಮುಚ್ಚಿಸುತ್ತಿದ್ದರು. ಈಗ ಆನಂದನ ಪ್ರಶ್ನೆಗೆ ನಿಸ್ಸಹಾಯನಾಗಿ ನಕ್ಕು, 'ಏನು ವಿದ್ಯಾ ಖಾತೆಯವರು ಮಾಡಿದ್ದೆಲ್ಲಾ [illegible]' ಎಂದು ಹೇಳಿ ತಮ್ಮ ಯಥಾ ಪಾಠ ಪ್ರಾರಂಭಿಸುತ್ತಲೇ, ಒಬ್ಬ ವಿದ್ಯಾರ್ಥಿಯು ಎದ್ದು ನಿಂತು, 'ಸಾರ್, ನಿನ್ನೆ ದಿವಸ ತಂದೆಯವರು ಈಗಿನ ಬ್ರಿಟಿಷ್ ಸಾಮ್ರಾಧಿಪತಿಯ ಹೆಸರೇನೆಂದು ಕೇಳಿದರು. ನನಗೆ ಗೊತ್ತಿರಲಿಲ್ಲ. ಈ ದಿವಸ ಮನೆಗೆ ಹೋದೊಡನೆ ತಿಳಿಸಬೇಕಂತೆ. ದಯವಿಟ್ಟು ಹೇಳಿಕೊಡಬೇಕೆಂದನು.

ಉಪಾಧ್ಯಾಯರು ಏನನ್ನೂ ಗಣಿಸದೆ ತನ್ನ ಆಸನವನ್ನಲಂಕರಿಸಿ ಹುಡುಗರ ಹಾಜರಾತಿಯನ್ನು ವಾಕ್ಲೆ ಮಾಡತೊಡಗಿದರು. ಆದೊಡನೆ ಎದ್ದು ಏನೋ ಮರೆತು ಬಂದವರಂತೆ ಹೊರಟು ಹೋದರು. ಸ್ವಲ್ಪ ಹೊತ್ತಿನಲ್ಲಿ ಒಂದು ಅವಶ್ಯವಿಲ್ಲದ ಪುಸ್ತಕವನ್ನು ತೆಗೆದುಕೊಂಡು ಮರಳಿ ತರಗತಿಯನ್ನು ಪ್ರವೇಶಿಸಿ ಪೂರ್ವೋಕ್ತ ಪ್ರಶ್ನೆಗಳಿಗೆ ಏನೊಂದೂ ಉತ್ತರವನ್ನು ಕೊಡದೆ ಪಾಠಕ್ಕಾರಂಭಿಸಿದರು.

ಅದೇ ವಿದ್ಯಾರ್ಥಿಯು ಎದ್ದು ನಿಂದು ಮರಳಿ ಪ್ರಶ್ನೆ ಮಾಡಿದನು. ಉಪಾಧ್ಯಾಯರು 'ಯಾರಿಗೆ ಗೊತ್ತಿದೆ' ಎಂದು ತರಗತಿಯನ್ನೆಲ್ಲಾ ಒಮ್ಮೆ ನೋಡಿ, ತಾವೇ ಆತನ ಹೆಸರನ್ನು ಹೇಳಿದರು. ಕೂಡಲೇ ಮತ್ತೊಬ್ಬ ವಿದ್ಯಾರ್ಥಿಯು ಎದ್ದು ನಿಂತು 'ಈಗಿನ ಅಮೇರಿಕದ ಪ್ರೆಸಿಡೆಂಟರ ಹೆಸರೇನು ಸಾರ್?' ಎಂದು ಕೇಳಿದನು.

ಉಪಾಧ್ಯಾಯರಿಗೆ ಸ್ವಲ್ಪ ಸಿಟ್ಟು ಬಂತು, ಸ್ವಲ್ಪ ಗಂಭೀರ ಸ್ವರದಿಂದ 'ಏನಿದು ಕೌನ್ಸಿಲ್ ಹಾಲೆಂದು ಭಾವಿಸಿದೆಯಾ! ಆ ಪ್ರೆಸಿಡೆಂಟನಿಂದ ನಿನಗೇನಾಗಬೇಕು? ಕೂತುಕೊ!' ಎಂದು ಗದರಿಸಿದರು.

ಹಿಂದಿನ ಪೀಠದಲ್ಲಿ ಕುಳಿತಿದ್ದ ಆನಂದನು, ಉಪಾಧ್ಯಾಯನ ತಿಳಿಗೇಡಿತನವನ್ನು ಕಂಡು, ಅವನನ್ನು ಹೀಯಾಳಿಸಿ, ಹುಡುಗರ ಅಭಿಮಾನವನ್ನು ಹೊಂದುವ ಆಕಾಂಕ್ಷೆಯಿಂದ ಎದ್ದು ನಿಂತು, 'ಅಂಥಾ ಸಂಗತಿಗಳನ್ನು ನೀವು ಹೇಳಿ ಕೊಡದಿದ್ದರೆ

ಮಡಿಕೇರಿ ಮೀಟಿಂಗು.

(ಶ್ರೀ. ಪಿ. ಜಿ. ಐಯ್ಯಪ್ಪನವರಿಂದ.)

'ಕೊಡಗು' ಪತ್ರಿಕೆಯ 7-10-38 ರ ಸಂಚಿಕೆಯಲ್ಲಿ ಮೇಲ್ಕಂಡ ಶಿರೋನಾಮೆಯ 2 ಬಾತ್ಮಿಗಳು ಕೆ. ಸುಬ್ಬಯ್ಯನವರ ದಸ್ಕತ್ತಿನಿಂದ ಹೊರಟದ್ದನ್ನು ನೋಡಿದ್ದಾಯಿತು. ಈ ಕೆ. ಸುಬ್ಬಯ್ಯನವರು ಆ ದಿವಸ ಮೀಟಿಂಗಿನಲ್ಲಿ ಅಧ್ಯಕ್ಷರಾಗಿದ್ದವರೋ ಯಾ ಬೇರೆ ಯಾರಾದರೂ ಮೀಟಿಂಗಿನಲ್ಲಿ ಹಾಜರಿದ್ದವರೋ ಎಂಬ ಸಂಗತಿ ಬಾತ್ಮಿದಾರರಿಗೂ ಮತ್ತು ಪತ್ರಿಕೆಯ ಎಡಿಟರಿಗೂ ಮಾತ್ರ ಗೊತ್ತು. ಅವರು ಯಾರೇ ಇರಲಿ, ಇವರು ಪ್ರಕಟಿಸಿರುವ ಬಾತ್ಮಿಗಳಲ್ಲಿ ಮಾತ್ರ ಅಲ್ಲಿ ನಡೆದ ಸಂಗತಿಗಳನ್ನು ಯಥೇಚ್ಛವಾಗಿ ಕೊಟ್ಟಂತೆ ನನಗೆ ಕಂಡುಬರುವದಿಲ್ಲ

ಈ ಮಹನೀಯರು ಸದರಿ ಪತ್ರಿಕೆಯ 10 ನೇ ಪುಟದಲ್ಲಿ ಕೊಟ್ಟಿರುವ ಬಾತ್ಮಿಯಲ್ಲಿ 'ಕೊಡಗು' ಪತ್ರಿಕೆಯ ಸಬ್ ಎಡಿಟರು ನಿಜವಾದ ಸಂಗತಿಯನ್ನು ಪ್ರಕಟಿಸಲಿಲ್ಲ. ಇದು ಪತ್ರಿಕಾ ಕರ್ತರ ನೀತಿ ಮತ್ತು ಧರ್ಮಕ್ಕೆ ವಿರೋಧ ಎಂಬದಾಗಿ ಬರೆದಿದ್ದಾರೆ ಆದರೆ ಇವರು ಹೇಳುವ ನೀತಿಯನ್ನೇ ಇವರು ಸದರಿ ಪತ್ರಿಕೆಯ 11 ನೇ ಪುಟದಲ್ಲಿ ಪ್ರಕಟಿಸಿರುವ ಬಾತ್ಮಿಯಲ್ಲಿ ಅನುಸರಿಸಿರುವಂತೆ ಕಾಣುವುದಿಲ್ಲ ಇವರು ಇಲ್ಲವೇ ಆ ಮೀಟಿಂಗಿನಲ್ಲಿ ನಡೆದ ಎಲ್ಲಾ ಸಂಗತಿಗಳನ್ನು ಕೂಲಂಕುಶವಾಗಿ ಪ್ರಕಟಿಸಬೇಕಾಗಿತ್ತು. ಅದರ ಬದಲು ಇವರಿಗೆ ಬೇಕಾದ ಸಂಗತಿಗಳನ್ನೂ ಮತ್ತು ಅಮಾಲ್ಗಮೇಶನ್ ಆಗಬೇಕೆಂದಿದ್ದವರ ಮತಕ್ಕೆ ಒತ್ತಾಸೆಯಾಗಿ ಮಾತಾಡಿದವರ ಭಾಷಣವನ್ನು ಒಂದಕ್ಕೆ ಎರಡು ಸೇರಿಸಿ ಬರೆದಿದ್ದಾರೆ. ಆದರೆ ಕೊಡಗು ಬೇರೆ ಪ್ರಾಂತ್ಯಕ್ಕೆ ಸೇರಿದರೆ ಅದರ ಈಗಿರುವ ಕುಂದುಕೊರತೆಗಳು ಹೇಗೆ ಪರಿಹಾರ ಆಗುವದೆಂಬ ಸಂಗತಿಯನ್ನು ವಿವರಿಸಿ ಬೇರೆ ಕೆಲವರು ಮಾತಾಡಿರುವದಾದರೂ ಈ ಬಾತ್ಮಿದಾರರು ಅವರ ಭಾಷಣಗಳನ್ನೆಲ್ಲಾ ನವರೂ ಮತ್ತು . ನವರೂ ಕೊಡಗು ಪ್ರತ್ಯೇಕ ಇರಬೇಕೆಂದೂ ಅಮಾಲ್ಗಮೇಶನ್ ಮಾಡಕೂಡದೆಂದೂ ಕೆಲವು ಕಾರಣಗಳನ್ನು ಕೊಟ್ಟು ಮಾತಾಡಿದರು' ಎಂಬ ಎರಡು ಪಂಕ್ತಿಗಳಲ್ಲಿ ತೀರಿಸಿಬಿಟ್ಟಿರುವರು ಇವರು ಪಕ್ಷಪಾತವಿಲ್ಲದೆ, ಅಲ್ಲಿ ನಡೆದ ಸಂಗತಿಯನ್ನು ದೇಶವಾಸಿಗಳ ಹಿತಕ್ಕಾಗಿ ಪ್ರಕಟಿಸಿರುವದಾದರೆ ಅಮಾಲ್ಗಮೇಶನ್ ಒಳ್ಳೆಯದೆಂದು ಹೇಳಿದವರ ಭಾಷಣಗಳನ್ನು ಬರೆದಂತೆ ನನ್ನ ಭಾಷಣದ ಸಾರಾಂಶವನ್ನು ಪ್ರಕಟಿಸಬಹುದಿತ್ತು ಆದರೆ ಅವರು ಅಮಾಲ್ಗಮೇಶನಿಗೆ ವಿರೋಧ ಮಾಡಿದವರ ಭಾಷಣವನ್ನು ಸಂಪೂರ್ಣ ಬಿಟ್ಟುಬಿಟ್ಟಿದ್ದಾರೆ ಇದು 'ಬಾತ್ಮಿದಾರರ ನೀತಿಗೆ' ವಿರೋಧವೆಂದು ಈ ಸುಬ್ಬಯ್ಯನವರು ತಿಳಿದಂತೆ ಕಾಣುವುದಲ್ಲ

ಮದ್ರಾಸಿಗೆ ಕೊಡಗನ್ನು ಸೇರಿಸಬೇಕು ಎಂಬದಾಗಿ ಠರಾವಿನಲ್ಲಿ ಬರೆಯಲಿಲ್ಲವಾದರೂ ಆ ದಿವಸ ಅಮಾಲ್ಗಮೇಶನ್ ಆದರೇನೇ ನಮಗೆ ಮುಕ್ತಿ ಎಂಬದಾಗಿ ಭಾಷಣ ಮಾಡಿದವರ ಪೈಕಿ ಮಾ ಶ್ರೀ. ಕೊರವಂಡ ಮುತ್ತಣ್ಣನವರೊಬ್ಬರಲ್ಲದೆ ಬಾಕಿ ಯಾರೂ ಮೈಸೂರಿಗೆ ಸೇರಿಸಬೇಕೆಂಬ ಅಭಿಪ್ರಾಯವನ್ನು ಸೂಚಿಸಲಿಲ್ಲ ಅದೂ ಅಲ್ಲದೆ ಈ ಠರಾವನ್ನು ಕಾಂಗ್ರೆಸ್ ಪ್ರೆಸಿಡೆಂಟರಿಗೆ ಕಳುಹಿಸಬೇಕೆಂದು ಹೇಳಿದ್ದರಿಂದಲೂ ಮತ್ತು ಹರಿಪುರ ಕಾಂಗ್ರೆಸಿನ ಠರಾವುಗಳನ್ನು ಓದಿ ಹೇಳಿ ಅದಕ್ಕೆ ಒತ್ತಾಸೆ ಕೊಡಬೇಕೆಂದೂ ಸೇರಿದ ಮೀಟಿಂಗಿನಲ್ಲು 'ಮದ್ರಾಸಿಗೆ' ಎಂದು ಕಲ್ಪಿತ ಬರೆದಿರಲಿಲ್ಲವಾದರೂ 'ದೊಡ್ಡ ಪ್ರಾಂತ್ಯಕ್ಕೆ ಸೇರಿಸಲು ಅಧಿಕಾರಿಗಳು ತಕ್ಕ ಏರ್ಪಾಡು ಮಾಡಬೇಕೆಂದು ಈ ಸಭೆಯು ಕೇಳಿಕೊಳ್ಳುತ್ತದೆ' ಎಂಬ ಮಾತಿನಿಂದ ಮದ್ರಾಸು ಪ್ರಾಂತ್ಯಕ್ಕೆಂದೇ ಖಂಡಿತವಾಗಿಯೂ ಅರ್ಥವಾಗುತ್ತದೆ ಆದುದರಿಂದ ಮದರಾಸಿಗೆ ಸೇರಿಸಬೇಕೆಂಬ ಠರಾವನ್ನು ಯಾರೂ ಸಭೆಯ ಮುಂದೆ ಇಟ್ಟಿರಲಿಲ್ಲವೆಂಬುದು ಅಕ್ಷರಶಃ ಸರಿಯಾಗಿದ್ದರೂ, ಕಾರ್ಯತಃ ಖಂಡಿತ ಸುಳ್ಳೆಂದು ಹೇಳಬೇಕಾಗಿದೆ ಅದೂ ಅಲ್ಲದೆ 'ಇವರು ಅಮಾಲ್ಗಮೇಶನ್ ಮಾಡಕೂಡದೆಂದು ನಾಲ್ಕು ಜನರು ಮಾತಾಡಿರುವರಲ್ಲದೆ, ಮದ್ರಾಸಿನೊಂದಿಗೆ ಸೇರಿಸುವದಾಗಲೀ ಯಾ ಕೂಡದೆಂಬದಾಗಲೀ ಯಾರೂ ಮಾತಾಡಲಿಲ್ಲ' ಎಂದು ಬರೆದಿದ್ದಾರೆ ಈ ಮಾತುಗಳು ಖಂಡಿತ ಸುಳ್ಳು. ಮದ್ರಾಸಿನೊಂದಿಗೆ ಕೂಡಬಾರದೆಂದೇ ನಾನು ಭಾಷಣ ಮಾಡಿದ್ದಾಗಿದೆ ಇದಕ್ಕೆ ಉದಾಹರಣೆಯಾಗಿ ಮದ್ರಾಸಿನಲ್ಲಿ ತಲೆ ಒಂದರ ಇರುವ ಸರ್ಕಾರದ ಉತ್ಪತ್ತಿಯನ್ನೂ, ಸರ್ಕಾರದವರು ತಲೆ ಒಂದರ ಮಾಡುವ ಖರ್ಚನ್ನೂ, ಕೊಡಗಿನ ಉತ್ಪತ್ತಿಯನ್ನೂ, ಖರ್ಚನ್ನೂ ಹೋಲಿಸಿ, ಹೇಗೆ ನಮ್ಮ ಉತ್ಪತ್ತಿ ಹೆಚ್ಚಿದೆ ಎಂಬದನ್ನೂ ಮದ್ರಾಸಿನಲ್ಲಿ ಉಳಿತಾಯ ಇದ್ದು ನಮ್ಮಲ್ಲಿ ಇಲ್ಲದಿರುವುದಾದರೆ, ಅದಕ್ಕೆ ಮುಖ್ಯ ಕಾರಣ 1 ನೇ ಮದ್ರಾಸಿನಲ್ಲಿ ರೈತರು ಹೆಚ್ಚು ಕಂದಾಯ ಕೊಡುತ್ತಾರೆ, ಸರ್ಕಾರವು ಕಮ್ಮಿ ಖರ್ಚು ಮಾಡುತ್ತದೆ ಇಲ್ಲಿ ನಾವು ಕಮ್ಮಿ ಕಂದಾಯ ಕೊಡುತ್ತೇವೆ, ಆದರೆ ನಮ್ಮ ಸರ್ಕಾರವು ಹೆಚ್ಚು ಖರ್ಚು ಮಾಡುತ್ತದೆ. ಆದುದರಿಂದ ಅವರಲ್ಲಿ ಉಳಿವರಿ ಇದೆ, ನಮ್ಮಲ್ಲಿ ಇಲ್ಲ ಎಂಬುದನ್ನೂ ಹೇಳಿ ನಾವು ಈಗ ಮದರಾಸಿಗೆ ಸೇರಿದರೆ ಅವರು ಇಲ್ಲವೇ, ನಮ್ಮ ಕಂದಾಯವನ್ನು ಹೆಚ್ಚಿಸಿ ನಮ್ಮ ಸರ್ಕಾರದ ಖರ್ಚಿಗೆ ಸಾಕಷ್ಟು ಸರ್ಕಾರದ ಉತ್ಪತ್ತಿಯನ್ನು ಸರಿಮಾಡುತ್ತಾರೆ. ಇಲ್ಲವಾದರೆ ನಮ್ಮ ಸರ್ಕಾರದ ಖರ್ಚನ್ನು ನಮ್ಮ ಉತ್ಪತ್ತಿಗೆ ಸರಿಯಾಗಿ ಮೋಟುಮಾಡುತ್ತಾರೆ ಅಂದಮೇಲೆ ಅವರೊಡನೆ ಸೇರಿ ಹೆಚ್ಚು ಕಂದಾಯ ಕೊಡುವದಾದರೆ ಅದವಾ ನಮ್ಮ ಸರ್ಕಾರವನ್ನು ಮೋಟು ಮಾಡಿಸಿಕೊಳ್ಳುವದಾದರೆ ನಾವೇ ಪ್ರತ್ಯೇಕವಿದ್ದು ಯಾತಕ್ಕೆ ಹಾಗೆ ಮಾಡಬಾರದು? ಎಂದು ಹೇಳಿ ಕೊಡಗಿನ 'ಏರ್ಕದಷ್ಟು ಪ್ರಾಂತ್ಯದಲ್ಲಿ ಮದ್ರಾಸಿನಲ್ಲಿ ಎಂತಹ ಸರ್ಕಾರವಿದೆ ಎಂಬುವದನ್ನೂ ಸಹ ಹೇಳಿ, ಮದ್ರಾಸು ಪ್ರಾಂತ್ಯದಿಂದ ಒರಿಸಾ ಪ್ರಾಂತ್ಯದವರು ಬೇರೆ ಹೋಗಿರುವಾಗ, ಹಾಲಿ ತೆಲುಗು ಪ್ರಾಂತ್ಯದವರೂ, ಕರ್ನಾಟಕ ಪ್ರಾಂತ್ಯದವರೂ ಸಹ ಮದ್ರಾಸಿನಿಂದ ಬೇರೆಯಾಗಲು ಹೋರಾಡುತ್ತಿರುವಾಗ್ಯೆ ನಾವು ಮದ್ರಾಸಿನೊಡನೆ ಸೇರುವದೆಂದರೆ 'ರಾತ್ರಿ ಕಂಡ ಬಾವಿಗೆ ಹಗಲು ಬಿದ್ದಂತೆ' ಆದೀತು ಎಂದು ಸಹ ಹೇಳಿರುತ್ತೇನೆ

ಆದರೆ ನನ್ನ ಭಾಷಣವು ಮುಗಿಯುವುದರೊಳಗಾಗಿಯೇ ಅಧ್ಯಕ್ಷರು '10 ಮಿನಿಟು ಆಯಿತು' ಎಂದು ಹೇಳಿ ಹೆಚ್ಚಿಗೆ ಮಾತಾಡಲು ಸಭೆಯಲ್ಲಿ ಅನೇಕರು ಸಮಯ ಕೊಡಬೇಕೆಂದು ಕೇಳಿದರೂ ಸಹ ಕೊಡದ್ದರಿಂದ ನನ್ನ ಭಾಷಣವನ್ನು ಅರ್ಧದಲ್ಲೇ ನಿಲ್ಲಿಸಬೇಕಾಯಿತು ಅಷ್ಟನ್ನೂ ಸಹ ಸದರಿ ಸುಬ್ಬಯ್ಯನವರು ಪತ್ರಿಕಾಕರ್ತರ ನೀತಿ ಧರ್ಮಗಳನ್ನು ತಿಳಿದವರಾದರೂ, ಪ್ರಕಟಿಸದಿರುವುದಕ್ಕೆ ವಿಷಾದಿಸುತ್ತೇನೆ

ಅದೂ ಅಲ್ಲದೆ ಸದರಿ ಬಾತ್ಮಿಯ ಕಡೇ ಪ್ಯಾರಾದಲ್ಲಿ 'ಪೆ. ಪುಲಿಯಂಡ ಐಯ್ಯಪ್ಪನವರು ಈ ಠರಾವಿಗೆ ಕೆಲವು ತಿದ್ದುಪಡಿಯನ್ನು ಮಾಡಬೇಕೆಂದರು' ಎಂದು ಬರೆದಿದೆ ಸದರಿ ತಿದ್ದುಪಡಿ ಏನೆಂಬುದನ್ನು ಸದರಿ ಸುಬ್ಬಯ್ಯನವರು ಬರೆದಿರುವುದಿಲ್ಲ. ಇವರು 'ಕೊಡಗು' ಪತ್ರಿಕೆಯ ಸಬ್ ಎಡಿಟರಿಗೆ ಬೋಧಿಸಿರುವ ನೀತಿಯನ್ನೂ, ಧರ್ಮವನ್ನೂ ಇವರೇ ಪ್ರತಿಪಾದಿಸಿದಂತೆ ಕಾಣುವುದಲ್ಲ

ಸದರಿ ಬಾತ್ಮಿಯಲ್ಲಿ ಕೊಟ್ಟಿರುವ ಠರಾವನ್ನು ಈಗಾಗಲೇ ವಾಚಕರೆಲ್ಲಾ ಓದಿರಬಹುದು ಅದರಲ್ಲಿ ಕೊಡಗಿನ ರಾಜಕೀಯ ಭವಿಷತ್ತನ್ನು ಕುರಿತು ಚರ್ಚಿಸಲು ಕೊಡಗು ಜಮೀನ್ದಾರರ ಸಂಘದ ಹಾಲ್‌ನಲ್ಲಿ ಲೆಜಿಸ್ಲೇಟಿವ್ ಕೌನ್ಸಿಲು ಮೆಂಬರುಗಳು, ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳು ರಾಜಕೀಯ ವಿಷಯದಲ್ಲಿ ಅಭಿರುಚಿ ಇರುವವರು, ನೋಟಿಫೈಡ್ ಏರ್ಯದ ಮೆಂಬರುಗಳು .. . ಎಂಬದಾಗಿ ಬರೆದಿದೆ ನಾನು ಅದು ತಪ್ಪು, ಹಾಗೆ ಬರೆದರೆ ಕೊಡಗಿನ ಮೇಲ್ಕಂಡ ಎಲ್ಲಾ ಮೆಂಬರುಗಳು ಎಂದು ಅರ್ಥವಾಗುತ್ತೆ. ಇಲ್ಲಿ ಎಲ್ಲಾ ಕೌನ್ಸಿಲು ಮೆಂಬರುಗಳು, ಡಿ. ಬಿ. ಮೆಂಬರುಗಳು, ರಾಜಕೀಯ ವಿಷಯದಲ್ಲಿ ಅಭಿರುಚಿ ಇರುವವರು ನೋಟಿಫೈಡ್ ಏರ್ಯದ ಮೆಂಬರು .. . ಇಲ್ಲ ಕೆಲವೇ ಇರುವುದು. ಆದುದರಿಂದ ಠರಾವಿನಲ್ಲಿ ಕೆಲವು ಕೌನ್ಸಿಲು ಮೆಂಬರು .. . ಎಂಬದಾಗಿ ಸೇರಿಸಬೇಕೆಂದು ಹೇಳಿದೆನು. ಮೊದಲು ಆಗಲಿ ಎಂದು ಒಪ್ಪಿ ಏನೋ ಬರೆದರು ಆ ಮೇಲೆ ಪುನಃ ಓದುವಾಗ್ಯೆ 'ಕೆಲವು' ಎಂಬವನ್ನು ಸೇರಿಸಿರಲಿಲ್ಲ. ಪುನಃ ಸೇರಿಸಬೇಕೆಂದು ಕೇಳುವಾಗ್ಯೆ 'ಆಗುವುದಿಲ್ಲ' ಹಾಗೆ ತಿದ್ದುಪಡಿ ಮಾಡಬೇಕಾದರೆ ಬೇರೆ ಉಪ ಠರಾವನ್ನು ತನ್ನಿ ಎಂದರು. 'ತಪ್ಪು ಠರಾವಿಗೆ ಉಪ ಠರಾವು ಏನು ನೀವು ಬರೆದ ಮಾತೇ ಸುಳ್ಳು. ಆದುದರಿಂದ 'ಕೆಲವು' ಎಂಬ ಶಬ್ದವನ್ನು ಸೇರಿಸದಿದ್ದರೆ ನಾವು ಹೊರಗೆ ಹೋಗುತ್ತೇವೆ' ಎಂದದಕ್ಕೆ ಅಧ್ಯಕ್ಷರು 'ಆಗಬಹುದು' ಎಂದ ಕೂಡಲೇ ನಾನು ಮತ್ತು ಅಮಾಲ್ಗಮೇಶನಿಗೆ ವಿರೋಧವಿದ್ದವರು ಹೊರಗೆ ಬರುತ್ತಿದ್ದ ಹಾಗೆ ಅಧ್ಯಕ್ಷರು ಠರಾವನ್ನು ಓಟಿಗೆ ಹಾಕಿದರು 'ಮೆಜಾರ್ಟಿ, ಮೆಜಾರ್ಟಿ' ಎಂದು ಕೆಲವರು ಕೂಗಿದರು ಅಮಾಲ್ಗಮೇಶನಿಗೆ ವಿರೋಧವಿದ್ದವರು ಓಟು ಮಾಡದೆ ಹೊರಗೆ ಬಂದರು ಆ ಮಾತ್ರದಿಂದ 'ಯಾರೂ ವಿರೋಧ ಮಾಡದ್ದರಿಂದ ಸರ್ವಾನುಮತದಿಂದ ಪಾಸಾಯಿತು' ಎಂದು ಹೇಳುವುದು ಖಂಡಿತ ನಿಜವಲ್ಲ ಒಂದೇ ಪಾರ್ಟಿಯವರು ಓಟು ಮಾಡಿದ್ದು ಅವರೂ ಸಹ ಇದ್ದದ್ದು ಬಹು ಕೆಲವರೇ.

ಯಾರಾದರೂ ನನ್ನನ್ನು ಕೇಳಿದ್ದಾದರೆ, ನಾನೇನು ಮಾತಾಡುವುದು ಸಾರ್! ಅದಕ್ಕೆ ಜವಾಬು ಕೊಡಲು ಎಷ್ಟು ಸಮಯ ತಾನೇ ಬೇಕು ' ಎಂದು ಧೈರ್ಯವಾಗಿ ಹೇಳಿದನು ಉಪಾಧ್ಯಾಯರಿಗೆ ಏನು ಮಾಡಲಿಕ್ಕೂ ತೋರಲಿಲ್ಲ ಒಡನೆ ತನ್ನ ಅಂತರ್ಯದ ಭಾವವನ್ನಡಗಿಸಲಿಕ್ಕೆ ಮುಖದ ಮೇಲೆ ಒಂದು ಹುಸಿ ನಗೆಯನ್ನಾಂತು 'ಇಲ್ಲಿ ಯಾರಿಗೂ ಗೊತ್ತಿಲ್ಲವೋ' ಎಂದು ಕೇಳಿದರು ಯಾರೂ ಜವಾಬು ಕೊಡಲಿಲ್ಲ. ಕೂಡಲೇ ಅವರು ಧೈರ್ಯದಿಂದ 'ಎಬ್ರಾಂ ಲೀಕನ್' ಎಂದು ಹೇಳಿ ಪುಸ್ತಕವನ್ನು ತೆರೆದು ಪಾಠ ಮಾಡಲು ಉದ್ಯುಕ್ತರಾದರು ಕೆಲವು ಹುಡುಗರು ಉಪಾಧ್ಯಾಯರ ಉತ್ತರದಲ್ಲಿ ಸಂಶಯ ಭಾವಗಳನ್ನು ತೋರ್ಪಡಿಸಿದರು ಉಪಾಧ್ಯಾಯರ ಎದೆಯು ದಡದಡ ಬಡಿಯುತ್ತಿತ್ತು ಅವರು ಹುಡುಗರನ್ನು ನೋಡಿದರು. ಒಬ್ಬನು ಮತ್ತೊಬ್ಬನೊಡನೆ ಏನೋ ಪಿಸುಗುಟ್ಟುತ್ತಿದ್ದನು ಸಿಟ್ಟಿನಿಂದ ಉಪಾಧ್ಯಾಯರು ಏನು ಮಾತಾಡುತ್ತಿರುವೆ?" ಎಂದರು. [ಸಶೇಷ.]

ಯೂನಾನಿ ಫಾರ್ಮಸಿಯ ಉತ್ತಮ ಔಷಧಿಗಳು.

ಉಬ್ಬಸ ಸಂಹಾರಿ (Asthma cure) ಕೆಲವು ದಿನಗಳ ಸೇವನೆಯಿಂದ ಉಬ್ಬಸವನ್ನು ಖಾತ್ರಿಯಾಗಿ ಗುಣಪಡಿಸುತ್ತದೆ. 40 ದಿನದ ಔಷಧಿಗೆ ಕ್ರಯ ರೂ. 5—12—0

ಅಂಬರ್ ಕೊದಲೆಣ್ಣೆ, ಸುಗಂಧಯುಕ್ತ ಅಮ್ಲಕೇಶ ತೈಲ ಅಲ್ಲದೆ ಎಲ್ಲಾ ರೋಗಗಳಿಗೂ ರಾಮಬಾಣದಂತಿರುವ ಮಾತ್ರೆಗಳೂ, ಚೂರ್ಣಗಳೂ, ಲೇಹಗಳೂ, ತೈಲಗಳೂ ಮತ್ತು ಕೇಶ ತೈಲಗಳೂ ಸಹ ತಯಾರಿರುವುವು

ಬೇಗನೆ ಬರೆಯಿರಿ:—

ಯಂ. ಯಂ ಸಿದ್ದೀಕ್,
ಪ್ರೊಪ್ರೈಟರ್,
32
ಯುನಾನಿ ಔಷಧಶಾಲಾ, ಮಡಿಕೇರಿ, ಕೊಡಗು.

ಯೂರೋಪಿನ ಆತ್ಮವಿಕ್ರಯ.

ಝೆಕ್ಕರು ಅಹಿಂಸಾ ತತ್ವವನ್ನವಲಂಭಿಸಿದ್ದರೆ ಉತ್ತಮವಿತ್ತು

(ಪೂಜ್ಯ ಗಾಂಧಿಜೀಯವರ "ಹರಿಜನ" ಪತ್ರಿಕೆಯ ಅಗ್ರ ಲೇಖನದಿಂದ.)

'ತತ್ಕಾಲಕ್ಕೆ ಯುದ್ಧ ಭಯವು ನಿವಾರಣೆಯಾಯಿತೆಂದು ಎಲ್ಲರಲ್ಲಿಯೂ ಸಂತೋಷವಿರಬಹುದು. ಆದರೆ ಈ ಸಮಸ್ಯೆಯನ್ನು ಬಗೆಹರಿಸಲು ಮಾಡಿದ ತ್ಯಾಗವೆಷ್ಟು? ಪ್ರತಿಷ್ಠೆಯನ್ನು ಮಾರಿದಂತಾಯಿತೇ ಇದು? ಇದು ವ್ಯವಸ್ಥಾಪಿಸಲ್ಪಟ್ಟ ಹಿಂಸಾ ತತ್ವದ ಜಯವೋ? ಇಲ್ಲ, ಹರ್ ಹಿಟ್ಲರನು ಹಿಂಸಾ ತತ್ವದ ಸಹಾಯದಿಂದ ತನ್ನ ಧ್ಯೇಯ ಸಾಧನೆಯನ್ನು ರಕ್ತ ಸುರಿಸದೆ ಕರಗತ ಮಾಡಿಕೊಳ್ಳುವ ಹೊಸ ತತ್ವವನ್ನು ಕಂಡುಹಿಡಿದನೋ? ನಾನು ಯೂರೋಪಿನ ರಾಜಕೀಯ ರಂಗದ ಪರಿಚಯ ಎಲ್ಲರೂ ಮಾಡಬೇಕೆಂದು ಹೇಳುವುದಿಲ್ಲ. ಆದರೆ ನನ್ನ ದೃಷ್ಟಿಯಿಂದ ಯೂರೋಪಿನಲ್ಲಿ ಸಣ್ಣ ಜನಾಂಗಗಳು ತಲೆಯೆತ್ತಿ ನಡೆಯಲಾರವು. ದೊಡ್ಡ ನೆರೆಯವರೊಳಗೆ ಅವು ಲೀನವಾಗಿ ಹೋಗಬೇಕು. ಅವು ದೊಡ್ಡ ಜನಾಂಗಗಳ ಹಿಡುವಳಿದಾರರಾಗಬೇಕು.

ಯೂರೋಪು ತನ್ನ [illegible] ಕ್ರಯಿಸಿಬಿಟ್ಟಿತು. ಮ್ಯೂನಿಚಿನಲ್ಲಾದ ಒಪ್ಪಂದವು ಹಿಂಸೆಯ ಜಯವಲ್ಲದೆ ಅದರ ಅಪಜಯವೂ ಆಗಿದೆ. ಇಂಗ್ಲೆಂಡು ಮತ್ತು ಫ್ರಾನ್ಸು ಜಯಪಡೆಯುವೆವೆಂಬ ಭರವಸೆಯಿಂದ ಇದ್ದಿದ್ದರೆ ಅವು ಝೆಕೊಸ್ಲೊವಾಕಿಯಾವನ್ನು ರಕ್ಷಿಸುವ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದವು. ಇಲ್ಲವೇ, ಅದರೊಂದಿಗೆ ಹತವಾಗುತ್ತಿದ್ದವು. ಆದರೆ ಅವು ಜರ್ಮನಿ ಮತ್ತು ಇಟಲಿಯ ಸಿಕ್ತವಾದ ಹಿಂಸೆಯ ಮುಂದೆ ತಲೆಬಾಗಿಸಿ ಹೋದವು. ಜರ್ಮನಿ ಮತ್ತು ಇಟಲಿ ಇವರಿಂದ ನಡೆದ ಲಾಭವಾದರೂ ಏನು? ಅವು ಮಾನವ ಜನಾಂಗದ ನೈತಿಕ ಸಂಪತ್ತಿಗೆ ಏನನ್ನಾದರೂ ಸೇರಿಸಿರುವವೋ? ಈ ಲೇಖನವನ್ನು ಬರೆಯುವಾಗ ನಾನು ಪ್ರಬಲ ರಾಷ್ಟ್ರಗಳನ್ನು ಕುರಿತು ಬರೆಯುವದಲ್ಲ. ಝೆಕೊಸ್ಲೊವಾಕಿಯಾವು ಭಾರತೀಯರಾದ ನಮಗೆಲ್ಲರಿಗೂ ಒಂದು ಪಾಠದಂತಿದೆ. ಪ್ರಬಲ ಸ್ನೇಹಿತರೆಂದೆಣಿಸಲ್ಪಟ್ಟ ಇಂಗ್ಲೆಂಡ್ ಮತ್ತು ಫ್ರಾನ್ಸು ಝೆಕ್ಕರ ಕೈಬಿಟ್ಟಾಗ ಅವರಿಗೆ ಏನು ಮಾಡಲು ಸಾಧ್ಯವಿರಲಿಲ್ಲ. ಆದರೆ ನಾನು ಈ ಸಂದರ್ಭದಲ್ಲಿ ಅವಿಚಾರಿಕತೆಯನ್ನು ತಾಳಿ, ಅವರು ಅಹಿಂಸಾತತ್ವವನ್ನು ತಿಳಿದು ಅದನ್ನು ತಮ್ಮ ರಾಷ್ಟ್ರದ ಪ್ರತಿಷ್ಠೆಯನ್ನು ಕಾಪಾಡಲು ಯಥಾರ್ಥವನ್ನಾಗಿ ಉಪಯೋಗಿಸಿದ್ದರೆ, ಜರ್ಮನಿ ಇಟಲಿಗಳ ಸಮ್ಮಿಳಿತವಾದ ಬಲವನ್ನು ಎದುರಿಸಬಹುದಿತ್ತೆಂದು ಹೇಳಬಲ್ಲೆನು. ಒಪ್ಪಂದವೆನಿಸಿದ ಈ ಶಾಂತಿಯ ಬಗ್ಗೆ ಸೈನ್ಯ ಭಾವದ ಫ್ರಾನ್ಸು ಮತ್ತು ಇಂಗ್ಲೆಂಡುಗಳ ಔದಾರ್ಯಕ್ಕೆ ಎಡೆಯೇ ಇಲ್ಲದಂತೆ ಮಾಡಿ ಅವರ ಗೌರವವನ್ನು ಈ ಪಾಡಲು ಸುಲಿಗೆಗಾರರ ಮೈಯಲ್ಲಿ ರಕ್ತವನ್ನಿಳಿಸದೆ ಪ್ರಾಣತ್ಯಾಗ ಮಾಡಬಹುದಿತ್ತು. ಈ ಆತ್ಮಸಂಯಮವನ್ನು ಮಾನವ ಪ್ರಕೃತಿಗೆ ಮೀರಿದ್ದಲ್ಲವೆಂದು ಹೇಳಬಲ್ಲೆ. ನಮಗೆ ಮಾನವ ದೇಹವಿದ್ದರೂ ನಾವು ಅಹಿಂಸದ ತತ್ವವನ್ನು ನಾವು ಮನಗಾಣದಿದ್ದರೆ ನಮಗೂ ನರಿತೋಳ, ಚಿರತೆ, ವ್ಯಾಘ್ರಗಳಲ್ಲಿರುವ ಒಂದು ವಿಧದ ಕಾಸಿಗಳಿಗೂ ವ್ಯತ್ಯಾಸವಿಲ್ಲ. ಇದು ಸೋಮಾರಿತನದ, ಅಸಂಬದ್ಧ ಮಾತೆಂದು ತಿಳಿಯಕೂಡದು. ಝೆಕ್ಕರ ಅಂತಿಮವೂ ತೀರ್ಮಾನವಾದ ಸಂದರ್ಭದಲ್ಲಿ ಕಾಂಗ್ರೆಸು ವರ್ಕಿಂಗ್ ಕಮಿಟಿಯು ವ್ಯಸನದಿಂದ ಅಲ್ಲೋಲಕಲ್ಲೋಲವಾಗಿತ್ತೆಂದು ಝೆಕ್ಕರು ತಿಳಿದುಕೊಳ್ಳಲಿ. ಒಂದು ವಿಚಾರದಲ್ಲಿ ಈ ವ್ಯಸನವು ಸ್ವಾರ್ಥಪರವಾದದ್ದೆನ್ನಬಹುದು. ಅಂಕೆಸಂಖ್ಯೆಯ ಲೆಕ್ಕದಲ್ಲಿ ನಾವು ದೊಡ್ಡ ಜನಾಂಗವಾದರೂ ಯೂರೋಪಿಯನರ ಅಂದರೆ ವ್ಯವಸ್ಥಾಪಿತವಾದ ಶಾಸ್ತ್ರೀಯ ಹಿಂಸೆಯ ಪರಿಗಣನೆ ಮೀರಿ ನಾವು ಝೆಕೊಸ್ಲೊವಾಕಿಯಾಕ್ಕಿಂತ ಚಿಕ್ಕವರಿದ್ದೇವೆ. ನಮ್ಮ ಸ್ವಾತಂತ್ರ್ಯವು ಮಾರಿಗೊತ್ತಲ್ಪಟ್ಟಿರುವುದು. ಅದನ್ನು ಸಂಪಾದಿಸಲು ನಾವು ಹೋರಾಡುತ್ತಿರುವೆವು. ಝೆಕ್ಕರು ಆಧುನಿಕ ಯುದ್ಧೋಪಕರಣಗಳಿಂದ ಸುಸಜ್ಜಿತರಾಗಿರುವರು. ನಾವು ನಿರಾಯುಧರು. ಆದ್ದರಿಂದ ಯುದ್ಧವು ಪರಿಣಮಿಸಿದರೆ ಕಾಂಗ್ರೆಸ್ಸು ಎಂಥಾ ವರ್ತನೆಯನ್ನು ಕೈಕೊಳ್ಳಬೇಕೆಂದು ವರ್ಕಿಂಗ್ ಕಮಿಟಿಯು ಆಲೋಚಿಸಿತು. ಇಂಗ್ಲೆಂಡಿನೊಡನೆ ನಮ್ಮ ಸ್ವಾತಂತ್ರ್ಯಕ್ಕಾಗಿ ಕರಾರು ಮಾಡಿಕೊಂಡು ಝೆಕ್ಕರ ಸಹಾಯಕ್ಕೆ ನಿಲ್ಲುವುದೇ ಅಥವಾ ಅಹಿಂಸಾ ಸತ್ಯವನ್ನು ಹಿಡಿದು ಯುದ್ಧದಲ್ಲಿ ಯಾವನ್ನೂ ಸಹಕರಿಸದೆ ಯಾವ ಕಷ್ಟವನ್ನೂ ಮಾಡದ ಎಲ್ಲದೇ ಏಕಾಂಗಿ ನಿಂತಿರುವ ಸ್ವತಂತ್ರ್ಯವೆಂಬ ಆಸ್ತಿಗಾಗಿ ಬಲಿಗೊಳಗಾಗುವ ಝೆಕೊಸ್ಲೊವಾಕಿಯವನ್ನು ನೋಡುತ್ತಿರುವುದೇ? ಆದರೆ ವರ್ಕಿಂಗ್ ಕಮಿಟಿಯು ಬ್ರಿಟನದೊಂದಿಗೆ ಸಂಧಾನ ಮಾಡಿಕೊಳ್ಳಲಾರದೆಂದೂ, ಜಗತ್ತಿನ ಶಾಂತಿಗಾಗಿ ಝೆಕೊಸ್ಲೊವಾಕಿಯಾ ಮತ್ತು ಭಾರತಗಳ ಸ್ವಾತಂತ್ರ್ಯಕ್ಕಾಗಿ ತನ್ನ ವರ್ತನೆಯಿಂದ ಶಾಂತಿ ಸಾಧನೆಯ ನಿರಪರಾಧಿಯರ ಕೊಲೆಯುಲ್ಲದಕವಾಗಿಲ್ಲವೆಂದೂ, ಅದು ವ್ಯವಸ್ಥಿತವಾದ ಅಹಿಂಸಾತತ್ವದಲ್ಲಿ ಅಡಗಿರುವದಲ್ಲದೆ ಮತ್ತೆಲ್ಲಿಯೂ ಇರಲಾರದೆಂದೂ ಜಗತ್ತಿಗೆ ಸ್ಪಷ್ಟಪಡಿಸುವುದರಲ್ಲಿತ್ತು. ಇದು ವರ್ಕಿಂಗ್ ಕಮಿಟಿಯು ವಿಸ್ತಾರವಾಗಿ ಅದರ ಪಕ್ಷವನ್ನು ಗುಣವಾಗಿ ತೆಗೆದುಕೊಳ್ಳಬಹುದಾಗಿದ್ದ ಕ್ರಮ. ಕಾಂಗ್ರೆಸ್ ಧುರೀಣರು ನಂಬುವಂತೆ ಭಾರತವು ತನ್ನ ಸ್ವಾತಂತ್ರ್ಯವನ್ನು ಅಹಿಂಸೆಯ ಮೂಲಕ ಪಡೆಯುವುದಾದರೆ ಅದೇ ಅಹಿಂಸೆಯಿಂದ ಅದು ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುತ್ತದೆ. ಅಂತೆಯೇ ಇದು ಝೆಕೊಸ್ಲೊವಾಕಿಯಾಕ್ಕೂ ಸಾಧ್ಯ.

ಯುದ್ಧ ಪ್ರಾರಂಭವಾಗಿದ್ದ ಪಕ್ಷದ ವರ್ಕಿಂಗ್ ಕಮಿಟಿಯು ಏನು ಮಾಡುತ್ತಿತ್ತೆಂದು ನಾನು ತಿಳಿಯೆ. ಆದರೆ ಯುದ್ಧವು ಬರಿ ಮುಂದೂಡಲ್ಪಟ್ಟಿದೆ. ಈ ಮಧ್ಯೆ ನಾನು ಅಹಿಂಸಾ ಮಾರ್ಗವನ್ನು ಝೆಕ್ಕರ ಸ್ವೀಕಾರ ಬಗ್ಗೆ ಸೂಚಿಸುತ್ತೇನೆ. ಅವರು ಈ ಅಹಿಂಸಾ ತತ್ವದ ಪ್ರಯೋಗ ಮಾಡುವುದರಿಂದ ನಷ್ಟಕ್ಕೆ ಗುರಿಯಾಗಲಾರರು. ಚೈನಾ ಮತ್ತು ಸ್ಪೈನಿನ ಅದೃಷ್ಟವು ತೀರ್ಮಾನವಿಲ್ಲದೆ ನಿಂತಿದೆ. ಇವರ ಅಂತ್ಯದಲ್ಲಿ ಅವು ಸೋಲುವುದಾದರೆ ಅವು ನಾಶಕಾರಕವಾದ ತತ್ವದಲ್ಲಿ ನಂಬಿಕೆಯಿಟ್ಟಿವೆಂಬುದೇ ಕಾರಣ. ಸ್ಪೈನಿನಲ್ಲಿ ಫ್ರಾಂಕೋವಿನನ್ನೇ ಸರಕಾರವೂ, ಜಪಾನಿನವನ್ನು ಚೈನಾವೂ ಮತ್ತು ಹಿಟ್ಲರನನ್ನು ಝೆಕ್ಕರೂ ಬಲಶಾಲಿಗಳಾಗಿದ್ದರೆ, ಸ್ಪೈನ್ ಸರಕಾರವಾಗಲೀ, ಚೈನಾವಾಗಲೀ ಅಥವಾ ಝೆಕ್ಕರಾಗಲೀ ಯಾವ ಲಾಭವನ್ನು ಹೊಂದುತ್ತಿದ್ದರು? ಅವು ಧ್ಯೇಯಯುತವಾಗಿದ್ದರೆ ವಿರೋಧಿಗಳೊಡನೆ ಕಾದಾಡುವುದನ್ನು ಮಾಡುವದು ಲೇಸೆಂದು ನಾನು ಸೂಚಿಸುತ್ತೇನೆ. ಇವರೆ ಯುದ್ಧ ಮಾತ್ರ ಲು ತಿರಸ್ಕರಿಸಿಯೂ, ಆತಿಕ್ರಮಿಸುವವರಿಗೆ ಶರಣು ಹೋಗದೆ ಇರುವದು ಅವಶ್ಯಂತ ಮೇಲ್ಮರಗತಿಯ ಉತ್ತಮ ಮಾರ್ಗವೆಂದು ಹೇಳಬಯಸುತ್ತೇನೆ. ಸಾವು ಎಂಬುದು ಈ ಎರಡು ವಿಧಾನಗಳಿಂದಲೂ ಬಂದಿತೆಂದಿದ್ದ ಪಕ್ಷ ವೈರಿಯ ಬಗ್ಗೆ ದ್ವೇಷವನ್ನು ಮನದಲ್ಲಿ ಹುದುಗಿಟ್ಟುಕೊಂಡು ಸಾಯುವುದಕ್ಕಿಂತ ದಿಗಂಬರ ಎದೆಯನ್ನು ವೈರಿಗೊಡ್ಡಿ ಸಾಯುವುದು ಲೇಸಲ್ಲವೇ?'

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:— ಈ ವರ್ಷದಲ್ಲಿ 52,54,750 ರೂ. ಭರವಸೆಯ 4689 ಪ್ರಪೋಸಲ್‌ಗಳು ಸಿಕ್ಕಿವೆ. ಅದರಲ್ಲಿ ಹಿಂದಿನ ವರ್ಷದ ಪೂರ್ತಿಯಾಗದ 1447 ಪ್ರಪೋಸಲ್‌ಗಳ ಬಾಬ್ತು 40,67,650 ರೂ. ಗಳ ಬಗ್ಗೆ ವರ್ಷಾವಧಿ 2,21,059-6-0 ರೂ. ವಿಮಾ ಕಂತು ಬರುತ್ತಿದೆ. ಕಂಪೆನಿಯಿಂದ ಭರವಸೆ ಪಡೆದಿರುವ ಹಣ ರೂ. 39,38,150. ಬಾಕಿ ರೂ. 1,29,500 ಪುನಹ ಭರವಸೆ ಕೊಟ್ಟದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುವರಿಸಲು ಇಲ್ಲವೇ ಪೂರ್ತಿಗೊಳಲು ಕಾಯುತ್ತಿವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ. 4,13,775 ಹೆಚ್ಚಿದೆ.

ಈ ಕೆಳಗಿನ ಒಳ್ಳೆ ಸಂಗತಿಗಳಿಂದ ಲಭಿಸಿದ ತೃಪ್ತಿಯನ್ನು ಮೆಂಬರುಗಳೊಡನೆ ಅನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯಾ ಸರ್ಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪೆನಿಗಳಿವೆಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಸೂರೆನ್ಸ್ ಇಯರ್ ಬುಕ್' ಎಂಬುವುದರಿಂದ ತಿಳಿದುಬರುತ್ತದೆ. ಈ ಕಂಪೆನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪೆನಿಗಳೊಳಗೆ ಒಂದು ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ಪರಿಗೆ ಕ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೆಯದಾಗಿದೆ. ಒಂದನೆಯದಾದ ಕಂಪೆನಿಯು ಇದಕ್ಕಿಂತ 25 ವರ್ಷಗಳ ಮುಂಚೆ ಸ್ಥಾಪಿಸಲ್ಪಟ್ಟದ್ದಾಗಿದೆ.

ವಿಮಾ ಕಂತುಗಳ ಆದಾಯ:— ಈ ವರ್ಷದ ಎಲ್ಲಾ ವಿಮಾ ಕಂತುಗಳ ಆದಾಯವು (ಪುನಹ ಭರವಸೆ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮಾ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ವರದಿ ವರ್ಷದ ವಿಮಾ ಕಂತಿನ ಆದಾಯವು ರೂ. 3,66,198-13-0, ಗತ ವರ್ಷದ್ದು 2,36,767-6-6 ಆಗಿದೆ.

ಜೀವವಿಮಾ ಫಂಡು:— ಈ ಕಂಪೆನಿಯ ಜೀವ ವಿಮಾ ಫಂಡು ರೂ. 75,258-14-9ರಿಂದ, ವ್ಯವಸ್ಥಾ ಕ್ರಮಕ್ಕೆ ಮತ್ತು ಇತರ ಖರ್ಚಿಗಾಗಿ ರೂ. 45,037-8-4 ಹಣ ಕಳೆದು ರೂ. 21,00,421-1-3ಕ್ಕೆ ಏರಿದೆ. ಈ ಕೆಳಗೆ ಅದರ ತಖತೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿಮಾ ಕಂತು	ಜೀವ ವಿಮಾ ಫಂಡು.
1ನೇ ವರ್ಷದ	ರೂ. 1,46,949	ರೂ. 15,619
2ನೇ ವರ್ಷದ	,, 2,36,767	,, 75,259
3ನೇ ವರ್ಷದ	,, 3,66,199	,, 2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪೆನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತ ವಿಮಾ ಕಂಪೆನಿಗಳ ವಾರ್ಷಿಕ ವೃತ್ತಾಂತದಲ್ಲಿ ದೊರಕಲು ಹರ್ಷದಾಯಕವೇ ಆಗಿದೆ.

ಭಾರತ ಜೀವವಿಮಾ ಕಂಪೆನಿಗಳ ಆಕ್ಟಿನ ಪ್ರಕಾರ ಠೇವಣಾತಿ:— ಈ ಸರಕಾರದ ಮುಂದಿನ ಠೇವಣಾತಿ ಮೊತ್ತಕ್ಕೆ ಬದ್ದ ರೂ. 2 ಲಕ್ಷವನ್ನು ಪೂರ್ತಿಯಾಗಿ ಠೇವಣಿ ಇಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷಪಡುತ್ತಿರುವರು.

ಸಿ. ಟಿ. ತಿಮ್ಮಯ್ಯ,

(52-18) ಏಜೆಂಟರುಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

ಶ್ರೀ ರಾಮಕೃಷ್ಣ ಪರಮಹಂಸರು.

ಲೇಖಕ:–ಎಂ. ಎಸ್. ಅನಂತಪದ್ಮನಾಭರಾವ್.

ಗತಿ ೬.

(ಕಳೆದ ವಾರದಿಂದ ಮುಂದುವರಿದದ್ದು)

ಶಾರದಾಮಣಿ ದೇವಿ

ವರುಮನೆಯಂ ತೊರೆದು ಸಾಧನೆಡೆಯಲಿ ನಿಲಲು
ಮನಮಾಡಿ, ಪತಿ ಚಿಂತನೆಯು ಬಂದಿ ಮಾಡುತಲಿ,
ಯೋಗಿ ಬೋಧಿಸಿದ ಮಾರ್ಗವಂ ಕಡೆಹಾಯ್ದು
ಹೃದಯ ವಿಕಸಿತವಾಗೆ, ಹಾತೊರೆದು ಸೇರಲ್ಕೆ;
ಜಾಹ್ನವಿಯ ಯಾತ್ರೆಯಂ ಮಾಡುವಾ ಯಾತ್ರಿಕರ
ಸಂಗದಲಿ ಪೊರಮಡಲು, ಮಗಳಿಂಗಿತವನರಿತು,
ತನಳ ಪಿತ ಕಾಲ್ನಡಿಗೆಯಿಂ ತಾನೆ ಪಯಣದಲಿ
ದಕ್ಷಿಣೇಶ್ವರವನ್ನು ಸೇರಿದನು–ಮಾರ್ಗದಲಿ
ಕಾಳಿಕಾಂಬೆಯು ಬಂದು, ರಾಮಕೃಷ್ಣರ ಕ್ಷೇಮ
ವಾರ್ತೆಯನ್ನರುಹುತ್ತ–ಅಭಯವನ್ನೀಯುತ್ತ
ಶುಭಪಥದಲಿ ಸಾಗಿಸಿದಳವರಿರ್ವರಂ ನಡೆಸಿ
ಬಂದ ಸತಿಯಂ ಕಂಡು ಮನ್ನಿಸಿದರಾದರದಿ
ಉಪಚರಿಸುತಾಯಾಸಗಳ ಕಳೆದು ಕುಳ್ಳಿರಿಸಿ
ತನ್ನಿರವ ತೋರಿದರು;

ಶಾರದಾಮಣಿ ದೇವಿ

ಪತಿಯ ದರ್ಶನದಿಂದ ಪರಮ ಸಂತೋಷವನು
ತಾಳುತಲಿ, ಮನದೊಳಗೆ ಮೊದಲು ಮನೆ ಮಾಡಿದ್ದ
ಸಂಶಯ ಪಿಶಾಚಿಗಳು ದೂರ ತೊಲಗಿದುವಂದು:
ಆ ಭಕ್ತಿಮಯ ಮನವು, ಆ ಶಕ್ತಿಮಯ ದೇಹ.
ದೇವಮಯ ವಾಣಿಗಳು, ಕಾವ್ಯಮಯ ಮಾತುಗಳು
ಲೋಕವನೆ ಕಟ್ಟಿರುವ ಪರಿಶುದ್ಧ ಸತ್ಯಮಯ
ಪರಮಾತ್ಮ ...[illegible]... ಭವನದಲಿ

ಪತ್ನಿಗುಪದೇಶಿಸುವ ಕಾರ್ಯದಲಿ ತೊಡಗಿದರು
ರಾಮಕೃಷ್ಣರು ಭಂಟ ತಾಂ ...ಂಡ ವ್ಯರ್ಥಗಳ
ನೊಂದೊಂದು ಕೃತಿಯಿಂದ ಸುಲಭದಲಿ ಹೇಳಿದರು.
ಪರಮಾತ್ಮನೆಲ್ಲರಿಗೆ ಬೇಕಾದ ವಸ್ತುವೆಂ
ದಾ ಸಾಧು ...[illegible]... ಅವನೊಂದು ತೋರಿದರು;
ಪ್ರತಿಯೊಂದು ಕೃತಿಯವನ ದರ್ಶನದ ಹಾದಿಯೆಂ
ದಾ ಸತಿಗೆ ಹೇಳಿದರು, ತೋರಿದರು ಕೃತಿಯಿಂದ:

ತಾಯಿಗೋಸುಗವಿಟ್ಟ ಪೀಠದಲಿ ಶಾರದೆಯ
ನಿಲಿಸುತ್ತ ಗೌತೆಯಾ ಮೂರ್ತಿಯಂ ಕಾಣುತಲಿ,
ಆ ದೇವಿ ಪಡೆಯುತ ಸಮಾಧಿಯಂ ತೋರಿದಳು
ನಿಜರೂಪ, ಆಗಲಾ ಪರಮಹಂಸರು ಭಕ್ತಿ
ಯಿಂದವಳ ಜಗದಂಬೆಯೆನ್ನುತಲಿ ನಿಜಹಸ್ತ
ದಿಂ ಭರದಿ ಪೂಜಿಸಿದರಾ ಸತಿಯನಿಂತವರು
ಸತಿಯೊಡನ ಲೋಕದಲಿ ದೈವಸ್ವರೂಪವಂ
ನೋಡುತಲಿ ಜಗದ ಜಡ ಜೀವರಂ ಮೇಲಿಳಿಯೆ
ಸಿದ್ಧರಾದರು ಬೇಗ

ಇಂತಿವುತ್ತಿರಲತ್ತ

ಶಂಭುಚರಣನು ಭಕ್ತಿಯಲಿ ಗುರುವ ಸೇವಿಸಲು
ಕಂಕಣವ ಕಟ್ಟಿದನು ಸತಿಸಹಿತ ...[illegible]...

ಸಾಧನೆಯ ಸಾಗಿಸುತ ...[illegible]...
ಋಷಿವರರು, ಭಕ್ತಿಯಾರಾಧನೆಯ ಮಾಡಿದರು,
ಸಿಖ್ಖಗುರುಗಳ ಮತ್ತೆ ತೀರ್ಥಂಕರರನ್ನೊಪ್ಪಿ,
ಸಿಖ್ಖಗುರುಗಳು ಜನಕರಾಯನವತಾರವಂ
ದೇಶ ಕಂರದಿ ಪೇಳೆ ತಲೆ ಬಾಗಿದರು ಮುದದಿ.

ಈ ತೆರದಿ ಪರಮಾತ್ಮನವತಾರವೆತ್ತಿಹನು
ಆತನಾ ಸಂದೇಶವನು ಜಗಕೆ ತಿಳುಹುತ್ತ
ಕಾರ್ಯ ಸಾಧನೆಗಳಲಿ ಮಾದರಿಯ ತೋರುತ್ತ,
ಭಕ್ತಿ ಸುಜ್ಞಾನಗಳ ಪರರ ಹಿತ ಸಾಧನೆಗೆ
ಸಂಪಾದನೆಯ ಮಾಳ್ಪುದೆಂದರಿದು ನಿತ್ಯದಲಿ
ಪರನೊಬ್ಬ ದೇವನಂ ತಿಳಿದಿರಲು–ಜಗದೊಳಿಹ
ಹಲವು ದೇವರ ಕಂಡು–ಒಬ್ಬೊಬ್ಬನೊಂದೊಂದು
ರೂಪದಿಂದಿರುತಿರಲು ನಿಜವರಿತು ಸಾಧಿಸುತ
ಅವರೆಲ್ಲ ದೈವಿಕದ ವಿವಿಧ ವೇಷಗಳೆಂದು
ನಿವಿಷ ಮಾತ್ರದಿ ತಿಳಿದು, ಕೊನೆಯ ಮೆಟ್ಟಿಲ ಹತ್ತಿ
ಸಾಮಾನ್ಯ ಮನುಜರೊಲು ಸ್ವಾತಂತ್ರ್ಯವಿಲ್ಲವಗೆ,
ಪರಮಾತ್ಮ ಸನ್ನಿಧಿಯನರಿತವನೆ ಪಾವನನು,
ಅವಗಿಂತ ಪರಿಶುದ್ಧರಾದವರು ಮತ್ತೊಬ್ಬ
ರಾರಿಹರು! ಅವಗೇನು ಬೇಕುದಿದೆ! ಮುಕ್ತಿ ಮಾ
ರ್ಗಕ್ಕಿಮವೆ ಸೋಪಾನ!! ಇವಗಿಂತ ಸ್ವಾತಂತ್ರ್ಯ
ಮನುಜನಾವನು ಜಗದಿ! ಪರಮ ಪಾವನಿವನು.

ತಾನಿನ್ನು ಇನ್ನೂರು ವರ್ಷಗಳು ಕಳೆಯಲ್ಕೆ
ಈಶಾನ್ಯ ಮೂಲೆಯಲ್ಲವತಾರವೆತ್ತುವೆನು
ಸತ್ಯವನು ಕಾಪಾಡ ಬರುವೆನೆಂದೊರೆದಿಹರು.
ತ್ರಿಮತಗಳು ಒಂದೊಂದು ಸೋಪಾನ ಸಗ್ಗಕ್ಕೆ
ಅವುಗಳಲಿ ವೈಷಮ್ಯವಿಲ್ಲೆಂದು, ಜೀವನದ
ಮಾರ್ಗದೊಳಗೊಂದೊಂದು ಸುಕ್ಷೇತ್ರವೀ ಮೂರು,

ಇಂತಿರಲು ರಾಮೇಶ್ವರನು ದೇಹದೊರೆಯುತ್ತ
ಹರಿಪಾದ ಮೂಲದಲಿ ಲೀನನಾದನು ನಡೆದು
ಅಣ್ಣನೀ ಮೃತಿಯನ್ನು ಮೊದಲೆ ತಿಳಿದಿಹ ಗುರುವು.
ತಾಯಿಯನು ಸಂತವಿಸಿ ದಕ್ಷಿಣೇಶ್ವರದಲ್ಲಿ
ಮನೆ ಮಾಡಿ ನಿಲಿಸಿದರು, ಮಾತೃಸೇವೆಗೆ ತಾವೆ
ಕಂಕಣವ ಕಟ್ಟಿದರು.

ಶಾರದಾಮಣಿದೇವಿ

ಮತ್ತೊಮ್ಮೆ ದಕ್ಷಿಣೇಶ್ವರವನ್ನು ಸೇರಿದರು
ಮಾರ್ಗದಲಿ ತಂದೆ ಮಗಳಿರ್ವರಂ ದೇವಿಯು
ನ್ನುಪಚರಿಸಿ ಕಳುಹಿದಳು–ಅತ್ತೆಯೆಸೆಯಲ್ಲರುತ
ವಯವು ಮೀರುತ್ತಿರಲು ಚಂದ್ರದೇವಿಯು ನವೆದು
ಮಾತೃಪಾದದ ನೆನೆಯುತವಧಿಯನು ಕಳೆಯುತ್ತ
ಲೋಕವಂ ತ್ಯಜಿಸಿ ಪರಲೋಕವಂ ಸಾರಿದಳು.
ರಾಮಲಾಲನು ಕಡೆಯ ಕರ್ಮಗಳ ಮಾಡಿದನು.

ಅಲ್ಲಲ್ಲಿ ಅವರಿವರ ದೇವನಿಹನೋ ವೇಣು
ದೇವನಿಲ್ಲವೊ ಎಂಬ ಸಂಶಯ ಸಮಾಜಗಳು
ತಲೆದೋರಿ ಕಳವಳದ ತಂದೊಡ್ಡಿ ಕಾಡುತಿರೆ
ಜ್ಞಾನಿ ಕೇಶವಚಂದ್ರ ದೈವ ವಿಜ್ಞಾನವನು
ಋಷಿವರ್ಯರಿಂದರಿತು ಸಾರಿದನು ಲೋಕದಲಿ.
ದೇವರಿಹನೆಂದಿಹ ಮಾನವರು ಮರಳಿಕೆ
ಅವನ ಮಾತೆಯ ತೆರದ ಕತೆಯಲ್ಕೆ ಕಾಣುವನು;
ಎಂದವರು ಬೋಧಿಸಲು ನಂಬಿದರು ಬಹು ಮಂದಿ
ವಿಜಯ ಕೃಷ್ಣನು ಮತ್ತೆ ಶಿವನಾಥಶಾಸ್ತ್ರಿ ಮೇಣ್
ತ್ರೈಲೋಕ್ಯನಾಥ ಮೊದಲಾದವರು ಗುರುವರರ
ಪರಿಚಯದ ತಿಳಿಯುತ್ತ ಅವರಿವರ ಸಾರಿದರು.

ಚೈತನ್ಯ ಸಂಕೀರ್ತನೆಯ ಕೇಳಿ ನರ್ತಿಸುತ
ಹರ್ಷವಂ ಪಡೆಯುತ್ತ ಸಂತಸದಿ ಮುಳುಗಿದರು;
ತನ್ನಿರವನರಿಯುತ್ತ ಬರುತಿರುವ ಯುವಕರಂ
ಸನ್ಮಾನಿಸುತ ಕರೆದು ಪರಿಕಿಸುತ ಬೋಧಿಸುತ,
ಅವರ ಗುಂಪಿನೊಳಿರುತ, ಸಂಕೀರ್ತನೆಯ ಮಾಡಿ
ಪರಮಾತ್ಮನಂ ಸಾರುತಿಹರು ಗುರು ರೂಪದಿ:
ಮನಮೋಹನೆಂಬವನ ಗುರುಭಕ್ತಿಗೊಲಿಯುತ್ತ
ಮನದಹಂಕೃತಿಯನ್ನು ಮುರಿಯುತ್ತಲೊಲಿಸಿದರು;
ರಾಮಚಂದ್ರನ ಗುಣಕೆ ಮನಮೆಚ್ಚುತಪ್ಪಿದರು;
ಸನಿಯದ ಸುರೇಶನಂ ಕುಳ್ಳಿರಿಸಿ ಭಕ್ತಿಯಂ
ಸ್ವೀಕರಿಸಿ, ಸುಗುಣಗಳ ನೋಡಿದರು ಮೆಚ್ಚಿದರು;
ದೇಶಬಾಂಧವನಾದ ಕೇದಾರನಾಥನಂ
ತಿದ್ದಿದರು–ಸಾಧುವಿನ ವೇಷದಿಂ ಮೋಸವಂ
ಮಾಡುತಲಿ ಬೇಕಾದ ಸುಖಗಳನು ಪಡೆಯುವುದು
ಪಾಪವೆಂದಾ ರಿಸಿಯು ಕೂಗಿದರು ಜನಕಾಗಿ:

ಬಡತನದ ಬಯಲಲ್ಲಿ ಬೆಳೆದಿದ್ದ ಲಾಟುವಂ
ವಾತ್ಸಲ್ಯದಿಂ ಕಂಡು ಹರಿಸಿದರು ಪದುಳದಲಿ
ಮಾತೆಯಿತ್ತಾ ಮಗುವು ರಾಖಾಲಚಂದ್ರನಂ
ಮಗನಂತೆ ಸಾಕಿದರು, ಪರಮಾರ್ಥ ವಿಜ್ಞಾನ
ರಸವೂಡಿ ಪೋಷಿಸುತ ಬೆಳೆಸಿದರು ಲೋಕದಲಿ;
ಗೋಪಾಲನಂ ಮೆಚ್ಚಿ ಶಿಷ್ಯ ವರ್ಗದಿ ಬೆರೆಸಿ
ಈ ಲೋಕ ಸೇವೆಯಲಿ ದೇವರನು ಕಾಣುವುದು;
ಎನ್ನಿಂದ ಲೋಕವೀ ನಡೆವುದೆಂಬೀ ಬೆಮೆಯು,
ಮುಳುಗುತಿಹ ಲೋಕವನ್ನೆತ್ತುವೆನು ನಾನೆಂಬ,
ಪರದಾಸ್ಯದಿಂ ದೇಶ ಬಂದನವ ನಾ ಕಡಿವೆ
ನೆಂದೆಂಬ ಮಂಕುತನವಂ ತೊರೆದು, ಮೊದಲಾಗಿ
ದೇಹ ಬಂಧನದಿಂದ ಮುಕ್ತನಾಗೈ ಕಂದ,
ನಿರ್ಮಾಪಕನು ತಾನೆ ನೋಡಿಕೊಳ್ಳುವನೆಲ್ಲ
ಕಾರ್ಯವನು -ನಿನಗೇಕೆ ಲೋಕದೀ ತೊಡಕುಗಳು
ಎಂದವರು ಮುಕ್ತ ಕಂರದಿ ನುಡಿದು ತಿದ್ದಿದರು.

* * *

ತನ್ನ ಸಂದೇಶವನು ಲೋಕದೊಳಗೆಲ್ಲೆಲ್ಲು
ಸಾರುತಲಿ, ಮನುಜ ಬಾಂಧವರನ್ನು ಮೇಲೆತ್ತಿ,
ಪಾಪ ಜಲವನ್ನುರಿಸುತ ಮುಕ್ತಿ ಸುಧೆಯುಣಿಸಿ,
ಭಕ್ತಿ ಸಾಮ್ರಾಜ್ಯದಲಿ ಸತ್ಯ ಚೇತನವೆತ್ತಿ,
ವಿಜಯಿಯಾಗುವ ಪರಮ ಪರಿಶುದ್ಧ ಶಿಷ್ಯನಂ
ಕಾಯುತಿರೆ,– ಪರಮಹಂಸರು ದಿವ್ಯ ದರ್ಶನದಿ
ಬೆಳಕೊಂದ ಕಾಣುತಲಿ–ಕಂಡರಾ ಬೆಳಕಿನಲಿ
ಸಪ್ತ ಋಷಿವರ್ಯರು ಸಮಾಧಿಯೊಳಿ ಕುಳಿತಿರಲು
ದೇವ ಶಿಶುವೊಂದುದಿಸಿ, ಅವರೊಳೊಬ್ಬನ ಕಂಡು
'ನಾನಿಳಿವೆ ಭೂಮಿಯಲಿ ನೀನು ಬರಬೇಕೆಂದೆನೆ
ಆ ಋಷಿಯು ಮೌನದಿಂದೊಪ್ಪಿದನು

ಆರವನು?

ಆ ಋಷಿಯೆ ವಿಶ್ವನಾಥನ ಪುತ್ರ, ಭುವನೇಶ್ವ
ರಿಯ ಮಗ ನರೇಂದ್ರನಾಥನು ಸಕಲ ಶಾಸ್ತ್ರಜ್ಞ:
ಈ ಲೋಕದ ಜ್ಞಾನದಿಂ ತೃಪ್ತನಾಗದೆಯೆ
ದೇವನೆಂಬುವನಾರು! ಎಲ್ಲಿಹನು! ಕಾಣನೇಂ!
ದೇವನಂ ನೋಡಿದವರಾರುಂಟು! ದೊರಕುವನೆ
ದೇವರಂ ತೋರಿಸುವ ಸದ್ಗುರುವು!! ಎಂದೆಂಬ
ಬಹು ಬಯಕೆ ಪೆರ್ಚುತಿರೆ, ಅವರಿವರ ಕೇಳುತಲಿ
ಮನಕೆ ಸರಿಯಾಗದಿರಲರಸುತಲಿ ಸದ್ಗುರುವ,
ದಿವ್ಯ ದರ್ಶನಗಳಿಂದದಿರು ನೋಡುತ್ತಿರಲು,
ರಾಮಕೃಷ್ಣರು ಸುರೇಂದ್ರನ ಮನೆಗೆ ಬಂದಿಹುದ
ನರಿಯುತ್ತಲವರ ದರ್ಶನ ಮಾಡಿ, ಮುಖವಿರದ
ಪರಿಕಿಸುತಲಿವರು ಪರಮಾತ್ಮನಂ ಕೆಣಕಿಹರು,
ಲೋಕದೀ ಕಟ್ಟುಗಳ ಸಡಲಿಸುತ ಮುಕ್ತಿಯಂ
ಕಟ್ಟಿಹಾಕಿಹರೆಂದು, ಭಕ್ತಿಪದಗಳ ಹಾಡಿ,
ಮೆಚ್ಚಿಸುತ ಯೋಗಿಯಂ, ಮತ್ತೊಮ್ಮೆ ದಕ್ಷಿಣೇ
ಶ್ವರದಲ್ಲಿ ದರ್ಶನವ ಮಾಡಿದರು.

ಆ ಋಷಿಯು,

ದೇಹ ವಸನಗಳಲ್ಲಿ ಪರವೆಯಿರದಿಹುದನ್ನು,
ಬಾಹ್ಯ ಪ್ರಪಂಚದಲಿ ಮನವಿಲ್ಲದಿಹುದನ್ನು,
ಕಣ್ಣುಗಳೆ ಅವರಿರವ ಪೇಳುತಿರೆ ಒಳಗೊಳಗೆ
ಆವುದನೊ ಚಿಂತಿಸುತಲಿಹುದನ್ನು ನೋಡಿದರು:

ಬಾಲಕ ನರೇಂದ್ರನಂ ಕಾಣುತಲಿ ಮುಂಬರಿದು
ಅಪ್ಪುತಲಿ ತಡವೇಕೆ? ಬರಲಿಲ್ಲ, ನಿನ್ನನೇ
ಬಹು ಕಾಲದಿಂದಿರು ನೋಡುತಿರೆ ಬರಲಿಲ್ಲ;
ಬಂದೆಯೊ, ಬಾರಯ್ಯ, ಲೋಕಗುರು ನೀನಹುದು,
ಹಿಂದಿನಾ ನರಋಷಿಯು ನೀನಲ್ತೆ;

ಇವಗೇನು

ಪುರ್ಚಹುದೆ–ನೋಡಿದೊಡೆ ಸರಿಯಾಗಿ ನುಡಿಯುವನು;
ಇರಲಿರಲಿ ಪರಿಕಿಸುತ ನಿಜವರಿವೆ–ಪರಿಶುದ್ಧ
ಜನರೊಳಗೆ ಪರಿಶುದ್ಧನಿವನೆಂದು ಮನಗಂಡು
ವರಿಸಿದರು ಗುರುವಾಗಿ ಋಷಿವರರ ಮುದದಿಂದ:
ವಾಮ ಪಾದವನೆತ್ತಿ ಎದೆಯ ಮೇಲಿರಿಸಲ್ಕೆ,
ಅಪರೂಪ ದರ್ಶನವ ಮಾಡಿದ ನರೇಂದ್ರನುಂ.

[ಸಶೇಷ]

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತವೆ. ಲಂಕ್ಷಾಂತರ ಜನರಿವನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52-17 ಬೆಂಗಳೂರು ಸಿಟಿ.

೪೨ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೇ ಕಂಪನಿ

ಸುಪ್ರಸಿದ್ಧ ಜ್ವರದ ಗುಳಿಗೆ

ಇದು ಛಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ದಿನ ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ನಾನಾತರದ ಜ್ವರಗಳ ಮೇಲೆ ತಕ್ಷಣವೇ ಗುಣ ಸಂಜೀವಿನಿಯಂತಿದೆ! ಬಾಟ್ಲಿಗೆ 1 ರೂ. 4 ಬಾಟ್ಲಿಗೆ 3 ರೂ. 12 ಬಾಟ್ಲಿಗೆ 8 ರೂ. ವಿ. ಪಿ. ಖರ್ಚು ಬೇರೆ.

ಗಣೇಶ ರಾಮಚಂದ್ರ ಕರ್ಕೆ.

ಮತ್ತು ಕಂಪೆನಿ,

(52-45) ಗಿರಗಾಂವ್, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮ ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮುಂಡೇಪಂಡ ಸೋಮಯ್ಯನವರು,
ಮ. ಕೆ ಯಂ ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ— ಮ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮ ಪಿ. ಜಿ. ಮುದ್ದಮ್ಮಯ್ಯನವರು.

ಹುದಿಕೇರಿ—ಮ. ಅಜ್ಜಮಾಡ ಮಾದಪ್ಪನವರು ಮತ್ತು ಮ.
ಜಿ ಮಾದಮ್ಮಯ್ಯನವರು.

ಕುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮ ಕೆ ಮೊಗಪ್ಪನವರು.

ನಾಪೋಕ್ಲು—ಮ. ಚೆಪ್ಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಕೂಡದಾಗಿ ಈ ಮೂಲಕ ತಿಳಿಸಲಾಗಿದೆ

ಮ್ಯಾನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೂ ಕೈಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ ರೂ. 2,53,15,500.

1937ರಲ್ಲಿ ಪೂರ್ತಿಯಾದ ಉದ್ಯೋಗ ರೂ. 2,02,02,000.

ಎಂಡೋಮೆಂಟ್ ವಿಮಾ ಪತ್ರದ ಮೇರೆ 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಕರಾರುಗಳಿಗೆ 26ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪರೇಡ್, ಬೆಂಗಳೂರು.

52-32

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನ್ನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಹಿಂದಿನಿಂದ ಈ ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವ ಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಶೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆಗೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

14 **ಸಿ. ಹೆಚ್. ರಾಮುಣ್ಣಿ ವೈದ್ಯರ್.**

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ** ಮೂಲದ ರಿಜಿಸ್ಟರು. **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ವೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮುಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಕರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮ್ಯಾನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ನಕ್ಕೆಶೂಲೆಗಳಿಗೂ ಅಮೃತ ಬೆಲೆ 0-4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ ಬೆಲೆ 0-4-0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ ಬೆಲೆ 0-8-0, 0-4-0

ಸುಕುಮಾರತೈಲ

28

ಬಿಸಿಲು ಹೆಚ್ಚಿದ ಕಾಗಲ್ಲು ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ಇಂತ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ ಬೆಲೆ 1-0-0

ಪ್ರೊಪ್ರೈಟರ್-ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತ್.

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು

ಕಾಲ	1 ಪುಟಕ್ಕೆ	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ 180	ರೂ 55	ರೂ 35	ರೂ 22
6 ತಿಂಗಳಿಗೆ—	„ 100	„ 35	„ 22	„ 13
3 ತಿಂಗಳಿಗೆ—	„ 60	„ 20	„ 13	„ 8
1 ತಿಂಗಳಿಗೆ—	„ 25	„ 10	„ 6	„ 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. **ಆತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವುದು ಇವನ ಆದ್ಯ ಕರ್ತವ್ಯ.**

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.

(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಬಡತನದ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವವು

ಮಿ. ಎಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು)

ಮಿ. ಎಲ್. ಎಫ್. ಸಿ. ವಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ)

62-41 **ಮಿ. ಬಿ. ಶೇಷಾದ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗಾ**

Printed & Published by P. I. Bellhappa, at 'Kodagu' Press Mercara for 'Kodagu' Ltd.

Reg No. M. 1530

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:— ಡಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೨೧—೧೦—೧೯೩೮.

ಸಂಪುಟ ೧೮] [ಸಂಚಿಕೆ ೧೮

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

The Bombay Life Assurance Company Ltd.

(Estd. 1908.)
43-47, Churchgate Street, Fort-Bombay.

Progress Proves Its Popularity.

Year.	Business in force.	Claims Paid.	Life Assurance Fund
1931	2,26,[illegible]2,430	2,91,880	33,24,809
1933	3,07,[illegible],435	3,54,003	50,04,871
1935	4,42,[illegible],214	5,75,198	68,01,501
1937	6,04,70,594	6,00,918	98,68,232

Total Claims Paid Between 1909 and 1937—Rs. 50,22,576

BOMBAY LIFE is a purely India Concern Offering all that is best in Life Assurance.

To Insure or to Represent it pays you to consult us or our Branches—

KOCHIKAR & BROTHERS Ltd.,
Madras Branch Secretaries,
Post Box No. 337, Mount Road, MADRAS. [Phone No. 8248.]

11

Bombay Life Building Udipi	Gautam [illegible] Charni Road Girgaum Bombay 4	Visvesvarapuram Circle Bangalore City	[illegible]uthivara Calicut	Car Street [illegible]angalore	Ottapalam S. Malabar	Central Station Road Trivandrum

THE CANARA BANKING CORPORATION, UDIPI, Ltd.

(Incorporated in British India.)
Estd 1906.

MEMBER: { RESERVE BANK OF INDIA, & BANKERS CLEARING HOUSE, MADRAS.

Head Office: UDIPI, S. K.

Paid up Capital	Rs.	3,03,205/-
Reserves	,,	3,88,842/-

Our Deposit Rates.

3 months	2½% p. a.
6 or 9 months	3 % p. a.
12 months	3½% p. a.
SHORT TERM	2 % p. a.

Branches.

1. Udipi, 2. Coondapoor, 3. Car Street, Mangalore, 4. Madras, 5 Shimoga, 6. Bunder, Mangalore, 7. Mercara, 8 Virarajendrapet, 8. Saklaspur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

BANKING BUSINESS OF EVERY DESCRIPTION TRANSACTED.

Udipi,
8th July 1938.

52-46

V. R. Kamath, B. A., LL. B.,
Manager.

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ
ಪ್ರಸಿದ್ಧ ಆಯುರ್ವೇದೀಯೌಷಧಗಳ ಸವಾಖಾನೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆ ಶೂಲೆಗಳಿಗೂ ಅಮೃತ ಬೆಲೆ 0-4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ 0-4-0

ಸನ್ನು ರಿಜಿಸ್ಟರ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ. ಬೆಲೆ 0-8-0, 0-4-0.

ಸುಕುಮಾರತೈಲ

28

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಪಿತ್ತಲೆ ನೋವು, ತಲೆ ಇರಿತ ಮೊದಲಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ. ಬೆಲೆ 1-0-0

ಪ್ರೊಪ್ರೈಟರ್–ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತ್.

ಉತ್ತಮ ಪ್ರಚಾರ! ಜ್ಞಾನಭಂಡಾರ!!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ. 180	ರೂ 55.	ರೂ. 35.	ರೂ 22
6 ತಿಂಗಳಿಗೆ—	„ 100.	„ 35	„ 22	„ 13
3 ತಿಂಗಳಿಗೆ—	„ 60	„ 20	„ 13.	„ 8
1 ತಿಂಗಳಿಗೆ—	„ 25.	„ 10	„ 6.	„ 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ. ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವವು.

ಮಿ. ಎಂ. ಹೆಚ್. ಕೃಷ್ಣಮೂರ್ತಿ, (ಇನ್ಸ್‌ಪೆಕ್ಟರ್, ಮೈಸೂರು.)

ಮಿ. ಎಲ್. ಎಫ್. ಸಿ. ದಾಸ್, (ಇನ್ಸ್‌ಪೆಕ್ಟರ್, ಮಡಿಕೇರಿ.)

ಮಿ. ಡಿ. ಶೇಷಾದ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗಾ.

62-41

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ ಮುದ್ರಣ ಕೆಲಸಗಳನ್ನು “ ಕೊಡಗು ” ಪ್ರೆಸ್ಸಿನಲ್ಲೇ ಮುದ್ರಿಸಿರಿ.

Reg No. M. 1980

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:— ಪಿ. ಐ. ಬೆಳ್ಯಪ್ಪ. | ವಾರ್ಷಿಕ ಚಂದಾ ರೂ. ೩-೮-೦

ತಾ. ೨೧—೧೦—೧೯೩೮. | ಸಂಪುಟ ೧೮] [ಸಂಚಿಕೆ ೧೮

The Bombay Life Assurance Company Ltd.

(Estd 1908.)

45-47, Churchgate Street, Fort-Bombay.

Progress Proves Its Popularity.

Year	Business in force	Claims Paid	Life Assurance Fund
1931	2.26 ~2,430	2.91,880	33,24,809
1933	3,07 ,435	3,54,003	50.04,871
1935	4,42 , ,214	5,75,198	68.01,501
1937	6,04,70.594	6,00,918	98,68,232

Total Claims Paid Between 1909 and 1937—Rs. 50,22,576.

BOMBAY LIFE is a purely India Concern Offering all that is best in Life Assurance.

To Insure or to Represent it pays you to consult us or our Branches—

KOCHIKAR & BROTHERS Ltd.,
Madras Branch Secretaries,
Post Box No. 337, Mount Road, MADRAS. [Phone No. 8248.]

11

Bombay Life Building Udipi	Gautam Niwas Charni Road Girgaum, Bombay 4	Visweswarapuram Circle Bangalore City	...uthbivara Calicut	Car Street Mangalore	Ottapalam S. Malabar-	Central Station Road Trivandrum

THE CANARA BANKING CORPORATION, UDIPI, Ltd.

(Incorporated in British India.)
Estd. 1906.

MEMBER: { RESERVE BANK OF INDIA, & BANKERS' CLEARING HOUSE, MADRAS.

Head Office: UDIPI, S. K.

Paid up Capital	.... Rs.	3,03,205/-
Reserves	.... ,,	3,88,842/-

Our Deposit Rates.

3 months	2½% p. a.
6 or 9 months	3 % p. a.
12 months	3½% p. a.
SHORT TERM	2 % p. a.

Branches.

1. Udipi, 2. Coondapoor, 3. Car Street, Mangalore, 4. Madras, 5. Shimoga, 6. Bunder, Mangalore, 7. Mercara, 8. Virarajendrapet, 8. Saklaspur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

BANKING BUSINESS OF EVERY DESCRIPTION TRANSACTED.

Udipi,
8th July 1938.

52-46

V. R. Kamath, B. A., LL. B.,
Manager.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,770	0	0
ಜಮೂಬಂದ ಠೇವಣಾತಿ	–	2,45,260	2	4
ವಸೂಲಾದ ಕ್ಷೇಮನಿಧಿ	–	1,36,696	8	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	19,598	4	11
ತ್ರಿಫ್ಟ್ ಡಿಪಾಜಿಟ್ಟು	–	31,131	6	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4½ ದರದಲ್ಲಿಯೂ ತಾ 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇವರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಚೌರೀರ ಎ. ಮಂದಣ್ಣನವರು ಬಿ ಎ, ಬಿ. ಎಲ್.
ಸೆಕ್ರೆಟರಿ:—ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ, ಬಿ. ಎಲ್.

ತಾ. 1-10-1938

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—"ಲಕ್ಷ್ಮೀನಿವಾಸ್" ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಲಾಭಕರವಾಗಿ ಇಡ್ಡು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! ಇಟ್ಟ ಸಿವಾಗ ಹಣ ಹಿಂದಕ್ಕೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ಪ್ರತ್ಯುಕ್ತಿತವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು

52-21

The Agricultural & Industrial Bank Ltd

"ZANDU"

ಝಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಅಯೋಡೈಸ್ಡ್

ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಧ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ಸಂಜುಂಡೇಶ್ವರ, ಎಲ್. ಎ. ಎಂ. ಎಸ್
(52-11) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು–ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಜಜ್ಜುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನು ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ. 2—8—0.

ಮಲೇರಿಯಾ ನಿವಾರಿಣಿ

ಇದು ಚಳಿ ಜ್ವರ, ಚಾತುರ್ಥಿ ಜ್ವರ, ದಿನ ಬಿಟ್ಟುಬರುವ ಜ್ವರ, ಮಲೇರಿಯಾ ಜ್ವರ, ಇನ್‌ಫ್ಲುಯೆಂಜಾ ಇತ್ಯಾದಿ ನಾನಾ ತರದ ಜ್ವರಗಳ ಮೇಲೆ ರಾಮಬಾಣ.

ಬಾಟ್ಲಿ 1ರ ರೂ 1—8—0; ಸಣ್ಣ ಬಟ್ಲಿ ರೂ. 0—13—0.

ಪ್ಲೀನ್ ಮಿಕ್ಸ್ಚರ್

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಅಶಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು. ಬಾಟ್ಲಿ 1ರ ರೂ. 1—2—0.

ಬಾಲಗ್ರಹ ಗುಟಿಕೆ

ಮಕ್ಕಳ ಜಾಡ್ಯ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ಮಂಗಳೂರು ಸ್ಟೋರ್ಸ್, ಮಡಿಕೇರಿ. ಪಿ. ಬಿ. ಕಾಮತ್, ಮಡಿಕೇರಿ. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. ಎ. ಎಸ್. ನಾಚಯ್ಯ, ಸುಂಟಿಕೊಪ್ಪ. ಸುಂದರ್ ಪ್ರಭು, ಸುಳ್ಯ. [16]

ಮಾನವನ ಎಣ್ಣೆ.

ಮರದಿಂದ ಎಣ್ಣೆಯನ್ನು ತೆಗೆದಾಯಿತು; ಮೀನಿನಿಂದ ಎಣ್ಣೆ ತೆಗೆಯಲಾಯಿತು; ಇನ್ನು ಮಾನವನಿಂದ ಎಣ್ಣೆ ತೆಗೆದು ಅದರ ಸದುಪಯೋಗಪಡಿಸಿಕೊಳ್ಳಬಹುದೆಂಬ ಹೊಸ ಶೋಧನೆಯು ನಡೆದಿದೆ. ಲಂಡನಿನ ಕಿಂಗ್ಸ್ ಕಾಲೇಜ್ ಆಸ್ಪತ್ರೆಯ ಮುಖ್ಯ ವೈದ್ಯರಾದ ಡಾ. ಸೆಸಿಲ್ ವೇಕ್ಲಿ ಎಂಬವರು ಮಾನವನ ಮೂಳೆಗಳಿಂದ ತೆಗೆಯಲ್ಪಟ್ಟ ಎಣ್ಣೆಯು ಪ್ರತಿಯೊಂದು ತರಹದ ಗಾಯದ ಗುರ್ತುಗಳಿಗೂ, ಶಸ್ತ್ರ ಚಿಕಿತ್ಸೆಯಿಂದಾದ ಗುರ್ತು ಮೊದಲಾದವುಗಳಿಗೂ ಸಿದ್ಧೌಷಧವೆಂದು ತಿಳಿಸುತ್ತಾರೆ ಅವರ ಅನೇಕ ವರ್ಷಗಳ ಶ್ರಮವು ಈಗ ಸಫಲವಾಗಿಯದಂತಿದೆ. ಚೀನಾ ಜಪಾನು ಯುದ್ಧ ರಂಗದಲ್ಲಿ ಎಷ್ಟು ಮಾನವ ಮಾಂಸ ಸಿಕ್ಕುತ್ತಿತ್ತು! ಡಾಕ್ಟರರೇ, ಮುಂದೆ ಯುದ್ಧವಾದರೆ ಮಾನವನ ಎಣ್ಣೆಯ ಕೆರೆ ತೋಡಿಬಿಡಿ!!

—:0:—

ಜೀವವಾನ ಮಾಡಿದ ಪಾರಿವಾಳ.

ಇತ್ತೀಚೆಗೆ ಯುನೈಟೆಡ್ ಸ್ಟೇಟ್ಸಿನ ನ್ಯೂಜೆರ್ಸಿಯೆಂಬಲ್ಲಿ ಪಾರಿವಾಳವೊಂದು ಬೆಸ್ತನೊಬ್ಬನ ಜೀವರಕ್ಷಣೆ ಮಾಡಿತು. ಸಮುದ್ರಕ್ಕೆ ಮೀನು ಹಿಡಿಯಲೆಂದು ಹೋಗುವ ಬೆಸ್ತರು ಕೆಲವನ್ನು ಸಾಗರದ ಧಾರೆಗಳಿಗೆ ಸಿಲುಕುವುದರಿಂದ ಅಂಥವರಿಗೆ ಸಹಾಯ ಕೊಡುವ ಏರ್ಪಾಡು ಮಾಡಲು ಜಾಲ್ ಪಾರ್ಕರ್ ಎಂಬವನು ಕೆಲವು ಪಾರಿವಾಳಗಳನ್ನು ಸಾಕಿದ್ದನು. ಬೆಸ್ತರು ತಮ್ಮೊಂದಿಗೆ ಪ್ರತಿಬಾರಿ ಬಾಡಿಗೆಗೆ ಪಾರಿವಾಳಗಳನ್ನು ಕರೆದುಕೊಂಡು ಹೋಗುವುದು ಅಲ್ಲಿಯ ವಾಡಿಕೆ. ಒಮ್ಮೆ ಸಾಗರ ಧಾರೆಯೊಂದು ಒಬ್ಬ ಬೆಸ್ತನನ್ನು ಮುಳುಗಿಸುವುದರಲ್ಲಿದ್ದಾಗ ಅವನು ಜೀಟಿ ಬರೆದು ಪಾರಿವಾಳದ ಕಾಲಿಗೆ ಕಟ್ಟಿದ. ಅರೆತಾಸಿನಲ್ಲಿ ಪಾರಿವಾಳವು ತನ್ನ ಯಜಮಾನನ ಬಳಿ ಸೇರಿದ್ದೇ ತಡ. ಉಗಿದೋಣಿಯೊಂದು ವೇಗವಾಗಿ ಹೋಗಿ ಬೆಸ್ತನ ಜೀವಸಂರಕ್ಷಿಸಿತು.

—:0:—

70 ಮಣ ಭಾರದ ಮನುಷ್ಯ.

ವಯಸ್ಸು 32, ಎತ್ತರ ಸುಮಾರು 6 ಅಡಿ, ಎದೆ ಸುತ್ತಳತೆ 77½ ಅಂಗುಲ, ಕತ್ತಿನ ಸುತ್ತಳತೆ 26½ ಅಂಗುಲ, ತೋಳಿನ ಸುತ್ತಳತೆ ಕೇವಲ 17½ ಅಂಗುಲ. ಈ ಆಳತೆ ನುತ್ತಾವ ಪ್ರಾಣಿಯದೂ ಅಲ್ಲ. ಡಿಕ್‌ಹ್ಯಾರೋ ಎಂಬ ಬ್ರಿಟಿಷ್ ಪ್ರಜೆಯದು. ಇಷ್ಟಾದರೂ ಇವನ 'ಹ್ಯಾಟ್' ಮಾತ್ರ ಕೇವಲ 7¼ ರ ಸೈಜಿನದು. ಇವನಿಗೆ ಷರಟು ಹೊಲಿಯಲು 9 ಗಜ ಬಟ್ಟೆ ಬೇಕು. ಬೂಟ್ಸು ಕೇವಲ 13 ಇಂಚಿನದು. ಈತನು ರೈಲ್ವೆಗಳಲ್ಲಿ ಸಂಚರಿಸಲು ಸಾಧ್ಯವೇ ಇಲ್ಲ. ಯಾಕೆಂದರೆ ರೈಲ್ವೆ ಗಾಡಿಗಳ ಬಾಗಿಲುಗಳು ಈತನನ್ನು ಹಿಡಿಸಲಾರವಂತೆ! ಅದಕ್ಕೋಸ್ಕರ ಈತನು ಯಾವಾಗಲೂ 'ಗಾರ್ಡ್' ಗಾಡಿಯಲ್ಲೇ ಸಂಚರಿಸುವನು. ಈತನ ಅಭಿಪ್ರಾಯದಂತೆ 'ನಗಬೇಕು—ದಪ್ಪನಾಗಬೇಕು' ಎಂಬುದು ವ್ಯಕ್ತವಾಗುತ್ತೆ. ಹೀಗೆ ಬೆಳೆಯುವುದೂ ಒಂದು ಸಾಹಸವಲ್ಲವೇ?

—:0:—

ವಿ ವಿ ಧ ವಿ ಚಾ ರ.

ನಲುವತ್ತು ಕೋಟಿ.

ನಮ್ಮ ಭಾರತೀಯ ಸರ್ಕಾರದ ಆರೋಗ್ಯ ಮಂತ್ರಿಗಳು ಪ್ರಕೃತದ ಹಾಗೂ ಹಿಂದಿನ ಜನಸಂಖ್ಯೆಯನ್ನು ಪರಿಶೀಲಿಸಿ, 1941 ರ ಸುಮಾರಿಗೆ ಭಾರತೀಯರ ಸಂಖ್ಯೆ 40 ಕೋಟಿಗೆ ಮುಟ್ಟಬಹುದೆಂದು ಅಂದಾಜು ಮಾಡಿದ್ದಾರೆ. ಆದರೇನು? ಈ ಬ್ರಿಟಿಷ್ ಅಧಿಕಾರಿಗಳಿಗೆ, 33 ರಿಂದ 330 ಕೋಟಿಗೆ ನಮ್ಮ ಸಂಖ್ಯೆ ಏರಿದರೂ ನಾವು ಯುದ್ಧಕ್ಕೆ ಮುಂದಾಗೆವೆಂಬ ಧೈರ್ಯವಿದ್ದೇ ಇದೆ.

—:0:—

ಮಾನವ ವೈಚಿತ್ರ್ಯ.

ಮಾನವನು ಇಹಲೋಕಕ್ಕೆ ತನ್ನ ಒಪ್ಪಿಗೆ ಇಲ್ಲದೆ ಬರುತ್ತಾನೆ—ತನ್ನ ಇಚ್ಛೆಯ ವಿರುದ್ಧವಾಗಿ ಪರಲೋಕ ಪ್ರಯಾಣವೆಸಗುತ್ತಾನೆ.

ಶೈಶವಾವಸ್ಥೆಯಲ್ಲಿ ಅವನು ಜೀವಸ ಮಾನನು. ಬಾಲ್ಯದಲ್ಲಿ ಪಿಶಾಚಿ (ತುಂಟ). ಯೌವನದಲ್ಲಿ ಗಾಳಿಯಿಂದಾರಂಭಿಸಿ ಎಲ್ಲವೂ ಅವನೇ. ಮುದುಕನಾಗಿದ್ದಾಗ ಅವನೊಬ್ಬ ತಿಳಿಗೇಡಿ, ಮುದಿಗೂಬೆ!

ಸಂಸಾರಿಕನಾದರೆ ಅವನೊಬ್ಬ ಕ್ಷೋಭಿ. ಸ್ವಲ್ಪ ಧನಾರ್ಜನೆ ಮಾಡಿದರೆ ಅವನು ಚೋರ; ಕಾನೂನು ಅವನನ್ನು ನರಕ ಕೂಪದಲ್ಲಿರಿಸುವುದು. ಅವನು ಧನಿಕನಾದರೆ ಅವನನ್ನು ಅಪ್ರಾಮಾಣಿಕನೆನ್ನುವರು ಅವರೂ ಗಟ್ಟಿಗನೆಂದೆನಿಸುವನು. ರಾಜಕಾರಣಜ್ಞನಾದದ್ದಾದರೆ ಅವನನ್ನು ತೃಪ್ತಿಪಡಿಸುವುದಸಾಧ್ಯ. ಕಾರಣ ಅವನು ಜೇಡವಾದ ನಾಗರೀಕನಾಗಿರುವನು. ಇಗರ್ಜಿಗೆ ಹೋದರೆ ಅವನು ಕಪಟಿ; ಹೋಗದಿದ್ದರೆ ಪಾಪಿ, ತುಚ್ಛ. ಪರದ್ಯರ್ಮ ಸಂಸ್ಥೆಗಳಿಗೆ ಧನ ದಾನ ಮಾಡಿದರೆ ಅವನು ಡಾಂಭಿಕನೆಂದಾಯಿತು; ಮಾಡದಿದ್ದರೆ ಅವನು ಲೋಭಿಯೂ, ಕಠಿಣ ಹೃದಯನೂ ಆಗುತ್ತಾನೆ.

ಇಹಲೋಕಕ್ಕೆ ಬಂದ ಸುರುವಿನಲ್ಲಿ ಅವನನ್ನೆಲ್ಲರು ಮುದ್ದಾಡಲಪೇಕ್ಷಿಸುವರು. ಲೋಕ ಬಿಡುವ ಮೊದಲು ಅವನನ್ನು ಅವರು ತುಳಿದು ಕೆಡಹಲು ಇಚ್ಛಿಸುವರು. ಎಳೆ ಪ್ರಾಯದಲ್ಲಿ ಮಡಿದರೆ ಅವನ ಭವಿಷ್ಯದಲ್ಲಿ ಮಹತ್ತಾದ ಘಟನೆಗಳು ಇರುತ್ತಿದ್ದವು. ಬಹುಕಾಲ ಬಾಳಿದರೆ ಅವನೊಂದು ತೊಡಕು; ಮತ್ತು ದಹನ ಖರ್ಚನ್ನುಳಿಸುವುದಕ್ಕೆ ಮಾತ್ರ ಜೀವಿಸುತ್ತಿರುವನೆಂದು ಇತರರಿಂದ ಹೇಳಿಸಿಕೊಳ್ಳುತ್ತಾನೆ.

ಮಾನವನ ಈ ಪ್ರಯಾಣವಂತೂ ಬಹಳ ಕಟುತರವಾದದ್ದು. ಅವರೂ ನಾವೆಲ್ಲರೂ ಈ ಪ್ರವಾಸವನ್ನು ಮಾಡಲು ಬಯಸುತ್ತೇವೆ.

—:0:—

ಗುಂಡಿಗಳ ರಾಣಿ.

ಅಮೇರಿಕದ ನ್ಯೂಯಾರ್ಕ್ ಮಹಾನಗರದಲ್ಲಿ ಶ್ರೀಮತಿ ಮೇರಿ ಕೈಟ್ ಎಂಬ 78 ವಯಸ್ಸಿನ ಓರ್ವ ವೃದ್ಧೆಯು ಕಳೆದ 65 ವರ್ಷಗಳಿಂದ 14,882 ಗುಂಡಿಗಳನ್ನು ಶೇಖರಿಸಿರುವಳು. ಇವುಗಳೆಲ್ಲವೂ ಒಂದಿದ್ದಂತೆ ಮತ್ತೊಂದಿಲ್ಲ. ಇಷ್ಟು ಗುಂಡಿಗಳ ಆಸ್ತಿಯನ್ನು ಪಡೆದಿರುವವರು ಮತ್ಯಾರೂ ಇಲ್ಲವಾದ್ದರಿಂದ ಈಕೆಯೇ ಗುಂಡಿಗಳ ರಾಣಿಯೆಂದು ಹೇಳಲ್ಪಟ್ಟಿದ್ದಾಳೆ. ಇರಲಿ, ರಾಣಿಯೆಂದು ಹೇಳಿಸಿಕೊಳ್ಳಲಿಕ್ಕೆ ಪೂರ್ವ ಜನ್ಮದ ಸುಕೃತವಲ್ಲದೆ ಮತ್ತೇನು?

—:0:—

ವಿಚಿತ್ರ ಯಂತ್ರ.

ಆತನು ಸ್ವತಃ ಬುದ್ಧಿವಂತ ಛಾಯಾ ಚಿತ್ರಗ್ರಾಹಕನಾಗಿದ್ದುದರಿಂದ ತನ್ನ ಸ್ತ್ರೀಯು ಪೇಟೆಗೆ ಹೋದೊಡನೆ ದಿನ ಸರಿಯಾದ ಸ್ಥಳವೊಂದರಲ್ಲಿ ಪ್ರತಿ ಐದು ನಿಮಿಷಗಳಲ್ಲಿಯೂ ಚಿತ್ರವನ್ನು ತೆಗೆದುಕೊಳ್ಳಬಲ್ಲ ಕ್ಯಾಮರಾವೊಂದನ್ನು ಸ್ಥಾಪಿಸಿದ. ಸರಿ, ತಾನು ಕೆಲವು ದಿವಸ ಪರಊರಿಗೆ ಹೋಗುತ್ತೇನೆಂದು ತನ್ನ ಪತ್ನಿಗೆ ತಿಳಿಸಿ ಹೊರಟ. ಊರಿಂದ ಹಿಂತಿರುಗಿ ಕ್ಯಾಮರಾದಲ್ಲಿ ಚಿತ್ರಗಳನ್ನು ಪರೀಕ್ಷಿಸಿ ನೋಡುತ್ತಾನೆ. ಆತನ ದಿಗ್ಭ್ರಮೆಗೆ, ತನ್ನ ಪತ್ನಿಯು ತನ್ನ ಸ್ನೇಹಿತನೊಂದಿಗೆ ನಡೆಸಿದ ಪ್ರತಿಯೊಂದು ಪ್ರೇಮ ವರ್ತನೆಗಳೂ ಚಿತ್ರಿತವಾಗಿದ್ದವು. ಆದರೆ ಮೊದಲನೇ ಪರೀಕ್ಷೆಯಿಂದ ತೃಪ್ತನಾಗದೆ ಇನ್ನೊಂದು ಅದೇ ತರಹದ ಪರೀಕ್ಷೆಯನ್ನೂ ನಡೆಸಿ ತನ್ನ ಸತಿಯ ವರ್ತನೆಯು ನಿಜವೆಂದು ತಿಳಿದುಕೊಂಡು ತಾನು ಪಡೆದದ್ದ ಛಾಯಾಚಿತ್ರಗಳನ್ನೇ ಸಾಕ್ಷಿಯಾಗಿಟ್ಟು ನ್ಯಾಯಸ್ಥಾನದಲ್ಲಿ ವಿವಾಹ ವಿಚ್ಛೇದನವನ್ನು ಪಡೆದ. ಹೇಗಿದೆ ಇವನ ಚತುರತೆ? ಈ ರೀತಿಯ ಹೆಂಗಳೆಯರಿಗೆ ಬೇಕಲ್ಲವೇ ಇಂಥಾ ಚತುರ ಗಂಡಂದಿರುಗಳು!

—:0:—

ಇಲಿಗಳಿಗಾಗಿ.

ವಿಜ್ಞಾನ ಶಾಸ್ತ್ರಜ್ಞರು ಇಲಿಗಳನ್ನು ಸುಲಭವಾಗಿ ಹಿಡಿಯಲು ಹೊಸ ರೀತಿಯ ಗೂಡುಗಳನ್ನು ಕಂಡುಹಿಡಿದಿರುವರು. ಬೆಣ್ಣೆ ತುಪ್ಪದ ಗಂಧವು ಒಂದು ಇಲಿಯನ್ನು ಈ ಗೂಡಿನೊಳಗೆ ಸೆಳೆದರೆ ಸರಿ; ಆ ಒಂದು ಇಲಿ ಗೂಡಿನ ಸುತ್ತಲಿರುವ ಕನ್ನಡಿಗಳ ದೆಸೆಯಿಂದ ಹತ್ತಾರಾಗಿ ಕಾಣಿಸುವುದು. ಇಷ್ಟು ಇಲಿಗಳು ಗೂಡಿನೊಳಗೆ ಇರುವುದನ್ನು ಕಂಡು ಹೊರಗಣ ಇತರ ಇಲಿಗಳೂ ಗೂಡನ್ನು ಸೇರಿಕೊಂಡು ಕೊನೆಗೆ ಗೂಡು ಸಂಪೂರ್ಣವಾಗಿ ತುಂಬಿಕೊಂಡುಬಿಡುವುದು. ಇದು ವಿಜ್ಞಾನಿಗಳ ಉಪಾಯ.

—:0:—

ಹರಿಜನರಿಗಾಗಿ.

ಲಂಡನಿನ ಬಿಳಿ ಜನರು ಭಾರತೀಯರಿಗೆ ಕೆಲವು ಹೋಟೆಲುಗಳಿಗೆ ಪ್ರವೇಶವನ್ನೂ, ಕೆಲವದರಲ್ಲಿ ಪ್ರವೇಶವಿತ್ತರೂ ಬಿಳಿ ಜನರೊಡನೆ ಹರಿಜನರು ಕೂತರ ತಿಂಡಿ ಕೊಡುವುದನ್ನೂ ತಡೆದಿದ್ದಾರೆ. ಈ ಅವಮಾನ ಹರಿಜನರೆಲ್ಲರಿಗೂ ಇದ್ದೇ ಇದೆ. ನೀಗ್ರೋ ಹುಡುಗಿಯರು ಮೂವರಿಗೆ ಕೆಲ ಕಾಲದ ಹಿಂದೆ ಲಂಡನಿನಲ್ಲಿ ನಡೆದ ಈ ಅವಮಾನ ಪ್ರಸಂಗದಿಂದ ಸಿಟ್ಟುಗೊಂಡು ಅಮೇರಿಕದಲ್ಲಿಯ ಕೆಲ ಧನಾಢ್ಯ ನೀಗ್ರೋ ಜನರು ಹರಿ ಜನರಿಗಾಗಿಯೇ ಒಂದು ಅತ್ಯುತ್ತಮ ಹೋಟೆಲನ್ನು ಲಂಡನಿನಲ್ಲಿ ತೆರಯಲೆಣಿಸಿರುವರು. ಆದರೆ ಭಾರತೀಯರಿಗೆ ಮಾತ್ರ ಈ ಮಾನಮರ್ಯಾದೆಗಳ ಗೊಡವೆಯೇ ಇಲ್ಲವೇ, ಹೇಗೆ?

—:0:—

ಬರೆ ಎಳೆದು ಕೊಂದರು.

ಹೊಸಂಗಾಬಾದ್ ಎಂಬಲ್ಲಿ ಸೀತಾರಾಮ್ ಎಂಬ 22 ವರ್ಷದ ಯುವಕನಿಗೆ ಶ್ರೀಮತಿ ಕಸ್ತೂರಿ ಎಂಬ 20 ವರ್ಷದ ಹೆಂಡತಿ ಇದ್ದಳು. ಶ್ರೀಮತಿ ಭೂರಿ ಎಂಬುವಳು ಅವನ ತಾಯಿ.

ಕೆಲವು ದಿನಗಳ ಕೆಳಗೆ ಅಮರಾವತಿಯಲ್ಲಿ ವಾಸವಾಗಿದ್ದ ಕಸ್ತೂರಿಯು ತನ್ನ ಗಂಡನ ಮನೆಯಲ್ಲಿರುವುದಕ್ಕೆ ಬಂದಳು. ಅವಳು ತಂದಿದ್ದ ಟ್ರಂಕ್ ಒಂದರಲ್ಲಿ ತರವಾರಿ ಸೀರೆಗಳೂ, ರೇಷ್ಮೆ ಕರವಸ್ತ್ರಗಳೂ, ಅಂಗ ಶೃಂಗಾರದ ವಸ್ತುಗಳೂ ಇದ್ದುದನ್ನು ಆಕೆಯ ಗಂಡ ಸೀತಾರಾಮನು ನೋಡಿದನು. ಇವೆಲ್ಲವೂ ಈಕೆಯು ಅಮರಾವತಿಯಲ್ಲಿದ್ದಾಗ ಈಕೆಯ ಮೆಚ್ಚಿನವರು ಕೊಟ್ಟ ಬಹುಮಾನಗಳೆಂದು ಊಹಿಸಿ, ನಿಜವನ್ನು ಹೊರಗೆಡಹಲು ಅವಳನ್ನು ಚೆನ್ನಾಗಿ ಬಾರಿಸಿದನಂತೆ. ಏನೂ ಉತ್ತರ ಬರಲಿಲ್ಲ. ಸರಿ, ಈತನ ತಾಯಿ (ಊರಿನವರೆಲ್ಲಾ ಇವಳೇ ಗಂಡುಬೀರಿಯಂತೆ) ಒಂದು ಉಪಾಯ ಹೇಳಿಕೊಟ್ಟಳು — ನ್ನ ಪ್ರೇಮದ ಮಗನಿಗೆ. ಅವಳಿಗೆ ಕಾದ ಕಬ್ಬಿಣದ ಬರೆ ಎಳೆದರೆ ಎಲ್ಲವೂ ಸರಿ ಬೀಳುವುದು ಎಂದಳು. ಸತ್ಯ ಶೋಧಕ ಸೀತಾರಾಮನು ತನ್ನ ತಾಯಿಯ ಸಲಹೆಯ ಪ್ರಕಾರ ತಾನೂ, ತನ್ನ ತಾಯಿಯೂ ಸೇರಿಕೊಂಡು ಶ್ರೀಮತಿ ಕಸ್ತೂರಿಯ ಮೈಮೇಲೆಲ್ಲಾ ಕೆಂಪಗೆ ಕಾಯಿಸಿದ ಕಬ್ಬಿಣದ ಸಲಾಕೆಯ ಬರೆ ಎಳೆದರು. ಇನ್ನು ಅವಳು ಬದುಕುವುದುಂಟೇ? 24 ಗಂಟೆಯೊಳಗಾಗಿ ಯಮಲೋಕಕ್ಕೆ ಹೋದಳು. ಅವಳು ಕಾಲರಾದಿಂದ ಮೃತಳಾದಳೆಂದು ಸುದ್ದಿ ಹುಟ್ಟಿಸಿ ಅಂತ್ಯಕ್ರಿಯೆ ನಡೆಸಲು ಅನುವಾದರು. ಆದರೆ ಆ ಊರಿನಲ್ಲಿ ಆ ರೋಗದ ಸೋಂಕೇ ಇಲ್ಲದ್ದರಿಂದ ಪೊಲೀಸಿನವರಿಗೆ ಅನುಮಾನ ಬಂದು ಪರೀಕ್ಷೆ ನಡೆಸಿ ನೋಡಲಾಗಿ ಮೈಮೇಲೆಲ್ಲಾ ಬರೆ ಗಳಿದ್ದವು. ಇದು ದೇವನಾಯಿತೆಂದು ಕೇಳಬೇಕೇ? ದೇವವಾಕ್ಯವೆಂದು ತಾಯಿಯ ಮಾತು ಕೇಳಿದ ಸೀತಾರಾಮ ಈಗ ಜೈಲಿನಲ್ಲಿರುವನು. ಇನ್ನು ರಮಣಿಯರೇ, ಪತಿಭಕ್ತಿಯಿಂದ ಏಕೇಯರಾಗಿ ಸಂಸಾರವನ್ನು ಸಾಂಗವಾಗಿ ಸಾಗಿಸಿರಿ!

—:0:—

ದೇವದತ್ತ.

ಸಾಮಾಜಿಕ ಕಾದಂಬರಿ.

ಅಧ್ಯಾಯ ೮.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು.)

ವಿದ್ಯಾರ್ಥಿ–'ಲಿಂಕನನನ್ನು ಯಾರೋ ಕೊಂದು ಹಾಕಿಬಿಡಲಿಲ್ಲವೇ? ಈಗ ಇರುವವನು 'ಜೇಮ್ಸ್ ಎಬ್ರಾಹಂ ಗಾರ್‌ಫೀಲ್ಡ್' ಎಂಬುವವನು. ಉಪಾಧ್ಯಾಯರು–ಹಾಗೋ? ನೀವು ಹೀಗೆಲ್ಲಾ ಪ್ರಶ್ನೆ ಕೇಳುತ್ತೀರಲ್ಲ. ನಿಮ್ಮ ಅಭಿಪ್ರಾಯವೇನಿರಬಹುದೆಂದು ಪರೀಕ್ಷಿಸಲು ನಾನು ಹಾಗೆ ಹೇಳಿದ್ದು. ನೀವೇನು ನನ್ನನ್ನು ಪರೀಕ್ಷಿಸುವುದೋ? ಯಾತಕ್ಕೆ ನೀನು ಮೊದಲು ಹೇಳಲಿಲ್ಲ. ಏನು ಮರಿ ತಾಯಿಗೆ ಮೊಲೆಯೂಡಿಸುವುದೋ? ಕೂತುಕೋ. ಇನ್ನು ಮುಂದೆ ಇಂತಹ ಕುಚೇಷ್ಟೆಗಳನ್ನಾಡಿದ್ದಾದರೆ ಹೊರಕ್ಕೆ ಓಡಿಸಿಬಿಡುತ್ತೇನೆ, ನೋಡಿ ಹುಷಾರ್.'

ಉಪಾಧ್ಯಾಯರು ಸಿಟ್ಟಿನಿಂದ ಸ್ವಲ್ಪ ಹೊತ್ತು ಮೌನವಾಗಿದ್ದರು. ಹುಡುಗರು ಏನೇನೋ ಪಿಸುಗುಟ್ಟುತ್ತಿದ್ದರು.

ಮರುಕ್ಷಣದಲ್ಲೇ ಉಪಾಧ್ಯಾಯರು ಪಾಠಕ್ಕಾರಂಭಿಸಿದರು. ಚರಿತ್ರಾಪುಸ್ತಕವನ್ನು ತೆರೆದಿಟ್ಟು 'ಈ ದಿವಸ ನಾವು ಮಾಡಬೇಕಾದದ್ದು ಹಿಂದೂಚರಿತ್ರೆ. ಕಳೆದ ವಾರದಲ್ಲಿ ಮಾಡಿದ ಅಧ್ಯಾಯದಲ್ಲಿ ನಿಮಗೆ ತಿಳಿಯದ ಸಂಗತಿ ಏನಾದರೂ ಇದೆಯೋ?' ಎಂದು ಕೇಳಿ ಅದರಲ್ಲಿನ ಪ್ರತಿ ಪಂಕ್ತಿಯನ್ನು ಓದುತ್ತಾ, ಹುಡುಗರಿಗೆ ಅದನ್ನು ವಿವರಿಸತೊಡಗಿದರು. ಮಧ್ಯೆ ಮಧ್ಯೆ ತಾವು ವಿವರಿಸುತ್ತಿರುವ ಪಾಠದ ವಿಷಯ ಒಂದೊಂದು ಪ್ರಶ್ನೆಗಳನ್ನು ಕೇಳುತ್ತಿದ್ದರು. ಯಾರೂ ಅವಕ್ಕೆ ಸರಿಯಾದ ಉತ್ತರ ಕೊಡುತ್ತಿರಲಿಲ್ಲ.

ಎದುರು ಸಾಲಿನ ಬೆಂಚಿನಲ್ಲಿ ಕುಳಿತಿದ್ದ ಹುಡುಗರು ತಮ್ಮ ಕಣ್ಣುಗಳನ್ನು ಅಗಲವಾಗಿ ತೆರೆದು, ಕಪಲದ ದೃಷ್ಟಿಯಿಂದ ಉಪಾಧ್ಯಾಯರ ಮುಖವನ್ನೇ ಎವೆ ಇಕ್ಕದೆ ನೋಡುತ್ತಾ, ಇಹ ಲೋಕದ ವ್ಯಾಪಾರವನ್ನೇ ಮರೆತು ಬಿಟ್ಟಿದ್ದರು. ಕೆಲವರು ತಮ್ಮ ಎದುರಿನಲ್ಲಿ ಇಡಲ್ಪಟ್ಟ ಡೆಸ್ಕುಗಳನ್ನು ನುಂಗುವವರ ಹಾಗೆ, ಆಗಾಗ್ಯೆ ತೆರೆಯಲಾಗುವಷ್ಟು ಅಗಲ ತಮ್ಮ ಬಾಯಿಗಳನ್ನು ತೆರೆದು ಕಣ್ಣುಗಳಿಗಡರ್ದ ನೀರನ್ನು ಕೈಗಳಿಂದ ಒರಸುತ್ತಿದ್ದರು. ಇನ್ನು ಕೆಲವರು ಮೊಣಕೈಯನ್ನು ಡೆಸ್ಕಿನ ಮೇಲೆ ಊರಿ ಕರತಲದಲ್ಲಿ ತಮ್ಮ ಮುಖವನ್ನು ಕೂಡ್ರಿಸಿದ್ದವರು ಹಠಾತ್ತಾಗಿ ತಮ್ಮ ಹಣೆಗಳನ್ನು ಡೆಸ್ಕಿಗೆ ಬಡಿದುಕೊಂಡು ಕೂಡಲೇ ಎಚ್ಚತ್ತು ಪೆಟ್ಟಾದ ಸ್ಥಳಗಳನ್ನು ಉಜ್ಜುತ್ತಿದ್ದರು. ಇನ್ನು ಕೆಲವರು ತಮ್ಮ ಮೊಣಕಟ್ಟಿಗೆ ಕಟ್ಟಿಕೊಂಡಿದ್ದ ವಾಚನ್ನು ಆಗಾಗ್ಯೆ ನೋಡುತ್ತಾ, ಉಪಾಧ್ಯಾಯರ ಬೋಧನೆಯನ್ನು ಹೋಗಲಾಡಿಸುವುದಕ್ಕೆ ಏನೇನೋ ವಿಕಾರ ಚಿತ್ರಗಳನ್ನು ಬರೆದು, ದೂರದ ಸಂಗಾತಿಗಳಿಗೆ ತೋರಿಸುತ್ತಾ, ಸಮಯವನ್ನು ನೂಕುತ್ತಿದ್ದರು. ಇನ್ನು ಕೆಲವರು ಡೆಸ್ಕಿನ ಕೆಳಗೆ ತಮ್ಮ ಮುಖವನ್ನು ಬಗ್ಗಿಸಿ, ಏನೋ ಮಾಡುತ್ತಿದ್ದು ಸ್ವಲ್ಪ ಹೊತ್ತಿನಲ್ಲಿಯೇ ಮೂಗನ್ನು ಕರವಸ್ತ್ರದಿಂದ ಉಜ್ಜುತ್ತಾ, ಸೀನುತ್ತಾ, ಅಶ್ರುಪೂರಿತ ಕಣ್ಣುಗಳಿಂದ ಉಪಾಧ್ಯಾಯರ ಮುಖವನ್ನು ನೋಡುತ್ತಿದ್ದರು. ಉಪಾಧ್ಯಾಯರು ಮಾತ್ರ ಯಾವುದನ್ನೂ ಗಮನಿಸದೆ ಏನೋ ದೃಢಚಿತ್ತವಾಗಿ ಪಾಠಮಾಡುತ್ತಿದ್ದರು. ಅಷ್ಟರಲ್ಲಿ ಗಂಟೆಯೊದುದರಿಂದ, ಉಪಾಧ್ಯಾಯರು ಪುಸ್ತಕವನ್ನು ಮುಚ್ಚಿ ಎದ್ದು ನಿಂತು 'ಅಧ್ಯಾಯವು ಮುಗಿಯಿತು. ನಾಳೆ ಈ ಅಧ್ಯಾಯದಲ್ಲಿ ಪರೀಕ್ಷೆ ಮಾಡುತ್ತೇನೆ. ಎಲ್ಲರೂ ಓದಿ ಬರಬೇಕು' ಎಂದು ಹೇಳಿ ಹೊರಟು ಹೋದರು. ವಿದ್ಯಾರ್ಥಿಗಳು 'ಯಾವ ಅಧ್ಯಾಯದಲ್ಲಿ' ಎಂದು ಒಬ್ಬರನ್ನೊಬ್ಬರು ಕೇಳುತ್ತಿರುವಷ್ಟರಲ್ಲಿ ಮೂರನೆ ಗಂಟೆಯ ಪಾಠಕನಾದ ವಸಂತ ಚಂದ್ರನು ತರಗತಿಗೆ ಪ್ರವೇಶಿಸಿದನು.

ವಸಂತ ಚಂದ್ರನ ಮುಖವು ಆಹ್ಲಾದದ ಆಸನವಾಗಿತ್ತು. ಆದರೆ ಕೆಲವು ವೇಳೆಗಳಲ್ಲಿ ಸಿಡಾಬೆಯು ಮುಖವನ್ನು ವಿಾರಿಸತಕ್ಕ ವಿಕಾರ ಸ್ವರೂಪವನ್ನೂ ಧರಿಸಬಲ್ಲುದಾಗಿತ್ತು. ಇವನು ತರಗತಿಯನ್ನು ಪ್ರವೇಶಿಸಿ ಆಸನವನ್ನಲಂಕರಿಸಿದೊಡನೆ, ಕಳೆದ ವಾರವನ್ನು ಕುರಿತು ಪ್ರಶ್ನೆ ಮಾಡತೊಡಗಿದನು.

ಪ್ರಥಮತಃ ಕಡೆಯ ಬೆಂಚಿನ ಒಂದು ಮೂಲೆಯಲ್ಲಿ ಕುಳಿತಿದ್ದ ಒಬ್ಬ ವಿದ್ಯಾರ್ಥಿಯನ್ನು ಕೇಳಿದನು. ಆ ವಿದ್ಯಾರ್ಥಿಯು ನಡುಗುತ್ತಾ ಎದ್ದು ನಿಂತು ಬಿಕ್ಕಿ ಬಿಕ್ಕಿ ಉತ್ತರವನ್ನು ಕೊಡಲಾರಂಭಿಸಿದನು.

ವಸಂತಚಂದ್ರ, 'ಏನು ಬೊಗಳುತ್ತಿರುವೆ; ನಿಂತಿರು?' ಎಂದು ತಿರಸ್ಕಾರ ಸ್ವರದಿಂದ ಗರ್ಜಿಸಿ, ಎರಡನೆಯವನಿಗೆ ಬೆರಳು ತೋರಿಸಿದರು. ಆ ವಿದ್ಯಾರ್ಥಿಯು ಉಪಾಧ್ಯಾಯರ ಕ್ರೂರಭಾವದ ತಿರಸ್ಕಾರ ದೃಷ್ಟಿಯನ್ನು ಸಹಿಸಲಾರದೆ, ತಲೆ ಬಗ್ಗಿಸಿ ಮೌನವಾಗಿ ನಿಂತನು. ಉಪಾಧ್ಯಾಯನು 'ನೀನು, ನೀನು' ಎನ್ನುತ್ತಾ ಕಡೆ ಸಾಲಿನ ಬೆಂಚಿನವರನ್ನೆಲ್ಲಾ ಕೇಳಿದನು. ಯಾರೂ ಉತ್ತರಕೊಡಲಿಲ್ಲ. ಎಲ್ಲರಿಗೂ ಸರಿಯಾದ ಉತ್ತರವು ತಿಳಿದಿತ್ತಾದರೂ, ವಸಂತಚಂದ್ರನ ಎದುರಿನಲ್ಲಿ ಬಾಯಿ ತೆರೆಯಲಾರದೆ ಹೋದರು. ಪ್ರಶಾಂತಿಯು ಸ್ವರೂಪವನ್ನು ಧರಿಸಿದ್ದ ಶಿಕ್ಷಕನ ಮುಖವು ಕ್ರಮಕ್ರಮವಾಗಿ ಕಳೆ ಏರತೊಡಗಿತು. ಆನಂದ ಮುಂದಿನ ಸಾಲನ್ನು ಬೀರುತ್ತಾ ಆನಂದ ಪ್ರಸಾದನನ್ನು ಕೇಳಿದನು. ಆನಂದನು ತಿರಸ್ಕಾರ ರೂಪದ ಅತಿನಗೆಯನ್ನು ಸೂಚಿಸುತ್ತಾ ಆಸನದಿಂದ ಏಳಲೇ ಇಲ್ಲ. ವಸಂತಚಂದ್ರನು ಮತ್ತೆ ಚಾರುದತ್ತನನ್ನು ಪ್ರಶ್ನೆ ಮಾಡಿದನು. ಅವನು ಎದ್ದು ನಿಂತು, ಉತ್ತರ ಕೊಡಲು ಬಾಯಿತೆರದು ಒಂದೆರಡು ಶಬ್ದಗಳನ್ನು ಉಚ್ಚರಿಸುತ್ತಿದ್ದ ಹಾಗೆ, ಉಪಾಧ್ಯಾಯನು, 'ಸರಿ ಕೂತುಕೊ' ಎಂದು ಹೇಳಿ ಅವನು ಹೇಳಬೇಕಾಗಿದ್ದ ಉತ್ತರವನ್ನು, ತಾನೇ ಹೇಳಿ ಮುಗಿಸಿದನು. ಕಡೆಯ ಬೆಂಚಿನಲ್ಲಿ ನಿಂತಿದ್ದ ಹುಡುಗರೂ ಕುಳಿತರು.

ಉಪಾಧ್ಯಾಯನ ಮುಖವು ಮರಳಿ ವಿಕಾರರೂಪವನ್ನು ತಾಳಿತು, 'ನಾಚಿಕೆ ಇಲ್ಲದ ಕೋಣಗಳೇ, ನಿಂತಿರಿ,' ಎಂದು ಗರ್ಜಿಸಿದನು. ಹುಡುಗರು ಬಾಡಿದ ಮುಖದಿಂದ ಎದ್ದು ನಿಂತರು.

ಉಪಾಧ್ಯಾಯನು ಇನ್ನೂ ಕೆಲವು ಪ್ರಶ್ನೆಗಳನ್ನಿತ್ತನು. ಕೆಲವರು ಸರಿಯಾದ ಜವಾಬು ಕೊಟ್ಟಾಗ್ಯೂ, ಅವರನ್ನು ಹಿಯಾಳಿಸಿ, ನಿಂತಿರುವಂತೆ ಕಟ್ಟಪ್ಪಣೆ ಮಾಡಿದನು. ಕೆಲವರ ಬದಲು ತಾನೇ ಉತ್ತರ ಹೇಳುತ್ತಿದ್ದನು ಕೆಲವರನ್ನು ಪ್ರಶ್ನೆ ಕೇಳಲೇ ಇಲ್ಲ.

ಆ ಮೇಲೆ ಎಂದಿನಂತೆ ಪಾಠಕಾರಂಭಿಸಿದನು. ಆನಂದನು ಚಾರುದತ್ತನ ಕಿವಿಯಲ್ಲಿ ಏನೋ ಪಿಸುಗುಟ್ಟಿದನು. ಅದು ವಸಂತಚಂದ್ರನ ದೃಷ್ಟಿಗೆ ಬಿದ್ದಿತು. 'ಏನು ಸ್ವಂತ ಮಾತು? ಆನಂದ ನಾವೂ ನಿಮ್ಮ ಕುಶಲವೃತ್ತಾಂತದಲ್ಲಿ ಭಾಗಿಗಳಾಗಬಹುದ?' ಎಂದು ಹಸನ್ಮುಖನಾಗಿ ಪ್ರಶ್ನಿಸಿದನು.

'ಅದು ನನ್ನ ಸ್ವಂತ ಮಾತು ಸಾರ್' ಎಂದು ಆನಂದನು ಉತ್ತರವಿತ್ತನು ಉಪಾಧ್ಯಾಯರು ಪಾಠ ಮುಂದುವರಿಸಿದರು. ಚಾರುದತ್ತನು ಏನೋ ಗೊಣಗುಟ್ಟಿದನು. ಉಪಾಧ್ಯಾಯರು 'ಚಾರುದತ್ತಾ ಮಾತಾಡಬೇಡ' ಎಂದರು. ಅಷ್ಟರಲ್ಲಿ ನಿಂತಿದ್ದವರ ಪೈಕಿ ಒಬ್ಬ ವಿದ್ಯಾರ್ಥಿಯು ದೀನ ಸ್ವರದಿಂದ 'ಅಯ್ಯಾ, ನಾವು ಕೂತುಕೊಳ್ಳಬಹುದೆ?' ಎಂದು ಬೇಡಿದನು. ಈಡಿಯಟ್ (idiot) ಏನಂದೆ? ಪಾಠ ಕಲಿಯದೆ ಶಾಲೆಗೆ ಬಂದು ಕೂತುಕೊಳ್ಳಬಹುದೇ? ನಾಚಿಕೆ ಇಲ್ಲದ ಕತ್ತೆ. ಪಾಠ ಕಲಿಯದೆ ನಿನ್ನ ಕಪಿ ಮುಖವನ್ನು ತೋರಿಸಲು ಬಂದಿರುವೆಯೋ ಶಾಲೆಗೆ? ನಿನಗೆಲ್ಲ ಏತಕ್ಕೆ ವಿದ್ಯೆ? ಮನೆಯಲ್ಲಿ ದನ ಮೇಯಿಸುವುದು ಬಿಟ್ಟು? ನಿನ್ನ ಮುಖ ನೋಡಿದರೆ ವಿದ್ಯೆ ಕಲಿಯುವವನ ಹಾಗೆ ಕಾಣುತ್ತದೆ. 'ನಿಂತಿರು' ಎಂದು ಗರ್ಜಿಸಿದನು

ನಿರ್ಭಾಗ್ಯದಿಂದ ವಿದ್ಯಾರ್ಥಿಗಳು ಬಲವಾಗಿ ನಿಟ್ಟುಸಿರು ಬಿಡುತ್ತಾ ನಿಂತರು. ಗಂಟೆ ಅಂತ್ಯವಾಗುವ ವರೆಗೂ ಮಂದಹಾಸದಿಂದ ಕೂಡಿದ ಮುಖವುಳ್ಳವನಾಗಿ ಆಗಾಗ್ಯೆ ಚಾರುದತ್ತ ಮತ್ತು ಇನ್ನು ಕೆಲವು ವಿದ್ಯಾರ್ಥಿಗಳನ್ನೇ ಪ್ರಶ್ನೆ ಮಾಡುತ್ತಾ; ಅವರನ್ನು ಹಾಸ್ಯ ಮಾಡುತ್ತಾ, ನಗಾಡಿಸುತ್ತಾ ಪಾಠ ಮಾಡಿ ವಸಂತಚಂದ್ರನು ಹೊರಟು ಹೋದನು.

ಹುಡುಗರೆಲ್ಲಾ ಎದ್ದು ಊಟಕ್ಕೆ ಹೋದರು. ವಸಂತಚಂದ್ರನ ದೂಷಣೆಗೆ ಪಾತ್ರನಾದ ಸುಗುಣನೆಂಬ ವಿದ್ಯಾರ್ಥಿಯು, ಡೆಸ್ಕಿನ ಮೇಲೆ ತನ್ನ ಮುಖವನ್ನು ಇಟ್ಟು, ಕಣ್ಣೀರು ಸುರಿಸುತ್ತಾ ಕುಳಿತನು. ಅವನಿಗೆ ಆ ದಿವಸ ಹಸಿವೇ ಆಗಲಿಲ್ಲ.

ಇಹ ಲೋಕದ ಉದ್ಯೋಗಗಳಲ್ಲೆಲ್ಲಾ ಉಪಾಧ್ಯಾಯರ ವೃತ್ತಿಯೇ ಬಹು ಮೇಲಾದುದೆಂದು ಜ್ಞಾನಿಗಳು ಹೊಗಳುತ್ತಾರೆ. ನಮ್ಮ ಅನುಭವವೂ ಈ ತತ್ವವನ್ನು ಸಮರ್ಥಗೊಳಿಸುತ್ತದೆ.

'ಗುರು'ವೆಂದರೆ ಎಳೆ ವಯಸ್ಸಿನಲ್ಲಿ ಮಕ್ಕಳ ಹೃದಯದಲ್ಲಿ ಅಡಗಿರತಕ್ಕ ಮೂಢತ್ವ ಅಥವಾ ಅಜ್ಞಾನವೆಂಬ ಕತ್ತಲೆಯನ್ನು ತೊಳೆದು ಜ್ಞಾನವೆಂಬ ಜ್ಯೋತಿಯನ್ನು ಹತ್ತಿಸುವವನೆಂದರ್ಥ. ಇಂತಹ 'ಗುರು' ಎಂಬ ಬಿರುದನ್ನು ಸಂಪಾದಿಸಿ, ಲೋಕದಲ್ಲಿ ಅತ್ಯಂತ ಮಹತ್ತರವಾದ ವೃತ್ತಿಯನ್ನು ಕೈಕೊಳ್ಳಬೇಕಾದರೆ, ಮನುಷ್ಯನಿಗೆ ಬರೀ ಯೂನಿವರ್ಸಿಟಿ ಡಿಗ್ರಿಯೊಂದಿದ್ದರೆ ಸಾಲದು. ಅವನಿಗೆ ಅತ್ಯವಶ್ಯಕವಾದ ಮೂರು ಗುಣಗಳಿರಬೇಕು. ಪ್ರಥಮತಃ ತಾನು ಕಲಿಸುವ ಪಾಠದಲ್ಲಿ ತನಗೆ, ಸಂಪೂರ್ಣ ಪಾಂಡಿತ್ಯವಿರಬೇಕು. ಎರಡನೆ, ತನ್ನಿಂದ ವಿದ್ಯೆಯನ್ನು ಕಲಿಯಲು ಬರತಕ್ಕ ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಏಕೀಭಾವದಿಂದ ಕಾಣುವ ಮನಃಶಕ್ತಿಯುಳ್ಳವನಾಗಿರಬೇಕು. ಮೂರನೆ, ತನ್ನ ವಶದಲ್ಲಿರತಕ್ಕ ಜ್ಞಾನಜ್ಯೋತಿಯನ್ನು ಶಿಷ್ಯರ ಹೃದಯದಲ್ಲಿ ಹೊತ್ತಿಸುವ ಶಕ್ತಿ ತನಗಿರಬೇಕು. ಎಂದರೆ, ತನಗೆ ಎಷ್ಟು ತಿಳುವಳಿಕೆ ಇಂಬಸುದು. ಅದನ್ನು ಇನ್ನೊಬ್ಬರಿಗೆ ತಿಳಿಸಿ ಮನಂಬಟ್ಟು ಮಾಡಿಸುವ ಶಕ್ತಿ ಇರಬೇಕು. ಈ ಮೂರು ಗುಣಗಳು ತನ್ನಲ್ಲಿ ಇವೆಯೋ, ಇಲ್ಲವೋ ಎಂಬುದನ್ನು ತಾನೆ ತಿಳಿದು ಉಪಾಧ್ಯಾಯ ವೃತ್ತಿಯನ್ನು ಕೈಕೊಳ್ಳಬೇಕೇ ಹೊರತು, ಬಿ. ಎ., ಯಂ. ಎ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುತ್ತೇನೆಂಬುದಕ್ಕಾಗಲೀ ಜೀವನೋಪಾಯಕ್ಕೆ ಇದೊಂದು ದಾರಿಯೆಂದಾಗಲೀ, ಅಥವಾ ಬೇಕಾದಷ್ಟು ರಜೆಯಿದೆ ಎಂದಾಗಲೀ ಒಬ್ಬರು ಇದನ್ನು ಕೈಕೊಳ್ಳಬಾರದು.

ಈಗಿನ ಕಾಲದಲ್ಲಿ ಒಬ್ಬನು ಒಂದು ಯೂನಿವರ್ಸಿಟಿ ಡಿಗ್ರಿ ಅಥವಾ ಡಿಪ್ಲೋಮಾ ಪಡೆದಿದ್ದರೆ ಸಾಕು. ಶಾಲೆಯಲ್ಲಿ ಒಂದು ಸ್ಥಳವು ಖಾಲಿ ಇದ್ದರೆ ಅದನ್ನು ಅವನಿಗೆ ಕೊಡುತ್ತಾರೆ. ಅವರ ಗುಣ ನಡತೆಗಳನ್ನೇನೂ ಅರಿಯುವುದಿಲ್ಲ. ಅವರ ವಿದ್ಯಾಚಾತುರ್ಯವನ್ನೂ ಪರಿಶೋಧಿಸುವುದಿಲ್ಲ. ಬರೆ ಯೂನಿವರ್ಸಿಟಿ ಪರೀಕ್ಷೆಗಳಲ್ಲಿ ಆದಿಸ್ಥಾನದಲ್ಲಿ ಉತ್ತೀರ್ಣತೆಯನ್ನು ಹೊಂದಿದವರಿಗೆಲ್ಲಾ ಶಿಕ್ಷಣಾಶಕ್ತಿಯು ಇದೆ ಎಂದು ತಿಳಿಯುವುದು ಕೇವಲ ತಪ್ಪು. ಉಪಾಧ್ಯಾಯರ ಪೈಕಿ ಎಷ್ಟೋ ಜನರು ಗುರುಗಳಾಗಲಿಕ್ಕಂತೂ ಅಯೋಗ್ಯರಷ್ಟೇ ಅಲ್ಲದೆ ಶಾಲೆಯ ಆಜುಬಾಜಿಗೆ ಸುಳಿಯಲು ಸಹ ಅಯೋಗ್ಯವಾದ ನಡತೆ, ಸ್ವಭಾವದ ನರಪಿಶಾಚಿಗಳಾಗಿರುತ್ತಾರೆ. ತಾವು ಕಲಿಸತಕ್ಕ ಪಾಠಗಳಲ್ಲೇನೋ ಅವರಿಗೆ ತಕ್ಕ ಮಟ್ಟಿಗೆ ಜ್ಞಾನವಿರಬಹುದು. ಆದರೆ ಮನುಷ್ಯನ ಸರ್ವಮಹತ್ವಕ್ಕೂ ಮೂಲವಾದದ್ದು ನಡತೆ. ಇಂತಹ ಪ್ರಾಮುಖ್ಯ ಗುಣದಲ್ಲಿ ದಾನವರಿಗೂ ಮೇಲೆನಿಸಿಕೊಂಡಿರುವ ನರಾಧಮರು ಎಷ್ಟೋ ಜನರು ಉಪಾಧ್ಯಾಯರ ವೃತ್ತಿಯಿಂದ ಜೀವಿಸುತ್ತಿದ್ದಾರೆ. ಅವರು ತಮಗೂ, ಮುಂದಿನ ಜನಾಂಗಕ್ಕೂ, ತಮ್ಮ ದೇಶಕ್ಕೂ ನ

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೬,೦೧,೭೩೮— ೭—೦
ಏಜಂಟರಿಗೆ ಸಾಲ ಮತ್ತು ಆಸ್ತಿಯ ಒತ್ತೆ	೩೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೧೫೩— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು

೧೯೨೭ ———— ೨೧,೩೫,೨೩೮ ರೂಗಳು.

೧೯೩೭ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೭೫,೯೭,೦೮೦ ರೂಗಳಿಗೆ ಮೇಲೆ

ಪಾವತಿ ಮಾಡಿದ ಕ್ಲೈಮ್ ಹಣ .... ೮೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್.
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.
ಅಫಿಸಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12-5

ಹುವ ಅನರ್ಥವನ್ನು ಇಲ್ಲಿ ಬರೆಯುವುದು ಅನಾವಶ್ಯಕವೂ, ಶಿಷ್ಟ ಸಂಪ್ರದಾಯಕ್ಕೆ ವಿರೋಧವೂ ಆದುದರಿಂದ ಬರೆಯದೆ ವಾಚಕರ ಅರಿಯುವಿಕೆಗೆ ಬಿಡಬೇಕಾಗಿದೆ.

ಮನುಷ್ಯನ ಜೀವಮಾನದಲ್ಲಿ ವಿದ್ಯಾರ್ಜನೆಯ ಸಮಯವೇ ಬಹು ಆನಂದದಾಯಕವಾದ ಸಮಯವೆಂದು ಎಲ್ಲರೂ ಹೇಳುತ್ತಾರೆ. ಆದರೆ ಚೆನ್ನಾಗಿ ಪರಿಶೀಲಿಸಿ ನೋಡಿದರೆ, ಎಲ್ಲಾ ವಿಧ್ಯಾರ್ಥಿಗಳ ಜೀವನವು ಸಂತೋಷಯುಕ್ತವಾಗಿರುವುದಿಲ್ಲ. ಕೆಲವರ ಜೀವನವು ಅತ್ಯಂತ ಶೋಚನೀಯಾವಸ್ಥೆಯಲ್ಲಿರುತ್ತದೆ. ಈಗ ತಾನೇ ಸೂಚಿಸಿದ ಸುಗುಣನಂತಹ ನಿರ್ಭಾಗ್ಯನ ಜೀವನವು, ವಸಂತ ಚಂದ್ರನಂತಹ ಉಪಾಧ್ಯಾಯನ ಆಡಳಿತದಲ್ಲಿ ಅದೆಷ್ಟು ಹೀನಾಯವಾದ ದುರವಸ್ಥೆಯಲ್ಲಿರಬಹುದೆಂಬುವುದು ವಾಚಕರಿಗೇ ತಿಳಿಯುವುದು. ಉಪಾಧ್ಯಾಯರ ಪ್ರೀತಿಗೆ ಪಾತ್ರನಾಗಬೇಕೆಂಬುವುದೇ ಪ್ರತಿ ಒಬ್ಬ ವಿದ್ಯಾರ್ಥಿಯ ಮುಖ್ಯೋದ್ದೇಶವಾಗಿರುತ್ತದೆ. ಇದಕ್ಕಾಗಿ ಅವರೆಷ್ಟೋ ಕಷ್ಟಪಡುತ್ತಾರೆ. ಆದರೆ ಸೌಂದರ್ಯವೂ ಕುರೂಪವೂ ಸಂಪಾದಿಸತಕ್ಕ ವಸ್ತುಗಳಲ್ಲ. ಆದುದರಿಂದ ಎಲ್ಲಾ ವಿದ್ಯಾರ್ಥಿಗಳಿಗೂ ತಂದೆಯಂತಿರತಕ್ಕ ಗುರುವು ಈ ತರಹದ ಮುಖಕಲ್ಪನೆಗಳನ್ನೋ, ಅಥವಾ ಐಶ್ವರ್ಯ ದಾರಿದ್ರ್ಯಗಳನ್ನೋ ಗಣಿಸಿ, ಒಬ್ಬರನ್ನು ಪ್ರೀತಿಸುವುದು, ಮತ್ತೊಬ್ಬರನ್ನು ದೂಷಿಸುವುದೆಂದರೆ, ಇದಕ್ಕಿಂತಲೂ ನೀಚವೂ, ಹೇಯವೂ ಆದ ಕೆಲಸವು ಮತ್ತೊಂದಿರದು. ಕುರೂಪಿಯು, ಅಥವಾ ಬಡವನು, ಆವನೆಷ್ಟೇ ಚತುರನಾಗಿದ್ದಾಗ್ಯೂ ಆ ವನಿಗೆ ಸರಿಯಾದ ಪ್ರೋತ್ಸಾಹವನ್ನು ಕೊಡದೆಯೂ, ಅವನೊಡನೆ ಸರಳವಾಗಿ ವರ್ತಿಸದೆಯೂ, ಐಶ್ವರ್ಯವಂತರ ಮಕ್ಕಳನ್ನು ಸುಲಕ್ಷಣಯುಕ್ತರಾದವರನ್ನೂ, ಹೆಚ್ಚು ಮಹನೀಯರನ್ನೂ ನಿಂದಲೂ, ಸ್ನೇಹಭಾವದಿಂದಲೂ ಕಾಣುವುದು ಮನುಷ್ಯ ವರ್ಗಕ್ಕೆ ಕೇವಲ ಅಯೋಗ್ಯವಾದ ಗುಣಗಳಾಗಿರುತ್ತವೆ. ಅಂತಿರುವಾಗ್ಯೆ ಉಪಾಧ್ಯಾಯರಲ್ಲಿ ಇಂತಹ ಗುಣಗಳಿಗೆ ಎಡೆಯಾದರೂ ಇದೆಯೇ?

ಉಪಾಧ್ಯಾಯನಿಗೆ ಮುಖ್ಯವಾಗಿ ಬೇಕಾದ ಗುಣವೇ ತನ್ನ ಶಿಷ್ಯರಲ್ಲಿ ಪ್ರತಿಯೊಬ್ಬರನ್ನೂ ಏಕ ರೀತಿಯಿಂದ ಕಾಣತಕ್ಕದ್ದು. ನೆಂಟಸ್ತನ, ಸ್ನೇಹ, ಸೌಂದರ್ಯ, ಐಶ್ವರ್ಯ ಇವುಗಳು ನಿಜವಾದ ಗುರುವಿನಿಂದ ಎಣಿಸಲ್ಪಡತಕ್ಕ ಗುಣಗಳೇ ಅಲ್ಲ. ಚತುರನಾದ ವಿದ್ಯಾರ್ಥಿಯು ಉಪಾಧ್ಯಾಯರ ಹೆಚ್ಚಿನ ಪ್ರೀತಿಗೆ ಪಾತ್ರನಾಗುವುದೇನೋ ಸಹಜ. ಇದು ಇತರ ವಿದ್ಯಾರ್ಥಿಗಳಲ್ಲಿ ಸ್ಪರ್ಧೆಯನ್ನೂ, ಹೆಚ್ಚಿನ ನಿಗವನ್ನೂ ಪ್ರೋತ್ಸಾಹಿಸುತ್ತದೆ. ಆದರೆ ದಡ್ಡರನ್ನು ಅವನೆಂದೂ ದೂಷಿಸಬಾರದು ಮನುಷ್ಯರಲ್ಲಿ ಸಾಮಾನ್ಯವಾಗಿ ಎಲ್ಲರಿಗೂ ಏಕ ರೀತಿಯ ಜ್ಞಾನಶಕ್ತಿಯನ್ನು ದೇವರು ಕೊಟ್ಟಿರುವಾಗ್ಯೆ. ಒಬ್ಬನನ್ನು ದಡ್ಡನೆಂದು ಹೇಳುವುದರಲ್ಲಿ ಅರ್ಥವೇನಿರುವುದು. ಒಂದು ತರಗತಿಯಲ್ಲಿ ಅನೇಕ ಹುಡುಗರು ದಡ್ಡರಾಗಿದ್ದರೆ, ಅದಕ್ಕೆ ಕೇವಲ ಹುಡುಗರ ಅಜಾಗರೂಕತೆಯೂ, ಸೋಮಾರಿತನವೂ, ಮಾತ್ರ ಕಾರಣಗಳೆಂದು ಹೇಳಲಾಗದು. ಬಹು ಮಟ್ಟಿಗೆ ಉಪಾಧ್ಯಾಯನ ಅಜ್ಞಾನವೂ, ಅಯೋಗ್ಯತೆಯೂ ಕಾರಣಗಳಾಗಿರುತ್ತವೆ.

ವಸಂತಚಂದ್ರನಂತಹ ಉಪಾಧ್ಯಾಯನ ಆಡಳಿತದಲ್ಲಿ ಸುಗುಣನಂತಹ ನಿರ್ಭಾಗ್ಯನೂ, ಚಾರುದತ್ತನಂತಹ ಸುಭಾಗ್ಯನೂ, ಇಬ್ಬರು ನಾಶವಾಗಿ ಹೋಗುತ್ತಾರೆ. ಕ್ಲಾಸಿನಲ್ಲಿ ತನಗೆ ಸಲ್ಲಬೇಕಾದಷ್ಟು ಪ್ರೋತ್ಸಾಹವು ದೂರೆಯದ್ದರಿಂದಲೂ, ಸಲ್ಲಬೇಕಾಗಿದ್ದಕ್ಕಿಂತಲೂ ಹೆಚ್ಚಾದ ಮರ್ಯಾದೆಯು ಅಯೋಗ್ಯರಿಗೆ ಸಲ್ಲುತ್ತಿರುವುದನ್ನು ಕಾಣುವುದರಿಂದಲೂ, ಸುಗುಣನಂತಹ ವಿದ್ಯಾರ್ಥಿಗಳು ಭಗ್ನಮನೋರಥರಾಗಿ ಹಾಳಾಗಿ ಹೋಗುತ್ತಾರೆ. ಹಾಗೆಯೇ ಚಾರುದತ್ತನಂತಹ ಸೌಭಾಗ್ಯನು ಸಹ ತಾನು ಕಷ್ಟಪಡದಿದ್ದರೂ, ತನಗೆ ಜಯವಿದೆ ಎಂಬ ಧೈರ್ಯದಿಂದ ಕೆಲಸ ಮಾಡದೆ ಸೋಮಾರಿಯಾಗಿ ಹಾಳಾಗುತ್ತಾನೆ. ಇಷ್ಟೆಲ್ಲಾ ಅನಾಹುತಕ್ಕೂ ಅಯೋಗ್ಯರಾದ ಕೆಲವು ಗುರುಗಳೇ ಕಾರಣರಲ್ಲವೇ?

ಸರೇಪ.]

ಕಥೆ, ಕಾದಂಬರಿ, ವಿಶೇಷ ವರ್ತಮಾನಗಳನ್ನು ಓದುವಿರಿ

" ಕೊಡಗು "

ಪತ್ರಿಕೆ ಮತ್ತು ಚಂದಾ ೬೭೮.

ಶ್ರೀ ರಾಮಕೃಷ್ಣ ಪರಮಹಂಸರು.

ಲೇಖಕ:-ಎಂ. ಎಸ್. ಅನಂತಪದ್ಮನಾಭರಾವ್.

ಗತಿ ೬.

(ಕಳೆದ ವಾರದಿಂದ ಮುಂದುವರಿದುದು)

ಜ್ಞಾನ ರವಿ ಪ್ರಜ್ವಲಿಸಿ ಉರಿಯುತಿಹನಿವನೊಳಗೆ
ಸುಜ್ಞಾನ ಸೂರ್ಯ ಪ್ರಕಾಶಿಸುವ ಪರಮಾತ್ಮ
ನಂ ಕಾಣಬಿಹ ದಿವಸವಿವನಮುಖ ದರ್ಶನವ
ಮಾಡಲಾಹುದೆ ಎನಗೆ, ಧನ್ಯನೀ ಬಾಲಕನು,
ಇವನೊಳಿಹ ಪರಮಾತ್ಮನೆನ್ನ ಸೆಳೆದೊಯ್ಯುತಿಹ
ನೆಂಬುವರು ಯೋಗಿಗಳು; ಬಡತನದ ಬೇಗೆಯಿಂ
ಬೇಯುವ ನರೇಂದ್ರನಂ ಮಾತೃ ಸನ್ನಿಧಿಯಲ್ಲಿ
ಕೆಡಹುತ್ತ ಬೇಕಾದ ವರಗಳನು ಯಾಚಿಸೆನೆ,
ಪಾವನದ ವೈರಾಗ್ಯ, ಸುಜ್ಞಾನ ಭಕ್ತಿಗಳ
ಯಾಚಿಸಿದರಾ ನರೇಂದ್ರರು ನಿಂದು ಲೋಕದೀ
ದಾರಿದ್ರ್ಯ ಹರಿಸೆಂದು ಕೇಳಲ್ಕೆ ನಾಚಿದರು.
ಸಾರ್ವಭೌಮನ ಸೇರುತೆರಡು ಬದನೇಕಾಯಿ
ತಾರೆಂದು ಕೇಳುವರೆ? ಮಾತೆಯಂ ಕಂಡುದಕೆ
ನಿಶ್ಚಲಲ್ಲದ ಸುಖವ ಕೇಳ್ವುದಕೆ ಮನ ಬಹುದೆ?
ರಾಮಕೃಷ್ಣರು ಇದಕೆ ಸಂತೋಷಗೊಳ್ಳುತಲಿ,
ಬಡತನವ ಪರಿಹರಿಸಿ ಮತ್ತೊಮ್ಮೆ ಲೋಕದೀ
ತಮಹರಿಸಿ ಬೆಳಕೀವ ಸೂರ್ಯನಂ ಸೆಳೆಯುತ್ತ,
ಅಣಿಮಾದಿ ಸಿದ್ಧಿಗಳ ಕೊಳ್ಳೆನಲು, ಸಿದ್ಧಿಗಳು
ಬೇಡೆನಗೆ, ಪರಮಾತ್ಮನಂ ಕಾಣ್ಬ ಪಥದೋರಿ
ಕಾವುದೆನೆ, ಹಲವು ವಿಧದಿಂದವರ ಪರಿಕಿಸುತ
ದೃಢತೆಯನು ತಿಳಿದು ಸಂತೋಷದಲಿ, ನನಗಾಗಿ
ಜಗದೊಳಿರು, ನಾನಿರುವ ಪರ್ಯಂತವಿವರಿಂದ
ವಿಮುಖನಾಗದಿರೆಂದು ಹೇಳಿದರು, ನಿನ್ನೊಳಗೆ
ನೋಡೆಂದು ದೇವರಂ ತೋರಿದರು: ತೃಣವಣುವು
ದೇವರೆಂದವರು ತೋರುತಲಾಗ, ಲೋಕದಲಿ
ದೇವರಲ್ಲದೆ ಬೇರೆ ವಸ್ತುವಿಲ್ಲೆಂದವರು
ತೋರಿದರು–ಇಂತವರು ಶಿಷ್ಯರೊಳಗಗ್ಗಳನ,
ಮಾನವರೊಳುತ್ತಮನ, ಯೋಗಿಗಳ ಪಾವನನ
ಬೆಳೆಸಿದರು, ಭೇದಗಳನೊಡೆಯುತ್ತ ಸರ್ವಾತ್ಮ
ಲೀಲೆಯನು ಬೋಧಿಸಿ ನರೇಂದ್ರನಂ ತಮಗಿಂತ
ಮಿಗಿಲಾದ ಮತಿಯಿತ್ತು ಲೋಕವನ್ನುದ್ಧರಿಸಿ
ಕೃತಕೃತ್ಯರಾದರು ಋಷಿಯು, ಮೌನವಂ ತಾಳಿದರು.
ನಿನ್ನ ನೋಡುವುದೆನ್ನ ಕಣ್ಗಳಿಗೆ ಸವಿ ಹಬ್ಬ,
ಎನ್ನ ಪ್ರತಿ ಬಿಂಬವನೆ ನಿನ್ನೊಳಗೆ ಕಾಣುವೆನು,
ಎನಗು ನಿನಗುಂ ಭೇದವಿಲ್ಲನೀ ಲೋಕದಲಿ,
ನಾನು ನೀನೆಂಬುವುದೇ ಮಾಯೆಯುಂದರಿಯುವುದು,
ನಿನ್ನೊಳಿದ ಕಾಣದಿಹ ಘಳಿಗೆಯೊಳಗೀ ರೂಪ
ನೋಡಲಾಗದು ಕೇಳು–ನೀನಿರುವ ತಾಣದಲಿ
ನಿಲ್ಲಲಾಗುವುದಿಲ್ಲ–ನೀನಾತ್ಮನಾಗಿರಲು,
ನೀಂ ದೇವನಾಗಿರಲು ನಿನ್ನ ನೋಡುವ ಬಯಕೆ
ಪೆರ್ಚುತಿರೆ, ನೀನು ಮರೆಯಾಗಿರಲು ಮನ ಕುದಿದು
ಬಿಸಿಯಾಗಿ ಕಾಯುವುದು: ಇದಕಾಗಿ ಹುಡುಕುತಲಿ
ನೀನಿರುವ ತಾಣವನು ಸೇರುವೆನು, ನೋಡುವೆನು.
ಆದರಿವರೀ ಪ್ರೀತಿ ಮರ್ಮವುಂ ಗೂಢವುಂ
ಅವರೊಬ್ಬರರಿವರೀ ಬಗೆಯಿಂದ ಸರ್ವರಂ
ಪ್ರೀತಿಸುವುದಿನ್ನಿತರ ಮಾನವರಿಗೆಲ್ಲಿಯದು
ಸಾಧ್ಯವೈ? ಲೋಕನೀ ಎದ್ದೇಳು, ಯೋಗಿಗಳ
ಘರ್ಜನೆಯನಿನ್ನೊಮ್ಮೆ ಸರ್ವರೊಳು ಮೊಳಗು ಬಾ.
ಇಂತಿರುವ ಸಮಯದಲಿ, ಗುರುವರರ ಸೇವೆಯಲಿ
ದಿವಸಗಳ ಸವೆದಿದ್ದ ಹೃದಯ ಮನ ಮಥಿಸದೆಯೆ,
ಹೆಮ್ಮೆಯಲಿ ಕಾಲಿಡುತ, ದಕ್ಷಿಣೇಶ್ವರವನ್ನು
ತೊರೆಯುತ್ತ ಬೇರೆಡೆಗೆ ಸಾಗಿದನು ಹೊರ ಹೊರಟು
ಹಾರಿದನು:

ಪರಮಾತ್ಮನಂ ಕಾಣ್ಬ ಬಾಲಕರು

ದಿನ ದಿನಕೆ ಬಹು ಸಂಖ್ಯೆಯಿಂ ಜನರು ಸೇರಿದದಲಿ,
ತಾರಕ, ಹರೀಶ, ಭವನಾಥ, ಬಲರಾಮ,
ನಿತ್ಯಗೋಪಾಲರಾ ಋಷಿಯಡಿಯ ಪೂಜಿಸುತ
ಪರಮ ಬಂಧುವು ದೇವನೆಂದಕ್ಕುಳ ಭಕ್ತಿಯಲಿ
ಕಾಣುವುದೆ ತಮಗೆಂದು ತಿಳಿದರಿವರೆಲ್ಲರುಂ.
ನಿತ್ಯ ಸಿದ್ಧನು ಬಾಬುರಾಮನೀಶ್ವರ ಕೋಟಿ,
ಋಷಿ ನರೇಂದ್ರರಿಗಿರುವ ಬಾಂಧವ್ಯಮಂ
ಬಾಬುರಾಮನು ತಿಳಿಯುತನುಭವದ ಹರ್ಷಿಸಿದ:
ಬಂದರು ನಿರಂಜನ ಮಹೇಂದ್ರನಾಥರು ಭರದಿ,
ನನ್ನೊಳಿಹ ತಿಳುವಳಿಕೆ ಸರಿಯೆಂದು ತಿಳಿಯುವುದೆ
ತಪ್ಪಹುದು–ನಮ್ಮನ್ನೆ ನೊವಲಾಗಿ ತಿದ್ದುತಲಿ,
ನಮ್ಮ ಹಾದಿಯ ಸುಗಮ ಮಾಡುತಲಿ ಭಕ್ತಿಯಿಂ
ಓದುತಲಿ, ಕೇಳುತಲಿ, ಹಾಡುತಲಿ, ನೋಡುತಲಿ,
ಪರಮಾತ್ಮನನುಭವವ ಪಡೆಯುತಲಿ, ಸಾಧುಗಳ
ಗೋಷ್ಠಿಯೊಳು ಸಂಚರಿಸಿ, ನಿತ್ಯ ಕರ್ಮದೊಳಡಗಿ
ಮನವ ತಿರುಗಿಸಲತ್ತ, ಹಾಲು ನೀರಿನ ಬಗೆಯ
ನೂಕುತಲಿ, ಹಾಲುಬೆಣ್ಣೆಯೊಲಿದ್ದು ಕಾಣುವುದು
ಸತ್ಯವನು; ಜೀವನದ ಕೊನೆಯಾಗದ್ಯೆ ಧನವು,
ಮದುವೆಯೊಡರು ಸತಿಯು ಮನವ ಸೆಳೆದೊಯ್ಯುತಲಿ
ಅವನ ಚಿತ್ತದೊಳಿರಿಸಿ ಸಾಧಿಸೆಂದರು ಯತಿಯು.
ಕಂಡರೀಶ್ವರಚಂದ್ರ ವಿದ್ಯಾಬ್ಧಿಯಂ ಪದೆದು,
ಶರ್ಕರಾಚಲದಿಂದಲಣುವ ತೆಗೆಯುವುದಿರುವೆ
ಯದರಂತೆ ಬ್ರಹ್ಮನಂ ತಿಳಿಯುವುದು ದುಸ್ಸಾಧ್ಯ,
ಅರಿತವನು ಮೌನನಾಗುವ ಜಗಕೆ, ಬಾರನೈ,
ಕೇಶವನ ಮರಣದಿಂ ನೊಂದರಾ ಋಷಿವರರು
ಮಾತೆಯಾಣತಿಯಂತೆ ಭಕ್ತರಾಗಿಯೆ ನಿಂದು
ಲೋಕವನ್ನುದ್ಧರಿಪ ಕಾರ್ಯದಲಿ ತೊಳಲಿದರು.
ಪ್ರಾಣ ಕೃಷ್ಣನು, ಅಧರ, ತಾರಕರು ಗುರುಗಳಲಿ
ಸೇವೆಯಂ ಮಾಡಿದರು, ತಂದೆ ತಾಯ್ಗಳು ತಮ್ಮ
ಮಾರ್ಗದಲಿ ಬಂದರಾ ನಿತ್ಯ ಮಾತೃ ವಚನವುಂ
ಬಿಡಬಹುದು ಪೋಳ್ಗಳಿದು ಸಾಧನೆಯ ಮಾಡುವುದು,
ಇನ್ನಿತರ ವಿಷಯದಲಿ ಮೀರಬಾರದು ನುಡಿಯ.
ಪ್ರಹ್ಲಾದ ಭರತಧೀವರರು ತಂದೆ ತಾಯಿಗಳ
ಮಾತುಗಳ ಮೀರಿದರು ದೇವ ದರ್ಶನಕಾಗಿ,
ಗೋಪಿಯರು ಕೃಷ್ಣನನ್ನೊಲಿಸಲ್ಕೆ ಪತಿವಚನ
ಮಂ ಮೀರಿ ಸುಖಗಾಣುತಾನಂದವುಂ ಪಡೆದ
ರಾ ವಿಭೀಷಣ ಹಿರಿಯ ಸೋದರನ ತೊರೆದ ರಾ
ಮನ ಚರಣ ಸೇವೆಯಂ ಮಾಡಲ್ಕೆ, ಲೋಕದಲಿ
ಪರಮಾತ್ಮ ಚಿಂತನೆಯೆ ಪಾವನವು–ದರ್ಶನವು
ಫಲವೆಂದು ಕಲಿಸಿದರು.

ಸಂಸಾರಿ ಸನ್ಯಾಸಿ

ದುರ್ಗಾಚರಣನಾಗ, ಸತ್ಯದೊಳ್ ಪ್ರೀತಿಯಿಂ,
ತ್ಯಾಗದೊಳು ಸುಖವುಂಡು, ಯೋಗದಲಿ ಸವಿಗಂಡು,
ಭೂತ ದಯೆಯಿಂ ನಿಜವನರಿಯುತ್ತಲೆಲ್ಲವುಂ
ಪರಮಾತ್ಮನಾಣತಿಯು, ಅವನಾಜ್ಞೆಯಿಲ್ಲದೆಯೆ
ಕಾರ್ಯವೊಂದಾಗದೆಂದರಿವರದ ಮರ್ಮವುಂ,
ಸಾಧನೆಯ ಮಾರ್ಗದಲಿ ರಾಮಕೃಷ್ಣರ ಕಂಡು,
ಚರಣ ರಜವುಂ ಪೊತ್ತು ಗುರು ಸೇವೆಯಂ ಮಾಡಿ,
ಲೋಕದೀ ಕಟ್ಟುಗಳನೆಲ್ಲವುಂ ಗಂಗೆಯೊಳು
ಮುಳುಗಿಸುತ, ನಿಜವಾದ ಸಾಧುಗಳು ದರ್ಶನವ
ನೀಡುತಿರೆ ದೇಹಾಭಿಮಾನವುಂ ಹರಿದೊಗೆದು
ಉರಿಯ ಬೆಂಕಿಯ ತೆರದಿ ಸುಜ್ಞಾನ ಜ್ಯೋತಿಯಲಿ
ಬೆಳಗಿದನು ಗುರುವನುಗ್ರಹ ಬಲದಿ.

ನಂಬುಗೆಯು

ಸಾಧನ ಸಹಾಯಕವು, ನಿನ್ನ ಮೋಕ್ಷಕೆ ನಾನು
ಹೊಣೆಯೆನ್ನುತ ಗಿರೀಶಚಂದ್ರನಂ ಸಲಹಿದರು.
ಹಲವು ನಾಟಕಗಳನು ನೋಡುತಲಿ, ಭಕ್ತರಾ
ವೇಷಗಳ ಮಾತುಗಳ ನೋಡುತಲಿ ಕೇಳುತಲಿ
ತನ ಯಾದಿ ಹೊಂಪುಳಿಯ ಪಡೆದರಾ ಋಷಿವರರು.
ಒಂದು ದಿನ ಹರಿಚಿಂತನೆಯ ಭರದಿ ಮರವೆಯಲಿ
ಯತಿವರ್ಯ ಬಿದ್ದು ಮೊಣ ಕೈ ಮುರಿದು–ನೋವಾಗಿ
ಬೇನೆಯಲಿ ನರಳಿದರು ತಾಯಿಯಪ್ಪಣೆಯಂತೆ.
ದೇವೇಂದ್ರ ಕಾಳಿಪಾದರು ಶರತ್ ಶಶಿ ತುಲಸಿ
ಹರಿನಾಥ ಗಂಗಾಧರ ಹರಿ ಪ್ರಸನ್ನ ಕಾ
ಳಿ ಪ್ರಸಾದ ಸುಬೋಧರಂ ಕರೆದು ಮನ್ನಿಸುತ
ಸುಜ್ಞಾನ ಸುಧೆಯುಣಿಸಿ ಜೀವನವ ನಡೆಸಿದರು.
ತರ್ಕ ಚೂಡಾಮಣಿಯು ಶಶಿಧರನ ಬಳಿಸಾರಿ
ಭಗವಂತನಿರವನ್ನು ಹೇಳಿದರು, ಪರಿಮುವುದ
ಕಿಂ ಮುಗಿಲು ಕೇಳುವುದು, ಮಿಗಿಲದಕೆ ನೋಡುವುದು,
ಅನುಭವವು ಸರ್ವೋತ್ತಮವು ಜಗದೊಳೆಂದಲ್ಲಿ
ಸಾರಿದರು.

ಬಂಕಿಮರ ಸಂಗದಲಿ ನಲಿದಾಡಿ

ಭಗವಂತ ದೂರವಿರೆ ಕಪ್ಪಾಗಿ ತೋರುವನ ,
ಆಗಸದೊಳಿಹ ಸೂರ್ಯ ತೋರುವನು ಕಿರಿದಾಗಿ
ಇದು ನಿಜವು– ಅವರಂತೆ ದೇವರಂ ತಿಳಿದವಗೆ
ಅವನ ವರ್ಣದ ಬಗೆಯು ಹೊಳೆಯುವುದು ತಾನಾಗಿ.
ಹಸಿಯ ಮಣ್ಣಿನ ಮಡಕೆ ಬೇಯಿಸಿದ ಮಡಕೆಗಳ
ದನ ತುಳಿದು ಮಡಿಯಾಗೆ, ಬೇಯಿಸಿದ ಮಡಿಕೆಗಳ
ನೊಗೆಯುತಲಿ, ಹಸಿದಾದ ಮಡಕೆಗಳ ಮತ್ತೊಮ್ಮೆ
ಸರಿಮಾಡಿ ಬೇಯಿಸುವ ಕುಂಬಾರನವರಂತೆ
ಆತ್ಮನಂ ತಿಳಿದಿರುವ ಮಾನವರ ನಿಲ್ಲಿಸುತ
ಸಾಧನೆಯನರಿದಿಹ ಮನುಜರಿಗೆ ಮತ್ತೊಮ್ಮೆ
ಜನ್ಮಮನ್ನೀಯುತ್ತ ಕಳುಹುವನು ಪರಮಾತ್ಮ.
ಪ್ರಕೃತಿಯಿಲ್ಲದೆ ಪುರುಷ, ಪುರುಷನಿಲ್ಲದೆ ಪ್ರಕೃತಿ
ಇರಲಾರದೆಂಬುದನು ಹೇಳಿದರು ಬಹು ವಿಧದಿ.
ಮೊದಲು ದೇವರ ತಿಳಿದು ಮತ್ತೆ ಸೃಷ್ಟಿಯ ತಿಳಿಯು
ವುದು ಸರಿಯು; ನಾ ಕೊಡುವೆನೆಂಬಹಂಕಾರದಲಿ
ಕೊಡಬಾರದೆಂಬುದನು ತಿಳಿಯ ಹೇಳಿದರವರು.
ಬಂದ ಭಕ್ತರ ಪಡೆಯ ಮನ್ನಿಸುತ ಪರಮಾತ್ಮ
ದರ್ಶನದ ಬಗೆಗಳಿಂದಭಯವನ್ನಿತ್ತು ಮ
ನ್ನಿಗಿ ತನ್ನ ನೆನೆದೊಡನೆ ಕಷ್ಟಗಳು ತೊಲಗುವುವು
ತಾನಾಗಿ ಪರಮಾತ್ಮ ಸನ್ನಿಧಿಯು ತೋರುವುದು
ಎಂದಭಯವನ್ನಿತ್ತು ಶಿಷ್ಯರಂ ಸಲಹಿದರು.
ನಾರಿಯರು ಹಂಸರಂ ಪುರುಷರೆಂದರಿದಿಲ್ಲ.
ತಮ್ಮ ಕೂಟದ ಬಳಗವೆಂದವರ ಬಗೆಯುತ್ತ,
ಅವರ ಸನ್ನಿಧಿಯಲ್ಲಿ, ಮಾತೆಯಂತವರನ್ನು
ಪೂಜಿಸುತ; ಮಗನಂತೆ ಗೋಪಾಲ, ರಘುರಾಮ,
ಶ್ರೀಕೃಷ್ಣರಂತವರ ವಾತ್ಸಲ್ಯದಿಂದೊಲಿಸಿ
ಲಾಲಿಸುತ ಪಾಲಿಸುತಲಿಷ್ಟ ಮೂರ್ತಿಯ ಕಂಡು,
ಲೋಕದಲಿ ಜನ್ಮಮನ್ನೀಡಾಡಿ ಮುಕ್ತಿಯಂ
ಸೂರೆಗೊಂಡರು ಬಿಡದ.

ಪುರುಷನೋ? ನಾರಿಯೋ?

ತಮ್ಮಿರದ ಬಗೆಯರಿಯೆನೆಂದವರು ಹೇಳುವರು,
ನಿಮ್ಮ ಪತಿಗಳ ನೀವು ನಿಮ್ಮಿಷ್ಟ ಮೂರ್ತಿಯಂ
ಮಾಡಿಕೊಂಡವರನ್ನು ದೈವ ಸ್ವರೂಪದಲಿ
ನೋಡಿದೊಡೆ ಪತಿಗಳೊಳು ಪರಮಾತ್ಮ ತೋರುವನು
ನೈದೋರಿ, ವಿಧವೆಯರು ಮನದೊಳಾ ಪತಿಮೂರ್ತಿ
ಯಂ ನೆನೆದು, ಅವನೆ ತಾನಾಗುತಲಿ, ತನ್ಮಯದೊ
ಳಾತನಂ ನೋಡಿದೊಡೆ, ಪರಮಾತ್ಮನದರಂತೆ
ಶೀಘ್ರದಲಿ ನೈದೋರಿ ಕಾಯುವನು, ತಪ್ಪಿಲ್ಲ.
ಎನ್ನದೆಂಬುವ ಹಂಗು ಲೋಕದೊಳಗಿಲ್ಲವರ
ಪರಮಾತ್ಮ ತಾನಾಗಿ ಸಲಹುವನು ಕೂಗಿದೊಡೆ,
ಎಂದವರು ಬೋಧಿಸುತ, ಮಗುವಿನಂತಿಹರೊಮ್ಮೆ,
ಮಾತೆಯಾಗುವರೊಮ್ಮೆ, ಗುರುಪೀಠದೊಳಗೊಮ್ಮೆ,
ತಂದೆಯಾಗುವರೊಮ್ಮೆ, ಲೋಕಾತ್ಮ ರೂಪಿನಲಿ
ತಾನೆ ತಾನಾಗುತಲಿ ತೋರುವರು ಮುನ್ನೊಮ್ಮೆ.
ಸಾಮಾನ್ಯ ಮನುಜನೊಲು ತೋರುವರು ಕಡೆ ಸಲೆ;
ಕೈವಲ್ಯ ಮಾರ್ಗದಲಿ ಇದುವೆ ಭಕ್ತರ ಮಾಟ.

[ಶೇಷ.]

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿ.

ಈ ವಾರ ಇಲ್ಲಿ ಏಲಕ್ಕಿ ಕ್ರಯ ಮಣಕ್ಕೆ ರೂ. 23 ಇರುವದಾಗಿ ತಿಳಿಯುತ್ತೇವೆ.

ಚೀಫ ಕಮಿಷನರವರು ಈ ತಾ. 19 ರಲ್ಲಿ ಬೆಂಗಳೂರಿನಿಂದ ಮಡಿಕೇರಿಗೆ ಬಂದಿರುವರು.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ 29 ರಲ್ಲಿ ಮಡಿಕೇರಿಯಲ್ಲಿ ಬ್ಯಾಂಕಿನ ಆಫೀಸಿನಲ್ಲಿ ನಡೆಯಲಿಕ್ಕಿದೆ

ಮೇ ಕೋದಂಡ ಸೋಮಣ್ಣನವರು ರಜೆಯರಾದ ನಂತರ ಕೊಡಗು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ ಆಫೀಸರ ಹುದ್ದೆಯು ಈ ತಾ [illegible] ರಿಂದ ವಜಮಾಡಲ್ಪಟ್ಟಿದೆ.

ಕೊಡಗು ನ್ಯಾಯವಿಧಾಯಕ ಸಭೆಯ ಮೀಟಿಂಗು ಈ ತಾ. 26 ನೇ ಬುಧವಾರ ಬೆಳಿಗ್ಗೆ 11 ಗಂಟೆಗೆ ಮಡಿಕೇರಿ ಕೌನ್ಸಿಲ್ ಹಾಲ್‌ನಲ್ಲಿ ಪ್ರಾರಂಭವಾಗುವದು

ಮೂರ್ನಾಡು

ಈ ತಾ 16 ಮತ್ತು 18 ರಲ್ಲಿ ಮೂರ್ನಾಡು ಸುತ್ತ ಮುತ್ತಲು ಒಳ್ಳೇ ಮಳೆ ಬಿದ್ದದೆಯೆಂದು ತಿಳಿಯಬರುತ್ತದೆ

ಕೊಡ್ಲಿಪೇಟೆ

ಕೊಡ್ಲಿಪೇಟೆ ನೋಟಿಫೈಡ್ ಏರ್‍ಯಾದ ಕಮಿಟಿಯ ಪ್ರಥಮ ಮೀಟಿಂಗು ಈ ತಾ [illegible] ರಲ್ಲಿ ವೈಸ್ ಪ್ರೆಸಿಡೆಂಟರ ಅಧ್ಯಕ್ಷತೆಯಲ್ಲಿ ನಡೆಯಿತು.

ವೀರಾಜಪೇಟೆ.

ಈ ತಾ 8 ರಲ್ಲಿ ಮಡಿಕೇರಿ ಹೈಸ್ಕೂಲಿನ ಹಾಕಿ ಟೀಮಿನವರು ವೀರಾಜಪೇಟೆಗೆ ಹೋಗಿ, ಅಲ್ಲಿಯ ಹೈಸ್ಕೂಲಿನ 1 ನೇ ಮತ್ತು 2 ನೇ ಟೀಮುಗಳೊಂದಿಗೆ ಪಂಥಾಟವನ್ನಾಡಿ ಸೋತರಂತಲೂ, ತಾ 9 ರಲ್ಲಿ ದಕ್ಷಿಣ ಕೊಡಗು ಟೀಮಿನೊಂದಿಗೆ ಆಡಿ ಗೆದ್ದರೆಂತಲೂ ತಿಳಿಯಬರುತ್ತದೆ.

ಭಾಗಮಂಡ್ಲ

ಈ ತಾ 17 ರಲ್ಲಿ ನಡೆದ ಕಾವೇರಿ ಜಾತ್ರೆಯಲ್ಲಿ ಹಗಲು ತೀರ್ಥ ಉದ್ಭವವಾದುದರಿಂದಲೂ, ಮಳೆ ಇಲ್ಲದ್ದರಿಂದಲೂ ಯಾತ್ರಿಕರಿಗೆ ಬಹಳ ಅನುಕೂಲವಾಗಿತ್ತು ಈ ವರ್ಷ ಕಳೆದ ವರ್ಷಕ್ಕಿಂತ ಹೆಚ್ಚು ಜನ ಜಂದಣಿ ಇತ್ತು. ತೀರ್ಥ ಬರುವಾಗ ಮಳೆ ಹನಿ ಕೂಡಾ ಬೀಳಲಿಲ್ಲ. ಮಳೆ ಇಲ್ಲದ್ದರಿಂದ ಮಡಿಕೇರಿಯಿಂದ ಭಾಗಮಂಡ್ಲಕ್ಕೆ ಮೋಟಾರು ವಾಹನಗಳ ಪ್ರಯಾಣ ಬಹಳ ಸರಾಗವಾಗಿತ್ತು.

ಬಲಮುರಿ.

ತಾ. 18 ರಲ್ಲಿ ಬಲಮುರಿ ಜಾತ್ರೆಯಲ್ಲಿ ಕುಂಬೆರ ಯುವಕನೊಬ್ಬನು ಕಾವೇರಿ ಹೊಳೆಯನ್ನು ಈಜಿ ದಾಟಲು ಪ್ರಯತ್ನಿಸಿದಾಗ ನೀರಿನ ಸುಳಿಗೆ ಸಿಕ್ಕಿ ಒಂದೆರಡು ಸಾರಿ ಮುಳುಗಿ ಏಳುವಷ್ಟರಲ್ಲಿ ಸಮೀಪವಿದ್ದ ದೋಣಿಯವರು ದೋಣಿಯ ಸಹಾಯದಿಂದ ಅವನನ್ನು ದಡಕ್ಕೆ ತಂದು ಹಾಗೆ ಅವನ ಪ್ರಾಣವನ್ನು ಉಳಿಸಿದರಾಗಿ ತಿಳಿಯಬರುತ್ತದೆ.

ಶನಿವಾರಸಂತೆ.

ಈ ಜನರೇಷನ್ ಏರ್‍ಯಾದಲ್ಲಿ ಮಳೆ ಇಲ್ಲದೆ ಬೆಳೆ ಎಲ್ಲಾ ಒಣಗಿ ಹೋಗಿರುವದರಿಂದ, ಅಲ್ಲಿಗೆ ನೀರಿನ ಸರಬರಾಯಿಯ ಅನುಕೂಲತೆ ಮಾಡಲು ಎಗ್ಸಿಕ್ಯೂಟಿವ್ ಇಂಜಿನೀಯರರು ತಾ. 11-10-38 ರಲ್ಲಿ ತಮ್ಮ ಸಹೋದ್ಯೋಗಿಗಳೊಂದಿಗೆ ಆ ಪ್ರಾಂತವನ್ನು ಸಂದರ್ಶಿಸಿದರೆಂದು ತಿಳಿಯುತ್ತೇವೆ

ಈ ಹೋಬಳಿಯ ಪಟೇಲರುಗಳ ಮೀಟಿಂಗೊಂದು ತಾ 17-10-38 ರಲ್ಲಿ ಶ್ರೀ ಎಚ ಯಂ ಪುಷ್ಪಣ್ಣನವರ ಅಧ್ಯಕ್ಷತೆಯಲ್ಲಿ ನಡೆದು ಗಜಟಿನಲ್ಲಿ ಪ್ರಕಟವಾಗಿರುವ ಪಟೇಲರುಗಳ ಸಂಬಂಧದ ಕರಡು ನಿಬಂಧನೆಗಳನ್ನು ಚರ್ಚಿಸಲಾಯಿತು

ತಾ. 1-11-38 ರಿಂದ 7-11-38 ರ ವರೆಗೆ ಗುಡುಗಳಲೆ ಮೈದಾನಿನಲ್ಲಿ ನಡೆಯುವ ದನಗಳ ಪ್ರದರ್ಶನವನ್ನು ತೆರೆಯುವ ಕಾರ್ಯ ನಡಿಸಲು ಆ ಕಮಿಷನರಾದ ಶ್ರೀ ಯಂ ಯಸ್. ಮುದ್ದಣ್ಣನವರು ಒಪ್ಪಿದವರೆಂದು ತಿಳಿಯಬರುತ್ತದೆ.

ಬೆಂಗಳೂರು ಸೆಂಟ್ ಜೋಸೆಫ್ ಹೈಸ್ಕೂಲಿನಲ್ಲಿ 5 ನೇ ಫಾರಮಿನಲ್ಲಿ ಓದುತ್ತಿದ್ದ ಮದ್ದಂಡ ಯನ್ ಚಂಗಪ್ಪನವರು ಈ ತಾ 6 ರಲ್ಲಿ ಬೆಂಗಳೂರಿನಲ್ಲಿ ದೈವಾಧೀನರಾದರೆಂದು ತಿಳಿದು ವ್ಯಸನಪಡುತ್ತೇವೆ

ಹಿಂದೂ ದೇಶ.

1941 ನೆಯ ಇಸವಿಯೊಳಗಾಗಿಯೇ ಹಿಂದೂ ದೇಶದಲ್ಲೇ, ದೇಶಕ್ಕೆ ಬೇಕಾಗುವಷ್ಟು ಮೋಟಾರು ಗಾಡಿಗಳು ತಯಾರಾಗುವವೆಂದು ಊಹಿಸಲಾಗಿದೆ.

ಗೆರಸಪ್ಪೆಯ ಜಲಪಾತವನ್ನು ವಿದ್ಯುತ್ತುತ್ಪಾದಕ ಸ್ಥಾನವನ್ನಾಗಿ ಮಾರ್ಪಡಿಸುವ ಹಂಚಿಕೆಯು ಮುಂಬಯಿ ಸರಕಾರಕ್ಕಿದೆ ಅತ್ತ ಮೈಸೂರು ಸರಕಾರವೂ ಇದೇ ಯೋಜನೆಯಲ್ಲಿದೆ

ರಾಜಮಹೇಂದ್ರಿಯಲ್ಲಿ ಆರೋಗ್ಯ ಶಾಖೆಯ ಮಂತ್ರಿಗಳಾದ ಡಾ ಟಿ. ಎಸ್. ಎಸ್ ರಾಜನ್‌ರವರು ಭಾಷಣ ಕೊಡುತ್ತ ಹೊಗೆಸೊಪ್ಪಿನ ವ್ಯಾಪಾರದ ಮೇಲೆ ತೆರಿಗೆ ಹೇರಿ, ಪಾನನಿಷೇಧದ ನಷ್ಟವನ್ನು ಭರ್ತಿಮಾಡಿಕೊಳ್ಳುವ ಯೋಚನೆ ಇರುವುದಾಗಿ ಸೂಚಿಸಿದರು

ಟ್ರಾವಂಕೂರ್ ಸಂಸ್ಥಾನ ಕಾಂಗ್ರೆಸ್ಸಿನ ಆ ನೇ ಅಧ್ಯಕ್ಷರಾದ ಶ್ರೀಯುತ ಕೆ ಪಿ. ರಾಮನ್ ಪಿಳ್ಳೆಯವರು ಮದ್ರಾಸಿನಿಂದ ತಾ 14 ರಲ್ಲು ತ್ರಿವೆಂಡ್ರಮ್ಮಿಗೆ ಬಂದ ಕೂಡಲೇ ರೈಲ್ವೆ ಪೋಲೀಸರು ಅವರನ್ನು ಸೆರೆಹಿಡಿದು ಟ್ರಾವಂಕೂರ್ ಪೋಲೀಸರ ಸ್ವಾಧೀನ ಮಾಡಿದರು

ಅಸ್ಸಾಂ ಮಂತ್ರಿಮಂಡಲದ ಇಬ್ಬರು ಮಿನಿಸ್ಟರರಾದ ಮಿ ಫಕ್ರುದ್ದೀನ ಅಲಿ ಅಹಮ್ಮದರವರೂ, ಖಾನ್ ಬಹದೂರ್ ಮೌಲ್ವೀ ಮಹಮ್ಮದಾಲಿಯವರೂ ರಾಜಭಕ್ತಿಯ ಪ್ರಮಾಣವನ್ನು ಕೈಕೊಂಡಿರುವರು ಆ ಮಂತ್ರಿಮಂಡಲದ ಸಂಖ್ಯೆಯನ್ನು 10 ಕ್ಕೆ ಹೆಚ್ಚಿಸಬಹುದೆಂದು ವಾರ್ತೆ

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಸುಬ್ರಮಣ್ಯ ಗ್ರಾಮದಲ್ಲಿ ದನಗಳ ಪ್ರದರ್ಶನವು ನವಂಬರ ತಾ. 7 ರಿಂದ 21 ರ ವರೆಗೆ ಅಂದರೆ ಕಾರ್ತಿಕ ಪೌರ್ಣಮಿಯಲ್ಲಿ ಪ್ರಾರಂಭವಾಗಿ ಅಮಾವಾಸ್ಯೆಯಲ್ಲಿ ಅಂತ್ಯವಾಗುವದೆಂತಲೂ ಅಲ್ಲಿ ಪ್ರದರ್ಶನಕ್ಕೆ ತರಲ್ಪಡುವ ದನಗಳಿಗೆ ತಲಾ ಎರಡಾಣೆ ಫೀಜು ವಸೂಲ್ಮಾಡಲ್ಪಡುವದೆಂತಲೂ ತಿಳಿಸುತ್ತಾರೆ

ಭಾರತ ಉಪ ಮಂತ್ರಿಗಳಾದ ಜನರಲ್ ಮ್ಯುರ್‌ಹೆಡ್‌ರು ಈ ತಿಂಗಳ ಕೊನೆಯಲ್ಲಿ ಮಹಾತ್ಮ ಗಾಂಧಿಯವರನ್ನು ಸರಹದ್ದು ಪ್ರಾಂತ್ಯದಲ್ಲಿ ಕಾಣತಕ್ಕವರಿದ್ದಾರೆ. ಮಹಾತ್ಮರು ಇವರನ್ನು ಕಾಣಲು ಒಪ್ಪಿಕೊಂಡಿದ್ದಾರಂತೆ. ಭೆಟ್ಟಿಯ ವೇಳೆ ಮತ್ತು ತಾರೀಕು ಹಿಂದಿನಿಂದ ಗೊತ್ತುಮಾಡಲ್ಪಡುವವು. ಮ್ಯುರ್‌ಹೆಡ್‌ರು ಪ್ರದೇಶದಲ್ಲಿ ಸಾಕಷ್ಟು ದಿವಸಗಳವರೆಗೆ ಇರತಕ್ಕವರಿದ್ದಾರೆಂದು ತಿಳಿಯುತ್ತದೆ

ಕಲಕತ್ತೆಯ ಸುಪ್ರಸಿದ್ಧ ಈಜುಗಾರ ಪಿ ಕೆ ಘೋಷರವರು ಕಳೆದ ರವಿವಾರ ದಿನ ಮುಂಬಯಿಯಲ್ಲಿ ತಮ್ಮ ಈಜಾಟದಲ್ಲಿಯ ಸಾಹಸವನ್ನು ತೋರಿಸಿರುವರು ಘೋಷರು ಟ್ರಾಂಬೆಯಿಂದ ಬೆಳಿಗ್ಗೆ 11 ಘಂಟೆಗೆ ಈಜಾಡಲು ಆರಂಭಿಸಿ ಗೇಟ್‌ವೇ ಆಫ್ ಇಂಡಿಯಾಕ್ಕೆ 3-10 ಗಂಟೆಗೆ ತಲುಪಿದರು ಟ್ರಾಂಬೇಯಿಂದ ಗೇಟ್‌ವೇ ವರೆಗೆ 11 ಮೈಲು ಅಂತರವಿದೆ ಇಷ್ಟು ಅಂತರವನ್ನು ಒಂದೇ ಸವನೆ ಈಜಾಡಿದರು.

ವಿದೇಶ

ಆರಸೇ [illegible] ಚಕ್ರವರ್ತಿಗಳು ತಮ್ಮ ಪಟ್ಟಾಭಿಷೇಕ ಮಹೋತ್ಸವಕ್ಕಾಗಿ ಬರುವ ಬೇಸಿಗೆಯಲ್ಲಿ ಕೆನಡಾ ಪ್ರಾಂತಕ್ಕೆ ಚಿತ್ತೈಸುವರು

ಸ್ಪೇಯಿನಿನಲ್ಲಿ ಯುದ್ಧ ನಡೆಸುತ್ತಿರುವ ಪಕ್ಷಗಳೊಳಗೆ ಸದ್ಯದಲ್ಲೇ ಸಂಧಿ ಪ್ರಸ್ತಾಪಗಳು ನಡೆಯುತ್ತಿರುವವೆಂದು ಒಂದು ವದಂತಿ

ಜರ್ಮನಿಯ ಅಧಿಕಾರ ಬಲವನ್ನು ನೋಡಿ ಪ್ರಪಂಚದಲ್ಲಿ ಸರ್ವಾಧಿಕಾರಿಗಳ ಹೆಚ್ಚಳಿಕೆಯನ್ನು ತಡೆಯಲಿಕ್ಕಾಗಿ ಅಮೇರಿಕದ ಸಂಯುಕ್ತ ಸಂಸ್ಥಾನದ ಸರ್ಕಾರವು ಪ್ರಪಂಚದಲ್ಲೇ ಅತೀ ದೊಡ್ಡ ವಿಮಾನಪಡೆ, ನೌಕಾಪಡೆ, ಮತ್ತು ಸೈನ್ಯವನ್ನು ಏರ್ಪಡಿಸಲು ಆಲೋಚಿಸುತ್ತಿದೆಯೆಂದು ತಿಳಿಯಬರುತ್ತದೆ.

ಈ ವರ್ಷ ಜರ್ಮನರ ಐಕ್ಯತೆಯ ಮಹತ್ಕಾರ್ಯವು ಕೈಗೂಡಿತೆಂದು ಸಾರ ಬ್ರುಕೆನಿನಲ್ಲಿ ಹರ್ ಹಿಟ್ಲರರು ತಮ್ಮ ಭಾಷಣದಲ್ಲಿ ಹರ್ಷೋದ್ಗಾರಗಳನ್ನು ತೆಗೆದರು. ಸ್ನೇಹದ ಒಪ್ಪಂದದ ಸಲುವಾಗಿ ಬ್ರಿಟಿಷ್-ಫ್ರೆಂಚ್ ಸರಕಾರಗಳಿಗೆ ಕೃತಜ್ಞರಾಗಿರಬೇಕಾದುದಿಲ್ಲ ಎಂದು ಹರ್ ಹಿಟ್ಲರರು ಅದೇ ಭಾಷಣದಲ್ಲಿ ಘೋಷಣೆ ಮಾಡಿರುವರು.

ಫ್ರೇಜರ್‌ಪೇಟೆ ಮೀಟಿಂಗು

ತಾ 18-10-38 ನೇ ಮಂಗಳವಾರ ಶ್ರೀಮಾನ್ ಕೆ ಮಲ್ಲಪ್ಪ ಎಂ ಎಲ್ ಸಿ. ಯವರ ಅಧ್ಯಕ್ಷತೆಯಲ್ಲಿ ಫ್ರೇಜರ್‌ಪೇಟೆಯಲ್ಲಿ ನಡೆಸಿದ ಮೀಟಿಂಗಿನ ನಡವಳಿಕೆಗಳು –

1 ಸಿಬ್ಬಂದಿ ಯೋಜನೆಯ ಸಂದರ್ಭದಲ್ಲಿ ಫ್ರೇಜರ್‌ಪೇಟೆಯ ನಾಡು ಕಚೇರಿಯನ್ನು ತೆಗೆದು ಹತ್ತಿರದ ಇತರ ನಾಡುಗಳೊಂದಿಗೆ ಸಂಯೋಜಿಸಲು ಸರ್ಕಾರದವರು ತೀರ್ಮಾನಿಸಿರುವರೆಂದು ಕೇಳಿ ಫ್ರೇಜರ್‌ಪೇಟೆ ಹೋಬಳಿಯ ಎಲ್ಲಾ ಗ್ರಾಮಗಳ ಪ್ರತಿನಿಧಿಗಳಿಂದ ಕೂಡಿದ ಈ ಸಭೆಯು ವಿಷಾದಿಸುತ್ತದೆ ಮತ್ತು ಕೈತದ ದೃಷ್ಟಿಯಿಂದ ಇಂಥಾ ಯೋಜನೆಯನ್ನು ಸಂಪೂರ್ಣ ವಿರೋಧಿಸುತ್ತದೆ

2 ಹೊಸ ಸುಧಾರಣೆಗಳನ್ನು ಅನುಭವಿಸುತ್ತಿರುವ ಪರತ ಬಾಂಧವ [illegible] ಗ್ರಾಮಗಳ [illegible] ಕಾಲದಲ್ಲಿ ಕೇವಲ ಕೆಲವು ಐಶ್ವರ್ಯವಂತರ ಮತ್ತು ಕಾಫಿ ಪ್ಲಾಂಟರುಗಳ ಸೌಕರ್ಯಗಳನ್ನು ಲೆಕ್ಕಿಸದೆ ಈ ಪ್ರಾಂತವನ್ನು ಪ್ರಾಕೃತಿಕ, ಆರ್ಥಿಕ ಮತ್ತು ನಾಗರೀಕ ದೃಷ್ಟಿಯಿಂದಲೂ, ಇಂದಾ ಮಾರ್ಪಾಡಿನಿಂದ ಉಂಟಾಗುವ ನಷ್ಟ ಮತ್ತು ಕಷ್ಟಗಳನ್ನು ಸಹಿಸಲಾರದ ರೈತರ ಸ್ಥಿತಿಯನ್ನು ಸರ್ಕಾರದವರು ಮನಸ್ಸಿಗೆ ತಂದುಕೊಂಡು ಈ ವಿಧವಾದ ಮಾರ್ಪಾಡನ್ನು ರದ್ದು ಮಾಡಿ ಫ್ರೇಜರ್‌ಪೇಟೆಯಲ್ಲಿ ನಾಡು ಕಚೇರಿಯನ್ನು ಎಷ್ಟು ಮಾತ್ರವೂ ತೆಗೆಯಬಾರದೆಂದು ಈ ಸಭೆಯು ಸರ್ಕಾರದವರನ್ನು ಮನವಿ ಮಾಡಿಕೊಳ್ಳುತ್ತದೆ

3 ಇದಕ್ಕೆ ತಕ್ಕ ರೀತಿ ಚಳವಳಿ ನಡಿಸಲಿಕ್ಕೂ, ಕಮಿಷನರ್ ಮತ್ತು ಚೀಫ್ ಕಮಿಷನರವರಿಗೂ ವಿಜ್ಞಾಪನಾ ಪತ್ರಿಕೆಗಳನ್ನು ಕಳುಹಿಸಲಿಕ್ಕೂ, ಅವಶ್ಯವೆಂದು ತೋರಿದ್ದಲ್ಲಿ ನಿಯೋಗ ಘೋಷ್ಠಿ (deputation) ಮೂಲಕ ಈ ಸಂಬಂಧದ ರೈತರ ಕಷ್ಟ ನಿಷ್ಟುರಗಳನ್ನು ಖುದ್ದು ಬಿನ್ನೈಸಿಕೊಳ್ಳಲಿಕ್ಕೂ ಐದು ಜನರಿಂದ ಕೂಡಿದ ಒಂದು ಉಪಕಮಿಟಿಗೆ ಈ ಸಭೆಯು ನಿಶಿಷ್ಟ ಅಧಿಕಾರವನ್ನು ಕೊಟ್ಟಿದೆ.

FOR SALE.

One big storeyed tiled house with a number of tiled out houses and with extensive compound and 1½ acres of Coffee Estate, banana gardens situated in Brahmin Valley and known as extreasurer A P Subbaya's house Rs 6000 or nearest offer acceptable

A. P. Seetharamiah,
Brahmin Valley,
Mercara

4. ಈ ಸಭೆಯ ಎಲ್ಲಾ ನಡವಳಿಕೆಗಳನ್ನು ಸ್ಥಳೀಯ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಲಿಕ್ಕೂ, ನ್ಯಾಯವಿಧಾಯಕ ಸಭೆಯಲ್ಲಿ ಚರ್ಚಿಸಲು ತಕ್ಕ ತೊಂದರೆ ತೆಗೆದುಕೊಳ್ಳಲಿಕ್ಕೂ, ಕಮಿಷನರ್ ಮತ್ತು ಚೀಫ್ ಕಮಿಷನರ್‌ರವರಿಗೆ ಈ ಸಭೆಯ ನಿರ್ಣಯಗಳನ್ನು ತಿಳಿಸಲಿಕ್ಕೂ ಅಧ್ಯಕ್ಷರಿಗೆ ಈ ಸಭೆಯು ಸಂಪೂರ್ಣ ಅಧಿಕಾರ ಕೊಟ್ಟಿದೆ.

5. ಹಿಂದುಳಿದ ಈ ನಾಡಿನ ಕೋರಿಕೆಯನ್ನು ಈಡೇರಿಸಲು ತಕ್ಕ ರೀತಿ ಸಹಕರಿಸುವಂತೆ ಇತರ ಎಲ್ಲಾ ನ್ಯಾಯವಿಧಾಯಕ ಸದಸ್ಯರುಗಳನ್ನು ಈ ಸಭೆಯು ಅತೀ ವಿನಯದಿಂದ ಕೇಳಿಕೊಳ್ಳುತ್ತದೆ.

ಕೆ. ಮಲ್ಲಪ್ಪ,
(ಅಧ್ಯಕ್ಷರು.)

ಮಾದರಿ ಗ್ರಾಮ.

(ಬರೆದು ಬಂದದ್ದು.)

ದಕ್ಷಿಣ ಕೊಡಗಿನ ಅಮ್ಮತ್ತಿ ನಾಡಿನ ಗ್ರಾಮಗಳಲ್ಲಿ ಕಾವಾಡಿ ಅತಿ ದೊಡ್ಡ ಗ್ರಾಮ. ಈ ಗ್ರಾಮವು ನಾಲ್ಕು ಕೇರಿಗಳಾಗಿ ಭಾಗಿಸಲ್ಪಟ್ಟಿದೆ. ಇವುಗಳಲ್ಲಿ ಸರಿಯೇರಿಯು ಒಂದು ಕೇರಿಯಾಗಿದೆ. ಈ ಕೇರಿಯಲ್ಲಿ ಸುಮಾರು 250 ಜನರಿರುವರು. ಅಲ್ಲಿ ನಾಲ್ಕೇ ಕುಟುಂಬಗಳಿದ್ದರೂ ಅವುಗಳಲ್ಲಿ 73 ಭಾಗಗಳಿವೆ. ಇವರೊಂದು ಲಂತಾನ ಸಂಘವನ್ನು ಮಾಡಿಕೊಂಡಿರುವರು. ಈ ಸಂಘವು ಸಹಕಾರಿ ಆಕ್ಟಿನ ಮೇರೆ ರಿಜಿಸ್ಟರ್ ಮಾಡಲ್ಪಡದಿದ್ದರೂ ಇದರ ಕೆಲಸ ಕಾರ್ಯಗಳು ಬಹು ತೃಪ್ತಿಕರವಾಗಿ ನಡೆಯುತ್ತಿವೆ. ಈ ಸಂಘವು 1934ರಲ್ಲಿ ಸ್ಥಾಪಿಸಲ್ಪಟ್ಟು ವರ್ಷೇ ವರ್ಷೇ ಅಭಿವೃದ್ಧಿಯಾಗುತ್ತಾ ಬರುತ್ತಿದೆ. ವರ್ಷಂಪ್ರತಿ ಕೈಲ್‌ಪೊಳ್ದು ಹಬ್ಬ ಕಳೆದ ಕೂಡಲೆ ಈ ಸಂಘದ ಮೆಂಬರುಗಳೆಲ್ಲ ಒಂದು ದಿನ ಸೇರಿ ಅಂದಿನಿಂದ ಪ್ರತಿ ಶನಿವಾರ ಲಂತಾನ ಕಡಿಯಲು ಇವರ ಮೆಂಬರುಗಳೆಲ್ಲರೂ ಒಟ್ಟುಗೂಡುವಂತೆ ನಿಶ್ಚೈಸುವರು. ಶನಿವಾರ ಬೆಳಿಗ್ಗೆ 9 ಗಂಟೆಗೆ ಲಂತಾನ ಕಾಡು ಕಡಿಯಲಿಕ್ಕಿರುವ ಸ್ಥಳದಲ್ಲಿ ಇವರೆಲ್ಲರೂ ಸೇರಿ ಸೆಕ್ರೆಟರಿಯವರು ನೆರೆದಿರುವ ಮೆಂಬರುಗಳ ಹಾಜರಾತಿಯನ್ನು ರಿಜಿಸ್ಟರಿನಲ್ಲಿ ಗುರ್ತಿಸುವರು. ಕೂಡಲೆ ನೆರೆದವರೆಲ್ಲರೂ, ಬಲ್ಲಿದರೂ, ಬಡವರೂ, ವಿದ್ಯಾವಂತರೂ, ವಿದ್ಯಾಹೀನರೂ, ಉದ್ಯೋಗಸ್ಥರೂ, ರೈತರೂ, ಹಳಬರೂ, ಯುವಕರೂ ಎಂಬ ಭೇದವನ್ನೆಣಿಸದೆ ಎಲ್ಲರೂ ಲಂತಾನ ಕಡಿಯುವ ಕೆಲಸದಲ್ಲಿ ತೊಡಗುವರು. ಕತ್ತಿ, ಗುದ್ದಲಿ, ಮೊದಲಾದ ಆಯುಧಗಳನ್ನು ಅವರವರ ಮನೆಗಳಿಂದಲೇ ತರುವರು. ಮಧ್ಯಾಹ್ನದ ಊಟಕ್ಕೆ ಒಂದು ಗಂಟೆಯ ಸಮಯ ವಿಶ್ರಾಂತಿಯನ್ನು ಹೊಂದಿಕೊಳ್ಳುವರು. ಈ ಸಮಯದಲ್ಲಿ ಸಮೀಪದ ಮನೆಯವರು ತಂತಮ್ಮ ಮನೆಗಳಿಗೆ ಹೋಗಿ ಊಟ ಮುಗಿಸಿಕೊಂಡು ಬರುವರು. ಸ್ವಲ್ಪ ದೂರದಿಂದ ಬರುವವರು ತಾವು ತಂದ ಬುತ್ತಿಗಳನ್ನು ಅಲ್ಲಿಯೇ ಊಟ ಮಾಡುವರು. ಸಾಯಂಕಾಲ ಸುಮಾರು ನಾಲ್ಕು ಗಂಟೆ ಸಮಯಕ್ಕೆ ಪುನಹ ಹಾಜರಾತಿಯನ್ನು ಕರೆದು ದಿನದ ಕೆಲಸವನ್ನು ಮುಗಿಸುವರು. ಕೆಲಸಕ್ಕೆ ಬರಲು ಅನಾನುಕೂಲವಾದ ಮೆಂಬರನು ತನ್ನ ಪರ ಒಬ್ಬ ಆಳನ್ನು ಕಳುಹಿಸತಕ್ಕದ್ದು. ಇದು ಸಾಧ್ಯವಾಗದೆ ಹೋದರೆ ದಿನ ಒಂದರ ನಾಲ್ಕಾಣೆಯಂತೆ ಚಾರ್ಜು ಕೊಡತಕ್ಕದ್ದು. ಈ ಚಾರ್ಜನ್ನು ಲಂತಾನ ಕಡಿಯುವ ಕೆಲಸವು ಮುಗಿಯುವುದರೊಳಗೆ ಅಂದರೆ ಪ್ರಾರಂಭವಾಗಿ 8 ವಾರಗಳೊಳಗೆ ಪಾವತಿ ಮಾಡಿದರೆ ಕೆಲಸದ ದಿನ ಒಂದರ ನಾಲ್ಕಾಣೆಯಂತೆಯೂ ತಪ್ಪಿದರೆ ಮುಂದೆ ಬರುವ ಮಾರ್ಚಿ ತಿಂಗಳಲ್ಲಿ ನಡೆಯುವ ಸಂಘದ ಜನರಲ್ ಮೀಟಿಂಗಿನಲ್ಲಿ ಐದಾಣೆ ನಾಲ್ಕು ಪೈಯಂತೆಯೂ ಸಲ್ಲಿಕೆ ಮಾಡತಕ್ಕದ್ದು. ಬರೇ ಮೈನರ್ ಮಕ್ಕಳಿರುವ ಭಾಗದಿಂದ ಹತ್ತು ವರ್ಷಕ್ಕೆ ಮೀರಿದ ಪ್ರಾಯವಿರುವ ಹುಡುಗರು ಕೆಲಸಕ್ಕೆ ಸೇರಬಹುದು. ಗಂಡಸರಿಲ್ಲದ ಭಾಗದಿಂದ ಆಳು ಕಳುಹಿಸುವುದಾಗಲೀ, ಚಾರ್ಜು ಕೊಡುವುದಾಗಲೀ ಅವಶ್ಯವಿಲ್ಲ. ಸರಾಸರಿಯಾಗಿ ಸುಮಾರು 60 ಜನರು ಕೆಲಸಕ್ಕೆ ಬರುತ್ತಾರೆ. ಹೀಗೆ ಎಂಟು ವಾರಗಳ ವರೆಗೆ ವಾರ ಒಂದರ ಶನಿವಾರ ಲಂತಾನ ತೆಗೆಯಲು ಈ ಕೇರಿಯವರು ಒಗ್ಗಟ್ಟಿನಿಂದ ಸೇರುವರು. ಹೀಗೆ ಎಲ್ಲರೂ ಭಿನ್ನಭೇದವಿಲ್ಲದೆ ತನ್ನ ಕೈಲಾಗುವ ಕೆಲಸವನ್ನು ಊರಿನ ಅಭಿವೃದ್ಧಿಯ ದೃಷ್ಟಿಯಿಂದ ಮಾಡುವುದು ಸ್ತುತ್ಯಾರ್ಹವಾಗಿದೆ. ಎಲ್ಲರೂ ಸಹೋದರರಂತೆ ಒಗ್ಗಟ್ಟಾಗಿ ಮಾಡುವಂಥಾ ಈ ಕೆಲಸದಲ್ಲಿ ಸೋಮಾರಿತನ ತೋರಿಸಲು ಯಾರಿಗೂ ಮನಸು ಬರುವುದಿಲ್ಲ. ಈ ಕೆಲಸವು ಆಯಾಸವಾಗಿ ತೋರುವುದರ ಬದಲು ಆನಂದವಾಗಿ ಪರಿಣಮಿಸಿ ದಿನವು ಕಳೆದುಹೋಗುವುದು ಗೊತ್ತೇ ಆಗುವುದಿಲ್ಲ.

ಬೇಸಿಗೆಯಲ್ಲಿ ಲಂತಾನ ಕಡಿಯುವುದು ಬಹು ಉಷ್ಣಕಾರಕವಾದ ಕಾರಣ ತಂಪಾದ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳನ್ನು ಈ ಕೆಲಸಕ್ಕೆ ಇವರು ನಿಶ್ಚಯಿಸಿರುವುದಾಗಿದೆ. ಕಳೆದ ನಾಲ್ಕು ವರ್ಷಗಳಿಂದ ಇವರು ಮಾಡಿದ ಕೆಲಸದ ಫಲಿತಾಂಶವಾಗಿ ಸುಮಾರು ಎಂಭತ್ತು ಎಕ್ರೆ ಜಾಗದಲ್ಲಿ ಲಂತಾನವನ್ನು ಬೇರು ಸಹಿತ ಕಿತ್ತು ನಾಶ ಮಾಡಿರುವರು. ಈ ಸಂಘದ ಮೆಂಬರುಗಳಿಗೆ ಸೇರಿದ ಜಾಗದಲ್ಲಿ ಇನ್ನೂ ಇವಕ್ಕೆ ಎರಡರಷ್ಟು ಏರ್ಯದಲ್ಲಿ ಲಂತಾನ ಕಡಿಯಲಿಕ್ಕೆ ಇದೆ. ನಾಲ್ಕು ವರ್ಷಗಳ ಮೊದಲು ಈ ಊರೊಳಗೆಲ್ಲಾ ಲಂತಾನವು ತುಂಬಿಕೊಂಡು ದನಕರುಗಳು ಮೇಯಲು ಸ್ಥಳವಿಲ್ಲದೆ ಬಹು ಕಷ್ಟಪಡುತ್ತಿದ್ದರು. ಈಗ ಎಂಭತ್ತು ಎಕ್ರೆ ಜಾಗದ ಮೈದಾನು ಅಲ್ಲಲ್ಲಿ ಮರಗಳಿಂದ ಕೂಡಿ ಉತ್ತಮವಾದ ಹುಲ್ಲುಗಾವಲಾಗಿ ಮಾರ್ಪಟ್ಟಿದೆ. ಈ ಕೇರಿಯೊಳಗೆ ಭೂಮಿ ಇದ್ದು ದೂರದಲ್ಲಿ ಹೊರಗೆ ವಾಸ ಇರುವ ಕೆಲವರಿರುವರು. ಅವರೂ ಪ್ರಾರಂಭದಲ್ಲಿ ಈ ಕೆಲಸಕ್ಕೆ ಸೇರಲು ಒಪ್ಪದಿದ್ದರೂ ಕೂಡ ಇತ್ತೀಚೆಗೆ ಇಲ್ಲಿಯವರ ಒಗ್ಗಟ್ಟಿನ ಬಲದಿಂದ ಒಪ್ಪಿ ತಮ್ಮ ಜಾಗದ ಚಾರ್ಜನ್ನು ಕೊಡುತ್ತಾ ಬರುತ್ತಿರುವರು. ಇವರು ಶನಿವಾರ ಮಾತ್ರ ಲಂತಾನ ಕಡಿಯುವುದಲ್ಲದೆ ಇವರಲ್ಲಿ ಕೆಲವರು ಬೇರೆ ದಿನಗಳಲ್ಲೂ ಎಕ್ರೆಗೆ ಹತ್ತು ರೂಪಾಯಿಗಳಂತೆ ಸಂಘದಿಂದ ಗುತ್ತಿಗೆ ತೆಗೆದುಕೊಂಡು ಲಂತಾನ ತೆಗೆಯುತ್ತಿರುವರು. ಇವರಿಗೆ ಸಂಘದಿಂದಲೇ ಹಣವು ಕೊಡಲ್ಪಡುವುದು. ಇದರಿಂದ ನಿರುದ್ಯೋಗದ ಬೇನೆಯಿಂದ ಅಲೆದಾಡುತ್ತಿರುವವರಿಗೆ ಕೆಲಸವು ದೊರೆತಂತಾಯಿತು. ಹೀಗೆ ಊರವರು ಲಂತಾನ ನಾಶ ಮಾಡಿದ ಜಾಗವನ್ನು ಮಾಲೀಕನು ಅಪೇಕ್ಷಿಸಿದರೆ ಆತನ ವ್ಯವಸಾಯಕ್ಕೆ ಬಿಟ್ಟು ಕೊಡುವುದುಂಟು. ಆದರೆ ಅಂಥಾ ಮಾಲೀಕನು ಹುಲ್ಲುಗಾವಲಿಗಾಗಿ ಬೇರೆ ಸ್ವಲ್ಪ ಜಾಗವನ್ನು ಬಿಟ್ಟು ಕೊಡತಕ್ಕದ್ದು ಮಾತ್ರವಲ್ಲ, ಲಂತಾನ ತೆಗೆದ ಆತನ ಪ್ರತಿಯೊಂದು ಎಕ್ರೆ ಜಾಗಕ್ಕೂ ಹತ್ತು ರೂಪಾಯಿಯಂತೆ ಸಂಘಕ್ಕೆ ಕೊಡತಕ್ಕದ್ದು. ಮತ್ತು ತನ್ನ ಈ ತೋಟಕ್ಕೆ ನ್ಯಾಯವಾದ ಬೇಲಿಯನ್ನು ಹಾಕಿಕೊಂಡು ಸುತ್ತು ಮುತ್ತಲೂ ಊರಿನ ದನಗಳು ಮೇಯಲು ಆತಂಕವಿಲ್ಲದೆ ಮಾಡತಕ್ಕದ್ದು. ಇವರ ಅನುಭವದಿಂದ ಒಂದು ಎಕ್ರೆ ದಟ್ಟವಾದ ಲಂತಾನ ಕಡಿದು ಬೇರು ತೆಗೆಯಲು ಸುಮಾರು ನಲ್ವತ್ತೈದು ಆಳುಗಳು ಬೇಕೆಂತಲೂ ಕಂಡು ಬಂದಿದೆ. ಎಡೆ ಬಿಡದೆ ಮೂರು ವರ್ಷಗಳ ವರೆಗೆ ಕೆಲಸ ಮಾಡಿದರೆ ಅಲ್ಲಿ ಲಂತಾನವು ಪೂರ್ತಿ ನಾಶವಾಗುವುದು.

ಅಮ್ಮತ್ತಿ, ವೀರಾಜಪೇಟೆ ರಸ್ತೆಯಲ್ಲಿರುವ ಕಾವಾಡಿ ದೊಡ್ಡ ಆಲದ ಮರದಿಂದ ಗ್ರಾಮಾಂತರ ರಸ್ತೆಯು ಈ ಕೇರಿಯೊಳಗೆ ದಾಟಿ ಅಮ್ಮತ್ತಿ ಒಂಟಿಯಂಗಡಿ ರಸ್ತೆಗೆ ಹೋಗಿ ಸೇರುತ್ತೆ. ಸುಮಾರು 2¼ ಮೈಲು ಉದ್ದವಿರುವ ಈ ರಸ್ತೆಯನ್ನು ಈ ಸಂಘದವರೇ ದುರಸ್ತು ಮಾಡಿ ಇದಕ್ಕಾಗಿ ಡಿಸ್ಟ್ರಿಕ್ಟ್ ಬೋರ್ಡಿನಿಂದ ಸಿಕ್ಕುವ ಹಣವನ್ನು ಈ ಸಂಘಕ್ಕೆ ತೆಗೆದುಕೊಳ್ಳುತ್ತಾರೆ. ಇದೊಂದು ಉತ್ತಮವಾದ ಉದಾಹರಣೆಯಾಗಿದೆ. ಇದರಿಂದ ಈ ರಸ್ತೆಯು ಬಹಳ ಒಳ್ಳೆಯ ಸ್ಥಿತಿಯಲ್ಲಿದೆ. ಸಂಬಂಧಪಟ್ಟ ಗ್ರಾಮಸ್ಥರೇ ರಸ್ತೆಯ ರಿಪೇರಿ ಕೆಲಸ ಮಾಡುವುದರಿಂದ ಡಿಸ್ಟ್ರಿಕ್ಟ್ ಬೋರ್ಡಿನಿಂದ ದೊರೆಯುವ ಹಣದ ಲಾಭವಾಗಲೀ, ನಷ್ಟವಾಗಲೀ ಊರಿನವರಿಗೇ ಉಳಿಯುತ್ತದೆ. ಗ್ರಾಮಸ್ಥರ ಹಿತದ ದೃಷ್ಟಿಯಿಂದ ರಸ್ತೆಯೂ ಚೆನ್ನಾಗಿ ಆಗುತ್ತದೆ. ಇದರ ಬದಲು ಗ್ರಾಮಾಂತರ ರಸ್ತೆಯ ರಿಪೇರಿಯನ್ನು ಕಂಟ್ರಾಕ್ಟು ಕೊಡುವುದರಿಂದ ಕಂಟ್ರಾಕ್ಟುದಾರನು ತನ್ನ ಲಾಭದ ಕಡೆಗೆ ಹೆಚ್ಚಿನ ಗಮನ ಕೊಡುವನಲ್ಲದೆ ರಸ್ತೆಯು ಉತ್ತಮ ಸ್ಥಿತಿಗೆ ನಿಗವಿಡುವುದು ಕಡಿಮೆಯಾಗುವುದು.

ಈ ಕೇರಿಯವರ ಈ ತರದ ಒಗ್ಗಟ್ಟಿನ ದೆಸೆಯಿಂದ ಇಲ್ಲಿ ನಡೆಯುವ ತಕರಾರು ವ್ಯಾಜ್ಯಗಳೆಲ್ಲವೂ ಸಾಧಾರಣವಾಗಿ ಈ ಸಂಘದವರಿಂದಲೇ ತೀರ್ಮಾನಿಸಲ್ಪಡುತ್ತವೆ. ಆದ್ದರಿಂದ ಇತ್ತೀಚೆಗೆ ಇಲ್ಲಿ ಕಲಹ, ಜಗಳ ವಗೈರೆ ಕಡಿಮೆಯಾಗುತ್ತಿದೆ. ವ್ಯವಸಾಯದ ಕೆಲಸದಲ್ಲೂ ಪರಸ್ಪರ ಸಹಾಯದಿಂದಲೇ ವರ್ತಿಸುತ್ತಿರುವರು. ಇಲ್ಲಿ ಯಾರೊಬ್ಬನಿಗಾದರೂ ಮನೆ ಕಟ್ಟಲು ದೇಹಶ್ರಮದಿಂದಾಗಬೇಕಾದ ಕೆಲಸಗಳನ್ನೆಲ್ಲಾ ಮುಫತ್ತಾಗಿ ಮಾಡಿಕೊಡುತ್ತಿರುವರು. ಹಾಗೆಯೇ ಸಾವಿನ ವಿಶಿಷ್ಟ ಕೆಲಸವನ್ನೂ ನಡಿಸುವರು.

ಲಂತಾನ ನಾಶದ ವಿಚಾರದಲ್ಲಿ
ಷ್ಟೊಂದು ಉತ್ತಮ ಕೆಲಸವನ್ನು ಮಾ
ತ್ತಿರುವ ಈ ಕೇರಿಯವರಿಗೆ ಸಂಬಂಧ
ಅಧಿಕಾರಿಗಳು ತಕ್ಕುದಾದ ಉತ್ತೇಜ
ನ್ನು ಕೊಡಬೇಕಾದದ್ದು ಅವಶ್ಯವಾ
ಈ ಕೇರಿಯವರು ತಮ್ಮ ಈ ತರದ
ಗ್ಗಟ್ಟನ್ನು ತಮ್ಮ ಕೇರಿಯ ಪ್ರತಿಯೊ
ಕೆಲಸಕ್ಕೂ ಉಪಯೋಗಿಸಿಕೊಂಡು ವ
ದುವರಿದುದೇ ಆದರೆ ತಮ್ಮ ಅಭಿವೃದ್ಧಿ
ನ್ನು ತಾವೇ ಸಾಧಿಸಿಕೊಂಡಂತಾಗು
ರಲ್ಲಿ ಸಂದೇಹವಿಲ್ಲ. ಅಲ್ಲದೆ ದ
ಮುಂದಿರುವ ಅತೀ ಪ್ರಾಮುಖ್ಯವಾ
ಮಸ್ಯೆಯಾದ ಗ್ರಾಮಾಭಿವೃದ್ಧಿ ಕೆಲ
ಗ್ರಾಮ ಪಂಚಾಯಿತಿಯನ್ನು ಹೇಗೆ
ಪಯೋಗಿಸಿಕೊಳ್ಳಬಹುದೆಂಬ ವಿಚಾ
ಲ್ಲಿ ಈ ಕೇರಿಯವರು ಇತರ ಗ್ರಾಮ
ಜನರಿಗೆ ಉದಾಹರಣೆಯನ್ನು ಹಾಕಿ
ತಾಗುವುದು.

ತಿದ್ದುಪಡಿ.

ಕಳೆದವಾರ ಪ್ರಕಟವಾದ 'ಕುಟ್ಟ
ಪೊನ್ನಣ್ಣ'ನ ಮೇಲಿನ ಟೀಕೆಯು ಉ
ದಲ್ಲಿ ನಾಲ್ಕನೆಯ ಕಲಮಿನಲ್ಲಿ ಕೇ
ಳಿ ಅಚ್ಚುಪಣ್ಣನು ಕಿಗ್ಗಟ್ನಾಡು
ಲ್ದಾರನಾಗಿದ್ದುದರಿಂದಲೂ, ಬೋ
ಆಗ ಇನ್ನೂ ಚಿಕ್ಕವನಾಗಿದ್ದುದರಿಂದ
ಅವರ ಹೆಸರನ್ನು ಹಾಕಲಿಲ್ಲವೆಂದು
ಬೇಕಿತ್ತು. ಕೈತಪ್ಪಿನಿಂದ ಈ ತಪ್ಪು
ದದ್ದಕ್ಕೆ ವಿಷಾದಿಸುತ್ತೇವೆ.

'ಸಂ. ಕೊ.'

ಬಾತ್ಮಿ.

ಬಾತ್ಮಿದಾರರು ಪಡುವ ಅಭಿಪ್ರಾ
ಗಳಿಗೆ ಪತ್ರಿಕಾಕರ್ತರು ಜವಾಬ
ರಲ್ಲ. [ಕೊ. ಸಂ.

'ಕೊಡಗು ಗ್ರಾಮ ಪಟೇಲರ ದು
ಯಾವದೊಂದು ಜಿಲ್ಲೆಯಲ್ಲಾಗ
ರಕಾರದ ಪ್ರಥಮ ತಳಹದಿಯೇ ಗ್ರಾ
ಪಟೇಲರೆಂದರೆ ಅತಿಶಯೋಕ್ತಿಯಾಗ
ದು. ಏಕೆಂದರೆ ಗ್ರಾಮದಲ್ಲಿ ರೆವಿ
ಕ್ರಿಮಿನಲ್, ವಗೈರೆ ಯಾವತ್ತು ಕೆಲ
ಳು, ಜನನ, ಮರಣ ದಾಖ್ಲೆಗಳು, ಸ
ರಿ ಕಂದಾಯ ವಸೂಲಿ ತಗಾದೆ ನೋ
ಸುಗಳು, ಜಪ್ತಿ ವಾರಾಂಟುಗಳು ಇತ
ಲ್ಲಾ ಸರ್ಕ್ಯೂಲಾರು ಹುಕುಂಗಳನ್ನ
ಪಟೇಲರೇ ಜಾರಿ ಮಾಡಬೇಕು. ವ
ಗ್ರಾಮಕ್ಕೆ ಬರುವ ಪೋಲೀಸು, ಅಬ
ಕಾರಿಸ್ಸು ವಗೈರೆ ಎಲ್ಲಾ ಇಲಾಖೆಯ
ಲ್ಲಾ ಉದ್ಯೋಗಸ್ಥರಿಗೂ ಅಗತ್ಯವ
ಹಾಯಗಳನ್ನೂ, ಸರಬರಾಯಿಗಳನ್ನೂ
ದಗಿಸಿಕೊಡಬೇಕು. ಅಲ್ಲದೆ ಪಟೇಲ
ಜೆ ವಹಿಕೊಂಡ ವಿನಹ ಗ್ರಾಮ ಬಿ
ವಾಸಿಸಕೂಡದೆಂಬ ನಿರ್ಬಂಧ ಕೂಡ
ರುತ್ತದೆ.

ಇಷ್ಟೆಲ್ಲಾ ಗ್ರಾಮ ಪಟೇಲರ
ಮೇಲೆ ಭಾರವಿದ್ದರೂ ಕೊಡಗಿನ ಗ್ರಾ
ಪಟೇಲರಿಗೆ ಬಹು ಕಿಂಚಿತ್ತಾದ ಸ
ಕೊಡುವುದಾಗಿದೆ. ಈ ಕುರಿತು ಸ
ಧಪಟ್ಟ ಅಧಿಕಾರಿಗಳಲ್ಲಿ ನಮ್ಮ ಅ
ಯನ್ನು ಈ ಮೊದಲೇ ತೋರ್ಪಡಿ

ಫಲಿತಾಂಶವಾಗಿ ಈಚೆಗೆ ಎರಡು ಮೂರು ಗ್ರಾಮಗಳನ್ನು ಒಂದುಗೂಡಿಸಿ ಕಂದಾಯಕ್ಕನುಸರಿಸಿ ಅಲ್ಪ ಸ್ವಲ್ಪ ಸಂಬಳವನ್ನು ಏರಿಸಿದರು. ಆದರೆ ಅವರೇ ನಾಡು ಕಚೇರಿ ಮೂಲಕ ಜಾರಿಯಾಗುತ್ತಿದ್ದ ಯಾವತ್ತು ನೋಟೀಸು ವಗೈರೆಯನ್ನು ಜಾರಿ ಮಾಡುವಂತೆ ಹುಕುಂ ಆಗಿರುತ್ತದೆ.

ನಮ್ಮ ನೆರೆ ಜಿಲ್ಲೆಯಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮ ಪಟೇಲರಿಗೆ ತಿಂಗಳೊಂದರ 11-0-0 ಕ್ಕೆ ಕಡಿಮೆ ಇಲ್ಲದ ಸಂಬಳ ಮತ್ತು ತಿಂಗಳಿಗೆ ರೂ 12 ಸಂಬಳದ ಜವಾನನೊಬ್ಬನನ್ನು ಕೊಟ್ಟು ಗೌರವದಿಂದ ಕಾಣುತ್ತಾರೆ. ನಮ್ಮ ಸರಕಾರವು ಬಹು ಮಟ್ಟಿಗೆ ಮದ್ರಾಸು ಸರಕಾರದ ರೀತಿ ನೀತಿಗಳನ್ನು ಅನುಸರಿಸುವುದಾದರೂ ಪಟೇಲರ ಮೇಲೆ ಕರುಣೆ ಇಟ್ಟಂತೆ ಕಾಣುವುದಿಲ್ಲ. ಈಗ ಪುನಃ ಇಲ್ಲಿನ ಗ್ರಾಮ ಪಟೇಲರಿಗೆ ವರ್ಷ 1ರ ಹೆಚ್ಚೆಂದರೆ 36 ರೂಪಾಯಿ, ಇನ್ನು ಕೆಲವು ಗ್ರಾಮಗಳಿಗೆ ಇದಕ್ಕಿಂತಲೂ ಕಡಿಮೆ ದರವನ್ನು ತೋರಿಸಿ ಈ ತಿಂಗಳ ಜಿಲ್ಲಾ ಗೆಜೇಟಿನಲ್ಲಿ ಪ್ರಕಟವಾಗಿರುವುದು ವಿಷಾದಕರ. ಹೀಗೆ ಪಟೇಲರನ್ನು [illegible] ಗ್ರಾಮ [illegible] ಅವಶ್ಯವಿಲ್ಲವೆಂದಾಗಲಿ, ಗೌರವಾರ್ಥ ಕೆಲಸ ಮಾಡಬೇಕೆಂದಾಗಲಿ ಹುಕುಂ ಮಾಡುತ್ತಿದ್ದರೆ ಬೇಸರಕ್ಕೆಡೆಯಿರುತ್ತಿರಲಿಲ್ಲ.

ಮುಖ್ಯವಾಗಿ ಬೇರೆ ಎಲ್ಲಾ ಪ್ರಾಂತಗಳ ಸರಕಾರವು ಪಟೇಲರಿಗೆ ತಕ್ಕ ಸಂಬಳವನ್ನು ಕೊಟ್ಟು ಗೌರವದಿಂದ ನಡೆಸಿಕೊಂಡು ಬರುವಂತೆ ನಮ್ಮ ಘನ ಸರಕಾರವು ತಕ್ಕ ಸಂಬಳವನ್ನು ಕೊಟ್ಟು ಗೌರವದಿಂದ ನಡಿಸಿಕೊಂಡುಬರಬೇಕಾಗಿ ಕೋರುವ

'ಗ್ರಾಮ ಪಟೇಲರಲ್ಲೊಬ್ಬ'

ಕೊಡಗಿನ ಹಬ್ಬ ಹುಣ್ಣಿಮೆಗಳ ಆಚರಣೆಯಲ್ಲಿ ಏಕಪ್ರವಿರಬೇಕು

ಕೊಡವ ಬಾಂಧವರೇ,

ನಮ್ಮ ಈ ಚಿಕ್ಕ ದೇಶದಲ್ಲಿ ನಮಗಳಿಗಿರುವ ಹಬ್ಬಗಳಲ್ಲಿ ಎರಡು ಮುಖ್ಯವಾದವು. ಈ ಹಬ್ಬಗಳನ್ನು ಆಚರಿಸತಕ್ಕ ದಿನವನ್ನು ನಮ್ಮ ಪೂರ್ವದ ಲಿಂಗಾಯಿತ ರಾಜರ ಅರಮನೆ ಚಾಕರಿಗೆ ತೊಂದರೆ ಬಾರದ ರೀತಿ ಚಾಕರಿಯವರಿಗೆ ತೊಂದರೆ ಇಲ್ಲದಂತೆ ಮಾಡಲು ಹುತ್ತರಿ ಹಬ್ಬವನ್ನು ನಮ್ಮ ದೇಶಸ್ಥರು ಎರಡು ದಿನ ಕದಿರು ತೆಗೆಯಲು ಮಾಡಿದ್ದ ಪದ್ಧತಿಯೂ, ಕೈಲು ಮೂಹೂರ್ತ ಹಬ್ಬವನ್ನು ಚಿಂಗಯೂರು ತಿಂಗಳು 2 ರಿಂದ 18 ರ ವರಗೆ ನಾನಾ ನಾಡುಗಳಲ್ಲಿ ಪ್ರತ್ಯೇಕವಾಗಿ ಆಯುಧ ಪೂಜೆ ಮಾಡುತ್ತಲೂ ಇರುವುದು ವಾಡಿಕೆಯಲ್ಲಿದೆ.

ಆದರೆ ಬ್ರಿಟಿಷ್ ದೊರೆತನಕ್ಕೊಳಗಾಗಿ ಒಂದು ಶತಮಾನವಾಗಿ ಪೂರ್ವದ ಅನೇಕ ಪದ್ಧತಿಗಳಿಗೆ ಬೆನ್ನು ಹಾಕಿ ಮಾರ್ಪಾಟಾಗಿರುವದಲ್ಲದೆ ಈಗಲೂ ಅನೇಕ ಪದ್ಧತಿಗಳಿಗೆ ವಿರುದ್ಧವಾಗಿ ಆಚರಿಸುವ (ಮಂಗಳ, ಮೂದವಲ್ಲು) ಪದ್ಧತಿಗೆ ವಿರೋಧವಾಗಿ ನಡೆಯುವದನ್ನು ಅನೇಕ ವೃದ್ಧರು ಕಣ್ಣಾರೆ ಕಂಡರೂ ಗೊತ್ತಿಲ್ಲದ ರೀತಿ ನಟಿಸಿಕೊಂಡು ಯಾವ ಸಂಗತಿಯನ್ನು ಕೇಳಿದರೆ ಈಗಿನ ವಿದ್ಯಾಬುದ್ಧಿ ಕಲಿತ ಯೌವನಸ್ಥರ ಮಾತಿಗೆ ಮೌನ ಎಂಬದೇ ಉತ್ತರವಾಗಿದೆ.

ಹೀಗಿರುವಾಗ ನಮ್ಮ ಕೊಡಗು ಜನಾಂಗಕ್ಕೆ ಮುಖ್ಯವಾದ ಹಬ್ಬಗಳಲ್ಲಿ ಹುತ್ತರಿ ಮತ್ತು ಕೈಲುಪೊಳದು ಹಬ್ಬ ಶ್ರೇಷ್ಠವಾಗಿರುವುದನ್ನು ಪೂರ್ವದಲ್ಲಿ ಆಚರಿಸುತ್ತಿದ್ದಂತೆ ನಾನಾ ದಿನಗಳಲ್ಲಿ ಮಾಡುವದನ್ನು ತಿದ್ದದ ಕೊಡವರಲ್ಲಿ ಆ ನಾಡಿನವ, ಈ ನಾಡಿನವ, ದೇವರ ಕಟ್ಟಳೆಗೆ ಅಡಗಿದವ ಎಂಬದಾಗಿ ಯೋಚಿಸುತ್ತಾ ಮತದೊಳಗೆ ಭಿನ್ನಾಭಿಪ್ರಾಯ ಇಟ್ಟುಕೊಂಡು ಹಿಂದು ಮುಂದಾಗಿ ಮೇಲ್ಕಂಡ ಎರಡು ಹಬ್ಬಗಳನ್ನು ನಡಿಸುವುದು ತಪ್ಪು ಅಭಿಪ್ರಾಯವಾಗಿದೆ. ಬೇರೆ ಯಾವ ಜನಾಂಗದಲ್ಲೂ ಹಬ್ಬವನ್ನು ಈ ರೀತಿ ನಡಿಸುವಂತಿಲ್ಲ. ಹೀಗಿರುವಾಗ ನಾವುಗಳು ನಮ್ಮ ದೇಶದಲ್ಲು ಬೆಳೆಸುವ ಬೆಳೆಯನ್ನು ಕಟಾವು ಮಾಡಿ ಹೊಸ ಅಕ್ಕಿ ಊಟಮಾಡುವ ಪದ್ಧತಿಯನ್ನು ದೇಶದಲ್ಲೆಲ್ಲಾ ಒಂದೇ ಒಂದು ದಿನ ಅಂದರೆ ಬ್ರಿಚ್ಚಿಗ ತಿಂಗಳು ಹುಣ್ಣಿಮೆಯಲ್ಲು ಇಗ್ಗುತಪ್ಪ ದೇವರ ಕಲಾಡ್ಚಿ ಹಬ್ಬವ್ವಾ, ಮಾರಣೆ ದಿನ ರೋಹಿಣಿ ನಕ್ಷತ್ರದಲ್ಲು ಇಡೀ ಕೊಡಗಿನವರು ಹುತ್ತರಿ ಹಬ್ಬವನ್ನು ನಡಿಸಬೇಕೆಂತಲೂ, ಕೈಲುಪೊಳದು ಹಬ್ಬವನ್ನು ಚಿಂಗಯೂರು ತಿಂಗಳು 18 ನೇ ದಿನ ದೇಶದ ಎಲ್ಲ ಕಡೆಗಳಲ್ಲೂ ಒಂದೇ ದಿನ ಆಚರಿಸಬೇಕೆಂದೂ, ಹೀಗೆ ಈ ಎರಡು ಹಬ್ಬಗಳನ್ನು ನಡಿಸಿದ್ದೇ ಆದರೆ ನಮ್ಮ ಕೊಡವ ಪದ್ಧತಿ ಮತ್ತು ರೀತಿ ಚೆನ್ನಾಗಿ ಆಗುವದಲ್ಲದೆ, ಯಾರಿಗೂ ಯಾವ ವಿಧದ ತೊಂದರೆಯೂ, ಇಲ್ಲವೆಂಬದಾಗಿ ತಿಳಿಯುತ್ತೇನೆ.

ಈ ರೀತಿ ಮಾಡದಿದ್ದರೆ ಐದು ಯಾ ಆರು ವರ್ಷದಿಂದ ನಮ್ಮ ಕಡಿಯತ್ತನಾಡಿನಲ್ಲು ಹಬ್ಬವನ್ನು ನಡಿಸಲು ತೊಂದರೆ ಬಂದದ್ದರಿಂದ 1937 ನೇ ಇಸವಿಯಲ್ಲು ನಡವ ಹುತ್ತರಿ ಹಬ್ಬವನ್ನು ಮೇಲ್ಕಂಡ ರೀತಿ ಮಾಡಬೇಕಾಗಿ ನಾಡು ಮೊಟಂಗು ಮಾಡಿ ಇದರಂತೆ ಪೊಳುದನ್ನು ನೆಡಿಸಿ, ನಾಡುಕೋಲು ದಿವಸ ನಾಡಿನ ತಕ್ಕರಾದ ಪಟ್ಟಚೆರವಂಡ, ಅಪ್ಪನೆರವಂಡ, ಪಾಲಂದಿರ ಇವರು ನಾಡವರ ಅಭಿಪ್ರಾಯ ಕೇಳಿಕೊಂಡು ಇನ್ನು ಮುಂದೆ ಹುತ್ತರಿ ಹಬ್ಬವನ್ನು ಪ್ರತೀ ವರ್ಷವೂ ಇಗ್ಗುತಪ್ಪ ದೇವರ ಕಲಾಡ್ಚಿ ಹಬ್ಬ ಕಳೆದ ಮಾರಣೆ ದಿನ ರೋಹಿಣಿ ನಕ್ಷತ್ರದಲ್ಲು ಮಾಡಬೇಕಾಗಿ ತೀರ್ಮಾನಿಸಿ ಒಡಂಬಡಿಕೆ ಸಹ ಆಗಿರುತ್ತೆ. ಅದರಂತೆ ಕಡಿಯತ್ತನಾಡಿನವರಿಗೆ ಈ ಮೂಲಕ ವಿಜ್ಞಾಪನೆಯಲ್ಲದೆ ದೇಶಸ್ಥರೆಲ್ಲರೂ ಇದೇ ದಿನ ಹುತ್ತರಿ ಹಬ್ಬವನ್ನೂ, ಚಿಂಗಯೂರು 18 ರಲ್ಲಿ ಕೈಲುಪೊಳದು ಹಬ್ಬವನ್ನೂ ಮಾಡಿ ನಮ್ಮ ಕೊಡವ ರಟಿಕ್ಕ ಜನಾಂಗದ ಕೀರ್ತಿಯನ್ನು ತರುವಿರಾಗಿ ನನ್ನ ವಂದನೆ.

ಪಿ ಚೆಂಗಪ್ಪ,
(ನಾಡುತಕ್ಕ.)

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ 52,54,750 ರೂ ಭರವಸೆಯ 4689 ಪ್ರಪೋಸಲುಗಳು ಸಿಕ್ಕಿವೆ. ಅದರಲ್ಲಿ ಹಿಂದಿನ ವರ್ಷದ ಪೂರ್ತಿಯಾಗದ 1147 ಪ್ರಪೋಸಲುಗಳು ಬಿಟ್ಟು 19,67,650 ರೂ ಗಳ ಬಗ್ಗೆ ವರ್ಷಾವಧಿ 2,41,959-6-0 ರೂ ವಿಮಾ ಕಂತು ಬರುತ್ತೆ. ಕಂಪನಿಯಿಂದ ಭರವಸ ಪಡೆದಿರುವ ಹಣ ರೂ 31,38,150 ಬಾಕಿ ರೂ 1,29,500 ಪುನಹ ಭರವಸ ಕೊಟ್ಟದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುವರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತಿವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ 4,13,775 ಹೆಚ್ಚಿದೆ.

ಈ ಕೆಳಗಿನ ಒಳ್ಳೆ ಸಂಗತಿಗಳಿಂದ ಲಭಿಸಿದ ತೃಪ್ತಿಯನ್ನು ಮೆಂಬರುಗಳೊಡನೆ ಅನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯಾ ಸರ್ಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪೆನಿಗಳಲ್ಲಿಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಶೂರೆನ್ಸ್ ಈಯರ್ ಬುಕ್' ಎಂಬುವುದರಿಂದ ತಿಳಿದುಬರುತ್ತದೆ. ಈ ಕಂಪನಿಗಳಲ್ಲಿ ಗಾರ್ಡಿಯನ ಆಫ್ ಇಂಡಿಯಾವು ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ವರೆಗೆ ಶ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೇಯದಾಗಿದೆ. ಒಂದನೇಯದಾದ ಕಂಪನಿಯು ಇದಕ್ಕಿಂತ 25 ವರ್ಷಗಳ ಮುಂದೆ ಸ್ಥಾಪಿಸಲ್ಪಟ್ಟಿದ್ದಾಗಿದೆ.

ವಿಮಾ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮಾ ಕಂತುಗಳ ಆದಾಯವು (ಪುನಹ ಭರವಸ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮಾ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ವರದಿ ವರ್ಷದ ವಿಮಾ ಕಂತಿನ ಆದಾಯವು ರೂ 3,66,198-13-0, ಗತ ವರ್ಷದ್ದು 2,36,767-6-6 ಆಗಿದೆ.

ಜೀವ ವಿಮಾ ಫಂಡು—ಈ ಕಂಪನಿಯ ಜೀವ ವಿಮಾ ಫಂಡು ರೂ. 75,258-14-9ರಿಂದ, ವ್ಯವಸ್ಥಾ ಪ್ರಸಂಗಕ್ಕೆ ಮತ್ತು ಇತರ ಖರ್ಚಿಗಾಗಿ ರೂ. 45,037-8-4 ವಜಾ ಕಳೆದು ರೂ 21,00,121-1-3ಕ್ಕೆ ಏರಿದೆ. ಈ ಕೆಳಗೆ ಅದರ ತಪಶೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿಮಾ ಕಂತು	ಜೀವ ವಿಮಾ ಫಂಡು.
1ನೇ ವರ್ಷದ	ರೂ 1,16,949	ರೂ 15,619
2ನೇ ವರ್ಷದ	,, 2,36,767	,, 75,259
3ನೇ ವರ್ಷದ	,, 3,66,199	,, 2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತದ ವಿಮಾ ಕಂಪೆನಿಗಳ ವಾರ್ಷಿಕ ವೃತ್ತಾಂತದಲ್ಲಿ ಹೊಗಳಲರ್ಹವಾದದ್ದೇ ಆಗಿದೆ.

ಭಾರತ ಜೀವವಿಮಾ ಕಂಪೆನಿಗಳ ಆಕ್ಟಿನ ಮೇರೆ ಠೇವಣಾತಿ—ಈ ವಾಸಂತ ಮೇರೆ ಠೇವಣಾತಿ ಮಾಡತಕ್ಕದ್ದ ರೂ, 2 ಲಕ್ಷವನ್ನು ಪೂರ್ತಿಯಾಗಿ ಡಿಪಾಜಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷವುಳ್ಳವರಾಗಿರುತ್ತಾರೆ.

ಸಿ. ಯಂ. ತಿಮ್ಮಯ್ಯ,
(52-19) ಏಜೆನ್ಸಿಗಳ ಇನ್‌ಸ್ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್

ಯೂನಾನಿ ಫಾರ್ಮೆಸಿಯ ಉತ್ತಮ ಔಷಧಿಗಳು.

ಉಬ್ಬಸ ಸಂಹಾರಿ (Asthma cure) ಕೆಲವು ದಿನಗಳ ಸೇವನೆಯಿಂದ ಉಬ್ಬಸವನ್ನು ಖಾತ್ರಿಯಾಗಿ ಗುಣಪಡಿಸುತ್ತದೆ. 40 ದಿನದ ಔಷಧಿಗೆ ಕ್ರಯ ರೂ. 5—12—0.

ಅಂಬರ್ ಕೂದಲೆಣ್ಣೆ, ಸುಗಂಧಯುಕ್ತ ಆಮ್ಲ ಕೇಶ ತೈಲ ಅಲ್ಲದೆ ಎಲ್ಲಾ ರೋಗಗಳಿಗೂ ರಾಮಬಾಣವಂತಿರುವ ಮಾತ್ರೆಗಳೂ, ಚೂರ್ಣಗಳೂ, ಲೇಹಗಳೂ, ತೈಲಗಳೂ ಮತ್ತು ಕೇಶ ತೈಲಗಳೂ ಸಹ ತಯಾರಿರುವುವು.

ಬೇಗನೆ ಬರೆಯಿರಿ:—

ಯಂ. ಯಂ. ಸಿದ್ದೀಕ್,
33 ಪ್ರೊಪ್ರೈಟರ್,
ಯೂನಾನಿ ಔಷಧಶಾಲಾ, ಮಡಿಕೇರಿ, ಕೊಡಗು.

ಕೊಡಗು

ಅಕ್ಟೋಬರ್ ತಾರೀಕು ೨೧ನೇ ಶುಕ್ರವಾರ ೧೯೩೮.

ಐರ್ಲೇಂಡ್ ಒಂದಾಗಬೇಕು.

ಐರ್ಲೇಂಡ್ ಈಗ ಎರಡು ಭಾಗವಾಗಿ ಆಳಲ್ಪಡುತ್ತಿದೆ. ಕೆಥೋಲಿಕರು ಹೆಚ್ಚಾಗಿರುವ ದಕ್ಷಿಣ ಐರ್ಲೇಂಡ್ ಅಂದರೆ ಈಗ ಐರ್ ಎಂದು ಕರೆಯಲ್ಪಡುತ್ತಿರುವ ಭಾಗವು ಡಿ ವೇಲರಾರವರ ಮುಂದಾಳುತನದಲ್ಲಿ ಹೆಚ್ಚು ಕಮ್ಮಿ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದಿದೆ. ಆದರೆ ಉತ್ತರ ಐರ್ಲೇಂಡಿನ ಆರು ಕೌಂಟಿಗಳಿಂದ ಕೂಡಿರುವ ಅಲ್‌ಸ್ಟರ್ ಎಂಬ ಭಾಗವು ಪ್ರಾಟೆಸ್ಟೆಂಟರ ಬಹುಮತವುಳ್ಳದ್ದಾಗಿರುವುದರಿಂದ, ಇದು ಐರ್ ಪಾರ್ಲಿಮೆಂಟಿಗೆ ಸೇರದೆ ಬ್ರಿಟಿಷ್ ಪಾರ್ಲಿಮೆಂಟಿನ ಕೈಕೆಳಗೆ ತನ್ನದೊಂದು ಪ್ರತ್ಯೇಕ ಸರ್ಕಾರ ನಡಿಸುತ್ತಿದೆ. ಈ ಎರಡು ಭಾಗಗಳಿಂದ ಐರ್ಲೇಂಡಿನಲ್ಲಿ ಒಗ್ಗಟ್ಟೂ, ಬಲವೂ ಕಡಿಮೆಯಾಗಿದೆ. ಈ ಕೊರತೆಯನ್ನು ಹೋಗಲಾಡಿಸಿ, ಐಕಮತ್ಯವನ್ನು ಸಾಧಿಸಲು ಡಿ ವೇಲರಾರವರು ಎಷ್ಟು ಪ್ರಯತ್ನಿಸಿದರೂ ಇಷ್ಟರ ವರೆಗೆ ಸಫಲವಾಗಲಿಲ್ಲ. ಇವೆರಡು ಭಾಗಗಳ ಜನರಲ್ಲಿರುವ ವೈಮನಸ್ಸು ಕಡಿಮೆಯಾಗುತ್ತಲೂ ಇಲ್ಲ.

ಕೆಲವು ಸಮಯದ ಹಿಂದೆ ಏಂಗ್ಲೋ-ಐರಿಷ್ ಒಪ್ಪಂದವಾದಾಗ್ಯೆ ಬ್ರಿಟನ್ನಿನ ಪ್ರಧಾನ ಮಂತ್ರಿಯವರು ಅಲ್‌ಸ್ಟರನ್ನು ದಕ್ಷಿಣ ಐರ್ಲೇಂಡಿನೊಂದಿಗೆ ಸೇರುವಂತೆ ಒತ್ತಾಯಪಡಿಸಲು ತಿರಸ್ಕರಿಸಿದ್ದರಿಂದ ಡಿ ವೇಲರಾರವರು ಈ ಪ್ರಶ್ನೆಯನ್ನು ಆ ಸಮಯದಲ್ಲಿ ಬಿಡಬೇಕಾಯಿತು. ಆದರೆ ಈಗ ಪುನಃ ಅವರು ತಮ್ಮ ಅಭಿಲಾಷೆಯನ್ನು ಸಷ್ಟಪಡಿಸಿರುವರು. 'ದಕ್ಷಿಣ ಐರ್ಲೇಂಡಿಗೆ ಒತ್ತಾಗಿರುವ ಅಲ್‌ಸ್ಟರಿನ ಗಡೀ ಪ್ರಾಂತ್ಯಗಳಲ್ಲಿ-ನ್ಯಾಶನಲಿಸ್ಟ್ ಪಕ್ಷದವರು ಹೆಚ್ಚಾಗಿರುವುದರಿಂದ ಅಲ್ಲಿಯ ಜನರ ಅಭಿಪ್ರಾಯ ತೆಗೆದು, ಬಹುಮತದವರ ಅಭಿಪ್ರಾಯದಂತೆ ಆ ಪ್ರಾಂತ್ಯಗಳ ಭವಿಷ್ಯತ್ತನ್ನು ನಿಶ್ಚಯಿಸುವದಾದರೆ ದಕ್ಷಿಣ ಐರ್ಲೇಂಡಿಗೆ ಹೆಚ್ಚಿನ ಪ್ರದೇಶ ಸಿಕ್ಕುವ ಸಂಭವವಿದ್ದರೂ, ಹೀಗೆ ಮಾಡುವುದರಿಂದ ಅಲ್‌ಸ್ಟರಿನ ಒಂದು ಭಾಗವು ಪ್ರತ್ಯೇಕ ನಿಲ್ಲುವಕಾರಣ ಐರಿಷ್ ಜನರೊಳಗಿನ ವೈಮನಸ್ಸು ಹಾಗಿಯೇ ಉಳಿದು ಐರ್ಲೇಂಡಿನ ಒಗ್ಗಟ್ಟು ಸಾಧಿಸಲ್ಪಟ್ಟಂತಾಗುವುದಿಲ್ಲ. ಇದು ಐರ್ಲೇಂಡಿನ ಮುಂದಿನ ಅಭಿವೃದ್ಧಿಗೆ ಅಪಾಯಕರ. ಈ ಪರಿಸ್ಥಿತಿಗೆ ಬ್ರಿಟಿಷರೇ ಕಾರಣಭೂತರು. ಆದಕಾರಣ ಬ್ರಿಟನ್ನಿನ ಸರ್ಕಾರದವರು ಅಲ್‌ಸ್ಟರಿನ ಜನರನ್ನು ಅಖಿಲ ಐರ್ಲೇಂಡಿನ ಪಾರ್ಲಿಮೆಂಟಿಗೆ ಸೇರುವಂತೆ ಮಾಡಬೇಕು. ಇದನ್ನು ಶಾಂತ ರೀತಿಯ ಸಂಭಾಷಣೆಗಳಿಂದ ನಡಿಸಬಹುದು. ಅಲ್‌ಸ್ಟರಿಗೆ ಪ್ರಾಂತೀಕ ಸ್ವಾತಂತ್ರ್ಯ ಸರ್ಕಾರ ಕೊಡಲು ತಾನು ಸಿದ್ಧನಿದ್ದೇನೆ. ಆದರೆ ಅದು ಬ್ರಿಟಿಷ್ ಪಾರ್ಲಿಮೆಂಟಿನ ಅಧೀನವಿರುವುದರ ಬದಲು ಅಖಿಲ ಐರಿಷ್ ಪಾರ್ಲಿಮೆಂಟಿನ ಕೈಕೆಳಗಿರುವಂತಾಗಬೇಕು. ಹೀಗೆ ಮಾಡಲು ಬ್ರಿಟಿಷ್ ಸರ್ಕಾರವು ಯತ್ನಿಸದ್ದರೆ ಮುಂದೆ ಬರಬಹುದಾದ ಯೂರೋಪಿಯನ್ ಯುದ್ಧದಲ್ಲಿ ಐರ್ ಸರ್ಕಾರವು ಬ್ರಿಟನ್ನಿನೊಂದಿಗೆ ಸಹಕರಿಸುವ ಸಂಭವವು ಬಹು ಕಡಿಮೆಯಾಗುವುದು.' ಎಂದು ಡಿ ವೇಲರಾರವರು ವಿಶದವಾಗಿ ಹೇಳಿರುವರು.

ಅಲ್‌ಸ್ಟರಿನ ಮುಂದಾಳಾದ ಲಾರ್ಡ್ ಕ್ರೈಗಾವನರು ಈ ಅಭಿಪ್ರಾಯಕ್ಕೆ ಒಪ್ಪಲಾಗುವುದಿಲ್ಲವೆಂತ ಸೂಚಿಸಿರುವರು. ಈ ಪ್ರಶ್ನೆಯು ಅಲ್‌ಸ್ಟರಿನ ಜನರಿಗೆ ಮಾತ್ರ ಸಂಬಂಧಪಟ್ಟಿರುವದರಿಂದ ಬ್ರಿಟಿಷರು ಇವರಲ್ಲಿ ಕೈಹಾಕಲಿಕ್ಕಾಗುವುದಿಲ್ಲವೆಂದು ಬ್ರಿಟಿಷ್ ಅಧಿಕಾರ ವರ್ಗದವರು ಹೇಳುತ್ತಿರುವರು. ಅಲ್‌ಸ್ಟರಿನ ಜನರು ಬ್ರಿಟಿಷ್ ಸಿಂಹಾಸನಕ್ಕೆ ತೋರಿಸುತ್ತಿರುವ ರಾಜಭಕ್ತಿಗಾಗಿ ಬ್ರಿಟಿಷ್ ಸರ್ಕಾರದವರಿಂದ ದ್ರವ್ಯ ಸಹಾಯ ಮತ್ತು ಇತರ ಸಹಾಯಗಳನ್ನೂ ಪಡೆಯುತ್ತಾ ಇದ್ದಾರೆ. ದಕ್ಷಿಣ ಐರ್ಲೇಂಡಿಗೂ, ಅಲ್‌ಸ್ಟರಿಗೂ ಮಧ್ಯೆ ವ್ಯಾಪಾರ ವೈವಾಟುಗಳು ಚೆನ್ನಾಗಿ ನಡೆಯುತ್ತಿಲ್ಲ. ಐರ್ಲೇಂಡಿನಲ್ಲಿ ಒಂದು ಭಾಗ ಹೆಚ್ಚು ಕಮ್ಮಿ ಪೂರ್ತಿ ಸ್ವಾತಂತ್ರ್ಯವುಳ್ಳದಾಗಿಯೂ, ಇನ್ನೊಂದು ಭಾಗವು ಬ್ರಿಟಿಷರ ವಸಾಹತಾಗಿಯೂ ಇರುವುದು ಅಸಮಂಜಸವಾಗಿದೆ. ಅಲ್‌ಸ್ಟರು ತನ್ನ ಪ್ರಾಂತ್ಯದ ಭದ್ರತೆಗೆ ಬ್ರಿಟನನ್ನು ಅವಲಂಬಿಸಿಕೊಂಡಿದೆ. ಆದರೆ ದಕ್ಷಿಣ ಐರ್ಲೇಂಡು ತನ್ನ ರಕ್ಷಣೆಯನ್ನು ತಾನೇ ಮಾಡಿಕೊಳ್ಳುತ್ತಿದೆ. ಯೂರೋಪಿನಲ್ಲಿ ಯುದ್ಧ ಸಂಭವಿಸಿದರೆ ಡಿ ವೇಲರಾರವರು ಹೇಳಿರುವಂತೆ ಐರ್ ಸರ್ಕಾರವು ಬ್ರಿಟನ್ನಿನೊಂದಿಗೆ ಸೇರದಿದ್ದರೆ ಬ್ರಿಟನ್ನಿನ ಸ್ಥಿತಿಯು ಬಹು ಕಷ್ಟಕರವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಐರಿಷ್ ಸರ್ಕಾರದ ಮುಂದಾಳು ಬರೇ ಬೆದರಿಕೆಯ ಮಾತುಗಳನ್ನು ಆಡುವವರಲ್ಲ; ಅವರು ಹೇಳಿದಂತೆ ಮಾಡುವವರು. ಆದಕಾರಣ ಬ್ರಿಟನ್ನಿಗೆ ಇವರ ಮಾತುಗಳನ್ನು ಅಲಕ್ಷ್ಯ ಮಾಡಲು ಸುಲಭವಲ್ಲ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೀಟಿಂಗಿನ ಹೊರ ನಡೆತ.

ಮ. ಗಾಂಧಿಯವರ ಲೇಖನ.

ಡೆಲ್ಲಿಯಲ್ಲಿ ಜರಗಿದ ಕಳೆದ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮೀಟಿಂಗಿನಲ್ಲಿ ಸಿವಿಲ್ ಲಿಬರ್ಟಿ ಠರಾವಿನ ವಿರೋಧಿಗಳು ಹೊರಗೆ ನಡೆದ ವಿಚಾರವು ಅವಸರದ ಮತ್ತು ದೆಸೆಗೆಟ್ಟ ಸಂಗತಿಯಾಗಿದೆ. ಅಧ್ಯಕ್ಷರು ಭಾಷಣಕಾರರಿಗೆ ಮಾತಾಡಲು ಯಥೇಚ್ಛ ಸಮಯ ಕೊಟ್ಟರೆಂದು ತಿಳಿಯುತ್ತೇನೆ. ಆದ್ದರಿಂದ ಠರಾವಿನ ಬಗ್ಗೆ ಉಪಸೂಚನೆಗಳನ್ನು ತಿರಸ್ಕರಿಸಿದ ಬಹುಮತದ ಧೋರಣೆಯನ್ನು ಖಂಡಿಸಲು ಮಾಡಿದ ಈ ಹೊರ ನಡೆಯುವಿಕೆಯಿಂದ ಇಂದಿನ ಸ್ಥಿತಿಯಲ್ಲಿ ಕಾಂಗ್ರೆಸು ಮುಂದರಿಯಲು ಸಹಕಾರಿಯಾದ ಪ್ರಾಮುಖ್ಯ ಠರಾವಿನ ಬೇರನ್ನೇ ಕತ್ತರಿಸಿದಂತಾಯಿತು. ಈ ಹೊರ ನಡೆಯುವಿಕೆಯಿಂದ ಒಂದು ಒಳ್ಳೆ ಸಂಗತಿಯಾಗಿದೆ. ಏನೆಂದರೆ ಇಂದು ಕಾಂಗ್ರೆಸು ಒಮ್ಮತದ, ಏಕಮೇವ ಅಭಿಪ್ರಾಯದ ಸಂಸ್ಥೆಯಲ್ಲವೆಂಬುದು ಬೆಳಕಿಗೆ ಬಂತು. ಅದರ ತತ್ವದ ಮೇಲೆ ನಂಬಿಕೆಯಿಲ್ಲದ, ಅದರ ಕಾರ್ಯಕ್ರಮಗಳಾದ ಖಾದಿ ಪ್ರಚಾರ ಮತ್ತು ಪಾನನಿರೋಧಗಳ ಮೇಲೆ ಭರವಸೆಯಿಲ್ಲದ ಮೆಂಬರರು ಅದರಲ್ಲಿದ್ದಾರೆಂಬುದು ವ್ಯಕ್ತವಾಯಿತು.

ಈ ಸ್ಥಿತಿಗಳಿಂದಾಗಿ ಜಗತ್ತಿನ ಅನುಭವಶಾಲಿ ಮತ್ತು ಅಮೋಘ ಸಂಸ್ಥೆಯೊಡನೆ ಸಿಕ್ಷಿತ ಮತ್ತು ಕಡೆಯ ಹೋರಾಟವನ್ನು ಒಮ್ಮತದಿಂದ ಕಾಂಗ್ರೆಸ್ ಮಾಡುತ್ತಿಲ್ಲ. 1920ರಿಂದ ಅದು ಒಂದು ಸೈನ್ಯದೋಪಾದಿ, ಒಂದೇ ಆಸೆ, ಒಂದೇ ಧ್ಯೇಯ, ಒಂದೇ ನೀತಿಯಿಂದ ಕೂಡಿದ್ದಿತ್ತು. ಈ ವಿರೋಧಿಗಳು ಈಗ ಅವರಷ್ಟಕ್ಕೆ ಹೋಗುವದಾದರೆ ಇದೆಲ್ಲ ನಿಂತು ಹೋಗಬೇಕು. ಒಂದನೇದಾಗಿ, ಸ್ವೀಕರಿಸಲ್ಪಟ್ಟ ತತ್ವಗಳಲ್ಲಿ ತಿದ್ದುವಡಿಗಳಿಗೆ ಆಸ್ಪದವಿಲ್ಲ. ಹಾಗೆ ಮಾಡುವದಾದರೂ ಸಹ ತಿದ್ದುವಡಿಗಳು ಮತ್ತು ನಿಷೇಧ ಸೂಚನೆಗಳು ತಿರಸ್ಕರಿಸಲ್ಪಟ್ಟಾಗ್ಯೂ ಕೂಡ ಅಲ್ಲಿ ಮನ ಒಪ್ಪಿಗೆಯ ವಿಧೇಯತೆ ಇರಬೇಕು. ಕಾಂಗ್ರೆಸಿನಲ್ಲಿರುವ ವಿರೋಧವನ್ನೂ, ಬೇರೆ ಇತರ ಸಂಸ್ಥೆಗಳಲ್ಲಿಯ ವಿರೋಧವನ್ನೂ ಹೋಲಿಸಲಾಗದು. ಅಲ್ಲಿ ವಿರೋಧವು ಸರಕಾರ ಅಭಿಪ್ರಾಯದಲ್ಲಿ ಹೆಚ್ಚಿನ ಮಾರ್ಪಾಡು ಮಾಡಲಾರದು. ಆದರೆ ಕಾಂಗ್ರೆಸಿನಲ್ಲಿ ಅದರ ತತ್ವದಲ್ಲಿ ನಂಬಿಕೆ ಇರುವ ಅದರ ಧ್ಯೇಯವನ್ನು ಸಾಧಿಸಲು ಪ್ರಯತ್ನಪಡುವವರು ಮಾತ್ರ ಇರಬಹುದು. ಸ್ವಾತಂತ್ರ್ಯ ಬೇಡದವರಾಗಲೀ ಅಥವಾ ಸತ್ಯ, ಅಹಿಂಸೆ, ಖಾದಿ, ಕೋಮುವಾರು ಐಕ್ಯತೆ ಹಿಂದುಗಳಲ್ಲಿ ಅಸ್ಪೃಶ್ಯತಾ ನಿವಾರಣೆ ಅಥವ ಮಾದಕ ಪಾನೀಯಗಳ ನಿರೋಧ ಇವುಗಳಲ್ಲಿ ನಂಬಿಕೆ ಇಲ್ಲದವರು ಅದರ ಸದಸ್ಯರಾಗಲು ಸಾಧ್ಯವಿಲ್ಲ.

ಕಾಂಗ್ರೆಸಿನೊಳಗೆ ಕೂಡಿಕೊಂಡು ವಿಚಾರಗಳನ್ನು ವಿಮರ್ಶಿಸದ ಅಂಶೂ, ಬಹುಮತವನ್ನು ತಮ್ಮ ಕಡೆಗೆ ಒಲಿಸಿಕೊಂಡಿಡುವವರಿಗೆ ತೊಂದರೆ ಕೊಡದೆ ಕಾಂಗ್ರೆಸಿನ ಮುಖ್ಯ ತತ್ವಗಳ ಮೇಲೆ ನಂಬಿಕೆ ಇಲ್ಲದವರು, ಕಾಂಗ್ರೆಸಿನ ಹೊರಗೆ ನಿಂತು ಜನತೆಯನ್ನು ಅವರ ಧ್ಯೇಯಕ್ಕನುಗುಣ ಮಾರ್ಪಡಿಸಿ ಜಯಪತಾಕೆಯನ್ನು ಹಿಡಿದು ಮುಂದರಿಯುವದು ಯೋಗ್ಯ. ಈ ವಿರೋಧಕರ ಬಗ್ಗೆ ತಕ್ಕ ರೀತಿ ವರ್ತಿಸುವದು ಎಷ್ಟು ಹಿತ, ಎಂಬ ಬಗ್ಗೆ ಬಹುಮತದವರೂ ಯೋಚಿಸುವದು ಅವರ ಕರ್ತವ್ಯ. ಅನುಭವದ ಮೇಲೆ ನಿಂತಿರುವ ನನ್ನ ಅಭಿಪ್ರಾಯವೆಂದರೆ ಈ ವಿರೋಧಿಗಳೊಡನೆ ಸ್ನೇಹಭಾವದ ಚರ್ಚೆ ನಡೆಸಿ ಪುನಃ ಅವರು ತಾವು ವಿರೋಧ ಮಾಡುವದು ತಮ್ಮ ಕರ್ತವ್ಯವೆಂದು ತಿಳಿಯುವುದಾದರೆ, ಕಾಂಗ್ರೆಸಿನ ಹೆಸರನ್ನುಪಯೋಗಿಸದೆ ಕಾಂಗ್ರೆಸ್ ಕಾರ್ಯಕ್ರಮವನ್ನು ಕೈಕೊಳ್ಳುವಂತೆ ಕಡಿವಾಣವನ್ನು ಈ ಕನಿಷ್ಠ ಪಕ್ಷದವರಿಗೆ ಒಪ್ಪಿಸುವದು ದೇಶಹಿತ ದೃಷ್ಟಿಯಿಂದ ಯೋಗ್ಯವಾಗಿದೆ. ಕ್ರೋಧ, ದ್ವೇಷ, ಮತ್ತು ಮತ್ಸರಗಳಿಂದ ಈ ಕೆಲಸ ಮಾಡಿದ್ದೇ ಆದರೆ ಅದು ಹೇಗೆ ಜಯಪ್ರದವಾದೀತು?

ಈಗಿನ ವ್ಯಸ್ತತೆಯು ನಿಲ್ಲಿಸಲ್ಪಟ್ಟರೆ, ಕ್ರಮ ಬದ್ಧವಾದ ಕಾರ್ಯಕ್ರಮವನ್ನು ಕ್ರಮೇಣ ತೆಗೆದುಕೊಳ್ಳಬೇಕು.

ರಾಷ್ಟ್ರಕ್ಕೆ ರಾಷ್ಟ್ರಪತಿಗಳ ಸಂದೇಶ.

ಪ್ರಸಂಗಬಿದ್ದರೆ ಸತ್ಯಾಗ್ರಹ ಹೂಡುವೆವು.

ರಾಷ್ಟ್ರಪತಿಗಳಾದ ಸುಭಾಷಚಂದ್ರರು ಸಾಗರ ಮುವ್ವಿಟೋಸದ ಮೈಕ್ರೋಫೋನದಲ್ಲಿ ರಾಷ್ಟ್ರಕ್ಕೆ ಕೆಳಗಿನ ಸಂದೇಶ ಕೊಟ್ಟಿದ್ದಾರೆ:-

೧೯೩೫ ನೇ ಸುಧಾರಣೆ ಕಾಯದೆಯಲ್ಲಿಯ ಸಂಯುಕ್ತಘಟನೆಯ ಯೋಜನೆಯು ಹಿಂದುಸ್ಥಾನವನ್ನು ನಾಶಪಡಿಸುವಂತಹದಿದೆ. ಅದರ ಮುಖ್ಯ ಕೀಲಿಯು ವ್ಹಾಯಿಸರಾಯರ ಕೈಯಲ್ಲಿ ಕೊಡಲ್ಪಟ್ಟಿದೆ. ಕಾಂಗ್ರೆಸ್ಸು ಈ ಸಂಯುಕ್ತಘಟನೆಗೆ ಕೊನೆಯ ವರೆಗೆ ವಿರೋಧ ಮಾಡಿ ಅದನ್ನು ಸದೆಬಡಿಯುವ ಘೋರ ಪ್ರತಿಜ್ಞೆ ಮಾಡಿದ್ದುದು ಮರೆಯಾಗಿಲ್ಲ. ಅದು ಸರ್ವಸ್ವವನ್ನೂ ತ್ಯಾಗ ಮಾಡಿ ತನ್ನ ಪ್ರತಿಜ್ಞೆಯನ್ನು ಪೂರ್ಣ ಮಾಡದೆ ಇರದು. ಕಾಂಗ್ರೆಸಿಗೆ ಚಳ್ಳಹಣ್ಣು ತಿನಿಸುವೆವೆಂದು ಬ್ರಿಟಿಷ್ ಮುತ್ಸದ್ದಿಗಳು ಕಲ್ಪನೆ ಮಾಡಿಕೊಂಡಿದ್ದಾದರೆ ಅದು ಶುದ್ಧ ಭ್ರಮೆಯಾಗಿದೆ. ಸತ್ಯಾಗ್ರಹದ ಮಾರ್ಗವನ್ನವಲಂಬಿಸಿ ಸಂಯುಕ್ತ ಘಟನೆಯನ್ನು ಸದೆಬಡಿಯುವದು ಕಾಂಗ್ರೆಸದ ನಿರ್ಧಾರವಿರುವದು. ಸ್ವರಾಜ್ಯವು ನಮ್ಮ ಜನ್ಮಸಿದ್ಧ ಹಕ್ಕು ಇರುವದು. ಆ ಬಗ್ಗೆ ಹೋರಾಟ ಹೂಡಿ ಅದನ್ನು ಸಂಪಾದಿಸಿಕೊಳ್ಳುವ ಸಾಮರ್ಥ್ಯವು ನಮ್ಮಲ್ಲಿದೆ. ಜನರ ಸಲುವಾಗಿ ಜನರಿಂದ ತಯಾರಿಸಲ್ಪಟ್ಟ ರಾಜ್ಯಘಟನೆಯು ನಮಗೆ ಬೇಕು. ಆ ಬಗ್ಗೆ ಲೋಕಪ್ರತಿನಿಧಿ ಸಭೆ ಕೂಡಿದಾಗಲೇ ನಮಗೆ ಸಮಾಧಾನವಾಗುವದು.

ಕೊಡಗೂ, ಕರ್ನಾಟಕವೂ.

ಲೇಖಕ:- ಕೆ. ಯಂ. ಪೂವಯ್ಯ.

○●○

ಕೊಡಗಿನ ಭವಿಷ್ಯದ ವಿಷಯದಲ್ಲು ಅನೇಕ ಲೇಖನಗಳು, ಕಳೆದ ಕೆಲವು ವರ್ಷಗಳಿಂದ ಸ್ಥಳೀಕ ಪತ್ರಿಕೆಗಳ ಮೂಲಕ ಹೊರಬಿದ್ದಿವೆ. ಈ ಪ್ರಶ್ನೆಯ ತೀರ್ಮಾನಕ್ಕೋಸ್ಕರವಾಗಿಯೇ ಹಾಸ್ಯಾಸ್ಪದಕರವಾದ ಕೆಲವು ಮೀಟಿಂಗಳು ಸಹ ಕೊಡಗಿನ ಕೇಂದ್ರಸ್ಥಾನವಾದ ಮಡಿಕೇರಿಯಲ್ಲಿ ನಡೆದಿವೆ. ಆದರೇನು? ಈ ಪ್ರಶ್ನೆಗೆ ಇನ್ನೂ ಸರಿಯಾದ ಉತ್ತರವನ್ನು ಹುಡುಕುವುದರಲ್ಲಿಯೇ ಇದ್ದೇವೆ. ಈಗ ಕೆಲವು ತಿಂಗಳುಗಳಿಂದಲಾದರೋ, ಕೊಡಗನ್ನು ಯಾವುದೋ ಒಂದು ಕಾಲದಲ್ಲಿ ಸ್ಥಾಪನೆಯಾಗಬಹುದಾದಂಥಾ ಕರ್ನಾಟಕಕ್ಕೆ ಸೇರಿಸಬೇಕೆಂಬ ಬಿರುಗಾಳಿಯು ಒಂದು ಕಡೆ ಬಿರುಸಾಗಿ ಬೀಸುತ್ತಿದೆ. ಆದುದರಿಂದ ಈ ಪ್ರಶ್ನೆಗೆ ಸಂಪೂರ್ಣ ಮತ್ತು ಅಂತ್ಯದ ಉತ್ತರವನ್ನು ಕೊಡಬೇಕಾದ ಕೊಡಗಿನ ಸ್ಥಿತಾಪಿ ಜನರ ತಿಳುವಳಿಕೆಗೋಸ್ಕರ ಈ ಪ್ರಶ್ನೆಯನ್ನು ಬರುವ ಲೇಖನದ ಮೂಲಕ ಚರ್ಚಿಸುತ್ತೇನೆ.

ಸಂಪೂರ್ಣ ಕರ್ನಾಟಕ ಪ್ರಾಂತ್ಯವು ಯಾವುದು?

ಭಾಷಾನುಸಾರ ಪ್ರಾಂತೀಕ ರಚನೆಯಲ್ಲಿ ಈ ಕೆಳಗಿನ ಸೀಮೆಗಳು ಕರ್ನಾಟಕ ಪ್ರಾಂತ್ಯದಲ್ಲಿ ಅಡಗುವವು. ಬೊಂಬಾಯಿ ಪ್ರಾಂತ್ಯದ ಬೆಲ್ಗಾಂ, ಬಿಜಾಪುರ, ಧಾರವಾಡ, ಉತ್ತರ ಕನ್ನಡ ಜಿಲ್ಲೆಗಳು, ಮತ್ತು ಶೋಲಾಪುರ ತಾಲೋಕೂ, ಮದ್ರಾಸು ಪ್ರಾಂತ್ಯದ ದಕ್ಷಿಣ ಕನ್ನಡ, ಬಳ್ಳಾರಿ, ನೀಲಗಿರಿ ಜಿಲ್ಲೆಗಳೂ, ಅನಂತಪುರ ಜಿಲ್ಲೆಯ ಮಡಗಸಿರ ತಾಲೋಕೂ, ಸೇಲಂ ಜಿಲ್ಲೆಯ ಹೊಸ್ಸೂರು ಮತ್ತು ಕೃಷ್ಣಗಿರಿ ತಾಲೋಕುಗಳೂ, ಕೊಯಮುತ್ತೂರು ಜಿಲ್ಲೆಯ ಕೊಳ್ಳೆಗಾಲ ತಾಲೋಕೂ ಮತ್ತು ಪ್ರತ್ಯೇಕವಿರುವ ಕೊಡಗು ಪ್ರಾಂತ್ಯವು. ಇವುಗಳಲ್ಲದೆ, ಆಶ್ರಿತ ಸಂಸ್ಥಾನಗಳಾದ ಇಡೀ ಮೈಸೂರು ಸೀಮೆಯೂ, ಹೈದರಾಬಾದು ಸೀಮೆಯ ಕೆಲವು ಜಿಲ್ಲೆಗಳೂ ಸಹ ಅಡಗಿವೆ. ಇವಿಷ್ಟರಿಂದ ಕೂಡಿದ ಕರ್ನಾಟಕ ಏಕೀಕರಣವು ಎಂದಾದರೂ ಸಾಧ್ಯವಾದರೆ ಕೊಡಗು ಆ ಪ್ರಾಂತ್ಯದಲ್ಲಿ ಖಂಡಿತವಾಗಿಯೂ ಅಡಗಲೇ ಬೇಕಾಗುವುದು.

ಆದರೆ ಅದು ಎಂದಾದರೂ ಸಾಧ್ಯವೇ? ಕನ್ನಡ ಭಾಷೆಯನ್ನಾಡುವ ಜನರನ್ನು ಸಂಪೂರ್ಣವಾಗಿ ಒಂದೇ ಪ್ರಾಂತ್ಯದೊಳಗೆ ಅಡಕ ಮಾಡುವಂಥಾ ಸಾಧ್ಯತೆಯು ಬೇಗನೆ ಸಾಧ್ಯವಿಲ್ಲವೆಂದು ಯಾರೂ ಹೇಳಲಾಪರು. ಆಶ್ರಿತ ಸಂಸ್ಥಾನಗಳಾದ ಮೈಸೂರು ಸೀಮೆಯು ಮತ್ತು ಹೈದರಾಬಾದು ಸೀಮೆಯ ಕೆಲವು ಜಿಲ್ಲೆಗಳು ಇದರಲ್ಲಿ ಅಡಕವಾಗುವ ಸಾಧ್ಯತೆಯು ಎಂದೂ ಕಂಡು ಬರುವುದಿಲ್ಲ. ಮೈಸೂರು ಮತ್ತು ಹೈದರಾಬಾದು ರಾಜಕೀಯಅಧಿಕಾರದಲ್ಲಿ ಸಂಪೂರ್ಣ ಬೇರೆ ಅಂಕಳದಲ್ಲಿರುವುದಲ್ಲದೆ ಕೊಡಗಿನವರಂತೆಯೇ ಅವರು ಅವರ ಪ್ರತ್ಯೇಕ ವ್ಯಕ್ತಿತ್ವವನ್ನು ಬೆಳೆಸಿರುವರು. ಇವೆರಡು ಸೀಮೆಗಳು ಹೊರನಿಂತ ಮೇಲೆ ಬ್ರಿಟಿಷ್ ಸರ್ಕಾರದ ಅಧೀನದಲ್ಲಿರುವ ಕರ್ನಾಟಕವೇ ಇಡೀ ಕರ್ನಾಟಕದಿಂದ ಅರ್ಧಕ್ಕಿಂತಲೂ ಕಮ್ಮಿಯಾಗಿ 70,24,800 ನಿವಾಸಿಗಳಿಂದ ಕೂಡಿದ 35,400 ಚದರ ಮೈಲಿನ ಸೀಮೆಯಾಗುವುದು. ಮೈಸೂರು ಹೊರ ನಿಲ್ಲುವುದರ ಸಲುವಾಗಿ ನೀಲಗಿರಿ, ಮಡಗಾಸಿರ ಹೊಸ್ಸೂರು, ಕೃಷ್ಣಗಿರಿ ಮತ್ತು ಕೊಳ್ಳೆಗಾಲ ತಾಲೋಕುಗಳು ಬೇರೆ ಬೇರೆಯಾಗಿ ನಿಂತುಹೋಗುವುದರಿಂದ 10,50,000 ನಿವಾಸಿಗಳಿಂದ ಕೂಡಿದ 5,000 ಚದರ ಮೈಲಿನ ಸೀಮೆಯು ಪುನಹ ಹೊರನಿಲ್ಲಬೇಕಾಗುವುದರಿಂದ 59,74,800 ನಿವಾಸಿಗಳಿಂದ ಕೂಡಿದ 30,400 ಚದರ ಮೈಲಿಗಳ ಸೀಮೆಯೇ ನಿಲ್ಲುವುದು. (ಏಕವಾಗಿ ಅಡಗದೆ ಇರುವ 5,000 ಚದರ ಮೈಲಿನ ಈ ಸೀಮೆಯನ್ನು ಹೇಗೆ ಕರ್ನಾಟಕ ಪ್ರಾಂತ್ಯಕ್ಕೆ ಸೇರಿಸಿ ರಾಜ್ಯಾಧಿಕಾರ ನಡಿಸುವುದೆಂಬ ಪ್ರಶ್ನೆಗೆ ಶ್ರೀ. ದಾತಾರರವರು ('We can administer them in the manner of colonies')ನಾವು ಅವುಗಳನ್ನು ವಸಾಹತುಗಳಂತೆ ಆಳಬಹುದು. ಎಂಬ ಉತ್ತರವನ್ನಿತ್ತರು. ಈ ಅಭಿಪ್ರಾಯವನ್ನು ಇಲ್ಲಿ ಟೀಕಿಸಬೇಕಿಲ್ಲ. ಹೇಗೂ ಆ ಅಭಿಪ್ರಾಯಕ್ಕೆ ಆ ಸೀಮೆಗಳ ನಿವಾಸಿಗಳು ಎಂದೂ ಒಪ್ಪತಕ್ಕವರಲ್ಲವೆಂದು ಹೇಳಬೇಕೇ?) ಎಂದರೆ ಬಾಕಿ ನಿಲ್ಲುವ ಕರ್ನಾಟಕವು ಉತ್ತರದಲ್ಲಿ ಬೆಲ್ಗಾಂ, ಬಿಜಾಪುರದಿಂದ ತೊಡಗಿ, ಧಾರ್ವಾರ್, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಅಡಗಿಸಿಕೊಂಡು ಸಂಪೂರ್ಣ ದಕ್ಷಿಣ ಅಂತ್ಯದಲ್ಲಿ ಕೊಡಗು ಅಡಕವಾಗುವುದು. ಎಂದರೆ ಕೊಡಗಿನ ಈಗಿನ ಚತುರ್ಗಡಿಯೇ ಕರ್ನಾಟಕ ಪ್ರಾಂತ್ಯದ ದಕ್ಷಿಣ ಚತುರ್ಗಡಿಯಾಗಿ ನಿಲ್ಲುವುದು; ಮಾತ್ರವಲ್ಲದೇ, ನಮಗೆ 30 ಯಾ 40 ಮೈಲಿಗಳ ದೂರದಲ್ಲಿರುವ ಮಡಿಕೇರಿಯ ಪ್ರಾಮುಖ್ಯತೆಯು ಕಮ್ಮಿ 500 ಮೈಲಿಗಳ ದೂರದಲ್ಲಿರುವ ನಮಗೆ ತಿಳಿಯದ ಉತ್ತರ ಸೀಮೆಯ ಒಂದು ನಗರಕ್ಕೆ ಸೇರುವುದು.

ಕರ್ನಾಟಕ ಪ್ರಾಂತ್ಯವು ಬೇಗನೆ ಸಾಧ್ಯವೇ?

ಇಂಡಿಯಾ ದೇಶದ ಭಾಷಾನುಸಾರ ಪ್ರಾಂತೀಕ ರಚನೆಯ ತತ್ವಕ್ಕೆ ಕಾಂಗ್ರೆಸ್ ಒಪ್ಪಿರುತ್ತದೆ. ಆದರೆ, ಈಗ ಮದ್ರಾಸು ಮತ್ತು ಬೊಂಬಾಯಿಯಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರಗಳೇ ಈ ಅಭಿಪ್ರಾಯಕ್ಕೆ ಹೆಚ್ಚಿನ ಪ್ರೋತ್ಸಾಹ ತೋರಿಸುವುದು ಕಂಡು ಬರುವುದಿಲ್ಲ. ಕೆಲವು ತಿಂಗಳುಗಳ ಹಿಂದೆ ಶ್ರೀ. ದಾತಾರ್ ರವರು ಮದ್ರಾಸು ಪ್ರಧಾನ ಮಂತ್ರಿಯವರಿಗೆ ಬರೆದ ಕಾಗದಕ್ಕೆ, ಅವರು ಈ ಉತ್ತರವನ್ನಿತ್ತಿರುವರು. ('In reply to your letter dated 12-12-'37 to the Prime Minister, I am directed to say that the Govt. of Madras are unable to see any advantage, but much possible harm, in taking action at the present moment on the question of the formation of a seperate Karnataka Province.') 'ಪ್ರಧಾನ ಮಂತ್ರಿಗಳಿಗೆ ಬರೆದ ನಿಮ್ಮ ತಾರೀಕು 12-12-37 ರ ಪತ್ರಕ್ಕೆ ಉತ್ತರವಾಗಿ ಪ್ರತ್ಯೇಕ ಕರ್ನಾಟಕ ಪ್ರಾಂತ ನಿರ್ಮಾಣದ ಪ್ರಶ್ನೆಯನ್ನು ಈ ಸಮಯದಲ್ಲಿ ತೆಗೆದುಕೊಂಡರೆ ಬಹಳ ಮಟ್ಟಿಗೆ ತೊಂದರೆಯಾಗುವುದೇ ವಿನಹ ಪ್ರಯೋಜನವೇನೂ ಮದ್ರಾಸು ಸರ್ಕಾರಕ್ಕೆ ಕಾಣುವುದಿಲ್ಲ ಎಂದು ತಿಳಿಸಲು ಆಜ್ಞಾಪಿಸಲ್ಪಟ್ಟಿರುತ್ತೇನೆ.' ಬೊಂಬಾಯಿ ಸರ್ಕಾರದ ಮಂತ್ರಿಯವರೂ ಕೂಡ ಇದೇ ಅಭಿಪ್ರಾಯಪಟ್ಟಿರುವವರಾಗಿರುತ್ತಾರೆ. ಅಲ್ಲದೆ, ಬೊಂಬಾಯಿ ಮತ್ತು ಮದ್ರಾಸು ಗವರ್ನರುಗಳು ಇನ್ನೂ ಹೆಚ್ಚು ಪ್ರಾಂತ್ಯಗಳನ್ನು ಉಂಟು ಮಾಡುವ ಅಭಿಪ್ರಾಯವು ಒಳ್ಳೆಯ ದಾರಿಯಲ್ಲವೆಂದು ಸೂಚಿಸಿರುವರು. ಇತ್ತಲಾಗಿ ವರ್ಕಿಂಗ್ ಕಮಿಟಿಯವರು ಕಾಂಗ್ರೆಸಿನವರು ಮಧ್ಯವರ್ತಿ ಸರ್ಕಾರದಲ್ಲು ಅಧಿಕಾರಕ್ಕೆ ಬಂದ ಮೇಲೆ ಭಾಷಾನುಸಾರ ಪ್ರಾಂತೀಕ ರಚನೆಯ ಪ್ರಶ್ನೆಯನ್ನು ತೀರ್ಮಾನ ಮಾಡುವುದು ಒಳ್ಳೆಯದೆಂದು ಅಭಿಪ್ರಾಯಪಟ್ಟಿರುವರು. ಇವುಗಳ ಮೇಲೆ ಕರ್ನಾಟಕ ಪ್ರಾಂತ್ಯವು ಒಂಬೆರಡು ವರ್ಷಗಳಲ್ಲಿಯೋ ಯಾ, ನಾಲ್ಕು ವರ್ಷಗಳಲ್ಲಿಯೇ ಸಾಧ್ಯವಾಗುವುದೆಂದು ಊಹಿಸುವವರು, ಯೋಚನೆಗಳಿಗೂ, ಸಾಧ್ಯತೆಗಳಿಗೂ ಇರುವ ದೂರವನ್ನು ಮರೆತಿರುವರು.

ಕೊಡಗಿನಲ್ಲಿ ಕರ್ನಾಟಕ ಪ್ರಶ್ನೆ.

ಕೊಡಗಿನಲ್ಲಿ ಕರ್ನಾಟಕ ಪ್ರಾಂತ್ಯದ ಪ್ರಶ್ನೆಯು ಕಳೆದ ಹತ್ತು ಹನ್ನೆರಡು ವರ್ಷಗಳಿಂದ ಚರ್ಚಿಸಲ್ಪಡುತ್ತಿದೆ. ಧಾರವಾಡ ರಾಜಕೀಯ ಮುಖಂಡರು ಒಮ್ಮೊಮ್ಮೆ ಕೊಡಗಿಗೆ ಬಂದಿರುವ ಕೆಲವು ದಿವಸಗಳಲ್ಲಿ ಈ ಚಳವಳವು ಪ್ರಾಮುಖ್ಯತೆಗೆ ಬರುತ್ತದೆ. ಅಲ್ಲಿಂದ ಕೂಡಲೇ ನಿದ್ರಾವಸ್ಥೆಗೆ ಬಿದ್ದಿರುವುದನ್ನು ಎಬ್ಬಿಸಲು ಪುನಹ ಅವರೇ ಬರಬೇಕಾಗುತ್ತದೆ. ಇದರಿಂದ ಕೊಡಗಿನವರು ಈ ಪ್ರಶ್ನೆಗೆ ಎಷ್ಟರ ಮಟ್ಟಿಗೆ ಉತ್ಸಾಹಭರಿತರಾಗಿರುವರೆಂದು ಯೋಚಿಸಿಕೊಳ್ಳಬೇಕು. ಅಲ್ಲದೆ ನಮ್ಮ ಕೇಂದ್ರ ಸ್ಥಾನವಾದ ಮಡಿಕೇರಿಯಲ್ಲಿನ ಕೆಲವು ಪ್ರಜೆಗಳು ತನ್ನ ತಮ್ಮೊಳಗಿನ ವೈಶಮ್ಯವು ಯಾವ ಕಡೆಗೆ ಎಷ್ಟರ ಮಟ್ಟಿಗೆ ಹೆಚ್ಚಾಗಿ ಬೆಳೆಯಿತೋ, ಅಷ್ಟರ ಮಟ್ಟಿಗೆ ಅವರ ರಾಜಕೀಯ ಭಿನ್ನಾಭಿಪ್ರಾಯವು ಪ್ರಾಮುಖ್ಯತೆಗೆ ಬರುತ್ತದೆ. ಆದರೆ, ಇದು ಬೊಂಬಾಯಿ ಪ್ರಾಂತ್ಯದ ಕನ್ನಡಿಗರಿಗೆ ಬಹುದೊಡ್ಡ ಪ್ರಶ್ನೆಯು. ಕೆಲವು ವರ್ಷಗಳ ಹಿಂದೆ ಕೊಡಗಿಗೆ ಬಂದಿದ್ದ ಕೆಲವು ಧಾರವಾಡದ ಮುಖಂಡರು ಧಾರವಾಡವನ್ನು ಕರ್ನಾಟಕದ ಚಳಿಗಾಲದ ಮುಖ್ಯ ಪಟ್ಟಣವಾಗಿಯೂ, ಮಡಿಕೇರಿಯನ್ನು ಬಿಸಿಲು ಕಾಲದ ಮುಖ್ಯ ಪಟ್ಟಣವಾಗಿಯೂ ಮಾಡುವರೆಂದು ಹೇಳಿದ್ದು ನನ್ನ ಯೋಚನೆಯಲ್ಲಿದೆ. ಆ ಕೊಳ್ಳು ಮಾತು ಈಗಿಲ್ಲ! ಅದಂತಿರಲಿ. ಕರ್ನಾಟಕ ಪ್ರಾಂತ್ಯದ ಪ್ರಶ್ನೆಯು ಇಂದಿನದಲ್ಲ, ಅದು ಬಹು ಮುಂದಿನ ಪ್ರಶ್ನೆಯೆಂದಾದ ಮೇಲೆ, ಆ ಪ್ರಶ್ನೆಯನ್ನು ಕೊಡಗಿನಲ್ಲಿ ಇಂದು ಮುಖ್ಯವಾದ ಒಂದು ಪ್ರಶ್ನೆಯಾಗಿಮಾಡಿ ಚಳವಳವೆತ್ತುವುದರ ಪ್ರಯೋಜನವೇನೆಂದು ನನಗೆ ತಿಳಿಯಲಸಾಧ್ಯವಾಗಿದೆ. ನನ್ನ ಅಭಿಪ್ರಾಯದಲ್ಲು, ಈ ಚಳವಳವು ಕೊಡಗಿಗೆ ಪ್ರಾಂತೀಕ ಜವಾಬ್ದಾರಿ ಸರ್ಕಾರವು ಸಿಕ್ಕುವಂಥಾ ಯಾವುದಾದರೂ ಸಾಧ್ಯತೆಯು ಇದ್ದರೆ, ಅಂಥಾ ಸಾಧ್ಯತೆಯನ್ನು ಮೂಲೆಗೊತ್ತಲು ಮಾಡುವ ಪ್ರಯತ್ನವಲ್ಲದೆ ಬೇರೊಂದಿಲ್ಲ. ಕೊಡಗಿಗೆ ಪ್ರಾಂತೀಕ ಜವಾಬ್ದಾರಿಕೆಯು ಸಿಕ್ಕಿ, ಅದರಿಂದ ದೇಶದ ಪ್ರಜೆಗಳಿಗೆ ಹೆಚ್ಚಿನ ಸುಖ ಉಂಟಾದರೆ ಕೊಡಗಿನಲ್ಲಿ ಕರ್ನಾಟಕ ಪ್ರಾಂತ್ಯದ ಪ್ರಶ್ನೆಯು ಎಂದೂ ಏಳಲಾರದು. ಇದು ಹೊರಗಿನ ಅನೇಕರಿಗೆ ಸುಖಕರವಾಗಿ ಕಾಣಲಾರದು. ಈ ಸಮಾಪ್ತಿಯ ಅಭಿಪ್ರಾಯಕ್ಕೆ ನಾನು ಶ್ರೀ. ದಾತಾರರವರೊಂದಿಗೆ ಕೆಲವು ಸಮಯ ಮಾತಾಡಿ ಬಂದಿರುವೆನು. ಅದು ನನ್ನ ಸರಿಯಾದ ಅಭಿಪ್ರಾಯವೆಂದು ನನಗೆ ಈಗ ಮತ್ತಷ್ಟು ಗೋಚರವಾಗುತ್ತಿದೆ.

ಹರಿಪುರ ಕಾಂಗ್ರೆಸ್ಸಿನ ತೀರ್ಮಾನ.

ಕಳೆದ ಹರಿಪುರ ಕಾಂಗ್ರೆಸ್ಸಿನಲ್ಲು 'ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆಂಬ, ಕೊಡಗು ದೇಶದ ನಿವಾಸಿಗಳ ಕೋರಿಕೆಯನ್ನು ಕಾಂಗ್ರೆಸು ಧಿಕ್ಕರಿಸುತ್ತದೆ' ಎಂಬ ಠರಾವು ಪಾಸಾಗಿರುವುದು. ಇದು ಕೊಡಗಿನಲ್ಲಿ ಅನೇಕರಿಗೆ ಆಶ್ಚರ್ಯವನ್ನುಂಟು ಮಾಡದೆ ಇದ್ದಿರಲಾರದು. ಕೊಡಗಿನಲ್ಲಿ ಕೆಲವು ಸಮಯದಿಂದ ಇಂಥಾ ಕೋರಿಕೆಯನ್ನು ಪ್ರಜೆಗಳು ಎಂದೂ ಮಾಡಿದ್ದಿರುವುದಿಲ್ಲ. ಹೆಚ್ಚಾಗಿ ತಿಳಿಯುವಾಗ ಈ ಠರಾವು ಧಾರವಾಡದ ಕೆಲವು ಮುಖಂಡರುಗಳಿಂದ ತೀರ್ಮಾನಿಸಲ್ಪಟ್ಟು—ಇದಕ್ಕೆ ಕೊಡಗಿನ ಕಾಂಗ್ರೆಸ್ ಪ್ರತಿನಿಧಿಗಳು ಅವರ ಒಪ್ಪಿಗೆಯನ್ನು ಕೊಟ್ಟಿರುವರೋ, ಇಲ್ಲವೋ ಎಂದು ನನಗೆ ಗೊತ್ತಿಲ್ಲ—ಕಾಂಗ್ರೆಸ್ಸಿನ ಅಧ್ಯಕ್ಷರಾದ ಸುಭಾಷ್ ಬೋಸರವರಿಂದಲೇ ಕಾಂಗ್ರೆಸ್ ಮಹಾ ಸಭೆಯ ಮುಂದಿಟ್ಟು ಪಾಸು ಮಾಡಲಾಯಿತು. ಈ ಸಂಗತಿಯು ನಿಜವಾದರೆ, ಪ್ರಜಾಜವಾಬ್ದಾರಿ ತತ್ವಕ್ಕೆ ವಿರೋಧವಾಗಿ ಕೊಡಗಿನ ನಿವಾಸಿಗಳಿಗೆ ಇಷ್ಟವಿರಲಿ, ಇಲ್ಲದಿರಲಿ ಅವರನ್ನು ಅವರ ಜುಟ್ಟು ಹಿಡಿದು ಬೇರೆಯವರಿಗೆ ಅನುಕೂಲವಾದಂಥಾ ದಾರಿಯಲ್ಲಿ ಅವರನ್ನು ನೆಳೆಯಲು ಮಾಡಿದ ದೊಡ್ಡದೊಂದು ಉಪಾಯವಲ್ಲದೆ ಬೇರೊಂದಿಲ್ಲ.

ಮದ್ರಾಸಿನ ಪ್ರಶ್ನೆ.

ಕರ್ನಾಟಕದವರು ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆಂಬ ಠರಾವಿಗೆ ಸಹಾನುಭೂತಿ ತೋರಿಸುವ ಆವಶ್ಯಕತೆಯು ಎಲ್ಲಿದೆಯೆಂದು ಯಾರೂ ಪ್ರಶ್ನಿಸಬಹುದು. ಭಾಷಾನುಸಾರ ಪ್ರಾಂತ್ಯದ ತತ್ವವನ್ನು ಕಾಂಗ್ರೆಸ್ಸಿನವರು ಒಪ್ಪಿಕೊಂಡಿರುವಾಗ ಇಂದು ಮದ್ರಾಸು ಮತ್ತು ಬೊಂಬಾಯಿ ಪ್ರಾಂತ್ಯಗಳ ಕರ್ನಾಟಕ ಜಿಲ್ಲೆಗಳು ಮುಂ

ದಿನ ಕರ್ನಾಟಕದ ಭಾಗಗಳಾಗುವವು. ಶ್ರೀ. ನಾತಾರ್‌ರವರ ಪಟ್ಟದಲ್ಲಿ ಆ ರ ಆವು ಒಂದು 'Stop-Gap' ಎಂದರೆ ಸ ದ್ಯಕ್ಕೆ ಇರುವ ಒಂದು ಏರ್ಪಾಡು. ಆ ದರ ಫಲಿತಾಂಶವಾವುದೋ? ಕೊಡಗಿನಲ್ಲಿ ಪ್ರಾಂತೀಕ ಜವಾಬ್ದಾರಿ ಸರ್ಕಾರಕ್ಕೆ ಕೂ ಗೆತ್ತುತ್ತಿದ್ದ ಜನರ ಕೋರಿಕೆಗೆ ಕಾಂಗ್ರೆಸ್ಸ ನ್ನು ಅಷ್ಟು ನಿಲ್ಲಿಸುವುದೇ ಆಗಿತ್ತು. ಇಲ್ಲ ವಾದರೆ, ಮದ್ರಾಸು ಸರ್ಕಾರದಿಂದ ಆಂ ಧ್ರರು, ತಮಿಳರು, ಕೇರಳರು, ಮತ್ತು ಕನ್ನಡಿಗರೆಲ್ಲರೂ ಬೇರೆ ಬೇರೆಯಾಗಬೇ ಕೆಂದು ಕೂಗುತ್ತಿರುವ ಸಮಯದಲ್ಲಿ ಕೊ ಡಗನ್ನು ಮದ್ರಾಸು ಸರ್ಕಾರಕ್ಕೆ ಸೇರಿಸಬೇ ಕೆಂಬುವುದರ ಅರ್ಥವೇನು?

ಕರ್ನಾಟಕ ಪ್ರಾಂತ್ಯದ ಅವಶ್ಯಕತೆ.

ಈಗ ಬೊಂಬಾಯಿ ಪ್ರಾಂತ್ಯದಲ್ಲಿ ಶೇಕಡ 12ರಷ್ಟು, ಮದ್ರಾಸು ಪ್ರಾಂ ತ್ಯದಲ್ಲಿ ಶೇಕಡ ೯ರಷ್ಟು ಕನ್ನಡಿಗರು ಇರುವರು. ಇವೆರಡು ಪ್ರಾಂತ್ಯಗಳಲ್ಲಿ ಯೂ, ಅವರ ಪ್ರಾಂತೀಕ ಮುಖ್ಯ ಪಟ್ಟಣವು ಅವರಿಂದ ಬಹು ದೂರದಲ್ಲಿರುವು ದರಿಂದಲೂ, ಅವರ ಸೀಮೆಯು ಚಿ ಕ್ಕದಾಗಿಯೂ, ಜನಸಂಖ್ಯೆ ಕಮ್ಮಿಯಾಗಿ ಯೂ ಇರುವುದರಿಂದ, ಕರ್ನಾಟಕ ಸೀಮೆ ಗಳು ಅವರ ಸರ್ಕಾರದ ದೃಷ್ಟಿಗೆ ಸರಿಯಾಗಿ ಬೀಳದೆ, ಕನ್ನಡ ಸೀಮೆಗಳು ತಕ್ಕಷ್ಟು ಅ ಭಿವೃದ್ಧಿಗೆ ಬಂದಿರುವುದಿಲ್ಲ. ಬೊಂಬಾ ಯಿ ಪ್ರಾಂತ್ಯದ ಹೆಚ್ಚಿನ ಬಲಶಾಲಿಗಳಾದ ಗುಜರಾತಿಗಳೂ ಮತ್ತು ಮಹಾರಾಷ್ಟ್ರರೂ ಮದ್ರಾಸು ಪ್ರಾಂತ್ಯದ ಹೆಚ್ಚಿನ ಬಲಶಾಲಿ ಗಳಾದ ಆಂಧ್ರರೂ, ತಮಿಳರೂ, ಕನ್ನಡಿ ಗರನ್ನು ಸಂಪೂರ್ಣ ಮೂಲೆಗೊತ್ತಿರುವ ರು. ಬಹುಸಂಖ್ಯಾತ ಜನಾಂಗಗಳೇ ಸರ ಕಾರದ ಹೆಚ್ಚಿನ ಉತ್ಪತ್ತಿಯನ್ನು ಅವರವ ರ ದೇಶಗಳ ಉತ್ಪತ್ತಿಗೋಸ್ಕರ ಹೆಚ್ಚಿಚಾಗಿ ಗಿ ಖರ್ಚು ಮಾಡಿಸುತ್ತಲಿರುವರು. ಹೊ ಸ ಇಂಡಿಯಾ ಆಕ್ಟಿನನುಸಾರವಾಗಿಯೂ ಕೂಡ 175 ಜನರಿಂದ ಕೂಡಿದ ಬೊಂ ಬಾಯಿ ಎಸೆಂಬ್ಲಿಯಲ್ಲಿ 28 ಕನ್ನಡಿಗರೂ, ಮದ್ರಾಸಿನಲ್ಲಿ ಅದಕ್ಕಿಂತಲೂ ಕಮ್ಮಿಯಾ ಗಿಯೂ ಇರುವರು. ಈ ಕಾರಣಗಳಿಂ ದಲೇ ಕನ್ನಡಿಗರ ಕೂಗು!

ಕರ್ನಾಟಕದಲ್ಲಿ ಕೊಡಗಿಗೆ ಸ್ಥಳವಿದೆಯೋ?

ಈ ಪ್ರಶ್ನೆಗೆ ಪ್ರಶ್ನೆಯಿಂದಲೇ ಜವಾ ಬು ಕೊಡಬೇಕಾಗಿದೆ. ಶೇಕಡ 12ರಷ್ಟು ಜನಸಂಖ್ಯೆ ಇರುವ ಕನ್ನಡಿಗರು ಬೊಂಬಾ ಯಿ ಪ್ರಾಂತ್ಯದಲ್ಲಿ ಮೂಲೆಗೊತ್ತಲ್ಪಟ್ಟಿರುವ ರು. ಶೇಕಡ 2ಕ್ಕಿಂತ ಕಮ್ಮಿ ಇರುವ ಕೊ ಡಗಿನವರು ಕರ್ನಾಟಕದಲ್ಲಿ ಎಲ್ಲಿ ನಿಲ್ಲು ವರು? ಕೊಡಗಿನ ನಿವಾಸಿಗಳಿಗೆ ಇಂದು ಅನೇಕ ಸಂಕಟಗಳಿವೆ. ಆದರೆ, ಆ ಸಂಕಟ ಗಳನ್ನೆಲ್ಲಾ ನಾವು ಏಕವಾಗಿಯೂ, ಸಮು ದಾಯಕವಾಗಿಯೂ ಹೊತ್ತುಕೊಂಡಿರು ತ್ತೇವೆ. ಕರ್ನಾಟಕದವರು ಪಡುವಂತೆ ಬೇರೆಯವರನ್ನು ಮುಖಿಗಳಾಗಿ ಮಾಡಿ, ನಾವು ಕಷ್ಟದಲ್ಲಿ ಮುಳುಗಿರುವುದಿಲ್ಲ. ಎಂದರೆ, ಕನ್ನಡಿಗರು ಅವರ ಪ್ರಾಂತ್ಯಗಳ ಲ್ಲಿ ಸಿಕ್ಕಿಬಿದ್ದಿರುವ ಕಷ್ಟಗಳಿಗೆ ನಾವು ಸಿ ಕ್ಕಿಬಿದ್ದಿರುವುದಿಲ್ಲ. ಕನ್ನಡಿಗರ ಈ ಕ ಷ್ಟಗಳಿಂದ ಅವರನ್ನು ಪಾರು ಮಾಡುವ ಪ್ರಯತ್ನದಲ್ಲಿ ನಾವು ಅವರನ್ನು ಸೇರುವು ದರಿಂದ ನಾವು ಎಲ್ಲಿ ನಿಲ್ಲುವೆವು? ಅಂತ್ಯ ದಲ್ಲಿಯೆ! ನಮ್ಮ ಸೀಮೆಯು ಕಾಡು ಪ್ರ ದೇಶವಾಗಿದ್ದು ತಕ್ಕಷ್ಟು ಮುಂದಕ್ಕೆ ಬಂ ದಿರುವುದಿಲ್ಲ. ಆದು ಕರ್ನಾಟಕದ ಒಂ ದು ಭಾಗವಾಗುವುದರಿಂದ ಕೊಡಗು ಬ ಯಲಾಗಿ ಎಲ್ಲರೂ ಸುಖಸಂಪತ್ತಿನಿಂದ ಸುಖಿಗಳಾಗಿ ಬಾಳಬಹುದೆಂದು ಯಾರಾದ ರೂ ನಂಬಿಯಾರೆ? ಬೆಳ್ಳಾರೆ ಮತ್ತು ಸೂರ ಬ್ಬಿ ನಾಡುಗಳ ಕೊಡಗು, ನೀಲಗಿರಿ ಮುಂತಾ ದ ಜಿಲ್ಲೆಗಳ ಉತ್ಪತ್ತಿಯ ಹೆಚ್ಚಿನ ಭಾಗ ವು ನಮ್ಮ ಕೂಗುಮುಟ್ಟದೆ ಇರುವ ಉತ್ತ ರ ಜಿಲ್ಲೆಗಳಲ್ಲಿ ನಿಲ್ಲಬಹುದಾದ ಮುಖ್ಯ ಪಟ್ಟಣವನ್ನು ಶೃಂಗರಿಸುವುದರಲ್ಲಿಯೂ, ಮುಖ್ಯ ಪಟ್ಟಣಕ್ಕೆ ಬೇಕಾದ ಅನೇಕ ಅವ ಶ್ಯಕತೆಗಳನ್ನು ಒದಗಿಸಿಕೊಳ್ಳುವುದರಲ್ಲಿ ಯೂ, ಅದನಂತರ ಅದರ ಸುತ್ತ ಮುತ್ತಲಿ ನ ಹತ್ತಿರದ ಸೀಮೆಗಳನ್ನು ಅಭಿವೃದ್ಧಿ ಪಡಿ ಸುವುದರಲ್ಲಿಯೂ ಖರ್ಚುಮಾಡಲಾಗುತ್ತೆ ಯಲ್ಲದೆ, ಆ ಸೀಮೆಗಳ ಉತ್ಪತ್ತಿಯನ್ನು ದೂರ ನಿಂತಿರುವ ಕೊಡಗು ಮುಂತಾದ ಸೀಮೆಗಳ ಬೆಳವಣಿಗೆಗೆ ಖರ್ಚು ಮಾಡ ಲಾಗುತ್ತೆ ಎಂದು ಆಶಿಸುವುದು ಬರೀ ತಿ ರುಕನ ಸ್ವಪ್ನ.

ಉತ್ಪತ್ತಿಯ ದೃಷ್ಟಿಯಿಂದ ನೋಡಿದ ರೆ–ಕೊಡಗಿನಲ್ಲಿ ಈಗ ಹೆಚ್ಚು ಕಮ್ಮಿ 1 ಚದರ ಮೈಲಿಗೆ ೯೨೫ ರೂಪಾಯಿ ಉತ್ಪ ತ್ತಿ ಇದೆ. ಎಂದರೆ ಜನಸಂಖ್ಯೆ ಒಂದರ 7–8–0 ರೂ. ಉತ್ಪತ್ತಿ. ಕರ್ನಾಟಕದ ವರು ಅಪೇಕ್ಷಿಸುವಂಥಾ ಕರ್ನಾಟಕವು ಸ್ಥಾಪನೆಗೆ ಬಂದರೆ ಚ. ಮೈ. ಒಂದರ 825 ರೂಪಾಯಿಯೂ ಜನ ಸಂಖ್ಯೆ 1ರ 4–12–0 ರೂ. ಆಗುತ್ತೆ. ಅದರಿಂದ ಕೊಡಗು ಮತ್ತು ನೀಲಗಿರಿ ಹೊರ ನಿಂತ ರೆ ಬಾಕಿ ಕರ್ನಾಟಕದ ಉತ್ಪತ್ತಿಯು ಚ. ಮೈ. ಒಂದರ 780 ರೂಪಾಯಿಯೂ ಜನ ಸಂಖ್ಯೆ ಒಂದರ 4 ರೂಪಾಯಿಗೂ ಕ ಮ್ಮಿ ಇಳಿಯುವುದು. ಈ ಅಂಶಗಳನ್ನು ನೋ ಡಿ ಇನ್ನೂ ಯಾರಾದರು ಬೇರೆ ದೇಶದ ಉತ್ಪತ್ತಿಯು ಕೊಡಗಿನ ಉಪಯೋಗಕ್ಕೆ ಬರಬಹುದೆಂದ ಯೋಚಿಸುವರೇ?

ಒಂದೇ ಪ್ರಾಂತ್ಯವಾಗಿರಲು ಮುಖ್ಯ ಅವಶ್ಯಕತೆಗಳು.

(1) ಪ್ರಕೃತಿ ರಚನೆಯಲ್ಲಿ ಏಕವಾ ಗಿರುವುದು. (Geographical situation (2) ಏಕ ಭಾಷೆ (Common language), (3) ಏಕ ಜನಾಂಗ (Racial tie), (4) ಪರಸ್ಪರ ಆರ್ಥಿಕ ಅನುಕೂಲಗಳು (Mutual economic advantages).

(1) ಕರ್ನಾಟಕ ಪಟವನ್ನು ತೆಗೆದು ನೋಡಿದರೆ ಕೊಡಗು ಕನ್ನಡಕ್ಕೆ ಒತ್ತಿ ಏ ಕವಾಗಿ ಹರಡಿ ನಿಂತಿರುವುದು ಕಂಡು ಬ ರುತ್ತೆ. ಆದರೆ, ಹಾಗೆ ಏಕವಾಗಿ ಹರಡಿ ನಿಂತಿರುವುದಾದರೂ, ಕರ್ನಾಟಕಕ್ಕೂ ಕೊ ಡಗಿಗೂ ಮಧ್ಯೆ ಉತ್ತರದಿಂದ ದಕ್ಷಿಣದ ವರೆಗೂ 10 ಮೈಲಿಗಳ ಅಗಲಕ್ಕೂ ಎತ್ತರ ವಾದ ಪಶ್ಚಿಮ ಘಟ್ಟವು ದ. ಕನ್ನಡವನ್ನೂ ಕೊಡಗನ್ನೂ ಎಲ್ಲಾ ಕಾಲಕ್ಕೂ ಬೇರೆ ಮಾ ಡಿ ನಿಂತಿದೆಯಲ್ಲದೆ, ಪಶ್ಚಿಮ ಘಟ್ಟದ ಪೂ ರ್ವದಲ್ಲಿಯ ಸೀಮೆಯಾದ ಕೊಡಗು ಪೂ ರ್ವಕ್ಕೆ ಇಳಿಜಾರಾಗಿ ಅರಬೀ ಸಮುದ್ರದ ನ್ನು ಮುಟ್ಟುತ್ತದೆ. ಯಾವುದಾದರೂ ಒಂದು ಪ್ರಯೋಜನಕರವಾದ ನದಿ ಕೂಡ ಇವೆರ ಡು ಸೀಮೆಗಳಿಗೂ ಪ್ರಯೋಜನಕರವಾ ಗುವಂತೆ ಕೊಡಗಿನಲ್ಲಿ ಹುಟ್ಟಿ ದ. ಕನ್ನಡ ಕ್ಕಾಗಿ ಹರಿಯುವುದಾಗಲೀ, ದ. ಕನ್ನಡ ಲ್ಲಿ ಹುಟ್ಟಿ ಕೊಡಗಿಗಾಗಿ ಹರಿಯುವುದಾ ಗಲೀ ಇಲ್ಲ. ಕೊಡಗಿನ ಯಾವ ಹಳ್ಳಿ ಯಿಂದಲಾದರೂ ದ. ಕನ್ನಡದ ನಮ್ಮನೆರೆ ಯ ಒಂದು ಹಳ್ಳಿಯನ್ನು ನೋಡಬೇಕಾ ದರೆ ಹೆಚ್ಚು ಕಮ್ಮಿ 40 ಮೈಲಿಗಳ ದೂರ ಹೋಗಬೇಕಾಗಿದೆ. ಅದೂ, ದ. ಕನ್ನಡ ವನ್ನೂ, ಕೊಡಗನ್ನೂ ಸೇರಿಸುವ ಒಂದೇ ರಸ್ತೆಗಾಗಿ.

ಏಕ ಭಾಷೆ.

ಕೊಡಗಿನ ಹೆಚ್ಚಿನ ಜನರ ಹುಟ್ಟು ಭಾಷೆಯು ಕನ್ನಡವಲ್ಲ. ಆದರೆ ಅವರಿಗೆ ಲ್ಲ ಏಕವಾಗಿರುವ ಭಾಷೆಯು ಕನ್ನಡವೇ. ಆದರೂ, ಕನ್ನಡ ಭಾಷೆಯ ಪ್ರೇಮ ಒಂ ದೇ ಬೇರೆ ಇರುವ ಅನೇಕ ಕುಂದು ಕೊರ ತೆಗಳನ್ನು ಬಚ್ಚಿಟ್ಟು, ಮೂಲೆಗೊತ್ತಿ, ಭಾ ಷೆಯ ಪ್ರೇಮ ಒಂದನ್ನೇ ಎತ್ತಿ ಹಿಡಿದು ನಾವು ಕನ್ನಡ ಸೀಮೆಗೆ ಸೇರುವ ಅವಶ್ಯಕ ತೆಯು ನನಗೆ ತೋರುವುದಿಲ್ಲ. ಕನ್ನಡಿ ಗರ ವ್ಯಕ್ತಿತ್ವವು ಕನ್ನಡಿಗರದು; ಕೊಡಗಿನ ವರ ವ್ಯಕ್ತಿತ್ವವು ಕೊಡಗಿನವರದು. ಇವೆ ರಡು ಹಿಂದೆ ಯಾವ ಕಾಲದಲ್ಲಿಯೂ ಒಂ ದಾಗಿದ್ದಿರುವುದಿಲ್ಲ. ವಿಜಯನಗರ ಸಾ ಮ್ರಾಜ್ಯದ ಕಾಲದಲ್ಲಿಯೂ ಕೂಡ, ಹೆಚ್ಚಿ ನ ಕನ್ನಡಿಗರು ಒಂದೇ ಆಡಳಿತಕ್ಕೆ ಒಳ ಪಟ್ಟಿದ್ದವರಾಗಿದ್ದರೂ ಕೂಡ, ಕೊಡಗು ಬೇರೆಯೇ ಇದ್ದಿತು. ಆದುದರಿಂದ ಕನ್ನ ಡ ಭಾಷೆಯು ನಮಗೆ ಏಕವಾದರೂ, ಕ ನ್ನಡ ಸೀಮೆಗಳ ಕನ್ನಡಿಗರು ನಮಗೆ ಕೇ ವಲ ಪರಿಚಯವಿಲ್ಲದವರೇ. ಧಾರವಾ ಡ ಮುಂತಾದ ಉತ್ತರ ಜಿಲ್ಲೆಗಳಿಂದ ಒ ಮ್ಮೊಮ್ಮೆ ನಮ್ಮ ಸೀಮೆಗೆ ಬರುವ ಡಾ. ಹರ್ಡೀಕರರಂತಹ ರತ್ನಗಳಲ್ಲದೆ, ಉತ್ತರ ಸೀಮೆಗಳ ಜನರು ನಮಗೆ ಸಂಪೂರ್ಣ ಪ ರಿಚಯವಿಲ್ಲದವರೇ. ಅವರ ಪರಿಚಯ ವು ನಮಗೆ ದೂರದಲ್ಲಿರುವ ತಮಿಳರು ಆಂ ಧ್ರರಿಗಿಂತ ಹೆಚ್ಚೇನು ಇರುವುದಿಲ್ಲ.

ಏಕ ಜನಾಂಗ.

ನಾವು ಕನ್ನಡಿಗರಾದರೂ, ಕೊಡಗಿನ ಹೆಚ್ಚಿನ ಜನರು ಜನಾಂಗದಲ್ಲಿ ಬೇರೆ ಯೇ. ಜನರನ್ನು ಒಂದಾಗಿ ಕೂಡಿಸ ಬು ಬೇಕಾದಂತಹ ಏಕತ್ವವು ಕೊಡಗಿನವ ರಲ್ಲಿಯೂ, ಕನ್ನಡಿಗರಲ್ಲಿಯೂ ಏಕವಾ ಗಿ ಇರುವುದಿಲ್ಲ. ನಮ್ಮ ನಡತೆ ನೀತಿಗ ಳೇ ಬೇರೆ ನಮ್ಮ ಹಬ್ಬ ಹುಣ್ಣಿಮೆಗಳೇ ಬೇರೆ, ನಮ್ಮ ದೈವಭಕ್ತಿಯ ನೋಟವೇ ಬೇರೆ ಹೆಚ್ಚೇಕೆ? ನಮಗೆ ಮುಟ್ಟದೆ ಎಂದು ಎನ್ನುವ ಕನ್ನಡ ಸೀಮೆಯನ್ನು ಕೊಡಗಿನಿಂದ ನೋಡಬೇಕಾದರೂ ಕೂಡ ಈ ಎರಡು ಸೀಮೆಗಳನ್ನು ವಿಂಗಡಿಸಿ ನಿಂ ತಿರುವ ಪಶ್ಚಿಮ ಘಟ್ಟದ ಸಂಪೂರ್ಣ ಪಶ್ಚಿ ಮ ಭಾಗದ ಶಿಖರ ಶ್ರೇಣಿಯ ಮೂಲೆಗೆ ಹೋಗಿ ನಿಂತರೆ ಮಾತ್ರ ಕನ್ನಡ ಸೀಮೆಯು ಕಂಡುಬರುವುದು.

ಆರ್ಥಿಕ ಅನುಕೂಲತೆಗಳು

ಕೊಡಗಿನ ವ್ಯಾಪಾರದ ಸಂಬಂಧಿಕೆ ಯು ಮೈಸೂರು, ಮಲೆಯಾಳ ಮತ್ತು ಮಂಗಳೂರುಗಳೊಂದಿಗೆ ಇದೆ. ಇವುಗಳ ಲ್ಲಿ ಮಂಗಳೂರಿನೊಂದಿಗೆ ವ್ಯಾಪಾರದ ಸಂಬಂಧಿಕೆಯು ಬಹು ಕಮ್ಮಿ. ದಿನ ದಿ ನವೂ, ನಮ್ಮ ವ್ಯಾಪಾರದ ಸಂಬಂಧಿಕೆಯು ಮೈಸೂರು ಮತ್ತು ಮಲೆಯಾಳದೊಂದಿಗೆ ಎಷ್ಟರಮಟ್ಟಿಗೆ ಹೆಚ್ಚುತ್ತಲಿದೆಯೋ ಅ ಷ್ಟರ ಮಟ್ಟಿಗೆ ಮಂಗಳೂರಿನೊಂದಿಗೆ ಕ ಮ್ಮಿಯಾಗುತ್ತಲಿದೆ. ಮಧ್ಯೆ ಪಶ್ಚಿಮ ಘಟ್ಟ ವು ನಿಂತಿರುವುದರಿಂದಲೂ, ಕೊಡಗು ಪೂ ರ್ವಕ್ಕೆ ಇಳಿಜಾರಾಗಿಯೂ ದ. ಕನ್ನಡವು ಪಶ್ಚಿಮಕ್ಕೆ ಇಳಿಜಾರಾಗಿಯೂ, ಇರುವುದ ರಿಂದ, ದೊಡ್ಡ ಹಣವನ್ನು ವೆಚ್ಚ ಮಾಡಿ ಎರಡು ಸೀಮೆಗಳಿಗೂ ಉಪಯೋಗಕಾರಿ ಯಾಗುವಂತಹ ಯಾವ ಕಾರುಬಾರುಗಳ ನ್ನೂ ಕೈಕೊಳ್ಳಲು ಎಂದೂ ಸಾಧ್ಯವಿಲ್ಲ. ಅಂತಹ ಅವಸರಗಳಿಗೆ ನಾವು ಬೇರೆ ಕಡೆಗೆ ನೋಡಬೇಕಾಗಿದೆ.

ರಾಜನೀತಿ.

ಇಂದಿನ ರಾಜನೀತಿಯ ಪ್ರಶ್ನೆಯು ಎಲ್ಲಾ ಕಾಲದಲ್ಲಿಯೂ, ಎಲ್ಲಾ ಕಾಲ ಕ್ಕೂ ದೊಡ್ಡದಾದ ಆರ್ಥಿಕ, ಎಂ ದರೆ ರೊಟ್ಟಿಯ ಪ್ರಶ್ನೆಯನ್ನು ಮುತ್ತಿಕೊಂ ಡಿದೆ. ಯಾವ ರಾಜಕೀಯ, ರಾಜನೀತಿ ಯ ಪ್ರಶ್ನೆಯನ್ನು ಹಿಡಿದು ನಾವು ಸ್ವಲ್ಪ ಕೆರೆದರೂ, ನಮ್ಮ ಚರ್ಮದ ಕೆಳಗೆ ರಕ್ತ ದಂತೆ, ರೊಟ್ಟಿಯ ಪ್ರಶ್ನೆಯೇ ನಮಗೆ ಸ ದಾ ಕಾಣುವುದು. ಈ ಕಾರಣಗಳಿಂದ ಲೇ ಆಂಧ್ರರು, ತಮಿಳರು, ಕೇರಳರು, ಕ ನ್ನಡಿಗರು ಬೇರೆ, ಬೇರೆಯಾಗಬೇಕೆಂದು ಕೂಗೆತ್ತುತ್ತಿರುವರು. ಆದುದರಿಂದ ನಾ ವು ರಾಜಕೀಯ ತತ್ವಗಳಿಂದಲೇ ಸೆಳೆಯ ಲ್ಪಟ್ಟು, ನಮ್ಮ ರೊಟ್ಟಿಯ ಪ್ರಶ್ನೆಗೆ ಹೆಚ್ಚಿ ನ ಗಮನ ಸಿಕ್ಕದಂತಹ ಬದಲಾವಣೆಯ ನ್ನು ಮೋಹಿಸುವುದಕ್ಕಿಂತ, ನಮ್ಮ ರೊ ಟ್ಟಿಯ ಪ್ರಶ್ನೆಗೆ ಹೆಚ್ಚಿನ ಪ್ರಾಮುಖ್ಯತೆ ಯೂ ಸಿಕ್ಕುವಂತಹ ದಾರಿಯಲ್ಲಿ ನಮ್ಮ ರಾಜಕೀಯ ಕಲ್ಯಾಣವನ್ನು, ಸಾವಕಾಶ ದಿಂದಲಾದರೂ, ಸಾಧಿಸುವುದು ಉತ್ತಮ ವು. ಬಂಡೆಯಿಂದ ಬಂಡೆಗೆ ದುಮುಕಿ ಬೀಳುವ ನೀರಿನ ಸೊಗಸಿಗೆ ಆಕರ್ಷಿಸಲ್ಪ ಟ್ಟು ಆ ನೀರಿನಲ್ಲಿ ಈಜಾಡಲು ಮನು ಕುವವನು ಜಾಣನೇ?

ಡಾ. ಮೇಥ್ಯೂಸ್ ಎಬ್ರಹಾಮ್
ದಂತ ವೈದ್ಯರು.
(ಸೀಯರ್ಸ್‌ಲೆಸ್ಲಿ ಬಂಗ್ಲೆ)
(ಸ್ಪೆನ್ಸರ್ಸ್ ಹತ್ತಿರ)
ಮಡಿಕೇರಿ.



ಇಂಡಿಯಾದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಂಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರಪಸ್ನೋದಿರಿ

ಆತಂಕ ನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ,

52-18 ಬೆಂಗಳೂರು ಸಿಟಿ.

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನರ ದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಆಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ ರೂ. 2,53,15,500.

1937ರಲ್ಲಿ ಪೂರ್ತಿಯಾದ ಉದ್ಯೋಗ ರೂ. 2,02,02,000.

ಎಂಡೋಮೆಂಟ್ ವಿಮಾ ಪತ್ರದ ಮೇರೆ 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಧಾರಾದುಗಳಿಗೆ 26ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

12, ಸೌತ್ ಪರೇಡ್, ಬೆಂಗಳೂರು.

52-33

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೆಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಕರ್ಕೆ.

ಮತ್ತು ಕಂಪೆನಿ,

(52-46) ಗಿರಗಾಂವ, ಮುಂಬಯಿ ೪,

ಧನ್ವಂತರಿ ಸಹಾಯ ಔಷಧಾಲಯ.

ವೀರರಾಜಪೇಟೆ, (ದ ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನ್ನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಖ್ಯಾತಿಯಿರುವ ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನು, ಶೀತಜ್ವರ, ವಿಷಮಜ್ವರ, ಚಳಿಜ್ವರ, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಾಲೆ, ಹೊಟ್ಟೆ ಉಬ್ಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆಗೆ ತೆಗೆದುಕೊಳ್ಳುವದು. 8 ಔನ್ಸುಗಳ ಬುಡ್ಡಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

15 **ಸಿ. ಹೆಚ್. ರಾಮಚೆಟ್ಟಿ ವೈದ್ಯರ್.**

ನೋಟೀಸು.

ಈ ಕೆಳಗಿನ ಮಹನೀಯರ 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು.

ಸಬ್ ಏಜಂಟರುಗಳು.

ವೀರರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು.

ಮೆ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು

ಪೊನ್ನಂಪೇಟೆನಾಡು—ಮ ಪಿ. ಜಿ. ಮುದ್ದಮ್ಮಯ್ಯನವರು.

ಮಡಿಕೇರಿ—ಮ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಜಿ. ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮೆ ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮೆ ಕೆ ಮಾಗಪ್ಪನವರು.

ಶಾಕೋಕ್ಲು—ಮೆ. ಬೆಳ್ಳಿಪಂಡ ಯಂ. ಪೂಣಚ್ಚನವರು

(ಶಾಕೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.—ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಕೂಡದಾಗಿ ಈ ಮೂಲಕ ತಿಳಿಸಲಾಗಿದೆ,

ಮೇನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರ-ಶ್ರೀಮೇಕಾದ ರಿಜಿಸ್ಟರುಗಳು ಅಂದರೆ—ಜಮಾ. ಖರ್ಚು, ಸಾಲ ಸಾಮಾಲದ ರಿಜಿಸ್ಟರು. ಸಾಲದ ರಿಜಿಸ್ಟರು, **ಮೆಂಬರು** ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ **ಮೆಂಬರನಲ್ಲಿಯೂ** ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಡೈಲಿ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಾಬಂದಿ ಜಾತಿ, ಕುಟುಂಬದ ಪಟ್ಟಿಗೆ, ಸಾಲದ ಅರ್ಜಿ, ದವಸಭಂಡಾರದ ಖಾತಾ, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ನಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಆಡ್ರೆಸಿಗೆ ಬರೆಯಿರಿ.

ಮೇನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

ದಿನ ಕರ್ನಾಟಕದ ಭಾಗಗಳಾಗುವವು. ಶ್ರೀ. ದಾತಾರ್‌ರವರ ಶಬ್ದದಲ್ಲಿ ಆ ರ ರಾಷ್ಟ್ರ ಒಂದು 'Stop-Gap' ಎಂದರೆ ಸ ದ್ಯಕ್ಕೆ ಇರುವ ಒಂದು ಏರ್ಪಡಿಸಿದು. ಅ ದರ ಫಲಿತಾಂಶವಾದರೋ? ಕೊಡಗಿನಲ್ಲಿ ಪ್ರಾಂತೀಕ ಜವಾಬ್ದಾರಿ ಸರ್ಕಾರಕ್ಕೆ ಕೂ ಗೆತ್ತುತ್ತಿದ್ದ ಜನರ ಕೋರಿಕೆಗೆ ಕಾಂಗ್ರೆಸ್ಸ ನ್ನು ಅಡ್ಡ ನಿಲ್ಲಿಸುವುದೇ ಆಗಿತ್ತು. ಇಲ್ಲ ವಾದರೆ, ಮದ್ರಾಸು ಸರ್ಕಾರದಿಂದ ಆಂ ಧ್ರರು, ತಮಿಳರು, ಕೇರಳರು, ಮತ್ತು ಕನ್ನಡಿಗರೆಲ್ಲರೂ ಬೇರೆ ಬೇರೆಯಾಗಬೇ ಕೆಂದು ಕೂಗುತ್ತಿರುವ ಸಮಯದಲ್ಲಿ ಕೊ ಡಗನ್ನು ಮದ್ರಾಸು ಸರ್ಕಾರಕ್ಕೆ ಸೇರಿಬೇ ಕೆಂಬುವುದರ ಅರ್ಥವೇನು?

ಕರ್ನಾಟಕ ಪ್ರಾಂತ್ಯದ ಅವಶ್ಯಕತೆ.

ಈಗ ಬೊಂಬಾಯಿ ಪ್ರಾಂತ್ಯದಲ್ಲಿ ಶೇಕಡ 12ರಷ್ಟು, ಮದ್ರಾಸು ಪ್ರಾಂ ತ್ಯದಲ್ಲಿ ಶೇಕಡ 6ರಷ್ಟು ಕನ್ನಡಿಗರು ಇರುವರು. ಇವೆರಡು ಪ್ರಾಂತ್ಯಗಳಲ್ಲಿ ಯೂ, ಅವರ ಪ್ರಾಂತೀಕ ಮುಖ್ಯ ಪಟ್ಟಣವು ಅವರಿಂದ ಬಹು ದೂರದಲ್ಲಿರುವು ದರಿಂದಲೂ, ಅವರ ಸೀಮೆಯು ಚಿ ಕ್ಕದಾಗಿಯೂ, ಜನಸಂಖ್ಯೆ ಕಮ್ಮಿಯಾಗಿ ಯೂ ಇರುವುದರಿಂದ, ಕರ್ನಾಟಕ ಸೀಮೆ ಗಳು ಅವರ ಸರ್ಕಾರದ ದೃಷ್ಟಿಗೆ ಸರಿಯಾಗಿ ಬೀಳದೆ, ಕನ್ನಡ ಸೀಮೆಗಳು ತಕ್ಕಷ್ಟು ಅ ಭಿವೃದ್ಧಿಗೆ ಬಂದಿರುವುದಿಲ್ಲ. ಬೊಂಬಾ ಯಿ ಪ್ರಾಂತ್ಯದ ಹೆಚ್ಚಿನ ಬಲಾ ಬಿಗಳಾದ ಗುಜರಾತಿಗಳೂ ಮತ್ತು ಮಹಾರಾಷ್ಟ್ರರೂ ಮದ್ರಾಸು ಪ್ರಾಂತ್ಯದ ಹೆಚ್ಚಿನ ಬಲಾಬಿ ಗಳಾದ ಆಂಧ್ರರೂ, ತಮಿಳರೂ, ಕನ್ನಡಿ ಗರನ್ನು ಸಂಪೂರ್ಣ ಮೂಲೆಗೊತ್ತಿರುವ ರು. ಬಲಾಢ್ಯರಾದ ಜನಾಂಗಗಳೇ ಸರ ಕಾರದ ಹೆಚ್ಚಿನ ಉತ್ಪತ್ತಿಯನ್ನು ಅವರವ ರ ದೇಶಗಳ ಉತ್ಪತ್ತಿಗೋಸ್ಕರ ಹೆಚ್ಚೆಚ್ಚಾ ಗಿ ಖರ್ಚು ಮಾಡಿಸುತ್ತಲಿರುವರು. ಹೊ ಸ ಇಂಡಿಯಾ ಆಕ್ಟಿಗನುಸಾರವಾಗಿಯೂ ಕೂಡ 175 ಜನರಿಂದ ಕೂಡಿದ ಬೊಂ ಬಾಯಿ ಎಸೆಂಬ್ಲಿಯಲ್ಲಿ 28 ಕನ್ನಡಿಗರೂ, ಮದ್ರಾಸಿನಲ್ಲಿ ಅದಕ್ಕಿಂತಲೂ ಕಮ್ಮಿಯಾ ಗಿಯೂ ಇರುವರು. ಈ ಕಾರಣಗಳಿಂ ದಲೇ ಕನ್ನಡಿಗರ ಕೂಗು!

ಕರ್ನಾಟಕದಲ್ಲಿ ಕೊಡಗಿಗೆ ಸ್ಥಳವಿಲ್ಲವೇ?

ಈ ಪ್ರಶ್ನೆಗೆ ಪ್ರಶ್ನೆಯಿಂದಲೇ ಜವಾ ಬು ಕೊಡಬೇಕಾಗಿದೆ. ಶೇಕಡ 12ರಷ್ಟು ಜನಸಂಖ್ಯೆ ಇರುವ ಕನ್ನಡಿಗರು ಬೊಂಬಾ ಯಿ ಪ್ರಾಂತ್ಯದಲ್ಲಿ ಮೂಲೆಗೊತ್ತಲ್ಪಟ್ಟಿರುವ ರು. ಶೇಕಡ 2ಕ್ಕಿಂತ ಕಮ್ಮಿ ಇರುವ ಕೊ ಡಗಿನವರು ಕರ್ನಾಟಕದಲ್ಲಿ ಎಲ್ಲಿ ನಿಲ್ಲು ವರು? ಕೊಡಗಿನ ನಿವಾಸಿಗಳಿಗೆ ಇರುವ ಅನೇಕ ಸಂಕಟಗಳಿವೆ. ಆದರೆ, ಆ ಸಂಕಟ ಗಳನ್ನೆಲ್ಲಾ ನಾವು ಏಕವಾಗಿಯೂ, ಸಮು ದಾಯಿಕವಾಗಿಯೂ ಹೊತ್ತುಕೊಂಡಿರು ತ್ತೇವೆ. ಕರ್ನಾಟಕದವರು ಪಡುವಂತೆ ಬೇರೆಯವರನ್ನು ಸುಮಗಳಾಗಿ ಮಾಡಿ, ನಾವು ಕಷ್ಟದಲ್ಲಿ ಮುಳುಗಿರುವುದಿಲ್ಲ. ಎಂದರೆ, ಕನ್ನಡಿಗರು ಅವರ ಪ್ರಾಂತ್ಯಗಳ ಲ್ಲಿ ಸಿಕ್ಕಿಬಿದ್ದಿರುವ ಕಷ್ಟಗಳಿಗೆ ನಾವು ಸಿ ಕ್ಕಿಬಿದ್ದಿರುವುದಿಲ್ಲ. ಕನ್ನಡಿಗರ ಈ ಕ ಷ್ಟಗಳಿಂದ ಅವರನ್ನು ಪಾರು ಮಾಡುವ ಪ್ರಯತ್ನದಲ್ಲಿ ನಾವು ಅವರನ್ನು ಸೇರುವು ದರಿಂದ ನಾವು ಎಲ್ಲಿ ನಿಲ್ಲುವೆವು? ಅಂತ್ಯ ದಲ್ಲಿಯೆ! ನಮ್ಮ ಸೀಮೆಯು ಕಾಡು ಪ್ರ ದೇಶವಾಗಿದ್ದು ತಕ್ಕಷ್ಟು ಮುಂದಕ್ಕೆ ಬಂ ದಿರುವುದಿಲ್ಲ. ಅದು ಕರ್ನಾಟಕದ ಒಂ ದು ಭಾಗವಾಗುವುದರಿಂದ ಕೊಡಗು ಬ ಯಲಾಗಿ ಎಲ್ಲರೂ . ಸುಖಸಂಪತ್ತಿನಿಂದ ಸುಖಿಗಳಾಗಿ ಜೀವಿಸುವರೆಂದು ಯಾರಾದ ರೂ ನಂಬಿರುವರೇ? ಚಿಕ್ಕ ಸುತ್ತು ದೂರ ಬಿದ್ದಿರುವ ಕೊಡಗು, ನೀಲಗಿರಿ ಮುಂತಾ ದ ಜಿಲ್ಲೆಗಳ ಉತ್ಪತ್ತಿಯ ಹೆಚ್ಚಿನ ಭಾಗ ವು ನಮ್ಮ ಕೂಗುಮುಟ್ಟದೆ ಇರುವ ಉತ್ತ ರ ಜಿಲ್ಲೆಗಳಲ್ಲಿ ನಿಲ್ಲಬಹುದಾದ ಮುಖ್ಯ ಪಟ್ಟಣವನ್ನು ಶೃಂಗರಿಸುವುದರಲ್ಲಿಯೂ, ಮುಖ್ಯ ಪಟ್ಟಣಕ್ಕೆ ಬೇಕಾದ ಅನೇಕ ಅವ ಶ್ಯಕತೆಗಳನ್ನು ಒದಗಿಸಿಕೊಳ್ಳುವುದರಲ್ಲಿ ಯೂ, ಅದನಂತರ ಅದರ ಸುತ್ತುಮುತ್ತಲಿ ನ ಹತ್ತಿರದ ಸೀಮೆಗಳನ್ನು ಅಭಿವೃದ್ಧಿಪಡಿ ಸುವುದರಲ್ಲಿಯೂ ಖರ್ಚುಮಾಡಲಾಗುತ್ತೆ ಯಲ್ಲದೆ, ಆ ಸೀಮೆಗಳ ಉತ್ಪತ್ತಿಯನ್ನು ದೂರ ನಿಂತಿರುವ ಕೊಡಗು ಮುಂತಾದ ಸೀಮೆಗಳ ಬೆಳವಣಿಗೆಗೆ ಖರ್ಚು ಮಾಡ ಲಾಗುತ್ತೆ ಎಂದು ಆಶಿಸುವುದು ಬರೇ ತಿ ರುಕನ ಸ್ವಪ್ನ.

ಉತ್ಪತ್ತಿಯ ದೃಷ್ಟಿಯಿಂದ ನೋಡಿದ ರೆ-ಕೊಡಗಿನಲ್ಲಿ ಈಗ ಹೆಚ್ಚು ಕಮ್ಮಿ 1 ಚದರ ಮೈಲಿಗೆ 825 ರೂಪಾಯಿ ಉತ್ಪ ತ್ತಿ ಇದೆ. ಎಂದರೆ ಜನಸಂಖ್ಯೆ ಒಂದರ 7-8-0 ರೂ. ಉತ್ಪತ್ತಿ. ಕರ್ನಾಟಕದ ವರು ಅನೇಕ್ಸಿಸುಸಂಧಾ ಕರ್ನಾಟಕವು ಸ್ಥಾಪನೆಗೆ ಬಂದರೆ ಚ. ಮೈ. ಒಂದರ 825 ರೂಪಾಯಿಯೂ ಜನ ಸಂಖ್ಯೆ 1ರ 4-12-0 ರೂ. ಆಗುತ್ತೆ. ಅದರಿಂದ ಕೊಡಗು ಮತ್ತು ನೀಲಗಿರಿ ಹೊರ ನಿಂತ ರೆ ಬಾಕಿ ಕರ್ನಾಟಕದ ಉತ್ಪತ್ತಿಯು ಚ. ಮೈ. ಒಂದರ 780 ರೂಪಾಯಿಯೂ ಜನ ಸಂಖ್ಯೆ ಒಂದರ 4 ರೂಪಾಯಿಗೂ ಕ ಮ್ಮಿ ಇಳಿಯುವುದು. ಈ ಅಂಕಗಳನ್ನು ನೋ ಡಿ ಇನ್ನೂ ಯಾರಾದರು ಬೇರೆ ದೇಶದ ಉತ್ಪತ್ತಿಯು ಕೊಡಗಿನ ಉಪಯೋಗಕ್ಕೆ ಬರಬಹುದೆಂದು ಯೋಚಿಸುವರೇ?

ಒಂದೇ ಪ್ರಾಂತ್ಯವಾಗಿರಲು ಮುಖ್ಯ ಅವಶ್ಯಕತೆಗಳು.

(1) ಪ್ರಕೃತಿ ರಚನೆಯಲ್ಲಿ ಏಕವಾ ಗಿರುವುದು. (Geographical situation (2) ಏಕ ಭಾಷೆ (Common language), (3) ಏಕ ಜನಾಂಗ (Racial tie), (4) ಪರಸ್ಪರ ಆರ್ಥಿಕ ಅನುಕೂಲಗಳು (Mutual economic advantages).

(1) ಕರ್ನಾಟಕದ ಪಟವನ್ನು ತೆಗೆದು ನೋಡಿದರೆ ಕೊಡಗು ಕನ್ನಡಕ್ಕೆ ಒತ್ತಿ ಏ ಕವಾಗಿ ಹರಡಿ ನಿಂತಿರುವುದು ಕಂಡು ಬ ರುತ್ತೆ. ಆದರೆ, ಹಾಗೆ ಏಕವಾಗಿ ಹರಡಿ ನಿಂತಿರುವುದಾದರೂ, ಕರ್ನಾಟಕಕ್ಕೂ ಕೊ ಡಗಿಗೂ ಮಧ್ಯೆ ಉತ್ತರದಿಂದ ದಕ್ಷಿಣದ ವರೆಗೂ 10 ಮೈಲಿಗಳ ಅಗಲಕ್ಕೂ ಎತ್ತರ ವಾದ ಪಶ್ಚಿಮ ಘಟ್ಟವು ವ. ಕನ್ನಡವನ್ನೂ ಕೊಡಗನ್ನೂ ಎಲ್ಲಾ ಕಾಲಕ್ಕೂ ಬೇರೆ ಮಾ ಡಿ ನಿಂತಿದೆಯಲ್ಲದೆ, ಪಶ್ಚಿಮ ಘಟ್ಟದ ಪೂ ರ್ವದಲ್ಲಿಯ ಸೀಮೆಯಾದ ಕೊಡಗು ಪೂ ರ್ವಕ್ಕೆ ಇಳಿಜಾರಾಗಿ ಅರಬೀ ಸಮುದ್ರದ ಸ್ಪರ್ಶವುಟ್ಟುತ್ತದೆ. ಯಾವುದಾದರೊಂದು ಪ್ರಯೋಜನಕರವಾದ ನದಿ ಕೂಡ ಇವೆರ ಡು ಸೀಮೆಗಳಿಗೂ ಪ್ರಯೋಜನಕರವಾ ಗುವಂತೆ ಕೊಡಗಿನಲ್ಲಿ ಹುಟ್ಟಿ ದ. ಕನ್ನಡ ಕ್ಕಾಗಿ ಹರಿಯುವುದಾಗಲೀ, ದ. ಕನ್ನಡ ಲ್ಲಿ ಹುಟ್ಟಿ ಕೊಡಗಿಗಾಗಿ ಹರಿಯುವುದಾ ಗಲೀ ಇಲ್ಲ. ಕೊಡಗಿನ ಯಾವ ಹಳ್ಳಿ ಯಿಂದಲಾದರೂ ದ. ಕನ್ನಡದ ನಮ್ಮನೆರೆ ಯ ಒಂದು ಹಳ್ಳಿಯನ್ನು ನೋಡಬೇಕಾ ದರೆ ಹೆಚ್ಚು ಕಮ್ಮಿ 40 ಮೈಲಿಗಳ ದೂರ ಹೋಗಬೇಕಾಗಿದೆ. ಅದೂ, ದ. ಕನ್ನಡ ವನ್ನೂ, ಕೊಡಗನ್ನೂ ಸೇರಿಸುವ ಒಂದೇ ರಸ್ತೆಗಾಗಿ.

ಏಕ ಭಾಷೆ.

ಕೊಡಗಿನ ಹೆಚ್ಚಿನ ಜನರ ಹುಟ್ಟು ಭಾಷೆಯು ಕನ್ನಡವಲ್ಲ. ಆದರೆ ಅವರಿಗೆ ಲ್ಲ ಏಕವಾಗಿರುವ ಭಾಷೆಯು ಕನ್ನಡವೇ. ಆದರೂ, ಕನ್ನಡ ಭಾಷೆಯ ಪ್ರೇಮ ಒಂ ದೇ ಬೇರೆ ಇರುವ ಅನೇಕ ಕುಂದು ಕೊರ ತೆಗಳನ್ನು ಬಚ್ಚಿಟ್ಟು, ಮೂಲೆಗೊತ್ತಿ, ಭಾ ಷೆಯ ಪ್ರೇಮ ಒಂದನ್ನೇ ಎತ್ತಿ ಹಿಡಿದು ನಾವು ಕನ್ನಡ ಸೀಮೆಗೆ ಸೇರುವ ಆವಶ್ಯಕ ತೆಯು ನನಗೆ ತೋರುವುದಿಲ್ಲ. , ಕನ್ನಡಿ ಗರ ವ್ಯಕ್ತಿತ್ವವು ಕನ್ನಡಿಗರದು; ಕೊಡಗಿನ ವರ ವ್ಯಕ್ತಿತ್ವವು ಕೊಡಗಿನವರದು. ಇವೆ ರಡು ಹಿಂದೆ ಯಾವ ಕಾಲದಲ್ಲಿಯೂ ಒಂ ದಾಗಿದ್ದಿರುವುದಿಲ್ಲ. ವಿಜಯನಗರ ಸಾ ಮ್ರಾಜ್ಯದ ಕಾಲದಲ್ಲಿಯೂ ಕೂಡ, ಹೆಚ್ಚಿ ನ ಕನ್ನಡಿಗರು ಒಂದೇ ಆಡಳಿತಕ್ಕೆ ಒಳ ಪಟ್ಟಿದ್ದವರಾಗಿದ್ದರೂ ಕೂಡ, ಕೊಡಗು ಬೇರೆಯೇ ಇದ್ದಿತು. ಆದುದರಿಂದ ಕನ್ನ ಡ ಭಾಷೆಯು ನಮಗೆ ಏಕವಾದರೂ, ಕ ನ್ನಡ ಸೀಮೆಗಳ ಕನ್ನಡಿಗರು ನಮಗೆ ಕೇ ವಲ ಪರಿಚಯವಿಲ್ಲದವರೇ. ಧಾರವಾ ಡ ಮುಂತಾದ ಉತ್ತರ ಜಿಲ್ಲೆಗಳಿಂದ ಒ ಮ್ಮೊಮ್ಮೆ ನಮ್ಮ ಸೀಮೆಗೆ ಬರುವ ಡಾ. ಹರ್ಡೀಕರರಂತಹ ರತ್ನಗಳಲ್ಲದೆ, ಉತ್ತರ ಸೀಮೆಗಳ ಜನರು ನಮಗೆ ಸಂಪೂರ್ಣ ಪ ರಿಚಯವಿಲ್ಲದವರೇ. ಅವರ ಪರಿಚಯ ವು ನಮಗೆ ದೂರದಲ್ಲಿರುವ ತಮಿಳರು ಆಂ ಧ್ರರಿಗಿಂತ ಹೆಚ್ಚೇನು ಇರುವುದಿಲ್ಲ.

ಏಕ ಜನಾಂಗ.

ನಾವು ಕನ್ನಡಿಗರಾದರೂ, ಕೊಡಗಿನ ಹೆಚ್ಚಿನ ಜನರು ಜನಾಂಗದಲ್ಲಿ ಬೇರೆ ಯೇ. ಜನರನ್ನು ಒಂದಾಗಿ ಕೂಡಿಸ ಲು ಬೇಕಾದಂತಹ ಏಕತ್ವವು ಕೊಡಗಿನವ ರಲ್ಲಿಯೂ, ಕನ್ನಡಿಗರಲ್ಲಿಯೂ ಏಕವಾ ಗಿ ಇರುವುದಿಲ್ಲ. ನಮ್ಮ ನಡತೆ ನೀತಿಗ ಳೇ ಬೇರೆ ನಮ್ಮ ಹಬ್ಬ ಹುಣ್ಣಿಮೆಗಳೇ ಬೇರೆ, ನಮ್ಮ ದೈವಭಕ್ತಿಯ ನೋಟವೇ ಬೇರೆ ಹೆಚ್ಚೇಕೆ? ನಮಗೆ ಮುಟ್ಟದೆ ಎಂದು ಎನ್ನುವ ಕನ್ನಡ ಸೀಮೆಯನ್ನು ಕೊಡಗಿನಿಂದ ನೋಡಬೇಕಾದರೂ ಕೂಡ, ಈ ಎರಡು ಸೀಮೆಗಳನ್ನು ವಿಂಗಡಿಸಿ ನಿಂ ತಿರುವ ಪಶ್ಚಿಮ ಘಟ್ಟದ ಸಂಪೂರ್ಣ ಪಶ್ಚಿ ಮ ಭಾಗದ ಶಿಖರ ಶ್ರೇಣಿಯ ಮೂಲೆಗೆ ಹೋಗಿ ನಿಂತರೆ ಮಾತ್ರ ಕನ್ನಡ ಸೀಮೆಯು ಕಂಡುಬರುವುದು.

ಆರ್ಥಿಕ ಅನುಕೂಲತೆಗಳು

ಕೊಡಗಿನ ವ್ಯಾಪಾರದ ಸೆಂಟರ್ಸ್‌ಗಳು ಮೈಸೂರು, ತಲಚೇರಿ ಮತ್ತು ಮಂಗಳೂರುಗಳೊಂದಿಗೆ ಇವೆ. ಇವುಗಳ ಲ್ಲಿ ಮಂಗಳೂರಿನೊಂದಿಗೆ ವ್ಯಾಪಾರದ ಸೆಂಟರ್ಸ್‌ಗಳು ಬಹು ಕಮ್ಮಿ. ದಿನ ದಿ ನವೂ, ನಮ್ಮ ವ್ಯಾಪಾರದ ಸೆಂಟರ್ಸ್‌ಗಳು ಮೈಸೂರು ಮತ್ತು ತಲಚೇರಿಯೊಂದಿಗೆ ಎಷ್ಟರಮಟ್ಟಿಗೆ ಹೆಚ್ಚುತ್ತಲಿವೆಯೋ ಅ ಷ್ಟರ ಮಟ್ಟಿಗೆ ಮಂಗಳೂರಿನೊಂದಿಗೆ ಕ ಮ್ಮಿಯಾಗುತ್ತಲಿವೆ. ಮಧ್ಯೆ ಪಶ್ಚಿಮ ಘಟ್ಟ ವು ನಿಂತಿರುವುದರಿಂದಲೂ, ಕೊಡಗು ಪೂ ರ್ವಕ್ಕೆ ಇಳಿಜಾರಾಗಿಯೂ ದ. ಕನ್ನಡವು ಪಶ್ಚಿಮಕ್ಕೆ ಇಳಿಜಾರಾಗಿಯೂ, ಇರುವುದ ರಿಂದ, ದೊಡ್ಡ ಹಣವನ್ನು ವೆಚ್ಚ ಮಾಡಿ ಎರಡು ಸೀಮೆಗಳಿಗೂ ಉಪಯೋಗಕಾರಿ ಯಾಗುವಂತಹ ಯಾವ ಕಾರುಬಾರುಗಳ ನ್ನೂ ಕೈಕೊಳ್ಳಲು ಎಂದೂ ಸಾಧ್ಯವಿಲ್ಲ. ಅಂತಹ ಅಸ್ಥಿರಗಳಿಗೆ ನಾವು ಬೇರೆ ಕಡೆಗೆ ನೋಡಬೇಕಾಗಿದೆ.

ರಾಜನೀತಿ.

ಇಂದಿನ ರಾಜನೀತಿಯ ಪ್ರಶ್ನೆಯು ಎಲ್ಲಾ ಕಾಲದಲ್ಲಿಯೂ, ಎಲ್ಲಾ ಕಾಲ ಕ್ಕೂ ದೊಡ್ಡದಾದ ಆರ್ಥಿಕ, ಎಂ ದರೆ ಹೊಟ್ಟೆಯ ಪ್ರಶ್ನೆಯನ್ನು ಮುತ್ತಿಕೊಂ ಡಿದೆ. ಯಾವ ರಾಜಕೀಯ, ರಾಜನೀತಿ ಯ ಪ್ರಶ್ನೆಯನ್ನು ಹಿಡಿದು ನಾವು ಸೃಷ್ಟಿ ಕೆದಕಿದರೂ, ನಮ್ಮ ಚರ್ಮದ ಕೆಳಗ ರಕ್ತ ದಂತೆ, ಹೊಟ್ಟೆಯ ಪ್ರಶ್ನೆಯೇ ನಮಗೆ ಸ ದಾ ಕಾಣುವುದು. ಈ ಕಾರಣಗಳಿಂದ ಲೇ ಆಂಧ್ರರು, ತಮಿಳರು, ಕೇರಳರು, ಕ ನ್ನಡಿಗರು ಬೇರೆ, ಬೇರೆಯಾಗಬೇಕೆಂದು ಕೂಗೆತ್ತುತ್ತಿರುವರು. ಆದುದರಿಂದ ನಾ ವು ರಾಜಕೀಯ ತತ್ವಗಳಿಂದಲೇ ಸೆಳೆಯ ಲ್ಪಟ್ಟು, ನಮ್ಮ ಹೊಟ್ಟೆಯ ಪ್ರಶ್ನೆಗೆ ಹೆಚ್ಚಿ ನ ಗಮನ ಸಿಕ್ಕದಂತಹ ಬದಲಾವಣೆಯ ನ್ನು ನೋಹಿಸುವುದಕ್ಕಿಂತ, ನಮ್ಮ ಹೊ ಟ್ಟೆಯ ಪ್ರಶ್ನೆಗೆ ಹೆಚ್ಚಿನ ಪ್ರಾಮುಖ್ಯತೆ ಯೂ ಸಿಕ್ಕುವಂತಹ ದಾರಿಯಲ್ಲಿ ನಮ್ಮ ರಾಜಕೀಯ ಕಲ್ಯಾಣವನ್ನು, ಸಾವಕಾಶ ದಿಂದಲಾದರೂ, ಸಾಧಿಸುವುದು ಉತ್ತಮ ವು. ಬಂಡೆಯಿಂದ-ಬಂಡೆಗೆ ಮುಮುಕಿ ಬೀಳುವ ನೀರಿನ ಸೊಗಸಿಗೆ ಆಕರ್ಷಿಸಲ್ಪ ಟ್ಟು ಆ ನೀರಿನಲ್ಲಿ ಈಜಾಡಲು ಮಮು ಕುವವನು ಜಾಣನೇ?

ಡಾ. ಮೇಕ್ಸ್ಯುಸ್ ಎಬ್ರಹಾಮ್
ದಂತ ವೈದ್ಯರು.
(ಸೀಯರ್ಸ್‌ಲೆಸ್ಲಿ ಬಂಗ್ಲೆ)
(ಸ್ಪೆನ್ಸರ್ಸ್ ಹತ್ತಿರ)
ಮಡಿಕೇರಿ.

ಇಂಡಿಯದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಸುಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ

ಆತಂಕ ನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ,

52-18 ಬೆಂಗಳೂರು ಸಿಟಿ.

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಪೋಕ್ಷೆವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರೈಸಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರದ ಮೇಲೆ 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ 26ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್

ಸೊಸೈಟಿ ಲಿಮಿಟೆಡ್,

12, ಸೌತ್ ಪರೇಡ್, ಬೆಂಗಳೂರು.

52-33

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಿ ಕಂಪನಿ

ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚೆನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಕರ್ಕಿ.

ಮತ್ತು ಕಂಪನಿ,

(52-46) ಗಿರಗಾಂವ, ಮುಂಬಯಿ ೪,

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಶೀತಜ್ವರ, ಮೋಹಾಲಸ್ಯ, ತಲೆನೋವು, ಬಾಯೊರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನಿಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

15 **ಸಿ. ಹೆಚ್. ರಾಮುಣ್ಣಿ ವೈದ್ಯರ್.**

ನೋಟೀಸು.

ಈ ಕೆಳಗಿನ ಮಹನೀಯರ 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡಿದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,

ಮೆ. ಕೆ ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು

ಪೊನ್ನಂಪೇಟೆನಾಡು—ಮೆ ಪಿ ಜಿ. ಮುದ್ದಮ್ಮಯ್ಯನವರು.

ಹುದಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ.

ಜಿ ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮೆ ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮೆ ಕೆ ಮೊಗಪ್ಪನವರು.

ಶಾಂತಳ್ಳಿ—ಮೆ. ಬೆಳ್ಳಿಪಂಡ ಯಂ. ಪೂಣಚ್ಚನವರು.

(ಶಾಂತಳ್ಳಿ ಸ್ಟೋರ್ಸ್)

ಶನಿವಾರಸಂತೆ—ಮೆ. ಎಚ್. ಎಂ. ಕೃಷ್ಣಣ್ಣನವರು.

ಸೂಚನೆ.—ಪ್ರಿಂಟಾಗದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ,

ಮೇನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿ ಇರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ** ಮೂಲದ ರಿಜಿಸ್ಟರು, ಸಾಲದ ರಿಜಿಸ್ಟರು, **ಮೆಂಬರು** ರಿಜಿಸ್ಟರು, ಶೇರು ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋಟ್ರು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಕರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ **ದೊರೆಯುತ್ತವೆ.** ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆಶೂಲೆಗಳಿಗೂ ಅಮೃತ ಬೆಲೆ 0 4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದ, ಅಜೀರ್ಣ, ವಾಯು, ಜ್ವರಗಳಿಗೆ ಬೆಲೆ 0-1-0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ ಬೆಲೆ 0-8-0, 0-4-0

ಸುಕುಮಾರತೈಲ

29

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ಇರಿತ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ ಬೆಲೆ 1-0-0

ಪ್ರೊಪ್ರೈಟರ್—**ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ ವಿ ಪಂಡಿತ್.**

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹೀರಾತಿನ ದರಗಳು

ಕಾಲ	1 ಪುಟಕ್ಕೆ	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ 180	ರೂ 55	ರೂ 35	ರೂ 22
6 ತಿಂಗಳಿಗೆ—	,, 100	,, 35	,, 22	,, 13
3 ತಿಂಗಳಿಗೆ—	,, 60	,, 20	,, 13	,, 8
1 ತಿಂಗಳಿಗೆ—	,, 25	,, 10	,, 6	,, 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವುದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಸಿ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮಿ. ಎಲ್. ಎಫ್. ಸಿ. ಡಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

ಮಿ. ಬಿ. ಶೇಷಾದ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗಾ.

62-42

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ. ವಾರ್ಷಿಕ ಚಂದಾ ರೂ. ೩-೮-೦

ತಾ. ೨೮—೧೦—೧೯೩೮. ಸಂಪುಟ ೧೮] [ಸಂಚಿಕೆ ೧೯

The Bombay Life Assurance Company Ltd.

(Estd. 1908.)
45-47, Churchgate Street, Fort Bombay.

Progress Proves Its Popularity.

Year.	Business in force.	Claims Paid.	Life Assurance Fund
1931	2.26,82,430	2.91,880	33,24,809
1933	3.07,98,435	3,54,003	50.04,871
1935	4,42,51,214	5,75,198	68,01,501
1937	[illegible],70,594	6,00,918	98,68,232

Total Claims aid Between 1909 and 1937—Rs. 50,22,576.

BOMBAY LIFE is a pure India Concern Offering all that is best in Life Assurance.

To Insure or to Represent it pays you to consult us or our Branches—

KOCHIKAR & BROTHERS Ltd.,
Madras Branch Secretaries,
Post Box No. 337, Mount Road, MADRAS. [Phone No. 8248.]

12

Bombay Life Building Udipi	Gautam Nivas Charni Road Girgaum Bombay 4	Visweswarapuram Circle, Bangalore City	Puthiyara Calicut	Car Street Mangalore	Ottapalam S. Malabar.	Central Station Road Trivandrum

THE CANARA BANKING CORPORATION, UDIPI, Ltd.

(Incorporated in British India.)
Estd. 1906.

MEMBER: RESERVE BANK OF INDIA, & BANKERS' CLEARING HOUSE, MADRAS.

Head Office: UDIPI, S. K.

Paid up Capital	Rs.	3,03,205 -
Reserves	,,	3,88,842 -

Our Deposit Rates.

3 months	$2\frac{1}{2}$% p. a.
6 or 9 months	3 % p. a.
12 months	$3\frac{1}{2}$% p. a.
SHORT TERM	2 % p. a.

Branches.

1. Udipi, 2. Coondapoor, 3. Car Street, Mangalore, 4. Madras, 5 Shimoga, 6. Bunder, Mangalore, 7. Mercara, 8. Virarajendrapet, 8. Saklaspur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

BANKING BUSINESS OF EVERY DESCRIPTION TRANSACTED.

Udipi,
8th July 1938.

52-47

V. R. Kamath, B. A., LL. B.,
Manager.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ	ಆ	ಪೈ
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,770	0	0
ಜಮೂಬಂದ ಠೇವಣಾತಿ	–	2,45,260	3	4
ವಸೂಲಾದ ಕ್ಷೇಮನಿಧಿ	–	1,30,696	8	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	19,598	1	11
ಟ್ರಿಸ್ಟ್ ಡಿಪಾಜಿಟ್ಟು	–	34,431	6	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ದರದಲ್ಲಿಯೂ ತಾ 1-9-1937ರಿಂದ ಬಡ್ಡಿ ದೊರೆಯುತ್ತೆ

ತಾ 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ಟ್ರಿಸ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವದು ಟ್ರಿಸ್ಟ್ ಡಿಪಾಜಿಟ್ಟು ಹೊಂದಿಕೊಳ್ಳುತ್ತವನ್ನು ತಾ 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಡಿಟ್‌ ಮಾಡುತ್ತಾರೆ

ಪ್ರಸಿಡೆಂಟ್ —ಪಂದ್ಯಂಡ ಐ ಬೆಳ್ಯಪ್ಪನವರು ಎಂ ಎಲ್ ಸಿ
ಟ್ರೆಜರರ್ —ಚೌರೀರ ಎ ಮಂದಣ್ಣನವರು ಬಿ ಎ, ಬಿ ಎಲ್
ಸೆಕ್ರೆಟರಿ —ಪುಲಿಯಂಡ ಜಿ ಐಯ್ಯಪ್ಪನವರು ಬಿ ಎ, ಬಿ ಎಲ್

ತಾ 1-10-1938

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—"ಲಕ್ಷ್ಮೀನಿವಾಸ" ಬಿಲ್ಡಿಂಗ್ಸ್, ಕುಂದಾಪುರ, ದ. ಕ

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಿಯಾಗಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೋರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80, 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು

52-22

The Agricultural &
Industrial Bank Ltd

ಝಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

"ZANDU"
ಝಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ

ಝಂಡೂ ಆಯೋಡೈಸ್ಡ್
ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಥ, ಪೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು

ಕೆಟಲಾಗಿಗೆ ಬರೆಯಿರಿ, ಮುಫ್ತಾಗಿ ಕಳುಹಿಸಲಾಗುತ್ತೆ

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(52-12)

ವಿ.ರಾಜಪೇಟೆಯ ಏಜೆಂಟರು—ಕೆ ಕೃಷ್ಣರಾವ್, ವೀರಾಜಪೇಟೆ. (ದ ಕೊಡಗು)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ'

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ, ಶರೀರದ ಉಷ್ಣತ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚು ಹುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನು ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ 2—8—0.

ಮಲೇರಿಯಾ ನಿವಾರಿಣಿ

ಇದು ಚಳಿ ಜ್ವರ, ಚಾತುರ್ಥಿ ಜ್ವರ, ದಿನ ಬಿಟ್ಟುಬರುವ ಜ್ವರ, ಮಲೇರಿಯಾ ಜ್ವರ, ಇನ್‌ಫ್ಲುಯೆಂಜಾ ಇತ್ಯಾದಿ ನಾನಾ ತರದ ಜ್ವರಗಳ ಮೇಲೆ ರಾಮಬಾಣ

ಬಾಟ್ಲಿ 1ರ ರೂ 1—8—0, ಸಣ್ಣ ಬಾಟ್ಲಿ ರೂ 0—13—0.

ಪ್ಲೀನ್ ಮಿಕ್ಸ್ಚರ್

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಅಶಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು ಬಾಟ್ಲಿ 1ರ ರೂ. 1—2—0.

ಬಾಲಗ್ರಹ ಗುಟಿಕೆ

ಮಕ್ಕಳ ಜಂತು, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ ಇವುಗಳಿಗೆ ಎಲ್ಲಾ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ

ಎಮ್. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ಮಂಗಳೂರು ಸ್ಟೋರ್ಸ್, ಮಡಿಕೇರಿ. ವಿ. ಬಿ. ಕಾಮತ್, ಮಡಿಕೇರಿ. ಬಿ. ಕುಟ್ಟಯ್ಯ ಶೆಟ್ಟಿ ... ಸನ್ಸ್, ಸೋಮವಾರಪೇಟೆ. ಎ. ಎಸ್. ಮಾಚಯ್ಯ, ಕುಂಟಿಕೊಪ್ಪ. ... ಪ್ರಭು, ಸುಳ್ಯ. [17]

ವಿ ವಿ ಧ ವಿ ಚಾ ರ.

ಆಹ್ವಾನ ಕೊಡುವವರೇ ಎಚ್ಚರಿಕೆ.

ಇಂಗ್ಲೆಂಡಿನ ಪೂರ್ವ ಸಫ್ಫೋಕ್ ಜಿಲ್ಲೆಯಲ್ಲಿ ಸ್ವ್ಯಾವಿಂಗ್‌ಹ್ಯಾಮ್ ಎಂಬುದೊಂದೂರು. ಅಲ್ಲಿ ಒಬ್ಬ ಮಿಲಿಟರಿ ಸಾರ್ಜೆಂಟಿಗೆ, 'ಸಕುಟುಂಬ ಸಪರಿವಾರ ಸಮೇತ ದಿನ ಮುಂದಾಗಿ ಬರಬೇಕೆಂದು ಪ್ರಾರ್ಥಿಸುವ' ಎಂದು ವಾಡಿಕೆಗೆ ಎಲ್ಲರೂ ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸುವಂತೆ ಮುದ್ರಿಸಿದ ಆಹ್ವಾನವೊಂದು ಬಂತು. ಅದರಂತೆ ಆತನು ತನ್ನ ಬಂಧುಬಳಗವೇ ಆದಿಯಾಗಿ ಒಟ್ಟು 128 ಜನರೊಡನೆ ಹೋದನಂತೆ! ಪುಣ್ಯಾತ್ಮ! ಇದರಿಂದ ಇನ್ನು ಮುಂದೆ ಆಹ್ವಾನಕೊಡುವವರು ಎಚ್ಚರಿಕೆಯಿಂದಿರಬೇಕಲ್ಲವೆ? ಈತನು ಒಂದು ವಾರನುಂಚಿತವಾಗಿಯೇ ಹೋಗಿರಬೇಕೆಂದು ಕಾಣಿಸುತ್ತದೆ!

—॰0॰—

ಸೊಳ್ಳೆಗಳ ಪ್ರಯೋಜನ.

ಸೊಳ್ಳೆ ಕಚ್ಚಿದರೆ ಮಲೇರಿಯಾ ಬರುತ್ತದೆಂದು ಒಂದು ರೂಢ ಕಲ್ಪನೆಯಿದೆ ವಸ್ತುತಃ ಮಲೇರಿಯಾ ಕ್ರಿಮಿಗಳನ್ನು ತನ್ನ ದೇಹದಲ್ಲಿರಿಸಿಕೊಂಡ ಸೊಳ್ಳೆ ಕಚ್ಚಿದರೆ ಮಾತ್ರ ಮಲೇರಿಯ ಬರುತ್ತದೆ. ಆದುದರಿಂದ ಸೊಳ್ಳೆಗಳನ್ನು ನಾಶಪಡಿಸಿದರೆ ಮಲೇರಿಯಾ ಹರಡಲಾರದೆಂದು ಆರೋಗ್ಯಶಾಖೆಯವರು ಪ್ರಕಟಿಸುತ್ತಾರೆ. ಆದರೆ ಸೊಳ್ಳೆಯು ಒಂದು ರೀತಿಯಿಂದ ಜನರಿಗೆ ಉಪಕಾರಿಯಾಗಿಯೂ ಇರುತ್ತದೆಂದು ಈಗ ತಿಳಿದು ಬಂದಿದೆ. ಅರ್ಧಾಂಗ ವಾಯುವಿನ ರೋಗಿಗಳಿಗೆ ಮಲೇರಿಯದ ಸೊಳ್ಳೆಗಳು ಕಚ್ಚಿದರೆ, ವಾಯುರೋಗವು ಗುಣಪಡುವದೆಂದು ಕೆಲವು ಉದಾಹರಣೆಗಳಿಂದ ಕಂಡು ಬಂದಿದೆ. 'ವಾರ್ಟಿನ ಎಪ್ಸಮ್' ಎಂಬಲ್ಲಿ 27000 ಭಯಂಕರ ಮಲೇರಿಯದ ಸೊಳ್ಳೆಗಳನ್ನು ಸಾಕಿದ್ದಾರೆ. ವಿಶಿಷ್ಟವಾಗಿ ಮುಚ್ಚಿ ಹಿಡಿದವರ ಅರ್ಧಾಂಗವಾಯುವಿಗೆ ಅವುಗಳ ಕಡಿತವು ಒಳ್ಳೇ ಗುಣಕಾರಿಯಾಗಿದೆಯಂತೆ. ಹೊಸತಾಗಿ ಹುಟ್ಟಿದ ಸೊಳ್ಳೆಯನ್ನು ಒಬ್ಬ ಮಲೇರಿಯದ ರೋಗಿಯ ಮೈಮೇಲೆ ನೇಯ ಬಿಟ್ಟು ಅವನ್ನು ಮಲೇರಿಯ ಕ್ರಿಮಿಗಳಿಂದ ತುಂಬುತ್ತಾರೆ. ಅರ್ಧಾಂಗವಾಯುವಿನ ರೋಗಿಗಳನ್ನು ಚಿಕಿತ್ಸಿಸಲಿಕ್ಕೆಂದು ವೈದ್ಯರಿಗೆ ಆ ಸೊಳ್ಳೆಗಳನ್ನು ಕಡವಾಗಿ ಕೊಡುತ್ತಾರೆ. ಮಲೇರಿಯ ಕ್ರಿಮಿಯ ಸಹಾಯದಿಂದ ಹುಚ್ಚರ ಅರ್ಧಾಂಗ ವಾಯುವನ್ನು ಉಪಶಮಿಸುವದು ಈಗ ಎಲ್ಲೆಲ್ಲಿಯೂ ಬೆಳೆಯುತ್ತಿದೆ. ಈ ವರೆಗಿನ ಪ್ರಯೋಗಗಳಿಂದ ನೂರಕ್ಕೆ 49 ರಷ್ಟು ರೋಗಿಗಳಿಗೆ ಒಳ್ಳೆ ಲಾಭವಾಗಿದೆಯಂತೆ.

—॰0॰—

ನೀರು ಹೇಗೆ ಕುಡಿಯುವಿರಿ?

'ಬಾಯಿಯಿಂದ' ಎಂದು ಸುಲಭವಾಗಿ ಉತ್ತರ ಕೊಡಬಹುದು. ಆದರೆ ಮೈಯಿಂದ ನೀರು ಕುಡಿವ ಪ್ರಾಣಿಗಳಿವೆಯೆಂದು ಗೊತ್ತಾಗಿದೆ. ಇದೊಂದು ಹಂಟೆಗೊಡ್ಡ. ಇವಕ್ಕೆ ಬಾಯಿಯಿಂದ ನೀರು ಕುಡಿದೇ ಗೊತ್ತಿಲ್ಲ. ಬದಲು ಮಳೆ ಬಂದಾಗ ಮೈ ಮೇಲೆ ಬಿದ್ದ ನೀರನ್ನೆಲ್ಲ ಕೂಡಲೇ ಒಳಕ್ಕೆ ಹೀರಿಕೊಂಡು ಬಿಡುತ್ತದೆ. ಆ ಹೀರಿಕೊಂಡ ನೀರೇ, ಇವಕ್ಕೆ ಬಾಯಾರಿಕೆ ತಣಿಸಿಕೊಳ್ಳಲು, ಸಾಕಾಗುತ್ತದೆ. ಒತ್ತುವ ಕಾಗದದ ಜಾತೀಯ ಇವರ ಮೈ, ಬೇಕಾದಂತೆ ಹಿಮವನ್ನೂ, ನೀರನ್ನೂ ಒಳಕ್ಕೆ ಸೇದಿಕೊಳ್ಳುವುದು. ಆಫೀಸಿನ ಮೇಜಿನ ಮೇಲಿರಿಸಲು ಉತ್ತಮ ವಸ್ತು.

—॰0॰—

ನರಭಕ್ಷಕರೇ?

ಅಮೇರಿಕೆಯ ದಕ್ಷಿಣದಲ್ಲಿ ಪುಟುಮಾಯೊ ಮತ್ತು ಕ್ಯಾಕ್ವೇಟಾ ಎಂಬ ನದಿಗಳ ಮಧ್ಯ ಪ್ರದೇಶದಲ್ಲಿ ಒಂದು ಕಾಡು ಇಂಡಿಯನ್ ಜನಾಂಗವಿದೆ ಅದು ಈ 20 ನೆ ಶತಮಾನದಲ್ಲಿಯೂ ನರಭಕ್ಷಕರಾದ ಮನುಷ್ಯರನ್ನೊಳಗೊಂಡಿದೆ. ರುಚಿಗಾಗಿ ಇಲ್ಲವೆ ಹಸಿವಿಗಾಗಿ ಅವರು ಮನುಷ್ಯರನ್ನು ತಿನ್ನುವದಿಲ್ಲ. ಆದರೆ ಅವರ ಕೆಲವು ಧರ್ಮಕಾರ್ಯಗಳಲ್ಲಿ ನರಭಕ್ಷಣವನ್ನು ಮಾಡಲೇಬೇಕೆಂಬ ನಿಯಮವಿದೆ. ಮೊನ್ನೆ ಮೊನ್ನೆ ಒಬ್ಬ ನಾಗರಿಕನು ತನ್ನ ಹೆಂಡತಿಯೊಡನೆ ಆ ಕಾಡಿನಲ್ಲಿ ರಬ್ಬರ್ ಮರಗಳನ್ನು ಬೆಳೆಸಲಿಕ್ಕೆ ಯೋಗ್ಯವಾದ ಪ್ರದೇಶವನ್ನು ಹುಡುಕುತ್ತ ತಿರುಗುವಾಗ ಮೇಲ್ಕಂಡ ಕಾಡು ಇಂಡಿಯನ್ನರು ಅವರನ್ನು ಹಿಡಿದೊಯ್ದರು. ಮೊದಲು ಗಂಡನನ್ನು ಬಲಿಕೊಡಬೇಕೆಂದು ನಿಶ್ಚಯವಾಯಿತು ಅವನನ್ನು ಬಲತ್ಕಾರದಿಂದ ಅಂಗಾತನಾಗಿ ಮಲಗಿಸಿದರು. ಅವನ ಎದೆಯ ಮೇಲೆ ಭಾರವಾದ ಒಂದು ಮರದ ಬೊಡ್ಡೆಯನ್ನಿಟ್ಟು ಅದರ ಮೇಲೆ ಎಲ್ಲರೂ ಹೆಚ್ಚು ಹೆಚ್ಚು ಭಾರ ಹಾಕುತ್ತ ಹೋದರು ಆ ಸಮಯಕ್ಕೆ ಅಲ್ಲಿಯ ಕಾಡು ಹೆಂಗಸರು ಮೈತುಂಬ ಭಯಂಕರವಾದ ಬಣ್ಣಗಳನ್ನು ಬಡಿದುಕೊಂಡು ಆ ಬಲಿಯ ಸುತ್ತಲೂ ವಿಲಕ್ಷಣವಾದ ರಣನೃತ್ಯವನ್ನು ಮಾಡಿದರು. ಅವನ ಪ್ರಾಣ ಹೋದ ಮೇಲೆ ಅವನನ್ನು ತುಂಡು ತುಂಡಾಗಿ ಕತ್ತರಿಸಿ ಬೇಯಿಸಿ ಅದನ್ನು ಅವನ ಹೆಂಡತಿಗೆ ತಿನ್ನಲಿಕ್ಕೆ ಕೊಟ್ಟರು. ಈ ಭಯಂಕರ ದೃಶ್ಯಗಳನ್ನು ನೋಡಿದ ಆಕೆಗೆ ಮೂರ್ಛೆ ಬಂದುದರಿಂದ ಅವಳ ಆರೈಕೆಗಾಗಿ ಒಬ್ಬ ಮುದುಕಿಯನ್ನಿಟ್ಟರು. ಸುದೈವದಿಂದ ಆ ಮುದುಕಿಯ ಹೃದಯದಲ್ಲಿ ಕರುಣೆ ಹುಟ್ಟಿ ಆ ಸ್ತ್ರೀಯನ್ನು ಸಂಕಟದಿಂದ ಪಾರುಮಾಡಿದಳು.

—॰0॰—

ಕೂದಲು ವ್ಯಾಪಾರವೇ?

ಭಾರತದಿಂದ ಅನೇಕ ಸಹಸ್ರ ಸಹಸ್ರ ರೂಪಾಯಿ ಬೆಲೆ ಬಾಳುವ, ಜನರ ತಲೆಯ ಕೂದಲನ್ನು ಪರದೇಶಗಳಿಗೆ ಈಗ ಕಳುಹಿಸಲಾಗುತ್ತಿದೆ. ಅಷ್ಟೇ ಸೂಜಲಗಿನ ಪ್ರಾಣಿಗಳ ಕೂದಲು ಆಮದಾಗುತ್ತಿದೆಯೆಂಬುದನ್ನು ಮಾತ್ರ ಮರೆಯಬಾರದು.

ಭಾರತದಿಂದ ಹೀಗೆ ಪರದೇಶಗಳಿಗೆ ರಫ್ತಾಗುವ ಕೂದಲೆಲ್ಲಾ ದಕ್ಷಿಣ ಭಾರತದ ಹೆಸರುವಾಸಿಯಾದ ತಿರುಪತಿಯಿಂದ ಒದಗಿದುದು ಭಾರತದ ನಾನಾ ಭಾಗಗಳಿಂದ ಭಕ್ತಾದಿಗಳು ಒಂದು ಭಗವಾನ್ ಶ್ರೀ ವೆಂಕಟಾಚಲಪತಿಯವರಿಗೆ ಮುಡಿ ಕೊಡುವರು. ಹೀಗೆ ಮುಡಿಕೊಟ್ಟ ಕೂದಲು ದೇವಸ್ಥಾನದ ಮೂಲಕ ಹರಾಜು ಮೂಲಕ ಮಾರಲ್ಪಡುವುದಾಗಿದೆ.

—॰0॰—

ಒಡೆಯದ ಮಣ್ಣಿನ ಪಾತ್ರೆಗಳು.

ಮನುಷ್ಯನು ತೀರ ಮೊದಲು ಕಲ್ಲು, ಕಟ್ಟಿಗೆ, ಮಣ್ಣುಗಳ ಪಾತ್ರೆಗಳನ್ನು ಉಪಯೋಗಿಸುತ್ತಿದ್ದನು. ಆದರೆ ಅವಲ್ಲವೂ ಒಡೆದು, ಮುರಿದು ಹೋಗುವವಾದುದರಿಂದ ವಿವಿಧ ಧಾತುಗಳಿಂದ ಪಾತ್ರೆಗಳನ್ನು ಮಾಡಿಕೊಳ್ಳಹತ್ತಿದನು. ಅದರಲ್ಲಿಯೂ ಅನೇಕ ಅತ್ಯಸ್ತಿಕರ ಸಂಗತಿಗಳು ಕಂಡು ಬಂದವೆ ಅಲ್ಯುಮಿನಂ, ತಾಮ್ರ, ಹಿತ್ತಾಳೆಗಳ ಪಾತ್ರೆಗಳಿಂದ ಆರೋಗ್ಯವು ಕೆಡುವದೆಂದು ಕಂಡು ಬಂತು. ಅದರಿಂದ ಏನ್ಯಾಮಲ್‌ದ ಪಾತ್ರೆಗಳು, ಚೀನೀ ಮಣ್ಣಿನ ಪಾತ್ರೆಗಳು ಪುನಃ ಹೆಚ್ಚಿನ ಪ್ರಚಾರಕ್ಕೆ ಬಂದವು. ಅವುಗಳೂ ಬೇಗ ಒಡೆದು ಹೋಗುವವಾದುದರಿಂದ ವೆಚ್ಚ ವೆಚ್ಚವನ್ನು ಸಹಿಸಬೇಕಾಗಿ ಬರುತ್ತದೆ. ಮಣ್ಣಿನ ಪಾತ್ರೆಗಳು ಆರೋಗ್ಯಕ್ಕೇನೂ ಹಾನಿಕರವಲ್ಲ. ಆದುದರಿಂದ ಅವನ್ನೆ ಒಡೆಯದಂತೆ ಅವಕ್ಕೇನಾದರೂ ಸಂಸ್ಕಾರ ಮಾಡಬೇಕೆಂದು ವಿಜ್ಞಾನಿಗಳು ಯತ್ನಿಸುತ್ತಿದ್ದರು. ಈಗ ಆ ಯತ್ನವು ಸಿದ್ಧಿಸಿದೆ. ಓಸಾಕಾದ ಡಾ. ನಗಾಜಾ ಹಯಾಮಿ ಎಂಬ ಜಪಾನಿ ವಿಜ್ಞಾನಿಯು ಈಗ ಕಸುವುಳ್ಳ ಮಣ್ಣಿನ ಪಾತ್ರೆಗಳನ್ನು ತಯಾರಿಸುವ ವಿಧಾನವನ್ನು ಹುಡುಕಿ ತೆಗೆದಿದ್ದಾನೆ. ವಿಧಾನಕ್ಕನುಸರಿಸಿ ತಯಾರಿಸಿದ ಮಣ್ಣಿನ ಪಾತ್ರೆಗಳು ಲೋಹದ ಪಾತ್ರೆಗಳಷ್ಟೇ ಬಾಳಿಕೆ ಬರುವದಲ್ಲದೆ ನಿರಪಾಯಕಾರಿಯಾಗಿಯೂ, ಅಗ್ಗವಾಗಿಯೂ ಇರುತ್ತವೆ. ಆ ವಿಶಿಷ್ಟ ರಸಾಯನಿಕ ಸಂಸ್ಕಾರದಿಂದ ಗಟ್ಟಿಗೊಂಡ ಮಣ್ಣಿನಿಂದ ಪಾತ್ರೆಗಳನಲ್ಲದೆ ಮೊಳೆಗಳನ್ನೂ, ಚಾಕುಗಳನ್ನೂ, ಕೊಳವೆಗಳನ್ನೂ ಇನ್ನೂ ಕೆಲವು ಯಂತ್ರಸಾಮಗ್ರಿಗಳನ್ನೂ ತಯಾರಿಸಬಹುದಂತೆ.

—॰0॰—

ಜೇನು ಹೊರುವ ಇರುವೆ.

ಆಸ್ಟ್ರೇಲಿಯಾದಲ್ಲಿ ಒಂದು ಜಾತಿಯ ಇರುವೆಗಳಿವೆ. ಇವುಗಳು ಹೂವಿನಿಂದ ಕುಡಿದ ಜೇನು, ಇವುಗಳ ಬಾಲದಲ್ಲಿನ ಚೀಲದಲ್ಲಿ ತುಂಬಿಕೊಂಡು, ಅದು ಹಣ್ಣು ದ್ರಾಕ್ಷೆಯಂತೆ ಕಾಣುತ್ತಿರುತ್ತದೆ. ಆದರೆ ಇವುಗಳ ಒಡೆಯರು ಬೇರೆ;–ಇವು ಕೆಂಪಿರುವೆಗಳು ಕಪ್ಪಿರುವೆಗಳನ್ನು ಅತ್ತಿತ್ತ ಒಯ್ದು, ಇವು ಅವುಗಳ ಗೂಡಿಗೆ ಕೂಡಿಸಿ, ಅವುಗಳಿಂದ ಕೆಲಸ ಮಾಡಿಸಿ, ಜೇನು ಕುಡಿದು ಸುಖಪಡುವವು. ಕೆಂಪಿರುವೆಗಳಲ್ಲಿ ಒಂದು ಔತಣವಾಯಿತೆನ್ನೋಣ. ಆಗ ತಿಂಡಿ ತಿಂದ ಇರುವೆಗಳು, ಮಾದಕ ಪ್ರವ್ಯ ಬೇಕೆಂದೆಣಿಸಿದಾಗ, ಈ ಕಪ್ಪಿರುವೆಗಳನ್ನು ಸಾಲಾಗಿ ನಿಲ್ಲಿಸಿ, ಬಾಯಿ ಬಿಡಿಸಿ, ಬಾಲದ ಚೀಲವನ್ನು ಒತ್ತುವವು. ಆಗ ಅವುಗಳ ಬಾಯಿಯಿಂದ ಬಂದ ಜೇನನ್ನು ಕುಡಿದು ಆನಂದಪಡುವುವು. ಹೇಗಿದೆ ಉಪಾಯ? ಪ್ರಾಣಿಗಳಲ್ಲಿಯೂ ಇಂಥಾ ಮದ್ಯಾಸಕ್ತಿ ಇಂದ ಮೇಲೆ, ಮನುಷ್ಯ ಇನ್ನೊಬ್ಬರ ಗಂಟು ತಿನ್ನುವುದೇನಾಶ್ಚರ್ಯ.

—॰0॰—

ಇಂಗ್ಲಿಷಿನ ಮುಂದಾಳುತನ.

1582 ರಲ್ಲಿ ಒಬ್ಬ ಇಂಗ್ಲಿಷ್ ಶಿಕ್ಷಕನು 'ನಮ್ಮ ಇಂಗ್ಲಿಷ್ ಭಾಷೆಯು ಬ್ರಿಟನ್ ದ್ವೀಪದ ಮೇರೆ ದಾಟಿ ಹೊರಗೆಂದೂ ಹೋಗಲಾರದು' ಎಂದು ಅಂದಿದ್ದನಂತೆ. ಈ ಇಪ್ಪತ್ತನೆ ಶತಮಾನದ ಪರಿಸ್ಥಿತಿಯಲ್ಲಿ ಆ ಮಾತು ನಗೆಗೀಡಿಸುವದು. ಆ ಮಾತನ್ನು ಬರೆದಾಗ ಇಂಗ್ಲಿಷರಿಗಿಂತ ಮುಂದುವರಿದ ಫ್ರೆಂಚ್, ಜರ್ಮನ್, ಇಟಾಲಿಯನ್, ಸ್ಪ್ಯಾನಿಶ್ ಮುಂತಾದ ಭಾಷೆಗಳಿದ್ದವು ಆದರೆ ಕಾಲಪ್ರಭಾವದಿಂದಲೋ ಇಂಗ್ಲಿಷರ ಮನಃಪ್ರಭಾವದಿಂದಲೊ 19 ನೇ ಶತಮಾನದ ಮಧ್ಯಕಾಲದೊಳಗಾಗಿ ಇಂಗ್ಲಿಷ್ ಜಗತ್ತಿನಲ್ಲೆಲ್ಲಿ ಅಗ್ರೇಸರವಾದ ಭಾಷೆಯಾಯಿತು. ಮತ್ತು ಇಂದು 'ರಶಿಯನ್ ಮತ್ತು ಜರ್ಮನ್ ಭಾಷೆಗಳನ್ನಾಡುವ ಒಟ್ಟು ಜನರಿಗಿಂತ ಇಮ್ಮಡಿಯಷ್ಟು ಜನರು ಇಂಗ್ಲಿಷನ್ನು ಮಾತಾಡುತ್ತಾರೆ. ಇಡಿ ಜಗತ್ತಿನ ಮುಕ್ಕಾಲು ಪಾಲು ಪತ್ರವ್ಯವಹಾರದಲ್ಲಿ ಇಂಗ್ಲಿಷ್ ಉಪಯೋಗಿಸಲ್ಪಡುತ್ತಿದೆ. ಜಗತ್ತಿನ ಅರ್ಧಕ್ಕಿಂತ ಹೆಚ್ಚು ಪತ್ರಿಕೆಗಳಲ್ಲಿ ಇಂಗ್ಲಿಷ್ ಪ್ರಚುರವಾಗಿದೆ. ಜಗತ್ತಿನ ರೇಡಿಯೋ ಸ್ಟೇಶನ್ನುಗಳನ್ನು 5 ಪಾಲಾಗಿ ವಿಂಗಡಿಸಿದರೆ ಮೂರು ಪಾಲಿಗಿಂತ ಹೆಚ್ಚು ಕಡೆ ಇಂಗ್ಲಿಷ್ ಪ್ರಬಲವಾಗಿದೆ. ಜಗತ್ತಿನ ಸುಪ್ರಸಿದ್ಧ ಜನಾಂಗಗಳ ಭಾಷೆಗಳೆಲ್ಲ ಇಂಗ್ಲಿಷ್ ಕಲಸುಮೇಲೋಗರಗಳಾಗುತ್ತಿವೆ. ಮೊದಲು ಇಂಗ್ಲಿಷಿನ ವಿದ್ವೇಷಿಗಳಾಗಿದ್ದ ಜರ್ಮನಿ, ಫ್ರಾನ್ಸ್, ಜಪಾನುಗಳ ಶಾಲೆಗಳಲ್ಲಿ ಈಗ ಇಂಗ್ಲಿಷ್ ಒತ್ತಾಯದಿಂದ ಕಲಿಸಲ್ಪಡುತ್ತಿದೆ. ಭಾರತೀಯ ಭಾಷೆಗಳು ಜಗದ್ವ್ಯಾಪಿಯಾಗುವದಂತೂ ಹಾಗಿರಲಿ, ಭಾರತದಲ್ಲಿಯೆ ಅಂಥ ಪ್ರಾಂತೀಯ ಭಾಷೆಯೊಂದು ಆಗುವ ಕಾಲವು ಸಮೀಪವಾಗಿದೆಯೇ?

—॰0॰—

ದೇವದತ್ತ.

ಸಾಮಾಜಿಕ ಕಾದಂಬರಿ.

ಅಧ್ಯಾಯ ೯.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು.)

ಅಯ್ಯೋ, ಈಗ ಹೇಗಿದೆ? ನಿನ್ನೆ ರಾತ್ರಿ ಸಂಪೂರ್ಣ ನಿದ್ದೆಗೆಟ್ಟವನಾದುದರಿಂದ ಇಂದಷ್ಟು ಹೊತ್ತು ಹೋಗಲು ಆಗಲಿಲ್ಲ.'

'ಏನು ಹೇಳುವುದು? ಕಠಿಣವಲ್ಲದೆ, ಶಾಂತವಿಲ್ಲ. ಜನರು ಮದುವೆ ಮನೆಗೆ ಬರುವ ಹಾಗೆ ಬರುತ್ತಿದ್ದಾರೆ. ವೈದ್ಯರು ಈಗ ತಾನೇ ಬಂದು ಹೋದರು. ಶಾವಿಲಸನ ಕುಟುಂಬಕ್ಕೆ ಧೈರ್ಯವಾಗುವ ಹಾಗೆ 'ಈಗ ಸ್ವಲ್ಪ ಜ್ವರ ತಗ್ಗಿದೆ, ನಾಳೆ ಬೆಳಗಾಗುವ ವರೆಗೆ ಔಷಧಿ ಏನು ಕೊಡಬೇಡಿ' ಎಂದು ಹೇಳಿ ಹೊರಡುವಾಗ ನನಗೆ ಅವರನ್ನು ಸ್ವಲ್ಪ ದೂರ ಹಿಂಬಾಲಿಸುವಂತೆ ಸಂಜ್ಞೆ ಮಾಡಿದರು. ಓಣಿಯನ್ನು ದಾಟುತ್ತಲೇ ಅವರು ವ್ಯಸನ ಸೂಚಕ ಸ್ವರದಿಂದ, 'ಯಾವುದೊಂದು ಭರವಸೆಯೂ ಕಾಣುವ ಹಾಗಿಲ್ಲ. ಕೈಯಲ್ಲಾಗುವ ಪ್ರಯತ್ನ ಪಟ್ಟೆನು. ಈ ರಾತ್ರಿ ದಾಟುವ ಹಾಗೆ ಕಾಣುವ ಹಾಗಿಲ್ಲ. ರಾತ್ರೆಯಲ್ಲಿ ಸ್ವಲ್ಪ ಜಾಗರೂಕತೆಯಿಂದಿರಿ. ಪಾಪ! ಎಲ್ಲರಿಗೂ ಬೇಕಾದ ಮನುಷ್ಯನಾಗಿದ್ದ. ತಿಳಿದವರೆಲ್ಲಾ 'ಇತ್ತ ಬಾ ಎನ್ನುತ್ತಿದ್ದರಲ್ಲದೆ ಅತ್ತ ತೊಲಗು! ಎಂದು ಹೇಳಿದವರಾರೂ ಇರಲಿಲ್ಲ. ಇದಲ್ಲದೆ, ಲೋಕದ ಅವಸ್ಥೆ! ಮನುಷ್ಯರಿಗೆಲ್ಲಾ ಬೇಕಾದವನಾಗಿದ್ದ. ಹಾಗೆಯೇ ದೇವರಿಗೂ ಅವನ ಮೇಲೆ ಪ್ರೀತಿ ಇತ್ತೋ ಏನೋ? ಭಗವಂತನು ಅವನ ಸಂಸಾರವನ್ನು ಕಾಪಾಡಲಿ! ಎಂದು ಹೇಳಿ ಹೊರಟು ಹೋದರು.

'ನೀವೀಗ ಬರುತ್ತೀರೋ ?!

'ಬಂದೆ ನಡೆಯಿರಿ, ರಾತ್ರಿ ಬರುವುದಿಲ್ಲವೆಂದು ಮನೆಯಲ್ಲಿ ತಿಳಿಸಿ ಬರುತ್ತೇನೆ.'

ಪೂರ್ವೋಕ್ತ ವ್ಯಕ್ತಿಗಳು ಗುರುದತ್ತನ ನೆರೆಯವರು. ಈಗ ಒಂದು ವಾರದಿಂದ ಗುರುದತ್ತನಿಗೆ ಕಾಯಿಲೆ. ಪ್ರಾರಂಭದಲ್ಲಿ ಒಂದೆರಡು ದಿವಸಗಳ ವರೆಗೆ ಕಠಿಣವಾದ ಜ್ವರ ಬಂದರೂ ರಾತ್ರಿ ಹೊತ್ತಿನಲ್ಲಿ ಬಿಟ್ಟು ಹೋಗುತ್ತಿತ್ತು. ಮೂರನೆ ದಿವಸ ಬಂದ ಜ್ವರವು ಶಮನವಾಗಲೇ ಇಲ್ಲ. ವೈದ್ಯರು, ಜೋತಿಷ್ಯರು ತಮಗೆ ತಿಳಿದ ವಿದ್ಯೆಗಳನ್ನೆಲ್ಲಾ ಉಪಯೋಗಿಸಿದರು. ಏನೊಂದೂ ಪ್ರಯೋಜನವಾಗಲಿಲ್ಲ. ಜ್ವರವು ಬರಬರುತ್ತ ಮತ್ತಷ್ಟು ಕಠಿಣವಾಗ ತೊಡಗಿತು. ಆರನೇ, ಏಳನೇ ದಿವಸ ರೋಗಿಗೆ ಸ್ಮೃತಿ ತಪ್ಪಿತು. ಏನೇನೋ ಮಾತಾಡ ತೊಡಗಿದನು. ಯಾರು ಏನು ಹೇಳಿದರೂ ಅತನಿಗೆ ಅರ್ಥವಾಗದು. ಇಂದಿಗ ಎಂಟನೇ ದಿವಸ. ಅತನು ಕೇವಲ ನಿತ್ರಾಣನಾಗಿರುತ್ತಾನೆ. ಮಾತನಾಡಲು ನಾಲಗೆಯೇ ಸರಿಯುವುದಿಲ್ಲ. ಸ್ನೇಹಿತರೂ, ನೆಂಟರಿಷ್ಟರೂ, ಗ್ರಾಮಸ್ಥರೂ ಮನೆಗೆ ತಂಡತಂಡವಾಗಿ ಬರುತ್ತಿದ್ದಾರೆ. ಬಂದವರೆಲ್ಲರೂ ಹೇಗಾದರೂ ಮಾಡಿ ಅವನ ಪ್ರಾಣವನ್ನು ಉಳಿಸಲು ವಿಶ್ವಪ್ರಯತ್ನ ಮಾಡುತ್ತಿದ್ದಾರೆ.

ಗುಣವತಿಯು ಪತಿಯ ಸಂಕಟದಲ್ಲಿ ಸಮಭಾಗಿನಿಯಾಗಿ, ಇಹವನ್ನೇ ಮರೆತಿದ್ದಾಳೆ. ಪತಿಗೆ ಅಸ್ವಸ್ಥವಾದಂದಿನಿಂದ ಆಕೆಗೆ ಸರಿಯಾದ ಅನ್ನ ಪಾನಗಳೇ ಇಲ್ಲ. ಈಗಲಂತೂ ಶಾರೀರಿಕ ವ್ಯಾಪಾರವನ್ನೇ ಮರೆತಿದ್ದಾಳೆ. ಹಗಲಿರುಳು ಬಂದವರನ್ನೂ, ದೇವರನ್ನೂ, 'ನನ್ನ ಪತಿಯ ಪ್ರಾಣವನ್ನೊಮ್ಮೆ ಉಳಿಸಿ' ಎಂದು ಬೇಡುತ್ತಿದ್ದಾಳೆ. ದೇವದತ್ತ, ಸೋಮದತ್ತರಿಬ್ಬರೂ ಒಂದು ನಿಮಿಷವಾದರೂ ತಾಳ್ಮೆಯಿಲ್ಲದೆ ಓಡಿಯಾಡುವುದರಿಂದ ಬಹು ಮಟ್ಟಿಗೆ ಕೃಶರಾಗಿರುತ್ತಾರೆ.

ರಾತ್ರಿಯಾಯಿತು. ಊರವರನೇಕರು ಮನೆಯಲ್ಲಿ ನೆರೆದಿದ್ದಾರೆ. ಕಾಯಿಲಸ್ಥನನ್ನು ನಡು ಮನೆಯಲ್ಲಿ ನೆಲದ ಮೇಲೆ ಮಲಗಿಸಿದ್ದಾರೆ ಕ್ಷಣ ಕ್ಷಣಕ್ಕೂ ವ್ಯಾಧಿಯು ಹೆಚ್ಚೆಚ್ಚು ಭಯಂಕರ ರೂಪವನ್ನೇ ಹೊಂದುತ್ತಾ ಬರುತ್ತಿದೆ. ಗುರುದತ್ತನ ಇಹಲೋಕ ವ್ಯಾಪಾರವು ಕೊನೆಗಾಣುವ ಸಮಯವು ಕ್ಷಣೇ ಕ್ಷಣೇ ಸಮೀಪವಾಗುತ್ತಿದೆ.

ಬರ ಬರುತ್ತಾ ಅವನ ಸ್ಥಿತಿಯು ಮತ್ತಷ್ಟು ಭಯಂಕರಾವಸ್ಥೆಯನ್ನು ಹೊಂದತೊಡಗಿತು. ಈಗ ಅವನು ಕೇವಲ ನಿತ್ರಾಣನಾಗಿ ಹಾಸಿಗೆಯ ಮೇಲೆ ಆ ಕಡೆ ಈ ಕಡೆ ಹೊರಳಾಡುತ್ತಿರುವುದನ್ನು ಸಹ ನಿಲ್ಲಿಸಿರುವನು. ನಾಲಗೆಯು ಬಿದ್ದು ಹೋಗಿದೆ. ಗಂಟಲಲ್ಲಿ ಶ್ವಾಸವು ಸರಳವಾಗಿ ಹೋಗುವುದಿಲ್ಲ. 'ಗರಗರ' ಎಂಬ ಶಬ್ದವು ಮೊದಲು ಸಮೀಪದಲ್ಲಿದ್ದವರಿಗೆ ಸೂಕ್ಷ್ಮವಾಗಿ ಕೇಳಿಸುತ್ತಿದ್ದದ್ದು, ಬರಬರುತ್ತಾ ಗಟ್ಟಿಯಾಗಿ ಹೊರಮನೆಯಲ್ಲಿ ಮ್ಲಾನವದನರಾಗಿ ಕುಳಿತಿದ್ದವರ ಕರ್ಣಕ್ಕೆ ಒಡನೆಯೇ ಬರಲಿಕ್ಕಿರುವ ಶೋಚನೀಯ ವರ್ತಮಾನವನ್ನು ತರುತಿತ್ತು. ಒಮ್ಮೊಮ್ಮೆ ರೋಗಿಯು ತನ್ನ ಅಂಗಾಂಗಗಳನ್ನು ಬಲವಾಗಿ ನಿಗುರಿಸುವನು ಹಾಗೆ ಮಾಡಿದಾಗಲೆಲ್ಲಾ ಅವನ ಮುಖದ ಭಾವನೆಯು ಸೈರಿಸಲಾರದ ವೇದನೆಯನ್ನು ಸಹಿಸುವಂಥಾ ಚಿಹ್ನೆಗಳನ್ನು ತೋರ್ಪಡಿಸುತ್ತಿತ್ತು. ಅವನು ಅಚಲ ದೃಷ್ಟಿಯಿಂದ ಮನೆಯ ಮೇಲ್ಭಾಗವನ್ನೇ ನೋಡುತ್ತಿದ್ದನು. ಗಂಟಲಿಂದ ಗೊರಕಲು ಕ್ಷಣೇ ಕ್ಷಣೇ ಭೀಕರವಾಗುತ್ತಾ ಬರುತ್ತಿತ್ತು.

ದಿವಸವು ಶುಕ್ರವಾರ. ಅಮಾವಾಸ್ಯೆ. ಆ ದಿನದ ಕಾಳ ರಾತ್ರಿಯು ಕಾರ್ಮೋಡದಿಂದ ಆವೃತವಾಗಿ ಮತ್ತಷ್ಟು ಭೀಷಣಾಕಾರವನ್ನು ಧರಿಸಿತ್ತು. ದಿನಮಣಿಯ ಶತ್ರುಗಳಾದ ಘೋರ ರಾಕ್ಷಸರು ತಾಂಡವಕ್ಕಾರಂಭಿಸಿದ್ದರು. ಆ ಗಾಗ್ಯೆ ಪ್ರಜ್ವಲಿಸುತ್ತಿದ್ದ ಕಾರಮಿಂಚಿನ ಕಾಂತಿಯು ಕಾಳರಕ್ಕಸರ ಕೋರೆದಾಡೆಯ ಕಾಂತಿಯಂತೆಯೂ, ಮಿಂಚಿನೊಡನೆ ಗುಡಿಗುಡಿಸಿ ಅಭೇದ್ಯವಾದ ನಿಶೆಯಲ್ಲಿ ಮಾರ್ಮೊಳಗಿ ಕಡೆಗೆಳೆದು ಹೋಗುತ್ತಿದ್ದ ಸಿಡಿಲಿನ ರವವೂ ಅವರ ವಿಚಾರ ನಗಾರಿಯಂತೆಯೂ ಕಾಣುತ್ತಿದ್ದವು. ಕಾರ್ಗತ್ತಲೆಯು ಗುರುದತ್ತನ ಶೋಚ್ಯ ಗೃಹದ ಸುತ್ತಲು ಮತ್ತಷ್ಟು ಭೀಕರವಾಗಿ ಹಬ್ಬಿತ್ತು. ದೂರದ ಜಂಬೂಕಗಳು ತಮ್ಮ ಕುಲಗಾನವನ್ನು ಮಾಡುತ್ತಿದ್ದುವು. ಸಮೀಪದ ಅರಣ್ಯದಿಂದ ಗೂಗೆಗಳ ವಿಕಾರ ಧ್ವನಿಯು ಕೇಳಿಸುತ್ತಿತ್ತು. ಗ್ರಾಮದ ಮನೆಗಳಲ್ಲಿ ನಾಯಿಗಳು ಒಂದೇ ಸವನೆ ಬೊಗುಳುತ್ತಿದ್ದುವು. ಸಿಡಿಲಿನ ರವದಿಂದಲೂ, ಗೂಗೆಗಳ ಧ್ವನಿಯಿಂದಲೂ, ನಾಯಿಗಳ ಬೊಗಳಾಟದಿಂದಲೂ ಕೂಡಿ ಆ ಘೋರಾಂಧಕಾರವು ಭಯಾನಕದ ನಿಜರೂಪವೋ ಎಂಬಂತೆ ಕೂಡಿ ಯಮದೂತರಿಗೆ ಸ್ವಾಗತವನ್ನೀಯುವಂತೆ ಕಾಣಿಸುತ್ತಿತ್ತು.

ಗುರುದತ್ತನು ಒಮ್ಮೆಯೇ ತನ್ನ ಅಂಗಾಂಗಗಳನ್ನು ಒದರಿದನು. ಕಣ್ಣುಗಳು ಗಾಲಿಯೋಪಾದಿಯಲ್ಲಿ ಸುತ್ತಲೂ ತಿರುಗಿ ನೇರವಾಗಿ ತಟಸ್ಥವಾದವು. ಗಂಟಲಿನ 'ಗರ ಗರ' ರವವೂ ಕ್ರಮಕ್ರಮವಾಗಿ ಶಾಂತವಾಗುತ್ತಾ ಬಂದು ಕಡೆಗೆ ನಿಶ್ಶಬ್ದವಾಯಿತು. ಗುಣವತಿಯು ರೋಗಿಯ ವೃಕ್ಷಸ್ಥಳದ ಮೇಲೆ ತನ್ನ ಮುಖವನ್ನಿಟ್ಟು ಗೋಳಾಡತೊಡಗಿದಳು. ನೆರೆದಿದ್ದವರೆಲ್ಲಾ 'ರಾಮ ರಾಮ' ಎನ್ನುತ್ತಾ ಗುರುದತ್ತನ ಬಾಯಿಗೆ ತುಲಸಿ ಎಲೆಯಲ್ಲಿ ನೀರೆರೆದರು. ಗೃಹವೆಲ್ಲಾ ರಾಮನಾಮದಿಂದಲೂ, ಅಳುವಿನ ರವದಿಂದಲೂ, ಮಾರ್ಮೊಳೆದು ಪ್ರತಿಧ್ವನಿಸತೊಡಗಿತು. ಗುರುದತ್ತನು ಇಹಲೋಕದ ವ್ಯಾಪಾರವನ್ನು ತೀರಿಸಿ ತನ್ನ ಆಪ್ತಮಿತ್ರ ಬಾಂಧವರನ್ನೆಲ್ಲಾ ಬಿಟ್ಟು ಯಾರೂ ಅರಿಯದ ಅನಂತ ಯಾತ್ರೆಗೆ ಹೊರಟು ಹೋದನು.

೧೦ನೇ ಅಧ್ಯಾಯ

ಕಾಲಾಂತರವನ್ನೈದಿದ ಗುರುದತ್ತನ ಉತ್ತರ ಕ್ರಿಯೆಗಳೆಲ್ಲಾ ಕಳೆದು ಈ ಮೊತ್ತಿಗೆ ಒಂದು ತಿಂಗಳು ಕಳೆದು ಹೋಗಿದೆ. ಕುಲ ಪದ್ಧತಿ ಮೇರೆ ಇನ್ನು ಪುಣ್ಯಸ್ಥಳಕ್ಕೆ ಹೋಗಿ ಸ್ವಗೃಹಸ್ಥನ ಹೆಸರಿನಲ್ಲಿ ಅವನ ಹೆಂಡತಿ ಮಕ್ಕಳು ನಡೆಸಬೇಕಾದ ಕ್ರಿಯೆಗಳನ್ನು ಪೂರೈಸುವ ವರೆಗೆ ಅವರ್‍ಯಾರೂ ಅಮೂಲ್ಯವಾದ ವಸ್ತ್ರಾಭರಣಗಳನ್ನು ಧರಿಸಕೂಡದು. ಬಿಳಿ ಬಟ್ಟೆಗಳನ್ನೇ ಉಡಬೇಕು. ತಲೆ ಮುಡಿಯನ್ನು ಕತ್ತರಿಸಕೂಡದು. ಮುಖ ಕ್ಷೌರ ಸಹ ಮಾಡಕೂಡದು. ದಿವಸಕ್ಕೆ ಒಂದೇ ಸಾರಿ ಊಟ ಮಾಡಬೇಕು. ಗುಣವತಿಯು ಈ ನೇಮನಿಷ್ಠೆಗಳನ್ನು ಬಹು ಜಾಗರೂಕತೆಯಿಂದ ನಡೆಸುತ್ತಿದ್ದಳು.

ಎಂಥಾ ಮಹಾತ್ಮನಿಗೇ ಆಗಲಿ, ಎಂಥಾ ಜ್ಞಾನಿಗೇ ಆಗಲಿ ಅವನ ಸ್ವಭಾವದಲ್ಲಿ ಏನಾದರೊಂದು ಲೋಪವು ಇದ್ದೇ ಇರುತ್ತದೆ. ಬಾಲ್ಯಾವಸ್ಥೆಯಲ್ಲಿ ಇಂಥಾ ಲೋಪಗಳು ಬಹಳ ಮಹತ್ವವನ್ನು ಹೊಂದಿ ಅನೇಕ ಮನುಷ್ಯರ ಸ್ವಾಭಾವಿಕವಾದ ಉತ್ತಮ ಗುಣಗಳನ್ನು ಮೂಲೆಗೊತ್ತುತ್ತದೆ. ಇಂಥಾ ಲೋಪಗಳನ್ನು ಸಮಯಕ್ಕೆ ಸರಿಯಾಗಿ ಕತ್ತರಿಸಿ ಮನುಷ್ಯನನ್ನು ದುರ್ಮಾರ್ಗಕ್ಕೆ ಪ್ರವೇಶವಾಗದಂತೆ ತಡೆದು ಸನ್ಮಾರ್ಗಕ್ಕೆ ಎಳೆ ತರುವ ಸಾಧನವೇ ವಿದ್ಯೆ.

ಈ ಲೋಪಗಳಲ್ಲಿ ಪ್ರಾಮುಖ್ಯವಾದದ್ದು ಇಲ್ಲವೇ ಶೃಂಗಾರಸದ್ದು; ಅಥವಾ ಶೃಂಗಾರರಸ ಮಿಶ್ರಿತವಾದ ವೀರರಸದ್ದು ಆಗಿರುತ್ತದೆ. ಮೊದಲನೆಯ ಲೋಪವು ಸಾಧಾರಣವಾಗಿ ಪ್ರತಿಯೊಬ್ಬ ಮಾನವನಲ್ಲಿಯೂ ಕಂಡು ಬರುವಂಥಾದ್ದಾಗಿದೆ. ಎರಡನೇಯದು ಕೇವಲ ವಿದ್ಯಾರ್ಥಿಗಳಲ್ಲೇ ಕಂಡು ಬರುತ್ತದೆ.

ಶೃಂಗಾರಯುಕ್ತವಾದ ಲೋಪವು ಅನೇಕರಲ್ಲಿ ಅನೇಕ ರೀತಿಯಲ್ಲಿ ತೋರ್ಪಡಿಸಿಕೊಳ್ಳುತ್ತದೆ. ಪ್ರತಿಯೊಬ್ಬ ಯುವಕನೂ, ಯುವತಿಯೂ ಇತರರ ದೃಷ್ಟಿಯಲ್ಲಿ ಸೊಗಸಾಗಿ ಕಾಣಿಸಿಕೊಳ್ಳಬೇಕೆಂದು ಅನೇಕ ವಿಧದಲ್ಲಿ ಪ್ರಯತ್ನಿಸುತ್ತಾರೆ. ವಸ್ತ್ರವನ್ನುಡುವುದು ಅಂಗ ರಕ್ಷಣೆಗೂ ನಾಣ್ಮುಚ್ಚಲಿಕ್ಕೂ ಆದ ಪಕ್ಷದಲ್ಲಿ ಅಮೂಲ್ಯವಾ ವಸ್ತ್ರವನ್ನುಡುವುದು ಈ ಲೋಪದಿಂದಯುಕ್ತವಾಗಿಯೇ ಎನ್ನಬೇಕು.

ಕೆಲವರು ತನ್ನ ಕೂದಲನ್ನು ವಿಶ್ವ ಪ್ರಯತ್ನ ಮಾಡಿ ಸುರುಳಿಸುತ್ತಾರೆ ಕೆಲವರು ಸುಗಂಧಮಿಶ್ರಿತವಾದ ತೈಲದಿಂದ ಇತರರ ಕಣ್ಣಿಗೆ ಹಿಡಿಯುವ ರೀತಿಯಲ್ಲಿ ಕೂದಲನ್ನು ಬಾಚಿ ಮಳೆ ಬಿಸಿಲೆನ್ನದೆ ತಲೆಗೆ ಯಾವುದೊಂದು ಉಡುಪನ್ನೂ ಧರಿಸದೆ ತಿರುಗುತ್ತಾರೆ. ಯುವಕರನೇಕರು ತಮ್ಮ ಮುಖದ ಮೇಲೆ ನಾಲ್ಕೈದು ಕೂದಲು ಸಹ ಬರುವುದಕ್ಕೆ ಮೊದಲು, ದಿನಕ್ಕೊಮ್ಮೆ ಕ್ಷೌರ ಮಾಡಲು ಪ್ರಾರಂಭಿಸುತ್ತಾರೆ. ಇನ್ನು ಕೆಲವು ಯುವತಿಯರು ದಿನಕ್ಕೊಮ್ಮೆ ಹರಿನಾಮ ಸ್ಮರಣೆ ಮಾಡದಿದ್ದರೂ ಸಹ ತಮ್ಮ ಹಣೆಯ ಮಧ್ಯಕ್ಕೆ ತಮ್ಮ ಮುಖದ ಬಣ್ಣಕ್ಕೆ ಸರಿ ಹೋಗುವ ಬಿಂದು ತಿಲಕವನ್ನು ಬಹು ಜಾಗರೂಕತೆಯಿಂದ ತಪ್ಪದೆ ಧರಿಸುತ್ತಾರೆ. ಕೆಲವರು ಮೈಮೇಲೆ ನಾನಾ ತರದ ಅತ್ತರುಗಳನ್ನೂ, ಮುಖದ ಮೇಲೆ ಸುಗಂಧ ಮಿಶ್ರಿತವಾದ ನಾನಾ ತರಹದ ಬೂದಿಗಳನ್ನೂ ಹಾಕಿಕೊಳ್ಳುವುದೂ ಉಂಟು.

ಈ ಲೋಪವು ಕೆಲವು ಉನ್ನತಿಯನ್ನು ಹೊಂದಿತ್ತಾದರೆ ಕೆಲವರು ತಮ್ಮ ಜಾತಿಯ ಹೆಸರನ್ನು ಹೇಳಲು ನಾಚುತ್ತಾರೆ. ಕೆಲವರು ತಮ್ಮ ಮನೆತನದ ಹೆಸರನ್ನು ಬದಲಾಯಿಸಲು ಪ್ರಯತ್ನಿಸುವರು ಇನ್ನು ಕೆಲವರು ತಮ್ಮ ನವೀನ ಗೆಳೆಯರ ಎದುರಿನಲ್ಲಿ ಮುದುಕರೂ, ಬಡವರೂ, ಆದ ತಮ್ಮ ತಂದೆ ತಾಯಿಗಳನ್ನೇ ಯಾರೋ ಕೂಲಿಯವರೆಂದೋ ದೂರದ ಬಂಧುಗಳೆಂದೋ ಅಥವಾ ಗ್ರಾಮಸ್ಥರೆಂದೋ, ಹೇಳಿಬಿಡುವದು ಸಹ ಉಂಟು.

ಪ್ರಾಮುಖ್ಯವಾಗಿ ವಿದ್ಯಾರ್ಥಿಗಳಲ್ಲೇ ಕಂಡು ಬರುವ ವೀರ್ಯರಸ ಮಿಶ್ರಿತವಾದ ಲೋಪವು ಕೆಲ ವೇಳೆ ಅನೇಕ ತರಹದ ಅನಾಹುತಗಳನ್ನುಂಟು ಮಾಡುವುದು. ಪ್ರತಿಯೊಬ್ಬ ಮನುಷ್ಯನಿಗೂ ಇತರರಿಂದ ಹೊಗಳಿಸಿಕೊಳ್ಳಬೇಕೆಂಬ ಕಾಂಕ್ಷೆಯು ಬಹಳವಾಗಿರುತ್ತದೆ. ಕೆಲವರು ಈ ಹೇಟ ಸಾಧನೆಯ ಪ್ರಯುಕ್ತ ತಮ್ಮ ಎಲ್ಲಾ ಸರ್ವಸ್ವವನ್ನೂ ಅಲ್ಪಸಂಗತಿಗಳಿಗೋಸ್ಕರ ಕಳೆಕೊಳ್ಳುತ್ತಾರೆ. ಹಾಗೆಯೇ ಪ್ರತಿಯೊ

ಬ್ಬ ವಿದ್ಯಾರ್ಥಿಗೂ ಇತರ ವಿದ್ಯಾರ್ಥಿಗಳ ಅಭಿಮಾನವನ್ನೂ, ಹೊಗಳಿಕೆಯನ್ನೂ ಸಂಪಾದಿಸಿಕೊಳ್ಳಬೇಕೆಂಬ ಕುತೂಹಲವೂ ಬಹಳವಾಗಿರುತ್ತೆ. ಆದುದರಿಂದ ಅವನು ತನ್ನ ಮುಂದಿನ ಸುಖಾಸುಖಗಳನ್ನು ಬಯಸದೆ ಕ್ಷಣಭಂಗುರವಾದ ಹೊಗಳುವಿಕೆಯನ್ನೂ, ಮುಂದಾಳುತನವನ್ನೂ, ಸಂಪಾದಿಸಲೋಸುಗ ಉಪಾಧ್ಯಾಯರುಗಳೊಡನೆ ಅವಿಧೇಯತ್ವದಿಂದ ನಡೆದೂ, ಶಾಲಾ ನಡವಳಿಕೆಗಳಿಗೆ ತಲೆ ಬಗ್ಗಿಸದೆಯೂ, ಪಾಠಗಳಿಗೆ ಸರಿಯಾಗಿ ಗಮನಕೊಡದೆಯೂ, ಶಾಲಾ ಕಥೆಗಳ ನಾಯಕನೂ, ತುಂಟ ಹುಡುಗರ ಮುಖಂಡನೂ, ಉಪಾಧ್ಯಾಯರ ದೂಷಣೆಗೆ ಪಾತ್ರನೂ ಆಗಿ ತನ್ನ ಮುಂದಿನ ಜೀವನ ದಾರಿಯನ್ನೇ ಅಸಂತಸಾದ ದುಃಖ ಸಾಗರದಲ್ಲಿ ತೇಲಿಸುವನು. ವಿದ್ಯಾರ್ಥಿ ಸಹೋದರರೇ, ನೀವು ಈ ಲೋಕದಲ್ಲಿ ಅಭಿವೃದ್ಧಿಹೊಂದಬೇಕೆಂಬ ಕಾಂಕ್ಷೆ ಉಳ್ಳವರಾದರೆ ಈ ತರಹದ ಮೋಸಕ್ಕೆ ಒಳಗಾಗದಿರಿ

ದೇವದತ್ತನು ಶಾಲಾ ಮಿತ್ರರ ಮುಖಂಡನಾಗಬೇಕೆಂದು ಮಾತ್ರ ಅವನು ಪ್ರಯತ್ನಪಡಲಿಲ್ಲ. ಅವರ ಪಾಠ ಕಲಿಗಳಲ್ಲಿ ಪ್ರಸ್ಥಾನವನ್ನು ಹೊಂದಬೇಕೆಂಬ ಕಾಂಕ್ಷೆಯು ಅವನಿಗಿತ್ತು.

ಶೃಂಗಾರಭರಿತವಾದ ಲೋಪವು, ಪ್ರತಿಯೊಬ್ಬ ಯುವಕನಲ್ಲಿಯೂ ಇರುವಾಗ್ಯೆ ಇವನಲ್ಲಿ ಮಾತ್ರ ಅದು ಕಂಡು ಬರುತ್ತಿರಲಿಲ್ಲವೆಂದರೆ ಇವನನ್ನು ಸ್ವಭಾವಿಕ ಮನುಷ್ಯರ ಸ್ಥಿತಿಗಿಂತ ಮೇಲಿರಿಸಿದಂತಾಗುವುದು. ದೇವದತ್ತನೂ ಈ ಪಾಶಕ್ಕೆ ಕಟ್ಟು ಬಿದ್ದಿದ್ದನು. ಆದರೆ ಆ ಕಾಂಕ್ಷೆಯು ಬಹು ತರದ್ದಾಗಿರಲಿಲ್ಲ. ಆದರ ಮೇಲೂ ಸಾಧು ಸಜ್ಜನರೂ, ಅಲ್ಪ ಇಂಗ್ಲಿಷ್ ಭಾಷೆಯ ದುರ್ವರ್ತನೆಗಳಿಗೆ ಈಡಾಗದವರೂ, ಕುಲಾಚಾರ ಪದ್ಧತಿಗಳನ್ನು ಬಹು ಶ್ರದ್ಧೆಯಿಂದ ನಡೆಸುತ್ತಿದ್ದವರೂ ಆದ ತಾಯಿ ತಂದೆಗಳ ಲಾಲನೆ ಪಾಲನೆಯಲ್ಲೇ ಸಲಹಲ್ಪಟ್ಟ ದೇವದತ್ತನಿಗೆ ಆ ಲೋಪವನ್ನು ವೃದ್ಧಿಗೊಳಿಸಲು ಆಗಲಿಲ್ಲ. ತನ್ನ ಪ್ರೀತಿಯ ಆರಾಧ್ಯ ದೇವತೆಯಾದ ಕಮಲೆಯ ಅಂತರಂಗದಲ್ಲಿ ತನ್ನ ವಿಷಯದಲ್ಲಿ ಏನೊಂದೂ ಅಸತ್ಯ ಭಾವನೆಯು ಬೇರೂರದಂತೆ ತಡೆಯಲು ಅವನು ಪ್ರಯತ್ನಪಡುತ್ತಿದ್ದನು. ಇದಕ್ಕಾಗಿ ಅವನು ತನ್ನ ಸ್ಥಿತಿಗತಿಗಿಂತಲೂ ಮೀರಿದ ಉಡುಪುಗಳನ್ನು ಧರಿಸುತ್ತಿಲ್ಲವಾದರೂ, ಯಾವಾಗಲೂ ನಿರ್ಮಲವೂ ಅಲಂಕಾರಯುಕ್ತವೂ ಆದ ವಸ್ತ್ರಗಳನ್ನು ಉಡುತ್ತಿದ್ದನು. ವಾರಕ್ಕೆ ಎರಡು ಸರ್ತಿಯಾದರೂ ಮುಖ ಕ್ಷೌರ ಮಾಡುತ್ತಿದ್ದನು. ಕೆಲವು ವೇಳೆ ಮಡಿವಾಳಿಯು ಬರುವುದಕ್ಕೆ ತಡವಾದರೆ ತಾನೆಯಾದರೂ ತನ್ನ ಬಟ್ಟೆಗಳನ್ನು ಮಡಿ ಮಾಡಿ, ಇಸ್ತ್ರಿ ಮಾಡಿ ಧರಿಸುತ್ತಿದನು.

ಬೇಸಿಗೆಯ ರಜೆಗೆ ಎರಡು ತಿಂಗಳವರೆಗೆ ಮುಚ್ಚಲ್ಪಟ್ಟಿದ್ದ ಅರಸುಪುರದ ಶಾಲೆಯು ಈ ದಿವಸ ತೆರೆಯಲ್ಪಟ್ಟಿದೆ. ವಿದ್ಯಾರ್ಥಿಗಳೆಲ್ಲಾ ವರ್ಷದ ಪ್ರಥಮ ಶಾಲಾ ದಿವಸವಾದುದರಿಂದ ಅಲಂಕಾರವಾದ ಉಡುಪುಗಳನ್ನು ಧರಿಸಿ ಕೈಯಲ್ಲಿ ಒಂದೊಂದು ಛತ್ರಿಗಳನ್ನು ಹಿಡಿದು ಉಪಾಧ್ಯಾಯರುಗಳ ಹಾಗೆ ಶಾಲೆಗೆ ಬಂದರುತ್ತಾರೆ. ವಿದ್ಯಾರ್ಥಿಯರ ಉಪಕರಣಗಳ್ಯಾವವೂ ಅವರ ಹತ್ತಿರವಿಲ್ಲ. ಕೋಟಿನ ಮೇಲ್ಭಾಗದ ಜೇಜ್ ಪಾಕೆಟಿನಲ್ಲಿ ಮಾತ್ರ ಫಳ ಫಳ ಹೊಳೆಯುವ 'ಕ್ಲಿಪ್'ಗಳಿಂದ ಕೂಡಿದ ಒಂದೊಂದು ಲೇಖನಿಗಳು ಮಾತ್ರ ಇವೆ.

ಅವರ ಪೈಕಿ ಕೆಲವರು ನಿರ್ಭಯವಾಗಿ ಶಾಲೆಯ ತರಗತಿಗಳಲ್ಲಾ ತಿರುಗಾಡುತ್ತಿದ್ದಾರೆ. ಕೆಲವರು ವಿದೇಶಿಯರಂತೆ ಕಂಡ ಕಂಡ ವಸ್ತುಗಳನ್ನೆಲ್ಲಾ ಆಶ್ಚರ್ಯಚಕಿತರಾಗಿ ದೃಷ್ಟಿಸುತ್ತಾ ನಿರ್ಭಯವಾಗಿ ತಿರುಗಾಡುತ್ತಿದ್ದ ವಿದ್ಯಾರ್ಥಿಗಳಿಗೆ ದಾರಿ ಬಿಡುತ್ತಲೂ ಅವರ ಮುಖವನ್ನೂ ಅಭಿಮಾನ ದೃಷ್ಟಿಯಿಂದ ನೋಡುತ್ತಲೂ ಇದ್ದಾರೆ. ಒತ್ತಿಡೆ ಶಾಲಾ ವಿದ್ಯಾರ್ಥಿನಿಯರೆಲ್ಲಾ ಜತೆ ಸೇರಿ, ಒಬ್ಬೊಬ್ಬರು ಒಂದೊಂದು ವಿನೋದವನ್ನು ತಮ್ಮ ಬಳಗಕ್ಕೆ ತಿಳಿಸುತ್ತಾ ಹರ್ಷಯುಕ್ತರಾಗಿ ಇದ್ದಾರೆ. ಶಾಲೆಯ ಮೊಗವಾಡದಲ್ಲಿ ಪ್ರಾಮುಖ್ಯ ಹುಡುಗರು ಕೆಲವರು ಗುಂಪಾಗಿ ಸೇರಿ ರಜೆಯಲ್ಲಿ ತಾವು ಅನುಭವಿಸಿದ ವಿಶೇಷ ಸಂಗತಿಗಳನ್ನು ಸಂಗಾತಿಗಳಿಗೆ ತಿಳಿಸುತ್ತಾ ಹರ್ಷಯುಕ್ತರಾಗಿದ್ದಾರೆ.

ಸುಮಾರು ಒಂಭತ್ತುವರೆ ಗಂಟೆಯಾಗಿರಬಹುದು. ಶಾಲೆಯ ಪೂರ್ವ ಭಾಗದಲ್ಲಿ ಒಂದು ರಸ್ತೆಯು ಗದ್ದೆಗಳ ಮಧ್ಯಕ್ಕಾಗಿ ನೆಟ್ಟನೆ ಹಾಯ್ದು ಸಮೀಪದ ಬೆಟ್ಟದ ಬುಡಕ್ಕಾಗಿ ಸರ್ಪಗಮನೋಪಾದಿಯಲ್ಲಿ ಹರಿದು, ದೂರದ ತಪ್ಪಲಿನಲ್ಲಿ ಅದೃಶ್ಯವಾಗಿ ಹೋಗಿತ್ತು. ಆ ದಾರಿಯಲ್ಲಿ ಸ್ವೇತಾಂಬರಧಾರಿಯಾದ ಯುವಕನೊಬ್ಬನು ಕೈಯಲ್ಲಿ ಒಂದು ಕೊಡೆಯನ್ನು ಹಿಡಿದು ಮೆಲ್ಲಮೆಲ್ಲನೆ ಶಾಲಾಭಿಮುಖವಾಗಿ ಬರುತ್ತಿದ್ದನು. ಶಾಲೆಯ ಮುಖಮಂಟಪದಲ್ಲಿ ಸೇರಿ ಅವನ ಚಲನೆಯನ್ನೇ ಕಾಯುತ್ತಿದ್ದ ವಿದ್ಯಾರ್ಥಿಗಳಿಗೆ ಆ ವ್ಯಕ್ತಿಯು ಸಂಪೂರ್ಣ ಮನಸಿನಿಂದ ತನ್ನ ನಿಕೇತ ಸ್ಥಾನಕ್ಕೆ ದಯಮಾಡಿಸುವವನಂತೆ ಕಾಣಿಸುತ್ತಿರಲಿಲ್ಲ. ಆ ವ್ಯಕ್ತಿಯು ನಮ್ಮ ದೇವದತ್ತನಾಗಿದ್ದನು.

ದೇವದತ್ತನಿಗೆ ಶಾಲೆಗೆ ಹೋಗುವುದೆಂದರೆ ಎಳೆಯ ಮಕ್ಕಳಿಗೆ ಉತ್ಸವಕ್ಕಾಗಲೀ, ಮದುವೆಗಾಗಲೀ ಹೋಗುವುದೆಂದರೆ ಎಷ್ಟು ಆತುರವಿರುವುದೋ ಅಷ್ಟೇ ಆತುರವಿತ್ತು. ಅವರ ಮೇಲೂ ಕಮಲೆಯ ಅಗಲುವಿಕೆಯಿಂದ ರಜಾ ದಿವಸಗಳೂ ಸಹ ಸಹಿಸಲಸದಳವಾದ ಕಠಿಣ ದಿವಸಗಳಾಗಿ ಪರಿಣಮಿಸುತಿದ್ದವು. ಆದರೆ ಈ ಎರಡು ತಿಂಗಳುಗಳಿಂದ ಕಾಣದ ಇದ್ದ ಕಮಲೆಯನ್ನು ಕಾಣಲು ಇಂದು ದೇವದತ್ತನಿಗೆ ಮನಸಿರಲಿಲ್ಲ. ದೇವದತ್ತನ ಮುಖದ ಮೇಲೆ ಕಾವಲು ಬೆಳೆದುಹೋಗಿದೆ. ತಲೆಯ ಮುಡಿಯನ್ನು ಕತ್ತರಿಸಿರುವುದಿಲ್ಲ. ಬರೀ ಬಿಳಿ ವಸ್ತ್ರಗಳನ್ನೇ ಧರಿಸಬೇಕು. ಈ ಸ್ಥಿತಿಯಲ್ಲಿ ಕಮಲೆಗೆ ಕಾಣಿಸಿಕೊಳ್ಳಲು ಮನ ಒಪ್ಪಲೇ ಇಲ್ಲ. ಮಾಡತಕ್ಕದ್ದೇನು? ದೇವದತ್ತನು ಮನಸಿಲ್ಲದೆ ಶಾಲೆಗೆ ಬಂದನು.

ಕಮಲೆಯನ್ನು ಕಾಣದೆ ವಾರದಲ್ಲಿ ಶನಿವಾರ, ಆದಿತ್ಯವಾರಗಳನ್ನು ಕಳೆಯುವುದನ್ನು ಎರಡು ತಿಂಗಳುಗಳ ಹಾಗೆ ಎಣಿಸುತಿದ್ದ ದೇವದತ್ತನಿಗೆ ಈಗ ಆ ಸುಸಂದರ್ಭವು ಎರಡು ತಿಂಗಳುಗಳನಂತರ ದೊರೆತಿದ್ದರೂ ಸಹ ಅದರಲ್ಲಿ ಸಂಪೂರ್ಣ ಅಭಿರುಚಿಯು ತೋರದೆ ಹೋಗಿರುವುದೆಂದರೆ ಮನುಷ್ಯರಲ್ಲಿ ಶೃಂಗಾರ ಭಾವನೆ ಎಷ್ಟು ಮಹತ್ತರವಾದುದೆಂದು ಹೇಳಬೇಕೇ? ಅಂತು ದೇವದತ್ತನು ಮನಸಿಲ್ಲದೆ ಬಂದು ಶಾಲೆಯನ್ನು ಸೇರಿದನು.

ಅವನ ಸ್ಥಿತಿಯನ್ನೂ, ಬಾಡಿದ ಮುಖವನ್ನೂ ನೋಡಿ ಅವನ ಗೆಳೆಯರು ಅದು ಅವನ ತಂದೆಯ ವಿರಹದಿಂದ ಅವನಿಗುಂಟಾಗಿದ್ದ ವ್ಯಸನವೆಂದೇ ಭಾವಿಸಿ, ಅದರಲ್ಲಿ ತಾವೂ ಭಾಗಿಗಳಾದರು. ಆ ವೇಳೆ ಒಂದೊಂದು ಸಂಗತಿಯನ್ನು ಹೇಳುತ್ತಿದ್ದ ಹಾಗೆ ಒಬ್ಬ ವಿದ್ಯಾರ್ಥಿಯು ಹಟಾತ್ತಾಗಿ 'ನಮ್ಮ ಗೆಳತಿಯು ಹೋದಳಲ್ಲ' ಎಂದ ಒಡನೆಯೇ ಆ ಗುಂಪಿನಲ್ಲಿ ಒಬ್ಬನು 'ಎಲ್ಲಿಗೆ ಎಂದನು. 'ಕಲ್ಲಿಕೋಟೆಗ' ಎಂದು ಜವಾಬು ಹೊರಟಿತು.

'ಗೆಳತಿಯು ಹೋದಳಲ್ಲಾ' ಎಂಬ ಮಾತು ದೇವದತ್ತನ ಕರ್ಣಕ್ಕೆ ವಿದ್ಯುಚ್ಛಕ್ತಿಯೋಪಾದಿಯಲ್ಲಿ ಬಿದ್ದಿತು. 'ಕಲ್ಲಿಕೋಟೆಗೆ ಎಂದೊಡನೆ ಅವನ ಸ್ಥಿತಿಯು ಬದಲಾಯಿತು. ತನ್ನ ಸ್ಥಿತಿಯನ್ನು ಇತರರಿಗೆ ತೋರ್ಪಡಿಸಿದರೆ ಅವರ ಹಾಸ್ಯಕ್ಕೂ, ನಿಂದೆಗೂ ಅಸ್ಪದವಾದೀತೆಂದು ತಿಳಿದು ದೇವದತ್ತನು ಅರೆನಗೆಯೊಡನೆ 'ನಮ್ಮಿಂದ ಒಂದು ಟೀಪಾರ್ಟಿಯನ್ನು ಸಹ ಸ್ವೀಕರಿಸದೆ ಹೋದಳೇ' ಎಂದನು. ಎಲ್ಲರೂ ನಕ್ಕರು. ಕೂಡಲೇ ಪೂರ್ವೋಕ್ತ ವಿದ್ಯಾರ್ಥಿಯು 'ಕಾಯಿಲೆಯಿಂದು ರಜದಲ್ಲಿ ಹೋದ ಹರೀಂದ್ರನಾಥರು ತಮ್ಮ ಉದ್ಯೋಗದಿಂದ ನಿವೃತ್ತರಾಗಿ ಈಗ ಕಲ್ಲಿಕೋಟೆಯಲ್ಲಿ ವಾಸಿಸುತ್ತಿರುವರು. ಅವರಿನ್ನು ಈ ಕಡೆ ಬರುವ ಹಾಗಿಲ್ಲ. ಕಮಲೆಯು ಅವರೊಡನೇ ಇರುವಳು' ಎಂದನು.

ದೇವದತ್ತನ ಮನಸಿನಲ್ಲಿ ಏನೋ ವಿಕಲ್ಪನೆಗಳು ಜನಿಸತೊಡಗಿದುವು. ಅವನ ನ್ಯು ನಡುಗಲಾರಂಭಿಸಿತು. ಕಣ್ಣುಗಳಲ್ಲಿ ನೀರು ತುಂಬಿಕೊಂಡ ಹಾಗಾಯಿತು. ಯಾರಾದರೂ ಈ ಮಧ್ಯೆ ಅವನ ಮುಖ ವಿಕಾರವನ್ನು ನೋಡಿದ್ದ ಪಕ್ಷದಲ್ಲಿ ಅವನ ಅಂತರ್ಯದ ಭಾವನೆಗಳು ಅವರಿಗೆ ವೇದ್ಯವಾಗುತ್ತಿತ್ತು. ಆದರೆ ಪ್ರತಿಯೊಬ್ಬನನ್ನೂ ಈ ವರ್ತಮಾನವು ವಿಸ್ಮಯಗೊಳಿಸಿತ್ತು. ದೇವದತ್ತನಿಗೆ ತಡೆಯಲಾರದಾಯಿತು. ಏನು ಮಾಡಲೂ ತೋರಲಿಲ್ಲ. ಅಷ್ಟರಲ್ಲಿ ಶಾಲಾ ಗಂಟೆಯಾದುದರಿಂದ ಅವನು ಈ ಸಂದರ್ಭವನ್ನು ದೈವಸಹಾಯವೆಂದೇ ಭಾವಿಸಿ ನೈಸರ್ಗಿಕ ವ್ಯಾಪಾರಗಳನ್ನು ತೀರಿಸುವ ನೆಪದಿಂದ ಸಮೀಪದ ತೋಪಿನೊಳಗೆ ಹೋದನು. ಹೋದವನು ಮರಳಿ ಬರಲು ಸ್ವಲ್ಪ ತಡವಾಯಿತು. ಅವನ ಕಣ್ಣುಗಳು ಕೆಂಪೇರಿದ್ದವು. ಮುಖದ ಮೇಲೆ ಆಹ್ಲಾದವನ್ನು ಸೂಚಿಸತಕ್ಕ ಕುರುಹುಗಳೆಲ್ಲಾ ಸಂಪೂರ್ಣವಾಗಿ ಕಳಚಿ ಹೋಗಿದ್ದವು.

[ಸಶೇಷ.

ಸಾದರ ಸ್ವೀಕಾರ.

ಕಂಠೀರವ ದಸರಾ ಸಂಚಿಕೆ.

ಕಂಠೀರವ ದಸರಾ ಸಂಚಿಕೆಯು ನಮ್ಮ ಕೈಸೇರಿದೆ. ತ್ರಿವರ್ಣದಿಂದೊಡಗೂಡಿದ ಮೇಲ್ಭಾಗದೊಳಗೆ ಅನೇಕ ವಿದ್ವಾಂಸರ ವಿಚಾರಪರವಿಷಯಗಳಿಂದಲೂ, ರಸಿಕ ಜನರಂಜನೆಗೊಳಿಸುವ ರಸಭರಿತ ಕಥಾ ಪ್ರಬಂಧಗಳಿಂದಲೂ, ಕವಿತ ಸುಧಾ ರಸಪೂರಿತವಾದ ಗದ್ಯಪದ್ಯಗಳ ಸಂಪತ್ತಿನಿಂದ ಕೂಡಿದ 180 ಪುಟಗಳುಳ್ಳ ಈ ಸಂಚಿಕೆಯು ಓದುಗರ ಮನವನ್ನಾಕರಿಸುತ್ತಿದೆ. ಇದರ ಕ್ರಯ ಬರೀ 0-4-0 ಮಾತ್ರ ಇದೆ. ಇಂಥಾ ಸರ್ವಾಂಗಸುಂದರವಾದ ಸಂಚಿಕೆಯನ್ನು ಹೊರಡಿಸಿದ ಸಂಪಾದಕರ ಎದೆಗಾರಿಕೆಯನ್ನು ಅಭಿನಂದಿಸದೆ ಇರಲಾರೆವು.

ಪ್ರಭಾತ ದಸರಾ ಸಂಚಿಕೆ.

ಪ್ರಭಾತ ದಸರಾ ಸಂಚಿಕೆಯನ್ನು ಆದರದಿಂದ ಸ್ವೀಕರಿಸಿರುವೆವು. ಈ ವರ್ಷವೂ ಇದು ಸಕಾಲದಲ್ಲಿ ಕರ್ನಾಟಕದ ನುರಿತ ಲೇಖಕರ ಅಮೋಘ ಲೇಖನಗಳಿಂದೊಡಗೂಡಿ ಹೊರಬಿದ್ದಿದೆ. ಲೇಖಕರ ಭಾವಚಿತ್ರದಿಂದೊಡಗೂಡಿದ ಸರಸ ಪ್ರಬಂಧಗಳೂ, ವಿಚಾರ ಪ್ರಪುಲ್ಲಿತ ಲೇಖನಗಳೂ ಓದುವಂಥಾದ್ದಿವೆ. 100 ಪುಟಗಳಿಂದ ಅಚ್ಚುಕಟ್ಟಾದ ಮುದ್ರಣದಿಂದಲೂ, ಮನೋರಂಜಕ ಮೇಲ್ಭಾಗದಿಂದಲೂ ಕೂಡಿರುವ ಈ ಸಂಚಿಕೆಯು ಸರ್ವಾಂಗ ಸುಂದರವಾಗಿದೆ. ಹೀಗೆ ವಿಶೇಷ ಸಂಚಿಕೆಗಳನ್ನು ಹೊರಡಿಸಿ ಸಮಗ್ರ ಕರ್ನಾಟಕಕ್ಕೆ ಇವರು ಸಲ್ಲಿಸುತ್ತಿರುವ ಸೇವೆಯು ಯಶಸ್ವಿಯಾಗುವಂತೆ 'ಪಭಾತ'ಸಿಗೆ ಧೀರ್ಘಾಯುಷ್ಯವನ್ನೂ, ಯಶಸನ್ನೂ ಕೋರುವೆವು

ಸರಸ್ವತಿ ನವರಾತ್ರಿ ಸಂಚಿಕೆ.

ಶ್ರೀಮತಿ ಆರ್. ಕಲ್ಯಾಣಮ್ಮನವರ ಸಂಪಾದಕತ್ವದಲ್ಲಿ ಹೊರಟಿರುವ ಈ ಸಂಚಿಕೆಯು ಭಾವಗರ್ಭಿತ ಲೇಖನಗಳಿಂದಲೂ, ಹೃದಯಂಗಮವಾದ ಕವನಗಳಿಂದಲೂ, ಅಚ್ಚು ನುಚ್ಚಿನ ಮುದ್ರಣದಿಂದಲೂ ಮನೋಹರವಾಗಿದೆ. ಇವರು ಮಕ್ಕಳ ಕೂಟದ ಸಂಚಾಲಕರಾಗಿ ತಮ್ಮ ಅಮೂಲ್ಯ ಪತ್ರಿಕೆಯ ಮುಖಾಂತರ ಅಮೋಘವಾದ ಸೇವೆ ಸಲ್ಲಿಸಿರುವರು ಅಂತೆಯೇ ಈ ಸಂಚಿಕೆಯಲ್ಲಿಯೂ ಅದಕ್ಕಾಗಿ ಕಾದಿರಿಸಿದ ಪುಟಗಳಲ್ಲಿ ಪ್ರಕಟವಾಗಿರುವ ಮಕ್ಕಳ ಅಭಿವೃದ್ಧಿಯ ಲೇಖನಗಳು ಅರ್ಥಗರ್ಭಿತವಿವೆ. ಇನ್ನು ಮುಂದಕ್ಕೂ ಸರಸ್ವತಿಯು ಸರ್ವ ಜನಾದರಣೆಯನ್ನು ಪಡೆದು ಚಿರಾಯುವಾಗಲೆಂದೇ ನಮ್ಮ ಬಯಕೆ.

ಡಾ. ಮೇಥ್ಯೂಸ್ ಎಬ್ರಹಾಮ್
ದಂತ ವೈದ್ಯರು.
(ಪೀಯರ್ಸ್‌ಲೆಸ್ಲಿ ಬಂಗ್ಲೆ)
(ಸ್ಪೆನ್ಸರ್ಸ್ ಹತ್ತಿರ)
ಮಡಿಕೇರಿ.

ಕೊಡಗು

ಅಕ್ಟೋಬರ್ ತಾರೀಕು ೨೮ನೇ ಶುಕ್ರವಾರ ೧೯೩೮.

ಸಿಬ್ಬಂದಿ ಖೋತೆ.

ಕೊಡಗು ನ್ಯಾಯವಿಧಾಯಕ ಸಭೆಯ ಸಿಟ್ಟಿಂಗು ಈ ತಾ. ೨೬ರಲ್ಲಿ ಪ್ರಾರಂಭವಾಯಿತು. ಇದರಲ್ಲಿ ಸರ್ಕಾರದವರು ಮುಂದಿಟ್ಟ ಎರಡು ಮಸೂದೆಗಳ ನಂತರ ಪ್ರಥಮತ ಚರ್ಚಿಸಲ್ಪಟ್ಟ ಠರಾವುಗಳು ಸರ್ಕಾರಿ ಇಲಾಖೆಗಳಲ್ಲಿ ಸಿಬ್ಬಂದಿ ಖೋತೆಯನ್ನು ಕುರಿತದ್ದಾಗಿವೆ. ಈಗಿನ ಕೌನ್ಸಿಲಿನ ಪ್ರಥಮ ಸಿಟ್ಟಿಂಗಿನಲ್ಲಿ ಅಂದರೆ ಸುಮಾರು ಹತ್ತು ತಿಂಗಳ ಹಿಂದೆ ನಡೆದ ಸಭೆಯಲ್ಲಿ ಕೊಡಗನ್ನು ಪೂರ್ತಿ ಸ್ವಾತಂತ್ರ್ಯ ಸರ್ಕಾರವಾಗಿ ಪ್ರತ್ಯೇಕ ಇಟ್ಟುಕೊಳ್ಳಲು ಸಾಧ್ಯವೋ ಎಂಬುದನ್ನು ಆಜಮಾಯಿಸಲಿಕ್ಕಾಗಿ ಇಂಡಿಯಾ ಸರಕಾರದವರಿಂದ ನೇಮಿಸಲ್ಪಡುವ ಒಬ್ಬ ಸ್ವತಂತ್ರ ಆಫೀಸರನ ಅಧ್ಯಕ್ಷತೆಯಲ್ಲಿ ಕೌನ್ಸಿಲಿನ ಉದ್ಯೋಗಸ್ಥರಲ್ಲದ ಮೆಂಬರುಗಳ ಬಹುಮತವಿರುವ ಕಮಿಟಿಯೊಂದನ್ನು ನೇಮಿಸಬೇಕೆಂಬ ಠರಾವು ಪಾಸು ಮಾಡಲಾಗಿತ್ತು. ಆದರೆ ಇಂಡಿಯಾ ಸರ್ಕಾರದವರು ದೇಶದ ಜನರ ಈ ಕೋರಿಕೆಯನ್ನು ಪೂರ್ತಿಯಾಗಿ ಮನ್ನಿಸದೆ, ಕೊಡಗಿನ ಸರ್ಕಾರದ ಆದಾಯ ವೆಚ್ಚವನ್ನು ಸರಿಪಡಿಸಲು ಮಾತ್ರ ಮದ್ರಾಸಿನ ಎಕೌಂಟೆಂಟ್ ಜನರಲರಾದ ಮಿ. ಸಿ. ಕೆ. ಪಟ್ಟಾಲ್‌ರೆಂಬ ಫೈನಾನ್ಸಿಯಲ್ ಆಫೀಸರನ್ನು ನೇಮಿಸಿದರು. ಇವರು ಕಳೆದ ಮೇ ತಿಂಗಳಲ್ಲಿ ಕೊಡಗಿಗೆ ಬಂದು ಸರ್ಕಾರಿ ಇಲಾಖೆಗಳ ಮೇಲಧಿಕಾರಿಗಳನ್ನೂ, ಕೌನ್ಸಿಲಿನ ಕೆಲವು ಉದ್ಯೋಗಸ್ಥರಲ್ಲದ ಮೆಂಬರುಗಳನ್ನೂ ಮತ್ತು ಇನ್ನು ಕೆಲವು ಖಾಸಗಿ ಮಹನೀಯರನ್ನೂ ಕಂಡು ಅಭಿಪ್ರಾಯ ಕೇಳಿ ಇಲ್ಲಿಯ ಬಜೆಟನ್ನು ಹೇಗೆ ಸರಿಗಟ್ಟಬಹುದೆಂಬದನ್ನು ಆಜಮಾಯಿಸಿ, ವರದಿ ತಯಾರಿಸಿ ಇಂಡಿಯಾ ಸರ್ಕಾರಕ್ಕೆ ಕಳುಹಿಸಿರುವರು.

ಈ ವರದಿಯನ್ನು ಕುರಿತು ಈ ಕೌನ್ಸಿಲು ಸಿಟ್ಟಿಂಗಿನಲ್ಲಿ ಹಲವು ಪ್ರಶ್ನೆಗಳು ಕೇಳಲ್ಪಟ್ಟವು. ಅಲ್ಲದೆ ಕೌನ್ಸಿಲು ಸಭೆ ಪ್ರಾರಂಭವಾದಾಗ್ಯೆ ಚೀಫ್ ಕಮಿಷನರಾದ ಅಧ್ಯಕ್ಷರು ಮಾಡಿದ ಭಾಷಣದಲ್ಲಿ ಇದರ ವಿಚಾರವಾಗಿ ಈ ರೀತಿ ಮಾಹಿತಿ ಕೊಟ್ಟರು. 'ಮಿ. ಪಟ್ಟಾಲ್‌ರವರು ತಮ್ಮ ವರದಿಯನ್ನು ತಯಾರು ಮಾಡಿ, ಇಂಡಿಯಾ ಸರ್ಕಾರಕ್ಕೆ ಕಳುಹಿಸಿರುವರು. ಇದನ್ನು ಕುರಿತು ಇಂಡಿಯಾ ಸರ್ಕಾರದವರ ಹುಕುಮನ್ನು ಇಲ್ಲಿಯ ಸರ್ಕಾರದವರು ಎದುರು ನೋಡುತ್ತಿರುವರು. ಚೀಫ್ ಕಮಿಷನರವರು ತಮ್ಮ ಅಧಿಕಾರಕ್ಕೆ ಒಳಪಟ್ಟ ಉದ್ಯೋಗಗಳ ಖೋತೆಯ ಸಂಬಂಧ ಈ ವರದಿಯ ಸಲಹೆಯನ್ನನುಸರಿಸಿ ಹುಕುಮುಗಳನ್ನು ಮಾಡಲಾರಂಭಿಸಿರುವರು. ಇದು ಇಂಡಿಯ ಸರ್ಕಾರಕ್ಕೆ ಕಳುಹಿಸಲ್ಪಟ್ಟ ಗುಟ್ಟಿನ ವರದಿಯಾದುದರಿಂದ ಇದನ್ನು ಕೌನ್ಸಿಲು ಸಭೆಯ ಮುಂದಿಡಲು ಸಾಧ್ಯವಿಲ್ಲ.'

ಈ ಸಂಬಂಧದ ಮೂರು ಗೊತ್ತುವಳಿಗಳ ಪೈಕಿ, ಸಿಬ್ಬಂದಿ ಖೋತೆಯು ಈ ವರದಿಯನ್ನು ಮತ್ತು ಕೊಡಗಿನ ಭವಿಷ್ಯವನ್ನು ಕುರಿತು ಆಲೋಚಿಸಲು ಉದ್ಯೋಗಸ್ಥರಲ್ಲದ ಮೆಂಬರುಗಳ ಬಹುಮತವಿರುವ ಕಮಿಟಿಯೊಂದನ್ನು ನೇಮಿಸಬೇಕೆಂಬ ಠರಾವು ಚರ್ಚೆಗೆ ಮುಂಚಿತವಾಗಿಯೇ ವಾಪಸು ತೆಗೆಯಲ್ಪಟ್ಟಿತು. ಸಿಬ್ಬಂದಿ ಖೋತೆ ಮಾಡದೆ ಕೊಡಗನ್ನು ಪ್ರತ್ಯೇಕ ಪ್ರಾಂತ್ಯವಾಗಿಡಲು ಸಾಧ್ಯವಿಲ್ಲವಾದರೆ ಈ ಪ್ರಾಂತ್ಯವನ್ನು ದೊಡ್ಡ ಪ್ರಾಂತ್ಯಕ್ಕೆ ಸೇರಿಸುವುದನ್ನು ಕುರಿತು ಪಬ್ಲಿಕ್ ಅಭಿಪ್ರಾಯ ತೆಗೆಯುವ ಏರ್ಪಾಡು ಮಾಡಬೇಕೆಂಬ ಠರಾವು ಚರ್ಚಿಸಲ್ಪಟ್ಟು ಪಾಸಾಗಲಿಲ್ಲ. ಮೂರನೇ ಠರಾವಾದ "ಮಿ. ಪಟ್ಟಾಲ್‌ರವರ ವರದಿಯನ್ನು ಆಲೋಚಿಸಲು ಉದ್ಯೋಗಸ್ಥರಲ್ಲದ ಮೆಂಬರುಗಳ ಬಹುಮತವಿರುವ ಕಮಿಟಿಯೊಂದನ್ನು ನೇಮಿಸಬೇಕೆಂಬ ಗೊತ್ತುವಳಿ ಸರ್ಕಾರದವರಿಂದ ವಿರೋಧಿಸಲ್ಪಟ್ಟರೂ ಕೂಡ ಬಹುಮತದಿಂದ ಪಾಸಾಯಿತು.

ಕೊಡಗಿನ ಭವಿಷ್ಯತ್ತನ್ನು ಅಂದರೆ ಕೊಡಗನ್ನು ಪ್ರತ್ಯೇಕ ಇಟ್ಟುಕೊಳ್ಳಬೇಕೋ ಯಾ ದೊಡ್ಡ ಪ್ರಾಂತ್ಯಕ್ಕೆ ಸೇರಿಸಬೇಕೋ ಎಂಬುದನ್ನು ನಿಶ್ಚಯಿಸುವ ಮೊದಲು ಸಿಬ್ಬಂದಿ ಖೋತೆ ಮಾಡಕೂಡದೆಂತ ಕೆಲವರೂ, ಸಿಬ್ಬಂದಿ ಖೋತೆ ಮಾಡದೇನೇ ಕೊಡಗನ್ನು ಪ್ರತ್ಯೇಕ ಇಟ್ಟುಕೊಳ್ಳಲು ಸಾಧ್ಯವಿಲ್ಲವೆಂದಾದರೆ ಇದನ್ನು ದೊಡ್ಡ ಪ್ರಾಂತ್ಯಕ್ಕೆ ಸೇರಿಸಿಬಿಡಬೇಕೆಂದು ಇನ್ನು ಕೆಲವರೂ ವಾದ ಮಾಡಿದರು. ಕೊಡಗಿನ ಭವಿಷ್ಯತ್ತು ಮುಖ್ಯವಾಗಿ ಅದರ ಸರ್ಕಾರದ ಆರ್ಥಿಕ ಸ್ಥಿತಿಯನ್ನು ಅವಲಂಬಿಸಿಕೊಂಡಿರುವುದರಿಂದ ಸಿಬ್ಬಂದಿ ಖೋತೆ ಮಾಡಿ ಅದರ ಆರ್ಥಿಕ ಸ್ಥಿತಿಯನ್ನು ಸರಿಪಡಿಸಲು ಯತ್ನಿಸದೆ ಅದರ ಭವಿಷ್ಯತ್ತನ್ನು ನಿಶ್ಚಯಿಸಲು ಸಾಧ್ಯವಿಲ್ಲ. ಆದುದರಿಂದ ಕೊಡಗಿನ ಭವಿಷ್ಯತ್ತನ್ನು ನಿಶ್ಚಯಿಸದೆ ಸಿಬ್ಬಂದಿ ಖೋತೆ ಮಾಡಬಾರದೆಂಬ ವಾದದಲ್ಲಿ ಹುರುಳಿಲ್ಲ. ಸಿಬ್ಬಂದಿ ಖೋತೆ ಮಾಡದೇನೇ ಕೊಡಗನ್ನು ಪ್ರತ್ಯೇಕ ಪ್ರಾಂತ್ಯವಾಗಿ ಇಟ್ಟುಕೊಳ್ಳಲು ಸಾಧ್ಯವಿಲ್ಲವಾದರೆ, ಅದನ್ನು ದೊಡ್ಡ ಪ್ರಾಂತ್ಯಕ್ಕೆ ಸೇರಿಸಿಬಿಡಬೇಕೆಂಬ ಮಾತಿನಲ್ಲಿಯೂ ಅರ್ಥವಿಲ್ಲ. ಯಾತಕ್ಕಂದರೆ–ಕೊಡಗಿನದು ತಲೆ ಭಾರದ ದುಂದುಗಾರಿಕೆಯ ಆಡಳಿತವೆಂದು ಪ್ರಖ್ಯಾತಿಗೊಂಡಿದೆ. ರೈತರು ಕೊಡುವ ಕರಕಂದಾಯಗಳ ಹಣದಲ್ಲಿ ಬಹು ದೊಡ್ಡ ಭಾಗವು ಸಿಬ್ಬಂದಿಯವರ ಸಂಬಳಕ್ಕಾಗಿಯೇ ಉಪಯೋಗಿಸಲ್ಪಟ್ಟು, ದೇಶಾಭಿವೃದ್ಧಿಯ ಕಾರ್ಯಗಳಿಗೆ ಖರ್ಚು ಮಾಡುವುದು ಬಹು ಕಡಿಮೆಯಾದ ಕಾರಣ, ಅನಾವಶ್ಯದ ತಲೆಭಾರ ಸರ್ಕಾರದ ಖರ್ಚಿನಲ್ಲಿ ಖೋತೆ ಮಾಡಬೇಕೆಂದು ಕೌನ್ಸಿಲು ಸಭೆಯು ಪ್ರಾರಂಭವಾದಂದಿನಿಂದಲೇ ಜನರ ಪ್ರತಿನಿಧಿಗಳು ಕೂಗಿಕೊಳ್ಳುತ್ತಾ ಬಂದಿರುವರು. ಒಮ್ಮೆ ಸಿಬ್ಬಂದಿ ಖೋತೆಯು ಸ್ವಲ್ಪ ಮಟ್ಟಿಗೆ ಮಾಡಲ್ಪಟ್ಟಿತು. ಆಗ್ಯೆ ಸರ್ಕಾರದಲ್ಲಿ ಉಳುವರಿ ಹಣ ನಿಂತಿತ್ತು. ಆದರೆ ಕೆಲವು ವರ್ಷಗಳಲ್ಲಿಯೇ ವಜ ಮಾಡಿದ ಉದ್ಯೋಗಗಳನ್ನು ಪುನಹ ನೇಮಿಸಿದ್ದಲ್ಲದೆ ಕೆಲವು ವ್ಯಕ್ತಿಗಳಿಗಾಗಿ ಅನಾವಶ್ಯದ ಹೆಚ್ಚಿನ ಉದ್ಯೋಗಗಳೂ ನಿರ್ಮಿಸಲ್ಪಟ್ಟವು. ಇದರ ಫಲಿತಾಂಶವಾಗಿ 1929ರಲ್ಲಿ ಉಳುವರಿ ಇದ್ದ ಸುಮಾರು ಆರು ಲಕ್ಷ ರೂಪಾಯಿ ಆರೇಳು ವರ್ಷಗಳಲ್ಲಿ ಮುಗಿದುಹೋಗಿ, ಸುಮಾರು 9 ಲಕ್ಷ ರೂಪಾಯಿ ಸಾಲವೇರಿತು. ಇಂಡಿಯಾ ಸರ್ಕಾರದವರು ಈ ಸಾಲವನ್ನು ವಜಮಾಡಿ ನಾಲ್ಕು ವರ್ಷಗಳವರೆಗೆ 5 ಲಕ್ಷ ರೂ. ವಂತಿಗೆ ಕೊಡಲು ಒಪ್ಪಿರುವರು. ಆದರೆ ಈ ವಂತಿಗೆಯು 1941ರ ವರೆಗೆ ಮಾತ್ರವಾಗಿದೆ. ದುಂದುಗಾರಿಕೆಯ ಖರ್ಚಿನ ದೆಸೆಯಿಂದ ಸರ್ಕಾರದ ವೆಚ್ಚವು ಆದಾಯವನ್ನು ಮೀರುತ್ತದೆ. ಆದುದರಿಂದ ಸಿಬ್ಬಂದಿ ಖೋತೆ ಮಾಡಲೇ ಬೇಕಾಗಿದೆ. ಇದನ್ನು ದೇಶದ ಹಿತದ ದೃಷ್ಟಿಯಿಂದ ದೇಶೀಯರಿಗೆ ಒಪ್ಪುವಂತೆ ಮಾಡಲಿಕ್ಕಾಗಿ ಜನರ ಪ್ರತಿನಿಧಿಗಳಿಂದ ಕೂಡಿದ ಕಮಿಟಿಯೊಂದನ್ನು ಮಾಡಬೇಕೆಂದು ಕೌನ್ಸಿಲು ಸಭೆಯಲ್ಲಿ ಈ ಮೊದಲು ತೀರ್ಮಾನ ಮಾಡಿದ್ದಾಗಿದೆ. ಆದರೆ ಸರ್ಕಾರದವರು ಈ ಕೋರಿಕೆಯನ್ನು ಅಲಕ್ಷ್ಯಮಾಡಿ ಒಬ್ಬ ಆಫೀಸರನ್ನೇ ನೇಮಿಸಿದ್ದು ಎಂದೂ ನ್ಯಾಯವಲ್ಲ. ಮಾತ್ರವಲ್ಲ, ಆ ಆಫೀಸರು ತಯಾರಿಸಿದ ವರದಿಯನ್ನು ಗುಟ್ಟಾಗಿ ಇಟ್ಟುಕೊಂಡು, ಜನರ ಪ್ರತಿನಿಧಿಗಳಿಗೆ ತೋರಿಸದೆ, ಅವರಿಗೆ ಅದರ ಮೇಲೆ ಸಲಹೆ ಕೊಡಲು ಅವಕಾಶ ಕೊಡದೆ ಇರುವದು ಶೋಚನೀಯವೂ, ಅತೃಪ್ತಿಕರವೂ ಆಗಿದೆ.

ಫೈನಾನ್ಸಿಯಲ್ ಆಫೀಸರರ ವರದಿಯ ಫಲಿತಾಂಶವಾದರೂ ಏನು? ಇಷ್ಟರವರೆಗೆ ತಿಳಿಯ ಬಂದಿರುವ ಮಟ್ಟಿಗೆ ದುಂದುಗಾರಿಕೆಯ ದೊಡ್ಡ ಸಂಬಳದ ಉದ್ಯೋಗಸ್ಥರಲ್ಲಿ ಖೋತೆಯ ಹುಕುಮೇನೂ ಆಗಿರುವದಿಲ್ಲ. ಬದಲು ಸರ್ವಿಸಿನ ವಾಯಿದೆ ಮೀರಿದ ಇಂಪೀರಿಯಲ್ ಉದ್ಯೋಗಸ್ಥರಿಗೆ ವಾಯಿದೆ ಮುಂದುವರಿಸಿ ಕೊಡುವ ಸುದ್ದಿ! ಬಡ ಚಾಡಿಕಾರರು, ಕಾನ್‌ಸ್ಟೇಬಲರುಗಳು, ಜವಾನರು, ಗುಮಾಸ್ತರುಗಳು, ಶ್ಯಾನುಭಾಗರುಗಳೇ ಮೊದಲಾದವರಲ್ಲಿ ಹಲವರು ಮನೆಗೆ ಕಳುಹಿಸಲ್ಪಡುವರಂತೆ! ಕೆಲವು ನಾಡು ಖಚೇರಿಗಳು ಮುಚ್ಚಲ್ಪಡುವವಂತೆ. ಬಡ ಪಟೇಲರುಗಳು ಸಂಬಳ ಕಡಿಮೆ ಮಾಡುವ ಯತ್ನ. ಅದರಲ್ಲೂ 30 ವರ್ಷಕ್ಕಿಂತ ಹೆಚ್ಚಿನ ಸರ್ವಿಸು ಮಾಡಿದ ಹಳಬರನ್ನು ಇಟ್ಟುಕೊಂಡು, 20 ವರ್ಷದೊಳಗಿನ ಸರ್ವಿಸಿನವರನ್ನೂ, ಯುವಕರನ್ನೂ ಉದ್ಯೋಗದಿಂದ ನಿವೃತ್ತಿ ಮಾಡುವುದು ಇವೆಂಥಾ ಅನ್ಯಾಯ. ಇದನ್ನು ಸಹಿಸುವುದು ತಾನೇ ಹೇಗೆ?

ದುಂದುಗಾರಿಕೆಯ ಖರ್ಚನ್ನು ಕಡಿಮೆ ಮಾಡಲು ಹೊರಟ ಮೊದಲು ದೊಡ್ಡ ಸಂಬಳದ ಗಜೆಟೆಡ್ ಉದ್ಯೋಗಸ್ಥರ ಸಂಖ್ಯೆ ಕಡಿಮೆ ಮಾಡಬೇಕು. ಅಲ್ಲದೆ ಹೆಚ್ಚು ವೇತನದ ಇಂಪೀರಿಯಲ್ ಆಫೀಸರರ ಬದಲು ರೂ. 500 ಒಳಗಿನ ಪ್ರಾಂತೀಯ ಆಫೀಸರನ್ನು ನೇಮಿಸತಕ್ಕದ್ದು. ಅನಂತರ ಇತ್ತೀಚಲಾಗಿ ನೇಮಿಸಿಕೊಂಡ ಅನಾವಶ್ಯದ ಹುದ್ದೆಗಳನ್ನು ರದ್ದು ವಜ ಮಾಡುವುದು. ಹೀಗ ಮಾಡುವಾಗ್ಯೆ ಹೆಚ್ಚು ಸರ್ವಿಸು ಮಾಡಿ ಪೂರ್ತಿ ಪೆನ್ಶನ್ ಗಳಿಸಿರುವ ಹಳಬರನ್ನೇ ಉದ್ಯೋಗದಿಂದ ಬಿಡುಗಡೆ ಮಾಡಬೇಕು. ಕಮ್ಮಿ ಸರ್ವಿಸಿನ ಯುವಕರನ್ನೆಂದಿಗೂ ವಜ ಮಾಡಬಾರದು. ಅಲ್ಲದೆ ರೂ. 30ಕ್ಕಿಂತ ಕಮ್ಮಿ ಸಂಬಳದವರನ್ಯಾರನ್ನೂ ಮನೆಗೆ ಕಳುಹಿಸಬಾರದು. ಇಂತವರನ್ನು ವಜ ಮಾಡಿದರೆ ಹೆಚ್ಚು ಉಳುವರಿಯಾಗದೆ ಆಡಳಿತೆಯ ಕಾರ್ಯ ಸಾಧಕತ್ವವು ಕೆಡುವುದಲ್ಲದೆ ದೇಶದಲ್ಲಿ ನಿರುದ್ಯೋಗತನವು ಹೆಚ್ಚುವುದು. ಜನರಿಗೆ ಬಹು ಉಪಯುಕ್ತವಾಗಿರುವ ನಾಡು ಕಚ್ಚೇರಿಗಳನ್ನು ತೆಗೆಯಬಾರದು. ಕೆಲಸ ಹೆಚ್ಚುತ್ತಿರುವ ಪಟೇಲರುಗಳ ಸಂಬಳವನ್ನೆಂದಿಗೂ ಕಡಿಮೆ ಮಾಡಬಾರದು. ಹೀಗ ಮಾಡಿಯೂ ಆದಾಯ ವೆಚ್ಚವನ್ನು ಸರಿಪಡಿಸಿ, ದೇಶಾಭಿವೃದ್ಧಿಯ ಕಾರ್ಯಗಳಿಗೆ ಹಣ ಸಾಲದೆ ಹೋದರೆ ಇಂಡಿಯಾ ಸರ್ಕಾರದಿಂದ ವಾರ್ಷಿಕ ವಂತಿಗೆ ಪಡೆಯಬೇಕು. ಮಧ್ಯವರ್ತಿ ಸರ್ಕಾರದವರು ಕೊಡಗಿನಿಂದ ದೊಡ್ಡ ಭಾಗವರಿಯನ್ನು ಈ ಮೊದಲು ಕೊಂಡೊಯ್ದಿರುವ ಕಾರಣ ತಕ್ಕುದಾದ ಪ್ರಯತ್ನ ನಡೆಸಿದರೆ ವಂತಿಗೆ ದೊರೆಯದೆ ಇರಲಿಕ್ಕಿಲ್ಲ. ಈ ರೀತಿ ಸಿಬ್ಬಂದಿ ಖೋತೆ ಮಾಡಿ, ಕೊಡಗಿನ ಸರ್ಕಾರದ ಆರ್ಥಿಕ ಸ್ಥಿತಿಯನ್ನು ವೃದ್ಧಿಗೊಳಿಸಲಿಕ್ಕಾಗಿಯೇ ಉದ್ಯೋಗಸ್ಥರಲ್ಲದವರ ಬಹುಮತವಿರುವ ಒಂದು ಕಮಿಟಿಯನ್ನು ನೇಮಿಸಬೇಕೆಂದು ಕೌನ್ಸಿಲಿನವರು ತೀರ್ಮಾನಿಸಿದ್ದು ನ್ಯಾಯವಾಗಿದೆ. ಸರ್ಕಾರದವರು ಜನರ ಪ್ರತಿನಿಧಿಗಳ ಕೋರಿಕೆಗಳನ್ನು ಅಲಕ್ಷ್ಯ ಮಾಡುತ್ತಾ ಬರುವುದು ಯುಕ್ತವಲ್ಲ. ಇದರಿಂದ ದೇಶದಲ್ಲಿ ಅತೃಪ್ತಿಯು ಹೆಚ್ಚುವುದರಲ್ಲಿ ಸಂದೇಹವಿಲ್ಲ. ಇಂಥಾ ಅತೃಪ್ತಿಯ ಕಠಿಣ ಪರಿಣಾಮಗಳಿಗೆ ಸರ್ಕಾರದವರು ಎಡೆ ಕೊಡಲಿಕ್ಕಿಲ್ಲವಾಗಿ ಆಶಿಸುತ್ತೇವೆ.

ನೋಟೀಸು.

ದಿ ಕೆನರಾ ಬ್ಯಾಂಕಿಂಗ್ ಕೊರ್ಪರೇಶನ್ ಉಡುಪಿ ಲಿಮಿಟೆಡ್, ಮಡಿಕೇರಿ ಬ್ರಾಂಚ್.

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಹೊಂದಿಕೊಂಡ ಐವೇಜುಗಳನ್ನೂ, ಅವರ ಮೇಲಿನ ಬಡ್ಡಿ ವಗೈರೆ ಕೊಡದೇ ಇದ್ದವರಿಂದಲೂ, ಇವರಿಗೆ ಬಿಸ್ತ್ರ ರಿಜಿಸ್ತ್ರಿ ನೋಟೀಸುಗಳು ಜಾರಿ ಆಗದೆ ಮೃತಪಟ್ಟರ ತಪ್ಪಾಗಿ ಹಿಂದೆ ಬಂದಿರುವದರಿಂದಲೂ, ಇವರ ವಾಯಿದೆ ತೀರಿ ಹೋಗಿರುವದಾರರು ಸದರಿಯವರ ಸಾಲದ ಬಾಬ್ತು ಅಸಲು ಬಡ್ಡಿ ವಗೈರೆ ಹಣಗಳನ್ನು ಬ್ಯಾಂಕಿಗೆ ಪಾವತಿ ಮಾಡಿ ಈಡಿಟ್ಟ ನಗಗಳನ್ನು ತಾ. 25-11-1938ರ ಒಳಗೆ ಬಿಡಿಸಿಕೊಳ್ಳತಕ್ಕದ್ದು. ತಪ್ಪಿದರೆ ತಾ 26-11-1938ನೇ ಶನಿವಾರ ಮಧ್ಯಾಹ್ನ 2 ಗಂಟೆಗೆ ಯಾ ಅದನಂತರ ಬ್ಯಾಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಹ ನೋಟೀಸು ಕೊಡದೇನೇ ಬಹಿರಂಗವಾಗಿ ಏಲಂ ಮಾಡೋಣಾಗುತ್ತದೆ ಎಂಬ ಸಂಗತಿ ಈ ಮೂಲಕ ತಿಳಿಸೋಣಾಗಿದೆ

ಸಾಲದ ನಂಬರು	ಸಾಲಗಾರನ ಹೆಸರು ವಿಳಾಸ	ಅಸಲು ಮೊಬಲಗು
(1) J. L, 434,36	ಟಿ ಎಣ್ಣಯ್ಯ, ಹೊರೂರು ತೋಟ, ಸುಂಟಿಕೊಪ್ಪ ಪೋಸ್ಟು	10 -0—0
(2) J L 373/36	ನಟ್ಟಮಾಡ ಎ ಕುಶ ಅಪ್ಪ, ಅಯ್ಯಪ್ಪನವರ ಮಗ, ಬೇಂಗೂರು ಗ್ರಾಮ, ನಾಪೋಕ್ಲು ಪೋಸ್ಟು	20—0—0
(3) J L 108 36.	ಚಿಟ್ಟಿಯಂಡ್ರ ಚೀಯಣ್ಣ, ಕುಟ್ಟಪ್ಪನವರ ಮಗ, ಇಬ್ನಿವಳವಾಡಿ ಗ್ರಾಮ, ಮಡಿಕೇರಿ ಪೋಸ್ಟು	60—0—0
(4) J. L 901 36	ಕಂಬೀರಂಡ್ರ ಪೂವಯ್ಯ, ಕುಟ್ಟಪ್ಪನವರ ಮಗ, ಬಾಡಗ ಗ್ರಾಮ, ಮೂರ್ನಾಡು ಪೋಸ್ಟು	35—0—0
(5) J L 986,37	ಅಬ್ದುಲ್ ಸಕೂರು ಸಾಹೇಬ, ಕಾಶಿಮ್ ಸಾಬರ ಮಗ, ವ್ಯಾಪಾರಿ ಗಣಪತಿ ಬೀದಿ, ಮಡಿಕೇರಿ	100—0—0

ಬ್ಯಾಂಕು ಆಫೀಸು, 21-10-38

ಪಿ ಪಿ ಶಣೈ, ಏಜಂಟ್.

ಯೂನಾನಿ ಫಾರ್ಮೆಸಿಯ ಉತ್ತಮ ಔಷಧಿಗಳು.

ಉಬ್ಬಸ ಸಂಹಾರಿ (Asthma cure) ಕೆಲವು ದಿನಗಳ ಸೇವನೆಯಿಂದ ಉಬ್ಬಸವನ್ನು ಖಾತ್ರಿಯಾಗಿ ಗುಣಪಡಿಸುತ್ತದೆ 40 ದಿನದ ಔಷಧಿಗೆ ಕ್ರಯ ರೂ 5—12—0

ಅಂಬರ್ ಕೂದಲೆಣ್ಣೆ, ಸುಗಂಧಯುಕ್ತ ಆಮ್ಲಕೇಶ ತೈಲ ಅಲ್ಲದೆ ಎಲ್ಲಾ ರೋಗಗಳಿಗೂ ರಾಮಬಾಣದಂತಿರುವ ಮಾತ್ರೆಗಳೂ, ಚೂರ್ಣಗಳೂ, ಲೇಹಗಳೂ, ತೈಲಗಳೂ ಮತ್ತು ಕೇಶ ತೈಲಗಳೂ ಸಹ ತಯಾರಿರುವುವು

ಬೇಗನೆ ಬರೆಯಿರಿ—

ಯಂ. ಯಂ ಸಿದ್ದೀಕ್, ಪ್ರೊಪ್ರೈಟರ್, ಯುನಾನಿ ಔಷಧಶಾಲಾ, ಮಡಿಕೇರಿ, ಕೊಡಗು.

34

ಎಂಬ್ರೋಸಿಯಾ,

ಸಾವಿರಾರು ಹೆಂಗಸರ ಕಾಯಿಲೆಗಳನ್ನು ನಿವಾರಿಸಿದೆ.

ಹೆಸರುವಾಸಿಯಾದ ಡಾಕ್ಟರುಗಳಿಂದಲೂ, ಉಪಯೋಗಿಸಿ ತೃಪ್ತಿಗೊಂಡವರಿಂದಲೂ ಎಂಬ್ರೋಸಿಯಾವು ಹೆಂಗಸರ ರೋಗಗಳಿಗೆ ಹೆಸರುಗೊಂಡಿದೆ.

ಬಾಟ್ಲಿಗೆ ರೂ 2-0-0

ಸಣ್ಣ ಬಾಟ್ಲಿಗೆ ೞ 0-15 0

ಸೋಲ್ ಏಜೆಂಟ್–ವಿ. ರಾಮ & ಕೋ ಬೊಂಬೆ 2.

ಕೊಡಗಿನ ಭವಿಷ್ಯ.

ಈ ಮೇಲ್ಕಂಡ ಸಂಗತಿಯನ್ನು ವಿಮರ್ಶಿಸುವದಕ್ಕೋಸ್ಕರ ಮೈಸೂರಿನಲ್ಲಿರುವ ಕೊಡಗು ಯುವಕ ಜನ ಸಂಘದ ಆಶ್ರಯದಲ್ಲಿ ತಾ. 23-10-38ನೇ ಭಾನುವಾರ ಸಂಘದ ಸದಸ್ಯರಾದ ಶ್ರೀಯುತ ಕೆ ಎಂ ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ಒಂದು ವಿಶೇಷ ಸಭೆಯನ್ನು ಏರ್ಪಡಿಸಲಾಗಿತ್ತು ಸಂಘದ ಸುಮಾರು ಮೂವತ್ತು ಮೆಂಬರುಗಳು ಹಾಜರಿದ್ದರು ಸಭೆಯು ಸುಮಾರು ಎರಡು ಗಂಟೆಗಳ ಕಾಲ ದೀರ್ಘ ಚರ್ಚೆಯಿಂದ ಕೊಡಗಿನ ಕಲ್ಯಾಣವನ್ನು ಬಯಸಿಯೂ ಮತ್ತು ಕೊಡಗಿನ ಹಕ್ಕುಬದ್ಧತೆಯನ್ನು ಸ್ಥಿರಪಡಿಸುವುದಕ್ಕೂ ಸಹ ಕೊಡಗು ಈಗ ಇರುವ ಹಾಗೆಯೇ ಪ್ರತ್ಯೇಕ ಸ್ವಾತಂತ್ರ್ಯವಾಗಿರಬೇಕೆಂಬ ಠರಾವನ್ನು ಬಹುಮತದಿಂದ ಮಂಜೂರು ಮಾಡಿದ್ದಲ್ಲದೆ ಈ ವಿಷಯವನ್ನು ಕೊಡಗಿನ ವಾಚಕ ಮಹಾಶಯರ ತಿಳುವಳಿಕೆ ಬಗ್ಗೆ ಕೊಡಗಿನಲ್ಲಿರುವ 'ಕೊಡಗು' ಪತ್ರಿಕೆಯಲ್ಲಿಯೂ ಮತ್ತು ಇನ್ನ ಬೇರೆ ಪತ್ರಿಕೆಯಲ್ಲಿಯೂ ಸಹ ಪ್ರಕಟಿಸುವಂತೆ ತೀರ್ಮಾನಿಸಿರುತ್ತೆ

ಕೆ ಕೆ ಪೂಚಯ್ಯ,
ಗೌ ಕಾರ್ಯದರ್ಶಿ,
ಕೊಡಗು ಯುವಕ ಜನಸಂಘ, ಮೈಸೂರ

ಬಾತ್ಮಿ.

ಪಟೇಲರುಗಳ ಮನವಿ.

ಕೊಡಗು ಸರ್ಕಾರದ ಆಯ-ವ್ಯಯವನ್ನು ಸಮತೂಗಿಸುವ ಉದ್ದೇಶದಿಂದ ಕೆಳ ದರ್ಜೆಯ ಉದ್ಯೋಗಸ್ಥರವರಿಗೆ ಕತ್ತರಿ ಕೆಲಸದ ಪ್ರಯೋಗವು ಬಹಳಿಂದ ಸಾಗುತ್ತಿದೆ ಇದರಿಂದ ಸ್ಥಳದಲ್ಲಿ ನಿರುದ್ಯೋಗವನ್ನು ಹೆಚ್ಚಿಸುವುದೇ ವಿನಹ ಸರ್ಕಾರಕ್ಕೆ ಹೆಚ್ಚಿನ ಪ್ರಯೋಜನವಾಗಲಿಕ್ಕಿಲ್ಲವೆಂದು ಬೇರೆ ಹೇಳಬೇಕಾಗಿಲ್ಲ ಇದರ ಪ್ರತಿ ಗಜೆಟಿನಲ್ಲಿ ಪ್ರಕಟಿಸಿರುವ ಪಟೇಲರುಗಳ ಕರಡು ನಿಬಂಧನೆಗಳನ್ನು ಕುರಿತು ತಿದ್ದುಪಡಿಯ ವಿಷಯ ಒದಗಿದೆ

ಕೊಡಗಿನ ಪಟೇಲರುಗಳಿಗೆ ಇರುವ ಜವಾಬ್ದಾರಿಗೆ ಸರಿಯಾದ ಇಲ್ಲದ್ದರಿಂದ ತಮಗಳಿಗೆ ಹೆಚ್ಚಿನ ಸಂಬಳ ಕೊಡಬೇಕೆಂದು ಈ ಮೊದಲು ಎಷ್ಟೋ ಬಾರಿ ಸಮ್ಮಂಧಪಟ್ಟ ಅಧಿಕಾರಿ ವರ್ಗದವರಲ್ಲಿ ಮೊರೆ ಇಟ್ಟು ಪ್ರಯೋಜನವಾಗಲಿಲ್ಲ ಬದಲು ಈಗ ಇರುವ ಸಂಬಳವನ್ನೂ ಕೋತಿ ಮಾಡುವ ಈ ವಿಷಯದಲ್ಲಿ ಕೊಡಗಿನ ಪಟೇಲರುಗಳು ಎಚ್ಚೆತ್ತು ಬಲವಾದ ಚಳವಳ ಹೂಡಿ ತಮ್ಮ ನಿಶೇಧವನ್ನು ಸೂಚಿಸುವುದು ಅತ್ಯವಶ್ಯವಾಗಿದೆ. ಈ ಸಂಬಂಧ ಈಗಾಗಲೇ ಮಡಿಕೇರಿ–ಮೂರ್ನಾಡು–ಭಾಗಮಂಡ್ಲ ನಾಡುಗಳ ಪಟೇಲರುಗಳು ಸಭೆ ಸೇರಿ ತಾ 21-10-38ರಲ್ಲಿ ಮಡಿಕೇರಿಯಲ್ಲಿ ಚೀಫ್ ಕಮಿಶನರವರಿಗೆ ಒಂದು ಡೆಪ್ಯುಟೇಶನು ಹೋಗಿರುವದು ಸ್ತುತ್ಯಾರ್ಹವಾಗಿದೆ ಇವರ ಮಾರ್ಗವನ್ನನುಸರಿಸಿ ಕೊಡಗಿನ ಬೇರೆ ಬೇರೆ ನಾಡುಗಳ ಪಟೇಲರುಗಳು ಸಮ್ಮಂಧಪಟ್ಟ ಅಧಿಕಾರಿಗಳನ್ನು ಕಾಣುವುದಾಗಲೀ ಇಲ್ಲವೇ ತಮ್ಮ ಮನವಿಗಳನ್ನು ಕಳುಹಿಸುವುದರ ಮೂಲಕವಾಗಿಯಾಗಲೀ ನಿಶೇಧವನ್ನು ಸೂಚಿಸುವುದು ತಮ್ಮ ಆದ್ಯ ಕರ್ತವ್ಯವಾಗಿದೆ

ಪಟೇಲರುಗಳು ಒಗ್ಗಟ್ಟಿನಿಂದ ವರ್ತಿಸದಿರುವುದೇ ಈಗಿನ ಗೊಂದಲಕ್ಕೆ ಕಾರಣವಾಗಿದೆ ಆದಕಾರಣ ಮುಂದಕ್ಕೆ ಒಗ್ಗಟ್ಟಾಗಿ ವರ್ತಿಸುವ ಉದ್ದೇಶ್ಯ ಅಖಿಲ ಕೊಡಗು ಪಟೇಲರುಗಳ ಸಂಘ ಒಂದನ್ನು ಸ್ಥಾಪಿಸಿ ಆ ಮೂಲಕ ತಮ್ಮ ಏಳಿಗೆಯನ್ನು ಬಯಸಬೇಕಾಗಿ ಆರಿಸುವ

'ಹಿತಚಿಂತಕ'

ನೋಟೀಸು.

ಭಾಗಮಂಡ್ಲ ನಾಡು ಅವಂದೂರು ಗ್ರಾಮದ ಪಂಜದ ತಿಮ್ಮಯ್ಯನವರ ಮಗ ದೇವಯ್ಯನು ಈ ಮೂಲಕ ತಿಳಿಯಪಡಿಸುವದೇನಂದರೆ–ನಮ್ಮ ಚಿಕ್ಕ ತಂದೆ ಚಿಣ್ಣಪ್ಪನವರು, ನಾನು ಸಹ 2 ಜನರು ಸೇರಿ ಕ್ರಯಕ್ಕೆ ಪಡಕೊಂಡು ಜಂಟಿ ಜವಾಬಿಂದಿ ನಡದಿರುವ ಭೂಮಿಯನ್ನು ನನ್ನನ್ನು ಮೋಸಗೊಳಿಸಬೇಕೆಂಬದಾಗಿ ನಮ್ಮ ಇನ್ನೊಂದು ಚಿಕ್ಕ ತಂದೆ ಮಾದಪ್ಪನಿಗೆ ಕೊಡುವ ವರ್ತಮಾನವಿರುವದರಿಂದಲೂ ಮತ್ತು ಸದರಿ ಚಿಣ್ಣಪ್ಪನವರಿಗೆ ಪುತ್ರ ಸಂತತಿ ಇಲ್ಲದಿರುವದರಿಂದ ಮೇಲ್ಕಂಡ ಆಸ್ತಿಗೆ ನಾನು ಒಂದನೇ ಹಕ್ಕುದಾರನಾಗಿರುತ್ತೇನೆ ಆದುದರಿಂದ ಸದರಿ ಆಸ್ತಿಯನ್ನು ವಿಕ್ರಯಿಸುವದಾಗಲೀ, ದತ್ತುಕೊಡುವುದಾಗಲೀ ಯಾವ ವಿಧಾನದಲ್ಲೂ ಕಲಾಲು ಮಾಡ ಕೂಡದು ಹಾಗೆ ಏನಾದರೂ ಮಾಡಿದ ಪಕ್ಷದಲ್ಲಿ ಅಂದಾ ಲಿಖಾವಟುಗಳೆಲ್ಲಾ ರದ್ದಾಗತಕ್ಕದು. ಅಲ್ಲದೆ ಇನ್ನು ಮುಂದೆ ಆಗುವ ಎಲ್ಲಾ ನಷ್ಟ ಖರ್ಚುಗಳಿಗೆ ನೀವೇ ಜವಾಬುದಾರರಾಗಿರತಕ್ಕದೆಂಬದಾಗಿ ಈ ಮೂಲಕ ಖಂಡಿತ ತಿಳಿಸಲಾಗಿದೆ

ಪಿ. ಟಿ. ದೇವಯ್ಯ,
28-10-38 ಅವಂದೂರು.

ಕೌನ್ಸಿಲು ಮೀಟಿಂಗು.

(10ನೇ ಪುಟದಿಂದ ಬಂದದ್ದು)

ಲು ಹವಣಿಸುವದು ಯೋಗ್ಯವಲ್ಲವೆಂದೂ ಮಾತಾಡಿದರು

ಶ್ರೀ ಎನ್ ಸೋಮಣ್ಣನವರು ಉತ್ತರ ಕೊಟ್ಟ ಮೇಲೆ ಓಟಿಗೆ ಹಾಕಲಾಗಿ ಶ್ರೀ ಗಳಾದ ಯಂ. ಯಂ ಬೆಳ್ಯಪ್ಪ, ಚೌಡ್ಲು ಕಾಳಪ್ಪ, ಯೆನ್ ಸೋಮಣ್ಣ, ಕೆ ಮಲ್ಲಪ್ಪ ಮತ್ತು ಎಸ್ ರಾಮಮೂರ್ತಿಯವರು ಪರವಾಗಿಯೂ, ಶ್ರೀ ಗಳಾದ ಪಿ. ಐ ಬೆಳ್ಯಪ್ಪ, ಐ ಪಿ. ಕಾರ್ಯಪ್ಪ, ಬಿ ಯಂ ಕಾರ್ಯಪ್ಪ, ಕೆ ಸಿ ಕರುಂಬಯ್ಯ, ಪಿ ಜಿ ಮುದ್ದಮ್ಮಯ್ಯ, ಅಜ್ಜಮಾಡ ಮಾದಪ್ಪನವರು ಮತ್ತು ಇಬ್ಬರು ಯೂರೋಪಿಯನ್ ಪ್ಲಾಂಟರುಗಳು ವಿರೋಧವಾಗಿಯೂ ಓಟು ಮಾಡಿದ್ದರಿಂದ ಠರಾವು ಪಾಸಾಗಲಿಲ್ಲ ಸರಕಾರದ ನಾಲ್ಕು ಮೆಂಬರುಗಳು, ಕೋರನ ದೇವಯ್ಯ ಅಬ್ದುಲ್ ರಹಮಾನ್ ಖಾನ್ ಮತ್ತು ಎಚ್ ಬಿ ಸಿದ್ದಯ್ಯನವರು ಓಟು ಮಾಡಲಿಲ್ಲ.

(ಮುಂದುವರಿಯುವುದು.)

ವರ್ತಮಾನ ಸಂಗ್ರಹ.

ಒಳದೇಶ.

ಈ ತಾ. 29 ರಲ್ಲಿ ಮಡಿಕೇರಿ ಹೈಸ್ಕೂಲಿನಲ್ಲಿ ಸಾಯಂಕಾಲ 5-30 ರಿಂದ 8-30 ರ ವರೆಗೂ, ವೀರಾಜಪೇಟೆ ಹೈಸ್ಕೂಲಿನಲ್ಲಿ 3 ರಿಂದ 5-30 ರ ವರೆಗೂ, ಸೋಮವಾರಪೇಟೆಯಲ್ಲಿ 5 ಗಂಟೆಗೂ ಬಾಲಚಮೂ ಸಂಸ್ಥೆಗಳ ಸಹಾಯಾರ್ಥವಾಗಿ ವಿನೋದ ಕೂಟಗಳು ನಡೆಯುವವೆಂದು ತಿಳಿದುಬರುತ್ತದೆ

ದಕ್ಷಿಣ ಕೊಡಗಿನ ಪೊನ್ನಂಪೇಟೆ ಮತ್ತು ಶ್ರೀಮಂಗಲ ನಾಡುಗಳಲ್ಲಿ ಮಳೆಯ ಅಭಾವದಿಂದ ನೀರಿಲ್ಲದೆ ಬೆಳೆಯು ಒಣಗಿ ಹೋಗುವ ಸಂದರ್ಭವಿರುವದಾಗಿಯೂ, ಈ ಸಮಯದಲ್ಲಿ ಮಳೆ ಸಿಗದಿದ್ದರೆ ವಿಪರೀತ ನಷ್ಟ ಸಂಭವಿಸಬಹುದೆಂದೂ ವರ್ತಮಾನ.

ಕೊಡಗು ಪ್ಲಾಂಟರ್ಸ್ ಅಸೋಸಿಯೇಶನಿನ ಆಶ್ರಯದಲ್ಲಿ ನವಂಬರ್ ತಾರೀಕು 14 ರಲ್ಲಿ ಸೋಮವಾರಪೇಟೆಯಲ್ಲೂ, 16 ರಲ್ಲಿ ಪೊನ್ನಂಪೇಟೆಯಲ್ಲೂ, 18 ರಲ್ಲಿ ಮಡಿಕೇರಿ ಕೌನ್ಸಿಲ್ ಹಾಲಿನಲ್ಲೂ, ತಾ. 19 ರಲ್ಲಿ ಶನಿವಾರಸಂತೆಯಲ್ಲೂ ಕಾಫಿ ಶಾಸ್ತ್ರಜ್ಞರಾದ ಶ್ರೀ. ಡಬ್ಲ್ಯು ವಿಲ್ಸನ್ ಮೈನ್ ಬಿ ಯಸ್ ಸಿ, ಯವರು ಕಾಫಿ ವ್ಯವಸಾಯವನ್ನು ಕುರಿತು ಭಾಷಣಗಳನ್ನು ಮಾಡುವರೆಂದೂ, ಎಲ್ಲರಿಗೂ ಆಹ್ವಾನವಿದೆಯಾಗಿಯೂ ತಿಳಿಯಬರುತ್ತದೆ

ಸ್ವತಂತ್ರ ಗ್ರಾಮ ಪಂಚಾಯಿತಿಗೆ ಸ್ಥಾಪಿಸಿ ಹಳ್ಳಿಗ ರೈತರನ್ನು ಸಾಲದ ಭಾಧೆಯಿಂದ ತಪ್ಪಿಸಿ, ಆರೋಗ್ಯವನ್ನು ಹೆಚ್ಚಿಸಿ ಪುಷ್ಕಳ ಜೀವನವನ್ನು ತರಬಹುದೆಂಬುದನ್ನು ಕಾರ್ಯತಃ ನಡಿಸಿ ಸರ್ಕಾರದವರಿಗೆ ಉದಾಹರಣೆಯಾಗಿ ತೋರಿಸುವ ಮಿತ್ರ ಮಿ. ಬಿ. ಯಂ ಕಾರ್ಯಪ್ಪ ಯಂ ಯಲ್ ಸಿ ಯವರು ಈ ತ. 15, 22 ಈ ಎರಡು ದಿನಗಳಲ್ಲಿ ಬಾವಲಿಯಲ್ಲೂ, 19 ರಲ್ಲು ಕೊಣಂಜಗೇರಿ ಮತ್ತು ಕಿರುಂದಾಡಿನಲ್ಲೂ, 20 ರಲ್ಲಿ ಕುಂಜಿಲಗೇರಿ ಮತ್ತು ಬೆಳ್ಳುಮಾಡಿನಲ್ಲೂ, 21 ರಲ್ಲು ಕೈಕಾಡಿನಲ್ಲೂ ಮೀಟಿಂಗು ನಡಿಸಿದರೆಂದೂ ಇವರ ಅಭಿಪ್ರಾಯಕ್ಕೆ ಕೂಡಿದ ಜನರು ಸಮ್ಮತಿಸಿರುವರೆಂದೂ ಮತ್ತು ಇದೇ ಉದ್ದೇಶದಿಂದ ಬಾವಲಿ ಗ್ರಾಮಸ್ಥರು ಪುನಃ ನವಂಬರ್ ತಾ. 1 ರಲ್ಲು ಸೇರಲಿಕ್ಕಿರುವರೆಂದೂ ತಿಳಿಯುತ್ತೇವೆ.

ಮಡಿಕೇರಿ.

ಇಲ್ಲಿ ಯಾಲಕ್ಕಿ ಮಣಕ್ಕೆ ರೂ. 22 ರ ವರೆಗೆ ಕ್ರಯವಿದೆ

ಆಕ್ಟಿಂಗ್ ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟಾಗಿದ್ದ ಶ್ರೀ ಕೋಡಿರ ಉತ್ತಪ್ಪ ಬಿ ಏ ಯವರ ಹುದ್ದೆಯನ್ನು ಖಾಯಂ ಮಾಡಿರುವರಾಗಿ ತಿಳಿಯಬರುತ್ತದೆ.

ಕೊಡಗು ನ್ಯಾಯವಿಧಾಯಕ ಸಭೆಯ ಮೀಟಿಂಗು ಈ ತಾ 26 ರಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ಪ್ರಾರಂಭವಾಯಿತು. ಮೀಟಿಂಗು ಇನ್ನೂ ನಡಯುತ್ತಲೇ ಇದೆ

ಸರ್ಕಾರಿ ಇಲಾಖೆಗಳಲ್ಲಿ ಸಿಬ್ಬಂದಿ ಪೋಷಣೆಯ ಅನ್ಯಾಯವಾದ ರೀತಿಯನ್ನು ಕುರಿತು ಚರ್ಚಿಸಲು ಆರು ಕೌನ್ಸಿಲು ಮೆಂಬರುಗಳು ಈ ತಾ. 25 ರಲ್ಲಿ ಚೀಫ್ ಕಮಿಷನರನ್ನು ಭೇಟಿಯಾದರೆಂದು ತಿಳಿಯಬರುತ್ತದೆ

ಸಿಬ್ಬಂದಿ ಪೋಷಣೆಯ ಸಲುವಾಗಿ ಫ್ರೋಟ್ರ್ ಗಾರ್ಡ್ ಜಮೆದಾರರು ಮತ್ತು ಚೌಕಿಕಾರರ ಸಮೇತ ಇದ್ದ 31 ಜನರಲ್ಲಿ 29 ಜನರಿಗೆ ಇನ್ನು ಮೂರು ತಿಂಗಳ ಮೇಲೆ ಉದ್ಯೋಗ ಸಿಗಲಾರದೆಂದು ನೋಟೀಸು ಈ ತಾ 28 ರಲ್ಲು ಕೊಡಲಾಗಿದೆಯಾಗಿ ವರ್ತಮಾನ.

ಇಲ್ಲಿಯ ಹುಡುಗಿಯರ ಹೈಸ್ಕೂಲ್ ಶಾಲೆಯ ವಾರ್ಷಿಕೋತ್ಸವವನ್ನೂ ಮತ್ತು ಇನಾಮು ಹಂಚುವಿಕೆಯನ್ನೂ ಚೀಫ್ ಕಮಿಷನರವರ ಅಧ್ಯಕ್ಷತೆಯಲ್ಲಿ ನವಂಬರ್ ತಾ 1 ರಲ್ಲಿ ನಡೆಸುವರಾಗಿಯೂ ಎಲ್ಲರಿಗೂ ಆಮಂತ್ರಣವಿದೆಯಾಗಿಯೂ ತಿಳಿಯುತ್ತೇವೆ

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಉದ್ಯೋಗಸ್ಥರಲ್ಲದ ಮೆಂಬರುಗಳು ತಾ. 26 ರ ಸಾಯಂಕಾಲ ಕೌನ್ಸಿಲ್ ಹಾಲಿನಲ್ಲಿ ಸೇರಿ, ಮ ಗಳಾದ ಕೆ ಸಿ ಕರುಂಬಯ್ಯ, ಸಿ ಜಿ ಮುದ್ದಮ್ಮಯ್ಯ, ಮತ್ತು ಪಿ ಐ ಬೆಳ್ಯಪ್ಪನವರನ್ನು ಫೈನಾನ್ಸ್ ಕಮಿಟಿಯ ಮೆಂಬರುಗಳಾಗಿ ಆರಿಸಿರುವರು.

ಇಲ್ಲಿಯ ಗೌಡ ಬೋರ್ಡಿಂಗ್ ವಿದ್ಯಾರ್ಥಿಗಳು ಈ ತಾ. 21 ರಲ್ಲಿ ಕೊಡಗಿನ ಅತೀ ಎತ್ತರವಾದ ತಡಿಯಂಡಮೋಳು ಬೆಟ್ಟವನ್ನು ನೋಡಲು ಕಕ್ಕಬೆ ಸ್ಕೂಲಾ ಹೆಡ್ ಮಾಸ್ತರೊಡಗೂಡಿ ಹೋಗಿ, ಅಲ್ಲಿಯ ಅದ್ಭುತ ದೃಶ್ಯಗಳನ್ನು ನೋಡಿ ತಾ. 23 ರಲ್ಲಿ ಹಿಂತಿರುಗಿರುವರಾಗಿ ತಿಳಿಯಬರುತ್ತದ.

ತಾ 24-10-38 ರಲ್ಲು ಮಡಿಕೇರಿ, ಮೂರ್ನಾಡು ಮತ್ತು ಬಾಗಮಂಡ ನಾಡು ಪಟೇಲರುಗಳ ಡೆಪ್ಯುಟೇಶನೊಂದು ಗಜೆಟಿನಲ್ಲಿ ಪ್ರಕಟವಾಗಿರುವ ಪಟೇಲರುಗಳ ಸಂಬಳದ ಯೋಜನೆಯನ್ನು ಕುರಿತ ಕರಡು ನಿಬಂಧನೆಗಳ ತಿದ್ದುಪಡಿಯ ಕುರಿತು ಮಾತಾಡಲು ಚೀಫ್ ಕಮಿಶನರವರಲ್ಲಿಗೆ ಹೋಗಿತ್ತೆಂದು ತಿಳಿಯುತ್ತೇವೆ

ಹಿಂದೂದೇಶ.

ಪಂಡಿತ ಜವಾಹರಲಾಲರು ಈಜಿಪ್ಟನ್ನು ಸಂದರ್ಶಿಸಲಿರುವರು. ನವಂಬರ್ ತಾರೀಕು 9 ಕ್ಕೆ ಹಿಂದೂಸ್ಥಾನಕ್ಕೆ ಬರುವರೆಂದು ಗೊತ್ತಾಗಿದೆ

ಮಿರಜ ಸಂಸ್ಥಾನದ ಮಹಾರಾಜರು ಸಂಸ್ಥಾನದ ರೈತರ ಸಂಕಷ್ಟ ನಿವಾರಣೆಗಾಗಿ ತೀವ್ರ ಕಟಿಮ ಮಾಡಲು ಹುಕುಂ ಕೊಟ್ಟಿದ್ದಾರೆ ಅದೇ ಸಂದರ್ಭದಲ್ಲಿ ತಮ್ಮ ಸ್ವಂತ ಖರ್ಚಿಗ ಪ್ರತ್ಯೇಕವಾಗಿಡಲ್ಪಟ್ಟ ಹಣದಲ್ಲಿ 20 ಸಾವಿರ ರೂಪಾಯಿಗಳಷ್ಟು ಕಡಮೆ ತೆಗೆದುಕೊಳ್ಳುವದಾಗಿ ತಿಳಿಸಿದ್ದಾರೆ

ರಜದ ಮೇಲೆ ಸೀಮೆಗೆ ಪ್ರಯಾಣ ಮಾಡಿದ್ದ ಹಿಂದೂಸ್ಥಾನದ ವೈಸರಾಯರಾದ ಲಾರ್ಡ ಲಿನ್‌ಲಿತ್ಗೋರವರು ಪತ್ನೀ ಪರಿವಾರ ಸಮೇತರಾಗಿ ಅಕ್ಟೋಬರ್ ತಾ 24 ನೇ ಸೋಮವಾರ ಹಿಂದೂಸ್ಥಾನಕ್ಕೆ ವಾಪಸು ದಯಮಾಡಿಸಿದರು ಆವರು ಬೊಂಬಾಯಿಯಲ್ಲಿ ಜಹಜಿಳಿದು ಅದೇ ದಿನ ಡೆಲ್ಲಿಗೆ ಪ್ರಯಾಣ ಮಾಡಿದರು.

ರಾಜಕೋಟೆಯ ಪ್ರಜೆಗಳ ಅವಿಶ್ರಾಂತ ಕಾದಾಟವು ಫಲಕಾರಿಯಾಗುತ್ತಾ ಬಂದಿದೆ ತೀರ್ವೆಯಲ್ಲಿ ಶೇ 15 ರಷ್ಟು ಕಡಿಮೆಯಾಗಿದ. ಬೆಂಕಿಪೆಟ್ಟಿಗ ಏಸ್‌ಗಳ ಮೇಲಿನ ಆತಂಕ ಕಿತ್ತು ಹಾಕಲಾಗಿದೆ. ರಾಜಕೀಯ ಸ್ವಾತಂತ್ರ್ಯವನ್ನು ಬೇಗನೇ ಕೊಡಲಾಗುವುದೆಂಬ ಆಶ್ವಾಸನ ದೊರೆತಿದೆ.

ತಿರುವಾಂಕೂರಿನ ಮಹಾರಾಜರಿಗೆ ಆ ಸಂಸ್ಥಾನದ ಕಾಂಗ್ರೆಸಿನವರು ಒಂದು ಮೆಮೊರಾಂಡಮನ್ನು ಒಪ್ಪಿಸಿದ್ದರು ಅದರಲ್ಲಿ ಆದಳಿತೆಯ ಕುರಿತಾಗಿ ಕೆಲವು ದೋಷಾರೋಪಗಳು ಇದ್ದುವು ಆ ಮೆಮೊರಾಂಡಮನ್ನು ಹಿಂದಗೆಯಬೇಕೆಂದು ಸರ್ಕಾರವು ಸೂಚಿಸಿದ್ದರೂ ಅಲ್ಲಿನ ಕಾಂಗ್ರೆಸಿನವರು ಹಾಗೆ ಮಾಡದ ಕಾರಣ ಅದಕ್ಕೆ ಸಹಿ ಹಾಕಿದವರನ್ನು 'ಪ್ರಾಸಿಕ್ಯೂಶನಿ'ಗೆ ಗುರಿಪಡಿಸಲಾಗುವದೆಂದು ಪ್ರಕಟವಾಗಿದೆ.

ಎರಡು ವರ್ಷಗಳ ಹಿಂದ ತಿರುವಾಂಕೂರು ಸಂಸ್ಥಾನದ ಸರಕಾರವು ತನ್ನ ದೇವಾಲಯಗಳನ್ನು ಹರಿಜನರಿಗಾಗಿ ತೆರೆದಿಟ್ಟು ಲೋಕೋತ್ತರವಾದ ಕೀರ್ತಿಯನ್ನು ಪಡೆಯಿತು ಅಂತೇ ಅಲ್ಲಿನ ದಿವಾನರಾದ ಸರ್ ಸಿ ಪಿ ರಾಮಸ್ವಾಮಿ ಅಯ್ಯರರು ಇಂದಿನ ರಾಜರ ಈ ವರ್ಷ ವರ್ಧಂತಿಯ ಸಮಯದಲ್ಲಿ ಅಲ್ಲಿ ನಿರ್ಬಂಧಾಜ್ಞೆಗಳ ಉಪಸಂಹಾರಕ್ಕೂ, ರಾಜಕೀಯ ಕೈದಿಗಳ ಬಿಡುಗಡೆಗೂ ಸಹಾಯಕರಾಗಿ ಆ ಕುರಿತಾದ ಒಂದು ಔದಾರ್ಯದ ಪ್ರಕಟಣೆಯೂ ಹೊರಟಿರುವುದು ಪ್ರಶಂಸನೀಯವಾಗಿದೆ

ಹೈದರಾಬಾದ್ ಸಂಸ್ಥಾನದಲ್ಲಿ ಕಾಂಗ್ರೆಸ್ ಸಭೆಯನ್ನು ಸ್ಥಾಪಿಸಲೇ ಕೂಡದೆಂದು ನೈಜಾಂ ಸರ್ಕಾರದವರು ಕಟ್ಟಾಜ್ಞೆ ಮಾಡಿರುತ್ತಾರೆ ಈ ಆಜ್ಞೆಯನ್ನು ಉಲ್ಲಂಘನೆ ಮಾಡಲು ಹೈದರಾಬಾದ್ ಸ್ಟೇಟ್ ಕಾಂಗ್ರೆಸ್ಸಿನವರು ತಾ. 24 ನೇ ಸೋಮವಾರ ಸತ್ಯಾಗ್ರಹವನ್ನಾರಂಭಿಸಿದರು ಈ ಸಭೆಯ ಕಾರ್ಯಕಾರಿ ಸಮಿತಿಯವರು ಆ ದಿನ ಸಾರ್ವಜನಿಕ ಸಭೆಯೊಂದನ್ನು ನಡಿಸಿ ಹೈದರಾಬಾದ್ ಸ್ಟೇಟ್ ಕಾಂಗ್ರೆಸ್ ಸಭೆಯು ಸ್ಥಾಪನೆಯಾಗಿದೆಯೆಂದೂ ಅದರ ಧ್ಯೇಯಗಳು ಇಂತಿಂಥವುಳೆಂದೂ ಸಭಿಕರಿಗೆ ತಿಳಿಸುತ್ತಿರುವ ಸಮಯದಲ್ಲಿ ಪೋಲೀಸಿನವರು ಆ ಸಭೆಯ ಅಧ್ಯಕ್ಷರನ್ನೂ ಕಾರ್ಯದರ್ಶಿಯರನ್ನೂ ಮೂವರು ಸದಸ್ಯರನ್ನೂ ದಸ್ತಗಿರಿಮಾಡಿ ಕರೆದುಕೊಂಡು ಹೋದರು

ತ್ರಿವೆಂಡ್ರಮಿನ ಮದ್ರಾಸ್ ಸ್ಟೇಟ್ ರೆಸಿಡೆಂಟರಿಂದ ಹೊರಟ ವಾರಾಂಟಿನ ಪ್ರಕಾರ ಟ್ರಾವಂಕೂರು ನೇಶನಲ್ ಮತ್ತು ಕ್ವಿಲೋನ್ ಬ್ಯಾಂಕಿನ ಮಾಜಿ ಡೈರೆಕ್ಟರುಗಳಾದ ಕೆ. ಸಿ. ಮಾಮನ್ ಮಾಪಿಳ್ಳಾ, ಸಿ. ಪಿ. ಮಾತನ್, ಕೆ. ಯಂ. ಈಪನ್ ಮತ್ತು ಕೆ. ವಿ ವರ್ಗೀಸ್ ಇವರು ಹಲವು ಆರೋಪಗಳ ಕಾರಣದಿಂದ ಮದ್ರಾಸಿನಲ್ಲಿ ಕೈದು ಮಾಡಲ್ಪಟ್ಟು, ಮದ್ರಾಸಿನ ಚೀಫ್ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರ ಸ್ವಾಧೀನದಲ್ಲೇ ಇವರನ್ನು ಕೈದಿನಲ್ಲಿ ಇರಿಸಬೇಕಾಗಿ ಮದ್ರಾಸ್ ಹೈಕೋರ್ಟು ಜಸ್ಟೀಸರ ಹುಕುಂ ಆಗಿದೆ. ಆದರೆ ವಾರಾಂಟಿಗೆ ಗುರಿಯಾಗಬೇಕಾದ ಆ ಬ್ಯಾಂಕಿನ ಮಾಜಿ ಜನರಲ್ ಮೇನೇಜರ್ ಶ್ರೀ. ಕೆ. ಯಸ್ ರಾಮಾನುಜಂ ಇವರೂ ಮಾಜಿ ಡೈರೆಕ್ಟರ್ ಶ್ರೀ ಕೆ. ಸಿ. ಈಪನರೂ ಮದ್ರಾಸಿನಲ್ಲಿರಲಿಲ್ಲವೆಂದು ಪ್ರಕಟವಾಗಿದೆ.

ಜಪಾನಿನಲ್ಲಿ ಬಿರುಗಾಳಿ ಉಂಟಾಗಿ ಸಾವಿರಾರು ಮರಗಳು ಉರುಳಿದವು, ಟೆಲಿಫೋನ್ ಟ್ರಾಂವೇಗಳ ನಿತ್ಯ ಕಾರ್ಯಗಳು ಕೆಟ್ಟು ಹೋದವು. ಯೊಕಹಾಮಾದಲ್ಲಿ ಹೆಚ್ಚು ನಷ್ಟವಾಗಿದೆಯೆಂದು ಸುದ್ದಿ. ಮುಖ್ಯವಾಗಿ ತುಫಾನಿನಿಂದ ಹಡಗುಗಳಿಗೆ ಆದ್ದಿ ಈ ಗಲಾಟೆಯಲ್ಲಿ 226 ಮಂದಿ ಸತ್ತರು 590 ಮಂದಿ ಗಾಯಗೊಂಡರು. 10 ಸಾವಿರ ಮನೆಗಳು ನಾಶವಾಗಿವೆ.

ಸಾದರ ಸ್ವೀಕಾರ.

ಭಾರತೀಯ ನೂತನ ಸಂಯುಕ್ತ ರಾಜ್ಯ ಘಟನೆ

ಹಿರಿಬಾಗೇವಾಡಿಯ ಶ್ರೀ ಶಿವರಾಯ ಬೋಜಪ್ಪಘು ಪಾಟೀಲ ನಾಸ್ತರರಿಂದ ಬರೆದು ಪ್ರಕಟಿಸಲ್ಪಟ್ಟಿರುವ 56 ಪುಟಗಳಿಂದ ಕೂಡಿದ ಪುಸ್ತಕವು ಮನನೀಯವಿರುತ್ತದೆ. ರಾಜ್ಯ ಘಟನೆಯನ್ನು ಸಮೂಲವಾಗಿ ವಿವರಿಸಿ ಅದರ ಹಿತಾಹಿತಗಳನ್ನು ಭೇದಿಸಿರುವರು. ಇದು ರಾಜಕೀಯ ರಂಗದಲ್ಲಿ ಶ್ರಮಿಸುವವರಿಗೆ ಹಿತಕಾರಿಯಲ್ಲದೆ ಪ್ರತಿಯೊಬ್ಬ ದೇಶ ಪ್ರೇಮಿಯಲ್ಲಿಯೂ ಇರತಕ್ಕದ್ದೇ ಆಗಿದೆ. ಸಂಯುಕ್ತ ಘಟನೆಯಲ್ಲಿಯ ಮುಖ್ಯ ಹಾಗೂ ವೈಶಿಷ್ಟ್ಯ ವಿಷಯವನ್ನು ಸರ್ವರಿಗೂ ಉಪಯೋಗವಾಗುವಂತೆ ಪ್ರಕಟಿಸಿರುವ ಗ್ರಂಥಕರ್ತರ ಸಾಹಸವು ಸ್ತುತ್ಯಾರ್ಹವಾಗಿದೆ

'ಕೊಡಗು ಚಂದ್ರಿಕೆ.'

ಸುಲಲಿತ ಕವನಗಳಿಂದಲೂ, ವಿಚಾರಪರ ಲೇಖನಗಳಿಂದಲೂ, ಕೂಡಿದ 22 ಪುಟಗಳನ್ನೊಳಗೊಂಡು ಶ್ರೀ ಬಿಳಿಗೇರಿ ಸುಬ್ರಾಯನವರ ಸಂಪಾದಕತ್ವದಲ್ಲಿ ಹೊರಟಿರುವ ಈ ಮಾಸಿಕ ಪತ್ರಿಕೆಯನ್ನು ಆದರದಿಂದ ಸ್ವೀಕರಿಸಿರುವೆವು ವಾರ್ಷಿಕ ಚಂದಾ ರೂ. 1-15-0 ಆಗಿದೆ. ಈ ವರೆಗೆ ಎಷ್ಟೋ ಮಾಸಿಕಗಳು ಹೊರಟು ಕಾಲಚಕ್ರದ ಉರುಳಾಟದಲ್ಲಿ ಮರೆಯಾದವು ಈ ಕೊರತೆಯನ್ನು ಹೋಗಲಾಡಿಸಲು ಧೈರ್ಯದಿಂದ ಮುಂದೆ ನಿಂತಿರುವ ಸಂಪಾದಕರ ಧೈರ್ಯವು ಸ್ತುತ್ಯಾರ್ಹವಾಗಿದೆ ಶೈಶವಾವಸ್ಥೆಯಲ್ಲಿರುವ 'ಕೊಡಗು ಚಂದ್ರಿಕೆ'ಯು ಕ್ರಮೇಣ ಜನಾದರಣೆಯನ್ನು ಪಡೆದು ಪತ್ರಿಕಾ ಪ್ರಪಂಚದಲ್ಲಿ ಚಿರಾಯುವಾಗಿ ಬಾಳಲೆಂದು ನಮ್ಮ ಬಯಕೆ.

ಕೊಡಗು ಕೌನ್ಸಿಲು ಮೀಟಿಂಗು.

ಕೊಡಗು ನ್ಯಾಯವಿಧಾಯಕ ಸಭೆಯ ಮೀಟಿಂಗು ಈ ತಾ. 26 ನೇ ಬುಧವಾರ ಬೆಳಿಗ್ಗೆ 11 ಗಂಟೆಗೆ ಮಡಿಕೇರಿ ಕೌನ್ಸಿಲ್ ಹಾಲ್‌ನಲ್ಲಿ ಪ್ರಾರಂಭವಾಯಿತು. ಚೀಫ್ ಕಮಿಷನರವರು ಅಧ್ಯಕ್ಷರಾಗಿದ್ದರು. ಮೆಂಬರುಗಳೆಲ್ಲರೂ ಹಾಜರಿದ್ದರು.

ಯೂರೋಪಿಯನ್ ಮೆಂಬರರ ಪೈಕಿ ಹೊಸದಾಗಿ ಚುನಾಯಿತರಾದ ಮಿ. ಎ. ಇ. ಜೆ. ನಿಕಲ್ಲ್‌ರವರು ರಾಜಭಕ್ತಿಯ ಪ್ರತಿಜ್ಞೆ ಮಾಡಿದ ನಂತರ ಅಧ್ಯಕ್ಷರು ತಮ್ಮ ಪ್ರಾರಂಭದ ಭಾಷಣ ಮಾಡಿದರು. (ಇದರ ಸಾರಾಂಶ ಬರುವ ವಾರ ಕೊಡಲಾಗುವದು)

ಅನಂತರ ಪ್ರಶ್ನೋತ್ತರಗಳು ನಡೆದವು. 39 ಪ್ರಶ್ನೆಗಳಿಗೆ ಜವಾಬು ಕೊಡಲ್ಪಟ್ಟಿತು.

ಮಸೂದೆಗಳು.

ಈ ಮೊದಲು ಗ್ರಾಮ ಪಂಚಾಯಿತಿಗೆ ಕಮಿಟಿಗೆ ಬರೀ ಕಂದಾಯ ಹಾಕುವ ಅಧಿಕಾರ ಮಾತ್ರ ಇತ್ತು. ಅವರೆ ಆ ಹಾಕಿದ ಕಂದಾಯವನ್ನು ವಜಾ ಮಾಡಲು ಪಂಚಾಯಿತಿಯ ರಿಜಿಸ್ಟ್ರಾರವರ ಅನುಮತಿ ಬೇಕಿತ್ತು. ಆದರೆ ಇನ್ನು ಮುಂದೆ ಪಂಚಾಯಿತರಿಗೇ ಅಂಥಾ ಅಧಿಕಾರ ಕೊಡಬೇಕೆಂಬ ಮಸೂದೆ ತರಲ್ಪಟ್ಟು ಬಹುಮತದಿಂದ ಮಂಜೂರಾಯಿತು.

ಲೇವಾದೇವಿದಾರರು ಕ್ರಮವಾಗಿ ಲೆಕ್ಕಗಳನ್ನು ಇಡುವಂತೆ ಮಾಡುವುದಕ್ಕಾಗಿ, ಕೋರ್ಟುಗಳ ಅಧಿಕಾರಗಳನ್ನು ಬಲಪಡಿಸುವದಕ್ಕಾಗಿ ಮತ್ತು ಲೇವಾದೇವಿದಾರರಿಂದ ಚಕ್ರ ಬಡ್ಡಿ ಹಾಕಲ್ಪಡುವದನ್ನೂ ಮತ್ತು ಖರ್ಚುಗಳು ವಸೂಲ್ಮಾಡಲ್ಪಡುವದನ್ನೂ ತಪ್ಪಿಸುವದಕ್ಕಾಗಿ ಒಂದು ಮಸೂದೆಯು ತರಲ್ಪಟ್ಟಿತು. ಈ ಮಸೂದೆಯ ತಿದ್ದುಪಡಿಗೆ ಶ್ರೀ. ಗಳಾದ ಐ. ಪಿ. ಕಾರ್ಯಪ್ಪ, ಎನ್. ಸೋಮಣ್ಣ, ಕರ್ನಲ್ ಮೂರ್ಲೆಂಡ್, ಮನೆಯಪಂಡ ಬೆಳ್ಳಿಯಪ್ಪ, ಕೆ. ಮಲ್ಲಪ್ಪ, ಸಿ. ಐ ಬೆಳ್ಯಪ್ಪ ಮತ್ತು ಫೈನಾನ್ಸ್ ಮೆಂಬರರಿಂದ ಕೂಡಿದ ಒಂದು ಸಿಲೆಕ್ಟ್ ಕಮಿಟಿಯನ್ನು ನೇಮಿಸಲಾಯಿತು.

ಠರಾವುಗಳು.

1. 'ಕೊಡಗಿನ ಭವಿಷ್ಯವನ್ನು ನಿರ್ಣಯಿಸದೆ ಸಿಬ್ಬಂದಿ ಖೋತೆ ಮಾಡುವುದು ಅನೇಕ ಕುಟುಂಬಗಳಿಗೆ ಹಾನಿ ತರುವುದರಿಂದ ಈಗ ಪರ್ಯಾಲೋಚನೆಯಲ್ಲಿರುವ ಖೋತೆಯನ್ನು ಜಾರಿಗೆ ತರಬಾರದೆಂತಲೂ, ಯೋಚನೆಯಲ್ಲಿರುವ ಸಿಬ್ಬಂದಿ ಖೋತೆಯ ಸಲಹೆಗಳನ್ನೂ ಮತ್ತು ಕೊಡಗಿನ ಭವಿಷ್ಯದ ವಿಚಾರವನ್ನೂ ವಿಮರ್ಶಿಸಲು ಉದ್ಯೋಗಸ್ಥರಲ್ಲದವರ ಬಹುಮತವಿರುವ ಒಂದು ಕಮಿಟಿಯನ್ನು ನೇಮಿಸಬೇಕೆಂತಲೂ ಈ ಸಭೆಯು ಚೀಫ್ ಕಮಿಷನರವರಿಗೆ ಶಿಫಾರಸ್ಸು ಮಾಡುತ್ತದೆ.' ಎಂಬ ಠರಾವನ್ನು ಶ್ರೀ. ಸಿದ್ಧಪುಲಿ ಸೋಮಣ್ಣನವರು ವಾಪಾಸು ತೆಗೆದುಕೊಂಡರು.

ಖರ್ಚು ಖೋತೆಯ ಸಲಹೆಗಳನ್ನು ಉದ್ಯೋಗಸ್ಥರಲ್ಲದ ಬಹುಮತವಿರುವ ಕಮಿಟಿಯು ವಿಮರ್ಶಿಸಬೇಕೆಂಬ ಠರಾವು ಮಂಜೂರಾಯಿತು. ದೊಡ್ಡ ಪ್ರಾಂತಕ್ಕೆ ಕೊಡಗನ್ನು ಸೇರಿಸಬೇಕೆಂಬ ಠರಾವು ಬಿದ್ದು ಹೋಯಿತು.

○●○

2. 'ಕೊಡಗು ಸರ್ಕಾರದ ಯೋಚನೆಯಲ್ಲಿರುವ ಈಗಿನ ಸಿಬ್ಬಂದಿ ಖೋತೆಯ ಸಲಹೆಗಳನ್ನು ಜಾರಿಗೆ ತಂದದ್ದಾದರೆ ಅನೇಕ ದುಷ್ಪರಿಣಾಮಗಳುಂಟಾಗುವ ಸಂಭವ ಬರುವುದರಿಂದ ಈ ಸಲಹೆಗಳನ್ನು ಜಾರಿಗೆ ತರುವ ಮೊದಲು ಸಿಬ್ಬಂದಿ ಖೋತೆ ಮಾಡದೆ ಕೊಡಗಿನ ಆಡಳಿತವನ್ನು ಮುಂದುವರಿಸಲು ಅಸಾಧ್ಯವಾದರೆ ಕೊಡಗನ್ನು ಬೇರೊಂದು ದೊಡ್ಡ ಪ್ರಾಂತ್ಯದೊಂದಿಗೆ ಸಂಯೋಜಿಸುವ ದೃಷ್ಟಿಯಿಂದ ಕೊಡಗಿನ ಭವಿತವ್ಯದ ವಿಚಾರ ಜನತೆಯ ಅಭಿಪ್ರಾಯ ತೆಗೆಯುವ ಬಗ್ಗೆ ಒಡನೆ ತಕ್ಕ ಏರ್ಪಾಡು ಮಾಡಬೇಕೆಂದು ಈ ಸಭೆಯು ಚೀಫ್ ಕಮಿಷನರವರಿಗೆ ಶಿಫಾರಸ್ಸು ಮಾಡುತ್ತದೆ' ಎಂಬ ಠರಾವನ್ನು ಶ್ರೀ. ಮನೆಯಪಂಡ ಬೆಳ್ಯಪ್ಪನವರು ಸೂಚಿಸಿ, ಕೊಡಗಿನ ಆರ್ಥಿಕ ಸ್ಥಿತಿಯು ದಿನೇ ದಿನೇ ಕುಗ್ಗುತ್ತಿರುವದೆಂದೂ, ಆರ್ಥಿಕ ಉನ್ನತಿಯನ್ನು ಸಾಧಿಸುವ ಯಾವದೊಂದು ಕಾರ್ಯವು ಇಲ್ಲಿ ಅಸಾಧ್ಯವೆಂದೂ, ಬೇರೆ ಪ್ರಾಂತ್ಯಕ್ಕೆ ಸೇರದೆ ಕೊಡಗು ಅಭಿವೃದ್ಧಿಗೊಳ್ಳಲಾರದೆಂದೂ, ಇಲ್ಲಿ ಯಾವದೊಂದು ಪ್ರಯೋಜನಕರ ಕೆಲಸಮಾಡಲು ಹಣದ ಅಭಾವದಿಂದ ಅನಾನುಕೂಲವಾದ್ದರಿಂದ ದೊಡ್ಡ ಪ್ರಾಂತದೊಂದಿಗೆ ಸೇರಿಸುವ ಬಗ್ಗೆ ಜನರ ಅಭಿಪ್ರಾಯ ತೆಗೆಯುವದು ಹಿತವೆಂದೂ, ಕೊಡಗಿಗೆ ಸರ್ ವಿಲ್ಸನ್ ಸಿಕ್ಕದೆಂದು ಸೆಂಟ್ರಲ್ ಗವರ್ನಮೆಂಟಿನವರು ಸೂಚಿಸಿರುವಾಗ ಅವರ ಅಪೇಕ್ಷೆಯು ನಿಷ್ಪ್ರಯೋಜನವೆಂದೂ, ಮಡಿಕೇರಿಯಲ್ಲಿ ನಡೆದ ಸರ್ವ ಪಕ್ಷೀಯ ಸಮ್ಮೇಳನವೂ ಇದೇ ಅಭಿಪ್ರಾಯ ಪಟ್ಟಿರುವದೆಂದೂ, ಕೊಡಗಿನ ಕಾಂಗ್ರೆಸೂ ಇದರಲ್ಲಿ ಭಾಗವಹಿಸಿತ್ತೆಂದೂ ಮಾತಾಡಿದರು.

ಶ್ರೀ. ಚೌಡ್ಲು ಕಾಳಪ್ಪನವರು ಅನುಮೋದಿಸಿದರು.

ಸರಕಾರಿ ಮೆಂಬರರು ಠರಾವನ್ನು ವಿರೋಧಿಸಿ, ಬಡ್ಜೆಟ್ಟನ್ನು ಸರಿಗಟ್ಟುವದು ಇಂದಿನ ಸ್ಥಿತಿಯಲ್ಲಿ ಅತ್ಯಾವಶ್ಯಕ. ಹಾಗೆ ಮಾಡಲು ಸಿಬ್ಬಂದಿ ಖೋತೆ ಮಾಡಬೇಕು. ಅದ್ದರಿಂದ ಠರಾವನ್ನು ವಿರೋಧಿಸುತ್ತೇನೆಂದರು.

ಶ್ರೀ. ಬಿ ಯಂ. ಕಾರ್ಯಪ್ಪನವರು ಠರಾವನ್ನು ವಿರೋಧಿಸುತ್ತಾ—ಕೊಡಗಿನ ಆರ್ಥಿಕ ಸ್ಥಿತಿಯನ್ನು ಉದ್ಧರಿಸಲು ಅನೇಕ ಮಾರ್ಗಗಳಿರುವವೆಂದೂ, ಉದಾ:—ಕೊಡಗಿನ ಫಾರೆಷ್ಟು ಇಲಾಖೆಯ ಉತ್ಪತ್ತಿಯನ್ನು ಹೆಚ್ಚಿಸಬಹುದೆಂತಲೂ, ದೇಶದ ಭವಿತವ್ಯವನ್ನು ಪಟ್ಟಣಿಗರ ದೃಷ್ಟಿಯಿಂದ ನಿರ್ಣಯಿಸುವದಲ್ಲವೆಂದೂ, ಕೊಡಗು ಕೃಷಿಕರ ದೇಶವಾದುದರಿಂದ ರೈತರ ಉನ್ನತಿಯೇ ದೇಶದ ಅಭಿವೃದ್ಧಿಯೆಂತಲೂ, ಈಗ ತಾನೇ ನಡೆದ ಸರ್ವಪಕ್ಷೀಯ ಸಮ್ಮೇಳನವು ಬಹು ಸ್ವಲ್ಪ ಜನರಿಂದ ಕೂಡಿದ್ದಿತೆಂದೂ ಆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮತ್ತು ಈ ಪ್ರಶ್ನೆಯಲ್ಲಿ ಅಭಿರುಚಿ ಇರುವವರು ಹಲವರು ಆ ಮೀಟಿಂಗಿನಲ್ಲಿರಲಿಲ್ಲವೆಂದೂ, ದೊಡ್ಡ ಪ್ರಾಂತ್ಯಕ್ಕೆ ಸೇರುವುದರಿಂದ ನಮ್ಮ ಸ್ಥಿತಿಯು ಮತ್ತಷ್ಟು ಹಾಳಾಗುವುದೆಂದೂ ಮುಂತಾಗಿ ಮಾತಾಡಿದರು.

ಶ್ರೀ. ಯಸ್. ಯಸ್ ರಾಮಮೂರ್ತಿಯವರು ಠರಾವನ್ನು ಪುಷ್ಟೀಕರಿಸುತ್ತಾ—ಕೊಡಗು ಪ್ರತ್ಯೇಕ ನಿಂತು ಜನರಿಗುಪಯುಕ್ತವಾಗುವಂತ ಆಡಳಿತ ನಡೆಸುವುದು ಅಸಾಧ್ಯ. ಅದ್ದರಿಂದ ಬೇರೆ ಪ್ರಾಂತಕ್ಕೆ ಸೇರಿಸದೆ ಮೋಕ್ಷವಿಲ್ಲವೆಂದರು.

ಶ್ರೀ. ಕೆ. ಸಿ. ಕರುಂಬಯ್ಯನವರು ಠರಾವನ್ನು ವಿರೋಧಿಸುತ್ತಾ ರೈತರೇ ದೇಶದ ಬೆನ್ನೆಲುಬು. ಅಂಥವರ ಹಿತಚಿಂತನೆಯೇ ದೇಶದ ಉನ್ನತಿಗೆ ಕಾರಣವಾಗುವದು ಎಂದು ಹೇಳಿದರು.

ಶ್ರೀ. ಕೆ. ಮಲ್ಲಪ್ಪನವರು ಕೊಡಗನ್ನು ಪ್ರತ್ಯೇಕವಾಗಿಟ್ಟುಕೊಂಡರೆ ಅದು ತನ್ನ ಕಾಲಿನಲ್ಲಿ ನಿಲ್ಲಲು ಸಮರ್ಥವಾಗದು. ದಿನ ದಿನಕ್ಕೆ ಆರ್ಥಿಕ ಸ್ಥಿತಿಯು ಶೋಚನೀಯಾವಸ್ಥೆಗೆ ಬರುತ್ತಿದೆ. ಅದ್ದರಿಂದ ಸಂಯೋಜನೆಯಾಗದ ಗತ್ಯಂತರವಿಲ್ಲವೆಂದರು.

ಶ್ರೀ. ಯನ್. ಸೋಮಣ್ಣನವರು ಠರಾವನ್ನು ಅನುಮೋದಿಸಿ ದೇಶದ ಆರ್ಥಿಕ ದೃಷ್ಟಿಯಿಂದಲೂ, ನಿರುದ್ಯೋಗಿಗಳ ಹಿತಚಿಂತನೆಯಿಂದಲೂ ಕೊಡಗು ಸಂಯೋಜನೆ ಆಗಿಯೇ ತೀರಬೇಕು ಎಂದು ಹೇಳಿದರು.

ಶ್ರೀ. ಸಿ. ಐ ಬೆಳ್ಯಪ್ಪನವರು ದೇಶದ ಜನರ ಮತ ತೆಗೆಯುವ ವಿಚಾರದಲ್ಲಿ ನನ್ನ ಒಪ್ಪಿಗೆ ಇದೆಯೆಂದೂ, ಆದರೆ ಠರಾವಿನಲ್ಲಿ ಸಂಯೋಗ ಮಾಡುವ ಉದ್ದೇಶದಿಂದ ಜನರ ಒಪ್ಪಿಗೆಯನ್ನು ತೆಗೆಯಬೇಕೆಂದಿರುವದರಿಂದ ಠರಾವನ್ನು ವಿರೋಧಿಸುತ್ತೇನೆಂದೂ ಹೇಳಿದರು.

ಶ್ರೀ. ಯಂ. ಯಂ. ಬೆಳ್ಯಪ್ಪನವರು ಉತ್ತರಕೊಟ್ಟ ಮೇಲೆ ಓಟಿಗೆ ಹಾಕಲಾಗಿ ಶ್ರೀ. ಗಳಾದ ಯಂ ಯಂ. ಬೆಳ್ಯಪ್ಪ, ಎನ್. ಸೋಮಣ್ಣ, ಕೆ. ಮಲ್ಲಪ್ಪ, ಎಸ್. ರಾಮಮೂರ್ತಿ ಮತ್ತು ಚೌಡ್ಲು ಕಾಳಪ್ಪನವರುಗಳು ಪರವಾಗಿಯೂ, ಕಾಂಗ್ರೆಸ್ ಮೆಂಬರುಗಳಾದ ಐ. ಪಿ. ಕಾರ್ಯಪ್ಪ, ಕೆ. ಸಿ. ಕರುಂಬಯ್ಯ, ಸಿ. ಐ. ಬೆಳ್ಯಪ್ಪ, ಬಿ. ಯಂ. ಕಾರ್ಯಪ್ಪ, ಕೋರನ ದೇವಯ್ಯ, ಅಜ್ಜಮಾಡ ಮಾದಪ್ಪ, ಸಿ. ಜಿ. ಮುದ್ದಮ್ಮಯ್ಯ, ಎಚ್. ಬಿ. ಸಿದ್ದಯ್ಯನವರುಗಳೂ ಮತ್ತು ಸರ್ಕಾರಿ ಉದ್ಯೋಗಸ್ಥರೂ ಅಲ್ಲದೆ ಯೂರೋಪಿಯನ್ ಪರ ಮೆಂಬರರಾದ ಎ. ಇ. ಜೆ. ನಿಕಲ್ಸ್ ಮತ್ತು ಕರ್ನಲ್ ಮೂರ್ಲೆಂಡರವರೂ ವಿರೋಧವಾಗಿ ಓಟು ಮಾಡಿದ್ದರಿಂದ ಠರಾವು ಬಿದ್ದುಹೋಯಿತು.

3. ಶ್ರೀ. ಬಿ. ಯಂ. ಕಾರ್ಯಪ್ಪನವರು 'ಸಿಬ್ಬಂದಿ ಖೋತೆಯ ಬಗ್ಗೆ ತಕ್ಕ ಕ್ರಮಗಳನ್ನು ನಿರ್ಣಯಿಸಲು ಉದ್ಯೋಗಿಗಳಿರುವ ಮತ್ತು ಉದ್ಯೋಗವಿಲ್ಲದವರಿಂದ ಕೂಡಿದ ಕಮಿಟಿಯನ್ನು ನೇಮಿಸದ ಸರಕಾರದ ವರ್ತನೆಯನ್ನು ಖಂಡಿಸುವದಲ್ಲದೆ, ಈ ವಿಚಾರಕ್ಕಾಗಿ ಬಂದ ಸ್ಪೆಷ್ಯಲ್ ಉದ್ಯೋಗಸ್ಥರಾದ ಶ್ರೀ. ಪಿ. ಕೆ. ವಟ್ಟಾಲ್‌ರವರ ಸಿಬ್ಬಂದಿ ಖೋತೆಯ ಸಲಹೆಗಳನ್ನು ಜಾರಿಗೆ ತರಕೂಡದೆಂದೂ, ಈ ಸಲಹೆಗಳನ್ನು ವಿಚಾರಿಸಲು ಉದ್ಯೋಗಸ್ಥರಲ್ಲದವರ ಬಹುಮತದಿಂದ ಕೂಡಿದ ಒಂದು ಕಮಿಟಿಯನ್ನು ಈ ಸಭೆಯಿಂದ ನೇಮಿಸಬೇಕೆಂದೂ ಈ ಕೌನ್ಸಿಲು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ' ಎಂಬ ಠರಾವನ್ನು ಮುಂದಿಟ್ಟು, ಕೊಡಗಿನ ಸರ್ಕಾರವು ತಲೆಭಾರದ ಮುಂದುಗಾರಿಕೆಯ ಆಡಳಿತವೆಂದು ಹೆಸರುಗೊಂಡಿದೆಯೆಂದೂ, ಅದರಿಂದ ಸಿಬ್ಬಂದಿ ಖೋತೆಯನ್ನು ಮಾಡಲೇಬೇಕೆಂದೂ, ಆದರೆ ಇದನ್ನು ದೇಶದ ಹಿತದೃಷ್ಟಿಯಿಂದ ಮಾಡುವರೆ ಜನಪ್ರತಿನಿಧಿಗಳಿಂದ ಕೂಡಿದ ಕಮಿಟಿಯೊಂದನ್ನು ಮಾಡಬೇಕೆಂದೂ, ಈ ವಿಚಾರ ಪದೇ ಪದೇ ಈ ಸಭೆಯಲ್ಲಿ ಠರಾವುಗಳಾಗಿದ್ದರೂ ಸರಕಾರದವರು ಈ ಕೋರಿಕೆಯನ್ನು ಅಲಕ್ಷಿಸಿ ಒಬ್ಬ ಆಫೀಸರನ್ನೇ ನೇಮಿಸಿದ್ದು ಜನತೆಯ ಮನನೋಯಿಸುವಂಥಾ ವರ್ತನೆಯೆಂದೂ, ಆ ಆಫೀಸರಿಂದ ತಯಾರಾದ ವರದಿಯನ್ನು ಗುಟ್ಟಿನಲ್ಲಿಟ್ಟುಕೊಂಡಿರುವ್ರು ಅತೃಪ್ತಿಕರ ವಿಷಯವೆಂದೂ ಮುಂತಾಗಿ ಹೇಳಿದರು.

ಶ್ರೀ. ಸಿ ಐ. ಬೆಳ್ಯಪ್ಪನವರು ಠರಾವನ್ನು ಅನುಮೋದಿಸುತ್ತಾ, ಫೈನಾನ್ಶಿಯಲ್ ಆಫೀಸರರ ವರದಿಯಿಂದ ಜನತೆಗೆ ಪ್ರಯೋಜನವಿರುವ ಹಾಗೆ ಕಾಣುವುದಿಲ್ಲವೆಂದೂ, ಇಷ್ಟರ ವರೆಗೆ ತಿಳಿದ ಸುದ್ದಿಯಂತೆ ಮುಂದುಗಾರಿಕೆಯ ದೊಡ್ಡ ಉದ್ಯೋಗಸ್ಥರನ್ನು ಬಿಟ್ಟು ಬರೀ ಅಲ್ಪ ಸಂಬಳದ ಬಡ ನೌಕರರನ್ನು ತೆಗೆಯುವುದೇ ಆಗಿದೆಯೆಂದೂ, ಸರ್ಕಾರದವರು ಜನರ ಪ್ರತಿನಿಧಿಗಳ ಕೋರಿಕೆಯನ್ನು ಅಲಕ್ಷಿಸುವುದು ದೇಶದಲ್ಲಿ ಅತೃಪ್ತಿ ಹುಟ್ಟಲು ಅವಕಾಶ ಮಾಡುತ್ತದೆಂತಲೂ ಹೇಳಿದರು.

ಫೈನಾನ್ಸ್ ಮೆಂಬರರು ಠರಾವನ್ನು ವಿರೋಧಿಸಿ ಶ್ರೀ ವಟ್ಟಾಲರವರ ರಿಪೋರ್ಟು ಗುಟ್ಟಿನದಾಗಿದೆಯೆಂದೂ, ಇದರ ಬಗ್ಗೆ ಇಂಡಿಯಾ ಸರ್ಕಾರದ ಅಪ್ಪಣೆಯನ್ನು ಕಾಯುತ್ತಿರುವದಾಗಿದೆಯೆಂದೂ ವಗೈರೆ ಮಾತಾಡಿದರು.

ಶ್ರೀ. ಮನೆಯಪಂಡ ಬೆಳ್ಯಪ್ಪನವರು ಸರಕಾರದ ಈಗಿನ ಸಿಬ್ಬಂದಿ ಖೋತೆಯು ಜನತೆಯಲ್ಲಿ ಅತೃಪ್ತಿ ಹುಟ್ಟಿಸುವಂಥಾದ್ದೆಂದು ಹೇಳಿದರು.

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನವರೆಗಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೮,೦೧,೭೩೮— ೭—೨
ಏಜಂಟರಿಗೆ ಸಾಲ ಮತ್ತು ಆಸ್ತಿಯ ಒತ್ತೆ	೩೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೭೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು

೧೯೨೭ ———— ೨೧,೩೫,೨೩೪ ರೂಗಳು.

೧೯೩೭ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ

ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.
ಅಫಿಸಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12-6

ಶ್ರೀ. ಸೋಮಣ್ಣನವರು ಸರ್ಕಾರವು ಸಿಬ್ಬಂದಿ ಖೋತೆಯ ಬಗ್ಗೆ ಕೈಕೊಂಡಿರುವ ರೀತಿಯು ಸರಿಯೊದ್ದಲ್ಲವೆಂದರು.

ಶ್ರೀ. ಮಲ್ಲಪ್ಪನವರು ಕೊಡಗಿನ ಭವಿಷ್ಯವನ್ನು ನಿರ್ಣಯಿಸದೆ ಸಿಬ್ಬಂದಿ ಖೋತೆ ಮಾಡುವುದು ಹಿತವಲ್ಲವೆಂದರು.

ಶ್ರೀ. ಎ. ಇ. ಎಫ್. ನಿಕೋಲ್ಸ್‌ರವರು—ಸಬ್‌ವೆನ್ಶನಿನ ಬಗ್ಗೆ ಹೋರಾಡಿದರೆ ಅದು ಸಿಕ್ಕುವುದು ಖಂಡಿತ. ಫಾರೆಸ್ಟ್ ಉತ್ಪತ್ತಿಯನ್ನು ಹೆಚ್ಚಿಸಬಹುದೆಂದೂ, ಆದರೆ ನಾನು ಠರಾವಿಗೆ ವಿರೋಧವಿರುವೆನೆಂದೂ ಹೇಳಿದರು.

ಶ್ರೀ. ಬಿ. ಯಂ. ಕಾರ್ಯಪ್ಪನವರು ಉತ್ತರಪತ್ರ ಮೇಲೆ ಠರಾವನ್ನು ಓಟಿಗೆ ಹಾಕಲಾಗಿ ಕಾಂಗ್ರೆಸ್ ಪಾರ್ಟಿಯವರು, ಎಸ್. ರಾಮಮೂರ್ತಿ ಮತ್ತು ಎನ್. ಸೋಮಣ್ಣನವರು ಪರವಾಗಿಯೂ, ಸರಕಾರಿ ಉದ್ಯೋಗಸ್ಥರಾದ ನಾಲ್ವರೂ ಮತ್ತು ನೇಮಕ ಮೆಂಬರರಾದ ಅಬ್ದುಲ್ ರಹಮಾನ್‌ಖಾನರವರು ವಿರೋಧವಾಗಿಯೂ ಓಟು ಮಾಡಿದ್ದರಿಂದ ಠರಾವು ಪಾಸಾಯಿತು.

4. 'ಕೊಡಗನ್ನು ಭಾವಿ ಕರ್ನಾಟಕ ಪ್ರಾಂತಕ್ಕೆ ಸೇರಿಸುವರೆ ತಾತ್ಕಾಲಿಕ ಮಟ್ಟಲಾಗಿ ಮದ್ರಾಸು ಅಧಿಪತ್ಯಕ್ಕೆ ಸೇರಿಸಲು ತಕ್ಕ ಕ್ರಮಗಳನ್ನು ಕೈಕೊಳ್ಳಬೇಕೆಂದು ಈ ಸಭೆಯು ಚೀಫ್ ಕಮಿಷನರಿಗೆ ಶಿಫಾರಸ್ಸು ಮಾಡುತ್ತದೆ' ಎಂಬ ಠರಾವನ್ನು ಶ್ರೀ ಕೋರನ ಮೇವಯ್ಯನವರು ವಾಪಾಸು ತೆಗೆದುಕೊಂಡರು.

5. ಶ್ರೀ. ಸೋಮಣ್ಣನವರು— 'ಕೊಡಗನ್ನು ದೊಡ್ಡದೊಂದು ಭಾಗಕ್ಕೆ ಸೇರಿಸಲು ತಕ್ಕ ಕ್ರಮಗಳನ್ನು ಒಡನೆ ತೆಗೆದುಕೊಳ್ಳಬೇಕೆಂದು ಈ ಸಭೆಯು ಚೀಫ್ ಕಮಿಷನರವರಿಗೆ ಸಲಹೆ ಕೊಡುತ್ತದೆ' ಎಂಬ ಠರಾವನ್ನು ಸೂಚಿಸಿ, ಮಡಿಕೇರಿಯಲ್ಲಿ ಸರ್ವಪಕ್ಷೀಯ ಪರಿಷತ್ತು ಇದೇ ಠರಾವನ್ನಂಗೀಕರಿಸಿದೆಯೆಂದೂ, ಕೊಡಗಿನ ಆರ್ಥಿಕ ಬಿಕ್ಕಟ್ಟಾವಸ್ಥೆಯಲ್ಲಿ ಸಮಂಜಸವಾದ ಆಡಳಿತ ನಡಸುವುದು ಅಸಾಧ್ಯವೆಂದೂ, ಸಬ್‌ವೆನ್ಶನ್ ಸಿಕ್ಕುವ ದಾರಿಯಿಲ್ಲವೆಂದೂ, ಆರ್ಥಿಕ ತೊಂದರೆ ನಿವಾರಣೆಯೊದರೂ ಕೊಡಗು ಬೇರೆ ಪ್ರಾಂತ್ಯಕ್ಕೆ ಸೇರಿಯೇ ಸೇರಬೇಕೆಂದೂ, ಸಂಯೋಗವು ಆರ್ಥಿಕ, ನೈತಿಕ ಮತ್ತು ಸಾಂಸ್ಕೃತಿಕಾಭಿವೃದ್ಧಿಗೆ ಅನುಕೂಲವಿರುವುದೆಂದೂ, ಮದ್ರಾಸಿನಲ್ಲಿ ಕಾಂಗ್ರೆಸ್ ಸರಕಾರವಿರುವಾಗ ಕಾಂಗ್ರೆಸಿನವರು ಈ ಠರಾವಿಗೆ ಯಾಕೆ ಒತ್ತಾಸೆ ಕೊಡಬಾರದೆಂದು ಮಂಡಿಸಿ ಮಾತಾಡಿದರು.

ಶ್ರೀ. ಬಿ. ಎಂ. ಕಾರ್ಯಪ್ಪನವರು ಠರಾವನ್ನು ವಿರೋಧಿಸಿ ಮಡಿಕೇರಿಯಲ್ಲಿ ನಡೆದ ಮೀಟಿಂಗು ಸರ್ವಪಕ್ಷೀಯ ಸಮ್ಮೇಳನವೆಂದು ಕರೆಸಿಕೊಳ್ಳುವುದಿಲ್ಲವೆಂದೂ, ಪ್ರಯತ್ನಪಟ್ಟರೆ ಸಬ್‌ವೆನ್ಶನೂ, ಜವಾಬ್ದಾರಿ ಸರಕಾರವೂ ಸಿಕ್ಕುವುದೆಂದೂ, ಬಜೆಟ್ಟನ್ನು ಸರಿಪಡಿಸುವುದು ಕಷ್ಟವಲ್ಲವೆಂದೂ, ಪ್ರತ್ಯೇಕವಿರುವುದರಿಂದ ಈ ಪ್ರಾಂತವು ಮದರಾಸಿಗಿಂತ ಆರ್ಥಿಕ, ನೈತಿಕ ಮತ್ತು ಸಾಂಸ್ಕೃತಿಕ ರೀತಿನೀತಿಗಳಲ್ಲಿ ಮುಂದರುವದೆಂದೂ, ಆಂಧ್ರ, ಕರ್ನಾಟಕ ಮತ್ತು ಕೇರಳ ಇವು ಮದರಾಸಿನಿಂದ ಬೇರೆಯಾಗಲು ಪ್ರಯತ್ನಿಸುತ್ತಿರುವಾಗ ನಾವು ಹೋಗಿ ಸೇರುವುದು ಹಿತವಲ್ಲವೆಂದೂ ವಾದಿಸಿದರು.

ಶ್ರೀ. ಲೆಫ್ಟನೆಂಟ್ ಕರ್ನಲ್ ಮೂರ್ಹೆಡರು—ಮಡಿಕೇರಿಯ ಅಖಿಲ ಪಾರ್ಟಿ ಸಮ್ಮೇಳನದಲ್ಲಿ ಯೂರೋಪಿಯನರಿರಲಿಲ್ಲವೆಂದೂ, ಬೇರೊಂದು ಪ್ರಾಂತಕ್ಕೆ ಸೇರಲು ಇದು ಸಮಯವಲ್ಲವೆಂದೂ ಹೇಳಿ ಠರಾವನ್ನು ವಿರೋಧಿಸಿದರು.

ಶ್ರೀ. ಯಂ. ಯಂ. ಬೆಳ್ಯಪ್ಪನವರು— ಫಾರೆಸ್ಟ್ ಇಲಾಖೆಯ ಆದಾಯವು ತಗ್ಗುತ್ತಿದೆ. ಆರ್ಥಿಕ ಉನ್ನತಿಗೆ ಬೇರೆ ಮಾರ್ಗವಿಲ್ಲ. ಆದ್ದರಿಂದ ಸಂಯೋಜನೆಯೇ ಇದಕ್ಕೆ ಮುಕ್ತಿ ಎಂದರು.

ಶ್ರೀ. ಪಿ. ಐ. ಬೆಳ್ಯಪ್ಪನವರು—ಜನತೆಯ ಅನುಕೂಲಕೋಸ್ಕರ ಸರಕಾರ ನಡೆಸಲು ಚಿಕ್ಕ ಪ್ರಾಂತವು ಅನುಕೂಲವೆಂದೂ, ಚರ್ಚೆಗಳಿಂದ ಪ್ರಯೋಜನವಿಲ್ಲವೆಂದೂ, ಪ್ರತ್ಯೇಕವಿರಬೇಕೆಂಬುವವರಿಗೆ ಏನಾದರೂ ಅಧಿಕಾರ ಕೊಟ್ಟು ಬೇರೆ ಇರಲು ಸಾಧ್ಯವೋ ಎಂಬ ಬಗ್ಗೆ ಕಾರ್ಯತಃ ಕೆಲಸ ಮಾಡಲು ಅವಕಾಶಕೊಡಬೇಕೆಂದೂ, ಈ ಪ್ರಯತ್ನದಲ್ಲಿ ವಿಫಲವಾದರೆ ಮತ್ತೆ ಎಲ್ಲರೂ ಸೇರಿ ಸಂಯೋಜನೆ ಮಾಡಬಹುದೆಂದೂ, ಶತಮಾನದಿಂದ ಕೊಡಗಿನ ಆಡಳಿತ ನಡೆಸುತ್ತಿದ್ದರೂ ಯಾವ ರಿಯಾಯಿತಿಯನ್ನೂ ಕೊಡದೆ ಈ ರೀತಿ ಗೋದಲಕ್ಕೀಡುಮಾಡಿರುವ ಈ ತೊಡಕಿಗೆ ಸರಕಾರವೇ ಕಾರಣವೆಂದೂ, ಇಂದು ಸುಧಾರಣೆಯನ್ನು ಕೊಟ್ಟದ್ದೇ ಆದರೆ ಯಾವ ಪ್ರಶ್ನೆಯೂ ಏಳಲಿಕ್ಕಿಲ್ಲವೆಂದೂ, ದೇಶದ ಆರ್ಥಿಕ ಆಡಳಿತ ಚೆನ್ನಾಗಿಲ್ಲವೆಂದು ಬೇರೆ ಪ್ರಾಂತಕ್ಕೆ ಸೇರ

(8 ನೇ ಪುಟ ನೋಡಿ).

ಕೊಡಗಿನ ಭವಿಷ್ಯ?

ಲೇಖಕರು:— ಬಿ. ಗಣಪತಿ.

ಕೊಡಗಿನ ಭವಿಷ್ಯದ ವಿಚಾರ; ಇದೇನು ಇಂದಿನ ಸಮಸ್ಯೆಯಲ್ಲ. ಕಳೆದ ಹದಿನೈದು ವರ್ಷಗಳಿಂದ ವಿಚಾರ ವಿಮರ್ಶೆ ನಡೆದೂ, ನಡೆದು, ಅಂತು ತನ್ನ ಅಂತ್ಯವನ್ನು ತಲಪದೆ, ಕೊಡಗಿನ ಜನತೆಯ ಮನೋರಾಜ್ಯದಲ್ಲಿ ತಾಂಡವವಾಡುತ್ತಿರುವ ಒಂದು ಬಿಕ್ಕಟ್ಟಿನ ಸಮಸ್ಯೆ. ಇಷ್ಟೊಂದು ಸುಧೀರ್ಘ ಸಮಯದಲ್ಲೂ ಕೂಡ, ಅನೇಕ ಚತುರ ವಿಮರ್ಶಕರ ಅವಗಾಹನೆಗೆ ಬಂದರೂ ಸಹಿತ ಈ ಸಮಸ್ಯೆಯು ತೀರ್ಮಾನವು ಆಗದಿರುವದು ಆಶ್ಚರ್ಯಕರ. ಇದಕ್ಕೆ ಕಾರಣವೇನಿರಬಹುದು? ದೇಶದ ಜನತೆಯಲ್ಲಿ ಈ ವಿಚಾರ ಪ್ರಚಾರ ನಡೆದಿಲ್ಲ. ದೇಶದ ಸಮುದಾಯಿಕ ಅಭಿಪ್ರಾಯವೇಂತಿದೆ ಎಂಬುದು ಮುಖಂಡರಲ್ಲಿ ಚಿತ್ರಿತವಾಗಿಲ್ಲ. ಮುಖಂಡರು ತಮ್ಮ ತಮ್ಮ ಸಮ್ಮಿಲನ ಯಾವ ಯಾವ ಪ್ರಾಂತಗಳಲ್ಲಿರುವದೋ ಆ, ಆ ಪ್ರಾಂತಗಳೊಂದಿಗೆ ಕೊಡಗನ್ನು ಸಂಯೋಜಿಸಿ ಬಿಡಬೇಕೆಂದು ಹೋರಾಡುವರು. ರಾಜಕೀಯ ನೀತಿಯನ್ನು ತಮ್ಮ ಸ್ವಾರ್ಥತೆಯ ಅಂತಸ್ಸಿನಿಂದ ಅಳೆಯುವರು. ದೇಶದ ಜನಾಪೇಕ್ಷೆ ಎಂತಿದೆ, ಅವರ ಉನ್ನತಿ ಹೇಗಾದೀತು? ಎಂಬ ವಿಚಾರ ಅನೇಕ ಮುಖಂಡರ ಚಿತ್ತ ಭಿತ್ತಿಯಲ್ಲಿ ಕೆತ್ತಲ್ಪಟ್ಟಿರುವದಿಲ್ಲ. ಮದ್ರಾಸಿನ ವಿಶಾಲತೆಗೆ ಮರುಳಾದವರು ಮದ್ರಾಸಿಗೂ, ಮೈಸೂರಿನ ಸೊಗಸಿಗೆ ಮನಸೋತುಕೊಂಡವರು ಮೈಸೂರಿಗೂ ಸಂಯೋಜನೆಯಾಗಬೇಕೆಂದು ಪೂರ್ವಾಪರ ವಿವೇಚನೆ ಇಲ್ಲದೆ, ರೈತರ ಸ್ಥಿತಿ, ಆರ್ಥಿಕ ಉನ್ನತಿ, ಆಡಳಿತದ ಸಂಸ್ಕೃತಿ ಒಂದರ ಪರಿವೆಯಿಲ್ಲದೆ, ಹೋರಾಡುವದೇ ನಮ್ಮ ಈ ಪುರಾತನ ಹಾಗೂ ನವೀನ ಸಮಸ್ಯೆಗೆ ಉತ್ತರವನ್ನು ಕಂಡು ಹಿಡಿಯಲು ಕಂಟಕಪ್ರಾಯವಾಗಿರುವದು. ಕೆಲವರು ಮದ್ರಾಸಿಗೆ ಕೊಡಗನ್ನು ಸಂಯೋಜಿಸಬೇಕು. ನಂತರ ಭಾವೀ ಕರ್ನಾಟಕ ಪ್ರಾಂತ್ಯಕ್ಕೆ ಸೇರಿಕೊಳ್ಳಬೇಕೆಂದೂ ಪ್ರಯತ್ನ ನಡೆಸುತ್ತಿರುವರು. ಮತ್ತೆ ಕೆಲವರು ಬೆಡಗಿನ ಮೈಸೂರಿನೊಂದಿಗೆ ಸೇರಿಸಿ ಮಹಾರಾಜರವರ ಕೃಪಾಛತ್ರಿಯಡಿಯಲ್ಲಿ ಸುಖಿಗಳಾಗಿರಬೇಕೆಂದು ಪ್ರಯತ್ನ ಮಾಡುತ್ತಿರುವರು.

ಇವರ ಇಂಥಾ ವರ್ತನೆಯ ಬಗ್ಗೆ ಬರೆಯಬೇಕಾದರೆ ಪ್ರಥಮತಃ ಇಂದಿನ ಯುಗವು ಇಂಥಾ ಕಾರ್ಯದ ಯುಗವಲ್ಲ. ಪ್ರತಿಯೊಂದು ಜನಾಂಗವೂ, ಪ್ರತಿಯೊಬ್ಬ ವ್ಯಕ್ತಿಯೂ ಸ್ವತಂತ್ರದಿಂದಿರಬೇಕೆಂಬ ಈ ಯುಗದಲ್ಲಿ ಪರಪ್ರಾಂತವೊಳಗೆ ಸೇರಿಕೊಂಡು ನಮ್ಮಲ್ಲಿರುವ ಅಲ್ಪ ಸ್ವಾತಂತ್ರ್ಯವನ್ನು ಮಾರಿಕೊಳ್ಳುವದೇ? ಒಂದು ಶತಮಾನದಿಂದ ಪಾರತಂತ್ರ್ಯಕ್ಕೆ ಸಿಲುಕಿ ನರಳುತ್ತಿರುವ ನಾವು ಆ ಶೃಂಖಲೆಗಳಿಂದ ಮುಕ್ತರಾಗುವ ಯೋಚನೆಯನ್ನು ಬಿಟ್ಟು ದಾಸಾನುದಾಸರಾಗಲು ಯತ್ನಿಸುವದೇ? ಅದಂತಿರಲಿ, ಸಂಯೋಜನಾಪ್ರಯತ್ನಕರೇ, ಇಂದು ಕರ್ನಾಟಕ ಪ್ರಾಂತವಾಗಲೀ, ಆಂಧ್ರ ಅಥವಾ ಕೇರಳವಾಗಲೀ ಏಕೆ ಪ್ರತ್ಯೇಕವಿರಬೇಕೆಂದು ಹೋರಾಡುತ್ತಿರುವದೆಂಬನ್ನು ವಿಚಾರಿಸಿರುವಿರಾ? ಕೊಡಗನ್ನು ಬೇರೆ ಪ್ರಾಂತಕ್ಕೆ ಸೇರಿಸುವ ಈ ಹಂಬಲಕ್ಕೆ ಬರುವ ಮೊದಲು ಅದರ ಹಿತಾಹಿತಗಳನ್ನು ವಿಮರ್ಶಿಸುವಿರಾ? ಈಗ ಇಲ್ಲಿಯ ಆಡಳಿತಕ್ಕಿಂತ ಸುಗಮವಾದ ಆಡಳಿತವು ದೊರೆಯುವದೆಂಬ ಭರವಸೆಯು ನಿಮಗಿದೆಯೇ? ಸಂಯೋಗದಿಂದ ಕೊಡಗಿನ ಆರ್ಥಿಕ ಸ್ಥಿತಿಯಾಗಲೀ, ರೈತರ ಉನ್ನತಿಯಾಗಲೀ ಅಥವಾ ಇನ್ನಾವ ಉಪಯೋಗವಾಗಲೀ ದೊರೆಯುವ ಸಂಭವವಿದೆಯೇ? ಹಾಗಿದ್ದ ಪಕ್ಷ, ಅದರ ಯಥಾರ್ಥವನ್ನು ಯಾಕೆ ವಿವರವಾಗಿ ಜನತೆಯ ಮುಂದಿಡಬಾರದು? ಪಟ್ಟಣಗಳ ಸೊಗಸಿಗೆ ಸೋತು, ಹಳ್ಳಿಗರ ವಿಪನ್ನಾವಸ್ಥೆಯನ್ನು ಮರೆತು ಬಿಡುವದು ಹಿತವಲ್ಲ. ಕೃಷಿಕರ ದೇಶವಾದ ಕೊಡಗಿನ ಬೆನ್ನೆಲುಬೇ ರೈತರು. ಅವರ ಉನ್ನತಿಯೇ ದೇಶದ ಅಭಿವೃದ್ಧಿ. ಇಂದು ಕೊಡಗಿನ ರೈತರು ಮೈಸೂರಿನ ಹಳ್ಳಿಗರಿಗಾಗಲೀ, ಅಥವಾ ಮದ್ರಾಸಿನ ಗ್ರಾಮಸ್ಥರಿಗಾಗಲೀ ಎಂದೂ ಹಿಂದೆ ಇಲ್ಲ. ಅವರಿಗಿಂತ ಹೆಚ್ಚಿನ ಸವಲತ್ತುಗಳು ಇಂದು ಇಲ್ಲಿಯ ರೈತರಿಗೆ ಸಿಗುತ್ತಿರುವದೆಂದರೆ ಅತಿಶಯೋಕ್ತಿಯಾಗಲಾರದು. ಹಾಗಿರುವಾಗ ಕೆಲವು ಪಟ್ಟಣಿಗರ ಸುಖಕ್ಕಾಗಿ, ರೈತರನ್ನು ಕಷ್ಟಕ್ಕೀಡುಮಾಡುವ ಈ ಸಂಯೋಜನೆಯು ದೇಶಹಿತವನ್ನು ಸಾಧಿಸಲಾರದೆಂದು ಕಂಠೋಕ್ತವಾಗಿ ಹೇಳಬಹುದು.

ಮದ್ರಾಸಿನೊಂದಿಗೆ ಸೇರಿಸಬೇಕೆಂಬ ಮಹನೀಯರಾದರೂ, ಮದರಾಸು ವಿಶಾಲ ಭೂಮಿ., ನಮ್ಮಲ್ಲಿಯ ನಿರುದ್ಯೋಗಿಗಳಿಗೆ ಅಲ್ಲಿ ಉದ್ಯೋಗ ಯಥೇಚ್ಛ ದೊರೆಯುತ್ತದೆ ಎಂದು ಮುಂತಾಗಿ ವಾದಿಸುವದು, ಇದು ಬರೇ ತಿರುಕನ ಕನಸೇ ಹೌರು. ಯಾಕಂದರೆ ಮದ್ರಾಸು ಸರ್ಕಾರದಲ್ಲಿ ನಿರುದ್ಯೋಗಿಗಳಿಗೇನು ಕಡಿಮೆ ಇಲ್ಲ. ಹರಿಪುರ ಅಧಿವೇಶನದಲ್ಲಿ ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆಂಬ ಠರಾವಾಗಿದೆ ಎಂದು ಕೆಲವರು ಘೋಷಿಸುವರು. ಆದರೆ ಹರಿಪುರ ಠರಾವಿನ ಯಥಾರ್ಥ ಅವರಿಗೆ ತಿಳಿದಿಲ್ಲ. ಅಥವಾ ಅದನ್ನು ಅವರು ತಮ್ಮ ಧ್ಯೇಯಕ್ಕನುಸಾರವಾಗಿ ಮಾರ್ಪಡಿಸಿಕೊಂಡಿರುವರೆಂದೇ ಹೇಳಬೇಕಾಗಿದೆ. 'ಅಜಮೀರ್, ಮಾರ್ವಾರ ಮತ್ತು ಕೊಡಗು ಇವುಗಳನ್ನು ನೈಯಕ್ತಿಕವಾಗಿ ಸಂಯುಕ್ತ ಪ್ರಾಂತ ಮತ್ತು ಮದ್ರಾಸು ಪ್ರಾಂತದ ಕರ್ನಾಟಕದೊಂದಿಗೆ ಸಂಯೋಜಿಸಬಹುದೆಂಬ ಅಲ್ಲಿಯ ನಿವಾಸಿಗಳ ಕೋರಿಕೆಯನ್ನು ಈ ಕಾಂಗ್ರೆಸು ಪುಷ್ಟೀಕರಿಸುತ್ತದೆ.' ಇದೇ ಹರಿಪುರದ ಠರಾವಿನ ಸಾರಾಂಶ. ಇದರಲ್ಲಿ ಮದ್ರಾಸಿಗೆ ಸೇರಿಸಿ ಬಿಡಬೇಕೆಂಬ ಬಲಾತ್ಕಾರ ವಾಣಿಯಾಗಲೀ, ಕೆಲವು ಜನರು ಹೇಳುವಂತೆ ಭಾಷಾನುವಾರು ಪ್ರಾಂತ ರಚನೆಯ ಮೇರೆ, ಕರ್ನಾಟಕ ಪ್ರಾಂತವಾಗುವ ವರೆಗೆ ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆಂಬ ಅಧಿಕಾರದ ಅಪ್ಪಣೆಯಾಗಲೀ ಎಲ್ಲಿದೆಯೋ ತಿಳಿಯದು.

ಕಾಂಗ್ರೆಸಿನವರು ತಿಳುವಳಿಕೆಯಿಲ್ಲದ ಬಹುಮತದ ಜನರನ್ನು ಮರುಳು ಮಾಡಿ ತಮ್ಮ ಧ್ಯೇಯವನ್ನು ಸಾಧಿಸಿಕೊಳ್ಳುವರೆಂದು ಕೆಲವರ ಅಭಿಪ್ರಾಯ. ಇಂಥಾ ಅವರ ಅಭಿಪ್ರಾಯವು ಅವರ ಮೌಢ್ಯತೆಯನ್ನೇ ಪ್ರದರ್ಶಿಸುವದು. ದೇಶದ ಬಹುಮತವನ್ನೇ ಇವರು ಅಂಧಕಾರಕ್ಕೆ ತಳ್ಳುವರು. ಹೀಗೆ ಬಹುಮತದವರು ತಿಳುವಳಿಕೆ ಇಲ್ಲದವರೆಂಬ ಅಭಿಪ್ರಾಯದಿಂದಲೇ ಅವರು ಬಹುಮತದವರ ಯೋಚನೆಯನ್ನು ಸಹ ಮಾಡದೆ ತಮ್ಮ ಮತವನ್ನೇ ಬಹುಮತದ ಅಭಿಪ್ರಾಯವೆಂದು ಘೋಷಿಸುತ್ತಿರಬಹುದೇ? ಇಂಥಾ ಸಂಕುಚಿತ ದೃಷ್ಟಿಯ ಮುಖಂಡರಿಗೆ ಹೇಳುವದಿಷ್ಟೇ. ಸ್ವಾತಂತ್ರತೆಯು ಪ್ರತಿಯೊಬ್ಬ ವ್ಯಕ್ತಿಯ ಜನ್ಮ ಸಿದ್ಧ ಹಕ್ಕು. ದೇಶದ ಭವಿಷ್ಯದ ವಿಚಾರದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಅಭಿಪ್ರಾಯ ಕೊಡಲು ಹಕ್ಕಿದೆ. ಇಂಥಾ ಬಹುಮತದವರ ಅಭಿಪ್ರಾಯವಿಲ್ಲದೆ ಸ್ವೇಚ್ಛೆಯಿಂದ, ಇಂದು ಕೊಡಗಿನ ಮುಖ್ಯ ಸಮಸ್ಯೆಯಾದ ಭವಿಷ್ಯವನ್ನು ತಮ್ಮ ಇಚ್ಛೆಯಂತೆ ನಿರ್ಣಯಿಸುವದು ಅಧಿಕಪ್ರಸಂಗವಾಗಿದೆ. ಅಯ್ಯಾ, ಮುಖಂಡರೇ, ಗ್ರಾಮ ಗ್ರಾಮಗಳಲ್ಲಿ ಸಭೆ ನಡೆಸಿ ಜನಾಭಿಪ್ರಾಯವನ್ನು ತೆಗೆದು ಅದರಂತೆ ವರ್ತಿಸಿರಿ. ಇಂಥಾ ಕಾರ್ಯಕ್ರಮದಿಂದಲೇ ನಿಮ್ಮ ಮುಖಂಡತ್ವ ಫಲಕಾರಿಯಾಗುವದೆಂಬುದನ್ನು ಗ್ರಹಿಸಿರಿ.

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ 52,54,750 ರೂ. ಭರವಸೆಯ 4689 ಪ್ರಪೋಸಲ್‌ಗಳು ಸಿಕ್ಕಿವೆ. ಅವರಲ್ಲಿ ಹಿಂದಿನ ವರ್ಷದ ಪೂರ್ತಿಯಾಗದ 1447 ಪ್ರಪೋಸಲ್‌ಗಳ ಬಾಬ್ತು 40,67,650 ರೂ. ಗಳ ಬಗ್ಗೆ ವರ್ಷಾವಧಿ 2,21,959-6-0 ರೂ. ವಿಮಾ ಕಂತು ಬರುತ್ತೆ. ಕಂಪೆನಿಯಿಂದ ಭರವಸೆ ಪಡೆದಿರುವ ಹಣ ರೂ. 39,38,150. ಬಾಕಿ ರೂ. 1,29,500 ಪುನಃ ಭರವಸೆ ಕೊಟ್ಟದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುವರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತಿವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ. 4,13,775 ಹೆಚ್ಚಿದೆ.

ಈ ಕೆಳಗಿನ ಒಳ್ಳೆ ಸಂಗತಿಗಳಿಂದ ಲಭಿಸಿದ ತೃಪ್ತಿಯನ್ನು ಮೆಂಬರುಗಳೊಡನೆ ಅನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯಾ ಸರ್ಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪನಿಗಳಿವೆಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಶೂರೆನ್ಸ್ ಈಯರ್ ಬುಕ್' ಎಂಬುವುದರಿಂದ ತಿಳಿದುಬರುತ್ತದೆ. ಈ ಕಂಪನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪೆನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ವರೆಗೆ ಶ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೇಯದಾಗಿದೆ. ಒಂದನೇಯದಾದ ಕಂಪೆನಿಯು ಇದಕ್ಕಿಂತ 25 ವರ್ಷಗಳ ಮುಂದೆ ಸ್ಥಾಪಿಸಲ್ಪಟ್ಟಿದ್ದಾಗಿದೆ.

ವಿಮಾ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮಾ ಕಂತುಗಳ ಆದಾಯವು (ಪುನಃ ಭರವಸೆ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮಾ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ವರದಿ ವರ್ಷದ ವಿಮಾ ಕಂತಿನ ಆದಾಯವು ರೂ. 3,66,198-13-0, ಗತ ವರ್ಷದ್ದು 2,36,767-6-6 ಆಗಿದೆ.

ಜೀವ ವಿಮಾ ಫಂಡು:—ಈ ಕಂಪೆನಿಯ ಜೀವ ವಿಮಾ ಫಂಡು ರೂ. 75,258-14-9ರಿಂದ, ವ್ಯವಸ್ಥಾ ಕ್ರಮಕ್ಕೆ ಮತ್ತು ಇತರ ಖರ್ಚಿಗಾಗಿ ರೂ. 45,037-8-4 ವಜಾ ಕಳೆದು ರೂ. 21,00,421-1-3ಕ್ಕೆ ಏರಿದೆ. ಈ ಕೆಳಗೆ ಅದರ ತಪಶೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿಮಾ ಕಂತು	ಜೀವ ವಿಮಾ ಫಂಡು.
1ನೇ ವರ್ಷದ	ರೂ. 1,46,949	ರೂ. 15,619
2ನೇ ವರ್ಷದ	,, 2,36,767	,, 75,259
3ನೇ ವರ್ಷದ	,, 3,66,199	,, 2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪೆನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತ ವಿಮಾ ಕಂಪೆನಿಗಳ ವಾರ್ಷಿಕ ವೃತ್ತಾಂತದಲ್ಲಿ ಹೊಗಳಲರ್ಹವಾದದ್ದೇ ಆಗಿದೆ.

ಭಾರತ ಜೀವವಿಮಾ ಕಂಪೆನಿಗಳ ಆಕ್ಟಿನ ಮೇರೆ ಠೇವಣಾತಿ:—ಈ ಕಾನೂನು ಮೇರೆ ಠೇವಣಾತಿ ಮಾಡತಕ್ಕದಿದ್ದ ರೂ, 2 ಲಕ್ಷವನ್ನು ಪೂರ್ತಿಯಾಗಿ ಡಿಪಾಜಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷವುಳ್ಳವರಾಗಿರುವರು.

ಕೆ. ಯಮ್. ತಿಮ್ಮಯ್ಯ,
(52-20) ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

ಶ್ರೀ ರಾಮಕೃಷ್ಣ ಪರಮಹಂಸರು.

ಲೇಖಕ:-ಎಂ. ಎಸ್. ಅನಂತಪದ್ಮನಾಭರಾವ್.

ಗತಿ ೬.

(ಕಳೆದ ವಾರದಿಂದ ಮುಂದುವರಿದದ್ದು)

ಅದಿ ಮಧ್ಯಾಂತದಲಿ ಸೂರ್ಯ ಕಾಂತಿಯ ತೆರದಿ
ದೈವ ದರ್ಶಕರಿರವು, ಬಾಲ್ಯ ಯೌವ್ವನ ಮುಪ್ಪು,
ಮೂರರಲಿ ಬೆಳಗುವರು, ವಿಧ ವಿಧದ ಶೋಭೆಯಲಿ.
ಅಸ್ತಮಯ ಸೂರ್ಯನಂತಾ ಋಷಿಯು ಕೊನೆಯಲ್ಲಿ
ದಿವ್ಯ ತೇಜೋ ರಾಶಿಯಿಂ ಬೆಳಗಿ ಕೈಯೆತ್ತಿ,
ಎಪ್ಪೇಳು ಎಲೆ ಜಗವೆ, ನಿದ್ರೆಯಂ ತೊರೆಯೀಗ,
ನೋಡಿನೋ ಪರಮಾತ್ಮ ಕರೆಯುತಿಹ, ಕೇಳದೇ,
ನಿನ್ನ ಮಕ್ಕಳ ಕಣ್ಣ ನೀ ತೆರಿಸಿ ತೋರಿಸೀ
ದಿವ್ಯ ಶೋಭೆಯನೆಂದು, ಸಿಂಹನಾದವ ಮಾಡಿ
ಹೇಳಿದರು ಕರುಣೆಯಿಂ.

ಇಂತವರು ಮಾನವರ
ಜೀವ ಸಾರ್ಥಕ್ಯವುಂ ಬೋಧಿಸುತಲೆಡಬಿಡದೆ
ನುಡಿಯುತಿರೆ, ಗಂಟಲಲಿ ನೋವು ತಲೆದೋರಿದುದು.
ಮೊದ ಮೊದಲು ಗಣಿಸದಿರೆ ದಿನ ದಿನಕೆ ಪೆರ್ಚುತಲಿ
ಬೇನೆಯುನ್ಮುಕ್ಕಿಸಿತು; ಭೇಷಜರು ನೋಡಿದರು,
ಮಾತಾಡುವುದ ನಿಲಿಸಿ, ಬಹು ಸಮಾಧಿಯ ತಡೆಯೆ
ಗುಣವಹುದು ಮಲ್ಲದಿರೆ ಪೆರ್ಚುವುದು ಕೆಳಿಯಿರೆಂ
ದವರು ಪೇಳಲು ಶಿಷ್ಯ ನಿಕರವೆಚ್ಚರದಿಂದ
ಅವಕಾಶವೀಯದಿರೆ, ಸಾನಿಹಾತಿಗೆ ತೆರಳಿ
ನರ್ತನಾದಿಗಳಿಂದೆ ಹಂಸರು ಸಮಾಧಿಯಲಿ
ಬೀಳುತಲಿ ಮೈಮರೆಯುತತ್ತ ನರ್ತಿಸುತಿರಲು,
ರಕ್ತ ಗಂಟಲಿಗಾಗಿ ಏಮಳಗೇರುತ್ತಿರಲು
ಬೇನೆ ಬಲಿತುದು ಮತ್ತೆ, ಬಾಯಿಂದ ರಕುತವುಂ
ಕಾರುತಲಿ ಯತಿವರರು ಬಳಲಿದರು--ಇವನರಿತು
ಭಕ್ತರು ನರೇಂದ್ರಾದಿಗಳು ನೊಂದು, ಗುರುವರರ
ಶುಶ್ರೂಷೆ ಮಾಡುತಲಿ, ಅವರು ಬಳಲದ ತೆರದಿ
ಕಾಯುತಿರೆ; ಗುರುಗಂತ್ಯ ಸನ್ನಿಹಿತಮಾದಪುದೆ
ಏನೆಂದು! ಭಯದಲಿ ನರೇಂದ್ರನುಂ ಸಮಯದಿ
ಕಲಿಕತ್ತೆಯೊಳಗವರ ನಿಲಿಸುತ್ತ ವೈದ್ಯರಿಂ
ದೌಷಧವ ಮಾಡಿಸಲು ಮನ ಮಾಡಿ ದಕ್ಷಿಣೇ
ಶ್ವರದಿಂದ ಪಯಣದಲಿ ನಡೆತಂದುದಾ ಪಡೆಯು;
ಮತ್ತೊಮ್ಮೆ ದಕ್ಷಿಣೇಶ್ವರವನ್ನು ನೋಡಲಿ
ಲ್ಲಾ ಗುರುವು.

ಕವಿರಾಜರುಗಳವರ ಪರಿಕಿಸುತ
ಪಥ್ಯವುಂ ಮಾಡಿದರೆ ಮುಳಿದುದಾ ಬಹುಬೇನೆ,
'ರೋಹಿಣಿ'ಯು ಬಾಧೆಯೆಂದವರು ತಿಳಿದರು ಮತ್ತೆ;
ಬರುವ ಶಿಷ್ಯಾಳಿಗಳ ಮನ್ನಿಸುತಲವರೊಡನೆ
ನುಡಿಯುತ್ತಲು, ಹಾಡುತ ಸಮಾಧಿಯಲಿ ಬಳಲುವುದು
ಹಂಸರಿಗೆ ಕಡುಕಾಯ್ತು, ಅದರಿಂದ ಕಲಿಕತ್ತೆ
ಯನು ಬಿಟ್ಟು ಬಂದು ಗೋಕುಲಚಂದ್ರ ಭವನದಲಿ
ಕಾಶೀಪುರದಲಿ ನಿಂದು, ಭಿಷಜ ಮಹೇಂದ್ರನಿಂ
ದೌಷಧವ ಕೈಗೊಂಡು, ಪರಮಾತ್ಮನಿರವನ್ನು
ಬೋಧಿಸುವರಾ ಋಷಿಯು, ಹಂಸರೀ ಬೋಧನೆಗೆ
ಮರುಳಾಗಿ ಮನಕರಗಿ, ತಿರುಗಿದ ಮಹೇಂದ್ರನುಂ,
ನಿಜಮಾಯೆ ಪೀಠಸುತ ಪರಿಕಿಸಿ ಸಮಾಧಿಯೊಳು
ಮುಳುಗಿದ ಪವಾಡಿಸಿದ. ಜಗಾದವರಾ ಪರಿಗೆ
ವಿಜ್ಞಾನ ಕೋಶದಾ ಯತಿ ಸಮಾಧಿಯನರಿಯೆ.

ತಂದೆ ತಾಯ್ಗಳ ಬಿಟ್ಟು, ವಿದ್ಯಾರ್ಜನೆಯ ತೊರೆದು
ಆಹಾರ ನಿದ್ರೆಗಳ ಬಲಿಗೊಟ್ಟು, ಭಕ್ತಿಯುಂ
ಸೇವಿಸುವ ಶಿಷ್ಯರಂ ನೋಡಿದರು ಯತಿವರರು;
ಮನಕೆ ಸಂತಸವಾಯ್ತು, ಹಗಲು ರಾತ್ರಿಗಳೆಂಬ
ಪರಿವೆಯಿಲ್ಲದೆ ದಣಿದು, ಕಾದು ಕಾಸಿನೆ ಹೆಣಗಿ,
ಬೇಕಾದುದೊದವಿಸುತ ಕಾಯುತಿರೆ ಸಮಯದಲಿ;
ಆವರವರು ಜೀವಿಸುವ ಕ್ರಮವರಿವ ರೀತಿಯ
ನ್ನಾ ಬಗೆಯೊಳವರು ಕಲಿಸುತಲವರ ಮಕ್ಕಳಂ
ಸಲಹುವರು: ಗುರುಸೇವೆಯಂ ಕೊಳಲು ರೋಗವುಂ
ಸ್ವೀಕರಿಸಿ ಶಿಷ್ಯರಿಗೆ ವೈರಾಗ್ಯ ಹಚ್ಚಿದರು;
ತಂದೆ ತಾಯ್ಗಳ ಬಂಧು ಬಳಗಗಳ, ಹೆಚ್ಚೇಕೆ
ದೇಹದಾಸೆಯ ಮರೆತು ಗುರು ಸೇವೆ ಮಾಡುತ್ತ
ಪರಮಾತ್ಮನಾ ಪಥದ ಶಾಲಿಗಳು ಬೆಳಕಿತ್ತು
ಕಣ್ತೆರಿಸಿ ನಿಂದರಾ ಕಾಲದಲಿ ಯೋಗಿಗಳು;
ಒಬ್ಬೊಬ್ಬನೊಂದೊಂದು ಬಗೆಯಿಂದ ನೋಡಿದರು.
ಗುರುಗಳನು; ಶಿಷ್ಯ ಪ್ರವಾಹ ಬಹು ಹೆಚ್ಚಾಯ್ತು.
ವಿಜ್ಞಾನ ಸೋಲುತಿರೆ ಪಾರಮಾರ್ಥಿಕದಿದಿರು
ಆ ಮಹೇಂದ್ರನು ತಿಳಿದು ಶರಣು ಹೊಕ್ಕನು ತಾನೆ.
ಆಗ ಹೇಳಿದರವರು ಪರಮಾತ್ಮನನ್ನುಳಿಯು
ತನ್ನರಂ ಕಾಣೆನಾಂ, ನೀವೆಲ್ಲರಾ ರೂಪ
ದಲಿ ತಿರುಗುವುದ ಕಾಣುತಿರುವೆ ನಾಂ ನಿತ್ಯದಲಿ.
ಎನ್ನದೊಂದೀ ರೂಪವನು ಹಲವು ಶಿಷ್ಯರಲಿ
ಕಾಣುತಿಹೆ.

ಶಿಷ್ಯಾಳಿ ಕಾಳಿ ಪೂಜೆಯ ಮಾಡೆ
ಮನ ಮಾಡಿ, ಮೈಮರೆತು, ಮಾತೆಯನ್ನಾ ಗುರುವ
ಹೃದಯದಲಿ ಕಾಣುತ್ತ ಪೂಜಿಸಿದರವರನ್ನು,
ನಿಜ ಶರೀರದೊಳವರು ಏಕ ಕಾಲದಿ ತನ್ನ
ದಿವ್ಯ ದರ್ಶನವಿತ್ತು ಇತರ ಶಿಷ್ಯರ ಗೃಹದಿ
ಬೆಳಗಿದರು ಹೊಳೆಯುತಾ ಶುಭ ದಿನದೊಳೆಲ್ಲೆಲ್ಲು.

ಇರುತಿರಲು ದಿನದಿನಕೆ ಪೆರ್ಚುತಿರೆ ರುಕ್ತನಿದು
ಶ್ಯಾಂಪುಕೂರವ ಬಿಟ್ಟು ಕಾಶಿಪುರದುದ್ಯಾನ
ಕ್ಷೇತ್ರದ ಗೋಪಾಲ ಚಂದ್ರ ಘೋಷನ ಮನೆಯ
ಶೃಂಗರಿಸಿ ನಿಂದರಾ ಯೋಗಿಗಳು; ಬಾಧೆಯಿಂ
ಬೇಯುತಲಿ, ದೇಹ ಜರ್ಝರವಾಗಿ ಕರಗಿದುದು;
ಎಲುಬು ಗೂಡಿನ ಚರ್ಮ ನರಮಾತ್ರ ನಿಂದಿಹುದು
'ಲೋಕದೊಳಗೀ ದೇಹ ಪರಮ ಪಾವನವೆಂ'ದು
ಜನರಾಡಿಕೊಳುತಿರಲು ಮಾತೆಯೀ ದೇಹವನು
ಮರಳಿ ಕೊಳ್ಳುವಳೆಂದು ಹೇಳುವರು ಸಾಧುಗಳು.

ಹೊನ್ನು ಮಣ್ಣುಗಳಲ್ಲಿ ಭೇದವುಂ ಮರೆಸಿದರು.
ಮಲ ಮೂತ್ರ ವೆಂಬುದರ ಮಲವನ್ನು ನೀಗಿದರು.
ತಮ್ಮ ಬಾಧೆಯ ನಿಸದಿ ಅವರ ಮಾರ್ಗವ ತಿದ್ದಿ
ಸಂತೋಷ ಸಾಗರದಿ ಮುಳುಗಿದರು ಯತಿವರರು
ಅಣಿಮಾದಿ ಸಿದ್ಧಿಗಳ ಬಲದಿಂದಲೀ ಬಾಧೆ
ಪರಿಹಾರವಹುದೆಂದು ಹೇಳಿದರೆ ಮನವಿದನು
ದೇವರಿಗೆ ಕೊಟ್ಟಿಹೆನು, ನಿತ್ಯವಲ್ಲದ ಕಾರ್ಯ
ದಲಿ ತೊಳಲಲಾರದಿದು: ಮಾತೆಯಂ ಕೇಳಿದರೆ
'ಹಲವು ದೇಹದೊಳಿರುವೆ, ಅವರ ಮುಖದಿಂದುಂಡು
ಸವಿಗಂಡು ಸುಖಿಸುತಿರಲೀ ದೇಹ ನಿನಗೇಕೆ
ನಡೆಯೆಂ'ದು ಹೇಳಿದಳು, ಮರಳಿದನು-ಯೋದರೇ
ನೀ ನೇಹ, ನಿಮ್ಮೊಳಗೆ ನಿತ್ಯದಲಿ ನೃತ್ಯವಾ
ಡುತ್ತಿಹೆನು ತಿಳಿಯಿರೆಂದಾ ಬಾಲಕರ ಪಡೆಯು
ಸಂತವಿಸಿ-ನೋಡಲಿತ್ತೆತ್ತಲುಂ ನೋಡುವೆನು,
ಪರಮಾತ್ಮ ಸನ್ನಿಧಿಯನಿನ್ನಾರಿಗುಂ ಜ್ಞಾನ
ವೀಯುವುದು?-ಇದ ಕೇಳಿ ಶಿಷ್ಯರೆಲ್ಲರು ಋಷಿಯ
ಪಾದವುಂ ಪಿಡಿಯುತ್ತ ನಮಿಸಿದರು ಭಕ್ತಿಯಿಂ.
ಭಗವಂತ ಮಂಗಳವ ನೀಡಲೆಂದಾಶಿಸಿದ
ರಾ ರಾಮ ಕೃಷ್ಣವರ್ಯರು ಮುದದಿ ನೋಡಿದರು.

ಹೋಗದಿರು ಮರಳಿ ನೀಂ ಮನೆಗಿನ್ನು, ಶಿಷ್ಯರಂ
ನಿನಗೊಪ್ಪಿಸಿಹೆನೀಗ, ದಕ್ಷಿಣೇಶ್ವರಕೈದಿ
ಸಾಧನೆಯ ಮಾಡಿ ಬಾ ಹೋಗೆಂದು ಕಳುಹಿದರೆ
ಸಾಧನಾ ಮಾರ್ಗದೊಳಗುತ್ತೀರ್ಣರಾಗುತಲಿ
ಶೀಘ್ರದಲಿ ಮರಳಿದರು-ಬೀದಿಯಲಿ ಭಿಕ್ಷೆಯನು
ಬೇಡುವುದ ಕಲಿಸಿದರು-ಕರೆಯುತ ನರೇಂದ್ರನಂ
ರಾಮ ಮಂತ್ರೋಪದೇಶವ ಮಾಡಿದರು ಮುದದಿ.

ಈ ಉತ್ತಮನು ತಾನು ಗುಣವಡೆದು ಬಂದುದಾ
ನಾಗ್ಮಹಾಶಯನವರೆ–ಆ ಶಕ್ತಿ ನಿನಗಿಹುದು
ಬೇಡವೆಂದಾ ಯತಿಯು ತಡೆಯುತಿರೆ–ಗುರುಭಕ್ತಿ
ಯಿಂದವನು ಆಮಲಕವನ್ನರಸಿ ಕಾಣಿಕೆಯ
ತಂದಿತ್ತು ಅವರನುಗ್ರಹ ಪಡೆದ.

ಮರುದಿವಸದೊ,
ಳೇಕಾಂತದಲಿ ನರೇಂದ್ರನ ಕರೆದು, ಪಡೆಯುತ ಸ
ಮಾಧಿಯಂ ತನ್ನೊಳಿಹ ಸುಜ್ಞಾನವೆಲ್ಲವುಂ
ತೆಗೆ ತೆಗೆದು ತುಂಬಿದರು ಘನ ನರೇಂದ್ರನ ಮನದೊ
ಳವರಿಂದ ಪಡೆದರು ಸಮಾಧಿಯಂ ಬಾಲಕರು.
ಕೊನೆಗವರು ಕಣ್ಬಿಡಲು ಕಣ್ಣೀರ ಸುರಿಸುತ್ತ
ಅಳುತಿರುವ ಗುರುಗಳನು ನೋಡಿದರೆ, ಈ ದಿನದೊ
ಳೆನ್ನ ಸರ್ವಸ್ವಮಂ ನಿನಗಿತ್ತು ಬರಿಗೈಯ
ಭಿಕ್ಷುಕನು ನಾನಾದೆನೆಂದರಾ ಸಾಧುಗಳು.

ಶ್ರಾವಣದ ಕೊನೆ ದಿನದಿ ದಿಟ್ಟಿಯಂ ನಾಸಾಗ್ರ
ದಲಿ ನಿಲಿಸಿ ಮುಳುಗುತ ಸಮಾಧಿಯೊಳಗಾತ್ಮನಂ
ಬರಿದಾದ ದೇಹದಿಂ ಹೊರಮಾಡಿ ಸರ್ವದಲಿ
ಲೀನವಾದರು ಮಹಾ ರಾಮಕೃಷ್ಣರು ನಡೆದು,
ಅಕಟಕಟ, ಲೋಕವನೆ ನುಡಿಯಿಂದ ನಗಿಸುತಿಹ
ಪರಮಹಂಸರು ನಡೆದು ಲೀನವಾದರು ಜಗದಿ.
ತಬ್ಬಲಿಯ ಮಾಡಿದರು ಶಿಷ್ಯರಂ, ಮತ್ತೊಮ್ಮೆ
ಮುಗುಳು ನಗೆಯಿಂದವರ ಕರೆಯುವವರಾರಿನ್ನು ?-
ಲೋಕವೇ ನೊಂದುದಾ ಯತಿವರರ ಪಯಣದಲಿ.

ಅವರ ನಾಮವ ನುಡಿದು ಮಂಗಳವ ಹಾಡಿದರು.
ಜಯ ಘೋಷದಿಂದವರ ಕಳೆವರಕೆ ಚಿತಿದೋರಿ
ಸಂಸ್ಕಾರಗಳ ಮಾಡುತವಶೇಷಗಳನೆತ್ತಿ
ಬಾರ ನಗರದ ಮಠವ ನಿರ್ಮಿಸುತ ಸನ್ಯಾಸ
ವಿಧಿ ತಳೆದು ಗುರು ಪೂಜೆ ಕೈಕೊಂಡರವರೆಲ್ಲ.

ಪಟ್ಟ ಶಿಷ್ಯ ನರೇಂದ್ರ ಘನ ವಿವೇಕಾನಂದ
ರಾಗೆ ಬ್ರಹ್ಮಾನಂದನೆನಿಸಿದನು ರಾಖಾಲ,
ಇಂತೊಬ್ಬರೊಂದೊಂದು ನಾಮವನು ತಾಳುತ್ತ
ಪೂರ್ವಾಶ್ರಮವ ಮರೆಯುತ್ತ, ಬರಿದಾಗಿ ಲೋಕಕ್ಕೆ,
ಪರಮಾತ್ಮನಂ ಕಾಣ್ಬ ತೃಷೆಯಿಂದ ತಿರುಗುತಲಿ
ದಿಗ್ವಿಜಯವುಂ ಮಾಡುತೀಗಲೂ ಬೆಳಗುತಿಹ
ರೀ ಲೋಕವೆಲ್ಲವುಂ, ರಾಮಕೃಷ್ಣರ ದಿವ್ಯ
ವಾಣಿಯಂ ನೆನೆನೆನೆದು ಹರಡುತಿಹರೆಂದಿಗುಂ.

ರಾಮನಾಮದ ಬಲದಿ ಸಪ್ತಸಾಗರ ದಾಂಟಿ
ರಾಮಕೃಷ್ಣರ ಕೃತಿಯ ಹಾಡಿದರು, ನೀಡಿದರು
ಭಕ್ತ ಕೇಸರಿ ವಿವೇಕಾನಂದ ಸಾನಂದ
ದಿಂ ಪರಮಹಂಸರಂ ನೆನೆನೆನೆಯುತವರ ಸ
ನ್ನಿಧಿಯಲ್ಲಿ ಲೋಕಕೇ ಮಂಗಳವ ಕೋರುತಲಿ
ತನು ಸವೆಸಿದರು ತಾವು.

ಶಾರದಾಮಣಿದೇವಿ,
ವೃಂದಾವನದ ಸಾರಿ ತಪದಿಂದ ಪತಿವಿರಹ
ಮಂ ಮರೆಯುತಿರೆ ಮಹಾಸಾಧುಗಳು ಮೂಡಿದರು
ಪರಮಾತ್ಮ ರೂಪದಲಿ ದಿವ್ಯ ದರ್ಶನವಿತ್ತು
ನೋಡಿದರು ಸತಿಯನ್ನು, ಇಲ್ಲಿಹೆನು ನೋಡೆಂದು
ಅವಳೊಳಗೆ ವಾಸಿಸಿದರಾ ಪರಮ ಹಂಸರುಂ
ತಮ್ಮಿರವ ತೋರಿದರು.

ಭೌತಿಕ ಕಳೇವರವು
ಭಸ್ಮವಾದೊಡೆ, ದೇವರಾ ದಿವ್ಯ ವಾಣಿಗಳು
ಜೀವಿಸಿವೆ. ಮಾನವರ ಮಂಗಳವ ಹಾದಿಯನು
ಕಲ್ಪಿಸುತ ಚಿರಜೀವಿಯಾಗಿಹವು, ಸೋದರರೆ
ಎದ್ದೇಳಿ, ಕೇಳಿರಾ ವಾಣಿಯನು ಭಕ್ತಿಯಿಂ
ರಾಮಕೃಷ್ಣರ ನೆನೆದು ಪಾಪಗಳ ದಹಿಸುತ್ತ
ಬಂಧನವ ನೀಗುತಲಿ ಹಾಡಿರಾ ನಾಮವನು
ಒಮ್ಮೆಯೆಲ್ಲವ ಮರೆತು ಅವರ ನಾಮವ ಸ್ಮರಿಸಿ
ಬನ್ನಿರೀ ಪುಣ್ಯ ಭೂಮಿಯ ಭಕ್ತ ಪರಮಾತ್ಮ
ದರ್ಶನದ ಕಣ್ತಣಿಯೆ ಮಾಡುವಿರಿ, ನಲಿಯುವಿರಿ
ಪರಮಹಂಸರನಂತ ರೂಪವುಂ ನೋಡುವಿರಿ.

ಜಯ ಶ್ರೀಃ

— ಸಂಪೂರ್ಣಂ —

ಇಂಡಿಯಾದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಂಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು! ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ

ಆತಂಕ ನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ,

52-19 ಬೆಂಗಳೂರು ಸಿಟಿ.

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಪೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೂ ಒಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋವ್‌ಮೆಂಟ್ ವಿಮಾ ಪತ್ರದ ಮೇಲೆ 1000ಕ್ಕೆ ವರ್ಷಕ್ಕೆ 21 ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ 26 ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52-34

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಿ ಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಕರ್ಕಿ.
ಮತ್ತು ಕಂಪನಿ,

(52-47) ಗಿರಗಾಂವ, ಮುಂಬಯಿ ೪,

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯಶಾಲೆಯು ಕಾಯಿಲಸ್ಥರನ್ನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಶೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಶಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

16 **ಸಿ. ಹೆಚ್. ರಾಮುಣ್ಣಿ ವೈದ್ಯರ್.**

ನೋಟೀಸು.

ಈ ಕೆಳಗಿನ ಮಹಾಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಾಗಿರುವ ಸ್ಥಳದಲ್ಲಿ ತಮ್ಮ ಚಂದಾ ವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಬೋಯಪ್ಪನವರು.
ಟಾಚಮ್ಮನ ಕರ್ತಮ್ಮನವರು

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು,
ಮ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮ. ಪಿ. ಜಿ. ಮುದ್ದಮ್ಮಯ್ಯನವರು.
ಮಡಿಕೇರಿ—ಮ. ಅಜ್ಜಮಾಡ ಮಾದಪ್ಪನವರು ಮತ್ತು ಮ. ಕೆ ಮಾದಮ್ಮಯ್ಯನವರು.
ಸುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮ. ಕೆ ಮೊಗಪ್ಪನವರು.
ಶಾಂತಳ್ಳಿ—ಮ. ಬಿಳ್ಳಿಪಂಡ ಯಂ. ಪೂಣಚ್ಚನವರು.
(ಶಾಂತಳ್ಳಿ ಸ್ಟೋರ್ಸ್)
ಶನಿವಾರಸಂತೆ—ಮ. ಎಚ್. ಎಂ. ಪುಟ್ಟಣ್ಣನವರು

ಸೂಚನೆ.— ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಕೂಡದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿ ರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, ಶೇರು ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು.

ಶ್ರೀಕರ ಕಸ್ತೂರಿ ಮಾತ್ರೆ.

ಅನೇಕ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆಶೂಲೆಗಳಿಗೂ ಅಮೃತ. ಬೆಲೆ 0-4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ 0-4-0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ.

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ. ಬೆಲೆ 0-8-0, 0-4-0.

ಸುಕುಮಾರತೈಲ

30

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ಇರಿತ ಮುಂತಾದ ಸಮಸ್ತ ನೇತ್ರ, ಶಿರೋವ್ಯಾಧಿಗಳಿಗೂ ಸಂಜೀವನ. ಬೆಲೆ 1-0 0

ಪ್ರೊಪ್ರೈಟರ್—ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತ್.

ಉತ್ತಮ ಪ್ರಚಾರ! **ಜ್ಞಾನಭಂಡಾರ!!**

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ. 180	ರೂ. 55.	ರೂ. 35.	ರೂ. 22
6 ತಿಂಗಳಿಗೆ—	„ 100.	„ 35	„ 22	„ 13
3 ತಿಂಗಳಿಗೆ—	„ 60	„ 20.	„ 13.	„ 8.
1 ತಿಂಗಳಿಗೆ—	„ 25	„ 10	„ 6.	„ 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವರು.

ಮಿ. ಯಂ. ಜೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮಿ. ಎಲ್. ಎಫ್. ಸಿ. ಪಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

ಮಿ. ಡಿ. ಶೇಷಾದ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗಾ.

62-43

Printed & Published by P. I. Belliappa, at 'Kodagu' Press Mercara for 'Kodagu' Ltd.